UNIVERSAL
LIBRARY
OU_200192
UNIVERSAL
LIBRARY

ಶ್ರೀಃ

ಯು ವ ನ

ಯಾ ವಿ ನೀ ವಿ ನೋ ದ

ಎ ಂ ಬ

ಅರೇಬಿಯನ್ ನೈಟ್ಸ್ ಕಥೆಗಳು.

ಬೆಂಗಳೂರಿನಲ್ಲಿರುವ ಕವಿನಾಗಶರ್ಮರಿಂದ

ಬಾಷಾಂತರಿಸಲ್ಪಟ್ಟು

ಇ ದ ರ

ಸರ್ವ ಸ್ವಾತಂತ್ರ್ಯವನ್ನೂ ಪಡೆದಿರುವ

ಬೆ ಂ ಗ ಳೂ ರು ಸಿ ಟಿ ಕ ಳಾ ನಿ ಧಿ ಬು ಕ್ ಡಿ ಪೊ

ಪ್ರೊ ಪ್ರೈ ಟ ರ್

ಟಿ. ಕೆ. ಕೃ ಷ್ಣ ಸ್ವಾ ಮಿ ಸೆ ಟ್ಟ ರ ವ ರ

ಸ್ವ ಕೀ ಯ

ಕ ಳಾ ನಿ ಧಿ ಮು ದ್ರಾ ಲ ಯ ದ ಲ್ಲಿ

ಮು ದ್ರಿ ಸ ಲ್ಪ ಟ್ಟ ತು.

ಬೆಂಗಳೂರು ಸಿಟಿ.

1915.

Copy Right Registered.

Checked 1969

ಎಂಬ

ಕಥೆಗಳು.

ಶ್ರೀಶಾರದಾಗುರುಭ್ಯೋನಮಃ.

ನಿತ್ಯಾನಂದಸುರಾಸುರ ।
ಗತ್ಯಂತರದೂರ ಪರಮಪಾವನಮಹಿಮಂ ॥
ಸ್ತುತ್ಯಾಖಿಲಜನಗಣಯುತ ।
ನತ್ಯಂತಪ್ರೀತಿಪಾತ್ರನೊಸೆವೆಮಗಭವಂ ॥ ॥೧॥

ಹಬ್ಬಿದಮುಖಸಮುದ್ರದೊ ।
ಳುಬ್ಬಿಗದಿಂ ಮುಳುಗಿಸ್ರೋದ ಮನುಜರಮನವ ॥
ನ್ನುಬ್ಬಿಸುತಾಹ್ಲಾದಗೊಳಿಪ ।
ರಬ್ಬಯೆನ್ನೆಟ್ಟನ ವಿನೋದಕಥೆಗಳನೊರೆವೆಂ ॥ ॥೨॥

ಇಂದಿಯಾದೇಶವೆಂದು ಕರೆಯೆಲ್ಪಡುವ ಈ ಭರತಖಂಡವನ್ನು, ಅದಕ್ಕೆ ಸೇರಿದ ಸಕಲದ್ವೀಪಗಳನ್ನೂ, ಗಂಗಾದಿ ಪುಣ್ಯನದಿಗಳನ್ನೂ,

---

ಬೆಳಗಾವಿ—ಟೀ. ಕೆ. ಕ್ಲಾತ್ ಸ್ಟೋರ್ ಮುದ್ರಿತ.

ಬಹುದೂರದವರೆಗೆ ಆವರಿಸಿಕೊಂಡಿರುವಂತೆವೂಷಲ್ಪಟ್ಟ ಹೆಸರುಳ್ಳ ಯಾವ ದೇಶವುಂಟೋ ! ಆದೇಶದ ರಾಜವಂಶೆತನದವರಾದ ಸಸ್ಸೇನಿಯನರೆಂಬ ಪೂರ್ವೀಕರಾಜರ ಚರಿತೆ ಯಿಂದ ತಿಳಿಯಬರುವುದೇನೆಂದರೆ, ಪೂರ್ವಕಾಲದಲ್ಲಿ ಆಸಸೇನಿಯರ್ಕರಾಜವಂಶದಲ್ಲಿ ಬಹುಪ್ರಸಿದ್ಧನಾದ ಒಬ್ಬಾಬ್ಬನೊಬ್ಬ ರಾಜನು ಆ ಕಾಲದ ರಾಜರುಗಳಲ್ಲೆಲ್ಲಾ ಬಹಳ ಹೆಸರುವಾಸಿಯೆನ್ನು ಪಡೆದಿದ್ದನು. ಆತನ ಬುದ್ಧಿ ವಿದ್ಯಾಬಲಗಳನ್ನು ನೋಡಿ ಆತನ ಪ್ರಜೆ ಗಳೆಲ್ಲರೂ, ಅವನಮೇಲೆ ಅತ್ಯಂತ ಪ್ರೀತಿಯುಳ್ಳವರಾಗಿರುತಿದ್ದರು.

ಅದರಂತೆಯೇ ಆತನ ಶೌರ್ಯವನ್ನೂ, ನೀತಿವಂತರಾಗಿಯೂ, ವಿದ್ಯಾವಿನಯ ಶೌರ್ಯಸಂಪನ್ನರಾಗಿರುವ ಆತನ ಸೇನಾಜನರ ಗುಣವ ನ್ನೂ ತಿಳಿದವರಾದ ಶತ್ರುರಾಜರು, ಬಹಳವಾಗಿ ಜೆದರುತಿದ್ದರು. ಇಂಥ ರಾಜನಿಗೆ ಇಬ್ಬರು ಮಕ್ಕಳಿದ್ದರು. ಅವರಲ್ಲಿ ಹಿರಿಯವನಾದ ಷಹರಿ ಯೆರನು, ತನ್ನ ತಂದೆಗಿಂತಲೂ ಸುಗುಣ, ಸೌಕುಮಾರ್ಯಾದಿಗಳನ್ನು, ಹೊಂದಿ ಆತನ ಸಾಥನಕ್ಕೆ ಬರುವುದಕ್ಕೆ ತಕ್ಕ ಯೋಗ್ಯತೆಯನ್ನು ವಹಿಸಿದ್ದನು. ಕಿರಿಯವನಾದ ಷಹಜಮೂನನೆಂಬುವನು ಅಸಮಾನ, ಸುಗುಣ, ಸತ್ಯಾದಿ ಯೋಗ್ಯತೆಗಳಿಂದ ಕೂಡಿದ ರಾಜಪುತ್ರನಾಗಿರುತಿದ್ದನು.

ಈ ರಾಜನು ಬಹುಕಾಲ ಧರ್ಮದಿಂದ ರಾಜ್ಯಪರಿಪಾಲನೆಯಂ ಮಾಡಿ ಅಸಮಾನವಾದ ಕೀರ್ತಿಯನ್ನು ಸಂಪಾದಿಸಿ ಕೊನೆಗೆ ದೈವಗತಿ ಯಿಂದ ಸತ್ತುಹೋದನು. ಆಮೇಲೆ ಷಹರಿಯೆನು ಪಟ್ಟಾಭಿಷಿಕ್ತನಾಗಿ ರಾಜ್ಯವನ್ನಾಳುತ್ತಿದ್ದನು. ಆದರೆ ಷಹಜಮೂನನು ಆ ರಾಜ್ಯದ ಕೆಲವು ಕಟ್ಟಳೆಗಳಂತೆ ರಾಜ್ಯವನ್ನಾಳುವುದಕ್ಕೆ ತಕ್ಕ ಯೋಗ್ಯತೆಯನ್ನು ಹೊಂದಿದವನಾಗಿಲ್ಲದುದರಿಂದ ಅವನಿಗೆ ರಾಜ್ಯಾಧಿಕಾರವಿಲ್ಲದೆ ಸುಮ್ಮನೆ ಇರುತಿದ್ದನು ಆದರೂ ಆತನು ತನ್ನ ಅಣ್ಣನಿಗೆ ಉಂಟಾಗಿರುವ ಭಾಗ್ಯ ವನ್ನು ನೋಡಿ ಅಸೂಯೆಯೆನ್ನು ಹೊಂದದೆ ಆತನಿಗೆ ತೃಪ್ತಿಕರವಾದ ಆನಂದವನ್ನು ಹೊಂದುವಂತೆ ಮಾಡುವುದೇ ತನ್ನ ಮುಖ್ಯ ಕರ್ತವ್ಯವೆಂ ದು ನಂಬಿಕೆಯಿಂದ ನಡೆಯುತ್ತಿದ್ದನಾದುದರಿಂದ ಅಣ್ಣನ ಪ್ರೀತಿಗೆ ಪಾತ್ರ ನಾಗಿದ್ದನು.

ಷಹರಿಯೆರನಾದರೋ ತನ್ನ ತಮ್ಮನಲ್ಲಿ ಸ್ವಭಾವಜನ್ಯವಾದ ವಿಶ್ವಾಸವನ್ನು ಇಟ್ಟುಕೊಂಡಿದ್ದರೂ ಆತನ ಸುಗುಣಗಳನ್ನು

ಪರೀಕ್ಷೆ ನೋಡಿದಮೇಲೆ ತನ್ನ ತಮ್ಮನಲ್ಲಿ ಮೊದಲಿಗಿಂತಲೂ ಹೆಚ್ಚಾಗಿ ವಾತ್ಸಲ್ಯವನ್ನು ತೋರಿಸುತಾ ಅತ್ಯಂತ ದಯಾಪರನಾಗಿ ಆತನಿಗೆ ಸ್ವಲ್ಪ ರಾಜ್ಯವನ್ನುಕೊಟ್ಟು ರಾಜ್ಯಸುಖವನ್ನು ಅನುಭವಿಸುವಂತೆ ಮಾಡಬೇಕೆಂದು ಯೋಚಿಸಿ ಟಾರ್ಟರಿ ಯೆಂಬ ದೇಶವನ್ನು ಕೊಟ್ಟನು. ಕೂಡಲೇ ಸಂತೋಷದಿಂದ ನಲಿದಾಡುತಾ ಅಣ್ಣನಿಂದಪ್ಪಣೆಯನ್ನು ಪಡೆದು ಷಹಜಮಾನನು ಆ ರಾಜ್ಯವನ್ನು ಸ್ವಾಧೀನಮಾಡಿಕೊಂಡು, ರಾಜಧಾನಿಯಾದ ಸಾಮರ್ಕಂಡ್ ಪಟ್ಟಣದಲ್ಲಿ ಸುಖದಿಂದ ರಾಜ್ಯವನ್ನಾಳುತಾ ಇದ್ದನು. ಹೀಗೆ ಆ ಅಣ್ಣತಮ್ಮಂದಿರು ಹತ್ತುವರ್ಷಗಳಕಾಲ ಪ್ರತ್ಯೇಕವಾಗಿ ರಾಜ್ಯವನ್ನಾಳುತ್ತಿದ್ದುದನ್ನು ನೋಡಿ ಷಹರಿಯೆರನು ತನ್ನ ತಮ್ಮನಾದ ಷಹಜಮಾನನನ್ನು ನೋಡಬೇಕೆಂದು ಅಪೇಕ್ಷಿಸಿ ಆತನನ್ನು ತನ್ನೂರಿಗೆ ಕರೆದುಕೊಂಡುಬರುವಂತೆ ತನ್ನಕಡೆಯವನಾದ ಒಬ್ಬ ರಾಯಭಾರಿಯನ್ನು ಕಳುಹಿಸಬೇಕೆಂದು ಯೋಚಿಸಿ, ಆ ರಾಯಭಾರಿಗೆ ತಕ್ಕ ಉಪಕರಣಗಳನ್ನು ಸಿದ್ಧಮಾಡಿ ಕೊಡುವಂತೆ ತನ್ನ ಮಂತ್ರಿಗೆ ಹೇಳಿ ಆತನ ಯೋಗ್ಯತೆಗೆ ತಕ್ಕ ಪರಿವಾರಸಹಿತನಾಗಿ ಹೊರಟು ತನ್ನ ತಮ್ಮನನ್ನು ಕರೆದುಕೊಂಡುಬರುವಂತೆ ರಾಯಭಾರಿಯೆನ್ನು ಕಳುಹಿಸಿದನು.

ರಾಯಭಾರಿಯು, ವೇಗದಿಂದ ಪ್ರಯಾಣಮಾಡಿ ಸಾಮರ್ಕಂಡ್ ರಾಜಧಾನಿಗೆ ಸವಿೂಪವಾಗಿ ನಡೆತರುತ್ತಿರುವುದನ್ನು ಕೇಳಿ ಷಹಜಮಾನನು ತನ್ನ ಪ್ರಧಾನಮಂತ್ರಿಗಳಿಂದೊಡಗೂಡಿ, ಆತನನ್ನು ಇದಿರ್ಗೊಳ್ಳುವುದಕ್ಕೆ ಬಂದಿರುವ ವರ್ತಮಾನವನ್ನು ಕೇಳಿ ಈ ರಾಯಭಾರಿಯು, ತನಗೆ ಗೌರವವನ್ನೀಯುವುದಕ್ಕಾಗಿ ಅತ್ಯಂತ ಅಮೂಲ್ಯವಾಗಿ ರಮಣೀಯವಾಗಿರುವ ಉಡುಪನ್ನು ಧರಿಸಿಕೊಂಡು ಬಂದಿರುವರೆಂದು ಪರಮಾನಂದಭರಿತನಾಗಿ ಆ ಟಾರ್ಟರಿ ರಾಜನನ್ನು ಬರಮಾಡಿಕೊಂಡು ತನ್ನ ಬಳಿಯಲ್ಲಿ ಮಯೂರಾದಿಯಿಂದ ಕುಳ್ಳಿರಿಸಿಕೊಂಡನು. ಆಕ್ಷಣವೇ ಷಹಜಮಾನನು ತನ್ನ ಅಣ್ಣನಾದ ಚಕ್ರವರ್ತಿ ಷಹರಿಯೆರಿನ ಕ್ಷೇಮಲಾಭವನ್ನು ಕುರಿತು ಪ್ರಶ್ನೆಮಾಡಲು ಮಂತ್ರಿಯು ಸಂತೋಷದಿಂದ ಆತನ ಕ್ಷೇಮಲಾಭವನ್ನು ತಿಳಿಸಿ ತಾನು ರಾಯಭಾರಿಯಾಗಿ ಬಂದಿರುವ ವರ್ತಮಾನವನ್ನು ಹೇಳಿದನು.

ಅದನ್ನುಕೇಳಿ ಷಹಜಮಾನನು ಪರಮಸಂತೋಷವನ್ನುಹೊಂದಿದವನಾಗಿ ಅಯ್ಯಾ! ಬುದ್ಧಿಶಾಲಿಯಾದ ಮಂತ್ರಿ ನನ್ನ ಅಣ್ಣಂದಿರಾದಸುಲ್ತಾ

ನರು ನನಗಾಗಿ ಹೆಚ್ಚಾದ ಮರ್ಯಾದೆಯನ್ನು ತೋರಿಸುತ್ತಿರುವರು. ಆದುದರಿಂದ ನನಗೆ ಇದಕ್ಕಿಂತಲೂ ಅತಿಶಯವಾದುದು ಯಾವುದೂ ಇಲ್ಲ. ನನ್ನನ್ನು ನೋಡಬೇಕೆಂದು ಸುಲಾತ್ತನರು ಎಷ್ಟು ಸಂತೋಷದಿಂದ ಕುತೂಹಲ ಪಡುತ್ತಿರುವರೋ ಅಷ್ಟೊಂದು ಸಂಭ್ರಮವು ಅವರನ್ನು ನೋಡುವ ವಿಷಯದಲ್ಲಿ ನನ್ನನ್ನು ಬಾಧಿಸುತ್ತಿರುವುದು. ನಾವು ಬಹುಕಾಲದಿಂದ ಬೇರೆಬೇರೆ ರಾಜ್ಯಗಳಲ್ಲಿ ವಾಸವೂಡಿಕೊಂಡಿದ್ದರೂ ನಮ್ಮಲ್ಲಿ ಪರಸ್ಪರವಾಗಿ ಬೇರೂರಿರುವ ಪ್ರೀತಿ ಎಂಬ ಬಳ್ಳಿಯು ಎಂದಿಗೂ ಕೆತ್ತುಹೋಗಲಾರದು. ನನ್ನರಾಜ್ಯವು ಸಮೂಧಾನಸ್ಥಿತಿಯಲ್ಲಿರುವುದು, ನನ್ನ ಪ್ರಯಾಣಕ್ಕನುಕೂಲವಾದ ಸಕಲಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು ಹತ್ತು ದಿನಗಳೊಳಗಾಗಿ ನಿಮ್ಮ ಸಂಗಡ ನಮ್ಮ ಅಣ್ಣನವರನ್ನು ನೋಡುವುದಕ್ಕೆ ಬರುತ್ತೇನೆ. ಆದುದರಿಂದ ಆ ಹತ್ತು ದಿನಂಗಳು ನೀವು ಪುರಪ್ರವೇಶವನ್ನು ಮೂಡದೆ ಇಲ್ಲಿಯೆ ಗುಡಾರವನ್ನು ಹೊಡಿಸಿಕೊಂಡಿರುವುದಾದರೆ ನಿಮ್ಮ ಪರಿವಾರ ಸಮೂಹಕ್ಕೆಲ್ಲ ಬೇಕಾಗುವ ಸರ್ವ ಪದಾರ್ಥಗಳನ್ನು ಸಿದ್ಧವಾಗಿ ತರಿಸಿಕೊಡುವೆನೆಂದು ಹೇಳಿ ಮಂತ್ರಿಯನ್ನು ಆಸ್ಥಳದಲ್ಲಿಯೇ ನಿಲ್ಲುವಂತೆಮಾಡಲು, ರಾಯಭಾರಿಯು ಸಂತೋಷಯುಕ್ತನಾಗಿ ಆಸ್ಥಳದಲ್ಲಿಯೇ ಗುಡಾರವನ್ನು ಬಿಡಿಸಿಕೊಂಡಿದ್ದನು ರಾಜನು ತನ್ನ ಪಟ್ಟಣಕ್ಕೆ ಬಂದು ಸಮಸ್ತಪದಾರ್ಥಗಳನ್ನೂ ಮರ್ಯಾದಾರ್ಥವಾಗಿ ಕಳುಹಿಸಿಕೊಡುವ ಅಮೂಲ್ಯಪದಾರ್ಥಗಳನ್ನು ರಾಯಭಾರಿಗೆ ಕಳುಹಿಸಿದನು.

ಅನಂತರದಲ್ಲಿ ಪಹಜವೂಸನು ಪ್ರಯಾಣಸನ್ನದ್ಧನಾಗಿ ಅತ್ಯಂತ ಅವಶ್ಯಕಂಗಳಾದ ರಾಜಕಾರ್ಯ್ಯಗಳಿಲ್ಲವನ್ನು ನೆರವೇರಿಸಿಕೊಂಡು ತಾನಿಲ್ಲದಿರುವಾಗ ಎಂದಿನಂತೆ ರಾಜ್ಯಭಾರವನ್ನು ವಹಿಸಿಕೊಂಡು ಸುಖದಿಂದ ಪ್ರಜೆಗಳನ್ನು ಕಾಪಾಡುವುದಕ್ಕಾಗಿ ಒಂದು ಸಂಘವನ್ನೇರ್ಪಡಿಸಿ, ಅವರ ಸಂಗಡ ಯೋಚಿಸಿ, ಬಹಳವಾದ ಅನುಭವವುಳ್ಳವನಾಗಿ ತನ್ನ ನಂಬಿಕೆಗೆ ಪಾತ್ರನಾದ ಒಬ್ಬ ವೃದ್ಧಮಂತ್ರಿಯನ್ನು ಆ ಸಭೆಗೆ ಯಜಮಾನನನ್ನಾಗಿ ಮೂಡಿ ಹತ್ತುದಿನಗಳಾಗುತ್ತಲೆ ತನಗೆಮೂರ್ಗದಲ್ಲಿ ಬೇಕಾಗುವ ಸಾಮಾನುಗಳೆಲ್ಲವನ್ನೂ ಸಿದ್ಧಪಡಿಸಿಕೊಂಡು ರಾಣಿಯಾದ ತನ್ನ ಹೆಂಡತಿಯಿಂದ ಅನುಜ್ಞೆಯನ್ನು ಹೊಂದಿ ಪರಿವಾರಸಹಿತನಾಗಿ ಸಾಮಾರ್ಕಂಡ್ ಪಟ್ಟ

ದಿಂದ ಹೊರಟುಬಂದು ರಾಯಭಾರಿಯ ಗುಡಾರದಬಳಿಯಲ್ಲಿ ತನ್ನಗುಡಾರವನ್ನು ನೆಡಿಸಿ ಅರ್ಧರಾತ್ರಿಯು ಕಳೆಯುವವರೆಗೂ ರಾಯಭಾರಿಯೊಸಂಗಡ ಮಾತನಾಡುತಾ ಕಾಲವನ್ನು ಕಳೆಯುತ್ತಿದ್ದನು. ಪರಿವಾರದ ಜನರು ಗುಡಾರದ ಸವಿೂಪವಲ್ಲಿ ಬೀಡುಬಿಟ್ಟು ಆಯಾಸವನ್ನು ಪರಿಹರಿಸಿಕೊಳ್ಳುತಿದ್ದರು. ಅಷ್ಟರಲ್ಲಿಯೇ ತನ್ನ ಪ್ರೀತಿಗೆ ಪಾತ್ರಳಾದ ರಾಣಿಯೆನ್ನು ಮತೊಂದುಸಾರಿ ನೋಡಿ ವೋಹದಿಂದಾಲಂಗಿಸಿಕೊಂಡು ಬರಬೇಕೆಂದು ಒಂಟಿಯಾಗಿ ಹೊರಟು ನಗರವನ್ನು ಸೇರಿ ಅಂತಃಪುರಕ್ಕೆ ಗಕ್ಕನೆ ನುಗ್ಗಿ ಬಂದನು.

ಇತ್ತ ರಾಣಿಯು ಗಂಡನು ಪ್ರಯಾಣವೂಡಿ ಹೊರಟುಹೋದಮೇಲೆ ತನ್ನ ಪರಿವಾರದ ಗುಲಾಮನೊಬ್ಬನನ್ನು ಕೂಡಿಕೊಂಡು ಮಂಚವನೇರಿ ಮಲಗಿ ಸಂಚಿನಿಂದ ಸರಸವಾಗಿ ಇಬ್ಬರೂ ಮೈಮರೆತು ನಿದ್ರೆಹೋಗುತ್ತಿದ್ದರು. ಆ ಸಮಯದಲ್ಲಿ ದೊರೆಯು ಸದ್ದುಮಾಡದೆ ಅಂತಃಪುರವನ್ನು ಸೇರಿ ತಾನು ಎಷ್ಟುವಿಶ್ವಾಸದಿಂದ ರಾಣಿಯೆನ್ನು ಆದರಿಸುವನೋ ಅಷೊಟ್ಟಂದು ಪ್ರೀತಿಗಿಂತಲೂ ಹೆಚ್ಚಾದ ಆದರದಿಂದ ರಾಣಿಯು ತನ್ನಲ್ಲಿ ಪ್ರೀತಿಯುಳ್ಳವಳಾಗಿರುವಳೆಂದು ನಂಬಿಕೆ ಯುಳ್ಳವನಾದ ದೊರೆಯು ತಾನು ದಿಗ್ಗನೆ ನುಗ್ಗುವುದರಿಂದ ತನ್ನ ಹೆಂಡತಿಗೆ ಏನೂ ಆಶ್ಚರ್ಯ ತೋರಿ ಬರುವುದಿಲ್ಲವೆಂದು ನೆನಸಿ, ಪರವೂನಂದನನ್ನು ಹೊಂದಿದವನಾಗಿದ್ದನು. ಹೀಗಿರುವಲ್ಲಿ ಆ ರಾಜಮಂದಿರದ ಪೂರ್ವಭಾಗದಲ್ಲಿ ರಾತ್ರಿಯಕಾಲದಲ್ಲಿ ಬೆಳಗುತ್ತಿರುವ ದೀಪವು ಉರಿಯುತ್ತಿರಲು ಅದರ ಪ್ರಕಾಶದಿಂದ ತನ್ನ ಹೆಂಡತಿಯು ಬೇರೊಬ್ಬ ಪುರುಷನನ್ನು ಕೂಡಿ ಮೈಮರೆತು ಮಲಗಿರುವುದನ್ನು ಕಂಡು ತನ್ನ ಕಣ್ಣುಗಳನ್ನು ತಾನೇ ನಂಬಲಾರದಂತಹ ಆಶ್ಚರ್ಯವನ್ನು ಹೊಂದಿ ಭ್ರಮೆಯಿಂದ ಅಲುಗಾಡದೆ ನಿಶ್ಚೇಷ್ಟಿತನಾಗಿನಿಂತುಕೊಂಡು ಆವರಿಸಿದ ವೋಹಭ್ರಾಂತಿಯನ್ನು ಸ್ವಲ್ಪ ಸಡಿಲಮಾಡಿಕೊಂಡು ಆಹಾ! ನಾನಿನ್ನೂ ಈಪಟ್ಟಣವನ್ನು ಕನಸಟ್ಟು ಹೊರಟುಹೋಗದೆ ಪುರಕ್ಕೆ ಸವಿೂಪದಲ್ಲಿರುತ್ತಿದ್ದರೂ, ಈ ದುಷ್ಟರು ನನಗಿಂತಹ ಅವಮಾನವನ್ನು ಮಾಡುತ್ತಿರುವರಲ್ಲಾ! ಎಲೈ ನಮ್ಮಮೂರ್ಖಗಿರ್ಗಿಗಳಿರಾ! ನಿಮ್ಮ ಕೆಟ್ಟನಡತೆಗೆ ತಕ್ಕ ಶಿಕ್ಷೆಯೆನ್ನು ಹೊಂದುವಿರಿ, ನಾನು ಈ ದೇಶಕ್ಕೆ ರಾಜನಾಗಿರುವಲ್ಲಿ ನನ್ನ ರಾಜ್ಯದಲ್ಲಿ ನಡೆಯು

ವ ತಪ್ಪನ್ನು ನಾನು ಸರಿಪಡಿಸದೆಹೋದರೆ ಮತ್ತಾರು ಸರಿಮಾಡುವರೆಂಬ
ಕಾಣೆ ! ಆದುದರಿಂದ ಪೌರುಷಶಾಲಿಯಾದ ಪುರುಷನೆನಿಸುವ ನನ್ನ
ಕೈ ನಿಮ್ಮನ್ನು ಬಿಡಿಗೊಡುವೆನು, ಎಂದು ಹೇಳುತಾ ನಿರ್ಧಾರ್ಯ
ಆ ಷಹಜಮಾನನು ತನ್ನ ಕೋಪವನ್ನು ಬಲಪಡಿಸಿಕೊಂಡು ಕೈಯನ್ನು
ವ ಕತ್ತಿಯನ್ನು ಝಳಪಿಸುತ್ತ ಮಂಚದಬಳಿಗೆಬಂದು, ಒಂದೇ ಏಟಿನಿಂ
ದ ಅವರನ್ನು ಹೊಡೆದುಕೊಂದು ಅವರು ಮಲಗಿದುದೇ ಮರಣವೆನ್ನುವಂತೆ
ಮಾಡಿ, ಅವರಿಬ್ಬರನ್ನು ಎತ್ತಿ ಪಟ್ಟಣದಸುತ್ತಲೂ ಇರುವ ಕಂದಕದ
ಲ್ಲಿ ಅರಮನೆಯ ಕಿಟಿಕಿಯ ಮೂಲಕ ಬಿಸಾಡಿದನು. ಹೀಗೆ ತನ್ನಕೋ
ಪವನ್ನು ತೀರಿಸಿಕೊಂಡು ಯಾರಿಗೂ ತಿಳಿಯದಂತೆ ಪಟ್ಟಣದಿಂದ ಗುಟ್ಟಾ
ಗಿ ಗುಡಾರವನ್ನು ಸೇರಿ ಪುರದ ವಾರ್ತೆಯೆನ್ನಾರಿಗೂ ಹೇಳದೆ ಗುಡಾರಗ
ಳನ್ನು ಕಿತ್ತುಹಾಕಿಸಿ, ಮುಂದೆ ಪ್ರಯಾಣಮಾಡುವುದಕ್ಕೆ ಸಿದ್ಧನಾಗಿ
ನಿಂತನು. ಈ ಪ್ರಕಾರದಿಂದ ಸಿದ್ಧರಾದ ಪರಿವಾರಜನರಿಂದೊಡಗೂಡಿ
ಜಯಧ್ವನಿಯೆನ್ನು ಮಾಡುವ ಭೇರಿ ಪಟಹ ಮೃದಂಗಾದಿಗಳ ಧ್ವನಿಯೊ
ಡನೆ ಬೆಳಗಿನ ಝಾವದಲ್ಲಿ ಪ್ರಯಾಣಮಾಡಿದರು. ಆದರೆ ಆ ಕಾಲದಲ್ಲಿ ಸಕ
ಲರೂ ಸಂತೋಷಚಿತ್ತರಾಗಿದ್ದರೇ ಹೊರತು ರಾಜನುಮಾತ್ರ ತನ್ನಹೆಂಡತಿ
ಯುಮಾಡಿದ ದ್ರೋಹವನ್ನು ನೆನೆದುಕೊಂಡನಾದುದರಿಂದ ವ್ಯಸನಾಕ್ರಾಂ
ತನಾಗಿದ್ದನು. ಆವ್ಯಸನವು ಆತನ ಪ್ರಯಾಣಕಾಲವೆಲ್ಲವನ್ನು ಸಂಪ್ರಾ
ರ್ಣವಾಗಿ ನುಂಗಿಕೊಂಡು ತೃಪ್ತಿಪಡುತಲಿದ್ದಿತು. ಅಷ್ಟರಲ್ಲಿಯೇ ಇಂಡಿ
ಯಾದೇಶದ ರಾಜಧಾನಿಯೆನ್ನು ಸವಿೂಪಮಾಡಿಕೊಂಡು ಆತನು ಹೊರಟು
ಬರಲು ಷಹರಿಯರನು ಈ ವರ್ತಮಾನವನ್ನು ಕೇಳಿ ತನ್ನ ಮಂತ್ರಿ ಪರಿ
ವಾರದಿಂದೊಡಗೂಡಿ ಇದಿರುಗೊಂಡು ಬರಲು ಆ ರಾಜಕುಮಾರರಿಬ್ಬರೂ
ತಂತಮ್ಮ ವಾಹನಗಳನ್ನಿಳಿದು ಅನ್ಯೋನ್ಯವಾಗಿ ಆಲಿಂಗಿಸಿಕೊಂಡು
ಸಮಸ್ತಗೌರವಕರವಾದ ಕಾರ್ಯಗಳನ್ನು ನೆರವೇರಿಸಿಕೊಂಡು ತಂತಮ್ಮ
ವಾಹನಗಳನ್ನೇರಿ ಪರಿವಾರಜನರ ಸಂತೋಷಧ್ವನಿಯೊಡನೆ ಕೂಡಿ ನ
ಧಾನಿಗೆ ಹೊರಟು ಬಂದರು.

ಆ ಪಟ್ಟಣದಲ್ಲಿ ಸುಲ್ತಾನನು ತನ್ನ ಸ್ನೇಹಿತರಿಗೂ, ಆಪ್ತ
ವಾರದವರಿಗೂ, ವಿನೋದಪ್ರದವಾದ ಸಂತೋಷಕ್ಕಾಗಿ ನೃತ್ಯಗೀತ
ಗೀತ ಸಾಹಿತ್ಯಾದಿಗಳೊಡನೆ ಮಹತ್ತಾದ ಔತಣವನ್ನು ಮಾಡಿಸಿದ

ಕೆಲವು ವಿಶೇಷದಿನಗಳಲ್ಲಿ ವಿನೋದವಾಗಿ ನೆರೆಯುವುದಕ್ಕಾಗಿ ಪ್ರತ್ಯೇಕ
ಕಟ್ಟಿಸಿರುವ ಒಂದು ವಿನೋದಮಂದಿರವುಂಟು, ಆದು ರಾಜನ ಅರ
ಸ್ವಲ್ಪದೂರದಲ್ಲಿರುವುದು. ಆ ಮಂದಿರದಲ್ಲಿ ನಾನಾವಿಧವಾದ ನವೀ
ದೃಶ್ಯಗಳು ತುಂಬಿತುಳುಕುತ್ತಾ ನೋಟಕರಿಗೆ ಮಹದಾನಂದವನ್ನುಂ
ಡಿಸುತ್ತಿರುವುವು. ಅಲ್ಲದೆ ಆ ಮಂದಿರವು ಸದಾ ಸರ್ವಾಲಂಕಾರ
ಯುತವಾಗಿ ಹೊಳೆಯುತ್ತಿರುವುದು. ಅರಮನೆಗೂ, ಈ ಮಂದಿರಕ್ಕೂ
ಮಾನವನದ ಮಾರ್ಗವಾಗಿ ಸಾಗಿಹೋಗುವ ಜೀರೆ ಮಾರ್ಗವೊಂ
ಟು. ಇಂತಹ ರಾಜಭವನವನ್ನು ತನ್ನ ತಮ್ಮನಿಗೆ ಬಿಡದಿಯಾಗಿ
ಟ್ಟುಕೊಟ್ಟ ರಾಜನು ಆತನನ್ನು ಅಲ್ಲಿಗೆ ಕರೆದುಕೊಂಡು ಹೋಗಿ
ರಾಜಮೂನನು ಸ್ನಾನಾದಿಗಳನ್ನು ತೀರಿಸಿಕೊಂಡು ಹೊಸದಾದ ಜೀರೆ
ವಸ್ತ್ರಗಳನ್ನು ಧರಿಸಿಕೊಳ್ಳುವವರೆಗೂ, ಆತನಿಗೆ ವಿರಾಮವನ್ನುಕೊಡ
ಕೊಂಡು ತಿಳಿದು ತನ್ನ ತಮ್ಮನಾದ ಟಾರ್ಟರಿ ರಾಜನನ್ನು ಆ ಮಂದಿರ
ಕ್ಕೆ ಬರಮಾಡಿಸಿಕೊಳ್ಳುವ ಬಯಕೆಯಿಂದ ಅಲ್ಲಿಗೆ ಬಂದನು. ಬಳಿಕ ತನ್ನ ತಮ್ಮನು ಸ್ನಾನಾದಿಗಳನ್ನು
ಮುಗಿಸಿಕೊಂಡು, ಸಿದ್ಧವಾಗಿ ಕುಳಿತುಕೊಳ್ಳುವ ಹೊತ್ತಿಗೆ ಸರಿಯಾಗಿ
ರಾಜನು ಪುನಹ ಆ ಮಂದಿರವನ್ನು ಸೇರಿ ಅಣ್ಣ ತಮ್ಮಂದಿರಿಬ್ಬರು
ತಾನೊಂದು ಮನೋಹರವಾದ (ಸೋಫಾದಲ್ಲಿ) ಭದ್ರಾಸನದಲ್ಲಿ
ತುಕೊಂಡರು. ಗೌರವಾರ್ಥವಾಗಿ ಸಭಿಕರು, ಕೊಂಚ ಹೊತ್ತಿ
ಳಿಗೂ, ಹೊರಗೆ ಅಲೆದಾಡುತ್ತಿದ್ದರು. ಅಣ್ಣ ತಮ್ಮಂದಿರಿಬ್ಬ
ತಮ್ಮ ಅನ್ಯೋನ್ಯಪ್ರೀತಿಗೂ, ತಮಗಿರುವ ಅಸದೃಶವಾದ ರಕ್ತ
ಸಂಬಂಧಕ್ಕೂ, ಬಹುಕಾಲದವರೆಗೆ ಅಗಲಿದ್ದ ವಿಯೋಗದದುಗುಡಕ್ಕೂ,
ಯಾಗಿ ಅನ್ಯೋನ್ಯವಾಗಿ ಸುಖಸಂಭಾಷಣೆಯೆನ್ನು ಮಾಡುತ್ತಾ
ರು. ಹೀಗಿರುವಷ್ಟರಲ್ಲಿಯೇ ರಾತ್ರಿ ಭೋಜನಕಾಲವು, ಒದಗಿ
ತಾವಿಬ್ಬರೂ ಊಟಮಾಡಿ ಮರಳಿ ಸುಖವಾಗಿ ಆ ಭದ್ರಾಸನದಲ್ಲಿ
ತು, ಬಹಳ ಹೊತ್ತಿನವರೆಗೂ, ಮಾತನಾಡುತ್ತಾ ಇದ್ದರು.
ಹೊತ್ತಿಗೆ ಅರ್ಧರಾತ್ರಿಯು, ಕಳೆದುಹೋದುದರಿಂದ ಸುಲ್ತಾನ
ನ್ನು ತಮ್ಮನನ್ನು ವಿಶ್ರಮಿಸಿಕೊಳ್ಳುವಂತೆ ಹೇಳಲು, ನಿರ್ಭಾಗ್ಯ
ಷಣಜಮೂನನು, ಮಲಗುವುದಕ್ಕೆ ಹೊರಟನು, ಆತನು ತನ್ನ
ನಕೂಡ ಮಾತನಾಡುವ ವರೆಗೂ, ಆವನ ದುಃಖವು ಸ್ವಲ್ಪವಾದ

ವಾಗಿದ್ದಿತು, ಆತನಿಗೆ ಆ ಬಳಿಕ ವ್ಯಸನವು, ಅಧಿಕವಾಗಿ ಹೆಚ್ಚಿ ನಿದೆ ಮೂಡುವುದನ್ನು ತೊರೆದು, ಜೇಳಲಾಗದ ಅನೇಕ ಕ್ರೂರಕಾರ್ಯಗಳನ್ನು ಯೋಚಿಸುವುದರ ಮೂಲಕ ಹಿಂಡಿಹೋಗಿ ಜಿಂಡಾಗುತ್ತಿದ್ದನು. ಅ ತನ್ನ ಹೆಂಡತಿಯು ತನಗೆ ಮೂಡಿದ ದ್ರೋಹದ ಯೋಚನೆಯು, ಹೆ ಹೊಸದಾಗಿ ಇವನ ಮನಸ್ಸಿನಲ್ಲಿ ಹುಟ್ಟುತ್ತಾ, ನಿದ್ರೆಮೂಡುವುದಕ್ಕೆ ಅವಕಾಶವನ್ನು ಕೊಡದೆ ಹೋದುದರಿಂದ, ಎಚ್ಚರವುಳ್ಳವನಾಗಿ ಮ ವ್ಯಸನದಿಂದ ಚಿಂತೆಯೆಂಬ ಮಗುವಾಗಿ ಇರುತ್ತಿದ್ದನು.

ಆದುದರಿಂದ ಈ ಚಿಹ್ನೆಗಳೆಲ್ಲವೂ, ಆತನ ಮುಖದಲ್ಲಿ ಸ್ಪಷ್ಟವಾ ಗಿ ಕಾಣಬರುತ್ತಿರುವುದನ್ನು ಕಂಡು ಸುಲ್ತಾನರು, ತಮ್ಮಲ್ಲಿ ತಾವು ತೀ ದು ಯೋಚಿಸಿದುದೇನೆಂದರೆ:— ಟಾರ್ಟರಿದೇಶದ ರಾಜನು ನನ್ನ ರಾಜ್ಯ ಕ್ಕೆ ಬಂದು, ಹೀಗೆ ವ್ಯಸನಾಕ್ರಾಂತನಾಗಿರುವುದಕ್ಕೆ ಕಾರಣವೇನು ಆತನು ನನ್ನಬಳಿಗೆ ಬರುವಕಾಲದಲ್ಲಿ, ನಾನು ಆತನಿಗೆ ಮೂಡಬೇಕಾದ ಮರ್ಯಾದೆಗಳಲ್ಲಿ ನ್ಯೂನವಾದರೂ, ಕೊರತೆಯುಂಟಾಯಿತೇ ! ಖಂಡಿತವಾಗಿ ಎಂದಿಗೂ ಹಾಗಾಗಿರಲಾರದು, ನಾನು ಸಹೋದರನಿಗೆ ಮೂಡಬೇಕಾಗಿರುವ ಮರ್ಯಾದೆಯಿಂದಲೇ ಅವನನ್ನು ಬರಮೂನಿಕೊಂಡೆನಲ್ಲಾ ! ತನ್ನರಾಜ್ಯ ವನ್ನು ಬಿಟ್ಟುಬಂದು, ಇಷ್ಟುದೂರ ಪ್ರಯಾಣಮಾಡಿದುದಕ್ಕಾಗಿ, ವ್ಯಸನಪಡುತ್ತಿರುವನಲ್ಲಾ, ಅಲ್ಲದೆ ತನ್ನ ಹೆಂಡತಿಯೂವ ರಾಣಿಯನ್ನು ಬಿಟ್ಟು ಬಂದಿರುವುದಕ್ಕಾಗಿ, ವ್ಯಸನಪಡುತ್ತಿರುವನೇನೋ ಅಸೌಖ್ಯ ಅದೇಕಾರಣದಿಂದಲೆ ಆತನು ವ್ಯಸನಪಡುತ್ತಿರುವನಾದರೆ, ಅವನಿಷ್ಟಾನ ಸಾರವಾಗಿ ಸಾವೂರ್ಕಂಡ್ ರಾಜ್ಯಕ್ಕೆ ಹಿಂದಿರುಗಿ ಹೋಗುವುದಕ್ಕೆ ಅನುಕೂಲವಾಗಿ ಆತನಿಗೆ ಕೊಡಬೇಕಾದ ಬಹುಮೂನಗಳನ್ನು ಈಗಲೇ ಕೊಟ್ಟುಬಿಡಬೇಕೆಂದು ಯೋಚಿಸಿ, ಎರಡನೇ ದಿನದೇ ಷಹರಿಯೆರನ ತನ್ನ ರಾಜ್ಯವಾದ ಇಂಡಿಯಾರಾಜ್ಯದಲ್ಲಿ ಸುಲಭವಾಗಿಯೂ, ಅಮೂ ಲ್ಯವಾಗಿಯೂ, ದೊರೆಯುವ ಉತ್ತಮವಸ್ತುಗಳನ್ನು, ಮರ್ಯಾದಾ ರ್ಥವಾಗಿ, ಕಳುಹಿಸಿಕೊಟ್ಟನು. ಅಲ್ಲದೆ ತನ್ನ ತಮ್ಮನಿಗೆ ಸಂತೋಷ ವನ್ನುಂಟು ಮಾಡಬೇಕೆಂದು ಬಯಸಿ, ದಿನದಿನವೂ ಹೊಸ ಹೊಸದಾದ ಸಂತೋಷಜನ್ಯವದಾರ್ಥಗಳನ್ನು, ತರಿಸಿಕೊಡುತ್ತಾ ಮನೋಪ್ರಿಯವಾ ಉಪಚಾರಗಳನ್ನು ಮಾಡುತ್ತಿದ್ದನೇ ಹೊರತು, ಅದರಿಂದ ಟಾರ್ಟರ್

ಜನಿಗೆ ಸ್ವಲ್ಪವಾದರೂ, ಸಂತೋಷವುಂಟಾಗದೆ ವ್ಯಸನವೇ ಹೆಚ್ಚಾ
ತಾ ಬಂದಿತು. ಹೀಗಿರುವಲ್ಲಿ ಪಹರಿಯೆರನು, ತನ್ನ ರಾಜಧಾನಿಗೆ
ಎರಡುಗಾವುದ ದೂರದಲ್ಲಿ ಜಿಂಕೆಗಳು ಹೆಚ್ಚಾಗಿರುವ ಒಂದುಸ್ಥಲವನ್ನು
ಗುಡುಕಿ ಅಲ್ಲಿ ಬೇಟೆಯಾಡುವ ನಿಮಿತ್ತದಿಂದ ಅದಕ್ಕೆ ಬೇಕಾದ ಸನ್ನಾಹ
ವನ್ನು, ಸಿದ್ಧಪಡಿಸಿಕೊಳ್ಳುವಂತೆ ಅಪ್ಪಣೆಮಾಡಲು ಪಹರಜಮಾನನು, ಆತ
ನು ಸಂಗಡ ಬೇಟೆಗೆ ಹೊರಡುವುದಕ್ಕೆ, ತನ್ನ ದೇಹಾರೋಗ್ಯವು ತಪ್ಪಿರು
ವುದರಿಂದ ನಿಶ್ಶಕ್ತನಾಗಿರುವೆನೆಂದೂ, ಅದರಿಂದ ತನ್ನನ್ನು ಮನ್ನಿಸಬೇ
ಕೆಂದೂ, ಅಣ್ಣನನ್ನು ಬೇಡಿಕೊಂಡನು. ಸುಲ್ತಾನನು ಆತನನ್ನು
ನಿರ್ಬಂಧಪಡಿಸುವುದಕ್ಕೆ ಮನಸ್ಸುಬಾರದೆ, ನಿನ್ನಿಷ್ಟಾನುಸಾರವಾಗಿ ನೀನಿ
ಲ್ಲಿಯೇ ಇರಬಹುದೆಂದು ಹೇಳಿ ತನ್ನ ಸಖಿಕರಿಂದೊಡಗೂಡಿ, ಮೃಗಯಾವಿ
ನೋದಾರ್ಥವಾಗಿ, ಹೊರಹೊರಟನು. ಟಾರ್ಟರಿ ರಾಜನು ಹೀಗೆ ಏಕಾಂ
ಗಿಯಾಗಿರುತ್ತಾ, ತನ್ನ ಶಯನಗೃಹಕ್ಕೆ ಬಂದು ಬಾಗಿಲುಗಳನ್ನು ಬಿಗಿದು
ಕೊಂಡು, ಉದ್ಯಾನವನವನ್ನು ನೋಡುತ್ತಾ ಒಂದು ಕಿಟಕಿಯಲ್ಲಿ
ಕುಳಿತುಕೊಂಡಿದ್ದನು. ಈ ವಿಧದಿಂದಲಾದರೂ, ಆತನಿಗೆ ಸಂತೋಷ
ವುಂಟಾಗುವುದಾದರೆ, ಆ ಮನೋಹರವಾದ ಸ್ಥಳವೂ, ಆ ಸ್ಥಳದಲ್ಲಿ ವಾಸ
ಮಾಡುತ್ತಿರುವ ಪಕ್ಷಿಗಳೂ, ಮಧುರವಾದ ಅವುಗಳ ಧ್ವನಿಗಳೂ, ಆತನಿ
ಗೆ ಸಂತೋಷವನ್ನುಂಟುಮಾಡುತ್ತಾ ಇದ್ದವು. ಆದರೆ ತನ್ನಿಷ್ಟಪಟ್ಟ
ದರಸಿಯ ವೋಸಕೃತ್ಯವನ್ನು ನೆನಸಿಕೊಂಡು ಸ್ವಲ್ಪವೂ ವಿಡಿಬಿಡದೆ
ವ್ಯಸನವಡುತ್ತಿರುವ ಆತನು ತನ್ನ ಸೌಭಾಗ್ಯವನ್ನು ಕುರಿತು, ಭಗವಂ
ತನಲ್ಲಿ ಮೊರೆಯಿಡುತ್ತಾ, ಆಕಾಶವನ್ನು ನೋಡುತ್ತಿದ್ದನೇ ಹೊರತು,
ಆ ವುದ್ಯಾನವನವನ್ನೆಂದಿಗೂ, ಸಂಪೂರ್ಣವಾಗಿ ನೋಡಿದವನಲ್ಲ. ಇವ
ನು ಈ ರೀತಿಯಲ್ಲಿ ದುಃಖಸಾಗರದಲ್ಲಿ ಮುಳುಗಿರುವಕಾಲದಲ್ಲಿ ಆತನ ಮನ
ಸ್ಸಿಗೆ ಒಂದು ವಿಷಯವು ಹೊಳೆದು ತೋರಿತು, ಅದರಿಂದ ಆತನಚಿಂತೆಗಳೆ
ಲ್ಲವೂ ಬದಲಾಯಿಸಿ ದೇವದೇವನೆಂಬತೆ, ಸುಲ್ತಾನನಪಟ್ಟಣದಲ್ಲಿ ಗೌಜ್ಯ
ವಾಪ ಒಂದಾನೊಂದು ಪಿಡ್ಡಿಬಾಗಿಲು ದಪ್ಪದಪ್ಪನೆ ತೆಗೆಸುಮಿಟ್ಟಿತು, ಆ ಬಾಗಿ
ಲಿನಿಂದ ಇಪ್ಪತ್ತೊಬ್ಬರು ಹೆಂಗಸರು ಹೊರಬಂದರು, ಅವರ ಮಧ್ಯದಲ್ಲಿ
ಸುಲ್ತಾನಿಯೆಯಾ, ಬಂದಿದ್ದಳು. ಅಕೆಗೆ ಸ್ವಭಾವಜನ್ಯವಾಗಿ ಉಂಟಾ
ಗಿದ್ದ ಒಂದಾನೊಂದು ವರ್ಚಸ್ಸಿನಿಂದ ಈಕೆಯೇ ಮಹಾರಾಣಿಯೆಂದು

ಹೇಳುವುದಕ್ಕೂ, ಹಾಗೆ ತಿಳಿದುಕೊಳ್ಳುವುದಕ್ಕೂ, ಸುಲುಭವಾಗಿರುತ್ತ ತ್ತು. ಈ ರಾಣಿಯು ತನ್ನಗಂಡನ ತಮ್ಮನಾದ ಟಾರ್ಟರಿ ದೇಶದ ರಾಜ ನು ತನ್ನ ಗಂಡನಾದ ಸುಲಾತ್ತನನ ಸಂಗಡ ಹೊರಟುಹೋಗಿರುವನೆಂದು ತಿಳಿದು, ಆತನಿರುವ ಅರಮನೆಯ ಕಿಟಕಿಯಬಳಿಗೆ ತನ್ನ ಸಖಿಯೆರೊಂದಿಗೆ ಕೂಡಿ, ಉದ್ಯಾನವನವನ್ನು ಹೊಕ್ಕು ಬಂದಳು, ಟಾರ್ಟರಿ ರಾಜನು, ತೋಟದಲ್ಲಿ ನಡೆಯುವ ಸಮಸ್ತಕಾರ್ಯವನ್ನು ನೋಡುವಂತೆಯೂ, ತಾನುಮೂತ್ರ ಇತರರಿಗೆ ಕಾಣಿಸದಂತೆಯೂ, ಮರೆಯಾಗಿ ಕಿಟಕಿಯಲ್ಲಿ ಕುಳಿತುಕೊಂಡಿದ್ದನು. ಆದುದರಿಂದ ಆ ಹೆಂಗಸರು ಈತನಿಲ್ಲಿರುವುದನ್ನು ಕಾಣದೆ ಹೋದರು, ಆದಕಾರಣ ಸುಲಾತ್ತನಿಯೆಸಂಗಡ ಬಂದಿದ್ದ ಹೆಂಗಸರು, ತಮ್ಮ ಇಷ್ಟಾನುಸಾರವಾಗಿರುವುದಕಾಗಿ ತಮ್ಮ ಮೇಲುಮ್ಮಸುಕುಗಳನ್ನು ಅಂಗಿಗಳನ್ನು ತೆಗೆದುಹಾಕಿದ್ದರು, ಅವರಲ್ಲಿ ಹತ್ತುಮಂದಿ ಕಾಫರಿಯೆರಾಗಿದ್ದರು. (ಅಂದರೆ ನೀಚಕುಲದವರೆಂದು ಅಭಿಪ್ರಾಯ) ಅವರಲ್ಲೊಬ್ಬೊಬ್ಬರು ಉಳಿದ ಸ್ತ್ರೀಯೆರಕೈಗಳನ್ನು ಹಿಡಿದುಕೊಳ್ಳುತಿದ್ದರು. ಸುಲಾತ್ತನಿಯು ತನ್ನ ಪ್ರೀತಿಗೆ ಪಾತ್ರನಾದ ಪುರುಷನಿಲ್ಲದಿರುವುದರಿಂದ ಬೇಹಾರನ್ನುಹೊಂದಿ ಸುಮ್ಮನೆ ಇರದೆ ಕೈಗಳನ್ನು ತಟ್ಟುತ್ತಾ ಮುಸೌದು, ಮುಸೌದು, ಎಂದು ಘಟ್ಟಿಯಾಗಿ ಕೂಗಿಕೊಂಡಳು. ಅಷ್ಟರಲ್ಲಿಯೇ ಒಬ್ಬಾನೊಬ್ಬ ಕಾಫರನು, ಗಿಡದಿಂದಿಳಿದು ಸಂತೋಷದಿಂದ ಆಕೆಯ ಪತ್ತರಕ್ಕೆ ಓಡಿಬಂದನು, ಅದನ್ನು ನೋಡಿ ಷಹಜಮಾನನು, ಹೊಂದಿದ ಆಶ್ಚರ್ಯವನ್ನು ಇಷ್ಟೆಂದು ಹೇಳಲಸಾಧ್ಯವಾಗಿತ್ತು.

ಆದರೆ ಆಕಾಫರನಿಗೂ, ಆಸ್ತ್ರೀಯೆರಿಗೂ ನಡೆದ ಮುಂದಿನ ಸಂಗತಿಯನ್ನು, ವಿವರಿಸಬೇಕಾದ ಅಗತ್ಯವೇನೂ ಕಾಣಬರುವುದಿಲ್ಲ. ಹೇಳೋಣವೆಂದರೆ, ಮನಸ್ಸು ಹೇಳಬೇಡವೆಂದು ಬಲವಂತದಿಂದ ಬಂಧಿಸುತ್ತಿರುವುದು. ಷಹಜಮಾನನು, ತನ್ನ ಅಣ್ಣನಾದ ಸುಲಾತ್ತನನೂಸಹ ತನ್ನಂತೆಯೇ ಚಿಂತಾಗ್ನಿಗೆ ತುತ್ತಾಗುತ್ತಾ, ಇರುವನೆಂಬುದನ್ನು ನೋಡಿದನೆಂದು ಹೇಳುವುದೇ ಸಾಕಾಗಿರುವುದು. ಈ ಕಾವಿಗಳ ಸಮೂಹವು, ಅರ್ಧರಾತ್ರಿಯವರೆಗೂ, ಅಲ್ಲಿದ್ದು ಆ ತೋಟದಲ್ಲಿರುವ ಒಂದಾನೊಂದು ನಿರ್ಮಲ ಸರೋವರದಲ್ಲಿ ಸ್ನಾನವನ್ನು ಮಾಡಿ, ವಸ್ತ್ರಗಳನ್ನು ಧರಿಸಿ, ತಾವು ಬಂದ ಗೂಢವಾದ ಬಾಗಿಲಿನಮೂಲಕವಾಗಿ, ನಗರಿಯೆನ್ನು ಹೊಕ್ಕರೇ

ಹೊರತು, ಮುಸ್ತಾದನುಮಾತ್ರ ತಾನು ಪಟ್ಟಣಕ್ಕೆ ಪ್ರವೇಶಮಾಡದೆ ಮರನನ್ನು ಹತ್ತಿ ತಾನು ಬಂದ ಮಾರ್ಗದಿಂದಲೆ ಉದ್ಯಾನವನವನ್ನು ದಾಟಿ ಹೊರಕ್ಕೆ ಹೊರಟನು. ಇವೆಲ್ಲವೂ ಟಾರ್ಟರಿ ರಾಜನ ಕಣ್ಣಿ ದುರಿಗೆ ನಡೆದುವಾದುದರಿಂದ, ಆತನಿಗೆ ಅನೇಕವಿಧವಾದ ಚಿಂತೆಗಳುಂಟಾಗು ವುದಕ್ಕೆ ಕಾರಣವಾಯಿತು. ಆ ಬಳಿಕ ಆತನು ತನ್ನ ಮನಸ್ಸಿನಲ್ಲಿ ಯೋಚಿಸಿದುದೇನೆಂದರೆ :— ನನ್ನಂತಹ ನಿರ್ಭಾಗ್ಯನು, ಲೋಕದಲ್ಲಿ ಇಲ್ಲವೆಂದು ಯೋಚಿಸುವುದಕ್ಕೆ ಕಾರಣ ವುಂಟಾಗಿದ್ದರೂ, ಇಷ್ಟೊಂ ದು ರಾಜ್ಯಕ್ಕೂ, ದೊರೆಯಾಗಿ ಸಮಸ್ತರಾಜರುಗಳಲ್ಲಿಯೂ, ಶ್ರೇಷ್ಠ ನೆನಿಸಿಕೊಂಡಿರುವ ನನ್ನಣ್ಣನಾದ ಸುಲ್ತಾನನು, ಸಹ ನನ್ನಂತೆ ನಿರ್ಭಾ ಗ್ಯವುಳ್ಳ ಹೆಂಡತಿಯೆನ್ನು ಹೊಂದಿರುವನು. ಆದುದರಿಂದ ಇಂತಹ ಹೆಂಡ ತಿಯನ್ನು ಹೊಂದಿರುವ ಮನುಜರೆಲ್ಲರಿಗೂ, ಇಂತಹ ದುಷ್ಕೀರ್ತಿಪ್ರದ ವಾದ ನೀಚ ಕಾರ್ಯಗಳಿಂದುಂಟಾಗುವ ದುಃಖಗಳನ್ನೂ, ನಾಶವೂಡುವು ದಕ್ಕೆ ಅನಿವಾರ್ಯಗಳೆಷ್ಟೋ ಇರುವುವು. ಹೀಗಿರುವಲ್ಲಿ ವ್ಯರ್ಥವಾದ ದುಃಖದಿಂದ ನನ್ನನ್ನು ನಾನೇ ಕೊಂದುಕೊಂಡೆನಲ್ಲಾ, ಆಹಾ ! ನಾನೆಂ ತಹ ಮೂಢಾತ್ಮನು, ಈ ಸಾಧಾರಣವೂದ ಆಪತ್ತುಗಳನ್ನು ಕುರಿತು, ಬರುವ ಜೊಜ್ಞಾನವು ಇನ್ನೆಂದಿಗೂ, ನನಗೆ ಬರದಂತೆ ನನ್ನ ಮನಸ್ಸನ್ನು ದೃಢವೂಡಿಕೊಳ್ಳುವೆನು, ಎಂದು ಹೇಳುತಾ ತ್ತಾ ಆ ಕ್ಷಣ ವೊದಲೊಂಡು ತಾನು ವ್ಯಸನ ಪಡುವುದನ್ನು, ನಿಲ್ಲಿಸಿದನು. ಆತನು ತಾನು ಕುಳಿತು ಕೊಂಡಿರುವ ಕಿಟಿಕಿಯ ಕೆಳಗಡೆ ನಡೆಯುತ್ತಿರುವ ಸಂಗತಿಗಳೆಲ್ಲವನ್ನು, ತಿಳಿದ ಬಳಿಕ ಅನ್ನದಮೇಲೆ ಆಸೆಯೆಂ ಪಟ್ಟನೇ ಹೊರತು, ಅದುವರೆಗೂ ಅನ್ನಾಹಾರಗಳನ್ನು ಸ್ವಪ್ನದಲ್ಲಿಯೂಕೂಡ ನೆನೆಯಲಿಲ್ಲ. ಆದುದರಿಂದ ಎಲ್ಲವೂ ಮುಗಿದಮೇಲೆ ಸಂತೋಷಯುಕ್ತನಾಗಿ, ಅನ್ನವನ್ನು ತರಿಸಿ ಕೊಂಡು, ಸುಖದಿಂದ ಭೋಜನವನ್ನು ಮಾಡಿದನು. ಅವನು ಸಾವು ರ್ಕಂಡನ್ನು ಬಿಟ್ಟು ಬಂದಲಾಗಾಯ್ತು, ಎಂದೂ ಇಷ್ಟೊಂದು ಹಸಿವಿ ನಿಂದೂಟವನ್ನು ಮಾಡಿದವನಲ್ಲ. ಹೀಗೆ ಅವನು ಊಟಮಾಡುತ್ತಿರುವಾ ಗ ಆತನಿಗೆ ಉತ್ಸಾಹವನ್ನುಂಟು ಮಾಡುವುದಕ್ಕಾಗಿ ಸುಲ್ತಾನನಿಂದ ನಿಯಮಿತರಾಗಿದ್ದ ಜನರು, ಹಾಡುತ್ತಿದ್ದ ಹಾಡನ್ನೂ, ವಾದ್ಯಗೋಷ್ಠಿಗ

ಳಂದ ವೊಳಗುತ್ತಿದ್ದ ಸಂಗೀತಧ್ವನಿಯೆನ್ನೂ, ಸಂತೋಷದಿಂದ ಕೇಳು ತ್ತಿದ್ದನು.

ಆಗಿನಿಂದಲೂ ಆತನು, ಸಂತೋಷಚಿತ್ತನಾಗಿದ್ದುಕೊಂಡು, ಸುಲಾತ್ತನನು, ಬಂದಿರುವನೆಂಬ ವರ್ತಮಾನವನ್ನು ಕೇಳುತ್ತಲೇ ಪರ ಮ ಸಂತೋಷದಿಂದಾತನನ್ನು ನೋಡುವುದಕ್ಕಾಗಿ ಹೊರಟು, ವಂದನಾ ದಿಗಳನ್ನು ಮಾಡಿದನು. ಷಹರಿಯೆರನು, ಮೊದಲು ಈ ವ್ಯತ್ಯಾಸವ ನ್ನು ಕಂಡು ಹಿಡಿಯಲಿಲ್ಲವಾದುದರಿಂದ ಜಿಂಕೆಯ ಬೇಟೆಗಾಗಿ ತನ್ನ ಸಂಗ ಡ ಏಕೆ ಬರಲಿಲ್ಲ ಎಂದು ಆತನನ್ನು ಬಹು ಮರ್ಯಾದೆಯಿಂದ ಕೇಳಿದನು. ಆತನು ಜವಾಬು ಹೇಳುವುದಕ್ಕೆ ಮೊದಲೇ ಬೇಟೆಯೆಯಾಡಿದ ಅನೇಕವಾದ ದ ಜಿಂಕೆಗಳನ್ನು, ಇನ್ನೂ ಇತರವಾದ ಮೃಗಗಳನ್ನೂ, ಸಂತೋಷದಿಂ ದ ತೋರಿಸಿ, ಆ ಬೇಟೆಯೆಲ್ಲಿ ತನಗೆ ಉಂಟಾದ ಸಂತೋಷವನ್ನು ವಿವರ ವಾಗಿ ಹೇಳಿದನು. ಷಹಜಮಾನನು, ಸುಲಾತ್ತನನು ಹೇಳಿದ ಮಾತುಗಳ ನ್ನು ಭಕ್ತಿಯಿಂದ ಕೇಳಿ ಎಲ್ಲಕ್ಕೂ, ಪ್ರತ್ಯುತ್ತರವನ್ನು ಹೇಳಿದನು. ಇದಕ್ಕಿಂತ ಮುಂಚೆ ಆತನ ಬುದ್ಧಿಗೆ ಆವರಿಸಿಕೊಂಡಿದ್ದ ವ್ಯಸನವು, ನಾಶವಾದುದರಿಂದ, ಆತನು ಸುಲಾತ್ತನನನ್ನು ಕುರಿತು ಯೋಗ್ಯವಾದ ಸಕ ಲ ವಿಷಯೆಗಳನ್ನು ಕುರಿತು, ಉತ್ಸಾಹದಿಂದ ಮಾತನಾಡ ತೊಡಗಿದನು. ಷಹರಿಯೆರನು, ತನ್ನ ತಮ್ಮನನ್ನು ಬಿಟ್ಟು ಬೇಟೆಗೆ ಹೊರಡುವಕಾಲ ದಲ್ಲಿ ಆತನು ಯಾವಸ್ಥಿತಿಯೆಲ್ಲಿದ್ದನೋ, ಆ ಸ್ಥಿತಿಯೆಲ್ಲೇ ಇರುವನೆಂ ದು ತಿಳಿದುಕೊಂಡಿದ್ದರೂ, ಆತನು ಅಷ್ಟು ಪ್ರಸನ್ನವಮುಖದಿಂದ ಕೂಡಿ ರುವುದನ್ನು ನೋಡುತ್ತಲೇ ಆನಂದಪರವಶನಾಗಿ, ಆತನನ್ನು ಕುರಿತು ಇಂತೆಂದನು.

ಪ್ರೀತಿಪಾತ್ರನಾದ ಸಹೋದರನೇ ! ನಾನು ಬೇಟೆಗೆ ಹೋಗಿದ್ದ ಕಾಲದಲ್ಲಿ ನಿನಗೆ ಒದಗಿದ ಶುಭಸ್ಥಿತಿಗಾಗಿ ಭಗವಂತನಿಗೆ ನಾನಾ ವಿಧವಾದ ವಂದನೆಗಳನ್ನು ಮಾಡಿ, ಸಂತೋಷದಿಂದಿರುವೆನು. ಇದನ್ನು ನೋಡಿ ನನಗೆ ಅತ್ಯಾನಂದ ವುಂಟಾಗಿರುವುದಾದುದರಿಂದ ನಿನ್ನನ್ನು ಒಂದು ವಿಷ ಯವನ್ನು ಕೇಳಬೇಕೆಂದು, ಕುತೂಹಲ ವುಳ್ಳವನಾಗಿರುತ್ತೇನೆ. ಅದಕ್ಕೆ ನೀನು ಸಮ್ಮತಿಸಬೇಕು, ಎಂಬದಾಗಿ ನಿನ್ನನ್ನು ಪಾರ್ಥಿಸುವೆನೆಂದು ನುಡಿ ಯಲು, ಟಾರ್ಟರಿ ರಾಜಸಾದ ಷಹಜಮಾನನು ನನ್ನ ವಿಷಯೆದಲ್ಲಿ ನೀವು

ಇಂತಹ ಅಭಿಪ್ರಾಯವನ್ನು ಪಡಬೇಡಿ, ನಿಮ್ಮ ಆಜ್ಞೆಗೆ ನಾನೆಂದಿಗೂ ಬದಲು ಹೇಳಲಾರೆನು. ಆದುದರಿಂದ ನನಗೆ ನಿಮ್ಮ ಇಷ್ಟಾನುಸಾರವಾಗಿ ಆಜ್ಞಾಪಿಸಬಹುದೆಂದು ಹೇಳಿದನು. ನನ್ನ ಮೂಲಕವಾಗಿ ತಮಗೇನು ಆಗಬೇಕಾಗಿರುವುದೋ, ಅದನ್ನು ನಾನು ತಿಳಿದುಕೊಳ್ಳುವವರೆಗೂ, ನಾನು ಸಹಿಸಲಾರೆನಾದುದರಿಂದ ಅಪ್ಪಣೆ ಕೊಡಿಸಬೇಕೆಂದು ಬೇಡಿಕೊಂಡನು. ಬಳಿಕ ಷಹರಿಯೆರನು, ತನ್ನ ತಮ್ಮನನ್ನು ಕುರಿತು ನಿನ್ನ ಊರಿನಿಂದ ಹೊರಟು ಇಲ್ಲಿಗೆ ಬಂದಂದಿನಿಂದ ಈವರೆಗೂ ತುಂಬ ವ್ಯಸನಾಕ್ರಾಂತನಾಗಿದ್ದಹಾಗೆ ನನಗೆ ತೋರುತಲಿದ್ದಿತು. ಆ ವ್ಯಸನವನ್ನು ನಿವಾರಿಸುವುದಕ್ಕಾಗಿ ನಾನು ಮಾಡಿದ ಪ್ರಯತ್ನಗಳೆಲ್ಲವೂ ನಿಷ್ಫಲವಾದವು, ಆದುದರಿಂದ ನಿನ್ನರಾಜ್ಯವನ್ನು ತೊರೆದು ಇಲ್ಲಿಗೆ ಬಂದುದರಿಂದಲೂ, ಅತ್ಯಂತ ರೂಪವತಿಯಾದ ನಿನ್ನಪೆಂಡತಿ ಸಾಮರ್ಕಂಡು ರಾಣಿಯನ್ನು, ಕಾರಣಾಂತರದಿಂದ ಬಿಟ್ಟುಬಂದುದೇ ಇದಕ್ಕೆ ಕಾರಣವಾಗಿರಬಹುದೆಂದು ಅರಿತು ಕೊಂಡೆನು. ನಾನು ಹೀಗೆ ಯೋಚಿಸಿದುದು ಸರಿಯೋ ತಪ್ಪೋ ನನಗೆ ತಿಳಿಯದು, ಅದನ್ನುಕುರಿತು ವಿಶೇಷವಾಗಿ ನಿನ್ನಲ್ಲಿ ಪ್ರಶ್ನೆ ಮಾಡುವುದರಿಂದ ನಿನಗೆ ಬೇಚ್ಚಾ ಕೊರತೆಯುಂಟಾಗುವುದೆಂದು ಸುಮ್ಮನಿದ್ದೆನು. ನಾನು ಬೇಟೆಗಾಗಿ ಹೋಗಿ ಮತ್ತೆ ಬರುವಷ್ಟರಲ್ಲಿಯೇ ನೀನು ಇದುವರೆಗೂ, ನಿನ್ನ ಮನಸ್ಸನ್ನು ಪೀಡಿಸುತ್ತಿದ್ದ ವ್ಯಾಕುಲವನ್ನು ತೊರೆದು ಸ್ವಸ್ಥವಾಗಿರುವುದನ್ನು ನೋಡಿದೆನು. ನೀನು ಮೊದಲು ಅತ್ಯಂತವ್ಯಸನಾಕ್ರಾಂತನಾಗಿದ್ದು, ಈಗ ಅಂತಹ ವ್ಯಸನವನ್ನು ನೀಗಿಕೊಂಡು ಸ್ವಸ್ಥ ಚಿತ್ತನಾಗಿರುವುದಕ್ಕೆ ಕಾರಣವನ್ನು ವಿಸ್ತರಿಸಿ ಹೇಳಬೇಕೆಂದು ಕೇಳಿದನು.

ಆಗ ಟಾರ್ಟರಿ ರಾಜನು, ಅಣ್ಣನು ಕೇಳಿದ ಪ್ರಶ್ನೆಗೆ ತಕ್ಕ ಉತ್ತರವನ್ನು ಹೇಳಲು ಆಲೋಚಿಸುತ್ತಿರುವನಂತೆ ಸ್ವಲ್ಪ ಸುಮ್ಮನಿದ್ದು ಅಣ್ಣಾ ನೀನು ನನಗೆ ಯಜಮಾನನಾಗಿಯೂ, ದೊರೆಯಾಗಿಯೂ, ಇರುತ್ತೀಯೆ, ಆದರೂ ತಾವು ನನ್ನನ್ನು ಕೇಳಿದ ಪ್ರಶ್ನೆಗೆ ಉತ್ತರವನ್ನು ಹೇಳಬೆ ಸುಮ್ಮನಿರುವಂತೆ ಅನುಗ್ರಹಿಸಿ ಕಾಪಾಡಬೇಕೆಂದು ಬೇಡಿಕೊಳ್ಳುವೆನು ಎಂದು ಹೇಳಿದನು. ಅದನ್ನುಕೇಳಿ ಸುಲ್ತಾನನು ಅಯ್ಯಾ ನೀನು ಖಂಡಿತವಾಗಿಯೂ, ಹಾಗೆ ಮಾಡಕೂಡದು. ಆವಶ್ಯಕವಾಗಿ ಉತ್ತರವನ್ನು

ಹೇಳಯೇ ತೀರಬೀಕು. ಆಗುವದಿಲ್ಲವೆಂದರೆ ಖಂಡಿತವಾಗಿಯೂ, ನಾನು ಬಿಡುವದಿಲ್ಲವೆಂದು ಹೇಳಿದನು. ಆಗ ಷಹಜಮೂನನು, ಅಣ್ಣನ ನಿರ್ಬಂಧಕ್ಕೆ ಸಿಕ್ಕಿಬಿದ್ದವನಾಗಿ, ಅಣ್ಣಾ ! ನೀವು ಹೇಳಬೀಕೆಂದು ನನ್ನನ್ನು ಬಲಾತ್ಕಾರದಿಂದ ಕೇಳುತ್ತಿರುವೆ ಆದುದರಿಂದ ತಮಗೆ ತೃಪ್ತಿಯೆನ್ನುಂಟು ಮಾಡುವೆನೆಂದು ಸಾಮರ್ಕಂಡುದೇಶದ ರಾಣಿಯು ಮಾಡಿದ ದ್ರೋಹವನ್ನು ಆತನಿಗೆ ತಿಳಿಯಪಡಿಸಿ ಇದೆ ನನ್ನವ್ಯಸನಕ್ಕೆ ಕಾರಣ ಆದುದರಿಂದಲೇ ನಾನು ವ್ಯಸನಾಕ್ರಾಂತನಾಗಿದ್ದೆನು. ಇದು ವ್ಯಸನಕ್ಕೆ ಕಾರಣ ವಹುದೊ ! ಅಲ್ಲವೋ ! ನೀವೇ ನಿದಾನಿಸಿ ತಿಳಿಯಬೇಕೆಂದು ಬೇಡಿಕೊಂಡನು.

ಸುಲ್ತಾನನಾದರೋ ! ಟಾರ್ಟರಿದೇಶದ ರಾಜನು ಹೇಳಿದ ಸಂಗತಿಯನ್ನು ಕುರಿತು, ತನಗೆ ವ್ಯಸನವನ್ನುಂಟುಮಾಡುವ ಗದ್ಗದಸ್ವರವುಳ್ಳ ವಾಕ್ಯುಗಳಿಂದ ಕೂಡಿ ಹಾ ! ತಮ್ಮಾ! ನೀನು ಎಂತಹ ಘೋರವಾದುದನ್ನು ಹೇಳಿದೆ. ಇವನ್ನು ಕೇಳುವುದಕ್ಕೆ ಮೂಢನಾಗಿ ನಾನೆಷ್ಟು ಆತುರದಿಂದ ನಿನ್ನನ್ನು ಕೇಳಿದೆನು. ಆ ಪಾಪಾತ್ಮರನ್ನು ದಂಡಿಸುವುದಕ್ಕೆ ಹಿಂದೆಗೆದುದಕ್ಕಾಗಿ, ನಿನ್ನನ್ನು ನಾನು ಕೊಂಡಾಡುವೆನು. ಇದಕ್ಕಾಗಿ ನನ್ನನ್ನು ಯಾರೂ ನಿಂದಿಸುವುದಿಲ್ಲ. ಇದು ನ್ಯಾಯವೇ ? ಇಂತಹ ವಿಷಯವು ನನಗೆ ಪ್ರಾಪ್ತವಾಯಿತಲ್ಲಾ ! ನಾನು ನಿನ್ನಹಾಗೆ ಸಹಿಸಿಕೊಂಡಿರಲಾರೆನು. ಆಕೆಯೊಬ್ಬಳನ್ನು ಕೊಂದುಹಾಕಿದರೆಮೂತ್ರ ನನಗೆ ತೃಪ್ತಿಯುಂಟಾಗುವುದು. ಈ ನನ್ನ ಆಗ್ರಹಕ್ಕೆ ಸಾವಿರಮಂದಿ ಹೆಂಗಸರನ್ನಾದರೂ, ಬಲಿಗೊಡುತ್ತಿದ್ದೆನಲ್ಲಾ ! ಈ ಶೋಕಕ್ಕೆ ನಾನು ವ್ಯಸನಪಡುವುದನ್ನು ಮನ್ನಿಸುವೆನು. ಈ ಕಾರಣಗಳು ಅತ್ಯಂತ ಅಸಾಧ್ಯಕರಗಳು, ಉಪದ್ರವಕಾರಿಗಳಾದುದರಿಂದ ಇನ್ನೂ ಅತಿಯಾಗಿ ಪೀಡಿಸದಿರದು. ಓ ದೇವರೇ ! ಇದು ಏನು ಈ ವಾರ್ತೆ ನನಗೊಬ್ಬನಿಗೆ ವಿನಾ ಇನ್ನೊಬ್ಬಬ್ಬನಿಗೆ ಇಂತಹ ದುಷ್ಟಕಾರ್ಯವು ನಡೆದ ಸಂಗತಿಯು ಗೊತ್ತಾಗಲಿಲ್ಲವೆಂದು ನನಗೆ ತೋರಲಿಲ್ಲ. ಅತಿಯಾಗಿ ಹೇಳಿದುದರಿಂದ ಫಲವೇನು ? ಎಲೈ ತಮ್ಮನೇ ! ನಿನಗೆ ಸಹಾಯವನ್ನುಂಟುಮಾಡಿದ ಭಗವಂತನನ್ನು ಸ್ತೋತ್ರಮಾಡುವೆನು. ನಿನಗೆ ಉಂಟಾದ ವ್ಯಸನವು ಉಪಶಾಂತಿಯನ್ನು ಹೊಂದುವುದು ದೃಢವೇ ಸರಿಯೆಂದು, ನಿಸ್ಸಂದೇಹ

ವಾಗಿ ತಿಳಿದು ಬಂದರೆ ಅದು ಯಾವಕಾರಣದಿಂದ, ಉಪಶಾಂತಿಯನ್ನು ಹೊಂದುವುದೋ ! ಅದನ್ನು ಮರೆಮಾಜದೆ ತಿಳಿಯಪಡಿಸಬೇಕು ಎಂದನು. ಷಹಜಮಾನನು ಈಗ ಕೇಳಿದ ಪ್ರಶ್ನೆಗೆ, ತನ್ನ ಅಣ್ಣನ ಸಂಬಂಧ ವುಂಟಾಗಿರುವುದರಿಂದ, ತನ್ನ ಸಂಗತಿಯನ್ನು ತಿಳಿಯಪಡಿಸಿದಷ್ಟು ಸುಲಭವಾಗಿ ಆತನ ಸಂಗತಿಯನ್ನು ತಿಳಿಯ ಹೇಳುವುದಕ್ಕೆ ಒಪ್ಪಲಿಲ್ಲವಾದುದರಿಂದ, ಆತನ ನಿರ್ಬಂಧಕ್ಕೆ ಒಳಪಟ್ಟವನಾಗಿ ಇಂತೆಂದು ಹೇಳತೊಡಗಿದನು:—

ಹೇಗೆಂದರೆ :—ತಮ್ಮ ಆಜ್ಞೆಯು ವಿಪರತಕ್ಕುದಲ್ಲವಾದುದರಿಂದ ನಾನು ಅದಕ್ಕೆ ಒಳಪಡಬೇಕಾಗಿದೆ. ಹಾಗೆ ನಾನು ಒಳಪಟ್ಟುದೇ ಆದರೆ ನನಗೆ ಪ್ರಾಪ್ತವಾಗಿರುವ ದುಃಖಕ್ಕಿಂತಲೂ, ಅಧಿಕವಾದ ದುಃಖವು ನಿನಗೆ ಪ್ರಾಪ್ತವಾಗುವುದೆಂದು ಹೆದರಬೇಕಾಗಿದೆ. ನೀವು ನಿರ್ಬಂಧ ಪಡಿಸಿದ ಪಕ್ಷದಲ್ಲಿ ಪಾತಾಳದಲ್ಲಿರುವ ಜೀರನ್ನು ಹೊರಕ್ಕೆ ತೆಗೆದು ತೋರಿಸೆಂದು ಬಲಾತ್ಕಾರ ಪಡಿಸುತ್ತಿರುವಂತಾಗುವಿರಾದುದರಿಂದ ಅದನ್ನು ಕೇಳಿದರೆ ನಿಮ್ಮನ್ನು ನೀವೇ ನೋಯಿಸಿಕೊಳ್ಳಬೇಕಾಗುವುದೆಂದು ಹೇಳಿದನು. ಹಾ! ಆದರೂ ಷಹರಿಯೆರನು ನಿನ್ನ ಮೂತುಗಳೆಲ್ಲವೂ, ನನ್ನಪೇಕ್ಷೆಯನ್ನು ಇನ್ನು ಹೆಚ್ಚುಮಾಡುತ್ತಿರುವುದರಿಂದ ಅದು ಎಂತಹ ರಹಸ್ಯವಾಗಿದ್ದರೂ, ಬಿಡದೆ ನನಗೆ ಹೇಳಬೇಕೆಂದು, ಬಹಳ ಆತುರದಿಂದ ಕೇಳಿದನು.

ಆಗ ಟಾರ್ಟರಿ ರಾಜನು ಇನ್ನು ಪ್ರತ್ಯುತ್ತರವನ್ನು ಹೇಳುವುದಕ್ಕೆ ಆಗದೆ ವೇಷವನ್ನು ಮರೆಸಿಕೊಂಡುಬರುವ ಸ್ತ್ರೀಯೆರು ಮತ್ತು ಸುಲ್ತಾನಿಯೆರ ಸ್ಥಿತಿಯೆನ್ನು ಮುಸೌದು ಎಂಬ ತಾಫರನ ವಿಚಾರವನ್ನು ಕುರಿತು ತಾನು ಉದ್ಯಾನವನದಲ್ಲಿ ನೋಡಿದ ಸಂಗತಿಗಳೆಲ್ಲವನ್ನೂ, ಮರೆಯದೆ ಹೇಳಿಬಿಟ್ಟನು. ಹೇಗೆಂದರೆ :— ಈ ನಿಂದಿತವಾದ ಕೆಲಸಗಳನ್ನು ನೋಡಿದಮೇಲೆ, ಹೆಂಗಸರೆಲ್ಲರು ಸ್ವಭಾವವಾಗಿ ಇಂತಹ ಗುಣಗಳುಳ್ಳವರೆಂದೂ, ಅಲ್ಲದೆ ತಮ್ಮ ಅಭಿಲಾಷೆಯನ್ನು ನಿವರ್ತಿಸಿಕೊಳ್ಳಲಾರರೆಂದು ತಿಳಿದುಕೊಂಡೆನು. ಇಂತಹ ಅಭಿಸಾರ್ಯೆ ವುಂಟಾಗಕಾರಣದಲ್ಲಿ, ಸ್ತ್ರೀಯೆರಿಗೆ ಪತಿಭಕ್ತಿಯುಂಟೆಂಬ ನಂಬುವುದು, ಪುರುಷನಿಗೆ ಅತ್ಯಂತ ಅವಿವೇಕ ಸ್ವಭಾವವಾಗಿರುವುದೆಂದು ಯೋಚಿಸುವೆನು. ಈ ಯೋಚನೆಯಿಂದ ಇನ್ನು ಅನೇಕ ವಿಧವಾದ ಯೋಚನೆಗಳು ಸಂಭವಿಸುತ್ತಿರುವವೇ ಹೊರತು ಕಟ್ಟಕಡೆಗೆ ಸ್ವಸ್ಥಚಿತ್ತನಾಗಿರುವುದೇ ಎಲ್ಲಕ್ಕಿಂತಲು ಉತ್ತಮ

ವಾದುದೆಂದುಕೊಂಡೆನು. ಹಾಗೆ ತೀರಿಹೋಗುವುದಕ್ಕೆ ಸ್ವಲ್ಪಕಷ್ಟ ವಾಗಿರುವುದರಿಂದ, ಅದನ್ನು ನಾನು ಸಾಧಿಸಿಕೊಂಡೆನು. ತಾವು ನನ್ನ ಯೋಚನೆಯೆನ್ನು ಕೇಳಿದಪಕ್ಷದಲ್ಲಿ ನನ್ನಂತೆಯೇ ನಿಶ್ಚಿಂತರಾಗಿರಬಹುದೆಂ ದು, ಬೇಡಿಕೊಂಡನು. ಪಹಜಪವೂನನು ಹೇಳಿದ ವಿವೇಕವು ಬಹುಚೆ ನ್ನಾಗಿದ್ದರೂ, ಸುಲಾತ್ತನನಿಗೆ ಆ ಬುದ್ಧಿಯು ಅಷೊಟ್ಟಂದು ಉತ್ತಮ ವಾಗಿ ಕಾಣಬರಲಿಲ್ಲ. ಅವನು ಬಹಳ ಕೋಪೋದ್ರೇಕದಿಂದ ಹೇಳಿದುದೇ ನಂದರೆ :—

ಇಂಡಿಯೋದೇಶದ ರಾಣಿಯಾದ ನನ್ನ ಹೆಂಡತಿಯು ಈ ವಿಧವಾ ಗಿ ವ್ಯಭಿಚಾರ ದೋಷವುಳ್ಳವಳಾಗಿರುವಳೇ ? ಎಂದಿಗೂ, ಇಲ್ಲ. ಆಹಾ ! ನನ್ನ ಕಣ್ಣುಗಳಿಂದ ನಾನು ನೋಡಿದ ಜೊರತು ಇದನ್ನು ನಾನು ನಂಬು ವುದಿಲ್ಲ. ಬಹುಶಃ ನಿನ್ನ ಕಣ್ಣುಗಳು ನಿನ್ನನ್ನು ವೋಸಪಡಿಸಿರಬಹು ದು, ಇದು ದೊಡ್ಡ ವಿಷಯವಾದುದರಿಂದ ಈ ವಿಷಯಗಳನ್ನು ನಾನೇ ಸ್ವಂತವಾಗಿ ತಿಳಿದುಕೊಳ್ಳಬೇಕೆಂದು ಹೇಳಲು, ಪಹಜಪವೂನನು, ಪ್ರೀತಿ ಪಾತ್ರನಾದ ಅನುಜನೇ ! ಇದನ್ನು ಸುಲಭವಾಗಿಯೂ, ನಿಸ್ಸಂದೇಹವಾ ಗಿಯೂ, ತಿಳಿದುಕೊಳ್ಳಬಹುದು. ಹೇಗಂದರೆ :— ತಾವು ಮತೊಂದು ಸಾರಿ ಬೇಟೆಗೆ ಹೊರಟು, ನನ್ನನ್ನು ಸಂಗಡ ಕರೆದುಕೊಂದು, ಪಟ್ಟಣ ಕ್ಕೆ ಹತ್ತಿರವಾಗಿ ಗುಡಾರವನ್ನು ಹೊಡೆಸಿ, ಪರಿವಾರಸಹಿತವಾಗಿ ಅಲ್ಲಿದ್ದು ರಾತ್ರಿಯಲ್ಲಿ ನಾನಿಬ್ಬರೂ ಏಕಾಂಗಿಗಳಾಗಿ ಹೊರಟುಬಂದು, ಅಂತಃಪುರ ವನ್ನುಸೇರಿ ನೋಡಿದುದೇ ಆದರೆ, ನಾನು ನೋಡಿದಸಂಗತಿಯನ್ನು ನೀವೂ ನೋಡುವಿರೆಂದು ನಿಜವಾಗಿ ಹೇಳುವೆನು, ಎಂದು ಖಂಡಿತವಾಗಿ ನುಡಿದನು. ಬಳಿಕ ಈ ಯೋಚನೆಗೆ ಸುಲಾತ್ತನನು ಸಮ್ಮತಿಸಿದವನಾಗಿ ಮತೊಂದು ಸಾರಿ ಬೇಂಟೆಗೆ ಹೊರಡುವೆನೆಂದು ಹೇಳಿ, ತನ್ನ ಇಷ್ಟಾನುಸಾರವಾಗಿ ಆಗಲೇ ಪರಿವಾರದ ಮೂಲಕ ಗುಡಾರವನ್ನು ಹೊಡಿಸಿ, ಸಿದ್ಧವೂಡಿ, ಮರುದಿನವೇ ಅಣ್ಣತಮ್ಮಂದಿರಿಬ್ಬರೂ ತಮ್ಮಗುಡಾರವನ್ನು ಹೊಕ್ಕು ರಾತ್ರಿಯಾಗುವವರೆಗೂ, ಅಲ್ಲಿಯೇ ಇದ್ದರು. ಅಷ್ಟರಲ್ಲಿಯೇ, ತನ್ನ ಪಥಿಸ ಮಂತ್ರಿಯನ್ನು ಕರೆದು, ತನ್ನ ಮನೋಭಿಪ್ರಾಯವನ್ನು ತಿಳಿ ಯ ಹೇಳಿದ ನಂತರ ಬರುವಜಬಗೂ, ಎಂತಹ ನಿರ್ಬಾಧವಿಲ್ಲದ ಕೆಲಸವಿದ್ದ ರೂ, ಯಾರೂ ಈ ಸ್ಥಳವನ್ನು ತೊರೆದು ಹೋಗಕೂಡದೆಂತೆ, ಸೈನ್ಯ ಎಚ್ಚ

ರಿಕೆಯಿಂದ ನೋಡಿಕೊಂಡಿರಬೇಕೆಂದು, ಆಜೆಮ್ಲಾಪಿಸಿ,ಟಾರ್ಟರಿ ದೇಶದರಾ
ಜನ ಸಂಗಡ ತಾನು ಕುದುರೆಯನ್ನು ಹತ್ತಿ ಗೋಪ್ಯವಾಗಿ ಪಟ್ಟಣದಿಂದ
ಹೊರಟು, ಷಹಜಮಾನನು ವಾಸಮಾಡುತ್ತಿದ್ದ ಏಕಾಂತ ಗೃಹವನ್ನುಸೇರಿ
ನಿಂತನು. ಟಾರ್ಟರು ದೇಶದ ರಾಜನು ತಾನುನೋಡುತ್ತಿದ್ದ ಕಿಟಕಿಯೆಳ್ಳಿ
ಕುಳಿತುಕೊಂಡ ಕೂಡಲೇ ವೇಷಧಾರಿಗಳಾದ ಕಾಫರರೂ, ಸುಲಾ್ತನಿಯಿಂ
ದೊಡಗೂಡಿ, ಅವಳಸಖಿಯರೂ, ತೋಟವನ್ನುಹೊಕ್ಕು ಬಂದರು. ಅಷ್ಟ
ರಲ್ಲಿಯೇ, ಆ ಸುಲಾ್ತನಿಯು, ತನ್ನ ಪ್ರೀತಿಪಾತ್ರನಾದ ಕಾಫರನನ್ನು
ಮುಸೌದು ಎಂದು ಕೂಗುತ್ತಿರುವುದನ್ನು ನೋಡಿ ಸುಲಾ್ತನನು ತನಗೆ
ಉಂಟಾದ ಅವಮಾನವನ್ನು ನಿರ್ಭಾಗ್ಯದೆಶೆಯನ್ನು ಸಂಪೂರ್ಣವಾಗಿ ತಿಳಿ
ದು ಕೊಳ್ಳುವುದಕ್ಕೆ ಎಷ್ಟು ಆವಶ್ಯಕವೋ ಅಷ್ಟಕ್ಕಿಂತಲೂ, ಹೆಚ್ಚಾ
ಗಿಯೇ ನೋಡಿದನು. ಆ ಬಳಿಕ ಆತನು ಎಲೈ ದೇವರೇ ! ಇದೆಂಥ
ಭಯಂಕರವಾದ ಮತ್ತು ಮಾನಹಾನಿಯನ್ನುಂಟುಮಾಡುವ ಕಾರ್ಯ್ಯ !
ನನ್ನಂತಹ ರಾಜನ ಹೆಂಡತಿಯು ಇಂತಹ ದುಷ್ಕಾರ್ಯ್ಯವನ್ನು ಮಾಡು
ವುದಕ್ಕೆ ಯೆತ್ನಿಸಿದಳೇ ? ಎಂದು ವೊರೆಯಿಸುತಾ್ತ, ಇಂತೆಂದನು.

ರಾಜತ್ವವನ್ನು ಹೊಂದಿದವರಲ್ಲಿ ಯಾರಾದರೂ, ತಾನೇ ಧನ್ಯ
ನೆಂದು ಗರ್ವ ಪಡಬಾರದು, ಅಯ್ಯೋ ! ತಮ್ಮಾ ! ಬಾ, ನಾವಿಬ್ಬರೂ
ಈ ದಿನ ಈ ಪ್ರಪಂಚವನ್ನು ಗೌರವ ಹೀನರಾದುದರಿಂದತೊರೆದು ಬಿಟ್ಟೆ
ವು. ಅಯ್ಯಾ ! ಬಂದುದಿನ ಮುಯ್ಯಾದೆಯುಂಟಾದರೆ ಮರುದಿನವೇ
ಅವಮಾನವು ದೊರೆಯೆ ಹೋಗುವುದಲ್ಲಾ ! ಆದುದರಿಂದ ನಮ್ಮ ರಾಜ್ಯ
ವನ್ನು ರಾಜ್ಯಾಡಂಬರವನ್ನು ಮರೆತುಬಿಟ್ಟು, ಗೋಪ್ಯವಾಗಿ ಪರದೇಶ
ಕ್ಕೆ ಹೊರಟು, ರಹಸ್ಯವಾಗಿ ಜೀವನವನ್ನು ಮಾಡಿಕೊಳ್ಳುತಾ್ತ, ನಮ್ಮ
ವೈಭಾಗ್ಯವನ್ನು ಹೋಗಲಾಡಿಸಿಕೊಳ್ಳಬೇಕೆಂದು, ನುಡಿಯಲು, ಷಹ
ಜಮಾನನು, ಇಂತಹ ಯೋಚನೆಗೆಂದಿಗೂ ಸಮ್ಮತಿ ಪಡಲಿಲ್ಲ. ಅಲ್ಲದೆ
ಷಹರಿಯೆರನು, ಅತ್ಯಂತ ಕೋಪದಿಂದಿರುವಲ್ಲಿ ಆತನಿಗೆ ಪ್ರತ್ಯುತ್ತರವ
ನ್ನು ಹೇಳುವುದು ಯುಕ್ತವಲ್ಲವೆಂದು ತಿಳಿದು, ಎಲೈ ಪ್ರಿಯೆನಹೋದ
ರನೇ ! ತಮಗೆ ನಾನೆಂದಿಗೂ, ಜೀರೆಯಾಗಿರುವನಲ್ಲ, ನಿಮ್ಮ ಮನಸ್ಸೇ
ನನ್ನ ಕಾರ್ಯ್ಯ, ನಿಮ್ಮ ಆಜ್ಞೆಯೇ ನನ್ನ ಮನಸ್ಸು, ಇವಕ್ಕೆ ಯಾವ
ಸಂದೇಹವೂ ಇಲ್ಲ. ಆದುದರಿಂದ ನೀನೆಲ್ಲಿಗೆಹೋಗುವಿರೋ, ಅಲ್ಲಿಗೆ ನಾನು

ಬರತಕ್ಕವನೇ ಹೊರತು, ಅನ್ಯಥಾ ಇಲ್ಲ. ಆದರೆ ನಮಗೆ ಬಂದೊದಗಿದ ಅಪವಾದಕ್ಕಿಂತಲೂ, ಅಧಿಕವಾದ ನಿರ್ಭಾಗ್ಯವನ್ನು ಹೊಂದಿದವರನ್ನು ನೋಡಿದರೆ, ಪುನಹ ಹೊರಟುಬರುವಂತೆ ಮಾಡಿಸಬೇಕೆಂದು ಕೇಳಲು, ಸುಲ್ತಾನನು ನನಗೂ ಅದೇಸಮ್ಮತವಾಗಿ ತೋರುವುದಾದರೂ, ನಾವು ನಮಗಿಂತಲೂ ನಿರ್ಭಾಗ್ಯರಾದವರನ್ನು ನೋಡಲಾರವೆಂದು ಹೇಳಿದನು.

ಈ ವಿಷಯಕ್ಕಾಗಿ ನಾವು ದೂರದೇಶ ಪ್ರಯಾಣಮಾಡಬೇಕೆಂದು ನಮಗೆ ತೋರುವುದು, ಎಂದು ಹೇಳಿದ ಟಾರ್ಟರಿ ದೇಶದ ಸುಲ್ತಾನನ ವಾಕ್ಯವನ್ನು ಕೇಳಿ ಅಕ್ಕಿಬ್ಬರೂ, ನಗರದಿಂದ ಹೊರಟು ರಹಸ್ಯವಾದ ದಾರಿಯಲ್ಲಿ ನಡೆದು ಹೋಗುತ್ತಾ ಬೆಳಗಾಗುವವರೆಗೂ, ಪಯಣ ಮಾಡಿದರು.

ಹೊದಲನೆದಿವಸದ ರಾತ್ರಿ ಬಂದುಮರದ ಬುಡದಲ್ಲಿ ಮಲಗಿದ್ದು ಬೆಳಿಗ್ಗೆ ಎದ್ದು ನಾನಾ ವೃಕ್ಷಗಳಿಂದಲೂ, ಸುಂದರವಾದ ಪಕ್ಷಿಗಳಿಂದಲೂ ಕೂಡಿದ ಸಮುದ್ರತೀರವನ್ನು ಸೇರಿ, ಅಲ್ಲಿ ವಿಶ್ರಾಂತಿಯನ್ನು ಹೊಂದುವುದ ಕ್ಕಾಗಿ, ಮರದಬುಡದಲ್ಲಿ ಕುಳಿತು, ತಂತಮ್ಮಹೆಂಡಿರು ಕೂಡಿದ ಜೊಲ್ಲವನ್ನು ಕುರಿತು, ಸಂಭಾಷಣೆ ಮಾಡುತ್ತಾ ಇದ್ದರು. ಅವರು ಕುಳಿತು ಕೊಂಡ ಸ್ವಲ್ಪಹೊತ್ತಿಗೆ, ಸಮುದ್ರಮಧ್ಯದಲ್ಲಿ ಘೋರವೂ, ಭಯಂಕರವೂ, ಆದ ಒಂದಾನೊಂದು ಧ್ವನಿಯು ಕೇಳಿಬಂದಿತು. ಅದನ್ನು ಕೇಳಿ ಅವರಿಬ್ಬರೂ, ಭಯಗ್ರಸ್ತರಾಗುತ್ತಿರುವಲ್ಲಿ, ಸಮುದ್ರದಿಂದ ಕರ್ಪಗೆ ಕಂಭದಂತೆ ಏನೋ ಒಂದು ಪದಾರ್ಥವು ಹೊರಟು ಮೇಘಮಂಡಲವನ್ನು ಹಾದು ಹೋಯಿತು. ಅದನ್ನು ನೋಡಿ ಇಬ್ಬರು ಅಣ್ಣ ತಮ್ಮಂದಿರು ಮತ್ತಷ್ಟು ಭಯವನ್ನು ಹೊಂದಿದರು. ಕೂಡಲೆ ಅವರು ವೇಗವಾಗಿ ಓಡಿ ಹೋಗಿ ಒಂದು ಮರವನ್ನು ಹತ್ತಿ ಮರೆಯಾಗಿದ್ದರು. ಅಷ್ಟರಲ್ಲಿಯೆ ಅವರು ಆ ಧ್ವನಿಯು ಯಾವಕಡೆಯಿಂದ ಕೇಳಿಬಂದಿತೊ, ಆ ಪ್ರದೇಶವನ್ನು ನೋಡುತ್ತಿರುವಲ್ಲಿ, ಆ ಕಂಭವು ನೀರನ್ನು ಹಾರುತ್ತ ಗಿರ್ರನೆ ತಿರುಗುತ್ತಿರುವುದನ್ನು ನೋಡಿದರು. ಅದನ್ನು ನೋಡಿದ ಕೂಡಲೆ, ಇಂಥದೆಂದು ತಿಳಿಯಬೇಕೊಡುವುದರಿಂದ, ಅದು ಮನುಷ್ಯರನ್ನು ಕೊಲ್ಲುವ ಭೂತವಾಗಿರಬಹುದೆಂದು, ಅವರು ತಿಳಿದುಕೊಂಡರು. ಆದರೆ ಅದು ಭೂತಗಳಿಗಿಂತಲೂ, ಅತಿಶಯವಾದ ಭಯಂಕರತ್ವವನ್ನು ಹೊಂದಿ ತೋರುತ್ತಿತ್ತು

ದ್ದಿತು. ಅದು ಒಂದು ದೊಡ್ಡ ಗಾಜಿನ ಪೆಟ್ಟಿಗೆಯನ್ನು ತಲೆಯೆಮೇಲೆ ಇಟ್ಟುಕೊಂಡಿದ್ದಿತು. ಆ ಪೆಟ್ಟಿಗೆಗೆ ಬಲವಾದ ನಾಲ್ಕು ಉಕ್ಕಿನ ಬೀಗಗಳನ್ನು ಹಾಕಿದ್ದರು. ಆ ಭೂತವು ಅಂತಹ ಪೆಟ್ಟಿಗೆಯನ್ನು ತಂದು ಈ ರಾಜಕುಮಾರರು ಹತ್ತಿ ಕುಳಿತಿರುವ ಮರದ ಬುಡದಲ್ಲಿ ಇಳಿಸಿತು. ಅದನ್ನು ನೋಡಿ ಆ ರಾಜಕುಮಾರರು ಓ ಹೋ ಇಂದಿಗೆ ನಮ್ಮ ಪ್ರಾಣಗಳು ಹಾಳಾದವೆಂದುಕೊಂಡರು. ಆ ಭೂತವಾದರೊ ! ಪೆಟ್ಟಿಗೆಯ ಹತ್ತಿರ ಕೂತುಕೊಂಡು ತನ್ನ ನಡುವಿನಲ್ಲಿದ್ದ ನಾಲ್ಕು ತಾಳಗಳ ಮೂಲಕ ಆ ಪೆಟ್ಟಿಗೆಯನ್ನು ತೆರೆಯಲು ಅದರೊಳಗಿನಿಂದ ಸರ್ವಾಂಗ ಸುಂದರಿಯಾದ ಒಬ್ಬ ಹೆಂಗಸು ಹೊರಕ್ಕೆ ಬಂದಳು.

ತರುವಾಯ ಆ ರಕ್ಕಸನು ಅವಳನ್ನು ಹತ್ತಿರ ಕೂರಿಸಿಕೊಂಡು, ಕಾಮದೃಷ್ಟಿಯಿಂದವಳನ್ನು ನೋಡಿ ಮೋಹಕರವಾದ ಅಂಗಗಳನ್ನು ಹೊಂದಿರುವ, ಅಂಗನಾಮಣಿಯೆರಲ್ಲಿ ಅಗ್ರಗಣ್ಯಳಾದ ಓ ಪ್ರಾಣನಾಯಕಿಯೆ! ನಿನ್ನ ಮದುವೆಯ ದಿನ ನಿನ್ನನ್ನು ತೆಗೆದುಕೊಂಡು ಬಂದ ನಾನುಆದಿನವೊದಲ್ಗೊಂಡು ನಿನ್ನ ಬಿಡಗನ್ನು ಸರ್ವದಾ ನೋಡುತ್ತಿರುವೆನಲ್ಲಾ!ಸ್ವಲ್ಪಹೊತ್ತು ನನ್ನಬಳಿಯೆಲ್ಲಿ ವಾಸವಾಗಿರು. ನನಗೆ ನಿದ್ರೆ ಬರುತ್ತಿರುವುದರಿಂದ, ವಿಶ್ರಮಿಸಿಕೊಳ್ಳುವುದಕ್ಕಾಗಿ, ಇಲ್ಲಿಗೆ ಕರೆದು ತಂದೆನೆಂದು ಹೇಳಿ, ದೊಡ್ಡದಾದ ತನ್ನ ತಲೆಯನ್ನು ಅವಳ ತೊಡೆಯಮೇಲಿಟ್ಟು, ಮಲಗಿ ನಿದ್ರಿಸುತ್ತಾ ಇರುವಾಗ, ಗುರುಗುಟ್ಟುತ್ತಿರುವುದರಿಂದ ಆ ಸಮುದ್ರ ತೀರವೆಲ್ಲ, ಪ್ರತಿಧ್ವನಿಯನ್ನು ಕೊಡುತ್ತಾ ಇದ್ದಿತು. ಬಳಿಕ ಆ ಹೆಂಗಸು ಆ ಮರದಮೇಲೆ ನೋಡಲಾಗಿ ಇಬ್ಬರು ರಾಜಕುಮಾರರು, ಕಾಣಬಂದರು. ಆಗ ಅವಳು ಮೂತನಾಡದೆ ಕೆಳಕ್ಕೆ ಇಳಿದು ಬನ್ನಿರೆಂದು, ಸನ್ನೆಯಿಂದ ತೋರಿಸಿದಳು. ಆ ರಾಜಕುಮಾರರು ತಾವಿರುವುದು ಆಕೆಗೆ ತಿಳಿಯಿತಲ್ಲಾ ! ಎಂದು ಭಯಪಡುತ್ತಾ, ತಮ್ಮನ್ನು ರಕ್ಷಿಸಬೇಕೆಂದು, ಸಂಜ್ಞೆಮಾಡಿ ಬೇಡಿಕೊಂಡರು. ಆ ಬಳಿಕ ಆಕೆಯು ರಾಕ್ಷಸನ ತಲೆಯನ್ನು ಮೆಲ್ಲಗೆ ನೆಲದಮೇಲಿಟ್ಟು, ಆ ಗಿಡದಬಳಿಗೆ ಹೋಗಿ ಆತುರದಿಂದ ಕೂಡಿದ ಮೆಲ್ದನಿಯಿಂದ, ಮೆತ್ತಗೆ ಮರದಿಂದಿಳಿದು ನನ್ನ ಬಳಿಗೆ ಬನ್ನಿರೆಂದು ಬೇಡಿಕೊಂಡಳು. ಆ ಭೂತಕ್ಕೆ ನಾವು ಹೆದರುತ್ತಿರುವೆರಾದುದರಿಂದ, ನಮ್ಮನ್ನು ಕರೆಯದೆ ಮುನ್ನಿಸಬೇಕೆಂದು ಪುನಃ ಸನ್ನೆಮಾಡಿ

ತೋರಿಸಿದರು. ಆ ಬಳಿಕ ಆ ಹೆಂಗಸು, ನೀವು ಖಂಡಿತವಾಗಿಯೂ ಬೇಗ ಬರಬೇಕು, ಹಾಗೆ ಬಾರದೆ ಹೋದರೆ ಈ ಭೂತವನ್ನೇಳಿಸಿ ನಿಮ್ಮನ್ನು ಸಾಯಿಸಿಕೊಳ್ಳುವಂತೆ ಮಾಡಿಸುವೆನೆಂದು ಹೇಳಿದಳು. ಈ ಮಾತಿಗೆ ಭಯ ಪಟ್ಟು ಅವರು ಮೆಲ್ಲಗೆ ಮರವನ್ನಿಳಿದು ಬರಲು, ಆಕೆಯು ಅವರ ಕೈಯನ್ನು ಹಿಡಿದುಕೊಂಡು, ಮರದಬಳಿಗೆ ಕರೆದುಕೊಂಡು ಹೋಗಿ, ತನ್ನ ಅನಿವಾರ್ಯಗಳನ್ನೆಲ್ಲಾ ಹೇಳಿಕೊಂಡಳು. ಅವರು ಮೊದಲು ಒಪ್ಪಲಿಲ್ಲವಾದುದರಿಂದ, ಪೆದರಿಕೆಯಿಂದ ಇವಳು ಒಪ್ಪುವಂತೆ ಮಾಡಿದಳು.

ಆ ಬಳಿಕ ಅವರಿಂದ ತನಗಾಗಬೇಕಾದ ಕೆಲಸಗಳನ್ನೆಲ್ಲಾ ತೀರಿಸಿಕೊಂಡು, ಅವರ ಕೈಯಲ್ಲಿರುವ ಲುಂಗುರಗಳನ್ನು ಬೇಕೆಂದು ತೆಗೆದುಕೊಂಡಳು ಆ ಬಳಿಕ ಎಂದಿನಂತೆ ತನ್ನ ಉಡುಪನ್ನು ಧರಿಸಿಕೊಂಡು ಆಪೆಟ್ಟಿಗೆಯ ಹತ್ತಿರಕ್ಕೆ ಬಂದು, ತನ್ನ ಪೆಟ್ಟಿಗೆಯಲ್ಲಿದ್ದ ನಾನಾ ವಿಧವಾದ ಲುಂಗುರಗಳ ಸರ ಮೊಂದನ್ನು ತೆಗೆದು ಅವರಿಗೆ ತೋರಿಸಿ, ಇದೇತಕ್ಕೆ ಬಲ್ಲಿರೋ ? ಎಂದು ಕೇಳಿದಳು. ಅದಕ್ಕವರು ಇದು ನಮಗೆ ತಿಳಿಯದು ನೀನು ತಿಳಿಯ ಹೇಳಬೇಕೆಂದು ಬೇಡಿಕೊಂಡರು. ನಾನು ಇದುವರೆಗೂ, ರತಿಸುಖವನ್ನು ಅನುಭವಿಸಿದ ಪುರುಷರ ಜ್ಞಾಪಕಾರ್ಥವಾಗಿ, ಅವರುಗಳ ಲುಂಗುರಗಳನ್ನು ತೆಗೆದು ಸರವಾಗಿ ಕಟ್ಟಿಟ್ಟಿರುವೆನು. ಇದರಲ್ಲಿ ತೊಂಭತೊಂಭತ್ತು ಲುಂಗುರಗಳುಂಟು, ಈಗ ನೀವುಕೊಟ್ಟ ಲುಂಗುರವು ಸೇರಿ ನೂರಾಯಿತು. ಈ ದುಷ್ಟನಾದ ರಾಕ್ಷಸನು, ಯಾವಾಗಲೂ ನನ್ನನ್ನು ಬಿಡದೆ ಕಾಡಿದ್ದರೂ, ನಾನು ನೂರುಮಂದಿ ಮಹಾ ಪುರುಷರನ್ನು ವರಿಸಿ, ರತಿಸುಖವನ್ನು ಹೊಂದಿದೆನು. ಆದುದರಿಂದ ನನ್ನ ಸಮಾನರಾದ ಸ್ತ್ರೀಯರು ನೆನಸಿದ ಕಾರ್ಯವನ್ನು ಬಿಡದೆ ನೆರವೇರಿಸಿಕೊಳ್ಳುವರು. ಅಲ್ಲದೆ ಅದನ್ನು ನಿವಾರಿಸುವುದಕ್ಕೆ, ಗಂಡನಾಗಲಿ, ಇಲ್ಲವೆ ಮಿಂಡನಾಗಲಿ, ಉದ್ದಂಡ ಶೌರ್ಯ ಸಾಹಸ ಸಂಪನ್ನನಾದ ಭಗವಂತನಿಗಾಗಲಿ, ಎಂದಿಗೂ, ಸಾಮರ್ಥ್ಯ ವಿಲ್ಲವೆಂದು, ಇದರಿಂದ ನೀವು ತಿಳಿದುಕೊಳ್ಳಬಹುದು. ಗಂಡಸರು ತಂತಮ್ಮ ಹೆಂಡಿರನ್ನು ನಿರ್ಬಂಧಪಡಿಸದಿರುವುದೇ ಉತ್ತಮ, ಎಂದುವೇಳೆ ಹಾಗೆ ನಿರ್ಬಂಧ ಪಡಿಸಿದುದೇ ಆದರೆ, ಅವರಾಗಿ ಮೂರ್ಗವನ್ನು ತೋರಿಸಿಕೊಟ್ಟಂತಾಗುವುದೇ ಹೊರತು ಮತ್ತಾವ ಪ್ರಯೋಜನವೂ ಉಂಟಾಗಲಾರದೆಂದು ಹೇಳಿ, ತನ್ನ ಲುಂಗುರದ ಸರಗಳನ್ನು ಸರಿ

ಯಾಗಿ ಕಟ್ಟಿ ಎಂದಿನಂತೆ ರಾಕ್ಷಸನ ಬಳಿಗೆ ಬಂದು ಕೂತುಕೊಂಡು, ಆತನ ತಲೆಯನ್ನು ತನ್ನ ತೊಡೆಯಮೇಲಿಟ್ಟುಕೊಂಡು, ರಾಜಕುಮಾರರನ್ನು ಹೊರಟು ಹೋಗುವಂತೆ, ಸಂಜ್ಞೆ ಮಾಡಿದಳು.

ಅಲ್ಲಿಂದವರಿಬ್ಬರೂ ಹೊರಟು ಕಣ್ಣಿಗೆ ಕಾಣದಂತೆ ಮರೆಯಾದ ಬಳಿಕ ಷಹರಿಯೆರನು ತನ್ನ ತಮ್ಮನಾದ ಷಹಜಮಾನನನ್ನು ಕುರಿತು ಓ ತಮ್ಮ ! ಈ ಆಶ್ಚರ್ಯಕರವಾದ ಸಂಗತಿಯನ್ನು ನೋಡಿದೆಯಲ್ಲಾ! ಇದರಿಂದ ನಿನಗೆ ತೋರುವುದೇನು ? ಆ ರಕ್ಕಸನು ತನ್ನ ಹೆಂಡತಿಯು ಎಂತಹ ಪತಿವ್ರತೆಯೆಂದು ನಂಬಿಕೊಂಡಿಗುವನು. ಆದರೂ ಅವಳುಮಾಡುವ ದುರ್ಮಾರ್ಗವನ್ನು ನೋಡಿದೆಯಾ ! ಎಂದು ಕೇಳಲು, ಅಣ್ಣಾ ! ಹೌದು ನೀವು ಹೇಳುವುದು ನಿಜ ! ರಾಕ್ಷಸನು ನಮಗಿಂತಲೂ ನಿರ್ಭಾಗ್ಯ ಶಿರೋಮಣಿಯೇ ಹೌದು ! ಆದುದರಿಂದ ನಾವು ಯೋಚಿಸಿದಂತೆ, ನಮ್ಮ ರಾಜ್ಯಕ್ಕೆ ಹೋಗೋಣ ! ಆದರೆ ಮುಂಚೆ ಮಾಡಿಕೊಳ್ಳದಿರಜೇಕಾದ ಅಗತ್ಯವೇನೂ ಇಲ್ಲ. ನಮ್ಮ ಹೆಂಡರ ವಿಶ್ವಾಸವು ನಮ್ಮಲ್ಲಿ ನೆಲೆಯಾಗಿ ನಿಲ್ಲುವಂತೆ ಮಾಡುವ ಬಂದು ಉಪಾಯವು ತೋರುವುದು. ಅದರಿಂದ ನಮ್ಮ ಹೆಂಡತಿಯರನ್ನು, ಪತಿವ್ರತೆಯರನ್ನಾಗಿ ಮಾಡಿಕೊಳ್ಳಬಹುದು. ಇದು ನಿಜವಾದ ಮಾತು, ಆಗ ನಾನು ಅದನ್ನು ನಿಮಗೆ ಹೇಳುವುದಿಲ್ಲ, ಮುಂದೆ ಹೇಳಿದಾಗ ನೀವು ನನ್ನಂತೆಯೇ ಅನುಮೋದಿಸುವಿರೆಂದು ಟಾರ್ಟರಿರಾಜನು ಹೇಳಲು, ತಮ್ಮನ ವಾಕ್ಯವನ್ನು ಕೇಳಿ ಸುಲ್ತಾನನು ಸಂತೋಷದಿಂದ ಅನುಮೋದಿಸಿ, ಅಲ್ಲಿಂದ ಹೊರಟು ಮೂರನೆಯೆಡಿನ ತಮ್ಮರಾಜಧಾನಿಯ ಗುಡಾರವನ್ನು ಸೇರಿದರು. ಸುಲ್ತಾನನು ಬಂದಿರುವ ವರ್ತಮಾನವನ್ನು ಕೇಳಿ ಸಭಿಕರೆಲ್ಲರು, ಮರುದಿನ ಬಂದು ಮರ್ಯಾದೆಯಿಂದ ಎದುರುಗೊಂಡರು. ಆತನು ಅವರನ್ನು ಮೊದಲಿಗಿಂತಲೂ, ಸಂತೋಷದಿಂದನೋಡಿ ಮಾತನಾಡಿಸಿ, ನಾನಾವಿಧವಾದ ಬಹುಮಾನಗಳನ್ನು ಕೊಟ್ಟ ಇನ್ನು ಮುಂದೆ ಬೇಟೆಗೆ ಹೋಗಜೇಕಾದ ಅಗತ್ಯವಿಲ್ಲ. ಆದುದರಿಂದ ನಿಮ್ಮ ಸೈನ್ಯಗಳೆಲ್ಲವೂ, ಊರಿಗೆ ಹೊರಡಲೆಂದು ಆಜ್ಞಾಪಿಸಿ, ತಾವಿಬ್ಬರೂ, ಕುದುರೆಯನ್ನು ಹತ್ತಿ ರಾಜಧಾನಿಗೆ ಬಂದು ಸೇರಿದರು.

ಹೀಗೆ ಊರಿಗೆ ಬಂದ ಸುಲ್ತಾನನು, ನೆಟ್ಟಗೆ ಅಂತಃಪುರವನ್ನು ಹೊಕ್ಕು ಸುಲ್ತಾನಿಯೆನ್ನು ಬಂಧಿಸಿ ತನ್ನ ಪ್ರಧಾನಮಂತ್ರಿಯ ವಶಮಾ

ಡಿ ಕೊಂಡುಹೋಗುವಂತೆ ಆಜ್ಞೆಮಾಡಿಸಿದನು. ಆ ಮಂತ್ರಿಯು ಸುಲೋ
ನಿಯು ಸಾಯಿಸಿಕೊಳ್ಳುವಂತಹ, ಯಾವ ಅಪರಾಧವನ್ನು ಮಾಡಿದ
ಳೆಂದು ವಿಚಾರಿಸದೆ ಕೊಲ್ಲೋಕೊಳ್ಳಿಸಿದನು. ಆದರೆ ಸುಲೋ
ಕ್ಕೆ ತನ್ನ ಕೋಪವನ್ನು ಸಾಕುಮಾಡದೆ ರಾಣಿಯೆ ಸಖಿಯೆರನ್ನು ದಾದಿ
ಯೆರನ್ನು ತನ್ನ ಕೈಗತ್ತಿಯಿಂದಲೆ ಹೊಡೆದು ಕೊಂದನು. ಅಲ್ಲದೆ ಪತಿ
ವ್ರತೆಯರಾದ ಹೆಂಗಸರೇ ಇಲ್ಲವೆಂದು ನೆನಸಿ ಪ್ರತಿದಿನವೂ ಒಬ್ಬೊಬ್ಬ
ಹೆಂಗಸನ್ನು ಮದುವೆ ಮಾಡಿಕೊಂಡು ಬೆಳಗಾಗುತ್ತಲೆ ಅವಳನ್ನು ಕಡಿ
ದು ಬಿಸಾಡುವಂತೆ ನಿರ್ಧರಿಸಿಕೊಂಡು, ಈ ಟಾರ್ಟರಿರಾಜನು ತನ್ನೂರಿಗೆ
ಹೊರಟುಹೋದ ಬಳಿಕ ಆ ಪ್ರಕಾರವಾಗಿ ನಡೆಯಿಸಬೇಕೆಂದು ಗೊತ್ತು
ಮಾಡಿಕೊಂಡನು. ಅಷ್ಟರಲ್ಲಿಯೇ ಟಾರ್ಟರಿ ರಾಜನು ತನ್ನಣ್ಣನಿಂದ
ನಾನಾವಿಧವಾದ ಅಮೂಲ್ಯವಪದಾರ್ಥಗಳನ್ನು ಬಹುಮತಿಯಾಗಿ ಪಡೆದು,
ಆತನಿಂದಪ್ಪಣೆಯನ್ನು ಹೊಂದಿ, ಶೀಘ್ರವಾಗಿ ತನ್ನ ದೇಶಕ್ಕೆ ಹೊರ
ಟು ಹೋದನು. ಹೀಗೆ ಷಹಜಮಾನನು ಹೊರಟುಹೋದಮೇಲೆ,
ಸುಲೋನನಾದ ಷಹರಿಯೆರನು ತನ್ನ ಮಂತ್ರಿಯನ್ನು ಕರೆದು, ಸೇನಾ
ನಾಯಕರಲ್ಲೊಬ್ಬನ ಮಗಳನ್ನು ಕರೆದು ತರುವಂತೆ ಹೇಳಿ, ಅವಳಸಂ
ಗಡ ಆ ರಾತ್ರಿ ಅನುಕೂಲ ದಾಂಪತ್ಯವನ್ನು ಅನುಭವಿಸಿ ಮರುದಿನ
ಮಂತ್ರಿಯೆನ್ನು ಕರೆದು, ಇವಳನ್ನು ಕೊಂದು ಈದಿನ ಮತೊಬ್ಬಳ
ನ್ನು ತರಬೇಕೆಂದು ಆಜ್ಞೆಮಾಡಿಸಿದನು. ಆದರೆ ಮಂತ್ರಿಯು ಹೀಗೆಮಾ
ಡುವುದಕ್ಕೆ ಕಾರಣವೇನು ? ಇಂತಹ ಘೋರಕೃತ್ಯವನ್ನು ಮಾನವರು
ಮಾಡಬಹುದೇ ? ಎಂಬ ಕರುಣವನ್ನು ಯೋಚಿಸುತ್ತಿದ್ದರೂ, ತನ್ನ
ಯೆಜಮಾನನಾದ ಸುಲೋನನ ಆಜ್ಞೆಗೆ ಹೆದರಿ ಕಣ್ಣಾರೆಕಾಣದ ಕುರುಡ
ನಂತೆ, ಅವಳನ್ನು ಕೊಂದು ಮರುದಿನ ಮತೊಬ್ಬ ಸೇನಾನಾಯಕನ
ಮಗಳನ್ನು ತಂದುಕೊಟ್ಟ ಅವಳನ್ನು ಕೊಂದು, ಮರುದಿನ ಮತೊಬ್ಬ
ರೈತನಮಗಳನ್ನು ತಂದಿತ್ತು ಎರಡನೆಯದಿನ ಅವಳನ್ನು ಕೊಂದು
ಹಾಕುತ್ತ, ಈ ತೆರದಿಂದಲೆ ಪ್ರತಿದಿನವೂ ನಡೆಸುತಾ ಇದ್ದನು.

ಈ ಪ್ರಕಾರವಾಗಿ ಅತ್ಯಂತ ಕ್ರೂರಕೃತ್ಯವನ್ನು ಮಾಡುತ್ತಿ
ರುವ ಸುಲೋನನನ್ನು ನೋಡಿ ಜನರು ನಾನಾ ವಿಧವಾದ ಪ್ರಲಾಪಗಳಿಂದ
ಕಪಿಸುತಾ ತಮ್ಮ ದೌರ್ಭಾಗ್ಯವನ್ನು ಕುರಿತು ಭಗವಂತನಲ್ಲಿ ಪಾರ್ಥಿ

ಸುತಾ್ತ, ಸತ್ತ ಮಗಳನ್ನು ನೆನಸಿಕೊಂಡೊಂದು ಕಡೆಯಲ್ಲಿ ತುದಿಗಳೂ ಮತೊ್ತಂದೆಡೆಯಲ್ಲಿ ಪ್ರೀತಿಪಾತ್ರಳಾದ ಮಗಳನ್ನು ನೀಗಿಕೊಂಡ ತಾಯಿಯರು ದುಃಖಿಸುತಾ್ತ ಆರ್ತರಾಗಿ ಆಕಾಶವನ್ನು ನೋಡಿ ಅಳುತಿ್ತರುವುದರಿಂದ ಜಗತೆ್ತಲ್ಲವೂ ದುಃಖಮಯವಾದಂತೆ ತೋರುತಿ್ತದ್ದಿತು. ಆದುದರಿಂದ ಮೊದಲು ತನ್ನ ಪ್ರಜೆಗಳ ಪ್ರೀತಿ ವಿಶ್ವಾಸಕೆ್ಕ ಪಾತ್ರನಾಗಿದ್ದ ಸುಲಾ್ತನನು, ಈಗಲಾದರೋ ಘನವಾದ ಪಾಪಕೆ್ಕ ಪಾತ್ರನಾಗಿ ತನ್ನ ಪ್ರಜೆಗಳಿಂದ ಶಾಪ ಶೋಕಂಗಳಿಗೆ ಗುರಿಯಾದನು. ಇದುವರೆಗೂ ಹೇಳಿದಂತಹ, ಕೂ್ರರಕೃತ್ಯಗಳನ್ನು ಮಂತಿ್ರಯು ಅನವರತಚಿತ್ತನಾಗಿಯೇ ಮಾಡುತಿ್ತದ್ದನು. ಅಂತಹ ಮಂತಿ್ರಗೆ ಇಬ್ಬರು ಹೆಣ್ಣುಮಕ್ಕಳಿದ್ದರು. ಅವರಲ್ಲಿ ಹಿರಿಯವಳು ಷಹರಜಾದಿ, ಎಂದೂ, ಕಿರಿಯವಳ ಹೆಸರು ದಿನರಜಾದಿ, ಎಂದೂ, ಪ್ರಸಿದ್ಧರಾಗಿದ್ದರು. ಎರಡನೆಯವಳು ಮಹಾ ಗುಣವಂತಳಾಗಿದ್ದಳು. ಹಿರಿಯವಳಾದರೋ, ರೂಪಲಾವಣ್ಯಾದಿಗಳಲ್ಲಿ ಸುಂದರಳಾಗಿ ಸ್ತ್ರೀಸಾಮಾನ್ಯಕಿ್ಕರುವ ಒದಿ್ಧ, ಶಕಿ್ತ, ಸಾಹಸಾದಿಗಳಿಗಿಂತ, ಅಧಿಕವಾದ ಸಂಪತ್ತನ್ನು ಹೊಂದಿದ್ದಳು. ಅವಳಿಗೆ ಓದುವುದಕೂ್ಕ, ಬರುತಿ್ತದ್ದಿತು. ಬುದ್ಧಿ ಶಕಿ್ತಗೆ ತಕ್ಕಂತೆ ಜಾ್ಞನ ಕಳಕಿ್ತ ಯುಂಟಾಗಿದ್ದುದರಿಂದ, ಅವಳು ತಾನು ಓದಿದ ನಾ್ಯಯ, ಪುರಾಣ, ಶಾಸ್ತ್ರ, ವೇದಾಂತಾದಿ ಅಲಂಕಾರ ಗ್ರಂಥಗಳನ್ನು ಮರೆಯದೆ ನೆನಪಿನಲ್ಲಿಟ್ಟುಕೊಂಡಿದ್ದಳು. ಅಲ್ಲದೆ ಚತುರೆಯಾದ ಇವಳು ಆ ಕಾಲದ ಕವಿಗಳಲ್ಲೆಲ್ಲಾ, ಶಿರೋಮಣಿಯೆಂತಿದ್ದಳು. ಇಷೊ್ಟಂದು ಗುಣಗಳಿದ್ದರೂ, ಆಕೆಯಬಳಿಯಲ್ಲಿ ಶಿರೋಭೂಷಣವಾದ ಸುಗುಣವೂ, ಮೀರೆಯು ತಳೆತು್ತ. ಇಂತಹ ಕುವರಿಯನ್ನು ಬಹುಪ್ರೀತಿಯಿಂದ ಸಲಹುತಿ್ತದ್ದ ಮಂತಿ್ರಯು, ಒಂದಾನೊಂದು ದಿನ ತನ್ನ ಮಗಳಕೂಡ, ಮಾತನಾಡುತಿ್ತರುವಾಗ, ಆಕೆ ತಂದೆಯನ್ನು ಕುರಿತ, ಅಯ್ಯಾ! ನನ್ನದೊಂದು ವಿಜ್ಞಾಪನೆಯುಂಟು, ತಾವು ಅದರಂತೆ ನಡೆಸಿ ಕೊಡಬೇಕೆಂದು ಬೇಡಿಕೊಂಡಳು. ಅದು ನಾ್ಯಯವಾಗಿಯೂ ಸೂಕ್ತವಾಗಿಯೂ ಇದ್ದರೆ ನಡೆಸಿಕೊಡುವೆನೆಂದು ತಂದೆಯು ಹೇಳಿದನು. ಅದು ನ್ಯಾಯವನ್ನು ಪೂರೈಸುವ ಕಾರಣದಿಂದಲೆ ನೀವು ತಿಳಿದುಕೊಳ್ಳಬಹುದು ಹೇಗೆಂದರೆ ಈ ದೇಶದ ಸುಲಾ್ತನನು ಇಂತಹ ಕೃತ್ಯವನ

ನ್ನು ನಡಿಸುತ್ತಾ ನಾನಾಮುಂದಿಯ ಮಕ್ಕಳುಗಳನ್ನು ಕೊಂದು ದೇಶವನ್ನೆಲ್ಲಾ ದುಃಖ ಮಯವಾಗಿ ಮಾಡುವುದಕ್ಕೆ ಕಾರಣವೇನು? ಇದನ್ನು ತಿಳಿದು ಹೇಳಿದರೆ ಅದನ್ನು ನಿವರ್ತಮಾಡಬೇಕೆಂದು, ಬಯಸುತ್ತಿರುವೆನೆಂದು, ಕೇಳಿದಳು. ಮಗಳ ಮಾತನ್ನು ಕೇಳಿ ಅಮ್ಮಾ! ನೀನು ಹೇಳಿದ ವಾಕ್ಯವು ಬಯಸಿದ ಕಾರ್ಯವೂ ಕೊಂಡಾಡ ತಕ್ಕದ್ದೇ ಹೌದು; ಆಹಾ? ನೀನು ನಿವರ್ತಿಸಬೇಕೆಂದು ಹೇಳಿದ ಕೇಡುಗಳಿಂದಿಗೂ, ನಾಶವಾಗದೆಂದು ನನಗೆ ತೋರುತ್ತಿರುವುದು. ಹೀಗಿರುವಲ್ಲಿ ನೀನದನ್ನು ಹೇಗೆ ನಿವರ್ತಮಾಡುವೆ? ಎಂದು ಕೇಳಿದನು. ತುಂಬೆಯೇ ಅದು ಹಾಗಿರಲಿ, ಸುಲಾತ್ತನು ದಿನವೂ ಹೊಸಹೊಸದಾಗಿ ಮದುವೆಮಾಡಿಕೊಳ್ಳುತ್ತಿರುವನಲ್ಲ! ಹಾಗೆಯೇನನ್ನನ್ನು ಒಂದುದಿನ ಅವನಬಳಿಗೆ ಕಳುಹಿಸಿಕೊಡೆಂದು ಬೇಡಿಕೊಂಡಳು. ಆ ಮಾತನ್ನುಕೇಳಿಅಮ್ಮಾನಿನಗೆಕೀಗಯುಬ್ಬಿರುವಬುದ್ಧಿಯೆಮೇಲೆ ಆಣೆ ಇಡುವೆನು. ಈಯೋಜನೆಯನ್ನು ಬಿಡು! ಏಕೆಂದರೆ ಸುಲ್ತಾನನು ಒಂದು ದಿನ ಮದುವೆ ಮಾಡಿಕೊಂಡವಳನ್ನು ಮರುದಿನ ಕೊಲಿಸಿ ಹಾಕುವನೆಂಬ ವರ್ತಮಾನವನ್ನು ಕೇಳಿಯೂ ದುರಾಶೆಯಿಂದ ಆತನನ್ನು ಮದುವೆ ಮಾಡಿಕೊಳ್ಳಬೇಕೆಂದು ಬಯಸಿರುವ, ನಿನ್ನ ಬುದ್ಧಿಯು ಕೊನೆಗೆ ಯಾವ ಸುಖವನ್ನು ಹೊಂದುವುದೋ? ಯೋಚಿಸು, ಎಂಬದಾಗಿ ಹೇಳಿದ ತಂದೆಯ ಮಾತನ್ನು ಕೇಳಿ! ಎಲೈ ಪೂಜ್ಯನಾದ ತುಂಬೆಯೇ! ನಾನು ಮಾಡುವ ಸಾಹಸಕಾರ್ಯವು ನನಗೆ ತಿಳಿಯುವುದಲ್ಲದೆ, ಅನ್ಯರಿಗಾರಿಗೂ ತಿಳಿಯದು, ಆದುದರಿಂದನನಗಾವ ಭಯವೂ ಇಲ್ಲ, ಒಂದು ವೇಳೆ ನಾನು ಸತ್ತುಹೋದರೆ, ನನ್ನ ದೇಶಕ್ಕೆ ಹೆಚ್ಚಾದ ಉಪಕಾರವನ್ನು ಮಾಡಿದಂತಾಗುವುದಲ್ಲದೆ ನನ್ನಇಷ್ಟಾರ್ಥವೂ ಈಡೇರುವುದು. ಇದೂ ಅಲ್ಲದೆ ನನಗೆ ಉತ್ತಮ ತರದ ಕೀರ್ತಿಯು ದೊರಕುವುದು. ಅಲ್ಲ. ಅಲ್ಲ. ಭಯಂಕರವಾದ ಮರಣದಿಂದ ನೀನು ನನ್ನನ್ನು ಏಷ್ಟು ನಿಷ್ಠವಾಗಿ ಬೇಡಿಕೊಂಡರೂ ನಾನು ಬಿಡಲಾರೆನು. ಹಾಗಲ್ಲದಿದ್ದರೆ ತನ್ನ ಕಟಾರಿಯಿಂದ ದೊರೆಯು ನಿನ್ನ ಹೃದಯವನ್ನು ಸೀಳುತ್ತಿರುವುದನ್ನು ನನ್ನಾಕಾರರು ನಿನ್ನ ದೇಹವನ್ನು ಬಂಧಿಸಿ ಕಟ್ಟುತ್ತಿರುವುದನ್ನು, ನೋಡಿ ನಾನು ಮಹತ್ತಾದ ವ್ಯಸನವನ್ನು ಹೊಂದಬೇಕಾಗುವುದು. ಅದರಿಂದ ನನಗೂ ಮರಣ ಪುಂಟಾಗಬಹುದು. ಇದು ಎಂತಹ ಕಾರ್ಯವೆಂದು ಹೇಳಿದನು.

ಆಗ ಷಹರಜಾದಿಯು ಅಪ್ಪಾ ! ನನ್ನಲ್ಲಿ ದಯೆವಿಟ್ಟು ನೀನು ನನ್ನ ಇಷ್ಟಾನುಸಾರವಾಗಿ ನೆರವೇರಿಸ ಬೇಕೆಂದು ವಿನಯದಿಂದ ಮತೊಂದು ಸಾರಿ ನಿನ್ನನ್ನು ಬೇಡಿಕೊಳ್ಳುವೆನು, ಎಂದು ಹೇಳಿದಳು. ಅಯ್ಯೋ ! ನಿನಗೆ ಉಂಟಾಗಿರುವ ಅವಿವೇಕವು ಇನ್ನು ನಿನ್ನನ್ನು ಕೊಲ್ಲದೆ ಇರದು ! ಇದನ್ನು ನೀನು ತಿಳಿಯದೆ ಅನ್ಯಾಯವಾಗಿ ಕೆಟ್ಟುಹೋಗುತ್ತಿರುವೆಯೆಲ್ಲಾ ! ಅಪಾಯವನ್ನು ಕಳೆದುಕೊಳ್ಳದೆ, ಅದರಿಂದಲೇ ಮಹತ್ಕಾರ್ಯಗಳನ್ನು ಮಾಡಹೋಗುವರು ಎಂದಿಗೂ ಸುಖವನ್ನು ಹೊಂದಲಾರರು. ತನಗೆ ಸುಖ ಬಂದ ಕಾಲದಲ್ಲಿ ಅದನ್ನು ಕಾಪಾಡಿಕೊಳ್ಳಲಾರದೆ ಹೋದ ಕತ್ತೆಯ ಗತಿಯು ನಿನಗೆ ಸಂಭವಿಸುವದೆಂದು ಹೆದರುತ್ತಿರುವೆನು. ಎಂದು ಹೇಳಲು, ಷಹರಜಾದಿಯು, ಆ ಕತ್ತೆಯ ದೌರ್ಭಾಗ್ಯವು ಹೇಗೆ ಪರಿಣಮಿಸಿತೆಂದು ಕೇಳಲು ಮಗಳಿಗೆ ಮಂತ್ರಿ ಇಂತೆಂದನು.

೧ ಕತ್ತೆ, ಎತ್ತು, ಮತ್ತು ವ್ಯವಸಾಯಗಾರನ ಕಥೆ.

ಅತ್ಯಂತ ಧನವಂತನಾದ ಒಬ್ಬ ಶೂದ್ರನಿದ್ದನು. ಆತನಿಗೆ ನಾನಾವಿಧವಾದ ಮನೆಗಳೂ, ಅಲ್ಲಲ್ಲಿ ನಿಬಿಡವಾಗಿ ತುಂಬಿರುವ ಪಶುಗಳೂ, ಉಂಟು ಆತನು ತನ್ನ ಪೆಂಡತಿ ಮಕ್ಕಳನ್ನು ಸಂಗಡ ಕೂಡಿಕೊಂಡು, ತನ್ನ ವ್ಯವಸಾಯದ ಧಾನ್ಯಗಳನ್ನು ಸರಿಪಡಿಸಿಟ್ಟುಕೊಳ್ಳುವುದಕ್ಕಾಗಿ ಬಂದಾನೊಂದು ಪ್ರದೇಶಕ್ಕೆ ಹೊರಟಿದ್ದನು ಆತನಿಗೆ ಮೃಗ ಪಕ್ಷಿಗಳ ಭಾಷೆಯು ತಿಳಿದಿದ್ದರೂ ತಾನು ಅದನ್ನು ಇತರರಿಗೆ ಹೇಳಿದರೆ ತನಗೆ ಮರಣ ಸಂಭವಿಸುವದೆಂಬುದನ್ನು ತಿಳಿದುಕೊಂಡಿದ್ದನಾದುದರಿಂದ, ತಾನು ಅಂತಹ ಮೃಗಭಾಷೆಯನ್ನು ಕೇಳಿ ತಿಳಿದುಕೊಂಡರೂ, ಇತರರಿಗೆ ಹೇಳದೆ ಇದ್ದನು. ಆತನು ತನ್ನ ಕೊಟ್ಟಿಗೆಯಲ್ಲಿ ಬಂದು ಎತ್ತನ್ನು ಬಂದು ಕತ್ತೆಯನ್ನು ಕಟ್ಟಿಹೊಂಡಿದ್ದನು. ಆತನು ಅವುಗಳ ಹತ್ತಿರ ಕೂತು ಕೊಂಡು ತನ್ನ ಮಕ್ಕಳು ಅವುಗಳ ಸಂಗಡ ಆಟವಾಡುತ್ತಾ ವಿನೋದದಿಂದ ಕಾಲವನ್ನು ಕಳೆಯುತ್ತಿರಲು, ಎತ್ತು ಕತ್ತೆಯನ್ನು ಕುರಿತು ಇಂತೆಂದಿತು, ಓ ಖುಲ್ಲಾಸವುಳ್ಳ ಕತ್ತೆ ಯನೀ, ನಿನ್ನ ಜೀವಿತವು ಸುಖವ

ನ್ನು, ನಿನಗೆ ಯೆಜವಮಾನನು ಗೊತ್ತುಮಾಡಿರುವ ಅಲ್ಪವಾದ ಕೆಲಸವ ನ್ನು, ನೋಡಿದರೆ ನೀನೇ ಧನ್ಯನೆಂದು ತೋರುವುದು. ನಿನ್ನನ್ನು ಬಹು ಜಾಗ್ರತೆಯಿಂದ ನಡೆಸುವುದಕ್ಕೆ ಅವಕಾಶವಾಗುತ್ತದೆ. ಇದೂ ಅಲ್ಲದೆ ಚೆ ನ್ನಾಗಿ ಬೀಯಿಸಿದ ಧಾನ್ಯವನ್ನು, ಎಳನೀರಿನಂತೆ ರುಚಿಯೊದ ತಿಳಿನೀರ ನ್ನು ಕೊಡುವರು. ನಿನಗಿರುವ ದೊಡ್ಡ ಕೆಲಸವೇನಂದರೆ, ಯೆಜವಮಾನ ನು ಎಲ್ಲಿಗಾದರು ಹೊರಹೊರಟರೆ ಅವನನ್ನು ಬೆನ್ನಿನ ಮೇಲೆ ಹೊತ್ತು ಕೊಂಡು ಹೋಗುವುದೇ ಹೊರತು ಮತ್ತೇನೂ ಇಲ್ಲ. ಕೆಲಸವಿಲ್ಲದ ಕಾ ಲದಲ್ಲಿ ಸ್ವನೆಚ್ಛನಾಗಿ ನುನ್ನನೆ ಕುಳಿತಿರುತ್ತೀಯೆ ನನಗೆ ಮಾಡುವ ಉಪ ಚಾರವನ್ನು ನೋಡಿದರೆ, ಅತ್ಯಂತ ವ್ಯತಿರಿಕ್ತನಾಗಿರುವುದು. ಏನಂದರೆ ನಿ ನಗೆ ಎಷ್ಟು ಸುಖವುಂಟೋ ನನಗೆ ಅಷ್ಟು ದುಃಖವುಂಟು. ಬೆಳಗಾಗುತ ಲೇ ನನ್ನನ್ನು ನಿನಗಿಷ್ಟ ಕಟ್ಟಿ ಪಾಯಸಕಾಲವನರೆಗೂ ಹೊಲವನ್ನು ಉಳಿಸಿ ಬಹುತರಬಂದ ಗೊಲ್ಲರು ಗುನಿಚ್ಚುಸುವರು. ಆಮೇಲಿಂದ ನಾನು ಬಹಳವಾಗಿ ಶ್ರಮಪಟ್ಟು ಏನೊಂದು ವೇಳೆ ತುಂಬಾ ಬಲಹೀನನಾಗಿರುವೆನು. ಇದೂ ಅಲ್ಲದೆ ಸದಾ ನನ್ನ ಹಿಂದೆನೀ ಇರುತ್ತಿರುವ ವ್ಯವಹಾಯಗಾರ ನು, ನನ್ನು ಅಗಾಗ್ಗೆ ಹೊಡೆಯುತ್ತಲೇಇರುವನು. ಬೆಳಗಿನಿಂದ ಸಾಯಂ ಕಾಲದವರೆಗೂ, ಹೊಲವನ್ನು ಉತ್ತು, ನನ್ನ ಬಾಲವು ಮೋಟಾಗಿ ಹೋಯ್ತು. ಒಂದುದಿನ ಸಂಪೂರ್ಣವಾಗಿ ಕೆಲಸಮಾಡಿದಮೇಲೆ ನನ್ನ ನ್ನು ಕೊಟ್ಟಿಗೆಯಲ್ಲಿ ಕಟ್ಟಿ, ಸತಕೊಕ್ಕಾರದ ಬಣ ಅವರೆಯ ಹೊಟ್ಟ ನ್ನು, ಚನ್ನಾಗಿ ಪುಡಿಯೆನ್ನು ಮಾಡದೆ ಹಾಕುತ್ತಿರುವರು. ಒಮ ವೇಳೆ ಇದಕ್ಕಿಂತಲೂ ಕೆಟ್ಟದಾದ ಮತ್ತಾವ ಆಹಾರವನ್ನಾದರೂ, ಹಾಕುತ್ತಿರುವರೇ ಹೊರತು, ಉತ್ತಮವಾದ ಆಹಾರವನ್ನು ಎಂದಿಗೂ ತಂದು ಕೊಡರು. ಇದಕ್ಕಿಂತಲೂ ಅಧಿಕವಾದ ದುರವಸ್ಥೆಯಾವುದುತಾನೆ ವುಂಟು ? ಹಗಲೆಲ್ಲಾ ದುಡಿದು, ರಾತ್ರಿ ಮಲಗಿದಕಡೆಯಲ್ಲೀ ಹೊರಳಾ ಡುತ್ತಾ ನೀಚವಾದ ಪದಾರ್ಥಗಳಿಂದ ಹೊಟ್ಟೆ ಹೊರೆದುಕೊಳ್ಳುವೆನು. ಆದುದರಿಂದ ನಿನ್ನ ಸೌಖ್ಯವನ್ನು ನೋಡಿ, ಸಹಿಸುವುದಕ್ಕೆ ಆಗದಿರು ವ ಹೊಟ್ಟೆಯುಬ್ಬರ ವುಂಟಾಗುವುದಕ್ಕೆ ಕಾರಣ ಉಂಟಲ್ಲವೆ ಎಂದು ಕೇಳಿತು. ಎತ್ತು ಹೇಳಿದ ಮಾತನ್ನುಕೇಳಿ ಸುಳ್ಳಲ್ಲ, ನಿಜವಾಗಿಯೂ, ನಿನ್ನನ್ನು ಅವಿವೇಕಿಯೆಂದು ನಾನು ಹೇಳುತ್ತೇನೆ. ಏಕೆಂದರೆ ನಿನಗಿ

ಷ್ಟವಾದ ವಸ್ತ್ರಗಳನ್ನು ತಂದುಕೊಡುವಂತೆ, ನಿನ್ನ ಅಭಿಪ್ರಾಯವನ್ನು ಅವರಿಗೆ ತಿಳಿಯಪಡಿಸು, ಹಾಗಿಲ್ಲದೆ ಕಾಲು ಕಸವನ್ನು ತಿಂದು, ಇಷ್ಟೊಂದು ಶ್ರಮವನ್ನು ಹೊಂದುವುದರಿಂದ ಫಲವೇನು ? ನಿನ್ನನ್ನು ದಂಡಿಸುವುದಕ್ಕೆ ಬರುವ ಜನರನ್ನು ಕಾಲಿನಿಂದ ಒದೆದಾಗಲೀ, ಕೊಂಬಿನಿಂದ ತುಳಿದಾಗಲೀ, ಓಡಿಸು ! ಸರಿಯಾದ ತಿಂಡಿಯನ್ನು ಹಾಕದಿದ್ದರೆ ಎಂದಿಗೂ, ಅದನ್ನು ಮುಟ್ಟಬೇಡ. ಕೋಪಬಂದವನಂತೆ ತೋರ್ಪಡಿಸಿಕೊಳ್ಳುತ್ತಾ ಇರು ! ಇಂತಹ ಗುಣಗಳಿಂದೂ, ಇಲ್ಲದೆ ಸಾಧುವಾಗಿರುವ ನಿನಗೆ ಅವರು ಮೂಡುತ್ತಿರುವ ಉಪಚಾರವೆ ಸರಿ ! ಆಹಾ ಇದು ನಿನ್ನ ಅವಿವೇಕವಲ್ಲವೊ ಇನ್ನುಮೇಲಾದರೂ, ನಾನು ಹೇಳಿದ ಬುದ್ಧಿವಾದದಂತೆ ನಡೆದುಕೊಂಡರೆ, ಜಾಗ್ರತೆಯಲ್ಲಿ ನಿನಗೆ ಸುಖವುಂಟಾಗುವುದೆಂದು ಹೇಳಿತು. ಹೀಗೆ ಬುದ್ಧಿಯನ್ನು ಹೇಳಿದ ಕತ್ತೆಯು ವಿವೇಕವನ್ನು ಕೊಂಡಾಡಿ, ಅದನ್ನು ಗ್ರಹಿಸಿ ತನಗೆ ವಿವೇಕವನ್ನು ಹೇಳಿದುದಕ್ಕಾಗಿ ಆ ಕತ್ತೆಯನ್ನು ಹೊಗಳಿ, ಎಲೈ ಪ್ರಿಯ ಮಿತ್ರನೇ ! ನಿನ್ನ ಮೂತಿನಂತೆ ನಡೆದುಕೊಳ್ಳುವೆನೆ ಹೊರತು ಇದಕ್ಕೆ ಸ್ವಲ್ಪನಾದರೂ ಹಿಂದೆಗೆಯತಕ್ಕವನಲ್ಲ ! ಎಂದು ನುಡಿದು, ಆಹಾ ನಿನ್ನ ಮೂತಿನಂತೆ ನಡೆದು ನಾನೆಷ್ಟು ಸುಖವನ್ನು ಹೊಂದುವೆನೋ ? ನೋಡಬೇಕೆಂದು, ಮೊದಲಾಗಿ ಅವುಗಳು ಮೂತನಾಡಿಕೊಂಡುದನೆಲ್ಲವನ್ನು ಆ ರೈತನು ಕೇಳಿದನು. ಮರುದಿನ ಬೆಳಿಗ್ಗೆ ಉಳುವ ಆಳು ಅಲ್ಲಿಗೆ ಬಂದು ಎಂದಿನಂತೆ ಎತ್ತನ್ನು ನೇಗಿಲಿಗೆ ಕಟ್ಟಿ ಹೊಲವನ್ನುಳುವುದಕ್ಕಾಗಿ ತೆಗೆದುಕೊಂಡು ಹೋದನು. ಆಗ ಎತ್ತು ದುಷ್ಟಕತ್ತೆಯ ಮೂತನ್ನು ಕೇಳಿ ಕೊಂಡು, ಅನುಕೂಲವಾಗಿರಲೆ ಪ್ರತಿಬಂಧಕವನ್ನುಂಟುಮಾಡಿ ಸಾಯಂಕಾಲಕ್ಕೆ ತನ್ನನ್ನು ಕೊಟ್ಟಿಗೆಯಲ್ಲಿ ತಂದು ಕಟ್ಟುವಾಗ, ಕೊಂಬನ್ನು ಕೊಡದೆ ಹಿಂದೆಮುಂದಕ್ಕೆ ಅಲೆಯುತ್ತಾ ಕತ್ತೆಯು ಹೇಳಿದ, ಸಮಸ್ತವಿಧವಾದ ಚೇಷ್ಟೆಯನ್ನು ಮಾಡಿತು. ಎರಡನೆಯ ದಿನ ಬೇಸಾಯಗಾರನು, ಎಂದಿನಂತೆ ಅದನ್ನು ಕೆಲಸಕ್ಕೆ ತೆಗೆದುಕೊಂಡ, ಹೋಗುವುದಕ್ಕಾಗಿ ಬಂದು, ರಾತ್ರಿ ತಾನು ಹಾಕಿದ ಒಣಹುಲ್ಲು ಅವರೆ ಕಡ್ಡಿಗಳು ಅಲುಗಾಡದೆ ಹಾಗೆಯೇ ಇರುವುದನ್ನೂ, ಕಾಲುನೀಡಿ ಮೇಲು ಮುಖವಾಗಿರುವ ಎತ್ತನ್ನು ನೋಡಿ ಇದಕ್ಕೆ ಯೇನೋ ರೋಗವುಂಟಾಗಿರುವುದು. ಆದುದರಿಂದ ಇದನ್ನು ಕೆಲಸಕ್ಕೆ ತೆಗೆದುಕೊಂಡು ಹೋಗು

ವುದು ನ್ಯಾಯವಲ್ಲವೆಂದು ತಿಳಿದು, ಆ ಕ್ಷಣವೇ ವರ್ತಕನಬಳಿಗೆ ಬಂದು ಕಂಡ ಸಂಗತಿಯೆಲ್ಲವನ್ನು ಆತನಿಗೆ ಹೇಳಿದನು. ಆತನು ಅದನ್ನು ಕೇಳಿ ಎತ್ತಿಗೆ ದುರ್ಬುದ್ಧಿಯನ್ನು ಹೇಳಿದ ಕತ್ತೆಗೆ ತಕ್ಕ ಶಿಕ್ಷೆಯನ್ನು ಮೂಡ ಬೇಕೆಂದು ಕತ್ತೆಯನ್ನು ತೆಗೆದುಕೊಂಡು ಹೋಗಿ, ಚೆನ್ನಾಗಿ ಕೆಲಸ ತೆಗೆದು ಕೊಳ್ಳುವಂತೆ ಹೇಳಿದನು. ಅದರಿಂದವನು ಕತ್ತೆಯನ್ನು ನೇಗಿಲಿಗೆ ಕಟ್ಟಿಕೊಂಡು ಹೋಗಿ ಚೆನ್ನಾಗಿ ಹೊಡೆದು, ಕಷ್ಟಸಾಧ್ಯವಾದ ಕೆಲಸ ವನ್ನು ಮಾಡಿಸಿ ಸಂಜೆಗೆ ಕೊಟ್ಟಿಗೆಯಲ್ಲಿ ತಂದು ಕಟ್ಟಿದಾಗ ನಿಂತುಕೊಳ್ಳುವುದಕ್ಕೆ ಅರ್ಧಬಲವೂ ಕೂಡ ಉಂಟಾಗಿರಲಿಲ್ಲವಾಗಿತ್ತು. ಆದರೆ ಎತ್ತು ಆದಿನ ತನಗೆ ಉಂಟಾದ ಸಂತೋಷಕ್ಕಾಗಿ ಕತ್ತೆಯನ್ನು ಕೊಂಡಾಡಿ, ಅದರ ಬುದ್ಧಿವಾದವನ್ನು ಕೇಳಿದುದರಿಂದಲೇ ತನಗೆ ಈದಿನ ಇಂತಹ ಸುಖವುಂಟಾಯಿತೆಂದು ಸ್ಮರಿಸುತ್ತ, ಆ ಕತ್ತೆಯು ಪುನಹ ಕೊಟ್ಟಿಗೆಯೆನ್ನು ಸೇರಿದಾಗ ವಂದನೆ ಮಾಡಿತು. ಅದಕ್ಕೆ ಕತ್ತೆಯು ಯಾವ ಉತ್ತರವನ್ನು ಹೇಳದೆ ಅಯ್ಯೋ ! ನನ್ನ ಅವಿವೇಕದಿಂದಲೇ ನಾನು ದೌರ್ಭಾಗ್ಯವನ್ನು ತಂದುಕೊಂಡೆನಲ್ಲಾ ! ಇದುವರೆಗೂ ನಾನು ಸುಖವಾಗಿ ತಿಂಡಿಯನ್ನು ತಿಂದು ಕಾಲವನ್ನು ಕಳೆಯುತ್ತಿದ್ದೆನು. ಈಗ ನಾನು ಕೋರದೆ ಇದ್ದ ದುರವಸ್ಥೆಗಳೆಲ್ಲ ನನಗೆ ಪ್ರಾಪ್ತವಾಯಿತಲ್ಲ ! ಇದನ್ನು ಹೇಗಾದರೂಮಾಡಿ ತಪ್ಪಿಸಿಕೊಳ್ಳಬೇಕು. ಇಲ್ಲದಿದ್ದರೆ ನನಗೆಂದಿಗೂ ಸುಖವುಂಟಾಗುವುದಿಲ್ಲವೆಂಬುದನ್ನು ನಾನು ಚೆನ್ನಾಗಿ ತಿಳಿದುಕೊಂಡೆನೆಂದು, ಹೇಳುತ್ತಾ ನಿಲ್ಲುವುದಕ್ಕೂ ಕೂಡ ಶಕ್ತಿಯಿಲ್ಲದೆ ಪ್ರಾಣಹೋದ ಕತ್ತೆಯಹಾಗೆ ಹೊರಳಾಡುತ್ತಾ ಬಿದ್ದುಕೊಂಡಿತು. ಎಲೈ ಮಗಳೇ ! ಆದುದರಿಂದ ನೀನು ಆ ಕತ್ತೆಯಂತೆ ವಿವೇಕಹೀನಳಾಗಿ ಕೆಡುಕುಬುದ್ಧಿಯನ್ನು ಯೋಚಿಸುತ್ತಿರುವೆ, ನಿನ್ನೀ ಅಚಾತುರ್ಯದಿಂದ ಮಹತ್ತಾದ ವ್ಯಸನವು ಪ್ರಾಪ್ತವಾಗುವುದು. ಆದುದರಿಂದ ನನ್ನ ಮಾತನ್ನು ಕೇಳಿ ಸ್ವಸ್ಥಚಿತ್ತಳಾಗಿ ಸುಖದಿಂದಿರೆಂದು ಹೇಳಿದ ತಂದೆಯಮಾತನ್ನು ಕೇಳಿ, ಷಹರಜಾದಿಯು, ಅಪ್ಪಾ ! ನೀನು ಹೇಳಿದ ಸಾಮ್ಯವು ನನ್ನ ಅಭಿಪ್ರಾಯವನ್ನು ಬದಲಾಯಿಸಲಾರದು. ಆದುದರಿಂದ ನೀನು ನನ್ನನ್ನು ಸುಲ್ತಾನನಿಗೆ ಕೊಟ್ಟ ಮದುವೆ ಮಾಡುವವರೆಗೂ, ನಾನುಬೇರೆ ನಿನ್ನನ್ನು ಪೀಡಿಸದಿರೆನು. ಎಂದು ಹೇಳಿದ ಮಗಳನ್ನು ನೋಡಿ ಇವಳು ಮೂರ್ಖಳಾಗಿ

ರುವಳೆಂದು ತಿಳಿದು, ಅಮ್ಮಾ ! ಅನಂತರದಲ್ಲಿ ಆ ಕೂದ್ರನು ತನ್ನ ಹೆಂಡತಿಯೆನ್ನು ಕುರಿತು ಮಾಡಿದ ಕಾರ್ಯವೇನೋ ? ಆ ಕಾರ್ಯವನ್ನೇ ನಾನು ನಿನ್ನವಿಷಯದಲ್ಲಿ ಮಾಡಬೇಕಾಗಿರುವುದೆಂದು ಹೇಳಿದನು. ಬಳಿಕ ಆಕೂದ್ರನು ಕತ್ತೆಯೆನ್ನು ತಕ್ಕಷ್ಟು ಬಡಿಸಾಗಿಮಾಡಿ, ಮತ್ತೂ ಅವುಗಳಿರಡು ಮಾತನಾಡುವುದನ್ನು ಕೇಳಬೇಕೆಂಬ ಆಶೆಯಿಂದ, ರಾತ್ರಿ ಪೂಟನಾಡಿಕೊಂಡು, ತನ್ನ ಹೆಂಡತಿಯೊಡನೆ ಸಂತೋಷವಾಗಿ ಮಾತನಾಡುತ್ತಾ, ಬೆಳಿಗಿಂಗಳಲ್ಲಿ ಹೊರಟುಬಂದು, ಆ ಕೊಟ್ಟಿಗೆಯಲ್ಲಿ ಕೂತುಕೊಂಡನು.

ಕೂಡಲೇ ಕೇಳಬುದ ಧ್ವನಿಯೇನೆಂದರೆ :— ಎಲೈ ಸ್ನೇಹಿತನಾದ ಋಷಭರಾಜನೇ ! ನಾಳೆದಿನ ಚೀಸಾಯಿಗಾರನು ಬಂದಕಾಲದಲ್ಲಿ ನೀನೇನು ಮಾಡಬೇಕೆಂದಿರುವೆಯೋ ಅದನ್ನು ಹೇಳಬೇಕೆಂದು ಕತ್ತೆಯು ಕೇಳಿತು. ಅದಕ್ಕೆ ಎತ್ತು ನಾನೇನುಮಾಡಲಿ, ನೀನು ಹೇಗೆ ಹೇಳಿದರೆ ಹಾಗೆ ಮಾಡಬೇಕೆಂದಿರುವೆನು. ನಿನ್ನೆಯಂತೆ ಅವನನ್ನು ನೋಡಿದಕೂಡಲೇ ಓಡಿಸಿಕೊಂಡುಹೋಗಿ ಕೊಂಬಿನಿಂದ ಹಾಯ್ದು ಜಿದರಿಸುವೆನು. ರೋಗಪೀಡಿತನಾಗಿ ಆಗಲೇ ಸಾಯುತ್ತಿರುವನಂತೆ ಮಾಯೆಜಾಲವನ್ನು ತೋರುವೆನು. ಎಂದು ಹೇಳಲು, ಕತ್ತೆಯು ಇನ್ನು ಮೇಲೆ ಹಾಗೆ ಮಾಡೀಯೆ ಜೋಕೆ, ಈ ದಿನ ಸಾಯಂಕಾಲ ನಾನು ಮನೆಗೆ ಬರುತ್ತಿರುವಾಗ, ನಮ್ಮ ಯಜಮಾನನು ಬೇಳಕೊಂಡ ಬಂದಾನೊಂದು ವಾಕ್ಯದಿಂದ ನನಗೆ ತುಂಬಾ ಬಗಿಲಾಗುತ್ತಿದೆ. ಆದುದರಿಂದ ಅಯ್ಯೋ ! ನನ್ನ ಪ್ರಿಯೆನಾದ ಕತ್ತೆಯೇ ! ನೀನು ಏನನ್ನು ಕೇಳಿದೆಯೋ ! ಅದನ್ನು ನನಗೋಸ್ಕರ ಹೇಳಬೇಕೆಂದು ಕೇಳಿತು. ಆಯ್ಯಾ ! ನಮ್ಮ ಯಜಮಾನನು ಚೀಸಾಯಿಗಾರನನ್ನು ನೋಡಿ, ಈ ಎತ್ತು ಹುಲ್ಲುತಿನ್ನುವುದನ್ನು ಬಿಟ್ಟಿತು. ಆದುದರಿಂದ ಇನ್ನುಮೇಲೆ ಕೆಲಸಮಾಡಲಾರದು. ಇದಕ್ಕಾಗಿ ಅದನ್ನು ನಾಳೆನದಿನ ಕಟುಕರಕೈಯೆಲ್ಲಿ ಕೊಲ್ಲಿಸಿ, ಅದರಮಾಂಸವನ್ನು ಭಗವಂತನಿಗೆ ಪ್ರೀತಿಯಾಗುವಂತೆ, ಬಿಕ್ಷಗಾರರಿಗೆ ಕೊಟ್ಟುಬಿಡೋಣ ! ಅದರಚರ್ಮವು ನಮಗೆ ಉಪಯೋಗವಾಗುತ್ತದೆಯಾದುದರಿಂದ ಅದನ್ನು ಚರ್ಮಗಾರನಿಗೆ ಕೊಟ್ಟು ಹದವನ್ನು ಮಾಡಿಸುವ ಎಂದು ಹೇಳಿದನು. ಈ ದುಃಖಕರವಾದ ವರ್ತಮಾನವನ್ನು ನಿನಗೆ ಹೇಳಬೇಕೆಂದು, ಕುತೂಹಲ ಪಡುತ್ತಿದ್ದೆನು, ನಾಳೆ ಚೀಸಾಯಿಗಾರನು ನಿನಗೆ ಹಿಂಡಿಯೆನ್ನು ತಾಡ

ನ್ನು ತಂದು ಹಾಕಿದಾಗ್ಯೆ ನೀನು ಮೊಂಡುತನ ಮಾಡದೆ, ಅದನ್ನು ಬೇಗ ತಿಂದುಬಿಡು ! ಇದರಿಂದ ನಿನ್ನರೋಗವು ಗುಣವಾಗಿಧೆ ಎಂದು ಬೇಸಾಯ ಗಾರನು ನಿನ್ನ ಜೀವನವನ್ನು ಉಳಿಸುವನು. ಆದಕಾರಣ ನಿನಗೆ ಸುಖವುಂ ಟಾಗುವುದೆಂದು ಹೇಳಿತು. ಹೀಗೆ ಕತ್ತೆಯು ತನ್ನ ಪ್ರಯತ್ನವನ್ನು ಸಫಲವಾಗಿ ಮಾಡಿ ಕೊಂಡುದರಿಂದ ಎಶ್ಟು ಜೆರಿ ನನಗೇನು ಬರ-ವುದೋ ಎಂದು ಗಡಗಡನೆ ನಡುಗುತ್ತಾ ಇದ್ದಿತು. ಇದೆಲ್ಲವನ್ನು ನೋಡುತ್ತಿದ್ದ ಯೆಜಮಾನನು ಆಶ್ಚರ್ಯಕರವಾದ ಈ ಸಂಗತಿಯೆನ್ನು ಚೆನ್ನಾಗಿ ಲಾಲಿಸಿ ಕೇಳಿ ಘುಟ್ಟಿಯಾಗಿ ನಕ್ಕನು. ಆಗ ಆತನ ಹೆಂಡತಿಯು, ಪ್ರಿಯನೇ ! ನೀನು ನಗುವುದಕ್ಕೆ ಕಾರಣವೇನು, ನನಗೆ ಹೇಳಿದ್ದರೆ ನಿನ್ನ ಜೊತೆಯೆ ಲ್ಲಿಯೇ ನಾನು, ಚೆನ್ನಾಗಿ ನಗುತ್ತಿದ್ದೆನಲ್ಲಾ ಎಂದು ಕೇಳಿದಳು. ಅದಕ್ಕೆ ಯೆಜಮಾನನು ಪ್ರಿಯಳೇ ! ನಾನು ನಗುವುದನ್ನು ನೋಡಿ ನೀನು ತೃಪ್ತಿ ಹೊಂದ ಬೇಕೆಂದು ನುಡಿದನು. ಪತಿಯೇ ! ಹಾಗಲ್ಲ ವಿಷಯವುತಿಳಿಯದೆ ನಗುವುದು ಹೇಗೆ ? ಖಂಡಿತವಾಗಿಯೂ ಈಗ ನಕ್ಕುದುದಕ್ಕೆ ಕಾರಣವನ್ನು ಹೇಳ ಬೇಕೆಂದು ಕೇಳಿದಳು. ಆಹಾ ನಮ್ಮ ಎತ್ತೂ ಕತ್ತೆಯೂ, ಆಡಿ ಕೊಂಡ ಮಾತುಗಳನ್ನು ಕೇಳಿ ನಕ್ಕೆನು. ಇಷ್ಟನ್ನು ಮಾತ್ರ ನಿನಗೆ ಹೇಳ ಬಲ್ಲೆನು. ಅಲ್ಲದೆ ಇನ್ನೇನನ್ನು ಹೇಳಲಾರೆನು. ಏಕೆಂದರೆ ಅದೆ ಲ್ಲವು ರಹಸ್ಯವಾದುದು, ಆರಹಸ್ಯವನ್ನು ಹೇಳಿದರೆ ನನ್ನ ಪ್ರಾಣವೇ ಹೋಗುವುದೆಂದು ಹೇಳಲು, ಗಂಡನು ! ಹೆಂಡತಿಗೆ ಹೇಳದಿರುವ ರಹ ಸ್ಯವೂ ಉಂಟೆ ! ನನ್ನನ್ನು ನೀನು ಪರಿಹಾಸ್ಯ ಮಾಡುತ್ತಿರುವೆ, ಆಹಾ ! ಆಕತ್ತೆ ಎತ್ತುಗಳು ಮಾತನಾಡಿದ ಸಂಗತಿಯನ್ನು ನನಗೆ ಹೇಳಿದರೆ ಸರಿ, ಇಲ್ಲವಾದರೆ ಭಗವಂತನ ಸಾಕ್ಷಿಯಾಗಿಯೂ, ನಾನು ಇನ್ನು ಮೇಲೆ ನಿನ್ನ ಪ್ರೀತಿಪಾತ್ರಳಾದ ಹೆಂಡತಿಯಾಗಿರೆನೆಂದು, ಹೆಂಡತಿಯು ಹೇಳಿದಳು.

ಹೀಗೆಹೇಳಿ ಅವಳು ಅಲ್ಲಿಂದ ಹೊರಟು ಬಿರಬಿರನೆ ಮನೆಯೆನ್ನು ಹೊಕ್ಕು ಬಂದಾನೊಂದು ಕಡೆಯಲ್ಲಿ ಕುಳಿತು ಕೊಂಡು, ರಾತ್ರಿ ಯೆಲ್ಲಾ ಅಳುತ್ತಲೆ ಇದ್ದಳು. ಗಂಡನಾದರೊ, ಒಂಟಿಯಾಗಿ ಬಿದ್ದಿದ್ದು- ಮರುದಿನ ಮನೆಗೆ ಬಂದನು. ಆದರೂ ಅವಳು ಎಂದಿನಂತೆ ಅಳುತ್ತಲೆ ಇದ್ದಳು. ಇದನ್ನು ನೋಡಿ ಗಂಡನು ಹೀಗೆ ಹಟಹಿಡಿದು ಅಳುವುದಕ್ಕೆ ನಿನಗೇನು ಕೇಡು ಬಂದಿದೆ ? ನೀನು ಕೇಳತಕ್ಕ ವಿಷಯವು ಹೇಳುವುದಕಾಕ್ಕಗದಷ್ಟು ರಹ

ಸ್ಯವಾದುದಲ್ಲಾ ! ಅದನ್ನು ಕಾಪಾಡಿಕೊಳ್ಳ ಬೇಕಾದುದು ನನಗೆ ಅಗತ್ಯವೇ ಹೊರತು ನಿನಗೇನುಂಟು, ಆದುದರಿಂದ ನೀನಿನ್ನು ಅದನ್ನು ನೆನಸ ಬೇಡ ವೆಂದು, ಖಂಡಿತವಾಗಿ ಆಣೆ ಇಟ್ಟು ಹೇಳುವೆನೆಂದು, ನುಡಿದನು. ನಾನು ಆವಿಷಯವನ್ನು ತಿಳಿದು ಕೊಳ್ಳುವ ವರೆಗೂ ಸಮ್ಮನಾಗುವುದಿಲ್ಲವೆಂದು, ಹೇಳಿದ ಹೆಂಡತಿಯು ಮಾತನ್ನು ಕೇಳಿ ಯೆಜವಾನನು, ನಿನ್ನ ಮೂರ್ಖ ತನಕ್ಕಾಗಿ ನಾನು ಹೇಳಿದುದೇ ಆದರೆ ನನ್ನ ಪ್ರಾಣವು ಖಂಡಿತವಾಗಿಯೂ ಉಳಿಯುವುದಿಲ್ಲ ವೆಂದು, ಹೇಳಿದನು. ಅದನ್ನು ಕೇಳಿ ಆ ಹೆಂಗಸು ಹೇಗಾದರೂ ಆಗಲಿ ಹೇಳಿಯೇ ತೀರ ಬೇಕೆಂದು ನುಡಿದಳು. ಆಬಳಿಕ ಯೆಜವಾನನು ಅವಳನ್ನು ನೋಡಿ ನಿನ್ನನ್ನು ನ್ಯಾಯೇತರವಾರ್ಗದಲ್ಲಿ ಸರಿಪ ಡಿಸಿ ಕೊಳ್ಳುವುದಕ್ಕೆ ಮಾರ್ಗವಿಲ್ಲ ವಾದುದರಿಂದ, ನಿನ್ನ ಅವಿವೇಕದಿಂದ ನಿನ್ನನ್ನು ಕೊಲ್ಲುವುದೇ ಸರಿ ಯೆಂದು ಹೇಳಿ, ನಿನ್ನ ಮಕ್ಕಳು ನೀನು ಸಾಯುವುದಕ್ಕೆ ಮುಂಚೆ ನಿನ್ನನ್ನು ನೋಡಿ ಕೊಳ್ಳಲೆಂದು ಹೇಳಿ, ಮಕ್ಕ ಳನ್ನು ಅವಳ ತಂದೆತಾಯಿಗಳನ್ನು ಕರೆಸಿದನು.

ಅವರುಬಂದು, ನಡೆದಸಂಗತಿಯನ್ನೆಲ್ಲಾ ಕೇಳಿ, ಆ ಹೆಂಗಸು ಮಾಡುತ್ತಿರುವ ಕೆಲಸವು ಸರಿಯೆಂದುದಲ್ಲವೆಂದು ಹೇಳಿದರು. ಮತ್ತು ಅವಳ ಮೂರ್ಖತನವನ್ನು ಬಿಡಿಸುವುದಕ್ಕೆ ಎಷ್ಟು ಪ್ರಯತ್ನ ಮಾಡಿದರೂ ಪ್ರಯೋಜನವಾಗಲಿಲ್ಲ. ಈ ವಿವಾದವು ತನ್ನ ಗಂಡನ ಕಡೆಗಾಗುವುದ ಕ್ಕಿಂತಲೂ ತಾನು ಸಾಯುವುದೇ ಮೇಲೆಂದು ಆಕೆಯು ಹೇಳಿದಳು. ಅವಳ ತಂದೆ ತಾಯಿಗಳು ಅವಳನ್ನು ಬೇರೆಯಾಗಿ ಕರೆದು ಆವಿಷಯವನ್ನು ತಿಳಿದುಕೊಳ್ಳ ಬೇಕಾದ ಅ ತ್ಯವು ನಿನಗೇನೂ ಇಲ್ಲವೆಂದು, ಒಳ್ಳೆಯಮಾತಿ ನಿಂದ ಉಪಾಯವಾಗಿಯೂ ಕೆಟ್ಟಮಾತುಗಳಿಂದ ಗದರಿಸಿಯೂ, ಹೇಳಿ ದರು. ಆದರೂ, ಆಕೆಯು ಬಿಸ್ಪಲ್ಲ. ಅವಳಿಗೆ ಬಂದ ಮೂರ್ಖತನವು ಯಾವುದಕ್ಕೂ ಕೊನೆಗಾಣದೆ ಹೋದುದರಿಂದ, ಅವಳ ಮಕ್ಕಳು ಮತ್ತು ಷ್ಟು ಅಳುವುದಕ್ಕೆ ತೊಡಗಿದರು.

ವರ್ತಕನಾದರೋ ತನ್ನ ಪ್ರಿಯಪತ್ನಿಯ ಪ್ರಾಣವನ್ನು ಕಾಪಾ ಡುವುದಕ್ಕಾಗಿ, ತನ್ನ ಪ್ರಾಣವನ್ನಾದರೂ ಕೊಡುವುದಕ್ಕೆ ಸಿದ್ಧನಾಗಿ ದ್ದನು. ಬಳಿಕ ಮಂತ್ರಿಯು ಪಟ್ಟಣದಲ್ಲಿರುವ ಎಲ್ಲಾ ಪುರ ಳೆ ಆ ಯೆಜವಾನನ ಒಳಿಯಲ್ಲಿ ಎಂಟು ಹೋಟೆಗಳೂ, ಒಂದು ಹುಂಜವೂ

ಉಂಟು. ಅಲ್ಲದೆ ಓಡಾಡುವ ಜನರನ್ನು ನಡೆಯೆತಕ್ಕ ಕಾರ್ಯವನ್ನೂ ಚೆನ್ನಾಗಿ ಕಂಡು, ತಿಳಿಯುವ ಶಕ್ತಿಯುಳ್ಳಂಥ ಸಾಕಿದ ನಾಯಿಯೂ, ಬಂದುಂಟು. ಇದು ವರೆಗೂ ನಾನು ಹೇಳಿದಷ್ಟು ಹೊತ್ತು, ಆ ರೈತನು ಈ ವ್ಯವಹಾರಕ್ಕೆ ಏನು ಉಪಾಯಮಾಡಬೇಕೆಂದು, ಯೋಚಿಸುತ್ತಾ ಬಂದುಕಡೆ ಕುಳಿತುಕೊಂಡಿರುವಾಗ, ಹುಂಜವು ಸಂತೋಷದಿಂದ ಬಂದಾನೊಂದು ಜೇಂಟೆಯನ್ನೇಲೆ ಬೀಳುವುದಕ್ಕೆ ಹೋಗುತ್ತಿರುವುದನ್ನು ನಾಯಿಯು ಕಂಡು ಹುಂಜವನ್ನು ಕುರಿತು ಹೇಳಿದ ಬಂದು ಸಂಗತಿಯನ್ನು ಕೇಳಿದನು. ಎಲೈ ಹುಂಜವೇ ಭಗವಂತನು ನಿನ್ನನ್ನು ಇನ್ನು ಬಹು ದಿವಸಗಳು ಬದುಕುವಂತೆ ಮಾಡಲಾರನೆಂದು ನನಗೆ ತೋರುವುದು.

ಅಯ್ಯೋ ! ಈ ದಿನ ನೀನಿಂತಿಹ ಕೆಲಸವನ್ನು ಮಾಡುತ್ತಿರುವೆಯೆಲ್ಲಾ ! ನಿನಗೆ ನಾಚಿಕೆ ಇಲ್ಲವೆ ? ಎಂದು ಕೇಳಿದ ನಾಯಿಯೆನ್ನು ನೋಡಿ ಮುಂಗಾಲುಗಳನ್ನೇಲೆ ನಿಂತಿರುವ, ಆ ಹುಂಜವು ಹಿಂದಿನಂತೆ ನಾನು ಈ ದಿನ ಮಾಡಬಾರದೊ ? ಎಂದು ಬಹು ಆಡಂಬರವಾಗಿ ಕೇಳಲು ನಾಯಿಯು ನಿನಗೆ ತಿಳಿಯದಿದ್ದರೆ ನಾನು ಹೇಳುವೆನು ಕೇಳು.

ಈ ದಿನ ನಮ್ಮ ಯೆಜಮಾನನಿಗೆ ಮಹತ್ತಾದ ವ್ಯಸನವುಂಟಾಗಿದೆ, ಆತನ ಹೆಂಡತಿಯು ಒಂದಾನೊಂದು ರಹಸ್ಯವನ್ನು ಹೊರಹಾಕಬೇಕೆಂದು, ಹಟವನ್ನು ಹಿಡಿದು ಪೀಡಿಸುತ್ತಿರುವಳು. ಆತನು ರಹಸ್ಯವನ್ನು ಹೊರಹಾಕಿದರೆ ತನ್ನ ಪ್ರಾಣವೇ ಹೋಗುವುದಲ್ಲಾ ! ಇದಕ್ಕೇನು ಯೋಚನೆ ಮಾಡಬೇಕೆಂದು ಚಿಂತಿಸುತ್ತಿರುವನು. ತನ್ನ ಹೆಂಡತಿಯೆಲ್ಲಿ ತನಗೆ ಮುಂಟಾಗಿರುವ ಮೋಹದಿಂದ ತನ್ನ ಪ್ರಾಣಕ್ಕೆ ಅಪಾಯ ಬರಬಹುದೆಂದು ಯೋಚಿಸುತ್ತಿರುವನು. ಅವಳು ಕಣ್ಣೀರನ್ನು ಸುರಿಸುತ್ತಿರುವುದನ್ನು ನೋಡಿ ಆತನು ಅತ್ಯಂತ ದುಃಖವನ್ನು ಹೊಂದಿರುವನು. ಆಪತ್ತುವರಿದ ಆತನಿಗೆ ಪ್ರಾಣಹಾನಿಯುಂಟಾಗುವುದೇನೊ ? ಎಂದು ನಾವೆಲ್ಲರೂ ಹೆದರುತ್ತಿರುವೆವು. ನೀನು ಮಾತ್ರ ಅನಾಯಾಸದಿಂದ ನಿನ್ನ ಜೇಂಟೆಯ ಸಂಗಡ ನಲಿಯುತ್ತಿರುವೆಯೆಲ್ಲ ! ನಿನ್ನ ಗರ್ವವೆಷ್ಟರಮಟ್ಟಿಗಿರಬಹುದೆಂದು ನಾಯಿಯು ಹೇಳಿತು. ಹೀಗೆ ದೂಷಿಸಿದ ನಾಯಿಯ ಮಾತನ್ನು ಕೇಳಿ, ಹುಂಜವು ಆಹಾ ? ನಮ್ಮ ಯೆಜಮಾನನಿಗೆ ಅಷ್ಟೊಂದು ಬುದ್ಧಿಯು ಕಡಿಮೆಯಾಗಿರುವುದೆ ? ಆತನಿಗಿರುವ ಒಬ್ಬ

ಹೆಂಡತಿಯೆನ್ನು ಆಳಲಾರೆನೆ ? ನನಗೆ ಎಂಟುಮಂದಿ ಹೆಂಡಿರಿದ್ದರೂ ಎಲ್ಲರೂ ನನ್ನ ಇಷ್ಟಾನು ಸಾರವಾಗಿ ನಡೆಯುವಂತೆ ಮಾಡಿಕೊಂಡಿರುವೆನಲ್ಲಾ ! ಅವನು ಜಾಣನಾದರೆ ಚೆನ್ನಾಗಿ ಯೋಚಿಸಿ ತನಗೆ ಸಂಭವಿಸಿರುವ ತೊಂದರೆಯೆನ್ನು ಬೇಗಹೋಗಲಾಡಿಸಿ ಕೊಳ್ಳಬೇಕೆಂದು ಹೇಳಿದ ಹುಂಜವನ್ನು ನೋಡಿ ನಾಯಿಯು, ಆತನನ್ನು ಈಗ ಏನುಮೂಡ ಹೇಳುವೆ ಎಂದು ಕೇಳಿತು. ಹುಂಜವು ಆತನು ಬುದ್ಧಿವಂತನಾದರೆ ಬಂದು ದುಡ್ಡಿನ ಬಿತ್ತವನ್ನು ತೆಗೆದುಕೊಂಡುಹೋಗಿ ಅವನ ಹೆಂಡತಿಯು ಕುಳಿತಿರುವ ಮನೆಗೆ ನುಗ್ಗಿ ಚೆನ್ನಾಗಿ ಅವಳಿಗೆ ಬಿಸಿಯೆನ್ನು ಮುಟ್ಟಿಸಿದರೆ ಅವಳ ಮೂರ್ಖತ್ವವು ಹೋಗುವುದಲ್ಲದೆ, ಇನ್ನುಮೇಲೆ ಅವಳೆಂದಿಗೂ ಇಂತಹ ರಹಸ್ಯವಾದ ಮೂತುಗಳನ್ನು ಕೇಳಬೇಕೆನ್ನುವುದಿಲ್ಲವೆಂದು, ಹೇಳಿತು.

ಈ ಮೂತನ್ನು ಕೇಳಿ ಯೆಜಮಾನನು ಒಂದು ಬಿತ್ತವನ್ನು ತೆಗೆದುಕೊಂಡು ತನ್ನ ಹೆಂಡತಿಯಬಳಿಗೆ ಹೋದನು. ಆದರೂ ಅವಳು ಅಳುತ್ತಲೇ ಇದ್ದಳು. ಆತನು ಅಬಳಿಕ ಬಾಗಿಲನ್ನು ಬಲವಾಗಿ ಹೊಚ್ಚಿ ಚೆನ್ನಾಗಿ ಹೊಡೆಯಲು, ಬುದ್ಧಿವಂತಳಾದ ಆಹೆಂಗಸು ಸಾಕು ! ಸಾಕು ! ಗಂಡನೇ ನೀನು ನನ್ನನ್ನು ಇನ್ನು ಹೊಡೆಯಬೇಡ, ನಾನು ನಿನ್ನ ರಹಸ್ಯವಾದಮೂತನ್ನು ಹೇಳಬೇಕೆಂದು ಇನ್ನೆಂದಿಗೂ ಕೇಳುವುದಿಲ್ಲವೆಂದು ಘಟ್ಟಿಯಾಗಿ ಅರಚಿಕೊಂಡಳು. ಆ ಮೇಲೆ ಯೆಜಮಾನನು ಅವಳು ಅಳುತ್ತಿರುವುದನ್ನು ನೋಡಿ ಕನಿಕರದಿಂದ ಬಾಗಿಲನ್ನು ತೆರೆದನು. ಬಳಿಕ ಆಕೆಯ ಸ್ನೇಹಿತರುಬಂದು ಅವಳನ್ನುನೋಡಿ ಪತ್ನಿಯು ವೊಂಡುತನವನ್ನು ನಿಲ್ಲಿಸುವುದಕ್ಕೆ ಗಂಡನು ಯಾವಕೆಲಸವನ್ನು ಮಾಡಿದನೋ ಎಂದು ಸಂತೋಷದಿಂದ ವಿಚಾರಿಸುತ್ತಾ, ಆನಂದವನ್ನು ಹೊಂದಿದರು.

ಎಲೈ ಮಗಳೇ ಆ ಯೆಜಮಾನು ತನ್ನ ಹೆಂಡತಿಗೆ ಮಾಡಿದಂತೆ ನಿನಗೂ ಮಾಡಬೇಕಾಗಿರುವುದೆಂದು, ಹೇಳಿದ ಮಂತ್ರಿಯಮೂತನ್ನು ಕೇಳಿ ಷಹರಜಾದಿಯು ತಂದೆಯೇ ! ನಾನು ಹೀಗೆ ಹಟವನ್ನು ಮಾಡುತ್ತಿರುವೆನೆಂದು ನೀವು ಕೋಪಮಾಡಿಕೊಳ್ಳಬೇಡಿ. ಇದಕ್ಕಾಗಿ ನಿಮ್ಮನ್ನು ಬಹಳವಾಗಿ ಬೇಡಿಕೊಳ್ಳುತ್ತಿರುವೆನು. ಈಗ ನೀವು ಹೇಳಿದ ಕಥೆಯನ್ನು ಕೇಳಿದರೂ, ನನ್ನಮನಸ್ಸು ಕರಗಲಿಲ್ಲ. ನನ್ನ ಪ್ರಯತ್ನವನ್ನುನೋಡಿ ನೀವು ಉಪೇಕ್ಷಣೆ ಮಾಡಬಾರದೆಂದು, ನಿಮಗೆ ತಿಳಿದು ಬರುವಂತೆ ನಾನಾ

ವಿಧವಾದ ಕಥೆಯನ್ನು ನಾನು ಹೇಳಬಲ್ಲೆನು. ನೀವು ಅಡ್ಡಿ ಮಾಡುತ್ತಿರುವುದರಿಂದ ಯಾವ ಪ್ರಯೋಜನವೂ ಇಲ್ಲವೆಂದು, ಬಹು ವಿಧವಾಗಿ ಹೇಳಿ ನಿಮ್ಮ ಕ್ಷಮಾಪಣೆಯನ್ನು ಬೇಡಿಕೊಳ್ಳುವೆನು. ನನ್ನಲ್ಲಿ ವಿಶ್ವಾಸವುಳ್ಳ ತಂದೆಯಾಗಿದ್ದು ನನ್ನ ಇಷ್ಟಾನುಸಾರವಾಗಿ ನಡೆಸದೆಹೋದರೆ, ನಾನೇ ಸುಲ್ತಾನನಬಳಿಗೆಹೋಗಿ ಅರಿಕೆಮಾಡಿಕೊಳ್ಳುತ್ತೇನೆಂದು ಹೇಳಿದಳು.

ಹೀಗೆ ತನ್ನಮಗಳ ಮುಷ್ಕರವನ್ನು ಹೋಗಲಾಡಿಸಲಾರದೆ ಡೋಲಾಯಮಾನವಾದ ಮನಸ್ಸುಳ್ಳವನಾಗಿ, ಸುಮ್ಮನಿದ್ದರೂ ಬಲವತ್ತರವಾದ ಅವಳ ಮುಖ್ಯತ್ವಕ್ಕೆ ಹೆದರಿ, ಸುಲ್ತಾನನಬಳಿಗೆ ಹೋಗಿ, ನಾಳೆ ನಿಮ್ಮ ವಿವಾಹಕ್ಕಾಗಿ, ನನ್ನಮಗಳಾದ ಷಹರಜೌದಿಯೆನ್ನು ಕರೆದು ತರುವೆನೆಂದು ಹೇಳಿದನು. ಮರುದಿನ ಷಹರಜೌದಿಯನ್ನು ಕರೆತಂದು ತನಗೊಪ್ಪಿಸಿದ ಪ್ರಧಾನಮಂತ್ರಿಯನ್ನು ನೋಡಿ, ಸುಲ್ತಾನನು ಬಹು ವಾಗಿನೊಚ್ಚಿ, ಅಯ್ಯಾ! ನಿನ್ನಮಗಳನ್ನೇ ನನ್ನಬಳಿಗೆ ಕಳುಹಿಸಿದೆಯಲ್ಲಾ! ಇದಕ್ಕೆ ಕಾರಣವೇನು? ನೀನೇನು ತಿಳಿಯದವನೆ! ಎಂದು ಕೇಳಿದನು. ಮಂತ್ರಿಯು ಅಯ್ಯಾ! ಅವಳು ಮುಂಚೆ ಆಗುವ ವಿಪತ್ತಿಗೆ ಹೆದರದೆ ನಿಮ್ಮನ್ನು ಮದುವೆಮಾಡಿಕೊಂಡು ಸತ್ತುಹೋಗುವುದೇ ಸ್ವರ್ಗಸುಖವೆಂತಲೂ, ಬಹುಕಾಲಬದುಕಿ ಏಕೆ ಕಾಯಕಷ್ಟಗಳನ್ನು ಅನುಭವಿಸಬೇಕೆಂತಲೂ, ಹೇಳಿದಳು. ಆದುದರಿಂದ ನಾನು ಕರೆದುತಂದೆನೆಂದು ಹೇಳಿದನು. ರಾಜನು ಮಂತ್ರಿಯನ್ನು ನೋಡಿ ಅಯ್ಯಾ! ನಾಳೆ ಷಹರಜೌದಿಯನ್ನು ನಿನ್ನವಶಕ್ಕೆ ಕೊಟ್ಟಾಗ, ನೀನು ಅವಳನ್ನು ಕಡಿದು ಹಾಕುವುದಕ್ಕೆ ತಪ್ಪಿಹೋದರೆ ನಿನ್ನಪ್ರಾಣವೇ ಹೋಗುವುದು. ಎಚ್ಚರಿಕೆಯಿಂದಿರೆಂದು ಹೇಳಲು, ಮಂತ್ರಿಯು ಅಯ್ಯಾ! ಅವಳು ನನ್ನಮಗಳಾದರೂ, ನಿನ್ನ ಆಜ್ಞೆಗೆ ಒಳಪಟ್ಟವನಾಗಿ ಅವಳ ಪ್ರಾಣವನ್ನು ತೆಗೆಯಲು, ನನ್ನಕೈಗಳೇ ಸಾಕ್ಷಿಯಾಗಿರುವುದು. ಇದು ನಿನ್ನ ಚಿತ್ತಕ್ಕೆ ಉತ್ತರೋತ್ತರ ತಿಳಿಯಬರುವುದೆಂದು ಹೇಳಿದನು. ಆ ಮಾತನ್ನು ಕೇಳಿ ಸುಲ್ತಾನನು ಸಮ್ಮತಿಸಿ ಹಾಗಾದರೆ ನಿನ್ನಿಷ್ಟಪ್ರಕಾರ ನಡೆಸಬಹುದೆಂದು ಹೇಳಿದನು.

ಬಳಿಕ ಮಂತ್ರಿಯು ತನ್ನ ಮನೆಗೆಹೋಗಿ, ನಡೆದ ಸಂಗತಿಯನ್ನು ಷಹರಜೌದಿಗೆ ಹೇಳಲು, ಅವಳು ಆ ಮಾತನ್ನುಕೇಳಿ ಇದಕ್ಕಿಂತ

ಲೂ ಇನ್ನು ಲೋಕೋಪಕಾರವಾದ ಕಾರ್ಯವುಂಟೆ? ಎಂದು ತನಗೆ ಸಹಾಯವೂಡಿದ ತಂದೆಗೆ ವಂದನಾದಿಗಳನ್ನು ಸಮರ್ಪಿಸಿ, ಚಿಂತಾಕ್ರಾಂತನಾಗಿರುವ ತಂದೆಯನ್ನು ನೋಡಿ ಅಪ್ಪಾ, ನೀನು ಹೀಗೆ ವ್ಯಸನಪಡಬಾರದು! ನಾನು ಸುಲ್ತಾನನನ್ನು ಮದುವೆಮಾಡಿಕೊಂಡಬಳಿಕ ಸಂತೋಷಕ್ಕೆ ಕಾರಣ ವುಂಟೆಂದು ಹೇಳಿದಳು. ಅದು ವಿೂದಲುಗೊಂಡು ಷಹರಜಾದಿಯು ಸುಲ್ತಾನನಬಳಿಗೆ ಹೋಗುವುದಕ್ಕೆ ಬೇಕಾದ ಸನ್ನಾಹಗಳನ್ನು ಮಾಡಿಕೊಳ್ಳುವುದೇ ಅವಳ ಕೆಲಸವಾಗಿತ್ತು. ಆದರೆ ಅವಳು ತಾನು ಹೊರಟು ಹೋಗುವುದಕ್ಕೆ ಮುಂಚೆ ತನ್ನ ತಂಗಿಯನ್ನು ಕರೆದು, ಅವ್ಳೂ ಪ್ರೀತಿಪಾತ್ರಳಾದ ತಂಗಿ! ನಾನು ಸುಲ್ತಾನನನ್ನು ಮದುವೆ ಮಾಡಿಕೊಳ್ಳುವುದಕ್ಕೆ ಹೋಗುವೆನು, ನಿನ್ನಿಂದ ಒಂದು ಸಹಾಯವು ನನಗಾಗಬೇಕಾಗಿದೆ. ಇದಕ್ಕೆ ನೀನೆಂದಿಗೂ ಬದಲು ಹೇಳಬೇಡ! ನಾನು ಹೇಳುವ ಮಾತನ್ನು ನಿಧಾನವಾಗಿ ಕೇಳಿ ಅದರಂತೆ ನಡೆಸು! ನಾನು ಸುಲ್ತಾನರ ಬಳಿಗೆ ಹೋದಮೇಲೆ ಈ ರಾತ್ರಿ ಮೂರ್ತ್ರವೇ ನಾನು ಬದುಕಿರುವುದು, ಆದುದರಿಂದ ನನ್ನ ಪ್ರಿಯತಂಗಿಯನ್ನು ಕರೆದುಕೊಂಡುಬಂದು ಒಂದೇ ಹಾಸಿಗೆಯಲ್ಲಿ ಮಲಗಬೇಕೆಂಬ ಆಶೆಯುಂಟು. ಇದಕ್ಕಾಗಿ ನೀವು ಅಪ್ಪಣೆಯನ್ನು ಕೊಡಬೇಕೆಂದು ಬೇಡಿಕೊಳ್ಳುವೆನು. ಸುಲ್ತಾನನು ಒಪ್ಪುವುದಾದರೆ, ನಾನು ನಾಳೆ ಬೆಳಗಿನಝಾವಕ್ಕೆ ಎದ್ದು ನನ್ನನ್ನು ಏಳಿಸಿ ನಾನು ಹೇಳುವ ಈ ಮಾತನ್ನಾಗಲೀ ಅಥವಾ ಇದೇ ಅರ್ಥವುಳ್ಳ ಮತ್ತಾವ ವಾಕ್ಯವನ್ನಾಗಲೀ ಹೇಳಬೇಕು! ಏನಂದರೆ ಅಕ್ಕಾ! —ಇನ್ನು ಸ್ವಲ್ಪ ಹೊತ್ತಿಗೆ ಬೆಳಗಾಗುವುದು, ಆದುದರಿಂದ ಅಷ್ಟರೊಳಗಾಗಿ, ನೀನು ಓದಿದ ಕಥೆಗಳಲ್ಲಿ ಚೆಲುವಾದ ಕೆಲವು ಕಥೆಗಳನ್ನು ಹೇಳಬೇಕೆಂದುಕೇಳು. ಆಮೇಲೆ ನಾನೊಂದು ಕಥೆಯನ್ನು ಹೇಳುವೆನು. ಇದರಿಂದ ಈ ಪಟ್ಟಣದ ಜನರಿಗೆ ಆಗಾಗ್ಗೆ ಉಂಟಾಗುತ್ತಿರುವ ಮಹಾ ವ್ಯಸನವು ನಿವಾರಣೆಯಾಗುವುದೆಂದು ಹೇಳಲು, ದಿನರಜಾದಿಯು ಹಾಗೆಯೇ ಆಗಲೆಂದು ಒಪ್ಪಿಕೊಂಡಳು. ಬಳಿಕ ಸುಲ್ತಾನನಬಳಿಗೆ ತನ್ನಮಗಳನ್ನು ಕರೆದುಕೊಂಡು ಹೋಗುವಾಗ, ಮಂತ್ರಿಯು ಊರಲ್ಲೆಲ್ಲಾ ವಿೂರವಣಿಗೆ ಮಾಡಿ ದೊರೆಯ ಅಂತಃಪುರವನ್ನು ಸೇರಿ ಅವಳನ್ನು ಒಪ್ಪಿಸಿದನು.

ಸುಲಾತ್ತನನು ಅವಳನ್ನು ನೋಡಿ ಅನುಕೂಲಳಾಗಿದ್ದು ಸುಖವನ್ನು ಹೊಂದು ಎಂದು ಹೇಳುತಾ ತ್ತ, ಸರ್ವಲಕ್ಷಣ ಸುಂದರಿಯೊಾದ ಅವಳನ್ನು ವೋಹಭಾ ್ರಂತಿಯಿಂದ ನೋಡಿದನು. ಅವಳು ಅಳುತಾ ತ್ತ ಕಣ್ಣೀ ್ರರನ್ನು ಸುರಿಸುತಿ ತ್ತರುವುದನ್ನು ಕಂಡು ಕಾರಣವೇನೆಂದು ಕೇ ಳ ದನು. ಷಹರಜಾದಿಯು, ಒಡೆಯಾ ! ನನಗೆ ಒಬ್ಬ ಳೇಒಬ್ಬ ತಂಗಿಯಿರುವಳು. ಅವಳಿಗೆ ನನ್ನಲ್ಲಿ ತುಂಬ ಪಿ ್ರೀತಿಯೂ, ಉಂಟು. ನನ್ನನ್ನು ಕಂಡರೆ ಪಾ ್ರಣವನ್ನೆ ಕೊಟು ್ಟ ಬಿಡುವಳು. ನಾನು ಈರಾತಿ ್ರ ತಾನೆ ಬದುಕಿರುವುದು. ಆದುದರಿಂದ ನನ್ನ ತಂಗಿಯೆ ಸಂಗಡ ಈ ಅಂತಪುರದಲ್ಲಿ ಮಲಗಿದ್ದು, ಅವಳನ್ನು ನೋಡಿ ಅವಳಂದ ಅಪ ್ಪಣೆಯನ್ನು ತೆಗೆದುಕೊಂಡು, ನನ್ನ ಪಿ ್ರೀತಿಯನ್ನು ತೃಪಿ ತ್ತಪಡಿಸಿ ಕೊಳ್ಳಬೇಕು. ತಾವು ಅಪ ್ಪಣೆ ಮಾಡುವುದಾದರೆ, ಹಾಗೆಯೆ ಮಾಡುತ್ತೇನೆ ಇಲ್ಲವಾದರೆ, ನನ್ನ ವ್ಯಸನವು ಹೋಗುವುದಿಲ್ಲವೆಂದು ಹೇಳಲು, ಸುಲಾತ್ತನನು ವೋಹದಿಂದ ಹಾಗೆಯೇ ಆಗಲೆಂದು ಹೇಳಿದನು. ಕೂಡಲೆ ತನ್ನ ತಂಗಿಯೆನ್ನು ಸಂಭ ್ರಮದಿಂದ ಕರೆಸಿ ಕೊಂಡ ತರುವಾಯ ರಾಜನ ಇಷಾ ್ಟನುಸಾರವಾಗಿ ಷಹರಜಾದಿ ಕಯುನಗೃಹದಲ್ಲಿರುವ ಬಂದಾನೊಂದುಮಂಚದ ಮೇಲೆ ಸುಲಾತ್ತನ ನೊಡನೆ ಮಲಗಿ ಕೊಂಡಳು ಅದೇಸ್ಥಳದಲ್ಲಿ-ಜೀರೆ ಕಡೆ ತನಗಾಗಿ ಸಿದ್ಧ ಮಾಡಿದ ಹಾಸಿಗೆಯೆಲ್ಲಿ ದಿನರಜಾದಿಯು ಮಲಗಿ ಕೊಂಡಳು, ಅಷ ್ಟರಲ್ಲಿಯೇ, ತನ್ನ ಅಕ ್ಕನ ಮೂತನ್ನು ನೆನಸಿ ಕೊಂಡು, ಬೆಳಗಿನ ಝಾವದಲ್ಲಿದ್ದು, ಅಕಾ ್ಕ ! ಇನ್ನೇನು ಬೆಳಗಾಗುವ ಸಮಯವಾಯಿತು. ನಿನಗೆ ನಿದ ್ರೆ ಬಾರದೆ ಇದ್ದರೆ ನೀನು ಕಲಿತಿರುತ ವಿನೋದವಾದ ಕಥೆಗಳಲ್ಲಿ ಯಾವುದನಾ ್ನದರು. ಹೇಳು ! ಅಯೊ ್ಯ ! ನೀನು ಹೇಳುವ ಕಥೆಯನ್ನು ಮತಾ ್ತವ ಜನ ್ಮದಲ್ಲಿ ನಾನು ಕೇಳಲಿ ! ಇದೆ ಕಡೆಯಸಾರಿಯೆಲ್ಲವೆ ? ದಯವಾಡಿ ಹೇಳಬೇಕೆಂದು ಬೇಡಿಕೊಂಡಳು. ಷಹರಜಾದಿಯು ತನ್ನ ತಂಗಿಗೆ ಬಿಡಲು ಹೇಳಲಾರದೆ ಸುಲಾತ್ತನನ್ನು ನೋಡಿ ಒಡೆಯಾ ! ನನ್ನ ತಂಗಿಗೆ ಈಗ ಸಂತೋಷವನ್ನುಂಟು ಮಾಡುವುದಕ ್ಕೆ ಆಜ ್ಞೆಯೆ ? ಎಂದು ಕೇಳಿದಳು. ಅದಕ ್ಕೆ ಸುಲಾತ್ತನನು ಅಗತ ್ಯವಾಗಿ ಆಗಬಹುದೆಂದು ನುಡಿಯಲು, ತಂಗಿಯನ್ನು ಸಂಬೋಧಿಸಿ ಹೇಳುತಾ ತ್ತ ಸುಲಾತ್ತನನನ್ನು ನೋಡಿ ಹೀಗೆಂದು ಹೇಳ ತೊಡಗಿದಳು

೧೧ನೇ ರಾತ್ರಿ ಕಥೆ.

ವರ್ತಕನೂ ಭೂತವು.



ಒಡೆಯಾ ! ಪೂರ್ವ ಕಾಲದಲ್ಲಿ ಒಬ್ಬ ವರ್ತಕನಿದ್ದನು ! ಆತನಿಗೆ ಸಮಸ್ತವಾದ ಆಸ್ತಿಪಾಸ್ತಿಗಳೂ, ಭೂಮಿ ಕಾಣಿಗಳೂ, ಉಂಟು. ಅಲ್ಲದೆ ಆತನ ಬಳಿಯಲ್ಲಿ ಕೆಲಸ ಮಾಡುವ ಚಾಕರರೂ, ಗುಮಾಸ್ತರುಗಳೂ, ಇನ್ನು ಇತರ ವಿಧವಾದ ಪರಿವಾರ ಜನರೂ ಇದ್ದರು. ಆತನು ತನ್ನ ಲೀವಾದೇವಿಯ ನಿಮಿತ್ತವಾಗಿ ಆಗಾಗ್ಯೆ ಪ್ರಯಾಣ ಮಾಡುತ್ತಾ ಇದ್ದನು. ಒಂದಾನೊಂದು ಕಾಲದಲ್ಲಿ ಮಹತ್ತಾದ ಒಂದು ಕಾರಣದಿಂದ ಬಹಳ ದೂರ ಪ್ರಯಾಣ ಮಾಡ ಬೇಕಾಗಿ ಬಂದುದರಿಂದ, ಆತನು ತನ್ನ ಕುದುರೆಯನ್ನು ಹತ್ತಿ ಕೆಲವು ರೊಟ್ಟಿಗಳನ್ನು ಖರ್ಜೂರವನ್ನು ಆಹಾರನಿಮಿತ್ತವಾಗಿ ತೆಗೆದುಕೊಂಡು, ಗಹನವಾದಕಾಡಿನಲ್ಲಿ ಹೊರಟು ಪ್ರಯಾಣಮಾಡಿ, ತನ್ನ ಸಂಕೇತ ಸ್ಥಾನವನ್ನು ಸೇರಿ, ಕೆಲಸ ಕಾರ್ಯಗಳನ್ನು ಆಗ ಮಾಡಿ ಕೊಂಡು, ಹಿಂದಿರುಗಿ ಊರಿಗೆ ಬರುವುದಕ್ಕಾಗಿ, ತನ್ನಕುದುರೆಯನ್ನೇರಿ ಹೊರ ಹೊರಟನು. ಹೊರಟ ನಾಲ್ಕನೆಯದಿನ ಬಹಳವಾದ ಬಿಸಿಲು ಕಾಯುತ್ತಿದ್ದುದರಿಂದ, ಆ ನೆಕೆಯನ್ನು ತಾಳಲಾರದೆ ಮಾರ್ಗವನ್ನು ಬಿಟ್ಟು, ಸ್ವಲ್ಪ ದೂರದಲ್ಲಿ ಕಾಣುವ ಮರಗಳ ಬಳಿಗೆ ಹೋಗಿ, ತನ್ನ ಬಳಲಿಕೆಯನ್ನು ಪೋಗಲಾಡಿಸಿ ಕೊಳ್ಳ ಬೇಕೆಂದು, ಆ ಬಳಿಯಲ್ಲಿ ದೊಡ್ಡ ದಾವ ಒಂದು ತಾಳೆಯೆಗಿಡದ ಬಂಡದಲ್ಲಿ ಹರಿಯುತ್ತಿರುವ ತಿಳಿನೀರನ್ನು ನೋಡಿ, ತನ್ನ ಕುದುರೆಯನ್ನು ಒಂದು ಮರಕ್ಕೆ ಕಟ್ಟಹಾಕಿ, ತನ್ನ ಬಳಿಯಲ್ಲಿದ್ದ ಖರ್ಜೂರವನ್ನು ಕೆಲವುರೊಟ್ಟಿಯನ್ನು ತೆಗೆದು ಕೊಂಡು ಹೋಗಿ ಕಾಲುವೆಯ ದಡದಲ್ಲಿ ಕುಳಿತು ಕೊಂಡನು. ಆತನು ಬಳ್ಳಿ ಮುಸಲಮಾನನಾದುದರಿಂದ ಕಾಲು ಕೈಗಳನ್ನು ಚೆನ್ನಾಗಿ ತೊಳೆದು ಕೊಂಡು, ಖರ್ಜೂರವನ್ನು ತಿಂದು ಭಕ್ತಿಮತನಾಗಿ ಕಾಲು ಮಡಿಸಿ ಕುಳಿತು ಕೊಂಡು ದೇವರನ್ನು ಧ್ಯಾನ ಮಾಡುತ್ತಾ ಸಂತೋಷದಿಂದ ಕಣ್ಣನ್ನು ಮುಚ್ಚಿ ಕೊಂಡು ಕುಳಿತಿದ್ದನು. ಆಗ ಮೈಯೆಲ್ಲಾ ಕೂದಲುಳ್ಳ ಮಹದಾಕಾರವನ್ನು ಹೊಂದಿದ ಒಂದಾನೊಂದು, ಭೂತವು

ಕೈಯೆಲ್ಲಿ ಕತ್ತಿಯೆನ್ನು ಹಿಡಿದು ಕೊಂಡು, ಅವನ ಬಳಿಗೆ ಬಂದು ನನ್ನ ಮಗಳನ್ನು ಕೊಂದೆ ಯೆಲ್ಲಾ! ನಾನುನಿನ್ನನ್ನು ಕೊಲ್ಲುವೆನು. ಏಳು ಎಂದು ಘಟ್ಟಯೊಗಿ ಕೂಗಿತು. ಆ ಘೋರಾಕಾರವನ್ನು ಕ್ರೂರವಾದ ಧ್ವನಿ ಯೆನ್ನು ಕೇಳಿ, ವರ್ತಕನು ಅಯ್ಯೊ. ನನ್ನ ಪ್ರಾಣವನ್ನು ನೀನು ತೀರಿಸಿ ಕೊಳ್ಳುವುದಕ್ಕೆ ನಾನು ಯಾವಾಗ ಏನು ಕೆಲಸ ಮಾಡಿರುವೆನೆಂದು? ಕೇಳಿದನು. ನನ್ನ ಕುಮಾರನನ್ನು ನೀನು ಕೊಂದುದರಿಂದ ನಾನು ನಿನ್ನ ನ್ನುಕೊಲ್ಲುವೆನೆಂದು ಭೂತವು ಹೇಳಿತು. ಆಗ ವರ್ತಕನು ಅಯ್ಯೊ ! ನಾನು ಯಾವಾಗ ನಿನ್ನಮಗನನ್ನು ಕೊಂದೆ, ಅವನನ್ನು ಕಣ್ಣಿನಲ್ಲಿಯೂ ಕಾಣೆನಲ್ಲಾ ! ಎಂದು ಹೇಳಲು. ಆಹಾ, ಈಗ ಸ್ವಲ್ಪ ಹೊತ್ತಿಗೆ ಮುಂಚೆ ನೀನಿಲ್ಲಿಗೆ ಬಂದು, ಕಾಲುವೆ ಬಳಿಯಲ್ಲಿ ಕುಳಿತು ಖರ್ಜೂರವನ್ನು ತೆಗೆದು ಅದನ್ನು ತಿಂದು ಅದರ ಕಾಳುಗಳನ್ನು ಇರುವೆಯ ಗೂಡಿನ ಬಳಿ ಹಾಕಲಿಲ್ಲವೆ ? ಎಂದು ಭೂತವು ಕೇಳಲು, ವರ್ತಕನು ನೀನು ಹೇಳಿದುದೆ ಲ್ಲವನ್ನು ನಾನು ಮಾಡಿದುದುಂಟು, ಇಲ್ಲವೆಂದು ನಾನೆಂದಿಗೂ ಹೇಳುವು ದಿಲ್ಲ, ನಾನು ಖರ್ಜೂರವನ್ನು ತಿಂದರೆ ನಿನ್ನ ಮಗನನ್ನು ಹೇಗೆ ಕೊಂದೆನೊ ಹೇಳ ಬೇಕೆನಲು, ಭೂತವು, ನೀನು ಖರ್ಜೂರದ ಬೀಜಗಳನ್ನು ಬಿಸಾಡು ವಾಗೆ ಸಂಚರಿಸುತ್ತಿದ್ದ ನನ್ನ ಮಗನ ಕಣ್ಣಿಗೆ ಅದರ ಪೆಟ್ಟು ತಗಲಿ, ಆ ನೋವಿನಿಂದ ಅವನು ಸತ್ತು ಹೋದನು. ಆದಕಾರಣದಿಂದ ನಾನು ನಿನ್ನನ್ನು ಕೊಂದು ಹಾಕುವೆ ನೆಂದು ಹೇಳಲು, ವರ್ತಕನು ಸಾ ್ವವಿಾ ! ನನ್ನ ತಪ್ಪನ್ನು ಕ್ಷಮಿಸ ಬೇಕೆಂದು ಬೇಡಿ ಕೊಂಡನು. ಭೂತವು ಮನ್ನಣೆಯು, ದಾಕ್ಷಿಣ್ಯವೂ ಇಲ್ಲದೆ, ಒಬ್ಬ ನನ್ನು ಕೊಂದವನನ್ನು ಮನ್ನಿಸದೆ ಕೊಂದು ಹಾಕುವುದು ನ್ಯಾಯವೆ ವಲ್ಲವೆ ! ಎಂದು ಕೇಳಿತು. ವರ್ತಕನು ಅದನ್ನು ಒಪ್ಪಿ ಕೊಂಡರೂ, ನಾನು ನಿನ್ನ ಮಗನನ್ನು ನೋ ಡಲಿಲ್ಲ, ಮತ್ತು ಅವನನ್ನು ಕೊಲ್ಲಲಿಲ್ಲ. ಆದುದರಿಂದ ನಾನು ನಿರಪರಾಧಿ ನೀನು ಕೋಪವಾಡದೆ ರಕ್ಷಿಸಬೇಕೆಂದು ಬೇಡಿ ಕೊಂಡನು. ಭೂತವು ಆದರೂ, ಕೇಳದೆ, ಅಲ್ಲ, ಅಲ್ಲ, ನೀನು ನನ್ನ ಮಗನನ್ನು ಕೊಂದೆ ಯಾ ದುದರಿಂದ ನಾನು ನಿನ್ನನ್ನು ಕೊಲ್ಲುವೆನೆಂದು ಹೇಳುತಾ ್ತ ನೆಲದ ಮೇಲೆ ಉರುಳಿಸಿ, ತಲೆಯನ್ನು ಕಡಿಯುವದಕ್ಕಾಗಿ ತನ್ನ ಕತ್ತಿಯನ್ನು ಮೇಲ ಕ್ಕೆತ್ತಿ ಹಿಡಿದು ಕೊಂಡಿತು. ವರ್ತಕನು ತಾನು ನಿರಪರಾಧಿ ಯೆಂದು,

ನಿಜವಾಗಿಯೂ, ತಪ್ಪುಮಾಡಿದವನಲ್ಲವೆಂದು ನುಡಿಯುತಾ ಕಣ್ಣಿನಲ್ಲಿ ನೀರನ್ನು ತುಂಬಿ ಕೊಂಡು ಹೆಂಡತಿ ಮಕ್ಕಳನ್ನು ನೆನೆದು ಕೊಂಡು ತನ್ನ ಕೈಲಾದ ಮಟ್ಟಿಗೂ, ಹೇಳುವುದಕ್ಕೆ ಸಾಧ್ಯವಾದ ತೆರದಿಂದ ಬೇಡಿ ಕೊಂಡನು. ರಾಕ್ಷಸ ನಾದರೋ ಕಡಿಯುವುದಕ್ಕೆ ಕತ್ತಿಯನ್ನು ನೇರವಾಗಿ ಹಿಡಿದು ಕೊಂಡು ಈ ನಿರ್ಭಾಗ್ಯನಾದ ವರ್ತಕನ ದೀನಧ್ವನಿಯನ್ನು ಕೇಳಿ ಶಾಂತನಾದನೇ ಹೊರತು ಅವನ ಕೋಪ ವೆಂದಿಗೂ ಕಡಿಮೆಯಾಗಲಿಲ್ಲ, ನೀನು ನನ್ನ ಮಗನನ್ನು ಕೊಂದೆಯಾದುದರಿಂದ ಈ ನಿನ್ನ ದೀನಾಲಾಪಗಳೂ, ರಕ್ತಬಾಷ್ಪಗಳೂ, ನಿನ್ನ ಮರಣಕ್ಕೆ ಎಂದಿಗೂ ಅಡ್ಡಿಯಾಗತಕ್ಕವುಗಳಲ್ಲ ವೆಂದು ಭೂತವು ಹೇಳಲು, ವರ್ತಕನು, ಆಳಿದಸಾರ್ವಭೌಮಯವರೇ ! ನಿಮಗಿನ್ನೂ ದಯೆ ಬಾರದೆ ? ನಿರಪರಾಧಿಯೊಬ್ಬ ಬಡವನನ್ನು ಕೊಂದು ಹಾಕುವುದು ನಿಮಗೆ ನ್ಯಾಯವೆ ? ಹಾಗೆ ಮಾಡುತ್ತೀರಾ ! ಎಂದು ಕೇಳಿದನು. ಭೂತವು ಹೌದು ಹಾಗೆ ಮಾಡ ಬೇಕೆಂದೇನಿಶ್ಚಯಿಸಿರುವೆನು. ಎಂದು ಹೇಳಿತು. ಆಷ್ಟರಲ್ಲಿಯೇ ಬೆಳಗಾದುದರಿಂದ ಸುಲ್ತಾನನು, ಹಾಸಿಗೆಯನ್ನು ತೊರೆದು ಪ್ರಾತಃ ಕಾಲದಲ್ಲಿ ಸಭೆಗೆಹೊರಡುವನೆಂದು ಷಹರಜಾದಿಯು ಕಥೆಯನ್ನು ನಿಲ್ಲಿಸಿದಳು. ದಿನರಜಾದಿಯು ಅಕ್ಕ ಎಷ್ಟುಆಶ್ಚರ್ಯವಾದ ಕಥೆಯನ್ನು ಹೇಳಿದೆ ಎಂದು ಕೇಳಿದಳು. ಷಹರಜಾದಿಯು ಇದನ್ನು ಕೊನೆಯವರಿಗೂ, ಕೇಳಿದರೆ ಇನ್ನು ಮಹತ್ತಾದ ಅದ್ಭುತಗಳುಂಟು. ಸುಲ್ತಾನನು ಈದಿನವಾತ್ರ ನನ್ನ ಪ್ರಾಣವನ್ನುಳಿಸಿದರೆ ನಾನುಅದನ್ನು ಹೇಳಿ ನಿಮ್ಮಗಳನ್ನು ಸಂತೋಷಪಡಿಸುವೆನೆಂದು ಹೇಳಿದಳು. ಸುಲ್ತಾನನಾದರೋ ಈಕಥೆಯನ್ನು ಪೂರ್ತಿಯಾಗಿ ಈದಿನ ರಾತ್ರಿ ಕೇಳಬೇಕಾಗಿರುವುದರಿಂದ ಷಹರಜಾದಿಯನ್ನು ಈದಿನ ಕೊಲ್ಲಕೂಡದೆಂದು ಗೊತ್ತುಮಾಡಿ ಬೆಳಗಿನ ಕರ್ಮಗಳನ್ನು ತೀರಿಸಿ ಕೊಂಡು, ದೇವರ ಧ್ಯಾನವನ್ನು ಮಾಡ ತೊಡಗಿದರು. ಇತ್ತ ಮಂತ್ರಿಯು ನನ್ನ ಮಗಳನ್ನು ನಾನೇ ಕೊಲ್ಲಬೇಕಾಗಿರುವುದಲ್ಲಾ! ಎಂದು ನೆನಸಿ ತನ್ನ ಮಗಳನ್ನು ನೆನೆನೆನೆದು ದುಃಖಪಡುತಾ ರಾತ್ರಿಯೆಲ್ಲಾ! ನಿದ್ದೆಬಾರದೆ ಕೆಂದದಲ್ಲಿಬಿದ್ದ ಹುಳುವಿನಂತೆ ಹಾಸಿಗೆಯಲ್ಲಿ ಹೊರಳಾಡುತ್ತಿದ್ದನು. ಆಷ್ಟರಲ್ಲಿಯೇ ಸುಲ್ತಾನನು ಅಂತಹ ಕ್ರೂರವಾದ ಆಜ್ಞೆಯನ್ನು ಮಾಡದಿರುವುದನ್ನು ಕೇಳಿ ಅವರನ್ನು ಕಾಣಿಸಿಕೊಂಡು ರಾಜಕಾ

ರ್ಯವೆಲ್ಲವನ್ನು ಮುಗಿಸಿದನು. ಸುಲ್ತಾನನಾದರೊ ರಾತ್ರಿಯಾಗುತ್ತಲಿ, ಷಹರಜೊದಿಯಸಂಗಡ ಮಲಗಿಕೊಂಡನು. ಆದರೆ ದಿನರಜೊದಿಯು ಬೆಳಗಿನಜಾವದಲೆದ್ದು, ಅಕ್ಕಾ ಬೆಳಕು ಹರಿಯುವ ತನಕ ನೀನು ಎಚ್ಚರಿಕೆಯೊಗಿದ್ದರೆ ನಿನ್ನೆಹೇಳಿ ಉಳಿದಿರುವ ಕಥೆಯನ್ನು ಹೇಳೆಂದು ಬೇಡಿಕೊಂಡಳು. ಆಗ ಷಹರಜೊದಿಯು ಸುಲ್ತಾನನನ್ನು ನೋಡಿ ಆತನು ಮಾತನಾಡದಿರುವದಕ್ಕಾಗಿ, ತಾನುಸುಮ್ಮನಿದ್ದಳು. ಬಳಿಕ ದಿನರಜೊದಿಯು, ಆವರ್ತಕನಿಗೂ ಭೂತಕ್ಕೂ ಸಂಭವಿಸಿದ ಮುಂದಿನ ಕಥೆಯನ್ನುಹೇಳಿ ಬೇಕೆಂದು ಕೇಳಿದಕೂಡಲೆ ಸುಲ್ತಾನನು ಒಪ್ಪಿದನು. ಷಹರಜೊದಿಯು ಮುಂದೆ ಕಥೆಯೆನ್ನು ಹೇಳತೊಡಗಿದಳು:—

ಎರಡನೆಯ ರಾತ್ರಿಕಥೆ

ಬಳಿಕ ರಾಕ್ಷಸನು ಹೇಗಾದರೂ ತನ್ನನ್ನು ಕೊಲ್ಲದೆ ಬಿಡನೆಂದು ತಿಳಿದು, ವರ್ತಕನು ಅವನ ಕೈಯನ್ನು ಹಿಡಿದುಕೊಂಡು ಸಾವಿಮಾ: ನನ್ನದೊಂದು ಪ್ರಾರ್ಥನೆಯುಂಟು ಅದನ್ನು ನೆರವೇರಿಸಿಕೊಳ್ಳುವುದಕ್ಕಾಗಿ ನನಗೆ ಸ್ವಲ್ಪ ಕಾಲ ಪುರುಸತ್ತು ಕೊಟ್ಟಿದೇ ಆದರೆ, ನಾನು ನಿಮ್ಮ ಆಜ್ಞಾನುಸಾರವಾಗಿ ನಡೆದುಕೊಳ್ಳುವೆನು. ಏನಂದರೆ ನಾನು ಸಾಯುವುದಕ್ಕೆಮುಂಚೆನನ್ನಹೆಂಡತಿಮಕ್ಕಳನ್ನುನೋಡಿ ಅವರಿಂದ ಅಪ್ಪಣೆತೆಗೆದುಕೊಂಡು ಮುಂದೆ ನನ್ನ ಆಸ್ತಿಗಾಗಿ ಅವರು ಜಗಳವಾಡಿ ನ್ಯಾಯಸ್ಥಾನವನ್ನು ಹತ್ತದಂತೆ, ಅವರಿಗೆ ಆಸ್ತಿಯನ್ನು ಹಂಚಿಕೊಟ್ಟ ಮರಳಿ ನಿಮ್ಮ ಬಳಿಗೆ ಬಂದು ಸೇರುವೆನೆಂದು ನುಡಿದನು. ರಕ್ಕಸನಾದರೊ ? ಆಹಾ ! ಈ ಕಾಲವಲ್ಲಿ ನಿನ್ನನ್ನು ಬಿಟ್ಟು ಬಿಟ್ಟರೆ ಮರಳಿ ಇಲ್ಲಿಗೆ ಬರುವೆಯೋ, ಇಲ್ಲವೋ, ಎಂದು ನನಗೆ ಅನುಮಾನ ವುಂಟಾಗಿದೆ ಎನಲು ವರ್ತಕನು ಪೂಜ್ಯರ್ಹನಾದ ಭಗವಂತನಸಾಕ್ಷಿಯೊಗಿ ನಾನು ಈ ಕೆಲಸಗಳನ್ನೆಲ್ಲಾ ಆಗಮಾಡಿಕೊಂಡು ಮರಳಿ ನಿಮ್ಮ ಬಳಿಗೆ ಬರುತ್ತೇನೆಂದು ಆಣೆಯನ್ನಿಟ್ಟನು. ಆದರೆ ನಿನಗೆಷ್ಟು ಕಾಲ ಸಾಯಿದೆ ಬೇಕಾಗುವದೆಂದು ಕೇಳಿದ ರಾಕ್ಷಸನನ್ನು ನೋಡಿ ಅಯ್ಯಾ ! ನನ್ನ ಕೆಲಸಗಳನ್ನೆಲ್ಲಾ ಮಾಡಿಕೊಂಡು ನಿರ್ವ್ಯಸನದಿಂದ ನಿಮ್ಮ ಬಳಿಗೆ ಬರಬೇಕಾದರೆ, ಒಂದು ವರ್ಷಕಾಲವು ಬೇಕಾಗುವುದು, ಅದಕ್ಕಿಂತ ಕಡಿಮೆಯಾದರೆ ನಾನು ನಿಮ್ಮ ಬಳಿಗೆ ಬರುವುದಕ್ಕೆ ಶಕ್ತಿ ಸಾಲದು. ಆದುದರಿಂದ ಇಂದಿಗೆ ಹನ್ನೆ

ರಡು ತಿಂಗಳು ಮುಗಿವುದಕ್ಕೆ ಸರಿಯಾಗಿ, ನಾನಿಲ್ಲಿಗೆಬಂದು ನಿಮಗೆ ಪ್ರಾಣ ವನ್ನೊಪ್ಪಿಸುವೆನೆಂದು ಹೇಳಿದನು. ಈ ಮಾತುಗಳನ್ನು ಖಂಡಿತವಾಗಿ ಯೂ ಭಗವಂತನ ಸಾಕ್ಷಿಯಾಗಿ ನೀನು ಹೇಳುತ್ತಿದ್ದೀಯೋ ಎಂದು ಕೇಳಿದ ನು. ವರ್ತಕನು ಸಾಕ್ಷಿಯು ಖಂಡಿತವಾಗಿಯೂ ನಾನು ಮನಃಪೂರ್ವಕ ವಾಗಿ ಈ ಮಾತುಗಳನ್ನು ಹೇಳಿರುವೆನೆಂದು ತಿರುಗಿ ಪ್ರಮಾಣ ಮಾಡಲು, ರಾಕ್ಷಸನು ಆ ವರ್ತಕನನ್ನು ಅಲ್ಲಿಯೇ ಬಿಟ್ಟು ತಾನು ಮಾಯೆಯಾದನು. ಬಳಿಕ ವರ್ತಕನು ತನ್ನ ಕುದುರೆಯನ್ನೇರಿ ಊರಿಗೆಬರುತ್ತಾ ಈ ಘೋರ ರಾಕ್ಷಸನ ಬಾಧೆಯಿಂದ ಬಿಡುಗಡೆ ಹೊಂದಿದುದಕ್ಕಾಗಿ ಸಂತೋಷವನ್ನೂ ತಾನು ಮಾಡಿದ ಪ್ರಮಾಣವನ್ನು ನೆನೆದು ದುಃಖವನ್ನೂ ಹೊಂದಿ ಮನೆ ಯನ್ನು ಸೇರಿದ ಕೂಡಲೆ, ಅತನ ಹೆಂಡತಿ ಮಕ್ಕಳು ತುಂಬಾ, ಸಂತೋ ಷವನ್ನು ಹೊಂದಿದರು. ಆದರೂ ವರ್ತಕನು ಮಾತ್ರ ತುಂಬ ವ್ಯಸನ ಕ್ರಾಂತನಾಗಿರುವುದನ್ನು ನೋಡಿ ಜನರೆಲ್ಲರೂ, ಏನೋ, ಬದಗಿ ಬಂದಿರ ಬಹುದೆಂದು ಕೊಂಡರು. ಆದರೆ ಅತನ ಹೆಂಡತಿಯು ಗಂಡನನ್ನು ನೋಡಿ ನೀವು ಬಂದಿರುವಿರೆಂದು ನಾವೆಲ್ಲರೂ ತುಂಬ ಸಂತೋಷದಿಂದಿರುವ ಕಾಲದಲ್ಲಿ ನೀವು ಮಾತ್ರ ವ್ಯಸನವನ್ನು ತೋರ್ಪಡಿಸುತ್ತಿರುವಿರಲ್ಲಾ ! ಇದಕ್ಕೆ ಕಾರಣವೇನು ? ಇದರಿಂದ ನಮಗೂ ತುಂಬ ಸಂಕಟ ವುಂಟಾಗುತ್ತಿರು ವುದು. ಆದ ಕಾರಣ ನಿನ್ನ ದುಃಖಕ್ಕೆ ಮೂಲವನ್ನು ವಿಸ್ತರಿಸಿ ಹೇಳ ಬೇಕೆಂದು ಕೇಳಿದಳು. ಗಂಡನು ಅಯ್ಯೋ ! ನಾನು ಇನ್ನು ಫೋಂದು ಸಂವತ್ಸರಕ್ಕಿಂತ ಹೆಚ್ಚಾಗಿ ಬದುಕಲಾರೆ ನೆಂದು ಹೇಳಿ, ತನಗೂ ರಾಕ್ಷ ಸನಿಗೂ ನಡೆದ ಸಂವಾದವನ್ನು, ತಾನು ವರ್ಷಾಂತದಲ್ಲಿ ರಾಕ್ಷಸನ ಕೈ ಯಿಂದ ಮರಣವನ್ನು ಹೊಂದ ಬೇಕಾಗಿರುವುದನ್ನು, ಇದಕ್ಕಾಗಿ ತಾನು ಮಾಡಿರುವ ಕಠಿಣವಾದ ಪ್ರಮಾಣವನ್ನು ತಿಳಿದು ಹೇಳಿದನು. ಆಮಾತ ನ್ನುಕೇಳಿ ಸರ್ವರೂ ವ್ಯಸನಾಕ್ರಾಂತರಾದರು. ಮಕ್ಕಳು ಹೊರಳಿ ಹೊರಳಿ ಅಳುತ್ತಾ ಇದ್ದರು. ಹೆಂಡತಿಯು ತಲೆಯನ್ನು ಬಿಚ್ಚಿ ಬಿರಿ ಹಾಕಿಕೊಂಡು ಎದೆಯನ್ನು ಹೊಡೆದು ಕೊಳ್ಳುತ್ತಾ ಘೋರ್ಟ್ಟಯಾಗಿ ಅಳು ತ್ತಿದ್ದಳು. ಇವನ್ನು ನೋಡಿ ವರ್ತಕನು ಮಹತ್ತರವಾದ ವ್ಯಸನ ವನ್ನು ಹೊಂದಿ, ಅತಿಯಾಗಿ ಜೀಳಿದರಿಂದ ಪ್ರಯೋಜನವೇನು ? ಈವಿ ಷಯದಲ್ಲಿ ಎಷ್ಟುವಿಧವಾದ ವ್ಯಸನಗಳುಂಟಾಗುವುವೋ ! ಆವ್ಯಸನಗ

ಳೆಲ್ಲವನ್ನು ಅವರು ಸಂಪೂರ್ಣವಾಗಿ ಅನುಭವಿಸಿದರು. ಅನಂತರದಲ್ಲಿ ತನ್ನ ಕಾರ್ಯಗಳೆಲವನ್ನು ನೆರವೇರಿಸುವುದಕ್ಕೆ ಮೊದಲು ಮಾಡಿ ಮುಂಚೆ ತನ ಗಿರುವ ಸಾಲವೆಲ್ಲವನ್ನು ತೀರಿಸಿ ಸ್ನೇಹಿತರಿಗೆ ಔತಣಾದಿಗಳನ್ನು ಮಾಡಿಸಿ ಸೇವಕರಿಗೆ ಬಹುಮಾನವನ್ನು ಕೊಟ್ಟು ಬಿಕ್ಷಗಾರರಿಗೆ ಧರ್ಮಗಳನ್ನು ಮಾಡಿ ಸರ್ವರನ್ನು ತೃಪ್ತಿಪಡಿಸಿ ಆಸ್ತಿಯನ್ನು ಮಕ್ಕಳಿಗೆ ಹಂಚಿ ಕೊಟ್ಟು, ಇನ್ನು ಚಿಕ್ಕವರಾಗಿರತಕ್ಕವರಿಗೆ ರಕ್ಷಕರನ್ನು ಗೊತ್ತು ಮಾಡಿ, ತನ್ನ ಹೆಂಡತಿಗೆ ಕೊಡ ಬೇಕೆಂದು ಗೊತ್ತು ಮಾಡಿದ್ದುದನೆಲ್ಲ ವನ್ನೂ ಕೊಟ್ಟು, ಎಲ್ಲರನ್ನೂ ಅತ್ಯಂತ ಆನಂದ ಪರವಶರನ್ನಾಗಿ ಮಾಡಿ ದನು. ಅಷ್ಟರಲ್ಲಿಯೇ ಒಂದು ಸಂವತ್ಸರವಾಗಲು, ತಾನು ಪ್ರಮಾಣ ಮಾಡಿದಂತೆ ಭೂತದ ಬಳಿಗೆ ಹೋಗ ಬೇಕೆಂದು ಗೊತ್ತುಮಾಡಿ ಕೊಂಡು, ತನ್ನ ಸಮಾಧಿಗೆಬೇಕಾಗುವ ಹೊಸ ಬಟ್ಟೆಗಳನ್ನು ಕಟ್ಟಿಕೊಂಡು ಹೆಂಡ ತಿಮಕ್ಕಳಿಂದ ಆಜ್ಞೆ ಪಡೆದು ಮುಂದೆ ನಡಿಯುತ್ತಿರುವಾಗ ಅವರೆಲ್ಲರೂ ಇಂತಹ ಪ್ರೀತಿಪಾತ್ರನಾದ ತಂದೆಯನ್ನು ಅಗಲಿರುವುದಕಿಂತ ನಾವು ಅಲ್ಲಿಗೆ ಹೋಗಿ ಪ್ರಾಣವನ್ನು ಬಿಡುವುದೆ ಲೇಸೆಂದು ನುಡಿಯುತಾ ಹಿಂದೆ ಬರುತ್ತಿರಲು, ವರ್ತಕನು ಅವರನ್ನು ನೋಡಿ ಆಹಾ ! ಭಗವಂತನ ಆಜ್ಞೌನುಸಾರವಾಗಿ ನಿಮ್ಮನ್ನು ತೊರೆದು ಹೋಗುತ್ತೇನೆ. ಹುಟ್ಟಿ ದವಾನವರು ಸಾಯುವ್ರದೇ ನಿಜವಲ್ಲದೆ, ಎಂದಿಗೂ ಸ್ಥಿರವಾಗಿರಲಾರ ರೆಂದು, ಹೇಳಿ ಅವರನ್ನು ಸಮ್ಮತಿಸಿ, ತನ್ನ ಕುದುರೆಯನ್ನು ಹತ್ತಿ ಆ ಸ್ಥಲಕ್ಕೆ ಬಂದು ನೀರಿನ ಕಾಲುವೆಯ ಹತ್ತಿರ ಕುಳಿತು ಕೊಂಡು, ರಾಕ್ಷಸನು ಬರುವುದನ್ನೇ ಎದುರು ನೋಡುತ್ತಿದ್ದನು. ಅಷ್ಟರಲ್ಲಿಯೇ ಒಬ್ಬಾಬ್ಬನೊಬ್ಬ ಮುದುಕನು ಬಂದು ಹೆಣ್ಣು ಹುಲ್ಲೆಯನ್ನು ಸಂಗಡ ಕರೆದು ಕೊಂಡು, ಅಲ್ಲಿಗೆ ಬಂದು ಆತನನ್ನು ನೋಡಿ ಉಭಯತ್ರರೂ ಕುಶಲಪ್ರಶ್ನೆಯನ್ನು ಮಾಡಿ ! ಅಯ್ಯಾ ! ನೀನು ಏಕಾಂಗಿಯಾಗಿ ಈ ನಿರ್ಮಾನುಷವಾದ ಪ್ರದೇಶಕ್ಕೆ ಏಕೆ ಬಂದಿರುವೆ ? ಇಲ್ಲಿ ಒರಿಯೆ ಭೂತ ಗಳೇ ವಾಸ ಮಾಡುತ್ತವೆಯಲ್ಲಾ ಈ ನುನೋಹರವಾದ ವೃಕ್ಷಲತಾದಿಗ ಳನ್ನು ನೋಡಿದರೆ ಮನುಷ್ಯರಿರುವರೆಂದು ತೋರುವುದೇ ಹೊರತು, ಇಲ್ಲಿ ಬೇರೆ ಮನುಷ್ಯರು ಇಲ್ಲ. ಆದುದರಿಂದ ಈ ಸ್ಥಲದಲ್ಲಿರುವುದು ತುಂಬ ಅಪಾಯಕರವೆಂದು ಹೇಳಿದನು. ಬಳಿಕ ವರ್ತಕನು ತಾನು ಇಲ್ಲಿಗೆ ಬರ

ಬೇಕಾಗಿ ಬಂದಸಂಗತಿಯೆನ್ನು,ರಾಕ್ಷಸನ ಕೃತ್ಯವನ್ನೂ, ತಾನು ಮಾಡಿದ ಪ್ರಮಾಣವನ್ನು ಹೇಳಲು, ಆತನು ಬಹಳವಾಗಿ ಆಶ್ಚರ್ಯ ಯುಕ್ತನಾಗಿ ಅಯ್ಯಾ ! ನೀನು ಮಾಡ ಬಾರದ ಪ್ರಮಾಣವನ್ನು ಮಾಡಿ ಲೋಕದಲ್ಲೆಲ್ಲಾ ತುಂಬ ಸತ್ಯಶಾಲಿ ಯೆನಿಸಿ ಕೊಂಡೆ ಯಲ್ಲಾ ! ಇಂತಹ ಔತಣವನ್ನು ಭೂತಕ್ಕಾಗಿ ನೀನು ಮಾಡ ಬಹುದೆ ? ಆದರೆ ನಿನಗೂ ಪಿಶಾಚಕ್ಕೂ ನಡೆಯುವ ಸಂಗತಿಯನ್ನು ನೋಡ ಬೇಕೆಂದು ಹೇಳುತಾ್ತ, ಅವನ ಬಳಯಲ್ಲಿಯೇ ಕುಳಿತು ಕೊಂಡನು. ಅಷ್ಟು ಹೊತ್ತಿಗೆ ಬೆಳಗಾಗುತ್ತಿರುವುದನ್ನು ನೋಡಿ, ಕಥೆಯನ್ನು ಈಗ ನಿಲ್ಲಿಸಬೇಕಾಗಿದ್ದರೂ, ಮುಂದೆ ಬಹು ಸಾ್ವರಸ್ಯ ವುಳ್ಳುದಾಗಿರುವುದೆಂದು, ಹೇಳಲು ಸುಲಾ್ತನನು ಆಕಥೆಯನ್ನು ಕೊನೆ ಮುಟ್ಟಿ ಕ್ಕೇಳ ಬೇಕೆಂದು ಈ ದಿನವೂ ಅವಳನ್ನು ಕೊಲ್ಲ ಕೂಡದೆಂದು ಆಜ್ಞೆ ಮಾಡಿದನು.

ಮೂರನೇ ರಾತ್ರಿಕಥೆ.

ಮರುದಿನ ಬೆಳಗಿನ ಜಾವದಲ್ಲಿ ದಿನರಜಾದಿಯು ಎಂದಿನಂತೆ ತನ್ನ ಅಕ್ಕನನ್ನು ಕುರಿತು, ಪ್ರೀತಿಯುಕ್ತಳಾದ ಸಹೋದರಿಯೆ ! ನಿನಗೆನಿದೆ್ರ ಬಾರದಿದ್ದರೆ ನೀನೋದಿದ ಕಥೆಗಳಲ್ಲಿ ಬಹು ಚಮತಾ್ಕರವಾಗಿರುವ ಒಂದು ಕಥೆಯೆನ್ನು ಹೇಳು ಎಂದು ಕೇಳಿದಳು. ಸುಲಾ್ತನನು ಭೂತಕ್ಕೂ ಆ ವರ್ತಕನಿಗೂ ನಡೆದ ಮುಂಗಥೆಯೆನ್ನು ಕೇಳ ಬೇಕೆಂದು ನುಡಿಯಲು, ಆಕೆಯು ಹೇಳ ತೊಡಗಿದಳು:—

ಬಳಿಕ ಆ ವರ್ತಕನು ಜಿಂಕೆಯನ್ನು ತಂದವನು ಆಸ್ಥಲದಲ್ಲಿ ಕೂತು ಕೊಂಡಿರಲು, ಇನ್ನೊಬ್ಬ ಮುದುಕನು ಮೂರು ನಾಯಿಗಳನ್ನು ಸಂಗಡ ಕರೆದು ಕೊಂಡು ಬರುತಿ್ತರುವುದನ್ನು ಕಂಡು, ಅವರು ಆತನಿಗೆ ವಂದನಾದಿಗಳನ್ನು ಮಾಡಲು, ಆತನು ನವುಸಾ್ಕರವನ್ನು ಸಮರ್ಪಿಸಿದ ಬಳಿಕ, ಏನಿರಯ್ಯಾ ? ನೀವುಗಳೀಕೆ ಈ ಕಾಡಿನಲ್ಲಿ ಕೂತು ಕೊಂಡಿರುವಿರೆಂದು ಕೇಳಿದನು. ಅದಕಾ್ಕತನು ವರ್ತಕನಿಗೂ ಭೂತಕ್ಕೂ ನಡೆದ ಸಂಗತಿಯನ್ನು, ಪ್ರಮಾಣಕ್ಕೆ ಕಟ್ಟು ಬಿದ್ದು ಬಲಿಯಾಗುವುದಕ್ಕೆ ಬಂದು ಕುಳಿತಿರುವ ವರ್ತಕನ ಚರಿತೆ್ರಯನ್ನು ಹೇಳಿ, ಭೂತವು ಮುಂದೇನು ಮಾಡುವುದೋ ನೋಡ ಬೇಕೆಂಬ ಕುತೂಹಲದಿಂದ ನಾನು ಇಲ್ಲಿ

ಕುಳಿತಿರುವೆ ನೆಂದು ಹೇಳಲು, ಈ ವಾರ್ತೆಯು ಸಾಮಾನ್ಯವಾದುದಲ್ಲವಾ ದುದರಿಂದ, ಮುಂದೇನು ಆಶ್ಚರ್ಯವು ನೆರವೇರುವುದೋ ಎಂದು ಎಲ್ಲರೂ ಅಲ್ಲಿಯೇ ಕೂತು ಕೊಂಡರು. ಇನ್ನು ಸ್ವಲ್ಪ ಹೊತ್ತು ಹೋಗಲು ಸುಡುಗಾಡಿನಿಂದ ಹೊರಟು ಬರುವ ಪಿಶಾಚದಂತೆ ಬಂದು ವಸ್ತ್ರವು ಹೊಲ ದಿಂದ ಹೊರಟು ತಮ್ಮ ಕಡೆಗೆ ಬರುತ್ತಿರುವುದನ್ನು ಅವರು ನೋಡಿದರು. ಕೂಡಲೇ ಆರಾಕ್ಷಸನು ಬಂದು, ವರ್ತಕನನ್ನು ಕೈಹಿಡಿದು ಎಳೆದು ಏಳು ಮೇಲೇಳು, ಬೇಗಏಳು, ನನ್ನ ಮಗನನ್ನು ಕೊಂದುದಕ್ಕಾಗಿ ನಿನ್ನನ್ನು ಕೊಲ್ಲುವೆನೆಂದು ಪೀಡಿಸುತ್ತಿರುವಲ್ಲಿ, ಈ ಮೂರು ಮಂದಿ ಮುದುಕರೂ, ಪ್ರಾಣಭಯದಿಂದ ದಿಗಿಲು ಬಿದ್ದು ನಡುಗುತ್ತಾ ದಿಕ್ಕಾಪಾಲಾಗಿ ಪೋಡಿ ಹೋದರು. ಅಷ್ಟರಲ್ಲಿಯೆ ಬೆಳಗಾದುದರಿಂದ ಷಹರಜೌದಿಯು ಕಥೆಯೆ ನ್ನುನಿಲ್ಲಿಸಿದಳು. ಸುಲ್ತಾನನು ಆ ಕಥೆಯೆನ್ನು ಪೂರ್ತಿಯಾಗಿ ಕೇಳು ವರೆಗೂ, ಅವಳನ್ನು ಕಡಿಯ ಕೂಡ ದೆಂದು ಅಪ್ಪಣೆ ಮಾಡಿದನು. ಸು ಲ್ತಾನನು ತನ್ನ ಮಗಳಾದ ಷಹರಜೌದಿಯೆನ್ನು ಕೊಲ್ಲುವಂತೆ ಆಜ್ಞಾಪಿಸ ದಿರುವುದನ್ನು ನೋಡಿ ಪ್ರಧಾನ ಮಂತ್ರಿಗೆ ಉಂಟಾದ ಸಂತೋಷವು ಇ ಷ್ಟೆಂದು ಹೇಳುವುದಕ್ಕೆ ಯಾರಿಗೂ ಶಕ್ತಿ ಸಾಲದಂತಿದ್ದಿತು. ಆತನ ಕುಟುಂಬದವರೂ, ಊರಿನ ಜನರೂ, ಸಭಿಕರೂ, ಈ ವಿಷಯವನ್ನು ಕುರಿತು ಮಹದಾಶ್ಚರ್ಯವನ್ನು ಹೊಂದಿದರು.

ನಾಲ್ಕನೇ ರಾತ್ರಿ ಕಥೆ.

ಎರಡನೆ ದಿನ ಕೆಂಚಳಗು ಪೂರ್ವದಿಕ್ಕಿನಲ್ಲಿ ತುಂಬು ತ್ತಿರುವ ಸಮಯೆದಲ್ಲಿ, ದಿನರಜೌದಿ ನಿದ್ರೆಯಿಂದೆದ್ದು ಅಕ್ಕ ! ನಿನಗೆ ನಿದ್ರೆತಿಳಿ ದಿದ್ದರೆ ನಿನ್ನೆ ಮುಗಿಸದೆ ಹಾಗೆಯೆ ಬಿಟ್ಟು ಹೋಗಿರುವ, ಕಥೆಯೆನ್ನು ಹೇಳು, ಎಂದು ಕೇಳಲು ಸುಲ್ತಾನನ ಅಪ್ಪಣೆಯೆನ್ನು ಹೊಂದಿ ಷಹರ ಜೌದಿಯು ಹೇಳ ತೊಡಗಿದಳು.

ಎಲೈ ರಾಜೇಂದ್ರನೇ ! ಆ ಭೂತವು ವರ್ತಕನನ್ನು ಹಿಡಿದು ಕೊಲ್ಲುತ್ತಿರುದನ್ನು ನೋಡಿ ಜಿಂಕೆಯೆನ್ನು ತಂದ ಮುದುಕನು ಅದರ ಕಾಲಿನ ಮೇಲೆ ಬಿದ್ದು ಮುತ್ತು ಇಟ್ಟು ಕೊಂಡು ಸ್ವಾಮಿ ಸ್ವಲ್ಪ ಹೊತ್ತು ನಿಮ್ಮ ಕೋಪವನ್ನಣಗಿಸಿ ನಾನು ಹೇಳುವ ಮಾತನ್ನು ಕೇಳು

ವುದಾದರೆ, ನನ್ನ ಮತ್ತು ಈ ಹೆಣ್ಣುಜಿಂಕೆಯ ಕಥೆಯನ್ನು, ನಿಮಗೆ ವಿಸ್ತಾರವಾಗಿ ಹೇಳುವೆ ನೆಂದು, ನುಡಿದನು. ಅದು ನೀವು ಕೊಲ್ಲಹೋಗುವ ವರ್ತಕನ ಕಥೆಗಿಂತಲೂ, ಹೆಚ್ಚಾಚ ಉತ್ಸಾಹವನ್ನು ಆಶ್ಚರ್ಯವನ್ನು ವುಂಟು ಮಾಡುವುದಾಗಿದ್ದರೆ ಈ ನಿರ್ಭಾಗ್ಯನಾದ ವರ್ತಕನ ಮೇಲೆ ಹೊರಿಸಿರುವ ತಪ್ಪಿತದಲ್ಲಿ ಮೂರರಲ್ಲೊಂದು ಭಾಗವನ್ನು ಮನ್ನಿಸಬೇಕು. ಎಂದು ಹೇಳಲು, ಆ ಭೂತವು ಸ್ವಲ್ಪ ಹೊತ್ತು ಯೋಚಿಸಿ ಒಳ್ಳೆಯದು, ಹಾಗೆ ಆಗಲಿ ಎಂದು ಹೇಳಿ ನುಮ್ಮನಿದ್ದಿತು.

ಒಂದನೇ ಮುದುಕನ ಕಥೆ.

ಆಗಮುಮುಕನು ಭೂತವನ್ನು ಕುರಿತು ಇನ್ನು ನನ್ನ ಕಥೆಯನ್ನು ಪ್ರಾರಂಭ ಮಾಡುವೆನು. ಸಾವಕಾಶ ಮನಸ್ಸಿನಾಗಿ ಕೇಳು. ನೀನು ನೋಡುತ್ತಿರುವ ಈ ಹೆಣ್ಣುಜಿಂಕೆಯು, ನನ್ನ ದೊಡ್ಡಪ್ಪನ ಮಗಳು, ಮತ್ತೇನು ಹೇಳ ಬೇಕು, ನನ್ನ ಪ್ರೀತಿಪಾತ್ರಳಾದ ಅಚ್ಚು ಮೆಚ್ಚಿದ ಹೆಂಡತಿ. (ಅರಬಿಯವರಾದ ಮುಸಲ್ಮಾನರು ಇಂತು ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳನ್ನು ಮದುವೆ ಮಾಡಿ ಕೊಳ್ಳುವ ವಾಡಿಕೆ ಯುಂಟು) ಇವಳನ್ನು ಮದುವೆ ಮಾಡಿ ಕೊಳ್ಳುವ ಕಾಲದಲ್ಲಿ ಇವಳಿಗೆ ಹನ್ನೆರಡು ವರುಷ. ಆದುದರಿಂದ ಇವಳು ನನ್ನನ್ನು ತಂದೆಯೆಂದೂ, ಗಂಡನೆಂದೂ, ಭಾವಿಸುತಾ ನಡೆದು ಕೊಳ್ಳ ಬೇಕಾದುದು ನ್ಯಾಯವೇ ಅಲ್ಲವೆ ? ಆಗಿನಿಂದಲೂ, ಇಪ್ಪತ್ತು ಸಂವತ್ಸರಗಳವರೆಗೂ ಸಂಸಾರವನ್ನು ನಡೆಸಿದರೂ, ಮಕ್ಕಳಾಗಲಿಲ್ಲ, ಆದರೂ, ಇವಳು ಬಂಜೆಯೆಂದು ಅಲಕ್ಷ್ಯ ಮಾಡದೆ, ಇವಳನ್ನು ಅತ್ಯಂತ ಪ್ರೇಮದಿಂದ ನೋಡಿ ಕೊಳ್ಳುತ್ತಿದ್ದೆನು. ಮಕ್ಕಳಾಗ ಬೇಕೆಂಬ ಅಪೇಕ್ಷೆಯಿಂದಲೆ, ಒಬ್ಬ ಗೌಡಿಯನ್ನು ಕೊಂಡೆನು. ಅವಳಲ್ಲಿನನಗೊಬ್ಬ ಕುಮಾರನು ಹುಟ್ಟಿದನು. ಅವನು ಬಹಳ ಬುದ್ಧಿವಂತನಾಗುವ ಮಟ್ಟಿಗಾದನು. ನನ್ನ ಹೆಂಡತಿ ಅಸೂಯೆಯಿಂದ ಆತಾಯಿ ಮಕ್ಕಳ ಮೇಲೆ ತುಂಬ ಕ್ರೂರವಂತಳಾಗಿ, ತನ್ನ ಕಾರ್ಯವನ್ನು ಕೊನೆ ಮುಟ್ಟಿಸಿ ಕೊಳ್ಳುವವರೆಗೂ ನನಗೆ ಆ ಸಂಗತಿಯನ್ನು ಚೆನ್ನಾಗಿ ತಿಳಿಯ ಹೇಳಲಿಲ್ಲ-ಇಪ್ಪತ್ತರಲ್ಲಿಯೇ ನನ್ನಮಗನು ಎಂಟುಹತ್ತು ವರುಷ ಪ್ರಾಯದವನಾದನು.

ಆ ಕಾಲದಲ್ಲಿ ನಾನು ಒಂದು ಕಾರ್ಯಾಂತರದಿಂದ ಪ್ರಯಾಣ ಹೊರ ಡಬೇಕಾಗಿ ಬಂದಿತು ಆಗ ನನ್ನ ಹಂಡತಿಯ ಮೇಲೆ ನನಗೆ ಯಾವ ವಿಧ ವಾದ ಕಳಂಕವೂ ತೋರದೆ ಹೋದುದರಿಂದ, ನಂಬಿಕೆಯು ಚೆನ್ನಾಗಿಯೇ ಇದ್ದಿತು. ಆದ್ದರಿಂದ ನನ್ನ ಗೌಡಿಯನ್ನು ಅವಳ ಮಗಳನ್ನು ನನ್ನ ಹೆಂಡತಿಯ ವಶದಲ್ಲಿ ಬಿಟ್ಟು ನಾನು ಬರುವವರೆಗೂ ಇವರಿಬ್ಬರನ್ನೂ ಜೋ ಕೆಯಾಗಿ ಪೋಷಿಸಿಕೊಂಡಿರೆಂದು ಹೇಳಿ ಹೊರಟುಹೋದವನು, ಒಂದು ಸಂವತ್ಸರವಾದರೂ ಹಿಂದಿರುಗಿಬರದೆ ಹೋದೆನು. ಇಷ್ಟರಲ್ಲಿಯೇ ಅವಳು ತನ್ನ ಹಗೆತನತೀರಿಸಿಕೊಳ್ಳಬೇಕೆಂದು ಮಂತ್ರ ವಿದ್ಯೆಯನ್ನು ಕಲಿಯಲಾ ರಂಭಿಸಿ ಅತ್ಯಂತ ಕ್ರೂರ ಸ್ವಭಾವದಿಂದ ನನ್ನ ಮಗುವನ್ನು ಒಂದಾನೊಂ ದು ನಿರ್ಮಾನುಷ ಪ್ರದೇಶಕ್ಕೆ ಕರೆದುಕೊಂಡು ಹೋಗಿ ತನ್ನ ಮಂತ್ರಬಲ ದಿಂದ ಒಂದು ಗಂಡು ಕರುವನ್ನಾಗಿ ಮಾಡಿ, ಅದನ್ನು ನನ್ನ ಆಳಿನ ವಶದಲ್ಲಿ ಕೊಟ್ಟು, ಚೆನ್ನಾದ ಈಕ್ಷೆಯಿಂದ ಬಿಳಿಯಿಸುವಂತೆ ಹೇಳಿದಳು. ಮತ್ತು ನಾನು ಬಂದಮೇಲೆ ಈಕರುವನ್ನು ಕೊಂಡುಕೊಂಡೆನೆಂದುಹೇಳಿ ಬಿಟ್ಟಳು. ಅಷ್ಟಕ್ಕೆ ತೃಪ್ತಿಯನ್ನುಹೊಂದದೆ ಆ ಮೂರ್ಖಳು ನನ್ನ ಗೌಡಿಯನ್ನ ತನ್ನ ಮಾಯೆಯಿಂದ ಒಂದು ಹಸುವನ್ನು ಮಾಡಿ ಅದನ್ನು ಜೀತಗಾರನ ವಶ ಕೊಟ್ಟಳು. ಬಳಿಕ ನಾನುಬಂದ ಮೇಲೆ ನನ್ನ ಗೌಡಿಯು ಮಾ, ಮಗನೂ ಏನಾದರೆಂದು ಕೇಳಿದೆನು. ಗೌಡಿಯು ಸತ್ತುಹೋದಳು, ನಿನ್ನ ಮಗನು ಏನಾದನೋ ನಾನುಕಾಣೆ ಎರೆಡು ಮೂರುತಿಂಗಳಿಂದ ಅವನಮುಖವನ್ನುಕೂ ಡನಾನು ನೋಡಲಿಲ್ಲವೆಂದು ಹೇಳಿದಳು. ಆದುದರಿಂದ ನಾನುಅವರನ್ನು ಕಾ ಣದೆ ತುಂಬ ವ್ಯಸನವನ್ನು ಹೊಂದಿದೆನು. ಅಲ್ಲದೆ ಈಗ ಕಾಣದೇಹೋ ದರೂ ಇನ್ನು ಕೊಂಚ ಕಾಲದ ಮೆಲಾದರೂ ಮಗನು ಬರ್ತವನೆಂದು ತಿಳಿ ದುಕೊಂಡಿದ್ದೆನು. ಹೀಗೆ ಎಂಟು ತಿಂಗಳು ಕಳೆದುಹೋದರೂ ಅವನು ಬ ರಲೇ ಇಲ್ಲ ದೊಡ್ಡ ಬೈರಾವಿಂಬ ಹಬ್ಬವೊಂದು ಬರಲಾಗಿ ಆ ಹಬ್ಬ ಕ್ಕಾಗಿ ಬಲಿಗೊಟ್ಟು, ಊಟ ಮಾಡುವುದಕ್ಕೆ ಕೊಬ್ಬಿ ಹೋಗಿರುವ ಒಂ ದಾನೊಂದು ಹಸುವನ್ನು ತೆಗೆದುಕೊಂಡು ಬರುವಂತೆ ನನ್ನ ಜೀತಗಾರನಿಗೆ ಹೇಳಿ ಕಳುಹಿಸಿದೆನು. ಆತನು ಒಂದು ಹಸುವನ್ನು ತಂದನು. ಆ ಹಸು ವೇ ನನ್ನ ಮಗನನ್ನು ಹಿತ್ತ ನಿರ್ಭಾಗ್ಯಳಾದ ಗೌಡಿ. ಬಳಿಕ ಅದನ್ನು ನಾನುಕಟ್ಟಿಕೊಳ್ಳಹೋಗುವ ಕಾಲದಲ್ಲಿ ಅದುಅತ್ಯಂತ ವಿನಯೆದಿಂದಕೂಡಿದ

ಭಕ್ತಿಯುಳ್ಳದಾಗಿ ಕಣ್ಣಿನಲ್ಲಿ ನೀರನ್ನು ಸುರಿಸುತ್ತಿರುವುದನ್ನು ನೋಡಿ ಕನಿಕರಚಿತ್ತನಾಗಿ ಅದನ್ನು ಕೊಲ್ಲಿಸುವುದಕ್ಕೆ ಮನಸ್ಸು ಬಾರದೆ, ಮತೊಂದನ್ನು ತೆಗೆದುಕೊಂಡುಬರುವಂತೆ, ನನ್ನ ಜೀತಗಾರನಿಗೆ ಹೇಳಿದೆನು. ಆ ಕಾಲದಲ್ಲಿ ನನ್ನ ಒಳಯಲ್ಲಿದ್ದ ಹೆಂಡತಿಯು ಇದೆಲ್ಲವನ್ನು ನೋಡಿ ತನ್ನ ಹೊಟ್ಟೆಯುರಿಯು ತೀರುವುದಕ್ಕೆ ವಿಘ್ನ ಬಂದಿತಲ್ಲಾ ! ಎಂದು ತಿಳಿದು ನನ್ನ ಮೇಲೆ ತುಂಬಾ ಕೋಪವಾಡಿ ಗಂಡನೇ ! ಇದೇನು ನಿನ್ನ ಹೆಸ್ತನ ಈ ಹಸುವನ್ನು ಕೊಲ್ಲದೆ ಏಕೆ ಬಿಟ್ಟೆ ಆಹಾ ! ನಿನ್ನ ಕರುಣವನ್ನು ಏನೆಂದು ಹೇಳಲಿ. ಇದಕ್ಕಿಂತಲೂ ಉತ್ತಮವಾಗಿ ಈ ಹಬ್ಬಕ್ಕೆ ಉಪಯೋಗಿಸುವ ಹಸುವು, ನಮ್ಮ ಜೀತಗಾರನ ಬಳಿ ಮತ್ತಾವುದೂ, ಇಲ್ಲ. ನಿನ್ನ ಮೂರ್ಖತನವನ್ನು ಬಿಟ್ಟು, ಅದನ್ನು ಕಡಿದು ಹಾಕು ! ಎಂದು ಕೂಗಿ ಕೊಂಡಳು. ನನ್ನ ಹೆಂಡತಿಯ ದಾಕ್ಷಿಣ್ಯಕ್ಕಾಗಿ ಆ ಹಸುವಿನ ಮೇಲೆ ನನಗುಂಟಾದ ಕನಿಕರವನ್ನು ಮರೆತು ಬಿಟ್ಟು ಆ ಹಸುವನ್ನು ಕೊಲ್ಲುವುದಕ್ಕೆ ಒಪ್ಪಿಕೊಂಡನು. ಆಗ ಅದು ನೊವಲಿಗಿಂತಲೂ ಹೆಚ್ಚಾಗಿ ಸಂಕಟಪಡುತ್ತಾ, ಕಣ್ಣೀರಿನ ಕಾಲುವೆಯನ್ನು ಪರಿಸುತ್ತಿರುವುದನ್ನು ಕಂಡು ನನ್ನ ಕೈಗತ್ತಿಯು ಜಾರಿ ಹೋಯಿತು. ಅಲ್ಲಿದೆ ಮನಸ್ಸೂ ಕೂಡ ತುಂಬ ಕರಗುತಲಿತ್ತು. ಆದುದರಿಂದ ಜೀತಗಾರನನ್ನು ಕರೆದು ನಾನು ಈ ಹಸುವನ್ನು ಕೊಲ್ಲಲಾರೆನು. ನೀನು ಇದನ್ನು ಕೊಂದು ಹಾಕೆಂದು ಹೇಳಿದೆನು. ಅವನು ನಿರ್ಧಯಾವಂತನಾಗಿ ಅದನ್ನು ಕೊಂದು ಸೀಳಿ ನೋಡುವಲ್ಲಿ ಮೇಲ್ಗಡೆ ಎಷ್ಟು ರಮ್ಯವಾಗಿ ಕೊಬ್ಬಿದಂತೆ ಕಾಣುತಲಿದ್ದಿತೋ ಅಷ್ಟೊಂದು ಮೂಳೆಗಳಿದ್ದಿತೇ ವಿನಃ ಮತ್ತೇನೂ ಇರಲಿಲ್ಲ:—

ಬಳಿಕ ನಾನು ಅದನ್ನು ಜೀತಗಾರನಿಗೆ ಕೊಟ್ಟು, ನೀನೆಯಾದರೂ, ತಿಂದುಕೊ, ಇಲ್ಲವೆ ಬಿಕ್ಷಗಾರರಿಗಾದರೂ, ಕೊಟ್ಟು ಬಿಡು, ನಿನ್ನಿಷ್ಟಬಂದಂತೆ ಮತ್ತೇನ್ನನ್ನಾದರೂ ಮಾಡಿಕೊ, ನಿನ್ನ ಬಳಯಲ್ಲಿ ಮತೊಂದು ಕೊಬ್ಬಿದ ಕರುವುಂಟಲ್ಲಾ ಅದನ್ನು ಇದಕ್ಕೆ ಬದಲಾಗಿ ತೆಗೆದು ಕೊಂಡು ಬಾರೆಂದು ಹೇಳಿದನು. ಆ ಹಸುವನ್ನು ಆತನು ತೆಗೆದು ಕೊಂಡು ಹೋಗಿ ಏನು ಮಾಡಿದನೋ ನನಗೆ ತಿಳಯಲಿಲ್ಲ. ಆದರೆ ಕೂಡಲೆ ಮತೊಂದು ಕೊಬ್ಬಿದ ಬಂದುಕರುವನ್ನು ತಂದುನಿಲ್ಲಿಸಿದನು. ಆಕರು

ವೀನನ್ನು ಕುಮಾರನೆಂದು ನನಗೆ ತಿಳಿಯದಿದ್ದರೂ, ಅದನ್ನು ನೋಡುತ್ತಲೀನನಗೆ ಪಶ್ಚಾತ್ತಾಪ ಪುಂಟಾಯ್ತು. ಆಕರುವಾವನೋ ನನ್ನನ್ನು ನೋಡಿದಕೂಡಲೆ ಬಾಲವನ್ನು ಅಲ್ಲಾಡಿಸುತ್ತಾ ನನ್ನ ಹತ್ತರಕ್ಕೆ ಅಡ್ಡವಾಗಿ ನಮಸ್ಕರಿಸುವಂತೆ ಮಲಗಿಕೊಂಡು, ನನ್ನ ಪ್ರಾಣವನ್ನು ಉಳಿಸೆಂದೂ ನಾನೇ ನಿನ್ನ ಮಗನೆಂದು ಹೇಳುವಂತೆ, ನಾನಾವಿಧವಾವ ಸನ್ನೆಗಳಿಂದತೋರಿಸುತ್ತಾ, ನನ್ನ ಮೇಲೆ ಬಂದು ನನ್ನ ವೈಯೆನ್ನು ನೆಕ್ಕುತ್ತಾ ಮೂಗಿನಿಂದ ಮೂಸಿನೋಡಿ ತನ್ನ ಕೈಲಾದ ಸಾಹವಾಸವನ್ನೆಲ್ಲಾ ಮಾಡಿತು. ಆಗಲಾದರೋ ಮೊದಲಿನಹಸುವು ನನ್ನನ್ನು ನೋಡಿ ಕಣ್ಣೀರನ್ನು ಸುರಿಸಿದ ಕಾಲದಲ್ಲಿ ಎಷ್ಟು ಕನಿಕರ ಪಟ್ಟನೋ ಈಗ ಅದಕ್ಕಿಂತ ಹೆಚ್ಚಾಗಿಯೇವ್ಯಸನವನ್ನು ಹೊಂದಿದೆನು. ನನಗೆ ಮನಃ ಪೂರ್ವಕವಾಗಿಉಂಟಾದ ಪಶ್ಚಾತ್ತಾಪದಿಂದ ಅವರ ಮೇಲೆ ದಯೆ ಯುಂಟಾಯಿತು. ಅಥವಾ ಶರೀರ ಸಂಬಂಧನಾದ ಸಹಜಧರ್ಮದಿಂದ ಕರುಣ ಪುಂಟಾಯೊ್ತೀ ಅದನ್ನು ಹೇಳಲಾರೆನು. ಆಪದವಿಂದ ಜೀತಗಾರನನ್ನು ಕರೆದು ಇದನ್ನು ಬೇಗ ಮನೆಗೆ ತೆಗೆದು ಕೊಂಡು ಹೋಗಿ ಜಾಗ್ರತೆಯಿಂದ ಸಾಕುತ್ತಿರು. ಇದಕ್ಕೆ ಬದಲಾಗಿ ಮತೊ್ತಂದು ಕರುವನ್ನು ತೆಗೆದುಕೊಂಡು ಬಾರೆಂದು ಹೇಳಿದೆನು. ನಾನು ಹೀಗೆ ಹೇಳಿದುವನ್ನು ಕೇಳಿ ನನ್ನ ಹೆಂಡತಿಯು ಎಲೈ ಗಂಡನೇ, ನೀನೇನು ಮೂಢಕಾರ್ಯವನ್ನು ಮಾಡುತ್ತಿರೀಯೆ ! ಆಕರುವನ್ನು ಈದಿನ ಬಲಿಗೊಡ ಬೇಕೆಂದು ಕೂಗಿ ಕೊಂಡಳು. ಅದಕ್ಕೆ ನಾನು ಈಕರುವನ್ನು ಉಳಿಸಿ ಕೊಳ್ಳುವೆನೆನೇ ಹೊರತು ಎಂದಿಗೂ ಕೊಲ್ಲುವುದಿಲ್ಲ. ನೀನು ಬದಲು ಮಾತನಾಡ ಬೇಡವೆಂದು ಹೇಳಿದೆನು. ಅದನ್ನು ಕೇಳಿ ಆಗಯೊ್ಯಳಿಯು, ನನ್ನ ತಾತ್ಪರ್ಯವನ್ನರಿಯದೆ ಅದನ್ನು ನಾನು ಕಾಪಾಡುವುದಕ್ಕೆ ಸನ್ನತಿಸಿವಷ್ಟು ದ್ವೇಷವು ತನಗೆ ಉಂಟೆಂಬುದನ್ನು ತೋರ್ಪಡಿಸಿ ಕೊಂಡಳು. ಆದುದರಿಂದ ನಾನು ಅದನ್ನು ಕೊಲ್ಲುವುದಕ್ಕೆ ಕತ್ತಿಯನ್ನು ತೆಗೆದು ಕೊಂಡೆ ನೆಂದು ಹೇಳಿದನು. ಅಷ್ಟರಲ್ಲಿಯೇ ಜಿಳಗಾಗಲು ಷಹರಜಾವಿ ಕಥೆಯನ್ನು ನಿಲ್ಲಿಸಿದಳು. ದಿನರಜಾದಿಯು ಅಕ್ಕಾ ಈಕಥೆಯು ಅತ್ಯಂತ ಮನೋಹರವಾಗಿರುವುದರಿಂದ ಸ್ಫೂರ್ತಿಯಾಗಿ ಕೇಳಬೇಕೆಂಬ ಅಭಿಲಾಷೆಯು ನನ್ನನ್ನು ಬಾಧಿಸುತ್ತಿರುವುದೆಂದು ನುಡಿಯಲು, ಸುಲ್ತಾನನು ಆವಾತನ್ನು ಕೇಳುತ್ತಿರುವಾಗ ತುಗೀ ಈದಿನ ಸುಲ್ತಾ

ನನು ನನ್ನ ಪ್ರಾಣವನ್ನು ಉಳಿಸಿದುದೇ ಆದರೆ, ನಾಳೆ ಇದನ್ನು ಪೂರ್ತಿ ಮಾಡುವೆನು. ಇದಕ್ಕಿಂತಲೂ ವಿನೋದಕರಂಗಳಾದ ಅನೇಕ ಕಥೆಗಳುಂಟೆಂದು ಹೇಳಿದಳು. ಆಜಿಂಕೆಯನ್ನು ತಂದ ಮುದುಕನ ಮಗನು ಮುಂದೆ ಏನಾಗುವನೋ ನೋಡ ಬೇಕೆಂಬ ಕುತೂಹಲದಿಂದ ನಾಳೆರಾತಿ ಈಕಥೆಯನ್ನು ಕೇಳಿ ಸಂತೋಷಿಸ ಬೇಕೆಂದು ಸುಲ್ತಾನನು ಹೇಳಿದನು.

ಐದನೇ ರಾತ್ರಿ ಕಥೆ.

ಮರುದಿನ ಬೆಳಗಿನ ಜಾವದಲ್ಲಿ ದಿನರಜಾದಿ ತನ್ನ ಅಕ್ಕನನ್ನು ಕುರಿತು ಪ್ರಶ್ನೆಮಾಡಲು ನಿದ್ರೆಯಿಂದೆಚ್ಚ್ತ್ತು ಸುಲ್ತಾನರ ಅಪ್ಪಣೆಯೆನ್ನು ಕೇಳಿ ಅವರು ಕಥೆ ಕೇಳಬೇಕೆಂಬ ಆಶೆಯಿಂದ ಸಮ್ಮತಿಸಲು ಅವರನ್ನು ಸಾವಧಾನವಾಗಿ ಕೇಳಬೇಕೆಂದು ಬೇಡಿಕೊಂಡು ಷಹರಜಾದಿಯು ಆ ಭೂತವು ವರ್ತಕನೂ ಹೆಣ್ಣು ಜಿಂಕೆಯನ್ನು ತಂದ ಮುದುಕನು ಇವರುಗಳ ಸಂಭಾಷಣೆಯಲ್ಲಿ ಜಿಂಕೆಯನ್ನು ತಂದವನ ಕಥೆಯನ್ನು ಮುಂದೆ ಸಾಗಹೇಳುವುದಕ್ಕೆ ತೊಡಗಿದಳು.

ಹೇಗೆಂದರೆ, ನಾನುಕರುವನ್ನುಕೊಲ್ಲುವುದಕ್ಕೆ ಕತ್ತಿಯೆನ್ನುತೆಗೆದುಕೊಂಡೆನು. ಆಗ ನನಗೆ ಮೊದಲಿಗಿಂತಲೂ ಕನಿಕರವು ಹೆಚ್ಚ್ಚಾಗಿ ಕತ್ತಿಯುಕೈಯ್ಯಿಂದ ಜಾರಿಹೋಯಿತು. ಎಷ್ಟು ಮಾತ್ರಕ್ಕೂ ನಾನು ಅದನ್ನು ಕೊಲ್ಲಲಾರದೆ ಹೋದೆನು. ಆಕರುವು ನನ್ನನ್ನು ನೋಡಿ ಮುಹತಾ್ತದ ವ್ಯಸನದಿಂದ ಕಣ್ಣೀರನ್ನು ಸುರಿಸುತಾ್ತ ಇದ್ದಿತು. ಇದನ್ನು ನೋಡಿ ನನ್ನ ಹೆಂಡತಿಯು ತುಂಬ ಕೃದ್ಧಳಾಗಿ ಜಗಳಕ್ಕೆ ಹತ್ತಿದಳು. ಅವಳನ್ನು ನೋಡಿ ಖಂಡಿತವಾಗಿಯೂ ನಾನಿದನ್ನು ಕೊಲ್ಲಲಾರೆನು ನಿನಗೆ ಬೇಕಾಗಿದ್ದರೆ ಬೇರೆ ಕರುವನ್ನು ತರಿಸು. ಬೇಕಾದರೆ ಇನ್ನೊಂದು ಹಬ್ಬಕ್ಕೆ ಇದನ್ನು ಬಲಿಗೊಡೋಣವೆಂದು, ಸಮಾಧಾನ ಮಾಡಿದೆನು. ಮರುದಿನ ಜೀತಗಾರನು ನನ್ನ ಬಳಿಗೆ ಬಂದು ರಹಸ್ಯವಾಗಿ ಮಾತನಾಡ ಬೇಕೆಂದು ಹೇಳಿ, ಸ್ವಾಮಿ ! ನಿಮಗೆ ನಾನೊಂದು ವಿಷಯವನ್ನು ಹೇಳಬೇಕೆಂದು ಬಂದಿರುವೆನು. ಅದನ್ನು ನಿಮಗೆ ತಿಳಿಯಹೇಳಿದರೆ ನೀವು ನನ್ನನ್ನು ತುಂಬ ಗೌರವಿಸುವಿರಿ ! ಏಕೆಂದರೆ ನಿನ್ನೆ ದಿನ ನೀವು ನನ್ನ ಬಳಿಗೆ ಕೊಟ್ಟ ಕರುವನ್ನು ಮನೆಗೆ ತೆಗೆದು ಕೊಂಡು ಹೋ

ದೆನು. ಅದನ್ನು ನೋಡಿ ಮುಂತ್ರ ವಿದ್ಯಾ ಸಾರಂಗತಳಾದ ನನ್ನಮಗಳು ವೊದಲು ನಕ್ಕು ಕೂಡಲೆ ಗಟ್ಟಿಯಾಗಿ ಅಳುವುದಕ್ಕೆ ವೊದಲು ಮಾಡಿ ದಳು. ಹೀಗಾಗುವುದಕ್ಕೆ ಕಾರಣವೇನೆಂದು ನಾನು ಅವಳನ್ನು ಸಮಾಧಾನ ಪಡಿಸಿಕೇಳಲು, ಅಯ್ಯೋ ! ತಂದೆಯಿಂದ ಕೊಲೆಯನ್ನು ತಪ್ಪಿಸಿಕೊಂ ಡುಬಂದಿರುವ ಈ ಕರುವಿನ ಸಾಹಸವನ್ನು ನೋಡಿ ನಕ್ಕೆನು. ಇದಕ್ಕೆ ಮುಂಚೆ ಕೊಲೆಗೊಂಡು ಸತ್ತು ಹೋದ ಇದರ ತಾಯಿಯನ್ನು ನೆನಸಿ ಕೊಂಡು ಅತ್ತೆನು. ಇನಬಿಬ್ಬರೂ, ನಮ್ಮ ಯಜಮಾನನ ಗೌಡಿ, ಮತ್ತು ಮಗ, ಯಜಮಾನನ ಪೆಂಡತಿಯು ಇವರ ಮೇಲಿನ ದ್ವೇಷ ದಿಂದ ತನ್ನ ಮಂತ್ರವನ್ನು ಪ್ರಯೋಗಿಸಿ ಹೀಗೆ ಮಾಡಿರುವಳೆಂದು ಹೇಳಿ ದಳು. ಇದ್ದ ಸಂಗತಿಯನ್ನು ತಮಗೆ ತಿಳಿಸಿರುವೆನು. ಇದರಿಂದ ಸತ್ಯ ಹಸುವು ತಮ್ಮ ಪೆಂಡತಿಯೆಂದೂ, ಕರುವು ಮಗನೆಂದೂ, ತೋರುವುದೆಂದು ಹೇಳಿದನು. ಎಲ್ಲಿ ಶೂರನಾದ ರಾಕ್ಷಸನೇ ಈ ವಿಷಯವನ್ನು ಕೇಳಿದ ಕೂಡಲೆ ನನಗೆಷ್ಟು ಆಶ್ಚರ್ಯವುಂಟಾಗಿರ ಬಹುದು ! ನಾನು ಆಜೀತಗಾ ರನ ಮಗಳ ಕೂಡ ಮಾತನಾಡ ಬೇಕೆಂದು. ಅವನ ಮನೆಗೆ ಹೊಗಿ, ಕೊಟ್ಟಿಗೆಯಲ್ಲಿರುವ ಕರುವನ್ನು ನೋಡದಿಂದ ಆಲಿಂಗಿಸಿ ಕೊಂಡೆನು. ಅದಕ್ಕೆ ಆಕರು ಪ್ರತಿಯಾಗಿ ಯಾವತೊಂದರೆಯನ್ನು ಮಾಡದೆ ತನ್ನತಂದೆ ಯುತನ್ನನ್ನು ತಿಳಿದು ಕೊಂಡನೆಂದು, ತಾನು ಯೋಚಿಸುವಂತೆ ನನ್ನ ಆ ಲಿಂಗನವನ್ನು ಅಂಗೀ ಕರಿಸಿ ಕೊಂಡಿತು. ಅಷ್ಟರಲ್ಲಿಗೇ ಅವನ ಮಗಳು ಅಲ್ಲಿಗೆ ಬಂದಳು. ನಾನುಅವಳನ್ನು ನೋಡಿ ಎಲ್ಲಿ ಮುದ್ದಿನ ಮಗಳೇ ನೀನು ನನ್ನ ಮಗನನ್ನು ವೊದಲಿನಂತೆ ಮನುಷ್ಯನನ್ನಾಗಿ ಮಾಡಬ ಲ್ಲೆಯಾ ? ಎಂದು ಕೇಳಿದೆನು. ಆಕೆಯು ನೀವು ಹೇಳಿದರೆ ನಾನು ಮಾಡು ತ್ತೇನೆ. ಅದೆಷ್ಟರ ಕೆಲಸ. ಆದರೆ ನಾನು ಹೇಳುವ ಎರಡು ಕೆಲಸಗ ಳನ್ನು ಮಾತ್ರ ಖಂಡಿತವಾಗಿ ನೀವು ಮಾಡುವುದಾದರೆ, ನಾನು ನಿಮ್ಮ ಮಗನನ್ನು ವೊಪಲಿನಂತೆ ಮಾಡುತ್ತೇನೆ. ಏನಂದರೆ ಈ ಮಗನನ್ನು ನನಗೆ ಕೊಟ್ಟು ಮದುವೆ ಮಾಡಿ ಕೊಡಬೇಕು ! ಇನನಿಗ ಹೀಗೆ ದ್ರೋಹ ವನ್ನು ಮಾಡಿದವರನ್ನು ಕೊಲ್ಲ ಬೇಕು ಎಂದು ನುಡಿದಳು. ಯಜಮಾ ನನು ನೀನುವೊದಲು ಹೇಳಿದುದನ್ನು ನಾನುಒಪ್ಪಿ ಕೊಂಡೆನು. ಇಷ್ಟ ಯೆಲ್ಲ ನಿನಗೆ ಪ್ರತ್ಯೇಕವಾಗಿ ಬೇಕಾದಷ್ಟು ಐಶ್ವರ್ಯವನ್ನು ಕೊಡು

ವೆನು. ಅಲ್ಲದೆ ನನ್ನ ಸರ್ವಸ್ವಕ್ಕೂ ನೀನೆ ಯಜಮಾನಿಯಾಗುವೆ, ಎಂದು ಹೇಳಲು, ಅವಳು ಕಿರುನಗೆಯನ್ನು ಬೀರುತಾ ತಾವು ನಮಗೆ ಯಜಮಾನರಾದುದರಿಂದ ನಾವುಗಳು ನಿಮ್ಮ ಆಜ್ಞೆಗೆ ಒಳಪಡ ಬೇಕೆಂದು ನುಡಿದಳು. ಯಜಮಾನನಾದರೊ, ನೀನು ನನಗೆ ಮಾಡುವ ಉಪಕಾರಕ್ಕೆ ಎಷ್ಟರ ಮಟ್ಟಿಗೆ ನಾನು ಕೃತಜ್ಞನಾಗಿರ ಬೇಕೋ ಅದಕ್ಕಿಂತಲೂಹೆಚ್ಚಾಗಿಯೇ, ಇರುವೆನು.' ಇದನ್ನು ಉತ್ತರೋತ್ತರ ನೋಡುವೆಯೆಂತೆ ! ನನ್ನ ಹೆಂಡತಿಯನ್ನು ನಿನ್ನ ವಶಕ್ಕೆ ತಂದೊಪ್ಪಿಸುವೆನು. ಅವಳನ್ನು ಪ್ರಾಣದಿಂದ ಕಾಪಾಡಿ ಯಾವಶಿಕ್ಷೆಯನ್ನಾದರೂ, ಕೊಡಬಹುದೆಂದು, ಹೇಳಿದೆನು. ಆದರೆ ನಾನು ಅವಳ ಪ್ರಾಣವನ್ನು ತೆಗೆಯುವುದಿಲ್ಲ. ಈಗ ನಿನ್ನ ಮಗನಿರುವ ಸ್ಥಿತಿಯನ್ನೆ ಅವಳಿಗೆ ತಂದೊಡ್ಡುವೆನೆಂದು ಹೇಳಿ, ನಿನ್ನಮಗನನ್ನು ಮುಂಚಿನಂತೆಮಾಡುತ್ತೇನೆ ನೋಡೆಂದು ನುಡಿದು, ಒಂದು ಪಾತ್ರೆಯೆತುಂಬ ನೀರನ್ನು ತುಂಬಿಕೊಂಡು ಬಂದು, ಆಕರುವಿನ ಬಳಿಯಲ್ಲಿ ಕುಳಿತು, ನನಗೆ ಗೊತ್ತಾಗದಿರುವ ಏನೋ ಕೆಲವು ಮಾತುಗಳನ್ನಾಡುತಾ ಅಭಿಮಂತ್ರಿಸಿ ಎಲೈ ಕರುವೆ ನೀನು ಮೊದಲು ಮನುಷ್ಯನಾಗಿದ್ದು ಈಗ ಮಂತ್ರಶಕ್ತಿಯಿಂದ ಹೀಗೆ ಕರುವಾಗಿರುವೆ, ಆದುದರಿಂದ ಭಗವಂತನ ಸೃಷ್ಟಿಯಲ್ಲಿ ಹೇಗೆ ಮನುಷ್ಯನಾಗಿ ಬಂದೆಯೋ ಹಾಗೆಯೆ ಹೊರಟು ಬಾ ಎಂದು, ಆಮಂತ್ರೋದಕವನ್ನು ಅದರ ಮೇಲೆ ಚಿಮುಕಿಸಲು, ಆಕ್ಷಣವೇ ಹುಡುಗನು ಎದ್ದು ನಿಂತನು.

ಆಗ ಅವನನ್ನು ನೋಡಿ ಮಗನೇ ! ಮುದ್ದಿನ ಕಂದನೇ ! ಮೋಹದ ಬೀಜವೇ ! ಸಾಹಸವಂತನೇ ! ಸುಗುಣಶಾಲಿಯೇ ಎಂದು ನಾನಾವಿಧದಿಂದ ಹೊಗಳಿ ಅವನನ್ನು ಆಲಿಂಗಿಸಿಕೊಂಡೆನು. ಆ ಬಳಿಕ ನಾನೇನು ಮಾಡಿದೆನೋ ನನಗೆ ತಿಳಿಯದು, ಸ್ವಲ್ಪ ಹೊತ್ತಾದಮೇಲೆ ಅವನನ್ನು ಕುರಿತು ನಿನಗೆ ಪ್ರಾಪ್ತವಾದ ಭಯಂಕರವಾದ ರೂಪವನ್ನು ಹೋಗಲಾಡಿಸಿ ನಿನಗೂ ನಿನ್ನ ತಾಯಿಗೂ ಮಹದಾನಂದವನ್ನುಂಟುಮಾಡುವುದಕ್ಕೆ ಜಗದೀಶನು ಈ ಹುಡುಗಿಯನ್ನು ನಮ್ಮ ಬಳಿಗೆ ಕಳುಹಿಸಿದನು. ನಾನು ಮಾಡಿರುವಂತೆ, ನಿನಗೆ ಸ್ವಸ್ವರೂಪವನ್ನುಂಟುಮಾಡಿರುವ, ಈ ಹುಡುಗಿಯನ್ನು ನೀನು ಮದುವೆಯಾಗೆಂದು ಹೇಳಲು, ಮಗನು ತಂದೆಗೆ ಸಂತೋಷದಿಂದ ನಮಸ್ಕರಿಸಿನನ್ನ ಇಷ್ಟನುಸಾರವಾಗಿ

ಆ ಹುಡುಗಿಯನ್ನ ಮದುವೆಯಾದನು. ಬಳಿಕ ಆ ಹು ಡು ಗಿ ಯು ನನ್ನ ಹೆಂಡತಿಯನ್ನು ಪೆಣ್ಣುಜಿಂಕೆಯಾಗಿ ಮಾಡಿದಳು. ಇದಕ್ಕಿಂತ ಲೂ ವಿಕಾರವಾದರೂಬಾದರೆ ಮನೆಯಲ್ಲಿಟ್ಟುಕೊಳ್ಳುವುದಕ್ಕಾಗುವುದಿಲ್ಲ. ಎಂದು ಜಿಂಕೆಯಾಗಿಯೇ ಮಾಡಿಕೊಡುವಂತೆ ಬೇಡಿಕೊಂಡೆನು. ಆ ಮೇ ಲೆ ನನ್ನ ಮಗನು ಹೆಂಡತಿಯನ್ನು ಕಳೆದುಕೊಂಡು ಆ ವ್ಯಸನದಿಂದ ದೇ ಶಾಂತರವನ್ನು ಹೊಂದಿ ಎಲ್ಲಿಯೋ ಹೊರಟು ಹೋದನು. ಆತನ ಚರಿ ತ್ರೆಯನ್ನು ಕೇಳಿ ಬಹುದಿವಸಗಳಿಂದಲೂ ನಾನಾದೇಶಗಳಲ್ಲಿ ಹುಡುಕು ತಾ ಇಲ್ಲಿಗೆಬಂದೆನು. ನಾನು ಮತ್ತೆ ಊರನ್ನು ಸೇರುವವರೆಗೂ ನಂ ಬಿ ಯಾರ ಬಳಿಯಲ್ಲೂ ನನ್ನ ಹೆಂತಿಯನ್ನು ಬಿಡಬೆ ಅವಳನ್ನು ನನ್ನ ಜೊತೆಯಲ್ಲಿಯೇ, ಇಟ್ಟುಕೊಂಡಿರಬೇಕೆಂದು, ಸಂಗಡಲೇ ಕರೆದುಕೊಂ ಡು ಬಂದಿರುವೆನು. ಈ ಪೆಣ್ಣು ಜಿಂಕೆಯು ಮತ್ತು ಅದನ್ನು ತಂದಿರು ವ ನನ್ನ ಕಥೆಯು ಇಷ್ಟೆ ? ಇದೆಷ್ಟು ಅದ್ಭುತವಾಗಿದೆ. ಆದುದರಿಂದ ಈ ವರ್ತಕನು ಅಪರಾಧದಲ್ಲಿ ಮೂರರಲ್ಲೊಂದು ಭಾಗವನ್ನು ಬಿಟ್ಟು ಬಿಡಬೇಕೆಂದು ಕೇಳಿಕೊಂಡನು. ಅದನ್ನು ನೋಡಿ ಎರಡು ನಾಯಿಗಳ ನ್ನು ತಂದ ಮುದುಕನು ಸಾ ವಿಮಾ ! ರಾಕ್ಷಸಾಗ್ರಗಣ್ಯರೇ ! ನೀವು ನೋ ಡುತ್ತಿರುವಂತೆಯೇ ನನಗೂ ಎರಡು ನಾಯಿಗಳುಂಟು ಇವುಗಳ ಕಥೆಯು ನೀವು ಕೇಳಿದ ಕಥೆಗಿಂತಲೂ ಬಹಳ್ಳ ವಿನೋದಕರವಾಗಿರುವುದು. ತಾವು ದಯವಿಟ್ಟು ಆ ಕಥೆಯನ್ನು ಕೇಳಿ ಈ ವರ್ತಕನ ಅಪರಾಧದಲ್ಲಿ ಮೂರ ರಲ್ಲೊಂದು ಭಾಗವನ್ನು ಪುನಹ ಮನ್ನಿಸಿ ಬಿಡಬೇಕೆಂದು ಕೇಳಲು, ರಾ ಕ್ಷಸನು ಈಕಥೆಯು ಇನ್ನೂ ವಿನೋದಕರವಾಗಿರಬಹುದೆಂದು ಯೋಚಿಸಿ, ಹಾಗೆಯೆ ಆಗಲೆಂದು ಹೇಳಿದನು. ಮುದುಕನು ಕಥೆಯನ್ನು ಹೇಳಲುಪ ಕ್ರಮಿಸಿದನು. ಅಷ್ಟರಲ್ಲಿಯೇ ಬೆಳಗಾದುದರಿಂದ ಷಹರಜಾದಿಯು, ಕಥೆಯನ್ನು ನಿಲ್ಲಿಸಿದಳು. ದಿನರಜಾದಿಯು, ಆಹಾ ! ದೈವವಾಯವೇ ದೊಡ್ಡದು ಎಂದು ಹೇಳುತಾ, ಅಕ್ಕಾ ! ಈ ಕಥೆಯು ಬಹು ರಸವ ತಾದುದಾಗಿದೆ. ಎಂದು ಹೇಳಲು, ಷಹರಜಾದಿಯು ತಂಗಿ, ಸುಲಾ ನರು, ಕರುಣಿಸಿದ ನನ್ನ ಪ್ರಾಣವನ್ನು ಉಳಿಸಿದರೆ, ಇದಕ್ಕಿಂತಲೂ, ಅತಿಶಯವಾದ ಕಥೆಯನ್ನು ಈ ದಿನ ಹೇಳುವೆನೆಂದು ಹೇಳಿದುದನ್ನು ಕೇಳಿ

ಷಹರಿಯರನು, ಯಾವವಾತನ್ನೂ ಆಡದೆ, ಹೊರಟುಹೋಗಿ ತನ್ನಕಾರ್ಯದಲ್ಲಿ ನಿರತನಾಗಿದ್ದನು.

೬ ನೆಯ ರಾತ್ರಿ ಕಥೆ.

ಮರುದಿನ ರಾತ್ರಿಯಾಗುತ್ತಲೆ ಸುಲಾತ್ತನನು, ಅವನ ಹೆಂಡತಿಯೂ, ಸುಖನಿದ್ರೆಯನ್ನು ಹೊಂದಿ ಮಲಗಿದರು. ದಿನರಜಾದಿಯು, ಎಂದಿನಂತೆ ಬೆಳಗಿನಜಾವಕ್ಕೆದ್ದು ಎಲೌ ಪ್ರಿಯ ಜ್ಯೋಷ್ಣಳೇ! ನಿನಗೆ ನಿದ್ರಾಬರದಿದ್ದರೆ ನನ್ನಮನಸ್ಸನ್ನು ತೃಪ್ತಿಯಾಗುವಂತೆ ಒಂದು ಕಥೆಯನ್ನು ಹೇಳೆನಲು, ಸುಲಾತ್ತನನುಕೂಡ, ಎರಡನಾಯಿಗಳನ್ನುತಂದ ಮುದುಕನ ಕಥೆಯನ್ನು ಕೇಳಜೀಕೆಂಬ, ಆಸೆಯಿಂದ ಪ್ರಶ್ನೆ ಮಾಡಿದನು. ಲಿಗಷಹರಜಾದಿಯು, ಸಂತೋಷದಿಂದ ಅವರುಗಳನ್ನು ಕುರಿತು, ಆಳಿದ ಸುಲಾತ್ತನರೇ ನಾನು ಹೇಳುವ ಕಥೆಯು ಎಲ್ಲ ಕಥೆಗಳಿಗಿಂತಲೂ, ತುಂಬಾ ಸಾರಸ್ಯ ವುಳ್ಳದಾದುದರಿಂದ ಸಾವಧಾನಚಿತ್ತರಾಗಿ ಲಾಲಿಸಬೇಕೆಂದು, ಬೇಡಿಕೊಳ್ಳುವೆನು. ಅಲ್ಲದೆ ನನ್ನ ತಂಗಿಯ ಅಭಿಲಾಷೆಯನ್ನು ನೆರವೇರಿಸುವುದಕ್ಕೆ ಆಜ್ಞೆ ಕೊಡಬೇಕೆಂದು ಬೇಡಿ ಕೊಳ್ಳಲು, ಸುಲಾತ್ತನನು ಒಪ್ಪಿದುದರಿಂದ ಮುಂದೆ ಕಥೆಯನ್ನು ಹೇಳ ತೊಡಗಿದಳು:—

ಎರಡು ನಾಯಿಗಳನ್ನು ತಂದ ಮುದುಕನ ಕಥೆ.

ಎಲೈ ರಾಕ್ಷಸವರ್ಯನೆ! ನಾನೂ ಈ ಎರಡು ನಾಯಿಗಳು ಮೂವರೂ ಅಣ್ಣ ತಮ್ಮಂದಿರು ಎಂಬದಾಗಿ ನೀವು ತಿಳಿದುಕೊಳ್ಳಬೇಕು! ನನ್ನ ತಂದೆಯು ಸಾಯುವಕಾಲದಲ್ಲಿ ನಮ್ಮ ಸ್ವಂತವಾದ ಒಂದು ಸಾವಿರರೂಪಾಯಿನ ಆಸ್ತಿಯುಂಟು. ಅದರಲ್ಲಿ ನಾವೆಲ್ಲರೂ ವರ್ತಕತನವನ್ನು ಮಾಡಿಕೊಂಡು ಆತನಂತೆಯೇ ಜೀವನಮಾಡುತ್ತಿದ್ದೆವು. ಈ ಎರಡುನಾಯಿಗಳಲ್ಲಿ ಒಂದು ನನ್ನ ಅಣ್ಣನಾಗಬೇಕು. ನಮ್ಮಣ್ಣನು ದೇಶಸಂಚಾರ ಮಾಡಿ ಬೇರೆ ವ್ಯಾಪಾರ ಮಾಡ ಬೇಕೆಂದು, ತನ್ನ ಆಸ್ತಿಯೆನ್ನು ತೆಗೆದುಕೊಂಡು, ಬೇರೆದೇಶಕ್ಕೆ ಹೋಗಿ ಅಲ್ಲಿನ ಸರಕುಗಳನ್ನು ಕೊಂಡು

ವಾ ರು ವು ದ ಕ್ಕೆ ಹೋಗಿ ಒ ಂ ದು ವ ಷ ರ್ ವಾ ದ ರೂ, ಬ ರ ಲಿ ಇಲ್ಲ. ಅನಂತರ ಒಬ್ಬ ಬಿಕ್ಷಗಾರನು ನನ್ನ ಅಂಗಡಿಯ ಮುಂದೆ ಬಂ ದನು. ಅವನನ್ನು ನೋಡಿ ನಾನು ನಿನಗೆ ಭಗವತ್ಸಹಾಯವಿದೆಯೆಲ್ಲವೆ ಎಂದೆನು. ಅದನ್ನು ಕೇಳಿ ಆತನು ನಿನಗೂ, ಭಗವತ್ಸಹಾಯವುಂಟಲ್ಲವೆ ಎಂದು ಜೀಳಿ, ನೀನು ತಿಳಿದುಕೊಳ್ಳದೆ ಹೊಗಬಹುದೆ ? ಎಂದು ಕೇಳಿದನು. ಆಗನಾನು ಅವನನ್ನು ಚೆನ್ನಾಗಿನೋಡಿ ಆಲಿಂಗಿಸಿಕೊಂಡು ಅಣ್ಣಾ ಎಂದು ತಬ್ಬಿ ಕೊಂಡು ಪುನಹ ಆಲಿಂಗಿಸಿ ಕೊಂಡು ನೀನು ಹೀಗಿದ್ದರೆ ನಾನೆಂತು ತಿಳದುಕೊಳ್ಳ ಬಹುದೆಂದು ನುಡಿದನು. ಬಳಿಕ ಆತನನ್ನು ಮನೆಗೆ ಕರೆದು ಕೊಂಡು ಹೋಗಿ, ವಂದನಾದಿಗಳನ್ನು ಸಮರ್ಪಿಸಿ, ಜೋಜನವನ್ನು ಆ ಗಪಾಡಿಸಿ, ಆತನು ಜೊರಟು ಹೋದ ಸಂಗತಿಯೆನ್ನು, ವ್ಯಾಪಾರದವಿ ಷಯವನ್ನು, ಪರದೇಶದ ಸಮಾಚಾರವನ್ನು, ಅವನ ಕ್ಷೇಮಲಾಭವನ್ನು ವಿವರಿಸಿ ಜೀಳಿ ಜೀಕೆಂದು ಕೇಳಿ ಕೊಂಡೆನು. ಅದಕಾ ್ಕತನು ನನ್ನನ್ನು ನೋಡಿದರೆ ನಿನಗೆ ಗೊತಾ ್ತಗುತ ್ತದೆ, ನಾನು ನಿನ್ನನ್ನು ಬಿಟು ್ಟಬಿಟು ್ಟ ಹೋದಮೇಲೆ ನನಗೆ ಉಂಟಾದ ವ ್ಯಸನವನ್ನು ವಿಸಾ ್ತರವಾಗಿ ಹೇಳುವು ದಕ್ಕೆ ನನ್ನಿಂದಾಗದು, ಆ ವಿಷಯವನ್ನು ನೀವು ಕೇಳಿದುದಕಾ ್ಕಗಿ ನಾನು ವಿವರಿಸಿಜೀಳಿದರೆ, ದುಃಖವು ಮತ್ತಷೂ ್ಟ ಅಧಿಕವಾಗುವುದೆಂದು ಜೀ ಳಿದನು. ಆ ಬಳಿಕ ಆತನಿಗೆ ನನ್ನ ಆದಾಯವನ್ನು ಎರಡು ಸಾವಿರಕ್ಕೆ ವೃದ್ಧಿ ಮಾಡಿರುವ ಸಂಗತಿಯೆನ್ನು ಜೀಳಿ ಈಗಲಾದರೂ ಇದರಲ್ಲರ್ಧವ ನ್ನು ನೀನು ತೆಗೆದುಕೊಂಡು, ಇದನ್ನು ಮೂಲಧನವನಾ್ನಗಿ ಮಾಡಿಕೊಂ ಡು ಸಂಪಾದನೆಮಾಡಿಕೊ ಎಂದು ಜೀಳಿದೆನು. ಅದಕ್ಕೆ ಆತನು ಸಂತೋ ಷವನ್ನು ಜೊಂದಿ ಆ ಹಣವನ್ನು ತೆಗೆದುಕೊಂಡು ಸುಖವಾಗಿದ ್ದನು.

ಹೀಗೆ ನಾವಿಬ ್ಬರೂ ಕೆಲವು ಕಾಲ ಏಕಗೃಹ ಕೃತ ್ಯದಲ್ಲಿರು ವಾಗ ನನ್ನ ಎರಡನೇ ತಮ ್ಮನು ತನ್ನ ಆಸಿ ್ತಯೆನ್ನೆಲ್ಲಾ ಮಾರಿಕೊಂಡು ಜೀಗಚೀಕೆಂದು ಪ ್ರಯತ್ನ ಮಾಡಿದನು. ಆಗ ನಾನು ನನ್ನ ಅಣ್ಣ ನು ಎಷೊ ್ಟೀ ವಿಧವಾಗಿ ಬುದ್ಧಿಯನ್ನು ಜೀಳಿದರೂ ಆತನು ಕೇಳದೆ ತ ನ್ನ ಆಸಿ ್ತಯೆನ್ನೆಲ್ಲಾ ಮಾರಿಕೊಂಡು ಆ ಹಣದಿಂದ ತನಗೆ ಬೇಕಾದ ಕೆಲ ವು ಸಾಮಾನುಗಳನ್ನು ಕೊಂಡುಕೊಂಡು ಕೆಲವುಜನ ವರ್ತಕರ ಗುಂಪಿಗೆ ಸೇರಿ ಪ ್ರಯಾಣ ಮಾಡಿದನು. ಒಂದು ಸಂವತ್ಸರವು ಕಳೆದುಜೀಗೋದ ಮೇ

ಲಿ, ಅವನು ನನ್ನ ಮೊದಲ ಸಹೋದರನಂತೆಯೇ ಬರಿದಾಗಿಯೆ ಬಂದನು. ಆದರೆ ಆಕಾಲಕ್ಕೆ ಸರಿಯಾಗಿ ನನಗೂ ಬಂದುಸಾವಿರ ಸೂಪಾಯಿ ಲಾಭ ಉಂಟಾಗಿತ್ತು. ಆದುದರಿಂದ ನಾನು ಆತನನ್ನು ಆದರಿಸಿ ಅವನಿಗೆ ಒಂದು ಸಾವಿರರೂಪಾಯಿಯೆನ್ನು ಕೊಟ್ಟೆನು. ಅವನುಅದನ್ನು ತೆಗೆದುಕೊಂಡು ಅಂಗಡಿಯನ್ನಿಟ್ಟುಕೊಂಡು ಸುಖವಾಗಿದ್ದನು. ಬಳಿಕ ನನ್ನ ಬಳಿಗೆ ಇಬ್ಬರು ಅಂಣ ತಮ್ಮಂದಿರು ಬಂದು ನಾವು ಸಮುದ್ರದ ಮೇಲೆ ಪ್ರಯಾಣ ಮಾಡಿ ವ್ಯಾಪಾರ ಮಾಡಬೇಕೆಂದಿರುವೆವು. ನೀನು ನಮ್ಮ ಜೊತೆಗೆ ಬರುತ್ತೀಯಾ ? ಎಂದು ಕೇಳಿದರು. ಅದಕ್ಕೆ ನಾನು ನೀವು ಬಂದು ಸಾರಿ ದೇಶಾಂತರ ಪ್ರಯಾಣದಿಂದ ಲಾಭವನ್ನು ಹೊಂದಿದರಲ್ಲಾ ! ನಾನು ಈಗ ಸಿಕ್ಕುವ ಲಾಭದಿಂದಲೇ ತೃಪ್ತನಾಗಿರುತ್ತೇನೆ, ಪರದೇಶಕ್ಕೆ ಹೋಗಿ ಮತ್ತಷ್ಟುಲಾಭವನ್ನು ಸಂಪಾದಿಸಬೇಕು ಎಂದು ಹೇಳಿದೆನು. ಅವರು ನನ್ನನ್ನುಬಿಟ್ಟುಸುವುದಕ್ಕಾಗಿ, ನಾನಾವಿಧವಾದ ಜೋಳ್ಳನೆಯನ್ನು ಮಾಡಿ. ಐದುವರ್ಷಗಳ ವರೆಗೂ ನನ್ನನ್ನು ಪೀಡಿಸುತ್ತಿದ್ದು ಕಡೆಗೆ ತಮ್ಮ ಕೋರಿಕೆಯನ್ನು ನೆರವೇರಿಸಿ ಕೊಳ್ಳಲು ಸಂಪೂರ್ಣವಾದ ಶಕ್ತಿಯನ್ನು ಸಂಪಾದಿಸಿ ಕೊಂಡರು. ಆದಕಾರಣ ನಾನು ಹಡಗಿನ ವ್ಯಾಪಾರಕ್ಕೆ ಬೇಕಾದ ಸರಕುಗಳನ್ನೆಲ್ಲ ಸಿದ್ಧ ಮಾಡಿಟ್ಟುಕೊಂಡೆನು. ನಾವೆಲ್ಲರೂ ಪ್ರಯಾಣಸನ್ನದ್ಧರಾಗುವ ಕಾಲದಲ್ಲಿ. ಮೂಲ ಧನಕ್ಕಾಗಿ ನಾನು ಕೊಟ್ಟಿದ್ದ ಹಣವನ್ನು ನನ್ನ ಇಬ್ಬರು ಸಹೋದರರೂ ದುಂದು ವೆಚ್ಚದಿಂದ ಹಾಳು ಮಾಡಿ ಕೊಂಡಿರುವಂತೆ ನನಗೆ ತಿಳಿಯಬಂದಿತು. ಆದರೂ, ನಾನು ಅವರಮೇಲೆ ಕೋಪ ಮಾಡಲಿಲ್ಲ. ಅಯ್ಯೋ ! ಸಹೋದರಭಾವವು ಅತ್ಯಂತ ಶಾಂತಿಮೂಲವಾದುದಲ್ಲವೆ ? ನನಗೆ ಮುಂದೇನೂ ತೋಚಲಿಲ್ಲ. ಆಕಾಲದಲ್ಲಿ ನನ್ನ ಆಸ್ತಿಯೆನ್ನು ಲೆಕ್ಕಮಾಡಿ ನೋಡಲಾಗಿ ಅರುನೂರಿನ ವರಹಗಳಷ್ಟು ಇದ್ದಿತು. ಕೂಡಲೆ ನಾನು ಅದನ್ನು ಎರಡುಭಾಗ ಮಾಡಿ. ನನ್ನ ಸಹೋದರರನ್ನು ಕುರಿತು ಇಂತೆಂದು ಹೇಳಿದೆನು; —

ಎಲೈ ಸಹೋದರರಿರಾ ! ಇದುವರೆಗೆ ನೀವು ಪ್ರೋಲುಮಾಡಿದ ಆಸ್ತಿಯೆಲ್ಲಾ ಹಾಗಿರಲಿ, ಈಗ ನನ್ನಲ್ಲಿರುವ ಅರುನೂರಿನ ರೂಪಾಯಿಗಳನ್ನು ಎರಡುಭಾಗ ಮಾಡಿ, ಅದರಲ್ಲೊಂದು ಭಾಗವನ್ನು ಹಡಗಿನ

ವ್ಯಾಪಾರಕ್ಕಾಗಿ ತೆಗೆದಿಟ್ಟ ಉಳಿದ ಅರ್ಧಭಾಗವನ್ನು. ನಮಗೆ ಕಷ್ಟ ಕಾಲಬಂದಾಗ್ಗೆ ಉಪಯೋಗಿಸುವುದಕ್ಕಾಗಿ, ಇಲ್ಲಿಯೆ ನಿಕ್ಷೇಪಮಾಡಿಡು ವೆನು. ಇಗೋ ! ಈಮೂರುಸಾವಿರ ದ್ರವ್ಯವನ್ನು ನೀವು ತೆಗೆದು ಕೊಳ್ಳಿ. ಎಂದು. ತಲೆಗೆಬಂದುಸಾವಿರದಂತೆ ಹಣವನ್ನುಹಂಚಿಕೊಂಡು ಉಳಿದ ಮೂರುಸಾವಿರ ಹಣವನ್ನು ನನ್ನ ಮನೆಯು ಬಂದು ಕಡೆಯಲ್ಲಿ ಹೂಳಿದೆನು. ಬಳಿಕ ನಾವು ಗೊತ್ತುಮಾಡಿಕೊಂಡಿದ್ದ ಹಡಗಿಗೆ ಸರ ಕನ್ನು ಏರಿಸಿ, ಅನುಕೂಲವಾಗಿ ಘಾಳಿಬಂದ ಕಾಲದಲ್ಲಿ ಹಡಗುಹತ್ತಿ ನೀರಿನಮೇಲೆ ಪ್ರಯಾಣ ಮಾಡುತಾ ಬಂದೆವು. ಹೀಗೆ ಒಂದು ತಿಂಗ ಳಕಾಲ ಸಮುದ್ರಯಾನದಲ್ಲಿಯೇ ಕಳೆಯಿತು. ಎಂದು ಹೇಳಿ, ಬೆಳಿಗಾ ದುದರಿಂದ ಷಹರಜೌದಿಯು ಕಥೆಯನ್ನು ನಿಲ್ಲಿಸಿದಳು. ಆಗ ದಿನರಜೌದಿ ಅಕ್ಕಾ ! ಈ ಕಥೆಯು ಎಲ್ಲಾ ಕಥೆಗಳಿಗಿಂತಲೂ ಬಹು ವಿಚಿತ್ರವಾಗಿ ಕೇ ಳುವುದಕ್ಕೆ ಬಹು ಸಾರಸ್ಯವಾಗಿದೆ. ದಯೆಮಾಡಿ ಈ ಕಥೆಯನ್ನು ಕೊನೆಮುಟ್ಟಿ ಕೇಳಬೇಕೆಂಬ ಆಸೆ ನನ್ನನ್ನು ಬಾಧಿಸುತ್ತಿದೆ ಎಂದಳು ತಂಗಿ ! ಈ ದಿನ ಸುಲ್ತಾನನು ದಯೆಮಾಡಿ ನನ್ನ ಪ್ರಾಣವನ್ನು ಉಳಿಸಿದರೆ ನಾನು ಈಕಥೆಯನ್ನುಕೊನೆಯವರೆಗೂ ಹೇಳಿನಿನ್ನನುತ್ತು ನಮ್ಮಸುಲ್ತಾ ನರ ಮನಸ್ಸನ್ನು ಸಂತೋಷಪಡಿಸುವೆನು. ದೇವರು ನನಗೆ ಈ ಭಾಗ್ಯ ವನ್ನು ಮೂರ್ತ್ರ ಕರುಣಿಸಬೇಕು ಎಂದು ಹೇಳಿ ಸುಮ್ಮನಾಗಲು ಸುಲ್ತಾ ನನು ಯಾವ ಮಾತನ್ನು ಆಡದೆ ಪಾಸಿಗೆ ನಿಂದೆದ್ದು ಹೊರಟುಹೋದನು.

ಏಳನೆಯರಾತ್ರಿಕಥೆ.

ಏಳನೆಯರಾತ್ರಿ ಬೆಳಗಿನಜಾವದಲ್ಲಿ ದಿನರಜೌದಿಯು ಎಚ್ಚತ್ತು ಕುಳಿತು, ಸುಲ್ತಾನಿಯನ್ನು ಕುರಿತು ! ಅಕ್ಕಾ ಇನ್ನೇನು ಬೆಳಕು ಹರಿ ಯೆತಾ ಬಂದಿತು. ನಿನ್ನೆ ರಾತ್ರಿ ಅರಿವಾಸಿ ಹೇಳಿಬಿಟ್ಟಿರುವ ಮುದು ಕನ ಕಥೆಯನ್ನು ಪೂರೈಸಿ ಹೇಳು, ಎಂದು ಬೇಡಿಕೊಂಡಳು. ಅದ ಕ್ಕೆ ಸುಲ್ತಾನನೂ ಒಪ್ಪಿದನು. ಕೂಡಲೇ ಷಹರಜೌದಿಯು ತನ್ನತಂ ಗಿಯನ್ನೂ ಸುಲ್ತಾನರನ್ನೂ ಕುರಿತು ಮುಂಗಥೆಯೆನ್ನು ಹೇಳಲು ಆರಂಭಿಸಿದಳು.

ಹೀಗೆ ಒಂದು ತಿಂಗಳು ಪರ್ಯಂತ ಮಾಡಿ ಒಂದಾನೊಂದು ರೇವೆ ಪಟ್ಟಣವನ್ನು ಸೇರಿ ಅಲ್ಲಿ ನಮ್ಮ ಸರಕುಗಳನ್ನು ಮಾರಿಕೊಂಡು, ಬಂದ ಲಾಭಕ್ಕೆ ನಮ್ಮ ದೇಶದಲ್ಲಿ ವ್ಯಾಪಾರ ಮಾಡಲು, ಬೇಕಾಗುವ ಸರಕುಗಳನ್ನು ಯಥೇಷ್ಟವಾಗಿತುಂಬಿಕೊಂಡು, ನಾವುಮೂವರೂ ಒಟ್ಟಿಗೆಬಂದು ಹಡಗನ್ನುಕೊಂಡು ಅದರಲ್ಲಿಕುಳಿತು ನಮ್ಮದೇಶಕ್ಕೆ ಹೊರಟಬರುತ್ತಿದ್ದೆವು ಮಧ್ಯಮಾರ್ಗದಲ್ಲಿ ಅಪ್ಸರಸಿಯೆರಿಗಿಂತಲೂ, ಅಧಿಕಸೌಂದರ್ಯ ವುಳ್ಳವಳಾದ ಒಬ್ಬಸುಂದರಾಂಗಿಯು ನನ್ನ ಬಳಿಗೆ ಬಂದು ನಮಸ್ಕರಿಸಿ ಬಹಳವಾದ ದೈನ್ಯವನ್ನು ತೋರಿಸಿ ನಯವಿನಯೆ ಭಕ್ತಿ ಸಂಪನ್ನಳಾಗಿ ನನ್ನನ್ನುಮದುವೆಯಾಗಬೇಕೆಂದು ಬೇಡಿಕೊಂಡಳು. ಅವಳರೂಪರೇಖಾದಿಗಳಿಂದ ಕೂಡಿದ ಹಾವಭಾವವಿಲಾಸಗಳಿಗೆ ನನ್ನಮನಸ್ಸುಸಂಪೂರ್ಣವಾಗಿ ಕರಗಿಹೋಯಿತು ಅಲ್ಲದೆ ಆ ಸುಕುಮಾರಿಯ ಸುಗುಣವಿಂದಲೇ ತೃಪ್ತಿಯನ್ನು ಹೊಂದುವುದಕ್ಕೆ ಅವಕಾಶವು ದೊರಕಿದುದರಿಂದ, ನಾನು ಮದುವೆಯಾಗಲು ಸಮ್ಮತಿಸಿ, ಉತ್ತಮವಾದ ಉಡುಪುಗಳಿದ್ದು ತಂದು ಕೊಟ್ಟು, ವಿಧವತ್ತಾಗಿ ಮದುವೆಮಾಡಿಕೊಂಡು, ಅವಳನ್ನು ಹಡಗಿನಲ್ಲಿ ಕೂರಿಸಿಕೊಂಡು, ಮುಂದಕ್ಕೆ ಹೊರಟೆನು. ಹೀಗೆ ನಾವು ಹಡಗಿನಲ್ಲಿ ಬರುತ್ತಿದ್ದರೂ, ನನ್ನ ಹೆಂಡತಿಯ ರೂಪ ಸೌಂದರ್ಯಾದಿಗಳಿಗೆ ತಕ್ಕಂತೆ ಅವಳಿಗೆ ಉಂಟಾಗಿರುವ ಪ್ರೀತಿ ವಾತ್ಸಲ್ಯಗಳಿಂದ ನನಗೆ ಅವಳ ಮೇಲಣ ಮೋಹವು ದಿನೇ ದಿನೇ ವೃದ್ಧಿ ಹೊಂದುತಲಿದ್ದಿತು. ಆದುದರಿಂದ ಯಾವ ಕೆಲಸವನ್ನು ಮಾಡದೆ ಅವಳಲ್ಲೆ ಅನುರಕ್ತರಾಗಿದ್ದರು. ನನ್ನ ಅಣ್ಣತಮ್ಮಂದಿರಿಬ್ಬರೂ ಯಾವಕೆಲಸವನ್ನು ಮಾಡದೆ ನನಗುಂಟಾದ ಆನಂದವನ್ನು ನೋಡಿ ತಾಳಲಾರದೆ, ದ್ರೋಹಚಿಂತನೆಯೆನ್ನು ಮಾಡಿ, ಒಂದಾನೊಂದು ದಿನ ನಾನೂ ನನ್ನಹೆಂಡತಿಯೂ ಸುಖವಾಗಿ ಮಲಗಿರುವುದನ್ನು ಕಂಡು, ಕೊಂದಹಾಕಬೇಕೆಂಬ ಅಭಿಲಾಷೆಯಿಂದ, ನಮ್ಮಗಳನ್ನು ಸಮುದ್ರದಲ್ಲಿ ಬಿಸಾಡಿದರು. ನನ್ನಹೆಂಡತಿಯಾಪ ಆಪೆಂಗಸಾದರೋ ! ಯೆಕ್ಷಿಣಿಯೆಯಾದುದರಿಂದ ಅವಳೆಂದಿಗೂ ಮುಳುಗಿಹೋಗಲಿಲ್ಲವೆಂದು, ನೀನುತಿಳಿದುಕೊಳ್ಳಬೇಕು. ನಾನು ನೀರಿನಲ್ಲಿ ಬಿದ್ದಕೂಡಲೆ ಅವಳು ಒಂದು ದ್ವೀಪಕ್ಕೆ ಕರೆದುಕೊಂಡುಹೋಗಿ, ನನ್ನನ್ನುಸೇರಿಸಿ ಬೆಳಗಾದಕೂಡಲೇ ಗಂಡನೇ ! ನೀನುಮಾಡಿದ ಉಪಕಾರಕ್ಕೆ ಪ್ರತಿಯಾಗಿ, ನಾನುನಿನ್ನ ಪ್ರಾಣವನ್ನುಳಿಸಿರುವೆನೆಂಬುದು, ನಿನ

ಯವನ ಯೋವಿನೀ ವಿನೋದ, ಎಂಬ

ಕ್ಷೇಮಲಾಭವನ್ನು ವಿಚಾರಿಸುತ್ತಾ, ಸಂತೋಷದಿಂದಿದ್ದೆನು. ಪುನಹವು ನನಗೆಹೊತ್ತಿಗೆ ನೋಡುವಷ್ಟರಲ್ಲಿ ಎರಡು ಕರಿಯ ನಾಯಿಗಳನ್ನು ಕಂಡೆನು. ಅವುಗಳು ಬಕಳಳಿಡರದಿಂದ ನನ್ನ ಬಳಿಗೆ ಬಂದವು. ನಾನು ಯಾವವಿಷಯವನ್ನು ತಿಳಿದುಕೊಳ್ಳಲಾರದೆ, ತುಂಬಆಶ್ಚರ್ಯವಾಂತನಾದೆನು. ಅಷ್ಟರಲ್ಲಿಯೇ ಆಯಕ್ಷಿಣಿಯು ನನ್ನಬಳಗೆಬಂದು ಎಲೈ ಸಾಧುವೆ ! ನನ್ನಬಳಯಲ್ಲಿರುವ ಕರಿಯ ನಾಯಿಗಳಿರಡನ್ನು ನೋಡಿ, ನೀನುಆಶ್ಚರ್ಯಪಡಬಹುದು. ಅವುಗಳೇ ನಿನ್ನ ಅಣ್ಣತಮ್ಮಂದಿರೆಂದು ಹೇಳಲು, ನಾನುಬಹಳ ವ್ಯಸನಾಕ್ರಾಂತನಾಗಿ ಇವರಿಗೆ ಶಾಪಭೋದವೆಂತು ಬಂಟಾಯಿತೆಂದು ಕೇಳಿದೆನು. ಹಾಗೆಶುರುಮಾಡಿಸಿದವಳು ನಾನೇ ! ನನ್ನ ತಂಗಿಯರಲ್ಲಿ ಒಬ್ಬಳಕೂಡ ಹೇಳಿ ಹೀಗೆ ಮಾಡಿಸಿದೆನು. ಅವಳು ಹಡಗನ್ನು ಒಡೆದು ಹಾಕಿದಳು. ಆದುದರಿಂದ ನಿನ್ನಸರಕೆಲ್ಲವು ನಾಶವಾಯಿತು. ಆದರೂ ಚಿಂತೆಯಿಲ್ಲ. ನಿನ್ನೊಂದು, ವಿಧದಲ್ಲಿ ನಿನಗೆ ಬರ್ಮಮಾಡಿ ಕೊಡುವೆನು. ಈದುಷ್ಟರಾದನಿನ್ನಅಣ್ಣತಮ್ಮಂದಿರು, ಐದುವರ್ಷಗಳವರೆಗೆ ಇದೇತೆರದಿಂದಿರುವಂತೆ ನಾನುಶಪಿಸಿರುವೆನು. ಇವರದುರ್ಮಾರ್ಗವೇ ಇವರನ್ನು ಈಗತಿಗೆತಂದಿತೆಂದು, ನುಡಿದಳು, ತಾನಿರುವಸ್ಥಳವನ್ನು ನನಗೆಹೇಳಿಅದೃಶ್ಯಳಾದಳು. ಈಗ್ಗೆ ಐದುವರ್ಷಗಳಾದರೂ, ಅವಳು ಕಾಣದಿರುವುದರಿಂದ ಅವಳನ್ನು ಹುಡುಕಿಕೊಂಡು ಹೀಗೆ ತಿರುಗುತ್ತಾಇರುವೆನು. ಈವ್ಯಾಪಾರಿಯೊಡೆ ಹೆಂಣಣ್ಣ ಜಿಂಕೆಯೆನ್ನು ತಂಪು ದುಡುಕನು ಈ ನಿರ್ಜಲದಲ್ಲಿ ಕಟ್ಟಿಕೊಂಡು ಮಾತಾಡುತ್ತಿರುವುದನ್ನು ನೋಡಿ, ನಾನು ಇಲ್ಲಿಬಿಟ್ಟಕಟ್ಟಿಕೊಂಡೆನು, ಇದೆನನ್ನ ಚರಿತ್ರೆ. ಎಲೈ ಭೂತಾದೀಶನೆ ! ಇದು ನಿನಗೆ ಹೆಚ್ಚಾದ ಆಶ್ಚರ್ಯವನ್ನುಂಟುಮಾಡುವುದಿಲ್ಲವೆ ! ಎಂದುಹೇಳಲು, ಭೂತವು ಆಹಾ ! ಈಕಥೆಯು, ಅತ್ಯದ್ಭುತ ಆಶ್ಚರ್ಯಕರವಾಗಿರುವುದರಿಂದ, ನನಗೆತೋರುತ್ತಿರುವುದರಿಂದ, ಈವಾ್ಯಪಾರಿಯ ಅಪರಾಧದಲ್ಲಿ ಮೂರುಪಾಲನ್ನು ಬಿಟ್ಟುಬಿಡುವೆನೆಂದು ಹೇಳಿದನು. ಎರಡನೆಮುದುಕನು ತನ್ನ ಕಥೆಯನ್ನು ಹೇಳಲಾರಂಭಿಸಿ, ಎಲೈ ರಾಕ್ಷಸಾಧಿಪನೆ ಹಿಂದಿನವರು ನಿನಗೆಹೇಳಿದ ಕಥೆಗಳಲ್ಲಿ ನಿನಗೆತೋರಿಬಂದ ಆಶ್ಚರ್ಯವಿನೋದಗಳಿಗಿಂತಲೂ, ಅಧಿಕವಾದವಿನೋದವುಳ್ಳ ನನ್ನ ಕಥೆಯನ್ನು ನಿಶ್ಚಯವಾಗಿತಿಳಿಯಹೇಳಬಲ್ಲೆ, ಈವರ್ತಕನ ಅಪರಾಧದಲ್ಲಿ ಮೂರನೆಭಾಗವಾದರೂ ಕೊಡಿ

ಯೆಭಾಗವನ್ನು ಮನ್ನಿಸುವಿರಾ ! ಎಂದುಕೇಳಲು ರಾಕ್ಷಸನು ಸಮ್ಮತಿಸಿ ಮೊದಲಿನ ಮುದುಕನಿಗೆ ಹೇಳಿದಂತೆಯೇ, ಪ್ರತ್ಯುತ್ತರವನ್ನು ಕೊಡಲು, ಆದರೆ ಕೇಳರೆಂದುಹೇಳದನು. ಇಲ್ಲಿಗೆಬೆಳಗಾದುದರಿಂದಷಹರಜಾದಿಯು, ಕಥೆಯನ್ನು ನಿಲ್ಲಿಸಿದಳು. ದಿನರಜಾದಿಯು ಅಕ್ಕಾ ! ನೀನುಹಿಂದೆಹೇಳಿದಕಥೆಗಳಿಗಿಂತಲೂ, ಈಗ ಹೇಳಬೇಕೆಂದಿರುವ ಕಥೆಯು ಇನ್ನೂ ಆಶ್ಚರ್ಯಕರವಾಗಿರಬಹುದೆಂದು, ನನಗತೋರುತ್ತದೆ ಆದುದರಿಂದ ಆದನ್ನು ಸಂಪೂರ್ಣವಾಗಿ, ಕೇಳ ಬೇಕೆಂಬ ಕುತೂಹಲ ಪ್ರಂಟಾಗುತ್ತದೆ ಯೆಂದು, ಹೇಳಲು, ಸಲಾತ್ತನರ ಹೊಸಕಥೆಯನ್ನು ಸಂಪೂರ್ಣವಾಗಿ ಕೇಳಬೇಕೆಂಬ ಅಭಿಲಾಷೆಯಿಂದ, ಷಹರಜಾದಿಯನ್ನು ಕೊಲ್ಲ ಕೂಡದೆಂದುಆಜ್ಞಾಪಿಸಿದನು .

ಎಂಟನೆ ರಾತ್ರಿಕಥೆ.

ಸುಲಾತ್ತನಿಯು ಏಳತಕ್ಕಸಮಯವನ್ನು ನೋಡಿ, ದಿನರಜಾದಿಯು, ಅಕ್ಕಾ ! ನಾನು ನಿದ್ರೆಯಿಂದೆದ್ದು ಬಹಳಹೊತ್ತಾಯಿತು. ನಿನ್ನನ್ನು ಎಚ್ಚರಮಾಡಬೇಕೆಂದಿದ್ದೆನು. ಮೂರನೆಮುದುಕನ ಕಥೆಯು ಬಹುಸಾರಸ್ಯವಾಗಿರಬಹುದು ! ಅದನ್ನು ಕೇಳಬೇಕೆಂಬ ಆಸೆಯುಬಹಳವಾಗಿರುವುದೆಂದು ಹೇಳಲು, ಸುಲಾತ್ತನನು ಈಕಥೆಯು ಅಪೂರ್ವವೆಂದುನಿಚಿತ್ರವಾದದೆಂದು, ನಾನುನಂಬಲಾರೆನೆಂದು ಹೇಳಿದನು. ಆಳಿದಸುಲಾತ್ತನರೆ! ಮೂರನೆಮುದುಕನು ಭೂತವನ್ನುಕುರಿತು ತನ್ನಕಥೆಯೆನ್ನು ಹೇಳಿದನೆ ಹೊರತು, ನನಗೆ ಅಪರಿಸಾತ್ತರವುತಿಳಿಯದು. ಆದರೂ, ನನಗೆತೋರಿದುದೇನೆಂದರೆ:—ಆಕಥೆಯು ಹಿಂದಿನ ಎರಡುಕಥೆಗಳಿಗಿಂತಲೂ, ಬಹುಆಶ್ಚರ್ಯಕರವಾಗಿದ್ದುದರಿಂದಲೇ, ಆಭೂತವು ಆಕಥೆಯನ್ನು ಪ್ರಾರ್ತಿಯೊಳಾಗಿ ಕೇಳಿಸಂತೋಷವನ್ನು ಹೊಂದಿ ಮೂರನೆ ಮುದುಕನ ಅಪರಾಧವನ್ನುಕ್ಷಮಿಸಿ, ಅವರುಗಳನ್ನು ಸೋಡಿ, ನೀವುನಿಮ್ಮಕಥೆಗಳಿಂದ ಈವರ್ತಕನನ್ನು ಬಿಡಿಸುವಂತೆ ಮಾಡಿದುದಕ್ಕಾಗಿ, ನಾನುನಿಮಗೆ ವಂದನೆಗಳನ್ನು ಮಾಡುತ್ತೇನೆ, ನೀವುಹಾಗೆಮಾಡದಿದ್ದರೆ. ಈತನು ಭೂಮಿಯೆಮೇಲೆ ಬಾಳುತ್ತಲಿ, ಇರಲಿಲ್ಲವೆಂದುಹೇಳಿ, ಅಂತರ್ಧಾನವನ್ನು ಹೊಂದಿದನು. ಆದುದರಿಂದ, ಅವರೆಲ್ಲರೂ ತುಂಬ ಸಂತೋಷಯುಕ್ತರಾದರು. ಆವರ್ತಕ

ನಾದರೋ ! ತನ್ನಪ್ರಾಣವನ್ನುಳಿಸಿದ, ಆಮೂರುಮಂದಿಗೆವಂದನೆಗಳನ್ನು ಸಮರ್ಪಿಸಿದನು. ಅವರು ಅದಕ್ಕಾಗಿ ಸಂತೋಷಚಿತ್ತರಾಗಿ, ತಮ್ಮ ಮೂರ್ಗವನ್ನು ಹಿಡಿದು ಪ್ರಯಾಣ ಮಾಡಿದರು. ಆ ವರ್ತಕನು ತನ್ನ ಹೆಂಡತಿಮಕ್ಕಳನ್ನು ಸೇರಿ, ಅಂತ್ಯಕಾಲವವರೆಗೂ, ಸುಖವಾಗಿದ್ದನು. ಆಳದ ಸುಲ್ತಾನರೇ ! ಇಷ್ಟುವರೆಗೂ, ನಾನು ನಿಮಗೆ ಹೇಳಿದ ಕಥೆಗಳು, ಈಗ ಮುಂದೆ ಹೇಳಹೋಗುವ ಬೆಸ್ತರವನ ಕಥೆಗೆ, ಎಷ್ಟುಮಾತ್ರಕ್ಕೂ ಸಮಾನವಾಗಲಾರವು, ಎಂದು ಷಹರಜಾದಿಯು ಹೇಳಲು, ಸುಲ್ತಾನನು ಯಾವುದನ್ನು ಹೇಳದೆ, ಸುಮ್ಮನಿರುವುದನ್ನು ನೋಡಿ, ಅಕ್ಕಾ ! ಇನ್ನು ಸ್ವಲ್ಪ ಹೊತ್ತಿರುವುದರಿಂದ, ಸುಲ್ತಾನರಮನಸ್ಸನ್ನು ನೆಳೆಯುವಂತೆ, ಬೆಸ್ತರವನ ಕಥೆಯನ್ನು ನಮಗೆ ಹೇಳಬೇಕೆಂದು, ಕೇಳಿದಳು. ಅದಕ್ಕೆ ಷಹರಿಯರನು, ಸಮ್ಮತಿಯನ್ನು ಕೊಟ್ಟುದರಿಂದ ಷಹರಜಾದಿಯು, ಕಥೆಯನ್ನು ಹೇಳಲಾರಂಭಿಸಿದಳು. :—

ಬೆಸ್ತರವನ ಕಥೆ.

ಸುಲ್ತಾನರೇ ! ಬಹಳ ಮುದುಕನಾದ ಒಬ್ಬ ಬೆಸ್ತರವನಿದ್ದನು ಅವನು ತಾನು ತನ್ನ ಹೆಂಡತಿಯುಾ, ಮೂರುಜನ ಮಕ್ಕಳೂ, ಜೀವಿಸುವುದಕ್ಕೆ ಸಾಕಾದಷ್ಟನ್ನು ಸಂಪಾದಿಸಲಾರದವನಾಗಿದ್ದನು. ಅವನು, ಪ್ರತಿದಿನವೂ ಬೆಳಿಗ್ಗೆ ಎದ್ದು ಮೀನುಗಳನ್ನು ಹಿಡಿಯುವುದಕ್ಕೆ ಹೋಗುತ್ತಿದ್ದನು. ಆದುದರಿಂದ ಐದು ದಿನಕ್ಕೆ ನಾಲ್ಕುಸಾರಿಗಿಂತಲೂ, ಜಾಸ್ತಿಯಾಗಿ ಬಲೆಯನ್ನು ಬೀಸುವುದಿಲ್ಲವೆಂದು, ಪ್ರತಿಜ್ಞೆ ಮಾಡಿಕೊಂಡಿದ್ದನು. ಹೀಗಿರುವಲ್ಲಿ ಐದುದಿನ ಬೆಳಿಗಿನ ಝಾವದಲ್ಲಿ ಬೆಳದಿಂಗಳು ಕಾಯುತ್ತಿರುವಾಗಲೆ, ಎದ್ದು ಸಮುದ್ರತೀರಕ್ಕೆಹೋಗಿ ಬಟ್ಟೆಬರೆಗಳನ್ನು ತೆಗದಿಟ್ಟು ಬಲೆಯನ್ನುಬೀಸಿ, ದಡಕ್ಕೆಬಂದು ನೋಡಲಾಗಿ, ಬಹಳವಾಗಿ ಹುಳುಗಳದ್ದುದರಿಂದ, ಹೆಚ್ಚಾಗಿ ಮೀನುಗಳು ದೊರಕಿದವು, ಎಂಬದಾಗಿ ತನ್ನಲ್ಲಿ ತಾನೇ ಸಂತೋಷವನ್ನು ಹೊಂದುತ್ತಾ, ಮತ್ತೊಂದು ಕ್ಷಣದ ಹೊತ್ತಿಗೆ ಅವು ಮೀನುಗಳಲ್ಲವೆಂದೂ, ಸತ್ತುಹೋದ ಕತ್ತೆಯ ಶರೀರವೆಂದು ತಿಳಿದು ಬಹಳವಾಗಿ ವ್ಯಸನಾಕ್ರಾಂತನಾದನು. ಇಷ್ಟರಲ್ಲಿಯೆ ! ಬೆಳಗಾದುದರಿಂದ ಷಹರಜಾದಿಯು ಕಥೆಯನ್ನು ನಿಲ್ಲಿಸಿದಳು. ಅಷ್ಟರಲ್ಲಿಯೇ ! ದಿನರ

ಜಾದಿಯು ಅಕ್ಕಾ ! ಈ ಕಥೆಯು ಈಗಲೇ ನನಗೆ ಮರತ್ತಾದ ಆನಂದವನ್ನುಂಟುಮಾಡುತ್ತಿರುವುದರಿಂದ, ಮುಂದೆ ಹೇಳುವ ಕಥೆಯು, ಇನ್ನೂ ವಿಚಿತ್ರವಾಗಿರುವುದೆಂದು, ನಿಜವಾಗಿಯೂ, ನಾನು ಹೇಳುವೆನೆಂದು ನುಡಿಯಲು, ಸುಲ್ತಾನನು ಈ ಬಡಿಗಾರನ ಕಥೆಗಿಂತಲೂ, ಅಧಿಕವಾದ ಆಶ್ಚರ್ಯವನ್ನುಂಟುಮಾಡುವಕಥೆ ಮತ್ತಾವುದೂ ಇಲ್ಲ, ದಯಮಾಡಿ ಸುಲ್ತಾನರು, ನನ್ನ ಪ್ರಾಣವನ್ನುಳಿಸಿದರೆ ನಾಳೆ ರಾತ್ರಿಗೆ ಕಥೆಯನ್ನು ತಿಳಿಯ ಹೇಳುವೆನೆಂದು, ನುಡಿಯಲು, ಷಹರಿಯರನು ಇಷ್ಟೊಂದು ವಿಚಿತ್ರವಾಗಿ, ವಿಾನುಗಳ ಚೇಟೆಯೆಬ್ಬಿಸಿದ ಚಿಸ್ತ್ರವನಿಗೆ, ಮುಂದೆ ಏನಾಗುವುದೋ ! ನೋಪಚೇಕೆಂದು, ಈ ದಿನವೂ, ಷಹರ ಜಾದಿಯನ್ನು ಕೊಲಕೂಡದೆಂದು ನಿರ್ಣಯ ಮಾಡಿದನು.

ಒಂಭತ್ತನೆಯ ರಾತ್ರಿಕಥೆ

ಎರಡನೆಯ ದಿನ ಬೆಳಗಿನ ಜಾವದಲ್ಲಿದ್ದು ದಿನರಜಾದಿಯು ಅಕ್ಕಾ ! ನಿನಗೆ ನಿಜವಾಗಿ ಇದ್ದರೆ ಆ ಚಿಸ್ತ್ರವನ ಕಥೆಯನ್ನು ಹೇಳು ಅದನ್ನು ಕೇಳ ಬೇಕೆಂದು ನನಗೆತುಂಬ ಕುತೂಹಲವಿರುವುದು. ಆದುದರಿಂದ ನೀನು ಹೇಳದೆ, ಉದಾಸೀನಮಾಡಿದರೆ, ನನ್ನ ಪ್ರಾಣವೇಹೋಗುವುದು. ಎಂದು ನುಡಿಯಲು, ಅಗತ್ಯವಾಗಿ ಕಥೆಯನ್ನು ಹೇಳಿ, ನನಗೆ ಆನಂದವನ್ನುಂಟುಮಾಡುವೆನೆಂದು, ಸುಲ್ತಾನನಿಂದಪ್ಪಣೆಯನ್ನು ತೆಗೆದುಕೊಂಡು, ಮುಂದೆ ಕಥೆಯನ್ನು ಹೇಳುವುದಕ್ಕೆ ಮೊದಲು ಮಾಡಿದಳು. ತಾನು ಬಲೆಯನ್ನು ಬೀಸಲು ಆಕತ್ತೆಯಶರೀರವು ದೊರಕಿತಲ್ಲಾ ! ಎಂದು ಕೊಂಡು, ಚಿಸ್ತ್ರವನು ಆಕತ್ತೆಯದೇಹವನ್ನು ತಾಕಿದಾಗ ಕಿತ್ತುಹೋದ ಬಲೆಯನ್ನು ಸರಿಮಾಡಿಕೊಂಡು, ಮತ್ತೊಂದುಸಾರಿ ಬಲೆಯನ್ನು ಬೀಸಿನೋಡಲು, ಬಲೆಕಿತ್ತುಹೋಗದೆ ಸರಿಯೊಗಿದ್ದುದರಿಂದ, ಹೆಚ್ಚಾಗಿ ಮೀನುಗಳು ದೊರಕಿದವೆಂದುಕೊಂಡನು. ಅದರಲ್ಲಿ ನುರುಜು ಕಲ್ಲುಗಳಿಂದ ಕೂಡಿದ ವರ್ಣವಿನಾ, ಮತ್ತೇನು ಇರಲಿಲ್ಲ. ಆದುದರಿಂದ ಆತನು ಅತ್ಯಂತ ದುಃಖಿತನಾಗಿ ಓ ಅದೃಷ್ಟವೇ ! ನೀನು ನನ್ನಮೇಲೆ ಕೋಪವನ್ನು ಮಾಡಿಕೊಂಡು, ಕೊಂದುಹಾಕದೆ ರಕ್ಷಿಸಬೇಕೆಂದು, ಪ್ರಾರ್ಥಿಸಿ

ಕೊಳ್ಳುವೆನು. ನಿನ್ನ ಜೀವನವನ್ನು ಸಂಪಾದಿಸಿಕೊಳ್ಳುವುದಕ್ಕೆ, ನೀನು ಅಡ್ಡ ನೂಪ್ಪೇಕ್ಷೆ, ನನಗಾಗಲೀ ನಿನ್ನ ಜೀವನವನ್ನು ಬಿಟ್ಟರೆ ಮತ್ತಾವ ಮೂಲ್ಯವೂ ಇಲ್ಲ. ಆದುದರಿಂದ ನಾನು ಎಷ್ಟು ಪ್ರಯತ್ನಪಟ್ಟಾಗ್ಯೂ ನನ್ನನ್ನು ಸಂಸಾರಕ್ಕೆ ಹಕ್ಕಿಸ್ಸುವ ಜೀವನವು ಜೊರೆಯದಿರುವುದರಿಂದ, ಇನ್ನು ನಾನು ನಿನ್ನನ್ನು ನಿಂದಿಸಬೇಕಾದ ಅವಶ್ಯಕತೆಯಿಲ್ಲ. ಬಲಿಷ್ಠರನ್ನು ಹೊಂ ಲ್ಲುತ್ತಾ, ಭಾಗ್ಯವಂತರಿಗೆ ಅಡಿಯಾಳಾಗಿ ಅಲೆಯುತ್ತಿರುವೆಯೇ! ನಿನಗೆ ಧರ್ಮವಾಗಿದೆ, ಪುರೂರ್ಗರಲ್ಲಿ ಅನುಗ್ರಹವನ್ನು ಪೂಡುತಾ, ನೀನು ಗುಣಿಷ್ಠೀಶ್ವರನ್ನು ವೃದ್ಧಿ ಜೊಂಸಿಸುತ್ತಲಿರುವೆ. ಎಂದು ಹೇಳುತಾ, ಟ್ಟೆ ಬುಟ್ಟೆಯನ್ನು ಬಿಸಾಡಿ ಬಲೆಯನ್ನು ತೊಳೆದು ಪತ್ತೊಂದು ಸಮು ದ್ರದಲ್ಲಿ ಬಲೆಬೀಸಿನೋಡಲು, ನುರುಪೆಕಲ್ಲುಗಳೂ, ಪಾಚಿಯೂ, ಮಣ್ಣಿ ಕುಡಿ ಕ್ಷಸುಗಳೂ, ಇವ್ಯಾ ಜೊರತು, ಮತ್ತೇನು ಬರಲಿಲ್ಲ. ಇದರಿಂದ ಅವನಿಗುಂಟಾದ ದುಃಖವನ್ನು ಹೇಳಿಕೊಳ್ಳಲಾಗದು. ಆದರೂ, ಅವನು ಸ್ವಾಭಿನಚಿತ್ತನಾಗಿಯೇ ಇದ್ದನು. ಆದರೆ ಆತನು ಉತ್ತಮ ನಾದ ಮಾನಸಲ್ಲಾ ನನ್ನಾಮದರಿಂದ ತಕ್ಕರು ಮೂಡುವೇಕಾದ ಬೆಳಗಿನ ಕೆಲಸ ಗಳನ್ನೆಲ್ಲಾ ಮುಗಿಸಿ, ಪವಿತ್ರವಾದ್ದನಾಗಿ ದೇವರನ್ನು ಪ್ರಾರ್ಥಿಸುತ್ತಾ, ಹೀಗೆಂದು ಹೇಳಿದನು. "ಸ್ವಾಮಿ! ನಾನು ಏನಕ್ಕೆ ನಾಲ್ಕು ಬಾರಿಗಿಂತಲೂ, ಬಲೆ ಬೀಸಿ ಬರಿ ಕಾಳಸನಿಲ್ಲವೆಂಬುದು, ನಿನಗೆ ಚೆನ್ನಾಗಿ ತಿಳಿದುಬಂದಿರು ವುದು. ಈ ಪರಿಗೆ ಮೂರ ಬಾರಿ ಬಲೆಯನ್ನು ಬೀಸಿದರೂ, ನನ್ನ ಶ್ರ ಮಕ್ಕೆ ತಕ್ಕ ಫಲವಾಗಲಿಲ್ಲ. ಇನ್ನೊಂದುಸಾರಿಯೆಲ್ಲವೆ ನಾನು ಬಲೆಯ ನ್ನು ಹಾಕಿ ನೋಡಬೇಕಾಗಿರುವುದು? ಆದುದರಿಂದ ತಪ್ಪು ನನ್ನದೇ ಆಗಿ ದ್ದಲ್ಲಿ, ಪೂರ್ವದಲ್ಲಿ ಮೆಹಾನೀಸನಿಗೆ ಸಮುದ್ರದಲ್ಲಿ ಅನುಗ್ರಹವನ್ನು ತೋರಿದವನೆ, ನನ್ನನ್ನು ಕಾಪಾಡಬೇಕೆಂದು, ಪ್ರಾರ್ಥಿಸಿಕೊಂಡು, ಎಂದಿ ನಂತೆ ಬಲೆಯನ್ನು ಹಾಕಿ ಎಳೆದುನೋಡಲಾಗಿ ಅದರಲ್ಲಿ ಏನೂ ಸಿಕ್ಕಾದೆರೊ ಇರಲಿಲ್ಲ. ಆದರೂ, ಅದರಲ್ಲಿ ಒಂದು ಹಿತ್ತಾಳೆಯ ಜಾತಿಯ ಕೊಡ ಬಂದಿತು. ಅದರಲ್ಲಿ ಏನೋ ಭರಿಸಿದಂತೆ ಕಂಡಿತು. ಅದರ ಬಾಯಿಯನ್ನು ಚೆನ್ನಾಗಿ ಮುಚ್ಚಿ ಸೀಸದ ಮುದ್ರೆಗಳನ್ನು ಹಾಕಿದ ವಿಷಯದಿಂದ ಕೂ ಡಿದ್ದು ಹಾಗೆ ಕಾಣಬಂದಿತು. ಅದನ್ನು ನೋಡಿ ತೋಷಿಸುತ್ತಾ ಇದನ್ನು

ವೂರಿ ಇದರಿಂದ ಬರುವ ಹಣದಲ್ಲಿ ಧಾನ್ಯವನ್ನು ಕೊಂಡುಕೊಳ್ಳಬಹುದೆಂದು ಯೋಚಿಸಿ, ಪಾತ್ರೆಯನ್ನು ತಿರುಗಿಸಿನೋಡಿ, ಒಳಗೇನಾದರೂ, ಇರಬಹುದೆಂದು, ಅಲ್ಲಾಡಿಸಿ ನೋಡಲಾಗಿ ಶಬ್ದವೇನೂ ಕೇಳಬರಲಿಲ್ಲ.

ಬಾಯಿಗೆ ಸೀಸದಮುದ್ರೆಯನ್ನು ಹಾಕಿರುವುದರಿಂದ, ಅದರಲ್ಲೇನೋ ಉತ್ತಮವಾದ ಪದಾರ್ಥವಿರಬಹುದೆಂದು ತಿಳಿದು, ಅವನ್ನು ತೆಗೆದು ನೋಡಬೇಕೆಂದು, ಚೂರಿಯೊಂದನ್ನು ತೆಗೆದುಕೊಂಡು, ಸುಲಭವಾಗಿಯೆ ಅದನ್ನು ತೆಗೆದು ಬೋರಲುಹಾಕಿದನು. ಆದರೂ ಅದರಿಂದೇನು ಬೀಳಲಿಲ್ಲವಾದುದರಿಂದ, ಅದನ್ನು ತಿರುಗಿ ತನ್ನ ಬಳಿಯೆಲ್ಲಿಟ್ಟುಕೊಂಡು, ನೋಡುತ್ತಿರುವಲ್ಲಿ, ಒಳಗಿನಿಂದ ಹೊಗೆಯು ಹೊರಬಿತು. ಆದುದರಿಂದ ಅವನು ಭಯದಿಂದ ಸ್ವಲ್ಪದೂರ ಹೋಗಿ ನಿಂತುಕೊಂಡನು. ಆ ಹೊಗೆಯು ಸಮುದ್ರವನ್ನು, ಆಕಾಶವನ್ನು, ಮುತ್ತಿಕೊಂಡು ಮೋಘಗಳನ್ನು ಮುಸುಕಿಕೊಂಡಿತು. ಅದುಸರಿಂದ ಅತನಿಗೆ ತುಂಬ ಆಶ್ಚರ್ಯವಾಗಿರಬಹುದೆಂದು, ನನಗೂ ತೋರುತ್ತದೆಯೆಲ್ಲವೆ ? ಆ ಹೊಗೆಯೆಲ್ಲವೂ ಹೊರ ಹೊರಟಮೇಲೆ ಆ ಪಾತ್ರೆಯು ದೊಡ್ಡದಾಗಿ ರಾಕ್ಷಸಾಕಾರಕ್ಕಿಂತಲೂ, ಅತಿಶಯವೆನಾದ ಮತ್ತೊಂದು ಭೂತಾಕಾರವನ್ನು ಹೊಂದಿ ತೋರುತ್ತಿರಲು ಆ ಜಿಸ್ತನು ಅತ್ಯಂತ ಭಯದಿಂದ ನಡುಗುತಾ, ದೂರಹೋದನೇ ಹೊರತು, ಭಯದಿಂದ ಮುಂಜೆ ನಜೆಯುವುದಕ್ಕೂ, ಶಕ್ತಿಹೀನವನಾಗಿದ್ದನು.

ಆ ಬಳಿಕ ಆ ಭೂತವು ಸಾಲೋಮೋರ್ಕ, ಸೇಲೋಮೋರ್ಕ, ರಕ್ಷಿಸು, ರಕ್ಷಿಸು, ಇನ್ನುನೀನಿ ನಿನ್ನ ಆಜ್ಞೆಯನುಸಾರವಾಗಿರುವೆನೇ ಹೊರತು ಯಾವ ವಿಧದಲ್ಲಿಯೂ, ನಿನಗೆ ಪ್ರತಿಕೂಲವಾಗಿರುವುದಿಲ್ಲವೆಂದು ಕೂಗಿಕೊಂಡಿತು. ಅಷ್ಟರಲ್ಲಿ ಜಿಳಗಾಮುಖದಿಂದ ಷಹರಜಾದಿಯು, ಕಥೆಯನ್ನು ನಿಲ್ಲಿಸಿದಳು. ದಿನರಜಾದಿಯು, ಇದು ಇನ್ನೂ ಅದ್ಭುತವಾದ ಕಥೆ, ಕೇಳಬೇಕೆಂಬ ಆಸೆ ನನಗೆ ತುಂಬ ಇರುವುದೆಂದು, ಹೊಗಳಿದುದನ್ನುನೋಡಿ ಸುಲ್ತಾನನು ಈಕಥೆಯು ಮುಗಿಯುವವರೆಗೂ, ರಾಣಿಯನ್ನು ಕೊಲ್ಲ ಕೂಡದೆಂದು ಹೇಳಿದನು.

ಹತ್ತನೆಯ ರಾತ್ರಿಕಥೆ.

ಎಂದಿನಂತೆ ದಿನರಜೋದಿಯೆಬೆಳಗಿನಜಾವದಲ್ಲಿ ನಿದ್ರೆತಿಳಿದೆದ್ದು ಅಕ್ಕಾ ! ನೀನು ನಿನ್ನೆಯೆದಿನ ಅರ್ಧಾಂತ್ಯವಾಗಿ ಬಿಟ್ಟ ಇರುವ ಕಥೆಯನ್ನು ಕೊನೆಸಾಗಿಸೆಂದು ಕೇಳಲು ಸುಲಾತ್ತನರೂ, ಅದೇ ಅಭಿಲಾಷೆಯಿಂದಿರುವುದನ್ನು ನೋಡಿ ಷಹರಜೋದಿಯು ಹೇಳತೊಡಗಿದಳು,ಸುಲಾತ್ತನರೇ ! ಹೀಗೆಂದು ಮಾತನ್ನು ಕೇಳಿ ಬಿಸ್ತ್ರವನು ಭೂತವನ್ನು ಕುರಿತು ಎಲೈ ಮೂಢಭೂತವೇ ದೀರ್ಘದರ್ಶಿಯಾದ ಸಾಲೋಮೋನನು ಸತ್ತು, ಇಂದಿಗೆ ಸಾವಿರದಮುನ್ನೂರು ವರ್ಷಗಳು ಕಳೆದುಹೋದವಲ್ಲಾ ! ನೀನು ಹೇಗೆ ಈ ಪಾತ್ರೆಯಲ್ಲಿ ಮುಚ್ಚಲ್ಪಟ್ಟೆದ್ದೆ ಎಂದು ಕೇಳಿದನು. ಆತನನ್ನು ನೋಡಿ ಭೂತವು ಅತ್ಯಂತವಾದ ಕೂರದೃಷ್ಟಿಯಿಂದ ನೋಡಿ, ನೀನು ನನ್ನನ್ನು ಮರ್ಯಾದಾಯುಕ್ತವಾಗಿ ಮಾತನಾಡಿಸುವುದಕ್ಕೆ, ಮರೆತು, ಮೂಢದೆವ್ವವೇ ಎಂದು ಕೂಗಿದೆಯೋ ಎಂದು ನುಡಿದೆಯಾ, ಎನಲು ಬಿಸ್ತ್ರನು ಹಾಗಾದರೆ ಇನ್ನು ಮರ್ಯಾದೆಯಾಗಿ ನಿನ್ನನ್ನು ಅದೃಷ್ಟಶಾಲಿಯಾದ ಗೊಡ್ಡು ಗೂಬೆಯೆಂದು ಹೇಳಲಿ, ಎಂದನು. ಅದಕ್ಕೆ ಆ ಭೂತವು ಹೆಚ್ಚುಮಾತನಾಡಿದರೆ ನಿನ್ನನ್ನು ಬಲಿತೆಗೆದುಕೊಳ್ಳುವೆನೆಂಬುದನ್ನು ಮರೆತೆಯೋ, ಎಂದು ಹೇಳಿದನು. ಆಹಾ ! ಅದಕ್ಕೆ ಅಲ್ಲವೆ, ನಿನ್ನ ಮೊದಲಿನ ಚಹರೆಯನ್ನು ಬಿಡಿಸಿರುವೆನಲ್ಲಾ ಎಂದು ಬಿಸ್ತ್ರವನು ಹೇಳಿದನು. ಹೌದು ಅದು ನನಗೆ ಜ್ಞಾಪಕವುಂಟು ಆದರೆ ನಿನ್ನನ್ನು ಕೊಲ್ಲುವುದಕ್ಕೆ ಅದು ನನಗೆ ಅಡ್ಡವಲ್ಲ ಆದರೆ ನಾನು ನಿನಗೆ ಮಾಡಬೇಕಾದ ಉಪಕಾರ ವೊಂದುಂಟೆಂದು ಹೇಳಿದ ಭೂತವನ್ನು ನೋಡಿ ಬಿಸ್ತ್ರವನು, ಏನೆಂದು ಕೇಳಿದನು. ಏನೆಂದೆ ನಿನ್ನನ್ನು ಕೊಂದುತಿನ್ನುವುದಕ್ಕೆ ಸಮ್ಮತಿಸುವುದೇ ಎಂದುಹೇಳಿದ ರಾಕ್ಷಸನ ಮಾತನ್ನು ಕೇಳಿ ಬಿಸ್ತ್ರವನು ನಾನು ನಿನಗೆ ಮಾಡಿದುಪಕಾರಕ್ಕೆ ನೀನು ನನಗೆ ಮಾಡಬೇಕೆಂದಿರುವುದಿದೆಯೋ , ಎಂದುಕೇಳಿದನು. ಅದನ್ನು ನಾನು ಬೇರೇವಿಧದಿಂದ ಮಾಡುವೆನು ನನ್ನ ಕಥೆಯನ್ನು ಕೇಳೆಂದು ಭೂತವು ಹೇಳತೊಡಗಿತು.

ಏನಂದರೆ :— ಭಗವಂತನ ಚಿತ್ತಕ್ಕೆ ವ್ಯತಿರಿಕ್ತವಾಗಿ ನಡೆದ ಪಿಶಾಚಿಗಳಲ್ಲೊಬ್ಬನಾದ ನನಗೆ ದೀರ್ಘದರ್ಶಿಯಾದ ಸಾಲೋಮೋನನಲ್ಲಿ ಭಕ್ತಿಯುಂಟಾಗಿ ಆತನಿಗೆ ವಿಧೇಯನಾಗಿದ್ದೆನು. ನಾನು ಸಾಹುಕಾರನು ಮೂತ್ರ ಅಂತಹ ನೀಚಕಾರ್ಯವನ್ನು ಮಾಡಲಿಲ್ಲ. ಭಾರಾಬ್ಯಾ ಎಂಬ ದೊಡ್ಡರಾಜನು ಅವನಮಗನಾದ ತನ್ನ ಪ್ರಧಾನ ಮಂತ್ರಿಯು, ಆಸಾಪು ಎಂಬುವನನ್ನು ಕಳುಹಿಸಿ ನನ್ನನ್ನು ಹಿಡಿದು ತರುವಂತೆ ಹೇಳಿದನು. ಅವನು ಅದರಂತೆಯೇ ನನ್ನನ್ನು ಹಿಡಿದು ತೆಗೆದುಕೊಂಡು ಹೋದನು. ಆಗ ದಾವಿದನ ಮಗನಾದ ಸಾಲೋಮೋನನು ನನ್ನನು ನೋಡಿ, ನಿನ್ನ ದುರ್ಮಾರ್ಗವನ್ನು ಬಿಟ್ಟು, ನನ್ನನ್ನು ದೊರೆಯೆಂದು ಹೇಳಿ ಒಪ್ಪಿಕೊಳ್ಳಂದು ಹೇಳಿದರು. ಬಳಿಕ ನಾನು ನಿನಗೆ ವಿಧೇಯನಾಗಿರುವುದಿಲ್ಲ ನಿಮ್ಮಪ್ರೀತಿಗೆ ಪಾತ್ರನಾಗುವುದಕ್ಕಿಂತಲೂ, ನಿಮ್ಮಕೋಪವನ್ನು ಹೆಚ್ಚಿಸಿಕೊಳ್ಳುವುದೇ ಉತ್ತಮವೆಂದು ನಾನು ಹೇಳಿದೆನು. ಆದುದರಿಂದ ಆತನು ಕೋಪಗೊಂಡು ನನ್ನನ್ನು ಒಂದುಹಿತ್ತಾಳೆಯಪಾತ್ರೆಯಲ್ಲಿ ಹಾಕಿಬೊರಗೆ ಬರದಂತಿರುವುದಕ್ಕಾಗಿ ಸೀಸದಮುದ್ರೆಯನ್ನು ಬೆಸುಗೆಹಾಕಿ ಅದನ್ನು ತನಗೆವಿಧೇಯನಾದ ಒಬ್ಬ ರಾಕ್ಷಸನಕೈಯ್ಯಲ್ಲಿ ಕೊಟ್ಟು ಇದನ್ನು ಸಮುದ್ರದಲ್ಲಿ ಬಿಸಾಡೆಂದು ಹೇಳಿದನು. ಅವನು ಹಾಗೆ ಮಾಡಿದುದರಿಂದ ನಾನು ವ್ಯಸನವನ್ನು ಹೊಂದಿದೆನು. ಹೀಗೆ ನನ್ನನ್ನು ಸಮುದ್ರದಲ್ಲಿ ಹಾಕಿದ ಮೇಲೆ ನಾನು ನೂರು ಸಂವತ್ಸರಗಳೊಳಗಾಗಿ ಯಾರಾದರೂ ನನ್ನ ಸೆರೆಯನ್ನು ಬಿಡಿಸಿದರೆ ಅವರಿಗೆ ತೃಪ್ತಿಯನ್ನುಂಟುಮಾಡುವೆನೆಂದು ಭಗವಂತನನ್ನು ಕೇಳಿಕೊಂಡೆನು. ಆದರೂ ಯಾರು ನನ್ನಸೆರೆಯನ್ನು ಬಿಡುಗಡೆಮಾಡಲಿಲ್ಲ. ಮತ್ತೊಂದು ನೂರು ವರ್ಷದೊಳಗಾಗಿ ನನ್ನ ಸೆರೆಯನ್ನು ಕಳಚಿದವರಿಗೆ ಉತ್ತಮವಾದ ನಿಧಿಗಳನ್ನೇ ಕೊಡುವೆನೆಂದು ಪ್ರಾರ್ಥಿಸಿದೆನು. ಅದೂ ನಿಷ್ಫಲವಾದುದರಿಂದ ಮಗುಳೊಂದುಬಾರಿ ನನ್ನ ಕಷ್ಟವನ್ನು ತಪ್ಪಿಸಿದವರಿಗೆ ಅಶರೀರದಿಂದ ಉಂಟಾಗುವ ಬ್ರಹ್ಮಾನಂದವನ್ನುಂಟುಮಾಡುವೆನೆಂದು ಬೇಡಿಕೊಂಡೆನು. ಆದರೂ ಯೇನೂ ಪ್ರಯೋಜನವಿಲ್ಲವಾಯ್ತು. ಹೀಗೆ ಅನೇಕವೇಳೆ ಬಹುವಿಧವಾಗಿ ಪ್ರಾರ್ಥನೆ ಮಾಡಿಕೊಂಡರೂ ಯಾರೂ ನನ್ನಸೆರೆಯನ್ನು ಬಿಡುಗಡೆ ಮಾಡಲಿಲ್ಲವಾದುದರಿಂದ ಇನ್ನುಮೇಲೆ ನನ್ನ ಸೆರೆ ಬಿಡಿಸಿದವರನ್ನು ಖಂಡಿತವಾಗಿಯೂ, ಕೊಂದು

ಹಾಕುವುದೇ ಸರಿಯೆಂದು ಭಗವಂತನಮೇಲೆ ಆಣೆಯನ್ನಿಟ್ಟುಕೊಂಡೆನು. ಆದಕಾರಣ ನೀನು ಈಗ ನನ್ನಸೆರೆಯನ್ನು ಬಿಡುಗಡೆಮಾಡಿದುದಕ್ಕಾಗಿ, ನಿನ್ನನ್ನು ಕೊಲ್ಲುವುದೆ ನನ್ನ ಪ್ರತ್ಯುಪಕಾರವೆಂದು ರಾಕ್ಷಸನು ಹೇಳಿದನು. ಹೀಗೆಹೇಳಿದ ಮಾತುಗಳನ್ನುಕೇಳಿದ ದುರ್ಭಾಗ್ಯನಾದ ಆ ಬೆಸ್ತರವನು, ಅಯ್ಯೋ! ನಾನು ಇಲ್ಲಿಗೇಕೆಬಂದೆನು, ಬಂದರೂ ಇವನಿಗೇಕೆ ಇಂತಹ ಉಪಕಾರವನ್ನು ಮಾಡಿದೆನು, ಎಂಬದಾಗಿ ಅಳುತಾ ಆ ಭೂತವನ್ನು ನೋಡಿ ಅಯ್ಯಾ! ನೀನು ಮಾಡಬೇಕೆಂದಿರುವ ಅನ್ಯಾಯವನ್ನು ಕುರಿತು, ವಿಚಾರಮಾಡಿ ನನ್ನಪ್ರಾಣವನ್ನುಳಿಸಿದರೆ ಭಗವಂತನು ನಿನ್ನನ್ನು ರಕ್ಷಿಸುವನು. ಇದರಿಂದ ನಿನಗೆ ಉತ್ತಮವಾದಗತಿಯುಂಟಾಗುವುದೆಂದು ನುಡಿಯೆಲು ಭೂತವು ಆಹಾ! ಹಾಗೆಂದಿಗೂ ಆಗದು ನೀನು ಯಾವಪದಾರ್ಥವನ್ನುತಿಂದು ಸಾಯೆಬೇಕೆಂದಿರುವೆಯೋ ಅದನ್ನು ತಿಳಿಸೆಂದು ಕೇಳಲು ಬೆಸ್ತರವನು, ಆ ಮೂತುಗಳು ಅಪೊಟ್ಟಂದು ಖಂಡಿತವಾಗಿರುವುದನ್ನು ಕಂಡು ತನ್ನಮರಣಕ್ಕೆ ಹೆದರಿ ವ್ಯಸನಪಡದಿದ್ದರೂ ತನ್ನ ಮೂವ್ವರು ಮುಕ್ಕಳಿಗೆ ಯಾವ ಅವಲಂಬನವೂ ಇಲ್ಲದಿರುವುದನ್ನುನೋಡಿ ಮಹಾ ವ್ಯಸನದಿಂದ ಆ ಭೂತವನ್ನು ಸಮೂಧಾನಮಾಡತೊಡಗಿದನು. ಅಯ್ಯಾ! ತಾವು ದಯವಿಟ್ಟು ನಾನು ನಿಮಗೆ ಮಾಡಿದುಪಕಾರವನ್ನು ಚೆನ್ನಾಗಿ ವಿಚಾರಿಸಿ ನನ್ನನ್ನು ಪ್ರಾಣಸಹಿತವಾಗಿಬಿಟ್ಟು ಕಾಪಾಡಬೇಕೆಂದು ಬೇಡಲು, ಅದಕ್ಕಾಗಿಯೇ ನಿನ್ನನ್ನು ಕೊಲ್ಲಬೇಕೆಂದು ಮೊದಲೇ ಗೊತ್ತುಮಾಡಿರುವೆನಲ್ಲಾ ಎನಲು ಆಹಾ! ಎಷ್ಟು ಚೆನ್ನಾಗಿ ಹೇಳಿದಿರಿ ಉಪಕಾರಮಾಡಿದವರಿಗೆ ನೀಚರು ಅಪಕಾರವನ್ನೇ ಮಾಡುವರೇ ಹೊರತು ಎಂದಿಗೂ ಪ್ರತ್ಯುಪಕಾರವನ್ನು ಮಾಡಲಾರರೆಂಬ ಲೋಕವಾರ್ತೆಯು ನಿಮ್ಮಲ್ಲಿ ಚೆನ್ನಾಗಿ ಕಂಡುಬರುವುದಲ್ಲಾ ನೀವು ಇದನ್ನು ಖಂಡಿತವಾಗಿಯೂ, ಗೊತ್ತುಮಾಡಿರುವಿರಾ ಎಂದುಕೇಳಲು, ಅಯ್ಯಾ! ನಿನ್ನಸಂಗಡ ಅತಿಯಾಗಿ ಮಾತನಾಡಿ ಕಾಲವನ್ನು ಕಳೆಯುವುದು ನನಗೆ ಸಮ್ಮತವಲ್ಲ. ಆದುದರಿಂದ ನಿನ್ನನ್ನು ಈ ಘಳಿಗೆಯೆಲ್ಲಿ ಕೊಂದು ತಿನ್ನಬೇಕೆಂದಿರುವೆನು, ನೀನು ಯಾವಪದಾರ್ಥವನ್ನು ತಿಂದು ಸಾಯೆಬೇಕೆಂದಿರುವೆಯೋ ಜಾಗ್ರತೆಯಾಗಿ ಹೇಳೆಂದು ಕೇಳಿದನು.

ಆಗ ಚಿಸ್ತಾರವನು ಸಮಯವೇ ಸಾಕ್ಷಾತ್ಕಲ್ಪವೃಕ್ಷವೆಂಬ ನಾಣ್ಣು ಡಿಯೆಂತೆ ಒಂದಾನೊಂದು ಉಪಾಯವನ್ನು ತಿಳಿದು ಆ ಭೂತವನ್ನು ಕುರಿತು ಎಲೈ ಭೂತರಾಜನೇ ಆದರೆ ನಾನುಸಾಯುತಕ್ಕವನೇಹೊರತು ಮತ್ತು ಬೇರೆ ಇಲ್ಲ. ಆದುದರಿಂದ ನಾನು ಭಗವಂತನ ಪ್ರೀತಿಗಾಗಿ ಅವನದಾರಿಗೆ ಕಟ್ಟುಬಿದ್ದು ಪ್ರಾಣವನ್ನುಬಿಡುವೆನು. ಆದರೆ ನಾನು ಸಾಯುವುದಕ್ಕೆ ಮುಂಚೆ ನಿನಗೆಹಾಕುವ ಪ್ರಶ್ನೆಗಳಿಗೆ ತಕ್ಕ ಉತ್ತರವನ್ನು ಹೇಳು, ಅದ ನ್ನು ನೀನುಹೇಳದಿದ್ದರೆ ದಾವಿಡನಮಗನಾದ ದೀರ್ಘದರ್ಶಿಯಾದ ಸಾಲೋ ಮೂನನನ್ನು ನಿನ್ನಪಾತ್ರಹಾಕಿರುವ ಮುದ್ರೆಯು ಆಣೆಯೆಂದು ಹೇಳಿದನು ಹೀಗೆ ಆಣೆಯನ್ನಿಟ್ಟುದಕ್ಕೆ ಆ ಭೂತವು ಹೆದರಿ ನಡುಗುತ್ತಾ ನಿನಗಿಷ್ಟ ವಾದ ಪ್ರಶ್ನೆಯನ್ನು ಜಾಗ್ರತೆಯಾಗಿಕೇಳು, ಎಂದುಕೇಳಿತು. ಬಿಳಗಾದ ಕೂಡಲೇ ಷಹರಜಾದಿಯು ಕಥೆಯನ್ನು ನಿಲ್ಲಿಸಿದಳು. ದಿನರಜಾದಿಯು ಅಕ್ಕಾ ಈ ಕಥೆಯು ಬೆಚ್ಚಾದ ಆನಂದವನ್ನು ನನಗೆ ಉಂಟುಮಾಡಿತು. ಪ್ರಾಯಶಃ ಸುಲ್ತಾನರೂ ಸಂತೋಷವನ್ನು ಹೊಂದಿರಬಹುದು. ಆದು ದರಿಂದ ಈ ಕಥೆಯನ್ನು ಪೂರ್ತಿಮಾಡುವವರೆಗೂ, ನಿನ್ನ ಪ್ರಾಣವನ್ನುಳ ಸಿ ಕಾಪಾಡುವರೆಂದು ಹೇಳಲು ಅದಕ್ಕೆ ಸಮ್ಮತಿಸಿದವನಾಗಿ ಸುಲ್ತಾನನು, ನಿದ್ರೆಯಿಂದೆದ್ದು ತನ್ನ ರಾಜಕಾರ್ಯಕ್ಕಾಗಿ ಹೊರಟು ಹೋಗುತ್ತಾ ಷಹರಜಾದಿಯನ್ನು ಕೊಲ್ಲಕೂಡದೆಂದು ಆಜ್ಞಾಪಿಸಿದರು.

ಹನ್ನೊಂದನೆಯ ರಾತ್ರಿ ಕಥೆ.

ಮರುದಿನ ಬೆಳಗಿನಜಾವದಲ್ಲಿ ದಿನರಜಾದಿಯು ಎಚ್ಚರಗೊಂ ಡು ಷಹರಜಾದಿಯನ್ನು ಕುರಿತು, ಅಕ್ಕಾ ! ನೀನು ನಿನ್ನೆಯರಾತ್ರಿ ಮು ಗಿಸದೆ ಉಳಿಸಿರುವ ಬೆಸ್ತರವನಕಥೆಯನ್ನು ಹೇಳಿ ಮುಗಿಸು, ಆಗಲೆ ಬೆಳ ಗಾಗುತಬಂದಿತು. ನನಗಾದರೋ ಕಥೆಯನ್ನು ಕೊನೆಮುಟ್ಟಿ ಕೇಳಬೇ ಕೆಂಬ ಆಸೆ ತುಂಬ ಇರುವುದೆಂದು ಹೇಳಿದಂತೆ ಸುಲ್ತಾನನು, ಒಪ್ಪಿಗೆಯ ನ್ನುಕೊಡಲು ಷಹರಜಾದಿಯು, ಕಥೆಯನ್ನು ಹೇಳತೊಡಗಿದಳದೆಂತೆನೆ,

ಹೀಗೆ ಖಂಡಿತವಾಗಿಯೂ ವರ್ಣಿಸಿದ ಭೂತವನ್ನು ನೋಡಿ ಬೆಸ್ತನು ನೀನು ಭಗವಂತನ ಪಾದದಾಣೆಗೂ ಈ ಪಾತ್ರೆಯೊಳಗೆ ಇದ್ದೆಯೊ ಎಂದು ಕೇಳಿದನು. ಅದಕ್ಕೆ ಆ ಭೂತವು ಭಗವಂತನ ಸಾಕ್ಷಿಯಾಗಿಯೂ ನಾನು ಅದರಲ್ಲೇ ಇದ್ದುದು, ನಿಜವೆನಲು, ಆಹಾ ! ನಾನು ನೋಡುತ್ತಿರುವಲ್ಲಿ ಈ ನಿನ್ನದೇ ಹದಲ್ಲಿ ಬಂದು ಭಾಗವಾದರೂ, ಈ ಪಾತ್ರೆಗೆ ಅಡಕವಾಗುವುದಿಲ್ಲವಲಾ ಇಂಥದುರಲ್ಲಿ ನೀನು ಇದರೊಳಗೆ ಹೇಗೆ ಇದ್ದೆಯೋ ನಾನು ಕಾಣೆನೆಂದು ಹೇಳಿದೆನು. ಅದನ್ನು ಕೇಳಿ ಭೂತವು ಅಯ್ಯಾ ! ಖಂಡಿತವಾಗಿಯೂ ನಾನು ಇದರಲ್ಲಿಯೇ ಇದ್ದೆನೆಂದು ಹೇಳಿದರೂ, ಒಪ್ಪದೆ ಪುನಹ ನೀನು ಅದರೊಳಗೆ ಪ್ರವೇಶಮಾಡಿ ತೋರಿಸಿದಜೊರತು, ನಾನು ನಂಬಲಾರೆನೆಂದು ಹೇಳಿದ ಬೆಸ್ತನವಮಾತನ್ನು ಕೇಳಿ ಭೂತವು ಮೊದಲಿನಂತೆ ಹೊಗೆಯಾಗಿ ಕರಗಿಹೋಗಿ ಸಂಕೋಚಭಾವವನ್ನು ಹೊಂದಿ ಆಪಾತ್ರೆಯಲ್ಲಿ ಸೇರಿಕೊಂಡು ಅಯ್ಯಾ ! ಸಂದೇಹಶಾಲಿಯೂದ ಬೆಸ್ತನೇ ಈಗಲಾದರೂನೋಡು ಸಂಪೂರ್ಣವಾಗಿ ನಾನು ಪಾತ್ರೆಯಲ್ಲಿ ಅಡಗಿಕೊಂಡಿರುವೆನು, ಹೀಗೆಯೇ ನಾನು ಮೊದಲಿದ್ದುದೇ ಹೌದು ನಿನ್ನ ಸಂಶಯವು ಪರಿಹಾರವಾಯ್ತೋ ಎಂದು ಘಟ್ಟಿಯಾಗಿ ಕೂಗಿ ಹೇಳಿದನು. ಬಳಿಕ ಆತನು ಜಾಗ್ರತೆಯಾಗಿ ಆಸೀಸದ ಮುಚ್ಚಳವನ್ನು ತೆಗೆದುಕೊಂಡು ಭದ್ರವಾಗಿಮುಚ್ಚಿ ಎಲೈ ಭೂತವೇ ನೀನು ನನ್ನನ್ನು ತಿನ್ನುವುದಕ್ಕಾಗಿ ನಿನಗೆ ಇಷ್ಟವಾದ ಪದಾರ್ಥವಾವುದೆಂದು ಕೇಳಿದೆಯೆಷ್ಟ ? ನಾನು ಅದನ್ನೆಂದಿಗೂ ಹೇಳುವುದಿಲ್ಲ. ನಾನು ನಿನ್ನ ಸೆರೆಯನ್ನು ಬಿಡಿಸಿ ಸಮುದ್ರದಿಂದ ಹೊರಗೆ ತೆಗೆದುದರಿಂದಲಲ್ಲವೆ ನೀನು ನನ್ನನ್ನು ಸಾಯಿಗೊಳ್ಳುವೆನೆಂದು ಹೇಳಿದೆ ಈಗ ನಾನು ಮರಳಿ ನಿನ್ನನ್ನು ಸಮುದ್ರದಲ್ಲಿಹಾಕಿಬಿಟ್ಟು ಸುಮ್ಮನೆ ಹೊರಟುಹೋಗದೆ ಇಲ್ಲಿಯೇ ಮನೆಯನ್ನುಕಟ್ಟಿಕೊಂಡು ವಾಸವೂಡುತ್ತಾ ಇಲ್ಲಿಗೆ ಬಿಂದು ಬೀಟೆಯೊಡುವುದಕ್ಕಾಗಿ ಬರುವ ಬೆಸ್ತರಿಗೆ ನಿನ್ನ ವರ್ತಮಾನವನ್ನು ತಿಳಿಯಹೇಳುವೆನು. ಈ ಸ್ಥಳದಲ್ಲಿ ಬಂದು ಭೂತವಿದೆ ಅದರಸೆರೆಯನ್ನುಬಿಡಿಸಿ ಹೊರಕ್ಕೆ ತೆಗೆದವರನ್ನು ಅದು ಕೊಂದು ತಿನ್ನುವೆನೆಂದು ಶಪಥವೂಡಿರುವುದರಿಂದ ಎಚ್ಚರಿಕೆಯುಳ್ಳವರಾಗಿರಿ ಎಂದು ಸಾರಿಹೇಳುವೆನು, ಎಂದನು.

ಆ ಮೂತನ್ನುಕೇಳಿ ಭೂತವು ಅತ್ಯಂತ ಕೋಪವನ್ನುತಾಳಿ ಹೊರಗೆ ಬರುವುದಕ್ಕಾಗಿ ನಾನಾಪ್ರಯತ್ನಗಳನ್ನು ಮಾಡಿದರೂ, ಬಾಯಿಗೆ ಬಲವಾಗಿ ಹಾಕಿರುವ ಸಾಲೋಪೂನನ ಮುದ್ರೆಯನ್ನುನೋಡಿ ಹೆದರಿ ಕೊಂಡು ತನ್ನಕೋಪವನ್ನು ಪುರಿಮಾಡಿ ಎಲ್ಮೈ ಬಿಸ್ತಾನೆ ನೀನು ಸಮಯೆವನ್ನು ಸರಿಯಾಗಿ ಉಪಯೋಗಿಸಿಕೊಂಡು ನನ್ನನ್ನು ಚೆನ್ನಾಗಿ ಸಿಗ್ರಹಿಸಿದೆ ನಾನು ಇದುವರಿಗೂ ನಿನಗೆಹೇಳಿದ ವಾಕ್ಯಗಳೆಲ್ಲವೂ ಮೂಯಾಕಲ್ಪಿತವಾದವುಗಳು ನಿನ್ನನ್ನು ನಾನು ಕೊಲ್ಲುವೆನೆಂದು ತಿಳಿಯಬೇಡ ಬಾಗಿಲನ್ನು ತೆಗೆದುಬಿಡು, ಎಂದುಹೇಳಿತು. ಎಲ್ಮೈ ಭೂತವೇ ಮೊದಲು ನೀನು ಭೂತಗಳಿಗೆಲ್ಲಕ್ಕಿಂತಲೂ ಅಧಿಕ ಭಯಂಕರವಾದ ಮುಹದಾಕಾರವನ್ನು ಹೊಂದಿದ್ದು ಈಗ ಇಷೊಟ್ಟಂದು ಅಣುವಾಗಿರುವುದನ್ನು ನೋಡಿದರೆ ನಿನ್ನವೂತುಗಳೆಲ್ಲವೂ ಕಪಟವೆಂದು ಸ್ಪಷ್ಟವಾಗುತ್ತದೆಯಾದುದರಿಂದ ನೀನು ಪುನಹ ಸಮುದ್ರವನ್ನು ಸೇರು ನಾನುಬಿಸಾಡುವೆನು. ಭಗವಂತನ ಸನ್ನಿಧಿಯಲ್ಲಿ ನಿನ್ನ ಪಾಪಪುಣ್ಯಗಳವಿಚಾರಣೆಯೆದಿನವು ಬರುವವರೆಗೂ ಅಲ್ಲಿಯೇ ಇರಬಹುದು, ನಾನು ಮೊದಲು ಭಗವಂತನನ್ನು ನೆನೆಯುತ್ತಾ ನನ್ನನ್ನುಕೊಲ್ಲಬೇಡವೆಂದು ಕೇಳಿಕೊಂಡಾಗ ನೀನು ಕೇಳದೆಹೋದೆಯೆಲ್ಲವೆ ಈಗನಾನು ಕೂಡ ನಿನಗೆ ಅದರಂತೆಯೇ ನಡೆಸಬೇಕಾಗಿರುವದರಿಂದ ಹಾಗೆಯೇ ಮಾಡುವೆನೆಂದು ಹೇಳಿದನು.

ಆ ಮೂತನ್ನುಕೇಳಿ ಭೂತವು ಬಿಸ್ತಾನನ್ನು ತನ್ನ ವಶಮಾಡಿಕೊಳ್ಳುವುದಕ್ಕಾಗಿ ತನ್ನಿಂದಾಗುವ ಸಮಸ್ತವಾದ ಪ್ರಯತ್ನಗಳನ್ನುಮಾಡಿತು. ಬಳಿಕ ಅದು ಬಿಸ್ತಾನನ್ನುಕುರಿತು, ಅಯ್ಯಾ ದಯೆವಿಟ್ಟು ಮುಚ್ಚಳವನ್ನು ತೆಗೆದು ನನ್ನನ್ನು ಹೊರಗೆಬಿಡು ನಾನು ನಿನ್ನ ಇಷ್ಟಾನುಸಾರವಾಗಿ ನಡೆದುಕೊಳ್ಳುವೆನು, ಇದು ಪ್ರಮಾಣಪೂರ್ವಕವಾದ ಮೂತು ಸತ್ಯವಾಗಿ ಹೇಳುತ್ತೇನೆಂದು ನುಡಿಯಲು ಬಲೆಗಾರನು ನೀನು ಮಹಾದೊಡ್ಡಿನಿನ್ನನ್ನು ನಂಬಿದುದೇ ಆದರೆ ನನ್ನಪ್ರಾಣವೇ ಹೋಗುವುದು, ಗ್ರೀಕು ದೇಶದ ರಾಜರುಗಳಲ್ಲೊಬ್ಬನು ದೋಬಾನನೆಂಬ ವೈದ್ಯನ ವಿಷಯದಲ್ಲಿ ಮಾಡಿದಂತೆ ನೀನು ನನ್ನ ಇಷ್ಟಾರ್ಥವನ್ನು ನೆರವೇರಿಸಬೇಕೆಂದಿರುವೆಯೆ

ಲ್ಲಾ ! ಆಹಾ ! ಆ ದೋಬಾನನಕಥೆಯನ್ನು ಹೇಳುತ್ತೇನೆ ಸಾವಧಾನ ದಿಂದ ಕೇಳೆಂದು ಹೇಳತೊಡಗಿತು.

ಗ್ರೀಕುರಾಜನನ್ನು ದೋಬಾನನ್ನು ಕುರಿತ ಕಥೆ

ಪರ್ಷಿಯಾರಾಜ್ಯಕ್ಕೆ ಸೇರಿದ ಒಂದಾನೊಂದು ದೇಶದಲ್ಲಿ ಒಬ್ಬ ರಾಜನುಂಟು, ಆತನ ಪ್ರಜೆಗಳೆಲ್ಲರೂ ಗ್ರೀಕ್‌ಜನಗಳಾಗಿದ್ದರು. ಆರಾಜನಿಗೆ ಶರೀರವೆಲ್ಲ ಕುಷ್ಠಮಯವಾಗಿದ್ದಿತು. ಅದನ್ನು ಗುಣಮಾಡುವು ದಕ್ಕಾಗಿ ಬೇಕಾದಷ್ಟುಜನ ವೈದ್ಯರುಬಂದು ತಮ್ಮಸಾಹಸವನ್ನೆಲ್ಲಾ, ಖರ್ಚುಮಾಡಿ, ಮುಂದೆ ಮಾಡಬೇಕಾದುದಿಂಥದೆಂದು ತೋರದೆ ಇದು ಅಸಾಧ್ಯವಾದ ರೋಗವೆಂದು ಹೇಳಿ ಹೊರಟುಹೋದರು. ಹೀಗಿರುವಲ್ಲಿ ದೋಬಾನನೆಂಬ ಒಬ್ಬ ವೈದ್ಯನು ರಾಜನ ಸಭೆಗೆ ಬಂದನು. ಆತನು ಗ್ರೀಕ್, ಪಾರ್ಶಿ, ಅರಾಬಿ, ಲಾಟಿನ್, ಸಿರಿಯಾಕ್, ಹೀಬ್ರು ಭಾಷೆಗಳ ಲ್ಲಿರುವ ವೈದ್ಯಗ್ರಂಥಗಳೆಲ್ಲವನ್ನು ಚೆನ್ನಾಗಿ ಓದಿ ಪಂಡಿತನಾಗಿದ್ದನು. ಅಲ್ಲದೆ ಆತನುಚತುರನಾದ ತಾರ್ಕಿಕನಾಗಿದ್ದುದರಿಂದ ಸಕಲಮೂಲಿಕೆಗಳ ಗುಣಾ ಗುಣಗಳನ್ನು ಚೆನ್ನಾಗಿ ತಿಳಿದುಕೊಂಡು ಸರಿಯಾದಮೂರ್ಖದಿಂದ ಅವುಗಳ ನ್ನುಪಯೋಗಿಸತಕ್ಕ ಪಂಡಿತನಾಗಿದ್ದನು. ಆತನು ರಾಜನಿಗೆಕುಷ್ಠರೋ ಗವು ಪ್ರಾಪ್ತವಾಗಿರುವುದನ್ನು ಅವನಬಳಿಯ ವೈದ್ಯರು ಅದನ್ನು ವಾಸಿ ಮಾಡಲಾರದೆ ಸೋತುಹೋದುದನ್ನು ಕೇಳಿ ಉತ್ತಮವಾದ ಉಡುಪುಗಳ ನ್ನುಹಾಕಿಕೊಂಡು ರಾಜನಬಳಿಗೆಬಂದು ಮಹಾಸ್ವಾಮಿ ! ತಮಗೆ ಸಂಭವಿ ಸಿರುವ ಈ ರೋಗವನ್ನು ನಿಮ್ಮ ವೈದ್ಯರಾರು ಗುಣಪಡಿಸಲಾರದೆ ಹೋದ ರಷ್ಟೆ ? ದಯವಿಟ್ಟು ನನ್ನಚಿಕಿತ್ಸೆಯನ್ನು ಅಂಗೀಕರಿಸುವುದಾದರೆ, ಹೊಟ್ಟೆಗೆ ಔಷಧವನ್ನುಕೊಡದೆ ಹೊರಗೆ ಲೇಪನ ಮಾಡುವುದರಿಂದಲೇ ನಿಮ್ಮರೋಗವು ಗುಣಮುಖವಾಗುವಂತೆ ಮಾಡುವೆನೆಂದು ಬೇಡಿಕೊಂಡನು ರಾಜನು ವೈದ್ಯನನ್ನುಕುರಿತು ಅಯ್ಯಾ ! ನೀನುಹೇಳಿದಂತೆ ನನ್ನರೋ ಗವನ್ನು ವಾಸಿಮಾಡುವುದಾದರೆ ನಿನಗೆ ಉತ್ತಮವಾದಬಹುಮಾನಗಳನ್ನು

ಕೊಡುವುದಲ್ಲದೆ ನನ್ನ ಆಪ್ತರಲ್ಲಿ ಮುಖ್ಯಸ್ಥನಾಗಿ ಭಾವಿಸುವೆನು. ನಿನ್ನ ವಂಶಸ್ಥರೆಲ್ಲರೂ, ಭಾಗ್ಯವಂತರಾಗುವಂತೆ ಮಾಡುವೆನು. ಹೊಟ್ಟೆಗೆ ಔಷಧವನ್ನು ಹೊರಗೆ ಲೇಪನವನ್ನು ಮಾಡಿಕೊಂಡರೆ ಈ ರೋಗವು ನಿಜವಾಗಿಯೂ ನಾಸಿಯಾಗುವುದೇ ಹೇಳೆಂದು ಕೇಳಿದನು.

ವೈದ್ಯನು ಸುಲ್ತಾನರೇ ಭಗವಂತನದಯೆಯಿಂದ ನಾನು ಹಾಗೆಯೇ ಮಾಡಬಲ್ಲೆನು. ಈ ವಿಷಯದಲ್ಲಿ ನಿನಗೆ ನಂಬುಗೆ ಹುಟ್ಟುವಂತೆ, ನಾಳೆ ಪರೀಕ್ಷೆಮಾಡಿ ತೋರಿಸುವೆನೆಂದು ಹೇಳಿದನು. ಮರುದಿನ ವೈದ್ಯನು ತನ್ನ ಬಿಡಪಿಗೆಬಂದು ಚೆಂಡಾಡುವ ಕೋಲನೊಂದನ್ನು ಮಾಡಿಸಿ, ಅದರ ಹಿಡಿಯನ್ನು ಕೊರೆದು ಔಷಧವನ್ನು ಹಾಕಿ ತನಗೆ ಬೇಕಾದ ರೀತಿಯಲ್ಲಿ ಬಂದುಚೆಂಡನ್ನುಮಾಡಿಸಿ, ಎರಡನೆಯದಿನ ಅವುಗಳನ್ನು ತೆಗೆದುಕೊಂಡು, ರಾಜನಬಳಿಗೆಬಂದು ನಮಸ್ಕರಿಸಿ, ಭೂಮಿಯನ್ನು ಮುತ್ತಿಟ್ಟುಕೊಂಡು, ಕುಳಿತುಕೊಂಡ ಮೊತ್ತಿಗೆ ಸೂರ್ಯೋದಯವಾದುದೆಂದು ಷಹರಜಾದಿಯು, ಸುಮ್ಮನಾದಳು. ದಿನರಜಾದಿಯು ಅಕ್ಕಾ ! ಇಂತಹ ಉತ್ತಮವಾದ ಕಥೆಗಳನ್ನು ನೀನೆಕಲಿತುಕೊಂಡಿರುವೆಯೆಲ್ಲಾ ನನಗೆ ಕೇಳಬೇಕೆಂಬ ತುಂಬಾ ಆಸೆಯುಂಟಾಗಿರುವುದು ಏನುಮಾಡಲೆಂದು ಅಂಗಲಾಚಿದಳು. ಷಹರಜಾದಿಯು, ತಂಗೀ ದಯಾವಂತರಾದಸುಲ್ತಾನರುನನ್ನ ಆಯುಸ್ಸನ್ನು ವೃದ್ಧಿಮಾಡುವುದಾದರೆ ಇದಕ್ಕಿಂತಲೂ, ಆಶ್ಚರ್ಯಕರವಾದ ಕಥೆಗಳನ್ನು ಹೇಳುವೆನೆಂದು ಹೇಳಿದಳು. ಷಹರಿಯರನು, ದೋಬಾನನ ಕಥೆಯನ್ನು ಪೂರ್ತಿಯಾಗಿ ಕೇಳಬೇಕೆಂದು ರಾಣಿಯನ್ನು ಕೊಲ್ಲದಂತೆ ಆಜ್ಞಾಪಿಸಿದನು.

ಹನ್ನೆರಡನೆಯ ರಾತ್ರಿ ಕಥೆ

ಮರುದಿನ ಬೆಳಗಿನಜಾವಕ್ಕೆ ಎದ್ದ ಅಕ್ಕನನ್ನು ಕುರಿತು ಪ್ರಿಯಸಹೋದರಿಯೆ ! ಗ್ರೀಕು ರಾಜನಿಗೂ, ದೋಬಾನನೆಂಬ ವೈದ್ಯನಿಗೂ ನಡದ ಕಥೆಯನ್ನು ಮುಂದೆ ಹೇಳೆಂದು ಕೇಳಲು ಷಹರಜಾದಿಯು, ಸುಲ್ತಾನನ ಆಜ್ಞೆಯನ್ನು ಹೊಂದಿ ಮುಂದೆ ಹೇಳತೊಡಗಿದಳು. ಮಹಾಸ್ವಾಮಿ ! ಆ ಬೆಸ್ತರವನು, ಬಾತ್ರೆಯಲ್ಲಿ ಸಿಕ್ಕಿ ನರಳುತ್ತಿರುವ ಭೂತವ

ವನ್ನು ನೋಡಿ ಹೀಗೆಂದು ಹೇಳುತ್ತಿರುವನು. ವೈದ್ಯನು, ರಾಜನನ್ನು ನೋಡಿ, ನೀವು ಕುದುರೆಯನ್ನು ಹತ್ತಿ ಬಾಲೆಂಬ ಚೆಂಡಾಟವನ್ನು ಆಡುವುದಕ್ಕೆ ಬರಬೇಕೆಂದು ಬಿನ್ನವಿಸಿದನು, ರಾಜನು ಹಾಗೆಯೇ ಆಗಲೆಂದು, ಕುದುರೆಯನ್ನು ಹತ್ತಿ, ಹೊರಡಲು ವೈದ್ಯನು ಅವರಬಳಿಗೆ ಹೋಗಿ ಆ ಕೋಲನ್ನುಕೊಟ್ಟು ತ್ವಾನಿನ ನಿನ್ನ ಶರೀರದಲ್ಲಿ ಬೆವರುಬಂದು ಸೋರುವವರೆಗೂ, ಆ ಕೋಲಿನಿಂದ ಚೆಂಡನ್ನುಹೊಡೆಯುತ್ತಾ ಇರು. ಇದರ ಹಿಡಿಯಲ್ಲಿರುವ ಔಷಧವು ನಿಮ್ಮ ಕೈಗಳಮೂಲಕವಾಗಿ ಶರೀರಕ್ಕೆಲ್ಲ ವ್ಯಾಪಿಸುವುದು. ಶರೀರವು ಬೆವರುತ್ತಲಿ ಔಷಧವಗುಣವು ನಿಮಗೆ ಗೊತ್ತಾಗುವುದೆಂದು ಹೇಳಿದನು. ಅಲ್ಲದೆ ಕೂಡಲೆ ಆಟವನ್ನು ಬಿಟ್ಟು ಮನೆಗೆಹೋಗಿ ಬೆಚ್ಚನೆ ಕೈಗಳನ್ನು ಚೆನ್ನಾಗಿ ಉಜ್ಜಿಕೊಂಡು ಸ್ನಾನವಾಡಿ ಊಟವನ್ನು ಆಗಮಾಡಿಸಿ ಮಲಗಿಕೊಂಡರೆ ಬೆಳಿಗ್ಗೆ ಏಳುವ ಹೊತ್ತಿಗೆ ನಿಮ್ಮದೇಹವು ಸ್ವಸ್ಥವಾಗುವುದೆಂದು ಹೇಳಿದನು. ಆತನಮಾತಿನಂತೆ ರಾಜನು ಆ ಕೋಲಿನ ಹಿಡಿಯನ್ನು ಹಿಡಿದುಕೊಂಡು ಚೆಂಡಾಡುತ್ತಾ ಇತರ ಸರದಾರರಸಂಗಡ ಬೆಳಿಗ್ಗೆ ಬೆವರುವವರೆಗೂ, ಚೆಂಡಾಡುತ್ತಿರಲು, ಕೂಡಲೇ ಔಷಧವು ತನ್ನ ಗುಣವನ್ನುತೋರಿಸಿತು. ಕೂಡಲೇ ರಾಜನು ಅರಮನೆಗೆಹೋಗಿ ವೈದ್ಯನುಹೇಳಿದಂತೆ ಉಜ್ಜಿಕೊಂಡು ಸ್ನಾನವಾಡಿ, ರಾತ್ರಿ ಭೋಜನವನ್ನು ತೀರಿಸಿಕೊಂಡು ಮಲಗಿದ್ದು ಬೆಳಿಗ್ಗೆ ಎದ್ದು ನೋಡುವಲ್ಲಿ ರೋಗವಿಲ್ಲದ, ಹೊಸಮನುಷ್ಯನಂತೆ ಕಾಣಬರುತ್ತಿದ್ದು ಸಂತೋಷದಿಂದ ವಸ್ತ್ರಾಲಂಕಾರಗಳನ್ನುಧರಿಸಿ, ದರಬಾರಿಗೆ ಬರುತ್ತಿರುವ ರಾಜನನ್ನು ಎದುರುಗೊಳ್ಳುವುದಕ್ಕೂ, ಹೊಸದಾದ ಔಷಧದಗುಟ್ಟನ್ನು ತಿಳಿದುಕೊಳ್ಳುವುದಕ್ಕೂ, ಸಹ ಪ್ರಯತ್ನಪಟ್ಟು, ಬರುತ್ತಿರುವ ಜನರನ್ನು ಕಂಡನು. ಆಮೇಲೆ ರಾಜನು ಸಿಂಹಾಸನದಲ್ಲಿ ಕುಳಿತಿರಲು ಸಭಿಕರೆಲ್ಲರೂ, ಆತನ ಹೊಸದಾದ ದೇಹವನ್ನು ನೋಡಿ ಸಂತೋಷವನ್ನು ಹೊಂದಿದರು. ವೈದ್ಯನಾದ ದೋಬಾನನು, ಸಭೆಗೆಬಂದು ರಾಜನಿಗೆ ಮುಜರೆಮಾಡಿ ಕುಳಿತುಕೊಂಡನು ಸರ್ವರೂ ಆತನನ್ನು ಹೊಗಳಿದರು. ರಾಜನುವೈದ್ಯನಿಗೆತನ್ನಸ್ವಹಸ್ತದಿಂದ ಖಾಸಾಬಿಡದಿಯೆಲ್ಲಿಅನ್ನವಸ್ತ್ರಾಭರಣವನ್ನು ಕೊಟ್ಟಿಗೂಟವಮಾಡಿಸಿದನು. ಆತನಯೋಗ್ಯತೆಯನ್ನು ಕುರಿತು, ಸಕಲರೂ, ಸೊತ್ತಾರ್ಜನೆಯಾದ ಪೂತುಗಳನ್ನೇ ಆಡಿದರು. ಅಷ್ಟರಲ್ಲಿ ಬೆಳಗಾಮದೆಂಬ ಷಹರಜೌಹರಿಯು, ಕಥೆಯ

ನ್ನು ಮುಗಿಸಿದಳು. ದಿನರಜಾದಿಯು, ಅಕ್ಕಾ ಈ ಕಥೆ ಮಂದೆ ಹೇಗಾಗುವುದೋ ನನಗೆ ತಿಳಿಯದು, ಆದರೂ ಮೊದಲು ಮೊದಲು ಬಹುಸ್ವಾರಸ್ಯವಾಗಿರುವುದರಿಂದ ನನಗೆ ಕೇಳಬೇಕೆಂಬ ಕುತೂಹಲ ವುಂಟಾಗಿರುವು ದೆಂದು, ಹೇಳಲು ಷಹರಿಯೆರನು, ತಾನು ಆ ಕಥೆಯನ್ನು ಪೂರ್ತಿಯಾಗಿ ಕೇಳಬೇಕೆಂದು ಅವಳನ್ನು ಕೊಲ್ಲಕೂಡದೆಂದು ಆಜ್ಞೆ ಮಾಡಿದನು.

ಹದಿಮೂರನೆಯ ರಾತ್ರಿ ಕಥೆ.

ಮರುದಿನ ಸುಖನಿದ್ರೆಯಲ್ಲಿ ಮಲಗಿ ದಿನರಜಾದಿಯು, ತನ್ನಭಿಪ್ರಾಯವನ್ನು ಸುಲ್ತಾನನಿಗೆ ತಿಳಿಯಬಾರದಂತೆ ಮಾಡಬೇಕೆಂದು ಬಂದಾನೊಂದು ದುಸ್ವಪ್ನವನ್ನು ಕಂಡಂತೆ ಕನವರಿಸಿ ಕೊಂಡೆದ್ದು ಅಕ್ಕನಾನು ಈ ದಿನ ಕಾಣಬಾರದ ಬಂಡಾನೊಂದು ಕೆಟ್ಟಕನಸನ್ನು ಕಂಡೆನು. ನೀನು ದೋಬಾನನ ಕಥೆಯನ್ನು ಪೂರ್ತಿಯಾಗಿ ಹೇಳದಹೊರತು, ಈ ನನ್ನ ವ್ಯಾಕುಲವು ತೀರುವುದಿಲ್ಲವೆಂದು ನುಡಿಯಲು, ಷಹರಜಾದಿಯು, ತಂಗೀ ನಿನ್ನ ಮನೋವ್ಯಾಕುಲವು ಪರಿಹಾರವಾಗುವಂತೆ ಆವಶ್ಯಕವಾಗಿಯೂ, ಕಥೆಯನ್ನು ಹೇಳುವೆನು, ಆದರೆ ಸುಲ್ತಾನರು ನನಗೆ ಅಪ್ಪಣೆಮಾಡುವುದಾದರೆ ನಿಮ್ಮಿಬ್ಬರಿಗೂ ಸಂತೋಷವನ್ನುಂಟುಮಾಡುವುದು, ನನಗೆತುಂಬಾ ಹರ್ಷಕರವಾಗಿರುವುದೆಂದು ಹೇಳಲು, ಷಹರಿಯೆರನು, ಈ ಕಥೆಯನ್ನು ಕೇಳುವುದರಿಂದ ನಿನ್ನತಂಗಿಗೆ ಉಂಟಾಗುವ ಆನಂದಕ್ಕಿಂತಲೂ, ಅಧಿಕವಾದ ಸಂತೋಷವುಂಟು ಅಲ್ಲದೆ ನೀನುಹೇಳುವ ಕಥಾಚಮತ್ಕಾರವನ್ನು ನೋಡಬೇಕೆಂಬ ಆತುರವು, ನನ್ನನ್ನು ತುಂಬ ಪೀಡಿಸುತ್ತಿರುವುದೆಂದು, ಹೇಳಲು ಷಹರಜಾದಿಯು, ಕಥೆಯನ್ನು ಹೇಳಲಾರಂಭಿಸಿದಳು. ಆ ಚಿಸ್ತಾರವನು ಭೂತವನ್ನುನೋಡಿ, ಗ್ರೀಕುರಾಜನು, ದೋಬಾನನನ್ನು, ನೋಡಿ, ತನ್ನಸಂಗಡ ಕುಳ್ಳಿರಿಸಿಕೊಂಡು, ಭೋಜನಮಾಡಿಸಿ ಅನಂತರದಲ್ಲಿ ಅವನಿಗೆ ಮರ್ಯಾದಾಪೂರ್ವಕವಾಗಿ ಬಿದ್ದಾಣವನ್ನು ಬಯಸಬೇಕೆಂದು, ತನ್ನ ಆಪ್ತರಾದ ಇಬ್ಬರು ದೊಡ್ಡಮನುಷ್ಯರನ್ನು ಕರೆದು, ಅವರಿದುರಿಗೆ ಆತನಿಗೆ ಧರಿಸಿಕೊಳ್ಳುವುದಕ್ಕೆ ಅನುಕೂಲವಾದ ಉಡುಪನ್ನು ಒಂದುಸಾವಿರ ರೂಪಾಯಿಗಳನ್ನು ಕೊಟ್ಟು, ಮೊದಲನೆಯ ದಿನವೂ, ಎರಡನೆಯ ದಿನವೂ, ಮೂರನೆಯದಿನವೂ ಕೂಡ, ಸಂತೋಷದಿಂದ ಬಹುಮೂ

ನವನ್ನುಕೊಟ್ಟು, ಅತಿಯಾಗಿ ಹೇಳಿದುದರಿಂದ ಪ್ರಯೋಜನವೇನು? ಬುದ್ಧಿಶಾಲಿಯೊದ ವೈದ್ಯನಿಗೆ ಮಾಡಬೇಕಾದ ಬಹುಮಾನಕ್ಕಿಂತಲೂ, ಅಧಿಕವಾದ ಮೇಲ್ಮೆಯನ್ನು ಪ್ರತಿದಿನವೂ ಮಾಡುತ್ತಿರುವಲ್ಲಿ, ಆತನಿಗೆ ಪ್ರಧಾನಮಂತ್ರಿಯೊಗಿ, ಪರಮಲುಬ್ಧನಾದ ಮತ್ತು ಸ್ವಭಾವಸುಂದರದಿಂದ ನಾನಾವಿಧವಾದ ದುಷ್ಕಾರ್ಯಗಳನ್ನು ಮಾಡತಕ್ಕ ಅಸೂಯೊಪರನಾದ ದೊಡ್ಡಮನುಷ್ಯನೊಬ್ಬನು ಬಂದು, ವೈದ್ಯನಿಗೆ ರಾಜನು ಮಾಡುತ್ತಿರುವ ಬಹುಮಾನವನ್ನು ಸಹಿಸಲಾರದೆ, ರಾಜನಿಗೆ ಆತನಲ್ಲಿರುವ ಗೌರವವನ್ನು ಕಡಿಮೆಮಾಡಬೇಕೆಂದು, ರಾಜನನ್ನುಕುರಿತು ಸಾಮಿ ! ಒಂದಾನೊಂದು ಮುಖ್ಯವಾದ ವಿಷಯವನ್ನುಕುರಿತು, ತಮ್ಮಲ್ಲಿ ವಿಜ್ಞಾಪಿಸಿಕೊಳ್ಳಬೇಕೆಂದು ಬೇಡಿಕೊಂಡನು.

ರಾಜನು ಅದೇನೆಂದು ಕೇಳಿದಕೂಡಲೇ ಆತನು ಸ್ವಾಮಿ ! ರಾಜನು ಒಬ್ಬನ ಮಹತ್ತಾದ ಯೋಗ್ಯತೆಯನ್ನು ಚೆನ್ನಾಗಿ ತಿಳಿದುಕೊಳ್ಳದೆ ಸಂಪೂರ್ಣವಾದ ನಂಬಿಗೆಯನ್ನು ಇಟ್ಟುಬಿಡಾದರೆ ಅದರಿಂದ ಅನೇಕವಾದ, ಪ್ರಮಾದಗಳುಂಟು. ಆ ದೋಬಾನನ ಯೋಗ್ಯತೆಯನ್ನು ತಿಳಿಯದೆ, ನೀವು ಆತನಲ್ಲಿ ಅತಿಶಯವಾದ ಪ್ರೇಮವನ್ನಿಟ್ಟುಕೊಂಡಿರುವಿರಿ. ಆತನು ಪರಮದೊಹಿ ನಿಮ್ಮನ್ನು ಕೊಂದುಹಾಕಬೇಕೆಂಬ ಅಭಿಲಾಷೆಯಿಂದಲೇ ಇಲ್ಲಿಗೆ ಬಂದಿರುವನೆಂಬುದು ನಿಮಗೆ ತಿಳಿಯದೆ ಎಂದುಕೇಳಿದನು. ರಾಜನು ನಾನು ಶೀಘ್ರವಾಗಿನಂಬಿ ಯೋಗ್ಯತೆಯನ್ನು ಪರೀಕ್ಷಿಸಿರುವ, ಈ ವಿಷಯದಲ್ಲಿ ಇಷೊಟ್ಟಂದು ಧೈರ್ಯದಿಂದ ನನ್ನೆದುರಿಗೆ ನೀನು ಮಾತನಾಡುತ್ತಿರುವುದು ನಿನ್ನ ಸ್ವಂತಬಲದಿಂದಲೋ ಅಥವಾ ಇತರರ ದುರ್ಬೊಧನೆಯಿಂದಲೋ ಎಂದು ನುಡಿಯಲು, ಸಾಮಿ, ಈ ವಿಷಯದಲ್ಲಿ ನಾನು ನನ್ನ ಮನಃಪೂರ್ವಕವಾಗಿಯೂ, ನಿಜವಾದ ವರ್ತಮಾನವನ್ನೇ ಕೇಳರುವೆನು. ಆದುದರಿಂದ ಅದನ್ನು ತಮಗೆ ತಿಳಿಯಹೇಳಬೇಕೆಂದು, ಬಂದೆನು ತಾವುಸುಖನಿದ್ರೆಯಲ್ಲಿದ್ದರೆ ಈಗ ಎಚ್ಚರಿಕೆಯನ್ನುತಾಳಬೇಕು. ಆದೋಬಾನನು ತನ್ನ ಮೂತೃಸಾಥನವಾದ ಗ್ರೀಕುರಾಜ್ಯವನ್ನು ತೊರೆದು ಇಲ್ಲಿಗೆ ಬಂದಿರುವುದರಿಂದಲೇ ನಿಮ್ಮನ್ನುಕೊಂದು ನಿಮ್ಮೈಶ್ವರ್ಯವನ್ನು, ಸೂರೆ ಗೊಳ್ಳುವೆನೆಂಬುದು ಗೊತ್ತಾಗುತ್ತದೆಯೆಲ್ಲಾ ಎಂಬದಾಗಿ ಪುನಃ ವಿಜ್ಞಾಪಿಸಿಕೊಂಡನು. ಬಳಿಕ ರಾಜನು ಮಂತ್ರಿಯನ್ನು ಕುರಿತು,

ನೀನು ಯೊರನ್ನು ದೊ ್ರಹಿಯೆಂದೂ, ದುರ್ಮಾರ್ಗಿಯೆಂದೂ, ಹೇಳುತ್ತಿ ರುವೆಯೋ ಆತನನ್ನು ನಾನು ಸತ್ಪುರುಷರಲ್ಲಿ ಶ ್ರೇಷ್ಠನೆಂದೂ, ನನ್ನ ಆಪ್ತರಲ್ಲಿ ಅಗ ್ರಗಣ್ಯನೆಂದೂ, ಹೇಳುವೆನು. ಈ ನನ್ನ ಅಭಿಪ್ರಾಯಾನು ಸಾರವಾಗಿ ನನಗುಂಟಾಗಿದ್ದ ರೋಗವನ್ನು ಗುಣಪಡಿಸಿ ಆತನು ನನಗೆ ಜೊ ಸದಾಗಿ ತ ೂಡುಕೊಟ್ಟ ಬೇಹಾರೋಗ್ಯದಿಂದುಂಟಾದ ಆನಂದವೂ, ನನ್ನ ನ್ನು ನಂಬುವಂತೆ ಮಾಡುತ್ತಿರುವುದು. ಆತನು ನನ್ನಪ್ರಾಣವನ್ನು ತೆಗೆ ದುಕೊಳ್ಳಬೇಕೆಂದಿದ್ದರೆ ನನ್ನ ರೋಗವನ್ನು ವಾಸಿಮಾಡಿ, ಏತಕ್ಕೆ ಕಾಪಾ ಡಿದನು. ನನ್ನನ್ನು ರೋಗದಿಂದಲೆ ನರಳಿಸುತ್ತಿರಬೇಕಲ್ಲವೆ ನಾನು ಈವಿಧ ವಾದ ಅನುಮಾನಾಸ್ಪದವಾದ ಮಾತುಗಳನ್ನು ಕೇಳಿ ಮನಸ್ಸನ್ನು ಕೆಡಿಸಿ ಕೊಳ್ಳುವುದಕ್ಕಿಂತಲೂ, ಈ ದಿನ ಮೊದಲುಗೊಂತು ತಿಂಗಳಿಗೆ ಒಂದುಸಾ ವಿರ ರೂಪಾಯಿಗಳ ಸಂಬಳವನ್ನು ನನ್ನ ಆಸ್ತಿಯಲ್ಲಿ ಅರ್ಧಭಾಗವನ್ನು, ಕೊಡುವೆನು. ಆತನು ನನಗೆಮಾಡಿರುವ ಉಪಕಾರಕ್ಕೆ ಸಮನಾಗುವಂತೆ ನಾನು ಯಾವಪ್ರತ್ಯುಪಕಾರವನ್ನು ಮಾಡಿದರೂ ತೀರದು, ಆತನ ಮೇಲೆ ನಿನಗೆ ಇಷ್ಟೊಂದು ದ ್ವೇಷವು ಉಂಟಾಗುವುದಕ್ಕೆ ಕಾರಣವೇನೆಂಬುದನ್ನು ಆತನ ಸ್ವಭಾವವೇ ನನಗೆ ತಿಳಿಯುವಹಾಗೆ ಹೇಳುವುದು. ಅನ್ಯಾಯವಾಗಿ ನನಗೆ ಆತನಮೇಲೆ ದ ್ವೇಷವನ್ನು ಹುಟ್ಟಿಸಬೇಕೆಂದಿರುವೆಯೆಲ್ಲಾ, ಇದನ್ನು ನೋಡಿದರೆ, ಸಿಂಬುಯಾಜೆಂಬ ರಾಜನು ತನ್ನಮಗನಾದ ರಾಜಪುತ ್ರನನ್ನು ಕೊಲ್ಲುವುದಕ್ಕೆ ಯತ್ನಮಾಡಿದಕಾಲದಲ್ಲಿ ಅದನ್ನು ನಿವರ್ತಿಸುವುದಕ್ಕಾಗಿ, ಮಂತ್ರಿಯು, ತನ್ನ ಯಜಮಾನನನ್ನುಕುರಿತು, ಹೇಳಿದನಂಗತಿಯು, ನನಗೆ ಜ ್ಞಾಪಕಕ್ಕೆ ಬರುತ್ತಿರುವುದು. ಎಂದುಹೇಳಿ, ಆಳಿದ ಸುಲ್ತಾನ ರ ಚಿಳಗಾದುದರಿಂದ ಕಥೆಯನ್ನು ನಿಲ್ಲಿಸುತ್ತೇನೆಂದು ಹೇಳಿ ಸುಮ್ಮನಾದ ಳು. ಪಿನರಜಾದಿಯು ಅಕ್ಕ ನ ಮಾತನ್ನು ಕೇಳಿ, ಗ ್ರೀಕು ರಾಜನು, ತನ್ನ ಮನಸ್ಸನ್ನು ಚಂಚಲಪಡಿಸಿಕೊಳ್ಳದೆ ಸ್ಥೈರ್ಯ ವಾಗಿರುವುದನ್ನುನೋಡಿ, ನನ್ನಮನಸ್ಸಿಗೆ ತುಂಬ ಸಂತೋಷವಾಯಿತೆಂದು ಹೇಳಲು ಷಹರಜಾದಿಯು, ತಂಗೀ ಸುಲ್ತಾನರು ನನ್ನ ಆಯುಸ್ಸನ್ನು, ಹೆಚ್ಚಿಸುವುದಾದರೆ ನಾಳೆರಾತ್ರಿ ಆ ರಾಜಪುತ ್ರನ ಮನೋದಾರ್ಢ್ಯವ ನ್ನು ನಿನಗೆ ಸಂಪೂರ್ಣವಾಗಿ ಹೇಳುವೆನೆಂದು, ನುಡಿಯಲು, ಸುಲ್ತಾನನು, ಯಾವ ಮಾತನ್ನು ಆಡದೆ ಹೊರಟುಹೋದನು.

೧೪ ನೆಯ ರಾತ್ರಿ ಕಥೆ.

ಬಿಳಗಿನಜಾವಕ್ಕೆ ಎದ್ದು ದಿನರಜಾದಿಯು, ಅಕ್ಕಾ! ನೀನು ನಿನ್ನೆಯದಿನ ಹೇಳುತ್ತಿದ್ದ ಕಥೆಯನ್ನು ಪೂರ್ತಿಮಾಡಿ, ಹೇಳಿ, ನಿನಗೆ ಜ್ಞಾನವುಂಟಾಗುವುದಕ್ಕಾಗಿ ನಿಲ್ಲಿಸಿದಸ್ಥಳವನ್ನು ಹೇಳುವೆನು, ಗ್ರೀಕು ರಾಜನು ತನ್ನಮಂತ್ರಿಯ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಮಾತನಾಡುತ್ತಾ, ವೈದ್ಯನಾದ ದೋಬಾನನಹೇಲಿ ಯಾವದೋಷವೂ ಇಲ್ಲವೆಂದು, ಹೇಳುತ್ತಿದ್ದ ಸ್ಥಳದಲ್ಲಿ ನಿಲ್ಲಿಸಿದೆ ಎಂದು ಹೇಳಿದ ವಾರ್ತೆಯನ್ನು ಕೇಳಿ, ನನಗೂ ಜ್ಞಾಪಕ ಪಿರುತ್ತದೆಯಾದುದರಿಂದ ಇನ್ನು ನಿನ್ನ ಇಷ್ಟವನು ಸಾರವಾಗಿ ನಡೆಸುವೆನು ಸಾಧ್ವಿಯಾ! ಮಂತ್ರಿಯು ಸಿಂದುಬಾದು ರಾಜನು ತನ್ನ ಪುತ್ರನನ್ನು ಕೊಲ್ಲುವಾಗ ನಡೆಸಿದ ವಿಷಯವನನ್ನು ತಿಳಿದುಕೊಳ್ಳಜೇಕೆಂಬ ಅಭಿಲಾಷೆಯಿಂದ, ಗ್ರೀಕುರಾಜನನ್ನು ಕುರಿತು, ಸಿಂದುಬಾದುರಾಜನು ಮಾಡಿದ ವಿಷಯವನನ್ನು ಕುರಿತು, ವಿವರಿಸಜೇಕೆಂದು ಕೇಳಿದನು. ಅದಕ್ಕೆ ಪ್ರತ್ಯುತ್ತರವನ್ನು ಹೇಳುವುದಕ್ಕೆ ಮೊದಲುಮಾಡಿ ಸಿಂದುಬಾದು ರಾಜನನ್ನು, ನೋಡಿ ಆತನಮಂತ್ರಿ ಅತ್ಯಂತವರು ಹೇಳಿದ ಚಾಡಿಯೆನ್ನು ಕೇಳಿ ಮುಂದೆ ಹೇಳುವ ಕಥೆಯನ್ನು ಕೇಳಿದರು.

ಗಿಳಿಯುನ್ನು, ಮನುಷ್ಯನನೂ, ಕುರಿತ ಕಥೆ.

ಒಬ್ಬ ಮನುಷ್ಯನಿಗೆ ಬಹು ರೂಪವತಿಯಾದ ಒಬ್ಬ ಹೆಂಡತಿ ಇರುವಳು. ಆತನು ಅವಳಲ್ಲಿ ಅತ್ಯಂತ ವ್ಯಾಮೋಹವುಳ್ಳವನಾಗಿ ಕ್ಷಣಕಾಲವಾದರೂ, ಅಗಲದೆ ಇದ್ದನು. ಆತನು ಅನಿವಾರ್ಯವಾದ ಬಂದುಕಾರ್ಯನಿಮಿತ್ತವಾಗಿ ಮತ್ತೊಂದು ಸ್ಥಳಕ್ಕೆ ಪ್ರಯಾಣಮಾಡಿ ಹೊರಟು ಸುಂದರವಾದ ಪಕ್ಷಿಗಳನ್ನು ಮಾರುವ ಒಂದಾನೊಂದು ಸ್ಥಳಕ್ಕೆಹೋಗಿ ಅಲ್ಲಿ ಒಂದುಗಿಳಿಯನ್ನು ಕೊಂಡುಕೊಂಡನು. ಆ ಗಿಳಿಯು ಬಹುಚೆನ್ನಾಗಿ ಮಾತನಾಡುವುದು. ಹೊರತು ನೋಡಿದ ವಿಷಯವನನ್ನು ವಿಶದವಾಗಿ ತಿಳಿ

ಯಹೇಳುವ ಶಕ್ತಿಯನ್ನು ಉಂಟುಗಿತ್ತು. ಆದುದರಿಂದ ಅದನ್ನು ತಂದು ತನ್ನ ಹೆಂಡತಿಯ ಕೈಯಲ್ಲಿಕೊಟ್ಟು, ನಾನು ಪ್ರಯಾಣಹೋಗಿ ಬರುವ ವರೆಗೂ, ಇದನ್ನು ಸುರಕ್ಷಿತವಾಗಿ ಕಾಪಾಡೆಂದು ಹೇಳಿ ತಾನು ಪ್ರಯಾಣ ಮಾಡಿದನು. ತಾನು ಪುನಹ ಹಿಂದಿರುಗಿ ಬಂದವೇಲೆ ತಾನಿಲ್ಲದವೇಳೆಯ ಲ್ಲಿ ನಡೆದಸಂಗತಿಯನ್ನು ಕುರಿತು, ಹೇಳೆಂದು ಕೇಳಿದನು. ಬಳಿಕ ಗಿಳಿಯು ಕೆಲವು ವರ್ತಮಾನಗಳನ್ನು ಹೇಳಿದಕೂಡಲೇ ಆತನು ಹೆಂಡತಿಯನ್ನು ದಂಡಿಸಿದನು. ಆದುದರಿಂದ ಅವಳು ಯಾರೋ ತನ್ನವೇಲೆ ಚಾಡಿಹೇಳಿರ ಬಹುದೆಂದು, ತಾನು ಹಾಗೆ ಮಾಡಲಿಲ್ಲವೆಂದು ಪ್ರಮಾಣಮಾಡಿ ಹೇಳಿ ಚೇ ಡಿಕೊಂಡು ಪ್ರಾಯಶಃ ಗಿಣಿಯು ತನ್ನಗಂಡನ ಚಾಡಿಯೆನ್ನು ಹೇಳಿರಬ ಹುದೆಂದು ತಿಳಿದು, ತನ್ನಕೋಪವನ್ನು ತೀರಿಸಿಕೊಳ್ಳುವುದಕ್ಕೂ, ಗಂಡನ ನ್ನು ಸಮಾಧಾನಪಡಿಸುವುದಕ್ಕೂ, ಯೋಚಿಸುತ್ತಾ ಇದ್ದಳು. ಹೀಗಿರು ವಲ್ಲಿ ಆತನು ಪುನಹ ಪ್ರಯಾಣಹೊರಡಬೇಕಾಗಿ ಬಂದು ಊರನ್ನುಬಿಟ್ಟು ಹೊರಟುಹೋಗಲು, ಆಕೆಯು ಒಬ್ಬ ದಾದಿಯನ್ನು ಕುರಿತು ಈದಿನರಾತ್ರಿ ಈ ಗಿಳಿಯ ಪಂಜರವನ್ನು ಕೆಳಕ್ಕೆತೆಗೆದು ಜೋರಲು ಹಾಕಿ ಬೀಸುತ್ತಿರು ಎಂದು ಹೇಳಿ, ಮತ್ತೊಬ್ಬಳನ್ನುಕುರಿತು, ಮಳೆಹೊಯ್ದಂತೆ ಈ ಪಂಜ ರದನೇಲೆ ನೀರನ್ನು ಸುರಿಯೆಂದು ಹೇಳಿದಳು. ಮತ್ತೊಬ್ಬಳನ್ನು ಕರೆ ದು ಈ ಕನ್ನಡಿಯನ್ನು ತೆಗೆದುಕೊಂಡು ದೀಪದಬೆಳಕಿನಲ್ಲಿ ಗಿಳಿಯ ಎದು ರಿಗೆ ತಿರುಗಿಸುತ್ತಾ ಇರೆಂದು ಹೇಳಿದಳು. ಅವರುಗಳೆಲ್ಲರೂ, ಆಕೆಯು ಹೇಳಿದಂತೆಯೇ ಮಾಡಿದರು. ಮರುದಿನ ಆತನುಬಂದು ತಾನಿಲ್ಲದಿರುವಕಾ ಲದಲ್ಲಿ ನಡೆದಸಂಗತಿಯನ್ನು ವಿವರಿಸೆಂದು ಹೇಳಿದನು. ಆಳದಸ್ವಾಮಿಯೆ ವರೇ ! ರಾತ್ರಿಯೆಲ್ಲಾ, ಮಳೆಯೂ, ಗಾಳಿಯೂ, ಬೆಳಕೂ, ತುಂಬಾ ಸುರಿಯುತ್ತಿದ್ದುದರಿಂದ ನನಗೆ ತುಂಬಾ ಶ್ರಮವುಂಟಾಯ್ತು ಎಂದುಹೇಳ ಲು, ಆತನು ಈ ಗಿಳಿಯು ನಿಜವಾದವುಾತನ್ನು ಹೇಳಿಲ್ಲವೆಂದೂ, ಆದಿನ ಹೇಳಿದುದೂ, ಸುಳ್ಳೆಂದು ತಿಳಿದು ಅದನ್ನು ಪಂಜರದಿಂದ ಹೊರಕ್ಕೆತೆಗೆದು ಬಡಿದು ಕೊಂದನು.

ಬಳಿಕ ತನ್ನಹೆಂಡತಿಯ ದುರ್ಮಾರ್ಗವನ್ನುಕುರಿತು, ಗಿಳಿಯು ಹೇಳಿದುದು ನಿಜವೆಂದು ನೆರೆಹೊರೆಯವರ ಮೂಲಕ ತಿಳಿದು ಗಿಳಿಯನ್ನು ಕೊಂದುದಕ್ಕಾಗಿ ಪಶ್ಚಾತ್ತಾಪವನ್ನು ಹೊಂದಿದನು. ಎಂದು ಹೇಳಿ ಷಹ

ರಜಾದಿಯು, ಕಥೆಯನ್ನು ನಿಲ್ಲಿಸಿದಳು. ದಿನರಜಾದಿಯು, ಅಕ್ಕಾ ! ಈ ಕಥೆಯು ಮೊದಲಿಗಿಂತಲೂ, ವಿನೋದಕರವಾಗಿರುವುದೆಂದು, ನುಡಿಯೆಲು, ಷಹರಜಾದಿಯು, ತಂಗೀ ಸುಲ್ತಾನರು ದಯವಿಟ್ಟು ನನಗೆ ಅಪ್ಪಣೆ ಮಾಡುವುದಾದರೆ ಈ ದಿನರಾತ್ರಿ ಇದಕ್ಕಿಂತಲೂ, ಅತಿಶಯವಾದ ಕಥೆಯನ್ನು ಹೇಳುವೆನೆಂದು ನುಡಿದಳು. ಸುಲ್ತಾನನು ಷಹರಜಾದಿಯು, ಹೇಳುವ ವಿಚಿತ್ರಕಥೆಗಳನ್ನು ಕೇಳಬೇಕೆಂಬ ಅಭಿಲಾಷೆಯಿಂದ ಅವಳನ್ನು ಕೊಲ್ಲ ಕೂಡದೆಂದು ಆಜ್ಞೆಮಾಡಿ ಹೊರಟು ಹೋದನು.

೧೫ನೆಯ ರಾತ್ರಿಕಥೆ.

ಮರುದಿನ ಬೆಳಗಿನಜಾವದಲ್ಲಿದ್ದು ದಿನರಜಾದಿಯು ಅಕ್ಕಾ ! ಬೆಳಗಾಗುತ್ತಬುತು. ನನಗೆ ನಿದ್ರೆಬಾರದು. ಆದುದರಿಂದ ಸುಲ್ತಾನರು ಮೆಚ್ಚುವಂತೆ ಗ್ರೀಕು ರಾಜನಿಗೂ, ಜೋಬಾನನ ಪಕ್ಷಿಯನ್ನು ವಹಿಸಿ ಮೂತನಾಡುತ್ತಿದ್ದ ಆತನ ಮಂತ್ರಿಗೂ, ನಡೆದ ಸಂಗತಿಯನ್ನು ಕೊನೆ ಮುಟ್ಟಿ ಹೇಳಬೇಕೆಂದು ಕೇಳಲು, ಆಕೆ ಸುಲ್ತಾನರಿಂದ ಅಪ್ಪಣೆಯೆನ್ನು ಪಡೆದು ಹೇಳಲಾರಂಭಿಸಿದಳು. ಜಿಸ್ತಾನು, ಭೂತವನ್ನುಕುರಿತು ಹೇಳ ತೊಡಗಿದನು. ಗ್ರೀಕು ರಾಜನು ಗಿಳಿಯ ಕಥೆಯನ್ನು ಹೇಳಿ ಮುಗಿಸಿದ ಕೂಡಲೇ ತನ್ನ ಮಂತ್ರಿಯನ್ನು ನೋಡಿ ಅಯ್ಯಾ ! ಜೋಬಾನನು ನಿನಗೆ ಯಾವಾಗಲೂ, ಯಾವವಿಧವಾದ ದ್ರೋಹವನ್ನು ಮಾಡಿಲ್ಲವಲ್ಲಾ ! ನೀನು ಏತಕ್ಕೆ ಅವನನ್ನು ಕೊಲ್ಲಬೇಕೆಂಬಭಿಲಾಷೆಯಿಂದ, ಕಾದಿಯುತ್ತಿರುವೆ ಎಂದು ಕೇಳಿದನು. ನಾನು ಹಾಗೆಮಾಡುವುದಕ್ಕೆ ಬಹು ಜಾಗ್ರತೆಯಾಗಿರುವೆನು. ಹಾಗಲ್ಲದಿದ್ದರೆ ಆ ಗಂಡನು ಗಿಳಿಯೆನ್ನುಕೊಂದು ಹಾಕಿದಬಳಿಕ ವ್ಯಸನವನ್ನು ಹೊಂದಿದಂತಾಗುವುದಲ್ಲವೆ, ಎಂದುಹೇಳಿದನು. ಅದನ್ನುಕೇಳಿ ಆ ಕ್ರೂರನಾದ ಮಂತ್ರಿಯು ಆತನನ್ನು ಕೊಂಜೇ ತೀರಬೇಕೆಂದು ರಾಜನನ್ನುಕುರಿತು, ಅಯ್ಯಾ ! ಆ ಗಿಳಿಯುಸಾವು ಅಷ್ಟೊಂದು ಕಷ್ಟಕರವಾದುದಲ್ಲ. ಅದರ ಯಜಮಾನನು, ಅದಕ್ಕಾಗಿ ಬಹುದಿವಸದವರೆಗೂ, ವ್ಯಸನವನ್ನು ಹೊಂದಿದ್ದನು. ಆದುದರಿಂದ ನಿರಪರಾಧಿಯಾದ ಮನುಷ್ಯನಲ್ಲಿ ಅಪಕೃತಿ ಮಾಡುವಂತಾಗುವುದೇ ಎಂಬಭಿಪ್ರಾಯದಿಂದ ಆ ವೈದ್ಯನನ್ನು ಕೊಲ್ಲದೆ ಬಿಡಬಹುದೆ ಎಂದುಕೇಳಿದನು. ಅಲ್ಲದೆ ರಾಜ

ನಿಗೆ ಪ್ರೀತಿಯನ್ನುಂಟುಮಾಡಿ, ಸೂಕ್ಷ್ಮವಾದ ನಂಬಿಕೆಯನ್ನುಂಟುಮಾಡಿ ತನ್ನಕಾರ್ಯವನ್ನು ಮುಗಿಸಿಕೊಳ್ಳಬೇಕೆಂದಿರುವ ಮನುಷ್ಯನಿಗಿಂತಲೂ, ಬುದ್ಧಿವಂತನಾಗಿ ನಿನಗೆ ಅನುಕೂಲನಾಗಿರುವ ಮನುಷ್ಯನನ್ನು ಬಿಟ್ಟು ಬಿಡಬಹುದೆ? ಆತನನ್ನೇಲಿ ನನಗೆ ದ್ವೇಷವುಂಟಾದುದರಿಂದ ಆತನನ್ನು ಕೊಲ್ಲಬೇಕೆಂದು ನಾನೆಂದಿಗೂ ಬಂದವನಲ್ಲ. ನಮ್ಮರಾಜನಾದ ನಿನಗೆ ಪ್ರಾಣಸಾನಿಯಾಗುತ್ತಿರುವುದನ್ನು ತಪ್ಪಿಸುವುದಕ್ಕಾಗಿ ನಾನು ಇಷ್ಟುದೂರ ಪ್ರಯಾಣಮಾಡಿ ನಿನ್ನಬಳಿಗೆ ಬಂದೆನು. ಆತನು ನಿನ್ನನ್ನು ಖಂಡಿತವಾಗಿಯೂ, ಕೊಲ್ಲಬೇಕೆಂದಿರುವನು. ಎಂಬುದನ್ನು ನಾನು ಸತ್ಯವಾಗಿಯೂ ಹೇಳಬಲ್ಲೆನು. ಇದು ಸುಳ್ಳಾದರೆ ಹಿಂದೆ ದಂಡನೆಯನ್ನು ಹೊಂದಿದ ಮಂತ್ರಿಗೆ ಸಂಭವಿಸಿದ ಶಿಕ್ಷೆಯೆನ್ನು ಹೊಂದುವೆನೆಂದು ಹೇಳಲು, ರಾಜನು ಆಮಂತ್ರಿಯು ಹೇಗೆದಂಡನೆಗೆ ಗುರಿಯಾದನೋ ಅದನ್ನು ಹೇಳಬೇಕೆಂದು ಕೇಳಲು ಆತನು ಹೇಳುತ್ತಿದ್ದನು ಹೇಗಂದರೆ :—

ದಂಡನೆಯನ್ನು ಹೊಂದಿದ ಮಂತ್ರಿಯ ಕಥೆ.

ಒಬ್ಬರಾಜನುಂಟು ಆತನಮಗನು ಬಹುರೂಪವಂತನಾಗಿ ಸದಾ ಬೇಟೆಯಾಡುವುದರಲ್ಲಿಆಸಕ್ತನಾಗಿದ್ದುದರಿಂದ ತಂದೆಯು ಮಗನಇಷ್ಟಾನುಸಾರವಾಗಿ ಆತನುಬೇಟೆಯಾಡುವುದಕ್ಕೆಅನುಕೂಲವಾಗಿರುವಂತೆಯೂ, ಆತನನ್ನು ಹೊರಬಿಡದಂತೆಯೂ ಇರಬೇಕೆಂದುತನ್ನಮಂತ್ರಿಗೆ ಆಜ್ಞಾಪಿಸಿದನು ಒಂದಾನೊಂದುಕಾಲದಲ್ಲಿ ಮಂತ್ರಿಯೂ, ರಾಜಪುತ್ರನೂ ಬೇಟೆಯಾಡುವುದಕ್ಕೆ ಹೋಗಿ ಅರಣ್ಯದಲ್ಲಿ ಸಂಚಾರಮಾಡುತ್ತಿರುವಾಗ ರಾಜಪುತ್ರನು ಚಂಚಲನಾದ ಜಿಂಕೆಯೆನ್ನು ಹಿಂದಟ್ಟಿಕೊಂಡುಹೋಗಿ ಮಂತ್ರಿಯ ಸಹವಾಸವನ್ನುಬಿಟ್ಟು ಬೇರೆಯೊದನು ಆಗಮಂತ್ರಿಯು ತನ್ನ ಬಳಿಇಲ್ಲದಿರುವುದನ್ನು ನೋಡಿ ಆತನನ್ನು ಸೇರಬೇಕೆಂದು ಬಹುದೂರದವರೆಗೂ ಹೋದರೂ, ಮಾರ್ಗವುಸಿಕ್ಕದೆ ಹೋದುದರಿಂದ ಅರಣ್ಯದಲ್ಲಿಮನಸ್ಸುಬಂದಂತೆ ಕುದುರೆಯನ್ನು ಬಿಟ್ಟು ಕೊಂಡು ಹೋಗಿ ಒಂದಾನೊಂದು ಸ್ಥಲದಲ್ಲಿ ಸುಂದರಳಾಗಿ ತೋಕಿಸುತ್ತಿರುವ ಒಬ್ಬ ಹೆಂಗಸನ್ನು ನೋಡಿ ಮೀನುಯಾರು, ಇಲ್ಲಿ ಹೀಗೆ ಅಳುತ್ತಾ ಕುಳಿತಿರಲು ಕಾರಣವೇನೆಂದುಕೇಳಿದನು, ಅದಕ್ಕೆ ಅವಳುತಾನು ಇಂಡಿಯಾದೇಶದರಾಜಪುತ್ರಿಯು, ಕಾದು

ರೆಯನ್ನೇರಿ ಸವಾರಿಮಾಡುತ್ತಿರುವಾಗ ನಿದ್ರೆಯಿಂದ ಮೈಮರೆದವನಂತೆ ನಾನುಕೆಳಗೆಬಿದ್ದೆನು ಕುದುರೆಯು ಎಲ್ಲಿಹೋಯಿತೋ ಕಾಣಲಿಲ್ಲವೆಂದು ನುಡಿದುದನ್ನುಕೇಳಿ ಆತನು ಪಶ್ಚಾತ್ತಾಪವನ್ನು ಹೊಂದಿ ನನ್ನಸಂಗಡ ಬರುವೆಯಾ, ಎಂದುಕೇಳಿದನು. ಅವಳು ಸಮ್ಮತಿಸಿದಕೂಡಲೇ ತಾವಿಬ್ಬರೂ ಕುದುರೆಯನ್ನೇರಿ ಬರುತ್ತಾ ಬಹುಪ್ರಯಾಸಹೊಂದಿ, ಒಂದು ಮನೆಯಬಳಯಲ್ಲಿ ಹೋಗುತ್ತಿರುವಾಗ ಅವಳು ಯಾವುದೋಕಾರಣದಿಂದ ಇಳಯಬೇಕೆಂದು ಹೇಳಲು, ಆತನು ಅವಳನ್ನು ಕೆಳಕ್ಕಿಳಿಸಿ ತಾನು ಇಳಿದು, ಕುದುರೆಯನ್ನು ಕೈಯ್ಯಲ್ಲಿ ಹಿಡಿದುಕೊಂಡು, ಆ ಹಾಳು ಮನೆಯ ಬಳಗೆಹೋದನು. ಆಗ ಅವಳು ಮಕ್ಕಳೇ ಬಹುಸಂತೋಷವಾಗಿ ಚೆನ್ನಾಗಿ ಜೆಳೆದು ಕೊಬ್ಬಿರುವ ಒಬ್ಬ ಮನುಷ್ಯನನ್ನು ತಂದಿರುವೆನೆಂದು ಹೇಳಿದವೂತನ್ನು ಕೇಳಿ ಆತನಿಗೆ ಎಷ್ಟು ಆಶ್ಚರ್ಯವುಂಟಾಗಿರಬಹುದು. ಕೂಡಲೇ ಆ ಮಕ್ಕಳು ಎಲ್ಲವೂ ಎಲ್ಲಿ. ಈಗಲೇ ಕೊಡೆಂದು ಪೀಡಿಸುತ್ತಿದ್ದರು. ರಾಜಪುತ್ರನು ತನಗೆ ಅಪಾಯವುಂಟೆಂಬುದನ್ನು ತಿಳದುಕೊಂಡು ಈಕೆ ಇಂಡಿಯಾದೇಶದರಾಜಪುತ್ರಿಯೆಂದು ಹೇಳಿದಳು ಆಹಾ!ಇವಳುನಿರ್ಮಾನುಷ್ಯದೇಶದಲ್ಲಿನಿವಾಸವೂಡಿಕೊಂಡಿದ್ದಕಂಡವನುಷ್ಯನನ್ನುಕೊಂದು ತಿನ್ನಬೇಕೆಂದಿರುವಳಲ್ಲಾ ಬಹೋ! ಇವಳು ಪಿಶಾಚರೂಪಿಣಿಯಾದ ರಾಕ್ಷಸಿ ಎಂದು ಹೇಳಿ ಹೆದರಿಕೆಯಿಂದ ತನ್ನ ಕುದುರೆಯನ್ನು ಹತ್ತಿಕೊಂಡು ವೇಗವಾಗಿ ಹೊರಟನು. ಆ ರಾಕ್ಷಸಿಯು ಅಲ್ಲಿಗೂಬಂದು ತನಗೆಸಿಕ್ಕಿದ ಆಹಾರವನ್ನು ಊಟಮಾಡಬೇಕೆಂದಿರುವಷ್ಟರಲ್ಲಿ ಆತನು ಹೊರಟು ಹೋಗುತ್ತಿರುವುದನ್ನು ನೋಡಿ, ಅಯ್ಯಾ ಹೆದರಬೇಡ, ನೀನುಯಾರು, ಏನನ್ನು ಹುಡುಕುತ್ತೀಯೆ, ಎಂದುಕೇಳಿದಳು. ಆತನು ನಾನು ದಾರಿತಪ್ಪಿ ಬಂದುದರಿಂದ ದಾರಿಯನ್ನು ಹುಡುಕುತ್ತೇನೆಂದು, ಜೇಳಲು ಆಕೆಯು ಅಯ್ಯಾ! ಹಾಗೆ ದಾರಿತಪ್ಪಿಸೋಗಿದ್ದರೆ ಭಗವಂತನನ್ನು ಧ್ಯಾನಮಾಡು ಎಂದು ಹೇಳಲು, ರಾಜಪುತ್ರನು, ತಲೆಯೆತ್ತಿ ಆಕಾಶವನ್ನು ನೋಡಿದನು. ಅಷ್ಟರಲ್ಲಿ ಜೆಳಗಾದುವರಿಂದ ಷಹರಜಾದಿಯು, ಕಥೆಯನ್ನು ನಿಲ್ಲಿಸಿದಳು. ಬಳಕ ದಿನರಜಾದಿಯು ಅಕ್ಕಾ! ಬಾಲಕನಾದ ರಾಜಪುತ್ರನಿಗೆ, ಅಲ್ಲಿಂದ ಮುಂದೆ ಏನುಗತಿಯಾಯಿತು, ಎಂಬುದನ್ನು ಕೇಳಬೇಕೆಂಬ ಕುತೂಹಲವು ನನಗೆತುಂಬಾ ಇರುವುದು. ಎಂದು ಹೇಳಲು ಸುಲ್ತಾನನು

ಅದೇ ಅಭಿಪ್ರಾಯವನ್ನು ಅನುಮೋದಿಸಿ, ಸುಲ್ತಾನಿಯನ್ನು ಕೊಲ್ಲಕೂಡದೆಂದು, ಹೇಳಿ ಹೊರಟುಹೋದನು.

೧೬ ನೆಯ ರಾತ್ರಿಯ ಕಥೆ.

ಮರುದಿನ ಬೆಳಗಿನಜಾವದಲ್ಲಿ ದಿನರಜೌದಿಯು, ನಿದ್ರೆತಿಳಿದೆದ್ದು ಅಕ್ಕಾ ! ನಿನ್ನೆಯದಿನ ಜಾಲಕನಾದ ರಾಜಪುತ್ರನು ರಾಕ್ಷಸಿಯಬಾಧೆಗೆ ಸಿಕ್ಕಿಹೋಗಿರುವ ಸಮಯದಲ್ಲಿ ಕಥೆಯನ್ನು ನಿಲ್ಲಿಸಿದೆಯಲ್ಲಾ ಅಲ್ಲಿಂದ ಮುಂದೆ ಅವನಗತಿ ಯೇನಾಯಿತೊ, ಹೇಳಬೇಕೆಂದು ತುಂಬಾ ಕುತೂಹಲದಿಂದ ಕೇಳಿಕೊಳ್ಳುವನೆಂಬು, ಬೇಡಿಕೊಂಡಳು. ಸುಲ್ತಾನನು ತನ್ನಹೆಂಡತಿಯನ್ನು ಕುರಿತು ಬೇಗ ಕಥೆಯನ್ನು ಪ್ರಾರಂಭಮಾಡೆಂದು ನುಡಿಯಲು, ಷಹರಜೌದಿಯು, ಹೇಳತೊಡಗಿದಳು. ಸುಲ್ತಾನರೇ ಇಂಡಿಯಾದೇಶದ ರಾಜಪುತ್ರಿಯೆಂದು ಹೇಳಿದ ಆ ಕಪಟರಾಕ್ಷಸಿಯು, ರಾಜಪುತ್ರನನ್ನುನೋಡಿ ಭಗವಂತನನ್ನು ಧ್ಯಾನಮಾಡೆಂದು ಹೇಳಲು, ಆತನು ಇವಳು ರಾಕ್ಷಸಳಾದುದರಿಂದ ಕ್ರೂರಬುದ್ಧಿಯಿಂದ ನುಡಿಯುತ್ತಿರುವಳೆಂದು, ತಿಳಿದು ಕೈಗಳನ್ನು ಮೇಲಕ್ಕೆತ್ತಿ, ಭಗವಂತನೇ ಈ ಕ್ರೂರಳಾದ ರಾಕ್ಷಸಿಯಬಾಧೆಯಿಂದ ನನ್ನನ್ನು ರಕ್ಷಿಸೆಂದು ಬೇಡಿಕೊಂಡನು. ಅಷ್ಟರಲ್ಲಿ ಆ ಪಿಶಾಚವು ಹಾಳುಮನೆಯನ್ನು ಸೇರಿಕೊಂಡಿತು. ರಾಜಪುತ್ರನು ಸುರಕ್ಷಿತನಾಗಿ ತಂದೆಯಬಳಿಗೆಬಂದು, ಮಂತ್ರಿಯ ಅಜಾಗ್ರತೆಯಿಂದ ತನಗೆ ಉಂಟಾದ ತೊಂದರೆಗಳನ್ನು ಹೇಳಿಕೊಂಡನು. ಆದುದರಿಂದ ರಾಜನು ಕೋಪದಿಂದ ಕುದಿದು, ಮಂತ್ರಿಯನ್ನು ಕೊಂದುಹಾಕಿದನು. ಆದುದರಿಂದ ಆಳಿದ ದೊರೆಗಳಾದ ಗ್ರೀಕುರಾಜರೇ ! ಬೋಬಾನನೆಂಬ ವೈದ್ಯನು ತಮ್ಮಜನಗಳಿಂದ ಪ್ರೇರಿತನಾಗಿ ತಮ್ಮನ್ನು ಕೊಲ್ಲುವುದಕ್ಕಾಗಿ ಬಂದಿರುವನೆಂಬ ವಿಷಯವು ನನಗೆ ಚೆನ್ನಾಗಿತಿಳಿದುಬಂದಿರುವುದರಿಂದ ನಾನುಚೆನ್ನಾಗಿ ಅದನ್ನುಬಲ್ಲೆನು ಅಲ್ಲದೆ ಆತನು ನಿಮಗೆ ಈ ರೋಗವನ್ನು ವಾಸಿಮಾಡಿದುದು ನಿಜವೊ, ಸುಳ್ಳೊ, ತಿಳಿಯದು, ಮುಂದೆ ಹೇಗೆಪರಿಣಮಿಸುವುದೊ, ಕಾಣೆಯೆಂದು ಹೇಳಿದನು. ಹೀಗೆ ಕಪಟದಿಂದ ಹೇಳಿದ ಮಂತ್ರಿ

ಯೆವೂತನ್ನು ಕೇಳಿ ಗ್ರೀಕುರಾಜನು ಸ್ವಭಾವವಾಗಿ ಬುದ್ಧಿಹೀನನಾದುದರಿಂದ ಮಂತ್ರಿಯೆವಾಕ್ಯಕ್ಕೆ ವ್ಯತಿರಿಕ್ತವಾಗಿಯೇ ದೋಬಾನನಪಕ್ಷವನ್ನು ವಹಿಸಿ, ನುಡಿಯುತ್ತಿದ್ದ ಮೊದಲಿನವಾಕ್ಯದ ಸತ್ವವನ್ನು ಉಳಿಸಿಕೊಳ್ಳಲಾರದೆ ಹೋದನು. ಬಳಿಕಅವನು ಮಂತ್ರಿಯನ್ನುಕುರಿತು ಆಹಾ! ನೀನು ಹೇಳಿದುದೆಲ್ಲ ನಿಜ ಆತನು ಪ್ರಾಣವನ್ನು ಕೊಲ್ಲುವುದಕ್ಕಾಗಿಯೆ ಬಂದಿರುವನು. ಅವನಬಳಿಯಲ್ಲಿರುವ ಔಷಧದಿಂದಲೆ ಅದನ್ನು ನೆರವೇರಿಸಿಕೊಳ್ಳಬಲ್ಲನೆಂದು ಹೇಳಿ ಆತನನ್ನು ಕೊಲ್ಲುವುದಕ್ಕೆ ಯೋಚಿಸಬೇಕೆಂದನು.

ಸುಲ್ತಾನರೇ! ನೀವು ಆತನ ಕೃತ್ರಿಮದಿಂದ ತಪ್ಪಿಸಿಕೊಳ್ಳಬೇಕಾದರೆ ತಡವೂಡದೆ ಆತನನ್ನು ಬರವೂಡಿ ತಲೆಯನ್ನು ಕಡಿದುಹಾಕುವುದು ವಿನಾ ಮತ್ತಾವಕೆಲಸದಿಂದಲೂ, ಆಗಲಾರದೆಂದು ಹೇಳಿದುದನ್ನುಕೇಳಿ ಸುಲ್ತಾನನು ಅವನನ್ನು ಕರೆದುತರುವಂತೆ ಕಳುಹಿಸಿಕೊಡಲು, ಆತನು ಬೇಗಹೋಗಿ ದೋಬಾನನನ್ನು ಕರದುಕೊಂಡುಬಂದನು. ಅವನನ್ನು ನೋಡಿದಕೂಡಲೇ ರಾಜನು ನಿನ್ನನ್ನು ಇಲ್ಲಿಗೇತಕ್ಕೆ ಬರವೂಡಿದೆನೋ ತಿಳಿಯುವುದೆ ಎಂದನು. ಅದಕ್ಕಾತನು ಸ್ವಾಮಿ! ನನಗೆ ತಿಳಿಯದು, ಹೇಳಬೇಕೆನಲು ನಿನ್ನನ್ನು ಕೊಂದುಹಾಕಿ ನಾನು ಉಳಿದುಕೊಳ್ಳಬೇಕೆಂಬುವುದೇ ನನ್ನಕೋರಿಕೆಎಂದುಹೇಳಿದನು.ಆವೂತನ್ನು ಕೇಳಿದಕೂಡಲೇಭಯೆದಿಂದವೈದ್ಯನು,ನಾನುಅಂತಹತಪ್ಪನ್ನೇನುವೂಡಿದೆನೆಂದುಕೇಳಿದನು. ನೀನು ನನ್ನನ್ನು ಕೊಲ್ಲುವುದಕ್ಕಾಗಿ ನಿನ್ನದೇಶವನ್ನುಬಿಟ್ಟು, ಇಲ್ಲಿಗೆಬಂದಿರುವೆಯೆಂಬ ಸಂಗತಿಯು ನಂಬಿಕೆಯಾದ ಒಂದು ಸ್ಥಳದಿಂದ ನನಗೆ ತಿಳಿದುಬಂದಿತು. ಆದುದರಿಂದ ನಿನ್ನನ್ನು ಕೊಲ್ಲಿಸುವೆನೆಂದು ನುಡಿಯಲು ವೈದ್ಯನು, ಓಹೋ ಮೊದಲು ಬಹುಮತಿಯಾಗಿಬಂದ ದ್ರವ್ಯವೂ, ಗೌರವವೂ ಕೂಡ ಈಗ ನನಗೆ ಶತ್ರುಗಳಾದವು ಈ ಮಂದವೂನವನು ಯಾರದೋ ದುರ್ಬೋಧನೆಯಿಂದ ಹೀಗೆ ನುಡಿಯುತ್ತಿರುವನೆಂದು ತಿಳಿದುಕೊಂಡು, ಸ್ವಾಮಿ! ನಾನು ತಮ್ಮರೋಗವನ್ನು ಗುಣವೂಡಿದುದಕ್ಕಾಗಿ ನೀವು ನನಗೆವೂಡುವ ಉಪಕಾರವು ಇದೇನೋ, ಎಂದು ಕೇಳಿದನು. ಹೌದು ನಿನ್ನವೂತುಗಳನ್ನು ನಾನುಕೇಳುವುದಿಲ್ಲವೆಂದು ನುಡಿದು ಕಟುಕನನ್ನು ನೋಡಿ ಇವನತಲೆಯನ್ನು ಹೊಡೆದುಹಾಕೆಂದು ನುಡಿಯಲು, ವೈದ್ಯನು ಸ್ವಾಮಿ! ನನ್ನ ಆಯುಸ್ಸನ್ನು ವೃದ್ಧಿವೂಡಿದರೆ ದೇವರು ನಿವುಗೂ,

ಆಯುಸ್ಸನ್ನು ಹೆಚ್ಚಿಸುವನು. ನಿಮಗೆ ಆಯುರ್ವೃದ್ಧಿಯುಂಟಾಗ ಬೇಕಾದರೆ ನನಗೆಕೇಡನ್ನು ಮಾಡಬೇಡಿರೆಂದುಹೇಳಿ, ಕೊಲೆಗಾರನಿಗೆ, ಇದ ನ್ನುಉಪಮಾನವಾಗಿಹೇಳಿದನುಎಲೈಭೂತವೇಗ್ರೀಕುರಾಜನಿಗೂ, ವೈದ್ಯನಿ ಗೂ, ನಡೆದಂತೆ ನನಗೂ, ನಿನಗೂ, ಈಗ ಸಂವಾದವು ನಡೆಯುತ್ತಿರುವು ದು. ಆದರೂ, ಮುಂದೆಕೇಳು, ಭಗವಂತನದಯೆಕ್ಕಾಗಿ ತನ್ನನ್ನು ಕಾ ಪಾಡಬೇಕೆಂದು ಬೇಡಿಕೊಂಡ ವೈದ್ಯನನ್ನು ಕ್ಷಮಿಸದೆ ಕ್ರೂರಮಾನಸ ನಾದ ಸುಲ್ತಾನನು, ಕಟುಕರವನನ್ನುನೋಡಿ, ಅಯ್ಯಾ! ಈ ವೈದ್ಯ ನನ್ನು ಈಗ ಸಂಹರಿಸದೆಬಿಟ್ಟರೆ ಬಂದಕ್ಕಿಂತ ಹತ್ತುಭಾಗವಾಗಿ ಮುಂದೆ ನನ್ನ ಪ್ರಾಣವನ್ನು ತೆಗೆದುಹಾಕುವನೆಂದು ಖಂಡಿತವಾಗಿ ನುಡಿದುದ ನ್ನುಕೇಳಿ ವೈದ್ಯನು ತನಗೆ ಅಂತ್ಯಕಾಲವು ಬಂದಿತೆಂದು ಸಿದ್ಧನಾಗಿನಿಂ ತುಕೊಳ್ಳಲು ಕಟುಕನು ಕಣ್ಣುಗಳನ್ನುಕಟ್ಟಿ ಕೈಗಳನ್ನು ಬಿಗಿದು, ಕತ್ತಿಯನ್ನುಹಿಡಿದು ಕಡಿಯುವುದಕ್ಕೆ ಸಿದ್ಧನಾದನು. ಆಗ ಸಭಿಕರು ಕನಿಕರದಿಂದ ನಿರಪರಾಧಿಯಾದ ಈ ವೈದ್ಯನನ್ನು ಕೊಲ್ಲುವುದು ಏತಕ್ಕೆ ಅಯ್ಯಾ! ಆತನ ಪ್ರಾಣವನ್ನು ಉಳಿಸಿ ಕಾಪಾಡಿರಿ. ಅವನು ಯಾವ ತಪ್ಪನ್ನು ಮಾಡಲಿಲ್ಲವಲ್ಲಾ ಎಂದು ನುಡಿದರೂ, ಸುಲ್ತಾನನು, ಅವರಿಗೂ ಕೊಡ ಕಠಿಣತರವಾದ ಪ್ರತ್ಯುತ್ತರವನ್ನೇ ಹೇಳಿದನು. ಆಗ ಸಿದ್ಧನಾಗಿ ನಿಂತಿರುವ ವೈದ್ಯನು ಅಯ್ಯಾ! ನನ್ನನ್ನುರಕ್ಷಿಸಲು ತಮಗೆ ಮನಸ್ಸು ಬಾರದೆಹೋದರೆ ಚಿಂತೆಯಿಲ್ಲ ನಾನುಮರಣಕ್ಕೆ ಸಿದ್ಧನಾಗಿರುವೆನು.

ಆದರೆ ನಾನುಸಾಯುವುದಕ್ಕೆಮುಂಚೆ ನನ್ನಕುಟುಂಬದವರನ್ನು ನೋಡಿ ಸಮಾಧಿಯೆಲ್ಲೂ, ಉತ್ತರಕ್ರಿಯಾದಿಗಳೆಲ್ಲೂ, ಮಾಡಜೀಕಾದ, ಕಾರ್ಯವನ್ನುಹೇಳಿ, ಬಡಬಗ್ಗರಿಗೆ ದಾನವನ್ನುಕೊಟ್ಟು, ಉತ್ತಮವೇ ದಪುಸ್ತಕವನ್ನು ಪೂಜೆಮಾಡಿ ಅದನ್ನು ನಿಮ್ಮಬಳಿಗೆತಂದು ಕೊಡುವವ ರೆಗೂ, ಪುರಸತ್ತುಕೊಡಜೀಕೆಂದು ಕೇಳಲು ಅಯ್ಯಾ! ಆ ಪುಸ್ತಕದಿಂದ ವ್ಯಯೋಜನವೇನೆಂದು ಕೇಳಲು, ಅದು ಅತ್ಯಂತ ಉತ್ತಮವಾದ ಬುಕ್ಕು ನಿಮ್ಮ ಬಂಡಾರದಲ್ಲಿರಜೀಕಾದುದು ನನ್ನ ತಲೆಕಡಿದಮೇಲೆ ಆ ಬುಕ್ಕನ್ನು ತೆರದು, ಆರನೆಪುಟದಲ್ಲಿ ಏಳನೆಯ ಅಧ್ಯಾಯದಲ್ಲಿ ಮೂರನೆಯ ಪಜ್ಞ್ಯೆಯ ಯೆನ್ನು ಓದಿದರೆ ನೀವುಕೇಳುವ ಪ್ರಶ್ನೆಗಳೆಲ್ಲಕ್ಕೂ, ಉತ್ತರವಿರುವುದೆಂ ದು ನುಡಿಯಲು ಆತನು ಹಾಗೆ ಆಗಲೆಂದು, ಮೃಗಾವಲಿನವರೊಡನೆ ಅವನ

ನ್ನು ಮನೆಗೆ ಕಳುಹಿಸಿದನು. ವೈದ್ಯನು ಮನೆಗೆಬಂದು ತನ್ನ ಕೆಲಸಗಳ ನ್ನು ಸರಿಮಾಡಿಸಿಕೊಳ್ಳುತ್ತಿರುವಷ್ಟರಲ್ಲಿ ರಾಜನ ಆಸ್ಥಾನದಲ್ಲಿ ವೈದ್ಯನನ್ನು ಕೊಂದುಹಾಕುವ ಒಂದಾನೊಂದು ವಿಚಿತ್ರವಾದ ಸಂಗತಿಯು ನಡೆಯುವುದೆಂದು, ಊರಲ್ಲೆಲ್ಲಾ ಗಡಿಬಿಡಿಯಾಯಿತು ಆದುದರಿಂದ ಸೇನಾನಾಯಕರೂ, ಆಸ್ಥಾನಿಕರೂ, ಸರದಾರರೂ, ಅಮಾತ್ಯರುಗಳೂ, ಎಲ್ಲರೂ ಬಂದು ರಾಜನಸಭೆಗೆ ಸೇರಿದರು. ಕೂಡಲೇ ದೋಬಾನನು ಒಂದುಪುಸ್ತಕವನ್ನು ಕೈಯಲ್ಲಿಹಿಡಿದು ರಾಜನಬಳಿಗೆಬಂದು ನಮಸ್ಕರಿಸಿ ತಾವು ಈಪುಸ್ತಕವನ್ನು ಇದರಮೇಲೆ ಮುಚ್ಚಿರುವ ಒಂದು ಕಾಗದಸಹಿತವಾಗಿ ಪೀಠದ ಮೇಲೆ ಇಟ್ಟು, ನನ್ನತಲೆಯೆನ್ನು ಹೊಡೆಯುವಂತೆ ಆಜ್ಞಾಪಿಸಿ ಆತಲೆಯು ಈ ಪುಸ್ತಕವಿರುವ ಪೀಠವನ್ನು ಮುಟ್ಟಿದಕೂಡಲೇ ರಕ್ತವುಸೋರುವುದು ನಿಂತುಹೋಗಿ ನಿಮ್ಮಸಂಗಡ ಮಾತನಾಡುವುದು. ಆಗ ನೀವು ಅದುಕೇಳುವ ಪ್ರಶ್ನೆಗಳಿಗೆ ತಕ್ಕ ಉತ್ತರವನ್ನು ಹೇಳಿರಿ. ನಾನು ನಿರಪರಾಧಿಯಾದರೂ, ನಿಮ್ಮ ಆಜ್ಞಾನುಸಾರವಾಗಿ ಭಗವಂತನನ್ನು ನೆನೆಯುತ್ತಾ ಪ್ರಾಣವನ್ನು ಬಿಡುವೆನು. ಆದರೆ ನಾನುಹೇಳಿದ ವಿನ್ನಹವನ್ನು ತಾವು ನೆರವೇರಿಸಬೇಕೆಂದು ಹೇಳದಕೂಡಲೇ ಮೂಢನಾದ ರಾಜನು ಕಡಿದುಹಾಕಿದತಲೆಯು ಮಾತನಾಡುವುದುಂಟೆ? ನಿನ್ನ ಕಪಟವಾದವನ್ನು ನಾನು ಕಾಣೆನೆಂದು ಹೇಳಿ ಈಟುಕರವನನ್ನು ನೋಡಿ, ನಿನ್ನಕೆಲಸವನ್ನು ಆಗಮಾಡಬಹುದೆಂದು ನುಡಿದನು. ಬಳಿಕ ತಲೆಯೆನೆರವಾಗಿ ಆಪೀಠವನ್ನು ತಾಕುವಂತೆ ಕಡಿಯೆಲ್ಪಟ್ಟ ಅದನ್ನು ಮುಟ್ಟಿದಕೂಡಲೇ ಆಳಿದ ಸಾವಿಮಿಯೆವರೇ! ಈಗಲಾದರೂ, ಪುಸ್ತಕವನ್ನು ತೆರೆಯು ತ್ತಿರಾ! ಎಂದು ಕೇಳಿತು. ಆಗ ಅಲ್ಲಿದ್ದವರೆಲ್ಲರೂ, ಆಶ್ಚರ್ಯವನ್ನು ಹೊಂದಿದರು. ಕೂಡಲೇ ಸುಲ್ತಾನನು ಆ ಪುಸ್ತಕವನ್ನು ತೆಗೆದು ನೋಡುವಲ್ಲಿ ಹಾಳೆಗಳು ಅಂಟಿಹೋಗಿದ್ದುವು ಆಗಅವನು ಸ್ವಲ್ಪನೀರನ್ನುತರಿಸಿ ಅದನ್ನು ನೆನಸಿ ಒಂದೊಂದಾಗಿ ತೆರೆದುನೋಡಲಾಗಿ ಆತನು ಹೇಳಿದ ವಿಳನೆಯೆಪುಟವು ಬಂದಿತು. ಆದರೆ ಅದರಲ್ಲಿ ಯಾವಬರವಣಿಗೆಯೂ ಕಾಣಬರಲಿಲ್ಲ. ಅದನ್ನು ನೋಡಿ ರಾಜನು, ವೈದ್ಯನಿಗೆ ಆಸ್ಥಳದಲ್ಲಿ ಅಕ್ಷರಗಳೆ ಇಲ್ಲವೆಂದು ನುಡಿದುದಕ್ಕೆ ವೈದ್ಯನು ಸಾವಿಮಾ! ಇನ್ನು ಮುಂದೆ ತೆಗೆದುನೋಡಿ ಎಂದು ಹೇಳಲು ಆತನು ಅಂಟಿಕೊಂಡಿದ್ದ ಹಾಳೆಗಳನ್ನು ಬಿಡಿಸುವುದ

ಕ್ಕೆ ಬಾಯಿಯಲ್ಲಿ ಕೈಯ್ಯನ್ನಿಟ್ಟುಕೊಂಡು ಹಾಳಿಗಳನ್ನು ತಿರುಗಿಸುತ್ತಿರುವುದರಿಂದ ಕಾಗದದಮೂಲಕವಾಗಿ ಬಂದ ವಿಷವು ಆತನಜ್ಞೇಹಕ್ಕೆ ವ್ಯಾಪಿಸಿ, ರಾಜನಿಗೆ ಕಣ್ಣಾಣದಂತಾಯಿತು. ಕೂಡಲೇ ಆತನು ಸಿಂಹಾಸನದಿಂದ ಕೆಳಕ್ಕೆ ಉರುಳಿಕೊಂಡನು.

ಎಂಬದಾಗಿ ನುಡಿದು ಷಹರಜಾದಿಯು, ಬೆಳಗಾದುದೆಂದು ಕಥೆಯನ್ನು ನಿಲ್ಲಿಸಿದಳು. ಕೂಡಲೆದಿನರಜಾದಿಯು, ಪ್ರಿಯಸಹೋದರಿಯೇ ಈ ಕಥೆಯನ್ನು ಪೂರ್ತಿಮಾಡುವುದಕ್ಕೆ ಕಾಲವು ಸಾಲದೆಹೋದುದಕ್ಕಾಗಿ ನಾನು ಬಹಳವಾಗಿ ವ್ಯಸನಪಡುತ್ತಿರುವೆನು, ಆದರೂ ಈದಿನ ನಿನಗೆ ಮರಣವು ಪ್ರಾಪ್ತವಾದರೆ ನಾನು ಸಾಯುವಂತೆಯೇ ಆಗುವುದೆಂದು ಹೇಳಿದ ಮಾತನ್ನುಕೇಳಿ ಸುಲ್ತಾನನು ಗ್ರೀಕುರಾಜನ ಮತ್ತು ಬಿಸ್ತಾರವನಿಗೂ, ಭೂತಕ್ಕೂ, ನಡೆದಕಥೆಯೆನ್ನು ಸಂಪೂರ್ಣವಾಗಿ ಕೇಳಬೇಕೆಂಬ ಕುತೂಹಲದಿಂದ ಅವಳನ್ನು ಕೊಲ್ಲಕೂಡದೆಂದು ಹೇಳಿ ಯಾವಾಗ ರಾತ್ರಿಯಾಗುವುದೋ ಎಂದು ಹಂಬಲಿಸುತ್ತಿದ್ದನು.

೧೭ ನೆಯ ರಾತ್ರಿ ಕಥೆ

ಮರುದಿನ ಸುಖನಿದ್ರೆಯಲ್ಲಿ ಮಲಗಿದ ಷಹರಜಾದಿಯಂತೆ ದಿನರಜಾದಿಗೂ ಹೆಚ್ಚಾಗಿಯೇ ನಿದ್ರೆಬಂದಿದ್ದರೂ, ಅವಳು ಬೆಳಗಾಗುವುದಕ್ಕೆ ಬಹುಸ್ವಲ್ಪಹೊತ್ತಿರುವಾಗ ಎಚ್ಚತ್ತು ಅಕ್ಕಾ ! ಗ್ರೀಕುರಾಜನ ಮತ್ತು ಬಿಸ್ತಾರವನ ಕಥೆಯನ್ನು ನಾನು ಅಮೂಲಾಗ್ರವಾಗಿ ಕೇಳಬೇಕೆಂದಿದ್ದೆನು. ಆದರೆ ಈಗ ಸ್ವಲ್ಪಕಾಲವೇ ಉಳಿದಿರುವುದರಿಂದ ಗ್ರೀಕುರಾಜನ ಕಥೆಯೆನ್ನಾದರೂ ಹೇಳೆಂದುಕೇಳಲು, ಷಹರಜಾದಿಯು, ಕಥೆಯನ್ನು ನಿಲ್ಲಿಸಿದ ಸ್ಥಳದಿಂದ ಮುಂದಕ್ಕೆ ಹೇಳಲಾರಂಭಿಸಿ ಸುಲ್ತಾನನನ್ನು, ನೋಡಿ, ಆಳಿದ ಸಾಮ್ರಾಜ್ಞಿಯವರೇ ದೋಬಾನೆನೆಂಬ ವೈದ್ಯನತಲೆಯು, ಇದನ್ನುಕಂಡು ತನ್ನವಿಷವು ದೊರೆಯಲ್ಲಿವ್ಯಾಪಿಸಿಕೊಂಡಿರುವುದು. ಇನ್ನು ಸ್ವಲ್ಪಹೊತ್ತಿಗೆ ಅವನು ಸಾಯಹೋಗುವನೆಂಬುದನ್ನು ತಿಳಿದು, ಎಲೈ ಕಂಟಕಿಯಾದ ರಾಜನೇ ! ತನಗಿರುವ ಅಧಿಕಾರವನ್ನು ನ್ಯಾಯವಾದ ರೀತಿಯಿಂದ ನಡೆಸದೆ ದುರ್ಮಾರ್ಗದಿಂದ ನಡೆಯುತ್ತಿರುವ ಜನರಿಗೆ ಭಗವಂತನು ಮಾಡುತ್ತಿರುವ ಶಿಕ್ಷೆಯೆನ್ನು ನೋಡಿದೆಯಾ ? ಆದುದರಿಂದ ಭಗವಂತನು

ನ್ಯಾಯಸ್ಥರಿಗೆ ಅಭ್ಯುದಯವನ್ನುಂಟುಮಾಡುವನೇ ಹೊರತು ಅನ್ಯಾಯಗಾರರ ವಿಷಯದಲ್ಲಿಂದಿಗೂ, ಕೃಪೆ ಮಾಡನು. ಮತ್ತೇನಂದರೆ ಹಾನಿಯನ್ನೇ ಮಾಡುವನೆಂದು ಹೇಳಲು ಕೂಡಲೇ ರಾಜನು ಸತ್ತುಹೋದನು. ಕೂಡಲೆ ವೈದ್ಯನ ಶಿರಸ್ಸಿನಲ್ಲಿದ್ದ ಪ್ರಾಣವೂ, ಹೋಯಿತು.

ಸುಲ್ತಾನರೇ ಗ್ರೀಕುರಾಜನಿಗೂ, ವೈದ್ಯನಿಗೂ, ಈ ವಿಧದಿಂದ ಮರಣವುಂಟಾಯಿತು. ಇಲ್ಲಿಂದ ಮುಂದೆ ಹೇಳುವಕಥೆಯು, ಬಿಸ್ತಾನಿಗೂ, ಭೂತಕ್ಕೂ, ನಡೆದ ಸಂವಾದವಾಗಿರುವುದು. ಆದರೆ ಈಗಲೆ ಬೆಳಗಾದುದರಿಂದ ಇಲ್ಲಿಂದಮುಂದೆ ಕಥೆಯೆನ್ನು ನಿಲ್ಲಿಸಬೇಕಾಗಿರುವುದೆಂದು ಷಹರಜಾದಿಯು ಹೇಳಲು ಕಾಲಾನುಗುಣವಾಗಿ ತಪ್ಪದೆ ತನ್ನ ಕಾರ್ಯವನ್ನು ನೆರವೇರಿಸುತ್ತಿರುವ ಸುಲ್ತಾನನು ಬೇಗನೆದ್ದು ಬಿಸ್ತಾರವನಿಗೂ, ಭೂತಕ್ಕೂ, ನಡೆದ ಸಂವಾದರೂಪವಾದ ಕಥೆಯನ್ನು ಕೇಳಬೇಕೆಂಬ ಅಭಿಲಾಷೆಯಿಂದ ಸುಲ್ತಾನಿಯನ್ನು ನಾಳೆಯದಿನ ಕೊಲ್ಲಬಹುದೆಂದು ಹೇಳಿ ಹೊರಟು ಹೋದನು.

೧೪ನೆಯ ರಾತ್ರಿ ಕಥೆ

ನಿನ್ನೆಯೆಂತೆ ದಿನರಜಾದಿಯು, ಅಜಾಗ್ರತೆಯಾಗಿರದೆ ತುಂಬ ಹೊತ್ತಿರುವಾಗಲೆ ಎದ್ದು ಅಕ್ಕನನ್ನು ಕುರಿತು, ಅಕ್ಕಾ! ನಿನಗೆ ನಿದ್ರೆ ಬಾರದಿದ್ದರೆ ಬಿಸ್ತಾನಿಗೂ, ಭೂತಕ್ಕೂ, ನಡೆದಸಂವಾದದಲ್ಲಿ ಉಳಿದಿರುವ ಭಾಗದ ಕಥೆಯನ್ನು ಕೇಳಬೇಕೆಂದು ಕೇಳಿದಳು. ಅಲ್ಲದೆ ಅದನ್ನುಕೇಳಬೇಕೆಂಬ ಆಸೆಯೆನ್ನು ನನ್ನನ್ನುಮೂತ್ರವಲ್ಲದೆ ಸುಲ್ತಾನರನ್ನು ಬಹುವಾಗಿ ಪೀಡಿಸುತ್ತಿರುವುದೆಂಬುವನ್ನು ನೀನು ಕಾಣೆಯಾ ಎಂದು ನುಡಿದಳು. ಕೂಡಲೆ ಷಹರಜಾದಿಯು ಸುಲ್ತಾನರಿಗೂ, ನಿನಗೂ, ಉಂಟಾಗಿರುವ ಅಪೇಕ್ಷೆಯಂತೆ ನಾನು ತೃಪ್ತಿಪಡಿಸುವೆನೆಂದು ಕಥೆಯೆನ್ನು ಹೇಳಲಾರಂಭಿಸಿ ಸುಲ್ತಾನನನ್ನುಕುರಿತು ಆಳಿದ ಸುಲ್ತಾನರೇ ಬಿಸ್ತಾರವನು, ಗ್ರೀಕುರಾಜನಿಗೂ, ಜೋಬಾನನಿಗೂ, ನಡೆದಸಂಗತಿಯೆನ್ನು ಮುಗಿಸಿದಕೂಡಲೆ ಆ ರಾತ್ರಿಯಲ್ಲಿದ್ದ ಭೂತವನ್ನುನೋಡಿ ಹೀಗೆಂದು ಕೇಳಿದನು :—

ಗ್ರೀಕುರಾಜನು, ವೈದ್ಯನನ್ನುಕೊಲ್ಲದೆ ಪ್ರಾಣದಿಂದ ಕಾಪಾಡಿದ್ದರೆ ಭಗವಂತನು ಅವನನ್ನು ಸಂರಕ್ಷಿಸುತ್ತಿದ್ದನು. ಬಹಳ ಏಷ್ಟು

ವಿನಯವನಾಗಿ ಬೇಡಿಕೊಂಡರೂ ರಾಜನು ಕೇಳದೆ ಹೋದುದರಿಂದ ದೇವರು ಆತನಿಗೂ ಶಿಕ್ಷೆಯನ್ನು ಮಾಡಿದನು. ಎಲೈ ಭೂತವೇ ನಿನಗೂ ಅದೇ ಗತಿಯುಂಟಾಗುವುದು. ನಾನು ಕೇಳಿಕೊಂಡವೀರೆಗೆ ನೀನು ನಡೆಸಿಕೊಟ್ಟದ್ದರೆ, ನನಗೂ ನಿನ್ನಮೇಲೆ ದಯೆವುಂಟಾಗುತ್ತಿತ್ತಲ್ಲವೆ ? ನಿನ್ನಸೆರೆಯನ್ನು ಬಿಡಿಸಿದುದಕ್ಕಾಗಿ ನನಗೆ ನೀನುಮೂಡಬೇಕಾದ ಉಪಕಾರವನ್ನು ಮರೆತು ನನ್ನನ್ನು ಕೊಂದೇಕೊಲ್ಲಬೇಕೆಂದು ಹಟವನ್ನು ಮಾಡಿದೆಯಲ್ಲಾ! ಆದುದರಿಂದ ಸಮಯದಲ್ಲಿ ನಾನು ನಿನ್ನವಿಷಯದಲ್ಲಿ ಅಷೊಟ್ಟಂದು ಕಾಠಿಣ್ಯವನ್ನು ತೋರಿಸಬೇಕಾದುದು ಆವಶ್ಯಕವೆಂದು ಹೇಳಿದನು.

ಆಗ ಭೂತವು ಬೆಸ್ತನನ್ನುನೋಡಿ ಸ್ವಾವಿಾ ! ಅಷೊಟ್ಟಂದು ಕೂರಕೃತ್ಯವನ್ನು ನನ್ನವಿಷಯದಲ್ಲಿ ನೆನೆಯಬೇಡ ಅಪಕಾರಮಾಡಿದವರಿಗೂ, ಕೂಡ ಉಪಕಾರವನ್ನು ಮಾಡುವುದೇ ಸತ್ಪುರುಷರ ಲಕ್ಷಣವೆಂದು ಶಾಸ್ತ್ರಗಳು ಮೊರೆಯಿಡುತ್ತಿರುವವು. ಆದುದರಿಂದ ದಯೆಮಾಡು, ಪೂರ್ವದಲ್ಲಿ ಇವಮಾವನೆಂಬುವನಿಗೂ, ಅಟಿಕಾ ಎಂಬವನ ವಿಷಯದಲ್ಲಿ, ನಡೆಸಿದಂತೆ ನೀನುನನ್ನವಿಷಯದಲ್ಲಿ ನಡೆಸಬೇಕೆಂದು ಬೇಡಿಕೊಳ್ಳಲು, ಬೆಸ್ತರವನು ಭೂತವೇ ! ಇವಮಾವನು ಅಟಿಕಾ ಎಂಬುವನಿಗೆ ಏನುಮಾಡಿದನೊ ಅದನ್ನು ಹೇಳು ಕೇಳಬೇಕೆಂದುನುಡಿಯಲು, ಸ್ವಾವಿಾ ! ಆಕಥೆಯನ್ನು ನೀವು ಕೇಳಬೇಕೆಂದಿದ್ದರೆ ದಯೆವಿಟ್ಟು ನನ್ನನ್ನು ಹೊರಗೆಬಿಟ್ಟರೆ ವಿಶದವಾಗಿ ಹೇಳುವೆನು ಇಲ್ಲದಿದ್ದರೆ ಈ ಸೆರೆಯಲ್ಲಿ ಸಿಕ್ಕಿಕೊಂಡಿರುವಾಗ ಕಥೆಯನ್ನು ಹೇಳಲು ಅಸಾಧ್ಯವಾಗಿರುವುದೆಂಬುದನ್ನು ನೀವುಕಾಣಿರಾ ! ಎಂದು ನುಡಿಯಲು, ಬೆಸ್ತನು, ಆ ವಿಷಯವನ್ನು ಮಾತ್ರ ಮರೆತು ಬಿಡು. ನೀನು ಕೂಡಲೆ ಸಮುದ್ರದ ತಳದಲ್ಲಿರುವ ಪಾತಾಳಲೋಕವನ್ನು ಸೇರುವೆ ಎಂದು ನುಡಿದನು. ಭೂತವು ಅಯ್ಯಾ! ನೀನು ಹೇಳಿದಂತೆ ನಿನ್ನನ್ನು ಕೊಲ್ಲದೆ ಬಿಟ್ಟುಬಿಡುವೆನಲ್ಲದೆ ಹೆಚ್ಚಾದಭಾಗ್ಯವೂ ಬರುವಂತೆ ಮಾಡುವೆನೆಂದು ಹೇಳಿತು. ಆಗ ಬೆಸ್ತರವನು ತನ್ನ ದಾರಿದ್ರ್ಯವನ್ನು ಹೋಗಲಾಡಿಸಿಕೊಳ್ಳಬೇಕೆಂದು, ಭೂತರಾಜಾ ! ನೀನು ಹಾಗೆಮಾಡುವುದೇ ! ಸರಿಯೆಂದು ನಂಬುಗೆ ತೋರುವಂತೆ ಭಗವಂತನಮೇಲೆ ಆಣೆಯೆನ್ನಿಟ್ಟು ನನಗೆ ನಂಬುಗೆಯನ್ನುಂಟುಮಾಡಿದರೆ ಆಗಬಹುದೆಂದು ಈಗ ಭಗವಂತನ ಪೆಸರನ್ನೆತ್ತಿ ಪ್ರತಿಜ್ಞೆಮಾಡಿಕೊಟ್ಟು ಹೇಳಿದರೆ ಆಬಳಿಕ ನೀನು ತಪ್ಪುವುದಕ್ಕೆ,

ಆಗುವುದಿಲ್ಲವೆಂದು ನುಡಿಯಲುಭೂತವು ಕೂಡಲೆಹಾಗೆಯೆಮಾಡಿತು. ಬಿಸ್ತ್ರಾ ನು ಬಾಗಿಲನ್ನು ತೆಗೆದನು. ಕೂಡಲೇ ಹೊಗೆಯನ್ನುಗುಳುತ್ತಾ ಭೂತ ವು ಹೊರಗೆಬಂದು ಪೂರ್ವದಂತೆ ಮಹದಾಕಾರವನ್ನುಹೊಂದಿ ಆಪಾತ್ರೆಯಿ ನ್ನು ಕಾಲಿನಿಂದೊದೆದು, ಸಮುದ್ರದಲ್ಲಿ ಕೆಪಹಲು ಬಿಸ್ತ್ರಾನು ಭಯವನ್ನು ಹೊಂದಿ ಎಲೈ ಭೂತವೇ ಆ ಪಾತ್ರೆಯನ್ನೇಕೆ ಸಮುದ್ರದಲ್ಲಿ ಹಾಕಿದೆ ನೀನು ಭಗವತಾಸ್ಸಕ್ಷಿಯಾಗಿ ಮಾಡಿದ ಪ್ರಮಾಣವನ್ನು ಉಳಿಸಿಕೊಳ್ಳುವದಿ ಲ್ಲವೆ, ದಯೆಪಿಟ್ಟು ನನ್ನಪ್ರಾಣವನ್ನುಳಿಸು. ದೋಬಾನನು ಗ್ರೀಕು ರಾಜನಿಗೆ ಹೇಳಿದಂತೆ ನಾನು ನಿನಗೆ ಹೇಳಬೇಕೆ ಎಂದುಕ್ಕೇಳಲು ಭೂತವು ನಗುತ್ತಾ ಬಿಸ್ತ್ರಾನನು ಭಯಪಟ್ಟನೆಂದು ತಿಳಿದು ಅಯ್ಯಾ ಭಯವನ್ನು ಬಿಪು ನಾನು ಹುಡುಗಾಟಕ್ಕಾಗಿ ಹಾಗೆಮಾಡಿದೆನು ನಾನಾಡಿದಮಾತನ್ನು ಎಂದಿಗೂ ಹೋಗಲಾಡಿಸಿಕೊಳ್ಳತಕ್ಕವನಲ್ಲ. ಆದುದರಿಂದ ನೀನು ಬಲೆಯೆ ನ್ನು ತೆಗೆದುಕೊಂಡು ನನ್ನ ಸಂಗಡ ಬಾ! ಎಂದುಹೇಳಿ ತಾನು ಮುಂದೆ ಹೊರಟಿತು. ಬಿಸ್ತ್ರಾನು ಏನು ಮಾಡುವುದೋ ಎಂಬ ಸಂಶಯದಿಂದ ಅದ ರ ಹಿಂದೆ ಮೆಲ್ಲಮೆಲ್ಲಗೆ ನಡೆದುಬಂದನು. ಅವರಿಬ್ಬರೂ ಅಲ್ಲಿಂದ ಜೊರ ಟು ಊರನ್ನುದಾಟಿ ಒಂದು ಬೆಟ್ಟವನ್ನು ಅದರ ಆಚೆ ನಾಲ್ಕು ಗುಡ್ಡಗಳ ಮಧ್ಯೆ ಇರುವ ಒಂದು ದೊಡ್ಡಕೆರೆಯನ್ನು ಸೇರಿದರು. ಆಗ ಭೂತವು ಬಲೆಯನ್ನು ಹಾಕಿ ಮೀನುಗಳನ್ನು ಹಿಡಿದುಕೋ, ಎಂದು ಬಿಸ್ತ್ರಾನಿಗೆ ಹೇಳಲು ಬಿಸ್ತ್ರಾನು ಆ ಕೆರೆಯಲ್ಲಿ ತುಂಬಿ ತುಳುಕುತ್ತಿರುವ ಬಿಳಿಯ, ಕರಿ ಯ, ಹಸುರಿನ, ಮತ್ತು ಕೆಂಪಿನ ಮೀನುಗಳನ್ನುನೋಡಿ, ತನಗೆ ಅತ್ಯಂ ತವಾಗಿ ದೊರಕಬಹುದೆಂದು ತಿಳಿದು ಬಲೆಹಾಕಿ ತೆಗೆದುನೋಡಲು, ಜಾತಿ ಗೊಂದರಂತೆ ನಾಲ್ಕುಮೀನುಗಳು ದೊರಕಿದವು. ಅಂತಹ ಮೀನುಗಳನ್ನು ಆತನು ಎಂದಿಗೂ ನೋಡಿದವನಲ್ಲವಾದುದರಿಂದ ತನಗೆ ಹೆಚ್ಚಾಗಿ ಬೆಲೆಬರು ವುದೆಂದು ಆಶ್ಚರ್ಯಯುಕ್ತನಾಗಿ ಸಂತೋಷವನ್ನು ಹೊಂದಿದನು.

ಭೂತವು ಅಯ್ಯಾ! ನೀನು ಇದನ್ನು ತೆಗೆದುಕೊಂಡುಹೋಗಿ ರಾಜನಿಗೆ ಕೊಟ್ಟರೆ ಆತನು ಅತ್ಯಂತವಾದ ಧನವನ್ನು ಕೊಡುವನು. ಅಲ್ಲದೆ ನೀನು ಪ್ರತಿದಿನವೂ ಇಲ್ಲಿಗೆಬಂದು ಬೇಟೆಯಾಡಬಹುದು. ಆದರೆ ದಿನಕ್ಕೆ ಒಂದುಸಾರಿಗಿಂತಲೂ, ಹೆಚ್ಚಾಗಿ ಬಲೆಯನ್ನುಹಾಕಿದರೆ ನಿನಗೆ ಭುಃಖವುಂಟಾಗುವುದು. ಆದುದರಿಂದ ನಾನುಹೇಳಿದ ಮಾತುಗಳನ್ನು ನೆನ

ಪಿನಲ್ಲಿಟ್ಟುಕೊಂಡಿದ್ದು ಎಚ್ಚರಿಕೆಯಿಂದಿದ್ದರೆ ಸುಖವುಂಟಾಗುವುದೆಂದು ಹೇಳಿ ಭೂಮಿಯೆನ್ನು ಕಾಲಿನಿಂದೊದೆಯಲು, ಅಲ್ಲಿ ಒಂದು ಬಿಲವಾಯಿತು. ಭೂತವು ಒಳಗೆಹೋದಕೂಡಲೇ ಬಿಲವು ಮುಚ್ಚಿ ಹೋಯಿತು. ಬಳಿಕ ಬಿಸ್ತಾನು, ಎರಡನೆಯಸಾರಿ ಬಲಿಯೆನ್ನುಹಾಕದೆ ಭೂತವು ಹೇಳಿದಂತೆ ನಡೆದುಕೊಂಡು ತನಗೆ ಸಿಕ್ಕಿದ ವಿೂನುಗಳಲ್ಲಿ ತೃಪ್ತಿಯೆನ್ನುಹೊಂದಿ ತನ್ನ ಮನೆಗೆಬಂದು ನಾನಾವಿಧವಾದ ಯೋಚನೆಗಳಿಂದ ಭೂತವು ಹೇಳಿದ್ದವೂ ತುಗಳನ್ನು ನೆನೆದುಕೊಂಡು ಆ ವಿೂನುಗಳನ್ನು ಸುಲ್ತಾನರಬಳಿಗೆ ತೆಗೆದುಕೊಂಡು ಹೋಗಬೇಕೆಂದು, ಹೊರಟನು. ಅಷ್ಟರಲ್ಲಿ ಬೆಳಗಾದುದರಿಂದ ಷಹರಜಾದಿಯು ಕಥೆಯೆನ್ನು ನಿಲ್ಲಿಸಿದಳು.

ದಿನರಜಾದಿಯು ಅಕ್ಕಾ ! ನೀನು ಹಿಂದೆಹೇಳಿದ ಕಥೆಗಳಿಗಿಂತಲೂ, ಈ ಕಥೆಯು, ಅತ್ಯಂತ ರಮಣೀಯವಾಗಿರುವುದು. ಇನ್ನು ವಿನೋದಕರಗಳಾದ ಕಥೆಗಳನ್ನು ಹೇಳಿಂದು ಬೇಡಲು, ತಂಗೀ ! ಸುಲ್ತಾನರಬಯಿಯು ನನಗುಂಟಾದರೆ ನಾಳನರಾತ್ರಿ ಇದಕ್ಕಿಂತಲೂ ಅತ್ಯುತ್ತಮವಾದ ಕಥೆಯನ್ನು ಹೇಳುವೆನೆಂದು ನುಡಿಯಲು, ಸುಲ್ತಾನನು ನಾಳೆಯ ಕಥಾಸ್ವಾರಸ್ಯವನ್ನು ನೋಡಬೇಕೆಂದು ಸುಲ್ತಾನಿಯೆನ್ನು ನಾಳೆಯವರೆಗೂ ಕೊಲ್ಲಕೂಡದೆಂದು ಆಜ್ಞಾಪಿಸಿದನು.

೧೯ ನೆಯ ರಾತ್ರಿ ಕಥೆ.

ದಿನರಜಾದಿಯು ಎಂದಿನಂತೆ ಬೆಳಗಿನಜಾವಕ್ಕೆ ಎದ್ದು ಸುಲ್ತಾನಿಯೆನ್ನು ಎಚ್ಚರಗೊಳಿಸಿ ಅಕ್ಕಾ ! ನಿನಗೆ ನಿದ್ರೆ ಬಾರದೆಯಿದ್ದರೆ ಬಿಸ್ತಾರವನಿಗೆ ಮುಂಚೆ ಸಂಭವಿಸಿದ ಕಥೆಯೆನ್ನು ಹೇಳು. ಬೇಗನೆ ಬೆಳಗಾಗಿ ಹೋಗುವುದೆಂದು ಕೇಳಲು ಷಹರಜಾದಿಯು ಹಾಗೆಯೆ ಆಗಲೆಂದು ಸುಲ್ತಾನರಿಂದ ಅಪ್ಪಣೆಯೆನ್ನುಪಡೆದು, ಕಥೆಯನ್ನು ಹೇಳಲಾರಂಭಿಸಿದಳು. ಸುಲ್ತಾನರೇ ! ಬಿಸ್ತಾರವನು ಹಿಡಿದುತಂದ ಆ ನಾಲ್ಕು ವಿೂನುಗಳನ್ನು ಸುಲ್ತಾನರುನೋಡಿ ಎಷ್ಟೊಂದು ಆಶ್ಚರ್ಯವನ್ನು ಹೊಂದಿದರೊ ಅದನ್ನು ತಾವೇ ಯೋಚಿಸಬಹುದು. ಅವರು ಆ ವಿೂನುಗಳನ್ನು ಬಹಳ ಹೊತ್ತಿನವರೆಗೂ ಚೆನ್ನಾಗಿ ನೋಡಿ ಹೆಚ್ಚಾದ ಆಶ್ಚರ್ಯವನ್ನು ಹೊಂದಿ ತನ್ನ ಪ್ರಧಾನಮಂತ್ರಿಯೆನ್ನು ಕುರಿತು, ಈ ವಿೂನುಗಳು ಎಷ್ಟು ಸುಂ

ದರವಾಗಿವೆ ? ಇವುಗಳನ್ನು ಗ್ರೀಕುರಾಜನಿಗೆ ಬಹುಮೂಲವಾಗಿ ಕಳುಹಿಸಬೇಕಾಗಿರುವುದು. ಆತನು ಇದನ್ನುನೋಡಿ ಪರಮಾಶ್ಚರ್ಯವನ್ನು ಹೊಂದುವನು. ಎಂದು ನುಡಿಯಲು, ಮಂತ್ರಿಯು ಅವುಗಳನ್ನು ತೆಗೆದು ಕೊಂಡುಹೋಗಿ ಅಡಿಗೆಯವನಕೈಗೆಕೊಟ್ಟು ಈವಿಮಾನುಗಳನ್ನು ಚೆನ್ನಾಗಿ ಅಡಿಗೆ ಮಾಡೆಂದು ಹೇಳಿಸುಲ್ತಾನರ ಬಳಿಗೆ ಬರಲು ಅವರು ಬಿಸ್ತಾರವನಿಗೆ ತಮ್ಮದೇಶದಲ್ಲಿ ಫಲಾವಣಿಯಲ್ಲಿರುವ ನಾನೂರು ಭಂಗಾರದ ನಾಣ್ಯಗಳನ್ನು ಕೊಡುವಂತೆ ಹೇಳಲು ಆತನು ಹಾಗೆಯೇಮಾಡಿದನು. ಬಿಸ್ತಾರವನು ಹುಟ್ಟಿದಾಗಿನಿಂದಲೂ, ಇಷ್ಟೊಂದು ಹಣವನ್ನು ಕಾಣದಿದ್ದುದರಿಂದ ಮೊದಲು ಸಂಶಯಗ್ರಸ್ತನಾದರೂ, ಬಳಿಕ ಸಂತೋಷಚಿತ್ತನಾಗಿ ತನ್ನ ಸಂಸಾರಕ್ಕೆ ಬೇಕಾದ ಪದಾರ್ಥಗಳನ್ನು ಆಹಣದಿಂದ ಕೊಂಡುಕೊಂಡನು. ಹೀಗೆಹೇಳಿದ ಷಹರಜಾದಿಯನ್ನು ನೋಡಿ ಸುಲ್ತಾನರು ಆ ರಾಜನ ಅಡಿಗೆಯವನು ವಿಮಾನುಗಳನ್ನೇನು ಮಾಡಿದನೋ ಅದನ್ನು ಹೇಳಬೇಕೆಂದು ಕೇಳಲು ಆತನಿಗೆ ಮುಹತ್ತಾದಸಂಕಟವುಂಟಾಯಿತು. ಅವನು ಆ ವಿಮಾನುಗಳನ್ನು ಚೆನ್ನಾಗಿತೊಳೆದು, ಪಾತ್ರೆಯಲ್ಲಿ ಹಾಕಿಕುದಿಸುವುದಕ್ಕಾಗಿ ಬಲೆಯ ಮೇಲಿಡಲಾಗಿ ಒಂದುಪಕ್ಕವು ಚೆನ್ನಾಗಿ ಬೆಂದಿರುವುದೆಂದು ತಿಳಿಯದೆ ತಿರುವಿ ಹಾಕಿದನು. ಅವನು ಹಾಗೆ ತಿರುವಿ ಹಾಕಿದಕೂಡಲೇ, ಮುಹಾದ್ಭುತವಾಯಿತು. ಆಹಾ ! ಆ ಅಡಿಗೆಯವನೆಯಲ್ಲಿ ಗೋಡೆಯಿಂದೊಬ್ಬ ರೂಪವತಿಯಾದ ಹೆಂಗಸು ಹೊರಗೆಬಂದಳು. ಅವಳು ಈಜಿಪ್ಟ (ಐಗುಪ್ತ) ರಾಜ್ಯದ ಸಿಪ್ರೀಯೆಂತೆ ಸುಂದರಳಾಗಿ ಸರ್ವಾಲಂಕಾರಗಳಿಂದೊಪ್ಪುತ್ತಿರುವುದನ್ನು ಅಡಿಗೆಯಾಡುತ್ತಿದ್ದ ಹೆಂಗಸುನೋಡಿಭ್ರಮೆಯಿಂದನಿಶ್ಚೇಷ್ಟಿತಳಾಗಿ ನಿಂತುಕೊಂಡಳು. ಆ ಹೆಂಗಸು ಅಡಿಗೆಯಪಾತ್ರೆಯಬಳಿಗೆ ಬಂದು, ಕೈಯಿಂದ ಒಂದುವಿಮಾನನ್ನು ಹೊಡೆದು, ಓ ವಿಮಾನೇ ! ವಿಮಾನೇ ! ನಿನ್ನಕೆಲಸದಲ್ಲಿ ನೀನಿರುವೆಯಾ ? ಎಂದುಕೇಳಿದಳು. ಅದಕ್ಕೆ ಅವಳಿಗೆ ಜವಾಬು ಬರದೇಹೋದುದರಿಂದ ಮತ್ತೆ ಮೊದಲಿನಂತೆಯೆ ಕೂಗಿದಳು. ಆ ಬಳಿಕ ಆ ನಾಲ್ಕುವಿಮಾನುಗಳು ಅವಳನ್ನು ಮುಖವೆತ್ತಿನೋಡಿ ಹೌದು ! ಹೌದು ನೀನು ಹೇಳಿದಂತೆ ನಾವು ಮಾಡುತ್ತಿರುವೆವು. ನೀನು ನಿನ್ನ ಋಣವನ್ನು ತೀರಿಸಿಕೊಂಡರೆ ನಾವು ನಮ್ಮಗಳಋಣವನ್ನು ಕಳೆದುಕೊಳ್ಳುವೆವು.

ನೀನು ಇಲ್ಲಿಂದ ಹೊರಟುಹೋಗುವುದಾದರೆ ನಾವು ಸುಖವನ್ನು

ಹೊಂದುವೆವು. ಎಂದು ಹೇಳಲು ಆಕೆಯು ಬಾಣಲೆಯನ್ನು ಮಗುಚಿ ಹಾಕಿ ಗೋಡೆಯೆಲ್ಲಿ ಸೇರಿಕೊಳ್ಳಲು ಗೋಡೆಯು ಎಂದಿನಂತೆ ಸರಿಹೋಯಿತು. ಕೂಡಲೆ ಅಡಿಗೆಯವಳು ತನ್ನ ಭ್ರಾಂತಿಯನ್ನು ತೊರೆದು ಸ್ವಲ್ಪ ಧೈರ್ಯವನ್ನು ಹೊಂದಿ ಒಲೆಯನ್ನೇಲೆಬಿದ್ದಿರುವ ವಿೂನುಗಳನ್ನು ನೋಡಲಾಗಿ ಅವುಗಳು ಕರ್ರಗೆ ಮಸಿಯಂತಾಗಿ ಸುಲ್ತಾನರಬಳಿಗೆ ತೆಗೆದುಕೊಂಡುಹೋಗುವುದಕ್ಕೆ ಅಯೋಗ್ಯವಾದವುಗಳಾಗಿರುವುದನ್ನು ತಿಳಿದು ಅಯ್ಯೋ ನನ್ನ ಗತಿ ಏನಾಗುವುದೋ! ಸುಲ್ತಾನರಿಗೆ ಇಲ್ಲಿನಡೆದ ಸಂಗತಿಯೆನ್ನು ಹೇಳಿದರೆ ನನ್ನವೂತುಗಳನ್ನು ನಂಬದೆ ನನ್ನನ್ನು ಶಿಕ್ಷಿಸುವುದು ನಿಜವೆಂದು ಬಹಳವಾಗಿ ಅಳತೊಡಗಿದಳು.

ಆಗ ಪ್ರಧಾನಮಂತ್ರಿಯು ಬಂದು ವಿೂನುಗಳಾಯಿತೆ ಎಂದುಕೇಳಿ ಅಲ್ಲಿನಡೆದ ಸಂಗತಿಯೆನ್ನೆಲ್ಲಾ ಕೇಳಿ ತಿಳಿದುಕೊಂಡಕೂಡಲೇ ಆತನಿಗೆ ಮಹತ್ತಾದ ಆಶ್ಚರ್ಯವುಂಟಾಗಿರಬಹುದೆಂದು ನೀವೇ ಯೋಚಿಸಿಕೊಳ್ಳಬಹುದು. ಆತನು ಆ ಸಂಗತಿಯೊಂದನ್ನು ಸುಲ್ತಾನರಿಗೆ ಹೇಳದೆ ಬೇರೆ ಒಂದು ಉಪಾಯವನ್ನು ಕಲ್ಪಿಸಿ, ಚಿಸ್ತ್ರರವನನ್ನು ಕರೆಸಿ ಇನ್ನು ನಾಲ್ಕು ಇಂತಹ ವಿೂನುಗಳನ್ನು ತೆಗೆದುಕೊಂಡು ಬರುವಂತೆ ಹೇಳಿದನು. ಕೂಡಲೆ ಚಿಸ್ತ್ರರವನು ಭೂತವ್ರುಹೇಳಿದ ವೂತುಗಳನ್ನು ಮಂತ್ರಿಗೆತಿಳಿಸದೆ ಅದು ಬಹು ದೂರವಾಗಿರುವುದರಿಂದ ಈದಿನ ತರುವುದಕ್ಕಾಗುವುದಿಲ್ಲವೆಂದೂ, ನಾಳೆ ಖಂಡಿತವಾಗಿ ತೆಗೆದುಕೊಂಡು ಬರುವೆನೆಂದು ಹೇಳಿದನು. ಅದೇವೇರಿಗೆ ಆತನು ಆಮಾತ್ರಿಯಿಹೊರಟು ಕೆರೆಯಬಳಿಗೆಹೋಗಿ ಮರುದಿನ ಬಲಿಯನ್ನುಬೀಸಿ ನಾಲ್ಕುವಿೂನುಗಳನ್ನು ಹಿಡಿದು ತಾನು ತಶುವೆನೆಂದು ಹೇಳಿದ್ದವೇಳೆಗೆ ಸರಿಯಾಗಿ ಮಂತ್ರಿಯಬಳಿಗೆಬಂದು ವಿೂನುಗಳನ್ನು ಕೊಟ್ಟನು. ಮಂತ್ರಿಯು ಅದನ್ನು ಅಡಿಗೆಮನೆಗತೆಗೆದುಕೊಂಡುಹೋಗಿ, ತಾನು ಅಡಿಗೆಯವಳು, ನೀರಿ ಬಾಗಿಲನ್ನು ಮುಚ್ಚಿ ಕೊಂಡರು. ಅಡಿಗೆಯವಳು ಮೊದಲಿನಂತೆ ಅವುಗಳನ್ನು ಅಣಿಮಾಡಿ ಒಲೆಯಮೇಲ್ಪಟ್ಟಳು. ಕೂಡಲೇ ಬಂದುಭಾಗವು ಬೆಂದಿರುವುದನ್ನುನೋಡಿ ಅಡಿಗೆಯವಳು ಅವುಗಳನ್ನು ತಿರುವಿಹಾಕಲು ಮೊದಲಿನಂತೆ ಗೋಡೆಯಿಂದ ಕೈಯ್ಯೊಲ್ಲಿ ಬಂದು ಚಿತ್ರವನ್ನುಹಿಡಿದು ಒಬ್ಬ ಸ್ತ್ರೀಯು ಹೊರಗೆಬಂದು ಮೊದಲಿನಂತೆ ಒಂದುವಿೂನನ್ನು ಬಡಿದುಹಾಕಿ ಗೂತನಾಡಿಸಲು, ಅವುಗಳು ಎಂದಿನಂತೆ ಪ್ರ

ತ್ಯುತ್ತರವನ್ನು ಹೇಳಿದವು. ಇಷ್ಟರಲ್ಲಿ ಬೆಳಗಾದುದರಿಂದ ಷಹರಜಾದಿಯು, ಸುಲ್ತಾನರೆ ಈಗ ಬೆಳಗಾಗಿಹೋಯಿತು. ತಾವು ದಯವಿಟ್ಟು ನನ್ನಪ್ರಾಣವನ್ನು ಉಳಿಸಿದುದೇ ಆದರೆ ನಾಳಿನದಿನ ಈಕಥೆಯನ್ನು ಮುಗಿಸುವೆನು. ಎಂದು ಹೇಳಲು ಸುಲ್ತಾನನು, ಕಥೆಯನ್ನು ಪೂರ್ತಿಯಾಗಿ ಕೇಳಬೇಕೆಂಬ, ಆಸೆಯಿಂದ ಷಹರಜಾದಿಯನ್ನು, ಕೊಲ್ಲ ಕೂಡದೆಂದು ಹೇಳಿದನು.

೨೦ ನೆಯ ರಾತ್ರಿ ಕಥೆ.

ಮರುದಿನ ಬೆಳಗಿನಜಾವಕ್ಕೆ ಎದ್ದ ದಿನರಜಾದಿಯು, ಅಕ್ಕಾ ಆ ಬೆಸ್ತರವನ ಕಥೆಯನ್ನು ಪೂರ್ತಿಮಾಡೆಂದು ಕೇಳಿದಕೂಡಲೆ ಆಕೆಯು ಸುಲ್ತಾನರ ಅಪ್ಪಣೆಯೆನ್ನುಹೊಂದಿ ಮುಂದೆ ಕಥೆಯೆನ್ನು ಹೇಳುವುದಕ್ಕೆ ಮೊದಲುಮಾಡಿದಳು. ಸುಲ್ತಾನರೇ ! ಆನಾಲ್ಕುವಿಾನುಗಳನ್ನು ಅಡಿಗೆಮಾಡುತ್ತಿರುವಕಾಲದಲ್ಲಿ ಗೋಡೆಯಿಂದ ಹೊರಗೆಬಂದ ಹೆಂಗಸುತನ್ನಕೈಯಿಂದ ಬಾಣಲೆಯನ್ನು ಜೋರಲುಹಾಕಿ ಬಂದವಾರ್ತವನ್ನು ಹಿಡಿದು ಗೋಡೆಯಲ್ಲಿ ಸೇರಿಕೊಂಡುದನ್ನು ನೋಡಿ ಪರವಾಶ್ಚರ್ಯವನ್ನುಹೊಂದಿ ಈಸಂಗತಿಯು ಬಹು ವಿನೋದಕರವಾಗಿರುವುದರಿಂದ ಇದನ್ನು ಸುಲ್ತಾನರಿಗೆ ತಿಳಿಸದೆ ಇರಬಾರದೆಂದು ತಿಳಿದು ಅವರಬಳಿಗೆಬಂದು ನಡೆದ ಸಂಗತಿಯೆನ್ನೆಲ್ಲಾ ವಿವರಿಸಿಹೇಳಲು ಸುಲ್ತಾನರು ತಾವು ಇದನ್ನು ಪ್ರತ್ಯಕ್ಷವಾಗಿ ನೋಡಬೇಕೆಂಬ ಅಬಿಲಾಷೆಯಿಂದ ಆ ಬೆಸ್ತರವನನ್ನು ಕರೆಸಿ, ಸ್ನೇಹಿತನೇ ! ನೀನು ಪುನಃ ನಾಲ್ಕು ವಿಾನುಗಳನ್ನು ತಂದುಕೊಡುವಿಯೊ, ಎಂದುನುಡಿಯಲು, ಆತನು ಮೂರುದಿನಗಳ ವಾಯಿದೆಯಾದರೆ ನಾನು ತಂದುಕೊಡುವೆನೆಂದು ಹೇಳಿ ಕೆರೆಗಹೋಗಿ ಬಲಿಹಾಕಿ ಮೊದಲಿನಂತೆ ನಾಲ್ಕುವಿಾನುಗಳನ್ನು ಹಿಡಿದುತಂದು ಸುಲ್ತಾನರಿಗೆಕೊಡಲು, ಆತನು ಪರವಾಶ್ಚರ್ಯನಾಗಿ ಮೊದಲಿನಂತೆ ನಾನೂರುನಾಣ್ಯಗಳನ್ನು ಕೊಡುವಂತೆ ಆಜ್ಞಾಪಿಸಿದನು. ಬಳಿಕ ಸುಲ್ತಾನನು, ಮಂತ್ರಿಯೊ, ಅವುಗಳನ್ನು ತೆಗೆದುಕೊಂಡು ಅಡಿಗೆಯಮನೆಗೆ ಬಂದು ಬಾಗಿಲನ್ನುಹಾಕಿಕೊಂಡು ಬೇಯಿಸುತ್ತಾ ಇದ್ದ ತಿರುನಿಹಾಕಲು, ಆ ಸ್ತ್ರೀಯು, ಅಡಿಗೆಯವಳಂತೆ ಉಡುಪುಹಾಕಿಕೊಂಡು ಕೈಯಲ್ಲಿ ಚಿತ್ತವನ್ನುಹಿಡಿದುಕೊಂಡು, ವಿಾನುಗಳನ್ನು ಬಡಿದು ವಿಾನುಗಳೇ ! ನಿಮ್ಮ ಕೆಲಸದಲ್ಲಿ ನೀವಿರುವಿರಾ ! ಎಂದುಕೇಳಲು ಅವುಗ

ಳು ತಲೆಯೆತ್ತಿನೋಡಿ ಹೌದು ನಾವು ನಮ್ಮಕೆಲಸದಲ್ಲಿಯೆ ಇರುವೆವು. ನೀ ನುಯೋಚಿಸಿದಂತೆ ನಾವುಯೋಚಿಸುತ್ತಿರುವೆವು, ನೀನು ನಿನ್ನಋಣವನ್ನು ತೀರಿಸಿಕೊಂಡರೆ ನಾವು ತೀರಿಸಿಕೊಳ್ಳುವೆವು. ನೀನು ಹೊರಟುಹೋದರೆ ನಾವು ಸುಖವಾಗಿರುವೆವೆಂದು ಹೇಳಿದವು. ಕೂಡಲೆ ಅವಳು ಅವುಗಳನ್ನು ಬೋರಲುಹಾಕಿ ಕರ್ಪಗೆ ಮಸಿಯಾಗುವಂತೆ ಮೂಡಿ ಬಂದಮಾರ್ಗದಲ್ಲಿ ಹೊರಟುಹೋಗಲು, ಗೋಡೆಯು ಎಂದಿನಂತೆ ಸರಿಹೋಯಿತು. ಇದೆ ಲ್ಲವನ್ನು ನೋಡಿ ಸುಲ್ತಾನನು ಆಶ್ಚರ್ಯವನ್ನು ಹೊಂದಿ ಮಂತ್ರಿಯೇ ಈ ಮಾನುಗಳು ಬಹುಶಃ ವಿಚಿತ್ರಕರವಾದವುಗಳಾಗಿರುವುದರಿಂದ ಇದನ್ನು ತಿಳದುಕೊಳ್ಳಬೇಕೆಂದು ಯೋಚಿಸಿ, ಬಿಸ್ತರವನನ್ನು ಕರೆಸಿ, ಅಯ್ಯಾ ! ನೀನು ತಂದ ಮಾನುಗಳಿಂದ ನನಗೆ ತುಂಬ ವ್ಯಸನವುಂಟಾಗಿದೆ ಅವುಗಳ ನ್ನು ಎಲ್ಲಿಂದ ಹಿಡಿದುತಂದೆ ಎಂದುಕೇಳಲು, ಆತನು ಇಲ್ಲಿಗೆ ಬಹುದೂರದ ಲ್ಲಿರುವ ಒಂದಾನೊಂದು ಗುಡ್ಡದ ಆಚೆಕಡೆಯಲ್ಲಿರುವ ಗುಡ್ಡಗಳ ಕೆರೆಯ ಲ್ಲಿ ಹಿಡಿದುತಂದೆನೆಂದು ಹೇಳಿದನು ಆಗ ಸುಲ್ತಾನನು, ಮಂತ್ರಿಯೇ ನೀನು ಆಸ್ಥಳವನ್ನು ಬಲ್ಲೆಯಾ ! ಎಂದುಕೇಳಲು ಮಂತ್ರಿಯು ಅಯ್ಯಾ ನಾನು ಆ ಪ್ರಾಂತ ಚೀಟಿಯೊಡುವುದಕ್ಕೆ ಹೋಗಿ ಅರವತ್ತು ವರ್ಷಗಳಾ ಗಿರುವುದರಿಂದ ನಾನು ಕಾಣೆನೆಂದು ನುಡಿದನು. ಸುಲ್ತಾನನು, ಬಿಸ್ತರವ ನನ್ನು ಕುರಿತು, ಅಯ್ಯಾ ! ಆ ಕೆರೆಯು ಇಲ್ಲಿಗೆ ಎಷ್ಟುದೂರವಿದೆಯೆಂ ದು ಕೇಳಿದನು. ಅಯ್ಯಾ ! ಆ ಕೆರೆಯು ಇಲ್ಲಿಗೆ ಆರುಘಂಟೆಗಳ ಹೊತ್ತಿ ನ ಪ್ರಯಾಣವಿರುವುದೆಂದು ನುಡಿದನು. ಆಗ ಅಲ್ಲಿಗೆ ಹೊರಡುವುದಕ್ಕೆ ಸಾಕಾದಷ್ಟು ಕಾಲ ವಿದ್ದುದರಿಂದ ಸುಲ್ತಾನನು, ತನ್ನಮಂತ್ರಿ ಪರಿವಾ ರಯುಕ್ತನಾಗಿ ಆ ಸ್ಥಳಕ್ಕೆಹೊರಡಲು, ಬಿಸ್ತರವನು ದಾರಿಯೆನ್ನು ತೋರಿಸುತ್ತ ಮುಂದೆ ನಡೆದನು ಅವರು ಆತಟಾಕಪ್ರಾಂತ್ಯವನ್ನು ಸೇರಿ ಬೆಟ್ಟಗುಡ್ಡಗಳನ್ನು ನೋಡಿ ಪರವಾಶ್ಚರ್ಯಯುಕ್ತರಾದರು. ಆಕೆರೆ ಯೆಲ್ಲಿ ನೀರು ನಿರ್ಮಲವಾಗಿರುವುದನ್ನು ನೋಡಿ ಬಿಸ್ತನು ಇಲ್ಲಿರುವ ಮಾ ನುಗಳನ್ನೆಲ್ಲಾ ಹಿಡಿದುತಂದಿರಬಹುದು, ಎಂಬದಾಗಿ ಯೋಚಿಸುತ್ತಿದ್ದನು. ಬಳಿಕ ಸುಲ್ತಾನನು, ಏರಿಯಮೇಲೆನಿಂತುಕೊಂಡು ಕೆರೆಯನ್ನು ಚೆನ್ನಾಗಿ ನೋಡಿ ತನ್ನ ಸಖಿಕರನ್ನು ಕರೆದು ನೀವು ಎಂದಾದರೂ, ಈ ಕೆರೆಯನ್ನು ನೋಡಿದ್ದಿರಾ ಎಂದು ಕೇಳಲು ಅವರು ಅಯ್ಯಾ ! ಇಂತಹ ಕೆರೆಯನ್ನು

ನಾವು ನೋಡಿಯೂ ಇಲ್ಲ, ಕೇಳಿಯೂ ಇಲ್ಲವೆಂದು, ಇದರಿಂದ ನಮಗೆ ತುಂಬ ಆಶ್ಚರ್ಯವಾಗಿರುವುದೆಂದು, ಹೇಳಲು ಸುಲ್ತಾನನು, ಅಯ್ಯಾ! ನಿಮ್ಮಗಳಿಗಿಂತಲೂ, ನನಗೆ ಇದರಲ್ಲಿ ತುಂಬ ಆಶ್ಚರ್ಯವುಂಟಾಗಿರುವುದರಿಂದ ಈ ಕೆರೆಯು ಈ ಸ್ಥಳದಲ್ಲಿರುವುದಕ್ಕೂ ಇಲ್ಲಿರುವ ವಿಾನುಗಳು, ನಾನಾಬಣ್ಣವಾಗಿರುವುದಕ್ಕೂ, ಕಾರಣವೇನೆಂಬುದನ್ನು ನಾನು ತಿಳಿದುಕೊಳ್ಳುವವರೆಗೂ, ಪಟ್ಟಣಕ್ಕೆ ಹೊರಡುವುದಿಲ್ಲವೆಂದು, ಹೇಳಿ ಅಲ್ಲಿಯೇ ಗುಡಾರವನ್ನು ಹೊಡೆಸಿ, ಪಾಳಯ ಯುಕ್ತನಾಗಿರುತ್ತಾ ರಾತ್ರಿಯಾಗುತ್ತಲೆ, ತನ್ನಮಂತ್ರಿಯನ್ನು ಕರೆದು ಅಯ್ಯಾ! ನನ್ನಮನಸ್ಸು ಬಹಳವಾಗಿ ಚಂಚಲವಾಗಿರುವುದು. ಈ ಕೆರೆಯಲ್ಲಿ ನಾನಾವಿಧವಾದ ವಿಾನುಗಳಿರುವುದಕ್ಕೂ, ನಮ್ಮ ಅಡಿಗೆಯವನೆಗೆ ಆ ಹೆಂಗಸು ಬರುವುದಕ್ಕೂ, ವಿಾನುಗಳು ಮಾತನಾಡುವುದಕ್ಕೂ, ಕಾರಣವೇನೆಂಬುದನ್ನು ಕಂಡುಹಿಡಿಯುವುದಕ್ಕಾಗಿ ನಾನು ಏಕಾಂಗಿಯಾಗಿಹೋಗಬೇಕೆಂದು ಗೊತ್ತುಮಾಡಿರುವೆನು. ನೀನು ಈವಿಷಯವನ್ನು ಯಾರಿಗೂಹೇಳದೆ ಜಾಗರೂಕನಾಗಿರು ನಾಳೆ ನನ್ನನ್ನು ನೋಡುವುದಕ್ಕೆ ಯಾರಾದರೂಬಂದರೆ ದೇಹದಲ್ಲಿ ಆಲಸ್ಯವಾಗಿರುವುದರಿಂದ ಸುಲ್ತಾನರನ್ನು ನೋಡುವುದಕ್ಕೆ ಸಮಯವಿಲ್ಲವೆಂದು, ಹೇಳಿ ಕಳುಹಿಸಿಬಿಡು. ಕೊನೆಗೆ ನಾನು ಬರುವವರೆಗೂ, ಹೀಗೆಯೇಮಾಡುತ್ತಿರೆಂದು, ಹೇಳಿದನು. ಮಂತ್ರಿಯು ಆತನ ಅಭಿಲಾಷೆಯನ್ನು ಬದಲಾಯಿಸುವಂತೆ ಮಾಡಬೇಕೆಂದು ಸ್ವಾವಿಾ! ತಾವು ಒಬ್ಬರೇ ಹೊರಟರೆ ಏನಾದರೂ ಅಪಾಯಸಂಭವಿಸಬಹುದೆಂದು ಹೇಳಿದರೂ ಕೇಳದೆ ಹೊರಡುವುದೇ ಸರಿಯೆಂದು ಗೊತ್ತುಮಾಡಿ ಪಾಳಯದಲ್ಲಿ ಗದ್ದಲವಣಗಿದಮೇಲೆ ಏಕಾಂಗಿಯಾಗಿ ಹೊರಟು ಪಾದಚಾರಿಯಾಗಿ ಬೆಳಗಾಗುವವರೆಗೂ ನಡೆದು ಒಂದಾನೊಂದು ಬೆಟ್ಟವನ್ನು ಹತ್ತಿ ಇಳಿದು ಮುಂದಕ್ಕೆಹೋಗುತ್ತಿರಲು, ಆ ಸ್ಥಳದಲ್ಲಿ ಒಂದಾನೊಂದು ದೊಡ್ಡಮನೆಯು ಕಾಣಬಂದಿತು, ಅಲ್ಲಿಗೆಹೋಗಿ ತಾನು ತಿಳದುಕೊಳ್ಳಬೇಕಾಗಿರುವ ಸಂಗತಿಯನ್ನು ತಿಳಿದುಕೊಳ್ಳಬಹುದೆಂದು ಅದರಹತ್ತಿರಕ್ಕೆ ಬರಲು, ಆ ಮನೆಯು, ಇಂದ್ರನೀಲಮಣಿಗಳಿಂದ ಸೊಗಸಾಗಿಕಟ್ಟಿ ಸಚಿತ್ರವಿಚಿತ್ರತರವಾದ ಅಲಂಕಾರದಿಂದೊಪ್ಪುವ ರಾಜಮಂದಿರವಾಗಿತ್ತು. ಆಗ ಸುಲ್ತಾನನು, ಅದನ್ನು ಸಂತೋಷದಿಂದನೋಡುತ್ತಾ ತನ್ನ ಇಷ್ಟಾರ್ಥವನ್ನು ನೆರವೇರಿಸಿಕೊಳ್ಳುವುದಕ್ಕೆ ಸಮು

ಯ ದೊಗಕಿತೆಂದು ಆನಂದಭರಿತನಾದನು. ಅಲ್ಲದೆ ಬಂದುನೋಡಲು ಒಂದು ರೆಕ್ಕೆಯ ಬಾಗಿಲು ತೆರೆದಿತ್ತು. ಆದುದರಿಂದ ಒಳಗಿರುವರನ್ನು ಕರೆಯುವುದಕ್ಕಾಗಿ ಬಾಗಿಲನ್ನು ಮೆತ್ತಗೆ ತಟ್ಟಿದನು. ಆದರೂ ಯಾರೂಬರಲಿಲ್ಲ. ತಾನು ತಟ್ಟಿದಶಬ್ದವು ಕೇಳಲಿಲ್ಲವೆಂದು ಮರಳಿ ಗಟ್ಟಿಯಾಗಿ ಹೊಡೆದನು ಹೀಗೆ ಅನೇಕವೇಳೆ ಮಾಡಿದಾಗ್ಯೂ, ಯಾರುಬರದಿರುವುದನ್ನು ನೋಡಿ, ಇಂತಹಸುಂದರವಾದ ಕಟ್ಟಡದಲ್ಲಿ ಯಾರು ವಾಸವಾಡದಿರುವುದು ಆಶ್ಚರ್ಯವಲ್ಲವೇ! ಇಲ್ಲಿಯಾರೂ ಇಲ್ಲದಿದ್ದರೆ ನಾನು ಹೆದರಬೇಕಾದ ಅಗತ್ಯವಿಲ್ಲ ಯಾರಾದರೂ, ಇದ್ದುದೇ ಆದರೆ ಅವರಿಂದನಾನು ತಪ್ಪಿಸಿಕೊಳ್ಳಬೇಕೆಂದು ಯೋಚಿಸಿ, ಒಳಹೊಕ್ಕುಬಂದು, ಮಾರ್ಗಸ್ಥರನ್ನು ಆಯಾಸಪರಿಹರಿಸಿಕೊಳ್ಳಿರೆಂದು ಉಪಚರಿಸತಕ್ಕವರೂ, ಮಾರ್ಗದಲ್ಲಿ ಸಂಚರಿಸತಕ್ಕವರೂ, ಈವೂರಲ್ಲಿ ಯಾರೂ ಇಲ್ಲವೆ ಎಂದುಗಟ್ಟಿಯಾಗಿ ಅನೇಕವೇಳೆಕೂಗಿಕೊಂಡನು. ಆದರೂ, ಯಾರೂಮಾತನಾಡಲಿಲ್ಲವಾದುದರಿಂದ ಒಂದಾನೊಂದುವಡಸಾಲೆಯೆಮುಂದಿರುವ ಕೊಠಡಿಯೊಳ್ಗೆ ಬಗ್ಗಿನೋಡಿದರೂ, ಅಲ್ಲಿಯಾರೂ ಕಾಣಬರಲಿಲ್ಲ. ಅಷ್ಟರಲ್ಲಿ ಷಹರಜಾದಿಯು, ಬೆಳಗಾದುದೆಂದು, ಕಥೆಯನ್ನು ನಿಲ್ಲಿಸಿದಳು. ದಿನರಜಾದಿಯು, ಅಕ್ಕಾ! ಕಥೆಯು ಸಾಸ್ವರಸ್ಯವಾಗಿರುವ ಕಡೆಯಲ್ಲಿಯೇ ನಿಲ್ಲಿಸುತ್ತೀಯಲಲ್ಲಾ ಎಂದು ಹೇಳಿದಳು. ಷಹರಜಾದಿಯು, ತಂಗೀ ಸುಲ್ತಾನರ ದಯೆಯು ನನ್ನವೇಲಿರುವುದಾದರೆ, ನಾಳೆ ಇದನ್ನು ಕೊನೆಗಾಣಿಸುವೆನೆಂದು, ಹೇಳಿದಳು. ಸುಲ್ತಾನನು, ಕಥೆಯನ್ನು ಕೇಳಬೇಕೆಂಬಾಸೆಯಿಂದ, ಸುಲ್ತಾನಿಯನ್ನು ಕೊಲ್ಲಕೂಡದೆಂದು ಹೇಳಿ ಹೊರಟು ಹೋದನು.

೨೧ ನೆಯ ರಾತ್ರಿ ಕಥೆ,

ಮರುದಿನ ಬೆಳಗಿನ ಸಮಯೆದಲ್ಲಿದ್ದ ದಿನರಜಾದಿಯು, ತನ್ನ ಅಕ್ಕನನ್ನು ಕುರಿತು, ಉಳಿದಿರುವ ಕಥೆಯನ್ನು ಪೂರ್ತಿಮಾಡಬೇಕೆಂದು ಬೇಡಿಕೊಳ್ಳಲು, ಆಕೆ ಷಹರಿಯರನನ್ನು ಮಾತನಾಡಿಸಿ ಅವರಿಂದಪ್ಪಣೆಯೆಂಪಡೆದುಕೊಂಡು ಮುಂದೆ ಕಥೆಯನ್ನು ಹೇಳತೊಡಗಿದಳು :—

ಬಳಿಕ ಸುಲ್ತಾನನು, ಆ ಮನೆಯ ಮುಂಭಾಗವನ್ನುದಾಟಿ ಅಂಗಳಕ್ಕೆ ಬರಲು, ಆ ಸಭಾಮಂಟಪದಲ್ಲಿ ನಾನಾವಿಧವಾದ ಕೆತ್ತನೆಯ ಕೆಲಸ

ಗಳನ್ನುವಾಡಿ ಚಿತ್ರಪಟಗಳೂ, ಬೊಂಬೆಗಳೂ, ಕನ್ನಡಿಗಳೂ, ಕಾಣಬಂದವು. ಅವುಗಳನ್ನೆಲ್ಲಾ ನೋಡಿ ಸಂತೋಷವನ್ನು ಹೊಂದುತ್ತಾ ಮುಂದೆನೋಡುತ್ತಿರುವಲ್ಲಿ ಚಿತ್ರವಿಚಿತ್ರಕರಗಳಾದ ನಾನಾದೇಶದ ವಸ್ತ್ರಾಭರಣಗಳು, ಕಾಣಬಂದವು. ಅಲ್ಲಿಂದ ಮುಂದೆಹೊರಟಕೂಡಲೇ ಚೌಕವಾದ ಒಂದು ಪಡಸಾಲೆಯು ಮಧ್ಯದಲ್ಲಿರಿಸಿರುವ ದೀವಿಗೆಗಳ್ಳವಾದ ಮತ್ತು ಅತ್ಯಂತಸುಂದರಗಳಾದ ನಾಲ್ಕು ಸಿಂಹಾಸನಗಳೂ, ಕಾಣಬಂದವು. ಅವುಗಳ ಮೇಲಾಬ್ಭಗದಕೊನೆಯಿಂದ ಬಹುನಿರ್ಮಲವಾದ ನೀರು ಕಾರುತ್ತಿದ್ದಿತು. ಆನೀರು, ಹೊರಗೆಬಿದ್ದ ಕೂಡಲೇ ರತ್ನಗಳೂ, ನಾನಾವಿಧಗಳಾದ ವರ್ತ್ತುಗಳೂ, ಸುರಿಯುತ್ತಿದ್ದುವು. ಇದನ್ನುನೋಡಿ ರಾಜನು ಆಶ್ಚರ್ಯವನ್ನುಹೊಂದಿ ಆ ಸ್ಥಳವಲ್ಲಿ ಜಲನೂರ್ಗವೆಂಬ ನೀರೂರುವಸ್ಥಲ ಬಂದಿರಬಹುದೆಂದುಕೊಂಡನು. ಅಲ್ಲದೆ ಆ ಅರಮನೆಯು ಶಿಖರವು ನಾನಾವಿಧವಾದ ಸುಂದರಪದಾರ್ಥಗಳಿಂದ ಹೊಳೆಯುತಲಿದ್ದಿತು. ಆ ಕೋಟೆಯೆಸುತ್ತಲೂ, ಮೂರುಕಡೆಗಳಲ್ಲಿ ಅತಿರಮಣೀಯವಾದ ನಾನಾಜಾತಿಯ ಫಲಪುಷ್ಪವೃಕ್ಷಗಳಿಂದ ನಿಬಿಡವಾದ ಉದ್ಯಾನವನಗಳಿದ್ದುವು. ಅಲ್ಲಿನ ಸೊಬಗನ್ನು ಇಷ್ಟೆಂದು ವರ್ಣಿಸುವುದಕ್ಕೆ ಸಾವಿರವರ್ಷಗಳಾದರೂ, ಸಾಲದು. ಆ ವೃಕ್ಷಗಳಲ್ಲಿರುವ ಪಕ್ಷಿಗಳು ಹೊರಗೆ ಸಂಚಾರಮಾಡದೆ ಆರತ್ನಗಳನ್ನೆ ಕಾಯುತ್ತಾ ಸಂತೋಷದಿಂದ ಕುಳಿತಿರುತಿದ್ದವು. ರಾಜನು ಈ ವಿಚಿತ್ರವಿಲ್ಲವನ್ನು ಮರೆಯೊಗಿರುವ ಒಂದು ಸ್ಥಳದಲ್ಲಿ ಕುಳಿತುಕೊಂಡು ನೋಡುತ್ತಾ ತಾನು ಅದುವರೆಗೂನೋಡಿದ ಸಂಗತಿಯೆನ್ನುಕುರಿತು ವಿಚಾರಮಾಡುತ್ತಿದ್ದನು. ಹೀಗಿರುವಲ್ಲಿ ಒಬ್ಬಮನುಷ್ಯನು ಗಟ್ಟಿಯೊಗಿ ಅಳುತ್ತಿರುವ ಶಬ್ದವು ಕೇಳಬಂದಿತು. ಕೂಡಲೆ ಸಂತಾಪಕರವಾದ ಅನೇಕವಿಷಯಗಳು ಕೇಳಬಂದವು. ಏನಂದರೆ, ಓ ಅದೃಷ್ಟವೇ ನನ್ನನ್ನು ತುಂಬ ಭಾಗ್ಯವಂತನಾಗಿ ಮಾಡುವುದನ್ನು ಬಿಟ್ಟು ಪ್ರಪಂಚದಲ್ಲಿರುವ ಜನರಲ್ಲಿ ಅತ್ಯಂತನಿಕೃಷ್ಟನನ್ನಾಗಿ ಮಾಡಿರುವೆ, ಇನ್ನುನನ್ನನ್ನು ಹಿಂಸೆಮಾಡದೆ ನನಗೆ ಜೊಗ್ರತೆಯೊಗಿ ಮರಣವನ್ನು ಹೊಂದುವಂತೆಮಾಡು. ಅಯ್ಯೋ! ನಿನ್ನಬಾಧೆಯನ್ನು ನಾನು ಅನುಭವಿಸಲಾರೆನಲ್ಲಾ ಎಂದುನುಡಿಯುವಸಂಗತಿಯು, ಕೇಳಬಂದಿತು. ಆ ಧ್ವನಿಯು ಕೇಳಬಂದಸ್ಥಳಕ್ಕೆ ಹೋಗಬೇಕೆಂದು ಸುಲ್ತಾನನು, ಒಬ್ಬಮನೆಯ ಜೊಡನ್ನುಹಿಡಿದು ಒಳಗೆ

ಹೋಗಿ ನೋಡಲು ಭೂವಿುಗಿಂತಲೂ, ಸ್ವಲ್ಪ ಎತ್ತರವಾಗಿರುವ ಒಂದು ಸಿಂಹಾಸನದಲ್ಲಿ ಬೆಲೆಯುಳ್ಳ ವಸ್ತ್ರಗಳನ್ನು ಧರಿಸಿಕೊಂಡು ಕುಳಿತಿರುವ ಪಾ್ರಯೆದವನೊಬ್ಬನನ್ನು ಕಂಡನು.

ಸುಲ್ತಾನನು, ಆತನನ್ನುನೋಡಿ ವಂದನೆಯೆನ್ನುವೂಡಲು ಆತನು ತಲೆಯೆನ್ನುಬಾಗಿಸದೆ ಪ್ರತಿವಂದನೆಯೆನ್ನು ವೂಡಿದನು. ಕೂಡಲೆ ಆತನು ಸುಲ್ತಾನನನ್ನು ನೋಡಿ, ಸುಲ್ತಾನರೇ! ತಾವು ಪ್ರತ್ಯುತ್ತಾ್ಥನಕ್ಕೆ ಅರ್ಹರೆಂದೂ, ತಮ್ಮನ್ನು ಎದ್ದು ಬರವೂಡಿಕೊಳ್ಳಬೇಕಾಗಿತ್ತೆಂದೂ ನನಗೆ ತಿಳಿದಿದ್ದರೂ, ನಾನುಹಾಗೆ ನಡೆದುಕೊಳ್ಳುವುದಕ್ಕೆ ಅವಕಾಶವನ್ನು ಕೊಡದಿರುವ ಬಲವತ್ತರವಾದ ಒಂದಾನೊಂದು ಕಾರಣವಿರುವುದರಿಂದ ತಾವು ಕ್ಷವಿುಸಬೇಕಾಗಿ ಬೇಡಿಕೊಳ್ಳುವೆನು. ಎಂದುಹೇಳಲು ಸಾ್ವವಿುಾ ! ತಾವು ನನಗಾಗಿ ಇಷೊ್ಟಂದುಮರ್ಯಾದೆಯನ್ನು ವೂಡುತ್ತಿರುವುದಕ್ಕಾಗಿ ತುಂಬ ಕೃತಜ್ಞನಾಗಿರುವೆನು. ಆ ಕಾರಣವನ್ನುಕುರಿತು ತಾವು ಏನು ಹೇಳಬೇಕೆಂದಿರುವಿರೋ ಅದನ್ನು ಸಂತೋಷದಿಂದ ಹೇಳುವೆನೆಂದು ಸುಲ್ತಾನನು ಹೇಳಿದನು. ಅಲ್ಲದೆ ಈ ಕೋಟೆಯೆಬಳಯಲ್ಲಿರುವ ಕೆರೆಯಲ್ಲಿ ನಾಲ್ಕುವರ್ಣದ ವಿಾನುಗಳಿರುವುದಕ್ಕೂ, ಈ ಕೋಟೆಯು ಹೀಗೆಪಾಳಾಗಿರುವುದಕ್ಕೂ, ತಾವು ಏಕಾಂಗಿಗಳಾಗಿ ಇಲ್ಲಿ ದುರವಸೆ್ಥಯನ್ನನುಭವಿಸುತ್ತಿರುವುದಕ್ಕೂ, ಕಾರಣವೇನೆಂಬುದನ್ನು ತಿಳಿಯಹೇಳಬೇಕಾಗಿ ಪಾ್ರರ್ಥಿಸುವೆನೆಂದು ನುಡಿಯಲು, ಆ ಯುವಕನು ಈ ಪ್ರಶ್ನೆಗೆ ಉತ್ತರವನ್ನು ಹೇಳುವುದಕ್ಕೆ ಪ್ರಯತ್ನಪಟ್ಟು ಹಾ! ಈ ದುಷ್ಕರವಾದ ಭಾಗ್ಯದಿಂದ ಯಾರುತಾನೆ ಸ್ಥಿರವಾದ ಸೌಖ್ಯವನ್ನುಹೊಂದಿರುವರು. ಅಸ್ಥಿರವಾದ ಐಶ್ವರ್ಯದಿಂದ ನಾನಾವಿಧವಾದ ದುರ್ದಶೆಗಳು ವಾನವಕೋಟಿಗೆ ಪಾ್ರಪ್ತವಾಗುತ್ತಿರುವುದಲ್ಲಾ. ಈ ಭಾಗ್ಯದಿಂದ ತಮ್ಮ ಆಯುಃಕಾಲವನ್ನು, ನೆಮ್ಮದಿಯಾಗಿಯೆಾ, ನಿರ್ಮಲವಾಗಿಯೂ, ಸುಖವಾಗಿಯೂ, ಇರುವ ವನಸ್ಸಿನಿಂದ ಯಾರುತಾನೆ ಕಳೆದಿರುವರು ? ಅಂಥವರು ಯಾರಾದರು, ಇದ್ದರೆ ನನಗೆ ಹೇಳಬಲ್ಲೆಯಾ ? ಎಂದು ಕೇಳಿದನು. ಅಂತಹಸ್ಥಿತಿಯಲ್ಲಿರುವ ಆತನನ್ನುನೋಡಿ, ಸುಲ್ತಾನನು, ತನಗೆ ಇಂತಹದುರ್ದಶೆಯು ಪಾ್ರಪ್ತವಾಗುವುದಕ್ಕೆ ಕಾರಣವೇನೆಂಬುದನ್ನು ವಿವರಿಸಬೇಕೆಂಬದಾಗಿ ಕೇಳಲು ಆತನು ಸಾ್ವವಿುಾ, ನನ್ನರೋದನವು ನಿಲ್ಲದು ಕಣ್ಣುಗಳಾದರೋ

ನೀರನ್ನು ಕಾರುತ್ತಿರುವವಲ್ಲಾ ನಾನು ಹೇಗೆಹೇಳಲಿಂದು ತನ್ನ ಅಂಗಿಯೆ ನ್ನು ಮೇಲಕ್ಕೆತ್ತಿ ತಾನು ತಲೆಮೊದಲು ನಡುವಿನವರೆಗೂ, ಪುರುಷಾಕಾ ರವನ್ನೂ, ನಡುವಿನಕೆಳಗಿರುವ ಉಳಿದರ್ದಭಾಗವು ಕರ್ಪಗಿರುವ ಕರಿಯ ಕಲ್ಲಾಗಿರುವುದನ್ನು ಸುಲ್ತಾನನಿಗೆ ತೋರಿಸಿದನು. ಇಷ್ಟರಲ್ಲಿ ಬೆಳಗಾ ದುದರಿಂದ ಷಹರಜಾದಿಯು, ಕಥೆಯನ್ನು ನಿಲ್ಲಿಸಿದಳು. ಸುಲ್ತಾನನು, ಆ ಕಥೆಯನ್ನುಕೇಳಿ ಅತ್ಯಾಶ್ಚರ್ಯವನ್ನು ಹೊಂದಿ ಸುಲ್ತಾನಿಯಮೇಲ ಣ ಪೂರ್ಣವಿಶ್ವಾಸದಿಂದ ಅವಳನ್ನು ಬಂದು ತಿಂಗಳವರೆಗೂ ಕೊಲ್ಲಕೂಡ ದೆಂದು ಹೇಳಿದನು.

೨೨ ನೆಯ ರಾತ್ರಿ ಕಥೆ

ದಿನರಜಾದಿಯು, ನಡುರಾತ್ರಿಯಲ್ಲಿದ್ದ ತನ್ನ ಅಕ್ಕನನ್ನು, ಕುರಿತು ಅಕ್ಕಾ! ನಿನ್ನೆಯದಿನ ಮಧ್ಯರಾತ್ರಿಯಲ್ಲಿ ಕಥೆಯನ್ನು ಪ್ರಾರಂ ಭಮಾಡಿದರೂ, ಮುಗಿಯದೆ ಹೋಯಿತು. ಈಗಲಾದರೂ ಆ ಕಥೆಯ ನ್ನು ಕೊನೆಗಂಡು ಹೇಳಿ ನನ್ನಮನಸ್ಸನ್ನು ತೃಪ್ತಿಪಡಿಸೆಂದು ಬೇಡಿಕೊಳ್ಳ ಲು ಷಹರಜಾದಿಯು, ಕಥೆಯನ್ನುಹೇಳತೊಡಗಿದಳು. ಅಂತಹ ಯೌ ವನಸ್ಥನ ದುರ್ದಶೆಯನ್ನು ನೋಡಿದುದರಿಂದ ಆ ಸುಲ್ತಾನನಿಗೆ ಎಷ್ಟೊಂ ದು ಆಶ್ಚರ್ಯವುಂಟಾಗಿರಬಹುದೋ ಎಂಬುದನ್ನು ನೀವೇಯೋಚಿಸಿ ಸು ಲ್ತಾನನು, ಆ ಯುವಕನನ್ನುಕುರಿತು, ಸ್ವಾಮಿ! ತಮ್ಮದುರ್ದಶೆಯ ನ್ನುನೋಡಿ, ನನಗೆ ತುಂಬ ಭಯವಾಗುತ್ತಿದೆಯಾದುದರಿಂದ ತಮ್ಮ ಚರಿ ತ್ರೆಯನ್ನು ಸಂಪೂರ್ಣವಾಗಿ ತಿಳಿದುಕೊಳ್ಳಬೇಕೆಂಬ ಕುತೂಹಲದಿಂದ ಕೂಡಿರುವೆನು. ಈ ವಿಷಯದಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಆ ತಟಾಕ ದಲ್ಲಿರುವ ಮೀನುಗಳು ಇದಕ್ಕೆ ಸಂಬಂಧಪಟ್ಟವುಗಳೆಂಬುದು ನನಗೆ ತೋಚುತ್ತಿದೆ ಯೆನಾದುದರಿಂದ ತಾವು ದಯವಿಟ್ಟು ಅದನ್ನುನನಗೆ ಹೇಳ ಬೇಕು. ಅಲ್ಲದೆ ದುರವಸ್ಥೆಯನ್ನು ಹೊಂದಿದವರು ತಮ್ಮ ಕಷ್ಟಗಳ ನ್ನು ಇತರರಸಂಗಡ ಹೇಳಿಕೊಂಡರೆ ಸ್ವಲ್ಪಭಾಗವು ಕುಂದಿಹೋಗುವುದೆಂ ದು, ಶಾಸ್ತ್ರವಿರುವದೆಂದು, ತಿಳಿದಿರುವೆನಾದುದರಿಂದ ನೀವು ನಿಮ್ಮಚರಿತ್ರೆ ಯನ್ನು ನನ್ನಸಂಗಡ ಹೇಳುವುದರಿಂದ ನಿಮಗೂ, ವ್ಯಸನವಳಿದು ಹೋ ಗುವುದೆಂದು ನುಡಿಯಲು, ಸ್ವಾಮಿ ನನ್ನಚರಿತ್ರೆಯು ಅತ್ಯದ್ಭುತವಾದು

ದರಿಂದ ತಾವು ತಮ್ಮ ಇಂದ್ರಿಯಗಳನ್ನು ಸ್ವಾಧೀನವಿಡಿಸಿಕೊಂಡು ಸಾವ ಧಾನದಿಂದ ಕೇಳುತ್ತಿರಬೇಕೆಂದು ಮೊದಲೇ ವಿಜ್ಞಾಪಿಸುವೆನೆಂದು ಹೇಳಿದನು.

ನೀಲದ್ವೀಪದ ರಾಜಕುಮಾರನ ಕಥೆ



ಸ್ವಾಮಿಗಾ! ನೀಲದ್ವೀಪವೆಂದು ಕರೆಯಲ್ಪಡುವ ಈ ದೇಶಕ್ಕೆ ಮಹಮ್ಮದನೆಂಬ ಹೆಸರುಳ್ಳ ನನ್ನತಂದೆಯು ರಾಜನಾಗಿದ್ದನು. ಈ ಪೂರಿನ ಸುತ್ತಲೂ ವ್ಯಾಪಿಸಿಕೊಂಡಿರುವ ನಾಲ್ಕುಪರ್ವತಗಳಿಂದ ಇದಕ್ಕೆ ಈ ಹೆಸರುಬಂದಿತು. ಈ ನಾಲ್ಕುಜಿಟ್ಟಗಳು, ಮೊದಲು ದ್ವೀಪಗಳಾಗಿದ್ದುವು. ಈ ಕೋಟೆಯಲ್ಲಿ ನೀವು ನೋಡಿಕೊಂಡುಬಂದ ಪುನೆಯೆ ನಮ್ಮತಂದೆಯಾದ ಮಹಮ್ಮದನ ರಾಜಧಾನಿ. ಆತನಚರಿತ್ರೆಯನು, ನನ್ನಕಥೆಯನ್ನು ಸಂಪೂರ್ಣವಾಗಿ ನೀವುಕೇಳುವುದರಿಂದ ನಿಮಗೆ ಗೊತ್ತಾಗುವುದು. ನನ್ನತಂದೆಯಾದ ಮಹಮ್ಮದನು, ಎಪ್ಪತ್ತುಸಂವತ್ಸರಗಳವರೆಗೂ, ಬಾಳಿ ನಂತರ ಸತ್ತುಹೋದನು. ನಾನು ರಾಜನಾದಕೂಡಲೆ ಒಬ್ಬಾಬ್ಬನೊಬ್ಬ ಸುಂದರಿಯನ್ನು ಮದುವೆಮಾಡಿಕೊಂಡೆನು. ಆಕೆಗೆ ನನ್ನಮೇಲೆ ಸಂಪೂರ್ಣವಾದ ವಿಶ್ವಾಸವುಂಟೆಂದು, ನಂಬಿ ನಾನು ಅವಳಲ್ಲಿ ತುಂಬ ವಿಶ್ವಾಸವುಳ್ಳವನಾಗಿದ್ದೆನು. ಈ ತೆರದಿಂದ ಐದುಸಂವತ್ಸರಗಳು, ಕಳೆದಮೇಲೆ ನನ್ನ ಹೆಂಡತಿಗೆ ನನ್ನಲ್ಲಿ ಪ್ರೇಮವಿಲ್ಲವೆಂಬುದನ್ನು ನಾನು ತಿಳಿದುಕೊಂಡೆನು. ಒಂದುದಿನ ಅವಳು ಸ್ನಾನಮಾಡುತ್ತಿರುವಕಾಲದಲ್ಲಿ ನಾನು ಊಟಮಾಡಿ ಮಲಗಿಕೊಳ್ಳಬೇಕೆಂದು, ಒಂದು ಮಂಚದಮೇಲೆ ಮಲಗಿಕೊಂಡೆನು.

ಅಷ್ಟರಲ್ಲಿ ನನ್ನಅಡಿಯಿಗೆನರಲೊಬ್ಬಳು, ತಲೆಯಕಡೆಯಲ್ಲಿಯೂ,ಮತ್ತೊಬ್ಬಳು ಕಾಲುಕಡೆಯಲ್ಲಿಯೂ, ಕುಳಿತುಕೊಂಡು ಕೈಯ್ಯಲ್ಲಿಬೀಸಣಿಗೆಯನ್ನು ಹಿಡಿದುಕೊಂಡು, ಬೀಸುತ್ತಾ ಇದ್ದರು. ಆಗ ಅವರು ನಾನು ನಿದ್ರೆಮಾಡುತ್ತಿದ್ದೆನೆಂದು ತಿಳಿದು, ಮೆಲ್ಲಗೆ ಮಾತನಾಡತೊಡಗಿದರು. ನಾನು ನಿದ್ದೆಹೋಗುವನಂತೆ ಸುಮ್ಮನೆ ಕಣ್ಣು ಮುಚ್ಚಿಕೊಂಡು ಅವರಾಡುವಮಾತುಗಳನ್ನು, ಕೇಳುತಿದ್ದೆನು. ಇಂತು ಸುಂದರನಾಗಿ ಸುಗುಣವಂತನಾಗಿರುವ ರಾಜನಲ್ಲಿ ನಮ್ಮರಾಣಿಗೆ ಪ್ರೇಮವಿಲ್ಲದಿರುವುದು, ತ

ಪ್ಪಲ್ಲವೆ, ಎಂದು ಒಬ್ಬ ದಾದಿಯು, ಹೇಳಿದಳು. ಹಗಲಾಗಲು ಕಾರಣವೇ ನೆಂಬುದನ್ನು ನಾನುತಿಳಿದುಕೊಳ್ಳಬೇಕೆಂದು, ಆಸೆಯಿರುವುದೆಂದು ಮತ್ತೊಬ್ಬಳು ಹೇಳಿದಳು. ಅವಳು ಏತಕ್ಕಾಗಿ ರಾತ್ರಿಯಲ್ಲಿ ಗಂಡನನ್ನುಹೊರೆದು ಹೊರಗೆಹೋಗುತ್ತಾಳೊ ತಿಳಿಯದು, ಇದು ಆತನಿಗೆ ತಿಳಿಯದೆ ಎಂದು ಕೊಂಡಳು. ಅದು ಈತನಿಗೆ ಹೇಗೆತಿಳಿಯುವುದು, ಆಕೆಯು ರಾತ್ರಿಯಲ್ಲಿ ಹಾಲಿನಸಂಗಡ ಔಷಧವನ್ನು ಹಾಕಿಕೊಡುವುದರಿಂದ ಆತನು ಎಚ್ಚರವಿಲ್ಲದಂತೆ ಗಾಢನಿದ್ರೆಯನ್ನು ಹೊಂದಿ ಮಲಗುವನು. ಆಬಳಿಕ ಇವಳು ತನಗಿಷ್ಟವಾದ ಪುರುಷನನ್ನುಕೂಡಿ ಸುಖವಾಗಿದ್ದು, ಕಡೆಗೆ ಈತನ ಬಳಿಗೆಬಂದು, ಮಲಗಿದ್ದು ಬಳಿಕ ಏಳಿಸುವಳು. ಈ ಮಾತುಗಳನ್ನುಕೇಳದಕೂಡಲೇ ನನಗೆ ಯಾವಸ್ಥಿತಿಯುಂಟಾಯಿತೆಂಬುವುದನ್ನು ತಾವೇ ಯೋಚಿಸಿ, ನಾನು ಉಕ್ಕಿಬಂದಕೋಪವನ್ನು ಸಹಿಸಿಕೊಂಡು, ರಾಣಿಯೆ ಸಂಗಡ ಊಟವಮಾಡಿ ಮಲಗಿಕೊಳ್ಳುವಾಗ ಎಂದಿನಂತೆ ಕುಡಿಯತಕ್ಕ ಹಾಲನ್ನು ರಾಣಿಯು ಕ್ಕೈಯಾರತೆಗೆದುಕೊಂಡು ಬಂದಳು. ನಾನು ಅದನ್ನು ತೆಗೆದುಕೊಂಡು ಕುಡಿಯದೆ ಪಕ್ಕದಲಿದ್ದ ಕಿಟಿಕಿಯಬಳಿಗೆಹೋಗಿ ಹೊರಕ್ಕೆಚೆಲ್ಲಿ ಕುಡಿದವನಂತೆ ಅಭಿನಯಿಸಿ ಆ ಪಾತ್ರೆಯನ್ನು ತನ್ನಹೆಂಡತಿಯ ಕ್ಕೈಗೆಕೊಟ್ಟನು, ಬಳಿಕ ನಾವಿಬ್ಬರೂ ಮಲಗಿಕೊಂಡರೂ ನನಗೆ ನಿದ್ರೆ ಬರಲಿಲ್ಲ. ಆದರೂ, ನಿದ್ರೆಮಾಡುವನಂತೆಯೇ ಮಲಗಿಕೊಂಡಿದ್ದೆನು. ಆಗ ಅವಳು ಎದ್ದೀಯೆ ಜೋಕೆ, ಇಲ್ಲೆಮಲಗಿರು, ಎಂಬದಾಗಿ ನನ್ನನ್ನುಕಾರಿತು, ನಿರ್ಲಕ್ಷ್ಯವಾದಮಾತುಗಳನ್ನಾಡಿ, ತನ್ನ ಉಡುಪನ್ನು ಹಾಕಿಕೊಂಡು. ಕೂಡಲೇ ಹೊರಟು ಹೋದಳೆಂದು, ಹೇಳಿ ಬೆಳಗಾದುದರಿಂದ ಷಹರಜಾದಿಯು, ಕಥೆಯೆನ್ನು ನಿಲ್ಲಿಸಿದಳು. ಸುಲ್ತಾನನು, ನೀಲದ್ವೀಪದರಾಜನ ಕಥೆಯನ್ನು ಕೇಳಬೇಕೆಂಬ ಅಭಿಲಾಷೆಯಿಂದ ಹೊರಟು ಹೋದನು.

೨೩ ನೆಯ ರಾತ್ರಿ ಕಥೆ

ಮರುದಿನ ಎಂದಿನಂತೆ ದಿನರಜಾದಿ ತಾನು ಮಾಡಬೇಕಾಗಿರುವ ಕಾರ್ಯವನ್ನು ನೆರವೇರಿಸಿದಳು. ಷಹರಜಾದಿಯು, ಆ ಉಪಕಾರಕ್ಕಾಗಿ ಕಥೆಯೆನ್ನು ಹೇಳತೊಡಗಿದಳು. ಬಳಿಕ ನನ್ನಹೆಂಡತಿಯು, ಹೊರ

ಟುಹೋದವೀಲೆ ನಾನು ಬಟ್ಟೆಗಳನ್ನು ಹಾಕಿಕೊಂಡು ಕೈಯಲ್ಲಿ ಕತ್ತಿ ಯನ್ನು ಹಿಡಿದು, ಸ್ವಲ್ಪವೂ ಶಬ್ದವೂಡದೆ ಅವಳಹಿಂದೆಯೇ ಹೊರಟೆನು ಬರುತ್ತಾವೂರ್ಗದಲ್ಲಿ ಅನೇಕವಾದ ಕಿಟಿಕಿಗಳೂ, ಬಾಗಿಲುಗಳೂ, ಇರುವ ಒಂದು ಮನೆಯೆನ್ನುನೋಡಿ ಏನೋ ಮಂತ್ರವನ್ನುಹೇಳಲು, ಅವು ತೆರ ದುಕೊಂಡವು. ಅವುಗಳನ್ನು ಪ್ರವೇಶವೂಡಿ ಎರಡನೆಯಬಾಗಿಲನ್ನು ದಾ ಟಿ ಹೋಗುತ್ತಿರುವಾಗ ನಾನು ಅವಳಗೆತಿಳಿಯದಂತೆ ಹಿಂದೆಯೇ ಹೋದೆ ನು. ಅಲ್ಲಿ ಅತಿನಿಬಿಡವಾದ ಕತ್ತಲೆಯು ಹಬ್ಬಿರಲು ಎರಡು ಪಕ್ಕಗಳಲ್ಲಿ ಯೂ, ನಾನಾವಿಧವಾದ ಫಲಪುಷ್ಪಲತಾದಿಗಳಿಂದ ನಿಬಿಡವಾದ ಆ ರಾವುದ ಲ್ಲಿರುವ ಒಬಾ್ಬನೊಬ್ಬ ಪುರುಷನಸಂಗಡ ವಿಹರಿಸುತ್ತಿರುವುದನ್ನು ನನ್ನ ಕಣ್ಣಾರ ನೋಡಿದೆನು. ಅವರೇನುವೂತನಾಡುತ್ತಾರೋ ಕೇಳಬೇಕೆಂಬ ಕುತೂಹಲದಿಂದ ನಾನು ಕೇಳುತ್ತಿರುವಲ್ಲಿ ಅವಳು ತನ್ನ ವಿಟಗಾರನನ್ನು ನೋಡಿ ನಾನು ವೇಗವಾಗಿ ನಿನ್ನಬಳಿಗೆ ಬರಲಿಲ್ಲವೆಂದು ನೀನು ಕೋಪವೂ ಡಬೇಡ, ನನಗಿರುವ ವಿಘ್ನುಗಳೆಲ್ಲವೂ ನಿನಗೆ ತಿಳಿದೆ ಇರುವದಷೆ್ಟ, ಆದ ರೂ ನಿನ್ನಲ್ಲಿತುಂಬ ವಿಶ್ವಾಸದಿಂದ ನಾನು ನಡೆದುಕೊಳ್ಳುತ್ತಿರುವೆನು, ಆಭಾ ಗದಲ್ಲಿ ಇನ್ನೇನಾದರೂ ಕೊರತೆಯುಂಟಾಗಿದ್ದರೆ ನನಗೆ ಹೇಳಬೇಕೆಂದು ಬೇಡಿಕೊಳ್ಳುವೆನೆಂದು ನುಡಿದಳು. ನಿನಗೆ ನನ್ನಲ್ಲಿ ಪ್ರೀತಿಯೂಾ ನಾನು ಹೇಳಿದಕೆಲಸವನ್ನು ಮೂಡುವುದಕ್ಕೆ ಸಾಮರ್ಥ್ಯವೂ, ಇರುವುದಾದರೆ ಬೆ ಳಗಾಗುವುದರೊಳಗಾಗಿ ಈ ಸ್ಥಳಕ್ಕೆ ಸವಿೂಪವಾಗಿರುವ ದೊಡ್ಡ ಪಟ್ಟ ಣವನ್ನು ಹಾಳುಗೊಂಬಿಗಳ ಮನೆಯನ್ನಾಗಿಯೂಾ, ಅಲ್ಲಿ ಯಾರೊಬ್ಬ ರೂ ವಾಸವೂಡದಂತೆಯೂಾ, ನಾನಾವಿಧವಾದ ಚಿತ್ರವಸ್ತುಗಳು ತುಂಬಿರು ವಂತೆಯೂಾ, ಅರಮನೆಯ ಮಧ್ಯದಲ್ಲಿ ನಾಲ್ಕು ಸಿಂಹಾಸನಗಳಿರುವಂತೆ ಯೂಾ, ಅವುಗಳಿಗೂ ಜಲವೂರ್ಗವು ತೋರಿಬರುವಂತೆ ವೂಡಬೇಕೆಂದು ಬೇಡಲು, ಆತನು ಈಕ್ಷಣದಲ್ಲೆ ಜರಗಿಸುತ್ತೇನೆಂದು ಹೇಳಿದನು. ಈವಾ ತುಗಳನ್ನಾಡಿ ಅವರಿಬ್ಬರೂ ಮತೊ್ತಂದುವೂರ್ಗವನ್ನು ಹಿಡಿದು ಹೋಗು ವದಕ್ಕಾಗಿ ಬಂದು ನನ್ನಮುಂದುಗಡೆಯಲ್ಲಿ ತಿರುಗಿದರು. ಆಗ ಆ ವಿಟನ ನನ್ನು ನನ್ನ ಕೈಖಡ್ಗದಿಂದ ಕಡಿದು ನೆಲಕ್ಕುರುಳಿಸಿದೆನು. ಕೂಡಲೇ ಆತನು ಸತ್ತನೆಂದುತಿಳಿದು, ರಾಣಿಗೆತಿಳಿಯದೆ ನನ್ನಮನೆಗೆಬಂದೆನು. ನನ್ನ

ಹೆಂಡತಿಯೆಲ್ಲಿರುವ ವಿಶ್ವಾಸದಿಂದ ಅವಳನ್ನುಕೊಲ್ಲದೆ ಹೋದೆನು. ಆದರೂ ನಾನುಕೊಂದುಹಾಕಿದ ಆ ವಿಟನು ನನ್ನಹೆಂಡತಿಯ ಮೂಯೆದಿಂದ ಬದುಕಿಕೊಂಡನು. ಆದರೂ ಆತನು ಸತ್ತವನು ಅಲ್ಲದೆ ಬದುಕಿದವನು ಅಲ್ಲದೆ ಮಧ್ಯಸ್ಥನಾಗಿದ್ದನು. ನಾನು ಆ ತೋಟವನ್ನು ದಾಟಿದಕೂಡಲೇ ರಾಣಿಯು ಗಟ್ಟಿಯಾಗಿಕೂಗಿಕೊಂಡು ಅಳುತ್ತಿರುವದನ್ನು ನೋಡಿ ಅದಕ್ಕೆ ಕಾರಣವನ್ನು ಊಹಿಸಿ ತಿಳಿದುಕೊಂಡು ಅವಳನ್ನುಕೊಲ್ಲದೆ ಬಂದುದಕ್ಕಾಗಿ ಸಂತೋಷವನ್ನು ಹೊಂದಿದೆನು. ಬಳಿಕ ನಾನು ಸಂತೋಷದಿಂದ ಮುಂಚದಲ್ಲಿ ಮಲಗಿ ನಿದ್ರೆಮಾಡಿದೆನು. ರಾಣಿಯು ಬೆಳಗಿನಜಾವದಲ್ಲಿ ನನ್ನಬಳಿಗೆಬಂದು ಸೇರಿದಳು. ಎಂದುಹೇಳಿ ಕಥೆಯನ್ನು ಮುಗಿಸದೆ ನಿಲ್ಲಿಸಲು, ಬೆಳಗಾಗಿರುವುದನ್ನು ನೋಡಿ, ಸುಲ್ತಾನರು ನಾಳೆಯದಿನ ಶೀಘ್ರವಾಗಿದ್ದು ಮುಂದಿನಕಥೆಯನ್ನು ಸಂಪೂರ್ಣವಾಗಿ ಹೇಳಬೇಕೆಂದು ರಾಣಿಗೆಹೇಳಿ ಹೊರಟುಹೋದನು.

೨೪ನೆಯ ರಾತ್ರಿ ಕಥೆ,

ಬಳಿಕ ದಿನರಜಾದಿಯು, ಕಾಲಕ್ಕೆಸರಿಯಾಗಿ ತನ್ನ ಅಕ್ಕನನ್ನು ಎಚ್ಚರಗೊಳಿಸಿ ಅಕ್ಕಾ ಆ ನೀಲದ್ವೀಪದ ರಾಜನು ಅದುಹೇಗೆ ಕಾಲುಗಳಿಂದ ನಡುವಿನವರೆಗೂ, ಕಲ್ಲಾಗಿರುವನೋ ಆ ಕಥೆಯೆನ್ನು ಕೇಳಬೇಕೆಂದು ತುಂಬ ಕುತೂಹಲವಿರುವುದರಿಂದ ದಯವಮಾಡಿ ಜಾಗ್ರತೆಯಾಗಿ ಹೇಳೆಂದು ಕೇಳಲು ಷಹರಜಾದಿಯು, ಹೇಳತೊಡಗಿದಳು. ನೀಲದ್ವೀಪದ ರಾಜನು, ಸುಲ್ತಾನನನ್ನು ಕುರಿತು, ಹೇಳಿದುದೇನಂದರೆ ಹೀಗೆ ನನ್ನಪಕ್ಕದಲ್ಲಿ ಮಲಗಿದ್ದ ರಾಣಿಯು ನಿದ್ರೆಮಾಡುತ್ತಿದ್ದಳೋ ಇಲ್ಲವೋ ನನಗೆತಿಳಿಯದು. ನಾನು ಮೆಲ್ಲಗೆದ್ದು ವಸ್ತ್ರಗಳನ್ನು ಧರಿಸಿಕೊಂಡು ಓಲಗಶಾಲೆಗೆಹೋಗಿ ರಾಜಕಾರ್ಯವನ್ನು ತೀರಿಸುತ್ತಿರುವಲ್ಲಿ ನನ್ನಹೆಂಡತಿಯು ದುಃಖಸೂಚಕವಾದ ಉಡುಪುಗಳನ್ನುಹಾಕಿಕೊಂಡು ತಲೆಯೆನ್ನು ಬಿರಿಯಹೊಯ್ದುಕೊಂಡು ಗಟ್ಟಿಯಾಗಿ ಅಳುತ್ತಾ ನನ್ನಬಳಿಗೆಬಂದು ಸ್ವಾಮಿ ನಾನು ಈಸ್ಥಿತಿಯಲ್ಲಿರುವೆನೆಂದು ನೀವು ಆಶ್ಚರ್ಯವನ್ನು ಹೊಂದಬೇಕಾದುದೇನೂ ಇಲ್ಲ. ಆದರೆ ನನಗೆ ಅತ್ಯಂತ ವ್ಯಸನಕರಗಳಾದ ಮೂರು ಸಂಗತಿಗಳು ಈಗ ಒದಗಿಬಂದಿರುವುವು. ಎಂದು ಹೇಳಲು ನಾನು ಅದೇ

ನೆಂದು ಕೇಳಿದೆನು. ಅದಕ್ಕಾಕೆಯು, ರಾಣಿಯಾದ ನನ್ನತಾಯಿಯು, ಸತ್ತುಹೋದಳು. ರಾಜನಾದತಂದೆಯು, ಯುದ್ಧದಲ್ಲಿ ಮಡಿದುಹೋದನು. ನನ್ನ ಪ್ರೀತಿಪಾತ್ರನಾದ ಅಣ್ಣನು ತಲೆಕೆಳಗಾಗಿಬಿದ್ದು ತಲೆಯೆನ್ನೊಡೆದುಕೊಂಡು ಸತ್ತನು. ಎಂದು ಹೇಳಲು, ಆಕೆಯು ತನ್ನವ್ಯಸನವನ್ನು ಮರೆಮಾಚುವುದಕ್ಕಾಗಿ ಹೇಳಿದ ಸುಳ್ಳಾಗಿ ನಾನು ಕೋಪಿಸಿಕೊಳ್ಳದೆ ಆಕೆಯವಿಟನನ್ನು ನಾನುಕೊಂದಿರುವೆನೆಂಬ ಸಮಾಚಾರವನ್ನು, ಆಕೆಗೆ ತಿಳಿಸದೆ ವ್ಯಸನಪಡಬೇಡವೆಂದು ಬಹುವಿಧವಾಗಿ ಸಮಾಧಾನಮಾಡಿದೆನು. ಆಗ ಆಕೆಯು ತನ್ನ ಅಂತಃಪುರವನ್ನುಸೇರಿ ಒಂದುಸಂವತ್ಸರದವರೆಗೂ, ಅಳುತ್ತಲೇ ಇದ್ದಳು. ಬಳಿಕ ಅವಳು ಈ ಕೋಟೆಯಾ ವರಣದಲ್ಲಿ ತನಗೊಂದು ಗೋರಿಯನ್ನು ಕಟ್ಟಿಸಿಕೊಡಬೇಕೆಂದೂ, ತಾನು ಸಾಯುವವರೆಗೂ, ಆಸ್ಥಳದಲ್ಲಿ ವಾಸಮಾಡಿಕೊಂಡಿರುವೆನೆಂದೂ, ನನ್ನನ್ನು ಕೇಳಿಕೊಂಡಳು. ಅದೇತೆರದಿಂದ ನಾನೊಂದು ಗೋರಿಯನ್ನು ಕಟ್ಟಿಸಿಕೊಡಲು, ಅವಳು ನಾನುಕೊಡಿದುಹಾಕಿದ ವಿಟಪುರುಷನನ್ನು ಎಲ್ಲಿಯೋ ಇಟ್ಟುಕೊಂಡಿದ್ದು, ಗೋರಿಯು ಸಿದ್ಧವಾದಬಳಿಕ ಅಲ್ಲಿಗೆ ತಂದಿಟ್ಟುಕೊಂಡು, ಪ್ರತಿದಿನವೂ ಅವನಿಗೆ, ಔಷಧಗಳನ್ನುಕೊಟ್ಟು ಉಪಚಾರಮಾಡಿದಳು. ಆದರೂ, ಆತನಿಗೆ ಗುಣವಾಗದೆ, ನಡೆಯುವುದಕ್ಕೆ ಕಾಲು ನೋಡುವುದಕ್ಕೆ ಕಣ್ಣು, ಮಾತನಾಡುವುದಕ್ಕೆ ನಾಲಿಗೆಯೂ ಇದ್ದರೂ ಇಲ್ಲದಿರುವ ಹೆಣದಂತೆ ಪ್ರಾಣವನ್ನುಮಾತ್ರ ಹೊಂದಿಕೊಂಡಿರುವ ಆತನಿಂದ ತನಗೆ ಯಾವವಿಧವಾದ ಸುಖವೂ ಇಲ್ಲದಿದ್ದರೂ, ಮೊದಲಿನವಾತ್ಸಲ್ಯದಿಂದ ದಿನಕ್ಕೆರಡುಸಾರಿ ಅಲ್ಲಿಗೆ ಹೋಗಿಬರುತ್ತಾ ಇದ್ದಳು. ಈ ವಿಷಯಗಳೆಲ್ಲವೂ ನನಗೆತಿಳಿದುಬಂದಿದ್ದರೂ, ನಾನು ತಿಳಿಯದವನಂತೆ ಸುಮ್ಮನೆ ಇದ್ದೆನು. ಹೀಗಿರುವಲ್ಲಿ ಒಂದುದಿನ ನಾನು ಆಕೆ ಏನುಮಾಡುವಳೋ ನೋಡಬೇಕೆಂಬ ಆಸೆಯಿಂದ ಅಲ್ಲಿಗೆಹೋಗಿ ಯಾರಿಗೂಕಾಣದ ಒಂದುಸ್ಥಳದಲ್ಲಿ ಬಚ್ಚಿಟ್ಟುಕೊಂಡಿದ್ದೆನು. ಆಕೆ ತನ್ನವಿಟನನ್ನುಕುರಿತು ಹೇಳುವ ಈ ಮಾತುಗಳನ್ನು ಕೇಳಿದೆನು.

ಏನಂದರೆ, ನೀವು ಈ ಅವಸ್ಥೆಯಲ್ಲಿರುವುದನ್ನು ನೋಡಿದರೆ ನನಗೆ ತುಂಬ ವ್ಯಸನವಾಗುತ್ತದೆ. ಅಯ್ಯೋ! ನಿನ್ನನ್ನು ಅತ್ಯಂತ ಪ್ರೀತಿಪಾತ್ರನೆಂದು ಸಕಲವನ್ನು ತೊರೆದು ನಿನ್ನನ್ನು ಕೂಡಬೇಕೆಂದು,

ಬಂದರೂಕೂಡ ನೀನು ಅಲಕ್ಷ್ಯವೂಡಿ ನನ್ನನ್ನು ನೋಡುತ್ತಿರುವೆಯೆಲ್ಲಾ ಜಗದೀಶನಸೃಷ್ಟಿಯೆಲ್ಲಿರುವ ರಾಜೈಶ್ವರ್ಯಗಳನ್ನು ಕೊಟ್ಟರೂ ಒಲ್ಲದೆ ನಿನ್ನ ಆಲಿಂಗನದಿಂದ ಸುಖವನ್ನು ಹೊಂದುವೆನೆಂದಿದ್ದೆನಲ್ಲಾ! ಎಂದು ತನಗೆ ತೋರಿದಂತೆ ಕಾವುನಿಕಾರವಾದ ಮಾತುಗಳನ್ನಾಡಿದಳು. ಅದನ್ನು ಕೇಳದಕೂಡಲೇ ತಾನು ಉಕ್ಕಿಬಂದಕೋಪವನ್ನು ದಕ್ಕಿಸಿಕೊಳ್ಳಲಾರದೆ, ಮುಂದೆ ಅವಳನ್ನು ನೋಡಿ ರಾಣಿಯೇ! ಸಾಕು. ಇನ್ನು ಅಳಬೇಡ ನಿಮ್ಮಬ್ಬರ ಅನುಮಾನಗಳು ನಿವಾರಣೆಯಾದವು. ನಿನ್ನವ್ಯಸನಕ್ಕೆ, ಕಾರಣವೂ ತಿಳಿಯಬಂದಿತೆಂದು ನುಡಿದೆನು. ಕೂಡಲೆ ಆಕೆ ಸಾಮಿ! ತಮಗೆ ನನ್ನಮೇಲೆ ದಯವುಂಟಾಗಿದ್ದರೆ ನನ್ನನ್ನು ಹಿಂಸಿಸದೆ ಕಾಪಾಡ ಬೇಕೆಂದು ಬೇಡಿಕೊಂಡಳು. ಅಲ್ಲದೆ ನಾನುಯೋಚಿಸಿದಂತೆ ಈ ರೀತಿಯಾದ ವ್ಯಸನದಿಂದಲೇ ಕೊರಗುತ್ತಿರುವುದರಿಂದ ಕಾಲವಿಳಂಬದಿಂದ ಇದು ಪರಿಹಾರವಾಗದೆಂದು ಬಿನ್ನನಿಸಿದಳು. ಈ ಮಾತುಗಳನ್ನು ಕೇಳಿದಕೂಡಲೆ ನನಗೆ ಅತ್ಯಂತವಾದ ಕೋಪವು ಒದಗಿಬಂದುದರಿಂದ ನಾನು ಅಲ್ಲಿರದೆ ಹೊರಟು ಅರಮನೆಗೆಬಂದೆನು. ಅವಳಾದರೋ ಪ್ರತಿದಿನವೂ, ಆ ಜಾರ ಪುರುಷನ ಬಳಿಗೆ ಹೋಗುತ್ತಾ ಎರಡು ಸಂವತ್ಸರಗಳವರೆಗೂ, ದುಃಖವನ್ನು ಅನುಭವಿಸುತ್ತಿದ್ದಳು.

ಹೀಗಿರುವಲ್ಲಿ ಮುರಳಿ ಬಂದಾನೊಂದು ದಿನ ನಾನು ಆ ಕ ಣ್ಣೀ ರಿನ ನಗರಿಗೆ ಹೋಗಿ ಮುರಳಿ ಮುರಿಯಾಗಿ ನಿಂತು ಕೊಂಡು ನೋಡುತ್ತಿರುವಲ್ಲಿ, ಆಕೆ ಮೊದಲಿನಂತೆ ಮೋಹಕರವಾದ ಮಾತುಗಳನ್ನಾಡತೊಡಗಿದಳು. ಕೊನೆಯಲ್ಲಿ ಆಕೆ ಅಮೋಘವಾದ ನಿಧಿಗೆ ನೀನು, ಆಕರವಾಗಿರುವುದು ನಿನ್ನ ಮಹಿಮೆಯಿಂದಲೋ, ಅಥವಾ ದೈವಯತ್ನದಿಂದಲೋ? ಎಂದು ಕೇಳಿದಳು. ಸುಲ್ತಾನರೇ! ಈಮಾತುಗಳನ್ನು ಕೇಳದಕೂಡಲೇ ನನಗೆ ಅತ್ಯಂತವಾದ ಕೋಪವು ಬಂದೊದಗಿತು. ಆಹಾ! ಆಕೆಗೆ ಅತ್ಯಂತ ಪ್ರೀತಿಪಾತ್ರನಾದ ವಿಟನಾದವನು ಯಾರೆನ್ನುವಿರೋ, ಮತ್ತಾರು ಅಲ್ಲ. ಇಂಡಿಯಾದೇಶದ ರಾಜರಭಯದಿಂದೋಡಿಬಂದ ಒಬ್ಬಾ ನೊಬ್ಬ ಕಾಫರನು. ಇದನ್ನುನೋಡಿ ನಾನು ಗೋರಿಯಕಡೆಗೆ ತಿರುಗಿ ಎಲೈ ಗೋರಿಯೆ ಈ ಇಬ್ಬರನ್ನೂ ನೀನೆನುಂಗಿಬಿಡು. ಖಂಡಿತವಾಗಿಯೂ, ಈಗಲೇ ನುಂಗು ಎಂದು ಕೂಗಿಕೊಂಡೆನು. ಆ ಕೂಗನ್ನುಕೇಳಿ

ದಕೂಡಲೆ, ಆಕೆಯು ಅತ್ಯಂತಕ್ರೂರಭಾವದಿಂದ ಕೂಗಿಹೇಳುತ್ತಾ ಎಲೈ ದುರಾತ್ಮನಾದವನೇ ನಿನ್ನಿಂದಲಲ್ಲವೆ ನನ್ನ ಪ್ರೀತಿಪಾತ್ರನಾದ ಈ ಸುಂದರಪುರುಷನಿಗೆ ಇಂತಹದುರವಸ್ಥೆಯುಂಟಾಯಿತು. ನಿನ್ನವೇಲಣ ಕೋಪಕ್ಕಾಗಿ ಹಗೆಯೆನ್ನು ತೀರಿಸಿಕೊಳ್ಳಬೇಕೆಂದು ಬಹಳ ದಿನಗಳ ವರೆಗೂ, ಕಾದುಕೊಂಡಿದ್ದೆನು, ಎಂದುಹೇಳಿದಳು. ಅದನ್ನುಕೇಳಿ ಎಲೈದುರ್ಮೂರ್ಗಳಾದ ಪಿಶಾಚರೂಪಳೇ ಬಹುಕಾಲದಿಂದಲೂ, ನೀನು ಆಗೌರವವನ್ನು ವುಂಟುಮಾಡುತ್ತಿರುವಂತೆ, ನನಗೆ ತೋರಿಬಂದರೂ, ನಿನ್ನನ್ನು ಕಡಿದು ಹಾಕದೆ ಹೋದೆನಲ್ಲಾ! ಎಂದುಹೇಳಿ ನನ್ನ ಕೈ ಖಡ್ಗದಿಂದ ಅವಳನ್ನು ಕಡಿಯೆುವುದಕ್ಕೆ ಹೋದೆನು. ಕೂಡಲೆ ಅವಳು ನನ್ನನ್ನುನೋಡಿ ಹುಸಿನಗೆಯೆನ್ನು ಬೀರುತ್ತಾ ನಿನ್ನ ಕೋಪವನ್ನಣುಗಿಸಿಕೊಳ್ಳೆಂದು ಹೇಳಿ, ನನಗೆ ತಿಳಿಯದಿರುವ ಕೆಲವುಮಾತುಗಳನ್ನಾಡಿದಳು. ಬಳಿಕ ನನ್ನನ್ನು ನೋಡಿ ನನ್ನಮಂತ್ರಬಲದಿಂದ ನಿನ್ನನ್ನು ಅರ್ಧಕಲ್ಲಾಗಿಯೂ, ಉಳಿದ ಅರ್ಧ ಮನುಷ್ಯರೂಪವಾಗಿಯೂ, ಇರುವಂತೆ ಮಾಡುವೆನೆಂದು ಹೇಳಿದಳು. ಆ ಕ್ಷಣವೇ ನಾನು ಹೀಗಾದೆನು. ಆದುದರಿಂದ ಬದುಕಿದವನೂ, ಅಲ್ಲದೆ ಸತ್ತವನೂ ಅಲ್ಲದೆ ಈ ದುರವಸ್ಥೆಯನ್ನು ಹೊಂದಿದೆನು. ಎಂದು ನುಡಿದನೆಂದು ಹೇಳಿ, ಬೆಳಗಾದುದರಿಂದ ಕಥೆಯನ್ನು ನಿಲ್ಲಿಸಿದಳು. ದಿನರಜೋದಿಯು, ಅಕ್ಕಾ! ಈ ಕಥೆಯಿಂದ ಉಂಟಾದ ಆನಂದವು ಮತ್ತಾವ ಆನಂದಕ್ಕೂ, ಸಮನಾಗಲಾರದು. ಆದರೆ ಇದನ್ನು ಕೊನೆಗಾಣಿಸಿ ಕೇಳುವಂತೆ ಮಾಡದೆಹೋದೆಯೆಲ್ಲಾ ಎಂದು ನುಡಿಯೆುಲು, ಷಹರಜೋದಿಯು, ತಂಗೀ ಈಗ ಹೊತ್ತಾಯಿತು. ಸುಲ್ತಾನರು, ದಯೆಮಾಡಿ ನನ್ನಪ್ರಾಣವನ್ನುಳಿಸಿದರೆ, ನಾಳೆನದಿನ ಪೂರ್ತಿಮಾಡುವೆನೆಂದು ಹೇಳಲು, ಸುಲ್ತಾನನು, ಯಾವಮಾತನ್ನು ಆಡದೆ ಹೊರಟುಹೋದನು.

೨೫ನೆಯ ರಾತ್ರಿ ಕಥೆ.

ಮರುದಿನ ಎಂದಿನಂತೆ ದಿನರಜೋದಿ ನಿದ್ದೆಯಿಂದೆದ್ದು, ಅಕ್ಕಾ! ಆ ನೀಲದ್ವೀಪದ ರಾಜನ ಕಥೆಯನ್ನು ಕೇಳಬೇಕೆಂದು, ಸುಲ್ತಾನರು ತುಂಬ ಕುತೂಹಲಯುಕ್ತರಾಗಿರುವುದರಿಂದ, ಆ ಕಥೆಯನ್ನು ಶೀಘ್ರವಾಗಿ ಹೇಳಿ ಅವರಿಗೆ ಆನಂದವನ್ನುಂಟುಮಾಡಬೇಕೆಂದು, ನುಡಿಯೆುಲು ಷಹ

ರಜೌ ಕಥೆಯೆನ್ನು ಹೇಳಲಾರಂಭಿಸಿದಳು. ಹೀಗೆ ಅರ್ಧಶರೀರದಿಂದ ಮನುಷ್ಯನಾಗಿರುವ, ಆ ರಾಜನು ಚೇಟೆಯಾಡುವುದಕ್ಕೆ ಬಂದ ಸುಲ್ತಾನ ನನ್ನುನೋಡಿ, ಸಾಮಿ! ಹೀಗೆ ಮಂತ್ರಬಲದಿಂದ ನನ್ನನ್ನು ವಿಕಾರ ಮಾಡಿ ಹೆಸರುವಾಸಿಕ್ಕೆ ರಾಣಿಯೆನಿಸಿದ ಕ್ರೂರಮಂತ್ರವಾದಿನಿಯು, ಬಳಿಕ ನನ್ನನ್ನು ಇಲ್ಲಿಗೆತಂದುಬಿಟ್ಟು, ಈ ಪೂರಿನ ಅಂಗಡಿ ಮುಂಗಟ್ಟುಗಳನ್ನು ಹಾಳುಮಾಡಿ, ನನ್ನೀಪುರವನ್ನು ತನ್ನ ಮಂತ್ರಬಲದಿಂದ ನಿರ್ಜನಪ್ರದೇಶವನ್ನಾಗಿ ಮಾಡಿದಳು. ನೀನುನೋಡಿದ ಕೆರೆಯಲ್ಲಿರುವ ನಾಲ್ಕು ತೆರನಾದ ಮೀನುಗಳು, ನನ್ನಪಟ್ಟಣದಲ್ಲಿ ವಾಸವಾಗಿದ್ದ, ಚತುರ್ವರ್ಣದ ಜನಗಳಾಗಿರುವರು. ಅವರಲ್ಲಿ ಬಿಳಿಯವರು, ಮುಸಲ್ಮಾನರು. ಕೆಂಪಿನವು ಪಾರಶಿಯವರು. ಕರ್ರಗಿರುವವು, ಕ್ರಿಸ್ತಮತದವರು. ಹಳದಿ ಬಣ್ಣದವುಗಳು, ಜ್ಯೂಸಂಬಜನರು. ಈ ತೆರದಿಂದ ಹೆಸರನ್ನುಂಟುಮಾಡಿದ ನಾಲ್ಕುದ್ವೀಪಗಳು. ಇದೆಲ್ಲವನ್ನು ನಾನು ನನ್ನಬಳಿಯ ಅಡಿಗೆಯವಳಿಂದ ತಿಳಿದುಕೊಂಡೆನು.

ಆ ದುಷ್ಟ ಹೆಂಗಸು, ನನ್ನ ರಾಜ್ಯವನ್ನು ಹಾಳುಮಾಡಿ, ನನ್ನನ್ನು ಈ ಸ್ಥಿತಿಗೆ ತಂದುದಲ್ಲದೆ, ಪ್ರತಿದಿನವೂ ನನ್ನಬಳಿಗೆಬಂದು, ತನ್ನ ಕಥೆಯೆನ್ನು ಹೇಳುತ್ತಾ ನನ್ನ ಮೈಮೇಲಿನ ಬಟ್ಟೆಗಳನ್ನು ತೆರೆದು ಕೊರಡೆಯೆನ್ನು ತೆಗೆದುಕೊಂಡು, ನೂರು ಏಟುಗಳನ್ನು ಹೊಡೆಯುತ್ತಿರುವಳು. ಅದೂಸಾಲದೆ ನನ್ನನ್ನು ಹೊಡೆದಮೇಲೆ ಕಂಬಳಿಯೆನ್ನು ಹೊದಿಸಿ ಅದರಮೇಲೆ ಉತ್ತಮವಾದ ಜರಿವಸ್ತ್ರಗಳನ್ನು ಹೊದಿಸುವಳೆಂದು ಹೇಳಿ, ಆತನು ಕಣ್ಣೀರನ್ನು ಸುರಿಸುತ್ತಾ, ಅಳುತ್ತಿದ್ದನು. ಅದಕ್ಕಾಗಿ ಸುಲ್ತಾನನು, ಯಾವಮೃತನ್ನು ಆಡಲಾರದೆ ಸುಮ್ಮನಿರುವುದನ್ನುನೋಡಿ, ಎಲೈ ಸೃಷ್ಟಿಕರ್ತನಾದ ಭಗವಂತನೇ! ನಿನ್ನ ಅಜ್ಞೆಗೆ ಒಳಪಟ್ಟು ಇರುವ ನನ್ನ ಆಪತ್ತುಗಳನ್ನು ದಯೆಮಾಡಿ, ಹೋಗಲಾಡಿಸಿ, ನನ್ನನ್ನು ಕಾಪಾಡಬೇಕೆಂದು, ಕೈಮುಗಿಬೇಡುತ್ತಾ, ಆಕಾಶವನ್ನು ನೋಡಿ, ಭಗವಂತನನ್ನು ಪ್ರಾರ್ಥಿಸಿಕೊಂಡನು. ಹೀಗೆ ಭಗವಂತನನ್ನು ಪ್ರಾರ್ಥಿಸಿದ ಆ ಯುವಕನ ದುರವಸ್ಥೆಯನ್ನು ಹೋಗಲಾಡಿಸಿ, ಆತನಹಗೆಯನ್ನು ತೀರಿಸಿಕೊಳ್ಳಬೇಕೆಂದು ಅಯ್ಯಾ! ಆ ದುರ್ಮಾರ್ಗಳಾದ ದುಷ್ಟಸ್ತ್ರೀಯು, ಎಲ್ಲಿರುವಳೆಂದು ಕೇಳಲು, ಆತನು ಸಾವಿಸಾ! ನಾನು

ಇದುವರಿಗೆ ಹೇಳಿದಂತೆ ಆಕೆಯು ಕಣ್ಣೀರಿನ ನಗರಿಯೆಲ್ಲಿ ತನ್ನ ವಿಟಪುರು ಷನನ್ನು ಕೂಡಿಕೊಂಡಿರುವಳು. ಅವಳು ಬಹುವೂಯೆಗಾರಳು. ಆದರೂ, ಎಂದಿನಂತೆ ಸೂರ್ಯೋದಯಕ್ಕೆ ಸರಿಯಾಗಿ ಇಲ್ಲಿಗೆಬಂದು ತನ್ನ ಹಗೆತನ ವನ್ನು ತೀರಿಸಿಕೊಂಡು ಹೋಗುತ್ತಿರುವಳು. ನೀವು ಆಕೆಯನ್ನು ನೋ ಡಿ ಅವಳ ವಿಟಪುರುಷನನ್ನು ನೋಡಹೋಗುವುದಾದರೆ, ಅವರವೂಯೆದಿಂ ದ ತಪ್ಪಿಸಿಕೊಳ್ಳುವಷ್ಟು ಶಕ್ತರಾಗಿ ತೋರುತ್ತಿರುವಿರಿ. ಆಕೆಯು ಪ್ರ ತಿದಿನವೂ ಆತನಿಗೆ ಔಷಧವನ್ನು ತೆಗೆದುಕೊಂಡುಹೋಗಿ ಕುಡಿಸುತ್ತಿರುವು ದರಿಂದಲೆ, ಆತನು ಬದುಕಿರುವನೆಂದು ಹೇಳಿ, ನಾನು ಆತನತಲೆಯೆನ್ನು, ಕಡಿದುಹಾಕಿದಂದಿನಿಂದ ಆತನು ಅವಳಲ್ಲಿ ರತಿಸುಖವನ್ನು ತೋರದಿರುವಕಾ ರಣ ಅವಳು ಪರಿತಪಿಸುತ್ತಿರುವಳೆಂದು, ಹೇಳಲು ನಿರ್ಭಾಗ್ಯನಾದ ರಾಜ ನೇ ! ನಿನ್ನಸ್ಥಿತಿಯೆನ್ನುನೋಡಿ, ಕನಿಕರಪಡುವರುಂಟೆ ? ಎಂದು ಕೇಳಿ ದನು. ಅಲ್ಲದೆ ಹಾಗೆ ನಿನಗೀದುರವಸ್ಥೆಯು, ಬರುವುದಕ್ಕೆ ಕಾರಣವೇ ನೆಂಬುದನ್ನು ಕಂಡುಹಿಡಿದು ಅದನ್ನು ನಿವಾರಣೆಮಾಡತಕ್ಕವರಾರೂ? ಇಲ್ಲ ದಿರುವುದರಿಂದ ನಿನಗೆ ಹೇಳಲಶಕ್ಯವಾದ ಇಂತಹ ದುರವಸ್ಥೆಯು, ಪ್ರಾ ಪ್ತವಾಗಿರುವುದು.

ಇದುವರಿವಿಗೂ, ಬರೆಯಲ್ಪಟ್ಟಿರುವ ಯಾವ ಗ್ರಂಥದಲ್ಲಿಯೂ, ನಿನ್ನಂಥಹ ದುರವಸ್ಥೆಯನ್ನು ಹೊಂದಿದ ಮೂನವರ ಚರಿತ್ರೆಯನ್ನು ನಾನುಕೇಳಲಿಲ್ಲ. ಅಯ್ಯೋ! ಇನ್ನುಮಾಡತಕ್ಕದ್ದೇನು. ನಿನ್ನಹಗೆಯನ್ನು ತೀರಿಸಿಕೊಳ್ಳುವುದೊಂದೆಯಲ್ಲವೆ ? ಅದಕ್ಕಾಗಿ ನನ್ನಕೈಲಾದ ಪ್ರಯತ್ನಗಳೆ ಲ್ಲವನ್ನು ಮಾಡುವೆನು. ನೀನು ವ್ಯಸನಪಡಬೇಡವೆಂದು ಸುಲ್ತಾನನು ! ಸಮಾಧಾನಮಾಡಿದನು, ಸುಲ್ತಾನನು ಈ ಪ್ರಕಾರವಾಗಿ ಮೂತನಾಡಿ ತಾ ನುಬಂದಿರುವ ಕಾರಣವನ್ನು ಹಗೆಯೆನ್ನು ನಿವಾರಣೆಮಾಡುವುದಕ್ಕೆ ತಕ್ಕ ಉಪಾಯೇವನ್ನು ತಾನು ಯೋಚಿಸಿರುವುದನ್ನು, ಆ ರಾಜಕುಮಾರನಿಗೆ, ತಿಳಿಯಹೇಳಿದನು. ತಾವು ಮಾಡಬೇಕಾದ ಪ್ರಯತ್ನವನ್ನುಕುರಿತು ಉ ಭಯತ್ರರೂ ಮೂತನಾಡಿ ಅದರಂತೆ ನಡೆಸುವುದಕ್ಕೆ ತಕ್ಕ ಉಪಾಯವ ನ್ನುಚಿಂತಿಸಿ, ಕಾರ್ಯಸಾಧನೆಮಾಡುವುದಕ್ಕೆ ನಾಳೆಯದಿನವೇಸರಿ, ಎಂದು ಗೊತ್ತುಮಾಡಿಕೊಂಡರು. ಆಗ ರಾತ್ರಿಯೊದುದರಿಂದ ಸುಲ್ತಾನರು ವಿಶ್ರ ಮಿಸಿಕೊಳ್ಳುವುದಕ್ಕಾಗಿ ಮಲಗಿ ನಿದ್ರೆಮಾಡಿದರು. ಆದರೆ ರಾಜಕುಮಾರ

ನು, ತನಗೆ ಪ್ರಾಪ್ತವಾಗಿರುವ ದುರ್ದಶೆಯನ್ನು ನಿವಾರಣೆ ಮಾಡಿಕೊಳ್ಳು ವುದಕ್ಕಾಗಿ ಯೋಚಿಸುತ್ತಾ ಎಂದಿನಂತೆ ನಿದ್ರೆಮಾಡುತ್ತಾ ಕೊರಗುತ್ತಲೆ ಇದ್ದನು. ಬೆಳಗಾಗುತ್ತಲೆ ಸುಲ್ತಾನನು, ಎದ್ದು ತನ್ನಪ್ರಯತ್ನವನ್ನು ನೆರವೇರಿಸುವುದಕ್ಕೆ, ತನಗೆ ಸಹಾಯವಾಗಿರುವುದಕ್ಕಾಗಿ, ತನ್ನಮೈಮೇ ಮೇಲಿನ ದುಪ್ಪಟಿಯನ್ನು ತೆಗೆದುಹಾಕಿ, ಬಂದಾನೊಂದು ಮೂಲೆಯಿಂದ ಆ ಕಣ್ಣೀರಿನ ನಗರಿಯನ್ನುಸೇರಿದನು. ಆ ನಗರದಲ್ಲಿರುವ ಸಮಾಧಿಸ್ಥಾ ನದಲ್ಲಿ ನಾನಾವಿಧವಾಗಿ ಹೊಳೆಯುತ್ತಿರುವ, ಹೂ ಬತ್ತಿಗಳ ದೀಪಗಳೂ, ವಿಚಿತ್ರಕರಗಳಾದ ರತ್ನಾಭರಣಗಳಿಂದ ನಿರ್ಮಿತವಾದ ವಸ್ತ್ರಾದಿಗಳೂ, ಕಾಣಬಂದವು. ಇಂತಹ ಸ್ಥಳದಲ್ಲಿರುವ ಬಂದಾನೊಂದು ಬಂಗಾರದಪೆಟ್ಟಿ ಗೆಯಿಂದ ಅತ್ಯಂತಮಧುರವಾದ ಸುವಾಸನೆಯು ಹೊರಹೊರಡುತ್ತಿದ್ದಿ ತು. ಅದಕ್ಕೆ ಸ್ವಲ್ಪದೂರದಲ್ಲಿರುವ ಒಂದು ಮಂಚದಮೇಲೆ ನೀಚನಾದ ಆ ಕಾಫರನು, ಮಲಗಿರುವುದನ್ನುನೋಡಿ, ಆತನನ್ನು ತನ್ನ ಕೈ ಖಡ್ಗದಿಂ ದ ಕೆಡಿದು ತುಂಡು ತುಂಡುಮಾಡಿ ಹೊರಗೆತಂದು ಒಂದು ಭಾವಿಯಲ್ಲಿ ಹಾಕಿ ತಾನು ಪುನಹ ಆ ಮಂಚದಬಳಿಗೆಬಂದು, ತನ್ನಕತ್ತಿಯನ್ನು ಮರೆಮಾಡಿ ಕೊಂಡು, ಹೊದ್ದಿಕೆಯನ್ನುಹೊದ್ದು ಮುಂದಿನಕಾರ್ಯವನ್ನು ಮಾಡು ವುದಕ್ಕಾಗಿ ಮಲಗಿಕೊಂಡನು.

ಸ್ವಲ್ಪಹೊತ್ತಿಗೆ ಆ ಮಾಯೆದ ಮೂರಿಯು ಬಂದು ನಿರ್ಭಾಗ್ಯ ನಾದ ರಾಜಕುಮಾರನ ಹೊದ್ದಿಕೆಯಮೇಲೆ ಕೊರಡೆಯನ್ನು ತೆಗೆದು ಕೊಂಡು ಹೊಡೆಯುತ್ತಿರಲು, ಆತನು ಅದನ್ನು ತಾಳಲಾರದೆ ಅರಚುತ್ತಾ ನನ್ನಮೇಲೆ ದಯವಿಟ್ಟು ಹೊಡೆಯುವುದನ್ನು ನಿಲ್ಲಿಸೆಂದು ಬೇಡಿಕೊಂಡ ರೂ, ಕೇಳದೆ ನೂರು ಏಟುಗಳನ್ನು ಪೂರ್ತಿಯಾಗಿಹೊಡೆದು, ನಿಂತು ಕೊಂಡಿರಲು ಅವಳನ್ನು ನೋಡಿ ನನ್ನಂತಹ ಅಲ್ಪರಾಜನು ನಿನ್ನನ್ನು ಎಷ್ಟುವಿಧವಾಗಿ ಬೇಡಿಕೊಂಡರೂ, ನಿನಗೆ ಕರುಣಹುಟ್ಟದೆ ಹೋಯಿತ ಲ್ಲಾ ! ಭಗವಂತನು ದಯೆವೂಡಿದರೆ ನಾನು ನಿನ್ನನ್ನು ಇಪ್ಪೊತ್ತಂದು ನಿರ್ದ ಯದಿಂದ ನೋಡುವೆನೆಂದು ಹೇಳಿದನು. ಅಷ್ಟರಲ್ಲಿ ಬೆಳಗಾದುದರಿಂದ ಷಹರಜೌದಿ, ಕಥೆಯನ್ನು ನಿಲ್ಲಿಸಿದಳು. ಆಗ ದಿನರಜೌದಿ ಅಯ್ಯೋ ದೈವವೇ ! ಅವಳೆಂಥ ಊರುನುಂಗುವಮೂರಿ, ಅವಳಿಗೆ ತಕ್ಕಶಿಕ್ಷೆಯಾಯಿ ತೊ ಇಲ್ಲವೋಕಾಣೆ, ನೀನು ಈಗಲೆಕಥೆಯನ್ನುನಿಲ್ಲಿಸಬೇಕೇ ಎಂದುಕೇಳಿ

ದಳು. ಷಹರಜೌದಿಯು, ನನ್ನಮುದ್ದಿನತಂಗೀ, ಈದಿನಹೇಳಲಾಗುವುದಿಲ್ಲ, ಸುಲ್ತಾನರದಯೆವುವೂತ್ರ ವುಂಟಾದರೆ, ನಾಳೆರಾತ್ರಿಗೆ ಈಕಥೆಯೆನ್ನು ಪೂರ್ತಿಮಾಡುವೆನೆಂದುಹೇಳಲು, ಸುಲ್ತಾನನು, ಆವೂತುಗಳನ್ನುಕೇಳಿ ನನ್ನ ಪ್ರತಿಜ್ಞೆಯನ್ನು ನೆರವೇರಿಸುವುದಕ್ಕೆ ಈ ಕಥೆಗಳೆಲ್ಲವೂ ಮುಗಿದಮೇಲೆ ಸ್ವಾಧೀನನಾಗಿಯೇ ಇರುವೆನೆಂದುಕೊಂಡು ಹೊರಟುಹೋದನು.

೨೬ ನೆಯ ರಾತ್ರಿಕಥೆ.

ಮರುದಿನ ದಿನರಜೌದಿಯು, ಎಂದಿನಂತೆ ಎಚ್ಚರಗೊಂಡು ಪ್ರಿಯೆಳಾದ ಸಹೋದರಿಯೇ ಆ ಕಣ್ಣೀರಿನ ನಗರಿಯೆಲ್ಲಿ ನಡೆದ ಸಂಗತಿಯನ್ನು ನಮಗೆ ಹೇಳುವೆಯಾ? ಎಂದು ಕೇಳಿದಳು. ಸುಲ್ತಾನನು, ದಿನರಜೌದಿಯೆಂತೆ ಆ ಕಥೆಯು, ಕೇಳುವುದಕ್ಕೆ ಅತ್ಯಂತ ಮನೋಹರವಾಗಿರುವುದೆಂದು, ನುಡಿಯಲು ಷಹರಜೌದಿಯು, ಆ ಕಥೆಯೆನ್ನು ಹೇಳಲುಪಕ್ರಮಿಸಿ, ಸುಲ್ತಾನನನ್ನುಕುರಿತು, ಸ್ವಾವಿಮಾ! ಆ ಮಂತ್ರಿಯಮಗಳು ತನ್ನಗಂಡನಾದ ರಾಜಕುಮಾರನನ್ನು ಕೊರಡೆಯಿಂದ ನೂರು ಪೆಟ್ಟುಗಳನ್ನು ಹೊಡೆದು, ಅದರಮೇಲೆ ಕಂಬಳಿಯನ್ನುಹೊದಿಸಿ, ಅಲ್ಲಿಂದ ಕಣ್ಣೀರಿನ ನಗರಿಗೆಬಂದು ಅಳುವುದಕ್ಕೆ ಮೊದಲುಮಾಡಿ, ಅಯ್ಯೋ! ನನ್ನಕಾಂತನೇ ಎಂದು ಹೇಳುತ್ತಾ ತನ್ನ ಜೌರಪುರುಷನಿದ್ದ ಮಂಚದಬಳಿಗೆ ಸೇರಿ ನನ್ನಂತಹ ವಿರಹಾತುಳನ್ನು ನೀನಿಂತು ಹಿಂಸೆಮಾಡುವುದು ಎಂತಹಕ್ರೂರವಾದ ಕಾರ್ಯ? ಇದು ನಿನಗೆನ್ಯಾಯವೆ? ನನ್ನಕೋಪದಿಂದುಂಟಾಗುವ ಫಲವನ್ನು ನೀನು ಅನುಭವಿಸಿದಾಗ ನನ್ನನ್ನು ನಿರ್ದಯವಂತಳೆಂದು ನಿಂದಿಸುವೆಯಾ? ಓ ಕ್ರೂರನಾದರಾಜಪುತ್ರನೇ! ನೀನುಮಾಡಿದ ದುರ್ಮಾರ್ಗವು ನನ್ನಕ್ರೋಧವನ್ನು ಮಿಂಚಿಹೋಗಿರಲಿಲ್ಲವೆ? ಹಾ ದೈವ್ರಹಿಯೆ ನಾನು ವಿಶ್ವಾಸದಿಂದಪೂಜಿಸುತ್ತಿದ್ದ ನನ್ನ ಮನೋಹರವಾದ ವಿಟನ ಪ್ರಾಣವನ್ನು ಕೊಲ್ಲುವುದಕ್ಕೆ ಯತ್ನಿಸಿದುದು ನನ್ನನ್ನು ಕೊಂದಂತಾಗಲಿಲ್ಲವೆ? ಎಂದು ಹೇಳುತ್ತಾ ಮಂಚದಮೇಲೆ ಮಲಗಿರುವ ಸುಲ್ತಾನನನ್ನು, ಕಾಫರನೆಂದುಕೊಂಡು, ಹಾ, ಆತ್ಮೇಶ್ವರನಾದ ಪ್ರಾಣನಾಯಕ! ನೀನು ಯಾವಾಗಲೂ, ಮೌನದಿಂದಿರುತ್ತಾ ಬಂದು ಮೂತನ್ನಾದರೂ, ಆಡದಿರುವೆಯೆಲ್ಲಾ! ನಿನಗೆ ನನ್ನಲ್ಲಿ ವಿಶ್ವಾಸವುಂಟಾಗಿದ್ದರೆ ಒಂದುಸಾರಿಯಾದರೂ,

ಮೂತನಾಡು ? ಹಾಗೆಮಾಡದೆ ನನ್ನನ್ನು ಕೊಲ್ಲಬೇಕೆಂದಿರುವೆಯಾ ? ನಿನ್ನನ್ನು ಬಹಳವಾಗಿ ಬೇಡಿಕೊಳ್ಳುವೆನು, ಒಂದುಮೂತನ್ನು ಆಡೆಂದು ನುಡಿದಳು.

ಆಗಸುಲ್ತಾನನು ನಿದ್ರೆಯಿಂದ ಎಚ್ಚರಗೊಳ್ಳುವಂತೆ ನಟಿಸುತ್ತಾ, ಕಾಫರನು ಮೂತನಾಡುವಂತೆ ಬಿಗಿಯಾದ ಧ್ವನಿಯಿಂದ ಸರ್ವಶಕ್ತನಾದ ಭಗವಂತನು, ನಿನಗೆಹೊರತು ಮತ್ತಾರಿಗೂ ಬಲವನ್ನೂ, ಬುದ್ಧಿಯನ್ನು ಕೊಡಲಿಲ್ಲವೆಂದು ಹೇಳಿದನು. ಆತನು ಹೀಗೆ ಹೇಳಿಕೂಡಲೇ ಆ ಮೂಯು ದವೂರಿಯು, ಕಾಫರನು ಮೂತನಾಡುವೆನೆಂದೆಂದುಕೊಂಡು ಓ ಪ್ರಿಯನೇ ನೀನು ನಿಜವಾಗಿಯೂ, ಮೂತನಾಡುತ್ತಿರುವಿಯೋ ! ಇಲ್ಲವೆ ಭ್ರಮೆಯೊ ಅಲ್ಲದೆಹೋದರೆ ಮೂಯೆವೊ ? ಅಲ್ಲದೆ ಕರುಣದಿಂದ ನಿಜವಾಗಿಯೂ ನನ್ನ ಸಂಗಡ ಮೂತನಾಡುತ್ತಿರುವೆಯೋ ? ಎಂದು ಹೇಳಿದನು. ಎಲೈ ನಿರ್ಭಾಗ್ಯಳೇ ನೀನು ನಾನುಕೇಳುವ ಪ್ರಶ್ನೆಗಳಿಗೆ ತಕ್ಕ ಉತ್ತರವನ್ನು ಹೇಳಬಲ್ಲೆಯಾ ? ಎಂದು ಕೇಳಲು, ಆಕೆಯು ಅಯ್ಯೋ ! ಪ್ರಿಯನೇ ನನ್ನನ್ನು ಏಕೆ ಹೀಗೆ ಕರೆಯುವೆ ಎನಲು, ಆತನು ನೀನು ಪ್ರತಿದಿನ ಪೂ, ಅನ್ಯಾಯವಾಗಿ ಡಾರ್ಣವಾಗಿಯೂ, ಕಠಿಣವಾಗಿಯೂ, ನಿನ್ನಗಂಡನಾದ ರಾಜಕುಮಾರನನ್ನು ಹೊಡೆಯುತ್ತಿರುವ ಏಟುಗಳಿಂದ ಹೊರಹೊರಡುವ ಕೂಗು, ನರಳಿಕೆಯೂ, ಹಗಲೂ, ರಾತ್ರಿಯೂ, ನನಗೆ ನಿದ್ರಾಹಾರದಂತೆ ಮಾಡಿದೆ. ಆತನಿಗೆ ನೀನು ಪ್ರಯೋಗಿಸಿರುವ ಮಂತ್ರದಿಂದಲೇ ನಾನು ಮೂತನಾಡುವುದಕ್ಕೂ, ನಡೆಯುವುದಕ್ಕೂ, ಇಲ್ಲದಂತೆ ಬಹಳವಾದ ಶ್ರಮವನ್ನು ಅನುಭವಿಸುತ್ತಿರುವೆನು. ಎಂದು ಹೇಳಲು, ಆಕೆಯು ಅಯ್ಯೋ ಅದರಿಂದ ನಿಮಗೆ ತೊಂದರೆಯುಂಟಾಗುವಹಾಗಿದ್ದರೆ, ಈಗಲೆ ಅದನ್ನು ನಿವರ್ತಿಮಾಡಿ, ಆ ರಾಜಕುಮಾರನನ್ನು ಮೊದಲಿನಂತೆ ಸರಿಯಾಗಿ ಮಾಡಬಲ್ಲೆನು, ಆದರೆ ಈಗ ನೀನು ಮನಃಪೂರ್ವಕವಾಗಿ ಆತನಸೆರೆಯನ್ನು ಬಿಡಿಸೆಂದು, ಹೇಳುವೆಯಾ ? ಎಂದುಕೇಳಲು, ಸುಲ್ತಾನನು, ನೀನು ಸುಖವಾಗಿರಬೇಕಾದರೆ ಆತನಿಗೆ ಪ್ರಯೋಗಿಸಿರುವ ಮಂತ್ರವನ್ನು ಹಿಂದಿರುಗಿಸಿ ತೊಂದರೆಯನ್ನು ನಿವಾರಣೆಮಾಡಿ, ಬಾ, ಎಂದುನುಡಿದನು.

ಆ ಮೂಯೆದವೂರಿಯು, ಕೂಡಲೇ ಒಂದು ಪಾತ್ರೆಯಲ್ಲಿ ನೀರನ್ನು ತೆಗೆದುಕೊಂಡು ಅಭಿಮಂತ್ರಿಸಿ ಮಂತ್ರವನ್ನು ಜಪಿಸುತ್ತಾ ತನ್ನ

ಗಂಡನಿರುವ ಸ್ಥಳಕ್ಕೆ ಬಂರು ಓ ರಾಜಕುಮಾರನೇ ! ನೀನು ಸೃಷ್ಟಿಕರ್ತನಾದ ಭಗವಂತನುನಿಗ್ರಹಶಕ್ತಿಗೆ ಒಳಪಟ್ಟು, ನನ್ನವಯೆದ ಪುಂಶ್ಚಲ್ಯದಿಂದ ಹೀಗಾಗಿರುವೆಯೆಲ್ಲಾ ! ಈಗ ಆಭಗವಂತನಿಗೆ ನಿನ್ನವೋಲೆ ದಯೆಪುಂಟಾಗಿರುವುದರಿಂದ ಈಮುಂತ್ರದ ಬಲದಿಂದ ಮೊದಲು ಬ್ರಹ್ಮಸೃಷ್ಟಿಯಲ್ಲಿ ಯಾವರೂಪವನ್ನು ಹೊಂದಿದ್ದೆಯೋ ! ಅದೇರೂಪವನ್ನು ಹೊಂದೆಂದು ಹೇಳುತ್ತಾ, ತಾನುಮುಂತ್ರಿಸಿದ ನೀರನ್ನು ಆತನವೋಲೆ ಚೆಲ್ಲಿದಳು ಅವಳು ಹಾಗೆ ನೀರನ್ನು ಚಲ್ಲಿದ ಕೂಡಲೆ ರಾಜಪುತ್ರನು ಸಂತೋಷದಿಂದ ನಡೆದುಬಂದನು. ಆತನನ್ನು ನೋಡಿ ಆಕೆಯು, ಎಲೆ ದುರಾತ್ಮನೆ ನೀನು ಕೂಡಲೇ ಇಲ್ಲಿಂದ ಹೊರಟುಹೋಗು. ಪುನಹ ಇಲ್ಲಿಗೆ ಬಂದರೆ ದುರಣವೇ ಗತಿಯೆಾಗುವುದೆಂದು ಹೇಳಲು, ಆತನು ಸಮುಯೆಾನುಸಾರವಾಗಿ ನಡೆದುಕೊಳ್ಳಬೇಕೆಂದು ಅವಳ ಸಂಗಡ ಯೆಾಪ ಮಾತನೂ ಆಡದೆ ಕೋಟೆಯನ್ನು ಬಿಟ್ಟು ಬಹು ದೂರಕ್ಕೆ ಹೋಗಿ ತನ್ನ ಪ್ರಯತ್ನವು ಹೇಗೆ ನೆರವೇರುವುದೊ ? ನೋಡಬೇಕೆಂದು, ಪುರೆಯಾದ ಒಂದು ಸ್ಥಳದಲ್ಲಿ ಅಡಗಿಕೊಂಡಿದ್ದನು. ಆಗ ಆ ಮಾಯೆದವಾರಿಯು, ಎಂದಿನಂತೆ ಕಣ್ಣೀರಿನ ನಗರಿಗೆಬಂದು ಕಾಫರನನ್ನು (ಸುಲ್ತಾನನು) ನೋಡಿ ಓ ನನ್ನವನುದ್ದಿನಗಂಡ, ಪ್ರಾಣದಜೆಾಣ ! ಈಗಲಾದರೂ ನನ್ನವೋಲೆದಯೆವಿಟ್ಟು, ಬಹುದಿನದಿಂದಲೂ, ಇಲ್ಲದಿರುವ ರತಿಸುಖವನ್ನು ಕೊಡುವೆಯಾ ನೀನು ಹೇಳಿದಂತೆ ಮಾಡಿಬಂದಿರುತ್ತೇನೆಂದು ನುಡಿಯಲು ಸುಲ್ತಾನನು, ಕಾಫರನು ಮೂತನಾಡುವಂತೆ ನುಡಿಯುತ್ತ ನೀನಿದುವರೆಗೂ, ಮೂಡಿದಕೆಲಸಗಳಿಂದ ನನಗೆ ಅರ್ಧಭಾಗದರೋಗವು ವಾಸಿಯೆಾಗಿರುವುದು, ಉಳಿದ ಅರ್ಧಭಾಗದ ರೋಗವನ್ನು ಗುಣಪಡಿಸೆಂದು ಹೇಳಿದನು. ಆಗ ಆ ಮಾಯೆದವಾರಿಯು, ಒಂದೇಸಾರಿಗೆ ನಾನು ಹೇಗೆ ಗುಣವೂಡಲೆಂದು ನುಡಿದಕೂಡಲೇ ಎಲೆ ಮೃತ್ಯುರೂಪಳೇ ! ನೀನು ಮಂತ್ರವಿದ್ಯದಿಂದ ಹಾಳುಮಾಡಿದ ಈ ನಗರಿಯನ್ನು ಸರಿಮಾಡಿ ಇಲ್ಲಿ ಜನಗಳು ವಾಸಮಾಡುವಂತೆಯೂ, ಆ ನಾಲ್ಕು ದ್ವೀಪಗಳು ಸರಿಹೋಗುವಂತೆ ಮಾಡು, ಹಾಗೆಮಾಡದೆ ಅವುಗಳನ್ನು ಹಾಳುಮಾಡಿ ನನಗೀತೆರನಾದ ದುಃಖವನ್ನು ತಂದಿತ್ತುದರಿಂದಲಲ್ಲವೆ ? ನೀನೆ ನನ್ನಭಾಗಕ್ಕೆ ಮೃತ್ಯುವಾಗಿರುವೆ ? ಈಗ ಅವುಗಳೆಲ್ಲವನ್ನು ಸರಿಮಾಡಿ ಪುನಹ ಇಲ್ಲಿಗೆಬಂದುನುಾತನಾಡಿದರೆ, ನಾನು ಆಗ ನಿನಗೆ ಹಸ್ತ

ವನ್ನು ಕೊಡುವೆನು. ನೀನು ಅದನ್ನು ಹಿಡಿದುಕೊಂಡಕೂಡಲೇ ನಾನು ಏಳುವೆನೆಂದು ಹೇಳಿದನು.

ಆ ಮೂತನ್ನುಕೇಳಿ ಅವಳು ಓ ನನ್ನ ಪ್ರಾಣಕಾಂತನೇ ನೀನು ಹೇಳಿದಂತೆ ನಾನು ಈಗಲೇಮೂಡುವೆನು. ನೀನು ಆರೋಗ್ಯವನ್ನುಹೊಂದಿ ನನಗೆ ಸುಖವನ್ನುಂಟುಮಾಡೆಂದು ಹೇಳಿ ಹೊರಟುಹೋಗಿ, ಆ ಕೆರೆಯ ಬಳಯಲ್ಲಿರುವ ಒಂದುಗುಹೆಯನ್ನು ಹೊಕ್ಕು ಅಲ್ಲಿಂದ ಹೊರಗೆ ಕೈಯಲ್ಲಿ ಸ್ವಲ್ಪನೀರನ್ನುತೆಗೆದುಕೊಂಡು, ಪ್ರೋಕ್ಷಿಸಿದಳು. ಕೂಡಲೇ ಬೆಳಗಾದುದೆಂದು ಷಹರಜಾದಿಯು, ಕಥೆಯನ್ನುನಿಲ್ಲಿಸಿದಳು. ದಿನರಜಾದಿಯು ಅಕ್ಕಾ ! ಆ ರಾಜನೂ, ದಿವ್ಯಜಗಳೂ, ನಗರಿಯು, ಎಂದಿನಂತೆ ಜನಭರಿತವಾದುವೆಂಬುದನ್ನು, ಕೇಳಿ ನನಗೆತುಂಬ ಸಂತೋಷವಾಯಿತು. ಆದರೆ ಆ ಮೂಯೆದವೂರಿಯ ಗತಿ ಏನಾಯಿತೊ ಅದನ್ನು ತಿಳಿಯಹೇಳಿನಲು, ತಂಗೀ ಸುಲ್ತಾನರು, ಒಪ್ಪಿ ನನ್ನನ್ನು ಉಳಿಸಿದರೆ ನಾಳೆಹೇಳುವೆನೆಂದಕೂಡಲೇ ಯಾವವೂತನ್ನು ಆಡದೆ ಸುಲ್ತಾನನು ಹೊರಟುಹೋದನು.

೨೭ ನೆಯ ರಾತ್ರಿ ಕಥೆ

ಮರುದಿನ ದಿನರಜಾದಿಯು, ಉಷಃಕಾಲದಲ್ಲಿದ್ದು, ತನ್ನನು ಜೆಯೆನ್ನು ಕುರಿತು, ಅಕ್ಕಾ ! ನೀನು ನಿನ್ನೆಯದಿನ ಮೂತುಕೊಟ್ಟಂತೆ, ಆ ಮೂಯೆದವೂರಿಯಾದ ಮುಂತ್ರಿಯಮಗಳ ಕಥೆಯೆನ್ನು ವಿವರಿಸಜೀಕೆಂದು, ಬೇಡಿಕೊಳ್ಳಲು, ತಂಗೀ ಸುಲ್ತಾನರಿಗೂ, ನಿನಗೂ, ಸಂತೋಷವುಂಟಾಗುವುದಕ್ಕಾಗಿ ಕಥೆಯೆನ್ನು ಹೇಳುವೆನು. ಸಾವಧಾನ ಚಿತ್ತಳಾಗಿ, ಕೇಳೆಂದು ನುಡಿದು, ಸುಲ್ತಾನನ್ನುನೋಡಿ, ಆಳದಮಹಾಸತ್ವವಿಯೆವರೇ ಆ ಮುಂತ್ರಿಯಮಗಳು, ಹಾಗೆನೀರನ್ನುಚೆಲ್ಲಿ ತನ್ನಬಾಯಿಯಿಂದ ಏನೋ ಒಂದು ಮುಂತ್ರವನ್ನು ಹೇಳಲು ಕೂಡಲೆ ಆ ತಟಾಕವು ನಗರವಾಯಿತು. ವಿವನುಗಳಾದರೋ ಮುಸಲ್ಮಾನರು, ಪಾರಶಿಯವರು, ಕ್ರಿಸ್ತರು, ಜೂಸಗಳೆಂಬ ಪ್ರಜೆಗಳಾಗಿ, ಎಂದಿನಂತೆ ತಮ್ಮ ತಮ್ಮ ಪತ್ನೀ ಪುತ್ರರೊಡನೆ, ಸಂಸಾರಮಾಡಿಕೊಂಡಿರಲು, ಆನಗರವು ಇಂದ್ರನ ರಾಜಧಾನಿಯಂತೆ ಹೊಳೆಯುತಲಿದ್ದಿತು. ಆ ಪುರವು ಅಂಗಡಿಮುಂಗಟ್ಟುಗಳಿಂದ ಮೊದಲುಹೇಗೆ ಒಪ್ಪುತಲಿದ್ದಿತೋ ಹಾಗೆಯೆ ಈಗಲೂ ಪ್ರಕಾಶಿಸಿತು.

ಆ ತಟಾಕದಬಳಯಲ್ಲಿದ್ದ ಸುಲ್ತಾನನ ಪರಿವಾರದವರು ಮನೋಜ್ಞವಾದ ಮಹಾಪಟ್ಟಣದ ಮಧ್ಯದಲ್ಲಿ ತಾವಿರುವುದನ್ನು ನೋಡಿ ಮಹತ್ತಾದ ಆನಂದವನ್ನು ಹೊಂದಿದರು. ಬಳಿಕ ಆಕೆಯು, ತಾನುಮಾಡಬೇಕಾದ ಕೆಲಸಗಳೆಲ್ಲವನ್ನೂ ಮುಗಿಸಿಕೊಂಡು ತನ್ನವಿಟನಾದ ಕಾಫರನು, ಇರುವ ಸ್ಥಳವಾದ ಕಣ್ಣೀರಿನನಗರಿಗೆ ಬಂದು ಪ್ರಾಣನಾಥನೆ ನೀನುಹೇಳಿದ ಪ್ರಕಾರದಿಂದ ಸರ್ವವನ್ನು ನೆರವೇರಿಸಿದೆನು. ಈಗ ನಿನಗೆ ಆರೋಗ್ಯವಾಯಿತೇ ಈಗಲಾದರೂ ದಯೆಯಿಂದ ನನಗೆ ಆನಂದವನ್ನುಂಟುಮಾಡು. ನೀನು ಹೇಳಿದಂತೆ ನಿನ್ನ ಕೈಯನ್ನು ಕೊಡೆಂದು ಬೇಡಲು, ಆಗ ಸುಲ್ತಾನನು, ಕಾಫರನು ಮೂತನಾಡುವಂತೆ ನಟಿಸುತ್ತಾ ಹತ್ತಿರಕ್ಕೆ ಬರಹೇಳಲು, ಬಳಿಕ ಅವಳು ಹತ್ತಿರಕ್ಕೆಹೋಗಲು, ನೀನು ಬರಬೇಕಾದ ಷ್ಟು ಹತ್ತಿರಕ್ಕೆ ಬರಲಿಲ್ಲವಾದುದರಿಂದ ಇನ್ನೂ ಹತ್ತಿರಕ್ಕೆ ಬಾ ಎಂದು, ಹೇಳಿದನು. ಬಳಿಕ ಆಕೆಯು ಹತ್ತಿರಕ್ಕೆಬರಲು ತನ್ನವಿಟಪುರುಷನವೋಲೆ ಬೀಳುವಂತೆ ನನ್ನವೋಲೆ ಬೀಳುವಳೆಂಬ ಭಯದಿಂದ ಅವಕಾಶವನ್ನು ಕೊಡದೆ, ತನ್ನ ಕೈ ಕತ್ತಿಯಿಂದ ಅವಳದೇಹವು ಎರಡುತುಂಡಾಗಿ ಉಭಯಪಾರ್ಶ್ವಗಳಲ್ಲಿಯೂ, ಬೀಳುವಂತೆ ಸಾಹಸದಿಂದ ಕತ್ತರಿಸಿ ಆ ಹೆಣವನ್ನು ಹೊರಗೆತಂದು ಬಿಸಾಡಿದನು. ಬಳಿಕ ಕಣ್ಣೀರಿನ ನಗರಿಯೆನ್ನು ಬಿಟ್ಟು, ಹೊರಟು ಆ ರಾಜಕುಮಾರನಿರುವ ಸ್ಥಲಕ್ಕೆಬಂದನು. ಬಳಿಕ ಆ ರಾಜಕುಮಾರನು, ಸುಲ್ತಾನನು, ಎಂದಿಗೆಬರುವನೋ ಎಂದು ಎದುರುನೋಡುತ್ತಿರಲು, ಈತನು ಅಲ್ಲಿಗೆಹೋಗಿ ಸಂತೋಷದಿಂದ ಆತನನ್ನು ನೋಡಿ ಅಯ್ಯಾ! ನೀನು ಇನ್ನು ಪೆದರತಕ್ಕ ಅವಶ್ಯಕವಿಲ್ಲ. ನಿನ್ನಹಗೆಯನ್ನ ತೀರಿಸಿಕೊಂಡಿರುವೆನು. ಸುಖವಾಗಿರೆಂದು ನುಡಿದನು.

ಬಳಿಕ ಆ ರಾಜಕುಮಾರನು, ತನಗೆ ಈ ಸುಲ್ತಾನನು ಮಾಡಿದ ಮಹದುಪಕಾರಕ್ಕಾಗಿ ಆತನನ್ನುವಂದಿಸಿ ಹೊಗಳುತ್ತಾ ಪುಣ್ಯವಂತನೇ! ನೀನು ನನಗೆಮಾಡಿರುವ ಮಹೋಪಕಾರಕ್ಕಾಗಿ ಭಗವಂತನು ನಿನಗೆ ಸಮಸ್ತವಾದ ಸುಖಸಾಮ್ರಾಜ್ಯಗಳನ್ನು ದೀರ್ಘಾಯುವನ್ನು ಕೊಡಲೆಂದು, ಪ್ರಾರ್ಥಿಸುವೆನೆಂದು ಹೇಳಿದನು. ಇನ್ನುಮೇಲೆ ತಾವು ಈ ಪಟ್ಟಣಕ್ಕೆ ಸವಿೂಪವಾಗಿರುವ ಮತ್ತೊಂದು ನಗರಿಯಲ್ಲಿ ವಾಸಮಾಡಿಕೊಂಡಿರುತ್ತಾ, ನನ್ನಪಟ್ಟಣಕ್ಕೆ ಬಾದುದೇ ಆದರೆ, ತನುಗೆ ಅತ್ಯಂತವಾದ ಮರ್ಯಾದೆ

ಯೆನ್ನು ನೂಡಿ ತುಂಬ ಕೃತಜ್ಞನಾಗಿರುವೆನೆಂದು ಹೇಳಿದನು. ಅಲ್ಲದೆ, ನಿಮ್ಮರಾಜ್ಯದಲ್ಲಿರುವಂತೆ ಸಮಸ್ತವಾದ ರಾಜಮರ್ಯಾದೆಗಳನ್ನು ನಿಮಗೆ ನಡೆಸಿಕೊಡುವೆನೆಂದು ನುಡಿದನು. ಅದನ್ನುಕೇಳಿ ನನಗೆ ಮಹೋಪಕಾರವನ್ನುನೂಡಿದ ಮಹಾರಾಜರೆ ! ನೀವು ಈ ಪಟ್ಟಣಕ್ಕೆ ಸವಿೂಪವಾಗಿರುವುದಕ್ಕೆ, ಇಚ್ಛಿಸುತ್ತೀರಾ ಎಂದುಕೇಳಿದನು. ಹೌದು ನನ್ನಪಟ್ಟಣವು ನಾಲ್ಕು ಐದುಗಳಿಗೆಗಳ ಪ್ರಯಾಣದೂರವಿರುವುದೆಂದು, ನನಗೆ ಚೆನ್ನಾಗಿ ತಿಳಿದಿರುವುದು, ಎಂದು ಹೇಳಲು, ಸಾಧ್ವಿಾ ! ವೊದಲು ನನ್ನ ನಗರಿಯು, ಮೂಯೊಬಲದಿಂದಿದ್ದುದರಿಂದ, ನಿಮಗೆ ಅಷ್ಟು ಸವಿೂಪವಾಗಿ ಕಾಣುತ್ತಿದ್ದಿತು. ಈಗಲಾದರೋ ನಿಮ್ಮಪಟ್ಟಣವು ಇಲ್ಲಿಗೆ ಬಂದು ಸಂವತ್ಸರದ ಪ್ರಯಾಣದೂರವಿರುವುದೆಂದು, ನನಗೆ ತೋರುತ್ತಿರುವುದು. ಆದುದರಿಂದ ನಾನು ನಿಮ್ಮಸಂಗಡ ಹೊರಟುಬರುವುದಕ್ಕೆ ಯಾವ ಆತಂಕವೂ ಇಲ್ಲ. ನೀವು ನನ್ನನ್ನು ಉದ್ಧರಿಸಿದವರಾದುದರಿಂದ, ನಾನು ಯಾವಜ್ಜೀವ ನಿಮಗೆ ಕೃತಜ್ಞನಾಗಿರುವೆನು. ನಾನು ನನ್ನರಾಜ್ಯವನ್ನುತೊರೆದು, ನಿವೊಡನೆಬರಲು ಯಾವಕೊರತೆಯೆನ್ನು ಕಾಣದೆ ಸ್ಥಿರಮನಸ್ಕನಾಗಿರುವೆನು. ಎಂದು ಹೇಳಿದೆನು. ಸುಲ್ತಾನನು, ತನ್ನ ರಾಜ್ಯಕ್ಕೆ ತಾನು ಬಹುದೂರವಾಗಿ ಬಂದಿರುವೆನೆಂದು, ತಿಳಿದು ಸಂಶಯಯುಕ್ತನಾದನು. ಆಗ ನೀಲದ್ವೀಪದರಾಜನು, ಸುಲ್ತಾನನ, ಅನುಮೂನವನ್ನು ಹೋಗಲಾಡಿಸುವಂತೆ, ಪರಿಷ್ಕಾರವಾಗಿ ವಿವರಿಸಿಹೇಳಿದನು.

ಬಳಿಕ ಸುಲ್ತಾನನು, ಆರಾಜಕುಮಾರನನ್ನುಕುರಿತು, ಅಯ್ಯಾ ನನ್ನರಾಜ್ಯಕ್ಕೆ ಹಿಂದಿರುಗಿಹೋಗುವುದು, ನನಗೇನೂ ತೊಂದರೆಯೆಂತಾಗಿಲ್ಲ. ನೀನು ನನ್ನಸಂಗಡ ಬರುವುದಕ್ಕೆ ಒಪ್ಪಿರುವೆಯಾದುದರಿಂದಲೂ, ನನಗೆ ಮಕ್ಕಳಿಲ್ಲದುದರಿಂದಲೂ, ನಿನ್ನನ್ನೇ ಮಗನೆಂದುಭಾವಿಸಿ ನನ್ನರಾಜ್ಯಕ್ಕೆ ಅಧಿಪತಿಯನ್ನಾಗಿವೂಡುವೆನು. ಇದಕ್ಕೆ ನೀನು ಅನುವೋದಿಸಜೀಕೆಂದು ಹೇಳಿದನು. ಹೀಗೆ ಅವರಿಬ್ಬರಿಗೂ ಸಂಭಾಷಣೆಯು ನಡೆದವೇಲೆ ಅನ್ಯೋನ್ಯಪ್ರೀತಿಯಿಂದ ಒಬ್ಬರನ್ನೊಬ್ಬರು ಆಲಿಂಗಿಸಿಕೊಂಡು, ಸ್ವಲ್ಪಕಾಲದಲ್ಲಿ ನಿನ್ನಸಂಗಡ ಬರುತ್ತೇನೆಂದುಹೇಳಿ ನೀಲದ್ವೀಪದ ರಾಜನು, ತಾನು ಹೊರಡುವುದಕ್ಕೆ ಬೇಕಾದಸಾಮಗ್ರಿಗಳನ್ನು ಎರಡು ಮೂರು ವಾರಗಳಲ್ಲಿಯೇಸರಿಪಡಿಸಿಕೊಂಡನು. ಅದಕ್ಕಾಗಿ ಆತನು ಆಳು

ತ್ತಿದ್ದ ಪ್ರಜೆಗಳು, ತುಂಬ ವ್ಯಸನಾಕ್ರಾಂತರಾಗಿ ಮತ್ತೊಬ್ಬನನ್ನು ರಾಜನಾಗಿ ಏರ್ಪಡಿಸಿಕೊಳ್ಳಲು, ಒಪ್ಪಿಕೊಂಡರು ಇಷ್ಟರಲ್ಲಿ ರಾಜಕುಮಾರನು ತನ್ನಭಂಡಾರದಿಂದ ಸಮಸ್ತವಾದ ಅಮೂಲ್ಯವಸ್ತುಗಳನ್ನು ತರಿಸಿ ಒಂಟೆಗಳಮೇಲೆ ಹೇರಿಸಿಕೊಂಡು, ಉತ್ತಮವಾದ ವಸ್ತ್ರಾಭರಣಗಳನ್ನು ಧರಿಸಿ, ಪರಿವಾರಸಮೇತನಾಗಿ ನಾನಾವಾದ್ಯಗಳು ಮೊಳಗುತ್ತಿರಲು, ಮುಂದೆಹೊರಟನು. ಇಷ್ಟರಲ್ಲಿಯೇ ಆ ಸುಲ್ತಾನನು, ಬಂದು ಬಹಳದಿನಗಳಾದರೂ ಪುನಹಹಿಂದಿರುಗಿ ಬಾರದೇ ಇರುವುದಕ್ಕೆ ಕಾರಣವನ್ನು ಆತನರಾಜ್ಯದಲ್ಲಿ ಸರ್ವರೂ ಸುಖವಾಗಿರುವರೆಂಬ ವಿಷಯವನ್ನು ತಿಳಿದುಕೊಂಡು, ಆತನನ್ನು ಇದಿರುಗೊಳ್ಳುವುದಕ್ಕಾಗಿ ಹೊರಟುಬರುತ್ತಿರುವ ಪ್ರಜೆಗಳನ್ನು ಸಂತೋಕ್ಷದಿಂದ ಬರಮಾಡಿಕೊಂಡು, ಅವರೊಡನೆ ಕುಶಲಪ್ರಶ್ನೆಯನ್ನುಮಾಡಿ, ಪರಮೋತ್ಸಾಹದಿಂದಿದ್ದರು. ಬಳಿಕ ಸುಲ್ತಾನನು, ತನ್ನರಾಜ್ಯವನ್ನುಸೇರಿ, ಮರುದಿನ ಸಭೆಕರೆಲ್ಲರನ್ನೂ ಬರಮಾಡಿಕೊಂಡು, ತಾನುಮಾಡಿದ ಕೆಲಸವನ್ನು ನಡೆದಸಂಗತಿಯೆನ್ನು ಬರುವುದಕ್ಕಾಗಿ ಗೊತ್ತುಮಾಡಿದ್ದ ಕಾಲಕ್ಕಿಂತಲೂ, ಸಮಯವು ಅಧಿಕವಾದುದಕ್ಕೆ ಕಾರಣವನ್ನು ತಿಳಿಯಹೇಳಿ, ನೀಲದಿವ್ಯಾವದ ರಾಜನನ್ನು ಅವರಿಗೆ ತೋರಿಸಿ ಈತನನ್ನು ಪುತ್ರನನ್ನಾಗಿ ಮಾಡಿಕೊಂಡಿರುವೆನೆಂದು, ಹೇಳಿ ಅವರೆಲ್ಲರಿಗೂ ತಕ್ಕ ಬಹುಮಾನಗಳನ್ನುಕೊಟ್ಟು, ಸಂತೋಷಡಿಂದಿದ್ದನು. ಹೀಗೆ ಸಂತೋಷವನ್ನು ಹೊಂದಿದ ಸುಲ್ತಾನನು, ವಿಸ್ತರವನಿಗೆ, ವಿಶೇಷವಾಗಿ ಹಣವನ್ನು ಕೊಟ್ಟುದರಿಂದ, ಅವನ ಕುಟುಂಬದವರು, ಸುಖವಾಗಿದ್ದರೆಂದು ಹೇಳಿ ಷಹರಜೌದಿಯೆ, ಕಥೆಯನ್ನು ಮುಗಿಸಿದಳು. ದಿನರಜೌದಿಯು, ಅಕ್ಕಾ ! ನೀನು ಈಗಮುಗಿಸಿದ ವಿಸ್ತರವನ ಮತ್ತು ಭೂತದ ಕಥೆಯು ಕೇಳುವುದಕ್ಕೆ ಅತ್ಯಂತಮನೋಹರವಾಗಿದ್ದಿತು. ನೀನು ಕಲಿತಿರುವ ಕಥೆಗಳಲ್ಲಿ ಇದಕ್ಕಿಂತಲೂ, ಅತಿಶಯವಾದ ಕಥೆಯನ್ನು, ಹೇಳೆಂದುಕೇಳಲು, ಷಹರಜೌದಿಯು, ತಂಗೀ ! ಈಗ ಬೆಳಗಾಗಿಹೋಯಿತು. ಸುಲ್ತಾನರು ಪ್ರೀತಿಯಿಂದ ನನ್ನಪ್ರಾಣವನ್ನುಳಿಸಿದರೆ, ನಾಳೆಯ ದಿನ ಇದಕ್ಕಿಂತಲೂ, ಅತಿಶಯವಾದ ಮತ್ತೊಂದುಕಥೆಯನ್ನು ಹೇಳುವೆನೆಂದು ಸೂಚಿಸಲು, ಸುಲ್ತಾನನು, ಸುಲ್ತಾನಿಯ ಕಥಾಸಾಮರ್ಥ್ಯವನ್ನು

ಕೊನೆಮುಟ್ಟಕೇಳಬೇಕೆಂದು, ಇನ್ನೊಂದು ತಿಂಗಳವರೆಗೂ, ಅವಳನ್ನು ಕೊಲ್ಲಕೂಡದೆಂದು, ಹೇಳಿ ಹೊರಟುಹೋದನು.

೨೪ ನೆಯ ರಾತ್ರಿ ಕಥೆ,

ಮರುದಿನ ಬೆಳಗಿನಜಾವದಲ್ಲಿ ದಿನರಜಾದಿಯು, ಅಕ್ಕನನ್ನು ಏಳಿಸಿ, ಮೋಹಕಾರಿಣಿಯಾದ ಎಲೈ ಸಹೋದರಿಯೇ ! ಈದಿನ ನನ್ನವು ನಸ್ಸುಏನೋ ಒಂದು ಬಗೆಯಾಗಿರುವುದರಿಂದ ಆ ವ್ಯಸನವು ನಾಶವಾಗುವಂತೆ,ಚಮತ್ಕಾರವಾದ ಒಂದುಕಥೆಯನ್ನುಹೇಳೆಂದು ಕೇಳಿದಕೂಡಲೇಸುಲ್ತಾನನು, ಅದೇವೇರಿಗೆ ಅಪ್ಪಣೆಯನ್ನುಕೊಡಲು, ಷಹರಜಾದಿಯು, ಕಥೆಯನ್ನು ಹೇಳಲಾರಂಭಿಸಿದಳು.

ಐನುಜನೆ ಡೊರೆಸಾನಿಗಳೂ, ಬಾಗದಾದು ಪಟ್ಟಣ, ಮೂರುಜನೆ ರಾಜಕುಮಾರರು, ಇವರುಗಳನ್ನು ಕುರಿತ ಕಥೆ.

ಸಾ ್ವವಿಾ ! ಹರೋ್ಣ ಅಲರಾಶ್ಚಿ,ದನೆಂಬ ಕಲೀಫನ ಆಳಿಕೆಯಲ್ಲಿ ಬಾಗದಾದು ಪಟ್ಟಣದಲ್ಲಿ ಒಬ್ಬ ಕೂಲಿಯವನಿದ್ದನು. ಆತನು ಕಷ್ಟಸಾಧ್ಯವಾದ ನೀಚಕಾರ್ಯಗಳನ್ನೇ ಮಾಡುತ್ತಿದ್ದರೂ, ಉತ್ಸಾಹ ಚಾತುರ್ಯಗಳನ್ನು ಮಾತ್ರ ಅಧಿಕವಾಗಿ ಹೊಂದಿದ್ದನು. ಆತನು ಕೆಲಸವನ್ನು ಸಂಪಾದಿಸಿಕೊಳ್ಳುವಸ್ಥಳದಲ್ಲಿ ಒಂದುಕುಕ್ಕೆಯನ್ನಿಟ್ಟುಕೊಂಡು, ಕುಳಿತಿದ್ದನು. ಆಗ ಬಹುರೂಪವತಿಯಾದ ಒಬ್ಬ ಯೌವನಸ್ತ್ರೀಯು, ಆಮೂಲಾಗ್ರವಾಗಿ ದೇಹದತುಂಬ ಮುಸುಕುಹಾಕಿಕೊಂಡು, ಬಂದು ನನ್ನನ್ನುಕೂಗಿ ಎಲೈ ಕೂಲಿಯವನೇ ನೀನು ಈ ಕುಕ್ಕೆಯನ್ನು ತೆಗೆದುಕೊಂಡು ನನ್ನಸಂಗಡ ಬಾ ಎಂದು ಹೇಳುತ್ತಾ ವಿಲಾಸವಾಗಿ ಹುಸಿನಗೆಯೆನ್ನು ಬೀರಿದಳು. ಆ ಮಾತುಗಳನ್ನುಕೇಳಿ ಸಂತೋಷಯುಕ್ತನಾದ ಕೂಲಿಯವನು, ಈ ದಿನವೇ ಶುಭದಿವಸ, ಇದೇ ನನ್ನ ಭಾಗ್ಯೋದಯವೆಂದು, ಹೇಳುತ್ತಾ ಅವಳ ಹಿಂದೆಯೇಹೋದನು. ಆ ಡೊರೆಸಾನಿ

ಯು, ಮುಚ್ಚಿಕೊಂಡಿದ್ದ ಒಂದು ಬಾಗಿಲುಬಳಗೆಬಂದು, ಕದವನ್ನು ತಟ್ಟಲು ಕೂಡಲೇ ಗೌರವಸೂಚಕವಾದ ಬಿಳಿಯಗಡ್ಡವನ್ನು ಬಿಳಿಸಿ ಕೊಂಡಿರುವ ಒಬ್ಬ ಸನ್ಯಾಸಿಯು ಬಾಗಿಲನ್ನು ತೆರೆದುಕೊಂಡು ಬರಲು, ಅವಳು ಆತನಕೈಗೆ ಕೆಲವುರೂಪಾಯಿಗಳನ್ನುಕೊಟ್ಟಳು. ಆತನುಕೂ ಡಲೆ ಆಕೆಗೆಬೇಕಾಗಿರುವ ಪದಾರ್ಥಗಳನ್ನುವಿಚಾರಿಸಿ ತಿಳಿದುಕೊಂಡು ಒಳ ಗೆಹೋಗಿ ಕೆಲವುದಾಕ್ಷಾರದ ಬಾಡ್ಡಿಗಳನ್ನುತಂದುಕೊಟ್ಟನು. ಅವಳು ಅವುಗಳನ್ನು ನನ್ನಕೈಗೆಕೊಟ್ಟು ಹಿಂದೆಬರುವಂತೆ ಆಜ್ಞಾಪಿಸಿ, ನಾನು ನನ್ನ ಅದೃಷ್ಟವನ್ನು ಕೊಂಡಾಡುತ್ತಾ ಸಂತೋಷವನ್ನು ಹೊಂದಿ ಅವ ಳಹಿಂದೆಯೇ ಹೋದೆನು.

ಬಳಿಕ ಅವಳುಹಣ್ಣುಕಾಯಿಗಳ ಅಂಗಡಿಗೆಹೋಗಿ ತನಗೆಬೇಕಾ ಗಿರುವನಾನಾವಿಧವಾದಹಣ್ಣುಗಳನ್ನು ಸುವಾಸನೆಯುಳ್ಳಸುಂದರವಾದಅನೇ ಕಪುಷ್ಪಗಳನ್ನು ತೆಗೆದುಕೊಂಡು, ನನ್ನಕುಕ್ಕೆಯಲ್ಲಿಟ್ಟು ನನ್ನನ್ನು ಸಂ ಗಡ ಕರೆದುಕೊಂಡು, ಕಟುಕರವನ ಅಂಗಡಿಗೆಹೋಗಿ, ಅಲ್ಲಿಕೊಬ್ಬಿದ ಮೂಸವನ್ನು ತೆಗೆದುಕೊಂಡು, ಮತ್ತೊಂದಂಗಡಿಯಲ್ಲಿ ಹುಳಿಯಾಗಿರುವ ಉಪ್ಪಿನಕಾಯಿಯನ್ನು ಇದರಜೊತೆಗೆ ಖರ್ಜೂರ, ದ್ರಾಕ್ಷಿ, ಪಿಚ್ಚಿಕ್ಕೀಸು, ಅಂ ಜೂರ ಮೊದಲಾದ ಹಣ್ಣುಗಳನ್ನು ತೆಗೆದುಕೊಂಡು ಅಲ್ಲಿಂದಮುಂದೆ ಕಾಫಿ ಗೇರುಪೊಪ್ಪು, ಪಿಸ್ತಾಚ್ಚಿ, ಮೊದಲಾದ ಬೀಜಗಳನ್ನು ತೆಗೆದುಕೊಂಡು, ಅಲ್ಲಿಂದಮುಂದೆ ಮತ್ತೊಂದು ಅಂಗಡಿಯಲ್ಲಿ ಮಿಠಾಯಿಮೊದಲಾದ ಸಾಮಾ ನುಗಳನ್ನು ಕೊಂಡು, ನನ್ನಗೂಡೆಯಲ್ಲಿಡುವುದಕ್ಕೆ ಬರಲು ಅಮ್ಮ ನೀನು ಇಷ್ಟೊಂದುಪದಾರ್ಥಗಳನ್ನು ಕೊಂಡುಕೊಳ್ಳುವೆನೆಂದು ಮೊದಲೆ ನನ್ನಕೂಡಹೇಳದೆ ಹೋದೆಯೆಲ್ಲಾ ! ಹಾಗೆ ಮೊದಲೇಹೇಳಿದ್ದರೆ ಇವುಗ ಳನ್ನು ಹೊರುವುದಕ್ಕಾಗಿ ಒಂದು ಒಂಟೆಯನ್ನಾಗಲೀ, ಒಂದು ಕುದುರೆ ಯನ್ನಾಗಲಿ, ತರುತ್ತಿದ್ದೆನು. ನೀನುಹೀಗೆ ಕೊಂಚಕೊಂಚವಾಗಿ ಕೊ ಳ್ಳುತ್ತಿದ್ದರೆ, ನಾನುಹೊರುವುದಕ್ಕಿಂತಲೂ, ಅಧಿಕವಾಗುವುದೆಂದು ಚಮ ತ್ಕಾರವಾಗಿ ಹೇಳಿದನು. ಅದನ್ನುಕೇಳಿ ಆಕೆಯು, ಪುನಹ ಸಂಗಡ ಬಾ ಎಂದು ನುಡಿದಳು. ಅಲ್ಲಿಂದವಳು ಒಂದು ಪಸಾರೆ ಅಂಗಡಿಗೆಹೋಗಿ ಪನ್ನೀ ರು, ಅತ್ತರು, ಗಂಧ, ಕಸ್ತೂರಿ, ಪುನಗು, ಮೊದಲಾದ ಸುಗಂಧದ್ರವ್ಯ ಗಳನ್ನೂ, ಶುಂಠಿ, ಮೆಣಸು, ಏಲಕ್ಕಿ, ಮೊದಲಾದ ಇಂಡಿಯಾದೇಶದ

ಸಂಭಾರದ ದ್ರವ್ಯಗಳನ್ನು, ತೆಗೆದುಕೊಂಡು, ಗೂಡೆಯಲ್ಲಿಟ್ಟ ಗೂಡೆಯು ತುಂಬಿಹೋಗಿದ್ದರೂ, ಹಿಂದೆ ಬಾ ಎಂದು ಹೇಳಿದಳು.

ಅವರಿಬ್ಬರೂ ಒಂದಾನೊಂದು ಮನೋಹರವಾದ ದೊಡ್ಡ ಮನೆಯ ಬಾಗಿಲಿಗೆಬಂದು, ಕದವನ್ನು ತಟ್ಟಿದರು. ಆ ಕದವು ದಂತಮಯವಾದ ಕೆತ್ತನೆಯಕೆಲಸದಿಂದ ಕೂಡಿದ್ದಿತು. ಕೂಡಲೆ ಕದವನ್ನು ತೆರೆಯಲು, ಅವರಿಬ್ಬರೂ ಒಳಗೆ ಪ್ರವೇಶಮಾಡಿದರು. ಇಲ್ಲಿಗೆ ಬಿಳಗಾದುದರಿಂದ ಷಹರಜಾದಿಯು, ಕಥೆಯೆನ್ನು ನಿಲ್ಲಿಸಿದಳು. ದಿನರಜಾದಿಯು, ಅಕ್ಕಾ ಈ ಕಥೆಯು ಪ್ರಾರಂಭದಲ್ಲಿ ಇಷ್ಟೊಂದು ವಿನೋದಕರವಾಗಿರುವುದರಿಂದ ಇದರಲ್ಲಿರುವ ಸಂಪೂರ್ಣವಾದ ಆನಂದವನ್ನು ಸುಲ್ತಾನರು, ಅನುಭವಿಸುವರೆಂದು ನಾನು ನಂಬಿರುವೆನೆಂದು, ಹೇಳಲು ಸುಲ್ತಾನನು ಮುಂದಿನ ಕಥಾಸಂದರ್ಭವನ್ನು ಕೇಳಬೇಕೆಂಬ ಕುತೂಹಲದಿಂದ ಷಹರಜಾದಿಯನ್ನು ಕೊಲ್ಲಕೂಡದೆಂದು ಹೇಳಿ ಹೊರಟು ಹೋದನು.

೨೯ ನೆಯ ರಾತ್ರಿ ಕಥೆ

ಮರುದಿನ ರಾತ್ರಿಕಳೆದು, ಪೂರ್ವದಿಕ್ಕು ಕೆಂದಳಿರಬಣ್ಣವನ್ನು ಹೊಂದಿತು. ದಿನರಜಾದಿಯು, ಎಚ್ಚತ್ತಳು. ಕೂಡಲೆ ಷಹರಜಾದಿಯನ್ನು ನೋಡಿ ಅಕ್ಕಾ ! ನಿನ್ನೆದಿನ ನೀನು ಆರಂಭಿಸಿದಕಥೆಯನ್ನು ಕೊನೆಗಾಣಿಸೆಂದು, ಬೇಡಿಕೊಳ್ಳುವೆನೆಂದು, ಹೇಳಿದಳು. ಷಹರಜಾದಿಯು, ಅವಳ ಇಷ್ಟಾನುಸಾರವಾಗಿ, ಕಥೆಯನ್ನು ಹೇಳತೊಡಗಿದಳು. ಬಾಗಿಲನ್ನು ತೆಗೆಯುವವರೆಗೂ, ಆ ಕೂಲಿಯವನು, ದೊರೆಸಾನಿಯನ್ನುನೋಡಿ ನಾನಾಯೋಚನೆಗಳಿಂದ ಕೊರಗಿದನು. ಇಂತಹ ರೂಪವತಿಯಾದ ದೊರೆಸಾನಿಯು, ಆಹಾರಪದಾರ್ಥಗಳನ್ನು ಕೊಳ್ಳುವುದಕ್ಕಾಗಿ ಹೊರಗೆಬರಬಹುದೆ ? ಇವಳಮುಖವನ್ನು ನೋಡಿದರೆ ಇವಳು ರಾಜಪುತ್ರಿಯಂತೆ ಕಾಣುವಳು. ಆದುದರಿಂದ ಇವಳೆಂದಿಗೂ, ಕೂಲಿಕಾರಳಾದ ದಾದಿಯಲ್ಲ. ಇವೆಲ್ಲವನ್ನು ಗೊತ್ತುಮಾಡಿ ತಿಳಿದುಕೊಳ್ಳುವುದಕ್ಕಾಗಿ, ಆಕೆಯನ್ನೇಕೇಳಿ ನಿಸ್ಸಂದೇಹವಾಗಿ ತಿಳಿದುಕೊಳ್ಳಬೇಕೆಂದು, ಪ್ರಯತ್ನಮಾಡುತ್ತಿದ್ದನು. ಆಗ ಬಾಗಿಲನ್ನು ತೆಗೆವುದಕ್ಕಾಗಿ ಮತ್ತೊಬ್ಬ ರೂಪವತಿಯಾದ ಹೆಂಗಸು ಹೊರಗೆಬರಲು ಅವಳನ್ನುನೋಡಿ ಕೂಲಿಕಾರನು, ಅತ್ಯಂತಭ್ರಾಂತಿಯು

ನ್ನುಹೊಂದಿ ತನ್ನತಲೆಯೆವೋಲಿರುವ ಗೂಡೆಯೆನ್ನು ಸಾವೂನುಸಹಿತವಾ
ಗಿ ಕೆಡುವುವಂತಿದ್ದನು. ಆ ಕೂಲಿಯೆವನನ್ನು ಸಂಗಡ ಕರೆದುಕೊಂಡು
ಬಂದ ಹೆಂಗಸು, ಆತನಸ್ವಭಾವವನ್ನುನೋಡಿ ಭ್ರಾಂತನಾಗಿ ನಡುಗುತ್ತಿರು
ವುದಕ್ಕೆಕಾರಣವನ್ನುಊಹಿಸಿತಿಳಿದುಕೊಂಡು,ಅದಕ್ಕಾಗಿಸಂತೋಷವನ್ನು
ಹೊಂದಿ ಅವನ ಮುಖವನ್ನೇ ನೋಡುತ್ತಿರುವಲ್ಲಿ, ಬಾಗಿಲು ತೆರೆದಿರುವುದ
ನ್ನೇ ಮರೆತುಹೋದಳು. ಆಗ ಬಾಗಿಲನ್ನುತೆರೆದ ದೊರೆಸಾನಿಯು, ತಂ
ಗೀ ಒಳಗೆಬಾ, ಏನುಮಾಡುತ್ತಿರುವೆ, ಈ ಕೂಲಿಯೆವನು ಹೊರಲಾರದ
ಹೊರೆಯೆನ್ನು ಹೊತ್ತು ಬರುತ್ತಿರುವುದನ್ನು ಕಾಣೆಯಾ ! ಎಂದು ಹೇಳಿ
ದಳು. ಬಳಿಕ ಇವರಿಬ್ಬರೂ, ಒಳಗೆ ಪ್ರವೇಶವಾಡಿದಕೂಡಲೇ, ಬಾಗಿ
ಲನ್ನು ತೆರೆದ ದೊರೆಸಾನಿಯು, ಕದವನ್ನುಮುಚ್ಚಿದಳು. ಮೂರುಜನ
ರೂ, ಒಳಗೆಬಂದು ಸುತ್ತಲೂ, ಪೌಳಿಯೆನ್ನುಹಾಕಿರುವ ವಿಸ್ತೀರ್ಣವಾದ
ಒಂದುಸ್ಥಳಕ್ಕೆ ಬಂದುಸೇರಿದರು. ಆ ಸ್ಥಳದಲ್ಲಿ ಹೊರಗೆಹೋಗಿ ಬರು
ವುದಕ್ಕೆ ಸುರಂಗದವೂರ್ಗಗಳೂ, ಇದ್ದವು. ಇಂತಹಸ್ಥಳದಲ್ಲಿ ಬಹು
ಸುಂದರವಾದ ಒಂದು ಸೋಪಾ ಹಾಕಿದ್ದಿತು. ಅಲ್ಲದೆ ಆನಂದಕರಗಳಾದ,
ಅಮೂಲ್ಯವಸ್ತುಗಳಿಂದ ಆ ಸ್ಥಳವು ಅಲಂಕರಿಸಲ್ಪಟ್ಟಿದ್ದಿತು. ಅದ
ರಮಧ್ಯದಲ್ಲಿ ನಾಲ್ಕುಮುಖದಲ್ಲೂ ಸುಂದರವಾದ ಒಂದು ಸಿಂಹಾಸನವೂ
ಇತ್ತು. ಅದಕ್ಕೆ ಅದ್ಭುತವಾದ ಬಂಗಾರ ಕೆತ್ತನೆ ಕೆಲಸಗಳನ್ನುಮಾಡಿ,
ಪಟ್ಟೆಯೆ ಬುರುಸ್ಸನ್ನು ಹಾಕಿದ್ದಿತು. ಆ ಅಂಗಳದಮಧ್ಯದಲ್ಲಿ ನಿರ್ಮ
ಲವಾದ ನೀರಿನಿಂದ ಕೂಡಿದ ಒಂದುಚಿಲುಮೆಯೂ, ಅದಕ್ಕೆದುರಾಗಿ ಒಂದು
ಚಂದ್ರಕಾಂತ ಶಿಲೆಯೂ, ಇದ್ದಿತು. ಆ ಚಿಲುಮೆಯೆನೀರು ಸೊಗಸಾ
ದ ಸಿಂಹಾಸನದ ಪಾದಮೂಲದಿಂದ ಹೊರಹೊರಟು ಚೆಲ್ಲಿಹೋಗುತ್ತಾ,
ಇದ್ದಿತು. ಆ ಕೂಲಿಯೆವನು, ಹೊರಲಾರದಹೊರೆಯನ್ನು ಹೊತ್ತಿದ್ದ
ರೂ, ಆ ಮನೆಯ ಸೌಂದರ್ಯವನ್ನು ಅಲ್ಲಿನಡೆಯುವ ಆಶ್ಚರ್ಯವನ್ನು
ನೋಡಿ ತುಂಬ ಸಂತೋಷವನ್ನು ಹೊಂದಿದನು.

ಹೀಗಿರುವಲ್ಲಿ ಮೂರನೆ ದೊರೆಸಾನಿಯೊಬ್ಬಳು, ಅವನ ತೊಂದ
ರೆಯನ್ನು ಪರಿಹರಿಸಿದಳು. ಆಕೆ ಎರಡನೆಯವಳಿಗಿಂತಲೂ ಅತ್ಯಂತವಾ
ದ ರೂಪಸೌಂದರ್ಯವನ್ನು ಹೊಂದಿದ್ದರೂ, ಹಿಂದೆಯೇಳಿದ ಸಿಂಹಾಸನದ

ಮೇಲೆ ಕೂತುಕೊಂಡಿದ್ದಳು. ಆಕೆ ಈ ಇಬ್ಬರನ್ನು ನೋಡಿದಕೂಡಲೆ ಸಿಂಹಾಸನವನ್ನಿಳಿದು ಹೊರಗೆಬರಲು, ಇವರುಗಳು ಅವಳಿಗೆವೂಡಿದ ಮರ್ಯಾದೆಯನ್ನು ನೋಡಿ, ಆಕೆಯೇ ರಾಣಿಯೆಂದು ಕೂಲ್ಲಿಯವನು ಊಹಿಸಿಕೊಂಡನು. ಸಿಂಹಾಸನದಮೇಲಿದ್ದ ದೊರೆಸಾನಿಯೆಹೆಸರು ಜೋಬದಿ, ಬಾಗಿಲನ್ನು ತೆಗೆದವಳಹೆಸರು ಸಫಯಿ, ಆಹಾರವಸ್ತಾರ್ಥಗಳನ್ನು ತರುವುದಕ್ಕಾಗಿಹೋಗಿದ್ದವಳಹೆಸರು,ಅವಿನಿ.ಜೋಬದಿಯೆಂಬುವಳು ಉಳಿದಇಬ್ಬರು ಹೆಂಗಸರನ್ನು ನೋಡಿ ತಂಗಿಯರೇ ! ಈ ಮನುಷ್ಯನು ತಾನುಹೊತ್ತಿರುವ ಹೊರೆಯ ಭಾರವನ್ನು ತಾಳಲಾರದೆ ತಲ್ಲಣಿಸುತ್ತಿರುವುದನ್ನು, ನೀವು ನೋಡಲಿಲ್ಲವೆ ? ಎನಲು ಕೂಡಲೆ ಅವಿನಿ, ಸಫಯಿ ಇವರಿಬ್ಬರೂ, ಆಗೂಡೆಯನ್ನಿಳಸುತ್ತಿರುವಲ್ಲಿ ಜೋಬದಿ ತಾನೂಒಂದುಕ್ಕೈಯನ್ನುಚಾಕಿ, ಇಳಿಸಿ, ಸಾವೂನುಗಳನ್ನೊಂದುಕಡೆಯಲ್ಲಿಟ್ಟು, ಗೂಡೆಯನ್ನು ಖಾಲಿ ಮಾಡಿಕೊಟ್ಟಳು. ಆಗ ಅವಿನಿ ಬಹುಧಾರಾಳವಾಗಿ ರೂಪಾಯಿಗಳನ್ನು ಕೂಲಿಯವನಿಗೆಕೊಟ್ಟಳು. ಇಷ್ಟರಲ್ಲಿ ಬೆಳಗಾದುದರಿಂದ ಷಹರಜಾದಿ ಕಥೆಯನ್ನು ನಿಲ್ಲಿಸಿ, ಉಳಿದಕಥೆಯನ್ನು ನಾಳೆಮುಗಿಸುವೆನೆಂದು, ತನ್ನ ತಂಗಿಯನ್ನು ಸುಲ್ತಾನನ್ನು, ಸವೂಧಾನಪಡಿಸಲು ದೊರೆಯು ಯಾವಮೂ ತನ್ನು ಆಡದೆ ಸುಲ್ತಾನನು, ಹೊರಟುಹೋದನು.

೩೦ ನೆಯ ರಾತ್ರಿ ಕಥೆ.

ಮರುದಿನ ಬೆಳಗಿನಜಾವದಲ್ಲಿ ದಿನರಜಾದಿಯು, ತನ್ನ ಅಕ್ಕನನ್ನು ಎಚ್ಚರಿಸಿ ಅಕ್ಕಾ ! ಆ ಸ್ತ್ರೀ ತಂದಪದಾರ್ಥಗಳನ್ನು ಏನುಮಾಡಿದರೋ, ಆ ಕಥೆಯೆನ್ನು ಹೇಳೆಂದು ಕೇಳಲು, ಷಹರಜಾದಿಯು, ಸುಲ್ತಾನನಿಂದಪ್ಪಣೆಯೆನ್ನು ಪಡೆದು, ಮುಂದೆ ಹೇಳಸಾಗಿದಳದೆಂತೆನೆ :—

ಹೀಗೆ ರೂಪಾಯಿಗಳನ್ನು ತೆಗೆದುಕೊಂಡಬಳಿಕ ಕೂಲಿಯವನು ಅತ್ಯಂತವಾದ ಆನಂದವನ್ನುಹೊಂದಿ ಹೊರಟುಹೋದನೇಹೊರತು, ಮನಸ್ಸನ್ನು ಹಿಡಿಯಲಾರದೆ ಹೋದನು. ಅವಿನಿಯು, ಮೇಲುಮುಸುಕನ್ನು ತೆಗೆದಮೇಲೆ ಅವರಿಗಿಂತಲೂ, ರೂಪವತಿಯಾಗಿಯೇ ಇದ್ದಳು. ಅವರು ಮೂವರು ಸಮಾನವಾದ ಸೌಂದರ್ಯವನ್ನು ಹೊಂದಿದವರಾದುದರಿಂದ ತಾನುಹೊರಗೆ ಸಾಗಿಹೋಗಲಾರದೆ, ಅಲ್ಲಿಯೇನಿಂತು ಅವರನ್ನು ನೋಡಿ,

ನೋಡಿ, ಆನಂದವನ್ನು ಹೊಂದುತ್ತಿದ್ದನು. ಆದರೆ ಆತನು ಆ ಮನೆಯಲ್ಲಿ ಯಾರೂ ಗಂಡಸರಿಲ್ಲದಿರುವುದನ್ನು ನೋಡಿ, ವಿಸ್ಮಯವಿ, ಮಧ್ಯವೊದಲಾದ ದುಷ್ಟರಿಗೆ ಬೇಕಾಗುವ ಪದಾರ್ಥಗಳನ್ನು ಇವರುತಂದುಕೊಂಡು, ಏನುಮಾಡುತ್ತಾರೋ ನೋಡಬೇಕೆಂಬ, ಕುತೂಹಲ ಯುಕ್ತನಾದನು. ಜೋಬದಿಯು, ಆ ಕೂಲಿಯವನು, ತನ್ನ ಬಳಲಿಕೆಯನ್ನು ಹೋಗಲಾಡಿಸಿಕೊಳ್ಳುವುದಕ್ಕಾಗಿ ನಿಂತಿರುವನೆಂದುಕೊಂಡಳು. ಆದರೆ ಅವನು ಬಹಳ ಹೊತ್ತು ಅಲ್ಲಿ ನಿಂತಿರುವುದನ್ನು ನೋಡಿ, ಏತಕ್ಕಾಗಿ ನೀನು ಹೀಗೆನಿಂತಿರುವೆ ಎಂದು ಹೇಳಿ, ಅವನಿಯನ್ನು ಕುರಿತು ಈತನಿಗೆ ಇನ್ನೂ ಏನಾದರೂಕೊಡು. ಇವನುಸಂತೋಷವಾಗಿಹೋಗಲಿ, ಎಂದುಹೇಳಿದಳು. ಅಮ್ಮಾ ನಾನು ಅದಕ್ಕೊಕ್ಕೀಸ್ಕರವಾಗಿ ನಿಲ್ಲಲಿಲ್ಲ, ನನಗೆ ಕೊಡಬೇಕಾದುದಕ್ಕಿಂತಲೂ ಹೆಚ್ಚಾಗಿಯೆ ದುಡ್ಡು ಕೊಟ್ಟಿರುವರು. ಆದರೆ ನಾನು ಇಲ್ಲಿರುವುದು, ಮರ್ಯಾದೆಯೆಲ್ಲವೆಂದು, ತಿಳಿದುಕೊಂಡಿದ್ದರೂ, ಒಂದಾನೊಂದು ವಿಷಯವನ್ನು, ಕೇಳಿಕೊಳ್ಳುವೆನು. ಅದಕ್ಕಾಗಿ ನನ್ನನ್ನು ಮನ್ನಿಸಬೇಕೆಂದು ಬೇಡಿಕೊಳ್ಳುವೆನು. ಏನಂದರೆ ಅಮ್ಮಾ! ಮಹಾ ಸೌಂದರ್ಯವತಿಯರಾದ ನಿಮ್ಮಂತಹ ಯೌವನಸ್ತ್ರೀಯರು, ಪುರುಷರಿಲ್ಲದಕಡೆಯಲ್ಲಿರುವುದನ್ನು ನೋಡಿ ನನಗೆ ತುಂಬ ಆಶ್ಚರ್ಯವಾಗಿ, ಸ್ತ್ರೀಯರಿಲ್ಲದೆ ಬರಿಯ ಪುರುಷರೇ ಗುಂಪುಕೂಡಿಕೊಂಡಿರುವುದು, ಹೇಗೆ ವ್ಯಸನಕರವೋ, ಹಾಗೆಯೇ ಪುರುಷರಿಲ್ಲದೆ ಸ್ತ್ರೀಯರೇ ಇರುವುದು ಮಹಾ ವ್ಯಸನಕರವೆಂಬುದು ತಮಗೆಗೊತ್ತೇಇಹೆ. ಇದಕ್ಕಾಗಿ ತಾನುನೋಡಿದ ಅನೇಕದೃಷ್ಟಾಂತಗಳನ್ನು ಹೇಳಿ, ಬಾಗದಾದು ಪಟ್ಟಣದಲ್ಲಿ ಜನರು ವಾಡಿಕೆಯೆಂತಾಗಿಹೇಳುತ್ತಿರುವ, ಜೋಜನಕಾಲದಲ್ಲಿ ನಾಲ್ಕುಜನರು ಸೇರಿದಹೊರತು, ಅವರ ಸುಖವು ಗೊತ್ತಾಗುವುದಿಲ್ಲವೆಂದು, ಹೇಳುವಸಾಮತಿಯನ್ನು ವಿವರಿಸಿ, ನೀವೀಗ ಮೂವರಿರುವರಾದುದರಿಂದ ನಿಮಗೆ ನಾಲ್ಕನೆಯವನು, ಬೇಕೆಂದುಹೇಳಲು, ಆಮೂತುಗಳನ್ನುಕೇಳಿ ಅವರುಮೂವರು, ಹುಸುನಗೆಯನ್ನು ನಕ್ಕರು. ಆಗ ಜೋಬದಿಯು, ಸ್ನೇಹಿತನೇ ! ನೀನು ನಾವುಹೇಳುವ ವಾಕ್ಯವನ್ನು ಕೇಳುವುದಕ್ಕೆ ಅರ್ಹನಲ್ಲದಿದ್ದರೂ, ನಮ್ಮಚರಿತ್ರೆಯನ್ನು ನಿನ್ನ ಸಂಗಡ ಹೇಳುವೆವು. ನಾವು ಮೂರುಜನಗಳೂ ಅಕ್ಕತಂಗಿಯರು, ನಾವು ಮಾಡುವ ಕೃತ್ಯಗಳನ್ನು ಇತರಜನರು ತಿಳಿಯದಂತೆ ರಹಸ್ಯವಾಗಿ

ನೆರವೇರಿಸಬೇಕೆಂದಿರುವೆವು. ನಾವು ಓದಿದ ಉತ್ತಮವಾದ ಗ್ರಂಥಗಳಲ್ಲಿ ಹೇಳಿರುವುದೇನಂದರೆ, ನಿನ್ನರಹಸ್ಯವನ್ನು ಯಾರಿಗೂತಿಳಿಯದಂತೆ ಮರೆ ಮಾಚಿಕೊಂಡಿರಿ. ಅದು ಮತ್ತಾರಿಗಾದರೂ ತಿಳಿದರೆ ನಿಮ್ಮ ಸ್ವಾಧೀನದಲ್ಲಿರಸಲ್ಲದು. ನಿನ್ನ ಹೃದಯವೇ ನಿನ್ನರಹಸ್ಯವನ್ನು ಕಾಪಾಡಿಕೊಳ್ಳದೇಹೋದರೆ, ಅದನ್ನು ಕಾಪಾಡುವವರು ಮತ್ತಾರು, ಎಂದು ಹೇಳಿರುವುದೆಂದು, ಜೋಬದಿಯೆಯು, ಗಂಭೀರಧ್ವನಿಯಿಂದ ನುಡಿದಳು.

ಎಲ್ಮೈ ದೊರೆಸಾನಿಗಳೆ ನಿಮ್ಮ ಮುಖವನ್ನು ನೋಡಿದಾಗ ನೀವು ಯೋಗ್ಯರಾದ ಸ್ತ್ರೀಯೆಂದು, ನಾನುಯೋಚಿಸಿ ಮೊದಲೆ ತಿಳಿದುಕೊಂಡೆನು. ಅದು ನಿಶ್ಚಯವೇ ಆಯಿತು. ನಾನು ಯಾವಾಗಲು ಮೂಡುತ್ತಿರುವ, ಅಲ್ಪಕರ್ಮದಿಂದ ಸುಖವಾದಜೀವನವನ್ನು ಸಂಪಾದಿಸಿಕೊಳ್ಳಲಾರದೆ ಹೋದರೂ, ಉತ್ತಮವಾದ ಗ್ರಂಥಗಳನ್ನು ಓದಿ, ವೃದ್ಧಿಕರವಾದ ಬುದ್ಧಿಯನ್ನು ಹೊಂದಿರುವೆನು. ನಾನು ಓದಿರುವ ಬಂದಾನೊಂದು ಗ್ರಂಥದಲ್ಲಿ ಹೇಳಿರುವುದೇನುಂಟೋ ಅದರಂತೆ ನಾನು ಸರ್ವದಾನಡೆದುಕೊಳ್ಳುತ್ತಿರುವೆನು. ತಾವು ಕೇಳಬೇಕೆಂದರೆ ಹೇಳುವೆನು, ಏನಂದರೆ, ವಿವೇಕಶೂನ್ಯರಾಗಿ ನಂಬಿಕೆಗೆ ಅರ್ಹರಲ್ಲದವರಲ್ಲಿ ಪ್ರಸಿದ್ಧರಾದವರಿಗೂ, ತಂತಮ್ಮ ರಹಸ್ಯಗಳನ್ನು ಹೇಳಬಾರದು. ಅವರು ಅದನ್ನು ಬಯಸಲುಮಾಡುವರು. ಆದಕಾರಣ ಅನರ್ಹರು, ಆದರೆ ಬುದ್ಧಿವಂತರಾಗಿ ನಿವೇಕಶಾಲಿಗಳಾಗಿರುವವರಲ್ಲಿ ರಹಸ್ಯವನ್ನು ಹೇಳುವವಿಷಯದಲ್ಲಿ ಯಾವ ಅನುಮಾನವೂ, ಇಲ್ಲವೆಂದು, ಹೇಳಿರುವುದು. ಆದುದರಿಂದ ನನಗೆ ತಿಳಿಸಿದರಹಸ್ಯವು ಬೀಗವನ್ನು ಹಾಕಿ, ಮುದ್ರಿಸಿರುವುದು, ಯಾರಿಗೂ ತಿಳಿಯದಿದ್ದರೆ, ಎಷ್ಟು ಭದ್ರವಾಗಿರುವುದೋ ಅಷ್ಟು ಭದ್ರವಾಗಿರುವುದೆಂದು, ಹೇಳಿದನು.

ಆ ಕೂಲಿಯವನು, ಬುದ್ಧಿವಂತನೆಂದೂ, ತಮ್ಮ ಔತಣದಊಟ ಮಾಡಲು ಕಾದಿರುವನೆಂದೂ ಯೋಚಿಸಿ ಜೋಬದಿಯೆಯು, ಆತನನ್ನುನೋಡಿ ಅಯ್ಯಾ! ನೀನುನಮ್ಮ ಔತಣವನ್ನು ಭೋಜನ ಮಾಡಬೇಕಾದರೆ, ನಮಗೆಯೇನಾದರೂ, ಸಹಾಯವಮಾಡಬೇಕೆಂದು ನುಡಿದಳು. ಅದನ್ನು ಕೇಳಿ ಸಫಯಿಯು, ಅಯ್ಯಾ! ನೀನು ಏನಾದರೂ ತಂದರೆ ಬಾ ಇಲ್ಲವಾದರೆ ಬರಬೇಡವೆಂದು ಹೇಳುವ ಲೋಕರೂಢಿಯನ್ನು ನೀನುಕೇಳಿಲ್ಲವೆ ?

ಎನಲು, ಕೂಲಿಯೆವನು, ತಾನೆಷ್ಟು ಚತುರನಾಗಿದ್ದರೂ, ಅವರಿಗೆತಕ್ಕ ಉತ್ತರವನ್ನು ಹೇಳಲಾರದೆ, ಹಿಂದಿರುಗಿ ಹೋಗುವದರಲ್ಲಿದ್ದನು. ಅದನ್ನುನೋಡಿ ಅವಿನಿಯು, ಜೋಬದಿ, ಸಭಯಿ, ಇವರುಗಳನ್ನು ನೋಡಿ, ಅಕ್ಕಾ ! ಈತನನ್ನು ಇಲ್ಲಿಯೇ ಇರಿಸಿಕೊಂಡು, ಊಟವೂಡುವಂತೆ ಮಾಡಬೇಕೆಂದು, ನಿಮ್ಮನ್ನುಬೇಡಿಕೊಳ್ಳುವೆನು, ಇವನನ್ನುನೋಡಿದರೆ ನಮಗೆ ಸಂತೋಷವನ್ನುಂಟುಮಾಡುವನಂತೆ ತೋರುವುದು, ಆತನು, ನಮಗೆ ಸಂತೋಷವನ್ನುಂಟುಮಾಡುವುದರಲ್ಲಿ, ಸಮರ್ಥನೆಂಬುದು, ನಿಮಗೆ ಚೆನ್ನಾಗಿಯೇ ತಿಳಿದಿರುವುದಲ್ಲಾ ! ಅದಕ್ಕೆ ಈತನು ನನ್ನಸಂಗಡಬರುವಾಗ್ಯೆ ಸಂತೋಷದಿಂದಲೂ, ಉಲ್ಲಾಸದಿಂದಲೂ, ಚಟುವಟಿಕೆಯಾಗಿ ಕೆಲಸಮಾಡುತ್ತ ವಿನೋದಕರಗಳಾದ, ಮಾತನಾಡುತ್ತಬಂದುದರಿಂದ ನಾನು ಇಷ್ಟೊಂದು ಜಾಗ್ರತೆಯಾಗಿ ಸಾಮಾನುಗಳನ್ನು ತೆಗೆದುಕೊಂಡು ಬಂದೆನು. ಮತ್ತು ಆತನು ನನ್ನ ಸಂಗಡಬರುತ್ತಿರುವಾಗ್ಗೆ ಆಡಿದ ಪ್ರಿಯವಚನಗಳನ್ನು ನೀವುಕೇಳಿದರೆ, ನನ್ನಂತೆಯೇ ಮನಸ್ಸನ್ನುಹೊಂದಿ, ತೃಪ್ತಿಪಡುವಿರಿ. ಎಂದು ಹೇಳಲು, ಕೂಲಿಯೆವನು, ಅತ್ಯಾನಂದವನ್ನು ಹೊಂದಿ, ಅವಳಮುಂದೆ ವೀರಮಂಡಿಯೆಯಾರಿ ಕುಳಿತುಕೊಂಡು, ಭೂವಿಯನ್ನು ಮುತ್ತಿಟ್ಟುಕೊಂಡು, ಅವಳನ್ನುನೋಡಿ, ಸುಂದರೀಮಣಿ ! ನೀನು ಈದಿನ ನನಗೆ ಸಂಪೂರ್ಣವಾದ ಅದೃಷ್ಟವನ್ನುಂಟುಮಾಡುವುದಕ್ಕೆ ಪ್ರಯತ್ನಪಟ್ಟಿರುವುದರಿಂದ, ನಾನು ತುಂಬ ಕೃತಜ್ಞನಾಗಿರುವೆನೆಂದು, ಹೇಳುತ್ತಾ, ಆ ಮೂವರು ಅಕ್ಕ ತಂಗಿಯರನ್ನುನೋಡಿ, ನೀವುಗಳು ನನಗೆ ಇಷ್ಟೊಂದು ಗೌರವವನ್ನು ನಡೆಸಿದುದಕ್ಕಾಗಿ, ನಾನು ಸಂತೋಷಪುರಸ್ಸರವಾಗಿ ಅನುಮೋದಿಸಿ, ನಿಮ್ಮನ್ನು ವಂದಿಸುತ್ತಿರುವನೇ ಹೊರತು, ನಾನು ಅದಕ್ಕೆ ಪಾತ್ರನೆಂದು ಎಂದಿಗೂ ಹೇಳಲಾರೆನು.

ಅಲ್ಲದೆ ನಿಮ್ಮ ಚಾಕರರಲ್ಲೊಬ್ಬರನ್ನು ಸರ್ವದಾಧ್ಯಾನವೂಡುತ್ತಾ ಇರುವೆನೆಹೊರತು, ಮತ್ತು ಚೀರೆಇಲ್ಲವೆಂದು, ತನ್ನ ಕೈಯ್ಯಲ್ಲಿದ್ದ ರೂಪಾಯಿಗಳನ್ನು, ಜೋಬದಿಯ ಕೈಗೆ ಕೊಡುವುದಕ್ಕೆ ಹೋಗಲು, ಅವಳು ನಾನಿದನ್ನು ತೆಗೆದುಕೊಳ್ಳುವುದಿಲ್ಲ. ನೀನುಮಾಡಿದ ಕೂಲಿಗಾಗಿ ಕೊಟ್ಟುದುದೆಂದು ಹೇಳಿದಳು. ಆಗ ಸೂರ್ಯೋದಯವಾಯಿತೆಂದು, ರಾಣಿಯು ಕಥೆಯನ್ನು ನಿಲ್ಲಿಸಿದಳು. ದಿನರಜೋದಿಯು, ಅಕ್ಕಾ ಇಂತಹಸ್ಥ

ಳದಲ್ಲಿ ಕಥೆಯನ್ನು ನಿಲ್ಲಿಸಿದುದರಿಂದ ನನ್ನ ಮನಸ್ಸಿಗೆ ತುಂಬ ವ್ಯಸನವುಂ ಟಾಗುತ್ತಿರುವುದು. ಈ ಕಥೆಯು, ಕೊನೆಮುಟ್ಟುವವರೆಗೂ, ನನಗೆ ಸುಖವಾಗದೆಂದು, ಹೇಳಲು ಷಹರಜಾದಿಯು, ಈಗ ಅರುಣೋದಯವಾ ದುದರಿಂದ ಇಂದಿನರಾತ್ರಿ, ಈ ಕಥೆಯನ್ನು ಪೂರ್ತಿಮಾಡುವೆನೆಂದು, ಹೇ ಳಲು ಸುಲ್ತಾನನು, ಆ ಮೂವರು ಸ್ತ್ರೀಯರ ಮತ್ತು ಕೂಲಿಯವನ ಕ ಥೆಯನ್ನು ಕೇಳಬೇಕೆಂಬ ಕುತೂಹಲದಿಂದ, ಯಾವಮಾತನ್ನು ಆಡದೆ, ಸುಮ್ಮನೆ ಹೊರಟು ಹೋದನು.

೩೧ ನೆಯ ರಾತ್ರಿ ಕಥೆ.

ಮರುದಿನ ದಿನರಜಾದಿಯು, ಸುಲ್ತಾನರನ್ನು ಮೊದಲು ಎಚ್ಚ ರಗೊಳಿಸಿ, ಬಳಿಕ ಅಕ್ಕನನ್ನುಕೂಗಿ, ಅಕ್ಕಾ! ನಿನಗೆ ನಿದ್ರೆ ಬಾರದೆ ಇದ್ದರೆ, ಆ ಮೂರುಜನ ಸ್ತ್ರೀಯರ ಮತ್ತು ಕೂಲಿಕಾರನ ಕಥೆಯನ್ನು ಕೊನೆಸಾಗಿಸು. ಸುಲ್ತಾನರು, ಇದಕ್ಕೊಸ್ಕರವಾಗಿ ಕಾದುಕೊಂಡಿರು ವರೆಂದು, ಹೇಳಲು, ಷಹರಜಾದಿಯು, ಕಥೆಯನ್ನು ಹೇಳಲಾರಂಭಿಸಿದ ಳು. ಸುಲ್ತಾನರೇ! ಜೋಬದಿಯು, ಕೂಲಿಯವನು, ಕೊಡುವುದಕ್ಕೆ ಬಂದ ರೂಪಾಯಿಗಳನ್ನು ತೆಗೆದುಕೊಳ್ಳದೆ, ಸ್ನೇಹಿತನೇ! ನೀನು ನಮ್ಮ ಜೊತೆಯಲ್ಲಿರುವುದಕ್ಕೆ ನಾವುಗಳು ಸಮ್ಮತಿಸಿರುವುದರಿಂದ ನೀನು ಈ ರ ಹಸ್ಯವನ್ನು ಹೊರಹಾಕದೆ ಉಳಿಸಿಕೊಳ್ಳಬೇಕು. ಇದು ಅಲ್ಲದೆ ನೀನು ಅತ್ಯಂತ ವಿನಯದಿಂದಲೂ, ಎಚ್ಚರಿಕೆಯಿಂದಲೂ, ನಡೆದುಕೊಳ್ಳಬೇಕೆಂ ದು, ನಾನು ಈಗಲೆ ಹೇಳುತ್ತಿರುವೆನು. ಎಂದು ಜೋಬದಳು. ಇಷ್ಟರ ಲ್ಲಿ ಆವಿನಿಯು, ತಾನು ಮೊದಲುಹಾಕಿಕೊಂಡಿದ್ದ ಮುಸುಕನ್ನು ತೆಗೆದು ಹಾಕಿ ಕೆಲಸಮಾಡುವುದಕ್ಕೆ ತಕ್ಕಹಾಗಿರುವ ಮಲಗುವಮನೆಯ, ಬಟ್ಟೆ ಗಳನ್ನು ಹಾಕಿಕೊಂಡಳು. ಕೂಡಲೇ ತಾನುತಂದ ಮೂಸವನ್ನು ಒಂ ದುಮೇಜಿನಮೇಲೆ ಇಟ್ಟುಕೊಂಡು, ಮತ್ತೊಂದರಲ್ಲಿ ಉಳಿದಪದಾರ್ಥಗಳ ನ್ನು ಸಿದ್ಧಪಡಿಸಿ, ಸಾರಾಯಿಗಳನ್ನು, ಬುಗಾರದ ಬಟ್ಟಲನ್ನು ಇಟ್ಟು ಕೊಂಡಳು. ಇಷ್ಟರಲ್ಲಿ ದೊರೆಸಾನಿಯು, ಕೂಲಿಕಾರನನ್ನು ತಮ್ಮ ಸಂಗಡ ಕೂಡಿಸಿಕೊಂಡಳು. ಹೀಗೆ ಆತನು ಸುಂದರಾಂಗಿಯೆರಾದ ಮೂ ರುಮಂದಿ ಸ್ತ್ರೀಯರಜೊತೆಯಲ್ಲಿ ಕೂತುಕೊಂಡಿರುವುದರಿಂದ ಮಹಾಸಂ

ತೋಷಭರಿತನಾದನು. ಬಳಿಕ ಆವಿನಿಯು, ಪಕ್ಕದಲ್ಲಿರುವ ಮತೊಂದು ಮೇಜಿನಮೇಲಿದ್ದ ಸಾರಾಯಿಯೆನ್ನು, ಚಿನ್ನದಬಟ್ಟಲಿನಲ್ಲಿ ಹೊಯ್ದುಕೊಂಡು, ಪದ್ಧತಿಯಪ್ರಕಾರ ತಾನುಮೊದಲುಕುಡಿದು ನಂತರ ತನ್ನ ಅಕ್ಕಂದಿರಿಗೆಕೊಟ್ಟ ಕೊನೆಯಲ್ಲಿ ನಾಲ್ಕನೆಯಸಾರಿ ಬಟ್ಟಲತುಂಬ, ಸಾರಾಯಿಯೆನ್ನು ತುಂಬಿ ಕೂಲಿಕಾರನಕೈಗೆಕೊಡಲು, ಆತನು ಬಹಳ ವಿಶ್ವಾಸದಿಂದದನ್ನು ತೆಗೆದುಕೊಂಡು ಅವಳಕೈಯನ್ನು ಮುತ್ತಿಟ್ಟು ಕೊಂಡು, ಒಂದು ಹಾಡನ್ನು ಹೇಳಿದನು.

ಅದು ಗಾಳಿಯು ಹೊಡೆದುಕೊಂಡು, ಬರುವ ಸುಗಂಧದ್ರವ್ಯಗಳ ಪರಿಮಳವನ್ನು ತನ್ನಸಂಗಡ ತೆಗೆದುಕೊಂಡುಬಂದಹಾಗೆ, ತಾನು ಕುಡಿಯುತ್ತಿರುವ ಸಾರಾಯಿಯೆ, ಆ ಸುಂದರೀಮಣಿಯು ಮುದ್ದು ಕೈಗಳಿಂದ ತಂದುದರಿಂದ ಸ್ವಭಾವವಾದ ರುಚಿಗಿಂತಲೂ, ಹೆಚ್ಚಾಗಿರುವುದೆಂದು, ಹೇಳುವ ಭಾವವನ್ನೊಳಕೊಂಡಿತ್ತು. ಅವರು ಈ ಹಾಡನ್ನು ಪರಮೋತ್ಸಾಹದಿಂದ ಭೋಜನಕಾಲವನ್ನು ಕಳೆದರು. ಹೀಗೆ ಭೋಜನವನ್ನು ಮಾಡುತ್ತಿರುವಾಗಲೇ ಸಂಜೆಯಾಗಲು ಸಭೆಯಿಯು, ತನ್ನ ಅಕ್ಕಂದಿರನ್ನೂ, ಕೂಲಿಯವನನ್ನು ನೋಡಿ, ನೀನು ಇನ್ನುಮೇಲೆ ಇಲ್ಲಿರಕೂಡದು ಹೊರಹೊರಡೆಂದು ಹೇಳಿದಳು. ಆ ಮಾತುಗಳನ್ನುಕೇಳಿ ದೊರೆಸಾನಿಗಳೆ ನಿಮ್ಮಂತಹ ಉತ್ತಮರಸಹವಾಸವನ್ನು ತೊರೆದು, ನಾನೆಲ್ಲಿಗೆಹೋಗಲಿ ನಾನು ಇಲ್ಲಿಗೆಬಂದು ಬಹಳಹೊತ್ತಿನಿಂದಲೂ, ವಿಚಿತ್ರವಿನೋದವಾದ ವಿಷಯಗಳನ್ನು ಸಂಪೂರ್ಣವಾಗಿ ನೋಡಬೇಕೆಂಬ, ಕುತೂಹಲದಿಂದ ಕಾಲವನ್ನು ಕಳೆಯುತ್ತಿದ್ದೆನು. ಅಲ್ಲದೆ ನಾನು ಮನೆಗೆಹೋಗುವುದಕ್ಕೆ ಬಂದ ಮಾರ್ಗವನ್ನು ಮರೆತುಬಿಟ್ಟೆನಲ್ಲಾ ! ಆದುದರಿಂದ ನನಗೆ ಮುದವೀರಿರುವುದು, ಈಮರವು ಇಳಯುವವರೆಗೂ, ಇಲ್ಲಿಯೇ ನೀವು ತೋರಿಸಿದಸ್ಥಳದಲ್ಲಿ ಮಲಗಿ ರಾತ್ರಿಯನ್ನು ಕಳೆಯುವೆನು. ಹಾಗಲ್ಲದೆ ಈಗಲೇ ನಾನು ಹೋಗಲಾರೆನು. ಅಲ್ಲದೆ ನನ್ನ ಮುಖ್ಯಾಂಶವಾದ ಮನಸ್ಸೂಕೂಡ ಇಲ್ಲಿ ಇರುವುದೆಂದು ಹೇಳಿದನು. ಆ ಮಾತನ್ನುಕೇಳಿ ಅವಿನಿಯು, ತನ್ನ ಅಕ್ಕಂದಿರನ್ನುಕುರಿತು, ಅಕ್ಕಾ ! ಈತನು ಹೇಳುವುದೇನೋನಿಜ ಅಲ್ಲದೆ ನಮಗೆ ಭೋಜನಕಾಲದಿಂದಲೂ, ಉತ್ಸಾಹವನ್ನುಂಟುಮಾಡಿರುವನು. ಆದುದರಿಂದ ಇವನುಈದಿನಇಲ್ಲಿಯೆ ಇರುವಂತೆಮಾಡಿಸಬೇಕೆಂದು ಹೇಳಲು,ಜೋ

ಬಿಡಿಯೊ, ಕೂಲಿಯವನನ್ನು ಕುರಿತು; ಇನ್ನೊಂದುಸಾರಿ ನಿನ್ನಿಷ್ಟಾರ್ಥವನ್ನು ನೆರವೇರಿಸುವೆವು. ಆದರೆ ನೀನುಮಾತ್ರ ನಾವು ಏನುಮಾಡಿದಾಗ್ಯೂ ಅದಕ್ಕೆ ಸಮ್ಮತಿಪಡುತ್ತಿರಬೇಕು. ಅಲ್ಲದೆ ನಿನಗೆ ಸಂಬಂಧಪಡದ ಕಾರ್ಯದಲ್ಲಿ ನೀನು ನಮ್ಮನ್ನುಕುರಿತು, ಯಾವಪ್ರಶ್ನೆಯನ್ನು ಮಾಡಕೂಡದು. ಇದೆಲ್ಲವನ್ನು ಚೆನ್ನಾಗಿತಿಳಿದುಕೊಂಡು, ಅದರಂತೆ ನಡೆದುಕೊಳ್ಳಲು ಸಮ್ಮತಿಸಬೇಕೆಂದು, ಈಗಲೆ ಎಚ್ಚರಿಸಿರುವೆನೆಂದು ಹೇಳಿದಳು.

ಆ ಮಾತುಗಳನ್ನು ಕೇಳಿ ಆತನು, ನೀವು ಹೇಳಿದ ಪ್ರಕಾರವೇ ತಪ್ಪದಂತೆ ನಡೆದುಕೊಳ್ಳುವುದರಿಂದ, ನಾನು ನಿನ್ನಕೋಪಕ್ಕೆ ಪಾತ್ರನಾಗಿ ದಂಡನೆಗೆ ಗುರಿಯಾಗುವಂತಹ ಮಂದಬುದ್ಧಿಯನ್ನು ತೊರೆದು ಬಿಟ್ಟಿರು ಅಲ್ಲದೆ ನನ್ನ ಲಕ್ಷಣವಾದ ಕನ್ನಡಿಯಂತೆ ಈ ವಿಷಯದಲ್ಲಿ ನಡೆದುಕೊಳ್ಳುವೆವು. ಎಂದುಹೇಳಲು ಜೋಹದಿಯೊ ಸ್ನೇಹಿತನೇ ನಿನಗೆ ಹೊಸದಾಗಿ ಹೇಳಬೇಕಾಗಿರುವ ಮತ್ತೊಂದು ವಿಷಯವುಂಟು. ಆದುದರಿಂದ ನೀನು ನಮ್ಮತಲೆ ಬಾಗಿಲಪಕ್ಕದಲ್ಲಿ ಗೋಡೆಯಮೇಲಿಬರೆದಿರುವ ಅಕ್ಷರಗಳನ್ನು ಓದಿನೋಡಿಕೋ ! ಎಂದುಹೇಳಿದಳು. ಕೂಲಿಯವನು ಅಲ್ಲಿಗೆಹೋಗಿ ಬಂಗಾರದ ಮುಲಾಮಿನಿಂದ ಬರೆದಿರುವ ದೊಡ್ಡ ಅಕ್ಷರಗಳುಳ್ಳ ಈ ಮಾತುಗಳನ್ನು ಓದಿಕೊಂಡನು.

ಏನಂದರೆ ತನಗೆ ಸಂಬಂಧವಿಲ್ಲದ ವಿಷಯವನ್ನು ಕುರಿತುದಮಾತನಾಡತಕ್ಕವನು, ತನ್ನಮನಃಪೂರ್ವಕವಾಗಿ ಈ ಮಾತನ್ನು ಕೇಳಬೇಕಾಗಿದೆ. ಎಂದು ಓದಿಕೊಂಡು, ಆತನು ಮೂರುಜನದೊರೆಸಾನಿಯರ ಬಳಗೆಬಂದು, ನನಗೆ ಸಂಬಂಧವಿಲ್ಲದ ವಿಷಯಗಳನ್ನುಕುರಿತು, ನಾನುಕೇಳುವುದೂ, ಅದನ್ನು ನೀವುಹೇಳುವುದೂ, ಲೇಶಮಾತ್ರವೂ ಆವಶ್ಯಕವಿಲ್ಲವೆಂದು ಪ್ರಮಾಣಪೂರ್ವಕವಾಗಿ ಹೇಳಿದನು. ಹೀಗೆ ನಿಷ್ಕರ್ಷೆಯಾದ ಮೇಲೆ ಆವಿನಿಯೊ ಸುಗಂಧದ್ರವ್ಯಗಳಿಂದಕೂಡಿ ಸುಂದರವಾದ ಮೇಣದಬತ್ತಿಗಳಿಂದ ದೀಪವನ್ನುಹೊತ್ತಿಸಿ, ರಾತ್ರಿಭೋಜನಕ್ಕಾಗಿ ತಕ್ಕಪದಾರ್ಥಗಳನ್ನು ಸಿದ್ಧವಡಿಸಿಕೊಂಡು, ತನ್ನ ಅಕ್ಕಂದಿರ ಮತ್ತು ಕೂಲಿಯವನ ಪಕ್ಕದಲ್ಲಿ ಕುಳಿತುಕೊಂಡಳು. ಆಗ ಅವರೆಲ್ಲರೂ ಭೋಜನವನ್ನುಮಾಡುತ್ತಲೂ, ಸಂಗೀತವನ್ನುಹಾಡುತ್ತಲೂ, ಸಾರಾಯಿಯೆನ್ನು ಕುಡಿಯುತ್ತಲೂ, ಪರಮೋತ್ಸಾಹದಿಂದ ಆತನಿಗೂ, ಕುಡಿಸಿ, ಮಹತ್ತಾದ ಮತ್ತು

ಬರುವಂತೆ ಮಾಡಿ ತಂತಮ್ಮಲ್ಲಿ ವಿನೋದಕರವಾದ ಮಾತುಗಳನ್ನಾಡುತ್ತಾ ಇದ್ದರು. ಆಗ ಯಾರೋಬಂದು ಬಾಗಿಲುತಟ್ಟಿದಶಬ್ದವನ್ನು ಕೇಳಿದರು. ಕೂಡಲೆ ಬೆಳಗಾಗದುದರಿಂದ ಕಥೆಯನ್ನುಹೇಳದೆ ಷಹರಜಾದಿಯು, ಸುಮ್ಮನಾದಳು. ಸುಲ್ತಾನನು, ಆ ಕಥೆಯನ್ನು ಪೂರ್ತಿಯಾಗಿ ಕೇಳಬೇಕೆಂದು, ಎದ್ದು ಸುಮ್ಮನೆ ಹೊರಟುಹೋದನೇ ಹೊರತು, ಯಾವನಿಧವಾದ ಆಜ್ಞೆಯನ್ನು ಮಾಡಲಿಲ್ಲ.

೩೦ ನೆಯ ರಾತ್ರಿ ಕಥೆ.

ಮರುದಿನ ದಿನರಜಾದಿಯು, ಜೀಗನೆದ್ದು ಅಕ್ಕಾ ! ನಿನಗೆನಿದ್ರೆ ಬಾರದೆ ಇದ್ದರೆ ಆ ಮೂವರುದೊರೆಸಾನಿಗಳ ಕಥೆಯನ್ನು ಹೇಳು. ಅವರವಮನೆಗೆಬಂದು ಬಾಗಿಲನ್ನುತಟ್ಟಿದವರು, ಯಾರೆಂಬುದನ್ನು ತಿಳಿದುಕೊಳ್ಳಬೇಕೆಂದು, ನನಗೆತುಂಬ ಕುತೂಹಲವಿರುವುದೆಂದು, ನುಡಿಯಲು, ಷಹರಜಾದಿಯು, ಸುಲ್ತಾನನಿಂದ ಅನುಮತಿಯೆನ್ನು ಹೊಂದಿ, ಕಥೆಯನ್ನು ಹೇಳತೊಡಗಿದಳು. ಬಾಗಿಲನ್ನುತಟ್ಟಿದ ಶಬ್ದವನ್ನುಕೇಳಿ, ಆ ಮೂವರು ದೊರೆಸಾನಿಯೆರು, ಎದ್ದುಬಂದರು. ಆದರೆ ಪ್ರತಿದಿನವೂ ಸಫಯಿ, ತಾನೇ ಬಾಗಿಲನ್ನು ತೆಗೆಯುತ್ತಿದ್ದಳಾದುದರಿಂದ, ಅವಳೇಮುಂದಾಗಿ ಓಡಿಬಂದಳು. ಉಳಿದ ಇಬ್ಬರು ದೊರೆಸಾನಿಯೆರೂ, ಸಫಯಿಯು ಏನು ಮಾಡುತ್ತಾಳೋ ನೋಡಬೇಕೆಂದು, ಅಲ್ಲಿಯೇ ಕುಳಿತುಕೊಂಡಿದ್ದರು. ಸಫಯಿಯು, ಹೊರಗೆಬಂದು ಬಾಗಿಲನ್ನು ತೆಗೆದು, ಪುನಹ ಒಳಕ್ಕೆಬಂದು ಅಕ್ಕಾ ! ಈದಿನ ನಮಗೆ ಬಹು ಆನಂದಹೊಂದುವಕಾಲವು, ಬಂದಿರುವುದು. ನೀವುಕೂಡ ಇದಕ್ಕೆ ಸಮ್ಮತಿಸುವುದಾದರೆ, ಇಷ್ಟಾನುಸಾರವಾಗಿ ಸುಖವನ್ನು ಹೊಂದಬಹುದೆಂದು, ಹೇಳಿದಳು. ಅಲ್ಲದೆ ಚೆಲುವೆಯೆರಾದ ಅಕ್ಕಂದಿರಾ ! ಬಾಗಿಲಬಳಯಲ್ಲಿ ಬಹುಸುಂದರರಾದ ಮೂರುಮಂದಿ ಕಾಲೆಂಡರುಗಳು ಬಂದಿರುವರು. ಅವರವೇಷದಿಂದ ಕಾಲೆಂಡರುಗಳೆಂದು ತಿಳಿಯಬರುತ್ತದೆ. ಅವರು ಮೂರುಜನಗಳಿಗೆ ಬಲಗಣ್ಣು ಕುರುಡು, ಅವರುತಲೆಯನ್ನೂ, ಗಡ್ಡವನ್ನು, ಕಣ್ಣುಹುಬ್ಬುಗಳನ್ನು ಕತ್ತರಿಸಿಕೊಂಡಿರುವರು. ಅವರು ಯಾವಾಗಲೂ, ಇಲ್ಲಿಗೆಬಂದವರಲ್ಲವೆಂದು ರಾತ್ರಿಯಾದುದರಿಂದ ಮಲಗಿಕೊಳ್ಳುವುದಕ್ಕೆ ಸ್ಥಳವನ್ನು ಕೊಡಬೇಕೆಂದೂ ತಾವು

ಮತ್ತೆಲ್ಲೂ ಹೋಗಲಾರೆವೆಂದು, ತಮ್ಮಮೇಲೆ ಸ್ವಲ್ಪದಯೆವನ್ನು ತೋರಿಸಿದರೆ ಸಾಕೆಂದು ಬೇಡಿಕೊಳ್ಳುತ್ತಿರುವರು ಅಲ್ಲದೆ ಕುದುರೆಯೆಲಾಯದಲ್ಲಾದರೂ, ಸಂತೋಷದಿಂದ ಕಾಲವನ್ನು ಕಳೆಯುವೆವೆಂದು, ಹೇಳುವರು. ಅವರನ್ನುನೋಡಿದರೆ, ಸುಂದರಾಂಗರಾಗಿ ಕಾಣುತ್ತಿರುವರಲ್ಲದೆ ಬುದ್ಧಿಕುಶಲತೆಯೆನ್ನು ಹೊಂದಿರುವರು. ಮುಾವರು ಒಂದೇಸಮನಾಗಿರುವುದನ್ನು ನೋಡಿದರೆ, ನಗುವಹಾಗಾಗುವುದೆಂದು, ಸಫಯಿ ಪಕಪಕನೆ ನಕ್ಕಳು.

ಪ್ರಿಯಸಹೋದರಿಯೆ,ರಿಾ ! ಅವರಸಂಗಡ ಮಾತನಾಡಿಬರುವುದಕ್ಕೆ ನಿನಗಿಷ್ಟವುಂಟೂ, ಅಂತಹ ಪುರುಷರಿಲ್ಲದೇಹೋದರೆ ನಾವು ಬಿಳಿಗಿನಿಂದಲೂ, ಎಷ್ಟುಸಂತೋಷನಾಗಿ ಕಾಲವನ್ನು ಕಳೆದೆವೋ, ಅದಕ್ಕಿಂತಲೂ, ಅತಿಶಯವಾದ ವಿನೋದವನ್ನುಹೊಂದಲು, ಅವಕಾಶ ಉಂಟಾಗದು. ಅವರಿಂದ ನಮಗೇನು ಖರ್ಚುಬೀಳುವುದಿಲ್ಲ. ಅಲ್ಲದೆ ಅವರಿಗೆ ಸ್ವಲ್ಪಸ್ಥಳಮಾತ್ರ ದೊರೆತರೆ ಸಾಕೆಂದು ಹೇಳುವರು. ಅವರು ಇಲ್ಲಿ ಇರತಕ್ಕವರಲ್ಲ. ಬೆಳಗಾದಕೂಡಲೆ ಹೊರಟುಹೋಗತಕ್ಕವರಾಗಿರುವರು. ಅಲ್ಲದೆ ಅವರಿಂದ ನಮಗೆ ಅತ್ಯಂತ ಪ್ರಮೋದವೂ, ಉಂಟಾಗುವುದೆಂದು ಹೇಳಿದಳು. ಆ ಮಾತನ್ನುಕೇಳಿ ಜೋಬದಿಯೆಯು, ಅನಿನಿಯೆಯು, ಸಫಯಿಯೆಯು, ಹೇಳಿದಮಾತುಗಳಿಗೆ ಕೆಲವು ಕಾರಣಗಳಿರಬಹುದೆಂದು, ಅನುಮಾನಿಸಿ ಅದನ್ನು ಕಂಡುಹಿಡಿಯಬೇಕೆಂಬ ನೆವದಿಂದ ಅನುಮೋದಿಸಿ, ಹಾಗಾದರೆ ಅವರನ್ನು ಕರೆದುಕೊಂಡು ಬಾ, ಹಾಗೆ ಕರೆತರುವಾಗ ಅವರು ತಮಗೆ ಸಂಬಂಧವಡದ ಕಾರ್ಯ್ಯಗಳಲ್ಲಿ ಪ್ರವರ್ತಿಸಕೂಡದೆಂದು, ಬರೆದಿರುವ ಬರವಣಿಗೆಯೆನ್ನು ಅವರಿಗೆತೋರಿಸು ! ಬಳಿಕ ಅವರನ್ನು ಇಲ್ಲಿಗೆ ಕರೆದುಕೊಂಡು ಬಾ, ಎಂದುಹೇಳಲು, ಸಫಯಿಯೆಯು, ಮಹಾಸಂತೋಷದಿಂದ ಓಡಿಹೋಗಿ ಆ ಮುವರು ಕಾಲೆಂಡರುಗಳನ್ನು ಸಂಗಡಕರೆದುಕೊಂಡು, ಬಂದಳು.

ಅವರು ಒಳಕ್ಕೆ ಬಂದಕೂಡಲೇ ದೊರೆಸಾನಿಗಳಿಗೆ ವಂದನೆಯೆನ್ನು ಮಾಡಿದರು. ಆ ದೊರೆಸಾನಿಯೆರು, ಅವರಿಗೆ ಪ್ರತ್ಯುತ್ಥಾನವನ್ನು ಕೊಟ್ಟು, ಅವರದರ್ಶನದಿಂದ ಇದೆ ಶುಭಸೂಚಕವಾದ ದಿನವೆಂದು ನುಡಿದು, ತಮ್ಮ ಮೂರ್ಖಪ್ರಯತ್ನವನ್ನು ಪರಿಹರಿಸುವಂತೆ, ನಾವುಗಳು, ನಿಮಗೆ ಉಪಚಾರಮಾಡುವುದಕ್ಕೆ ಸಮಯ ದೊರೆತುದಕ್ಕಾಗಿ, ತುಂಬ ಸಂ

ಸಂತೋಷವನ್ನು ಹೊಂದಿದೆವೆಂದು, ಹೇಳಿ ಉತ್ತಮವಾದ ಆಸನದಲ್ಲಿ ಕು ಳಿತುಕೊಳ್ಳುವಂತೆ ಹೇಳಿದರು. ಆ ಕಾಲೆಂಡರುಗಳು ತಾವು ಆ ಮನೆಯ ಸೊಬಗನ್ನೂ, ದೊರೆಸಾನಿಗಳ ಮರ್ಯಾದೆಯನ್ನೂ ನೋಡಿ, ತುಂಬಾ ಆಶ್ಚರ್ಯವನ್ನು ಹೊಂದಿದರಲ್ಲದೆ, ಮತ್ತಾಗಿವುಲಗಿರುವ ಕೂಲಿಕಾರನ ನ್ನೂ, ನೋಡಿದರು. ಗಡ್ಡವನ್ನು ಕಣ್ಣುಹುಬ್ಬುಗಳನ್ನು ಬೋಳಿಸಿ ಕೊಳ್ಳದೆ ಇರುವ, ಆಚಾರಭೇದವನ್ನು ಹೊಂದಿದ ಮತೊಬ್ಬ ಕಾಲೆಂಡ ರಾಗಿರಬಹುದೆಂದು, ತಂತಮ್ಮಲ್ಲಿ ವಿವಾದವೂಡಿ ನಿಶ್ಚಯಿಸಿದರು. ಅದರ ಲೊಬ್ಬನು ಉಳಿದವರನ್ನುನೋಡಿ, ಇದೋ ವಿರುದ್ಧವಾದ ಆಚಾರಧ ರ್ಮವನ್ನುಳ್ಳ ಅರಬ್ಬಿದೇಶದಸನ್ಯಾಸಿಯೊಬ್ಬನು ಬಂದಿರುವನೆಂದು, ತೋ ರುತ್ತಿರುವುದೆಂದು, ಆಕಡೆಗೆನೋಡಿದನು. ಆಗ ಕೂಲಿಯವನು, ಅರ್ಧ ನಿದ್ರೆಯಿಂದಲೂ, ಅರ್ಧಭಾಗದ ಮಾಯೆಕದಾವಕದ ಪದಾರ್ಥಸೇವನೆ ಯ ಮಬ್ಬಿನಿಂದಲೂ, ಕೂಡಿ ತಾನಿರುವಸ್ಥಳವನ್ನುಬಿಟ್ಟು, ಏಳಲಾರ ದೆ ಕೂರವಾದ ದೃಷ್ಟಿಯಿಂದವರನ್ನು ನೋಡುತ್ತಾ, ಕೂಡುಕೊಳ್ಳಿ, ನಿಮಗೆ ಸಂಬಂಧವಿಲ್ಲದ ವಿಷಯುಗಳಲ್ಲಿ ನೀವು ಪ್ರವೇಶಮಾಡಕೂಡದೆಂದು, ಬಾಗಿಲಬಳಿಯಲ್ಲಿ ಬರೆದಿರುವ, ಅಕ್ಷರಗಳನ್ನು ನೀವು ಓದಲಿಲ್ಲವೆ? ನಿಮ್ಮ ಆಚಾರಗಳನ್ನು ಅನುಸರಿಸಿ ಪ್ರಜೆಗಳು ನಡೆಯಬೇಕೆಂದು ಎಣಿಸಬೇಡಿ! ನಮ್ಮಾಚಾರವನ್ನು ಅನುಸರಿಸಿರಿ, ಎಂದುಹೇಳಿದನು. ಆಗ ಕಾಲೆಂಡರು ಗಳು, ಆ ಮಾತನ್ನುಕೇಳಿ ಅಯ್ಯಾ! ನೀವು ಕೋಪವನ್ನುಮಾಡಿಕೊಳ್ಳ ಬೇಡಿ, ನಿಮ್ಮಕೋಪದಂತೆ ನಾವುನಡೆದುಕೊಳ್ಳುವುದಕ್ಕೆ ಶಕ್ತರಲ್ಲ. ನಿಂ ಮ ಆಜ್ಞಾನುಸಾರವಾಗಿ ನಾವು ನಡೆದುಕೊಳ್ಳುವುದಕ್ಕೆ ಸಿದ್ಧರಾಗಿರು ವರೇ ಹೊರತು, ಮತ್ತೊಬ್ಬರಿಗೆ ಇಲ್ಲವೆಂದು ಹೇಳಿದರು. ಆಗ ದೊರೆಸಾನಿಗ ಳು ಇವರ ವಿವಾದವನ್ನು ಕೊನೆಗಾಣಿಸಬೇಕೆಂದು, ಅಲ್ಲಿಗೆಬಂದು ಸಮಾಧಾ ನಮಾಡಿದರು. ಬಳಿಕಕಾಲೆಂಡರುಗಳು, ಮೋಜದಬಳಿಯಲ್ಲಿ ಕುಳಿತುದೊ ರೆಸಾನಿಗಳು ಬಡಿಸಿದ ಆಹಾರವನ್ನು ಭೂಟಮಾಡಿದರು.

ಅವರಲ್ಲಿ ತುಂಬ ಅನುರಾಗವುಳ್ಳ ಸಫಯಿ ಪಾನಾದಿಗಳಿಂದ ಅವರ ನ್ನು ತೃಪ್ತಿಪಡಿಸಿದಳು. ಅಷ್ಟರಲ್ಲಿ ಬೆಳಗಾಯಿತೆಂದು, ಷಹರಜಾದಿ ಯು, ಕಥೆಯನ್ನು ನಿಲ್ಲಿಸಿದಳು. ಸುಲ್ತಾನನು, ತನ್ನಕೆಲಸದಮೇಲೆ

ಹೋಗುವಾಗ್ಯೆ ಮುಂದಿನಕಥೆಯನ್ನು ನಾಳೆದಿನಕ್ಕೇಳಿ, ಆ ಮೂರುಜನ ಕಾಲಿಂಡರುಗಳಿಗೂ, ಬಲಗಣ್ಣು ಕುರುಡಾಗಿರುವುದಕ್ಕೆ ಕಾರಣವನ್ನು ತಿಳಿದುಕೊಳ್ಳಬೇಕೆಂದು, ಹೇಳಿ ಹೊರಟುಹೋದನು.

೩೩ ನೆಯ ರಾತ್ರಿ ಕಥೆ.

ಮರುದಿನ ಬೆಳಗಿನಜಾವದಲ್ಲಿದ್ದು, ದಿನರಜಾದಿಯು, ಸುಲ್ತಾನನನ್ನು, ಎಚ್ಚರಗೊಳಿಸಿ, ತಂಗಿಯೆಲ್ಲಿ ಪ್ರೀತಿಯುಳ್ಳವಳಾದ ಅಕ್ಕ! ಆ ದೊರೆಸಾನಿಗಳಿಗೂ, ಮೂರುಜನ ಕಾಲಿಂಡರುಗಳಿಗೂ, ಸನ್ಯಾಸಿನಿಯೆರಿಗೂ, ನಡೆದ ಕಥೆಯನ್ನು ಹೇಳಬೇಕೆಂದುಕೇಳಲು, ಷಹರಜಾದಿಯು, ಕಥೆಯನ್ನು ಮುಂದೆ ಹೇಳಸಾಗಿದಳು. ಆಗ ತೃಪ್ತಿಯಾಗಿ ಊಟಮಾಡಿ ಸಂತೋಷದಿಂದ ಪಾನಮೂಡಿದ ಕಾಲಿಂಡರುಗಳು, ದೊರೆಸಾನಿಯೆನ್ನು ನೋಡಿ, ನಿಮ್ಮಮನೆಯೆಲ್ಲಿ ವಾದ್ಯಗಳೇನಾದರೂ, ಇದ್ದರೆ ತರಿಸಿಕೊಡಿ. ಅದರಿಂದ ನಿಮಗೆ ಅತ್ಯಂತವಾದ ಆನಂದವನ್ನುಂಟುಮಾಡುವೆವೆಂದು ಹೇಳಿದರು. ಅದಕ್ಕೆ ಅವರು, ಅನುಮೋದಿಸಿದಕೂಡಲೆ, ಸಫಯಿ ತಮ್ಮದೇಶದ ತರಹೆಯ ಒಂದುಕೊಳಲನ್ನು, ಪಾರಶಿಯದೇಶದ ತರಹೆಯ ಮತ್ತೊಂದು ನಾಗಸರವನ್ನು ಅದರಸಂಗಡ ಒಂದು ಮೃದಂಗವನ್ನು ತಂದು ಅವರ ಮುಂದಿಟ್ಟಳು. ಆಗ ಅವುಗಳಲ್ಲಿ ಒಬ್ಬೊಬ್ಬರೊಂದೊಂದನ್ನು ತೆಗೆದು ಕೊಂಡು, ಹೊಂದಿಕೆಯಾಗಿ ರಾಗವನ್ನು ಹಾಡುತ್ತಿದ್ದರು. ಆ ದೊರೆಸಾನಿಗಳು, ತಮಗೆ ಆ ರಾಗವು ತಿಳಿದಿದ್ದರಿಂದ ತಾವು ಅವರಸಂಗಡ ಹಾಡುತ್ತಾ ಆ ಹಾಡಿನಲ್ಲಿರುವ ಶಬ್ದಾರ್ಥಗಳನ್ನು ಕೇಳುವುದಕ್ಕಾಗಿ ನಿಲಿಸಿ, ತೃಪ್ತಿಕರವಾಗಿ ನಗುತ್ತಿದ್ದರು. ಇವರುಗಳು ಈ ತೆರದಿಂದ ಆನಂದಪರವಶರಾಗಿರುತ್ತಿರುವಾಗ, ತಲೆಬಾಗಿಲಬಳಿಯಲ್ಲಿ ಯಾರೋಬಂದು ಕದವನ್ನು ತಟ್ಟಿದರು. ಸಫಯಿಯು, ಹಾಡುವುದನ್ನುಬಿಟ್ಟು, ಯಾರೋಬಂದಿರುವರೆಂದು, ನೋಡುವುದಕ್ಕೆಹೋದಳು. ಸುಲ್ತಾನರೇ! ಇಷ್ಟಹೊತ್ತಿನವೇಲೆ ತಮ್ಮಮನೆಯ ತಲೆಬಾಗಿಲನ್ನು ಹೊಡೆವುದಕ್ಕೆ ಕಾರಣವೇನೆಂದು, ತಿಳಿದುಕೊಳ್ಳಬೇಕಾದುದು, ಆವಶ್ಯಕವಾದುದಲ್ಲವೆ? ಅದು ಏನಂದರೆ ಕಲೀಫಹರೋಕ್ ಅಲರಾಶ್ಚಿದನೆಂಬ ರಾಜನು, ತಮ್ಮಸಟ್ಟಣವು ಸುಂದರವಾಗಿಯೂ, ನಿರ್ಮಲವಾಗಿಯೂ, ಕ್ರಮವನ್ನುತಪ್ಪದೆ ಇರುವುದಾಗಿ

ಯುವಾ, ಇರುತ್ತದೋ ? ಅಥವಾ ಇಲ್ಲವೊ, ಎಂಬುದನ್ನು ತಿಳಿದುಕೊಳ್ಳು ವುದಕ್ಕಾಗಿ ವೇಷಧಾರಿಯಾಗಿ, ಸ್ವತಃನೋಡುವುದಕ್ಕಾಗಿ ಹೊರಟುಬಂದಿ ದ್ದನು. ಆ ರಾತ್ರಿಯಲ್ಲಿ ಕಲೀಫರು, ತಮ್ಮ ಪ್ರಧಾನಮಂತ್ರಿ, ಮತ್ತು ಬೋಜ ಸರದಾರರಸಂಗಡ, ಹೊರಟು ನಗರಶೋಧನೆಗಾಗಿ ಬರುತಾ್ದ, ಆ ದೊರೆಸಾನಿಗಳು ಮತ್ತು ಕಾಲಿಂಡರುಗಳು, ಇರುವ ಮನೆಯಬಳಿಗೆ, ಬಂದು ಒಳಗಿನ ಸಂಗೀತಧ್ವನಿಯನ್ನೂ, ಹೆಂಗಸರು ನಗುತ್ತಿರುವ ಆರ್ಭ ಟವನ್ನುಕೇಳಿ, ಆ ಕೋಲಾಹಲವು ನಡೆವುದಕ್ಕೆ ಕಾರಣವೇನೆಂಬುದನ್ನು ತಿಳಿದುಕೊಳ್ಳುವುದಕ್ಕಾಗಿ, ಬಾಗಿಲನ್ನುತಟ್ಟಿದರು.

ಅಲ್ಲದೆ ಕಲೀಫರು ಮಂತ್ರಿಯನ್ನುನೋಡಿ, ಈ ಕೋಲಾಹಲಧ್ವ ನಿಗೆ ಕಾರಣವೇನೆಂಬುದನ್ನು ನಾನು ತಿಳಿದುಕೊಂಡುಬರುತ್ತೇನೆಂದು, ಹೇ ಳಲು, ಮಂತ್ರಿಯು, ಯಾರೋಕೆಲವುಜನ ಸ್ತ್ರೀಯರು ಸಂಭ್ರಾಂತರಾ ಗಿ ಸಾರಾಯಿಯನ್ನುಕುಡಿದ ಮಾದಕದಿಂದ ಉನ್ಮತ್ತರಾಗಿರುವರು. ಈಕಾ ಲದಲ್ಲಿ ನೀವು ಒಬ್ಬರೇ ! ಪ್ರತ್ಯಕ್ಷವಾಗಿ ಅಲ್ಲಿಗೆಹೋಗುವುದು, ಯುಕ್ತ ವಲ್ಲವೆಂದು, ಹೇಳಿದನು. ಅಲ್ಲದೆ ಈ ಕಾಲದಲ್ಲಿ ಉಚಿತವಾದ ಉತಾ್ಸಹವ ನ್ನು ಹೊಂದಿರುವ ಆ ಜನರ ಆನಂದವನ್ನು ಭಂಗಪಡಿಸುವುದು, ನಮಗೆ ಯೋಗ್ಯವಲ್ಲವೆಂದು, ಹೇಳಿದನು. ಅಂತಹ ಅಭಿಪ್ರಾಯವೇನೂ, ನನಗೆ ಇಲ್ಲ. ಆದರೆ ಬಾಗಿಲುತಟ್ಟುವಂತೆ ನಿನಗೆ ಆಜ್ಞಾಪಿಸಿರುವೆನೆಂದು ಹೇ ಳಲು, ಮಂತ್ರಿಯು ಹಾಗೆ ಬಾಗಿಲನ್ನು ತಟ್ಟಿದನು ಕೂಡಲೆ ಬಾಗಿಲು ತೆಗೆಯುವುದಕ್ಕಾಗಿ ಹೊರಗೆಬಂದಿರುವ ಸಫಯಿಯ ಕೈಯಲ್ಲಿದ್ದ ಮೋ ಣಬತ್ತಿಯ ಬೆಳಕಿನಿಂದ ಅಸದೃಶವಾದ ಅವಳಸೌಂದರ್ಯವನ್ನುನೋಡಿ, ಅವಾ್ಮ ನಾವು ಮೂವರು ಮುಸೌಲಿದೇಶದ ವರ್ತಕರು. ಇಲ್ಲಿಗೆ ಬಂದು ಹತ್ತುದಿನಗಳಾಯಿತು. ನಮಗೆಬೇಕಾದ ಸರಕುಗಳನ್ನುಕೊಂಡು ಮುಸಾ ಫರಖಾನೆಯಲ್ಲಿ ತುಂಬಿಕೊಂಡು, ಅಲ್ಲೆ ಒಕ್ಕಲಿರುವೆವು. ಈ ದಿನಒಬ್ಬ ಸಾಹುಕಾರನಮನೆಗೆ ಔತಣಕ್ಕೆಹೋಗಿದ್ದೆವು. ಬಹು ತೃಪ್ತಿಕರವಾಗಿ ಭೋಜನಾದಿಗಳು, ಜರಗಿದವು. ಅಲ್ಲದೆ ಆತನು ನಾಟ್ಯಗಾತಿಯರನ್ನು, ಕರೆಸಿ, ತಾಫೆಯನ್ನು ಕಟ್ಟಿಸಿದ್ದನು. ರಾತ್ರಿಯೆಲ್ಲಾ ನಮಗುಂಟಾದ, ಆಟಪಾಟಗಳಿಂದ ತುಂಬ ಆಯಾಸವುಂಟಾದುದರಿಂದ, ಇಲ್ಲಿಗೆಬಂದು ತಲೆ ಬಾಗಿಲನ್ನು ತೆಗೆದುಕೊಂಡು ಹೊರಗೆಬಂದೆವು. ಕೂಡಲೆ ಕೆಲವುಜನರು

ಬಂದು ಗದ್ದಲವನ್ನು ಮಾಡಿ, ಅಲ್ಲಿದ್ದವರಲ್ಲಿ ಅನೇಕರನ್ನು ಹಿಡಿದುಕೊಂಡು ಹೋದರು. ನಾವು ದೈವಾಧೀನದಿಂದ ತಪ್ಪಿಸಿಕೊಂಡುಬಂದೆವು. ಸಾರಾಯಿಕುಡಿದ ಮತ್ತಿನಿಂದಲೂ, ನಾವು ಇಲ್ಲಿಗೆ ಹೊಸಬರಾಗಿರುವುದರಿಂದಲೂ, ದೂರವಾಗಿರುವ ಮುಸಾಫರಖಾನೆಯಬಳಿಗೆ ಹೋಗಜೀಕಾದರೆ, ದಾರಿಯಲ್ಲಿ ಯಾರಾದರೂ, ಎಳೆದುಕೊಂಡುಹೋಗುವರೋ, ಏನೋ ಎಂದು ಭಯಪಟ್ಟು, ಎಲ್ಲಿಹೋದರೂ ಬಾಗಿಲುಗಳು, ಮುಚ್ಚಿದ್ದವು. ಅಲ್ಲದೆ ಬೆಳಗಾಗುವವರೆಗೂ, ತೆರೆಯಲೀ ಇಲ್ಲ. ನಾವು ಈ ದಾರಿಯಲ್ಲಿ ಹೋಗುತ್ತಿರುವಾಗ ಇಲ್ಲಿನ ವಾದ್ಯಧ್ವನಿಯೆನ್ನು ಕೇಳಿ ನೀವಿನ್ನು ಮಲಗಲಿಲ್ಲವೆಂದು, ಬೆಳಗಾಗುವವರೆಗೂ, ಇಲ್ಲಿ ಮಲಗಿಕೊಳ್ಳುವುದಕ್ಕೆ, ಸ್ಥಳವನ್ನು ಕೇಳಿಕೊಳ್ಳಬೇಕೆಂದು, ಧೈರ್ಯದಿಂದ ಬಾಗಿಲನ್ನು ತಟ್ಟಿದೆವು. ನೀವು ನಮ್ಮನ್ನು ಸಹವಾಸಕ್ಕೆ ಯೋಗ್ಯರೆಂದು, ತಿಳಿದು ನಡೆಸುವುದಾದರೆ ಸಂತೋಷ, ಇಲ್ಲವಾದರೆ ಕ್ಷಮಿಸಬೇಕೆಂದು, ಸಲಾಮುಮಾಡುವೆವು. ಹಾಗಿಲ್ಲದಿದ್ದರೆ ನಿಮ್ಮಮಂಚದಕೆಳಗಾದರೂ, ಮಲಗಿಕೊಳ್ಳುವುದಕ್ಕೆ ಅಪ್ಪಣೆಯೆನ್ನು ಕೊಡಬೇಕೆಂದು, ಪ್ರಧಾನಮಂತ್ರಿಯು ಬಹುಚಾತುರ್ಯವಾಗಿ ಹೇಳಿದನು. ಹೀಗೆ ಮಾತನಾಡುತ್ತಿರುವ ಪ್ರಧಾನಮಂತ್ರಿಯೆನ್ನು, ಆ ಮಂತ್ರಿಯಂತೆಯೆ ಮೂತನಾಡುತ್ತಿರುವ ವರ್ತಕನನ್ನು ನೋಡುತ್ತಾ ಅತ್ಯಂತಸೌಂದರ್ಯವತಿಯಾಗಿ ವಿನಯದಿಂದ ಮಾತನಾಡುತ್ತಿರುವ ಸಖಿಯು, ತನ್ನಮನೆಯ ಯಜಮಾನಿಯಬಳಿಗೆಹೋಗಿ ತಿಳಿದುಕೊಂಡುಬಂದು ಪ್ರತ್ಯುತ್ತರವನ್ನು ಹೇಳುವೆನೆಂದು ಹೇಳಿದಳು.

ಆಗಲೂರಾಜನು ತನ್ನಮಂತ್ರಿಗಳ ಸಂಗಡ ಏನನ್ನೋಮಾತನಾಡುತ್ತಿದ್ದನು. ಆಗ ಸಖಿಯು ಮನೆಗೆಬಂದು ತನ್ನ ಅಕ್ಕತಂಗಿಯರೊಡನೆ, ಹೇಳಲು ಅವರು ಸ್ವಲ್ಪಹೊತ್ತು ಆಲೋಚಿಸಿ, ಸಹಜವಾದ ಪರೋಪಕಾರಗುಣವುಳ್ಳವರಾದುದರಿಂದಲೂ, ಮೊದಲಿನ ಮೂರುಜನ ಕ್ಯಾಲೆಂಡರುಗಳಿಗೂ, ಸಹಾಯಮಾಡಿರುವರಾದುದರಿಂದ, ಅವರನ್ನು ಒಳಗೆ ಬರಮಾಡಿಕೊಳ್ಳುವುದಕ್ಕೆ ಒಪ್ಪಿಕೊಂಡರು. ಅಷ್ಟರಲ್ಲಿ ಬೆಳಗಾದುದರಿಂದ ಷಹಷಹರಜಾದಿಯು, ಕಥೆಯನ್ನು ನಿಲ್ಲಿಸಿದಳು. ಸುಲ್ತಾನನು, ಹೊಸದಾಗಿಬಂದಿರುವ ಜನರ ಕಥೆಯನ್ನು ತಿಳಿದುಕೊಳ್ಳಬೇಕೆಂದು, ಎಷ್ಟುಹೊತ್ತಿ

ಗೆ ರಾತ್ರಿಯಾಗುವುದೋ ! ಎಂದು ಆತುರದಿಂದ ಇರುಳನ್ನೇ ಎದುರು ನೋಡುತ್ತಿದ್ದನು.

೫.೪ ನೆಯ ರಾತ್ರಿ ಕಥೆ

ಆ ದೊರಸಾನಿಗಳ ಮನೆಗೆ ಕಲೀಫನು ಬಂದವೇಲೆ, ನಡೆದಸಂಗತಿಯೆನ್ನು ತಿಳದುಕೊಳ್ಳಬೇಕೆಂದು, ಸುಲ್ತಾನನಿಗಿದ್ದ ಅಪೇಕ್ಷೆಗಿಂತಲೂ. ಅಧಿಕವಾದ ಅಭಿಲಾಷೆಯು, ದಿನರಜಾದಿಗೆ ಇದ್ದುದರಿಂದ, ಬೆಳಗಿನಜಾವ ದಲ್ಲಿದ್ದು, ಅಕ್ಕಾ ! ಆ ಕಾಲಿಂಡರುಗಳ ಕಥೆಯನ್ನು ಕೊನೆಸಾಗಿಸಿ ಹೇಳೆಂದು, ಕೇಳಿದಕೂಡಲೇ ಷಹರಜಾದಿಯು, ಸುಲ್ತಾನನಿಂದಪ್ಪಣೆಯನ್ನು ಪಡೆದು, ಹೇಳಲಾರಂಭಿಸಿದಳು. ಸಫಯಿಸಿಯು, ಆ ಮೂರುಜನಗಳನ್ನು ಕರೆದುಕೊಂಡು ಬಳಹೊಕ್ಕಕೂಡಲೇ ಅಲ್ಲಿದ್ದದೊರೆಸಾನಿಯರೂ, ಕೂಲಿಯವನೂ, ಕಾಲಿಂಡರುಗಳೂ, ಅವರನ್ನುನೋಡಿ, ಬಹುಮರ್ಯಾದೆಯಿಂದ ವಂದನೆಗಳನ್ನು ಮಾಡಿದರು. ಬಳಿಕ ಆ ದೊರೆಸಾನಿಗಳಲ್ಲಿ ಮುಖ್ಯಳಾದ ಜೋಬೆದಿಯು, ಆ ವರ್ತಕರನ್ನುನೋಡಿ, ತನ್ನ ಗಂಭೀರವಾದ ಸ್ವರದಿಂದ ಮುಖವಿಲಾಸವನ್ನುಬೀರುತ್ತಾ, ಅಯ್ಯಾ ! ನಿಮ್ಮಗಳಿಗೆ ಇಲ್ಲಿಗೆಬಂದವೇಲೆ ಉಪಚಾರಕ್ಕಾಗಿ ಅಲ್ಲದೆ ನಿಮ್ಮ ಆಗಮನವು, ನಿಜವಾಗಿಯೂ ನಮಗೆ ಶುಭಸೂಚಕವಾದ ಸಂತೋಷವನ್ನುಂಟು ಮಾಡಿರುವುದು. ಆದುದರಿಂದನಿಮಗೆ ನಾನು ಮುಖ್ಯವಾಗಿ ಹೇಳಬೇಕಾಗಿರುವ ಬಹು ಆವಶ್ಯಕವಾದ ಒಂದಾನೊಂದು ವಾಕ್ಯವಿರುವುದೆನಲು, ಮುಂತ್ರಿಯು, ಅಯ್ಯೋ ! ಇಂತಹ ಸುಂದರಾರದಸಿ್ತ್ರಯರು, ನಮ್ಮನ್ನು ಬೇಡಿಕೊಳ್ಳಬೇಕಾಗಿರುವ ಬಿನ್ನಹವೇನೋ ಹೇಳಬೇಕೆಂದು, ಮುಂತ್ರಿಯು ಗಂಭೀರವಾಕ್ಕಿನಿಂದ ಮಾತನಾಡಿದನು. ಆಗ ಜೋಬೆದಿಯು ಅಯ್ಯಾ ! ನೀವುಗಳು ಈಸ್ಥಳದಲ್ಲಿರುವವರೆಗೂ,ಕಣ್ಣುಳ್ಳವರಂತಿರಬೇಕೇ ಹೊರತು, ಎಷ್ಟುಮಾತ್ರಕೂಡ, ನಾಲಗೆಯುಳ್ಳವರಂತೆ ಇರಕೂಡದು. ಅಲ್ಲದೆ ನೀವು ಇಲ್ಲಿನ ವಿಷಯಗಳನ್ನು ನೋಡಿದರೂ, ಅದರಕಾರಣವನ್ನು ಕುರಿತು, ಪ್ರಶ್ನೆಮಾಡಕೂಡದೆಂದು, ಹೇಳಿ ನಿಮಗೆಸಂಬಂಧಪಡದಿರುವ ವಿಷಯವನ್ನು ಕುರಿತು, ನೀವುಗಳು ಮಾತನಾಡಕೂಡದು. ಈ ಸಂಗತಿಗಳಿಗೆ ಸಮ್ಮತಿಸಿ ನೀವುಗಳು, ನಡೆದುಕೊಳ್ಳಬೇಕೆಂದು, ಹೇಳಿದಳು. ಅದನ್ನುಕೇಳಿ

ಮಂತ್ರಿಯು, ನಾವು ನಿಮ್ಮ ಆಜ್ಞೆಯನ್ನುಲ್ಲಂಘಿಸತಕ್ಕವರಲ್ಲ. ದೋಷವನ್ನು ಕಂಡುಹಿಡಿದು, ನಮಗೆ ಸಂಬಂಧಪಡದಿರುವ ವಿಷಯದಲ್ಲಿ ನಾವು ಪ್ರವೇಶಮಾಡತಕ್ಕವರೂ ಅಲ್ಲ, ನಮ್ಮ ನಮ್ಮ ಸಂಗತಿಗಳನ್ನು ಕುರಿತು ನಾವು ಮಾತನಾಡಿಕೊಂಡರೆ ಸಾಕು. ಮರ್ಯಾದೆಯನ್ನುವಿುರಿ ನಾವೆಂದಿಗೂ, ನಡೆಯತಕ್ಕವರಲ್ಲವೆಂದು ಹೇಳಿದನು.

ಬಳಿಕ ಎಲ್ಲರೂ, ಕುಳಿತುಕೊಂಡು ಸ್ವಲ್ಪಸಾರಾಯಿಯನ್ನು, ಕುಡಿದರು. ಬಳಿಕ ಗಯೆಫರನು ಆ ದೊರೆಸಾನಿಗಳ ಸಂಗಡ ಉಲ್ಲಾಸಕರವಾದ ಮಾತುಗಳನ್ನಾಡುತ್ತಿರುವಾಗ ಕಲೀಫನು, ಆ ಸ್ತ್ರೀಯರ ಅಸದೃಶವಾದ ಸೌಂದರ್ಯವನ್ನೂ, ಸಂದರ್ಭಾನುಸಾರವಾಗಿ ನುಡಿಯತಕ್ಕ ವಾಕ್ಚಾತುರ್ಯವನ್ನು, ಉತ್ತಮವಾದ ನಡವಳಿಕೆಯನ್ನು, ನೋಡಿ ಅತ್ಯಂತವಾದ ಆನಂದವನ್ನು ಹೊಂದಿದರು. ಅಲ್ಲದೆ ಆ ಮೂರುಜನ ಕಾಲಿಂಡರುಗಳಿಗೆ, ಬಲಗಣ್ಣು ಕುರುಡಾಗಿರುವುದಕ್ಕೆ ಕಾರಣವನ್ನು ವಿಚಾರಿಸಿ ತಿಳಿದುಕೊಳ್ಳಬೇಕೆಂಬ ಕುತೂಹಲವಿದ್ದರೂ, ತಮಗೂ, ತಮ್ಮ ಸಂಗಡ ಬಂದ ಜನರಿಗೂ, ಉಂಟಾಗಿರುವ ಮೂತನಾಡಕೂಡದೆಂಬ ನಿರ್ಬಂಧಕ್ಕೆ ಒಳಪಟ್ಟು, ಆ ಮನೆಯ ಸೌಂದರ್ಯಗಳನ್ನು ವದಾರ್ಥಗಳ ಜೋಡಣೆಯಂನು ದೀಪಗಳ ಬೆಳಕನ್ನು ಅಲ್ಲಿನಡೆಯುವ ವಿಚಿತ್ರವಾದ ಸಂಗತಿಗಳನ್ನು, ನೋಡಿ, ಈ ಭವನವು ತಮ್ಮ ಪ್ರಧಾನಮಂತ್ರಿಯಿಂದ ಕಟ್ಟಿಸಿದ ಹೊಸದಾದ ಅರಮನೆಯೊಗಿರಬಹುದೆಂದು, ಊಹಿಸಿಕೊಂಡರು. ಬಳಿಕ ಅವರು ಪರಮಾನಂದಭರಿತರಾಗಿ, ಕುಡಿದಸಾರಾಯಿಯೆ, ಮತ್ತಿನಿಂದ ಮಲಗಿಕೊಳ್ಳಲು, ಕಾಲಿಂಡರುಗಳು, ತಮ್ಮ ಪದ್ಧತಿಯೆಮೇರಿಗೆ ನಾಟ್ಯವಾಡಲಾರಂಭಿಸಿದರು. ಆದುದರಿಂದ ಆ ರಾಣಿಯೆರಿಗೆ ಅವರಮೇಲೆ ಮೊದಲಿಗಿಂತಲೂ, ಅಧಿಕವಾದ ವಿಶ್ವಾಸವುಂಟಾಯಿತು. ಅಲ್ಲದೆ ಆ ಮೂವರು ನರ್ತಕರಿಗೂ, ಇವರಲ್ಲಿ ಹಚ್ಚಾದ ಗೌರವವುಂಟಾಯಿತು. ಕಾಲಿಂಡರು ನಾಟ್ಯವನ್ನಾಡಿದಮೇಲೆ ಜೋಬದಿಯು, ತನ್ನ ತಂಗಿಯೆರನ್ನುಕುರಿತು, ತಂಗಿಯೆರೇ ! ಏಳಿ ನಮ್ಮ ಇಷ್ಟಾನುಸಾರವಾಗಿ ನಡೆದುಕೊಂಡರೆ ಈಸಮಾಜದವರೆಂದಿಗೂ, ಆಕ್ಷೇಪಣೆಯೆನ್ನು ಮಾಡರು. ಇವರ ಸಹವಾಸವು ನಮ್ಮ ಸಂತೋಷಕ್ಕೆ ವಿಘಾತವನ್ನು ಮಾಡದು ! ಎಂದು ಹೇಳಿದಳು. ಇದನ್ನು ಕೇಳಿ, ಅವಿನಿಯು, ತನ್ನ ಅಕ್ಕನ ಅಭಿಪ್ರಾಯವನ್ನು ತಿಳಿದುಕೊಂಡು

ಅಲ್ಲಿದ್ದ ತಟ್ಟೆ, ಬಟ್ಟಲು, ವೀಜ ವಾದ್ಯಗಳು, ಮೊದಲಾದವುಗಳೆಲ್ಲ ವನ್ನು, ತೆಗೆದುಕೊಂಡು, ಹೊರಕ್ಕೆ ಕಾಗಿಸಿದಳು.

ಬಳಿಕ ಸಭಯಿಯು, ಆ ಸ್ಥಳವನ್ನು ಚೆನ್ನಾಗಿ ಗುಡಿಸಿ, ಹೊಸದಾದ ನಾನಾವಿಧದ ಸುಗಂಧದ್ರವ್ಯಯುಕ್ತವಾದ, ಮೇಣದ ಬತ್ತಿಗಳ ದೀಪವನ್ನು ಹತ್ತಿಸಿ, ಕಾಲಿಂಡರನ್ನೂ, ವರ್ತಕರನ್ನು ಬೀರೆ ಬೀರೆ ಸಿದ್ಧ ವೂಡಿರುವ, ಸೋಫಗಳಲ್ಲಿ ಕುಳಿತುಕೊಳ್ಳಬೇಕೆಂದು, ಬೇಡಿಕೊಂಡಳು. ಕೂಲಿಯವನನ್ನು ನೋಡಿ, ತಾನುವೂಡುವ ಕೆಲಸಕ್ಕೆ ಸಹಾಯಕನಾಗಿರು ವಂತೆಹೇಳಿ, ನಮ್ಮಕುಟುಂಬಕ್ಕೆ ಸೇರಿದಂತಿರುವನಾದ ನೀನು ಸುಮ್ಮನಿರ ಬಹುದೇ ? ಎಂದು ಕೇಳಿದಳು. ಕೂಲಿಯವನಿಗೆ ಆಗತಾನೆ ಸಾರಾಯಿಯ ಮತ್ತು ಇಳಿದು ಇದ್ದುದರಿಂದ ಬೇಗನೆದ್ದು ತನ್ನತಂಗಿಯನ್ನು ನಡುವಿಗೆ ಕಟ್ಟಿಕೊಂಡು ಏನುಹೇಳಿದರೂ ವೂಡುವುದಕ್ಕೆ ಸಿದ್ಧನಾಗಿರುವೆನೆಂದು, ಹೇಳಿದನು. ಸಭಯಿಯು, ಅವನನ್ನು ನೋಡಿ ನೀನು ಬಹಳಹೊತ್ತು ಸುಮ್ಮನಿರಬಾರದು. ನಿನಗೆಕೆಲಸವನ್ನು ಹೇಳುವವರೆಗೂ, ಇಲ್ಲೆ ಇರೆಂದು ಹೇಳಿದಳು. ಆಗ ಅವಿನಿಯು, ಒಂದು ಚಿಕ್ಕಮನೆಗೆ ಕುರ್ಚಿಯೆನ್ನು ತಂದು ಹಾಕುವುದಕ್ಕಾಗಿ ಅದಿರುವ ಸ್ಥಳಕ್ಕೆಹೋಗಿ ಕೂಲಿಕಾರನನ್ನು ಇಲ್ಲಿ ಬಾ ಎಂದು ಗಟ್ಟಿಯಾಗಿ ಕೂಗಿದಳು. ಕೂಲಿಯವನು ಅದರಂತೆ ಆ ಗವಿಯೆನ್ನು ನುಗ್ಗಿ ಹೊರಗೆಬರುವಾಗ ಕತ್ತಿಗೆ ಪಟ್ಟೆಯೆನ್ನೂ, ಗೊಲಸನ್ನೂ ಹಾಕಿದ್ದ ಎರಡು ಹೆಣ್ಣುನಾಯಿಗಳನ್ನು ಕಂಡನು ಅವುಗಳು ಬಹಳವಾಗಿ ಪೆಟ್ಟುತಿಂದವುಗಳಂತೆ ಕಂಡುಬಂದವು. ಅತನು ಅವುಗಳನ್ನು ನಡುಮನೆಗೆ ತೆಗೆದುಕೊಂಡು ಬಂದನು. ಆಗ ಜೋಬದಿಯು, ಕಾಲಿಂಡರಿಗೂ, ಕಲೀಫರಿಗೂ, ಮಧ್ಯದಲ್ಲಿರುವ ತನ್ನ ಕುರ್ಚಿಯಿಂದೆದ್ದು, ಕೈಯಲ್ಲಿ ಬೆತ್ತವನ್ನು ತೆಗೆದುಕೊಂಡು ನಮ್ಮ ಕರ್ಮವನ್ನು ನಾವು ತೀರಿಸಿಕೊಳ್ಳಬೇಕೆಂದು, ಹೇಳುತಾ, ಕೂಲಿಯವನನ್ನು ಕೂಗಿ ಒಂದು ನಾಯಿಯೆನ್ನು ನನ್ನಬಳಿಗೆ ತೆಗೆದುಕೊಂಡು ಬಾ ! ಮತೊಂದನ್ನು ಅವಿನಿಯಬಳಿಗೆ ತೆಗದುಕೊಂಡು ಹೋಗು ! ಎಂದು ಹೇಳಿದಳು. ಅವನು ಹಾಗೆಯೇ ವೂಡಿದನು. ಆಗ ಜೋಬದಿಯ ಹತ್ತಿರದಲ್ಲಿದ್ದ ನಾಯಿಯು, ಬಹು ದೈನ್ಯವಾಗಿ ಅವಳನ್ನು ಬೇಡಿಕೊಳ್ಳುತಾ ಕತ್ತನ್ನೆತ್ತಿ ಅಳಲಾರಂಭಿಸಿತು. ಆ ನಾಯಿಯು ರೋದನದಿಂದ ಮನೆಯೆಲ್ಲವೂ ವ್ಯಾಪ್ತಿ

ಧ್ವನಿಯನ್ನು ಕೊಡುತ್ತಿದ್ದರೂ, ಜೋಬದಿಯು, ಸ್ವಲ್ಪವೂ ಕರುಣವಿಲ್ಲದೆ ಬೆತ್ತದಿಂದ ಕೈಲಾಗುವವರೆಗೂ, ಹೊಡೆದು ನಂತರ ಕೋಲನ್ನು ಬಿಸಾಡಿಕೂಲಿಯವನ ಕೈಯಿಂದ ಗೊಲಸನ್ನುತೆಗೆದುಕೊಂಡು, ನಾಯಿಯನ್ನು ನೋಡಿ ಪಶ್ಚಾತ್ತಾಪಪಡುತ್ತಾ, ಅದರಸಂಗಡ ತಾನು ಅಳಲಾರಂಭಿಸಿದಳು. ಬಳಿಕ ಜೋಬದಿಯು, ಆ ನಾಯಿಯ ಕಣ್ಣೀರನ್ನು ತನ್ನ ಸೆರಗಿನಿಂದ ಒರಸಿ, ಕೂಲಿಯವನನ್ನು ಕರೆದು ಇದನ್ನು ಇದ್ದಸ್ಥಳಕ್ಕೆ ಸೇರಿಸಿ ಮತೊಂದುನಾಯಿಯನ್ನು ತೆಗೆದುಕೊಂಡು ಬಾ ! ಎಂದು ಹೇಳಿದಳು. ಕೂಲಿಯವನು, ಏಟುತಿಂದನಾಯಿಯನ್ನು ಅದರ ಸ್ಥಳಕ್ಕೆ ಸೇರಿಸಿ, ಅವಿನಿಯೆ ಹತ್ತಿರಿದ್ದ ನಾಯಿಯೆನ್ನು ಜೋಬದಿಯೆಬಳಿಗೆ ತೆಗೆದುಕೊಂಡುಬಂದು ನಿಲ್ಲಿಸಿದನು. ಅವಳು ಎಂದಿನಂತೆ ಅದನ್ನು ಬೆತ್ತದಿಂದ ಹೊಡೆದು, ಕಣ್ಣೀರನ್ನು ತೊಡೆದು ಮುತ್ತಿಟ್ಟುಕೊಂಡು, ಮೊದಲಿನಂತೆ ಅದರಸ್ಥಾನಕ್ಕೆ ತೆಗೆದುಕೊಂಡು ಹೋಗುವಂತೆ ಕೊಡಲು, ಆತನು ಹಾಗೆಯೇಮಾಡಿದನು. ಅದನ್ನುನೋಡಿ, ಆ ಮುನಾವರು ಕಾಲೆಂಡರುಗಳೂ, ಕಲೀಫರುಗಳೂ, ಸಂಭ್ರಮವಂತರಾಗಿ ಜೋಬದಿಯು, ಕೋಪದಿಂದ ಆ ನಾಯಿಗಳನ್ನು ಹೊಡೆದುದಕ್ಕೂ, ಮುಹಮ್ಮದನ ಮತಾಚಾರವನ್ನುರಿಯೆದ ಅವುಗಳನ್ನು ಮುತ್ತಿಟ್ಟುಕೊಳ್ಳುವುದಕ್ಕೂ, ಕಾರಣವೇನೆಂಬುದನ್ನು ತಿಳಿದುಕೊಳ್ಳುವುದಕ್ಕಾಗಿ, ಗುಸುಗುಸನೆ ಮಾತನಾಡುತ್ತಿದ್ದರು.

ಎಲ್ಲರಿಗಿಂತಲೂ ಅತಿಶಯವಾದ ಆಸಕ್ತಿಯೆನ್ನು ಹೊಂದಿದ ಕಲೀಫನು, ಈ ವಿಷಯವನ್ನು ವಿಚಾರಿಸಿ ತಿಳಿದುಕೊಳ್ಳುವಂತೆ, ತನ್ನಮಂತ್ರಿಗೆ ಸಂಜ್ಞೆ ಮಾಡಿ, ತಾನುಸುಮ್ಮನಿದ್ದನು. ಆಗ ಮಂತ್ರಿಯು, ಸುಲ್ತಾನನುಮಾಡಿದ ಸಂಜ್ಞೆಗೆ ಉತ್ತರವಾಗಿ, ನಿಮ್ಮಭಿಲಾಷೆಯೆನ್ನು ತೀರಿಸಿಕೊಳ್ಳುವುದಕ್ಕಿದು ಸಮಯವಲ್ಲವೆಂದು, ಹೇಳಿ ಸುಮ್ಮನಿದ್ದನು. ಜೋಬದಿಯು, ತನ್ನ ಆಯಾಸ ಪರಿಹಾರಾರ್ಥವಾಗಿ, ಅಲ್ಲಿಯೇ ಕೂತುಕೊಂಡಿದ್ದಳು. ಸಫಯಿಯು, ಅವಳನ್ನುನೋಡಿ, ನನ್ನಸ್ಥಳದಲ್ಲಿ ನೀನುಕುಳಿತುಕೊಂಡರೆ, ನನ್ನ ಕೆಲಸಗಳನ್ನು ನಾನು ಮಾಡಿಕೊಳ್ಳುವೆನೆಂದು, ಹೇಳಿದಳು. ಆಗ ಅವಳು, ಆ ಸ್ಥಳವನ್ನುಬಿಟ್ಟು, ತನ್ನ ಸ್ಥಳಕ್ಕೆ ಹೋಗಿ ಕೂತುಕೊಂಡಳು. ಆಗ ಆ ಕಲೀಫರೂ, ಕೂಲಿಯವನೂ, ಕಾಲೆಂಡರುಗಳೂ, ಆಕೆಯ ಎಡಭಾಗದಲ್ಲಿದ್ದರು. ಸುಲ್ತಾನರೇ ನಾನಿದುವರೆಗೂ,

ನಿವುಗೆ ಹೇಳಿದ ವಿಷಯೆಗಳು ನಿಸ್ಸಂದೇಹವಾಗಿ ವಿನೋದಕರಗಳಾಗಿರಬ ಹುದು. ಇನ್ನು ಮೇಲೆ ನಾನುಹೇಳುವ ವಿಷಯೆವು ಇದಕ್ಕಿಂತಲೂ, ಅತಿಶಯೆವಾಗಿರುವುದು. ಅದನ್ನು ನಾಳೆ ಬೆಳಗಿನ ಜಾವದಲ್ಲಿ ನಿವುಗೆ ತಿಳಿ ಯೆ ಹೇಳುವೆನೆಂದು, ಷಹರಜಾದಿಯೆು, ಹೇಳಲು, ಸುಲ್ತಾನರು ಅದಕ್ಕೆ ಸವ್ಮತಿಸಿ, ಬೆಳಗಾದಕೂಡಲೇ ಹೊರಟುಹೋದರು.

೩೫ ನೆಯ ರಾತ್ರಿ ಕಥೆ.

ಮರುದಿನ ಬೆಳಗಿನಜಾವಕ್ಕೆದ್ದು ದಿನರಜಾದಿಯೆು, ಅಕ್ಕಾ ! ನೀನು ಎಚ್ಚರಿಕೆಯೆಾಗಿದ್ದರೆ, ಆ ಮೂರುಜನ ಅಕ್ಕತಂಗಿಯೆರ ಕಥೆಯೆನ್ನು ಹೇಳೆಂದು ಕೇಳಿದಳು. ಷಹರಜಾದಿಯೆು, ಸುಲ್ತಾನನಿಂದ, ಆಜ್ಞೆಯೆನ್ನು ಪಡೆದು, ತನ್ನ ತಂಗಿಯೆನ್ನು ಕುರಿತು, ಮುಂದಿನ ಕಥೆಯೆನ್ನು ಹೇಳತೊಡಗಿದಳು. ಸುಲ್ತಾನರೇ ! ಪಕ್ಕದಲ್ಲಿಕುಳಿತಿದ್ದ ಕಲೀಫರೇವೆಾದಲಾದವರು, ಸ್ವಲ್ಪಹೊತ್ತಿನವರೆಗೂ, ಸುಮ್ಮನಿದ್ದರು. ಬಳಿಕ ಸಫಯಿಯೆು, ಅಂಗಳದಲ್ಲಿ ಹಾಕಿರುವ ಒಂದು ಕುರ್ಚಿಯೆಮೇಲೆ ಕುಳಿತು, ಅವಿನಿಯೆನ್ನು ಕುರಿತು, ನನ್ನ ಮುದ್ದಿನ ತಂಗಿಯೇ ಏಳು ನಾನುಹೇಳುವುದನ್ನು ಕೇಳಿ ತಿಳಿದುಕೋ ! ಎಂದು ಹೇಳಿದಳು. ಬಳಿಕ ಅವಳು ಮತೊಂದು ಕೊಠಡಿಗೆ ಹೋಗಿ ರೇಷ್ಮೆಯೆ ಗೌಸನ್ನು ಹಾಕಿದ್ದ ಬಂಗಾರದ ಪೆಟ್ಟಿಗೆಯೆನ್ನು ತಂದಳು. ಅದರಲ್ಲಿ ಬಹು ಸುಂದರವಾದ ವೀಣೆಯೊ ಇದ್ದಿತು. ಸಫಯಿಯೆು, ಅದನ್ನು ಕೈಗೆ ತೆಗೆದುಕೊಂಡು, ಶ್ರುತಿಯೆನ್ನೆತ್ತಿ ಬಾರಿಸಿದಳು. ಹಾಗೆಯೆ ಅದರಶ್ರುತಿಗೆ ತಕ್ಕಂತೆ ವಿರಹಾವಸ್ಥೆಯಲ್ಲಿರುವ ಕಾಮುಕರನ್ನು ಕುರಿತ ಹಾಡನ್ನು ಹಾಡಿದಳು. ಮನೋಹರವಾದ ಆ ಹಾಡನ್ನುಕೇಳಿ ಸರ್ವರೂ ಆನಂದಭರಿತರಾದರು. ಬಳಿಕ ಹಾಡುಗಾರಿಕೆಯಿಂದ ತನಗೆ ತುಂಬಾ ಆಲಸ್ಯವಾದುದರಿಂದ, ನಾನು ಇನ್ನು ಮೇಲೆ ಬಾರಿಸಲಾರೆನು. ತುಂಬಾ ಆಲಸ್ಯವುಂಟಾಗಿರುವುದು, ಆದುದರಿಂದ ನಾನು ಈ ವೀಣೆಯೆನ್ನು ತೆಗೆದುಕೊಂಡು, ಸಭಿಕರಿಗೆ ಆನಂದವುಂಟಾಗುವಂತೆ, ಮೂಡೆಂದು, ಸಫಯಿಯೆು, ತನ್ನತಂಗಿಯೆಾದ ಅವಿನಿಗೆ ಹೇಳಲು, ಅವಳು ಆ ವೀಣೆಯೆನ್ನು ತೆಗೆದುಕೊಂಡು, ತನ್ನ ಸ್ಥಳಕ್ಕೆ ಬಂದು ಕುಳಿತುಕೊಂಡಳು. ಬಳಿಕ ಅವಿನಿಯೆು, ವೀಣೆಯೆನ್ನು ಶ್ರುತಿಮಾಡಿಕೊಂಡು, ಬಹು ಮನೋಜ್ಞವಾದ ಒಂದು ರಾಗವನ್ನು ಹಾಡಿ ನಾಕಾಧ

ಮೇಲೆ ಸುಮ್ಮನಾದಳು. ಆಗ ಜೋಬದಿಯೆಯು, ಅವಳನ್ನು ತೃಪ್ತಿಪಡಿಸಬೇಕೆಂದು, ಯೋಚಿಸಿ, ತಂಗೀ ನೀನು ಹಾಡಿದಹಾಡು, ತುಂಬ ಮನೋರವಾಗಿದ್ದಿತು. ಅದರಭಾವದಿಂದ ನಿನಗುಂಟಾಗಿರುವ ವ್ಯಸನಕ್ಕಿಂತಲೂ, ಅಧಿಕವಾದ ದುಃಖವು ನನಗುಂಟಾಗಿರುವುದೆಂದು, ಹೇಳಿದಳು. ಅವಿನಿಯು, ಅವಳಿಗೆ ಪ್ರತ್ಯುತ್ತರವನ್ನು ಹೇಳದೆ ಅವಳ ಭಾವವನ್ನು ತಿಳಿದುಕೊಂಡು, ತಲೆಯನ್ನು ಎದೆಯನ್ನೂ, ತೆರೆದುಕೊಂಡಿರುವುದು, ತನಗೆ ಯೋಗ್ಯವಲ್ಲವಾದರೂ, ಗಾಳಿಗೋಸ್ಕರವಾಗಿ ತೆರದುಕೊಂದಿದ್ದಳು. ಅದನ್ನು ನೋಡಿ ಅಲ್ಲಿದ್ದವರೆಲ್ಲರೂ ಭಯೆಗ್ರಸ್ತರಾದರು. ಆದರೂ ಆಕೆಗೆ, ಸುಖವೇನೂ ಉಂಟಾಗದಿದ್ದುದರಿಂದ ಅವಳು ಹಾಗೆಯೇ ಮೂರ್ಛೆಹೋದಳು. ಇಲ್ಲಿಗೆ ಬೆಳಗಾದುದರಿಂದ ಷಹರಜಾದಿಯು, ಕಥೆಯನ್ನು ನಿಲ್ಲಿಸಿದಳು. ಸುಲ್ತಾನರು, ಮುಂದಿನ ಕಥೆಯನ್ನು ಕೇಳುವರೆಗೂ, ಅವಳನ್ನು ಕೊಲ್ಲಕೂಡದೆಂದು, ತಮ್ಮ ರಾಜ್ಯಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಹೊರಟು ಹೋದರು.

೩೬ ನೆಯ ರಾತ್ರಿ ಕಥೆ.

ಮರುದಿನ ದಿನರಜಾದಿಯು, ಎಂದಿನಂತೆ ತನ್ನ ಕೆಲಸವನ್ನು, ಮಾಡಿದಳು. ಸುಲ್ತಾನರು, ಮೂರ್ಛೆಹೊಂದಿದ ಅವಿನಿಯ ಕಥೆಯನ್ನು ಮುಂದೆ ಹೇಳೆಂದುಕೇಳಲು ಷಹರಜಾದಿಯು, ಮುಂದಿನಕಥೆಯನ್ನು ಹೇಳಲಾರಂಭಿಸಿದಳು. ಆಗಜೋಬದಿಯು, ತನ್ನತಂಗಿಗೆ ಸಹಾಯವೂಡುವಂತೆ, ಸಭೆಯಿಯೊಡನೆ ಓಡಿಹೋದಳು. ಇದೆಲ್ಲವನ್ನೂ ನೋಡಿದ ಕಾಲೆಂಡರುಗಳು, ಅಯ್ಯೋ! ನಾವು ಇಲ್ಲಿಗೇಕೆ ಬಂದೆವು. ಹೀಗೆಂದು ತಿಳಿದಿದ್ದರೆ, ಬೀದಿಯಲ್ಲೇ ಬಿದ್ದುಕೊಂಡಿರುತ್ತಿದ್ದೆವಲ್ಲಾ! ಎಂದು ಅಂದುಕೊಂಡರು. ಆಗ ಸುಲ್ತಾನನು, ಆ ಕಾಲೆಂಡರಬಳಿಗೆ ಬಂದು, ಅಯ್ಯಾ! ಇಲ್ಲಿ ನಡೆದ ವಿಷಯೆಗಳೇನೆಂದು ಕೇಳಿದನು. ಅದಕ್ಕವರು ಅಯ್ಯಾ! ನಿಮಗಿಂತಲೂ, ಹೆಚ್ಚಾಗಿ ನಮಗೇನೂ, ತಿಳಿಯದೆಂದು ಹೇಳಿದರು. ಕಲೀಫನು ಏನು ನೀವು ಈ ಮನೆಯವರಲ್ಲವೋ, ಏಟುಗಳನ್ನು ತಿಂದ ಆ ಎರಡು ಹೆಣ್ಣುನಾಯಿಗಳ ಮತ್ತು ಮೂರ್ಛೆಹೋಗಿರುವ ಈ ಹೆಂಗಸಿನ ಸಂಗತಿಯೆನ್ನು ನಮಗೆ ಹೇಳಲಾರಿರಾ! ಎನಲು, ಅಯ್ಯಾ! ನಾವು ನಿಮಗಿಂತಲೂ ಸ್ವಲ್ಪಮುಂದಾಗಿ ಇಲ್ಲಿಗೆಬಂದೆವು. ಅಲ್ಲದೆ ಇಲ್ಲಿಗೆ ಬರುವುದಕ್ಕೆ ಇದೆ

ವೊದಲು, ಎಂದುಹೇಳಿದರು. ಅಗಅವರು ನಿಮ್ಮಬಳಿಯೆಲ್ಲಿರುವ ಈವನು ಷ್ಯನಿಗೆ ಇವರುಗಳ ವಿಷಯದಲ್ಲಿ ಏನಾದರೂ ತಿಳಿಯುವುದೋ ! ಎಂದು ಕೇಳಲು, ಆ ಕಲೀಫರಲ್ಲೊಬ್ಬನು, ಕೂಲಿಗಾರನ ಒಳಗೆಬಂದು, ಆನಾ ಯಿಗಳ ಮುತ್ತು ಈಗ ಮೂರ್ಛೆಹೋಗಿರುವ, ಅವಿನಿಯ ವಿಷಯವನ್ನು ಕುರಿತು, ನಿನಗೇನಾಡರೂ ತಿಳಿದಿರುವುದೇ ? ಎಂದು ಕೇಳಿದನು. ಅದ ಕ್ಕಾತನು, ಅಯ್ಯಾ ! ನಿನುಗೀವಿಷಯವು ತಿಳಿಯದಿದ್ದರೆ ಭಗವತಾ್ಸಕ್ಷಿ ಯಾಗಿಯೂ, ನಿನುಗಿಂತಲೂ ಅಧಿಕವಾಗಿ ನನಗೆ ತಿಳಿಯದೆಂದು, ನಾನು ಧೃಡವಾಗಿ ಹೇಳುವೆನು. ಎಂದು ಪ್ರಮಾಣಮಾಡಿದನು. ಅಲ್ಲದೆ ನೀವು ಇಲ್ಲಿಗೆಬಂದು, ಎಷ್ಟುವಿಧವಾದ ಆಶ್ಚರ್ಯವನ್ನು ಹೊಂದಿದರೋ ನಾನು ಕೂಡ ಅದಕ್ಕಿಂತಲೂ, ಅತಿಶಯವಾದ ಆಶ್ಚರ್ಯವನ್ನು ಹೊಂದಿರುವೆನು ಆದರೆ ಈ ಮನೆಯೆಲ್ಲಿ ಬರಿಯೆ ಹೆಂಗಸರೇ ವಾಸವಮಾಡುತ್ತಿರುವರೇ ಹೊರ ತು ಒಬ್ಬರಾದರೂ ಗಂಡಸರಿಲ್ಲವೆಂದು ಹೇಳಿದನು.

ಕಲೀಫ ವೊದಲಾದವರು, ಆ ಕೂಲಿಯವನಿಗೆ ಈ ವಿಷಯೆಗ ಳೆಲ್ಲವೂ, ತಿಳಿದಿರಬಹುದೆಂದೂ, ತಾನು ತಪ್ಪಿಸಿಕೊಳ್ಳುವುದಕ್ಕಾಗಿ, ಹೀಗೆ ಮರೆಮೂಜುತ್ತಿರುವನೆಂದು ಯೋಚಿಸಿ, ಹೇಗಾದರು ಆಗಲಿ, ನಾವು ಏಳು ಮಂದಿ ಗಂಡಸರಿರುವೆವು. ಹೆಂಗಸರಾದರೋ ಮೂವ್ವೇಮಂದಿ ಇರುವರು. ಆದುದರಿಂದ ಇವರನ್ನು ಕೇಳಿದರೆ ಹೇಳಬಹುದು. ಹಾಗೆ ಅವರು ಹೇಳದೆ ಹೋದರೆ ಬಲಾತ್ಕಾರದಿಂದಲಾದರೂ, ಹೇಳುವಂತೆ ಮಾಡೋಣವೆಂದು ಹೇಳಿದನು. ಪ್ರಧಾನಮಂತ್ರಿಯಾದ ಗಯಫನು, ಅದಕ್ಕೊಪ್ಪದೆ ಅದ ರಿಂದ ಮುಂದೆ ಉಂಟಾಗುವ ತೊಂದರೆಯೆನ್ನು ತಿಳಿಯಪಡಿಸಿ, ಕಲೀಫನು ರಾಜನೆಂಬ ಸಂಗತಿಯು, ಕಾಲಿಂಡರುಗಳಿಗೆ ತಿಳಿಯಬರದಂತೆ, ಮರೆಮೂಜಿ ವರ್ತಕನೆಂದು ಹೇಳುತ್ತಾ, ಅಯ್ಯಾ ! ಕೀರ್ತಿಯಾಗಲಿ, ಅಪಕೀರ್ತಿ ಯಾಗಲಿ, ತಮ್ಮದೆ ಎಂಬುದನ್ನು, ಅಲ್ಲದೆ ಈ ಹೆಂಗಸರು, ನಮ್ಮನ್ನು ಬರಮಾಡಿಕೊಳ್ಳುವಕಾಲದಲ್ಲಿ ನಾವು ಇವರಿಗೆ ಮಾಡಿರುವ ವಾಗ್ದಾನವನ್ನು ಚೆನ್ನಾಗಿ ಯೋಚಿಸಿರಿ. ಅದಕ್ಕೆ ವಿರೋಧವಾಗಿ, ನಾವು ನಡೆದರೆ ಮುಂದೆ ಏನು ವ್ಯಸನಪ್ರಾಪ್ತವಾಗುವುದೋ ? ತಿಳಿಯದು. ಅಲ್ಲಿದೆ ನಮ್ಮಂಥ ವರು ಆಡಿದಮಾತನ್ನು ಉಳಿಸಿಕೊಳ್ಳಲಾರದೆ ದುಡುಕಿ ಕೆಲಸಮಾಡಬಹುದೇ ಎಂದು ಹೇಳಿದನು. ಕೂಡಲೇ ಕಲೀಫನನ್ನು ಹೊರಗೆ ಕರೆದುಕೊಂಡು

ಹೋಗಿ, ವಜೀರನು ಅಯ್ಯಾ ! ರಾತ್ರಿಯೆಲ್ಲ ಬಹಳಹೊತ್ತು ಕಳೆದು ಹೋದುದರಿಂದ, ಬೇಗನೆ ಬೆಳಗಾಗುವುದು. ನೀವು ಈಗ ಸ್ವಲ್ಪ ತಾಳಿ ಕೊಂಡಿದ್ದರೆ, ಬೆಳಗಾದಕೂಡಲೇ ಈ ಸಿಪ್ರಾಯರನ್ನು ನಿಮ್ಮ ಸಿಂಹಾಸನದಬಳಿಯಲ್ಲಿ ತಂದು ನಿಲ್ಲಿಸುವೆನು ಬಳಿಕ ತಾವು ತಿಳಿದುಕೊಳ್ಳಬೇಕಾದ ಸಂಗತಿಗಳೆಲ್ಲವನ್ನು ತಿಳಿದುಕೊಳ್ಳಬಹುದೆಂದು, ಹೇಳುವಷ್ಟರಲ್ಲಿಯೇ ಕಲೀಫನು, ಅದಕ್ಕೊಪ್ಪದೆ ಸುಮ್ಮನಿರು ನಾನು ಅದುವರೆಗೂ ತಾಳಲಾರೆ. ಈಗಲೆ ತಿಳಿದುಕೊಳ್ಳಬೇಕೆಂದು, ಹೇಳಿ ಯಾರು ಮೊದಲು ಮಾತನಾಡಬೇಕೆಂದು, ಗೊತ್ತುಮಾಡಿ, ಕಾಲೆಂಡರುಗಳನ್ನು ಕೇಳಲು, ಅವರು ನಮ್ಮಿಂದಾಗದು ಕ್ಷಮಿಸಬೇಕೆಂದು ಬೇಡಿಕೊಂಡರು, ಬಳಿಕ ಎಲ್ಲರೂ ಸೇರಿ ಕೂಲಿಯೆವನ ಜೊತೆಯಲ್ಲಿ ಹೇಗೆ ಪ್ರಶ್ನೆ ಮೂಡಬೇಕೆಂಬುದನ್ನು, ಆಲೋಚಿಸುತ್ತಿರುವಲ್ಲಿ, ಅವಿನಿಯು, ಮೂರ್ಖ ತಿಳಿದೆದ್ದಳು. ಜೋಬಿದಿಯು, ಅಲ್ಲಿಂದ ಹೊರಗೆ ಬಂದು, ಇವರುಗಳು ಮೂತನಾಡುತ್ತಿರುವುದನ್ನುಕೇಳಿ, ಎಲೈ ದೊಡ್ಡವನುಷ್ಯರೇ ! ಏನು ಸುಮ್ಮನಿರಲಾರಿರಾ ! ಏತಕ್ಕಾಗಿ ಮಾತನಾಡುವಿರಿ ಎಂದು ಕೋಪದಿಂದ ಗದರಿಸಿದಳು. ಆಗಕೂಲಿಯವನು, ಅವಳನ್ನುಕುರಿತು ಅಮ್ಮಾ! ನೀವು ಆಕರಿಯೆನಾಯಿಗಳನ್ನು ಏತಕ್ಕೆ ಹೊಡೆದಿರಿ ? ಅದರಮೇಲೆಬಿದ್ದು ಏತಕ್ಕಾಗಿ ಅತ್ತಿರಿ? ಅವುಗಳನ್ನು ಮುತ್ತಿಟ್ಟುಕೊಳ್ಳುವುದಕ್ಕೆ ಕಾರಣವೇನು ? ಇದು ವರೆಗೂ, ಮೂರ್ಖಿ ಹೋಗಿದ್ದ ಈ ಹೆಂಗಸಿನ ಎದೆಯೆತುಂಬ ಗಾಯೆಗಳಾಗಿರಲು, ಕಾರಣವೇನೆಂಬುದನ್ನು ಈ ದೊಡ್ಡವನುಷ್ಯರು ತಿಳಿಯೆಲಪೇಕ್ಷಿಸುತ್ತಿರುವರೆಂದು, ಹೇಳಿದನು. ಅದನ್ನುಕೇಳಿ ಜೋಬಿದಿಯು, ದೊಡ್ಡವನುಷ್ಯರಿರಾ ! ನೀವು ಈತನಿಗೆ ಹೀಗೆ ಕೇಳುವಂತೆ ಆಜ್ಞಾಪಿಸಿರುವಿರಾ ? ಎನಲು ಮುಂತ್ರಿವಿನಾ, ಉಳಿದವರೆಲ್ಲರೂ, ಹೌದೆಂದರು. ಆಗ ಜೋಬಿದಿಯು, ಅವರುಗಳನ್ನು ಕೂರದಿಷ್ಟಿಯಿಂದ ಚುರುಚುರನೆ ನೋಡಿ, ನೀವು ನಮ್ಮ ಮನೆಯ ಬಳಿಗಡೆ ಬರುವುದಕ್ಕಿಂತ ಮೊದಲೆ, ನಿಮಗೆ ಸಂಬಂಧಪಟ್ಟ ವಿಷಯವನ್ನು ಹೊರತು, ಉಳಿದ ವಿಷಯಗಳನ್ನು ಕುರಿತು ಪ್ರಶ್ನೆಯೂ ಡಕೂಡದೆಂದೂ, ಮೂತನಾಡದೆ ಬಿಳಿಗಿನವರೆಗೂ, ಸುಮ್ಮನಿರಬೇಕೆಂದೂ, ಯಾವ ತೊಂದರೆಯೆನ್ನೂ ಮಾಡಕೂಡದೆಂದೂ, ಗೊತ್ತುಮಾಡಿ ಈಗ ಅದಕ್ಕೊಪ್ಪಿದಮೇಲೆ ಒಳಗೆ ಬರಮಾಡಿಕೊಂಡರೂ, ನೀವು ಅದಕ್ಕೆ ವ್ಯತಿ

ರಿಕ್ತವಾಗಿ ನಡೆದುಕೊಂಡಿರುವುದರಿಂದ ನಿಮಗೆ ಮನ್ನಣೆ ಯುಂಟಾಗದೆಂದು ಹೇಳುತ್ತಾ, ತಾನುನಿಂತುಕೊಂಡಿರುವ ಭೂವಿಯನ್ನು ಬಲವಾಗಿ ಒದೆದು ಬೇಗನೆ ಬನ್ನಿಯೆಂದು ಗಟ್ಟಿಯಾಗಿ ಕೂಗಿದಳು.

ಕೂಡಲೆ ಬಾಗಿಲನ್ನು ತೆಗೆದುಕೊಂಡು, ಕೈಯಲ್ಲಿ ಕತ್ತಿಯನ್ನು ಹಿಡಿದುಕೊಂಡಿರುವ, ಕರಿಯೆ ಕುಳ್ಳರು ಬಂದು ಅಲ್ಲಿರುವವರೆಲ್ಲರನ್ನೂ, ನೆಲಕ್ಕೆ ಕೆಡವಿ ಕತ್ತುಗಳನ್ನು ಕಡಿದುಹಾಕಹೋದರು. ಆಗ ಕಲೀಫರು ಅತ್ಯಂತವಾದ ವ್ಯಸನವನ್ನು ಹೊಂದಿ ಮಂತ್ರಿಯು ಹೇಳಿದ ಮೂತನ್ನು ಕೇಳಿದೆ, ಹೋದೆನಲ್ಲಾ ! ಈಗ ಏನು ಮಾಡಜ್ಞೇಕೆಂದು, ಚಿಂತಿಸುತ್ತಿದ್ದನು. ಹೀಗೆ ಕಲೀಫನೂ, ಗಯೆಫನೂ, ಕೂಲಿಯವನೂ, ಕಾಲಿಂಡರೂ, ತಮಗೆ ಬಂದ ಅಪಾಯವನ್ನು ಹೋಗಲಾಡಿಸಿಕೊಳ್ಳುವುದಕ್ಕೆ ತಕ್ಕ ಉಪಾಯವನ್ನು ಕಾಣದೆ, ಪ್ರಾಣವನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿದ್ದರು. ಆಗ ಆ ಕಿಂಕರರುಗಳಲ್ಲೊಬ್ಬನು, ಸರ್ವಶಕ್ತರಾದ ಒಡತಿಯರೇ ! ಇವರುಗಳನ್ನು ಕಡಿದುಹಾಕುವುದಕ್ಕೆ ಅಪ್ಪಣೆಯೇ ! ಎಂದು ಕೇಳಿದನು. ತಾಳಿ ಸ್ವಲ್ಪವಿಚಾರಿಸುತ್ತೇನೆಂದು, ಜೋಬದಿಯು, ಹೇಳುತ್ತಿರುವುದನ್ನು ನೋಡಿ, ಕೂಲಿಯವನು, ತುಂಬ ಭಯಗ್ರಸ್ತನಾದನಲ್ಲದೆ ಹೀಗೆಂದುಹೇಳಿದನು. ಅಮ್ಮಾ! ನಾನೇನೂ ತಪ್ಪುಮಾಡಿದವನಲ್ಲ. ಇವರುಗಳ ಕೃತ್ರಿಮದಿಂದ ಹೀಗಾಯಿತು. ಆದುದರಿಂದ ಭಗವತಿ ಪ್ರೀತ್ಯರ್ಥವಾಗಿ, ನಮ್ಮನ್ನು ರಕ್ಷಿಸಿ, ಎಂದು ಹೇಳಿ ಅಯ್ಯೋ ! ಎಷ್ಟೊಬ್ಬಂದು ಉತ್ಸಾಹಯುಕ್ತರಾಗಿ, ಕಾಲವನ್ನು ಕಳೆಯುತ್ತಿದ್ದೆವು. ಈ ನಿರ್ಭಾಗ್ಯರಾದ, ಕುರುಡ ಕಾಲೆಂಡರುಗಳಿಂದಲ್ಲವೆ ಇಂತಹ ಕಷ್ಟವು ಬಂದೊದಗಿತು. ಲೋಕದಲ್ಲಿ ನಿರ್ಭಾಗ್ಯರಾದ ಜನಗಳಿರುವ ಪಟ್ಟಣಕ್ಕೆಂದಿಗೂ, ಆಪದಸಂಘಟನೆಯಾಗಬಾರದು. ಅಮ್ಮಾ ! ಅಪರಾಧಿಗಳಜೊತೆಯಲ್ಲಿ ನಿರಪರಾಧಿಯೆನ್ನುವ ವಿಚಾರಣೆಯಿಲ್ಲದೆ, ಕೊಲ್ಲಕೂಡದೆಂದು, ನಿಮ್ಮನ್ನು ಬೇಡಿಕೊಳ್ಳುವೆನು. ನಿಮ್ಮ ಕೋಪಕ್ಕೆ ನಾನು ಪಾತ್ರನಾಗಲಾರನೆಂದು, ವಿನಯದಿಂದ ಪ್ರಾರ್ಥಿಸುವೆನು. ನಮ್ಮಂತಹ ಅಲ್ಪಮಾನವರ ತಪ್ಪನ್ನು ಕ್ಷಮಿಸಿ ಕಾಪಾಡುವುದರಿಂದ, ತಮ್ಮ ಯಶಸ್ಸು ಇನ್ನು ಅಧಿಕವಾಗುವುದಿಲ್ಲವೆ, ಎಂದು ಹೇಳುತ್ತಾ ಗಟ್ಟಿಯಾಗಿ ಅಳತೊಡಗಿದನು.

ಜೋಬದಿಯು, ಕೋಪವನ್ನು ತಾಳಿದ್ದರೂ, ಕೂಲಿಯವನ ಮೂತಿನಿಂದ ಕರುಣಹುಟ್ಟಿ ನಗುತ್ತಾ ಅವನಿಗೆ ಉತ್ತರವನ್ನು ಹೇಳದೆ, ಉಳಿದವರನ್ನು ನೋಡಿ, ನೀವು ಯಾರು, ನನಗೆ ತಿಳಿಯುಹೇಳಿ, ಹಾಗೆಹೇಳದೆ ಇದ್ದರೆ, ಕ್ಷಣಕಾಲವಾದರೂ, ಬದುಕಲಾರಿರಿ ! ನೀವು ಗೌರವಸ್ಥರೆಂದು, ಯೋಗ್ಯತೆಯೆನ್ನು ತಿಳಿದವರೆಂದು, ನಿಮ್ಮದೇಶದಲ್ಲಿ ಮಾನ್ಯರೆಂದು, ತಿಳಿದು ಬಂದರೆ ನಿಮ್ಮಗಳಿಗೆ ತಕ್ಕಮರ್ಯಾದೆಯನ್ನು ಅಗತ್ಯವಾಗಿಯೂ ಮಾಡುವೆನೆಂದು, ಹೇಳಿದಳು. ಬಳಿಕ ಕಲೀಫನು, ತನ್ನ ಪ್ರಾಣವನ್ನುಳಿಸಿಕೊಳ್ಳುವುದಕ್ಕಾಗಿ, ತನ್ನ ಸ್ಥಿತಿಯನ್ನು ಹೇಳಬೇಕೆಂದು ತ್ವರೆಪಡುತ್ತಿದ್ದರೂ, ತಲ್ಲಣಿಸುವ ಉಸುರಿನಿಂದ ನಮ್ಮಗಳ ಸ್ಥಿತಿಯನ್ನು ತಿಳಿಯುಹೇಳಿ ಪ್ರಾಣವನ್ನು ಉಳಿಸೆಂದು, ಮಂತ್ರಿಯನ್ನುನೋಡಿ, ಮೆತ್ತಗೆ ಹೇಳಿದನು. ಅವನಿಗಿಂತಲೂ ಜಾಣನಾದ ಗಯೆಫರನು, ಕಲೀಫನ ಅವಿವೇಕದಿಂದುಂಟಾದ ಆಪದವನ್ನು ಹೋಗಲಾಡಿಸಿ, ಅವನಸ್ಥಿತಿಯನ್ನು ತಿಳಿಸದೆ ಮಾನದಿಂದ ಕಾಪಾಡುವುದಕ್ಕಾಗಿ ಬಗೆದು ನಮಗೆ ಆಗಬೇಕಾಗಿರುವುದೇ ಆಗುವುದು ಮತ್ತೇನೂ ಆಗದೆಂದು ಹೇಳಿದನು. ಅಷ್ಟರಲ್ಲಿಯೇ ಜೋಬದಿಯು, ಕಾಲೆಂಡರುಗಳ ಕಡೆಗೆ ತಿರುಗಿ, ಮೂರುಜನವೂ ಕುರುಡರಾಗಿರುವುದನ್ನು ನೋಡಿ, ನೀವೇನು ಅಣ್ಣತಮ್ಮಂದಿರೇ ಎಂದುಕೇಳಿದಳು. ಅದರಲ್ಲೊಬ್ಬನು, ಇಲ್ಲವೂ ನಾವುಗಳು ಏಕಸಂಪ್ರದಾಯಾನವರ್ತಿಗಳಾದ ಸನ್ಯಾಸಿಗಳೇಹೊರತು, ನಮಗೆಮತ್ತಾವ ಸಂಬಂಧವೂ ಇಲ್ಲವೆಂದು ಹೇಳಿದನು. ಆಗ ಆಕೆಯು ನೀವೆಲ್ಲರೂ, ಹುಟ್ಟುವಾಗಲೇ ಕುರುಡರಾದಿರಾ! ಅಥವಾ ಮಧ್ಯಕಾಲದಲ್ಲಾದಿರಾ ! ಎಂದು ಕೇಳಲು, ಇಲ್ಲವೂ ನನ್ನ ಕಣ್ಣು ಮಧ್ಯಕಾಲದಲ್ಲಿ ಕುರುಡಾಯಿತು. ಆ ಕಥೆಯು ಬಹು ವಿಚಿತ್ರವಾದುದು. ಅಲ್ಲದೆ ಸರ್ವರಿಗೂ, ವಿವೇಕವನ್ನುಂಟುಮಾಡುವುದು.

ಇಂತಹ ನಿರ್ಭಾಗ್ಯವು ನನಗೆ ದೊರೆತಮೇಲೆ ನಾನು ಧರಿಸಿರುವ ಈ ಸನ್ಯಾಸಿಯೆ ಉಡುಪನ್ನು ಹೊಂದಿದೆನು. ಎಂದುಹೇಳಲು, ಜೋಬದಿಯು, ಉಳಿದಿಬ್ಬರು ಕಾಲೆಂಡರುಗಳನ್ನು ಕೇಳಿದ ಕೂಡಲೇ ಅವರೂ ಅದೇಮೇರಿಗೆ ಹೇಳೆ ಕಡೆಯಲ್ಲಿ ಅವೂ! ನಾವು ಸಾಮಾನ್ಯಜನರೆಂದು, ತಿಳಿಯಬೇಡ. ಆದುದರಿಂದ ನಮ್ಮಲ್ಲಿ ಗೌರವಪ್ರೂ, ಮರ್ಯಾದೆಯೂ, ಚೆನ್ನಾಗಿರುವಂತೆ ನೀವು ನಡೆದುಕೊಳ್ಳಬೇಕು. ಏಕೆಂದರೆ ನಾ

ವು ಮೂವರು ಘನವಂತರಾದ ರಾಜಕುವೂರರು. ಬಬ್ಬರನೊಬ್ಬರು ನೋಡದಿರುವಂತೆ ವೇಷಧಾರಿಗಳಾಗಿ, ಇಲ್ಲಿಗೆಬಂದೆವು. ನಮ್ಮಗಳನ್ನು ಹೆತ್ತ ತಂದೆತಾಯಿಗಳು, ಲೋಕದಲ್ಲಿ ಪ್ರಸಿದ್ಧರಾಗಿ ರಾಜಪದನಿಯೆನ್ನು ಅನುಭವಿಸುತ್ತಿರುವರೆಂದು, ನೀವು ತಿಳದುಕೊಳ್ಳಬೇಕೆಂದು, ಹೇಳಿದನು. ಈ ಮಾತುಗಳನ್ನು ಕೇಳಿ ಜೋಬದಿಯು, ತನ್ನಕೋಪವನ್ನು ಅಣಗಿಸಿ ಕೊಂಡು, ಇವರನ್ನು ಇಲ್ಲಿಯೆ ಕಟ್ಟಿಹಾಕಿರಿ. ಇವರು ತಂತಮ್ಮ ಕಥೆಗಳನ್ನು ಸಂಪೂರ್ಣವಾಗಿ ಹೇಳಿ ಇಲ್ಲಿಗೆ ಬಂದುದಕ್ಕೆ ಕಾರಣವನ್ನು ತಿಳಿಸಿದರೆ, ಇವರನ್ನು ಬಿಟ್ಟುಬಿಡಿ. ಇಲ್ಲವಾದರೆ ಬಿಡಬೇಡಿ ಎಂದು ಹೇಳಿದಳು. ಇಲ್ಲಿಗೆ ಬೆಳಗಾದುದರಿಂದ ಷಹರಜಾದಿಯು, ಕಥೆಯೆನ್ನು ನಿಲ್ಲಿಸಿದಳು. ರಾಜನಾದರೋ ಮುಂದಿನ ಕಥಾಶ್ರವಣವನ್ನು ತಿಳದುಕೊಳ್ಳಬೇಕೆಂಬ ಕುತೂಹಲದಿಂದ, ಸುಲ್ತಾನಿಯೆನ್ನು, ಕೊಲ್ಲಕೊಡದೆಂದು, ಹೇಳಿ ಹೊರಟು ಹೋದನು.

೩೭ ನೆಯ ರಾತ್ರಿ ಕಥೆ

ಸುಲ್ತಾನನು, ಷಹರಜಾದಿಯ, ಕಥೆಯೆನ್ನು ಕೇಳುವುದರಲ್ಲಿ ಉತ್ಸಾಹಭರಿತನಾಗಿರುವನೆಂದು, ತಿಳದು, ದಿನರಜಾದಿಯು, ಬೆಳಗಿನಜಾವಕ್ಕೆದ್ದು, ಪ್ರಿಯಸಹೋದರಿಯೇ ! ಆ ಮೂರುಜನ ಕಾಲಿಂಡರುಗಳ ಕಥೆಯೆನ್ನು ಕೊನೆಗೊಂಡು ಪೇಳೆಂದು, ಕೇಳಲು ಷಹರಜಾದಿಯು, ಸುಲ್ತಾನನಿಂದಪ್ಪಣೆಯೆನ್ನು ಪಡೆದು, ಹೇಳಲಾರಂಭಿಸಿದಳು. ಸುಲ್ತಾನರೇ ! ಮೂರುಜನ ಕಾಲಿಂಡರೂ, ಕಲೀಫನೂ, ಗಯೆಫರನೂ, ಕೂಲಿಯೆವನು, ಸಹಾ ಆ ಲಲನಾಮಣಿಯೆರ ಸನ್ನಿಧಿಯೆಲ್ಲಿ ಹಾಸಿರುವ ರತ್ನಗಂಬಳಿಯೆಮೇಲೆ ಕೂತು ಕೊಂಡಿದ್ದರು. ಕಿಂಕರರು, ಯೆಜವಾನಿಯ ಆಜ್ಞೆಯೆನ್ನು ನಡೆಸುವುದಕೆ ಯೆತ್ನವೂಡಿದರು. ಆಗ ಕೂಲಿಯೆವನು ತನ್ನ ಪ್ರಾಣವನ್ನುಳಿಸಿಕೊಳ್ಳುವುದಕ್ಕಾಗಿ, ತನ್ನ ಕಥೆಯೆನ್ನು ಹೇಳುವುದಕ್ಕೆ ವೊದಲುಮಾಡಿದನು. ನಾನು ಇಲ್ಲಿಗೆಬಂದ ಸಂಗತಿಯು, ವೊದಲೆ ನಿಮಗೆ ತಿಳದಿರುವುದರಿಂದ, ನಾನು ಹೇಳಬೇಕಾದುದು, ಏನೂ ಇಲ್ಲ. ಈದಿನ ಬೆಳಗ್ಗೆ, ನಾನು ಕೂಲಿಯೆವನಾದುದರಿಂದ ಯಾರು ನನ್ನ ಸಂಸಾರಕ್ಕೆ ಅನ್ನವನ್ನು ನಡೆಸುವರೋ ! ಎಂದಂದುಕೊಂಡು, ಕೂಲಿಕಾರರು, ಸೇರುವ ಕೂಟದ ಚೌಕದಲ್ಲಿ, ಕಾದುಕೊಂಡಿದ್ದೆನು. ಅಲ್ಲಿ ನಾನಿರುವಾಗ

ಇಗೋ ! ಈ ನಿಮ್ಮ ತಂಗಿಯಾದ ದೊರೆಸಾನಿಯು, ನನ್ನನ್ನು ಕರೆದಳು. ಆಕೆಯ ಸಂಗಡಲೇ ಸಾರಾಯಿ, ಅಂಗಡಿಗೆ ಹೋಗಿ ಅಲ್ಲಿಂದ ಹಣ್ಣು ಕಾಯಿ ಯೆಲಿಂಗಡಿಗೂ, ಅಲ್ಲಿಂದವಿಠಾಯಿ ಅಂಗಡಿಗೂ, ಇನ್ನು ಮುಂದೆ ಪಸಾರಿ ಅಂ ಗಡಿಗೂ, ಹೋಗಿ ಅಲ್ಲಲ್ಲಿ ಬೇಕಾದ ಸಾಮಾನುಗಳನ್ನು ತೆಗೆದುಕೊಂಡು, ಗೂಡಿಗೆ ತುಂಬಿದಕೂಡಲೆ ಕುಕ್ಕೆಯು ಭರ್ತಿಯಾಯಿತು.

ಅದನ್ನು ಹೊತ್ತುಕೊಂಡು ನಾನು ಈ ಮನೆಗೆಬಂದೆನು. ನೀವು ದಯೆವಿಟ್ಟು, ಇದುವರೆಗೂ, ದಯೆಮಾಡಿ ನನ್ನನ್ನು ಇಲ್ಲಿ ಇರುವಂತೆ, ಮಾಡಿದಿರಿ. ಇದನ್ನು ನಾನೆಂದಿಗೂ, ಮರೆಯುವದಿಲ್ಲ. ಇದೆ ನನ್ನ ಕಥೆ ಎಂದು, ಹೇಳಿದನು. ಆಗ ಜೋಬದಿಯು, ಹೊರಟುಹೋಗು ಇನ್ನು ನಮ್ಮ ಕಣ್ಣಿಗೆ ಬೀಳಬೇಡವೆಂದು ಹೇಳಿದಳು. ಕೂಲಿಕಾರನು ಅಮ್ಮ ದಯೆಮಾಡಿ, ನೀವು ನನ್ನನ್ನು ಇಲ್ಲಿ ಇರುವಂತೆ ಮಾಡಬೇಕು. ನಾನು ಇವರು ಹೇಳುವ ಕಥೆಯನ್ನು ಕೇಳದೆಹೋಗುವುದು, ನ್ಯಾಯವಲ್ಲವೆಂ ದು ಹೇಳಿ, ತನಗುಂಟಾಗಿದ್ದ ಮುಹದಾಪದವು ನಿವಾರಣೆಯಾದುದಕ್ಕಾಗಿ, ಸಂತೋಷವನ್ನು ಹೊಂದಿ, ಸೋಫ಼ಾದ ಬಳಿಯಲ್ಲಿ ಕುಳಿತುಕೊಂಡನು. ಬಳಿಕ ಆ ಮೂರುಜನ ಕಾಲೆಂಡರುಗಳಲ್ಲೊಬ್ಬನು, ಜೋಬದಿಯೆನ್ನು ಕಾಣಿಸಿಕೊಂಡು, ತನ್ನ ಕಥೆಯೆನ್ನು ಹೇಳೆಂದು ಕೇಳಿದ ಮನುಷ್ಯನೆ ನ್ನು ನೋಡಿ, ಇಂತೆಂದು ಹೇಳಲಾರಂಭಿಸಿದನು.

ಒಬ್ಬರಾಜಕುಮಾರನಾದ ೧ನೇ ಕಾಲೆಂಡರಿನ ಕಥೆ.

ಅಮ್ಮ ನನ್ನ ಬಲಗಣ್ಣು ಕುರುಡಾಗುವುದಕ್ಕೂ, ಸನ್ಯಾಸಿ ಯೆ ವೇಷವನ್ನುಧರಿಸಿ, ನಾನುಆಕಾರದಿಂದ ತೋರುವುದಕ್ಕೂ, ಕಾರಣವ ನ್ನುನಿಮಗೆತಿಳಿಯಹೇಳುವುದಕ್ಕಾಗಿ ಮೊದಲುಮೂಹುವೆನು. ನಾನುಸ್ವಭಾ ವತಾತ್ಪಗಿಯೂ, ರಾಜಪುತ್ರನು. ನನ್ನತಂದೆಯು, ಒಂದಾನೊಂದು

ರಾಜ್ಯವನ್ನಾಳುತ್ತಾ ಇದ್ದನು. ಆತನಿಗೆ ಒಬ್ಬ ಸಹೋದರನುಂಟು. ಆತನೂ ಬಂದು ರಾಜ್ಯಾಧಿಪತಿಯೊಗಿದ್ದನು. ಅವನಿಗೆ ಒಬ್ಬ ಕುಮಾರನುಂಟು. ಆತನೂ, ನಾನೂ ಬಂದೇಸವಾನವಾದ ಈಡುಳ್ಳವರಾಗಿದ್ದೆವು. ನಾನು ವಿದ್ಯಾಭ್ಯಾಸವನ್ನು ಮುಗಿಸಿದಮೇಲೆ, ನನ್ನತಂದೆಯು, ನನ್ನನ್ನು ಸ್ವತಂತ್ರನಾಗಿರುವಂತೆ ಬಿಟ್ಟುಬಿಟ್ಟನು. ನಾನು ಪ್ರತಿವರ್ಷವೂ, ನನ್ನ ಚಿಕ್ಕಪ್ಪನನ್ನು ನೋಡುವುದಕ್ಕಾಗಿ ಹೋಗುತ್ತಿದ್ದೆನು. ನಾನು ಅಲ್ಲಿಗೆ ಹೋದಾಗಲೆಲ್ಲಾ ಬಹುಕಾಲ ವಿನೋದವಾಗಿ, ಅಲ್ಲಿ ಕಾಲವನ್ನು ಕಳೆಯುತ್ತಿದ್ದು, ಬಳಿಕ ನನ್ನತಂದೆಯಬಳಿಗೆ ಬರುತ್ತಿದ್ದೆನು.

ಹೀಗೆ ಅನೇಕವೇಳೆ ನಡೆದುದರಿಂದ ನನ್ನ ಚಿಕ್ಕಪ್ಪನವುಗನಿಗೂ, ನನಗೂ ದೃಢವಾದ ಸ್ನೇಹವು ರೂಢಮೂಲವಾಗಿ ಬಳೆಯಿತು. ಕಡೆಯ ಸಾರಿ ನಾನು ಅಲ್ಲಿಗೆಹೋಗಿದ್ದಕಾಲದಲ್ಲಿ, ಆತನು ನನ್ನನ್ನು ಮೊದಲಿಗಿಂತಲೂ, ಹೆಚ್ಚಾದಮರ್ಯಾದೆಯಿಂದ ಕಂಡು, ಒಂದಾನೊಂದು ದಿನ ನನಗೆ ಔತಣವನ್ನು ಮಾಡಬೇಕೆಂದು, ಬೇಕಾದಸನಾಹಗಳನ್ನೆಲ್ಲಾ, ಮಾಡಿಕೊಂಡು, ಪ್ರಸಿದ್ಧವಾಗಿರುವ ಔತಣವನ್ನು ಮಾಡಿದನು. ನಾವಿಬ್ಬರೂ, ಬಂದುಮೇಜಿನಮುಂದೆ ಕುಳಿತು ಬಹು ಸಂತೋಷದಿಂದ ಭೋಜನವನ್ನುಮಾಡಿ ದಣಿದಿರುವಾಗ, ಆತನು ನನ್ನನ್ನುನೋಡಿ, ಅಣ್ಣಾ! ನೀವು ಇಲ್ಲಿಂದ ಹೊರಟುಹೋಗಿ ಬಂದುಸಂವತ್ಸರವಾಗಿರಬಹುದು, ಆಗಿನಿಂದಲೂ, ನಾನು ಯಾವಕೆಲಸವನ್ನು ಮಾಡಿದನೆಂಬುದನ್ನು ನೀವು ಊಹಿಸಿಕೊಂಡು, ತಿಳಿದುಕೊಳ್ಳಲಾರದೆ ಹೋದಿರಲ್ಲಾ! ಈಗಲಾದರೋ! ನನ್ನಮನಸ್ಸಿನಲ್ಲಿ ಬಂದು ಅಪೇಕ್ಷೆಯುಂಟಾಗಿರುವುದು. ಅದನ್ನು ಪೂರ್ತಿ ಮಾಡಿಕೊಳ್ಳುವುದಕ್ಕಾಗಿ ಬಹುಮಂದಿ ಕೆಲಸಗಾರರಿಂದ ಬಂದು ಕಟ್ಟಡವನ್ನು ಕಟ್ಟಿಸಿರುವೆನು. ಕೆಲಸವುಮುಗಿದು, ಈಗ ವಾಸಮಾಡುವುದಕ್ಕೆ ಆ ಮನೆಯು ಅನುಕೂಲವಾಗಿದೆ. ನೀವು ಅದನ್ನುನೋಡಿದರೆ, ಬಹಳವಾಗಿ ಸಂತೋಷಪಡುವಿರಿ. ಅದು ರಹಸ್ಯವಾದುದು, ನಿಮ್ಮಲ್ಲಿ ನನಗೆ ಉಂಟಾಗಿರುವ ವಿಶ್ವಾಸಕ್ಕೆ ತಕ್ಕಹಾಗೆ ತಾವು ಅದನ್ನು ಹೊರಹಾಕುವುದಿಲ್ಲವೆಂದು, ಖಂಡಿತವಾಗಿಯೂ ಪ್ರಮಾಣಪೂರ್ವಕವಾಗಿ ನುಡಿಯಬೇಕೆಂದು, ಹೇಳಿದನು. ಆತನಿಗೂ, ನನಗೂ ಉಂಟಾಗಿದ್ದ ಪ್ರೀತಿವಿಶ್ವಾಸಗಳಿಂದ ನಾನು ಒಲ್ಲೆನೆಂದು, ಹೇಳಲಾರದೆ ಅವನ ಇಷ್ಟಾನುಸಾರವಾಗಿ ಪ್ರಮಾಣವಮಾಡಿದೆನು,

ಕೊಡಲಿ ಅಣ್ಣಾ ! ನಾನು ಬರುವವರೆಗೂ, ಇಲ್ಲಿಯೇ ಇರಿ. ಎಂದುಹೇಳಿ ಹೋಗಿ ಸ್ವಲ್ಪಹೊತ್ತಿಗೆಲ್ಲ, ಬಹು ಸೌಂದರ್ಯವತಿಯಾದ ಒಬ್ಬ ಹೆಂಗಸನ್ನು ಎಳೆದುಕೊಂಡು ಬಂದನು. ಅವಳು ಯಾರೆಂಬುದು ನನಗೆ ತಿಳಿಯದಿದ್ದರೂ, ಕೇಳುವುದು ಮರ್ಯಾದೆಯಲ್ಲವೆಂದು, ನಾನು ಸುಮ್ಮನಿದ್ದೆನು. ಪುನಹ ನಾವಿಬ್ಬರೂ ಆ ಹೆಂಗಸಿನಕೂಡೆ, ಮೇಜಿದಬಳಿಯಲ್ಲಿ ಕುಳಿತು, ತಿಂಡಿಯೆನ್ನು ತಿನ್ನುತ್ತಾ ವಿನೋದವಾಗಿ ಮಾತನಾಡುತ್ತಾ, ಆಗಾಗ್ಗೆ ಆರೋಗ್ಯಕರವಾದ ಸಾರಾಯಿಯೆನ್ನು ಕುಡಿಯುತ್ತಿದ್ದೆವು. ಆಗ ನನ್ನ ಸಹೋದರನು, ನನ್ನನ್ನುನೋಡಿ, ಅಣ್ಣಾ ! ವ್ಯರ್ಥವಾಗಿ ಕಾಲವನ್ನು ಕಳೆಯಬಾರದು, ಆದುದರಿಂದ ನೀವು ಈ ಹೆಂಗಸಿನೊಡನೆ ಹೊಸದಾಗಿ ಕಟ್ಟಿರುವ ಆ ಬಂಗಲೆಯಬಳಿಗೆ ಹೋಗಿ, ಬಾಗಿಲು ತೆಗೆದಿರುವುದರಿಂದ ನಾನು ಬರುವವರೆಗೂ, ನೀವಿಬ್ಬರೂ ಅಲ್ಲಿ ಇದ್ದರೆ ಬೇಗನೆ ನಾನು ಬಂದುಬಿಡುವೆನು, ಎಂದು ಹೇಳಿದನು. ನಾನು ಮೊದಲೇ ಪ್ರಮಾಣವೂಡಿ ಹೇಳಿರುವುದರಿಂದ, ಅವನ ಮಾತನ್ನು ಅನುಮೋದಿಸಿ, ಆ ಹೆಂಗಸಿನಕೈಯ್ಯನ್ನುಹಿಡಿದುಕೊಂಡು, ಬೆಳ್ಳಗೆ ಕಾಯುತ್ತಿರುವ ಬೆಳದಿಂಗಳ ಬೆಳಕಿನಿಂದ, ದಾರಿತಪ್ಪದಂತೆ, ಆ ರಾಜಕುಮಾರನು ಹೇಳಿದ ಬಂಗಲೆಯ ಬಳಿಗೆ ಬಂದನು. ನಾವು ಆ ಸ್ಥಳವನ್ನು ಸೇರಿದಕೂಡಲೇ ಆ ರಾಜಕುಮಾರನು, ಬಂದುಸಣ್ಣ ಮೊಗೆಯತುಂಬ ನೀರನ್ನೂ, ಕೊಡಲಿಯೆನ್ನೂ ಅದರಜೊತೆಗೆ ಗಂಟುಹಾಕಿದ ಬಂದುಚೀಲವನ್ನು ಹಿಡಿದು, ನಮ್ಮಹಿಂದೆಯೇ ಬಂದನು. ಆತನು ಬರುವುದನ್ನುನೋಡಿ ನಾವು ಗೋರಿಗೆಹೋದೆವು. ಅವನುಬಂದು ಆ ಗೋರಿಯನ್ನು ಗುದ್ದಲಿಯಿಂದ ಅಗೆದು ಕಲ್ಲುಗಳನ್ನು ತೆಗೆದು, ಹಳ್ಳವೂಡಿದನು. ಅದರಲ್ಲಿ ಕೃತಕವಾದ ಬಾಗಿಲೊಂದು, ಕಾಣಿಸಿತು. ಅವನು ಅದನ್ನು ಎತ್ತಿದಕೂಡಲೆ ಅದರಕೆಳಭಾಗದಲ್ಲಿ ಸೋಪಾನವು ಕಾಣಬಂದಿತು. ಆಗ ಆತನು ಆ ಹೆಂಗಸನ್ನುನೋಡಿ, ಅಮ್ಮಾ! ನಾನು ನಿನ್ನೊಡನೆ ಹೇಳಿದಸ್ಥಳಕ್ಕೆ ಹೋಗುವುದು ಈಮಾರ್ಗವಾಗಿಯೇ ಎಂದನು. ಕೂಡಲೆ ಅವಳು ಸೋಪಾನವನ್ನು ಇಳಿದಳು. ತಾನೂಹಿಂದೆಯೇ ಹೊರಟನು. ನನ್ನನ್ನುನೋಡಿ, ಅಣ್ಣಾ ! ನೀನು ತೆಗೆದುಕೊಂಡ ತೊಂದರೆಗಾಗಿ ನಾನುತುಂಬ ವಂದನೆಗಳನ್ನಾಚರಿಸುವೆನೆಂದು ಸಲಾಮು ಮಾಡಿದನು. ಅದನ್ನುನೋಡಿ, ತಮ್ಮಾ ! ಇದೇನು ಎಂದುಕೇಳಲು, ನೀವು

ಸುಮ್ಮನಿರಿ ಇಲ್ಲದಿದ್ದರೆ ಬಂದವರಿಯೆನ್ನು ಹಿಡಿದು ಹೋಗಬಹುದೆಂದು, ಹೇಳಿದನು. ಇಲ್ಲಿಗೆ ಬಿಳಗಾದುದೆಂದು ಷಹರಜಾದಿಯು, ಕಥೆಯೆನ್ನು ನಿಲ್ಲಿಸಿದಳು. ಸುಲ್ತಾನನೂ, ಎದ್ದು ಸುಮ್ಮನೆ ಹೊರಟುಹೋದನು. ಆದರೆ ಆ ರಾಜಕುಮಾರನ ಮತ್ತು ಹೆಂಗಸಿನ ಸಂಗತಿಯೇನಾಯಿತೋ ಅದನ್ನು ತಿಳದುಕೊಳ್ಳಬೇಕೆಂಬ ಕುತೂಹಲದಿಂದ, ಯಾವಾಗ ರಾತ್ರಿಯಾಗುವುದೋ ! ಎಂದು ಕಳವಳಸುತ್ತಿದ್ದನು.

೩೪ ನೆಯ ರಾತ್ರಿಕಥೆ.

ಮರುದಿನ ಬಿಳಗಿನಜಾವಕ್ಕೆ ದಿನರಜಾದಿಯು, ಎದ್ದು ತನ್ನ ಅಕ್ಕನನ್ನು, ಎಚ್ಚರಗೊಳಿಸಿ, ಅಕ್ಕಾ ! ಆ ಕಾಲೆಂಡರು, ತನ್ನ ಕಥೆಯೆನ್ನು ಹೇಳುತ್ತಿರುವಾಗ ಮಧ್ಯಭಾಗದಲ್ಲಿ ನಿಲ್ಲಿಸಿರುವೆಯೆಲ್ಲಾ ! ಅದನ್ನು ಪೂರ್ತಿಯಾಗಿ ಕೇಳಬೇಕೆಂದುಸುಲ್ತಾನರು, ಬಹಳವಾಗಿಕುತೂಹಲಯುಕ್ತರಾಗಿರುವರು. ಆದುದರಿಂದ ಜಾಗ್ರತೆಯಾಗಿ ಆರಂಭಿಸೆಂದು, ನುಡಿಯಲು, ಷಹರಜಾದಿಯು, ಕಥೆಯೆನ್ನು ಹೇಳತೊಡಗಿದಳು. ಕಾಲೆಂಡರು ಜೋಬದಿಯೆನ್ನು ನೋಡಿ, ಮುಂದೆ ಇಂತೆಂದು ಹೇಳಸಾಗಿದನು. ಅಮ್ಮಾ ! ಇದರಿಂದನಾನು ಏನನ್ನು ತಿಳದುಕೊಳ್ಳುವುದಕ್ಕೆ ಶಕ್ತನಲ್ಲವಾದುದರಿಂದ, ನನ್ನ ಚಿಕ್ಕಪ್ಪನ ಊರಿಗೆಬಂದೆನು. ಆಗ ನಾನು ಕುಡಿದಸಾರಾಯಿಯು ಮತ್ತು ತಲೆಗೇರಿದ್ದುದರಿಂದ ಅಂತಃಪುರವನ್ನುಸೇರಿ ಮಲಗಿಕೊಂಡೆನು. ಮರುದಿನ ಬಿಳಿಗೆ ಎದ್ದು ರಾತ್ರಿನಡೆದ ಸಂಗತಿಯೆನ್ನು ಕುರಿತು ಯೋಚಿಸುತ್ತಿರುವಾಗ, ಅದು ಅತ್ಯಂತ ಆಶ್ಚರ್ಯವಾಗಿ ತೋರಿದುವರಿಂದ, ಇದು ಕನಸೇಹೊರತು ಮತ್ತೇಬೇರೆಯೆಲ್ಲವೆಂದುಕೊಂಡು, ನಾನು ನನ್ನ ಚಿಕ್ಕಪ್ಪನ ಮಗನನ್ನು ನೋಡಬೇಕೆಂಬ ಕುತೂಹಲದಿಂದ ಇದು ಸಮಯವಹುದೋ ! ಅಲ್ಲವೋ ? ನೋಡಿಕೊಂಡುಬರುವಂತೆ, ನನ್ನ ಚಾರಕನಿಗೆ ಆಜ್ಞಾಪಿಸಿದೆನು. ಅವರು ಅಲ್ಲಿಗೆಹೋಗಿ ವಿಚಾರಿಸಿಕೊಂಡುಬಂದು ಅವನು ನಿನ್ನೆರಾತ್ರಿ ಮನೆಯೆಲ್ಲಿಯಾಲಗದೆ ಎಲ್ಲಿಯೋ ಹೋದನೆಂದೂ, ಇನ್ನೂಬಾರದೇ ಇರುವುದರಿಂದ ಎಲ್ಲರೂ ವ್ಯಸನಪಡುತ್ತಾ ಇದಾರೆಂದು ಹೇಳಿದನು. ಆದುದರಿಂದ ನಾನು ರಾತ್ರಿನೋಡಿದ ಆಶ್ಚರ್ಯಕರವಾದ ಸಂಗತಿಯು ನಿಜವಾಗಿರಬಹುದೆಂದು ಗೊತ್ತುಮಾಡಿ, ತುಂಬ ವ್ಯಸ

ನಾಕಾಲ್ಕಂತನಾಗಿ ಅವನನ್ನು ಹುಡುಕುವುದಕ್ಕೆ ಊರಲ್ಲಿರುವ ಸ್ಮಶಾನದ ಗೋರಿಗಳೆಲ್ಲವನ್ನೂ, ಹುಡುಕಿನೋಡಿ ಎಲ್ಲಿಯೂ ಸಿಕ್ಕದಿರುವುದರಿಂದ ನಾಲ್ಕು ದಿನಗಳವರಿಗೂ, ವ್ಯರ್ಥವಾಗಿ ಹುಡುಕುತ್ತಿದ್ದನು.

ನನ್ನ ಚಿಕ್ಕಪ್ಪನು, ಈ ಕಾಲದಲ್ಲಿ ಆತನಮಗನನ್ನು ಹುಡುಕುವುದಕ್ಕಾಗಿ ಹೋಗಿದ್ದುದರಿಂದ, ಊರಿನಲ್ಲಿರಲಿಲ್ಲವೆಂದು. ನೀವು ತಿಳಿದುಕೊಳ್ಳಬೇಕು. ಅವರು ಇದೇವ್ಯಸನದಿಂದ ಕೊರಗಿ ಸತ್ತುಹೋದರು. ಅದನ್ನು ತಿಳಿದು ನಾನುಹೋಗಿಬರುತ್ತೇನೆಂದು, ಮಂತ್ರಿಗಳಸಂಗಡಹೇಳಿ ಬಹುದಿನಗಳಾದುದರಿಂದ, ನನ್ನತಂದೆಯನ್ನು ನೋಡಬೇಕೆಂಬ ಕುತೂಹಲದಿಂದ, ಆತನಬಳಿಗೆ ಬಂದುಸೇರಿದೆನು. ಅಷ್ಟರಲ್ಲಿಯೇ ನನ್ನಚಿಕ್ಕಪ್ಪನ ಮಂತ್ರಿಗಳು, ರಾಜಕುಮಾರನು ಏನಾದನೋ ಎಂದು ಹುಡುಕುತ್ತಾ ಅಲೆಯುತ್ತಿದ್ದರು. ಆದರೆ ನಾನುಮೊದಲೇ ಪ್ರಮಾಣಮಾಡಿರುವುದರಿಂದ, ರಹಸ್ಯವನ್ನು ಬಯಲುಮಾಡುವುದಕ್ಕೆ ಯತ್ನವಿಲ್ಲದೆ ನಾನುನೋಡಿದ ಆಶ್ಚರ್ಯವನ್ನು ನಡೆಸಿದಸಂಗತಿಯೆನ್ನೂ ಯಾರಿಗೂಹೇಳದೆ ಸುಮ್ಮನಿದ್ದೆನು. ನಾನು ನನ್ನಪಟ್ಟಣಕ್ಕೆ ಬಂದಕೂಡಲೆ, ಊರುಬಾಗಿಲಲ್ಲಿ ಎಂದಿಗೂ ಇಲ್ಲದ ಅನೇಕಜನ ಪಹರೆಯವರನ್ನು ಕಂಡೆನು. ಅವರಾದರೊ ನನ್ನನ್ನು ನೋಡಿದಕೂಡಲೇ ಸುತ್ತಲೂಮುತ್ತಿಕೊಂಡರು. ಅವರನ್ನು ನೋಡಿ, ನನ್ನನ್ನು ಏತಕ್ಕಾಗಿ ಹೀಗೆಮಾಡುವಿರಿ, ಎಂದು ಕೇಳಿದೆನು. ಅದಕ್ಕವರು, ರಾಜಪುತ್ರಾ ! ನಿಮ್ಮತಂದೆಯು ಸತ್ತುಹೋದನು. ಪ್ರಧಾನಮಂತ್ರಿಯು ರಾಜನಾಗಿರುವನು. ಆತನ ಅಪ್ಪಣೆಯಾಗುವವರೆಗೂ, ನಾವು ನಿಮ್ಮನ್ನು ಸೆರೆಯಲ್ಲಿಹಾಕಿರುವೆವೆಂದು, ಹೇಳಿದರು. ಹೀಗೆಹೇಳಿದಕೂಡಲೆ, ಕಾವಲುಗಾರರು ನನ್ನನ್ನು ಹಿಡಿದುಕೊಂಡುಹೋಗಿ ಆ ಕ್ರೂರನಾದ ಹೊಸರಾಜನಬಳಿಯಲ್ಲಿ ನಿಲ್ಲಿಸಿದರು. ಅಮ್ಮಾ ! ಆ ಕಾಲದಲ್ಲಿ ನನಗೆ ಉಂಟಾದ ವ್ಯಸನವೂ, ಆಶ್ಚರ್ಯವೂ, ಎಂಥದಾಗಿರಬಹುದೋ ! ಎಂಬುದನ್ನು ನೀವೇಯೋಚಿಸಬಹುದು. ಈ ದ್ರೋಹಿಯಾದ ಮಂತ್ರಿಗೆ ನನ್ನಮೇಲೆ ಮೊದಲಿನಿಂದಲೂ, ಮಹತ್ತಾದ ದ್ವೇಷವುಂಟು, ಇದಕ್ಕೆಕಾರಣವೇನೆಂದರೆ ನಾನು ಚಿಕ್ಕವನಾಗಿರುವಾಗ್ಯೆ ಕೋವಿಯೆನ್ನು ಹಿಡಿದುಕೊಂಡು, ಆಟವಾಡುತ್ತಿದ್ದೆನು. ಆಗ ಮಹಡಿಯಮೇಲೆ ಒಂದಾನೊಂದುದಿನ ನಾನುಬಂದು ಹಕ್ಕಿಯೆನ್ನುನೋಡಿ, ಅದರಮೇಲೆ ಗುಂಡುಹೊಡೆದೆ

ನು. ಆ ಗುಂಡು ಅದಕ್ಕೆತಾಕದೆ ದೈವಾಧೀನದಿಂದ ತನ್ನ ಮನೆಯ ಮಹಡಿ ಯೆಮೇಲೆ ನಿಂತುಕೊಂಡಿದ್ದ ಮಂತ್ರಿಗೆತಾಕಿ ಅವನಬಲಗಣ್ಣು ಕುರುಡಾ ಯಿತು. ಅದನ್ನುತಿಳಿದು, ನಾನು ಪಶ್ಚಾತ್ತಾಪಯುಕ್ತನಾಗಿ ತಾನುಮಾ ಡಿದ ಅಚಾತುರ್ಯವನ್ನು ಕ್ಷಮಿಸಬೇಕೆಂದು, ಅತನಬಳಿಗೆ ಲೇಖನವನ್ನು ದೂತರಮೂಲಕ ಕಳುಹಿಸಿದೆನಲ್ಲದೆ ನಾನು ಪ್ರತ್ಯಕ್ಷವಾಗಿಕಂಡು, ನನ್ನ ಅಪರಾಧವನ್ನು ಕ್ಷಮಿಸಬೇಕೆಂಬದಾಗಿ ಬೇಡಿಕೊಂಡೆನು.

ಆದರೂ, ಅತನುನನ್ನಮೇಲೆ ಕೋಪವಾಗಿಯೇ ಇದ್ದನು. ಅಲ್ಲ ದೆ ಒಂದಾನೊಂದು ಸಮಯೆದಲ್ಲಿ ನನಗೆ ಹೀಗೆತಿಳಿಯಪಡಿಸಿದನು. ನಾನು ನಿನ್ನನ್ನು ನನ್ನ ಅಧಿಕಾರಕ್ಕೊಳಪಡಿಸಿಕೊಂಡು, ಬಿಕ್ಷಗಾರನತೆರದಿಂದ ಶಿಕ್ಷಿಸುತ್ತಾ ತನ್ನ ಕೋಪವನ್ನು ತೀರಿಸಿಕೊಳ್ಳುವೆನೆಂದು ಹೇಳಿದನು. ಈಗ ಆತನು ನನ್ನನ್ನು ನೋಡಿದಕೂಡಲೆ ತನ್ನ ಕೈಬೆರಳನ್ನು ನನ್ನಕಣ್ಣಿಗೆಹಾ ಕಿ ಗುಡ್ಡೆಯನ್ನು ತಿವಿದನು. ಆದುದರಿಂದ ಅಮ್ಮಾ ! ಈ ನನ್ನಕಣ್ಣು ಕುರುಡಾಯಿತು. ಆತನು ಇಷ್ಟಕ್ಕೆ ತೃಪ್ತಿಯೆನ್ನುಹೊಂದದೆ ಒಂದು ಪೆಟ್ಟಿಗೆಯಲ್ಲಿಹಾಕಿ ಬಯೆಲಿಗೆ ತೆಗೆದುಕೊಂಡುಹೋಗಿ, ಪಾಣವನ್ನು ಕಳೆದು, ಮಾಂಸವನ್ನುಕತ್ತರಿಸಿ, ಪಕ್ಷಿಗಳು ತಿನ್ನುವಂತೆಮಾಡಿ, ಎಂಬದಾ ಗಿ ಹಿಂಸಕರನ್ನು ಕರೆಸಿ ನೇಮಕಮಾಡಿದನು. ಆಕೂರಿಗಳು ನನ್ನನ್ನು ಒಂದು ಪೆಟ್ಟಿಗೆಯೆಲ್ಲಿಹಾಕಿ ಬಾಗಿಲನ್ನುಮುಚ್ಚಿ ಕುದುರೆಯಮೇಲೆಹೇರಿ ಕೊಂಡು, ರಾಜನ ಕೂರವಾದ ಆಜ್ಞೆಯನ್ನು ನೆರವೇರಿಸುವುದಕ್ಕೆ ಪಟ್ಟಣದಿಂದ ಹೊರಕ್ಕೆತೆಗೆದುಕೊಂಡು ಹೋಗುತ್ತಿರಲು, ನಾನು ಅಳು ತ್ತಾ ಅವರನ್ನು ಬೇಡಿಕೊಂಡುದಡಿಂದ, ಅವರಿಗೆ ಮನಸ್ಸುಕರಗಿ ನನ್ನ ನ್ನುಬಿಟ್ಟು, ಹೊರಟುಹೋಗುವಾಗ ಈ ರಾಜ್ಯದಲ್ಲಿರಬೇಡ, ಮತ್ತೆ ಯೊವಾಗಲೂ, ಇಲ್ಲಿಗೆಬರಬೇಡ, ಬಂದುದೇ ಆದರೆ ನಿನ್ನಪಾಣವು ಉಳಿ ಯುವುದಿಲ್ಲ ! ಅಲ್ಲದೆ ನಿನ್ನಿಂದ ನಾವು ಪಾಣವನ್ನು ಬಿಡಬೇಕಾಗುವುದು. ಎಂದು ಹೇಳಲು, ನಾನು ಈಮಹಾಆಪತ್ತಿನಿಂದ ತಪ್ಪಿಸಿಕೊಂಡುದಕ್ಕಾಗಿ, ಮಹಾ ಸಂತೋಷವನ್ನು ಹೊಂದಿದೆನೇಹೊರತು, ಕಣ್ಣುಹೋದುದಕ್ಕಾಗಿ ವ್ಯಸನಪಟ್ಟವನಾಗಲಿಲ್ಲ. ಹೀಗಿರುವಾಗ ನಾನು ಅತ್ಯಂತವಾದಭಯೆ ದಿಂದ ಹೊರಗೆ ಸಂಚಾರಮಾಡಲಾರದೆ ಹಗಲುಹೊತ್ತು ಯಾರಿಗೂಕಾಣ ದಂತೆ ಮರೆಯೊಗಿರುತ್ತಾ, ಕೈಲಾದಮಟ್ಟಿಗೆ, ರಾತ್ರಿಕಾಲಪ್ರಯೊಣವಾ

ಡಿ, ಕೆಲವುದಿನಗಳಮೇಲೆ, ನನ್ನ ಚಿಕ್ಕಪ್ಪನರಾಜ್ಯವನ್ನು ಅತಿಪ್ರಯಾಸದಿಂದ ಸೇರಿದವನಾದೆನು.

ಬಳಿಕ ನನ್ನ ಚಿಕ್ಕಪ್ಪನನ್ನು ನೋಡಿ, ಪುನಹ ಆತನಬಳಿಗೆ ಬರುವುದಕ್ಕೆ ಕಾರಣವನ್ನು ಮೊದಲಿದ್ದ ಸ್ಥಿತಿಗಿಂತಲೂ, ಅತಿಕಷ್ಟವಾದ ದುರವಸ್ಥೆಯನ್ನು ಹೊಂದಿರುವುದಕ್ಕೆ, ಕಾರಣವನ್ನೂ, ನನ್ನ ರಾಜ್ಯದಲ್ಲಿ ನಡೆದ ಸಮಾಚಾರವನ್ನೂ, ವಿಸ್ತಾರವಾಗಿ ತಿಳಿಸಿದೆನು. ಅದನ್ನು ಕೇಳಿ, ನನ್ನ ಚಿಕ್ಕಪ್ಪನು ಅಯ್ಯೋ! ನಾನೆಂತಹ ದುರದೃಷ್ಟದವನು, ಪ್ರೀತಿಪಾತ್ರನಾದ ನನ್ನ ಮಗನನ್ನು ಕಳೆದುಕೊಂಡು, ಅತ್ಯಂತವಾದ ವ್ಯಸನವನ್ನು ಹೊಂದಿರುವಕಾಲದಲ್ಲಿ ವಾತ್ಸಲ್ಯಯುಕ್ತನಾದ, ತಮ್ಮನು ಸತ್ತುಹೋದ ವರ್ತಮಾನವೂ, ಬರಬಹುದೇ ಆಹಾ! ಲೋಕದಲ್ಲಿ ಬಂದೊದಗುವ ಕಷ್ಟಪರಂಪರೆಯೆನ್ನು ವಿಾರಿನಡೆಯೆತಕ್ಕವರಾರೆಂದು, ಅತ್ಯಂತವ್ಯಸನದಿಂದ ಕಣ್ಣೀರನ್ನು ಸುರಿಸುತ್ತಾ ಬಾಷ್ಪಸ್ನಾನವಾಡಿದನು. ಅಲ್ಲದೆ ನನ್ನನ್ನು ನೋಡಿ, ಅಯ್ಯಾ! ಈಗ ನನಗೆಪಾಪ್ರಪ್ತವಾಗಿರುವ ದುಃಖದಿಂದ ನಾನು ಪುನಹ ಬದುಕುವಹಾಗಿಲ್ಲವೆಂದೂ, ನುಡಿದನು. ಅದನ್ನು ಕೇಳಿ ನಾನು ಪಶ್ಚಾತ್ತಾಪಯುಕ್ತನಾಗಿ, ಮೊದಲಿನ ರಹಸ್ಯವನ್ನು ಎಂದಿಗೂ, ಬಯಲುಮಾಡುವುದಿಲ್ಲವೆಂದು, ನಾನು ಪ್ರಮಾಣಮಾಡಿದ್ದರೂ, ಅದನ್ನು ಲಕ್ಷ್ಯಮಾಡದೆ ನನಗೆತಿಳಿದ ಸಂಗತಿಗಳೆಲ್ಲವನ್ನೂ ಆತನಿಗೆ ತಿಳಿಯಪಡಿಸಿದೆನು.

ಅದನ್ನು ಕೇಳಿ ನನ್ನ ಚಿಕ್ಕಪ್ಪನು, ಕೊಂಚ ಸಮಾಧಾನಮನಸ್ಕನಾಗಿ ನನ್ನನ್ನು ಕುರಿತು ಅಯ್ಯಾ! ನೀನುಹೇಳಿದ ವರ್ತಮಾನದಿಂದ ನನಗೆ ಸ್ವಲ್ಪ ಸಮಾಧಾನ ಉಂಟಾಗಿದೆ. ಅಲ್ಲದೆ ಆತನು ಗೋರಿಯೆನ್ನು ಕಟ್ಟಿಸಿದ ಸಂಗತಿಯು ನನಗೆತಿಳಿಯುವುದು. ಆ ಸ್ಥಳವನ್ನು ನಾನು ಕಂಡಿರುವೆನು. ನೀನುಕೂಡ ಆ ಸ್ಥಳಕ್ಕೆಹೋಗಿ ನೋಡಿರುವೆಯಾದುದರಿಂದ, ನಾವಿಬ್ಬರೂ ಅಲ್ಲಿಗೆಹೋಗಿ ವಿಷಯವನ್ನು ತಿಳಿದುಕೊಳ್ಳಬಹುದೆಂದು, ಹೇಳಿದನು. ಅಲ್ಲದೆ ರಹಸ್ಯವಾಗಿ ಆತನು ಅದನ್ನು ಕಟ್ಟಿಸಿರುವುದರಿಂದಲೂ, ಆ ರಹಸ್ಯವನ್ನು ಬಯಲುಮಾಡಕೂಡದೆಂದು, ನಿನ್ನಲ್ಲಿ ಪ್ರಮಾಣವಚನವನ್ನು, ತೆಗೆದುಕೊಂಡಿರುವುದರಿಂದ, ನಾವಿಬ್ಬರೂ, ಏಕಾಂತದಲ್ಲಿ ಆ ಸ್ಥಳಕ್ಕೆಹೋಗಿ ಹುಡುಕಬೇಕಾಗಿರುವುದೆಂದೂ, ನುಡಿದನು.

ಈ ರಹಸ್ಯವನ್ನು ಹೊರಹಾಕುವುದಕ್ಕೆ ನನ್ನ ಚಿಕ್ಕಪ್ಪನಿಗೆ ಮತ್ತೊಂದು ಸಮಯವು ದೊರಕಿತು. ಅದನ್ನು ಆತನು ನನ್ನ ಸಂಗಡ ಹೇಳಲಿಲ್ಲ. ಅದು ಮತ್ತೂ ರಹಸ್ಯವಾದುದು. ನನ್ನ ಚರಿತ್ರೆಯನ್ನು ಕೊನೆಯುವರೆಗೂ ಕೇಳುವುದರಿಂದ ಆ ಸಂಗತಿಯು ನಿಮಗೆ ತಿಳಿದುಬರುವುದು. ಬಳಿಕ ನಾವು ವೇಷಧಾರಿಗಳಾಗಿ ಹಿತ್ತಲುಬಾಗಿಲಿಂದ ಹೊರಗೆಬಂದು ಹುಡುಕಿಕೊಂಡುಬಂದ ಗೋರಿಯನ್ನು ಶೀಘ್ರವಾಗಿ ಕಂಡುಕೊಂಡೆವು. ಆ ಗೋರಿಯನ್ನೇನೋ ನಾನುಕಂಡಿದ್ದೆನು. ಆದರೆ ನಾನೆಷ್ಟುಹುಡುಕಿದರೂ, ದೊರಕದೆ ಹೋಗಿದ್ದುದರಿಂದ, ಈಗ ತುಂಬ ಸಂತೋಷವನ್ನು ಹೊಂದಿದೆನು. ಆದರೆ ಆ ಗೋರಿಯನ್ನು ನಾವುನೋಡಿದಕೂಡಲೇ ಸೋಪಾನದಬಳಯಲ್ಲಿ ಕಪಟತಂತ್ರಯುಕ್ತವಾದ ಕಬ್ಬಿಣದಬಾಗಿಲು ಬಲವಾಗಿ ಹೊಚ್ಚಿಕೊಂಡಿದ್ದಿತು. ಅದನ್ನು ರಾಜಕುಮಾರನು, ನಾನುಮೊದಲು ಹೇಳಿದ ನೀರಿನಿಂದಲೂ, ಕಬ್ಬಿಣದಿಂದಲೂ, ಕಬ್ಬಿದ್ದುದರಿಂದ, ನಾವುಪ್ರಯಾಸವಿಲ್ಲದೆ ಆ ಬಾಗಿಲನ್ನುತೆಗೆದು, ನನ್ನ ಚಿಕ್ಕಪ್ಪನು ಇಳಿದಬಳಿಕ ನಾನು ಆತನನ್ನು ಹಿಂಬಾಲಿಸಿದೆನು. ನಾವಿಬ್ಬರೂ, ಎಂಟು ಮೆಟ್ಟಿಲುಗಳನ್ನು ಇಳಿದು ನೋಡುವಲ್ಲಿ ಒಂದು ಅಂತರಾಲಯವನ್ನುಕಂಡೆವು. ಅಲ್ಲಿ ದುರ್ಗಂಧಯುಕ್ತವಾದ ಹೊಗೆಯು, ತುಂಬಿಹೋಗಿದ್ದುದರಿಂದ, ಉರಿಯುತ್ತಿದ್ದ ದೀಪವು ಮುಂಕಾಗಿದ್ದಿತು. ಅದನ್ನುನೋಡಿ, ನಾವು ಮತ್ತೊಂದುಬಾಗಿಲನ್ನು ದಾಟಿಹೋದೆವು. ನಾನಾವಿಧವಾದ ಶಾಖೋಪಶಾಖೆಗಳಿಂದ ಕೂಡಿಕೊಂಡಿದ್ದ ಕುಭಗಳು ಕೆತ್ತನೆಯ ಕೆಲಸವೂಡಿದ ಬೊಂಬೆಗಳೂ, ಸುಗಂಧಪರಿಮಳಯುಕ್ತವಾದ ದೀವಿಗೆಗಳೂ, ಇದ್ದವು. ಅದರನಡುವೆ ಒಂದಾನೊಂದು ಪದಾರ್ಥವಿದ್ದಿತು. ಅಲ್ಲಿ ನಾನಾವಿಧವಾದ ಅಹಾರಪದಾರ್ಥಗಳದ್ದವೇ ಹೊರತು, ಜನರಾರು ಇಲ್ಲದುದರಿಂದ, ನಮಗೆ ಅತ್ಯಾಶ್ಚರ್ಯವುಂಟಾಯಿತು. ನಮ್ಮೆದುರಿನಲ್ಲಿ ಬಹುದೊಡ್ಡದಾದ ಒಂದು ಸೋಫಾವೂ ಇದ್ದಿತು. ಅದಕ್ಕೆ ಅನೇಕ ಮೆಟ್ಟಿಲುಗಳಿದ್ದುದರಿಂದ ನಾವು ಅದರಮೇಲೆ ಹತ್ತಿಹೋಗಿ ನೋಡಲಾಗಿ ಅದರಮೇಲೊಂದು ಮಂಚವೂ ಇದ್ದಿತು. ಅದರ ತೆರೆಯನ್ನು ತೆಗೆದುನೋಡಿ, ರಾಜನುಮಲಗಿರುವ ತನ್ನ ಕುಮಾರನನ್ನೂ ಒಬ್ಬ ಸುಂದರಿಯಾದ ಹೆಂಗಸನ್ನೂ ನೋಡಿದನು.

ಆದರೆ ಅವರು ಕರಿಯೆಕಾಡಿಗೆಯಂತೆ ಬಿಂದು ಸೀಕಲಾಗಿದ್ದರು. ಅವರನ್ನು ನೋಡಿದಕೂಡಲೇ ನಾನು ಅತ್ಯಂತವಾದ ಭಯವನ್ನುಹೊಂದಿದೆನು. ಆದರೆ ಇದಕ್ಕಿಂತಲೂ, ಅತ್ಯಾಶ್ಚರ್ಯವನ್ನುಂಟುಮಾಡುವ ಸಂಗತಿಯೊಂದು ಅಲ್ಲಿಯೇನನಗೆ ಕಂಡುಬಂದಿತು. ಅದೇನಂದರೆ ನನ್ನ ಚಿಕ್ಕಪ್ಪವು ಈ ಸ್ಥಿತಿಯಲ್ಲಿರುವ ಮಗನನ್ನುನೋಡಿ, ಸ್ವಲ್ಪವಾದರೂ, ವ್ಯಸನಪಡದೆ ಸಂತೋಷದಿಂದ ಅವನ ಮುಖವಮೇಲೆ ಉಗುಳಿ ಈ ಪ್ರಪಂಚದಲ್ಲಾಗುವ ಶಿಕ್ಷೆ ಇದೇ ಅಲ್ಲದೆ ಪರಲೋಕದಲ್ಲೂ ನಿನಗೆ ತುಂಬಾ ಶಿಕ್ಷೆಯಾಗುವುದೆಂದು, ಹೇಳಿ ತನ್ನಕಾಲಿನಲ್ಲಿರುವ ಜೋಡನ್ನು ತೆಗೆದುಕೊಂಡು, ಅವನೊಬ್ಬಂದು ನಿರ್ದಕ್ಷ್ಯವಾಗಿ, ಆತನಕೆನ್ನೆಯಮೇಲೆ ಒಂದು ಪೆಟ್ಟನ್ನು ಹಾಕಿದನು. ಇಷ್ಟರಲ್ಲಿಯೆ ಬೆಳಗಾದುದರಿಂದ ಷಹರಜಾದಿಯು, ಕಥೆಯನ್ನು ನಿಲ್ಲಿಸಿದಳು. ಈ ಕಥೆಯ ಸ್ವಾರಸ್ಯವು ಬಹುಸುಂದರವಾಗಿರುವುದರಿಂದ ನಾಳೆಯದಿನ ಇದನ್ನುಪೂರ್ತಿಯಾಗಿ ಕೇಳಬೇಕೆಂದು, ಸುಲ್ತಾನನುಹೇಳಿ ಹೊರಟುಹೋದನು.

೩೯ ನೆಯ ರಾತ್ರಿ ಕಥೆ.

ಮರುದಿನ ದಿನರಜಾದಿಯೂ, ಎಂದಿನಂತೆ ಜಾಗ್ರತೆಯಾಗಿ ಎದ್ದು, ತನ್ನ ಅಕ್ಕನನ್ನು ಕುರಿತು ಅಕ್ಕಾ! ಬಹುಚಮತ್ಕಾರಯುಕ್ತವಾದ, ಆ ಮೊದಲನೆ ಕಾಲಿಂಡರಿನ ಕಥೆಯನ್ನು ಕೇಳಿದಬೊರತು ನನ್ನ ಪ್ರಾಣಗಳುಳಿಯುವುದಿಲ್ಲವೆಂದು ಹೇಳಲು, ಷಹರಜಾದಿಯು, ಹೇಳತೊಡಗಿದಳು. ಮೊದಲನೆಯ ಕಾಲಿಂಡರು, ಜೋಬದಿಯನ್ನು ನೋಡಿ ಅಮ್ಮಾ! ನನ್ನಚಿಕ್ಕಪ್ಪನು, ಸತ್ತುಹೋದ ತನ್ನ ಮಗನನ್ನುನೋಡಿ ದೂಷಿಸಿದುದರಿಂದ ನನಗೆ ಬಹಳವಾಗಿ ಆಶ್ಚರ್ಯವುಂಟಾಯಿತು. ಬಳಿಕ ನಾನು ರಾಜನನ್ನುನೋಡಿ, ಸ್ವಾಮಿನಾ! ನನ್ನಪ್ರೀತಿಪಾತ್ರನಾದ ತಮ್ಮನು ಸತ್ತುಹೋಗಿರುವುದನ್ನು ನೋಡಿದಾಗಿನಿಂದ ನನಗೆ ಅತ್ಯಂತವಾದ ವ್ಯಸನವು ಪ್ರಾಪ್ತವಾಗಿರುವುದು. ಆದರೆತಾವು ಆತನನ್ನುನೋಡಿ ಈ ತೆರದಿಂದ ನಿರ್ದಕ್ಷ್ಯವಾಗಿ ಶಿಕ್ಷೆಮಾಡುವುದಕ್ಕೆ ಅವನುಮಾಡಿದ ತಪ್ಪುಗಳೇನುಂಟು ಎಂಬುದನ್ನು ನನಗೆ ತಿಳಿಸಬೇಕೆಂದು, ಪ್ರಾರ್ಥಿಸಿದೆನು. ಅವರು ನನ್ನನ್ನುನೋಡಿ ಅಯ್ಯಾ! ಇವನು ನನ್ನಮಗನೆಂದು ಹೇಳಿಸಿಕೊಳ್ಳುವುದಕ್ಕೆ

ಯೋಗ್ಯನಲ್ಲ. ಚಿಕ್ಕಂದಿನಿಂದಲೂ, ತನ್ನತಂಗಿಯೆಲ್ಲಿ ಬಹಳ ವಿಶ್ವಾಸ ದಿಂದಿದ್ದನು. ನಾನು ಮುಂದೆಬರುವ ಅನರ್ಥವನ್ನು ತಿಳಿಯದವನಾಗಿ, ಇವರಿಬ್ಬರ ಅನ್ಯೋನ್ಯವಾದ ವಿಶ್ವಾಸಕ್ಕೆ ಯಾವವಿಧವಾದ ಕುಂದನ್ನು ತೋರಲಿಲ್ಲ. ಅವರಿಗೆ ವಯಸ್ಸು ಬಂದನಂತರದಲ್ಲಿ ಪ್ರೀತಿಯು ಅಧಿಕವಾ ಯಿತು. ಕಡೆಗೆ ಅದು ನನಗೆ ಮಹಾವ್ಯಸನವನ್ನುಂಟುಮಾಡಿತು. ಆದು ದರಿಂದ ನಾನೊಂದುಪಾಯವನ್ನು ಹೂಡುಕಿ ಮಗನಾದ ಇವನನ್ನು ಕರೆದು ಮೋಹದಿಂದುಂಟಾಗುವ ಫಲವನ್ನು ತಿಳಿಯುಹೇಳಿ, ನೀನು ಹೀಗೆ ಮಾಡದೆ ಇದ್ದರೆ ನನ್ನವಂಶಕ್ಕೆ ಅಭಿವೃದ್ಧಿಯುಂಟಾಗುವುದೆಂದು, ಹೇಳಿ ನನ್ನ ಕುಮಾರಿಯನ್ನೂ, ಕರೆದು ಈ ಸಂಗತಿಯನ್ನು ತಿಳಿಯೆಹೇಳಿದೆನು. ಅಲ್ಲದೆ ಅವಳು ತನ್ನ ಅಣ್ಣನೊಡನೆ ಮಾತನಾಡುವುದಕ್ಕೆ ಅವಕಾಶವಿಲ್ಲದಂತೆ, ನನ್ನ ಕೈಲಾದಮಟ್ಟಿಗೂ, ನಿರ್ಬಂಧವನ್ನುಂಟುಮಾಡಿದೆನು. ಆದರೆ ಅದರಿಂದ ಆ ನಿರ್ಭಾಗ್ಯಳಾದ ಹುಡುಗಿಗೆ ಈ ನಿರ್ಬಂಧವು ಅಧಿಕವಾದ ಮೋಹವನ್ನು ಹೆಚ್ಚುಮಾಡಿತು. ನನ್ನಮಗನಾದರೋ ಆಕೆಯಲ್ಲಿ ಉಂ ಟಾದ ಮೋಹಕ್ಕೆ ಕಟ್ಟುಬಿದ್ದು, ಒಂದುಗೋರಿಯನ್ನು ಕಟ್ಟಿಸಿ ತನ ಗುಂಟಾದ ಮೋಹವನ್ನು ತೀರಿಸಿಕೊಳ್ಳುವುದಕ್ಕೆ ಸಮಯಬಂದಕಾಲದಲ್ಲಿ, ಅವಳನ್ನು ಇಲ್ಲಿಗೆ ಕರೆದುಕೊಂಡು ಬರಬಹುದೆಂದು ಈ ನೆಲವಾಳಿಗೆಯ ನ್ನು ಕಟ್ಟಿಸಿದನು. ಅಲ್ಲದೆ ನಾನಿಲ್ಲದಿರುವಾಗ, ತನ್ನತಂಗಿಯನ್ನು ಕದ್ದು ಕೊಂಡು, ತನ್ನ ಏಕಾಂತಸ್ಥಳಕ್ಕೆ ಬಲಾತ್ಕಾರದಿಂದ ತೆಗೆದುಕೊಂಡುಹೋ ದನು. ಆದುದರಿಂದ ಈ ವಿಷಯವನ್ನು ಪ್ರಸಿದ್ಧಮಾಡುವುದು, ನನ್ನ ಗೌರವಕ್ಕೆ ಯೋಗ್ಯವಾದುದಲ್ಲ. ಈ ಪಾಪಕೃತ್ಯವನ್ನುಮಾಡಿ, ತಾನು ಅವಳಕೂಡಾ, ಇಲ್ಲಿ ಇರಬಹುದೆಂಬ ಯೋಚನೆಯಿಂದ ಆಹಾರ ಪದಾ ರ್ಥಗಳನ್ನು ಸಿದ್ಧಪಡಿಸಿಕೊಂಡು, ಇರುವುದನ್ನುನೋಡು. ಇಂತಹ ಭಯಂಕರವಾದ ಪಾಪಕಾರ್ಯವನ್ನು ಭಗವಂತನು ಮೆಚ್ಚಲಾರನಾದುದ ರಿಂದ, ಇವರಿಬ್ಬರಿಗೂ, ನ್ಯಾಯವಾದ ಶಿಕ್ಷೆಯನ್ನು ಮಾಡಿದೆನು. ಎಂ ದುಹೇಳಿ ಕಣ್ಣೀರನ್ನು ಸುರಿಸುತ್ತಾ ಅಳತೊಡಗಿದನು. ಬಳಿಕ ನಾನು ಅತ್ಯಂತವಾದ ವ್ಯಸನದಿಂದ ಅಳುತ್ತಾ ಇದ್ದೆನು. ಇನ್ನು ಸ್ವಲ್ಪಹೊ ತ್ತಿಗೆ ಅವರು ನನ್ನನುನೋಡಿ ಪ್ರೀತಿಯುಕ್ತನಾದ ಭ್ರಾತೃಪುತ್ರನೇ ! ಈ ಮೂರ್ಖನಾದ ರಾಜಪುತ್ರನು, ಹೋದರೆಹೋಗಲಿ ! ನೀನು ಅವನಿಗೆ

ಬದಲಾಗಿರುವೆಯೆಲ್ಲಾ ! ಎಂದುಹೇಳಿ ಅಳುವುದಕ್ಕೆ ಮೊದಲುಮಾಡಿದರು. ನಾನು ಅತ್ಯಂತವಾದ ವ್ಯಸನವನ್ನುಹೊಂ ನನ್ನತಮ್ಮನಿಗೂ, ತಂಗಿಗೂ ಉಂಟಾದ ದುರವಸ್ಥೆಯನ್ನುನೋಡಿ, ಅಳುತಾ ಆ ಭಯಂಕರವಾದ ಸ್ಥಳವನ್ನು ತೊರೆದು, ಬಾಗಿಲಿಗೆಬಂದು ಮೊದಲಿದ್ದಂತೆ ಕಲ್ಲನ್ನುಮುಚ್ಚಿ ಮಣ್ಣನ್ನುಹಾಕಿ, ಈ ಕ್ರೂರಕೃತ್ಯವನ್ನು ರಹಸ್ಯವಾಗಿಡಬೇಕೆಂದು, ಮುಂದೆ ಸಾಗಿದೆವು. ಯಾರಿಗೂತಿಳಿಯದಂತೆ ನಾವು ಪಟ್ಟಣವನ್ನು ಸೇರಿದ ಕೂಡಲೆ ಘೋರವಾದ ರಣಭೇರಿಯೆಧ್ವನಿಯು ಕೇಳಬಂದಿತು. ಅತ್ಯಂತವಾದ ಧೂಳಿದ್ದು ಆಕಾಶವನ್ನು ಮುಚ್ಚಿಕೊಂಡಿತು. ಇದರಿಂದ ಯಾರೊ ಪರರಾಜನು ದಂಡೆತ್ತಿ ಬಂದಿರಬಹುದೆಂದುಕೊಂಡೆವು. ನನ್ನತಂದೆಯ ರಾಜ್ಯವನ್ನು ಮೋಸದಿಂದ ಎತ್ತಿಹಾಕಿ ಕ್ರೂರತನದಿಂದ ನನ್ನನ್ನು ದಂಡಿಸುವಂತೆ ಆಜ್ಞೆಯಿಪಿಸಿದ ಮಂತ್ರಿಯು ತಾನೇ ರಾಜನಾಗಿರುವುದರಿಂದ ನನ್ನ ಚಿಕ್ಕಪ್ಪನ ರಾಜ್ಯವನ್ನು ಆಕ್ರಮಿಸಬೇಕೆಂದು, ಹೆಚ್ಚಾದ ದಂಡನ್ನು ಕೂಡಿಕೊಂಡು ಬಂದಿದ್ದನು. ಆಗ ನನ್ನ ಚಿಕ್ಕಪ್ಪನಬಳಿಯಲ್ಲಿ, ಕಾವಲಿಗಾಗಿದ್ದ ಭಟರುಗಳಹೊರತು ಮತ್ತಾರೂ, ಇರಲಿಲ್ಲವಾದುದರಿಂದ ಅವರು ಶತ್ರುಗಳನ್ನು ಜಯಿಸಲಾರದೆ ಹೋದರು. ಶತ್ರುಗಳು ಪಟ್ಟಣಕ್ಕೆ ಮುತ್ತಿಗೆಹಾಕಿದಕೂಡಲೆ, ಕೋಟೆಯಬಾಗಿಲು, ಧಾರಾಳವಾಗಿ ತೆರೆದುಕೊಂಡುದರಿಂದ ಹಗೆಗಳು ಪಟ್ಟಣವನ್ನು ಹೊಕ್ಕು ಬಂದರು. ರಾಜನು ತನ್ನ ಪರಾಕ್ರಮಾನುಸಾರವಾಗಿ ಯುದ್ಧಮಾಡಿ, ಸತ್ತುಹೋದನು.

ನಾನಾದರೊ ಶಕ್ತಿ ಇದ್ದವರೆಗೂ ಜಗಳವಾಡಿ, ಬಳಿಕ ಬಲವಂತರಲ್ಲಿ ಹೊಡೆದಾಡುವುದು ಯುಕ್ತವಲ್ಲವೆಂದು, ತಿಳಿದು ನನ್ನಪ್ರಾಣವನ್ನುಳಿಸಿಕೊಳ್ಳುವುದಕ್ಕಾಗಿ ಯೋಚಿಸಿ, ಆ ಶತ್ರುರಾಜನ ಕಾವಲುಗಾರರಲ್ಲಿ, ನನಗೆ ನಂಬಿಕೆಯುಂಟಾಗಿರುವ, ಒಬ್ಬ ಮನುಷ್ಯನನ್ನು ಸೇರಿ ಪ್ರಾಣವನ್ನು ಉಳಿಸಿಕೊಂಡೆನು. ಹೀಗೆ ದುಃಖವನ್ನೂ, ದೌರ್ಭಾಗ್ಯವನ್ನು, ಹೊಂದಿದ ನಾನು ಒಂದುಪಾಯವನ್ನು ಯೋಚಿಸಿದೆನು. ಅದು ಹೊರತು ನನ್ನಪ್ರಾಣವನ್ನುಳಿಸಿಕೊಳ್ಳುವುದಕ್ಕೆ ಮತ್ತಾವ ಉಪಾಯವೂ ಇರಲಿಲ್ಲ. ಗಡ್ಡವನ್ನು ಕಣ್ಣು ಹುಬ್ಬುಗಳನ್ನು ಬೋಳಿಸಿ, ಸನ್ಯಾಸಿಯ ವೇಷವನ್ನು ಹಾಕಿಕೊಂಡು, ಮೆಲ್ಲಮೆಲ್ಲಗೆ ನನ್ನಚಿಕ್ಕಪ್ಪನ ರಾಜ್ಯವನ್ನುಬಿಟ್ಟು ಹೊರಟೆನು. ಅಲ್ಲಿಂದ ಹೊರಟು ಪರಾಕ್ರಮಶಾಲಿಯಾಗಿಯೂ, ಕೀರ್ತಿ

ವಂತನಾಗಿಯೂ, ಇರುವ ಹರ್ಷೋ ಅಲರಾಶ್ಚಿದನೆಂಬ ಏಳುಜನ ಕಲೀ ಫರು, ಆಳುವದೇಶವನ್ನು ಸೇರುವವರೆಗೂ, ಒಂದು ಕಡೆಯಾಗಲಿ ಬಂದೂ ರಿನಲ್ಲಾಗಲಿ, ನಿಲ್ಲಲೀ ಇಲ್ಲ. ಅಲ್ಲಿಗೆಬಂದವೇಲೆ ಯೌವಭಯವೆಪ್ಪೂ ಇಲ್ಲವೆಂ ದುತಿಳಿದು, ಬಾಗದಾದು ಪಟ್ಟಣವೆನ್ನುಸೇರಿ, ಪರಾಕ್ರಮಶಾಲಿಯೂದ, ಅಲರಾಶ್ಚಿದನಿಗೆ ಪಾದಾಕ್ರಾಂತನಾಗಬೇಕೆಂದು, ಕೊಂಡಿದ್ದೆನು. ಅವರ ಬಳಗೆ ಹೋಗಿ ಪಾದದವೇಲೆಬಿದ್ದು, ನಿರ್ಭಾಗ್ಯನಾದ ನನ್ನ ಚರಿತೆ್ರಯೆ ನ್ನುಹೇಳಕೊಂಡರೆ ದೀನನಾದನನ್ನಲ್ಲಿ ಕರುಣವನ್ನುತೋರಿಸದೆ ಇರಲಾರ ನೆಂದೆಂದುಕೊಂಡೆನು. ಜೆಬ್ಬಾಗಿ ಜೇಳದುದರಿಂದ ಫಲವೇನು? ನಾನು ಈದಿನ ಸೂರ್ಯಾಸ್ತಮಯೆ ಸಮಯೆಕ್ಕೆ ಈ ಪೂರುಬಾಗಿಲಿಗೆಬಂದು, ಎಲ್ಲಿಗೆಹೋಗಬೇಕು, ಏನುಮಾಡಬೇಕು, ಎಂಬುದನ್ನು ಕುರಿತು, ಯೋ ಚಿಸುತ್ತಾ ಇದ್ದೆನು. ಆಗ ನನ್ನಪಕ್ಕದಲ್ಲಿರುವ ಮತೊಬ್ಬಸನ್ಯಾಸಿ ಯೆು, ನನ್ನಬಳಗೆಬಂದು, ವಂದನೆಗಳನ್ನು ಮಾಡಿದನು. ನಾನು ಆತನಿ ಗೆ ಪ್ರತಿವಂದನೆಗಳನ್ನು ಸಮರ್ಪಿಸಿದೆನು. ಅಲ್ಲದೆ ಆತನನ್ನು ನೋಡಿ, ನೀವು ಈ ಪಟ್ಟಣಕ್ಕೆ ಹೊಸಬರೊ ಎಂದುಕೇಳಲು, ಅವರು ಅದಕ್ಕೇ ನೂ ಸಂದೇಹವಿಲ್ಲವೆಂದರು. ಬಳಿಕ ನಾವಿಬ್ಬರೂ, ಸೇರಿ ನಮ್ಮಪಕ್ಕದ ಲ್ಲಿ ಕುಳಿತಿರುವ ಮೂರನೆ ಸನ್ಯಾಸಿಯೆಬಳಗೆ ಬಂದು, ವಂದನೆಗಳನ್ನುಮಾ ಡಿ, ನೀವು ಇಲ್ಲಿಗೆ ಯಾವಾಗಬಂದಿರೆಂದು ಕೇಳಲು, ಅವರು ಅಯ್ಯಾ! ನಿಮ್ಮಹಾಗೆ ನಾನು ಈಗತಾನೇ ಬಂದೆನು. ನಿಮ್ಮನ್ನುನೋಡಿದರೆ ಈವೂ ರಿಗೆ ಹೊಸಬರಾಗಿ ಕಾಣುತ್ತೀರಿ ಎಂದರು. ಬಳಿಕ ನಾವು ಮೂವರು ಬಂ ದೇಕಡೆ ಇರುವಂತೆ ಗೊತ್ತುಮಾಡಿಕೊಂಡು ನಾವು ಈಪಟ್ಟಣಕ್ಕೆ ಹೊಸ ಬರಾಗಿರುವೆವು. ಇಲ್ಲಿ ನಮ್ಮಗುರುತು ಕಂಡವರಾರೂ ಇಲ್ಲ. ಆದುದ ರಿಂದ ಎಲ್ಲಿಗೆಹೋಗಬಹುದೆಂದು ಯೋಚಿಸುತ್ತಾ, ನಿಮ್ಮಮನೆಯೆ ಬಾಗಿಲ ಬಳಗೆಬಂದು, ಬಹಳ ಹೊತ್ತಾದುದರಿಂದ ಧೈರ್ಯವಾಗಿ ಬಾಗಿಲನ್ನುತಟ್ಟಿ ದೆವು, ಅದಕ್ಕೆತಕ್ಕಹಾಗೆ ನೀವು ದಯವೂಡಿ, ನಮ್ಮನ್ನು ಒಳಹೊಗಿಸಿ ಕೊಂಡಿರಿ. ಇದಕ್ಕಾಗಿ ನಮ್ಮಕೈಲಾದ ಉಪಕಾರವನ್ನು ಮಾಡುವುದ ಕ್ಕೆ ಸಿದ್ಧರಾಗಿರುವೆವು. ನನ್ನಒಲಗಣ್ಣು ಕುರುಡಾಗಿರುವುದಕ್ಕೂ ಗಡ್ಡ ವನ್ನು ಕಣ್ಣುಹುಬ್ಬನ್ನು ಜೋಳಿಸುವುದಕ್ಕೂ ಕಾರಣವನ್ನೂ, ನಾನು ಇಲ್ಲಿಗೆ ಬಂದುದಕ್ಕೆ ನಿಮಿತ್ತವನ್ನು ತಿಳಿಯಹೇಳೆಂದು ನೀವು ಆಜ್ಞಾಪಿಸಿ

ದಂತೆ ನನ್ನ ಕಥೆಯನ್ನು ಹೇಳಿರುವೆನು. ಎಂದು ಹೇಳಲು ಜೋಬದಿಯು, ಸಾಕು. ಇನ್ನು ನಿನ್ನಿಷ್ಟಾನುಸಾರವಾಗಿ, ಎಲ್ಲಿಗೆಬೇಕಾದರೂ, ಹೋಗಬಹುದೆಂದಳು.

ಆತನು ಅಮ್ಮಾ ! ಈ ಸಮಾಜದಲ್ಲಿ ಇನ್ನಿಬ್ಬರು ಕಾಲಿಂಡರುಗಳೂ, ಉಳಿದವಾರೂ ಕಥೆಯನ್ನು ಹೇಳುವುದಕ್ಕೆ ಮೊದಲು ನಾನು ಹೊರಟುಹೋಗುವುದು ನ್ಯಾಯವಲ್ಲವಾದುದರಿಂದ, ಅದುವರೆಗೂ ನಾನಿಲ್ಲಿಯೆ ಇರುವಂತೆ ಅಪ್ಪಣೆಮಾಡಬೇಕೆಂದು, ಬೇಡಿಕೊಂಡನು. ಷಹರಜಾದಿಯು, ಸುಲ್ತಾನನನ್ನು ನೋಡಿ, ರಾಜನೇ ! ಬೆಳಗಾಗಿಹೋದುದರಿಂದ, ಎರಡನೆ ಸನ್ಯಾಸಿಯಕಥೆಯನ್ನು ಹೇಳುವುದಕ್ಕೆ ಅಡ್ಡಿಯಾಯಿತು. ತಾವು ದಯೆಮಾಡಿದರೆ ಮೊದಲಿಗಿಂತಲೂ, ವಿನೋದಕರವಾಗಿರುವ ಈ ಕಥೆಯನ್ನು ನಾಳೆಯೆದಿನ ರಾತ್ರಿಗೆ ಹೇಳುವೆನೆಂದು, ನುಡಿಯಲು, ಸುಲ್ತಾನನು ಅದಕ್ಕೊಪ್ಪಿಕೊಂಡು, ಯಾವಮಾತನ್ನೂ ಆಡದೆ ಹೊರಟು ಹೋದನು.

೪೦ ನೆಯ ರಾತ್ರಿ ಕಥೆ

ಮೊದಲಿನ ಕಾಲಿಂಡರ ಕಥೆಗಿಂತಲೂ, ಎರಡನೆಯ ಕಾಲಿಂಡರಿನ ಕಥೆಯು ಇನ್ನೂ ಮನೋಹರವಾಗಿರಬಹುದೆಂದುಕೊಂಡು, ದಿನರಜಾದಿ, ಹೊತ್ತಿಗೆಮುಂಚೆ ಸುಲ್ತಾನನ್ನು ಎಚ್ಚರಗೊಳಿಸಿ, ಅಕ್ಕಾ ! ನಿನಗೆ ಎಚ್ಚರಿಕೆಯುಂಟಾಗಿದ್ದರೆ ಎರಡನೆ ಕಾಲಿಂಡರಿನ ಕಥೆಯನ್ನು ಹೇಳಬೇಕೆಂದು ಕೇಳಿಕೊಳ್ಳುವೆನೆಂದಳು. ಷಹರಜಾದಿಯು, ಸುಲ್ತಾನನನ್ನು ನೋಡಿ, ಸ್ವಾಮಿ ! ಮೊದಲಿನ ಕಾಲಿಂಡರಿನ ಕಥೆಯನ್ನುಕೇಳಿ ಅಲ್ಲಿದ್ದವರೆಲ್ಲರೂ ಆತ್ಯಾಶ್ಚರ್ಯವನ್ನು ಹೊಂದಿದರು. ಕಲೀಫರಾದರೋ ಅದರಿಂದುಂಟಾದ ಆನಂದದಿಂದ ಕತ್ತಿಯನ್ನು ಹಿಡಿದುಕೊಂಡು, ನಿಂತು ಇರುವ ಕಿಂಕರರನ್ನು ಲಕ್ಷ್ಯವೂಡದೆ ತನ್ನ ಮಂತ್ರಿಯಸಂಗಡ ಹೀಗೆಂದುಮೂ ತನಾಡುತ್ತಾ ಇದ್ದರು. ನಾವು ಬಹುವಿಚಿತ್ರವಾದ ಕಥೆಗಳನ್ನು ಕೇಳಿರುವೆನು. ಆದರೂ ಈ ಕಾಲಿಂಡರಿನ ಕಥೆಗೆ ಸಮಾನವಾದುದು ಯಾವುದೂ ಇಲ್ಲ ಎಂದುಕೊಂಡಾಡಿದನು. ಎರಡನೆ ಕಾಲಿಂಡರು ಜೋಬದಿಯನ್ನು ನೋಡಿ, ತನ್ನಕಥೆಯನ್ನು ಹೇಳಲಾರಂಭಿಸಿದನು.

ರಾಜಪುತ್ರನಾದ ೨ನೆಯ ಕಾಲೆಂಡರಿನ ಕಥೆ



ಎರಡನೆಯ ಕಾಲೆಂಡರು ನಾಯಿಕಾಮಣಿಯೊದ ಜೋಬೆದಿಯನ್ನುನೋಡಿ, ಅಮ್ಮಾ! ನಿಮ್ಮ ಆಜ್ಞಾನುಸಾರವಾಗಿ, ನನ್ನ ಬಲಗಣ್ಣು ಕುರುಡಾಗಿರುವುದಕ್ಕೆ ಕಾರಣವನ್ನು ಹೇಳಬೇಕಾಗಿದ್ದರೆ, ನನ್ನ ಕಥೆಯನ್ನು ಅವಶ್ಯಕವಾಗಿ ಹೇಳಬೇಕಾಗಿರುವುದು. ನಾನು ಸ್ವಭಾವವತ್ತಾಗಿ ರಾಜಪುತ್ರನು, ನನ್ನತಂದೆಯಾದ ರಾಜನು ನನ್ನಬುದ್ಧಿಯನ್ನುನೋಡಿ ಅದನ್ನು ಅಭಿವೃದ್ಧಿಮಾಡಬೇಕಾದ ಕಾರ್ಯದಲ್ಲೊಂದನ್ನೂ, ಲೋಪ ಮಾಡಲಿಲ್ಲ. ಅವರು ತನ್ನರಾಜ್ಯದಲ್ಲಿರುವ ಸಮಸ್ತರಾದ ಪಂಡಿತರನ್ನು ಕರೆಸಿ, ನನ್ನ ಬಳಿಯಲ್ಲಿರುವಂತೆ ಮಾಡಿದರು. ನಾನು ಓದುವುದಕ್ಕೂ ಬರೆವುದಕ್ಕೂ, ಕಲಿತುಕೊಂಡವೀಲಿ ಮಹಮ್ಮದನ ಮತಗ್ರಂಥವಾದ ಕೋರ್ಆ ಎಂಬ ವೇದಪುಸ್ತಕವನ್ನು, ಆಮೂಲಾಗ್ರವಾಗಿ ಕಂಠಪಾಟಮಾಡಿದೆನು. ನಮ್ಮಮತಾನುವರ್ತಿಗಳಾದ ಅನೇಕವಿಷಯಗಳು ಈ ಗ್ರಂಥವೊಂದರಲ್ಲಿ ಅಣಗಿರುವುದರಿಂದ, ನಾನು ಆ ಉದ್ಗ್ರಂಥದ ವ್ಯಾಖ್ಯಾನರೂಪವಾದ ಇತರಗ್ರಂಥಗಳನ್ನೂ, ಓದಿ ಹೆಚ್ಚಾದ ಪಾಂಡಿತ್ಯವನ್ನು ಹೊಂದಿದೆನು. ಹೀಗೆ ಮುಸಲ್ಮಾನರ ಮತಗ್ರಂಥಗಳೆಲ್ಲವನ್ನೂ ಓದಿದರೂ ಸಾಲದೆ ನಮ್ಮದೇಶದ ಚರಿತ್ರೆಯನ್ನೂ ಓದಿ, ನಾನಾವಿಧವಾದ ಕಾವ್ಯ, ನಾಟಕ, ಅಲಂಕಾರ, ಛಂದೋಗ್ರಂಥಗಳನ್ನು ಪರಿಶೀಲಿಸಿ ಕವಿತಾಪಾಂಡಿತ್ಯವನ್ನು ಸಂಪಾದಿಸಿಕೊಂಡೆನು. ಇವುಗಳಲ್ಲದೆ ರಾಜಕುಮಾರರು, ತಿಳಿಯಲವಶ್ಯಕವಾದ ಶಸ್ತ್ರವಿದ್ಯೆಯನ್ನು ಸಂಪೂರ್ಣವಾಗಿ ಅಭ್ಯಾಸಮಾಡಿದೆನು. ಆದರೂ ನನಗೆ ಒಂದೇ ಒಂದು ವಿಷಯದಲ್ಲಿಮಾತ್ರ ಹೆಚ್ಚಾದ ಅಭಿರುಚಿಯುಂಟಾಗಿದ್ದಿತು.

ಏನಂದರೆ ಅರಬೀಭಾಷೆಯನ್ನು ಬಹುಚೆನ್ನಾಗಿಕಲಿತು, ಸುಂದರವಾದ ಅಕ್ಷರಗಳನ್ನು ಬರೆವುದರಲ್ಲಿ, ನಮ್ಮದೇಶದಲ್ಲಿರುವ ಸಮಸ್ತರಾದ ಪಂಡಿತರನ್ನೂ, ನಾನು ಮೀರಿಸಿದ್ದೆನು. ನನಗುಂಟಾಗಿರುವ ಯೋಗ್ಯತೆಗಿಂತಲೂ, ಅಧಿಕವಾದ ಗೌರವವನ್ನು ಹೊಂದಿದೆನು. ನನ್ನತಂದೆಯು,

ನನ್ನ ಪಾಂಡಿತ್ಯವು ತನ್ನ ರಾಜ್ಯದಲ್ಲೆಲ್ಲಾ ವ್ಯಾಪಿಸುವಂತೆ, ಮಾಡಿದುದಲ್ಲದೆ, ಇಂದಿಯಾದೇಶದ ರಾಜ್ಯದಲ್ಲೂ ವ್ಯಾಪಿಸುವಂತೆ ಮಾಡಿದನು. ಅದರಿಂದ ಅಲ್ಲಿ ನಚಕ್ರವರ್ತಿಯು, ನನ್ನನ್ನು ನೋಡಬೇಕೆಂದಾಸಿಸಿ ಕರೆದುಕೊಂಡುಬರುವಂತೆ ತಮ್ಮ ಪ್ರಧಾನಮಂತ್ರಿಯನ್ನು ನಾನಾವಿಧವಾದ ಬಹುಮೂಲವಸ್ತುಗಳ ಸಹಿತವಾಗಿ ಕಳುಹಿಸಿದರು. ಇದಕ್ಕಾಗಿ ನನ್ನತಂದೆಯು, ತುಂಬ ಸಂತೋಷಪಟ್ಟುದುವುದಕ್ಕೆ ನಾನಾಕಾರಣಗಳುಂಟಾದವು. ನನ್ನಂತಹ ರಾಜಪುತ್ರನು, ದೇಶಸಂಚಾರಮಾಡಿ, ವಿಷಯಸಂಗ್ರಹಮಾಡುವುದಕ್ಕಿಂತಲೂ, ಹೆಚ್ಚಾದಪ್ರಯೋಜನವಿಲ್ಲವೆಂದು ತಿಳಿದು, ಇಂಡಿಯಾದೇಶದ ರಾಜನನ್ನೇಗಹವು ದೊರಕಿದುದಕ್ಕಾಗಿ, ಹೆಚ್ಚಾದ ಆನಂದವನ್ನು ಹೊಂದಿದರು. ನಾನಾದರೊ ಬಹುದೂರ ಪ್ರಯಾಣವಾದುದರಿಂದ, ಮಾರ್ಗದಲ್ಲಿ ತುಂಬ ಕಷ್ಟವಾಗುವುದರಿಂದ, ಮಿತವಾದ ಪರಿಜನರಿಂದಕೂಡಿ, ಮಂತ್ರಿಯೊಡನೆ ಹೊರಟು, ಪ್ರಯಾಣಮಾಡುತ್ತಿರುವಲ್ಲಿ, ಒಂದು ತಿಂಗಳು ಕಳೆಯಿತು. ಆಗ ಒಂದುದಿನ ಒಂದುಸ್ಥಳದಲ್ಲಿ ಹೊಗೆಯೆಂತೆ ಧೂಳಿ, ಏಳುವುದನ್ನು ಕಂಡೆನು. ಆ ಧೂಳಿಯೆಸೈನ್ಯಡಲೇ ಆಯುಧಪಾಣಿಗಳಾಗಿ ಕುದುರೆಯೆನ್ನು ಹತ್ತಿ ಓಡಿಬರುತ್ತಿರುವ, ಹತ್ತುಜನ ರಾವುತರು, ಕಾಣಬಂದರು. ಅವರನ್ನು ನೋಡಿದಕೂಡಲೇ ನಮ್ಮನ್ನು ದೋಚಿಕೊಂಡು ಹೋಗುವುದಕ್ಕಾಗಿಬಂದ ದಾರಿಹೋಕರಂತೆ ಕಾಣಬಂದಿತು. ಬಳಿಕ ಬೆಳಕು ಹರಿಯಿತೆಂದು, ಷಹರಜಾದಿಯು, ಕಥೆಯನ್ನು ನಿಲ್ಲಿಸಿದುದರಿಂದ, ಸುಲ್ತಾನನುಹೊರಟುಹೋಗಿ ಕುದುರೆಯೆನ್ನೇರಿಬಂದರಾವುತರಿಗೂವಮತ್ತು ಇಂಡಿಯಾರಾಜ್ಯದ ರಾಯಭಾರಿಗೂ, ನಡೆದಕಥೆಯನ್ನು ಕೇಳಬೇಕೆಂದು ತುಂಬ ಕುತೂಹಲಯುಕ್ತನಾಗಿದ್ದನು.

೪೧ ನೆಯ ರಾತ್ರಿ ಕಥೆ.

ಮರುದಿನ ದಿನರಜಾದಿಯು, ಏಳುವಾಗಲೆ ಬಹಳಹೊತ್ತಾಗಿದ್ದಿತು. ಆದರೂ ಅವಳು ಷಹರಜಾದಿಯನ್ನು ಏಳಿಸಿ, ಅಕ್ಕಾ! ನೀನು ಎಚ್ಚರಿಕೆಯಾಗಿದ್ದರೆ, ಎರಡನೆ ಕಾಲೆಂಡರಿನ ಕಥೆಯನ್ನು ಹೇಳೆಂದುಕೇಳಲು, ಆಕೆ ಕಥೆಯನ್ನು ಹೇಳಲಾರಂಭಿಸಿದಳು. ಎರಡನೆ ಕಾಲೆಂಡರು, ಜೋಬದಿಯನ್ನು ಕುರಿತು, ಅಮ್ಮಾ! ನಮ್ಮ ಮೂಟೆಗಳನ್ನೂ, ಇಂ

ಡಿಯಾದೇಶದ ರಾಜರಿಗಾಗಿ ನಮ್ಮ ಸುಲ್ತಾನನು, ಕಳುಹಿಸಿದ ಬಹುಮೂ ನವನ್ನು, ಹೊತ್ತುಕೊಂಡು ಹೋಗಬೇಕೆಂದು, ಬರುತ್ತಿದ್ದ ಹತ್ತುಮಂ ದಿರಾವುತರು, ನಮ್ಮಬಳಯೆಲ್ಲಿ ಸ್ವಲ್ಪವೇ ಪರಿಜನರಿರುವುದನ್ನು ನೋಡಿ, ಧೈರ್ಯವಾಗಿ ನಮ್ಮಮೇಲೆ ಬಿಳುವುದಕ್ಕೆ ಬುದರೆಂಬುದು ನಿಮಗೆ ಗೊ ತ್ತೇ ಇರಬಹುದು. ಅವರನ್ನು ತಡೆಯುವುದಕ್ಕೆ ಶಕ್ತಿ ಸಾಲದೇಹೋದು ದರಿಂದ ನಾವು ಇಂಡಿಯಾದೇಶದ ಸುಲ್ತಾನರ ಆಸ್ಥಾನದವರೆಂದು, ಹೇಳಿ ದರೆ ನಮ್ಮನ್ನು ಏನೂತೊಂದರೆ ಪಡಿಸಲಾರರೆಂದು ತಿಳಿದು, ತಮ್ಮಸಾವೂ ನುಗಳನ್ನೂ, ಪ್ರಾಣಗಳನ್ನೂ, ಕಾಪಾಡಿಕೊಳ್ಳಬೇಕೆಂದು, ತಾವು ಇಂಥ ವರೆಂದು ಹೇಳಿಕೊಂಡೆವು. ಆದರೆ ನಮಗೇನು, ನಾವು ನಿಮ್ಮಸುಲ್ತಾನರ ಕೈಕೆಳಗಿರತಕ್ಕವನಲ್ಲ. ಬೇರೆಯಾಗಿರುವ ನಮ್ಮರಾಜ್ಯವನ್ನು ಸ್ವಂತ ವಾಗಿ ಆಳುತ್ತಿರುವವೆಂದು, ಹೇಳಿ ನಿರ್ಲಕ್ಷ್ಯವಾಗಿವೂತನಾಡುತ್ತಾ ನಮ್ಮ ನ್ನು ಸುತ್ತಿಕೊಂಡು ಮೇಲೆಬಿದ್ದರು. ನನ್ನ ಕೈಲಾದಮಟ್ಟಿಗೂ, ಅವ ರಸಂಗಡ ಜಗಳವಾಡಿ ಮೈಯೆಲ್ಲಾ ಘಾಯವಾದಮೇಲೆ, ಸುಮ್ಮನಾದೆವು. ಇಂಡಿಯಾರಾಜನ ಮಂತ್ರಿಯೂ, ಅವನಕಡೆಯಜನರೂ ಅವರು ಏಟ ನ್ನುತಾಳಲಾರದೆ ನೆಲಕ್ಕೆಬಿದ್ದರು.

ಹೀಗಿರುವಾಗ ನನ್ನಕುದುರೆಗೂ, ತುಂಬ ಗಾಯೆಗಳಾಗಿದ್ದರೂ, ಇನ್ನು ಸ್ವಲ್ಪ ಬಲವಿದ್ದುದರಿಂದ, ಅದನ್ನು ಉಪಯೋಗಿಸಿಕೊಳ್ಳುವುದ ರಿಂದ ನನಗೇನಾದರೂ, ಕ್ಷೇಮವಾಗಬಹುದೆಂದು, ವೇಗವಾಗಿ ಕುದುರೆಯ ನ್ನುಬಿಟ್ಟುಕೊಂಡು, ಆ ಗುಂಪನ್ನುಬಿಟ್ಟು, ಬಹುದೂರವಾಗಿ ಹೊರ ಟುಹೋದೆನು. ಅದುವರೆಗೂ, ನನ್ನಕುದುರೆಯು, ಬಹಳವಾಗಿ ಆಯಾ ಸವನ್ನು ಹೊಂದಿದ್ದುದರಿಂದ, ಗಾಯೆಗಳಮೂಲಕ ರಕ್ತವನ್ನು ಸುರಿಸು ತ್ತ ಭೂಮಿಗೆಬಿದ್ದ ಸತ್ತುಹೋಯಿತು. ಆಗಲೆ ಅದನ್ನು ಬಿಟ್ಟುಬಿಟ್ಟು ದಾರಿಹೋಕರು ಹಿಂದಟ್ಟಿಬರುವುದರಿಂದ ನನ್ನಬಳಯೆಲ್ಲಿರುವ ಸಾಮಾನು ಗಳನ್ನು ಬಿಟ್ಟು ಹೋಗಲಾರದವನಾಗಿದ್ದೆನು. ಅಲ್ಲದೆ ಅವರುಕೂಡ ತನಗೆ ಸಿಕ್ಕಿದಪದಾರ್ಥಗಳನ್ನು ಬಿಟ್ಟು ಬರಲಾರರೆಂದಂದುಕೊಂಡೆನು. ಇಷ್ಟರಲ್ಲಿ ಬೆಳಗಾದುದರಿಂದ ಪಹರಜಾವಿಯು, ಕಥೆಯನ್ನು ನಿಲ್ಲಿಸಿದ ಳು. ದಿನರಜೋದಿಯು, ಅಕ್ಕನನ್ನು ನೋಡಿ, ಅಕ್ಕಾ, ! ಈದಿನ ನನ್ನ ಅಜಾಗ್ರತೆಯಿಂದ ಸುಲ್ತಾನರ ಅಭೀಷ್ಟವು, ಪೂರ್ತಿಯಾಗಲು ಅವಕಾ

ಶವು ದೊರೆಯದೆ ಹೋಯಿತು. ನಾಳೆಯದಿನ ಆ ಇಷಾ್ಟರ್ಥವು, ನೆರವೇರುವಂತೆ ಜಾಗ್ರತೆಯಾಗಿ ಏಳಿಸುವೆನೆಂದು ಹೇಳಲು ಸುಲ್ತಾನನು, ಯಾವ ಮಾತನ್ನೂ ಆಡದೆ ಎದ್ದು ಹೊರಟುಹೋದನು.

೪೨ ನೆಯ ರಾತ್ರಿ ಕಥೆ.

ಮರುದಿನ ದಿನರಜೋದಿಯು, ಬಹುಜಾಗ್ರತೆಯಾಗಿ ಎದ್ದು, ತನ್ನ ಅಕ್ಕನನ್ನು ಕುರಿತು, ಅಕಾ್ಕ! ನಿನಗೆ ನಿದ್ರೆಬಾರದೆ ಇದ್ದರೆ, ಕಾಲಿಂಡರಿನಕಥೆಯನ್ನು ಪೂರ್ತಿಮಾಡಬೇಕೆಂದು, ಜೀಡಿಕೊಂಡಳು. ಆಗ ಷಹರಜೋದಿಯು, ತನ್ನತಂಗಿಯ ಇಷಾ್ಟನುಸಾರವಾಗಿ, ಕಥೆಯನ್ನು, ಹೇಳಲಾರಂಭಿಸಿದಳು. ಬಳಿಕ ಕಾಲಿಂಡರು ಜೋಬಿದಿಯನ್ನು ನೋಡಿ, ಅವೂ್ಮ! ಹೀಗೆನಾನು ಅನ್ಯದೇಶದಲ್ಲಿ ಅಸಹಾಯನಾಗಿ ಮೈಯೆಲ್ಲಗಾಯಗಳಾಗಿರುವುದರಿಂದ, ನೋವನ್ನು ತಾಳಲಾರದೆ ಪುನಹ ದಾರಿಹೋಕರಕೈಗೆ ಎಲ್ಲಿ ಸಿಕ್ಕುವೆನೋ ಎಂಬ ಭಯದಿಂದ, ರಾಜಮಾರ್ಗದಲ್ಲಿ ಬರದೆ ಕಾಡುದಾರಿಯಲ್ಲಿ ನಡೆಯುತಾ್ತ, ಬಂದಾನೊಂದು ಬೆಟ್ಟದಪಾ್ರಂತವನ್ನುಸೇರಿ, ಒಂದಾನೊಂದು ಗುಹೆಯಲ್ಲಿ ಅಡಗಿಕೊಂಡು, ನನ್ನಬಳಿಯೆಲ್ಲಿದ್ದ ಹಣ್ಣುಹಂಪಲಗಳನ್ನುತಿಂದು, ಜೀವಿಸಿಕೊಂಡು ನನಗೆತಗಲಿದ್ದ ಅಪಾಯಕರಗಳಾದ ಗಾಯಗಳಿಗೆ ಪಟ್ಟಿಹಾಕಿ ಕಟ್ಟಿಕಟ್ಟಿದೆನು. ಇದೇತೆರದಿಂದ ಅನೇಕ ದಿನಗಳವರೆಗೆ ಪ್ರಯಾಣ ಮಾಡುತ್ತಿದ್ದನೆ ಹೊರತು, ನಿಲುಕಡೆಯಾಗಿ ನಿಲ್ಲುವುದಕ್ಕೆ, ಒಂದು ಸ್ಥಳವಾದರೂ, ದೊರಕಲಿಲ್ಲ. ಹೀಗೆ ಬಂದುತಿಂಗಳು, ಪ್ರಯಾಣಮಾಡಿದಬಳಿಕ ಬಂದಾನೊಂದು ಪಟ್ಟಣವನ್ನು ಸೇರಿದೆನು ಅದರಲ್ಲಿ ಐಶ್ವರ್ಯವಂತರಾಗಿಯೂ, ಧರ್ಮಿಷ್ಟರಾಗಿಯೂ, ಇದ್ದ ಅನೇಕಜನರು, ವಾಸಮಾಡುತ್ತಿದ್ದರು. ಆ ಪುರವನ್ನುತ್ತಲೂ, ರಮಣೀಯವಾದ ನದಿಯು, ಹರಿಯುತ್ತಿದ್ದಿತು. ಆ ರಮಣೀಯವಾದ ಪಟ್ಟಣವನ್ನು ನೋಡಿದಕೂಡಲೆ, ನನಗೆ ಬಹುವಿಧವಾದ ಸಂತೋಷವುಂಟಾಗಿ, ನನ್ನದೇಹದಲ್ಲಿದ್ದ ಗಾಯಗಳ ನೋವುಸಹ ಕಾಣದಂತಾಯಿತು. ಬಿಸಿಲಿನಲ್ಲಿಯೂ, ಕಾಡಿನ ಬೆಟ್ಟಗುಟ್ಟಗಳಲ್ಲಿಯೂ, ಅಲೆದಾಡುತ್ತಿದ್ದುದರಿಂದ ನನ್ನಮುಖವು ಕೈಕಾಲುಗಳೂ, ಕರ್ರಗಾದವು. ಅಲ್ಲದೆ ಮೋಜ ಮತ್ತು ಕಾಲುಚೀಲಗಳು, ಹರಿದುಹೋದವು. ಹೀಗಿರುವಲ್ಲಿ ನಾನು ಆ ಪಟ್ಟಣ

ವನ್ನುಪ್ರವೇಶಿಸಿ, ಒಬ್ಬಾಬ್ಬನೊಬ್ಬ ಅಂಗಡಿಯೆವನ ಬಾಗಿಲವುಂದೆ ನಿಂತು ಕೊಂಡೆನು. ಆತನು ನನ್ನನ್ನುನೋಡಿ, ಅತ್ಯಂತ ಕನಿಕರವನ್ನು ಹೊಂದಿ, ಕೂತುಕೊಳ್ಳುವಂತೆಹೇಳಿ, ಬಳಿಕ ನನ್ನನ್ನುಕುರಿತು, ಅಯ್ಯಾ! ನೀನುಯಾರು? ಎಲ್ಲಿಂದಬಂದೆ? ಏತಕ್ಕೊಸ್ಕರವಾಗಿಬಂದಿರುವೆ? ಎಂದು ಕೇಳಿದನು. ಬಳಿಕ ನಾನು ನನ್ನಚರಿತ್ರೆಯನ್ನು ಸ್ವಲ್ಪವೂ ಮುರೆಮಾಚದಂತೆ, ಆತನಿಗೆ ತಿಳಿಸಿದೆನು. ಆದರ್ಜಿಯೆವನು ನಾನು ಹೇಳಿದವೊತು ಗಳೆಲ್ಲವನ್ನುಕೇಳಿ, ಆಗುತ್ತಲೆ ನನ್ನನ್ನು ಸ್ವಲ್ಪವಾದರೂ ಸಮೂಧಾನವೂಡದೆ ನನ್ನಕೋಪವನ್ನು, ವೃದ್ಧವೂಡಿದನು.

ಹೇಗಂದರೆ, ನೀನು ಇಲ್ಲಿಹೇಳಿದಂತೆ ಮತ್ತೆಲ್ಲಾದರೂ, ಹೇಳೀಯೆ ಜೋಕೆ, ಈ ದೇಶದರಾಜನು, ನಿಮ್ಮತಂದೆಯೆಲ್ಲಿ ಕತ್ರುಭಾವವನ್ನು ತೋರುತ್ತಿರುವನು. ನೀನು ಬಂದಿರುವ ಸಂಗತಿಯು, ಆತನಿಗೆತಿಳಿದರೆ, ನಿನಗೇನಾದರೂ, ಕೇಡುಂಟಾಗಬಹುದು, ಎಂದು ಹೇಳಿ ಆ ರಾಜನಹೆಸರನ್ನು ನನಗೆ ತಿಳಿಸಿದುದರಿಂದ ಆತನು ನನ್ನಸಂಗಡಹೇಳಿದ, ವಿಷಯವು ನಿಶ್ಚಯವೆಂದು, ನಿಸ್ಸಂದೇಹನಾಗಿ ತಿಳಿದುಕೊಂಡೆನು. ನನ್ನತಂದೆಗೂ, ಆತನಿಗೂ, ದ್ವೇಷವುಂಟಾಗುವುದಕ್ಕೆ ಕಾರಣವನ್ನು ಈ ನನ್ನಚರಿತ್ರೆಯಲ್ಲಿ ಹೇಳಬೇಕಾದ ಆವಶ್ಯಕವಿಲ್ಲವಾದರೂ, ನಿಮ್ಮಗಳಿಗೋಸ್ಕರವಾಗಿ ಹೇಳಬೇಕೆಂದಿರುವೆನು. ಆ ದರ್ಜಿಯೆವನು, ನನಗೆಹೇಳಿದ ಬುದ್ಧಿವಾದಕ್ಕಾಗಿ, ಆತನಿಗೆ ವಂದನೆಗಳನ್ನು ಸಮರ್ಪಿಸಿ, ನೀನುಮಾಡಿದ ಉಪಕಾರಕ್ಕಾಗಿ ನಾನುತುಂಬ ಕೃತಜ್ಞನಾಗಿರುವೆನಲ್ಲದೆ, ನೀನುಹೇಳಿದಂತೆ ಇನ್ನುಮೇಲೆ ನಡೆದುಕೊಳ್ಳುತ್ತೇನೆಂದು, ವಿಜ್ಞಾಪಿಸಿಕೊಂಡೆನು. ಆತನು ನನಗೆ ಹಸಿವಾಗಿರುವುದೆಂದು ತಿಳಿದುಕೊಂಡು, ತನ್ನಮನೆಗೆ ಕರೆದುಕೊಂಡು ಹೋಗಿ, ಊಟಕ್ಕಿಡಲು, ನಾನು ಊಟಮಾಡಿದೆನು. ಹೀಗೆ ಕೆಲವುದಿನಗಳಲ್ಲಿ ನನ್ನ ದೇಹಶ್ರಮವು ಕಡಿಮೆಯಾದಬಳಿಕ ಆತನು, ನನ್ನನ್ನುನೋಡಿ, ನಮ್ಮ ದೇಶದ ರಾಜಪುತ್ರರು, ಸಮಯಾನುಸಾರವಾಗಿ, ಉಪಯೋಗಿಸಿಕೊಳ್ಳಬಹುದಾದ, ಅನೇಕವಿದ್ಯಗಳನ್ನು ಕಲಿತಿರುವರಲ್ಲವೆ? ಅಂತಹ ವಿದ್ಯಗಳಲ್ಲಿ ನಿನಗೇನಾದರೂ ತಿಳುವಳಿಕೆಯುಂಟೆ? ಹಾಗೇನಾದರೂ ತಿಳಿದಿದ್ದರೆ ಒಬ್ಬರಿಗೂ ತೊಂದರೆಯಾಗದಂತೆ ನಿನ್ನ ಜೀವನವನ್ನು ನೀನು ಸಂಪಾದಿಸಿಕೋ ಎಂದು ಹೇಳಿದನು. ನನಗೆ ವ್ಯಾಕರಣವೂ, ಕಾವ್ಯಾದಿಗಳೂ, ಚೆನ್ನಾಗಿ

ಬರುವುದಲ್ಲದೆ ಹಸನ್ಮಾಕ್ಷರದಲ್ಲಿ ನನ್ನ ಸಮಾನರಾದವರು ಯಾರೂ ಇಲ್ಲವೆಂದು ಹೇಳಿದೆನು. ಆತನು ಅವುಗಳೆಲ್ಲವೂ ನಮ್ಮದೇಶದಲ್ಲಿ ಬಂದು ರೊಟ್ಟಿಯಚೂರಿಗೂ, ಬೆಲೆ ಬಾಳದಿರುವುದರಿಂದ ಅವುಗಳಿಗಿಂತಲೂ, ನಿಷ್ಪ್ರಯೋಜನವಾದವುಗಳೇ ಇಲ್ಲವೆಂದು ಹೇಳಿದನು.

ಅಲ್ಲದೆ ನೀನು ನಾನುಹೇಳುವಹಾಗೆ ಕೇಳುವುದಾದರೆ, ನಿನಗೆ ಕಾಯಶಕ್ತಿಯೂ, ಆರೋಗ್ಯವೂ ಚೆನ್ನಾಗಿರುವುದರಿಂದ ಈ ಊರಿಗೆ ಸವಿೂಪವಾಗಿರುವ ಅಡವಿಗೆಹೋಗಿ, ಕಟ್ಟಿಗೆಯೆಹೊರೆಯೆನ್ನು ತಂದು ಮಾರಿಕೊಂಡರೆ, ಸುಖವಾಗಿ ಜೀವನವಾಗುವುದು. ಹೀಗೆ ಇದ್ದರೆ ಕೆಲವು ಕಾಲದಲ್ಲಿ ಭಗವಂತನದಯೆಯು, ನಿನಗುಂಟಾಗಿ ನಿನ್ನದೌರ್ಭಾಗ್ಯವೆಲ್ಲವೂ ನಾಶವಾಗುವುದು. ಅದುವರೆಗೂ, ನೀನು ವೇಷವನ್ನು ಮರೆಸಿಕೊಂಡು, ಇಂಥವರೆಂದು ಹೇಳಿಕೊಳ್ಳದೆ ಇರಬಹುದು. ನಿನಗೆಬೇಕಾದರೆ ಬಂದುಹಗ್ಗವನ್ನು ಕೊಡಲಿಯನ್ನು ನಾನು ಕೊಡುವೆನೆಂದು, ಹೇಳಿದನು. ಅದುಬಹಳ ನೀಚವಾದ ಮತ್ತು ಕಷ್ಟಸಾಧ್ಯವಾದ ಕೆಲಸವಾಗಿದ್ದರೂ, ನನ್ನರೂಪವನ್ನು ಮರೆಮಾಚಿಕೊಳ್ಳುವುದಕ್ಕಾಗಿ ನಿರಾತಂಕವಾಗಿ ಜೀವನವನ್ನು ಸಂಪಾದಿಸಿಕೊಳ್ಳುವುದಕ್ಕೂ, ಈ ಮಾರ್ಗವೇ ಸರಿಯೆಂದು, ಒಪ್ಪಿಕೊಂಡೆನು. ಮರುದಿನ ಬೆಳಿಗ್ಗೆ ಆ ದರ್ಜಿಯವನು, ನನ್ನಕೈಗೊಂದು, ಕೊಡಲಿಯನ್ನು ಹಗ್ಗವನ್ನು ಕೊಟ್ಟು, ಸೌದೆಯನ್ನು ಮಾರತಕ್ಕವರನ್ನು ಕರೆದು ಈತನನ್ನು ಅಡವಿಗೆ ನಿಮ್ಮಜೊತೆಯಲ್ಲಿಯೇ ಕರೆದುಕೊಂಡುಹೋಗಿ, ಎಂದು ಹೇಳಿದನು. ಅವರು ನನ್ನನು ಕರೆದುಕೊಂಡುಹೋಗಲು ನಾನು ಮೊದಲುದಿನತಂದ ಸೌದೆಯಹೊರೆಯಿಂದ ಆದೇಶದಲ್ಲಿ ಛಲಾವಣಿಯೆಲ್ಲಿರುವ ಬಂಗಾರದ ನಾಣ್ಯದಲ್ಲರ್ಧಭಾಗವು ದೊರೆಯಿತು. ಕಟ್ಟಿಗೆಯೆನ್ನು ಕಡಿಯುವ ಅಡವಿಗೂ, ಪಟ್ಟಣಕ್ಕೂ, ಬಹುದೂರವಾದುದರಿಂದಲೂ, ಸೌದೆಯನ್ನು ತುದು ಮಾರತಕ್ಕವರು, ಸ್ವಲ್ಪವಾದುದರಿಂದಲೂ, ಆ ಪೂರಿನಲ್ಲಿ ಸೌದೆಯು, ಪ್ರಿಯವಾಗಿಯೇ ಇದ್ದಿತು. ಹೀಗಿರುವುದರಿಂದ ಸ್ವಲ್ಪದಿನದಲ್ಲೆ ಬಹಳ ಹಣವನ್ನುಸಂಪಾದಿಸಿ, ಆ ದರ್ಜಿಯವನಿಗೆ ಕೊಡಬೇಕಾದ ಹಣವನ್ನುಕೊಟ್ಟು, ಬಂದುಸಂವತ್ಸರವು ಕಳೆದಮೇಲೆ ಒಂದಾನೊಂದು ದಿನ ಅಡವಿಯಲ್ಲಿ ಬಹುದೂರದವರೆಗೂಹೋಗಿ, ರಮಣೀಯವಾದ ಒಂದಾನೊಂದು ಸ್ಥಳದಲ್ಲಿ ಕಟ್ಟಿಗೆಯನ್ನೊಡೆಯುತ್ತಾ, ಒಂದಾನೊಂದು ಗಿಡದ

ಜೀರನ್ನು ಕೇಳುತ್ತಿರುವಾಗ ಆ ಸ್ಥಳದಲ್ಲಿ ನೆಲವೂಳಗೆಯೆ ಬಾಗಿಲಿಗೆಹಾಕಿದ್ದ ಒಂದು ಕಬ್ಬಿಣದ ಉಂಗುರವು ದೊರಕಿತು. ಅದರಮೇಲಿದ್ದ ಮಣ್ಣನ್ನು ಎತ್ತಿಹಾಕಿ ನೋಡಲು, ಸೋಪಾನಗಳು ಕಾಣಬಂದವು. ನಾನು ಕೊಡಲಿಯೆನ್ನು ಹಿಡಿದುಕೊಂಡು, ಅದರಲ್ಲಿಳಿದುಹೋಗಲು, ಬಳಗೆಭೂಮಿಯೆವೇಲಿರುವ ನಗರದಂತೆ ವಿಶಾಲವಾದ ಬಿಳಕೆನಿಂದಲೂ, ಗಾಳಿಯಿಂದಲೂ ಕೂಡಿದ ಒಂದು ನಗರವನ್ನು ನೋಡಿ, ಅತ್ಯಂತವಾದ ಆಶ್ಚರ್ಯವನ್ನು ಹೊಂದಿದೆನು. ಆ ಪಟ್ಟಣವು ಮನೋಹರವಾದ ಚಂದ್ರಕಾಂತ ಶಿಲೆಗಳಿಂದಲೂ, ಇಂದ್ರನೀಲಮಣಿಗಳಿಂದಕೂಡಿದ ವಜ್ರಮಣಿಗಳ ಶೃಂಗಾರದಿಂದಲೂ, ನಿರ್ಮಿತವಾಗಿತ್ತು. ಇದೆಲ್ಲವನ್ನು ನೋಡುತಾ ಮುಂದೆ ಹೋಗಲು, ಸೌಂದರ್ಯವತಿಯೆರಾದ ಏಳುಜನಸ್ತ್ರೀಯೆರು ಬರುತ್ತಿರುವುದನ್ನು ನೋಡಿ, ನನ್ನ ಇಂದ್ರಿಯೆಗಳು, ಸ್ವಾಧೀನತಪ್ಪಿ ಚಲಿಸಲಾರಂಭಿಸಿದವು. ಇಷ್ಟರಲ್ಲಿಯೆ ಬಿಳಗಾದುದರಿಂದ ಷಹರಜೌದಿಯು, ಕಥೆಯನ್ನು ನಿಲ್ಲಿಸಿದಳು. ಅದನ್ನುನೋಡಿ ದಿನರಜೌದಿಯು, ಅಕ್ಕಾ ! ನೀನು ಈದಿನಹೇಳಿದ ಕಥೆಯು, ನನಗೆ ಅತ್ಯಾನಂದವನ್ನುಂಟುಮಾಡಿತು. ಆದರೆ ಇನ್ನುನೀಲಿ ಹೇಳುವಕಥೆಯು, ಇದಕ್ಕಿಂತಲೂ, ಅತಿಶಯವಾಗಿದ್ದೀತೆಂದು, ನಿಸ್ಸಂದೇಹವಾಗಿ ಹೇಳುತ್ತೇನೆ. ಅಲ್ಲದೆ ಈ ಸಮಯದಲ್ಲಿ ಸುಲ್ತಾನರು, ಸ್ವಲ್ಪವಾದರೂ, ಅನುಮಾನವನ್ನು ಹೊಂದಲಾರರೆಂದು, ನುಡಿಯಲು, ಸುಲ್ತಾನನು, ಮುಂದಿನ ಕಥೆಯನ್ನು ಕೇಳಜೀಕೆಂಬಾಸೆಯಿಂದ ಯಾವಮಾತನ್ನೂ ಆಡದೆ ಹೊರಟುಹೋದನು.

೪೩ ನೆಯ ರಾತ್ರಿ ಕಥೆ

ಮರುದಿನ ದಿನರಜೌದಿಯು, ತನ್ನ ಅಕ್ಕನನ್ನುಕುರಿತು ಪ್ರಶ್ನೆ ಮಾಡುತ್ತಲೆ, ಆಕೆಯು ಕಥೆಯನ್ನು ಹೇಳಲಾರಂಭಿಸಿದಳು. ಕಾಲೆಂಡರು, ಜೋಬದಿಯೆನ್ನುನೋಡಿ, ಅಮ್ಮಾ ! ನಾನು ಆ ಲಲನಾಮಣಿಯೆರನ್ನು ನೋಡಿ, ಅವರು ನನ್ನ ಬಳಗೆಬರುವ ಪ್ರಮವನ್ನು ತೆಗೆದುಕೊಳ್ಳಕೂಡದೆಂಬ ಅಭಿಪ್ರಾಯದಿಂದ ನಾನು ಅವರಬಳಗೆ ಹೋಗಿ ವಂದನೆಗಳನ್ನು ಮಾಡಲು, ಅವರು ನನ್ನನ್ನುನೋಡಿ ನೀನೇನು ಮನುಷ್ಯನೋ ಅಥವಾ ದೆವ್ವವೊ ಎಂದು ಕೇಳಿದರು.

ಅಮ್ಮಾ ! ನಾನು ಮನುಷ್ಯನೇಹೊರತು ದೆವ್ವಕ್ಕೂ, ನನಗೂ, ಯಾವಸಂಬಂಧವೂ ಇಲ್ಲವೆಂದು, ನಾನು ಹೇಳಿದೆನು. ನೀನೇತಕ್ಕಾಗಿ ಇಲ್ಲಿಗೆಬಂದೆ ? ಇಪ್ಪತ್ತುವರ್ಷಗಳಿಂದ ನಾವು ಇಲ್ಲಿ ವಾಸವಾಗಿದ್ದರೂ ನಿನ್ನಹೊರತು ಮತ್ತಾವ ಮನುಷ್ಯನನ್ನೂ ನೋಡಲಿಲ್ಲವೆಂದು ಹೇಳಿದರು. ಇದಕ್ಕೆವೊದಲೆ ನನ್ನಮನಸ್ಸಿಗೆ ಚೆನ್ನಾಗಿ ಅಂಟಿಹೋದ ಅವರುಗಳ ಸೌಂದರ್ಯವೂ, ವಿಲಾಸವೂ, ಸಹ ಅವರಪ್ರಶ್ನೆಗಳಿಗೆ ಉತ್ತರವನ್ನು ಕೊಡಗೊಡಿಸದೆ, ಅಮ್ಮಾ ! ಅಕಸ್ಮಾತ್ತಾಗಿ ನಾನಿಲ್ಲಿಗೆಬಂದು ನಿಮ್ಮ ಸಂದರ್ಶನವನ್ನುಮಾಡಿದುದರಿಂದ ನಾನು ಅನುಭವಿಸಿದ ದುಃಖಗಳೆಲ್ಲವೂ ಶಾಂತವಾದುವು ಎಂಬುದನ್ನು ನನ್ನನ್ನು ನೋಡಿದುದರಿಂದ ನಿನಗೂ ಕೊಂಚಮಟ್ಟಿಗೆ ಆನಂದವಾಗಿರಬಹುದೆಂಬುದನ್ನೂ, ಧೈರ್ಯವಾಗಿ ತಿಳಿಯಹೇಳುವಂತೆ ಮಾಡಿತು. ರಾಜಪುತ್ರನಾದ ನಾನು ಆಗಿನಸ್ಥಿತಿಯಲ್ಲಿ ಆ ಸ್ಥಳವನ್ನುಸೇರಿ ಅವರುಗಳನ್ನು ನೋಡಿದುದರಿಂದ ಅವರಕೂಡ ನನ್ನ ಸಂಗತಿಯೆನ್ನೆಲ್ಲಾ ತಿಳಿಯಹೇಳಿದೆನು. ಆಕೆ ನನ್ನನ್ನುನೋಡಿ, ಅಯ್ಯೋ ! ರಾಜಪುತ್ರ ! ಈ ಅದ್ಭುತವಾದ ಕಾರಾಗೃಹವು ಮಹಾನಿರ್ಬಂಧವಾದ ಸ್ಥಳವಾಗಿರುವುದೇ ಹೊರತು, ಮತ್ತೇಬೇರೆಯೆಲ್ಲ. ಪ್ರಪಂಚದಲ್ಲಿ ಮನೋಹರವಾದ ಅನೇಕ ಸ್ಥಳಗಳಿದ್ದರೂ, ನಮ್ಮಗಳ ಮನಸ್ಸಿಗೆ ಯಾವುದೂ, ಸರಿಹೋಗದೆ ಹೋದುದರಿಂದ ನಾವು ಈ ಸ್ಥಳಕ್ಕೆ ಬಂದೆವು.ಇದೂ ಅಷ್ಟೊಂದು ಮನೋಜ್ಞವಾಗಿಲ್ಲವೆಂದು, ಹೇಳಿದಳು. ಇಬೆನಿ ಯೆನ್ನುವ ದ್ವೀಪಕ್ಕೆ ದೊರೆಯಾದ ದೊಡ್ಡ ಇಪಿತಿಮೂರನು ಎಂಬವನನ್ನು ನೀನು ಕೇಳಬಲ್ಲೆಯಾ ? ಅವನು ವಾಸವಾಡುವ ದ್ವೀಪದಲ್ಲಿ ಉತ್ಪತ್ತಿಯಾಗುವ ಹವಳವನ್ನು ಹೆಚ್ಚಾಗಿ ಬೆಳೆಯಿಸಿ, ಇದ್ದುದರಿಂದ ಆ ದ್ವೀಪಕ್ಕೆ ಇಬನಿ ದ್ವೀಪವೆಂದು ಹೆಸರಾಯಿತು.

(ಅಂದರೆ ಹವಳದ್ವೀಪ) ನಾನು ಇಂತಹ ದ್ವೀಪಕ್ಕೆ ದೊರೆಯೆಂಬಿರುವ ರಾಜನವಮಗಳು. ತನ್ನತಂದೆಯು, ತನ್ನ ಅಣ್ಣನಮಗನಿಗೆ ನನ್ನನ್ನು ಕೊಟ್ಟು, ವಿವಾಹಮಾಡಬೇಕೆಂದು, ತಮ್ಮರಾಜಧಾನಿಯಲ್ಲಿ, ನಾನಾ ವಿಚಿತ್ರ ವಿನೋದಕರಗಳಾದ ಮಂಟಪಗಳನ್ನು ಕಟ್ಟಿಸಿ, ಉತ್ಸಾಹದಿಂದ ಶಾಸ್ತ್ರವತ್ತಾಗಿ ನನ್ನನ್ನು ಗಂಡನ ವಶಮಾಡುವಷ್ಟರಲ್ಲಿಯೇ,

ನನ್ನನ್ನು ಒಬ್ಬ ರಾಕ್ಷಸನು, ಎತ್ತಿಕೊಂಡು ಹೋದನು. ಆಗ ನಾನು ಭಯಕಾ೦ತಳಾಗಿ, ಕೂಗಿಕೊಳ್ಳುತಾ೨ ಮರ್ಛೆಹೋದೆನು. ಬಳಿಕ ಎಚ್ಚತ್ತುನೋಡುವಲ್ಲಿ, ನಾನೀಸ್ಥಳದಲ್ಲಿರುವುದನ್ನುಕಂಡು, ಮಹಾವ್ಯಸನವನ್ನು ಹೊಂದಿ, ಇಪ್ಪತ್ತೈದು ಸಂವತ್ಸರಗಳಿಂದಲೂ, ಆತನ ಆಜ್ಞೋನುಸಾರನಾಗಿ ನಡೆದುಕೊಳ್ಳುತಾ೨ ಬಹುಪ್ರಯಾಸದಿಂದ, ಈ ಸ್ಥಳದಲ್ಲಿ ವಾಸವೂಡಿಕೊಂಡಿರುವೆನು. ಇಲ್ಲಿ ನನ್ನಜೀವನವನ್ನು ನಡೆಸಿಕೊಳ್ಳುವುದಕ್ಕೆ ಬೇಕಾದವಸ್ತುಗಳೂ, ರಾಜಕುಮಾರಿಯಾದ ನಾನು ಧರಿಸುವುದಕ್ಕೆ ತಕ್ಕುವುಗಳಿಂದ ನಾನಾವಸ್ತ್ರಗಳೂ, ಸಮೃದ್ಧಿಯಾಗಿರುವುವು. ಹತ್ತು ದಿನಗಳಿಗೊಂದುಸಾರಿ ಆ ರಾಕ್ಷಸನು ನನ್ನಬಳಿಗೆಬಂದು, ನನ್ನಲ್ಲಿ ಅನುರಕ್ತನಾಗಿದ್ದು ಹೊರಟುಹೋಗುವನೇ ಹೊರತು, ಮತ್ತೆ ಹತ್ತುದಿನಗಳಾಗುವವರಿವಿಗೂ, ಬರುವುದಿಲ್ಲ. ಆದರೆ ಆತನು ಹೇಳುವುದೇನಂದರೆ ತಾನು ಮತ್ತೊಬ್ಬ ಹೆಂಡತಿಯನ್ನು ಇಟ್ಟುಕೊಂಡಿರುವಂತೆಯೂ, ಅವಳಲ್ಲಿ ಅನುರಾಗ ಕಡಿವೆಯಾದ್ದರಿಂದ, ನನ್ನಬಳಿಗೆ ಬರುತ್ತಿರುವಂತೆಯೂ, ಹಗಲಾಗಲಿ, ರಾತ್ರಿಯಾಗಲಿ, ನನ್ನ ಆಗಮನವು ನಿನಗೆ ಅವಶ್ಯಕವಾಗಿದ್ದರೆ ಮನೆಯ ಮುಂಭಾಗದಲ್ಲಿರುವ ಯಂತ್ರವನ್ನು ಮುಟ್ಟದಕೂಡಲೆ, ಬರುವೆನೆಂದು ಹೇಳಿರುವನು. ಆತನು ಇಲ್ಲಿಗೆ ಬಂದು ಇದ್ದು ನಾಲ್ಕುದಿನಗಳಾಯಿತು. ಇನ್ನು ಐದುದಿನಗಳು ಕಳೆದಬಳಿಕ ಆತನು ಇಲ್ಲಿಗೆಬರುವನು. ಆದುದರಿಂದ ಸಂತೋಷಯುಕ್ತನಾಗಿ ನೀನು ನನ್ನ ಬಳಿಯಲ್ಲಿರುವುದಾದರೆ, ನಿನಗೆ ತಕ್ಕಂತೆ ಉಪಚಾರವನ್ನು ಮಾಡುವೆನೆಂದು ಹೇಳಿದಳು.

ನಾನು ನಿನ್ನ ಇಷ್ಟಾನುಸಾರವಾಗಿ ನಡೆದು ಕೊಳ್ಳುವೆನಲ್ಲದೆ ಅಪಾರ್ಥಿತವಾಗಿ ನನಗೆ ಉಪಕಾರವೂಡಿದುದಕ್ಕಾಗಿ ನಿನಗೆ ವಂದನೆಗಳನ್ನು ಸಮರ್ಪಿಸುತ್ತಿರುವೆನೆಂದು, ಹೇಳಿದಕೂಡಲೆ ಆಕೆಯು ನನ್ನನ್ನು ಬಹುಮನೋಜ್ಞವಾದ ಮಜ್ಜನಶಾಲೆಗೆ ಕರೆದುಕೊಂಡುಹೋಗಿ, ಮಡಿಯನ್ನುಡಿಸಿ, ನಾನು ಮೊದಲುಹಾಕಿಕೊಂಡಿದ್ದ, ಬಟ್ಟೆಗಳೆಲ್ಲವನ್ನು ತೆಗೆದುಕೊಂಡು, ಅದಕ್ಕಿಂತಲೂ ಅಮೂಲ್ಯವಾದವುಗಳಾಗಿ, ಅವಳ ಸಹವಾಸದಲ್ಲಿ ನಾನು ಇರುವುದಕ್ಕೆ ಅನುಕೂಲವಾದ ಉಡುಪುಗಳನ್ನು ಕೊಟ್ಟುದಾಕ್ಕಾಗಿ, ನಾನುತುಂಬ ಸಂತೋಷಯುಕ್ತನಾದೆನು.

ಇಂಡಿಯಾದೇಶ ಕಿಂಕಾಪುಗಳಲ್ಲಿ ಅತ್ಯತ್ತಮವಾದ ಕಿಂಕಾಪಿನ ಕೆಲಸವಾಡಿದ ಒಂದು ಸೋಪದಲ್ಲಿ ನಾವಿಬ್ಬರೂ ಸ್ವಲ್ಪಹೊತ್ತು ಮಾತ ನಾಡುತ್ತಾ ಕುಳಿತಿದ್ದೆವು. ಬಳಿಕ ಆಕೆಯು, ದೇವಯೋಗ್ಯವಾದ ಬಟ್ಟ ಲುಗಳಲ್ಲಿ ಉತ್ತಮತರದ ಆಹಾರವನ್ನು ಪಾನವನ್ನು ತಂದಿಟ್ಟಳು. ನಾವಿ ಬ್ಬರೂ ಜೊತೆಯಲ್ಲಿ ಊಟಮಾಡಿ ಸಂತೋಷದಿಂದ ಸಾಯಂಕಾಲದವರೆ ಗೂ, ಕಾಲವನ್ನುಕಳೆದು ಸಾಯಂಕಾಲವಾಗುತ್ತಲೆ, ಉನ್ನತವಾದ ಮೆತ್ತ ನೆಯಹಾಸಿಗೆಯಲ್ಲಿ ಮಲಗಿಕೊಂಡು ಬಹುಸಂತೋಷದಿಂದ ರಾತ್ರಿಯನ್ನು ಕಳೆದೆವು. ಮರುದಿನ ಆಕೆಯು, ನನ್ನ ಸಂಗವುದಿಂದುಂಟಾದ ಆನಂದವ ನ್ನು ಹೊರಪಡಿಸುವುದಕ್ಕಾಗಿ ಉತ್ತಮವಾದ ಔತಣವನ್ನು ಮಾಡಿದನಂತ ರ, ಆರೋಗ್ಯರಕ್ಷಣೆಗಾಗಿ, ದಾಕ್ಷಾರಸವನ್ನುತಂದು, ಪದ್ಧತಿಯುಮೀರಿ ತಾನು ಮೊದಲುಕುಡಿದು, ತಲೆಗೇರಿದ ಮಾಯೆಕದಿಂದ ರಾಜಪುತ್ರಿಯೇ ! ಇಪ್ಪತ್ತೈದು ಸಂವತ್ಸರಗಳಿಂದ ಈ ನಿರ್ಬಂಧದಲ್ಲಿಸಿಕ್ಕಿ, ಏತಕ್ಕಾಗಿತೊಂ ದರೆ ಪಡುತ್ತಿರುವೆ ? ನನ್ನಸಂಗಡಬಾ, ಇದಕ್ಕಿಂತಲೂ ಅತಿಶಯವಾದ ನಾನಾಸುಖಗಳನ್ನು ಅನುಭವಿಸುವೆ, ಎಂದು ಹೇಳಿದೆನು. ಅದನ್ನುಕೇಳಿ ಆಕೆಯು, ಈ ಮಾತುಗಳನ್ನು ಮರೆತುಬಿಡು. ಒಂಭತ್ತುದಿನಗಳೂ ದಯೆ ಮಾಡಿ, ನೀನು ನನ್ನಲ್ಲಿದ್ದು, ಹತ್ತನೆಯದಿನವನ್ನು ಮಾತ್ರ, ರಾಕ್ಷಸನಿ ಗಾಗಿ ಬಿಟ್ಟುಕೊಡು ಎಂದಳು. ಅದನ್ನುಕೇಳಿ ನಾನು ನೀನು ಆ ರಾಕ್ಷ ಸನಿಗಾಗಿ ಭಯಪಡುತ್ತಾ, ಹೀಗೆಕೆಹೇಳುವೆ. ನಾನಾದರೊ ಅವನಿಗೆಂದಿಗೂ ಭಯಪಡಲಾರೆನು. ಆತನು ಇಲ್ಲಿಗೆಬಂದರೆ ನನ್ನಪರಾಕ್ರಮವನ್ನು ತೋ ರಿಸಿ, ಈ ಪ್ರಪಂಚದಲ್ಲಿರುವ ಭೂತಸಮೂಹದಲ್ಲೆಲ್ಲಾ ಮೊದಲು ಆತನ ನ್ನು ತೀರಿಸಿಕೊಳ್ಳುವೆನು. ಹೇಗಾದರೂ ಇಲ್ಲಿಗೆಬರುತ್ತಾನಲ್ಲಾ, ಆಗ ನನ್ನ ಭುಜಬಲವನ್ನು ಪರಾಕ್ರಮವನ್ನು ಖಂಡಿತವಾಗಿ ತೋರಿಯೇಬಿಡು ವೆನೆಂದು, ಪ್ರಮಾಣಮಾಡಿ ಹೇಳಿದೆನು. ಅದನ್ನುಕೇಳಿ ರಾಜಕುಮಾರಿ ಯು, ಈ ಯಂತ್ರವನ್ನು ಮುಟ್ಟಿದರೆ ರಾಕ್ಷಸನು ಬಂದುಬಿಡುವನು.

ನಿನಗಿಂತಲೂ, ನನಗೆ ಆತನಗುಣಗಳು, ಚೆನ್ನಾಗಿ ತಿಳಿದಿರುವುದು ಆದುದರಿಂದ ಮುಟ್ಟಬೇಡವೆಂದು, ಹೇಳಿದರೂ, ಸಾರಾಯಿಯ ಮತ್ತಿನಿಂ ದ ನಾನು ಅವಳ ಮಾತನುಕೇಳದೆ, ಆಯಂತ್ರವನ್ನು ಚೂರುಚೂರಾಗಿ,

ಮುರಿದುಹಾಕಿದೆನು. ಹೀಗೆಂದುಹೇಳಿ ಷಹರಜೌದಿಯು, ಬೆಳಗಾದುದ ರಿಂದ ಕಥೆಯನ್ನು ನಿಲ್ಲಿಸಿದಳು. ಸುಲ್ತಾನರು, ಯಂತ್ರವನ್ನು ಮುರಿ ದವೇಲೆ, ನಡೆದ ವಿಚಿತ್ರವನ್ನು ಕೇಳಬೇಕೆಂದು, ಅತ್ಯಂತಕುತೂಹಲಭ ರಿತರಾಗಿಯೂ, ಯೌವನನೂತನನ್ನು ಆಡದೆ ಹೊರಟುಹೋದರು.

೪೪ ನೆ ಯ ರಾ ತ್ರಿ ಕ ಥೆ .

ಎರಡನೆಯದಿನ ಬೆಳಗಿನಜಾವದಲ್ಲಿ ಎದ್ದು, ದಿನರಜೌದಿಯು, ಅಕ್ಕನನ್ನುಕುರಿತು, ಅಕ್ಕಾ ! ಆ ರಾಜಪುತ್ರನು ಕಾರಾಗೃಹದಲ್ಲಿದ್ದು, ಯಂತ್ರವನ್ನುಮುರಿದುಹಾಕಿದಮೇಲೆ, ಮುಂದೆನಡೆದ ಕಥೆಯನ್ನುಹೇಳು ಇದನ್ನುಕೇಳಬೇಕೆಂದು, ಸುಲ್ತಾನರೂಕೂಡ, ಅತ್ಯಂತ ಕುತೂಹಲಯು ಕ್ತರಾಗಿರುವನೆಂದು, ನುಡಿಯಲು ಷಹರಜೌದಿಯು, ಆ ವೂತನನ್ನುಕೇಳಿ ದ ಕೂಡಲೆ, ಕಥೆಯೆನ್ನು ಹೇಳಲಾರಂಭಿಸಿದಳು. ಆ ಯಂತ್ರವನ್ನು ಮುರಿದಕೂಡಲೆ, ಆ ಪಟ್ಟಣದಲ್ಲಿ ಭಯಂಕರವಾದ ಘೋಷವು, ಕತ್ತಲೆ ಯು, ಉಂಟಾಗಿ ಪಟ್ಟಣವೆಲ್ಲವೂ, ನಡುಗುವುದಕ್ಕೆ ಮೊದಲಾಯಿತು. ಬಳಿಕ ನಾನು ಆಕೆಯೆನ್ನುಕುರಿತು, ಸಮೂಧಾನಮೂಡಲು, ಆಕೆಯು ಮುಂದೆ ಮಹಾನರ್ಥವು ಸಂಭವಿಸುವುದೆಂದು, ತಿಳಿದು ತನ್ನ ಕಷ್ಟವನ್ನು ಕೂಡ, ಲಕ್ಷ್ಯಕ್ಕೆತಾರದೆ ಅಯ್ಯೋ ! ರಾಜಪುತ್ರಾ ! ನೀನು ಮಹಾಪ ತ್ರಿಗೆ ತುತ್ತಾಗುತ್ತಿರುವೆಯೆಲ್ಲಾ ! ಎಲ್ಲಿಯೊದರೂ, ಬೇಗನೆ ಹೊರಟು ಹೋಗೆಂದು, ಗಟ್ಟಿಯಾಗಿ ಕೂಗಿ ಹೇಳಿದಳು.

ಆ ಪ್ರಕಾರವೇ ನಾನು ಹೊರಟುಬರುವಾಗ, ನಾನು ತಂದಿದ್ದ ಕೊಡಲಿಯನ್ನು ದಾರವನ್ನು, ಮರೆತುಬಿಟ್ಟೆನು. ನಾನು ಆ ಸೋಪಾ ನದಬಳಿಗೆ ಬರುವುದರೊಳಗಾಗಿ, ಆ ಭೂತವು, ಬರುವುದಕ್ಕೆ ಮಾರ್ಗವ ನ್ನು ಮಾಡಿಕೊಂಡಿರುವ ಸಂಗತಿಯು, ತಿಳಿಯಿತು. ಬಳಿಕ ರಾಕ್ಷಸನು, ಬಂದು ರಾಜಕುಮಾರಿಯನ್ನುನೋಡಿ, ನಿನಗೇನು ತೊಂದರೆಯುಂಟಾಯಿ ತು. ನನ್ನನ್ನು ಏಕೆ ಬರಮಾಡಿದೆ ? ಎಂದುಕೇಳಲು, ಆಕೆಯು, ನನಗೆ ಅಕಸ್ಮಾತ್ತಾಗಿ ಹೊಟ್ಟೆನೋವು ಉಂಟಾಯಿತು. ಆಗ ನಾನು ಸುದಾರಿ ಸಿಕೊಳ್ಳುವುದಕ್ಕಾಗಿ, ಈಸಾರಾಯಿಸೀಸೆಗಳನ್ನೊಡೆದು ಕುಡಿದೆನು. ನಂತರ ಅದರ ಮತ್ತು ತಲೆಗೇರಿದುದರಿಂದ, ಈ ಯಂತ್ರದಮೇಲೆ ಬಿದ್ದೆನು.

ಇಷ್ಟಲ್ಲದೆ ಮತ್ತೇನೂ ಇಲ್ಲವೆಂದು ಹೇಳಿದಳು. ಆ ಮಾತನ್ನು ಕೇಳಿ, ಭೂತವು ನೀನು ಕೆಲಸಕ್ಕೆ ಬಾರದ ಅಬದ್ಧಗಳನ್ನು ಹೇಳುತ್ತಿರುವೆ ಇಲ್ಲಿ ಬಿದ್ದಿರುವ ಈ ಕೊಡಲಿಯೂ, ಹಗ್ಗವೂ ಎಲ್ಲಿಂದ ಬಂದಿತೆಂದು, ಕೇಳಿದನು. ಆಕೆ ಅಯ್ಯೋ ! ಅದನ್ನು ನಾನು ನೋಡಲೇ ಇಲ್ಲ. ಇದುವರೆಗೂ ಅದು ಇಲ್ಲಿರಲೂ ಇಲ್ಲ, ನೀನು ಇಲ್ಲಿಗೆ ಅತಿವೇಗವಾಗಿ ಬರುತ್ತಿರುವಾಗ ಎಲ್ಲಿಂದಲೋ ಈ ಸ್ಥಳಕ್ಕೆ ಬಂದು ಬಿದ್ದಿರಬಹುದೆಂದು, ಹೇಳಿದಳು. ಆಗ ಆ ಕ್ರೂರನಾದ ರಾಕ್ಷಸನು, ಆಕೆಯನ್ನು ನಿರ್ದಯೆದಿಂದ ಬಹಳವಾಗಿ ದಂಡಿಸುತ್ತಿರುವಲ್ಲಿ, ರೋದನ ಧ್ವನಿಯು, ಊರಲ್ಲೆಲ್ಲಾ ಮುಚ್ಚಿಕೊಂಡಿತು. ಅದನ್ನು ನೋಡಿ, ನಾನು ಅತ್ಯಂತ ಭಯಾಕ್ರಾಂತನಾಗಿ ಅಯ್ಯೋ ನಾನುವೂಡಿದ ಅಚಾತುರ್ಯದಿಂದ ಸರ್ವಾಂಗಸುಂದರಿಯಾದ ಆ ಲಲನಾಮಣಿಗೆ ತೊಂದರೆಯುಂಟಾಯಿತೆಂದುಕೊಂಡು, ನಡುಗುತ್ತಿರುವ ದೇಹವನ್ನು ಸರಿಯಾಗಿ ನಿಲ್ಲಿಸಿಕೊಳ್ಳಲಾರದೆ, ಸೋಪಾನದಬಳಯಲ್ಲಿ ಬಿದ್ದು ಇದ್ದ ತನ್ನ ಬಟ್ಟೆಗಳನ್ನು ಹಾಕಿಕೊಂಡು, ಇಲ್ಲಿರುವುದು ಸರಿಯಲ್ಲವೆಂದು, ತಿಳಿದು ಆ ಕಾರಾಗೃಹವನ್ನು ತೊರೆದು ಹೊರಗೆಬಂದು, ಬಾಗಿಲುಮುಚ್ಚಿ, ಮೇಲೆ ಮಣ್ಣಾಹಾಕಿ ನನ್ನ ಸೌದೆಯಹೊರೆಯನ್ನು, ತೆಗೆದುಕೊಂಡು, ಊರಿಗೆಬಂದು ಸೇರಿದೆನು. ನಾನು ವಾಸವಾಡುತ್ತಿರುವ ಮನೆಯವನು, ನಾನು ಬಹುಕಾಲವಾದರೂ, ಮನೆಗೆ ಬರದೆ ಇರುವುದನ್ನು ನೋಡಿ, ಅತ್ಯಂತ ಚಿಂತಾಕ್ರಾಂತನಾಗಿದ್ದು, ನಾನುಬಂದಮೇಲೆ ಅಯ್ಯಾ ! ನೀನಿದುವರೆಗೂ ಬರದೇಹೋದುದರಿಂದ, ನಿನ್ನರಹಸ್ಯವು ಹೊರಬಿದ್ದು, ನಿನಗೇನಾದರೂ, ಅಪಾಯವುಂಟಾದುದೊ ಏನೋ ಎಂದು ಕೊರಗುತ್ತಿದ್ದೆನು. ಈಗ ನಿನ್ನನ್ನುನೋಡಿ, ತುಂಬ ಸಂತೋಷಯುಕ್ತನಾದೆನೆನಲು, ನಾನು ಇಲ್ಲಿ ಸಲ್ಲದಕಾರಣಗಳನ್ನು ಹೇಳಿದೆನೆ ಹೊರತು, ನಿಜವಾದಕಾರಣಗಳನ್ನು ಹೇಳದೆ ಮರವಾಚಿದೆನು. ನಾನು ನನ್ನ ಕೊಠಡಿಯೆನ್ನು ಸೇರಿ ಆ ರಾಜಕುಮಾರಿಯ, ಗುಣಗಳನ್ನು ಸೌಂದರ್ಯಾತಿಶಯಗಳನ್ನು ಅವಳಿಗೆ ನನ್ನಿಂದ ಸಂಭವಿಸಿದ ತೊಂದರೆಯೆನ್ನೂ, ನೆನೆನೆನೆದು ವ್ಯಸನಪಡುತ್ತಿರುವಲ್ಲಿ ಆದರ್ಜಿಯವನು, ನನ್ನನ್ನುಕುರಿತು ಹೇಳಿದುದೇನೆಂದರೆ, ನೀನು ಕಾಡಿನಲ್ಲಿ ಕೊಡಲಿಯನ್ನು ದಾರವನ್ನು ಮರೆತುಬಂದಿರುವೆಯೆಂತೆ, ಅದನ್ನುಮತ್ತೊಬ್ಬ ಸೌದೆಯವನು, ತಂದಿರುವನು, ನಿನ್ನಕೈಯ್ಯಲ್ಲಿ ಹೊರತು ಮು

ತ್ತಾರಕ್ಕೆಯ್ಯಲ್ಲಿಯೂ, ಕೊಡುವುದಿಲ್ಲವೆಂದು, ಆತನು ಹೇಳುತ್ತಾನಾದು ದರಿಂದ ಆತನಬಳಿಗೆಹೋಗಿ ಮಾತನಾಡಿ ಬಾ ! ಎಂದನು. ಬಳಿಕ ಅವನ ಮನೆಯಬಾಗಿಲಿಗೆ ಬಂದು ಒಬ್ಬ ಮುದುಕನು ಕೂಗಿದನು. ಅದನ್ನುಕೇಳಿ ನಾನು ಗಡಗಡನೆ ನಡುಗುತ್ತಿರುವಲ್ಲಿ, ಬಾಗಿಲು ತನ್ನಷ್ಟಕ್ಕೆತಾನೆ ತೆರೆದುಕೊಂಡಿತು. ವೇಷಧಾರಿಯಾಗಿದ್ದ ಮುದುಕನು, ಕೊಡಲಿಯನ್ನು ಹಗ್ಗವನ್ನು ನನ್ನಮುಂದುಗಡೆ ಹಾಕಿದನು. ಇಬಿಲಿದ್ವೀಪದ ರಾಜಪುತ್ರಿಯನ್ನು ಬಲಾತ್ಕಾರವಾಗಿ ಎತ್ತಿಕೊಂಡುಹೋಗಿದ್ದ, ರಾಕ್ಷಸನು ಇವನೇ ಆದುದರಿಂದ ಆತನನ್ನು ನೋಡಿ ನಾನು ಪಿಶಾಚಿಗಳಿಗೆ ದೊರೆಯೊದ ಎಲ್ಲಿಸು ಎಂಬುವನ ಮೊಮ್ಮಗನು. ಇದು ನಿನ್ನ ಕೊಡಲಿಯೆಲ್ಲವೆ ? ಇದು ನಿನ್ನ ದಾರವಲ್ಲವೆ ? ಎಂದು ಮಾತನಾಡುತ್ತಿದ್ದನು. ಇಷ್ಟರಲ್ಲಿ ಬೆಳಗಾದುದರಿಂದ, ಷಹರಜಾದಿಯು, ಕಥೆಯೆನ್ನು ನಿಲ್ಲಿಸಿದಳು. ಸುಲ್ತಾನರು, ಈ ಮನೋಹರವಾದ ಕಾಲೆಂಡರು ಕಥೆಯೆನ್ನು ಪೂರ್ತಿಮಾಡಿ ಹೇಳುವವರೆಗೂ, ಕೇಳಬೇಕೆಂದು, ಅಪೇಕ್ಷೆಯನ್ನು ಹೊಂದಿ, ಹೊರಟುಹೋದರು.

೪೫ ನೆಯ ರಾತ್ರಿ ಕಥೆ

ದಿನರಜಾದಿಯು, ಮರುದಿನ ಬೆಳಗ್ಗೆ ಎದ್ದು, ರಾಣಿಯನ್ನು ಕುರಿತು, ಅಕ್ಕಾ ! ನೀನು ಎಚ್ಚರವಾಗಿದ್ದರೆ, ಆ ಎರಡನೆಕಾಲೆಂಡರಿನ ಕಥೆಯೆನ್ನು ಪೂರ್ತಿಮಾಡೆಂದು, ಕೇಳಲು ಷಹರಜಾದಿಯು, ಸುಲ್ತಾನನನ್ನುಕುರಿತು, ಕಥೆಯೆನ್ನುಹೇಳಲಾರಂಭಿಸಿದಳು. ಕಾಲೆಂಡರು, ಜೋಬಿದಿಯೆನ್ನುನೋಡಿ, ಅಮ್ಮಾ ! ಆ ರಾಕ್ಷಸನು ಇಂತೆಂದುಃ ನನ್ನಸಂಗಡ ಹೇಳಿದವೋಲೆ, ನಾನು ಆತನಿಗೆ ಪ್ರತ್ಯುತ್ತರವನ್ನು ಹೇಳದಿದ್ದರೂ, ವಿಶೇಷವಾದ ಭೀತಿಯೆನ್ನು ಹೊಂದಿದವನಾದೆನು. ಆತನು ನನ್ನ ನಡುವನ್ನುಹಿಡಿದು ಬಲಾತ್ಕಾರದಿಂದ ಎಳೆದುಕೊಂಡು, ಆಕಾಶಮಾರ್ಗಕ್ಕೆ ತೆಗೆದುಕೊಂಡು ಬಹುದೂರದವರಿಗೆ ಹೋದರೂ, ಇಂತಹಸ್ಥಳಕ್ಕೆ ಬಂದಿರುವೆನೆಂದು, ನನಗೆ ಗೊತ್ತೇ ಆಗಲಿಲ್ಲ. ಆಗ ಆತನು ಭೂಮಿಯನ್ನುಹೊಂದಿ ಕಾಲಿನಿಂದೊದೆದ ಕೂಡಲೆ, ಅದು ತೆರೆದುಕೊಂಡಿತು. ಆತನು ಆ ಬಾಗಿಲಿನಲ್ಲಿ ಹೊಕ್ಕು, ಒಳಗೆ ಹೋದಕೂಡಲೆ ಇಬೆನಿದ್ವೀಪದ ರಾಜಕುಮಾರಿ

ಯೆಯು, ಇದ್ದ ಕಾರಾಗೃಹದಲ್ಲಿ ನಾನಿರುವಂತೆತೋರಿತು. ಅಯ್ಯೋ ! ಆ ವಿಚಿತ್ರವನ್ನು ನೋಡಿದಕೂಡಲೇ ನನಗೆ ಮಹತ್ತಾದ ವ್ಯಸನವೂ, ಪಶ್ಚಾತ್ತಾಪವೂ, ಉಂಟಾಯಿತು. ಆ ರಾಜಕುವರಿಯು, ಶರೀರದ ಮೇಲೆ ವಸ್ತ್ರವಿಲ್ಲದವಳಾಗಿ, ನೆಲದಮೇಲೆಬಿದ್ದು, ಕೈಕಾಲುಗಳನ್ನಾಡಿಸದೆ, ಸತ್ತವಳಂತೆ ಇರುತ್ತಿದ್ದಳು. ನಾನು ಅವಳನ್ನು ನೋಡಿದಕೂಡಲೆ ಅತ್ಯಂತಖಿನ್ನನಾಗಿ ಮಹಾ ವ್ಯಸನವನ್ನು ಹೊಂದಿದೆನು. ರಾಕ್ಷಸನು ರಾಜಪುತ್ರಿಯನ್ನುನೋಡಿ, ಇವನೆ ಅಲ್ಲವೆ ನಿನ್ನಪ್ರಿಯನಾದ ವಿಟನೆಂದು ಕೇಳಿದನು. ಅದಕ್ಕವಳು ಅಯ್ಯೋ ! ಇವನನ್ನು ನಾನೆಂದಿಗೂ ನೋಡಿದವಳಲ್ಲ. ಈಗತಾನೆ ನೋಡಿದೆನಲ್ಲಾ ಎಂದಳು. ಆಗ ರಾಕ್ಷಸನು ಇವನೆಯೆಲ್ಲವೆ ನಿನ್ನನ್ನು ಈ ದುರವಸ್ಥೆಗೆ ತಂದವನೆಂದು ಪುನಹಕೇಳಲು, ಈಗ ಹೊರತು, ಇದಕ್ಕೆಹಿಂದೆ ಮತ್ತಾವಾಗಲೂ, ಇವನನ್ನು ನೋಡಲೇ ಇಲ್ಲವೆಂದು ಹೇಳಿದಳು. ಆಗ ಆತನನ್ನು ನೋಡಿ, ನೀನು ಇವಳನ್ನು ಬಲ್ಲೆಯಾ ? ಎಂದು ಕೇಳಲು, ನಾನು ಸ್ವಪ್ನದಲ್ಲಿಯೂ ಇವಳನ್ನು ಕಂಡವನಲ್ಲವೆಂದು, ಹೇಳಿದೆನು. ಆಗ ರಾಕ್ಷಸನು ಆ ರಾಜಕುವರಿಯ ಕೈಗೆ ಒಂದು ಖಡ್ಗವನ್ನುಕೊಟ್ಟು, ನೀನು ಇವನಕತ್ತನ್ನುಕತ್ತರಿಸು. ಎಂದು ಹೇಳಿದನು. ಅದಕ್ಕವಳು, ಅಯ್ಯೋ ! ನಾನು ಏಳಲಾರದೆ ಬಲಹೀನಳಾಗಿ ಬಿದ್ದಿರುವೆನು. ಅದರಲ್ಲಿಯೂ ಯಾವ ತಪ್ಪನ್ನೂಮಾಡದೆ ನಿರಪರಾಧಿಯಾಗಿರುವವನನ್ನು ಕೊಲ್ಲುವುದಕ್ಕೆ ಹೇಗೆ ಮನಸ್ಸೊಪ್ಪುವುದು. ಬಲವಂತನಾಗಿ ನೀನು ಮಾಡಹೇಳುವ ಕೆಲಸವನ್ನು ನಾನು ಹೇಗೆ ಮಾಡುವುದೆಂದು ಹೇಳಲು, ಆಹಾ ! ನೀನುಮಾಡಿದ ಕೆಲಸವನ್ನು ಮರೆಮಾಚುವ ಈಚತುರತೆಯನ್ನು ಎಲ್ಲಿಕಲಿತೆ ? ನಿನ್ನಮಾತಿನಿಂದ ನಿನ್ನಕಾರ್ಯವೇ ಗೊತ್ತಾಗುವುದೆಂದು, ಹೇಳುತ್ತಾ ಪುನಹ ನನ್ನನ್ನುನೋಡಿ, ಪ್ರಮಾಣವಾಗಿಯೂ, ನೀನು ಇವಳಗುರುತನ್ನು ಕಾಣೆಯೊ ? ಎಂದುಕೇಳಿದನು.

ಆ ರಾಜಪುತ್ರಿಯೆ ಈ ದುರವಸ್ಥೆಗೆ ಕಾರಣನಾದ ನನ್ನಲ್ಲಿ ಆಕೆ ಎಷೊಟ್ಟಂದು ವಿಶ್ವಾಸವನ್ನು ತೋರ್ಪಡಿಸಿದಳೋ ಅದಕ್ಕೆಂತಲೂಹೆಚ್ಚಾದ ವಿಶ್ವಾಸವನ್ನು ಅವಳವಿಷಯದಲ್ಲಿ ನಾನು ತೋರ್ಪಡಿಸದೆ ಹೋಗಿದ್ದರೆ, ನಾನು ಪ್ರಪಂಚದಲ್ಲಿರುವ ಮನುಷ್ಯಸಮೂಹದಲ್ಲೆಲ್ಲಾ ಕೃತಜ್ಞತಾಹೀನನಾದ ಪಾಪಾತ್ಮನಾಗುತ್ತಿದ್ದೆನಲ್ಲವೆ ? ಆದುದರಿಂದ ನಾನು ಆ ರಾಕ್ಷ

ನನನ್ನುನೋಡಿ. ನಾನೀಕೆಯನ್ನು ಇದುವರೆಗೂ, ಎಂದಿಗೂ ನೋಡಿದವನ ಲ್ಲ. ಈದಿನವೂತ್ರ, ನೋಡಿರುತ್ತೇನೆ. ಇಂಥಾದ್ದರಲ್ಲಿ ಇವಳಗುರುತು ನನಗೆ ಹೇಗೆ ತಿಳಿದಿರುವುದು ಎಂದೆನು. ರಾಕ್ಷಸನು ನನ್ನನ್ನುನೋಡಿ, ನೀನು ಇವಳನ್ನು ಯೊವಾಗಲೂ ನೋಡಬೇಹೋದರೆ, ಈ ಕತ್ತಿಯನ್ನು ತೆಗೆದುಕೊಂಡು, ಇವಳತಲೆಯನ್ನು ಕತ್ತರಿಸಿದರೆ ನಿನ್ನವೂತನ್ನು ನಾನು ನಂಬಿ ನಿನ್ನನ್ನು ಬಿಟ್ಟುಬಿಡುವೆನು. ಇಲ್ಲವಾದರೆ ನಿನ್ನನ್ನು ನಾನುಕೊ ಲ್ಲುವೆನೆಂದು ಹೇಳಲು, ನಾನು ಹಾಗೆಯೇವಾಡುತ್ತೇನೆಂದು ಒಪ್ಪಿ ಕೈಗೆ ಕತ್ತಿಯನ್ನು ತೆಗೆದುಕೊಂಡೆನು. ಅಷ್ಟರಲ್ಲಿಯೆ ಬೆಳಗಾದುದರಿಂದ ಷಹ ರಜೌದಿಯು, ಕಥೆಯನ್ನು ನಿಲ್ಲಿಸಿದಳು. ಸುಲ್ತಾನನು, ಅತ್ಯಂತ ವಿಚಿ ತ್ರತರವಾದ ಈ ಕಥೆಯನ್ನು ಪೂರ್ತಿಯಾಗಿಕೇಳಿ ಆ ಹೆಂಗಸಿಗೆ ಉಂಟಾದ ಗತಿಯನ್ನು ತಿಳಿದುಕೊಳ್ಳಬೇಕೆಂದು, ಹೇಳಿ ಯಾವವೂತನನ್ನೂ ಆಡದೆ ಸುಮ್ಮನೆ ಹೊರಟುಹೋದನು.

೪೬ ನೆಯ ರಾತ್ರಿ ಕಥೆ,

ಬೆಳಗಾಗುವಸಮಯೆದಲ್ಲಿ ದಿನರಜೌದಿಯು ಎದ್ದು, ಷಹರಜೌ ದಿಯೆನ್ನು ಕುರಿತು, ಅಕ್ಕಾ ! ನಿನಗೆ ನಿದ್ರಬಾರದೆ ಇದ್ದರೆ, ಆ ಎರಡನೆ ಕಾಲೆಂಡರಿನ ಕಥೆಯೆನ್ನು ಕೊನೆಗಾಣುವಂತೆ ಹೇಳೆಂದು ಕೇಳಿದಕೂಡಲೇ ಷಹರಜೌದಿಯು, ಸ್ವಲ್ಪವೂ ತಡವೂಡದೆ ಮುಂಗಥೆಯನ್ನು ಹೇಳಲಾ ರಂಭಿಸಿದಳು. ಅವಾ್ಮ ! ಆ ರಾಕ್ಷಸನು ಹೇಳಿದವೋರಿಗೆ ನಾನು ಕೈಯ ಲ್ಲಿ ಖಡ್ಗವನ್ನು ಹಿಡಿದುಕೊಂಡು, ಆ ರಾಜಕುವಾರಿಯೆಬಳಿಗೆ ಹೋದೆ ನೆಂದು, ನೀವು ತಿಳಿದುಕೊಳ್ಳಬೇಡಿ. ವುತ್ತೇನೆಂದರೆ ನನಗೋಸ್ಕರವಾಗಿ, ಆಕೆಯು, ತನ್ನ ಪಾ್ರಣವನ್ನು ಬಿಡುವುದಕ್ಕೆ ಸಿದ್ಧಳಾಗಿರುವಳೋ ಇಲ್ಲ ವೊ ಎಂಬುದನ್ನು ಅರಿತು, ಆಕೆಗೋಸ್ಕರವಾಗಿ ನನ್ನಪಾ್ರಣವನ್ನು ಬಲಿ ಗೊಡುವುದಕ್ಕೊಸ್ಕರವಾಗಿ, ನಾನು ಅವಳಬಳಿಗೆ ಹೋದೆನು. ಆಕೆಯು ನನ್ನ ಅಭಿಪಾ್ರಯವನ್ನು ತಿಳಿದುಕೊಂಡು, ನನಗೋಸ್ಕರವಾಗಿ ತನ್ನ ಪಾ್ರಣವನ್ನು ಕೊಡುವುದಕ್ಕೆ ಸಿದ್ಧನಾಗಿರುವನೆಂದು ನೀನು ನನಗಾಗಿ ಇಷೊ್ಟಂದು ತೊಂದರೆಯನ್ನು ಹೊಂದುತ್ತಿರುವುದರಿಂದ, ತುಂಬ ವ್ಯಸನ ದಿಂದ ಕೂಡಿದ ಒಂದು ವಾತ್ಸಲ್ಯವನ್ನು ಹೊಂದಿರುವೆನೆಂದು, ತೋರುವ

ತನ್ನ ಅಭಿಪ್ರಾಯವನ್ನು ಸನ್ನೆಮಾಡಿ ತೋರಿಸಿದಳು. ಆಗ ನಾನು ಅವಳನ್ನು ಕೊಲ್ಲುವುದಕ್ಕೆ ಮನಸ್ಸುಬಾರದೆ ಹಿಂದಿರುಗಿ ರಾಕ್ಷಸನಬಳಿಗೆಬಂದು ಕತ್ತಿಯನ್ನು ಬಿಸಾಡಿ, ಅಯ್ಯಾ ! ನಾನೆಂದಿಗೂ, ಗುರುತುಕಾಣದಿರುವ ನಿರಪರಾಧಿಯಾದ ಈ ಹೆಂಗಸನ್ನು ಹೇಗೆಕೊಲ್ಲಲಿ ! ಹಾಗೆ ನಿನ್ನ ಮಾತಿನ ಪ್ರಕಾರ ಕೊಂದುದೇ ಆದರೆ ಲೋಕದಜನರು ನನ್ನನ್ನು ದ್ರೋಹಿಯೆಂದು ಪ್ರಾಣಹಿಂಸಕನೆಂದೂ, ನಿಂದಿಸುತ್ತಾರಲ್ಲ ! ಆದುದರಿಂದ ನಾನು ಈದು ಷ್ಕಲತ್ಯವನ್ನೆಂದಿಗೂ, ಮಾಡಲಾರೆನು. ನಿನ್ನಿಷ್ಟಾನುಸಾರವಾಗಿ ನೀನು ಮಾಡಿಕೊಳ್ಳಬಹುದೆಂದು, ಹೇಳಿದೆನು.

ಅಷ್ಟರಲ್ಲಿ ಆ ಭೂತವು ಅತ್ಯಂತಕೋಪಿಷ್ಠನಾಗಿ ಅವರುಗಳನ್ನುನೋಡಿ, ನನ್ನ ಸಾಮರ್ಥ್ಯವನ್ನು ಈಗಲೇ ತೋರುವೆನೆಂದು ಹೇಳಿ ಇದರಿಂದ ನಿಮ್ಮಪರಾಧವನ್ನು ನೀವೆ ಹೇಳಿಕೊಳ್ಳುವಂತಾಗುತ್ತದೆಂದು ನುಡಿದು, ತನ್ನ ಕೈಕತ್ತಿಯನ್ನು ತೆಗೆದುಕೊಂಡು, ಆ ರಾಜಕುಮಾರಿಯ, ಒಂದು ತೋಳನ್ನು ಕತ್ತರಿಸಿದನು. ಆಕೆಯಾದರೋ ಮೊದಲೇ ಗಾಯದ ಪೆಟ್ಟಿನಿಂದ ರಕ್ತವೆಲ್ಲ ಸೋರಿಹೋಗಿ ದುರ್ಬಲಳಾಗಿದ್ದರೂ, ತನಗೆ ಇಂತಹ ದುರವಸ್ಥೆಯುಂಟಾದರೂ, ನನ್ನಮೇಲಣ ವಿಶ್ವಾಸವು ಇನ್ನೂ ಅಧಿಕವಾಗಿರುವುದೆಂದು, ತೋರಿಸುವಂತೆ ಮತ್ತೊಂದು ಕೈಯಿಂದ ವಂದನೆಯೆನ್ನು ಮಾಡಿದಳು. ಆಗಿನಸಮಯಕ್ಕೆ ಎರಡುಮೂರು ಕ್ಷಣಕಾಲವೂ ತ್ರವೇ ಅವಳ ಪ್ರಾಣವಿರಬಹುದೆಂದು, ನನಗೆ ತೋರಿತು. ಈ ಚಿತ್ರವಧೆಯನ್ನು ನೋಡಿ ತಾಳಲಾರದೆ ನಾನೂ ಮೂರ್ಛಿಹೋದೆನು. ಬಳಿಕ ನಾನು ಎಚ್ಚರ್ತ್ತಮೇಲೆ, ರಾಕ್ಷಸನನ್ನುನೋಡಿ, ಅಯ್ಯಾ ! ನನ್ನನ್ನು ಏತಕ್ಕೆ ಸುಮ್ಮನೆ ಉಪದ್ರವಪಡಿಸುತ್ತಿರುವೆ. ನೀನು ಕರುಣದಿಂದ ಆಕೆಗೆಮಾಡಿದ ಉಪಕಾರವನ್ನೇ ನನ್ನಲ್ಲೂಮಾಡಿ, ತೋರಿಸಬಾರದೆ ಎಂದುಕೇಳಿದೆನು. ಅದಕ್ಕಾತನು, ರಾಕ್ಷಸರಿಗೆ ತಮ್ಮಹೆಂಡಿರಲ್ಲಿ ಅನುಮಾನತೋರಿಬಂದರೆ ಅವರುಮಾಡುವ ಶಿಕ್ಷೆಯನ್ನುನೋಡು, ಅವಳು ನಿನ್ನನ್ನು ಇಲ್ಲಿಗೆ ಬರಮಾಡಿಕೊಂಡು, ನನಗೆ ಅಪಚಾರವನ್ನುಂಟುಮಾಡಿದಳೆಂದು, ನನಗೆ ನಿಸ್ಸಂದೇಹವಾಗಿ ತಿಳಿದಿದ್ದರೆ, ಆಗಲೆನಿನ್ನನ್ನು ಕತ್ತರಿಸಿಹಾಕುತ್ತಿದ್ದೆನು ಹಾಗಿಲ್ಲದುದರಿಂದ ನಿನ್ನನ್ನು ನಾಯಿಯಾಗಿ, ಇಲ್ಲವೆ ಕೋತಿಯಾಗಿ ಅಲ್ಲದಿದ್ದರೆ ಸಿಂಹವಾಗಿ, ಬೇಡದಿದ್ದರೆ ಪಕ್ಷಿಯಾಗಿ, ರೂಪವಿಕಾರವನ್ನು ಮಾಡು

ವೆನು. ಇವುಗಳಲ್ಲಿ ನಿನಗಾವುದಿಷ್ಟವೊ ಅದನ್ನು ತಿಳಿಯಹೇಳೆಂದು, ಕೇಳಿದನು. ಈ ಮಾತುಗಳನ್ನು ಕೇಳಿದಕೂಡಲೆ ನನಗೆ ಭಯವುಂಟಾಗಿ ಹೇಗಾದರೂ, ಆತನದಯವನ್ನು ಸಂಪಾದಿಸಬೇಕೆಂದು, ಎಲೈ ರಾಕ್ಷಸನೇ ನೀನು ಹೇಗಾದರೂ ನನ್ನ ಪ್ರಾಣವನ್ನು ಉಳುಹುತ್ತೀಯೆಲ್ಲಾ ! ಅದನ್ನು ಚೆನ್ನಾಗಿಯೆಮಾಡು. ಲೋಕೋತ್ತಮನಾದ ಒಬ್ಬಾಬ್ಬನೊಬ್ಬ ಸತ್ಪುರುಷನು, ತನ್ನವೇಲೆ ಮರಣಭೈರವನ್ನು ಹೊಂದಿದ್ದ ಮನುಷ್ಯನನ್ನು, ಮನ್ನಿಸಿ ಬಿಡುವಂತೆ ನೀನೂ ನನ್ನನ್ನು ರಕ್ಷಿಸೆಂದು ಬೇಡಲು, ರಾಕ್ಷಸನು, ಆ ಕಥೆಯನ್ನು ಹೇಳೆನಲು, ನಾನು ಹೀಗೆಹೇಳಿದೆನು. ಆ ಕಥೆಯನ್ನು ನಿಮಗೂ ಹೇಳಿದರೆ ನೀವೂ ಕೋಪಿಸಿಕೊಳ್ಳಲಾರರೆಂದು ಯೋಚಿಸುತ್ತೇನೆ.

ಸಹನೆಯುಳ್ಳವನಿಗೂ, ಆತನಲ್ಲಿ ಅಸಹನೆಯನ್ನೇ ತೋರುತ್ತಿದ್ದ ಮತ್ತೊಬ್ಬನಿಗೂ ನಡೆದ ಕಥೆ.

ಒಂದೂರಿನಲ್ಲಿ ನೆರೆಹೊರೆಯವರಾದ ಇಬ್ಬರು ಮಾನವರಿದ್ದರು. ಅವರಲ್ಲಿ ಒಬ್ಬನು ಮತ್ತೊಬ್ಬನಮೇಲೆ ಯಾವಾಗಲೂ, ವೈರವನ್ನೇ ತೋರುತ್ತಿದ್ದನು. ಅದನ್ನುನೋಡಿ ಆತನು ನಾವು ನೆರೆಹೊರೆಯವರಾಗಿರುವುದೇ ಇದಕ್ಕೆ ಕಾರಣವೆಂದು ತಿಳಿದು ಆಸ್ಥಲವನ್ನು ಬಿಟ್ಟು ಮತ್ತೊಲ್ಲಿಗಾದರೂ ದೂರವಾದ ಪ್ರದೇಶಕ್ಕೆ ಹೋಗಿ ವಾಸಮಾಡಿಕೊಂಡಿರಬೇಕೆಂದಿದ್ದನು. ಆತನು ಅಸೂಯಾಪರನಾದವನಿಗೆ ಎಷ್ಟೊಂದು ಉಪಕಾರವನ್ನು ಮಾಡಿದರೂ, ಆತನ ಕೋಪವು ಶಾಂತಿಯಾಗಲಿಲ್ಲ, ಆದುದರಿಂದ ಆತನುಸಾಮಾನುಗಳ ಸಹಿತವಾಗಿ ತನ್ನ ಮನೆಯನ್ನು ಮಾರಿ, ಅಲ್ಲಿಗೆ ಸವಿಾಪವಾಗಿ ಆದೇಶದ ರಾಜಧಾನಿಯನ್ನು ಸೇರಿ ಅದಕ್ಕೆ ಒಂದು ಹರದಾರಿಯ ದೂರದಲ್ಲಿ ಒಂದು ಭೂಮಿಯನ್ನು ಕೊಂಡುಕೊಂಡನು. ಆಭೂಮಿಯಲ್ಲಿ

ಸಾಮಾನ್ಯವಾದ ಒಂದು ಮನೆಯೂ, ಸುಂದರವಾದ ಒಂದು ತೋಟವೂ, ವಿಶಾಲವಾದ ದೊಡ್ಡಿಯೂ, ಆಳವಾದ ಒಂದು ಪಾಳುಭಾವಿಯೂ, ಇದ್ದಿತು. ಆ ಭೂಮಿಯೆನ್ನು ಕೊಂಡುಕೊಂಡಬಳಿಕ ಆತನು ಆ ಮನೆಯಲ್ಲಿ, ಅನೇಕವಾಗಿ ಕಿರುಮನೆಗಳನ್ನು ಕಟ್ಟಿಸಿ ತಾನು ಸನ್ಯಾಸಿಯೆಂಬೀಷವನ್ನು ಹಾಕಿಕೊಂಡು, ತನ್ನಂತೆ ಅನೇಕಜನ ಸನ್ಯಾಸಿಗಳನ್ನು ಸೇರಿಸಿಕೊಂಡು, ಇರುತ್ತಿರಲು, ಅತನ, ಸುಗುಣದಿಂದ ಆ ಊರಿನ ಜನರೆಲ್ಲರೂ, ಆತನಲ್ಲಿ ಪ್ರೀತಿಯುಕ್ತವಾದ ಗೌರವವನ್ನು, ತೋರ್ಪಡಿಸುತ್ತಿರಲು, ಸುತ್ತಮುತ್ತಿನ ಪ್ರಜೆಗಳೂ, ರಾಜರೂ, ಆತನಬಳಿಗೆ ಬಂದು, ತಂತಮ್ಮ ಮನೋವ್ಯಥೆಗಳನ್ನುತೋರಿದು,ಸಂಸಾರಬಂಧನವನ್ನು ದೂರವೂಡಿ, ಭಗವದಾರಾಧನೆಯಿಂದ ತೃಪ್ತಿಹೊಂದಿ ಹೋಗುತ್ತಾ ಇದ್ದುದರಿಂದ, ಪ್ರಖ್ಯಾತನಾದ ಆ ಪುರುಷನ ಚರಿತ್ರೆಯನ್ನು ಸರ್ವರೂ ಕೊಂಡಾಡುತ್ತಿದ್ದರು. ಈತನ ಕೀರ್ತಿಯು, ತಾನು ವಾಸಮಾಡುತ್ತಿದ್ದ ಮೊದಲಿನ ಪಟ್ಟಣದವರಿಗೂ ವ್ಯಾಪಿಸಿತು. ಅದನ್ನುಕೇಳಿ ಆ ಅಸೂಯಾಪರನು, ತನ್ನ ನೆರೆಯವನಾಗಿದ್ದು, ಈಗ ಸನ್ಯಾಸಿಯಾಗಿರುವಾತನಿಗೆ ಏನಾದರೂ ತೊಂದರೆಯೆನ್ನುಂಟುಮಾಡಬೇಕೆಂದು, ಯೋಚಿಸಿ, ತನ್ನ ಊರನ್ನುಬಿಟ್ಟು, ಹೊರಟು, ಆ ಸನ್ಯಾಸಿಯು ಇರುವ ಸ್ಥಳವನ್ನು ಸೇರಲು, ಆ ಪುಣ್ಯಾತ್ಮನು, ಈತನನ್ನು ಗೌರವಪುರಸ್ಸರವಾಗಿ ಬರಮಾಡಿಕೊಂಡನು. ಬಳಿಕ ಅಸೂಯಾಪರನು, ಆ ಸನ್ಯಾಸಿಯೆನ್ನುನೋಡಿ, ಅಯ್ಯಾ ! ನಾನೊಂದು ಮಹತ್ತಾದ ಕಾರ್ಯವನ್ನು ಯೋಚಿಸಿರುವೆನು. ಅದು ಅತ್ಯಂತರಹಸ್ಯವಾದ ಕಾರ್ಯ ಮತ್ತಾರಿಗೂ, ತಿಳಿಯಕೂಡದು, ನಿನ್ನಸಂಗಡಲೇ ಅದನ್ನು ಯೋಚಿಸಬೇಕಾಗಿರುವುದರಿಂದ, ಈಗ ಸಾಯಂಕಾಲವಾಯಿತು, ಈ ಸನ್ಯಾಸಿಗಳನ್ನೆಲ್ಲಾ ಅವರವರ ಸ್ಥಾನಗಳಿಗೆ ಕಳುಹಿಸಿ, ನೀನು ಏಕಾಂತಸ್ಥಾನವಾಗಿರುವ, ಈ ದೊಡ್ಡಿಯೊಳಕ್ಕೆ ಬಂದರೆ ಹೇಳುವೆನೆಂದನು. ಆ ಸನ್ಯಾಸಿಯು, ಹಾಗೆಯೇ ಆಗಲೆಂದು, ಹೇಳಿ, ಅದೇಪ್ರಕಾರವಾಗಿ ಮಾಡಿದನು. ಬಳಿಕ ಆ ಅಸೂಯಾಪರನು, ಸತ್ಪುರುಷನೊಡನೆ, ಆ ದೊಡ್ಡಿಯನ್ನುಸೇರಿ ತನಗೆ ಸಮಯ ದೊರೆಯುವವರೆಗೂ, ಆತನಸಂಗಡ ಮಾತನಾಡುತ್ತಾ ಇದ್ದು, ಆ ಸನ್ಯಾಸಿಯು, ಬಾವಿಯಬಳಿಗೆ ಬಂದು ನಿಂತುಕೊಂಡಿರುವುದನ್ನು ನೋಡಿ, ಆತನಿಗೆ ತಿಳಿಯದಂತೆ ಅವನನ್ನು, ಬಾವಿಗೆನೂಕಿ, ತನ್ನ

ಹೊಟ್ಟೆಯುರಿಯೆನ್ನು ತೀರಿಸಿಕೊಂಡು, ಯಾರಿಗೂ ತಿಳಿಯದಂತೆ, ತನ್ನ ಮನೆಯನ್ನುಸೇರಿ, ಆತನು ಪುನಹ ಭೂಮಿಯಮೇಲೆ ಪ್ರಾಣಸಹಿತನಾಗಿ ಎಂದಿಗೂ ಇರಲಾರನೆಂದು, ತಿಳಿದು ಹೆಚ್ಚಾದ ಸಂತೋಷವನ್ನು ಹೊಂದಿದವನಾಗಿದ್ದನು.

ಅಲ್ಲದೆ ಹಾಗೆನಡೆಯದಿದ್ದರೂ, ಇರಬಹುದೆಂದೂ ಯೋಚಿಸಿದನು. ಇಷ್ಟರಲ್ಲಿ ಸೂರ್ಯೋದಯವಾದುದರಿಂದ ಷಹರಜಾದಿಯು, ಕಥೆಯನ್ನು ನಿಲ್ಲಿಸಿದಳು. ಸುಲ್ತಾನನು, ಆ ಅಸೂಯಾಪರನಮೇಲೆ ಅತ್ಯಂತಕೋಪ ಪುಳ್ಳವನಾಗಿ ಸತ್ಪುರುಷನಾದ ಆ ಮಹಾನುಭಾವನಿಗೆ ಯಾವ ತೊಂದರೆ ಯೂ ಇಲ್ಲದಂತೆ, ಭಗವಂತನು ಕಾಪಾಡಲಿ ! ನಾಳೆಯರಾತ್ರಿ ಉಳಿದಿರುವ ಕಥೆಯನ್ನು ಸಂಪೂರ್ಣವಾಗಿ ಕೇಳ್ವನೆನ್ನೆಂದು, ಹೇಳುತ್ತಾ ಹೊರಟು ಹೋದನು.

೪೭ ನೆಯ ರಾತ್ರಿ ಕಥೆ.

ಮರುದಿನ ಬೆಳಗಿನಜಾವದಲ್ಲಿ ನಿದ್ರೆತಿಳಿದೆದ್ದ ದಿನರಜಾದಿಯು, ಅಕ್ಕನನ್ನುಕುರಿತು, ಅಕ್ಕಾ ! ನಿನಗೆ ನಿದ್ರೆಬಾರದೆ ಇದ್ದರೆ, ಆ ಸತ್ಪುರುಷನು, ಕ್ಷೇಮವಾಗಿರುವನೋ ಇಲ್ಲವೋ ಎಂಬುದನ್ನು ನನಗೆ ತಿಳಿಯುಹೇಳೆಂದು ಕೇಳಲು, ಷಹರಜಾದಿಯು, ಎಂದಿನಂತೆ ಹೇಳಲಾರಂಭಿಸಿದಳು ಆತನು ಬಿದ್ದುಹೋದ ಹಾಳುಭಾವಿಯೆಲ್ಲಿ ಭೂತಗಳೂ, ಭೂತಕನ್ನಿಕೆಯರೂ ವಾಸವೂಡುತ್ತಿದ್ದುದರಿಂದ, ಅವರು ಆತನನ್ನು ಬರಮಾಡಿಕೊಂಡು, ಘಾಯವಾಗದಂತೆ ಸಂರಕ್ಷಿಸಿ, ಉಪಚಾರಮಾಡಿದರು. ಆತನು ತಾನು ಹೀಗೆ ಬಿದ್ದುದಕ್ಕಾಗಿ, ತನಗೇನಾದರೂ, ಬಂದು ವಿಶೇಷಸ್ಥಿತಿಯುಂಟಾಗಬೇಕು. ಇಲ್ಲವಾದರೆ, ನನ್ನ ಪ್ರಾಣವೇ ಹೋಗುವುದೆಂದುಕೊಂಡನು. ಆದರೂ ಆತನಿಗೇನೂ, ಉಂಟಾಗಲಿಲ್ಲ. ಅಷ್ಟರಲ್ಲಿ ಈಗ ನಾವು ಕಾಪಾಡಿದ ಮನುಷ್ಯನಾರು. ನಿಮಗೆ ತಿಳಿಯುವುದೇ ಎಂಬ ಧ್ವನಿಯು ಕೇಳಬಂದಿತು. ಅದಕ್ಕೆ ಕೂಡಲೆ ಅದು ನಮಗೆತಿಳಿಯದೆಂಬ ಮತ್ತೊಂದು ಶಬ್ದವು ಕೇಳಬಂದಿತು. ಹಾಗಾದರೆ ನಾನು ಹೇಳುತ್ತೇನೆಕೇಳಿ, ಈತನು ಧರ್ಮಾತ್ಮನಾಗಿ ಗಂಭೀರದಿಂದ ಸಂಸಾರವನ್ನು ನೂಡಿಕೊಂಡಿರುತ್ತಾ, ತನ್ನ ನೆರೆಯವನಾದ ಅಸೂಯಾಪರನಿಗೆ, ಈತನಮೇಲೆ ಉಂಟಾದ ದುರ್ಬುದ್ಧಿಯನ್ನು ಹೋಗಲಾಡಿಸಬೇಕೆಂದು, ತನ್ನ ಮನೆ ಮಠಗಳನ್ನೆಲ್ಲಾ ಮಾರಿ

ಕೊಂಡು, ಈ ಸ್ಥಳಕ್ಕೆ ಬಂದು, ಇಲ್ಲಿ ಸುಖವಾಗಿ ಗೌರವವನ್ನು ಸಂಪಾದಿಸಿಕೊಂಡಿದ್ದೆನು. ಇಲ್ಲಿಯೂ ಈತನು ಗೌರವದಿಂದ ಸುಖಿಯಾಗಿರುವುದನ್ನು ಕೇಳಿ ಆ ಮಾತ್ಸರಿಕನು, ಇವನಿಗೇನಾದರೂ ಕೇಡನ್ನು ಮಾಡಬೇಕೆಂದು, ಯೋಚಿಸಿ, ಇಲ್ಲಿಗೆ ಬಂದು, ಇವನನ್ನು ಈ ಬಾವಿಯೆಲ್ಲಿ ನೂಕಿಬಿಟ್ಟನು. ಈಗ ನಾವು ಈತನಿಗೆ ಉಪಕಾರವನ್ನು ಮಾಡದೇಹೋಗಿದ್ದರೆ, ಈತನಿಗೆ ಸಂಪೂರ್ಣವಾಗಿ ಹಾನಿಯುಂಟಾಗುತ್ತಿತ್ತು.ಈತನು ತುಂಬ ಯೋಗ್ಯತೆಯುಳ್ಳವನಾದುದರಿಂದ, ನಾಳೆಯದಿನ ಈ ರಾಜ್ಯದ ಸುಲ್ತಾನನು, ಈತನಬಳಿಗೆ ಬಂದು, ದರ್ಶನವನ್ನು ತೆಗೆದುಕೊಂಡು ತನ್ನಮಗನ ನಿಮಿತ್ತವಾಗಿ ಭಗವಂತನ ಧ್ಯಾನಮಾಡುವಂತೆ ಕೇಳಿಕೊಳ್ಳುವುದಕ್ಕೆ ಸಿದ್ಧನಾಗಿರುವೆನೆಂದು, ಮೊದಲನೆಯವನಾಕ್ಕು ಕೇಳಿಸಿತು.

ಆ ರಾಜಕುಮಾರಿಯು ಪರವಾಗಿ ಈತನು ಮಾಡುವಧ್ಯಾನದಿಂದ ಪ್ರಯೋಜನವೇನೆಂಬ ಮತ್ತೊಂದು ಧ್ವನಿಯೂ, ಕೇಳಬಂದಿತು. ಆರಾಜಕುಮಾರನಿಗೆ ಬಲವತ್ತರವಾದ ದೆವ್ವಗಳಗಲ್ಲದೊರೆಯಾಗಿರುವ, ದಿಂದಿವುಸೆಂಬ ಪಿಶಾಚನ ಮೊಮ್ಮಗನಾದ, ಮೆಜೆಮೊಮೊ, ಎಂಬ ಪಿಶಾಚವು, ಹಿಡಿದಿರುವುದು. ಈ ಉತ್ತಮನಾದ ಸನ್ಯಾಸಿಯು, ಅದನ್ನು ನಿವಾರಣೆ ಮಾಡುವನೆಂಬುದು, ನನಗೆ ಚೆನ್ನಾಗಿ ತಿಳಿದಿರುವುದು. ಅದನ್ನು ನಿಮಗೆ ಹೇಳುತ್ತೇನೆ ಕೇಳಿ. ಹೇಗೆಂದರೆ, ಈ ಸನ್ಯಾಸಿಯೆಬಳಿಯಲ್ಲಿ ಉತ್ತಮ ತರಹೆಯ ಬಿಕ್ಕೊಂದಿರುವುದು. ಅದರಬಾಲದಲ್ಲಿ ಅರಬೀದೇಶದ ಸಣ್ಣ ನಾಣ್ಯದಂತೆ ಸಣ್ಣಗೆ ಬಿಳುಪಾಗಿರುವ ಒಂದು ಮಚ್ಚೆ ಇರುವುದು. ಅದರಲ್ಲಿ ಈತನು ಕೆಲವು ಕೂದಲುಗಳನ್ನು ಕಿತ್ತುಕೊಂಡು, ಹೋಗಿ ಆ ರಾಜಕುಮಾರ್ತೆಗೆ ಹೊಗೆಯೆನ್ನು ಕೊಡುವನು. ಆ ಹೊಗೆಯು ನೆತ್ತಿಗೇರಿದಕೂಡಲೇ ಆಪಿಶಾಚಿಯು,ಹೊರಹೊರಟು ಓಡಿಹೋಗುವುದಲ್ಲದೆ ಮತ್ತೆ ಎಂದಿಗೂ, ಬರುವುದಿಲ್ಲವೆಂದು, ಎರಡನೆಯವನಾಕ್ಕು ಕೇಳಿಸಿತು. ಆಸನ್ಯಾಸಿಯು, ಇವರುಗಳ ಸಂಭಾಷಣೆಯೆನ್ನು ಚೆನ್ನಾಗಿತಿಳಿದುಕೊಂಡು, ಮಾತನಾಡದೆ ರಾತ್ರಿಯನ್ನು ಕಳೆದೆನು. ಬೆಳಗಾದ ಕೂಡಲೇ ಆತನು ಹೊರಗೆಬರುವುದಕ್ಕೆ, ಮಾರ್ಗವನ್ನು ಹುಡುಕಿ, ಆ ಹಾಳುಭಾವಿಯೆಲ್ಲಿ ಅಲ್ಲಲ್ಲಿ ದೊಗರುಗಳಿದ್ದುದರಿಂದ, ಸುಲಭವಾಗಿ ಅವುಗಳವೆಲೆ ಕಾಲಿಟ್ಟುಕೊಂಡು ಹೊರಕ್ಕೆ ಬಂದನು, ಆತನು ಹೊರಗೆ ಬಂದಕೂಡಲೇ ಅಲ್ಲಿದ್ದ ಸನ್ಯಾ

ಸಿಗಳೆಲ್ಲರೂ, ಸಂತೋಷವನ್ನು ಹೊಂದಿದರು. ಆದರೆ ಆ ಅಸೂಯಾಪರ ನಿಂದ ತನಗುಂಟಾದತೊಂದರೆಯನ್ನು ಸಂಕ್ಷೇಪವಾಗಿ, ಅವರಿಗೆ ತಿಳಿಸಿ ತನ್ನ ಕೊಠಡಿಯೊಳಕ್ಕೆ ಹೋದನು. ಅಷ್ಟರಲ್ಲಿ ಆತನಪ್ರೀತಿಗೆ ಪಾತ್ರವಾದಬೆಕ್ಕು, ಅವನಬಳಿಗೆ ಬಾಲವನ್ನು ಅಲ್ಲಾಡಿಸುತ್ತ ಹತ್ತಿರನಿಂತು, ಆಟವಾಡುತ್ತಿರಲು, ಆತನು, ಭಾವಿಯೆಲ್ಲಿದ್ದಾಗ ಆ ಸ್ತ್ರೀಯರು ಹೇಳಿದವಾಕ್ಯವನ್ನು ನೆನೆದು, ಅದರಬಾಲದ ಕೂದಲನ್ನು ಕಿತ್ತುಕೊಂಡು, ತನಗೆ ಸಮಯಬಂದಾಗ ಉಪಯೋಗಿಸುವುದಕ್ಕಾಗಿ, ಇಟ್ಟುಕೊಂಡನು.

ಅಷ್ಟರಲ್ಲಿ ಕಿಂಚಿತ್ಕಾಲವುಳಿದಮೇಲೆ ಸುಲ್ತಾನನು, ತನ್ನಾಪ್ತಜನರಲ್ಲಿ ಕೆಲವರನ್ನುಮೂತ್ರಕರೆದುಕೊಂಡು, ಅಸ್ವಸ್ಥಳಾಗಿರುವ, ತನ್ನ ಕುಮೂರ್ತೆಯ, ದುರವಸ್ಥೆಯನ್ನು ಸರಿಪಡಿಸಬೇಕೆಂಬದಾಗಿ, ಆಸನ್ಯಾಸಿಯಮಠಕ್ಕೆ ಬರಲು, ಅವನು ಆತನನ್ನು ಹೆಚ್ಚಾದಮರ್ಯಾದೆಯಿಂದ, ಬರಮಾಡಿಕೊಂಡನು. ಆಗ ಸುಲ್ತಾನನು, ಆ ಸನ್ಯಾಸಿಗಳ ಅಧಿಪತಿಯೆನ್ನು ಹೊರಕ್ಕೆಬರಮಾಡಿ, ಆತನನ್ನು ಕುರಿತು, ಓ ಪುಣ್ಯಾತ್ಮಶಿರೋಮಣಿಯೇ ! ನಾನಿಲ್ಲಿಗೆ ಬರುವುದಕ್ಕೆ ಕಾರಣವೇನೆಂಬುದು ತಮಗಿನ್ನು ತಿಳಿಯದಿರಬಹುದೆಂದನು. ಆತನು ಗಂಭೀರಸ್ವರದಿಂದ ಸುಲ್ತಾನನನ್ನು ನೋಡಿ, ಹೌದಯ್ಯಾ ! ನಿನ್ನ ಮಗಳ ದೇಹದಲ್ಲಿ ಅಸ್ವಸ್ಥೆಯುಂಟಾಗಿರುವುದರಿಂದ, ನೀನು ಈ ರೀತಿಯಾಗಿ, ನನಗೆ ಅತ್ಯಂತವಾದ ಮರ್ಯಾದೆಯನ್ನು ಮಾಡುತ್ತಿರುವೆ, ಎಂದುಹೇಳಿದನು. ಅದಕ್ಕೆಸುಲ್ತಾನನು, ಪರಮಾನಂದಭರಿತನಾಗಿ, ಸ್ವಾಮಿಯಾ ! ನಿಮ್ಮದಯೆದಿಂದ ನನ್ನಮಗಳ ರೋಗವು ಗುಣವಾದರೆ, ನಾನು ನಿಮಗೆ ತುಂಬ ಕೃತಜ್ಞನಾಗಿರುವೆನು. ಆ ಕಾರ್ಯವು ತಮ್ಮಿಂದಲ್ಲದೆ ಮತ್ತಾರಿಂದಲೂ, ನೆರವೇರುವುದಿಲ್ಲವೆಂಬುದು, ನನಗೆ ಚೆನ್ನಾಗಿ ತಿಳಿಯುವುದು, ದಯವಮಾಡಿ, ಅನುಗ್ರಹಿಸಬೇಕೆಂದು ಬೇಡಲು, ಅಯ್ಯಾ ತಮ್ಮ ಕುಮೂರಿಯನ್ನು ಇಲ್ಲಿಗೆ ಕರೆತರುವುದಾದರೆ, ನಾನು ಗುಣಮಾಡುವೆನೆಂದು, ಹೇಳಲು, ರಾಜನು ತನ್ನ ಹಿಂದೆ ಬೋಜೌಪರಿವಾರದಿಂದ ಮೇಲುಮುಸುಕನ್ನು ಹಾಕಿಕೊಂಡುಬಂದಿರುವ ತನ್ನಮಗಳನ್ನು ಸನ್ಯಾಸಿಗೊಪ್ಪಿಸಿದನು. ಕೂಡಲೆ ಆಕೆಯನ್ನು ಹೀಡಿಸುತ್ತಿದ್ದ ಭೂತವು, ಬಿಟ್ಟು ಹೊರಟುಹೋಯಿತು.

ಆಗ ಆ ರಾಜಕುಮಾರಿಯು, ತನ್ನ ಮುಖದಮೇಲಿರುವ ಮುಸು
ಕನ್ನು ತೆಗೆದು ಸುತ್ತಲೂನೋಡಿ, ಇದೇನು ನಾನಿಲ್ಲಿರುವುದಕ್ಕೆ ಕಾರಣವೇ
ನು ? ನನ್ನನ್ನು ಇಲ್ಲಿಗೆ ಕರೆದುತಂದವರಾರು ? ಎಂದುಕೇಳಲು, ಸುಲ್ತಾ
ನನು ಆಕೆಯನ್ನುನೋಡಿ, ಪರಮಾನಂದಭರಿತನಾಗಿ, ಆಲಿಂಗಿಸಿಕೊಂಡು,
ಕಣ್ಣುಗಳನ್ನು ಮುತ್ತಿಟ್ಟುಕೊಂಡು, ಸನ್ಯಾಸಿಯನ್ನು ಕರುಣಾದೃ
ಷ್ಟಿಯಿಂದ, ನೋಡುತ್ತಾ, ಆತನಕೈಗಳನ್ನು ಮುತ್ತಿಟ್ಟನು. ಬಳಿಕ,
ತನ್ನಾಪ್ತಮಂತ್ರಿಗಳ ಕಡೆಗೆ ತಿರುಗಿ ಅಯ್ಯಾ ! ನನ್ನಕುಮಾರಿಗೆ ಈತರ
ದಿಂದ ಕಾಯಿಲೆಯೆನ್ನು ಗುಣಮಾಡಿ ನನಗೆ ಮಹೋಪಕಾರವನ್ನುಮಾಡಿದ
ಈತನಿಗೆ ನಾನು ಯಾವ ಉಪಕಾರವನ್ನು ಮಾಡಬಹುದೆಂದು, ಕೇಳಲು,
ಅವರು ಮತ್ತೇನು ಇವಳನ್ನು ಆ ಸನ್ಯಾಸಿಗೆ ಕೊಟ್ಟು ಮದುವೆಮಾಡು
ವುದೇ ? ಎಂದುಹೇಳಲು, ಆಹಾ ! ನೀವುಗಳೂ ನನ್ನ ಮನೋಭಿಪ್ರಾ
ಯದಂತೆ, ಹೇಳಿದುದರಿಂದ, ಹಾಗೆಯೇಮಾಡುತ್ತೇನೆಂದು, ಸುಲ್ತಾನನು,
ಹೇಳಿದನು. ಅಲ್ಲದೆ ಶೀಘ್ರದಲ್ಲಿಯೇ ವಿವಾಹವನ್ನು ಮಾಡಿಸಿದನು.

ಇನ್ನು ಸ್ವಲ್ಪಕಾಲಕ್ಕೆ ಪ್ರಧಾನಮಂತ್ರಿಯು, ಸತ್ತುಹೋದು
ದರಿಂದ ಸುಲ್ತಾನನು, ತನ್ನಳಿಯನಿಗೆ ಆ ಪದವಿಯನ್ನು ಕೊಟ್ಟನು.
ಕೆಲವುದಿನಗಳಲ್ಲಿ ಅಪ್ರತಿಮವಂತನಾದ ಸುಲ್ತಾನನು, ಮರಣವನ್ನುಹೊಂ
ದಿದುದರಿಂದ, ಆ ದೇಶದ ಪದ್ಧತಿಯನ್ನನುಸರಿಸಿ, ಪ್ರಜೆಗಳೆಲ್ಲರೂ, ಆ ಸ
ನ್ಯಾಸಿಯನ್ನೇ ಸುಲ್ತಾನನನ್ನಾಗಿ, ಮಾಡಿಕೊಂಡರು. ಇಷ್ಟರಲ್ಲಿ
ಅರುಣೋದಯವಾದುದರಿಂದ, ಷಹರಜಾದಿಯು, ಕಥೆಯನ್ನು ನಿಲ್ಲಿಸಿದ
ಳು. ಸುಲ್ತಾನನು, ಆ ಸನ್ಯಾಸಿಯು, ರಾಜ್ಯಾಧಿಕಾರಕ್ಕೆ ಯೋಗ್ಯ
ನೇ ಹೌದೆಂದೊಪ್ಪಿಕೊಂಡು, ಅಸೂಯಾಪರನು, ಈ ಸಂಗತಿಯನ್ನು
ಕೇಳಿ ಏನುಮಾಡಿದನೋ ನಾಳೆಯೆದಿನದರಾತ್ರಿ ಕೇಳಬೇಕೆಂದು ಹೊರಟು
ಹೋದನು.

೪೮ ನೆಯ ರಾತ್ರಿಕಥೆ.

ಮರುದಿನ ಕಾಲಕ್ಕೆಸರಿಯಾಗಿ, ಎಚ್ಚರಗೊಂಡು, ದಿನರಜಾ
ದಿಯು, ತನ್ನ ಅಕ್ಕನನ್ನು ಏಳಿಸಿ, ಅಕ್ಕಾ ! ನಿನಗೆ ನಿದ್ರಾಭಾರವೆ ಇದ್ದರೆ

ಅಸೂಯೋಪರನಿಗೂ, ಸತ್ಯವಂತನಾದ ಆ ಸನ್ಯಾಸಿಗೂ, ಮುಂದೆ ನಡೆದ ಕಥೆಯೆನ್ನು ಹೇಳೆಂದು, ಕೇಳಲು ಷಹರಜೌದಿಯು, ಹೇಳಲಾರಂಭಿಸಿದಳು. ಎರಡನೆ ಕಾಲಿಂಡರು, ಜೋಬದಿಯನ್ನು ನೋಡಿ, ಅಮ್ಮಾ! ಆ ಸನ್ಯಾಸಿಯು, ಸುಲ್ತಾನನಾದಬಳಿಕ ಒಂದುದಿನ ತನ್ನ ಪ್ರಧಾನಮಂತ್ರಿಗಳಿಂದ ಕೂಡಿ ಪಾದಚಾರಿಯಾಗಿ ಸಂಚರಿಸುತ್ತಿರುವಾಗ, ಜನಗಳ ಗುಂಪಿನಲ್ಲಿರುವ ಆ ಅಸೂಯೋಪರನನ್ನು ನೋಡಿ, ತನ್ನ ಮಂತ್ರಿಗಳಲ್ಲೊಬ್ಬನನ್ನು ಕರೆದು, ಅಯ್ಯಾ! ಅಗೋ ಅಲ್ಲಿಕಾಣುವ ದೊಡ್ಡಮನುಷ್ಯನು, ಬೆದರಿಸದಂತೆ ಮರ್ಯಾದೆಯಿಂದ ನನ್ನ ಬಳಿಗೆಕರೆದುಕೊಂಡು, ಬಾ! ಜೋಕೆ ಎಂದು ಹೇಳಿದನು. ಆ ಮಂತ್ರಿಯು, ಹಾಗೆಯೇಮಾಡಿದನು. ಆಗ ಸುಲ್ತಾನನು, ಆ ಅಸೂಯೋಪರನನ್ನು ನೋಡಿ, ಅಯ್ಯಾ! ಸ್ನೇಹಿತನೇ ಸುಖವಾಗಿರುವೆಯಾ? ನಿನ್ನನ್ನು ನೋಡುವುದಕ್ಕೆ ನನಗೆ ತುಂಬ ಸಂತೋಷವಾಗುತ್ತದೆ. ಎಂದು ಹೇಳಿ ತನ್ನ ಪ್ರಧಾನಮಂತ್ರಿಯೆ ಕಡೆಗೆ ತಿರುಗಿ ಈತನಿಗೆ ಒಂದುನೂರು ಮೊಹರಿಗಳನ್ನು ಬಹುಮಾನವಾಗಿಕೊಟ್ಟು, ಬಂಡಾರದಲ್ಲಿರುವ ಅಮೂಲ್ಯವಸ್ತುಗಳನ್ನು ಜೊತೆಯೆಲ್ಲಿ ಬೇಕಾದಷ್ಟು ಕಾವಲುಗಾರರನ್ನು ಕೊಟ್ಟು, ಮರ್ಯಾದೆಯಿಂದ ಕಳುಹಿಸಿಕೊಡಿ, ಎಂದು ಹೇಳಿ, ಆ ಅಸೂಯೋಪರನಿಗೆ, ವಂದನೆಗಳನ್ನುಮಾಡಿ, ಬಹುಮಾನವನ್ನು ತೆಗೆದುಕೊಂಡು, ಸುಖವಾಗಿರುವಂತೆಹೇಳಿ ಹೊರಟುಹೋದನು.

ಎಂಬದಾಗಿ ಇಜಿಪ್ಟ್‌ದೇಶದ ರಾಜಕುಮಾರಿಯನ್ನು ಸಂಹರಿಸುವುದಕ್ಕೆ ಬಂದ ರಾಕ್ಷಸನನ್ನುನೋಡಿ, ಅಯ್ಯಾ! ಆ ಉದಾರಿಯೊದ ಸುಲ್ತಾನನನ್ನು, ಕೊಲ್ಲಜೇಕೆಂದು, ಆ ಮೂತ್ಸರಿಕನು, ಪ್ರಯತ್ನಮಾಡಿದರೂ, ಸುಲ್ತಾನನು, ಆತನಿಗೆ ಎಷ್ಟೊಂದು ಮರ್ಯಾದೆಯನ್ನು ಮಾಡಿ, ಉಪಕಾರಮಾಡಿದನೋ! ಅದೇ ತೆರದಿಂದ ನೀನು ನನ್ನನ್ನು ಸಂರಕ್ಷಿಸಬೇಕೆಂದು, ಚಮತ್ಕಾರವಾಗಿ ಹೇಳುವುದಕ್ಕೆ ಶಕ್ತನಾಗಿದ್ದೆನೇ ಹೊರತು, ಆತನಿಗೆ ದಯೆಯುಂಟಾಗುವಂತೆ, ಮಾಡಲಾರದೆ ಹೋದೆನು.

ರಾಕ್ಷಸನು ನನ್ನನ್ನು ನೋಡಿ, ನಿನಗೆ ಮಾಡಜೇಕಾದುದು, ಪ್ರಾಣವನ್ನುಳಿಸುವುದೊಂದೆ ತಾನೆ, ಆಗಲಿ ನನ್ನ ಮೂಲಕದಿಂದ ನಿನಗೆ ಮಾಡಜೇಕಾಗಿರುವ ಶಿಕ್ಷೆಯನ್ನು ಮಾಡುವೆನೆಂದು, ಹೇಳಿ, ನನ್ನನ್ನು ಹಿಡಿದು,

ಬಿರುಸಾಗಿ ಮೇಲಕ್ಕೆತ್ತಿ, ಗುಹೆಯ ಬಾಗಿಲಿಗೆಬಂದು, ತಾನಾಗಿ ತೆರೆದು ಹೋದ ಆ ದ್ವಾರವನ್ನುದಾಟಿ, ಆಕಾಶಕ್ಕೆಹಾರಿಹೋಗಿ, ಭೂಮಿಯೆನ್ನು ನೋಡುತ್ತಾ, ಒಂದಾನೊಂದು ಸ್ಥಳದಲ್ಲಿ ಬಿಳಿ ಮಚ್ಚೆಗಳಿಂದ ಕೂಡಿದ ಪರ್ವತವು ಕಾಣಬರಲು, ಅದರ ಶಿಖರದಮೇಲೆ, ನನ್ನನ್ನು ಇಳಿಸಿದನು. ಅಲ್ಲಿಗೆ ಬಂದಕೂಡಲೆ, ಆತನು ಕೈಗೆ ಸ್ವಲ್ಪಮಣ್ಣನ್ನು ತೆಗೆದುಕೊಂಡು ಮಂತ್ರಿಸಿ, ನೀನು ಮನುಷ್ಯರೂಪವನ್ನುತೊರೆದು, ವಾನರನಾಗು ಎಂದು ಹೇಳಿ, ನನ್ನಮೇಲೆ ಹಾಕಿದನು. ಕೂಡಲೆ ಕೋತಿಯಾಗಿ ಸಂಚರಿಸುತ್ತಾ, ನನ್ನತಂದೆಯರಾಜ್ಯಕ್ಕೆ ಸಮೀಪವಾಗಿರುವೆನೋ ! ಅಥವಾದೂರದಲ್ಲಿರುವೆನೋ ತಿಳಿಯದೆ, ತುಂಬಾ ವ್ಯಸನಾಕ್ರಾಂತನಾಗಿದ್ದೆನು.

ಆ ಬೆಟ್ಟದ ಶಿಖರದಿಂದ ನಾನು ಕೆಳಗಿಳಿಯುವುದಕ್ಕೆ ಒಂದುತಿಂಗಳಾಯಿತು. ಅಲ್ಲಿಂದ ಅತ್ಯಂತ ಪ್ರಯಾಸವನ್ನು ಹೊಂದಿ, ಸಮುದ್ರತೀರವನ್ನು ಸೇರಿದೆನು. ಆಗ ಸಮುದ್ರದಲ್ಲಿ ಗಾಳಿ ಇಲ್ಲದಿದ್ದುದರಿಂದ, ಒಂದು ಹಡಗು ಚಲಿಸದೆ ನಿಂತಿರುವುದನ್ನು ಕಂಡೆನು. ಈ ಸಮಯವನ್ನು ತಪ್ಪಿಸಿಕೊಳ್ಳಬಾರದೆಂದು, ಹತ್ತಿರಿದ್ದ ಒಂದುಮರವನ್ನು ಹತ್ತಿ, ಮರದ ರೆಂಬೆಯೆನ್ನು ಮುರಿದುಕೊಂಡು, ಸಮುದ್ರದಲ್ಲಿಹಾಕಿ, ಅದರಮೇಲೆ ಕುಳಿತುಕೊಂಡು, ನೀರನ್ನು ತಳ್ಳುವುದಕ್ಕಾಗಿ ಎರಡುಕೈಗಳಲ್ಲೂ, ಎರಡು ಕೋಲನ್ನು ತೆಗೆದುಕೊಂಡೆನು. ಈ ಪ್ರಕಾರವಾಗಿ ನಾನು ಆ ಹಡಗನ್ನು ಸೇರ ಹೋಗುತ್ತಿರುವುದನ್ನುನೋಡಿ, ಅಲ್ಲಿದ್ದವರೆಲ್ಲರೂ ವಿನೋದವಾಗಿ, ಅತ್ಯಾಶ್ಚರ್ಯವನ್ನು ಹೊಂದಿದರು. ಬಳಿಕ ನಾನು, ಮೆಲ್ಲಗೆಹೋಗಿ, ಒಂದು ದಾರವನ್ನು ಹಿಡಿದುಕೊಂಡು, ಅದರಮೇಲೆ ಕೂತುಕೊಂಡೆನು. ಆದರೆ ನನಗೆ ಮೂತನಾಡುವುದಕ್ಕೆ ಬಾರದೆ ಇದ್ದುದರಿಂದ, ಆ ರಾಕ್ಷಸನ ಬಳಿಯಲ್ಲಿದ್ದಾಗ ಎಷ್ಟು ವ್ಯಸನವನ್ನು ಹೊಂದಿದೆನೋ, ಅದಕ್ಕಿಂತಲೂ ಅತಿಶಯವಾದ ದುಃಖವನ್ನು ಹೊಂದಿದೆನು.

ಆಗ ಅಲ್ಲಿದ್ದವರ್ತಕರು, ನನ್ನನ್ನುಹೊರಗೆ ಇಟ್ಟುರಬೇಕೆಂದೂ ಅಲ್ಲದಿದ್ದರೆ ನಮಗೆ ಕೇಡುಂಟಾಗುವುದೆಂದು, ಮೂತನಾಡಿಕೊಳ್ಳುತ್ತಿದ್ದರು ಆಗ ನಾನು ಅವರಬಳಿಗೆ ಹೋಗಿ ಕಣ್ಣೀರು ಸುರಿಸುತ್ತಾ, ಕಾಲಿಗೆಬಿದ್ದು ಗೋಳಾಡಿ, ಅಳುತ್ತಾ ಮೂತನಾಡುವುದಕ್ಕೆ ಅವಕಾಶವಿಲ್ಲವಾದುದರಿಂದ, ನನ್ನ ಕೈಲಾದಮಟ್ಟಿಗೂ, ಸನ್ನೆಮಾಡಿ ತೋರಿಸುತ್ತಿದ್ದೆನು. ಆಗಲಾ

ಳಿಯು, ಬೀಸುತ್ತಿದ್ದುದರಿಂದ ಎಂಟುದಿನಗಳು ಪ್ರಯಾಣವೂಡಿ, ಬಂದಾ ನೊಂದು ರಾಜ್ಯಕ್ಕೆ ರಾಜಧಾನಿಯಾದ ರೇವನ್ನು ಸೇರಿದೆವು. ಆಗ ಸಮು ದ್ರದಮೇಲೆ, ಪ್ರಯಾಣವೂಡಿ ಬರುವ ತಮ್ಮ ಬಂಧು, ಮಿತ್ರರನ್ನೂ, ಸುಖಾಗಮನದಿಂದ ಬರಮಾಡಿಕೊಳ್ಳುವುದಕ್ಕಾಗಿ, ಅಲ್ಲಿಗೆಬಂದು ನೋಡು ತ್ತಾ ಗುಂಪು ಗುಂಪಾಗಿ ನೆರೆದುಕೊಂಡರು. ಆ ಜನಗಳ ಗುಂಪಿನಲ್ಲಿ ಕೆಲ ವರು ತಮ್ಮ ರಾಜನ ವಿಷಯವಾಗಿ ವರ್ತಕರೊಡನೆ ಮಾತನಾಡುವುದಕ್ಕಾ ಗಿ ಹಡಗನ್ನುಹತ್ತಿ ಬಂದರು. ಅಯ್ಯಾ! ನಮ್ಮರಾಜನು, ನೀವುಗಳು ಸುಖವಾಗಿ ಇಲ್ಲಿಗೆಬಂದು, ತಲಪಿದುದಕ್ಕಾಗಿ, ತುಂಬ ಸಂತೋಷವನ್ನು, ಹೊಂದಿದೆನೆಂದು, ತಿಳಿಸಿರುವರು. ಅಲ್ಲದೆ ಮುಖ್ಯವಾದ ಮತ್ತೊಂದು ವಿಜ್ಞಾಪನೆಯೆನ್ನು ತಮ್ಮಗಳೆದುರಿಗೆ ಅರಿಕೆಮಾಡುವಂತೆ ಹೇಳಿರುವನು. ಏನಂದರೆ ಆತನಬಳಿಯಲ್ಲಿ ರಾಜಕಾರ್ಯ ನಿರ್ವಾಹಕರಲ್ಲಗ್ರಗಣ್ಯನಾದ ಒಬ್ಬನೊಬ್ಬ ಮಂತ್ರಿಯಿದ್ದನು. ಆತನು ರಾಜಕಾರ್ಯದಲ್ಲಲ್ಲದೆ ಬರವಣಿಗೆಯಲ್ಲಿ ತುಂಬಾ ಪರಿಶ್ರಮವುಳ್ಳವನಾಗಿದ್ದನು. ಆದುದರಿಂದ ನಾನು ಆತನಲ್ಲಿ ತುಂಬಾ ವಿಶ್ವಾಸವುಳ್ಳವನಾಗಿದ್ದೆನು. ಈಗ ಆತನು ಸತ್ತುಹೋದುದರಿಂದ, ಅವನಿಗೆ ಸಮಾನನಾದವನಿಗೆ ಮಂತ್ರಿತ್ವವನ್ನು ಕೊಡಬೇಕೆಂದಿರುವೆನು. ಆದುದರಿಂದ ಇದುವರೆಗೂ, ಅನೇಕಾನೇಕಜನ ರು, ತಮ್ಮಹಸ್ತಾಕ್ಷರಗಳನ್ನು ಕಳುಹಿಸಿದರೂ, ಯಾವುದೂ ಆ ಮಂತ್ರಿ ಯ ಹಸ್ತಾಕ್ಷರಕ್ಕೆ ಸರಿಬಾರದೆ ಇರುವುದರಿಂದ, ನನ್ನರಾಜ್ಯದ ಮಂತ್ರಿ ಪದವಿಗೆ ಯೋಗ್ಯರಾದವರು, ಯಾರೂ ದೊರಕಲಿಲ್ಲವೆಂದು, ಹೇಳಿರುವನು ಎಂದು ನುಡಿದನು. ಆಗ ಅಲ್ಲಿದ್ದವರ್ತಕರೆಲ್ಲರೂ, ಕಾಗದವನ್ನು ತೆಗೆದು ಕೊಂಡು, ತಂತಮ್ಮ ಹಸ್ತಾಕ್ಷರಗಳನ್ನು ಬರೆದರು. ನಾನು ಅವರಬಳಿ ಗೆಹೋಗಿ, ಆ ಕಾಗದವನ್ನು ತೆಗೆದುಕೊಳ್ಳಲು, ಓಹೋ ಈ ಹಾಳುಕೋ ತಿಯು, ಸಮುದ್ರದಲ್ಲಿ ಬಿಸಾಡುವುದೋ ಅಥವಾ ಹರಿದು ಹಾಕುವುದೋ ಎಂದು ಅನುಮಾನ ಪಡುತ್ತಿದ್ದರು. ಆದರೆ ನಾನು ಕಾಗದವನ್ನು ಪೇನಾ ವನ್ನು ಹಿಡಿದುಕೊಂಡಿರುವ ರೀತಿಯನ್ನುನೋಡಿ, ಬರವಣಿಗೆಯನ್ನು ಕಲಿ ತಿರಬಹುದೆಂದು ಕೆಲವರು ಸುಮ್ಮನಾದರು.

ಅವರಲ್ಲಿ ಆ ಕಾಗದವನ್ನು ಖಂಡಿತವಾಗಿ ತೆಗೆದುಕೊಳ್ಳಬೇಕೆಂದು, ಮಾತನಾಡುತ್ತಿರುವಲ್ಲಿ, ಹಡಗಿನ ಯಜಮಾನನು, ನನ್ನಪಕ್ಷವನ್ನುವಹಿಸಿ

ಈ ಕೋತಿಯು ಬುದ್ಧಿಶಾಲಿಯಾಗಿರುವುದು. ಖಾಯಂಶಃ ಬರೆಯಬಹುದೆಂದು, ತೋರುವುದು. ಹಾಗೆ ಬರೆದುದೇ ಆದರೆ ಇದನ್ನು ನನ್ನ ಮಗನಿಗಿಂತಲೂ, ಹೆಚ್ಚಾಗಿ ಬಾವಿಸುವೆನು. ಇಲ್ಲವಾದರೆ ಈ ಸ್ಥಳದಲ್ಲಿ ಅದಕ್ಕೆ ತಕ್ಕ ಶಿಕ್ಷೆಯನ್ನು ಮಾಡುವೆನೆಂದು, ಸನೂಭಾನಮೂಪಲು ನಾನು ಬರೆಯುವುದಕ್ಕಾರಂಭಿಸಿ, ಅರಬ್ಬೀದೇಶದ ಆರುಬಗೆಯಾದ ಅಕ್ಷರಗಳಲ್ಲೂ, ಆಸುಲ್ತಾನನ ಸ್ತೋತ್ರರೂಪವಾದ ಪದ್ಯಗಳನ್ನು ವಿಧವಿಧವಾದ ಛಂದೋಬಂಧದಿಂದ ಮನೋಹರವಾಗಿರುವಂತೆ, ಬರೆದೆನು. ಅಕ್ಷರವು ವರ್ತಕರು ಬರೆದ ಅಕ್ಷರಗಳಿಗಿಂತಲೂ, ಅತ್ಯುತ್ಕೃಷ್ಟವಾಗಿದ್ದುದಲ್ಲದೆ, ಅದಕ್ಕಿಂತ ಮುಂಚೆ ಇಂತಹ ಅಕ್ಷರವನ್ನು ಆ ದೇಶದಲ್ಲಾರೂ, ಬರೆದವರಿಲ್ಲವೆಂದು ಹೇಳುತ್ತಾ, ಆ ರಾಯಭಾರಿಗಳು, ಕಾಗದವನ್ನು ತೆಗೆದುಕೊಂಡು, ಹೊರಟುಹೋದರು. ಅಷ್ಟರಲ್ಲಿ ಬೆಳಗಾಯಿತು. ಷಹರಜಾದಿಯು, ಸುಲ್ತಾನನನ್ನು ನೋಡಿ, ಖಾವಿಂ ! ಆಗಲೆ ಸೂರ್ಯೋದಯವಾದುದರಿಂದ ಕಥೆಯನ್ನು ಇಲ್ಲಿಗೆ ನಿಲ್ಲಿಸಬೇಕಾಗಿರುವುದು ಇಲ್ಲಿಂದ ಮುಂದೆ ಹೇಳುವ ಕಥೆಯು, ಮೊದಲಿಗಿಂತಲೂ, ಅತಿಶಯವಾಗಿರುವುದೆಂದು, ಹೇಳಲು ಸುಲ್ತಾನನು ಆ ಕಥೆಯನ್ನು ಪೂರ್ತಿಯಾಗಿಕೇಳಬೇಕೆಂದು ಹೇಳಿ ಸುಮ್ಮನೆ ಹೊರಟು ಹೋದನು.

೪೯ ನೆಯ ರಾತ್ರಿ ಕಥೆ

ಮರುದಿನ ಬೆಳಗಿನಜಾವದಲ್ಲಿ ದಿನರಜಾದಿಯು ಎದ್ದು, ತನ್ನ ಅಕ್ಕನನ್ನು ಕುರಿತು ಅಕ್ಕಾ ! ನಿನಗೆ ನಿದ್ರೆಬಾರದೆ ಇದ್ದರೆ, ಆ ಎರಡನೆ ಕಾಲಿಂಡರಿನ ಕಥೆಯನ್ನು ಪೂರ್ತಿಮಾಡುವಂತೆ ಕೇಳಿಕೊಳ್ಳುವೆನು. ಅಲ್ಲದೆ ಸುಲ್ತಾನರುಕೂಡ ಅದೇ ಅಭಿಲಾಷೆಯುಳ್ಳವರಾಗಿರುವರೆಂದು, ಹೇಳಲು, ಷಹರಜಾದಿಯು, ಆಕೆಯನ್ನು ನೋಡಿ, ನಿಮ್ಮಿಬ್ಬರಿಗೂ, ಆನಂದವನ್ನುಂಟುಮಾಡುವುದೇ ನನ್ನಕೆಲಸವೆಂದು, ಹೇಳಲು, ಎಲ್ಲರೂ ಸುಮ್ಮನಾದರು. ಸ್ವಲ್ಪಹೊತ್ತಿನಲ್ಲಿ ಷಹರಜಾದಿಯು, ಕಥೆಯನ್ನು ಹೇಳಲಾರಂಭಿಸಿ, ಆ ರಾಜನು, ಎಲ್ಲ ಬರವಣಿಗೆಗಿಂತಲೂ, ಕಡೆಯಲ್ಲಿ ಬರೆದಿರುವ ಅತಿಸುಂದರವಾದ ಮತ್ತು ಅರ್ಥಗರ್ಭಿತವಾದ, ಆ ಬರವಣಿಗೆಯನ್ನು ಬರೆದವನನ್ನು, ಉತ್ತಮವಾದ ವಸ್ತ್ರಗಳಿಂದಲಂಕಾರಮಾಡಿ, ಅಶ್ವಾರೂಢನನ್ನ

ನ್ನಾಗಿ ಮಾಡಿ, ಸಮಸ್ತವಾದ ರಾಜಮರ್ಯಾದೆಗಳಿಂದ ನನ್ನಬಳಿಗೆ ಕರೆ ದುಕೊಂತು ಬನ್ನಿರೆಂದು, ತನ್ನ ಪ್ರಧಾನಮಂತ್ರಿಗಳಿಗೆ ಆಜ್ಞಾಪಿಸಲು, ಕೂಡಲೇ ಅವರು ತಮಗೆಬಂದ ನಗುವನ್ನು ತಡೆಯಲಾರದೆ ಗಟ್ಟಿಯಾಗಿ ನಕ್ಕರು. ಅದನ್ನುನೋಡಿ, ಸುಲ್ತಾನನು, ಅತ್ಯಂತಕೋಪದಿಂದ ಅವರ ನ್ನು ಶಿಕ್ಷಿಸುವಂತೆ ಆಜ್ಞೆ ಮಾಡಿದನು.

ಆಗಲವರು ಸ್ವಾಮಿಾ ! ತಾವುಕ್ಷಮಿಸಬೇಕು, ಈಬರವಣಿಗೆಯು, ಮನುಷ್ಯರಿಂದ ಬರೆಯಲ್ಪಟ್ಟುದಲ್ಲ, ಮತ್ತೇನೆಂದರೆ ಹಡಗಿನ ಮೇಲೆ ಕುಳಿತಿದ್ದ ವಾನರನೊಬ್ಬನಿಂದ ಬರೆಯಲ್ಪಟ್ಟತೆಂದು ಹೇಳಲು, ರಾಜನು ಅತ್ಯಾಶ್ಚರ್ಯ ಯುಕ್ತನಾಗಿ, ಹಾಗಾದರೆ ಅದನ್ನು ನಾನು ನೋಡಬೇಕಾ ಗಿರುವುದರಿಂದ ಶೀಘ್ರವಾಗಿ ಆ ಕಪಿಯನ್ನು ಕರೆದು ಕೊಂಡು ಬನ್ನಿರೆಂದು ಆಜ್ಞಾಪಿಸಿದನು. ಆಗ ಅವರು ತ್ವರೆಯಾಗಿ ಅಲ್ಲಿಗೆ ಬಂದು ರಾಜಾಜ್ಞೆ ಯನ್ನು ಯಜಮಾನನಿಗೆ ತಿಳುಹಲು, ಆತನು ಸಮ್ಮತಿಸಲು ಅವರು ನನಗೆ ನಾನಾವಿಧವಾದ ಅಮೂಲ್ಯ ವಸ್ತ್ರಾಭರಣಗನ್ನು ತೊಡಿಸಿ, ಉತ್ತಮವಾದ ಕುದುರೆಯಮೇಲೆ ಕುಳ್ಳಿರಿಸಿ ಕೊಂಡು, ಮರ್ಯಾರ್ಥವಾಗಿ ಸುತ್ತಲೂ ತಾವು ನಡೆದು ಬರುತ್ತಾ ಇದ್ದರು. ನಾನು ಸಂತೋಷದಿಂದ ನೋಡುತ್ತಾ ಇದ್ದೆನು. ರಾಜನು ಕೋತಿಯೆನ್ನು ಮಂತ್ರಿಯಾಗಿ ಮಾಡಿಕೊಳ್ಳುವ ನೆಂಬ ವರ್ತಮಾನವು ಕೂಡಲೆ ಊರಲ್ಲೆಲ್ಲ ತುಂಬಿಕೊಂಡಿತು. ಆದುದ ರಿಂದ ಊರಿನವರೂ, ಹಡಗಿನವರೂ, ಸರ್ವರೂ ನನ್ನನ್ನು ನೋಡುವುದ ಕ್ಕಾಗಿ ಬೀದಿಗೆಬಂದು ಜಗಲಿಗಳಮೇಲೂ, ಪಡಸಾಲೆಗಳಲ್ಲೂ, ಕೈಸಾಲೆಗ ಳಲ್ಲೂ, ಮಾಡಿಯಲ್ಲೂ, ನಿಂತು ತಂಡತಂಡವಾಗಿ ಭ್ರಮೆಯಿಂದ ನೋಡು ತ್ತಾ ಇದ್ದರು. ಬಳಿಕ ನಾನು ಅರಮನೆಯನ್ನು ಸೇರಿದೆನು. ರಾಜನು ವಿಜೃಂಭಣೆಯಿಂದ, ಸಿಂಹಾಸನದಲ್ಲಿ ಕುಳಿತಿರುವುದನ್ನು ನೋಡಿ ಮೊದಲು ಸಲಾಮು ಮಾಡಿ, ಮುಂಡಿಯುವಾರಿ ಮುಂದೆ ಕೂತುಗೂಂಡು, ಕಾಲುಗಳಿಗೆ ರಗಿ ನೆಲವನ್ನು ಮುತ್ತಿಟ್ಟುಕೊಂಡು ಮೂರುಸಾರಿ ವಂದನೆಗಳನ್ನು ಮಾ ಡಿದೆನು. ಅಲ್ಲಿದ್ದವರೆಲ್ಲರೂ, ಇವನ್ನುನೋಡಿ, ಇದೇನು ಆಶ್ಚರ್ಯ ಇದೆಂತಹ ಕೋತಿಯಾಗಿರಬಹುದೆಂದು, ತುಂಬ ವಿನೋದವನ್ನು ಹೊಂದಿ ದರು. ರಾಜನುಎಲ್ಲಕ್ಕಿಂತಲೂ, ಅತಿಶಯವಾದವಿಶ್ವಾಸವನ್ನು ತೋರಿಸಿದನು ಟ್ಟಿನಲ್ಲಿ ನಾನೆಷ್ಟು ಬುದ್ಧಿವಂತನಾಗಿದ್ದರೂ, ಮಾತನಾಡುವ ಶಕ್ತಿಯಿಲ್ಲ.

ನನಗಿಲ್ಲದುದರಿಂದ ನಾನುಮಾಡಬೇಕಾದ ಕೆಲಸವನ್ನು ಪೂರ್ತಿಮಾಡುವುದಕ್ಕೆ, ಶಕ್ತನಾಗಿರಲ್ಲಿಲ್ಲ. ನಾನು ಪೂರ್ವದಲ್ಲಿ ಮನುಷ್ಯನಾಗಿದ್ದರೂ, ಆಕಾಲದಲ್ಲಿ ನನಗಂತಹ ಯೋಗ್ಯತೆಯು, ಇಲ್ಲದೆ ಹೋಯಿತು. ಬಳಿಕ ಅವರು ಒಬ್ಬ ಸೇವಕನನ್ನು ಅಡಿಗೆಯವಳನ್ನು ಕರೆದು, ಸಭಿಕರನ್ನೆಲ್ಲಾ ಅವರವರ ಮನೆಗಳಿಗೆ ಕಳುಹಿಸಿದನಂತರ, ನನ್ನನ್ನು ಅಂತಃಪುರಕ್ಕೆ ಕರೆದು ಕೊಂಡುಹೋಗಿ, ಊಟದಪದಾರ್ಥವನ್ನು ತರುವಂತೆ ಹೇಳಲು, ಕೂಡಲೆ ಅವರು, ಅದನ್ನು ತೆಗೆದುಕೊಂಡುಬಂದರು. ಅವರು ನನ್ನನ್ನು ನೋಡಿ, ನನ್ನಸಂಗಡ ಊಟ ಮಾಡು ಬಾ! ಎಂದು ಕರೆದರು. ನಾನುಮರ್ಯಾದಾರ್ಥವಾಗಿ ನೆಲವನ್ನು ಮುತ್ತಿಟ್ಟುಕೊಂಡು, ಅವರಜೊತೆಯಲ್ಲಿ ಕುಳಿತು, ವಿಶೇಷವಾಗಿ ಮರ್ಯಾದೆಯಿಂದ ಊಟಮಾಡಿದೆನು.

ಆಗ ನಾವು ಭೋಜನಮಾಡುತ್ತಿದ್ದ, ಮೇಜಿನಮೇಲೆ, ಹಾಸಿರುವ ವಸ್ತ್ರವನ್ನು ತೆಗೆವುದಕ್ಕೆಮುಂಚೆ, ಅಲ್ಲಿರುವ ಒಂದು ಚಕ್ಕೋತದ ಹಣ್ಣನ್ನು ತರಿಸಿಕೊಂಡು, ಅದರಮೇಲೆ ರಾಜನವರವಾಗಿ ಒಂದು ಪದ್ಯವನ್ನು ಬರೆದು, ರಾಜನಬಳಿಯಲ್ಲಿಟ್ಟೆನು. ಅದನ್ನುನೋಡಿ ರಾಜನುತುಂಬ ಸಂತೋಷವನ್ನು ಹೊಂದಿ, ಉತ್ತಮವಾದ ದ್ರಾಕ್ಷಾರಸವನ್ನು ತರಿಸಿ, ನನಗೆಕೊಟ್ಟು, ನಾನು ಅದನ್ನು ಕುಡಿದಮೇಲೆ, ಈತನಿಗಿಂತಲೂ ತಿಳುವಳಿಕೆಯುಳ್ಳ ಸರ್ವೋತ್ಕೃಷ್ಟನಾದ ಮನುಷ್ಯನನ್ನು ನಾನೆಂದಿಗೂ ನೋಡಲಿಲ್ಲವೆಂದು, ಹೇಳಿದನು. ಆತನು ಚದುರಂಗವನ್ನು ತರಿಸಿ, ನೀನು ಇದನ್ನು ಆಡಬಲ್ಲೆಯಾ ! ಎಂದುಕೇಳಲು, ನಾನು ಅದಕ್ಕೆ ಸಮ್ಮತಿಸಿ, ಮರ್ಯಾದಾರ್ಥವಾದ ಸಕಲಕಾರ್ಯಗಳನ್ನುಮಾಡಿ, ಆತನಸಂಗಡ ಆಟವಾಡುತ್ತಿರುವಲ್ಲಿ ಮೊದಲನೆಯಸಾರಿ ರಾಜನೇಗೆದ್ದನು. ಬಳಿಕ ನಾನುಗೆದ್ದುಕೊಂಡುದರಿಂದ, ಆತನಿಗೆ ಸ್ವಲ್ಪ ಅಸಮಾಧಾನವುಂಟಾಯಿತು. ಆಗ ನಾನು ಮಹಾ ಪರಾಕ್ರಮಶಾಲಿಗಳಾದವರ ಉಭಯಸೈನ್ಯಗಳೂ ತಮ್ಮ ಶೌರ್ಯವನ್ನು ತೋರಿಸಿ, ಹೊಡೆದಾಡಿ, ಸಮಾಧಾನವನ್ನುಹೊಂದಿ, ರಾತ್ರಿಯಲ್ಲಿ ಅನ್ಯೋನ್ಯವಾಗಿ ರಣರಂಗದಲ್ಲಿರುತ್ತಿರುವೆಂಬ, ಅರ್ಥವುಳ್ಳ ಒಂದು ಪದ್ಯವನ್ನು ರಚಿಸಿ, ಸುಲ್ತಾನನ ಕೈಗೆ ಕೊಟ್ಟೆನು.

ಅದನೊ್ನೀದಿಕೊಂಡು, ಆ ರಾಜನು ಕೋತಿಗಳಿಗಿಂತಹ ಚಟುವಟಿಕೆ ಯುಂಟಾಗಿರುವುದೆಲ್ಲಿಯಾದರೂ ಉಂಟೆ ? ಎಂದು ಆಶ್ಚರ್ಯವನ್ನು

ಹೊಂದಿ, ಈ ವಿನೋದವನ್ನು ನಾನೊಬ್ಬನೇ ಅನುಭವಿಸುವುದು ಸರಿಯೆ ಲ್ಲ. ನನ್ನ ಪ್ರೀತಿಪಾತ್ರಳಾದ ಹೆಂಡತಿಯೂ, ಅನುಭವಿಸಲೆಂದುಹೇಳಿ, ದಾದಿಯೆನ್ನು ಕರೆದು, ಸುಲ್ತಾನಿಯನ್ನು ಕರೆದುಕೊಂಡು ಬರುವಂತೆ, ಆಜ್ಞಾಪಿಸಿದನು. ಆಕೆಯು ಮುಸುಕನ್ನು ತೆಗೆದುಹಾಕಿ, ಮುಂದೆನಡೆ ದುಬರುತ್ತಾ ರಾಜನನ್ನುನೋಡಿ, ಕೂಡಲೇ ಮುಸುಕುಹಾಕಿಕೊಂಡು, ಸುಲ್ತಾನರೇ ! ಪರಪುರುಷನಮುಂದೆ ನನ್ನನ್ನು ಬರಮಾಡುತ್ತಿರುವುದನ್ನು ನೋಡಿ ನನಗೆ ತುಂಬ ಆಶ್ಚರ್ಯವುಂಟಾಗುತ್ತಿದೆ. ಎಂದು ಹೇಳಲು, ಆತನು ಆದರೇನು, ನಿನ್ನಬಳಿಯೆಲ್ಲಿರುವ ದಾದಿಯೂ, ಬೋಜೌಸರದಾರ ನೂ, ಹೊರತು ಮತ್ತಾರು ಇಲ್ಲವಲ್ಲ. ಅಲ್ಲದೆನೀನುಕೂಡ ಮುಸುಕನ್ನು ಹಾಕಿಕೊಂಡಿರುವೆ ಬಾ ಎಂದು ಕರೆಯಲು, ಆ ರಾಜಪುತ್ರಿಯು, ಆತನ ನ್ನುನೋಡಿ, ಅಯ್ಯಾ ! ಇಲ್ಲಿ ಕುಳಿತುಕೊಂಡಿರುವ ಕೋತಿಯು, ಮೊದ ಲು ಮನುಷ್ಯನಾಗಿದ್ದ ಬಬಾಬ್ಬನೊಬ್ಬ ರಾಜಪುತ್ರನಾಗಿದ್ದನು. ಇಬಿ ನಿದ್ವೀಪದ ರಾಜಕುಮಾರ್ತಿಯನ್ನಿಟ್ಟುಕೊಂಡಿದ್ದ ರಾಕ್ಷಸನ ಮಂತ್ರಾಸಾ ದದಿಂದ ಮನುಷ್ಯರೂಪನನ್ನು ತೊರೆದು, ವಾನರನಾದನು. ಎಂದುಹೇಳಿ ದಳು.

ರಾಜನು ನನ್ನನ್ನುನೋಡಿ, ಈಕೆ ಹೇಳುವುದು ನಿಜವೇ ಎಂದು ಕೇಳಿದನು. ನನಗೆ ಮೂತನಾಡುವುದಕ್ಕೆ, ಶಕ್ತಿ ಇಲ್ಲವಾದುದರಿಂದ, ನಾ ನು ಕೈಗಳನ್ನು ತಲೆಯಮೇಲಿಟ್ಟುಕೊಂಡು, ಆಕೆ ಹೇಳಿದುದೆಲ್ಲವೂ ಸಹ ಜವೆಂದು ಹೇಳುವಂತೆ ಸನ್ನೆಮಾಡಿ ತೋರಿಸಿದೆನು. ಆಬಳಿಕ ಆತನು ರಾಜ ಪುತ್ರಿಯನ್ನು ನೋಡಿ, ಈತನನ್ನು ಪೂರ್ವದಂತೆ ಮನುಷ್ಯನನ್ನಾಗಿ ಮಾಡುವಂತಹ ಮಂತ್ರವಿದ್ಯೆಯು, ನಿನಗೆ ತಿಳಿಯುವುದೇ ಎಂದುಕೇಳಿದ ನು. ಆಕೆಯು ಸ್ವಾಮಿಾ ! ನಾನು ಚಿಕ್ಕಂದಿನಲ್ಲಿ ಆಟವಾಡುತ್ತಿರುವಾಗ ಯೊವಾಗಲೂ, ನನ್ನಬಳಿಯೆಲ್ಲಿರುತ್ತಾ ಇದ್ದ ಮುದುಕಿಯು, ಅನೇಕ ಮಂತ್ರವಾದವನ್ನು ತಿಳಿದ ಮಂತ್ರಗಾರಳಾಗಿದ್ದು, ನನಗೆ ಮಂತ್ರಗಳ ನ್ನು ಕಲಿಸಿದಳು. ಈ ವಿಷಯದಲ್ಲಿ ಆಶ್ಚರ್ಯವೇನೂ ಇಲ್ಲ. ಆದುದ ರಿಂದ ನಾನು ಈತನು ಹೊಂದಿರುವ ಈ ದುರವಸ್ಥೆಯನ್ನು ಸುಲಭವಾಗಿ ಯೇ ಹೋಗಲಾಡಿಸಿ, ಸ್ವಸ್ವರೂಪವನ್ನು ತಂದುಕೊಡುವೆನೆಂದು, ಹೇಳಿ ದಳು. ನಿನಗೆ ಅಷೊಟ್ಟಂದು ಶಕ್ತಿ ಇರುವುದೆಂದು, ನಾನೆಂದಿಗೂ, ನಂಬಿ

ಲಾರೆನೆಂದು ಸುಲ್ತಾನನು, ಹೇಳಲು, ರಾಜಕುಮಾರ್ತೆಯು, ತಂದೆಯೇ ! ನಾನೀತನ ಸ್ವಸ್ವರೂಪವನ್ನು ಪುನಹ ಬರವೂಡುವುದಾದರೆ, ನಿನಗೆ ಸಂತೋಷ ವುಂಟಾಗುವುದೇ ? ಅಲ್ಲದೆ ಅದರಿಂದ ನನಗೇನು ಪ್ರಯೋಜನವೆಂದು ಕೇಳಲು, ಸುಲ್ತಾನನು, ಈತನನ್ನು ಮೊದಲಿನಂತೆಮೂಡಿದರೆ ಅದಕ್ಕಿಂತಲೂ ಅಧಿಕವಾದ ಆನಂದವು ನನಗಿನ್ನಾವುದೂ ಇಲ್ಲದಂತಾಗುವುದು. ನಾನು ಆತನನ್ನು ಮಂತ್ರಿಯಾಗಿ ಮೂಡಿಕೊಳ್ಳುವೆನು. ನೀನು ಅವನನ್ನೇ ವಿವಾಹ ಮೂಡಿಕೊಳ್ಳಬಹುದೆಂದು, ಹೇಳಲು, ರಾಜಕುಮಾರಿಯು, ತಂದೆಯೇ ! ನೀನು ಹೇಳಿದಂತೆ ಸಕಲಕಾರ್ಯಗಳನ್ನು ನಾನುಮೂಡಲು ಸಿದ್ಧಳಾಗಿರುವೆನೆಂದು, ಹೇಳಿದಳು.

ಕೂಡಲೆ ಬೆಳಗಾಗಲು, ಷಹರಜಾದಿಯು, ಕಥೆಯನ್ನು ನಿಲ್ಲಿಸಿದಳು. ರಾಜನು, ಮೊದಲಿಗಿಂತಲೂ, ಸಾರ್ವರಸ್ಯವಾಗಿರುವ ಈ ಕಥೆಯನ್ನು ಕೊನೆಮುಟ್ಟಿ ಕೇಳಬೇಕೆಂದು, ಅತ್ಯಾಶಕ್ತಿಯನ್ನು ಹೊಂದಿದವನಾಗಿ, ಸುಮ್ಮನೆ ಹೊರಟುಹೋದನು.

೫೦ ನೆಯ ರಾತ್ರಿ ಕಥೆ

ಮರುದಿನ ದಿನರಜಾದಿಯು, ಆ ರಾಜಕುಮಾರಿಯು, ಕೋತಿಯಾಗಿರುವ ರಾಜಪುತ್ರನ್ನು, ಏನುಮೂಡಿದಳೋ ಕೇಳಬೇಕೆಂಬ ಕುತೂಹಲದಿಂದ, ಷಹರಜಾದಿಯನ್ನುಕುರಿತು, ಅಕ್ಕಾ ! ನಿನಗೆ ನಿದ್ರಾಬಾರದೆ ಇದ್ದರೆ, ಆ ರಾಜಕುಮಾರನ ಕಥೆಯನ್ನು ಕೊನೆಗಾಣಿಸಿ ಹೇಳಬೇಕೆಂದು ಪ್ರಾರ್ಥಿಸುತ್ತೇನೆನಲು, ಷಹರಜಾದಿಯು, ಕಥೆಯನ್ನು ಹೇಳತೊಡಗಿದಳು. ಬಳಿಕ ಆ ರಾಜಪುತ್ರಿಯು, ತನ್ನ ಅಂತಃಪುರಕ್ಕೆ ಹೋಗಿ, ಒಂದು ಕತ್ತಿಯನ್ನು ತಂದಳು. ಅದರಮೇಲೆ ಹೀಬ್ರೂಭಾಷೆಯಲ್ಲಿ ಕೆಲವು ಅಕ್ಷರಗಳು, ಬರೆಯಲ್ಪಟ್ಟಿದ್ದವು. ಬಳಿಕ ಆ ರಾಜಪುತ್ರಿಯು, ನನ್ನನ್ನು ದಾದಿಯೆನ್ನೂ, ಆ ಖೋಜಾವನ್ನೂ, ಒಂದು ರಹಸ್ಯವಾದ ಸ್ಥಳಕ್ಕೆ ಕರೆದುಕೊಂಡುಹೋಗಿ, ಒಂದು ಚಕ್ರವನ್ನುಬರೆದು, ಅರಬೀಭಾಷೆಯಲ್ಲಿ ನಾನಾಮಂತ್ರಗಳನ್ನು ಹೇಳುತ್ತಾ ಅಲ್ಲಿರುವ ಒಂದಾನೊಂದು ಮರದಸುತ್ತಲೂ ತಿರುಗುತ್ತಿದ್ದಳು. ಅವುಗಳಲ್ಲೊಂದುಮಂತ್ರವು (ಕ್ಲಿಯೋಪಾತ್ರ) ಎಂಬ ಅಕ್ಷರಗಳಿಂದ ಕೂಡಿತ್ತು. ನಂತರ ಆ ರಾಜಕುಮಾರಿಯು, ಆ ಚ

ಕ್ರಮಧ್ಯದಲ್ಲಿ ಕುಳಿತುಕೊಂಡು, ಖುರಾನಿನ ಮುಂತ್ರವನ್ನು ಚ್ಚರಿಸುತ್ತಿರಲು, ರಾತ್ರಿಯಾದಂತೆ, ದೇಶವೆಲ್ಲವೂ ಕತ್ತಲೆ ಕವಿದುಕೊಂಡುದರಿಂದ ನಾವುಗಳು ಭಯಗ್ರಸ್ತರಾಗಿ, ತಲೆಯನ್ನು ಬೊಗ್ಗಿಸಿಕೊಂಡು, ಕುಳಿತುಕೊಂಡೆವು. ಕೂಡಲೆ, ಇಬ್ಲಿಸನ ವೊಮ್ಮಗನಾದ ರಾಕ್ಷಸನು, ಭಯಂಕರವಾದ ಸಿಂಹ ರೂಪವನ್ನು ತಾಳಿ, ಘೋರವಾಗಿಕೂಗುತ್ತಾ, ಆ ಸ್ಥಳಕ್ಕೆ ಬರಲು, ನಮ್ಮಭಯವು ವೊದಲಿಗಿಂತಲೂ, ಅಧಿಕವಾಯಿತು. ಆಗ ರಾಜಕುವರ್ತೆಯು, ಸಿಂಹವನ್ನು ನೋಡಿ, ನೀನು ಬದುಕಬೇಕಾಗಿದ್ದರೆ, ನಿನ್ನ ಕ್ರೂರರೂಪವನ್ನು ಬಿಟ್ಟು ಇಲ್ಲಿ ಬಾ! ಎನಲು ಆ ಭೂತವು, ನೀನು ನನಗೆ ಅನ್ಯಾಯವೂಡುವುದಕ್ಕಾಗಿ ಧಿಕ್ಕರಿಸಿ ವೂತನಾಡುತ್ತೀಯೋ? ನಿನ್ನನ್ನು ನುಂಗಿ ಬಿಡುವೆನೆಂದು ಹೇಳಿತು. ಆಹಾ! ಎಚ್ಚರಿಕೆಯೊಾಗಿರು. ನಾನು ನ್ಯಾಯವಾಗಿಯೇ ನಿನ್ನನ್ನು ಧಿಕ್ಕರಿಸುತ್ತಿರುವೆನೆಂದು, ಧೈರ್ಯದಿಂದಹೇಳಲು, ಆ ಸಿಂಹವು, ಕ್ರೂರರೂಪವಾಗಿ ತನ್ನ ಬಾಯಿಯನ್ನು ತೆರೆದುಕೊಂಡು, ಆಕೆಯನ್ನು ನುಂಗುವುದಕ್ಕೆ ಬಂದಿತು. ಆಗ ನಾವುಗಳು ಮತ್ತಷ್ಟು ದಿಗಿಲುಬಿದ್ದು, ಓಡಿಹೋಗುತ್ತಿದ್ದೆವು. ಆದರೆ ಆ ರಾಜಪುತ್ರಿ ಎಚ್ಚರಿಕೆಯುಳ್ಳವಳಾಗಿ ಹಿಂದೆಹೋಗಿ, ತನ್ನ ತಲೆಯಿಂದ ಕೂವಲನ್ನುಕೆತ್ತುಕೊಂಡು, ಮುಂತ್ರಿಸಿ, ಅದನ್ನೇ ಖಡ್ಗವಾಗಿ ವೂಡಿಕೊಂಡು, ಆ ಸಿಂಹವನ್ನು ಚೆಕ್ಕನೆ ಕತ್ತರಿಸಿ, ಎರಡುತುಂಡಾಗಿವೂಡಿದಳು.

ಹೀಗೆ ತುಂಡಾದ ಸಿಂಹದ ದೇಹಭಾಗವು ಆಕಾಶಕ್ಕೆ ಹಾರಿಹೋಯಿತು. ಆದರೆ ಕೆಳಗಡೆಬಿದ್ದಿರುವ ತಲೆವೂತ್ರ ಚೇಳಿನರೂಪವಾಗಿ ಆಕೆಯಬಳಿಗೆ ಬರಲು, ಅವಳು ಸರ್ಪರೂಪವನ್ನು ಧರಿಸಿ ಹೊಡೆದಾಡುವುದನ್ನು ನೋಡಿ, ಆ ತಲೆಯು ಮುಂಗಿಸಿಯಾಯಿತು. ಅವುಗಳೆರಡೂ ಈ ತೆರದಿಂದ ಹೊಡೆದಾಡುತ್ತಾ, ನವುಗೆ ತಿಳಿಯದಷ್ಟು ದೂರ ಆಕಾಶಕ್ಕೆ ಹಾರಿಹೋದವು. ಅವುಗಳು ಹೀಗೆ ಕಣ್ಣಿಗೆಕಾಣದೆ, ಹೋದ ಸ್ವಲ್ಪಹೊತ್ತಿಗೆ, ನಾವು ನಿಂತುಕೊಂಡಿದ್ದ ಸ್ಥಳದಿಂದ ಭೂವಿಯೊಡೆದು, ಒಂದು ಕರಿಯೆ ಇಲ್ಲಿಯೂ, ಅದನ್ನಟ್ಟಿಸಿಕೊಂಡು ಒಂದುಬೆಕ್ಕೂ, ಬಂದು ಜಗಳವಾಡುತ್ತಾ ಇದ್ದವು. ಬೆಕ್ಕು ಇಲಿಯನ್ನು ಅಲ್ಲಿ ನಿಲುಗೊಡದೆ ಓಡಾಡಿಸುತ್ತಿರುವಾಗ, ಅಲ್ಲಿಗೆ ಸವೂಪವಾಗಿ ಬಹಳ ಆಳವಾ

ಗಿರುವ ಒಂದು ಕಾಲುವೆಯಬಳಯಲ್ಲಿ ದಾಳಿಂಬದ ಗಿಡದಿಂದ ಒಂದು ಹಣ್ಣು ಬಿದ್ದುದನ್ನುನೋಡಿ, ಅದನ್ನು ತಾಕಿತು. ಕೂಡಲೆ ಆ ದಾಳಿಂಬವು ಕುಂಬಳಕಾಯಿಯಷ್ಟು, ದೊಡ್ಡದಾಗಿ ಎರಗಿ ಮಹಡಿಯಮೇಲಿನ ಗೋಡೆಗೆ ತಗಲಿ ಒಡೆದು ಹೋಯಿತು. ಆಗ ಆ ಬೆಕ್ಕು ಒಂದು ಹುಂಜವಾಗಿ ಆಕಾಳುಗಳೆಲ್ಲವನ್ನು ಆರಿಸಿಕೊಂಡುತಿಂದು, ನಮ್ಮಬಳಗೆಬಂದು ಇನ್ನೂ ಕಾಳುಗಳಿರುವುವೇ ಎಂದು ಕೇಳಿತು. ಆ ಗಿಡದಬಳಯಲ್ಲಿ ಒಂದು ಕಾಳಿರುವುದನ್ನು ನೋಡಿ, ಅದನ್ನು ತಿನ್ನುವುದಕ್ಕೆ ಹೋಗಲು, ಆ ಬೀಜವು ಕಾಲುವೆಯಲ್ಲಿ ಮುಳುಗಿಕೊಂಡಿತು. ಇಷ್ಟರಲ್ಲಿ ಷಹರಜಾದಿಯು, ತನ್ನ ಸುಲ್ತಾನನನ್ನು ನೋಡಿ, ಸ್ವಾಮಿ ! ಬೆಳಗಾದುದರಿಂದ ಈ ಕಥೆಯನ್ನು ಇಲ್ಲಿಗೆ ನಿಲ್ಲಿಸಬೇಕಾಗಿರುವುದೆಂದು, ಹೇಳಿ ಮುಗಿಸಿದಳು. ಸುಲ್ತಾನನು, ಇಂತಹ ವಿಚಿತ್ರವಾದ ಕಥೆಯೆನ್ನು ಕೇಳುವುದರಲ್ಲಿ ಅತ್ಯಾಶ್ಚರ್ಯವನ್ನು ಹೊಂದಿದವನಾಗಿ, ಯಾವ ಮಾತನ್ನೂ ಆಡದೆ ಸುಮ್ಮನೆ ಹೊರಟು ಹೋದನು.

೫೧ ನೆಯ ರಾತ್ರಿ ಕಥೆ.

ಮರುದಿನ ಬೆಳಗಿನಜಾವದಲ್ಲಿ ದಿನರಜಾದಿಯು, ಎದ್ದಕೂಡಲೆ ಅಕ್ಕನನ್ನು ಕುರಿತು, ಪ್ರಿಯನಕ್ಕೋದರಿ, ಆ ಎರಡನೇ ಕಾಲಿಂಡರಿನ ಕಥೆಯೆನ್ನು ಪೂರ್ತಿಮಾಡು. ನಿನ್ನೆದಿನ ನೀನುಹೇಳಿದ ರೂಪಭೇದಗಳು, ಕೊನೆಗೆ ಏನಾದವೋ ಕೇಳಬೇಕೆಂಬ ಕುತೂಹಲವು ನನಗೆ ತುಂಬ ಇರುವುದರಿಂದ, ಶೀಘ್ರವಾಗಿ ಹೇಳೆನಲು, ಷಹರಜಾದಿಯು, ಅದರಂತೆ ಕಥೆಯೆನ್ನು ಹೇಳಲಾರಂಭಿಸಿದಳು.

ಬಳಿಕ ಆ ಬೆಕ್ಕು ಒಂದು ಕೊಕ್ಕರೆಯಾಗಿ ಆ ಮೀನನ್ನು ಹಿಂದಟ್ಟಿಕೊಂಡು, ಹೋಯಿತು. ಹೀಗೆ ಸ್ವಲ್ಪಹೊತ್ತು ಅವುಗಳು ನೀರಿನಲ್ಲಿ ಮುಳುಗಿಕೊಂಡವೇಲೆ ಏನಾದವೂ ನಮಗೆ ತಿಳಿಯದು, ಬಳಿಕ ಭೂಮಿಗೂ, ಆಕಾಶಕ್ಕೂ, ಏಕವಾದ ಒಂದು ಭಯಂಕರವಾದ ಶಬ್ದವು ಕೇಳಬಂದಿತು. ಕೂಡಲೆ ಆ ರಾಕ್ಷಸನೂ, ರಾಜಕುಮಾರಿಯು, ಪಿಂಕಿಯಿಂದುರಿಯುತ್ತ ಬಾಯಿಂದ ಪಿಂಕಿಯನ್ನುಗುಳುತ್ತಾ ಬಂದರು. ಇದರಿಂದ ಊರಿಯು, ಹೆಚ್ಚಾಗಿ ಊರೆಲ್ಲ ಹೊತ್ತಿಕೊಳ್ಳುವಂತಾಯಿತು. ನಾವು ಬ

ಹಳವಾಗಿ ಹೆದರುತ್ತಿದ್ದೆವು. ಕೂಡಲೆ ನಮಗೆ ಅತ್ಯಂತ ಭಯಂಕರವಾ ದ ಮತ್ತೊಂದು ಮೃತ್ಯುವು ಸಂಭವಿಸಿತು. ಆ ರಾಕ್ಷಸನು ರಾಜಕುಮಾ ರಿಯನ್ನು ತೊರೆದು ನಮ್ಮಮೇಲೆ ಕೆಂಡವನ್ನು ಸುರಿಸುವುದಕ್ಕೆ ಬಂದನು ಆ ರಾಜಕುಮಾರಿಯು, ಆತನನ್ನು ಓಡಿಸಿ, ನಮ್ಮನ್ನು ರಕ್ಷಿಸುವುದಕ್ಕಾ ಗಿ, ತನ್ನ ಸಾಮರ್ಥ್ಯವನ್ನೆಲ್ಲಾ ತೋರಿಸಿ, ಓಡಿಸಿದಳು. ಇಂತಹ ಉಪ ಕಾರವನ್ನು ಆಕೆಯು ಮಾಡಜೇಹೋಗಿದ್ದರೆ, ನಾವುಗಳು ಬದುಕುವಹಾ ಗಿರಲಿಲ್ಲ. ಆದರೆ ಆಕೆಯು, ನಿಮ್ಮನ್ನು ಉಳಿಸಿದಹಾಗೆ ಸುಲ್ತಾನನ ಗಡ್ಡ ವನ್ನು ಮೂತ್ರ ಕಾಣಾಡಲಾರದೆ ಹೋದಳು. ಆಕಾಲದಲ್ಲಿ ಉರಿಯು ತಾ ಕಿದುದರಿಂದ ನನ್ನ ಬಲಗಣ್ಣು ಕುರುಡಾಯಿತು. ಅದು ಬೆಂಕೆಯಲ್ಲಿ ಉರಿ ದುಹೋಯಿತು. ಆ ಜೋಜೊ ಸರದಾರನು, ಬೆಂಕೆಯಲ್ಲಿ ಬಿದ್ದು ಸತ್ತು ಹೋದನು. ಅಷ್ಟರಲ್ಲಿ ಜಯಜಯವೆಂಬ ಶಬ್ದವು ಕೇಳಬಂದಿತು. ಅದನ್ನುಕೇಳಿ ನಮಗೆ ಭಯವುಂಟಾಯಿತು.

ಆದರೆ ಕೂಡಲೆ ರಾಜಪುತ್ರಿಯು, ಸ್ವಲ್ಪಹೊತ್ತಿಗೆ ಸ್ವಸ್ವ ರೂಪವನ್ನು ತಾಳಿ ಹೊರಟುಬಂದಳು. ರಾಕ್ಷಸನು ಬೂದಿಯಾದನು. ರಾಜಕುಮಾರಿಯು ಅಲ್ಲಿಗೆ ಬಂದಕೂಡಲೇ ನೀರನ್ನು ತೆಗೆದುಕೊಂಡು ಅಭಿ ಮಂತ್ರಿಸಿ, ನಿನ್ನವಿಕಾರವಾದ ಈ ರೂಪವನ್ನು ತೊರೆದು, ಮೊದಲಿನ ಮನುಷ್ಯರೂಪವನ್ನು ತಾಳು, ಎಂದು ಮಂತ್ರವನ್ನು ಜಪಿಸುತ್ತಾಹೇಳಿ ಆ ನೀರನ್ನು ನನ್ನಮೇಲೆ ಚೆಲ್ಲಿದಳು. ಆಗ ನಾನು ಮನುಷ್ಯಾಕಾರವ ನ್ನು ಹೊಂದಿ, ಆ ರಾಜಕುಮಾರ್ತೆಗೆ ನಮಸ್ಕರಿಸುವುದಕ್ಕೆ ಹೋದೆನು. ಆಕೆ ಜೀಡವೆಂದು ಹಿಂದಕ್ಕೆಸರಿದು, ತಂದೆ ! ನಾನು ರಾಕ್ಷಸನಸಂಗಡ ಯು ದ್ಧಮಾಡಿದುದನ್ನು ನೀವೆಲ್ಲರೂ ನೋಡಿರುವಿರಲ್ಲಾ ಅದರಿಂದುಂಟಾದ ಪ್ರ ಯಾಸದಿಂದ ನಾನಿನ್ನು ಕೊಂಚಕಾಲದಲ್ಲಿ ಮರಣವನ್ನು ಹೊಂದುವೆನು. ಆದುದರಿಂದ ನೀವು ಮೊದಲು ಹೇಳಿದಂತೆ ನನಗೂ, ಈತನಿಗೂ, ವಿವಾಹ ವನ್ನು ನೆರವೇರಿಸಬಿಡಿ. ನಾನು ಕೋಳಿಯಾಗಿ ದಾಡಿಮೀಬೀಜಗಳನ್ನು ತಿನ್ನುವಾಗ್ಗೆ ಕೊನೆಯೆಡಾಗಿ ನೀರಿನಲ್ಲಿ ಉರುಳಿಹೋದ ಬೀಜವನ್ನು ನಾನುಮಾತ್ರ ತಿಂದುಬಿಟ್ಟದ್ದರೆ, ಇಂತಹ ಘೋರವಾದ ಆಪದವು ನನ ಗೆಂದಿಗೂ ಉಂಟಾಗುತ್ತಿರಲಿಲ್ಲ. ಅದು ಕೈ ಸೇರದೇ ಹೋದುದರಿಂದ ನಾನು ಅಗ್ನಿ ರೂಪದಿಂದ ಯುದ್ಧವನ್ನು ಮಾಡಿ, ಆ ರಾಕ್ಷಸನ ಬಲವನ್ನು ಕುಂ

ದಿಸಿ ಕೊಂದು ಹಾಕಿದೆನು. ಈಗ ನಾನು ಬದುಕುವುದು ತುಂಬ ತೊಂದರೆಯಾಗಿದೆ, ಎಂದು ಹೇಳಿದಳು. ಅಷ್ಟರಲ್ಲಿ ಬೆಳಗಾದುದರಿಂದ ಷಹರ ಜಾದಿಯು, ಕಥೆಯನ್ನು ನಿಲ್ಲಿಸಿದಳು. ಸುಲ್ತಾನನು, ರಾಣಿಯನ್ನು ಕೊಂಡಾಡಿ, ಚಮತ್ಕಾರವಾಗಿರುವ, ಈ ಕಥೆಯನ್ನು ನಾಳೆಯರಾತ್ರಿಗೆ ಪೂರ್ತಿಮಾಡಬೇಕೆಂದು, ಹೇಳಿ ಹೊರಟುಹೋದನು.

೫೨ ನೆಯ ರಾತ್ರಿ ಕಥೆ.

ಆನಂತರ ಆ ರಾಜಪುತ್ರಿಯ ಸ್ಥಿತಿಯು ಏನಾಯಿತೊ ಅದನ್ನು ತಿಳಿದುಕೊಳ್ಳಬೇಕೆಂಬಭಿಲಾಷೆಯಿಂದ, ದಿನರಜಾದಿಯು ಬೆಳಗಿನ ಜಾವಕ್ಕೆ ಸರಿಯಾಗಿ ಎದ್ದು, ಷಹರಜಾದಿಯನ್ನು ಕುರಿತು, ಅಕ್ಕಾ ! ನಿನಗೆನಿದ್ರೆಬಾರದೆ ಇದ್ದರೆ, ಆ ಯರಪನೆ ಕಾಂಲೆಂಡರಿನ ಕಥೆಯನ್ನು ಪೂರ್ತಿ ಹೇಳುವವರೆಗೂ, ನನ್ನ ಮನಸ್ಸು ಸಮಾಧಾನ ಸ್ಥಿತಿಯನ್ನು ಹೊಂದಲಾರದು. ಆದಕಾರಣ ದಯೆಮಾಡಿ ನನ್ನ ಪ್ರಾಣವನ್ನುಳುಹಿಂದ, ಬೇಡಿಕೊಳ್ಳಲು, ಷಹರಜಾದಿಯು ತಂಗಿಯ ಮೇಲಣ ವಿಶ್ವಾಸದಿಂದಲೂ, ಸುಲ್ತಾನನ ಪ್ರೀತಿಯನ್ನು ಸಂಪಾದಿಸ ಬೇಕೆಂಬ ಅಪೇಕ್ಷೆಯಿಂದಲೂ; ಮುಂಗಥೆಯನ್ನು ಹೇಳಲಾರಂಭಿಸಿದಳು. ಬಳಿಕ ಎರಡನೆ ಕಾಲೆಂಡರು ಜೋಬದಿಯನ್ನು ಕುರಿತು, ಅಮ್ಮಾ ! ಆರಾಜಪುತ್ರಿಯು ಪೂರ್ತಿಯಾಗಿ ತನಗೂ, ರಾಕ್ಷಸನಿಗೂ ನಡೆದ ಯುದ್ಧ ವಿಷಯವನ್ನು ನಿವರಿಸುವ ವರೆಗೂಸುಮ್ಮನಿದ್ದು, ಬಳಿಕ ಆಕೆಯನ್ನು ಅಮ್ಮಾ ! ನಿನ್ನನ್ನು ನೋಡುತ್ತಿರುವ ನಿನ್ನ ತಂದೆಯು ಇನ್ನು ಪ್ರಾಣದಿಂದಿರುವನಲ್ಲಾ ! ಅಯ್ಯೋ ! ಪ್ರೀತಿಪಾತ್ರಳಾದ ನಿನ್ನನ್ನು ಇಂತಹ ದುರವಸ್ಥೆಗೆ ತಂದ ನಾನು, ಆಖೊಜಾನರದಾರನಂತೆ ಆಗ್ನಿಯಲ್ಲಿ ಉರಿದು ಬೂದಿ ಆಗಲಿಲ್ಲವೆ ? ಎಂದು ಅಳುತಾ ವ್ಯಸನವನ್ನು ಹೊಂದಿದನು. ಅಲ್ಲದೆ ಅಭೂತವು ಅಗ್ನಿರೂಪದಿಂದಾವರಿಸಿಕೊಂಡು, ನಮ್ಮ ಳನ್ನು ಸುಡುತ್ತಿರುವಕಾಲದಲ್ಲಿ ನಮ್ಮನ್ನು ಆ ಮಹಾಪತ್ತಿನಿಂದ ಬಿಡಿಸಿ ಕೊಂಡಾಗ, ಈ ರಾಜಪುತ್ರನು ನೀನು ಮಾಡಿದ ಉಪಕಾರಕ್ಕಾಗಿ, ನಿನ್ನನ್ನು ನೋಡಿ ಕೊಂಡಾಡಿದನಲ್ಲಾ ! ಎಂದು ನಾನಾ ವಿಧವಾಗಿ ಪ್ರಲಾಪಿಸುತ್ತಿರುವಷ್ಟರಲ್ಲಿ, ಚಿತನು ಅಯ್ಯೋ ! ನಾನು ಭೂಮಿಯೊಳಗೆ

ಗುತ್ತಿರುವೆನು, ಅಯ್ಯೋ! ನಾನು ಉರಿದುಹೋಗುತ್ತಿರುವೆನೆಂದು, ಕೂಗಿ ಕೊಂಡನು.

ಹಾಗೆಯೆ ಆ ರಾಜಪುತ್ರಿಯು ಸಾಯುವವರೆಗೂ, ಆತನಿಗೆ ನೋವಾಗುತ್ತಲಿ ಇದ್ದಿತು, ಆದುದರಿಂದ ಆತನು ಅಯ್ಯಾ! ನಾನು ಉರಿದು ಹೋಗುವೆನು. ಹಾ ! ಹಾ ! ನಾನು ಉರಿದು ಹೋಗುವೆನೆಂದು, ಕೂಗಿ ಕೊಳ್ಳುತ್ತಿರಲು, ಆತನಜ್ವಾಲೆಯು, ರಾಜಪುತ್ರಿಗೆ ತಗಲಿ ಒಂದು ಕ್ಷಣದ ಲ್ಲಿಯೆ ರಾಕ್ಷಸನು, ಉರಿದು ಹೋದಂತೆ, ಅವಳೂ ಭಸ್ಮೀಭೂತಳಾದಳು. ಅಮ್ಮಾ ! ಆ ಘೋರವಾದ ಮರಣವನ್ನು ನೋಡಿ, ನನಗೆ ತುಂಬ ವ್ಯಸನವುಂಟಾಯಿತು. ಅಲ್ಲದೆ ನನಗೆ ಉಪಕಾರಮಾಡಿ, ಮೊದಲಿನಂತೆ ಮನುಷ್ಯರೂಪವನ್ನು ಬರಮಾಡಿದ, ಆ ರಾಜಪುತ್ರಿಯು, ನನ್ನ ಕಣ್ಣೆದುರಿಗೆ ಉರಿದು ಹೋಗುತ್ತಿರುವುದನ್ನು ನೋಡುವುದಕ್ಕಿಂತಲೂ, ನಾನು ಮೊದಲು ಹೊಂದಿದ್ದ ವಾನರರೂಪದಿಂದಲೇ ನನ್ನ ಅಯುಸ್ಸನ್ನು ಕಳೆದುಕೊಳ್ಳುವುದೇ ಉತ್ತಮವೆಂದೆಂದುಕೊಂಡೆನು. ಇಂಥ ಆನಾಜ್ಞಾನಸ ಗೋಚರವಾದ ವ್ಯಸನವನ್ನು ಹೊಂದಿದ, ಸುಲ್ತಾನನು, ಎದೆಯೆನ್ನು ಹೊಟ್ಟೆಯನ್ನು ಗಟ್ಟಿಯಾಗಿ ಹೊಡೆದುಕೊಳ್ಳುತ್ತಾ, ಮೂರ್ಛಾಕ್ರಾಂತನಾದನು ಅದನ್ನುನೋಡಿ, ನನಗೆ ವ್ಯಸನಾಸ್ಪದವಾದುದಲ್ಲದೆ, ಸುಲ್ತಾನನು ಸತ್ತು ಹೋಗುವನೋ ಏನೋ ಎಂದೆಂದುಕೊಂಡು, ಆತನು ಅಳುತ್ತಿರುವ ಧ್ವನಿಯನ್ನು ಕೇಳಿ ಆತನ ಸೇವಕಾಳಿಯು ಬೋಜಾಸರದಾರರು, (ಮಹಮ್ಮದೀಯ ಸುಲ್ತಾನರ ರಾಣೀವಾಸವನ್ನು ಕಾಯುವ ನಪುಂಸಕರು.) ಅಲ್ಲಿಗೆ ಬಂದು, ಅತ್ಯಂತಪ್ರಯಾಸದಿಂದ ಆತನ ಮೂರ್ಛೆಯನ್ನು ಹೋಗಲಾಡಿಸಿದರು. ಅವರಿಗೆ ಉಂಟಾದ ನಷ್ಟವನ್ನುಕುರಿತು, ನಾನಾಗಲಿ ಅಥವಾ ರಾಜನಾಗಲಿ ತಿಳಿಯಹೇಳಬೇಕಾದ ಅಗತ್ಯವೇನೂ ಇರಲಿಲ್ಲ. ಉರಿದು ಭಸ್ಮೀಭೂತರಾಗಿ ಬಿದ್ದಿರುವ ರಾಜಪುತ್ರಿಯನ್ನೂ, ರಾಕ್ಷಸನನ್ನೂ, ನೋಡಿದ ಕೂಡಲೇ ಅವರೇ ಊಹಿಸಿಕೊಂಡರು. ರಾಜನು ಮೇಲಕ್ಕೆ ಏಳುವುದಕ್ಕೆ ಸ್ವಲ್ಪವೂ ಶಕ್ತಿಯುಳ್ಳವನಾಗಿರಲಿಲ್ಲವಾದುದರಿಂದ, ಆ ಬೋಜಾಸರದಾರರು, ಆತನನ್ನು ಅಂತಃಪುರಕ್ಕೆ ಕರೆದುಕೊಂಡು ಹೋದರು. ರಾಜಕುಮಾರಿಯು, ಹತ್ತುಹೋದಳೆಂಬ ವರ್ತಮಾನವನ್ನು ನಗರದಜನರಲ್ಲಿ [illegible], ಕೃತ್ರಿಮವಾದ ಮುಖವಿನ್ಯಾಸವನ್ನುಹೊಂದಿ, ರಾಜನಿಗಿಂತಲೂ, ಹೆಚ್ಚಾಗಿ

ಗಿಯೆ ವ್ಯಸನಾಕ್ರಾಂತರಾದರು. ಬಳಿಕ ಆ ರಕ್ಕಸನ ಬೂದಿಯೆನ್ನು, ಗಾಳಿಯಲ್ಲಿ ತೂರಿಬಿಟ್ಟು, ರಾಜಪುತ್ರಿಯೆ ಭಸ್ಮವನ್ನು ದಿವ್ಯವಾದಪೆಟ್ಟಿಗೆಯೊಳ್ಗಿಹಾಕಿ, ಅದನ್ನು ರಾಜೌಹಾರ್ದವಾದ ಅಂದವಾಗಿರುವ ಒಂದು ಗೋರಿಯೆಲ್ಲಿ ಸ್ಥಾಪನೆಮಾಡಿದರು. ರಾಜನು ಪುತ್ರಶೋಕದಿಂದ ನರಳುತ್ತಾ ಒಂದು ತಿಂಗಳವರೆಗೂ, ತನ್ನ ಕೊಠಡಿಯೆಲ್ಲಿ ಇದ್ದು, ಸಾಯುವುದಕ್ಕೆ ರಡುದಿನ ಮುಂಚಿತವಾಗಿ, ನನ್ನನ್ನುಕರೆಸಿ, ರಾಜಪುತ್ರನೆ ನಿನಗೆ ನಾನೊಂದು ಮೂತನ್ನು ಹೇಳಬೇಕಾಗಿರುವುದು, ನೀನು ಆ ರೀತಿಯೊಗಿ ಮಾಡಿದರೇ ಹೊರತು, ಇಲ್ಲವಾದರೆ ನಿನ್ನಪ್ರಾಣವು ಉಳಿಯುವುದಿಲ್ಲವೆಂದು, ಹೇಳಲು, ನಾನು ನೀವುಹೇಳಿದಂತೆ ಮಾಡುತ್ತೇನೆಂದು ಹೇಳಿದೆನು. ರಾಜನು ನನ್ನನ್ನುನೋಡಿ, ಅಯ್ಯಾ ! ನೀನು ನನ್ನರಾಜ್ಯಕ್ಕೆ ಬಂದಕೂಡಲೆ ನನ್ನಸೌಖ್ಯವೂ ನಾಶವಾಯಿತು. ಅಲ್ಲದೆ ಈಗ ರಾಜಪುತ್ರಿಯೆನ್ನು ಕಳೆದುಕೊಂಡು, ನಾನುಕೂಡ ಸಾಯುವಂತಹ ದುರವಸ್ಥೆಯೆನ್ನು ಹೊಂದಿರುವುದನ್ನು ನೀನು ನೋಡುತ್ತೀಯಲ್ಲ ! ನನ್ನ ದುರವಸ್ಥೆಯು ದಿನೆದಿನೆ ಹೆಚ್ಚಾಗುತ್ತಿರುವುದೇ ಹೊರತು, ಅದಕ್ಕೆಂದಿಗೂ ವಿಚ್ಛಿತ್ತಿಯುಂಟಾಗಲಿಲ್ಲ. ಇದಕ್ಕೆಲ್ಲ ನೀನೇ ಕಾರಣನಾಗಿರುವೆ ಎಂಬುದನ್ನು ನಿನ್ನಂತೆ ಸರ್ವರು ಒಪ್ಪಿಕೊಳ್ಳುವರು ಆದುದರಿಂದ ನೀನು ಸ್ವಲ್ಪವೂ ಆಲಸ್ಯಮಾಡದೆ ನನ್ನ ರಾಜ್ಯವನ್ನುಬಿಟ್ಟು ಹೊರಟುಹೋಗಬೇಕು. ಮತ್ತೆಯೂವಾಗಲೂ, ನನ್ನರಾಜ್ಯಕ್ಕೆ ಬರಕೂಡದು. ನೀನು ಹಾಗೆಮಾಡಿದರೆ ಅರ್ಧಪ್ರಾಣದಿಂದಿರುವ ನಾನು ಬದುಕಿಕೊಂಡರೂ, ಬದುಕಬಹುದು ಆದುದರಿಂದ ನೀನು, ಬದುಲುಹೇಳದೆ ಶೀಘ್ರವಾಗಿ ಇಲ್ಲಿಂದ ಹೊರಟುಹೋಗು. ನಿಲ್ಲಬೇಡ ಮತ್ತೆ ಪುನಶ ನನ್ನರಾಜ್ಯಕ್ಕೆ ಬರಬೇಡವೆಂದು ಹೇಳಿದನು.

ಅದಕ್ಕೆ ನಾನು, ಕೆಲವು ಮೂತುಗಳನ್ನಾಡಬೇಕೆಂದು, ಪ್ರಯತ್ನಮಾಡಲು, ಆತನು ಕೋಪಿಸಿಕೊಂಡು, ನನ್ನಬಾಯನ್ನು ಮುಚ್ಚುವಂತೆ, ಮಾಡಿದನು. ಬಳಿಕ ನಾನು ಅಲ್ಲಿಂದಹೊರಟು ಮಹಾ ವ್ಯಸನಾಕ್ರಾಂತನಾಗಿ, ನಗರಿಗೆಬಂದು ಗಡ್ಡನನ್ನು ಕಣ್ಣುಹುಬ್ಬುಗಳನ್ನು ಬೋಳಿಸಿ, ಅತ್ಯಂತ ವ್ಯಸನದಿಂದ ನರಳುತ್ತಾ, ಆ ಇಬ್ಬರು ರಾಜಪುತ್ರಿಯರ ಮರಣಕ್ಕೂ, ನಾನೇಕಾರಣನಾಗಿ, ಲೋಕ ಬಹಿಷ್ಕೃತನಾದುದರಿಂದ

ಮತ್ತಷ್ಟು ಉತ್ಕಿ ಬರುವ ವ್ಯಸನವನ್ನು ತಾಳಲಾರದೆ, ನಾನಾಕಷ್ಟನಷ್ಟ ಗಳನ್ನು ಅನುಭವಿಸುತ್ತಾ ಅಲ್ಲಿಂದಹೊರಟು ಪ್ರಯಾಣವೂಡುತ್ತಾ ಬಂದು ಬಾಗದಾದು ಪಟ್ಟಣವನ್ನು ಸೇರಿ, ಕಲೀಫರಲ್ಲಿ ನನ್ನ ದೌರ್ಭಾಗ್ಯವನ್ನು ಹೇಳಿಕೊಂಡು, ಅವರದಯೆಕ್ಕೆ ಪಾತ್ರನಾಗಬೇಕೆಂದು, ಬರುತಾ ನನ್ನಂ ತೆ ಸನ್ಯಾಸಿಯೊಗಿರುವ, ಮೊದಲುಕಥೆಯನ್ನು ಹೇಳಿದ ಈ ಕಾಲಿಂಡರ ನ್ನು ಕಂಡೆನು. ಅಮ್ಮಾ ! ಆಬಳಿಕ ನಾನಿಲ್ಲಿಗೆಬಂದದ್ದು, ಅದಕ್ಕೆತಕ್ಕಂ ತೆ ತಾವುಮಾಡಿದ ಗೌರವವೂ, ತಮಗೆ ತಿಳಿದಿರುವುದೆಂದು ಹೇಳಿದನು.

ಈ ತೆರದಿಂದ ಎರಡನೆ ಕಾಲಿಂಡರು, ತನ್ನ ಕಥೆಯನ್ನು ಹೇಳಿ, ಮುಗಿಸಲು, ಜೋಬದಿಯು, ಅವನನ್ನು ನೋಡಿ, ನಿನ್ನ ಇಷ್ಟಾನುಸಾ ರವಾಗಿ ಹೊರಟು ಹೋಗು ಎಂದು ಹೇಳಲು, ಅಮ್ಮಾ ! ಮೊದಲನೆ ಕಾ ಲಿಂಡರಂತೆ ಮುಂದೆನಡೆಯುವ, ಕಥೆಯನ್ನು ಕೇಳಬೇಕೆಂಬ ಅಭಿಲಾಷೆ ನನಗೂ ಇರುವುದರಿಂದ ತಾವು ದಯವೂಡಿ, ನನಗೂ, ಆತನಂತೆ ಇಲ್ಲಿ ಇರುವುದಕ್ಕೆ ಅಪ್ಪಣೆಮೂಡಬೇಕೆಂದು, ಹೇಳಿ ಕೂತುಕೊಂಡನು. ಅಷ್ಟ ರಲ್ಲಿ ಷಹರಜಾದಿಯು, ಕಥೆಯನ್ನು ನಿಲ್ಲಿಸಿ, ಸುಲ್ತಾನರೇ ! ಸೂರ್ಯೋ ದಯವಾಯಿತು. ಎರಡನೆ ಕಾಲಿಂಡರಿನ ಕಥೆಯು ಮುಗಿಯಿತು. ತಾವು ದಯವಮಾಡಿ, ನನಗೆ ಆಯುರ್ವೃದ್ಧಿಯನ್ನುಂಟುಮಾಡಿದರೆ, ಇದಕ್ಕಿಂತ ಲೂ ಅತಿಶಯವಾದ ಮೂರನೇ ಕಾಲಿಂಡರಿನ ಕಥೆಯನ್ನು ನಾಳೆಯದಿನ, ಹೇಳಿ, ಪೂರ್ತಿಮಾಡುವೆನೆಂದು, ಹೇಳಲು, ಸುಲ್ತಾನನು, ಆ ಕಥಾಸಾ ರಸ್ಯವನ್ನು ಕೇಳಬೇಕೆಂದು, ಸುಲ್ತಾನಿಯೆನ್ನು ಕೊಲ್ಲದಂತೆ ಆಜ್ಞೆಮೂ ಡಿ, ಹೊರಟು ಹೋದನು.

ಹನ್ನೆರಡನೆಯ ರಾತ್ರಿ ಕಥೆ.

ದಿನರಜಾದಿಯು, ಮರುದಿನ ಬೆಳಗಿನಜಾವಕ್ಕೆ ಸ್ವಲ್ಪಹೊತ್ತಿ ರುವಾಗಲೇ ಎದ್ದು, ಷಹರಜಾದಿಯೆನ್ನು ಕರಿತು, ಅಕ್ಕಾ ! ನೀನು ಓದಿರುವ ಕಥೆಗಳಲ್ಲಿ ಅತ್ಯಂತ ವಿನೋದವಾದ ಮತೊಂದು ಕಥೆಯನ್ನು ಹೇಳೆಂದು ಕೇಳಲು, ಷಹರಜಾದಿಯು, ಸುಲ್ತಾನರಿಂದಪ್ಪಣೆಯನ್ನು ಹೊಂದಿ, ಮೂರನೇ ಕಾಲಿಂಡರಿನ ಕಥೆಯನ್ನು ಹೇಳಲಾರಂಭಿಸಿ ಸುಲ್ತಾ

ನರೇ ! ಬಳಿಕ ಮೂರನೇ ಕಾಲೆಂಡರು, ಜೋಬದಿಯೆನ್ನು ನೋಡಿ, ಉಳಿದವರಂತೆ ತಾನು ಕಥೆಯೆನ್ನು ಹೇಳಲಾರಂಭಿಸಿದನು.



ರಾಜಪುತ್ರನಾದ ೩ನೆಯ ಕಾಲೆಂಡರಿನ ಕಥೆ



ಮಹಾ ಘನವಂತೆಯಾದ ದೊರೆಸಾನಿಯೇ ! ನೀನಿದುವರೆಗೂ, ಕೇಳಿದ ಚರಿತ್ರೆಗಳಂತೆ, ನನ್ನ ಕಥೆಯೂ ಇರುವುದೆಂದು ಭಾವಿಸಬೇಡ. ನನಗಿಂತಲೂ, ಮೊದಲುಕಥೆಗಳನ್ನು ಹೇಳಿದ ಈಕಾಲೆಂಡರುಗಳ ಒಂದೊಂದು ಕಣ್ಣು ಕುರುಡಾದುದು ಅವರವರ ಅದೃಷ್ಟಪೂರ್ವಕವೇ ಹೊರತು, ಮತ್ತು ಬೇರೆಯೆಲ್ಲ. ನನ್ನ ಕಣ್ಣಾದರೋ ಸ್ವಯಂಕೃತಾಪರಾಧದ ಬಲುವೆಯಿಂದ ಹೀಗಾಯಿತು. ನನ್ನ ಚರಿತ್ರೆಯನ್ನು ಸಂಪೂರ್ಣವಾಗಿ, ಕೇಳುವುದರಿಂದ ನಿನಗೀ ವಿಷಯವು ತಿಳಿಯದೆ ಇರಲಾರದು. ನನ್ನ ಹೆಸರು ಎಜೀಬು, ಕಾಸೀಪನೆಂಬರಾಜನೆ ನನ್ನತಂದೆ, ಆತನು ಸತ್ತುಹೋದ ಮೇಲೆ ನಾನು ರಾಜ್ಯವನ್ನು ಸ್ವಾಧೀನಪಡಿಸಿಕೊಂಡು, ಆಳುತ್ತಿದ್ದೆನು. ನನ್ನ ರಾಜಧಾನಿಯು, ಸಮುದ್ರತೀರದಲ್ಲಿದ್ದುದರಿಂದ ಬಹು ಭದ್ರವಾಗಿಯೂ, ಅಂದ ಸುಂದರವಾಗಿಯೂ, ಇದ್ದಿತು. ಸಮುದ್ರಮುದ್ಯದಲ್ಲಿ ಸದಾ ಸಿದ್ಧವಾಗಿ ನಿಂತಿರುವ ನೂರೆಂಟು ಹಡಗುಗಳಲ್ಲಿ ಸನ್ನದ್ಧವಾಗಿ ಸಿದ್ಧಪಡಿಸುವುದೆ ಅನುಕೂಲವಾದ ಆ ಯುದ್ಧಶಾಲೆಯೊಂದುಂಟು. ಇವು ಅಲ್ಲದೆ ವ್ಯಾಪಾರಕ್ಕೆ ಅನುಕೂಲವಾದ ಎಂಟು ಹಡುಗುಗಳೂ, ಯುದ್ಧಕಾಲದಲ್ಲಿ ಉಪಯೋಗಕ್ಕೆಬರುವ ಸಣ್ಣ ಹಡಗುಗಳೂ, ವಿನೋದವಾಗಿ ಸಮುದ್ರದಲ್ಲಿ ಪ್ರಯೋಣಮಾಡುವುದಕ್ಕೆ ಯೋಗ್ಯವಾಗಿರುವ ಸಣ್ಣದೋಣಿಗಳೂ, ನನ್ನರಾಜ್ಯದಲ್ಲಿ ಉತ್ತಮವಾದ ಅನೇಕ ತಾಲ್ಲೂಕುಗಳೂ, ಸಮುದ್ರದಲ್ಲಿ ಫಲವತ್ತಾದ ದ್ವೀಪಗಳೂ, ಇದ್ದುವಲ್ಲದೆ, ನನ್ನ ರಾಜಧಾನಿಯೆಲ್ಲಿದ್ದು, ನೋಡಿದರೆ ಇವೆಲ್ಲವೂ ಕಣ್ಣಿಗೆ ಕಾಣುತ್ತಾ ಇದ್ದವು. ಮೊದಾ

ಲನೆಸಾರಿ ನಾನು ರಾಜ್ಯವನ್ನು ನೋಡುವುದಕ್ಕೆ ಹೊರಟು ದೇಶವನ್ನೆಲ್ಲಾ ಸುತ್ತಿಕೊಂಡು, ಪ್ರಜೋಪಕಾರವಾದ ಕಾರ್ಯಗಳನ್ನುವೂಡಿ, ದ್ವೀಪಾಂತರಕ್ಕೆ ಹೋಗಿ ಕೆಲವುದಿನ ವಿನೋದವಾಗಿ ಸಂಚರಿಸಿ, ಮತ್ತೆ ರಾಜಧಾನಿಯನ್ನು ಸೇರಿದೆನು. ಇಷ್ಟರಲ್ಲಿ ಯುದ್ಧದಹಡಗನ್ನು ತಯಾರುವೂಡುವ ವಿನೋದವನ್ನು ನೋಡುವುದಕ್ಕೆ ಹೋಗಬೇಕೆಂದು, ನಾವೆಯನ್ನು ಸಿದ್ಧವೂಡಿಕೊಂಡು, ತೆರಳಿದೆನು. ಆ ದ್ವೀಪವನ್ನುಸೇರಿ, ಅಲ್ಲಿ ಹತ್ತು ದಿನಗಳವರೆಗೆ ವೂಡಬೇಕಾಗಿರುವ ಕೆಲಸಗಳನ್ನೆಲ್ಲಾ ಪೂರ್ತಿವೂಡಿಕೊಂಡು, ವಿನೋದದಿಂದ ಕಾಲವನ್ನು ಕಳೆಯುತ್ತಿರುವಲ್ಲಿ ಹತ್ತನೆಯದಿನದಲ್ಲಿ ಗಾಳಿಯು ಅಧಿಕವಾಗಿಬೀಸುತ್ತಿದ್ದುದರಿಂದ ನಾವಿದ್ದಹಡಗು, ಅಲ್ಲೊಲ್ಲೋಲ ಕಲ್ಲೊಲ್ಲೋಲವಾಗಿ ನಡುಗುತ್ತಿತ್ತು. ಆಗ ನಾವ್ಗಳೆಲ್ಲರೂ, ಮುಳುಗಿಹೋಗುವಂತಿದ್ದೆವು.

ಮರುದಿನ ಗಾಳಿಯು, ನಿಂತು ಆಕಾಶವು ನಿರ್ಮಲವಾದುದರಿಂದ ಹತ್ತಿರದಲ್ಲಿದ್ದ ಒಂದಾನೊಂದು ದ್ವೀಪವನ್ನುಸೇರಿ, ಅಲ್ಲಿಗೆ ಆಹಾರ ಪದಾರ್ಥಗಳನ್ನು ಸಿದ್ಧವೂಡಿಕೊಳ್ಳುವುದಕ್ಕಾಗಿ, ಎರಡು ಮೂರುದಿನಗಳು ತಂಗಿ, ಪುನಹ ಸಮುದ್ರದಮೇಲೆ ಹೊರಟು, ಹತ್ತುದಿನಗಳು ಪ್ರಯಾಣ ವೂಡಿದ ಬಳಿಕ, ಭೂಮಿಯೆನ್ನು ನೋಡಬಹುದೆಂದು, ಯೋಚಿಸಿದೆನು. ಹೇಗಂದರೆ ಗಾಳಿಯು, ಕಡಿಮೆಯಾದುದರಿಂದ ಮುಂದೆಹೋಗಲು, ಇಷ್ಟವಿಲ್ಲದೆ, ರೇವನ್ನು ಹುಡುಕಿ ಹಡಗನ್ನು ನಿಲ್ಲಿಸುವಂತೆ, ನಾವಿಕನಿಗೆ ಆಜ್ಞಾಪಿಸಿದೆನು. ಆದರೆ, ಆ ಕಾಲದಲ್ಲಿ ನಾವ್ಗಳು ಇಂತಹ ದಿಕ್ಕಿನಲ್ಲಿರುವೆವೆಂಬುದು, ನಮ್ಮ ನಾವಿಕನಿಗೆ ತಿಳಿಯದೆಹೋಯಿತು. ಹತ್ತು ದಿನಗಳಾದಮೇಲೆ ಧ್ವಜಸ್ತಂಭವನ್ನುಹತ್ತಿ ಸುತ್ತಲೂನೋಡಿ, ಭೂಮಿಯು, ಯಾವಕಡೆಯಾದರೂ ಕಾಣುವುದೇ ನೋಡೆಂದು ಹೇಳಿದೆನು. ಆತನು ನಮ್ಮ ಹಡಗಿಗೆ ಎರಡುಕಡೆಯೆಲ್ಲಿಯೂ, ಸಮುದ್ರವೂ, ಆಕಾಶವೂ ಕಾಣಬರುತ್ತಿರುವುದೇ ಹೊರತು, ಇದರ ಹಿಂಭಾಗದ ಬಹುದೂರದಲ್ಲಿ ಹಡಗಿಗೆ ಸಮನಾಗಿ ಒಂದು ಕಪ್ಪು ಕಾಣುತ್ತಿರುವುದೆಂದು, ಹೇಳಿದನು.

ಈ ಮಾತನ್ನುಹೇಳಿ ನಾವಿಕನು, ವಿವರ್ಣಮುಖನಾಗಿ ಒಂದು ಕೈಯಿಂದ ಎದೆಯನ್ನು ಹೊಡೆದುಕೊಳ್ಳುತ್ತಾ, ಸಾಹ್ವಿಯಾ ! ನಾವೆಲ್ಲರೂ,

ಸಾಯುವಕಾಲಬಂದಿತು. ಒಬ್ಬರಾದರೂ ಬದುಕುವಹಾಗೆ ಕಾಣಬರುವುದಿಲ್ಲವೆಂದು, ಹೇಳುತ್ತಾ, ಮುಂದೆಬರುವ ಆಪತ್ತನ್ನು ಮೊದಲೆ ತಿಳಿದುಕೊಂಡವನಂತೆ, ಅಳುವುದಕ್ಕೆ ಪ್ರಾರಂಭಿಸಿದನು. ಆತನು ನಿರಾಶೆಯನ್ನು ಹೊಂದಿದುದರಿಂದ ಆ ಹಡಗಿನಲ್ಲಿದ್ದವರೆಲ್ಲರೂ, ವಿಶೇಷವಾಗಿ ಭಯವನ್ನು ಹೊಂದಿದರು. ಆಗ ನಾನು ನಾವಿಕನನ್ನುನೋಡಿ, ನೀನು ಹೀಗೆ ಧೈರ್ಯವನ್ನು ತೊರೆದು, ವ್ಯಸನಾಕ್ರಾಂತನಾಗುವುದಕ್ಕೆ ಕಾರಣವೇನೆಂದು, ಕೇಳಲು, ಅಯ್ಯಾ ! ನಾವು ದಾಟಿಕೊಂಡುಬಂದ ಬಿರುಗಾಳಿಯು, ನಮ್ಮನ್ನು ದಾರಿತಪ್ಪಿಸಿ, ನಮ್ಮನ್ನು ಬಹುದೂರದವರೆಗೂ, ತೆಗೆದುಕೊಂಡು ಬಂದಿರುವುದಾದುದರಿಂದ ನಾಳೆ ಮಧ್ಯಾನ್ಹಕ್ಕೆ ಆ ಕರಿಯೆ ಗುಡ್ಡದ ಬಳಿಗೆ ನಾವು ಹೋಗಬೇಕಾಗಿರುವುದು, ಅದು ದೊಡ್ಡದಾದ ಒಂದುಕರಿಯೆ ಸೂಜಿಗಲ್ಲಿನ ಪರ್ವತವಾಗಿರುವುದರಿಂದ, ತಮ್ಮ ಸ್ವಭಾವದಂತೆ ನಮ್ಮ ಹಡಗಿನಲ್ಲಿರುವ ಕಬ್ಬಿಣವನ್ನು ಎಳೆದುಕೊಂಡು, ಬಿಡುವುದು. ನಾಳೆನಾವುಗಳು ಅದರಹತ್ತಿರಕ್ಕೆ ಹೋದಕೂಡಲೆ ಹೀಗಾಗುವುದರಿಂದ, ಹಡಗು ಭಾರವಾಗಿ ಮುಳುಗಿಹೋಗುವುದು. ಸೂಜಿಗಲ್ಲು, ಕಬ್ಬಿಣವನ್ನು, ಎಳೆದುಕೊಳ್ಳುವ ಶಕ್ತಿಯನ್ನುಂಟಾಗಿರುವುದರಿಂದಲೆ, ಆ ಪರ್ವತವು ಅನೇಕವಾದ ಹಡಗುಗಳ ಚೂರಿನಿಂದ ತುಂಬಿಹೋಗಿರುವುದು.

ಈ ಪರ್ವತವು ಯಾವಾಗಲೂ, ಹೀಗಿರಲಿಲ್ಲ. ಅದರ ಶಿಖರದಲ್ಲಿ ಉತ್ತಮವಾದ ಶಿಲೆಯಿಂದ ಒಂದುಗೋರಿಯನ್ನು ಕಟ್ಟಿರುವುದು, ಅದರ ಕಂಬಗಳೂಕೂಡ, ಅಮೃತಶಿಲೆಯಿಂದ ಮಾಡಿದವುಗಳಾಗಿವೆ. ಆ ಗೋರಿಯಮೇಲೆ ಒಂದು ಕುದುರೆಯೂ, ಅದರಮೇಲೊಬ್ಬ ರಾವುತನೂ, ಸಹ ಶಿಲೆಯಿಂದಲೆ ಮಾಡಲ್ಪಟ್ಟಿರುವರು. ಅಲ್ಲದೆ ಆ ರಾವುತನ ಎದೆಯಮೇಲೆ ಒಂದು ಸೀಸದ ತಗಡನ್ನು ಹೊಡೆದಿರುವರು. ಅದರಮೇಲೆ ಅಕ್ಷರಗಳಿಂದ ಮಂತ್ರವನ್ನು ಒಂದು ಯಂತ್ರವನ್ನು ಬರೆದಿರುವರು. ಇದರ ವಿಷಯದಲ್ಲಿ ಜನರು ಹೇಳಿಕೊಳ್ಳುವುದೇನಂದರೆ ನಾನಾವಿಧವಾದ ಹಡಗುಗಳೂ, ಅದರಲ್ಲಿರುವ ಜನರೂ ಮುಳುಗಿಹೋಗುವುದಕ್ಕೆ ಆ ಬೊಂಬೆಯು ಕಾರಣವಾಗಿದೆ. ಅದು ನೆಲಕ್ಕೆ ಬಿದ್ದುಹೋದ ಹೊರತು, ಅಲ್ಲಿ ಹೋಗುವಜನರಿಗೆ ವಿಪತ್ತು ತಪ್ಪದೆಂದು ಹೇಳಿದನು.

ಆತನು ಹೀಗೆಹೇಳಿ ಇನ್ನು ಅಧಿಕವಾಗಿ ಅಳುವುದಕ್ಕೆ ಪ್ರಾರಂಭಿಸಲು, ಅಲ್ಲಿದ್ದವರೆಲ್ಲರೂ, ಭಯಗ್ರಸ್ತರಾಗಿ ಅಳುವುದಕ್ಕೆ ಪ್ರಾರಂಭಿಸಿ ಬಳಿಕ ತಂತಮ್ಮ ಪ್ರಾಣಗಳನ್ನು ಕಾಪಾಡಿಕೊಳ್ಳುವುದಕ್ಕೆ ತಕ್ಕ ಉಪಾಯವನ್ನು ಯೋಚಿಸಿಕೊಂಡರು. ಇನ್ನು ಕೆಲವರು, ತಮ್ಮ ಪ್ರಾಣಗಳು ಶಾಶ್ವತವಲ್ಲವೆಂದು, ತಿಳಿದು ಮರಣಶಾಸನಗಳನ್ನು ಬರೆದು ಈ ಸಂಘದಲ್ಲಿ ಯಾರಾದರೂ ಉಳಿದುಕೊಂಡರೆ, ಉಪಯೋಗವಾಗಲೆಂದು, ಒಬ್ಬರನ್ನೊಬ್ಬರು ಬಾಧ್ಯಸ್ಥರನ್ನಾಗಿ ಮಾಡಿಕೊಂಡರು.

ಮರುದಿನ ಬೆಳಗಿನ ಹೊತ್ತಿನಲ್ಲಿ ಆ ಕರಿಯೆಗುಡ್ಡವು ಕಾಣಬರಲು, ನಾವಿಕನಮಾತು ನಿಜವೆಂದು, ಅಲ್ಲಿದ್ದವರೆಲ್ಲರೂ, ನಿರಾಶರಾದರು. ಮಧ್ಯಾನ್ಹವಾದ ಕೂಡಲೆ ಹಡಗು ಅದರ ಸಮೀಪಕ್ಕೆ ಬರಲು, ಅದರಲ್ಲಿರುವ ಕಬ್ಬಿಣದ ಭಾಗವು ಆ ಗುಡ್ಡದ ಆಕರ್ಷಣಾಶಕ್ತಿಯಿಂದ ಎಳೆದುಕೊಂಡಿತು. ಕೂಡಲೆ ಪಟಪಟ ಎಂಬ ಶಬ್ದವು ಕೇಳಬಂದಿತು. ಹಡಗು ಆಪರ್ವತಕ್ಕೆ ತಗಲಿಕೊಂಡು ಭಾರವಾಗಿ ಮುಳುಗಿಹೋಯಿತು. ಅಲ್ಲಿದ್ದ ಜನರೆಲ್ಲರೂ, ಸತ್ತರು. ಆದರೆ ಭಗವಂತನು ನನ್ನ ಪ್ರಾಣವನ್ನು ಮಾತ್ರ ಉಳಿಸಿದನು. ನಾನು ಅಲ್ಲಿ ತೇಲುತ್ತಿದ್ದ ಬಂದು ಹಲಗೆಯೆನ್ನು ಹಿಡಿದುಕೊಂಡೆನು. ಇಷ್ಟರಲ್ಲಿ ಗಾಳಿಯು, ಬೀಸಿ ನನ್ನನ್ನು ಆ ಗುಡ್ಡದಬುಡಕ್ಕೆ ತೆಗೆದುಕೊಂಡುಹೋಗಲು, ನನಗೆ ಯಾಪತೊಂದರೆಯೂ ಉಂಟಾಗದೆ, ನಾನು ಭೂಮಿಯಲ್ಲಿ ಇಳಿಯಬಹುದಾದ ಸ್ಥಳವನ್ನು ಸೇರಿದೆನು. ಆ ಸ್ಥಳದಲ್ಲಿಯೇ ಆ ಗುಡ್ಡಕ್ಕೆ ಹತ್ತಿಹೋಗುವ ಸೊಪಾನವೂ ಇದ್ದಿತು. ಬೆಳಗಾಗಿ ಶೋದುದರಿಂದ ಸುಲ್ತಾನರೇ ! ನಾನು ಎಂದಿನಂತೆ ಕಥೆಯನ್ನು ನಿಲ್ಲಿಸಬೇಕಾಗಿರುವುದೆಂದು, ಹೇಳಿ ಷಹರಜಾದಿಯು, ಸುಮ್ಮನಾದಳು. ಸುಲ್ತಾನನು, ವಿನೋದಕರವಾಗಿರುವ ಆಕಥೆಯೆನ್ನು ಪೂರ್ತಿಯಾಗಿ ಕೇಳಬೇಕೆಂದು, ಯಾವಮಾತನ್ನೂ ಆಡದೆ ಹೊರಟುಹೋದನು.

ಸಿರನೆಯ ರಾತ್ರಿಕಥೆ.

ಮರುದಿನ ಬೆಳಗಿನಜಾವದಲ್ಲಿ ದಿನರಜಾದಿಯು, ಎದ್ದು, ಅಕ್ಕನನ್ನು ಕುರಿತು, ಪ್ರಿಯಸಹೋದರಿ ! ನಿನಗೆ ನಿದ್ರಾಬಾರದೆ ಇದ್ದರೆ,

ಆ ಮೂರನೇ ಕಾಲೆಂಡರಿನ ಕಥೆಯನ್ನು ಹೇಳೆಂದು ಕೇಳಲು, ಷಹರಜಾದಿಯು, ತಂಗಿಯನ್ನು ಕುರಿತು, ಕಥೆಯನ್ನು ಹೇಳಲಾರಂಭಿಸಿದಳು.

ಆ ಮೆಟ್ಟಿಲುಗಳ ಹಿಂಭಾಗದಲ್ಲೂ, ಮುಂಭಾಗದಲ್ಲೂ, ಒಬ್ಬ ಮನುಷ್ಯನಾದರೂ, ಕಾಲಿಡುವಷ್ಟು ಸ್ಥಳವಿರಲಿಲ್ಲ. ಆದರೂ, ನನ್ನ ಪ್ರಾಣವನ್ನು ಭಗವಂತನನ್ನು ಧ್ಯಾನಮಾಡುತ್ತಾ, ಆ ಮೆಟ್ಟಿಲುಗಳನ್ನು ಹತ್ತತೊಡಗಿದೆನು. ಆದರೆ ಅವುಗಳು ಕಡಿದಾಗಿಯೂ, ನುಣುಪಾಗಿಯೂ, ಇದ್ದುದರಿಂದ, ಗಾಳಬೀಸಿದರೆ ನಾನು ಸಮುದ್ರದಲ್ಲಿ ಬಿದ್ದುಹೋಗುತ್ತಿದ್ದೆನು. ಆದರೆ ನಾನು ಸುರಕ್ಷಿತವಾಗಿ ಆ ಶಿಖರವನ್ನು ಸೇರಿ ಗೋರಿಯೊಳಕ್ಕೆ ಹೋಗಿ ಮಂಡಿಯೂರಿ ಕುಳಿತುಕೊಂಡು, ನನ್ನ ಪ್ರಾಣವನ್ನುಳಿಸಿದುದಕ್ಕಾಗಿ ಭಗವಂತನಿಗೆ ವಂದನೆಗಳನ್ನು ಮಾಡಿದೆನು. ಆ ರಾತ್ರಿ ಅಲ್ಲೆ ಮಲಗಿಕೊಂಡು, ನಿದ್ರಮಾಡುತ್ತಿರುವಾಗ ನಿದ್ರೆಯಲ್ಲಿ ಒಂದು ಕನಸುಂಟಾಯಿತು. ಗಂಭೀರಸ್ವಭಾವನಾದ ಒಬ್ಬ ಮುಸಲ್ಮಾನ ಮುದುಕನು, ಕನಸಿನಲ್ಲಿ ಬಂದು ನನ್ನನ್ನು ನೋಡಿ ಅಯ್ಯಾ ! ರಾಜಕುಮಾರನೇ ! ನೀನು ಮಲಗಿಕೊಂಡಿರುವ ಸ್ಥಳದಲ್ಲಿ ನಿನ್ನ ಕಾಲಿನಕಡೆ, ನೆಲವನ್ನು ಅಗೆದರೆ, ಅಲ್ಲಿ ಮನುಷ್ಯರಿಗೆಬಂದ ಆಪತ್ತುಗಳನ್ನು ಹೋಗಲಾತಿಸುವ ಉತ್ತಮವಾದ ಬಂದು ಬಿಲ್ಲೂ, ಮೂರು ಸೀಸದಬಾಣಗಳ, ಇರುವುವು. ನೀನದನ್ನು ತೆಗೆದುಕೊಂಡು, ಆ ಕುದುರೆಯಮೇಲೆ ಹಾಕಿದರೆ, ಅದರಮೇಲಿರುವ, ಮನುಷ್ಯನು ಸಮುದ್ರದಲ್ಲಿ ಬಿದ್ದುಹೋಗುವನು. ಕುದುರೆಯು ನಿನ್ನಪಕ್ಕದಲ್ಲಿನೀರ ಬೀಳುವುದು. ನೀನು ಆ ಬಿಲ್ಲುಬಾಣಗಳನ್ನು ತೆಗೆದುಕೊಂಡು, ಆ ಸ್ಥಳವನ್ನೇ ನೋಡುತ್ತಾ ಇದ್ದರೆ, ಸಮುದ್ರವು ಉಕ್ಕಿ ಶಿಖರದವರೆಗೂ, ಬರುವುದು. ಹಾಗೆ ಸಮುದ್ರವು ಉಕ್ಕಿಬರುವಾಗ ಒಬ್ಬ ಮನುಷ್ಯನು ಎರಡುಕೈಗಳನ್ನು ನೀಡಿಕೊಂಡು, ಲೋಹಮಯನಾಗಿ, ನಿನ್ನನ್ನು ಸಮುದ್ರದಲ್ಲಿ ನೂಕಬೇಕೆಂದು ಬರುವನು. ಆತನಕೈಯ್ಯಲ್ಲಿರುವ ಹಲಗೆಯಮೇಲೆ ನೀನು ಕುಳಿತುಕೋ ! ಆದರೆ ಭಗವನ್ನಾಮವನ್ನು ನೆನೆಯದೆ, ಆತನನ್ನುನೋಡಿ, ಸಮುದ್ರದಲ್ಲಿ ನೂಕಿಬಿಡುವಂತೆಹೇಳು. ಆತನು ಹಾಗೆಯೇಮಾಡುವನು. ಆದರೆ ನೀನು ಭಗವನ್ನಾಮಗಳನ್ನು ಹೇಳದೆ ಇದ್ದರೆ ಆತನು ನಿನ್ನನ್ನು ಎಂಟು ಹತ್ತು ದಿನಗಳಿಗೆ ಸಮುದ್ರದಲ್ಲಿ ನ್ಮತೊಂದು ದ್ವೀಪಕ್ಕೆ ತೆಗೆದುಕೊಂಡು ಹೋಗುವನು.

ಬಳಿಕ ನೀನು ಕ್ಷೇಮವಾಗಿ ನಿನ್ನರಾಜ್ಯವನ್ನು ಸೇರುವೆ ಎಂದುಹೇಳಿದನು. ಬಳಿಕ ನಾನು ಎಚ್ಚರಗೊಂಡು, ಸ್ವಪ್ನವಿಚಾರವನ್ನು ನೆನೆದುಕೊಂಡು, ತೃಪ್ತಿಹೊಂದಿದವನಾಗಿ ಆತನುಹೇಳಿದಂತೆ ನೆಲವನ್ನು ಅಗೆದು ಬಿಲ್ಲನ್ನೂ, ಬಾಣವನ್ನೂ, ತೆಗೆದುಕೊಂಡು, ಅದರಮೇಲಿಹಾಕಲು, ರಾವುತನು ಸಮುದ್ರದಲ್ಲಿ ಬಿದ್ದನು. ಕುದುರೆಯು ನನ್ನಪಕ್ಕದಲ್ಲಿ ಬಿದ್ದಿತು. ಅದನ್ನು ತೆಗೆದುಕೊಂಡು, ಜೀರಿಕಡಿಯಲ್ಲಿ ಹೂತು ಹಾಕಿದೆನು. ಬಳಿಕ ಸಮುದ್ರವು ಉಕ್ಕಿ ಶಿಖರದವರೆಗೂ, ಬಂದಿತು. ಆಗ ಒಬ್ಬಮನುಷ್ಯನು, ಕೈಯ್ಯಲ್ಲಿ ಹಲಗೆಯೆನ್ನು ಹಿಡಿದುಕೊಂಡು, ಬರುತ್ತಿರುವುದನ್ನು ನೋಡಿ, ನಾನು ಭಗವಂತನನ್ನು ಧ್ಯಾನನಾಡಿದೆನು. ಬಳಿಕ ಆತನು ಹತ್ತಿರಕ್ಕೆ ಬರಲು, ನಾನು ಭಗವನ್ನಾಮವನ್ನು ನೆನೆಯುತ್ತೆ, ಜಾಗ್ರತೆಯಿಂದ ಆ ಹಲಗೆಯಮೇಲೆ, ಕೂತುಕೊಂಡೆನು.

ಆತನು ಹಲಗೆಯನ್ನು ನಡಿಸುವುದಕ್ಕೆ ಮೊದಲುಮಾಡಿ, ಬಂಭತ್ತುದಿನಗಳವರೆಗೂ, ಸಮುದ್ರದಲ್ಲಿ ಪ್ರಯಾಣಮಾಡಲು, ನಾನಾದ್ವೀಪಗಳು, ಕಣ್ಣಿಗೆ ಕಾಣಬಂದವು. ನಾನು ಆ ಮುದುಕನು ಹೇಳಿದ ಮಾತನ್ನು ಮರೆತು ಭಗವನ್ನಾಮಸಂಕೀರ್ತನವನ್ನು ಮಾಡುತ್ತಾ ಇದ್ದೆನು. ಆತನನ್ನು ನನ್ನನ್ನು ಸಮುದ್ರದಲ್ಲಿ ಬಿಸಾಡಿ, ತಾನುಮುಳುಗಿಹೋದನು. ನಾನು ನನ್ನ ಪ್ರಾಣವನ್ನುಳಿಸಿಕೊಳ್ಳಬೇಕೆಂದು, ಯಾವ ಉಪಾಯವನ್ನು ಕಾಣದೆ, ನೀರಿನಲ್ಲಿ ಈಜುತ್ತಾ ಇದ್ದೆನು. ಇಷ್ಟರಲ್ಲಿ ಸಂಜೆಯಾಗಿ ಕತ್ತಲಾದುದರಿಂದ ಯಾವಮಾರ್ಗವೂ ತೋಚದೆ ಕತ್ತಲವರೆಗೂ, ನೀರಿನಲ್ಲಿ ಮುಳುಗಿ, ನಾನು ಬದುಕುವಹಾಗಿಲ್ಲವೆಂದು, ರೋದಿಸುತ್ತಾ ನಿಂತುಕೊಂಡಿದ್ದೆನು. ಆದರೆ ಅದೃಷ್ಟವಶದಿಂದ ಪರ್ವತಾಕಾರವಾದ ಒಂದು ದೊಡ್ಡ ಅಲೆಯೆದ್ದು ನನ್ನನ್ನು ಎಲ್ಲಿಗೋ ತೆಗೆದುಕೊಂಡು, ಬಂದು ಭೂವ್ರದೇಶದಲ್ಲಿ ಬಿಟ್ಟಿತು. ನಾನು ರಾತ್ರಿಯೆಲ್ಲಾ ಬಹಳವಾದ ವ್ಯಸನದಿಂದ ಕಾಲವನ್ನು ಕಳೆದು, ಬೆಳಗಾಗುತಲೆ ಒದ್ದೆಯಾಗಿದ್ದ ನನ್ನಬಟ್ಟೆಗಳನ್ನು ಒಣಗಿದ ಮರಳಿನಮೇಲೆ, ಒಣಹಾಕಿದೆನು. ಬಟ್ಟೆ ಯೊಣಗಿದಮೇಲೆ ಅವುಗಳನ್ನುಟ್ಟುಕೊಂಡು ಬರುತ್ತಿರುವಾಗ, ನಾನು ಒಂದುದ್ವೀಪದ ಬಿರುನಂತೆ, ಕಂಡುಬಂದಿತು. ಆ ದ್ವೀಪವು ಅತ್ಯಂತ ರಮಣೀಯವೃಕ್ಷ ಲತಾದಿಗಳಿಂದಲೂ, ಜನಗಳಿಂದಲೂ ಕೂಡಿಕೊಂಡಿದ್ದುದರಿಂದ ಭೂನಿವಾಸಿಗಳು

ಆ ದ್ವೀಪಕ್ಕೂ, ಬಹುದೂರವಿರುವದೆಂದು, ತಿಳಿದುಬಂದಿತು. ಆಗ ಭಗವಂತನೆ ಮೊದಲಿನಂತೆ, ನನ್ನ ಆಪದವನ್ನು ನಾಶಮಾಡಿ, ಸಂರಕ್ಷಿಸೆಂದು, ಬೇಡಿಕೊಂಡೆನು. ಹೀಗಿರುವಲ್ಲಿ ಭೂಮಿಯೆಕಡೆಯಿಂದೊಂದು ಹಡಗುಬರುತ್ತಿರುವುದನ್ನುಕಂಡು ಅವರು ಇಲ್ಲಿ ತಂಗುತ್ತಾರೆಂದು, ತಿಳಿದವನಾಗಿ ಸಂತೋಷಪಟ್ಟರೂ, ಅವರು ನನಗೆ ಶತ್ರುಗಳೊ, ಅಥವಾ ಮಿತ್ರರೊ, ತಿಳಿಯದಿರುವುದರಿಂದ ಅವರನ್ನು ಕಾಣಿಸಿಕೊಳ್ಳುವುದು, ಯುಕ್ತವಲ್ಲವೆಂದು, ಎತ್ತರವಾದೊಂದು, ಮರದಮೇಲೆ, ಕುಳಿತುನೋಡುತ್ತಾ ಇದ್ದೆನು ಆ ಹಡಗು, ಆ ಸ್ಥಳಕ್ಕೆ ಬಂದಕೂಡಲೆ ಅದರಲ್ಲಿದ್ದ ಹತ್ತುಮಂದಿ ಜನರು ಭೂಮಿಯೆನ್ನಗೆಯುವ ಪದಾರ್ಥಗಳನ್ನು ತೆಗೆದುಕೊಂಡು, ಆ ದ್ವೀಪದ ಪುಢ್ಯಭಾಗದಲ್ಲಿ ಅಗೆಯುತ್ತಿದ್ದು, ಬಂದಾನೊಂದು ತಂತ್ರಕವಾಟವನ್ನು ಮೇಲಕ್ಕೆತ್ತಿದರು. ಬಳಿಕ ತಮ್ಮಹಡಗಿನಲ್ಲಿ ಆಹಾರವಿನಸುಗಳನ್ನು ತೆಗೆದುಕೊಂಡು, ಆ ಪಾತಾಳಗೃಹವನ್ನು ಸೇರಿದುದನ್ನು ನಾನು ಪರಮಾಶ್ಚರ್ಯದಿಂದ ನೋಡುತ್ತಿದ್ದೆನು. ಬಳಿಕ ಅವರು ಪುನಹ ಹೊರಗೆಬಂದು ಹಡಗಿನಬಳಿಗೆ ಹೋಗಿ ಒಬ್ಬ ಮುದುಕನನ್ನು ಕರೆತಂದರು. ಆತನಬಳಿಯೆಲ್ಲಿ ಹದಿನಾಲ್ಕು ಹದಿನೈದು ಸಂವತ್ಸರದ ಒಬ್ಬ ಬಾಲಕನೂ ಇದ್ದನು. ಅವರು ಅವನನ್ನು ಆ ಅಂತರ್ಗೃಹದಲ್ಲಿಹಾಕಿ ಬಾಗಿಲನ್ನುಮುಚ್ಚಿ ಮೇಲೆಮಣ್ಣುಹಾಕಿ, ಹಡಗಿನಬಳಿಗೆ ಹೋಗುತ್ತಿರುವಾಗ ಹುಡುಗನನ್ನು ನಾನು ಕಾಣಲಿಲ್ಲವಾದುದರಿಂದ, ಆತನು ಆ ಪಾತಾಲಗೃಹದಲ್ಲಿಯೇ ಇರುವನೆಂದೆಂದುಕೊಂಡೆನು. ಅಲ್ಲದೆ ನನಗೆ ಅತ್ಯಂತವಾದ ಆಶ್ಚರ್ಯವೂ ಉಂಟಾಯಿತು. ಆ ಜನರು ಹಡಗನ್ನುಹತ್ತಿ ಕಣ್ಣಿಗೆ ಕಾಣಿಸದಷ್ಟು ದೂರ ಹೊರಟುಹೋದಬಳಿಕ ನಾನು ಮರದಿಂದಿಳಿದು, ಅವರು ಅಗೆದ ಸ್ಥಳಕ್ಕೆ ಬಂದು ಮಣ್ಣನ್ನು ಎತ್ತಿಹಾಕಿ, ಕೆಳಗಡೆ ಇದ್ದ ಹಲಗೆಯನ್ನು ಕಲ್ಲನ್ನು ತೆಗೆದು ಬಾಗಿಲಿನಿಂದ ಒಳಕ್ಕಿಳಿದು, ಪ್ರವೇಶಮಾಡುವಲ್ಲಿ ಆ ಸ್ಥಳದಲ್ಲಿ ನೆಲದಮೇಲೊಂದು ಹಾಸಿಗೆಯು ಹಾಕಿದ್ದಿತು. ಅದರಬಳಿಯೆಲ್ಲಿ ಸುಂದರವಾದ ವಸ್ತ್ರಗಳಿಂದ ಗೌಸುಹಾಕಿದ ಒಂದು ಮಂಚವಿದ್ದಿತು.

ಅದರಮೇಲೆ ಒಬ್ಬ ಹುಡುಗನು, ಕೈಯ್ಯಲ್ಲಿ ಒಂದು ಬೀಸಣಿಗೆಯನ್ನು ಹಿಡಿದುಕೊಂಡು ಕೂತುಕೊಂಡಿದ್ದನು. ಆತನಬಳಿಯೆಲ್ಲಿ ಹೂವಿನ ಕುಂಡಗಳೂ, ಹಣ್ಣಿನ ತಟ್ಟೆಗಳೂ, ಇದ್ದವು. ಇವುಗಳೆಲ್ಲವನ್ನು,

ನಾನು ಅಲ್ಲಿ ಉರಿಯುತ್ತಿದ್ದ ವೇಣದಬತ್ತಿಗಳಪ್ರಕಾಶದಿಂದ ಕಂಡುಕೊಂಡೆನು. ಆ ಹುಡುಗನು ನನ್ನನ್ನು ನೋಡಿದಕೂಡಲೇ ಬಹಳವಾಗಿ ಭಯಪಟ್ಟನು. ಅದನ್ನುನೋಡಿ, ನಾನು ಆತನಬಳಿಗೆ ಹೋಗಿ, ಅಯ್ಯಾ ! ನೀವು ಯಾರಾದರೂ ಸರಿಯೆ ! ಭಯಪಡಬೇಡಿ, ನಾನು ಒಬ್ಬ ರಾಜಪುತ್ರನು. ನಿನ್ನನ್ನುನೋಡಿ, ನಿನ್ನತೊಂದರೆಯನ್ನು ನಿವಾರಣೆಮಾಡುವುದಕ್ಕಾಗಿ, ಬಂದಿರುವೆನು. ನೀನು ಪ್ರಾಣಸಹಿತವಾಗಿ ಈ ಗೋರಿಯಲ್ಲಿ ಬಂದು ಕುಳಿತುಕೊಳ್ಳುವುದಕ್ಕೆ ಕಾರಣವೇನು ? ನಿನ್ನನ್ನು ಈ ಗೋರಿಯಿಂದ ಹೊರಗೆ ತೆಗೆದುಕೊಂಡುಹೋಗುವ ಅದೃಷ್ಟರೂಪವಾಗಿ ನಾನು ಬಂದಿರುವೆನೆಂದು, ತಿಳಿಸಿ, ಈ ದ್ವೀಪಕ್ಕೆ ನೀನು ಬಂದಾಗಿನಿಂದಲೂ, ನಡೆದಸಂಗತಿಯನ್ನು ನಾನು ಚೆನ್ನಾಗಿ ತಿಳಿದಿರುವೆನು. ನೀನು ಯಾವತೊಂದರೆಯಾ, ಇಲ್ಲದೆ ಈ ಸ್ಥಳದಲ್ಲಿರುವುದನ್ನು ನೋಡಿದರೆ, ನನಗೆ ತುಂಬಾ ಆಶ್ಚರ್ಯವಾಗುವುದು. ಆದುದರಿಂದ ಸ್ವಲ್ಪವೂ ಹೆದರದೆವನಾಗಿ ಇದಕ್ಕೆ ಕಾರಣ ವೇನೆಂಬುದನ್ನು ನನಗೆ ತಿಳಿಯೆ ಹೇಳಬೇಕೆಂದು, ಕೇಳಿದೆನು. ಕೂಡಲೆ ಷಹರಜೌದಿಯು, ಕಥೆಯನ್ನು ನಿಲ್ಲಿಸಿದಳು. ಮನುಷ್ಯರೇ ಇಲ್ಲದಿರುವ ಆ ಪಾತಾಳದ್ವೀಪದಲ್ಲಿ ಆ ಬಾಲಕನನ್ನು ಏತಕ್ಕಾಗಿ ತಂದುಹಾಕಿದರೋ ಅದನ್ನು ತಿಳಿದುಕೊಳ್ಳಬೇಕೆಂಬಭಿಲಾಷೆಯಿಂದ ಸುಲ್ತಾನನು ಯಾವಪಾತನ್ನೂ ಆಡದೆ ಹೊರಟುಹೋದನು.

೫೫ ನೆಯ ರಾತ್ರಿ ಕಥೆ

ಮರುದಿನ ಬೆಳಗಿನಜಾವದಲ್ಲಿ ಸುಲ್ತಾನನು, ಏಳುವುದಕ್ಕೆ ಮೊದಲೆ ದಿನರಜೌದಿಯು, ಎದ್ದು ತನ್ನಸಹೋದರಿಯನ್ನು ಕುರಿತು, ಅಕ್ಕಾ ನಿನಗೆ ನಿದ್ರೆಬಾರದೇ ಇದ್ದರೆ, ಆ ಮುದಾರನೆಯೆ ಕಾಲೆಂಡರಿನ ಕಥೆಯನ್ನು, ಪೂರ್ತಿಮಾಡೆಂದುಕೇಳಲು, ಷಹರಜೌದಿಯು, ಸುಲ್ತಾನನನ್ನು ನೋಡಿ, ಇಂತೆಂದಳು. ಜೋಬದಿಯೆನ್ನು ನೋಡಿ, ಮುದಾರನೆಯೆ ಕಾಲೆಂಡರು, ಹೀಗೆಂದನು. ಬಳಿಕ ಆ ಬಾಲಕನು, ನಗೆಮೊಗದಿಂದ ನನ್ನನ್ನು ನೋಡಿ, ತನ್ನಬಳಿಯಲ್ಲಿ ಕೂತುಕೊಳ್ಳುಸಂತೆಹೇಳಿ, ರಾಜಪುತ್ರನೇ ! ನಿನಗೆ ಅತ್ಯಾಶ್ಚರ್ಯಕರವಾದೊಂದು, ಸಂಗತಿಯನ್ನು ಹೇಳುವೆನು. ಎನಂದನೆ, ನನ್ನತಂದೆಯು, ಪ್ರಸಿದ್ಧನಾದ ರತ್ನಪರೀಕ್ಷಾವ್ಯಾಪಾರವಾಗುವ ಪರ್ತ

ಕನು. ಆತನು ವ್ಯಾಪಾರದಲ್ಲಿ ತುಂಬ ಚತುರನಾದುದರಿಂದ ಅತ್ಯಂತನಾದ ಐಶ್ವರ್ಯವನ್ನು ಸಂಪಾದಿಸಿ, ಕೂಲಿಕಾರರನ್ನು ಗುಮಾಸ್ತರನ್ನು, ಇಟ್ಟುಕೊಂಡು, ಅವರನ್ನು ಇತರದ್ವೀಪಗಳಿಂದ ಸಾಮಾನುಗಳನ್ನು, ತರುವುದಕ್ಕೂ, ತನ್ನ ಲೇವಾದೇವಿಯೆರನ್ನು, ಸಮಾಧಾನ ಗೊಳಿಸುವುದಕ್ಕೂ, ಸಹ ಅವರನ್ನು ಹಡಗುಗಳಮೇಲೆ ಅನ್ಯದೇಶಗಳಿಗೆ ಕಳುಹುತ್ತಾ ಇದ್ದನು.

ಆತನು ಮದುವೆ ಮಾಡಿಕೊಂಡು, ಬಹುದಿನಗಳವರೆಗೂ, ಮಕ್ಕಳಿಲ್ಲದಿರಲು, ಒಂದಾನೊಂದುದಿನ ಮಲಗಿ ನಿದ್ರಾಮಾಡುತ್ತಿರುವಾಗ ತನಗೊಬ್ಬ ಮಗನಾಗುವನೆಂದೂ, ಆದರೆ ಆತನು ಅಲ್ಪಾಯುವಾಗುವನೆಂದೂ, ಸ್ವಪ್ನವನ್ನು ಕಂಡು, ಮಹಾ ವ್ಯಸನವನ್ನು ಹೊಂದುತ್ತಿದ್ದನು. ಆದರೆ ಕೂಡಲೆ ನನ್ನ ತಾಯಿಯು, ಆತನಬಳಿಗೆಬಂದು, ನಾನು ಗರ್ಭಿಣಿಯಾಗಿರುವೆನೆಂದು, ಹೇಳಿದಳು. ಆತನು ಕನಸುಕಂಡಕಾಲವೂ, ನನ್ನತಾಯಿಯು, ಗರ್ಭಿಣಿಯಾದ ಕಾಲವೂ ಒಂದೇ ಆಗಿತ್ತು. ಬಳಿಕ ನವಮಾಸ ತುಂಬಿದಮೇಲೆ ನನ್ನನ್ನು ಹೆತ್ತಕೂಡಲೇ ಸರ್ವರೂ ಆನಂದವನ್ನು ಹೊಂದಿದರು. ನಾನು ಹುಟ್ಟಿದಮೇಲೆ ನನ್ನತಂದೆಯು ಜ್ಯೋತಿಷ್ಕರನ್ನು ಬರಮಾಡಿ, ನನ್ನ ಜಾತಕ ವಿಚಾರವನ್ನು ಕೇಳಲು, ಅವರು ನಿನ್ನಮಗನು ಹದಿನೇಳು ಸಂವತ್ಸರಗಳವರೆಗೂ, ಸುಖವಾಗಿರುವನೆಂದೂ, ನಂತರ ತಪ್ಪಿಸಿಕೊಳ್ಳುವುದಕ್ಕಾಗದ ಅಸಾಧ್ಯವಾದ ಒಂದು ಗಂಡ ಕಾಲವು ಬರುವುದೆಂದು, ಆ ಗಂಡಕಾಲದಲ್ಲಿ ದೈವಯೋಗದಿಂದುಳಿದುಕೊಂಡುದೇ ಆದರೆ, ಆತನು ವೃದ್ಧನಾಗುವವರೆಗೂ, ಜೀವಿಸುವನೆಂದು ಹೇಳಲು, ಅಯ್ಯಾ ! ಆ ಗಂಡಕಾಲವು ಆತನಿಗೆ ಯಾವಾಗಬರುವುದೆನ್ನುವಿಯೋ ? ಅಯೆಃಕಾಂತ ಪರ್ವತದಮೇಲಿರುವ ಹಿತ್ತಾಳೆಯ ವಿಗ್ರಹವನ್ನು, ಕಾಸೀಬನಮಗನಾದ ವಿಜೀಬನೆಂಬ ರಾಜಪುತ್ರನು, ಯಾವಕಾಲದಲ್ಲಿ ಸಮುದ್ರದಲ್ಲಿ ನೂಕಿಬಿಡುವನೋ ಆಗ ಉಂಟಾಗುವುದು. ಬಳಿಕ ಎಂಟುದಿನಗಳ ತರುವಾಯ ಆ ರಾಜಪುತ್ರನಿಂದ ನಿನ್ನಮಗನು ಕೊಲ್ಲಲ್ಪಡುವನೆಂದು, ಶಾಸ್ತ್ರೀತ್ಯಾ ಹೇಳಿದರು. ಆ ವಿಗ್ರಹವನ್ನುಕ್ಕುರಿತು, ಜ್ಯೋತಿಷ್ಕರು ಹೇಳಿದ ವಾಕ್ಯವೂ ಆತನು ಕಂಡ ಕನಸೂ, ಸಮಾನವಾಗಿದ್ದುದರಿಂದ ನನ್ನತಂದೆಯು, ವ್ಯಸನಾಕ್ರಾಂತನಾಗಿ ನಾನಾತೆರೆಂದರೆಯನ್ನನುಭವಿಸುತ್ತಿದ್ದನು.

ಆತನು ನನ್ನನ್ನು ಇದುವರೆಗೂ, ವಿದ್ಯಾಬುದ್ಧಿಗಳಿಂದ ಸಂರಕ್ಷಣೆಮಾಡಿದನು. ನನಗೆ ಈಗ ಹದಿನೇಳುವರ್ಷಗಳಾದವು. ನಾನು ನಿನಗೆ ಹೇಳಿದ ಹಿತಾತ್ಮಳೆಯೆವಿಗ್ರಹವು, ಆ ರಾಜಪುತ್ರನಿಂದಲೆ ಸಮುದ್ರದಲ್ಲಿ ಹಾಕಲ್ಪಟ್ಟಿತಂತೆ. ಅದುನಡೆದು ಈಗ್ಗೆ ಹತ್ತುವರುಷಗಳಾಯಿತೆಂದು, ನಿನ್ನೆ ನಮ್ಮತಂದೆಗೆ ವರ್ತಮಾನಬಂದಿತು. ಅದನ್ನುಕೇಳಿ ಆತನು ಬಾಷ್ಪಾಂಬು ಸ್ಫೂರಿತನಯನನಾಗಿ, ವಿವರ್ಣಮುಖನಾದನು. ಆತನು ಹೇಗಾದರೂ ಮಾಡಿ, ನನ್ನನ್ನು ಪ್ರಾಣದಿಂದಕಾಪಾಡಿ, ಜ್ಯೋತಿಷ್ಕರನ್ನು ಸುಳ್ಳುಮಾಡಬೇಕೆಂದು, ಆ ವಿಗ್ರಹವು ಬಿದ್ದುಹೋದ ಎಂಟುದಿನಗಳೊಳಗಾಗಿ ನನ್ನನ್ನು ಬಚ್ಚಿಡಬೇಕೆಂದು, ಈ ಪಾತಾಳಗೃಹವನ್ನು ಕಟ್ಟಿಸಿದನು. ಆವಿಗ್ರಹವು, ಬಿದ್ದುಹೋಗಿ ಹತ್ತುದಿನಗಳಾದುದರಿಂದ, ನನ್ನನ್ನು ಕರೆದುಕೊಂಡುಬಂದು, ಈಸ್ಥಳದಲ್ಲಿಬಿಟ್ಟು ಪುನಹ ಹತ್ತುದಿನಗಳು ಕಳೆದಮೇಲೆ ನಿನ್ನನ್ನು ಕರೆದುಕೊಂಡು ಹೋಗುವೆನೆಂದುಹೇಳಿ, ಹೊರಟುಹೋದನು. ನಾನಾದರೊ, ವಿಜೇಬನೆಂಬ ರಾಜಪುತ್ರನು, ನಿರ್ಮಾನುಷಪ್ರದೇಶದಲ್ಲಿ ಪ್ರವೇಶಿಸಿ, ಅಡಗಿಕೊಂಡಿರುವ ನನ್ನನ್ನು ಕಂಡುಕೊಳ್ಳಲಾರನೆಂದು ಸಂತೋಷವಾಗಿಯೆ, ಇರುವೆನು ಇದೇನನ್ನಚರಿತ್ರ ಎಂದುಹೇಳಿದನು. ಇಂತೆಂದು ಹೇಳಿದ ರತ್ನಪಡಿವ್ಯಾಪಾರದ ವರ್ತಕಪುತ್ರನ ಮಾತುಗಳನ್ನು ಕೇಳಿ, ನನ್ನಲ್ಲಿ ನಾನೇ ಪರಿಹಾಸಮಾಡಿಕೊಂಡೆನು.

ಏತಕ್ಕೆಂದರೆ, ಆ ಜ್ಯೋತಿಷ್ಕರು ಹೇಳಿದಮಾತುಗಳನ್ನು ಸ್ವಲ್ಪವಾದರೂ, ನಿಶ್ಚಯಮಾಡಬೇಕೆಂಬ ತಾತ್ಪರ್ಯವು ನನಗಿರಲಿಲ್ಲ. ಆತನು ಹೇಳಿ ಮುಗಿದಕೂಡಲೇ ನಾನು ಆತನನ್ನುನೋಡಿ, ಪ್ರಿಯೆಸ್ನೇಹಿತನೇ ! ನೀನು ಭಗವಂತನಮೇಲೆ ಭಾರವನ್ನುಹಾಕಿ, ನಂಬಿಕೊಂಡು, ಸುಖವಾಗಿರು. ಸ್ವಲ್ಪವೂ ಹೆದರಬೇಡ. ಇದೇ ನೀನು ಮಾಡಬೇಕಾದ ಕೆಲಸದ ಋಣನಿವೋಚನೆಯೆಂದರಿ. ನಿನ್ನ ದುರದೃಷ್ಟವು ಕೊನೆಗಂಡು, ಹೋಯಿತೆಂದು, ತಿಳಿದುಕೋ ? ನನ್ನಹಡಗು ಮುಳುಗಿಹೋಗಿ ನಾನಿಲ್ಲಿಗೆ ಬಂದುದರಿಂದ ನಿನ್ನಮರಣಕ್ಕೆ ಹೇತುಭೂತ ಕಾರಣವನ್ನು ನಾಶಮಾಡುವ ಸಮಯವು ದೊರೆತುದಕ್ಕಾಗಿ, ನಾನು ತುಂಬ ಸಂತೋಷಿಸುವೆನು. ವಿವೇಕಶೂನ್ಯರಾದ ಜ್ಯೋತಿಷ್ಕರು, ನಿನಗಾಪತ್ತು ಸಂಭವಿಸುವುದೆಂದು, ಹೇಳಿದ ನಲವತ್ತುದಿನಗಳವರೆಗೂ, ನಾನುನಿನ್ನನ್ನು ಅಗಲದೆ ನಿನ್ನಜೊತೆಯ

ಲ್ಲಿಯೆ, ಇದ್ದುಕೊಂಡು, ನನ್ನಕ್ಕೆಲಾದ ಸಹಾಯವನ್ನು ಮಾಡುವೆನು. ಬಳಿಕ ನಿನ್ನದಯೆದಿಂದಲೂ, ನಿಮ್ಮತಂದೆಯ ವಿಶ್ವಾಸದಿಂದಲೂ, ನಿಮ್ಮ ಹಡಗನ್ನುಹತ್ತಿ ಭೂಮಿಯೆನ್ನು ನೀರಬೇಕೆಂದಿರುವೆನು. ನಾನು ರಾಜ್ಯವನ್ನುಸೇರಿದಬಳಿಕ ನಿನಗೆಮಾಡಬೇಕಾದ ಉಪಕಾರಗಳನ್ನು ಸ್ಮರಿಸಿಕೊಂಡು, ಅವುಗಳನ್ನು ತಪ್ಪದಂತೆ, ಸಂಪೂರ್ಣವಾಗಿ ನೆರವೇರಿಸುವೆನೆಂದು, ಸಂತೋಷಪುರಸ್ಸರವಾಗಿ, ನುಡಿದೆನು. ಈ ಮಾತುಗಳನ್ನು ಹೇಳಿದಬಳಿಕ ಆ ರತ್ನಪಡಿವರ್ತಕಪುತ್ರನಿಗೆ ನನ್ನಲ್ಲಿನಂಬಿಕೆಯುಂಟಾದುದರಿಂದ, ಆತನು ಯಾವ ಏಜೀಬನವಿಷಯವಾಗಿ ಭಯವನ್ನು ಹೊಂದಿರುವನೋ ಅಂತಹ ಏಜೀಬನೇ ನಾನೆಂದು ಹೇಳಿದರೆ ಆವನು, ಇನ್ನು ದಿಗಿಲುಬೀಳುವೆನೆಂದು ಅಂತಹ ಸಂಶಯವು ಆತನಿಗುಂಟಾಗದಂತೆ ಬಹು ಎಚ್ಚರಿಕೆಯಿಂದ ಇವ್ವಿದ್ದನು. ಆಹುಡುಗನು ಬುದ್ಧಿವಂತನಾದದರಿಂದ ಆತನಬಳಿಯೆಲ್ಲಿದ್ದ ವಸ್ತುಗಳು ಇನ್ನು ಕೆಲವುಜನಗಳು ಬಂದಾಗ್ಯೂ ನಲವತ್ತುದಿನಗಳವರಿಗೆ ಆಗಬಹುದಾದ ಆಹಾರವಾಗಿದ್ದುದರಿಂದ ನಾನೂ ಆತನಕೂಡಲೆ ಊಟವಮಾಡುತ್ತಿದ್ದೆನು. ರಾತ್ರಿ ಭೋಜನವಾದಮೇಲೆ ನಾವಿಬ್ಬರೂ ಸ್ವಲ್ಪಹೊತ್ತು ಮಾತನಾಡುತ್ತಾ ಇದ್ದು ಮಲಗಿ ನಿದ್ರೆಮಾಡಿದೆವು.

ಬೆಳಗಾದಕೂಡಲೆ ನಾನು ಎದ್ದು ಒಂದಾನೊಂದು ತಟ್ಟೆಯಲ್ಲಿ, ಭೋಜನಪದಾರ್ಥಗಳನ್ನೂ, ಬಟ್ಟಲಲ್ಲಿ ನೀರನ್ನೂ ತಂದು, ಸಿದ್ಧವಾಡಿಟ್ಟೆನು. ಬಳಿಕ ನಾವಿಬ್ಬರೂ, ಊಟಮಾಡಿದಮೇಲೆ, ವಿನೋದಾರ್ಥವಾಗಿ ಆಟಗಳನ್ನು ಆಡುತ್ತಾ ಕಾಲವನ್ನುಕಳೆದು ಸಾಯಂಕಾಲದ ಊಟವನ್ನು ತೀರಿಸಿಕೊಂಡು, ಎಂದಿನಂತೆ ಮಲಗಿ ನಿದ್ರೆಹೋದೆವು. ನಮಗೆ ಪರಸ್ಪರಸ್ನೇಹವು ಅಧಿಕವಾದುದರಿಂದ, ಆತನಿಗೆ ನನ್ನಲ್ಲಿ ಹೆಚ್ಚಾದ ವಿಶ್ವಾಸ ವುಂಟಾದುದೆಂದು, ನಾನುತಿಳಿದುಕೊಂಡೆನು. ನಾನಾದರೋ ಆತನನ್ನು ಬಹು ಮರ್ಯಾದೆಯಿಂದ ನೋಡುತ್ತಾ ನನ್ನಿಂದಾತನಿಗೆ ಮರಣ ವುಂಟಾಗುವುದೆಂದು, ಆತನತಂದೆಗೆ ಹೇಳಿದದುರ್ಮಾರ್ಗರಾದ ಜ್ಯೋತಿಷ್ಕರನ್ನು ಬಯ್ಯುತ್ತಾ ಇದ್ದೆನು. ಏತಕ್ಕಂದರೆ, ಅಂತಹ ದುಷ್ಕೃತ್ಯವನ್ನು ನಾನು ಮಾಡತಕ್ಕವನಾಗಿರಲಿಲ್ಲ. ಈ ತೆರದಿಂದ ಮೂವತ್ತೊಂಭತ್ತು ದಿನಗಳನ್ನು ಸಂತೋಷದಿಂದ ಕಳೆದೆವು. ನಲವತ್ತನೆಯೆದಿನ ಬೆಳಗಾಗುತ್ತಲೆ ಆ ಬಾಲಕನು ನಿದ್ರೆಯಿಂದೆದ್ದು, ನನ್ನನ್ನುನೋಡಿ, ಅತ್ಯಾನಂದಭರಿತ

ನಾಗಿ, ಎಲೈ ರಾಜಪುತ್ರನೇ ! ಇದು ನಲವತ್ತನೆಯದಿನ ನಾನಿನ್ನು ಸಾಯದೆ ಬದುಕಿರುವುದರಿಂದ ಭಗವಂತನಿಗೆ ವಂದನೆಗಳನ್ನು ಮಾಡುವುದಲ್ಲದೆ, ನಿನ್ನ ಸತ್ಸಂಗದಿಂದ ನಾನು ಸುಖವಾಗಿರುವುದಕ್ಕಾಗಿ, ನಿನಗೂ ವಂದನೆಗಳನ್ನು ಸಮರ್ಪಿಸುವೆನು. ನನ್ನತಂದೆಯು, ಇಲ್ಲಿಗೆ ಶೀಘ್ರವಾಗಿ ಬರುವುದರಿಂದ ನೀನು ಹಡಗನ್ನುಹತ್ತಿ ನಿನ್ನರಾಜ್ಯವನ್ನು ಸೇರುವುದಕ್ಕೆ ಮಾಡಬೇಕಾದ ಪ್ರಯತ್ನವನ್ನು ಎಚ್ಚರಿಕೆಯಿಂದಮಾಡುವೆನು. ಇಷ್ಟರಲ್ಲೆ ನೀನು ಸ್ವಲ್ಪ ಬಿಸಿನೀರನ್ನುಕಾಸಿ, ಈ ತೊಟ್ಟಿಯಲ್ಲಿ ಹಾಕಿದರೆ, ನಾನು ನನ್ನ ತಂದೆಯನ್ನು ಸಂತೋಷದಿಂದ ಬರಮಾಡಿ ಕೊಳ್ಳುವದಕ್ಕಾಗಿ ಸ್ನಾನ ಮಾಡಿ ಬೇರೆ ಉಡುಪುಗಳನ್ನು ಹಾಕಿಕೊಳ್ಳುವೆನು. ಎಂದು ಹೇಳಲು, ನಾನು ನೀರನ್ನುಕಾಸಿ ತೊಟ್ಟಿಯಲ್ಲಿ ಹಾಕಲು ಆವರ್ತಕನ ಮಗನು ಸ್ನಾನಕ್ಕೆಬಂದ ಕೂಡಲೆ, ವೈಯಯುಜ್ಜಿ ಸ್ನಾನಮಾಡಿ ಬಟ್ಟೆಗಳನ್ನು ಹಾಸಿಮಲಗಿಸಿ, ಮೇಲೆ ಹೊದಿಕೆಯನ್ನೂ ಹೊದಿಸಿದೆನು. ಆತನು ಸ್ವಲ್ಪಹೊತ್ತು ನಿದ್ರೆಮಾಡಿ ಎದ್ದ ನನ್ನನ್ನು ಕರೆದು ಎಲೈ ರಾಜಪುತ್ರನೇ ! ದಯೆಮಾಡಿ ಬಂದು ಖರ್ಜೂರದ ಹಣ್ಣನ್ನೂ, ಕೊಂಚಸಕ್ಕರೆಯನ್ನು ತಂದುಕೊಟ್ಟರೆ ಅದನ್ನು ತಿಂದು ಬಳಲಿಕೆಯನ್ನು ಪೋಗಲಾಡಿಸಿ ಕೊಳ್ಳುವೆನೆಂದು, ಹೇಳಿದೆನು, ಅದನ್ನುತೆಗೆದುಕೊಂಡು ಬಂದುಕೊಟ್ಟು ಆ ಖರ್ಜೂರವನ್ನು ಕೊಯ್ಯುವದಕ್ಕೆ ಚೂರಿಯಿಲ್ಲದುದರಿಂದ, ನಾನು ಆತನನ್ನು ಕುರಿತು ಕತ್ತಿಎಲ್ಲಿರುವದೆಂದು ಕೇಳಿದೆನು. ಆತನು ತನ್ನ ತಲೆಹತ್ತಿರ ಗೋಡೆಯಮೇಲಿರುವುದೆಂದು ಹೇಳಿದೆನು. ನಾನು ಆಗೋಡೆಯಮೇಲೆ ಹತ್ತಿಳಯುವಾಗ, ಆತನ ಹಾಸಿಗೆಯ ಬಟ್ಟೆಯು, ನನ್ನ ಕಾಲಿಗೆ ಸಿಕ್ಕಿಕೊಂಡು, ನಾನು ಆತನ ಮೇಲೆ ಬಿದ್ದೆನು. ಆಗ ನನ್ನ ಕೈಯಲ್ಲಿದ್ದ ಕತ್ತಿಯು ಆತನ ಎದೆಯಮೇಲೆ ನಾಟಿಕೊಂಡಿತು. ಅದನ್ನುನೋಡಿದಕೂಡಲೆ ನಾನು ಹಾಯೆಂದರಚಿಕೊಂಡು, ಬಾಯನ್ನು, ಎದೆಯನ್ನು, ಹಣೆಯನ್ನು ಹೊಡೆದುಕೊಳ್ಳುತಾ, ಅಳುತ್ತಿದ್ದೆನು.

ಅಯ್ಯೋ ! ಆತನಿಗೆ ಉಂಟಾಗುವ ಆಪತ್ತನ್ನು ಪೂರ್ತಿಯಾಗಿ ನಿವಾರಣೆ ಮಾಡುವುದಕ್ಕೆ, ಇನ್ನು ಸ್ವಲ್ಪಕಾಲವೇ ಅಲ್ಲವೆ ? ಬೇಕಾಗಿರುವುದು, ನಾನು ಯಾವಾಗ ಆತನ ಆಪದಗಳೆಲ್ಲವೂ ನಾಶವಾಯಿತೆಂದೆಂದು ಕೊಂಡೆನೋಆಗಲೆ, ನಾನುಆತನಿಗೆ ಮೃತ್ಯುಸ್ವರೂಪನಾದೆನು. ಆಜ್ಯೋ

ತಿಷ್ಕರವಾಗಲು ಸಹಜವಾದುದೆಂದು ತಿಳಿದು ನಾನು ಅಳುತ್ತಾ ಕೈಗಳನ್ನು ಮೇಲಕ್ಕೆತ್ತಿ ಭಗವಂತನೇ ! ನನ್ನ ಅಪರಾಧವನ್ನು ಮನ್ನಿಸು. ಈತನ ಪ್ರಾಣವು ನನ್ನಿಂದ ಹೋಗುವಹಾಗಿದ್ದರೆ, ನನ್ನ ಪ್ರಾಣವನ್ನು ತೆಗೆದುಕೊ ಎಂದು ಬೇಡಿಕೊಂಡೆನು. ಅಷ್ಟರಲ್ಲಿಯೆ ಬೆಳಗಾದುದರಿಂದ ವ್ಯಸನಕರ ವಾದ ಕಥೆಯನ್ನು ನಿಲ್ಲಿಸಿದಳು. ಸುಲ್ತಾನನು, ಆ ಬಾಲಕನ ಚರಿತ್ರೆಯು ಕೊನೆಗೆ ಹೇಗೆ ಪರಿಣಮಿಸಿತೆಂಬುದನ್ನು ತಿಳಿಸ ಬೇಕಾದರೆ ಷಹರಜಾದಿ, ವಿನಹಾ ಮತ್ತಾರು ಶಕ್ತರಲ್ಲದುದರಿಂದ, ಆಕೆಯನ್ನು ಸಂಹರಿಸಕೂಡದೆಂದು ಹೇಳಿ ಹೊರಟು ಹೋದನು.

೫೬ ನೆಯ ರಾತ್ರಿಯ ಕಥೆ.

ಮರುದಿನ ಬೆಳಿಗ್ಗೆ ದಿನರಜಾದಿಯು, ಹೊತ್ತಿಗೆ ಮುಂಚೆಎದ್ದು ಷಹರಜಾದಿಯನ್ನು ಕುರಿತು, ಅಕ್ಕಾ ! ನಿದ್ರೆಬಾರದೆ ಇದ್ದರೆ, ಆಹುಡುಗನು, ಮರಣವನ್ನು ಹೊಂದಿದನೊ ಇಲ್ಲವೊ, ಎಂಬುದನ್ನು ತಿಳಿಸಜೇಕೆಂದು ಬೇಡಲು, ಷಹರಜಾದಿಯು ಮತ್ತೆ ಕಥೆಯೆನ್ನು ಹೇಳಲಾರಂಭಿಸಿದಳು. ಮೂರನೆ ಕಾಲಿಂಧರು ಜೋಬಿದೆಯನ್ನು ನೋಡಿ ಅಮ್ಮಾ ! ಈ ದೌರ್ಭಾಗ್ಯವು ಉಂಟಾದುದರಿಂದ. ನನಗೆ ಮರಣವು ತಾನೇ ಪ್ರಾಪ್ತವಾಯಿತು, ನಾನು ನಿರಾಂತಕವಾಗಿ, ಅದನ್ನು ಕೈಕೊಳ್ಳ ಬಹುದೆಂದರೆ ನನ್ನ ಇಷ್ಟಾನುಸಾರವಾಗಿ ನಡೆಯಲಾಗುವುದೇ ! ನನ್ನ ವ್ಯಸನವು ಅವನ ಪ್ರಾಣವನ್ನು ಬದುಕಿಸಲಾಗುವುದೆ ? ಎಂಬುದಾಗಿ ನನ್ನಲ್ಲಿ ನಾನು ಸಮಾಧಾನ ಮಾಡಿಕೊಂಡು, ಆತನ ತಂದೆಯು ಇಲ್ಲಿಗೆ ಬಂದು ನನ್ನನ್ನು ನೋಡಿ ನಿಂದಿಸುವನೆಂದು, ನಾನು ಹೆದರಿ ಅಲ್ಲಿಂದ ಹೊರಗೆಬಂದು, ಬಾಗಿಲಕಲ್ಲನ್ನು ಮುಚ್ಚಿ, ಮೇಲೆ ಮಣ್ಣನ್ನು ಹಾಕಿದೆನು.

ಅಷ್ಟರಲ್ಲಿ ಭೂಮಿಯು ಕಡಿಗೆ ತಿರುಗಿನೋಡಲು, ಆ ಹುಡುಗ ನನ್ನು ಮನೆಗೆ ಕರೆದುಕೊಂಡು ಹೊಗುವುದಕ್ಕಾಗಿ, ಬರುತ್ತಿರುವ ಹಡಗನ್ನು ಕಂಡೆನು. ಅದನ್ನು ನೋಡಿ ಅನುಮಾನಿಸುತ್ತ ನನ್ನಲ್ಲಿನಾನೆಂದುಕೊಂಡುದೇನಂದರೆ, ಆ ಮಂದುಕನು ಇಲ್ಲಿಗೆ ಬಂದು ತನ್ನ ಕುವಾರನು ಸತ್ತುಹೋದ ವರ್ತಮಾನವನ್ನು ತಿಳಿದು ಕೊಂಡ ಬಳಿಕ, ನಾನು ಅವನನ್ನು ಕಾಣಿಸಿ ಕೊಂಡರೆ ಆತನು ತನ್ನ ಚಾಕರರಧಮೂಲಕ ನನ್ನನ್ನು ಕೊಲ್ಲಿ

ಸುವನು. ಅಲ್ಲದೆ ನಾನೆಷ್ಟು ವಿಧವಾಗಿ ಹೇಳಿದರೂ, ನನ್ನನ್ನು ನಿರಪರಾ ಧಿಯೆಂದು ತಿಳಿಯೆನಾದುದರಿಂದ, ನಾನು ಆತನಿಗೆ ಕಾಣಬರಬಾರದೆಂದು ಕೊಂಡೆನು, ಆ ಪಾತಾಳ ಗೃಹದ ಸನಿಹಾವದಲ್ಲಿ ದಟ್ಟವಾದ ಮರಗಳುಳ್ಳ ಸ್ಥಲವೊಂದಿರುವುದರಿಂದ, ಅಲ್ಲಿ ಅಡಗಿಕೊಂಡಿರಬಹುದೆಂದು, ಅಲ್ಲಿಯೆ, ಕುಳಿತು ಕೊಂಡು, ನೋಡುತ್ತಿರುವಲ್ಲಿ, ಹುಡಗುಬುದು ನಿಂತುದನ್ನು ಕಂ ಡೆನು. ಬಳಿಕ ಮುದುಕನು ಮತ್ತು ಆತನ ಪರಿವಾರದವರೂ, ಹಡಗನ್ನು ಳದು ಆ ಅಂತರ್ಗೃಹದ ಬಾಗಿಲಿಗೆ ಬಂದು ಹೊಸದಾಗಿ ಮಣ್ಣನ್ನು ಹಾಕಿ ರುವುದನ್ನು ನೋಡಿದರು. ಆಗ ಮುದುಕನು ಅತ್ಯಂತವಾದ ವ್ಯಸನವನ್ನು ಹೊಂದಿದನು. ಬಳಿಕ ಬಾಗಿಲನ್ನು ತೆಗೆದು ಹೆಸರನ್ನು ಹಿಡಿದುಕೊಗಿದರೂ ಆ ಬಾಲಕನು ಮೂತನಾಡದೆ ಹೋದುದರಿಂದ ಭಯವನ್ನು ಹೊಂದಿ, ಒಳಗೆ ಹೋಗಿ ಮಂಚದಮೇಲೆ ಮಲಗಿರುವ ಬಾಲಕನ ಎದೆಯಲ್ಲಿ ಕತ್ತಿಯು, ನಾಟಿಕೊಂಡಿರುವುದನ್ನು ನೋಡಿ, ಬಹಳವಾಗಿ ಅತ್ತನು. ಆದುದರಿಂದ ನನ್ನವ್ಯಸನವು ಅಧಿಕನಾದುದಲ್ಲದೆ, ಮುದುಕನು ಮೂರ್ಛಿಹೋದನು. ಆತನಕಿಂಕರರು ಅವನನ್ನು ಹೊರಕ್ಕೆ ಕರೆದುತಂದು, ಗಾಳಿಯನ್ನು ಬೀಸಿ ಮೂಡಜೇಕಾದ ಉಪಚಾರವನ್ನೆಲ್ಲ ಮಾಡಿದರು.

ಬಳಿಕ ಬಹಳ ಹೊತ್ತಿನವರೆಗೂ, ಸತ್ತವನಂತೆ ಬಿದ್ದುಕೊಂಡಿ ದ್ದು ನಂತರ ಮೂರ್ಛೆತಿಳಿದೆದ್ದನು. ಆಗ ಆತನ ಚಾಕರರು, ಆ ಶವವ ನ್ನು ಉತ್ತಮವಾದ ವಸ್ತ್ರಗಳಿಂದಲಂಕರಿಸಿ, ಅತನಬಳಿಗೆ ತೆಗೆದುಕೊಂಡು ಬಂದು, ಆ ವರ್ತಕನನ್ನು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಾ, ಸಮಾ ಧಿಯನ್ನುಗೆಸಿದರು. ಕೂಡಲೆ ಇಬ್ಬರುಮನುಷ್ಯರು, ಮುದುಕನನ್ನು ಹಿಡಿದುಕೊಳ್ಳಲು, ಆತನು ಅತ್ಯಂತ ದುಃಖದಿಂದ ತನ್ನ ಮಗನನ್ನುನೋಡಿ ಮೊದಲು ಮಣ್ಣುಹಾಕಿದನು. ಬಳಿಕ ಉಳಿದವರು ಆ ಸಮಾಧಿಯನ್ನು ಮುಚ್ಚಿದರು. ಬಳಿಕ ಅವರು ಆ ಪಾತಾಳಗೃಹವನ್ನುನೋಡಿ, ಅದರ ಒಳಹೊಕ್ಕು ಅಲ್ಲಿದ್ದ ಆಹಾರ ಪದಾರ್ಥಗಳೆಲ್ಲವನ್ನು ತೆಗೆದುಕೊಂಡುಬಂ ದು, ಹಡಗನ್ನು ಸೇರಿಸಿದರು. ಮುದುಕನು ವಿಳಲಾರದಿದ್ದುದರಿಂದ ಆತ ನನ್ನು ದೋಣಿಯಲ್ಲಿ ಹಾಕಿಕೊಂಡು, ಹಡಗನ್ನುಸೇರಿ, ನಡೆಸಿಕೊಂಡು, ಪ್ರಯಾಣಮಾಡಿ, ಕಣ್ಣಿಗೆಕಾಣದಷ್ಟುದೂರ ಹೊರಟುಹೋದನು. ಹೀ ಗೆಂದು ಹೇಳುತ್ತಾ ಅರುಣೋದಯ ವಾದುದರಿಂದ ಸಹರಜಾದಿಯು,

ಸುಲ್ತಾನರನ್ನು ನೋಡಿ, ಈಗ ಬೆಳಗಾಗಿರುವುದರಿಂದ, ಕಥೆಯನ್ನು ನಿಲ್ಲಿಸ ಬೇಕಾಗಿರುವುದೆಂದು, ಹೇಳಿದಳು. ಷಹರಜಾದಿಯೆನಾದರೋ ಮುಂದಿನ ಕಥೆಯನ್ನು ಕೇಳಬೇಕೆಂಬ ಕುತೂಹಲದಿಂದ ಸುಲ್ತಾನಿಗೆ ಆಯುರ್ವೃದ್ಧಿ ಯನ್ನುಂಟುಮಾಡಿ, ಹೊರಟುಹೋದನು.

೫೭ ನೆಯ ರಾತ್ರಿ ಕಥೆ.

ಮರುದಿನ ಬೆಳಗಿನಜಾವದಲ್ಲಿ ದಿನರಜಾದಿಯು, ಅಕ್ಕನನ್ನು ಕುರಿತು, ಪ್ರಿಯಸಹೋದರಿಯೆ ! ನಿನಗೆ ನಿದ್ರಾಬಾರದೆ ಇದ್ದರೆ, ಆ ಮೂರನೆ ಕಾಲಂಡರಿನ ಕಥೆಯೆನ್ನು ಹೇಳು. ಏಜೀಬನಗತಿಯು, ಏನಾಯಿತೋ ತಿಳಿದುಕೊಳ್ಳಬೇಕೆಂಬ ಕುತೂಹಲದಿಂದಿರುವುದರಿಂದ, ದಯವಾಡಿ ಕಥೆಯನ್ನು ಹೇಳೆಂದು ಕೇಳಲು ಷಹರಜಾದಿಯು, ಆಕೆಯನ್ನು ಕುರಿತು, ಹೇಳತೊಡಗಿದಳು. ಆ ಮುದುಕನೂ ಆತನ ಚಾಕರರೂ, ಹೊರಟುಹೋದನೆಂಲೆ, ರಾತ್ರಿಯ ಗೃಹದ ಬಾಗಿಲು ತೆರದಿದ್ದುದರಿಂದ, ಆ ರಾತ್ರಿ ನಾನು ಅಲ್ಲೆ ಮಲಗಿದ್ದು, ಬೆಳಗಾಗುತ್ತಲೆ, ಆ ಗುಡ್ಡವೆಲ್ಲವನ್ನು ಸುತ್ತಿ ನನಗೆ ಹಿತವಾಗಿದ್ದ ಒಂದುಸ್ಥಳದಲ್ಲಿ ಕೂತುಕೊಂಡೆನು. ಹೀಗೆ ಪ್ರಯೋಸದಿಂದ ಒಂದುತಿಂಗಳ ದಿನವನ್ನು ಕಳೆದಮೇಲೆ, ಸಮುದ್ರವು ಬತ್ತಿಹೋದುದರಿಂದ ದ್ವೀಪವು ವಿಸ್ತಾರವಾಯಿತು. ನಂತರ ನಾನು ಅಖಂಡಭೂಮಿಯನ್ನು ಸೇರಬಹುದೆಂದುಕೊಂಡು, ದ್ವೀಪಕ್ಕೆ, ಅಖಂಡಭೂಮಿಗೂ, ಏಳ್ವಾದಂತೆಯೆ ತೋರಿತು. ಆದುದರಿಂದ ನಾನು ಸಮುದ್ರದಲ್ಲಿಳದು, ನಡುವಿನುದ್ದದ ನೀರಿನಲ್ಲಿ ನಡೆದುಕೊಂಡು ಹೋಗುತ್ತಿರುವಾಗ ಮಧ್ಯದಲ್ಲಿ ಒಂದುದಾರಿಯು, ಕಾಣಿಸಿತು. ಅದರಲ್ಲಿ ಅತ್ಯಂತ ಪ್ರಭಾಯುಕ್ತವಾದೊಂದು, ಹೊಳಪು ಕಾಣಿಸಿತು. ಅದನ್ನುನೋಡಿ, ನಾನು ತುಂಬ ಸಂತೋಷವನ್ನು ಹೊಂದಿದೆನು.

ಅದರಲ್ಲಿ ಯಾರಾದರೂ, ಜನರಿರಬಹುದು ಇಲ್ಲವಾದರೆ ಈಹೊಳಪು ಉಂಟಾಗಲಾರದೆಂದಂದುಕೊಂಡು, ಅಲ್ಲಿಗೆಹೋಗಿ ನೋಡುವಲ್ಲಿ ಅದು ಒಂದು ದೊಡ್ಡ ಕಲ್ಲುಬಂಡೆಯಾದುದರಿಂದ, ಅದರಮೇಲೆ ಸೂರ್ಯಕಿರಣಗಳು, ಬಿದ್ದು ಹೊಳಪಾಗಿ ಕಾಣುತ್ತಿತ್ತೆಂಬುದನ್ನು ತಿಳಿದುಕೊಂಡೆನು. ನಂತರ ನಾನು ಅದನ್ನು ಸುತ್ತಲೂನೋಡುತ್ತಾ ಅದರಸೊಬಗಿಗೆ ಮೆಚ್ಚಿ,

ಬಳಲಿಕೆಯೆನ್ನು ಹೋಗಲಾಡಿಸಿಕೊಳ್ಳುವುದಕ್ಕಾಗಿ, ಸ್ವಲ್ಪಹೊತ್ತು ಕುಳಿತುಕೊಂಡೆನು ಇನ್ನು ಸ್ವಲ್ಪ ಹೊತ್ತಾಗುತ್ತಲೆ ಯುವಕರಾದ ನೋಟಕರು ಹತ್ತುಮಂದಿ ಒಟ್ಟಾಗಿಸೇರಿ ಬರುತ್ತಿರುವುದನ್ನು ಕಂಡೆನು ಅವರೆಲ್ಲರಿಗೂ, ಬಲಗಣ್ಣು ಕುರುಡಾಗಿದ್ದುದರಿಂದ , ಅವರು ಒಬ್ಬ ಮುದುಕನನ್ನು ಹಿಂದಟ್ಟಿಕೊಂಡು ಬರುತ್ತಿರುವುದನ್ನು ನೋಡಿ, ನಾನು ಆಶ್ಚರ್ಯಯುಕ್ತ ನಾದೆನು. ಇವರೆಲ್ಲರೂ ಗುಂಪಾಗಿ ಬರುತ್ತಿರುವುದನ್ನು ನೋಡಬೇಕೆಂದು ನಿಂತಿರುವಲ್ಲಿ ಅವರು ನನ್ನಬಳಿಗೆಬಂದು, ಪಂದನೆಗಳಂತೂಡಿ, ನೀನಿಲ್ಲಿಗೆಬರುವುದಕ್ಕೆ ಕಾರಣವೇನೆಂದು ಕೇಳಿದರು. ಬಳಿಕ ನಾನು ಅವರನ್ನುಕುರಿತು, ಅಯ್ಯಾ ! ನನ್ನ ಚರಿತ್ರೆಯನ್ನು ಕೇಳುವುದರಿಂದ ನಿಮಗೆ ಸ್ವಲ್ಪ ತೊಂದರೆಯಾಗಬಹುದಾದುದರಿಂದ, ನೀವು ಸ್ವಲ್ಪಹೊತ್ತು ಕುಳಿತುಕೊಂಡರೆ, ನಿಮ್ಮಇಷ್ಟಾನುಸಾರವಾಗಿ ಕಥೆಯನ್ನು ಹೇಳುವೆನೆಂದನು. ಅವರು ಅದರಂತೆ ಕುಳಿತುಕೊಂಡುದರಿಂದ ನಾನು ಪಟ್ಟಣವನ್ನು ಬಿಟ್ಟದ್ದಲ್ಲಿಂದ ಮೊದಲುಗೊಂಡು ಈ ಪರಿಗೂ ನಡೆದ ಚರಿತ್ರೆಯನ್ನು ಸಂಪೂರ್ಣವಾಗಿ ಹೇಳಲು, ಅವರು ಆಶ್ಚರ್ಯಯುಕ್ತರಾದರು.

ನನ್ನ ಕಥೆಯನ್ನು ಕೇಳಿದ ಯುವಕರು ನನ್ನನ್ನು ಕರೆದುಕೊಂಡು ಕೋಟೆಯೊಳಕ್ಕೆ ಹೋದರು. ಅಲ್ಲಿ ನಾವುಗಳೆಲ್ಲರೂ, ಆ ಕೋಟೆಯ ಸೊಗಸನ್ನು ನೋಡುತ್ತಾ ಎಲ್ಲವನ್ನು ನೋಡಿಕೊಂಡು, ಬಂದಾನೊಂದು ಮನೆಯೊಳಕ್ಕೆ ಹೋದೆವು. ಆ ಮನೆಯಲ್ಲಿ ನಾನಾವಿಧವಾದ ವಿಚಿತ್ರವಾದ ಅನೇಕವಸ್ತುಗಳಿದ್ದವು. ಆದರಮಧ್ಯದಲ್ಲಿ ಹತ್ತು ಸೋಫಾಗಳನ್ನು ಹಾಕಿದ್ದರು. ಅಲ್ಲಿ ಈ ಯುವಕರು ವಿನೋದಾರ್ಥವಾಗಿ ಕುಳಿತುಕೊಂಡು ಮಲಗುತ್ತಾ ಇದ್ದರೆಂದು ನಾನು ತಿಳಿದುಕೊಂಡೆನು. ಅದರ ಮಧ್ಯದಲ್ಲಿ ಹನ್ನೊಂದನೆಯದಾಗಿ ಮತ್ತೊಂದು ಸೋಫಾವೂ ಇದ್ದಿತು. ಅದು ಇತರ ಸೋಫಾಗಳಂತಿಲ್ಲದೆ ನಾನಾವರ್ಣಯುಕ್ತವಾಗಿದ್ದಿತು. ನಾನು ಹಿಂದೆಹೇಳಿದ ಮುದುಕನು, ಹನ್ನೊಂದನೆಯ ಸೋಫಾದಲ್ಲಿಯೂ, ಉಳಿದವರು, ಒಂದೊಂದು ಸೋಫಾದಲ್ಲಿಯೂ ಕುಳಿತುಕೊಂಡರು. ನಾನು ಸುಮ್ಮನೆ ನಿಂತಿರುವುದನ್ನು ನೋಡಿ, ಸ್ನೇಹಿತನೇ ! ನೀನು ನಡುಮನೆಯಲ್ಲಿರುವ ಹಾಸಿಗೆಯಮೇಲೆ ಕುಳಿತುಕೊ ? ನಮ್ಮ ಸಂಬಂಧವಾದ ವಿಷಯಗಳನ್ನು ನಮ್ಮಕಣ್ಣುಗಳು ಕುರುಡಾಗುವುದಕ್ಕೆ ಕಾರಣವನ್ನೂ,

ಕೇಳಬೇಡ. ನೀನು ಕಣ್ಣಾರೆನೋಡಿ, ತಿಳಿದುಕೊಂಡು, ಅತಿಯಾಗಿ ಸಂತೋಷ ಪಡಬೇಕಾಗಿರುವುದೆಂಬ, ಅಪೇಕ್ಷೆಯೆನ್ನು ತೊರೆದುಬಿಡು ಎನಲು ಆ ಮುದುಕನು, ಸ್ವಲ್ಪಯೊತ್ತು ಅಲ್ಲೆ ಕುಳಿತುಕೊಂಡಿದ್ದು, ಬಳಿಕ ಹೊರಗೆಬಂದು, ಪುನಹ ಭೋಜನಪದಾರ್ಥಗಳನ್ನು ತೆಗೆದುಕೊಂಡುಬಂದು ಎಲ್ಲರಿಗೂ, ಭೋಜನಕ್ಕೆ ಬಡಿಸಿ, ಬಳಿಕ ನನಗೂ ಅನ್ನವನ್ನಿಟ್ಟನು.

ನಾನು ಎಲ್ಲರಂತೆಯೇ ಊಟಮಾಡಿದಬಳಿಕ ಮುದುಕನು ಒಂದು ಬಟ್ಟಲಲ್ಲಿ ಸ್ವಲ್ಪಸಾರಾಯಿಯೆನ್ನು ತೆಗೆದುಕೊಂಡುಬಂದನು. ನನ್ನಚರಿತ್ರೆಯು, ಬಹು ವಿನೋದವಾಗಿರಬಹುದೆಂದು, ಅವರು ಊಟಮಾಡಿದ ಬಳಿಕ ಹೇಳಬೇಕೆಂದು, ಪುನಹ ನನ್ನನ್ನುಕೇಳಿದರು. ಆದುದರಿಂದ ಬಹಳ ಹೊತ್ತಿನವರೆಗೂ, ಮೂತನಾಡತಕ್ಕ ಪ್ರಸಕ್ತಿಯುಂಟಾಗಿತ್ತು. ಆದರೆ ಕಾಲಾನುಸಾರವಾಗಿ ಆ ಮುದುಕನು, ಅವರುಗಳನ್ನು ನೋಡಿ, ಅಯ್ಯಾ! ಈಗ ಮಲಗಿಕೊಳ್ಳುವ ಸಮಯವಾಗಿರುವುದು. ಆದುದರಿಂದ ನಾವುಗಳು ನಮ್ಮ ಹಗೆಯನ್ನು ತೀರಿಸಿಕೊಳ್ಳುವುದಕ್ಕೆ ತಕ್ಕ ಪದಾರ್ಥವನ್ನು ತರದೆ, ಹೋದೆವಲ್ಲಾ! ಎಂದುಹೇಳಲು, ಅವರಲ್ಲೊಬ್ಬನು ಕೂಡಲೆ ಒಂದುಕೊಡಡಿಗೆಹೋಗಿ, ಹತ್ತು ತಟ್ಟೆಗಳನ್ನು ತೆಗೆದುಕೊಂಡು ಪ್ರತಿ ಒಂದುಬಟ್ಟಲಿಗೂ, ಒಂದೊಂದು, ಮೀನಿನಬತ್ತಿಯೆ ದೀಪವನ್ನು ಇಟ್ಟುಕೊಂಡು, ಅವರೆದುರಿಗೆ ತಂದಿಟ್ಟನು. ಆ ತಟ್ಟೆಗಳು ನೀಲವಸ್ತ್ರದಿಂದ ಮುಚ್ಚಲ್ಪಟ್ಟಿತ್ತು. ಅದರ ಮುಸುಕನ್ನು ತೆರೆದು ನೋಡಲಾಗಿ ಅದರಲ್ಲಿ ಬೂದಿಯೂ, ಇದ್ದಲು, ತುಂಬ ಇದ್ದುದರಿಂದ ನೋಡಿಪಕೂಡಲೆ, ಭಯಂಕರವಾಗಿರುತ್ತಿದ್ದಿತು. ಬಳಿಕ ಅವರುಗಳೆಲ್ಲರೂ, ಆ ಮಸಿಯೆನ್ನು ಮೈಗೆ ತೊಡೆದುಕೊಂಡು, ಎದೆಯಮೇಲೂ, ಬಾಯಿಮೇಲೂ, ಹೊಡೆದುಕೊಳ್ಳುತ್ತಾ ನಾವು ಅಜ್ಞಾಗರೂಕರಾಗಿ ಮಾಡಿದ ಕಾಮುಕತ್ವಕ್ಕೆ ಇದೇ ಫಲವೆಂದು ಹಂಬಲಿಸಿಕೊಂಡು ಅಳುತ್ತಿದ್ದರು. ಹೀಗೆ ಅವರು ವ್ಯಸನವನ್ನು ಹೊಂದಿದವೇಳೆ ಆ ಮುದುಕನು ಒಂದುಪಾತ್ರೆಯಲ್ಲಿ ನೀರನ್ನು ತಂದುಕೊಡಲು, ಎಲ್ಲರೂ ಮುಖವನ್ನು ಕೈಕಾಲುಗಳನ್ನೂ, ತೊಳೆದುಕೊಂಡು, ತಂತಮ್ಮ ಬಟ್ಟೆಗಳನ್ನು ತೆಗೆದುಹಾಕಿ, ಬೇರೆಬಟ್ಟೆಗಳನ್ನು ಹಾಕಿಕೊಂಡು, ಯಾವಕೆಲಸವನ್ನು ಮೊದಲಿನಂತೆ ಕಾಣಿಸಿಕೊಳ್ಳುತ್ತಿದ್ದರು.

ಆ ಕಾಲದಲ್ಲಿ ನನ್ನಮನಸ್ಸು ಹೇಗಿದ್ದಿತೋ ಅದನ್ನು ನೀವೇ ಯೋಚಿಸಿ. ಆ ಬಾಲಕರು ನನ್ನನ್ನುನೋಡಿ, ನೀನು ಯಾವಮೂತನನ್ನೂ ಆಡದೆ ಸುಮ್ಮನೆ ನೋಡುತ್ತಿರೆಂದು, ಹೇಳಿದ್ದರೂ, ನಾನು ಹೇಗಾದರೂ ಪ್ರಶ್ನೆ ಮಾಡಬೇಕೆಂದು, ಯೋಚಿಸುತ್ತಾ ರಾತ್ರಿಯೆಲ್ಲ ರೆಪ್ಪೆಹಾಕದೆ ನೋಡುತ್ತಾ ಇದ್ದೆನು.

ಮರುದಿನಬೆಳಿಗ್ಗೆ ನಾವೆಲ್ಲರೂ, ಹೊರಗೆ ಹೊರಡುವಾಗ ನಾನು ಅವರುಗಳನ್ನುನೋಡಿ, ಎಲೈ ದೊಡ್ಡಮನುಷ್ಯರಿರಾ ! ನಿನ್ನೆಯದಿನ ರಾತ್ರಿ ನಾನು ನಿಮ್ಮಗಳ ಆಜ್ಞಾನುಸಾರವಾಗಿ ನಡೆದುಕೊಂಡಂತೆ, ಈಗ ನಡೆದುಕೊಳ್ಳಲಾರೆನೆಂದು, ನಿಮ್ಮನ್ನು ಪ್ರಾರ್ಥಿಸುತ್ತಿರುವೆನಾದುದರಿಂದ, ಕ್ಷಮಿಸಬೇಕು. ನೀವುಗಳಾದರೊ ಯುಕ್ತಿವಂತರು, ವಿವೇಕಶಾಲಿಗಳು, ಇದಕ್ಕಾಪ ಸಂದೇಹವೂ ಇಲ್ಲ. ಆದರೂ, ನೀವು ಹುಚ್ಚರುಮಾಡುವ ಕೆಲಸವನ್ನು ಮಾಡುತ್ತಿರುವುದನ್ನು ಕಂಡು, ಆಶ್ಚರ್ಯವನ್ನು ಹೊಂದಿದೆನು. ನೀವು ಏತಕ್ಕಾಗಿ ಮುಖಕ್ಕೆ ಮಸಿಯನ್ನು ಬಳಿದುಕೊಂಡು, ಕುಣಿದಿರಿ. ಮತ್ತು ನಿಮ್ಮಕಣ್ಣುಗಳು ಕುರುಡಾಗಿರುವುದಕ್ಕೆ ಕಾರಣವೇನೆಂಬುದನ್ನು ನಾನು ಕೇಳದೆ ಸುಮ್ಮನಿರಲಾರೆನು. ಇವುಗಳೆಲ್ಲಕ್ಕೂ, ಏನೋ ಒಂದು ಆಶ್ಚರ್ಯಕರವಾದ ಕಾರಣವಿರಬಹುದು. ಅದನ್ನು ತಾವು ದಯವಾಡಿ ನನಗೆ ತಿಳಿಸಬೇಕೆಂದು, ನಾನುಬೇಡಿಕೊಳ್ಳಲು, ಅವರು ನನ್ನನ್ನುನೋಡಿ, ನೀನು ಇಂತಹ ಪ್ರಶ್ನೆಯನ್ನು ಕೇಳಬಾರದು. ಬಾಯಿ ಮುಚ್ಚು ಎಂದು ಹೇಳಿದರು. ಅಷ್ಟಕ್ಕೆ ನಾನು ಸುಮ್ಮನಿರಲಾರದೆ, ಅಯ್ಯಾ ! ನಿಮ್ಮಕಣ್ಣುಗಳು ಕುರುಡಾಗುವುದಕ್ಕೆ ಕಾರಣವನ್ನಾದರೂ ಹೇಳಿ. ಇಲ್ಲವಾದರೆ ನನ್ನರಾಜ್ಯಕ್ಕೆ ಹೋಗುವುದಕ್ಕೆ ಮಾರ್ಗವನ್ನು ತೋರಿಸಿ. ನಾನು ಇಂತಹ ಭಯಂಕರವಾದ ಸಂಗತಿಯನ್ನು ಸದಾ ನೋಡುತ್ತಾ ಇರಲಾರೆನೆಂದು ಹೇಳಲು, ಎಲ್ಲರೂ ಸುಮ್ಮನಿದ್ದರು.

ಅವರಲೊಬ್ಬನು, ನನ್ನನ್ನುನೋಡಿ, ಸ್ನೇಹಿತನೇ ನೀನು ಹೀಗೆ ಹಟವನ್ನು ಹಿಡಿದು ಮೂತನಾಡಬಾರದು. ನಿನಗೆ ಕ್ಷೇಮವುಂಟಾಗುವುದಕ್ಕಾಗಿ, ನಾವು ಮೂತನಾಡದೆ ಇರುವೆವು. ಆದುದರಿಂದ ಸುಮ್ಮನಿರು ಎಂದು ಹೇಳಿದನು. ಆದರೂ ನಾನು ನನಗೆ ಏನಾವರೂಪರಿಯೇ ಈ ವಿಷಯಗಳಿಗೆ ಕಾರಣವನ್ನು ಹೇಳಲೇ ತೀರಬೇಕೆಂದು ಕೇಳಲು, ಆತನು

ಅಯ್ಯಾ ! ಈ ನಿನ್ನ ಕೋರಿಕೆಯನ್ನು ಹೋಗಲಾಡಿಸುವೆವು. ಪುನಹ ನೀನು ಪ್ರಶ್ನೆ ಮಾಡುವುದಾದರೆ ನಮ್ಮಂತಹ ದುರವಸ್ಥೆಯೆ ನಿನಗೂಬರು ವುದರಿಂದ ನಿನಗೊಂದು ಕಣ್ಣು ಕುರುಡಾಗುವುದೆಂದು, ಹೇಳದನು. ಆದ ರೂ ಹಾಗೆ ನನ್ನಕಣ್ಣುಕುರುಡಾದರೆ ಅದುನನ್ನತಪ್ಪೇಹೊರತು, ನಿಮ್ಮ ದಲ್ಲವೆಂದು, ನಾನು ಹೇಳಿದೆನು ಬಳಿಕ ಆತನು ನನ್ನನ್ನು ನೋಡಿ, ನಿನ ಗೊಂದು ಕಣ್ಣು ಹೋದಬಳಿಕ ನಾವು ನಿನ್ನನ್ನು ಸೇರಿಸಿಕೊಳ್ಳಲಾರೆವು. ನಮ್ಮಸಂಖ್ಯೆಯು ಪೂರ್ಣವಾಗಿರುವುದು ಎಂದು ಹೇಳದನು. ಅದಕ್ಕೆ ನಾನೆಷ್ಟು ಯೋಗ್ಯನಾದರೂ ಯೋಗ್ಯತೆಯನ್ನು ದೊಡ್ಡವರಿಗೆ ಬಿಟ್ಟು ಹೋಗುವುದು ನ್ಯಾಯವಲ್ಲವೆಂದು, ತಿಳಿದು ನಾನೆಷ್ಟುಮೂತ್ರವೂ, ಅವ ರುಗಳಿಗೆ ತೊಂದರೆಕೊಡುವುದನ್ನು ಬಿಡದೆ ಇದ್ದುದರಿಂದ, ನನ್ನ ಹಟವ ನ್ನುನೋಡಿ, ಆ ಹತ್ತುಮಂದಿಯೂಆಕೂಡಿ, ಬಂದು ಮೇಕೆಯೆನ್ನುತಂದು ಅದನ್ನು ಕೊಯ್ದು, ಅದರತೊಗಲನ್ನು ನನ್ನಕೈಗೆಕೊಟ್ಟು, ಇದು ನಿನ ಗೆ ಕಾಲಾನುಕಾಲಕ್ಕೆ ಉಪಯೋಗವಾಗಬಹುದೆಂದು, ಹೇಳದರು. ಅಲ್ಲದೆ ನಿನ್ನಮೇಲೆ ಈ ತೊಗಲನ್ನು ಹೊಲಿದು ನಿನ್ನನ್ನು ಬಿಟ್ಟಬಿಡುವೆವು. ಗಂಡಭೇರುಂಡವೆಂಬ ಪಕ್ಷಿಯು ನಿನ್ನನ್ನು ಆಡೆಂದು ಎತ್ತಿಕೊಂಡು ಹೋ ಗುತ್ತಾ ಆಕಾಶದಲ್ಲಿ ಸಂಚರಿಸುವ್ರದು. ಅದನ್ನುನೋಡಿ ನೀನು ಭಯಪಡ ಬೇಕಾದ ಅಗತ್ಯವಿಲ್ಲ. ಅದು ಬಂದು ಪರ್ವತಶಿಖರಕ್ಕೆ ಬಂದು ಸೇರುವು ದು. ನೀನು ಭೂಮಿಯೆನ್ನು ಕಂಡಾಗ ಈ ಚರ್ಮವನ್ನು ನಿನ್ನ ಕೈಗ ತ್ತಿಯಿಂದ ಕೊಯ್ದುಹಾಕಿದರೆ ಆ ಪಕ್ಷಿಯು ನಿನ್ನನ್ನು ಮನುಷ್ಯನೆಂದು ತಿಳಿದು, ಭಯದಿಂದ ಬಿಟ್ಟುಹೋಗುವುದು.

ಆಗ ನೀನು ಭೂಮಿಯೆನ್ನು ಸೇರಿಕೊಳ್ಳುವೆ. ನಂತರ ನೀನು ಅಲ್ಲಿ ನಿಲ್ಲದೆ ಉತ್ತಮವಾದ ಬಂಗಾರದಕೋಟೆಯೊಂದನ್ನು ಸೇರುವೆ. ಅದ ರಲ್ಲಿ ನಾನಾ ರತ್ನಗಳೂ, ಉತ್ತಮವಾದ ಪದಾರ್ಥಗಳೂ, ಇರುವುವು. ಅಲ್ಲಿನ ಅರಮನೆಯ ಬಾಗಿಲು ತೆರೆದಿರುವುದು. ನೀನು ಅದರೊಳಕ್ಕೆಹೋ ಗು. ನಾವು ಇಲ್ಲಿ ಎಷ್ಟುಕಾಲವಿದ್ದೆವೋ, ಅಷ್ಟುಕಾಲವಾಕೋಟೆಯ ಲ್ಲಿದ್ದೆವು. ನಾವುಗಳು ಅಲ್ಲಿ ನೋಡಿ ನೋಡಿ, ಅನುಭವಿಸಿದುದನ್ನು, ನಿನ ಗೆ ಹೇಳಲಾರೆವು. ಆಲ್ಲಿಗೆಹೋದರೆ ಘೋರಸ್ಥಿತಿಯು, ಪ್ರಾಪ್ತವಾಗಿ, ನಿನಗೆ ಕಣ್ಣುಹೋಗುವ್ರದೆಂದು ಮಾತ್ರ ನಾವು ಹೇಳುವೆವು. ಉಳಿದ

ಸಂಗತಿಗಳನ್ನು ನಾವು ಎಂದಿಗೂ ಹೇಳಲಾರೆವಾದುದರಿಂದ ನೀನೇ ಅನುಭವಿಸಿ ತಿಳಿದುಕೊ, ಅಲ್ಲಿಗೆ ನಾವು ಹೋದುದರಿಂದಲೆ ನಮ್ಮಗಳಕಣ್ಣು ಕುರುಡಾಯಿತು. ನಮ್ಮಗಳಲ್ಲೊಬ್ಬೊಬ್ಬರ ಕಥೆಯನ್ನು ಸಂಪೂರ್ಣವಾಗಿ ವಿವರಿಸಿ ಹೇಳಬೇಕಾದರೆ ಬಹುದಿನಗಳೂಹಿಡಿದು, ಅನೇಕ ಆಶ್ಚರ್ಯಗಳು ತೋರಿಬರುವುದರಿಂದ, ನಾವು ಅದನ್ನು ಹೇಳಲಾರೆವು. ಎಂದುಹೇಳದರು. ಅಷ್ಟರಲ್ಲಿ ಷಹರಜಾದಿಯೆಯು, ಬೆಳಗಾದುದರಿಂದ ಕಥೆಯನ್ನು ನಿಲ್ಲಿಸಿ, ಸುಲ್ತಾನರೇ ಮುಂದಿನ ವಿಚಿತ್ರವಾದ ಕಥೆಯನ್ನು ಕೇಳಿದರೆ ತಮಗೆ ತುಂಬ ಆಶ್ಚರ್ಯವುಂಟಾಗುವುದು. ಆದರೆ ಇಂತಹ ದುಃಖಕರವಾದ ಸ್ಥಳದಲ್ಲಿ ಕಥೆಯನ್ನು ನಿಲ್ಲಿಸಬೇಕಾದುದಕ್ಕಾಗಿ, ನಾನು ತುಂಬ ವ್ಯಸನವನ್ನು ಹೊಂದುತ್ತಿರುವೆನೆಂದು ಷಹರಜಾದಿಯು, ಹೇಳಲು, ಸುಲ್ತಾನನು, ಯಾವವೂತನ್ನೂ ಆಡದೆ ಹೊರಟುಹೋದನು.

೫೮ನೆಯ ರಾತ್ರಿ ಕಥೆ,

ಮರುದಿನ ಬೆಳಗಿನಜಾವದಲ್ಲಿ ದಿನರಜಾದಿಯು, ಎದ್ದು ತನ್ನ ಸಹೋದರಿಯನ್ನು ಎಚ್ಚರಗೊಳಿಸಿ, ಅಕ್ಕಾ! ನಿನಗೆ ನಿದ್ರೆಬಾರದೆ ಇದ್ದರೆ ಮೂರನೇ ಕಾಲಿಂಡರಿನ ಕಥೆಯನ್ನು ಪೂರ್ತಿಮಾಡಿ ಹೇಳೆಂದು, ಕೇಳಲು, ಷಹರಜಾದಿಯು, ಕಥೆಯನ್ನು ಹೇಳಲಾರಂಭಿಸಿದಳು. ಅವ್ಮಾ ಆ ದೊಡ್ಡಮನುಷ್ಯರು ಈ ತೆರದಿಂದ ನನಗೆ ಹೇಳಿಯಾಗುತ್ತಲೆ, ಆಮೇಕೆಯತೊಗಲನ್ನು ನನ್ನದೇಹಕ್ಕೆ ಸೇರಿಸಿ, ಹೊಲಿದರು. ನಾನು ಕೈಯಲ್ಲಿ ಕತ್ತಿಯನ್ನು ಬಲವಾಗಿ ಹಿಡಿದುಕೊಂಡೆನು. ಆಗ ಅವರೆಲ್ಲರೂ, ಕೂಟವನ್ನುಕೂಡಿಕೊಂಡು, ಹೊರಟುಹೋದರು. ಕೂಡಲೆ, ಗಂಡಬೇರುಂಡವು ಬಂದು, ನನ್ನನ್ನು ಮೇಕೆಯೆಂದು ತಿಳಿದು ಮೇಲೆಬಿದ್ದು ಹಿಡಿದುಕೊಂಡು, ಆಕಾಶಕ್ಕೆಹಾರಿ ಒಂದಾನೊಂದು ಪರ್ವತದ ಶಿಖರದಲ್ಲಿ ಇಳಿಸಿತು ನಾನು ಭೂವಿಯನ್ನು ನೋಡಿದಕೂಡಲೇ, ಚರ್ಮವನ್ನು ಹರಿದುಹಾಕಲು, ಆ ಪಕ್ಷಿಯು, ನನ್ನನ್ನು ಕೆಳಕ್ಕೆಕೆಡವಿ, ಓಡಿಹೋಯಿತು.

ಆ ಪಕ್ಷಿಯಾದರೋ ಭೂವಿಯೆಲ್ಲಿರುವ ಆನೆಗಳನ್ನು ಆಕಾಶಕ್ಕೆತೆಗೆದುಕೊಂಡು ಹೋಗುವಷ್ಟು ಶಕ್ತಿಯುಳ್ಳದ್ದಾಗಿ ಬಿಳಿಯ ಬಣ್ಣವುಳ್ಳ ಮಹದಾಕಾರವುಳ್ಳದಾಗಿರುವುದು. ನಾನು ಆ ಪರ್ವತವನ್ನುಸೇರಿ ಬಹು

ಚಟುವಟಿಕೆಯಿಂದ ಅಲ್ಲಿಲ್ಲಿ ಸಂಚಾರಮಾಡುತ್ತಾ, ಸುಂದರವಾದ ಆ ಕೋಟೆಯ ಅಂದವನ್ನು ನೋಡುತ್ತ, ಬಳಿಕೊಕ್ಕು ಬಂದು ಹಜೂರವನ್ನು ಸೇರಿ ಆ ದೊಡ್ಡ ಮನುಷ್ಯರು ಹೇಳಿದ ನಿಚಿತ್ರವನ್ನೆಲ್ಲಾ ನೋಡಿ, ಸಂತೋಷದಡುತ್ತಿದ್ದೆನು. ಆ ಮನೆಯು, ತೊಂಭತ್ತೊಂಭತ್ತು ಬಾಗಿಲುಗಳಿಂದಲೂ ಬಂದು ಬಂಗಾರದ ಕವಾಟದಿಂದಲೂ ಕೂಡಿ, ನಾನಾವಿಧವಾದ ಸುಗಂಧದ್ರವ್ಯಗಳಿಂದ ಕೂಡಿದ ಪರಿಮಳವನ್ನು ಬೀರುತ್ತಾ ಇದ್ದಿತು. ಅಲ್ಲಿನಕೆಲವು ದ್ವಾರಗಳು ಮಹಡಿಗೂ ಮತ್ತೆಕೆಲವು ಉದ್ಯಾನವನಗಳಿಗೂ, ಇನ್ನು ಕೆಲವು ರತ್ನಖಚಿತವಾದ ಉಗ್ರಾಣಗಳಿಗೂ, ಹೋಗತಕ್ಕ ಮಾರ್ಗಗಳಾಗಿದ್ದವು. ಹೀಗಿರುವ ಮನೆಯೆನ್ನು ನಾನು ವಿವರವಾಗಿ ನೋಡುತ್ತಿರುವಲ್ಲಿ ನನ್ನೆದುರಿಗಿದ್ದ ಬಂದು ಕೊಠಡಿಯೆ, ಬಾಗಿಲು ತೆರೆದಿತ್ತು. ನಾನು ಅದರೊಳಕ್ಕೆ ಹೋಗಿ ದಿವ್ಯವಾದ ವಸ್ತ್ರಗಳನ್ನು ಧರಿಸಿಕೊಂಡು, ಉತ್ತಮವಾದ ಭರಣಗಳನ್ನು ತೊಟ್ಟು, ವಿನೋದದಿಂದ ಕುಳಿತಿರುವ ನಲವತ್ತುಜನ ಹೆಂಗಸರನ್ನು ನೋಡಿದೆನು. ಅವರು ನನ್ನನ್ನು ನೋಡಿದಕೂಡಲೆ, ಬೇಗನೆದ್ದು ಪುರ್ಯಾದೆಯೆನ್ನೆದುರುನೋಡದೆ, ಮಹಾತ್ಮನಾದ ಪುರುಷನೋತ್ತಮಾ! ನಿನ್ನ ಆಗಮನದಿಂದ ನಾವುಗಳೆಲ್ಲರೂ ಸಂತೃಪ್ತರಾದೆವೆಂದು, ಹೇಳಿದರು. ಅವರಲ್ಲೊಬ್ಬಾಕೆಯು, ನನ್ನನ್ನುನೋಡಿ ನಿಮ್ಮಂತಹ ಮಹಾನುಭಾವರು ಎಂದಿಗೆ ಬರುವರೋ ಎಂದು ಹಾರೈಸುತ್ತಿದ್ದೆವು.

ಈ ದಿನ ನೀವು ಬಂದುದರಿಂದ ನಿಮ್ಮ ಮುಖವನ್ನುನೋಡಿ, ಮುಖಕಾಂತಿಯಿಂದ ಗೌರವಶಾಲಿಗಳಾದ ಮಹಾ ಗುಣಾಢ್ಯರೆಂದು, ತೋರುವುದಲ್ಲದೆ, ನೀವು ನಮ್ಮ ಸಹವಾಸಕ್ಕೆ ಅಯೋಗ್ಯರೆಂದು, ನಾವೆಂದಿಗೂ ಭಾವಿಸಲಾರೆವು, ಎಂದು ಹೇಳಿದಳು. ಬಳಿಕ ಅವರೆಲ್ಲರೂ ಕುಳಿತುಕೊಳ್ಳುವ ಆಸನಗಳಿಗಿಂತ ಅತ್ಯಂತ ಮನೋಹರವಾದ ಬಂದು ಆಸನದಮೇಲೆ, ನನ್ನನ್ನು ಕುಳಿತುಕೊಳ್ಳುವಂತೆ, ಬಲಾತ್ಕಾರಮಾಡಿದರು. ನಾನು ಅದರ ಮೇಲೆ ಕೂತುಕೊಳ್ಳುವುದಕ್ಕೆ, ಇಷ್ಟವಿಲ್ಲವೆಂಬುದನ್ನು ಸೂಚಿಸಿಕೊಂಡೆನು. ಬಳಿಕ ಅವರೆಲ್ಲರೂ, ಒಟ್ಟಾಗಿ ಸೇರಿ, ಇದೇ ನಿಮ್ಮ ಸ್ಥಾನವಾಗಿರುವುದು. ಈ ಕಾಲದಲ್ಲಿ ನೀವೆ ನಮಗೆ ನಾಥರಾಗಿಯೂ, ಪ್ರಭುಗಳಾಗಿಯೂ, ನ್ಯಾಯಾಧಿಪತಿಗಳಾಗಿಯೂ, ಇರುವಿರಿ. ನಾವುಗಳಾದರೋ ! ನಿಮ್ಮ ದಾಸಿಯರೇಹೊರತು, ಮತ್ತೆಬೇರೆ ಇಲ್ಲವೆಂದು ಹೇಳಿದರು. ಅನ

ರಿಂದ ನಾನು ಹೊಂದಬೇಕಾದ ಮರ್ಯಾದೆಗಳೆಲ್ಲವನ್ನು ಹೊಂದಿದುದರಿಂದ ಅವರಲ್ಲಿ ನನಗೆ ಉಂಟಾದ ಪ್ರೇಮವು, ಆ ಸ್ತ್ರೀಯೆರಲ್ಲಿ ವ್ಯಾಮೋಹವನ್ನು ಹೆಚ್ಚಿಸಿತು. ಒಬ್ಬಳು ಕೂಡಲೆ ಬಿಸಿನೀರಿನಿಂದ ಕಾಲನ್ನು ತೊಳೆದಳು. ಮತ್ತೊಬ್ಬಳು ಪನ್ನೀರಿನಿಂದ ಕೈಯನ್ನು ತೊಳೆದಳು. ಇನ್ನೊಬ್ಬಳು ಉತ್ತಮವಾದ ಉಡುಪುಗಳನ್ನು ಧರಿಸಿದಳು. ಮಗದೊಬ್ಬಳು ಷಡ್ರಸೋಪೇತವಾದ ಭೋಜನಪದಾರ್ಥವನ್ನು ತಂದಳು. ಬಳಿಕೊಬ್ಬಳು, ರುಚಿಕರವಾದ ಸಾರಾಯಿಯನ್ನು ಕೊಟ್ಟಳು. ಬಳಿಕ ಅವರುಗಳ ಗೌರವಯುಕ್ತವಾದ ಉಪಚಾರದಿಂದ ನಾನು ಸುಖವಾಗಿ ಊಟಮಾಡಿ ಸಾರಾಯಿಯನ್ನು ಕುಡಿದೆನು. ಅವರುಗಳೂ, ಊಟವನ್ನು ತೀರಿಸಿಕೊಂಡು, ಎಲ್ಲರೂ ನನ್ನಸುತ್ತಲೂ, ವಿನೋದವಾಗಿಕುಳಿತುಕೊಂಡು, ನಾನು ಬಂದ ವರ್ತಮಾನವನ್ನು ಹೇಳಬೇಕೆನಲು, ನಾನು ನನ್ನಚರಿತ್ರೆಯನ್ನು ಸಂಪೂರ್ಣವಾಗಿ ಹೇಳಿದೆನು. ಅಷ್ಟರಲ್ಲಿ ಸೂರ್ಯೋದಯವಾದುದರಿಂದ ಷಹರಜಾದಿಯು, ಕಥೆಯನ್ನು ನಿಲ್ಲಿಸಿದಳು. ಸುಲ್ತಾನನು, ಮಾರನೇಕಾಲೆಂಡರಿನ ಕಥೆಯನ್ನು ಸಂಪೂರ್ಣವಾಗಿಕೇಳ, ಆ ನಲವತ್ತುಜನ ಸ್ತ್ರೀಯರ ಸಮಾಹದಲ್ಲಿ ಸೇರಿದ ರಾಜಪುತ್ರನಗತಿ ಏನಾಯಿತೋ ತಿಳಿದುಕೊಳ್ಳಬೇಕೆಂದು, ಹೊರಟುಹೋದನು.

೫೯ ನೆಯ ರಾತ್ರಿಕಥೆ.

ಮರುದಿನ ಬೆಳಗಿನಜಾವದಲ್ಲಿದ್ದು, ತನ್ನ ಅಕ್ಕನಮಾಲಕವಾಗಿ ಕಥೆಯೆನ್ನು ಕೇಳಬೇಕೆಂಬಾಸೆಯಿಂದ ಮುಂಚಿಗೆ ನಿದ್ರಿಸಿದ ದಿನರಜಾದಿಯು, ಎಂದಿನಂತೆ ಷಹರಜಾದಿಯನ್ನು ಎಚ್ಚರಗೊಳಿಸಿ, ಪ್ರಿಯಸಹೋದರಿ ! ನಿನಗೆ ನಿದ್ರಾಬಾರದೆ ಇದ್ದರೆ, ಆ ಬಂಗಾರದಕೋಟೆಯೊಳ್ಗೆ, ನಲವತ್ತುಜನ ಸ್ತ್ರೀಯೆರಮಧ್ಯದಲ್ಲಿದ್ದ, ರಾಜಪುತ್ರನು ಯಾವ ಸುಖವನ್ನು ಹೊಂದಿದನೋ ಅದನ್ನು ವಿವರಿಸಿ ಹೇಳಬೇಕೆಂದು, ಪ್ರಾರ್ಥಿಸುವೆನೆನಲು, ಷಹರಜಾದಿಯು, ಸುಲ್ತಾನನನ್ನುನೋಡಿ, ಆಳಿದ ಸ್ವಾಮಿಗಳೇ ಬಳಿಕ ಮಾರನೇ ಕಾಲೆಂಡರು, ಜೋಬದಿಯನ್ನುನೋಡಿ, ತನ್ನ ಕಥೆಯನ್ನು ಹೇಳಲಾರಂಭಿಸಿ, ಹೀಗೆಂದು ನುಡಿದಳು. ಆ ನಲವತ್ತು ಮಂದಿ ಸ್ತ್ರೀಯರು ನನ್ನಕಥೆಯನ್ನು ಸಂಪೂರ್ಣವಾಗಿ ಕೇಳಿದ ಬಳಿಕ ಅವರಲ್ಲಿ

ಕೆಲವರು, ಸುಮ್ಮನೆ ಕುಳಿತಿದ್ದರು. ಉಳಿದವರಲ್ಲಿ ಹೊರಗೆದ್ದು ಹೋಗಿ ಕತ್ತಲ್ಲಾದುದರಿಂದ ಒಳಗೆಬರುವ ಕಾಲದಲ್ಲಿ ಮನೋಹರವಾದ ಹೂಬತ್ತಿಗಳನ್ನು ಹೊತ್ತಿಸಿಕೊಂಡುಹೋದರು.

ಆ ಶೃಂಗಾರಮಯವಾದ ಹೂಬತ್ತಿಯ ಬೆಳಕಿನಿಂದ ಗೃಹವೆಲ್ಲವೂ ಮಧ್ಯಾಹ್ನದೋಪಾದಿಯಲ್ಲಿ ಕೋಭಾಯಮಾನವಾಗಿದ್ದಿತು. ಬಳಿಕ ಕೆಲವರು ಹೆಂಗಸರು, ಉತ್ತಮವಾದ ಹಣ್ಣುಗಳನ್ನೂ, ಪಾನಪದಾರ್ಥಗಳನ್ನು ತಂದು ಒಂದು ಮೇಜಿನಮೇಲಿಟ್ಟರು. ಇನ್ನುಕೆಲವರು, ಸಂಗೀತವಿದ್ಯಾಸಾಧನವಾದ ವಾದ್ಯಗಳನ್ನು ತೆಗೆದುಕೊಂಡು, ಅಲ್ಲಿಗೆಬಂದು ಎಲ್ಲವೂ ಸಿದ್ಧವಾದಮೇಲೆ, ತಮ್ಮೊಡನೆ ಊಟಮಾಡಬೇಕೆಂದು, ಕೇಳಿಕೊಂಡರು. ನಾವೆಲ್ಲರೂ ಸಂತೋಷದಿಂದ ಊಟಮಾಡುತ್ತಾ ಕಾಲವನ್ನು ಕಳೆಯುವದರಲ್ಲಿದ್ದೆವು. ಆಗ ಹಾಡತಕ್ಕವರ ಹಾಡೂ, ವಾದ್ಯಗಾರರ ಕೈ ಚಳಕದಿಂದ ಹುಟ್ಟಿದ ಮಧುರವಾದಗಾನವೂ, ನರ್ತಕಿಯೆರಹಾವಭಾವ ವಿಲಾಸಗಳಿಂದ ಕೂಡಿದ ಮನೋಹರವಾದ ನರ್ತನವೂ, ನನ್ನಮನಸ್ಸನ್ನು ಅತ್ಯಂತವಾಗಿ ತೃಪ್ತಿಪಡಿಸಿತು. ಹೀಗೆ ಹಲವು ವಿನೋದಗಳಿಂದ ನಾವು, ಅರ್ಧರಾತ್ರಿಯವರೆಗೂ, ಕಾಲವನ್ನು ಕಳೆದೆವು. ನಂತರ ಆ ಸ್ತ್ರೀಯರಲ್ಲೊಬ್ಬಳು, ಆರ್ಯಪುತ್ರನೇ ! ನೀನು ಈದಿನ ಪ್ರಯಾಣಮಾಡಿ ಬಂದಿರುವುದರಿಂದ ದೇಹಾಲಸ್ಯವು ಅಧಿಕವಾಗಿರುವುದೆಂಬುದಕ್ಕೆ ಸಂದೇಹವಿಲ್ಲ. ಆದುದರಿಂದ ನೀನು ವಿಶ್ರಮಿಸಿಕೊಳ್ಳುವುದಕ್ಕಾಗಿ, ಹಾಸಿಗೆಯು ಸಿದ್ಧವಾಗಿರುವುದು. ಅಲ್ಲದೆ ನೀನು ಹಾಸಿಗೆಯಲ್ಲಿ ಮಲಗಿದ ಕಾಲದಲ್ಲಿ ನಿನಗಿಷ್ಟವಾದ ಸುಖೋದಚಾರವನ್ನು ಮಾಡುವುದಕ್ಕಾಗಿ, ನಮ್ಮಗಳಲ್ಲಿ ನಿನಗಿಷ್ಟಳಾದೊಬ್ಬಳನ್ನು ನೀನು ಆರಿಸಿಕೊಳ್ಳಬಹುದೆಂದು ನುಡಿದಳು. ಅದನ್ನುಕೇಳಿ ನಾನು ವನಿತಾಮಣಿಯರಿರಾ ! ನೀವೆಲ್ಲರೂ ಸಮಾನವಾದ ರೂಪಸೌಂದರ್ಯವನ್ನು ಬುದ್ಧಿಚಾತುರ್ಯವನ್ನು ಉಂಟಾಗಿರುವುದರಿಂದ, ಎಲ್ಲರೂ ಒಂದೇ ವಿಧವಾಗಿ ಉಪಚರಿಸತಕ್ಕವರಾಗುವಿರಿ ಆದುದರಿಂದ ನಾನಾಗಿಯೆ ಒಬ್ಬಳನ್ನು ಗೊತ್ತುಮಾಡಿಕೊಂಡರೆ, ನಿಮ್ಮ ಸಮೂಹದಲ್ಲಿ ಆಕೆಯನ್ನು ಕ್ಷುದ್ರಳೆಂದು ಭಾವಿಸಿ ನಿಮಗೆ ಆ ಗೌರವವನ್ನು ಮಾಡಿದಂತಾಗುವುದು. ಆದುದರಿಂದ ನೀವುಗಳೇ ನಿಮ್ಮಲ್ಲಿ ನನ್ನಬಳಿಗೆ ಬರುವುದಕ್ಕೆ ಯಾರಿಗಿಷ್ಟವಿರುವುದೋ ಅವರನ್ನು ಗೊತ್ತುಮಾಡಿ

ಕಳುಹಿಸಿಕೊಡುವುದುತ್ತಮವೆಂದು, ನಾನು ಹೇಳಿದೆನು. ಈ ಮಾತುಗಳನ್ನು ಕೇಳಿ ನನ್ನಸಂಗಡ ಮಾತನಾಡುತ್ತಿದ್ದ ಕನ್ಯಾಮಣಿಯು, ನನ್ನನ್ನು ಕುರಿತು, ರಾಜಪುತ್ರರೇ ! ನಿಮ್ಮ ಮರ್ಯಾದೆಗಾಗಿ ನಾವು ತುಂಬ ಸಂತೋಷವನ್ನು ಹೊಂದಿದೆವು. ನೀವೇ ಒಬ್ಬಾಬ್ಬಳೆಯನ್ನು ಗೊತ್ತುಮಾಡುವುದರಿಂದ ನಮ್ಮಲ್ಲಿ ಪರಸ್ಪರ ಅಸೂಯೆಯುಂಟಾಗಬಹುದೆಂಬ ಅನುಮಾನದಿಂದ, ನೀವು ಹೀಗೆಹೇಳುತ್ತೀರಿ ? ನಾವುಗಳು ಹಾಗೆಂದಿಗೂ ಅಸೂಯೆಯನ್ನು ಹೊಂದಲಾರೆವು. ನಮ್ಮಗಳಲ್ಲಿ ಮೊಟ್ಟಮೊದಲು, ನಿಮ್ಮ ಸೇವೆಯನ್ನುಮಾಡಿ, ಸಂತೋಷಿಸುವ ಭಾಗ್ಯವು ಯಾರಿಗಿರುವುದೋ ನೋಡಬೇಕೆಂಬುದೇ ನಮ್ಮ ಕುತೂಹಲವೆನಲು, ಬಳಿಕ ದಿನಕ್ಕೊಬ್ಬಳಂತೆ ನಲವತ್ತುಮಂದಿಯು ಕ್ರಮವಾಗಿ ನಿಮ್ಮ ಸೇವೆಯನ್ನು ಮಾಡುವರು. ಅನಂತರದಲ್ಲಿ ಪುನಹ ಮೊದಲಿನವಳು ಬರಬೇಕಾಗಿರುವುದು. ಹೀಗೆ ನಮ್ಮಲ್ಲಿ ಅನ್ಯೋನ್ಯವಾದ ಪ್ರೀತಿಯೂ ನಿಬಂಧನೆಯೂ, ಇರುವುದರಿಂದ ನೀವು ಅನುಮಾನಿಸಬೇಕಾದ ಅಗತ್ಯವಿಲ್ಲ. ನಾವುಗಳು ಅಸೂಯೆಯನ್ನು ಪಡುವುದಿಲ್ಲ. ಆದುದರಿಂದ ತಾವು ಕಾಲಹರಣವನ್ನುಮಾಡದೆ ಬೇಗದಿಂದ ತಮಗಿಷ್ಟಳಾದವಳನ್ನು ಕರೆದುಕೊಂಡು, ಹೋಗಿ ಸುಖಶಯನದಲ್ಲಿ ಮಲಗಿ ವಿಶ್ರಮಿಸಿಕೊಳ್ಳಬಹುದೆಂದು, ನುಡಿದಳು.

ಆಗ ನಾನು ಅವಳಕ್ಕೈಯನ್ನೇ ಹಿಡಿದುಕೊಂಡೆನು. ಆಕೆಯು ನನ್ನ ಕೈಯನ್ನು ಹಿಡಿದುಕೊಂಡಳು. ಉಳಿದವರೆಲ್ಲರೂ ನಮ್ಮಿಬ್ಬರನ್ನೂ ಮನೋಹರವಾಗಿ ಅಲಂಕರಿಸಿ, ಉತ್ತಮಾಲಂಕಾರ ಶೋಭಿತವಾದ ಶಯನಗೃಹದಲ್ಲಿಬಿಟ್ಟು, ತಂತಮ್ಮ ಕೊಠಡಿಗಳಿಗೆ ಹೊರಟುಹೋದರು. ಅಷ್ಟರಲ್ಲಿ ಬೆಳಗಾದುದರಿಂದ ಷಹರಜಾದಿಯು, ಕಥೆಯನ್ನು ನಿಲ್ಲಿಸಿದಳು. ಮನೋಜ್ಞವಾದ ಈ ಕಥೆಯನ್ನು ಪೂರ್ತಿಯೊಗಿ ಕೇಳಬೇಕೆಂಬಭಿಲಾಷೆಯಿಂದ, ಸುಲ್ತಾನನು, ಯಾವಮಾತನ್ನೂ ಆಡದೆ ಹಾಸಿಗೆಯನ್ನು ತೊರೆದು ಹೊರಟುಹೋದನು.

೬೦ ನೆಯ ರಾತ್ರಿ ಕಥೆ

ಮರುದಿನ ಬೆಳಗಿನಜಾವದಲ್ಲಿ ದಿನರಜಾದಿ, ಎಚ್ಚರಗೊಂಡು, ಷಹರಜಾದಿಯನ್ನು ಏಳಿಸಿ, ಪ್ರಿಯಸಹೋದರಿ ! ನಿನಗೆ ನಮ್ಮಗಳಮೇ

ಲಿ ವಿಶ್ವಾಸವುಂಟಾಗಿದ್ದರೆ, ಆ ನಾರೀಮಣಿಯೊಡನೆ ರಾತ್ರಿಯಲಗಿ ನಿದ್ರಿಸಿದ ರಾಜಪುತ್ರನು, ಮರುದಿನ ಏನುಮಾಡಿದನೋ ಅದನ್ನು ವಿವರಿಸಿಹೇಳಬೇಕೆಂದು, ಕೇಳಲು ಷಹರಜಾದಿಯು, ಹಾಗೆಯೇ ಆಗಲೆಂದು ಕಥೆಯನ್ನು ಹೇಳಲಾರಂಭಿಸಿ, ಸುಲ್ತಾನರೇ ! ಮೂಾರನೇ ಕಾಲಿಂಡರು, ಜೋಬದಿಯನ್ನು ನೋಡಿ, ತನ್ನ ಕಥೆಯನ್ನು ಮುಂದೆ ಹೇಳಲಾರಂಭಿಸಿದನು. ನಾನು ಬೆಳಗಾಗುತಲೆ ಎದ್ದು ನನ್ನ ಬಟ್ಟೆಗಳನ್ನು ಹಾಕಿಕೊಂಡೆನು. ಬಳಿಕ ಆ ಮೂವತ್ತೊಂಭತ್ತುಮಂದಿ ಸ್ತ್ರೀಯೆರು, ಹೊಸ ಉಡುಪುಗಳನ್ನು ಹಾಕಿಕೊಂಡು, ನಾನಿರುವ ಅಂತಃಪುರವನ್ನು ಸೇರಿ ವಂದನಾದಿಗಳನ್ನು ಸಮರ್ಪಿಸಿ, ಕ್ಷೇಮಸಮಾಚಾರವನ್ನು ಕುರಿತು ಮೂತನಾಡಿ, ಎಲ್ಲರೂಸೇರಿ ನನ್ನನ್ನು ಸ್ನಾನಶಾಲೆಗೆ ಕರೆದುಕೊಂಡುಹೋಗಿ, ಉತ್ತಮವಾದ ತೆರದಿಂದ ಸ್ನಾನಮಾಡಿಸಿ, ಹಳೆಯ ವಸ್ತ್ರಗಳನ್ನು ತೆಗೆಸಿಹಾಕಿ, ಉತ್ತಮವಸ್ತ್ರಗಳನ್ನು ಧರಿಸಿಕೊಳ್ಳುವಂತೆ ಕೊಟ್ಟರು. ನಾನು ಅದನ್ನು ಧರಿಸಿಕೊಂಡು, ಮೇಜದಬಳಿಯಲ್ಲಿ ಕುಳಿತು ಅಪರೂಡನೆ ಭೋಜನಮಾಡಿದೆನು ಸಾಯಂಕಾಲವಾಗುವವರೆಗೂ, ವಿನೋದವಾಗಿ, ಆ ಮೇಜದ ಮುಂದೆ ಆ ಸ್ತ್ರೀಯೆರುಗಳ ಸಮೂಹದಲ್ಲಿ ಕುಳಿತು, ಕಾಲವನ್ನು ಕಳೆಯೆಲು, ಪುನಹ ಮಲಗುವುದಕ್ಕೆ ಹೋಗುವಕಾಲದಲ್ಲಿ, ಆ ಸ್ತ್ರೀಯೆರು ತಮ್ಮಲ್ಲಿ ನಿನಗಿಷ್ಟಳಾದವಳನ್ನು ಗೊತ್ತುಮಾಡಿಕೊ, ಎಂದುಹೇಳಿದರು.

ಅಮ್ಮಾ ! ನಾನು ಹೇಳಿದ ಮೂತುಗಳನ್ನೇ ಪುನಹ ಹೇಳುವುದರಿಂದ ಕಾಲಹರಣವಲ್ಲದೆ ಆಯೊಾನಪೂ ಉಂಟಾಗುವುದು. ಸಂಪೂರ್ಣವಾಗಿ ಹೇಳಹೋಗುವುದೇನಂದರೆ, ಆ ನಲವತ್ತುಮಂದಿಯೆಲ್ಲಿ ಏನಕ್ಕೊಬ್ಬಳಂತೆ ಆರಿಸಿ ತೆಗೆದುಕೊಳ್ಳುತ್ತಾ ಒಂದುವರ್ಷಕಾಲವನ್ನು ಕಳೆಯುವವರೆಗೂ, ನನಗಾವ ತೊಂದರೆಯೂ ಉಂಟಾಗಲಿಲ್ಲ. ಬಳಿಕ ಒಂದುದಿನ ಆಸ್ತ್ರೀಯೆರೆಲ್ಲರೂ, ನನ್ನಕೊತಡಿಗೆಬಂದು ಕಣ್ಣೀರನ್ನು ಸುರಿಸುತ್ತಾ, ರೋದನಮಾಡುತ್ತಾ, ನನ್ನನ್ನುನೋಡಿ, ಹಾ ! ರಾಜಪುತ್ರ ಇಗೊ, ಇದೆ ಕಡೆಯಸಾರಿ, ನಿನ್ನನ್ನು ಆಲಂಗಿಸಿಕೊಳ್ಳುತ್ತಿರುವೆವು. ಇನ್ನುಮೇಲೆ ನಾವು ನಿನ್ನನ್ನು ಅಗಲಿ ಹೋಗುವ ಕಾಲವುಬಂದಿತು. ಇಗೋ ! ಇದಕ್ಕಾಗಿ, ನಿನಗೆ ವಂದನೆಗಳನ್ನು ಆಚರಿಸುವೆವು. ಎಂದು ಹೇಳುತ್ತಾ, ಬಲವಾಗಿ ರೋದನಮಾಡತೊಡಗಿದರು. ಅವರುಗಳನ್ನುನೋಡಿ, ನಾನು ನೀವುಹೀ

ಗೆ ಅಳುವುದಕ್ಕೂ, ನನ್ನನ್ನು ತೊರೆದು ಹೋಗುವುದಕ್ಕೂ, ಕಾರಣವೇನು ? ಅದನ್ನು ದಯವಾಡಿ, ನನಗೆಹೇಳದರೆ ಒಂದುವೇಳೆ ಅದನ್ನು ನಿವಾರಣೆಮಾಡಿ, ನಿಮಗಾನಂದವನ್ನುಂಟುಮಾಡುವುದಕ್ಕೆ ನನ್ನಕೈಲಾದರೆ ನಮ್ಮಗಳಿಗೆ ಈ ತೊಂದರೆಯು ನಿವಾರಣೆಯಾಗಿ ಅತ್ಯಾನಂದವು ಕೈಗೂಡುವುದು. ಆದುದರಿಂದ ನೀವುಗಳು ಭಗವಂತನಮೇಲೆ, ಭಾರವನ್ನುಹಾಕಿ, ಇದಕ್ಕೆ ಕಾರಣವನ್ನು ನನಗೆ ತಿಳಿಸಬೇಕೆಂದು, ಬೇಡಿಕೊಂಡೆನು. ಆದರೂ, ಅವರು ಅವರದುಃಖಕ್ಕೆ ಕಾರಣವನ್ನುಹೇಳದೆ ಅಯ್ಯೋ ! ಹಾ ! ದೇವರೇ ! ಈತನಿಗಿಂತಲೂ, ಅತಿಶಯವಾದ ಮುನ್ನೂರುಮಂದಿ ದೊಡ್ಡ ಮನುಷ್ಯರು, ನಮ್ಮ ಸಹವಾಸದಲ್ಲಿದ್ದರು. ಆದರೂ ಇವನಂತಹ ಸುಂದರನೂ, ಉತ್ಸಾಹಿಯೂ, ಗುಣಜ್ಞನೂ, ಸತ್ಯವಂತನೂ, ಆದ ಪುರುಷನೊಬ್ಬನೂ, ನಮಗೆ ಮೊದಲು ದೊರೆಯದೆ ಹೋದನಲ್ಲಾ ! ಈಗ ದೈವವಶದಿಂದಸಿಕ್ಕಿರುವ ಇವನಂತಹ ಸೌಂದರ್ಯಶಾಲಿಯಾದ ಸುಗುಣನನ್ನು ತೊರೆದು, ನಾವುಹೇಗೆ ಪ್ರಾಣದಿಂದ ಜೀವಿಸುವೆವೋ, ನಮಗೆ ತಿಳಿಯದಲ್ಲಾ ಅಯ್ಯೋ ! ದುರ್ದೈವವೇ ! ಹಾ ! ಆಪಾ ! ನಮ್ಮಗಳಿಗಿಂತಹ ದುರವಸ್ಥೆಯನ್ನುಂಟುಮಾಡಿದೆಯಾ ! ಎಂದು ಘಟ್ಟಿಯಾಗಿ ರೋದನಮಾಡ ತೊಡಗಿದರು.

ಆಗ ನಾನು, ಆ ಸುಂದರೀಮಣಿಯರನ್ನು ನೋಡಿ, ಓ ಪ್ರಿಯ ನಾಯಕಿಯರಿರಾ ! ನನ್ನನ್ನು ಇನ್ನೆಷ್ಟುಹೊತ್ತೂ ದುಃಖಸಮುದ್ರದಲ್ಲಿ ಮುಳುಗಿಸುವಿರಿ. ಶೀಘ್ರವಾಗಿ ನಿಮ್ಮತೊಂದರೆಗೆಕಾರಣವನ್ನು ಹೇಳಿ, ಎಂದು ಕೇಳಿಕೊಂಡೆನು. ಅದಕ್ಕವರು ನಿನ್ನನ್ನಗಲಿ ಹೋಗುವುದಕ್ಕಿಂತಲೂ, ನಮಗೆ ವ್ಯಸನಕರವಾದುದಾವದುಂಟು ? ನಾವುಗಳು, ಪುನಹ ನಿನ್ನನ್ನು, ನೋಡದಂತಹ ದೌರ್ಭಾಗ್ಯವು ಸಂಭವಿಸಿರುವುದು. ಆದರೆ ನಿನಗೆ ಅಭಿಲಾಷೆಯು, ಅಷೊಟ್ಟಂದುಚಾತುರ್ಯವೂ, ಪುನಃ ನಮ್ಮನ್ನು ನೋಡುವುದರಲ್ಲಿರುವುದೇ ? ಹಾಗಿದ್ದರೆ, ನಿಮ್ಮನ್ನು ನಾವು ನೋಡಬಹುದೆಂದು, ಹೇಳಿದರು. ಆಗ ಎಲೈ ನಾಯಿಕಾಮಣಿಗಳಿರಾ ! ನೀವುಹೇಳಿದ ಮಾತುಗಳ ತಾತ್ಪರ್ಯ ನನಗೆತಿಳಿಯಲಿಲ್ಲವಾದುದರಿಂದ ಮತ್ತೊಂದುಸಾರಿ ಸ್ಪಷ್ಟವಾಗಿ ತಿಳಿಯಹೇಳಬೇಕೆಂದು, ಬೇಡಿಕೊಂಡೆನು. ಆಗ ಆ ಸ್ತ್ರೀಯರಲ್ಲೊಬ್ಬಳು, ನನ್ನನ್ನುಕುರಿತು, ಹಾಗಾದರೆ ನಿನ್ನವಾಸನೆಯನ್ನು ತೃಪ್ತಿ

ಪಡಿಸುವುದಕಾಗಿ ನಮ್ಮಗಳ ಚರಿತೆಯನ್ನು ಹೇಳುವೆವು. ನಾವೆಲ್ಲರೂ ರಾಜಪುತ್ರಿಯರು. ನೀನು ನೋಡಿದಹಾಗೆ ನಾವುಗಳಿಲ್ಲಿ ವಾಸಮಾಡುತ್ತಿರುವೆವು. ಆದರೆ ಪ್ರತಿಸಂವತ್ಸರವೂ, ನಲವತ್ತು ದಿನಗಳವರೆಗೆ, ಅಸಾಧ್ಯವಾದ ಅನಿವಾರ್ಯವಾದ ನಿಮಿತ್ತವಾಗಿ ನಾವು ಇಲ್ಲಿ ವಾಸಮಾಡದೆ ಹೊರಟುಹೋಗಬೇಕಾಗಿರುವುದು, ಇದಕ್ಕೆ ಕಾರಣವನ್ನು ನಾವು ಹೇಳಕೂಡದು, ಆ ನಲವತ್ತು ದಿನಗಳು, ಕಳೆದಬಳಿಕ ಪುನಹ ಇಲ್ಲಿಗೆಬಂದು ಎಂದಿನಂತೆ ವಾಸಮಾಡುತ್ತಿರುವೆವು.

ಆದುದರಿಂದ ಈ ದಿನ ನಿನ್ನನ್ನುತೊರೆದು, ಹೋಗಬೇಕಲ್ಲಾ ಎಂಬ ವ್ಯಸನದಿಂದ ನಾವು ದುಃಖಿಸುತ್ತಿರುವೆವು. ಈ ಮನೆಯನ್ನೆಲ್ಲಾ ನಿನ್ನ ಸ್ವಾಧೀನಮಾಡಿ, ನಾವು ಹೊರಡುವೆವು. ನಾವು ಪುನಹ ಇಲ್ಲಿಗೆ ಬಂದು ಸೇರುವವರೆಗೂ, ನೀನು ಏಕಾಂತವಾಗಿ ವಾಸಮಾಡಿದರೂ, ಬೇಕಾದಸಾಮಾನುಗಳು, ಸಿದ್ಧವಾಗಿರುವುದರಿಂದ ನಿನಗೆ ಸೌಖ್ಯವುಂಟಾಗುವುದು. ಆದರೆ ನಿನಗೆ ನಮ್ಮಗಳಲ್ಲಿ ಅತ್ಯಂತ ವಿಶ್ವಾಸವುಂಟಾಗಿರುವುದರಿಂದ ನಿನ್ನಕ್ಷೇಮಕ್ಕೋಸ್ಕರವಾಗಿ, ನಿನಗೆ ಎಚ್ಚರಿಸಿಹೇಳುವುದೇನಂದರೆ, ನೀನು ಈ ಬಂಗಾರದ ಬಾಗಿಲನ್ನುಮಾತ್ರಎಂದಿಗೂತೆರೆಯಬೇಡ, ಹಾಗೆ ತೆಗೆದುದೇ ಆದರೆ ನಾವು ಪುನಹ ನಿನ್ನನ್ನು ನೋಡಲಾರೆವು. ಇದೆ ನಮ್ಮಗಳಿಗುಂಟಾಗಿರುವ ಮಹಾ ವ್ಯಸನ, ಆದರೆ ನೀನು ಮಹಾ ಮೋಹವನ್ನು ಹೊಂದಿ ನಮ್ಮಗಳನ್ನು ಪುನಹ ಸೇರಬೇಕೆಂದಿರುವುದರಿಂದ, ಹಾಗೆಮಾಡಲಾರೆ ಎಂದು ನಾವು ಚೆನ್ನಾಗಿ ನಂಬಿರುವೆವು. ಆದರೆ ನೀನು ಸ್ವಸ್ಥವಾಗಿಯೂ, ಸೌಖ್ಯವಾಗಿಯೂ, ಇರಬೇಕೆಂಬ ಅಭಿಲಾಷೆಯನ್ನು ಹೊಂದಿದ್ದರೆ, ಹಾಗೆಮಾಡಬೇಡ. ಆದುದರಿಂದ ಯುಕ್ತಾಯುಕ್ತ ಜ್ಞಾನವಿಲ್ಲದೆ ನಿರ್ವಿಚಾರಶೂನ್ಯನಾಗಿ ಆತುರಪಡಬೇಡ. ಹಾಗೆ ಆತುರಪಟ್ಟರೆ ಮಹಾನರ್ಥವು ಸಂಭವಿಸುವುದು. ನೀನೀತೆರದಿಂದ ನಲವತ್ತುದಿನಗಳನ್ನು, ಕಳೆದು ಮರಳಿ ನಾವು ಬಂದಮೇಲೆ, ನಿನ್ನ ನಂದರ್ಶನವನ್ನು ಹೊಂದುವ ಭಾಗ್ಯವನ್ನುಂಟುಮಾಡಬೇಕೆಂದು, ಬೇಡಿಕೊಳ್ಳುವೆವು. ಆ ಬಂಗಾರದಬಾಗಿಲ ಬೀಗವನ್ನು ನಾವು ತೆಗೆದುಕೊಂಡು ಹೋಗಬಲ್ಲೆವು. ಆದರೆ ಹಾಗೆಮಾಡುವುದು ನಿನಗೆ ಮರ್ಯಾದೆಯೂ, ಅಲ್ಲ. ನಮಗೆ ಇಷ್ಟವೂ ಅಲ್ಲವೆಂದು, ಹೇಳಿದರು. ಷಹರಜಾದಿಯು,ಮುಂದಿನಕಥೆಯನ್ನು ಹೇಳಬೇಕೆಂಬಭಿಲಾಷೆಯುಳ್ಳ

ಳಾಗಿದ್ದರೂ, ಬಿಳಗಾದುದರಿಂದ ಕಥೆಯನ್ನು ನಿಲ್ಲಿಸಿದಳು. ಸುಲ್ತಾನ ನಾದರೋ ಆ ನಲವತ್ತುಮಂದಿ ಸ್ತ್ರೀಯರು, ರಾಜಕುಮಾರನನ್ನು ಆಗೃಹದಲ್ಲಿ ಬಿಟ್ಟು, ಹೋದಬಳಿಕ ಆತನೇನು ಮಾಡಿದನೋ ಅದನ್ನು ತಿಳಿದುಕೊಳ್ಳಬೇಕೆಂದು, ಹೇಳಿ ಸುಮ್ಮನೆ ಹೊರಟುಹೋದನು.

೬೧ನೆಯ ರಾತ್ರಿ ಕಥೆ

ಮರುದಿನ ದಿನರಜೋದಿಯು, ಬಿಳಗಿನಜಾವದಲ್ಲಿದ್ದು, ತನ್ನ ಸಹೋದರಿಯನ್ನು ಕುರಿತು, ಅಕ್ಕಾ ! ನಿನ್ನೆಯದಿನ ನೀನು ಅರ್ಧಾಂತ್ಯಕವಾಗಿ ಬಿಟ್ಟಿರುವ ಕಥೆಯನ್ನು ಪೂರ್ತಿಮಾಡಬೇಕೆಂದು, ಸುಲ್ತಾನರು, ಅಭಿಲಾಷೆಯುಳ್ಳವರಾಗಿರುವರಾದಕಾರಣ ಜಾಗ್ರತೆಯಾಗಿ ಆ ಕಥೆಯನ್ನು ಮುಗಿಸೆಂದುಕೇಳಲು, ಷಹರಜೋದಿಯು, ಸುಲ್ತಾನನನ್ನುನೋಡಿ, ಆಳಿದ ಸ್ವಾಮಿಗಳೇ ! ಆ ಮೂರನೆ ಕಾಲಿಂಡರು, ಜೋಬದಿಯನ್ನುನೋಡಿ, ತನ್ನ ಕಥೆಯನ್ನು ಹೇಳಲಾರಂಭಿಸಿ, ಹೀಗೆಂದು ನುಡಿದನು. ಆ ಸೌಂದರ್ಯಶಾಲಿನಿಯರಾದ ರಾಜಪುತ್ರಿಯರ ಮಾತಿನಿಂದ ನಾನು ವ್ಯಸನಾಕ್ರಾಂತನಾದೆನು. ಅವರ ವಿಯೋಗದಿಂದ ನನಗುಂಟಾದ ವ್ಯಸನವನ್ನು ಅವರಿಗೆ ತಿಳಿಯಪಡಿಸಿ, ನನ್ನಮೇಲಣ ವಿಶ್ವಾಸದಿಂದ ಅವರು ಉತ್ತಮವಾದ ಯೋಚನೆಯೆನ್ನು ಹೇಳಿದುದಕ್ಕಾಗಿ, ವಂದನೆಗಳನ್ನುಮಾಡಿ, ಅತ್ಯಂತ ಪ್ರೀತಿಪಾತ್ರರಾದ ಈ ನಾಯಿಕಾಮಣಿಯರ ಮಧ್ಯದಲ್ಲಿ ನನ್ನ ಪುರ್ಣಾಯುವನ್ನು ಸಾರ್ಥಕವಮಾಡಬೇಕೆಂಬ ಕೋರಿಕೆಯಿಂದ, ಅವರು ಹೇಳಿದಯೋಚನೆಯು, ಎಂತಹ ಕಷ್ಟಸಾಧ್ಯವಾಗಿದ್ದರೂ, ಅದನ್ನು ನಡೆಸುವೆನೆಂದು ಒಪ್ಪಿಕೊಂಡೆನು. ಹೀಗೆ ಪರಸ್ಪರಾಭಿಮಾನದಿಂದ ಅವರು ನನ್ನಪ್ಪಣೆಯೆನ್ನು ಪಡೆದು, ಹೊರಡುವುದಕ್ಕೆ ಮುಂಚೆ ನಾನು ಅವರುಗಳನ್ನು ಒಬ್ಬೊಬ್ಬರನ್ನಾಗಿ ಆಲಂಗಿಸಿಕೊಂಡೆನು. ಅವರೆಲ್ಲರೂ, ಹೊರಟುಹೋದ ಬಳಿಕ ಆ ಕೋಟೆಯಲ್ಲಿ ನಾನೊಬ್ಬನೆ ಇದ್ದೆನು.

ಆದರೆ ನಾನು ಪ್ರತಿದಿನವೂ, ಆ ಯುವತೀಮಣಿಯರ ಕೂಟದಲ್ಲಿ ವಿನೋದದಿಂದಲೂ, ನೃತ್ಯಗೀತವಾದ್ಯ, ಸರಸ ಸಲ್ಲಾಪಗಳಿಂದಲೂ, ಕಾಲವನ್ನು ಕಳೆಯುತ್ತಿದ್ದುದರಿಂದ ಆ ಮಾಯೋಗೃಹದಲ್ಲಿರುವ ವಿಚಿತ್ರವಸ್ತುಗಳನ್ನು ನೋಡುವುದಕ್ಕೆ ಅವಕಾಶವು ದೊರೆಯಲಿಲ್ಲ. ಅಲ್ಲದೆ ನನ

ಗೆ ಮನಸ್ಸು ಬರಲಿಲ್ಲ. ಎದುರಿಗೆ ಕಾಣುತ್ತಿದ್ದ ಚೋದ್ಯವಸ್ತುಗಳನ್ನು ಕೂಡ, ಲಕ್ಷ್ಯದಿಂದ ನೋಡಲಾರದೆ, ಹೋದೆನು. ಏತಕ್ಕೆಂದರೆ, ಆ ಸೌಂದರ್ಯವತಿಯೆರಾದ ಯುವತೀಮಣಿಯೆರ ರೂಪಸೌಂದರ್ಯನಿಂದುಂಟಾದ ವ್ಯಾಮೋಹವೂ, ಅವರುಗಳ ಶುಶ್ರೂಷೆಯಿಂದುಂಟಾದ ಆನಂದವೂ, ನನ್ನನ್ನು ಆ ಸ್ಥಿತಿಗೆ ತಂದಿತು. ಆದರೆ ಈಗ ಅವರುಗಳವಿಯೋಗದಿಂದ ಆ ನಲವತ್ತು ದಿನಗಳನ್ನು ಕಳೆಯುವುದು, ನಲವತ್ತುಯುಗಗಳಾಗಿ ತೋಡುಬಂದವು ಆ ಸ್ತ್ರೀಯರು ಹೇಳಿದಂತೆ ನಡೆದುಕೊಳ್ಳಬೇಕೆಂದಿದ್ದುದರಿಂದ ಆ ಬಂಗಾರದ ಬಾಗಿಲನ್ನು ತೆರೆಯಕೂಡದೆಂದು, ಗೊತ್ತುಮಾಡಿಕೊಂಡು, ಉಳಿದಬಾಗಿಲುಗಳನ್ನು ತೆರೆದು ನೋಡಬೇಕೆಂಬ ಕುತೂಹಲದಿಂದ, ಬೇಗದಕೈಗಳನ್ನು ತೆಗೆದುಕೊಂಡು ಮೊದಲನೆಯ ಬಾಗಿಲನ್ನು ತೆರೆದೆನು. ಅಲ್ಲಿಪ್ರವೇಶಮಾಡಿ, ನೋಡಲು ಸುಂದರವಾದ ಒಂದುತೋಟವು ಕಾಣಬಂದಿತು. ಅಂತಹತೋಟವು ನಮ್ಮ ಮತಗ್ರಂಥಗಳಲ್ಲಿ ಹೇಳಿರುವುದಲ್ಲದೆ, ಅನ್ಯವಾದುದಾವುದೂ, ಇಲ್ಲವೆಂದು, ಊಹಿಸಿಕೊಂಡು ನೋಡಲು ನಾನಾ ವಿಚಿತ್ರವಾದ ನಾನೆಂದಿಗೂ ನೋಡದಂತಹ ಫಲಪುಷ್ಪವೃಕ್ಷಗಳೂ, ಲತೆಗಳೂ ಬರಸೆಯೆಯಾಗಿಯೂ, ಸಾಲಾಗಿಯೂ, ಭೂಮಿಯೆಲ್ಲಿನಾಟಿದ ಅನೇಕ ಗಿಡಗಳೂ, ತಂತಮ್ಮ ಸೌಂದರ್ಯದಿಂದ ಚಂಚಲವಾದ ನನ್ನ ದೃಷ್ಟಿಯೆನ್ನು ಸಂಪೂರ್ಣವಾಗಿ ಅಪಹರಿಸಿಕೊಂಡವು. ಅಂತಹ ತೋಟದಲ್ಲಿ ಅಲ್ಲಲ್ಲಿ ಸುಂದರವಾದ ನಿರ್ಮಲ ಜಲವನ್ನೊಳಕೊಂಡಿರುವ ಕಾಲುವೆಗಳು ಗಿಡಗಳ ಬುಡದ ಪಕ್ಕದಲ್ಲಿಯೂ, ಕಾಣಬರುತ್ತಿದ್ದುವು. ತುಂಬಾಗಿ ಸೊಂಪಿನಿಂದ ಹರಿಯುವ ಆ ಕಾಲುವೆಯ ನೀರಿನ ಬಲದಿಂದ ವೃಕ್ಷಗಳೆಲ್ಲ ಫಲಪುಷ್ಪಗಳನ್ನು ಬಿಟ್ಟು, ಭೂಲೋಕದಲ್ಲಿರುವ ಮತ್ತಾವವೃಕ್ಷಗಳೂ, ತಮಗೆ ಸರಿಬಾರವೆಂಬ ಅಹಂಕಾರವನ್ನು ತುಂಬಿಕೊಂಡಂತೆ, ಅತ್ಯಂತಗಾತ್ರವಾದ ಹಣ್ಣುಗಳಿಂದ ಕೂಡಿ, ಆ ಭಾರವನ್ನು ಸಹಿಸಲಾರದೆ ಬಾಗಿ ಹೋಗಿದ್ದುವು. ಇಂತಹ ಫಲವೃಕ್ಷಗಳನ್ನು ಆ ಕಾಲುವೆಯನೀರು, ಬಾಡಿಹೋಗದಂತೆ ಕಾಪಾಡುತ್ತಾ ಇರುವುದು.

ಇಂತಹ ಮನೋಜ್ಞವಾದ ಆ ತೋಟವನ್ನು ಸಂಪೂರ್ಣವಾಗಿ ಇತರ ವಿನೋದಗಳನ್ನು ನೋಡಬೇಕೆಂಬಭಿಲಾಷೆಯಿಂದ, ಆ ಬಾಗಿಲನ್ನು ಮುಚ್ಚಿ ಎರಡನೆಯ ಕದವನ್ನು ತೆರೆದನು. ಅಲ್ಲಿ ನೋಡುವಾಗ ಸುಗಂ

ಧಯುಕ್ತವಾದ ಪರಿಮಳವನ್ನು ಬೀರುತ್ತಿರುವ ಹೂಗಿಡಗಳು, ತಂತಮ್ಮ ಪಾತೆಯಲ್ಲಿರುವ ಜಲವನ್ನು ಪನ್ನೀರಿನಂತೆ ಮಾಧುರ್ಯಸೌಗಂಧಯುಕ್ತವಾದುದನ್ನಾಗಿ ಮಾಡಿದ್ದುದನ್ನು ನೋಡಿದೆನು. ಅದುಹೊರತು ಮತ್ತೇನೂ ಇರಲಿಲ್ಲ. ಬಳಿಕ ಮುಂದಿನೆಯಬಾಗಿಲನ್ನು ತೆರೆಯಲು ವಿಶಾಲವಾದ ಒಂದು ಪಕ್ಷಿಶಾಲೆಯೊಂದನ್ನು ಕಂಡೆನು. ಅದರಲ್ಲಿ ಅಪೂರ್ವವಾದ ಒಂದಾನೊಂದು ಚಂದ್ರಕಾಂತ ಶಿಲಾನಿರ್ಮಿತವಾದ ಕೊಳವಿದ್ದಿತು. ಅದರ ಸುತ್ತಲೂ, ಅಗಿಲು, ಶ್ರೀಗಂಧ, ಚಂದನ, ದೇವದಾರು ಮೊದಲಾದ ಸುಗಂಧಯುಕ್ತವಾದ ಮರಗಳಿಂದ ಚೆನ್ನಾಗಿ ನಿರ್ಮಾಣಿಸಿದ ಪಂಜರಗಳಲ್ಲಿ ಚಿತ್ರವಿಚಿತ್ರತರಗಳಾದ ನಾನಾಪಕ್ಷಿಗಳಿದ್ದುವು. ಆವರೆ, ಕೋಗಿಲೆ, ಅತಗಿಳಿ, ಹಾಲುಹಕ್ಕಿ, ಕಳಹಂಸ, ಹಂಸ, ನವಿಲುಗಳೆಂಬ ಇಂಪಾದ ಧ್ವನಿಯುಳ್ಳ ಪಕ್ಷಿಗಳ ಹೆಸರನ್ನು ಮಾತ್ರ ನಾನು ಬಲ್ಲೆನೆಹೊರತು, ಉಳಿದ ಪಕ್ಷಿಗಳನ್ನು ನಾನೆಂದಿಗೂ, ನೋಡಿರಲಿಲ್ಲ. ಆ ಪಂಜರಗಳಲ್ಲಿ ಆಹಾರವನ್ನು ಜಲವನ್ನು, ತುಂಬಿ ಇಟ್ಟಿದ್ದ ಚಂದ್ರಕಾಂತ ಶಿಲೆಯಬಟ್ಟಲುಗಳಿದ್ದುವು. ಆದರೆ ಆ ವಿಶಾಲವಾದ ಪಕ್ಷಿಶಾಲೆಯನ್ನು ರಕ್ಷಿಸುವುದಕ್ಕೆ ನೂರುಮಂದಿ ಸೇವಕರಿರಬಹುದೆಂದು ಊಹಿಸಿದೆನೇ ಹೊರತು, ಒಬ್ಬ ಮನುಷ್ಯನಾದರೂ ಆ ಸ್ಥಳದಲ್ಲಿರಲಿಲ್ಲ. ಇದೆಲ್ಲವನ್ನೂ ನಾನು ನೋಡುತ್ತಿರುವಾಗಲೆ ಸೂರ್ಯಾಸ್ತಮಯವಾಯಿತು. ಆಗ ಪಕ್ಷಿಗಳೆಲ್ಲವೂ ಮಧುರವಾಗಿ ಧ್ವನಿಮಾಡುತ್ತಾ ವಿಶ್ರಮಿಸಿಕೊಳ್ಳುವುದಕ್ಕಾಗಿ ತಂತಮ್ಮ ಗೂಡುಗಳಿಗೆ ಹೋಗುತ್ತಾ ಇದ್ದವು. ನಾನು ಅವುಗಳನ್ನುನೋಡಿ, ಅತ್ಯಾನಂದವನ್ನು ಹೊಂದಿದವನಾಗಿ ನಾಳೆಯೆದಿನ ಬಂಗಾರದಬಾಗಿಲು ಹೊರತಾಗಿ ಉಳಿದ ಬಾಗಿಲುಗಳನ್ನು, ತೆರೆದು ನೋಡಬೇಕೆಂದೆಂದುಕೊಂಡು, ಹೊರಟು ನನ್ನ ಕೊಠಡಿಗೆಹೋದೆನು. ಬೆಳಿಗ್ಗೆ ಎದ್ದು ನಾಲ್ಕನೆಯೆಬಾಗಿಲನ್ನು ತೆರೆದುನೋಡಲು, ನನಗೆ ಅತ್ಯಾಶ್ಚರ್ಯವುಂಟಾಯಿತು. ಅಲ್ಲಿ ನಾಲ್ಕುಕಡೆಯಲ್ಲಿಯೂ ಸುಂದರವಾಗಿ ಕಟ್ಟಿರುವ ಒಂದು ಮನೆಯನ್ನು ನೋಡಿದೆನು. ಬಹಳವಾಗಿ ವಿವರಿಸಿದರೆ ಕಥಾಸ್ವಾರಸ್ಯವು ರುಚಿಸುವುದಿಲ್ಲವಾದುದರಿಂದ ನಾನು ಅದನ್ನು ಜೇಳಲಾರೆನು ಆದರೂ, ಆ ಕಟ್ಟಡಕ್ಕೆ ನಲವತ್ತು ಬಾಗಿಲುಗಳಿದ್ದವು.

ಪ್ರತಿಯೊಂದು ಬಾಗಿಲಬಳಿಯೆಲ್ಲೂ ಧನರಾಶಿಯು, ಸುರಿದು ಇದ್ದಿತು. ಅವುಗಳು ಅತ್ಯಂತ ವಿಸ್ತಾರವಾದ ರಾಜ್ಯವನ್ನಾಳುವ ಘನವಂತನಾದ

ರಾಜನ ಸಿರಿಯನ್ನು ಕೂಡ ಹಿಯ್ಯಾಳಿಸುವುವು. ಮೊದಲನೆಯ ಬಾಗಿಲಲ್ಲಿ ಮುತ್ತಿನರಾಶಿಯೂ, ಬೆಲೆಯಾದ ಕೆಂಪು, ನೀಲವೊದಲಾದ ಕಲ್ಲುಗಳೂ, ಇದ್ದವು. ಅದನ್ನುನೋಡಿ, ಆಶ್ಚರ್ಯವನ್ನು ಹೊಂದಿದೆನು. ಎರಡನೆ ಬಾಗಿಲಲ್ಲಿ ವಜ್ರವಾಣಿಕ್ಯಗಳಿದ್ದವು. ಮೂರನೆಯೆದರಲ್ಲಿ ಪಚ್ಚೆಗಳಿದ್ದವು. ನಾಲ್ಕನೆಯೆದರಲ್ಲಿ ಬಂಗಾರದ ಕಡ್ಡಿಗಳೂ, ಮತ್ತೊರಡರಲ್ಲಿ ಧನರಾಸಿಯೂ, ಉಳಿದವುಗಳತುಂಬ ಪುಷ್ಯರಾಗ, ಗೋಮೇಧಿಕನಾಗರತ್ನ, ಮೊದಲಾದವುಗಳೂ, ಹವಳ, ದಂತ, ಮೊದಲಾದ ಶೃಂಗಾರ ಜಾತಿಯ ರತ್ನಗಳೂ, ತುಂಬಿದ್ದವು. ಈ ಭಾಗ್ಯಗಳೆಲ್ಲವನ್ನೂ, ವಿವರವಾಗಿ ನೋಡಿ, ನಾನು ಅತ್ಯಾನಂದಭರಿತನಾಗಿ, ಆ ನಾರೀಮಣಿಯೆರ ಸೌಂದರ್ಯವನ್ನೂ, ಅವರಿಗಿರುವ ಐಶ್ವರ್ಯವನ್ನೂ, ಅವರು ವಾಸ ಮಾಡುವ ಸ್ಥಳವನ್ನೂ ಅಂತಹ ಹೆಂಗಸರ ಸೇವೆಯಲ್ಲಿ ಸುಖವನ್ನು ಹೊಂದಿದ ನನ್ನ ಅದೃಷ್ಟವನ್ನು ಕೊಂಡಾಡುತ್ತಾ ಇದ್ದೆನು. ಅಲ್ಲಿನಾನು ನೋಡಿದ ವಿಚಿತ್ರಗಳೆಲ್ಲವನ್ನೂ, ನಿದಾನವಾಗಿ ಹೇಳಲು, ಕಾಲ ಸಾಲದುದರಿಂದ ನಾನು ೩೯ ದಿನಗಳಲ್ಲಿ ೯೯ ಬಾಗಿಲುಗಳನ್ನು ತೆರೆದು ನೋಡಿಕೊಂಡು, ಅತ್ಯಾಶ್ಚರ್ಯವನ್ನುಹೊಂದಿದ್ದೆನು. ಆದರೆ ನಲವತ್ತನೆಯೆದಿನ ಅವರು ಹೇಳದ ಮಾತನ್ನು ನೆನೆದು, ಆ ಬಾಗಿಲನ್ನು ಮಾತ್ರ ತೆರೆಯದೆ ಇದ್ದೆನು. ಆಗ ಸೂರ್ಯೋದಯವಾದುದರಿಂದ ಷಹರಜಾದಿ ಕಥೆಯನ್ನು ನಿಲ್ಲಿಸಿದಳು. ಆದರೆ ಸುಲ್ತಾನನು, ಈ ವಿಚಿತ್ರವಾದ ಕಥೆಯನ್ನು ನಾಳೆ ಸಂಪೂರ್ಣವಾಗಿ ಕೇಳಬೇಕೆಂದು, ಸುಮ್ಮನೆ ಹೊರಟುಹೋದನು.

೬೨ನೆಯ ರಾತ್ರಿ ಕಥೆ.

ತಲೆಬಾಗಿಲು ಹಾಕಿರುವುದು, ಒಳಗಡೆ ಏಕಾಂಗಿಯೆಯಾಗಿರುವ ರಾಜಪುತ್ರನು, ವಿನೋದಗಳನ್ನೆಲ್ಲ, ನೋಡಿದುದೂ ಆಯಿತು. ಮುಂದೆ ಆತನೇನು ನೋಡಿದನೋ ತಿಳದುಕೊಳ್ಳಬೇಕೆಂದು, ಸುಲ್ತಾನನು, ಯೋಚಿಸು

ತ್ತಿರುವಾಗ, ದಿನರಜೌದಿಯು, ತನ್ನ ಸಹೋದರಿಯನ್ನು ಎಚ್ಚರಗೊಳಿಸಿ, ಅಕ್ಕಾ ! ನಿನಗೆ ನಿದ್ರೆಬಾರದೆ ಇದ್ದರೆ, ಮುಂಚಿನೆ ಕಾಲೆಂಡರಿನ ಕಥೆಯನ್ನು ಪೂರ್ತಿಮಾಡೆಂದು, ಹೇಳಲು, ಷಹರಜೌದಿಯು, ಸುಲ್ತಾನನನ್ನುನೋಡಿ, ಹೀಗೆಂದು ಹೇಳಲಾರಂಭಿಸಿದಳು.

ಆ ಸುಂದರೀಮಣಿಯರ ಮೂತುಗಳನ್ನು ನೆನೆದು ನಾನು ಹತ್ತು ದಿನಗಳವರೆಗೂ, ಸ್ವಾಧೀನಚಿತ್ತನಾಗಿದ್ದೆನು. ಬಳಿಕ ನನ್ನಮನಸ್ಸು ಸ್ವಾಧೀನ ತಪ್ಪಿದುದರಿಂದ, ದುರ್ದೈವದಿಂದ ಪ್ರೇರಿತನಾಗಿ ಆ ಲಲನಾಮಣಿಯರು, ನಾಳೆ ಇಲ್ಲಿಗೆ ಬರುವಂತಿದ್ದರೂ, ಅವರನ್ನುನೋಡುವ ಸೌಭಾಗ್ಯವನ್ನು ನಾನು ಹೊಂದಲಾರದೆ, ಹೋಗಿ ಮಹತ್ತಾದ ಶೋಕಸಮುದ್ರದಲ್ಲಿ ಮುಳುಗಿ ಹೋದೆನು. ಆ ಬಂಗಾರದ ಬಾಗಿಲನ್ನು ತೆರೆಯೆಬಾರದೆಂದಿದ್ದರೂ, ತೆರದೇತೆರೆದೆನ.. ಕೂಡಲೇ ನಾನು, ಬಾಗಿಲಒಳಗೆ ಹೋಗದಿದ್ದರೂ, ಒಂದುವಿಧವಾದ ಸುವಾಸನೆಯು ಬಂದಿತು. ಆ ಗಾಳಿಯು, ನನ್ನಮೇಲೆ ಬಿದ್ದಕೂಡಲೆ, ನಾನು ಮೂರ್ಛಾಕ್ರಾಂತನಾದೆನು. ಆದರೂ, ಸ್ವಲ್ಪಹೊತ್ತಿನಲ್ಲಿ ಮೂರ್ಛಿತಿಳಿದೆದ್ದು, ಆ ಗಾಳಿಯು, ನನ್ನಮೇಲೆ ಬೀಸದಂತೆ ಮರೆಯಾಗಿದ್ದು ಮತ್ತೇನು ವಿಚಿತ್ರವಿರುವುದೋನೋಡಬೇಕೆಂದು, ಬಾಗಿಲನ್ನುದಾಟಿ ಒಳಗೆಹೋಗಿ, ಅಲ್ಲಿರುವ ಒಂದಾನೊಂದು, ವಿಶಾಲವಾದ ಕಟ್ಟಡವನ್ನು ಕಂಡೆನು. ಆ ಸ್ಥಳದಲ್ಲಿ ದಟ್ಟವಾಗಿ ಕುಂಕುಮದ ಹೂವ್ವನ್ನು ಚೆಲ್ಲಿದ್ದಿತು. ಅಲ್ಲದೆ ನಾನಾವಿಧವಾದ ಪರಿಮಳದ್ರವ್ಯಗಳು, ಹೊಳೆಯುತ್ತಲಿದ್ದಿತು. ಸುವಾಸನಾಯುಕ್ತವಾದ ಮೇಣದಬತ್ತಿಗಳ, ಮತ್ತು ರತ್ನಮಯವಾದ ಬಂಗಾರದ ದೀವಿಗಳ ಬೆಳಕಿನಿಂದ ಆ ಗೃಹವು ಅತ್ಯಂತ ಶೋಭಾಯಮಾನವಾಗಿದ್ದಿತು. ಆ ಮನೆಯೆಲ್ಲಿರುವ ಅಮೂಲ್ಯವಾದ ಮತ್ತು ವಿಚಿತ್ರತರಗಳಿಂದ ವಸ್ತುಗಳನ್ನು ನೋಡುತ್ತಾ, ಇರುವಲ್ಲಿ ಸುಲಕ್ಷಣಯುಕ್ತವಾದ ಒಂದು ಕುರಿಯ ಕುದುರೆಯನ್ನು ಕಂಡೆನು.

ಅದನ್ನುನೋಡಿ, ಅದರಬಳಿಗೆಹೋಗಿ, ಉತ್ತಮವಾದ ವಸ್ತ್ರಗಳಿಂದಲೂ, ತುರ್ಕೀದೇಶದ ಉತ್ತಮಧಾನ್ಯವಾದ ಸೀಸೇವು ಎಂಬ ಧಾನ್ಯದಿಂದಲೂ, ನಿಬಿಡವಾಗಿ ಸಂತೋಷದಿಂದ ಬಾಲವನ್ನು ಅಲ್ಲಾಡಿಸುತ್ತಾ ನಿಂತಿರುವ ಆ ಕುದುರೆಯನ್ನು ನೋಡಿ, ಅದರಮೇಲೆ ಸವಾರಿ

ಮೂಡಬೀಕೆಂಬಾಸೆಯಿಂದ ಮೇಲೆಹತ್ತಿ ನಡೆಸಿದರೂ ನಡೆಯದೆ ಹೋದುದರಿಂದ ಲಾಯದಿಂದ ತಂದ ಕೊರಡೆಯಿಂದ ಒಂದೇಟನ್ನು ಹಾಕಿದೆನು. ಅದಕ್ಕಿಂತಮೊದಲೆ ಅದು ಮಹಾ ಭಯಂಕರವಾಗಿ ಕೂಗಿ, ಆಡಂಬರದಿಂದ ನಿಂತುಕೊಂಡಿತ್ತು. ನಾನು ದೆಬ್ಬೆಯನ್ನು ಹಾಕಿದಕೂಡಲೆ ಅದು ಅತ್ಯಂತ ರೋಷದಿಂದ ನನ್ನನ್ನೆತ್ತಿಕೊಂಡು, ಆಕಾಶಮಾರ್ಗಕ್ಕೆ ಬಿರುಸಾಗಿ ಹಾರಿತು. ನಾನು ಬಿದ್ದುಹೋಗುವೆನೆಂಬ ಭಯದಿಂದ ಬಲವಾಗಿ ಕೂತುಕೊಂಡಿದ್ದೆನು. ಈದುರೆಯು ಆಕಾಶಮಾರ್ಗದಲ್ಲಿ ನಡೆದು ಒಂದಾನೊಂದು ಕೋಟೆಯಲ್ಲಿ ನನ್ನನ್ನು ಇರುಳಿಸಿತು. ಕೂಡಲೆ ನಾನು ಮೇಲಕ್ಕೇಳುತ್ತಿರುವಾಗ ಆ ಕೆದುರೆಯು, ತನ್ನ ಬಾಲದಿಂದ ನನ್ನೆಕಣ್ಣನ್ನು ಚುಚ್ಚಿತು. ಇದುದರಿಂದ ನನಗೊಂದು ಕಣ್ಣು ಹೋಯಿತು.

ಈ ತೆರದಿಂದ ನಾನು ಒಂದುಕಣ್ಣನ್ನು ಹೋಗಲಾಡಿಸಿಕೊಂಡು ಅವರ ಬಾಧೆಯನ್ನು ಸಹಿಸಲಾರದೆ, ಕೋಟೆಯನ್ನು ಸುತ್ತಲೂನೋಡಿ, ಮಧ್ಯ ಇರುವ ಮನೆಗೆಬಂದು ನೋಡಲಾಗಿ, ಅಲ್ಲಿ ಸುತ್ತಲೂ ಹತ್ತುಸೋಪಾಗಳೂ, ಮಧ್ಯದಲ್ಲಿ ಮತ್ತೊಂದು ಸೋಪಾಪೂ ಹಾಕಿದ್ದುದನ್ನುಕಂಡು ವಿಚಾರಮಾಡಲು, ಆ ಹತ್ತುಮಂದಿ ದೊಡ್ಡಮನುಷ್ಯರು, ಯಾವಸ್ಥಳದಿಂದ ನನ್ನನ್ನು ಮೋಕೆಯಚರ್ಮವನ್ನು ಹೊಲಿದು, ಕಳುಹಿಸಿದರೋ, ಅದೇ ಸ್ಥಳವಾಗಿದ್ದಿತೆಂದು, ತಿಳಿದುಕೊಂಡೆನು. ಆ ಹತ್ತು ಮಂದಿಯೆರೂ, ಆ ಕಾಲದಲ್ಲಿ ಅಲ್ಲಿರಲಿಲ್ಲವಾದುದರಿಂದ, ನಾನು ಆ ಮುದುಕನನ್ನು ನೋಡಿ, ವಂದನೆಗಳನ್ನುಮಾಡಿ, ನನ್ನಕಣ್ಣು ಕುರುಡಾದುದನ್ನು ಹೇಳಿದನು. ಅದಕ್ಕಾತನು ಅಯ್ಯಾ ! ನೀನು ಕಣ್ಣನ್ನು ಹೋಗಲಾಡಿಸಿಕೊಂಡು, ಪುನಹ ಇಲ್ಲಿಗೆ ಬಂದುದಕ್ಕಾಗಿ ನಾವು ನಿನಗೆ ಶುಭೋದಯವನ್ನು ಬಯಸಲಾರೆವಲ್ಲಾ ! ಎಂದು, ವ್ಯಸನಪಡುತ್ತಿರುವೆವು. ಆದರೆ ಈ ನಿನ್ನ ದೌರ್ಭಾಗ್ಯಕ್ಕೆ ಕಾರಣನು ನೀನೇಹೊರತು, ನಾವೆಂದಿಗೂಕಾರಣರಲ್ಲ. ಬಳಿಕ ನಾನು ಈ ದೌರ್ಭಾಗ್ಯವನ್ನು ನಾನೆ ತಂದುಕೊಂಡುದರಿಂದ, ನಿಮ್ಮಗಳಮೇಲೆ ಈ ಅಪರಾಧವನ್ನು ಹೊರಿಸುವುದು ನನಗೆನ್ಯಾಯವಲ್ಲ ನಾನು ಅದಕ್ಕೆ ಸಮ್ಮತಿಸುವುದೂ, ಇಲ್ಲವೆಂದು ಹೇಳಿದೆನು. ಬಳಿಕ ಅವರು ಪದವಿತಪ್ಪಿದವರಿಗೆ ಈ ಕೊಟವೇ ಗತಿಯೆಂದು, ಹೇಳಿದುದರಿಂದ ನಾನು ಅವರಸಹವಾಸ ದೊರಕಬಹುದೆಂದು, ತಿಳಿದೆನು.

ಅಯ್ಯಾ ! ನೀನು ಅನುಭವಿಸಿದಂತಹ ಸುಖಗಳೆಲ್ಲವನ್ನೂ ನಾವು ಒಂದು ಸಂವತ್ಸರಗಳವರೆಗೂ, ಅನುಭವಿಸಿದೆವು. ಆ ರಾಜಪುತ್ರಿಯರು ಹೊರಟುಹೋದಬಳಿಕ ನಾವು ಬಾಗಿಲನ್ನುತೆರೆಯದೆ, ಸುಮ್ಮನಿರುವುದನ್ನು ತೊರೆದು, ನಾವುಗಳು ಕೊನೆಗೆ ಸುಖವನ್ನು ನೀಗಿಕೊಂಡು, ದುರವಸ್ಥೆಯನ್ನು ಹೊಂದಿದೆವು. ನೀನು ನಮ್ಮಂತಹ ಬುದ್ಧಿಹೀನಯೇ ಆದುದರಿಂದ ನೀನು ನಾವು ಹೇಳಿದಂತೆ ಕೇಳಿಕೊಂಡು, ಅದರಂತೆ ನಡೆವುದಕ್ಕೆ ಒಪ್ಪುವುದಾದರೆ, ನಿನ್ನನ್ನು ನಮ್ಮಜಾತಿಗೆ ಸೇರಿಸಿಕೊಳ್ಳುವೆವು. ಹಾಗೆ ನಿನಗೆ ಸಮ್ಮತಿಯುಂಟಾಗದಿದ್ದರೆ, ನೀನು ಇಲ್ಲಿಂದಹೊರಟು ಬಾಗದಾದು ಪಟ್ಟಣವನ್ನು ಸೇರಿದರೆ, ನಿನಗೆ ಉತ್ತಮಗತಿ ಯುಂಟಾಗುವುದೆಂದು, ಹೇಳಿ ಮಾರ್ಗವನ್ನು ತೋರಿಸಲು, ನಾನು ಅದೇಮಾರ್ಗದಲ್ಲಿ ಹೊರಟು ಪ್ರಯೋಣವೂಡಿದೆನು. ಮಾರ್ಗದಲ್ಲಿ ನನ್ನಗಡ್ಡವನ್ನು ಕಣ್ಣುಹುಬ್ಬುಗಳನ್ನು ಬೋಳಿಸಿ, ಸನ್ಯಾಸಿಯವೇಷವನ್ನು ಹಾಕಿಕೊಂಡು ಈದಿನಸಾಯಂಕಾಲಕ್ಕೆ ಬಾಗದಾದುಪಟ್ಟಣದ ಊರುಬಾಗಿಲಿಗೆಬಂದು, ನನ್ನಂತೆ ಇರುವ ಇಬ್ಬರು ಸನ್ಯಾಸಿಗಳನ್ನು ನೋಡಿ, ಅವರ ಕಣ್ಣುಗಳು ಕುರುಡಾಗಿರುವುದಕ್ಕೆ ಕಾರಣವನ್ನು ವಿಚಾರಿಸಲು, ಸಾವಕಾಶವಿಲ್ಲದೆ ನಾವುಗಳೆಲ್ಲರೂ, ಇಲ್ಲಿಗೆ ಬಂದು ನಿಮ್ಮನ್ನು ಬೇಡಿಕೊಂಡೆವು. ನೀವು ನಮಗೆ ದಯೆವೂಡಿ, ಈ ತೆರದಿಂದ ಗೌರವವನ್ನು ಕೊಟ್ಟ್ಟರೆಂದು ಹೇಳಲು ಜೋಬಬಿಯು, ಆತನನ್ನು ಆತನ ಸ್ನೇಹಿತರಾದ ಉಳಿದ ಕಾಲಿಂಡರುಗಳನ್ನು ನೋಡಿ, ನಿಮ್ಮಷ್ಟಾನುಸಾರವಾಗಿ ಮನಸ್ಸುಬಂದಕಡೆಗೆ ಹೋಗಬಹುದೆಂದು, ಹೇಳಲು ಅವರು ಅಮ್ಮ ! ತಾವು ಕರುಣದಿಂದ ತಮ್ಮಕಥೆಯನ್ನು ನಮಗೆ ಹೇಳಿ, ಈ ಮೂವರು ಮಹಾತ್ಮರು ಹೇಳುವ ಕಥೆಯನ್ನು ಕೇಳುವುದಕ್ಕೆ ಅವಕಾಶವನ್ನು ಕೊಡಬೇಕೆಂದು ಕೇಳಿಕೊಂಡರು.

ಆಗ ಜೋಬದಿಯು, ಕಲೀಫನನ್ನು ಅವರ ಪ್ರಧಾನಮಂತ್ರಿಯಾದ ಗಯೆಫರನನ್ನೂ, ಮಸ್ರೂರನನ್ನೂ, ಕುರಿತು, ನಿಮ್ಮಗಳ ಕಥೆಯೆನ್ನು ಹೇಳಬೇಕೆಂದು ಕೇಳಿದಳು. ಆ ಮಾತುಗಳನ್ನುಕೇಳಿ ಯೋವಾಗಲೂ ಮೌನವಾಡುತ್ತಿದ್ದ ಪ್ರಧಾನಮಂತ್ರಿಯಾದ ಗಯೆಫರನು, ಜೋಬದಿಯನ್ನು ನೋಡಿ, ಅಮ್ಮ ! ನಾವುಗಳು ನಮ್ಮ ಚರಿತ್ರೆಯನ್ನು ಕುರಿತು, ಹಿಂದೆಹೇಳಿದ ಸಂಗತಿಯನ್ನೇ ಪುನಹ ಹೇಳಬೇಕಾಗಿರುವುದು. ನಾ

ವು ವಸಾಟಕ್ಕೆ ತಂದಿರುವ ನಮ್ಮ ಸರಕುಗಳನ್ನು ಇಲ್ಲಿ ಮಾರಿಕೊಳ್ಳಬೇಕೆಂದಿರುವುದಕ್ಕಾಗಿ, ಬಂದಿರುವ, ವರ್ತಕರು ನಮ್ಮ ಸರಕುಗಳೆಲ್ಲವನ್ನೂ ಮುಸಾಫರಖಾನೆಯಲ್ಲಿ ಇಳಿಸಿಕೊಂಡಿರುವೆವು. ಆದರೆ ಈದಿನ ಈ ಊರಿನ ಒಬ್ಬಾನೊಬ್ಬ ದೊಡ್ಡ ವರ್ತಕನು, ನಮಗೆ ಔತಣವನ್ನೂಡಿದನು. ನಾವುಗಳು ಆತನಮನೆಯಲ್ಲಿ ಸಂತೋಷದಿಂದ ತೃಪ್ತಿಯಾಗಿ ಊಟವನ್ನೂಡಿ, ಸ್ವೇಚ್ಛೆಯಾಗಿ, ಸಾರಾಯಿಯನ್ನು ಕುಡಿದೆವು. ನಂತರ ಆತನು ನೃತ್ಯಗೀತ ವಾದ್ಯಾದಿಗಳಲ್ಲಿ ಪ್ರವೀಣರಾದ ಪುರುಷರನ್ನೂ, ಸ್ತ್ರೀಯರನ್ನೂ, ಕರೆಸಿದ್ದುದರಿಂದ ಕೋಲಾಹಲಯುಕ್ತವಾದ ಸಂಭ್ರಮದಲ್ಲಿರುತ್ತಿದ್ದೆವು. ಆಗ ರಾಜಭಟರುಬಂದು, ಕೆಲವರನ್ನು ಹಿಡಿದುಕೊಂಡು ಹೋದರು. ದೈವಯೋಗದಿಂದ ನಾವು ತಪ್ಪಿಸಿಕೊಂಡು, ಅಲ್ಲಿಂದ ಹೊರಟು ಬಂದು ನೋಡುವಲ್ಲಿ ನಾವುಗಳು ಇಳಿದುಕೊಂಡಿದ್ದ ಮುಸಾಫರಖಾನೆಯು ಬಾಗಿಲು ಹಾಕಿದ್ದಿತು. ಆದುದರಿಂದ ನಾವು ಮತ್ತೆಲ್ಲಿಗೆ ಹೋಗಬೇಕೆಂದು ಯೋಚಿಸುತ್ತಾ ದಾರಿಯಲ್ಲಿ ಬರುತ್ತಿರುವಾಗ ಮಧ್ಯರಾತ್ರಿಯಾದರೂ, ಕೋಲಾಹಲಯುಕ್ತವಾದ ಸಂಭ್ರಮದಿಂದ ನೀವುಗಳು, ನಗುತ್ತಿರುವುದನ್ನು ನಿಮ್ಮ ಮನೆಯಬಳಿಗೆ ಬಂದಕೂಡಲೆ, ಕಾಡುಕೊಂಡು ಧೈರ್ಯದಿಂದ ಬಾಗಿಲು ತಟ್ಟಿದೆವು. ಬಳಿಕ ನಾವು ಬಳಿಗೆಬಂದಮೇಲೆ ನಡೆದಸಂಗತಿಗಳೆಲ್ಲವೂ, ನಿಮಗೆ ತಿಳಿದಿರುವುದೆಂದು, ನಾವು ನಿಮಗೆ ಹೇಳಬೇಕಾಗಿರುವ ಚರಿತ್ರೆಯನ್ನು ಪ್ರಾರ್ತಿಸಿರುವೆನೆಂದುಹೇಳಿ ಸುಮ್ಮನಾದನು.

ಬಳಿಕ ಜೋಬದಿಯು, ಇವರಿಗೇನುತ್ತರವನ್ನು ಹೇಳಬೇಕೆಂದು ಯೋಚಿಸುತ್ತಿರುವುದನ್ನು ನೋಡಿ, ಆ ಮೂರುಜನ ಕಾಲಿಂಡರು, ಆಕೆಯನ್ನು ಕುರಿತು, ಅಮ್ಮ! ತಾವು ನಮ್ಮಗಳವಿಷಯೆದಲ್ಲಿ ನಡೆಸಿದಂತೆಯೇ ದಯವಾಡಿ ಈಮೂರುಜನವರ್ತಕರ ವಿಷಯೆದಲ್ಲಿಯೂ, ಆಜ್ಞಾಪಿಸಬೇಕೆಂದು, ಬೇಡಿಕೊಳ್ಳುವೆವು. ಎನಲು, ಜೋಬದಿಯು, ಅವರನ್ನು ನೋಡಿ, ನಿಮ್ಮಗಳನ್ನು ನಾನು ಈದಿನ ಮನ್ನಿಸಿಬಿಟ್ಟರುವೆನು. ನಿಮ್ಮ ಪಾಟ್ಟನುಸಾರವಾಗಿ, ಹೊರಟು ಹೋಗಬಹುದೆಂದು, ಹೇಳಿದಳು. ಆಗ ಕೂಲಿಯವನೂ, ಕಾಲಿಂಡರುಗಳೂ, ಖಲೀಫನು ಆತನಹಿಂದೆ ಹೋಗಿದ್ದವರೂ, ಮತನಾಡಿದರೆ ಮುಂದೇನು ತೊಂದರೆಯಾಗುವುದೋ ಎಂಬ ಭಯದಿಂದ ಹೊರ ಹೊರಟರು. ಖಲೀಫನು, ಕಾಲಿಂಡರುಗಳನ್ನು ನೋಡಿ,

ಅಯ್ಯಾ ! ಬಿಳಗಾಗುವುದಕ್ಕೆ ಇನ್ನು ಬಹಳ ಹೊತ್ತಿರುವುದು, ಆದುದರಿಂದ ನೀವು, ಯಾವ ಮಾರ್ಗವನ್ನು ಹಿಡಿದು ಹೋಗುತ್ತೀರೆಂದು, ಕೇಳಲು, ಅವರು, ಅಯ್ಯಾ ! ನಾವು ಇಲ್ಲಿಗೆ ಹೊಸಬರಾದುದರಿಂದ, ಅದನ್ನು ಕಾಣದೆ ಚಿಂತಿಸುತ್ತಿರುವೆವೆಂದು, ಹೇಳಲು, ಕಲೀಫನು ಹಾಗಾದರೆ ನೀವುಗಳೆಲ್ಲರೂ, ನನ್ನಸಂಗಡ ಬನ್ನಿ, ನಿಮ್ಮನ್ನು ಸುಖವಾಗಿಯು, ಭದ್ರವಾಗಿಯೂ, ನೆಮ್ಮದಿಯಾಗಿಯೂ, ಇರುವ ಮನೆಗೆ ಕರೆದುಕೊಂಡು ಹೋಗುವೆನೆಂದು, ಹೇಳಿ ಅವರಕೂಡ ಮುಂದೆ ಹೊರಡುತ್ತಾ ತನ್ನ ಮಂತ್ರಿಯಾದ ಗಯಫರನನ್ನು ನೋಡಿ, ಬಿಳಗಾದಕೂಡಲೆ, ಆ ಸ್ತ್ರೀಯರನ್ನು ನನ್ನ ಆಸ್ಥಾನಕ್ಕೆ ಬರಮಾಡು, ಅವರ ಚರಿತ್ರೆಯನ್ನು ನನ್ನರಾಜ್ಯದ ಚರಿತ್ರೆಯಲ್ಲಿ ಬರೆಯಿಲ್ಪಡಲು, ಯೋಗ್ಯವಾಗಿರುವುದೆಂದು, ಮೂತನಾಡುತ್ತಿದ್ದನು.

ಬಳಿಕ ಗಯೆಫರನು, ಕಾಲಿಂಡರುಗಳನ್ನು ತನ್ನ ಮನೆಗೆ ಕರೆದುಕೊಂಡು ಹೋದನು. ಕೂಲಿಯುವನು ತನ್ನಮನೆಯನ್ನು ಸೇರಿದನು. ಮನ್ಸೌದನೂ, ರಾಜನು ನರಿಯನ್ನು ವ್ಯವೇಶವನ್ನುಮಾಡಿ, ಅರಮನೆಯಲ್ಲಿ ಮಲಗಿಕೊಂಡರು. ಆದರೂ ಕಲೀಫನು, ಆ ಸ್ತ್ರೀಯರ ಮನೆಯಲ್ಲಿ ನಡೆದ ವಿಚಿತ್ರವನ್ನು ನೆನೆದು, ಎರಡು ಕಿವಿಯನಾಯಿಗಳ, ಅವಿನಿಯ ಹೃದಯದಲ್ಲಿ ಹುಣ್ಣುಗಳ ವಿಚಾರವುಂಟಾಗಿ ಸಂಶಯವುಂಟಾಯಿ, ಅದನ್ನು, ಆಮೂಲಾಗ್ರವಾಗಿ ವಿಚಾರಿಸಿ ತಿಳಿದುಕೊಳ್ಳಬೇಕೆಂದು, ನಿದ್ರಾಬಾರದೆ ಹಾಸಿಗೆಯಲ್ಲಿ ಹೊರಳುತ್ತಿರಲು, ಬಿಳಗಾಯಿತು. ಕಲೀಫನು, ಎಂದಿನಂತೆ ರಾಜಸಭೆಯಲ್ಲಿ ಅಗ್ರಾಸನವನ್ನು ವಹಿಸಿದರು. ಪ್ರಧಾನಮಂತ್ರಿಯು, ಬಂದು, ಆತನಿಗೆ ಮೂಡಬೇಕಾದ ವಂದನೆಗಳನ್ನು ಮೂಡಲು, ಕಲೀಫನು, ಅಯ್ಯಾ ! ನಮ್ಮ ರಾಜ್ಯದಲ್ಲಿ ಮತ್ತಾವ ವಿಶೇಷವೂ ಇಲ್ಲ. ನಿನ್ನೆಯ ರಾತ್ರಿ ಆ ಸ್ತ್ರೀಯರ ಮನೆಯಲ್ಲಿ ನಡೆದ ವಿಚಿತ್ರವನ್ನು ಮಾತ್ರ ತಿಳಿದುಕೊಳ್ಳಬೇಕಾಗಿದೆ. ಆದುದರಿಂದ ನೀನು ಶೀಘ್ರವಾಗಿ ಹೊರಟು, ಆಸ್ತ್ರೀಯರನ್ನು, ನಾಯಿಗಳನ್ನು ಕಾಲಿಂಡರುಗಳನ್ನು ಕರೆದುಕೊಂಡು ತ್ವರೆಯಾಗಿ ಬಾ ! ನೀನು ಬರುವವರೆಗೂ, ನಾನು ಇಲ್ಲಿಯೇ ಕಾದುಕೊಂಡಿರುವೆನೆಂದು, ಹೇಳಿದನು. ಮಂತ್ರಿಯು, ರಾಜನ ಆತುರವನ್ನುನೋಡಿ, ತಾನ ಮೊದಲೆ ಆ ಸ್ತ್ರೀಯರಿದ್ದ ಮನೆಯನ್ನು, ಚೆನ್ನಾಗಿ ನೋಡಿದ್ದನಾದು

ದರಿಂದ ಬೇಗನೆ ಆ ಸ್ಥಳಕ್ಕೆ ಬಂದು, ಅವರುಗಳನ್ನು ಕುರಿತು, ಅಮ್ಮ! ಕಲೀಫರು ನಿಮ್ಮಗಳನ್ನು ತಮ್ಮ ಆಸ್ಥಾನಕ್ಕೆ ಬರಮಾಡಿಕೊಳ್ಳುವುದಕ್ಕಾಗಿ, ನನ್ನನ್ನು ಕಳುಹಿಸಿರುವರೆಂದು, ಹೇಳಿದನು. ಬಳಿಕ ಆ ಮೂರು ರಾಜನ ಹೆಂಗಸರು, ಮುಸುಕನ್ನು ಹಾಕಿಕೊಂಡು, ಮಂತ್ರಿಯ ಹಿಂದೆ ಬಂದರು. ಆತನು ಬರುವಾಗ ತನ್ನ ಮನೆಯ ಪೂರ್ವವಾಗಿ ಬಂದು ಕಾಲಿಂಡರುಗಳನ್ನು ಜೊತೆಯಲ್ಲಿ ಕರೆದುಕೊಂಡು, ಎಜ್ಜರಿಕೆಯಿಂದ ಅರಮನೆಯನ್ನು ಸೇರಿದರು. ಕಲೀಫನು ಮಂತ್ರಿಯ ಚಮತ್ಕಾರಕ್ಕೆ ಮೆಚ್ಚಿ, ತುಂಬ ಆಶ್ಚರ್ಯವನ್ನು ಹೊಂದಿ, ಆತನನ್ನು ಸತ್ಕರಿಸಿದನು. ಅನಂರು ಗಳೆಲ್ಲರೂ, ಕಲೀಫನನ್ನು ಗುರುತು ಕಾಣದಿದ್ದರೂ, ತಾವು ಮೊದಲುನೋಡಿ, ಮೂತನಾಡಿದ ಮನುಷ್ಯನೆಂದೆಂದುಕೊಂಡರು. ನಂತರ ಕಲೀಫನು, ಆ ಸ್ತ್ರೀಯೆರನ್ನು ಮರ್ಯಾದೆಯಿಂದ ವಿಚಾರಿಸಬೇಕೆಂದು, ಯೋಚಿಸಿ, ಆಸ್ಥಾನಮಂಟಪದ ಎದುರಿನ ಕೊಠಡಿಯ ಬಾಗಿಲಿಗೆ ತೆರೆಯನ್ನು ಹಾಕಿಸಿ ಅವರಸಂಗಡ ಬಂದಿರುವ ಜನರಿಗೆ ಗೌರವವನ್ನು ಕೊಡುವುದಕ್ಕಾಗಿ, ಆ ಕಾಲಿಂಡರುಗಳನ್ನು, ತನ್ನ ಬಳಿಯಲ್ಲಿ ಕುಳ್ಳರಿಸಿಕೊಂಡನು.

ಬಳಿಕ ಕಲೀಫನು, ಆ ಸ್ತ್ರೀಯೆರನ್ನು ನೋಡಿ, ಅಮ್ಮ! ನಾನು ನಿನ್ನೆರಾತ್ರಿ ಪರ್ಯಟಕವೇಷವನ್ನು ಹಾಕಿಕೊಂಡು, ನಿಮ್ಮ ಮನೆಗೆ ಬಂದಿದ್ದೆನು. ಅಲ್ಲಿ ನಡೆದ ಸಂಗತಿಯನ್ನು ನಿಮ್ಮಸಂಗಡ ಹೇಳಿದರೆ ನಿನುಗೆ ನಾನು ವೋಸವೂಡಿ ಬಂಪು, ಈಗ ಆಗ್ರಹವನ್ನು ತೀರಿಸಿಕೊಳ್ಳುವುದಕ್ಕಾಗಿ, ಕರೆತರಿಸಿರುವೆನೆಂದು, ನೀವು ಹೆದರಬಹುದು, ಹಾಗೆ ನೀವು ಸ್ವಲ್ಪವೂ ಹೆದರಬೇಡಿ, ನಿಮ್ಮ ಗುಣಾತಿಶಯೆಗಳನ್ನು ನೋಡಿ, ನಮ್ಮಗಳಿಗೆ ತುಂಬ ಆನಂದವಾಯಿತು. ನಮ್ಮ ಪಟ್ಟಣದಲ್ಲಿರುವ ಸ್ತ್ರೀಯೆರೆಲ್ಲರೂ, ನಿಮ್ಮ ಗುಣಗಳನ್ನೇ ಅನುಸರಿಸಬೇಕೆಂಬುದೆ ನನ್ನಕೋರಿಕೆ. ನಾನು ನಿಮ್ಮ ಮನೆಯಲ್ಲಿ ಮೂತನಾಡಕೂಡದೆಂಬ ಮರ್ಯಾದೆಯನ್ನು ತಪ್ಪಿನಡೆದರೂ, ನೀವು ಸಹಿಸಿಕೊಂಡಿರಿ. ಆಗ ಪರ್ಯಟಕನಾಗಿದ್ದ ನಾನು ಈಗ ದೀರ್ಘದರ್ಶಿಯೆ ವಂಶಸ್ಥನಾದ ಜೊತೆಗಳಲ್ಲಿ ಏಳನೆಯವನಾದ ಹರೋರ್ಷ ಅಲಂಖಾಶ್ಚರ್ಯದನೆಂಬ, ಕಲೀಫನಾಗಿರುವೆನು. ನೀವು ಮೂರು ಮಂದಿಯೂ, ಯಾರು? ಆ ನಾಯಿಗಳಾವುವು? ಅವುಗಳನ್ನು ಹೊಡೆದು ನೀವು ಅಳುತ್ತಿರುವುದಕ್ಕೆ ಕಾರಣವೇನು? ಇದು ನಿಮ್ಮಗಳಲ್ಲಿ ಕೊನೆಯವಳಾದ

ಅವಿನಿಯೆ ಎದೆಯುತುಂಬಿ ಗಾಯಗಳಾಗಿರುವುದಕ್ಕೆ ಕಾರಣವೇನೆಂಬುದನ್ನು ತಿಳದುಕೊಳ್ಳುವುದಕ್ಕಾಗಿ, ನಿಮ್ಮನ್ನು ಇಲ್ಲಿಗೆ ಕರೆಸಿರುವೆನೆಂದು, ಕಲೀಫನು ಹೇಳಿದ ಸಂಗತಿಯನ್ನು ಆ ಸ್ತ್ರೀಯರು ಅವಗಾಹಿಸಿಕೊಂಡಿದ್ದರೂ, ಆಸ್ಥಾನದ ಮರ್ಯಾದೆಗಾಗಿ ಗಯೆಫರನು, ಪುನಹ ಅದೇವಾಕುಗಳನ್ನು ಹೇಳದನು. ಷಹರಜಾದಿಯು, ಸುಲ್ತಾನನನ್ನು ನೋಡಿ, ಸಾಮ್ರವಿಾ ! ಬೆಳಗಾದುದರಿಂದ ಕಥೆಯನ್ನು ನಿಲ್ಲಿಸುವೆನು. ತಾವು ದಯವಾಡಿ, ಕೇಳಬೇಕೆಂದರೆ, ನಾಳೆಯದಿನ ಜೋಬದಿಯ ಕಥೆಯನ್ನೇ ಹೇಳುವೆನೆನಲು, ಸುಲ್ತಾನನು, ಸಮ್ಮತಿಸಿ, ಹಾಸಿಗೆಯಿಂದೆದ್ದು ಹೊರಟು, ಹೋದನು.

೬೩ ನೆಯ ರಾತ್ರಿ ಕಥೆ,

ಮರುದಿನ ಬೆಳಗಿನಜಾವದಲ್ಲಿ ದಿನರಜಾದಿಯು, ಎಚ್ಚರಗೊಂಡು, ತನ್ನ ಸಹೋದರಿಯನ್ನು ಕುರಿತು, ಅಕ್ಕಾ ! ಜೋಬಡಿಯು, ಬಹುಶಃ ಸುಲ್ತಾನನಿಗೆ ತನ್ನ ಕಥೆಯನ್ನು ಹೇಳರಬಹುದಲ್ಲವೆ ? ಎಂದುಕೇಳಲು, ತಂಗೀ ಕಲೀಫರು ಆಕೆಯನ್ನು ಕುರಿತು, ಉತ್ಸಾಹಕರವಾದ ಮೂರು ತುಗಳನ್ನಾಡಿ ಸಂತೋಷ ಪಡಿಸಿದರಿಂದ, ಆಕೆ ಆನಂದಪರವಶಳಾಗಿ ಹೀಗೆಂದು ಹೇಳಲಾರಂಭಿಸಿದಳು.

ಜೋಬದಿಯೆಂಬ ಸ್ತ್ರೀಯಳ ಕಥೆ

ಎಲೈ ಚಕ್ರವರ್ತಿಯೊಡೆಯನೇ ! ಈಗ ನಾನು ಹೇಳಬೇಕೆಂದಿರುವ ಕಥೆಯು, ನೀನು ಕೇಳರುವ ಕಥೆಗಳೆಲ್ಲಾ ಅತ್ಯಾಶ್ಚರ್ಯಕರವಾದುದು. ಆ ಎರಡು ನಾಯಿಗಳೂ, ನಾನು ಅಕ್ಕತಂಗಿಯರು, ನನ್ನ ಮನೆಯಲ್ಲಿ ವಾಸಮಾಡುತ್ತಿರುವ ಇವರೂ ಅಕ್ಕತಂಗಿಯರೇ ಹೌದು,

ಆದರೆ ಸವತಿತಾಯಿಯೆವುಕ್ಕಳು. ನನ್ನಹೆಸರು ಜೋಬದಿ, ಎದೆ ಹುಣ್ಣಾಣ್ಣ ಗಿರುವಳು ಅವಿನಿ, ಮತ್ತೊಬ್ಬಳು ಸಫಯಿ, ನಮ್ಮತಂದೆಯು ಸತ್ತು ಹೋದಮೇಲೆ, ಆತನ ಆಸ್ತಿಯನ್ನು ನಾವು ಸವುವಾಗಿ ಹಂಚಿಕೊಂಡೆವು. ಈ ಇಬ್ಬರು ತಂಗಿಯೆರು, ತಮ್ಮ ಭಾಗಗಳನ್ನು ತೆಗೆದುಕೊಂಡು ತಾಯಿಯೆ ಬಳಯೆಲ್ಲಿದ್ದರು. ನಾನು ನನ್ನತಂಗಿಯೆರೂ, ನಮ್ಮತಾಯಿಯೆ ಬಳಯೆಲ್ಲೆ ಇದ್ದೆವು. ಆಕೆಯೂ ಸಾಯುವಾಗ, ಅವಳ ಆಸ್ತಿಯನ್ನು, ಹಂಚಿಕೊಂಡೆವು. ಒಂದುಸಾವಿರ ರೂಪಾಯಿಗಳು ಬಂದವು. ಕೂಡಲೆ ಇಬ್ಬರು ಅಕ್ಕಂದಿರೂ, ಮದುವೆ ಮೂಡಿಕೊಂಡರು. ಅವರು ಗಂಡಂದಿರ ಮನೆಗೆ ಹೊರಟು ಹೋದಮೇಲೆ, ನಾನು ಒಂಟಿಯಾಗಿಬೇ ಇದ್ದೆನು. ಸ್ವಲ್ಪದಿನಗಳಲ್ಲೆ ನನ್ನ ದೊಡ್ಡಕ್ಕನ ಗಂಡನು, ತನ್ನ ಆಸ್ತಿಯೆನ್ನೆಲ್ಲಾ ವೂರಿಕೊಂಡು, ಹೆಂಡತಿಯ ಬಳಯೆಲ್ಲಿದ್ದ ಹಣವನ್ನು ತೆಗೆದುಕೊಂಡು, ಆಫ್ರಿಕಾರಾಜ್ಯಕ್ಕೆ ಹೋಗಿ, ದುರ್ನಡತೆಯನ್ನು ಕಲಿತು, ಅದರಿಂದ ಬಡವನಾದನು. ಕೂಡಲೆ ಯಾವುದೋ ಒಂದು ಕಾರಣದಿಂದ ಇಲ್ಲದನ್ಯಾಯವನ್ನು ಹೂಡಿ, ನನ್ನ ಅಕ್ಕನನ್ನು ತೊರೆದುಬಿಟ್ಟನು. ಬಳಿಕ ಆಕೆ ನಾನಾದುಃಖವನ್ನು ಹೊಂದಿ, ನನ್ನಬಳಿಗೆ ಬಂದಳು.

ಆ ಕಾಲದಲ್ಲಿ ಅವಳ ದುರವಸ್ಥೆಯನ್ನು ನೋಡುವುದಕ್ಕಾಗುತ್ತಿರಲಿಲ್ಲ. ಆದರೂ ನಾನು ಅವಳನ್ನು ಮರ್ಯಾದೆಯಿಂದ ಬರವೂಡಿಕೊಂಡು, ಆಕೆಯ ದೌರ್ಭಾಗ್ಯಕ್ಕೆ ಕಾರಣವನ್ನು ಕೇಳಲು, ಆಕೆ ತನ್ನಗಂಡನು ದಯಾಶೂನ್ಯನಾಗಿ ತನ್ನಲ್ಲಿ ನಡಿಸಿದ ಅಜಚಾರಗಳನ್ನು ಹೇಳಿಕೊಂಡು ಅತ್ತಳು. ಅದನ್ನುಕೇಳಿ ಸಹಿಸಲಾರದೆ, ಕಣ್ಣೀರುಹಾಕಿಕೊಂಡೆನು. ಬಳಿಕ ಆಕೆಗೆ ಸ್ನಾನವೂಡಿಸಿ, ಉಡುವುದಕ್ಕೆ ವಸ್ತ್ರಗಳನ್ನುಕೊಟ್ಟು, ಅಕ್ಕ ನೀನು ನನಗಿಂತಲೂ, ಹಿರಿಯೆವಳು. ನೀನು ಇಲ್ಲಿಂದ ಹೊರಟು ಹೋದಬಳಿಕ ನಾನು ವ್ಯಾಪಾರವೂಡಿ, ಧನವನ್ನು ವೃದ್ಧಿವೂಡಿಕೊಂಡಿರುವೆನು. ಆದುದರಿಂದ ಅದಕ್ಕೆ ಕೊರತೆಯಾಗದಂತೆ ನೀನು ಅದನ್ನು ಉವಯೋಗ ಪಡಿಸಬೆಹುದೆಂದು, ಹೇಳಿದೆನು. ಹೀಗೆ ನಾನು ಆಕೆಯು ಸಂತೋಷದಿಂದ ಕೆಲವು ಕಾಲವಿದ್ದ ಮತ್ತೊಬ್ಬ ಮಂಗಿರೆ ವಿಷಯನಾಗಿ ಮೂತನಾಡಿಕೊಳ್ಳುತ್ತಿರಲು, ಆಕೆಯು, ಪೊಲೆಸಿನವಳ ಸ್ಥಿತಿಗೆ ಬಂದು, ತನ್ನ ಗಂಡನಿಂದ ಬಿಡಲ್ಪಟ್ಟು, ನಾನಾಕಷ್ಟಗಳಿಂದ ನನ್ನಬಳಿಗೆ ಬಂದಳು.

ಆಕೆಯನ್ನೂ, ಪ್ರೀತಿ ವಿಶ್ವಾಸದಿಂದ ನಾನು ಬರಮಾಡಿಕೊಂಡು, ಉಪಚಾರಮಾಡುತ್ತಿದ್ದೆ. ಸ್ವಲ್ಪಕಾಲದಲ್ಲಿ ಅವರು ನನಗೆ ಯಾವವಿಧವಾದ ತೊಂದರೆಯನ್ನೂ, ಕೊಡಕೂಡದೆಂದು ತಿಳಿದು ಪುನಹ ಮದುವೆ ಮಾಡಿಕೊಳ್ಳುತ್ತೇನೆಂದು, ನನ್ನಸಂಗಡ ಹೇಳಿದರು. ಆ ಮಾತನ್ನು ಕೇಳಿ, ಅಕ್ಕಾ! ನನ್ನ ಸಂಪಾದನೆಯಿಲ್ಲಿ ಮೂರುಜನಗಳೂ ಸುಖವಾಗಿ ಜೀವನವನ್ನಡಬಹುದಷ್ಟೆ, ನನಗೆತೊಂದರೆಯಾಗುವುದೆಂಬ, ನಿಮ್ಮಯೋಚನೆಯನ್ನು ತೊರೆಯಿರಿ! ಅಲ್ಲದೆ ನಿಮಗೆ ವಿವಾಹದಿಂದುಂಟಾಗುವ ಸುಖವು, ಅನುಭವ ಪ್ರೌಢಿಕವಾಗಿ ಬಂದಿರುವುದು. ಆದರೂ ಮತ್ತೆ ಮದುವೆ ಮಾಡಿಕೊಳ್ಳಬೇಕೆಂದಿರುವಿರಿ. ಅಂತಹ ಯೋಗ್ಯನಾದ ಗಂಡನು ದೊರಕದೆ ಹೋದರೆ, ತೊಂದರೆಯಾಗುವುದಿಲ್ಲವೆ? ನಿಮ್ಮ ಯೋಚನೆಯನ್ನು ತೊರೆದು, ಸುಖವಾಗಿರಿ. ಎಂದು ಹೇಳಿದೆನು. ಅವರು ನನ್ನಮಾತನ್ನು ನಿರಾಕರಿಸಿ, ಪಟ್ಟುಬಿಡದೆಯೆನ್ನು ಹಿಡಿಕೊಂಡು ಬೇರೆಟುನೋಗಿ ಮತ್ತೆ ಬಂದು ತಿಂಗಳಾದಕೂಡಲೆ, ನನ್ನಬಳಿಗೆ ಬಂದು, ಅಮ್ಮಾ! ಮೊದಲು ನೀನು ಹೇಳಿದ ಬುದ್ಧಿವಾದಗಳು ಕೇಳದೇ ಹೋದುದಕ್ಕಾಗಿ, ನಮ್ಮಗಳನ್ನು ಮನ್ನಿಸಿ, ಪುನಹ ನಿನ್ನಬಳಿಯಲ್ಲಿಟ್ಟುಕೊಂಡರೆ. ನಾವೆಂದಿಗೂ, ನಿನ್ನ ಮಾತನ್ನು ಮೀರಿ ನಡೆಯುವವಲ್ಲದೆಂದು ಹೇಳಿದರು.

ಪ್ರಿಯೆ ಸಹೋದರಿಯರಿರಾ! ನೀವು ನನ್ನನ್ನು ತೊರೆದುಹೋದರೂ, ನಾನೆಂದಿಗೂ, ನಿಮ್ಮಗಳನ್ನು ತೊರೆಯಲಾರೆ, ಪುನಹಬಂದು ನನ್ನ ಆಸ್ತಿಯನ್ನು ಸುಖವಾಗಿ ಅನುಭವಿಸುತ್ತಿರಿ, ಎಂದು ಹೇಳಿದೆನು. ಹೀಗೆ ಅತ್ಯಂತಪ್ರೀತಿಯಿಂದ ನಾವುಗಳು ಬಂದು ವರ್ಷವಪರಿಗೂ, ವ್ಯಾಪಾರವೂಡದುದರಿಂದ ಭಗವಂತನು ನನ್ನ ಧನಧಾನವನ್ನು ವೃದ್ಧಿಮಾಡಿದನು. ಆಗ ನಾನು ಸಂಪಾದನೆಯಿಂದ ಪ್ರಯಾಣಮಾಡಿ, ವ್ಯಾಪಾರದಲ್ಲಿ ಇನ್ನು ಸಂಪಾದನೆಯೆಷ್ಟಾಗಬಹುದೆಂದು, ತಿಳಿದುಕೊಂಡು, ನನ್ನ ಅಕ್ಕಂದಿರನ್ನು ಕರೆದುಕೊಂಡು, ಬಗಗನ್ಪೈರಿ ಸರಕುಗಳನ್ನು ಕೊಂಬಿ ಕೊಂಡು, ಖಾಗದಾದು ಪಟ್ಟಣದಿಂದ ಹೊರಟು, ಪ್ರಯಾಣಕ್ಕೆ ಅನುಕೂಲವಾದ ಗಾಳಿಯು ಬಂದಕೂಡಲೆ ಹಡಗನ್ನು ನಡೆಸಿಕೊಂಡು, ಫಾರಸೀ ಸಮುದ್ರವನ್ನು ದಾಟಿ, ಸನುದ್ರನುಧ್ಯಕ್ಕೆ ಬಂದೆವು. ಆಗ ಇಂಡಿಯಾ ದೇಶದಕಡೆಗೆ ಹಡಗನ್ನು ತಿರುಗಿಸಿ, ಇಪ್ಪತ್ತೈದು ದಿನಗಳವರಿಗೆ ಪ್ರಯಾ

ಣವೂಡಿದೆವು. ಈ ಪ್ರಯಾಣವು ಪೂರ್ತಿಯಾದಕೂಡಲೆ ನಾವು ಸಮುದ್ರದವಕ್ಕದಲ್ಲಿರುವ ಭೂಮಿಯನ್ನು ಸೇರಿದೆವು. ಅಲ್ಲಿ ಉದ್ದವಾಗಿಯೂ ಉನ್ನತವಾಗಿಯೂ, ಇರುವ ಪರ್ವತವನ್ನು ಅದರ ಬುಡದಲ್ಲಿರುವ ಒಂದು ದೊಡ್ಡ ಪಟ್ಟಣವನ್ನೂ ನೋಡಿದೆವು. ಆಗ ನನ್ನ ಅಕ್ಕಂದಿರು ವಸ್ತ್ರಗಳನ್ನು ಧರಿಸಿಕೊಂಡು ಬರುವವರೆಗೂ, ನಾನು ಸುಮ್ಮನಿರದೆ ಊರುಬಾಗಿಲಿಗೆ ಬಂದೆನು. ಅಲ್ಲಿ ಕೆಲವರು ಕೈಯಲ್ಲಿ ಪೊಣ್ಣೆಗಳನ್ನು ಹಿಡಿದುಕೊಂಡು ನಿಂತಿದ್ದರು. ಇನ್ನುಕೆಲವರು ಕುಳಿತಿದ್ದರು. ಅವರನ್ನು ನೋಡಿದ ಕೂಡಲೇ ನನಗೆ ತುಂಬ ಭಯವಾಯಿತು. ಆದರೆ ಅವರು ಅತ್ತಿತ್ತ ಅಲ್ಲಾಡದೆ ಸ್ತಂಭಿಭೂತರಾಗಿರುವುದನ್ನು ಕಂಡು, ಧೈರ್ಯದಿಂದ ಹತ್ತಿರಕ್ಕೆ ಹೋಗಿ, ಕಲ್ಲಾಗಿನಿಂತಿರುವ ಆ ಮನುಷ್ಯರನ್ನು ನೋಡುತ್ತಾ ಆಶ್ಚರ್ಯವನ್ನು ಹೊಂದಿ ಪಟ್ಟಣದೊಳಗೆ ಪ್ರವೇಶಮಾಡಿದರೂ, ನಾನಾ ವಿಧ ವರ್ಣಗಳಿಂದಲೂ, ಆಕಾರಗಳಿಂದ ಕೂಡಿದ ಜನರು ಕಲ್ಲಾಗಿ ನಿಂತಿರುವುದನ್ನು ನೋಡಿದೆನು.

ಆದುದರಿಂದ ಮನೆ ಮಠಗಳಲ್ಲಿಯೂ, ಅಂಗಡಿ ಮುಂಗಟ್ಟುಗಳಲ್ಲಿಯೂ, ಜನರೇ ಇಲ್ಲದೆ ಹಾಳುಬಿದ್ದಿಯುವ ಹಾಗಿದ್ದಿತು. ಆದುದರಿಂದ ಅಲ್ಲಿರುವ ಪ್ರಾಣಿಗಳೆಲ್ಲವೂ ಕಲ್ಲೀ ಆಗಿರಬೇಕೆಂದು, ನಾನು ತಿಳಿದುಕೊಂಡೆನು. ಆ ನಗರದ ಮಧ್ಯದಲ್ಲಿ ವಿಸ್ತಾರವಾಗಿಯೂ, ಬೆಳ್ಳಿ ಬಂಗಾರದ ಬಾಗಿಲುಗಳಿಂದ ಕೂಡಿಯೂ, ಇರುವ ಒಂದು ಸಾಮಾನ್ಯದ ಮನೆಯೆನ್ನು ಕಂಡೆನು. ಆ ಮನೆಯ ಬಾಗಿಲುಗಳೆರಡೂ, ತೆಗೆದುಹಾಕಿ ಬಾಗಿಲಲ್ಲಿ ದೀಪವು ಉರಿಯುತ್ತಿದ್ದುದನ್ನು ಕಂಡು, ರಾಜನ ಅರಮನೆಯಾಗಿರಬಹುದೆಂದು, ನಿಸ್ಸಂದೇಹವಾಗಿ ತಿಳಿದುಕೊಂಡೆನು. ಆ ಮನೆಯಲ್ಲಿ ಜೀವದಿಂದಿರುವ ಒಂದುಪ್ರಾಣಿಯೆನ್ನೂ, ನಾನು ನೋಡಲಿಲ್ಲ. ಆದುದರಿಂದ ಆಶ್ಚರ್ಯವು ಕ್ರಮವಾಗಿ ಒಳಹೊಕ್ಕು ನೋಡಲು, ಕೂತುಕೊಂಡವರೂ, ನಿಂತುಕೊಂಡವರೂ, ಮಲಗಿಕೊಂಡವರೂ, ಬೊಗ್ಗಿದವರೂ, ಜೋಗಿದ್ದವರು ಹಾಗೆ ಕಲ್ಲಾಗಿರುವುದನ್ನು ಚಲನೆ ಇಲ್ಲದೆ ನಿರ್ಜೀವಭಾವವನ್ನು ಹೊಂದಿರುವುದನ್ನು ನೋಡಿ, ನಾನು ಅತ್ಯಾಶ್ಚರ್ಯ ಹೊಂದಿದವನಾದೆನು. ಬಳಿಕ ಇನ್ನು ಕೊಂಚ ಮುಂದೆಹೋಗಿ, ಮತ್ತೊಂದು ಮನೆಯನ್ನು ಕಂಡೆನು. ಅದರ ಬಾಗಿಲುಗಳು, ಚಿಳ್ಳೆಯ ಜಾಲರಿಗಳಂಥ ಸೂಜಿಪೆಟ್ಟದುದರಿಂದಲೂ,

ಬಾಗಿಲ ಬಳಯಲ್ಲಿ ಕಾವಲುಗಾರರು, ನಿಂತಿದ್ದುದರಿಂದಲೂ, ರಾಣಿಯವರ ಅಂತಃಪುರವಾಗಬಹುದೆಂದುಕೊಂಡೆನು. ಅದರೊಳಗೆ ಹೋಗಲು, ರತ್ನ ಕಿರೀಟವನ್ನು ಧರಿಸಿ, ಮಂಚದಮೇಲೆ ಮಲಗಿರುವ ರಾಣಿಯೊಬ್ಬಳನ್ನು ಕಂಡೆನು. ಅವಳಗಿಂತ ಸುಂದರಳಾದ ಹೆಂಗಸನ್ನು ನಾನು ಯಾವಾಗಲೂ ನೊಡಿರಲಿಲ್ಲ. ಅಲ್ಲಿರುವ ವಿಚಿತ್ರಗಳನ್ನೆಲ್ಲಾ ನೋಡಬೇಕೆಂಬ ಆಸೆಯಿಂದ ಒಳಹೊಕ್ಕು ನೋಡಿ, ಒಳಗೆ ಹಾಸಿರುವ ಉತ್ತಮವಾದ ಮೆತ್ತನೆಯ ಹಾಸಿಗೆಗಳ ಮತ್ತು ನಾನಾವಿಧವಾದ ರೇಷ್ಮೆ ಮತ್ತು ಜರತಾರಿಯವಸ್ತ್ರ ಕೆತ್ತಿರುವ ಚಿತ್ರವಿಚಿತ್ರವಾದ ಜೊಂಪೆಗಳನ್ನು ನೋಡುತ್ತಾ ಆಶ್ಚರ್ಯವನ್ನು ಹೊಂದಿದೆನು. ಕೂಡಲೆ ಬೆಳಗಾದುದರಿಂದ ಷಹರಜಾದಿಯು, ಕಥೆಯನ್ನು ನಿಲ್ಲಿಸಿದಳು. ಸುಲ್ತಾನನಾದರೋ ಆ ದೇಶದ ಜನರು ಕಲ್ಲಾಗಿ ಹೋಗಿರುವುದಕ್ಕೆ ಕಾರಣವನ್ನು ತಿಳಿದುಕೊಳ್ಳಜೇಕೆಂದು, ಯಾವಾಗಲೂ ತನ್ನೂ ಆಡದೆ ಹಾಸಿಗೆಯಿಂದೆದ್ದು, ಹೊರಟುಹೋದನು.

೬೪ ನೆಯ ರಾತ್ರಿ ಕಥೆ

ಪ್ರಾರಂಭದಲ್ಲಿ ವಿಚಿತ್ರವಿನೋದಕರವಾಗಿರುವ, ಈ ಜೋಬದಿಯ, ಕಥೆಯನ್ನು ಪೂರ್ತಿಯಾಗಿ ಕೇಳಜೇಕೆಂಬಭಿಲಾಷೆಯಿಂದ, ದಿನರಜಾದಿಯು, ಬೆಳಗಿನಜಾವದಲ್ಲಿ ಎದ್ದು ತನ್ನ ಸಹೋದರಿಯನ್ನು ಕುರಿತು ಅಕ್ಕಾ ! ನಿನಗೆ ನಿದ್ರೆಬಾರದೆ ಇದ್ದರೆ, ಜೋಬದಿಯ ಕಥೆಯನ್ನು ಹೇಳೆಂದು ಕೇಳಲು, ಷಹರಜಾದಿಯು, ಸುಲ್ತಾನರನ್ನು ಕುರಿತು, ಎಲೈ ಪ್ರಭುಗಳೇ ! ಬಳಿಕ ಆ ಜೊರೆಸಾನಿಯು, ಕಲೀಫನನ್ನು ಕುರಿತು ಹೀಗೆಂದು ಹೇಳಲಾರಂಭಿಸಿದಳು.

ನಾನು ಆ ರಾಣಿಯು ಶಿಲೆಯಾಗಿಬಿದ್ದಿರುವ ಅಂತಃಪುರವನ್ನು ಬಿಟ್ಟು, ಸರ್ವಾಲಂಕಾರದಿಂದ ಕೂಡಿ, ಮನೋಜ್ಞವಾಗಿರುವ ಒಂದು ಹಜಾರವನ್ನು ಸೇರಿ, ಅಲ್ಲೊಂದು ಸುಂದರವಾದ ಸುವರ್ಣದ ಸಿಂಹಾಸನವನ್ನು ಕಂಡೆನು. ಆ ಸಿಂಹಾಸನವು ನಾನಾವಿಧವಾದ ಉತ್ತಮ ವಸ್ತ್ರಗಳಿಂದಲೂ, ನವರತ್ನಗಳಿಂದಲೂ, ಅಲಂಕರಿಸಲ್ಪಟ್ಟಿತ್ತು. ಅದರ ಮಧ್ಯದಲ್ಲಿ ದೇದೀಪ್ಯಮಾನವಾಗಿ ಹೊರಡುತ್ತಿದ್ದ ಒಂದಾನೊಂದು ಪ್ರಭೆಯನ್ನು

ಕೊಂಡು, ಅದನ್ನು ನೋಡಬೇಕೆಂದು, ಹತ್ತಿಹೋದೆನು. ಆ ಸಿಂಹಾಸನದ ಮಧ್ಯದಲ್ಲಿ ದೊಡ್ಡ ಅಗ್ನಿಪಕ್ಷಿ ವೊಟ್ಟೆಯೆಷ್ಟು, ಗಾತ್ರವಾದ ಒಂದ ಮುತ್ತು ಜ್ವಲಿಸುತ್ತಿದ್ದು, ನಿರ್ದೋಷವಾದ ಮಧ್ಯಾಹ್ನಕಾಲದ ಸೂರ್ಯನಂತೆ ಹೊಳೆಯುತ್ತಿದ್ದಿತು. ಆ ಸಿಂಹಾಸನದ ಎರಡುಪಕ್ಕಗಳಲ್ಲಿ ಸ್ವಲ್ಪದೂರದಲ್ಲಿ ಮನೋಹರವಾದೆರಡು, ದ್ವೀಪಗಳುರಿಯುತ್ತಿರುವುದನ್ನು ನೋಡಿ, ಈ ಸ್ಥಳದಲ್ಲಿ ಮಾನುಷ ಸಂಚಾರವುಂಟೆಂದು, ಭಾವಿಸಿದೆನು. ಆದರೆ ಅವುಗಳೂ ಸಹ ರತ್ನಗಳೇ ಆದುದರಿಂದ ನನಗೆ ತುಂಬ ಆಶ್ಚರ್ಯವುಂಟಾಯಿತು. ಹೀಗೆ ಅಲ್ಲಿರುವ ಸಮಸ್ತವಾದ ವಿಚಿತ್ರಗಳನ್ನು ನೋಡಿ, ಅದನ್ನು ತಿಳಿದುಕೊಳ್ಳಬೇಕೆಂಬವಸರದಲ್ಲಿ ನನ್ನ ಅಕ್ಕಂದಿರನ್ನು ನಾನು ಲಕ್ಷ್ಯವೂಡದೆ ಹೋದೆನು. ಅಷ್ಟರಲ್ಲಿ ನಾನು ಪುನಹ ಹಿಂದಿರುಗಿ ಹೋಗಬೇಕಾಗಿ ಬಂದಿತು ಸಾಯಂಕಾಲವಾಗಿ ಬಹಳ ಹೊತ್ತಾದುದರಿಂದ ಮಾರ್ಗವು ತೋರದೆ ಹೋಯಿತು. ಆದುದರಿಂದ ಮರಳಿ ಆ ಸಿಂಹಾಸನದಬಳಿಯಲ್ಲಿರುವ ಸೋಫಾದ ಬಳಿಗೆಹೋಗಿ ರಾತ್ರಿಯೆಲ್ಲಾ ಅಲ್ಲಿದ್ದು, ಬೆಳಗ್ಗೆ ಹಡಗನ್ನು ಸೇರಬಹುದೆಂದು, ಯೋಚಿಸಿಕೊಂಡು, ಪುನಹ ಅಲ್ಲಿಗೆಬಂದು, ಆ ಮಂಚದಮೇಲೆ ಮಲಗಿಕೊಂಡೆನು.

ಆದರೆ ನಿರ್ಮಾನುಷ್ಯ ಪ್ರದೇಶವಾದುದರಿಂದ ಯಾವ ಭಯವುಂಟಾಗುವುದೋ ಎಂದು ನಿದ್ರಾಹಾರದೆ ಭಯದಿಂದ ಹೊರಳುತ್ತಾ ಇದ್ದೆನು. ಆದರೆ ಅರ್ಧರಾತ್ರಿಯ ಸಮಯೆದಲ್ಲಿ ಖುರಾನನ್ನು ಓದುವಂತೆ ರಾಗವಾಗಿಯೂ, ಸ್ವರಯುಕ್ತವಾಗಿಯೂ, ಮಧುರವಾಗಿ ಹಾಡುತ್ತಿರುವ ಒಬ್ಬ ಮನುಷ್ಯನ ಧ್ವನಿಯು ಕೇಳಬರಲು, ಆತನನ್ನು ನೋಡಬೇಕೆಂದು, ಕುತೂಹಲದಿಂದ ಆ ಧ್ವನಿಯೆನ್ನು ಕೇಳಬಂದಕಡೆಗೆ ಪ್ರಯಾಣವೂಡಿ, ಹೊರಟು ಕೈದೀವಟಿಗೆಯನ್ನು ಹಿಡಿದುಕೊಂಡು, ಆ ಸ್ಥಳಕ್ಕೆಹೋಗಿ ಕಿಟಕಿಯಲ್ಲಿ ನೋಡಲು, ಆಸ್ಥಳವು ಧ್ಯಾನವೂಡುವ ಯೋಗಕಾಲೆಯಾಗಿದ್ದಿತು. ಅಲ್ಲಿ ಆ ಧ್ಯಾನಪುರುಷನು, ನಮ್ಮ ಮತಾನುಸಾರವಾಗಿ ಯಾವಕಡೆ ಕುಳಿತುಕೊಂಡು, ಧ್ಯಾನವೂಡಬೇಕೋ ಅದೇಕಡೆ ಕುಳಿತುಕೊಂಡು, ಸ್ತೋತ್ರವೂಡುತ್ತಿದ್ದುದರಿಂದ, ಆತನುಮೃತ್ರ ಪ್ರಾಣಸಹಿತನಾಗಿರಬಹುದೆಂದೂ, ಇದೇನೋವಿಚಿತ್ರವಾಗಿರಬಹುದೆಂದೂ, ನಾನು ತಿಳಿದುಕೊಂ

ಡೆನು. ಬಳಿಕ ಆ ಧ್ಯಾನಶಾಲೆಯೆ ಬಾಗಿಲು ತೆರೆದಿದ್ದುದರಿಂದ, ನಾನು ಧೈರ್ಯದಿಂದ ಅಲ್ಲಿಗೆಹೋಗಿ, ಮಂಡಿಯೂರಿ ನಿಂತುಕೊಂಡು, ಭಗವಂತನನ್ನು ಧ್ಯಾನಮಾಡತೊಡಗಿದೆನು. ಓ ನಮ್ಮ ಸಮುದ್ರಪ್ರಯಾಣವನ್ನು ನಿರ್ವಿಘ್ನವಾಗಿ ನೆರವೇರಿಸಿ, ನಮ್ಮನ್ನು ಕಾಪಾಡಿದ ಭಗವಂತನೇ ! ನಿನ್ನ ಕರುಣಾರಸಕ್ಕಾಗಿ, ನಿನ್ನನ್ನು ವಂದಿಸುವೆನು. ನಾವು ಪುನಹ ನಮ್ಮರಾಜ್ಯವನ್ನು ಸುರಕ್ಷಿತವಾಗಿ ಸೇರುವಂತೆ ಅನುಗ್ರಹಿಸೆಂದು, ಬೇಡಿಕೊಂಡೆನು. ಅದನ್ನುಕೇಳಿ ಆ ಯೌವನಪುರುಷನು ನನ್ನನ್ನುನೋಡಿ, ಎಲೈ ನಾಯಿಕಾಮಣಿ, ನೀನಿಲ್ಲಿಗೆ ಬರುವುದಕ್ಕೆ ಕಾರಣವೇನು ? ನಿನ್ನದೇ ಕವಾವುದು ? ಈ ನಿರ್ಮಾನುಷ್ಯ ಪ್ರದೇಶದಲ್ಲಿ, ಹೆಂಗಸಾದ ನೀನೊಬ್ಬಳೇ ಹೇಗೆ ಪ್ರವೇಶಮಾಡಿದೆ ? ಇವುಗಳೆಲ್ಲವನ್ನು ನೀನು ಹೇಳಿದರೆ ಈ ಪಟ್ಟಣದಲ್ಲಿರುವರೆಲ್ಲರೂ, ಕಲ್ಲಾಗುವುದಕ್ಕೂ, ನೀನುಮೂಕಪ್ರಾಣಿಯಾಗಿರುವುದಕ್ಕೂ, ಕಾರಣವನ್ನು ನಾನು ಹೇಳುವೆನೆಂದು, ನುಡಿಯಲು, ನಾನು ಸಮುದ್ರಪ್ರಯಾಣವಾಡಿ, ಇಲ್ಲಿಗೆಬಂದು ಆತನಬಳಿಗೆ ಹೋಗುವವರೆಗೂ ನಡೆದ ಸಂಗತಿಯೆನ್ನು ಸಂಕ್ಷೇಪವಾಗಿ ತಿಳಿಯಹೇಳಿ, ಆತನ ಪಟ್ಟಣದಲ್ಲಿರುವ ಭಯಂಕರವಾದ ಪರ್ವತಾನಗಳನ್ನು ಕಂಡಂತೆ ನುಡಿದು, ನೀನುಹೇಳಿದ ವಾಗ್ದಾನವನ್ನು ನೆರವೇರಿಸೆಂದು, ಬೇಡಿಕೊಂಡೆನು. ಅಷ್ಟರಲ್ಲಿಯೆ ಆತನು ನನ್ನ ಪ್ರಮದ ಕಾಂತೆಯೇ ಸ್ವಲ್ಪಸುಮ್ಮನಿರು, ಎಂದುಹೇಳಿ ತನ್ನ ಖುರಾನಪುಸ್ತಕವನ್ನು ಗಾಸಿನಲ್ಲಿ ಹಾಕಿ ಮುಚ್ಚಿಟ್ಟು, ನನ್ನನ್ನು ನೋಡಲು, ಆತನ ಸೌಂದರ್ಯವನ್ನೂ, ಸುಗುಣವನ್ನುನೋಡಿ, ನಾನು ಮನಸ್ಸಿನಲ್ಲಿ ಚಂಚಲಭಾವವನ್ನು ಹೊಂದಿದೆನು. ಆತನು ನನ್ನನ್ನು ಕರೆದು ತನ್ನಬಳಿಯಲ್ಲಿ ಕುಳ್ಳಿರಿಸಿಕೊಂಡನು.

ನನ್ನ ಸಂಗಡ ಮಾತನಾಡುವುದಕ್ಕೆ ಮೊದಲೇ ನಾನು ಆತನ ಅಭಿಪ್ರಾಯವನ್ನು ತಿಳಿದು ಸುಮ್ಮನಿರದೆ ಎಲೈ ಪ್ರಿಯನಾದ ಸುಂದರಾಂಗನೇ ! ನಾನು ಈ ಪೂರಿಗೆ ಬಂದಾಗಿನಿಂದಲೂ, ನೋಡಿದ ಆಶ್ಚರ್ಯಕರವಾದ ಕಲ್ಲುರೂಪದಿಂದಿರುವ, ಮನುಷ್ಯರಿರುವುದಕ್ಕೂ, ನೀನುಮೂಕ ಜೀವಯುಕ್ತನಾಗಿರುವುದಕ್ಕೂ, ಕಾರಣವನ್ನು ತಿಳಿಯಹೇಳಬೇಕೆಂದು, ಕೇಳಿಕೊಂಡೆನು. ಅಷ್ಟರಲ್ಲಿ ಪಹರಜಾವಿಯು, ಬೆಳಗಾದುದರಿಂದ ಕಥೆಯ

ನ್ನು ನಿಲ್ಲಿಸಿದಳು. ಸುಲ್ತಾನರು ಮುಂದಿನಕಥೆಯನ್ನು ಅದರಲ್ಲಿರುವ ವಿಚಿತ್ರವನ್ನೂ ಕೇಳಿ ತಿಳಿದುಕೊಳ್ಳಬೇಕೆಂಬಭಿಲಾಷೆಯಿಂದ ಸುಮ್ಮನೆ ಹೊರಟು ಹೋದನು.

ಲೈಲೆಯ ರಾತ್ರಿಕಥೆ.

ಬಳಿಕ ಬಿಳಿಗಿನ ಜಾವದಲ್ಲಿದ್ದು, ತನ್ನ ಸಹೋದರಿಯನ್ನು ಕುರಿತು, ಅಕ್ಕಾ! ಆ ಊರಿನಲ್ಲಿ ಸಜೀವನಾಗಿದ್ದ ಯೌವನಪುರುಷನಿಗೂ, ಆ ಹೆಂಗಸಿಗೂ, ನಡೆದ ಸಂಭಾಷಣೆಯನ್ನು ಕುರಿತು, ನೀನು ಪೂರ್ತಿಯೂ ಹೇಳಬೇಕೆಂದು, ಪ್ರಾರ್ಥಿಸುವೆನೆಂದು, ನುಡಿಯಲು, ಷಹರಜಾದಿಯು ಆಕೆಯನ್ನು ಸಂಬೋಧಿಸಿ, ಸುಲ್ತಾನನನ್ನು ಕುರಿತು, ಕಥೆಯನ್ನು ಹೇಳಲಾರಂಭಿಸಿದಳು. ಆ ಯೌವನನ ತಂಗಿಯಾದ ಲೈಲೆಯೆನ್ನುವಳು, ಪ್ರಿಯಳೇ! ನೀನು ಭಗವಂತನ ಧ್ಯಾನವೂ ಮಿದುವನ್ನು, ನಾನು ಕಣ್ಣಾರನೋಡುತ್ತಿದ್ದುದರಿಂದ, ಭಗವದ್ಭಕ್ತಿಯುಳ್ಳವಳಾದ ನಿನಗೆ ನನ್ನ ಕಥೆಯನ್ನು ಹೇಳುವೆನು ಕೇಳು! ನಾನು ರಾಜ್ಯವನ್ನಾಳುತ್ತಿದ್ದ ರಾಜನಮಗನು. ಈ ಪಟ್ಟಣವು ನಮ್ಮ ರಾಜಧಾನಿ, ನಮ್ಮ ತಂದೆಯೂ, ಆತನಕ್ಕೆ ಕೆಳಗಿನ ಇತರಜನಗಳೂ ಸಹ, ದುರ್ದೈವದಿಂದ ನಿಗ್ರಹಿಸಲ್ಪಟ್ಟಿರುವುದರಿಂದ ಅವರು ಪೂರ್ವದಲ್ಲಿ ತಮ್ಮ ಮಾತಾಚಾರಗಳನ್ನು ತೊರೆದು, ಅಗ್ನಿಪೂಜೆಯನ್ನು ನೆರವೇರಿಕ್ಕವರಾಗಿದ್ದರು. ಇಂತಹ ವಿಗ್ರಹಾರಾಧಕರಾದ ತಾಯಿತಂದೆಗಳಿಗೆ ನಾನು ಹುಟ್ಟಿದರೂ, ಅದೃಷ್ಟವಶದಿಂದ ಉತ್ತಮವಾದ ಒಬ್ಬ ಉಪಾಧ್ಯಾಯಿನಿಯನ್ನು ಸೇರಿ, ಅವಳ ಉಪದೇಶಬಲದಿಂದ ಖುರಾನನ್ನು ಪೂರ್ಣವಾಗಿ ಓದಿ, ಅದರರ್ಥವನ್ನು ತಿಳಿದುಕೊಂಡು, ಉತ್ತಮಮನಾದ ಮುಸಲ್ಮಾನನಾದೆನು. ಆದರೆ ಅವಳು ಉಪಾಧ್ಯಾಯಿನಿಯಾದುದರಿಂದ, ನನ್ನನ್ನು ಸೆರೆತಂದು, ಎಲೈ ರಾಜಪುತ್ರನೇ! ಭಗವಂತನೊಬ್ಬನೇ ಆದುದರಿಂದ ಆತನನ್ನು ತೊರೆದು ಮಿಥ್ಯಾರನ್ನೂ, ಪೂಜಿಸಕೂಡದೆಂದು, ನನಗೆ ಹೇಳಿ ಅರಬೀಭಾಷೆಯನ್ನು ಸಂಪೂರ್ಣವಾಗಿ ಕಲಿಸಿದಳು.

ಬಳಿಕ ನಾನು ಆಕೆಯಬಳಿಯಲ್ಲಿ ಸರ್ವೋತ್ತಮವಾದ ಖುರಾನಿನ ವ್ಯಾಖ್ಯಾನಗಳನ್ನೂ, ಓದಿಕೊಂಡೆನು. ಬಳಿಕ ಆಕೆಯು ದೈವಯೋಗದಿಂದ ಸತ್ಯುಪೇಕ್ಷಿಸಲು, ನಾನು ಯಾರಿಗೂ ತಿಳಿಯದಂತೆ, ಅಂತರಂಗ

ವಾದ ಭಗವದ್ಭಕ್ತಿಯನ್ನು ಹೊಂದಿ, ಇತರ ಕ್ಷುದ್ರದೇವತೆಗಳನ್ನು ತಿರ ಸ್ಕರಿಸಿ, ಜಗತ್ಕಾರಣನಾದ ಭಗವಂತನೊಬ್ಬನನ್ನೇ ಪೂಜಿಸಲಾರಂಭಿ ಸಿದೆನು.

ಹೀಗಿರುವಲ್ಲಿ ಈಗ್ಗೆ ಮೂರುವರ್ಷಗಳಕೆಳಗೆ ಅಕಸ್ಮಾತ್ತಾಗಿ, ಒಂದಾನೊಂದು, ಆಕಾಶವಾಣಿಯುಂಟಾಗಿ, ಓ ಜನರುಗಳಿರಾ ! ಕ್ಷುದ್ರ ದೈವಗಳಾದ ಅಗ್ನಿ ವಿಗ್ರಹಗಳನ್ನು ಪೂಜಿಸದೆ ಜಗತ್ಕಾರಣನಾದ ಭಗವಂ ತನನ್ನು ಮಾತ್ರ ಪೂಜಿಸಬೇಕೆಂದು, ಸರ್ವರಿಗೂ ತಿಳಿಯುವಂತೆ ಸ್ಪಷ್ಟ ವಾಗಿ ಹೇಳಿತು. ಈ ವಾಣಿಯು, ಮೂರುಸಂವತ್ಸರಗಳವರಿಗೂ, ಕೇಳ ಬರುತ್ತಿದ್ದರೂ, ಜನರು ಎಂದಿನಂತೆ ದುರ್ದೈವವನ್ನೆ ನಂಬಿರುತ್ತಿರಲು, ಮೂರುವರ್ಷಗಳು ಕಳೆದಬಳಿಕ ಈ ಪುರವಾಸಿಗಳೆಲ್ಲರೂ, ಹೇಗಿದ್ದವರು ಹಾಗೆಯೇ ಶಿಲಾಮಯೆಯಾಗಿ ಬಿಡುದ್ದುಹೋದರು. ನನ್ನ ತಂದೆಯಾದರೋ ಈರಿಯು ಕಲ್ಲಾಗಿ ನಡುಮಹಡಿಯಲ್ಲಿ ಬಿದ್ದಿರುವನು. ಆದುದರಿಂದ ನನ್ನತಾ ಯಿಗೂ, ಸಹಾ ಅದೇಗತಿಯುಂಟಾಯಿತು. ಆದರೆ ಈ ಸ್ಥಳದಲ್ಲಿ ನಿಶ್ಚ ಲವಾದ ಮನಸ್ಸಿನಿಂದ ನಾನು ಸರ್ವಶಕ್ತನಾದ ಭಗವಂತನ ಧ್ಯಾನವನ್ನು, ಮಾಡುತ್ತಿದ್ದುದರಿಂದ ಈ ದುರವಸ್ಥೆಯನ್ನು ಅನುಭವಿಸುವುದಕ್ಕೆ ಸಿಕ್ಕ ದೆ ಕ್ಷೇಮದಿಂದ ಏಕಾಂಗಿಯಾಗಿದ್ದುದರಿಂದ, ಕರುಣಾನಿಧಿಯಾದ ಭಗವಂ ತನು, ನಿನ್ನನ್ನು ನನ್ನಬಳಿಗೆ ಕಳುಹಿಸಿರುವುದಕ್ಕಾಗಿ, ನಾನು ಆತನನ್ನು ವಂದಿಸುವೆನು. ಎಂದು ಹೇಳಿದನು. ನಾನು ಆತನವಾತುಗಳನ್ನು ಕೇಳಿ ಸಂತೋಷವನ್ನು ಹೊಂದಿದೆನು.

ಆದರೆ ಆತನ ಕೊನೆಯವಾಕ್ಯವು ನನ್ನ ಮೋಹವನ್ನು ಹೆಚ್ಚಿ ಮಾಡಿತು. ಆದುದರಿಂದ ನಾನು ಆತನನ್ನುನೋಡಿ, ಎಲೈ ರಾಜಪುತ್ರನೆ ನಿನ್ನ ತೊಂದರೆಗಳನ್ನು ನಿವಾರಣೆಮಾಡುವುದಕ್ಕಾಗಿ, ನನ್ನನ್ನು ಈ ರೇವಿ ಗೆ ಭಗವಂತನು ಕರೆದುಕೊಂಡು ಬಂದನೆಂದು, ಯೋಚಿಸುವೆನು. ನಾನು ತೆಗೆದುಕೊಂಡು, ಬಂದಿರುವ ಹಡಗನ್ನು ನೋಡಿದರೆ ನಾನು ಬಾಗದಾದು ಪಟ್ಟಣದಲ್ಲಿ ಮಹಾ ಗೌರವದಿಂದ ಬಾಳತಕ್ಕವಳೆಂದು, ನಿನಗೆ ತಿಳಿಯು ವುದು. ಅಲ್ಲದೆ ಅಧಿಕವಾದ ಆಸ್ತಿಯೂ ಇರುವುದು ನೀನು ಅಲ್ಲಿಗೆಬಂದರೆ ದೀರ್ಘ ದರ್ಶಿಗಳಾದ ಸುಲಾನರಿಂದವ್ಯಾಜ್ಯವನ್ನು ಹೊಂದಿ ನನ್ನನ್ನು

ದುದುವೆ ಮಾಡಿಕೊಳ್ಳಬೇಕೆಂದಿರುವೆನು. ಆದರೆ ಹಾಳಾಗಿರುವ ಈ ಪಟ್ಟಣದ ದುರವಸ್ಥೆಯನ್ನು ನೋಡುತ್ತಾ, ಏಕಾಂಗಿಯಾಗಿ ವಾಸಮಾಡುವುದು. ನನಗೆ ತುಂಬ ವ್ಯಸನಕರವಾಗಿರುವುದು. ಆದುದರಿಂದ ನೀನುನನ್ನ ಸಂಗಡ ಹೊರಟುಬಂದರೆ ನನ್ನಹಡಗನ್ನೆ ನಿನ್ನ ಸ್ವಾಧೀನಮಾಡುವೆನು. ಬಳಿಕ ನನ್ನ ಐಶ್ವರ್ಯಕ್ಕೆ ನೀನು ಯಜಮಾನನಾಗಿ ಸುಖಪಡಬಹುದೆಂದು ಹೇಳಲು, ಆತನು ಅದಕ್ಕೆ ಸಮ್ಮತಿಸಿದನು. ಬಳಿಕ ಬೆಳಗಾದಕೂಡಲೆ ನಾನು ರಾಜಪುತ್ರನನ್ನು ಕರೆದುಕೊಂಡು, ಹಡಗನ್ನು ಸೇರಿದೆನು. ಅಲ್ಲಿ ಹಡಗಿನ ಯಜಮಾನನೂ, ನಾವುಕರರೂ, ನನ್ನ ಸಹೋದರಿಯರೂ, ನನ್ನ ಅಗಲಿಕೆಯಿಂದ ತುಂಬ ವ್ಯಸನವನ್ನು ಹೊಂದಿದ್ದರು. ನಾನು ಹಡಗನ್ನು ಸೇರಿದ ಕೂಡಲೆ, ಅವರನ್ನು ಸಮಾಧಾನಮಾಡಿ, ರಾಜಪುತ್ರನನ್ನು ತೋರಿಸಿ, ತಾನು ನಿನ್ನೆಯದಿನ ಬಾರದಿರುವುದಕ್ಕೆ ಕಾರಣವನ್ನೂ ನೋಡಿದ ವಿಚಿತ್ರವಾದ ವಿಷಯಗಳನ್ನು ಹೇಳಿದೆನು. ಅವರೆಲ್ಲರೂ ಕೇಳಿ ಅತ್ಯಾಶ್ಚರ್ಯವನ್ನು ಹೊಂದಿದರು. ನಮ್ಮ ಹಡಗಿನ ಸಾಮಾನುಗಳನ್ನೆಲ್ಲಾ ಇಳಿಸಿ, ಆ ಪಟ್ಟಣದಿಂದ ತೆಗೆದುಕೊಂಡು, ಹೋಗಬೇಕಾಗಿರುವ ಉತ್ತಮವಾದ ರತ್ನಗಳನ್ನು ಸಂಗ್ರಹಿಸಿದೆವು. ಆದರೆ ಅವುಗಳನ್ನು ತೆಗೆದುಕೊಂಡು ಬರುವುದಕ್ಕೆ ನಮ್ಮ ಹಡಗು ಸಾಲದೆ ಹೋದುದರಿಂದ, ಅವುಗಳನ್ನಲ್ಲಿ ಬಿಟ್ಟು ನಮಗೆ ಬೇಕಾದಷ್ಟು ಆಹಾರವದಾರ್ಥಗಳನ್ನು ತೆಗೆದುಕೊಂಡು, ಗಾಳಿಯು, ಅನುಕೂಲವಾಗಿ ಬಂದಕಾಲದಲ್ಲಿ ಪ್ರಯಾಣಹೊರಟೆವು. ಎಂದು ಹೇಳಿ ಷಹರಜಾದಿಯು, ಬೆಳಗಾದಕೂಡಲೆ, ಕಥೆಯನ್ನುನಿಲ್ಲಿಸಿದಳು. ಆದರೆ ಸುಲ್ತಾನನು, ತನ್ನ ಪ್ರೀತಿಪಾತ್ರಳಾದ ರಾಣಿಯು, ಹೇಳಿದ ಈ ವಿಚಿತ್ರವಾದ ಕಥೆಯನ್ನು ಕೇಳಿ, ರಾಜಪುತ್ರನನ್ನು ಹಡಗಿನಲ್ಲಿ ಕಳ್ಳರಿಸಿಕೊಂಡು, ಪ್ರಯಾಣಮಾಡಿದಬಳಿಕ ಅವರಿಬ್ಬರಿಗುಂಟಾದ ಫಲವನ್ನು ತಿಳಿದುಕೊಳ್ಳಬೇಕೆಂಬ ಕುತೂಹಲದಿಂದ, ಸುಮ್ಮನೆ ಹೊರಟು ಹೋದನು.

೭೭ ನೆಯ ರಾತ್ರಿ ಕಥೆ

ಮರುದಿನ ರಾತ್ರಿ ಕಳೆದುಹೋಗಲು, ದಿನರಜಾದಿಯು, ತನ್ನ ಸಹೋದರಿಯನ್ನು ಎಚ್ಚರಗೊಳಿಸಿ, ಅಕ್ಕಾ ! ನಿನಗೆ ನಿದ್ರೆ ಬಾರದೆ

ಇದ್ದರೆ, ಜೋಬದಿಯ ಕಥೆಯನ್ನು ಪೂರ್ತಿವೂಡಿ ಹೇಳಬೇಕೆಂದು, ಬೇಡಿಕೊಳ್ಳುವೆನು. ಅಲ್ಲದೆ ಸುಲ್ತಾನರು, ಕೂಡ ಅದೇ ಅಭಿಪ್ರಾಯವುಳ್ಳವರಾಗಿ ಕಾದುಕೊಂಡಿರುವರೆಂದು, ಹೇಳಲು ಷಹರಜಾದಿಯು, ಸುಲ್ತಾನರನ್ನು ಕುರಿತು, ಕಥೆಯನ್ನು ಹೇಳತೊಡಗಿದಳು.

ಸುಲ್ತಾನರೇ ! ಜೋಬದಿಯು, ಕಲೀಫರನ್ನು ನೋಡಿ, ತನ್ನ ಕಥೆಯನ್ನು ಹೀಗೆಂದು ಹೇಳಲಾರಂಭಿಸಿದಳು. ಬಳಿಕ ನಾನು ನನ್ನ ಅಕ್ಕಂದಿರು, ರಾಜಕುಮಾರನೂ, ಸಮುದ್ರದಡಗಿನಲ್ಲಿ ಬಹು ಸಂತೋಷದಿಂದ ಕಾಲವನ್ನು ಕಳೆಯುತ್ತಿದ್ದೆವು. ಆದರೆ ಆ ಸಂತೋಷವು ಹಾಗೆಯೆ ಇರಲಿಲ್ಲ. ಏತಕ್ಕಂದರೆ, ನನ್ನ ಸಹೋದರಿಯರು, ನನಗೂ, ರಾಜಪುತ್ರನಿಗೂ, ಉಂಟಾಗಿರುವ ಸ್ನೇಹವನ್ನು ನೋಡಿ ತಾಳಲಾರದೆ, ಒಂದಾನೊಂದುದಿನ ನನ್ನನ್ನು ನೋಡಿ, ನೀವು ಬಾಗದಾದು ಪಟ್ಟಣವನ್ನು ಸೇರಿದಮೇಲೆ, ಈತನನ್ನು ಏನು ಮಾಡಬೇಕೆಂದು ಕೇಳಿದರು. ಆವರು ನನ್ನ ಮನೋಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕಾಗಿ, ಇಂತು ಪ್ರಶ್ನೆಮಾಡುತ್ತಿರುವರೆಂದು, ಗ್ರಹಿಸಿಕೊಂಡು, ಈ ವಿಷಯವನ್ನು ಪರಿಹಾಸರೂಪದಿಂದ ಕೊನೆಗಾಣಿಸಬೇಕೆಂದು, ನಾನು ಈ ರಾಜಪುತ್ರನನ್ನು ಮದುವೆಮಾಡಿಕೊಳ್ಳುವೆನೆಂದು, ಹೇಳಿ ರಾಜಕುಮಾರನನ್ನುನೋಡಿ, ನಾನು ಬಾಗದಾದು ಪಟ್ಟಣವನ್ನು ಸೇರಿದಕೂಡಲೆ, ನನ್ನಕ್ಕೆಲಾವ ಉಪಚಾರವನ್ನೆಲ್ಲಾ ನಿನಗೆಮಾಡಿ, ನಿನ್ನಾಜ್ಞೆಗೆ ಸಂಪೂರ್ಣವಾಗಿ ಒಳಪಟ್ಟವಳಾಗಿ, ನನ್ನ ದೇಹವನ್ನೆ ನಿನಗೆ ಸಮರ್ಪಿಸುವೆನಲ್ಲದೆ, ನಿನ್ನ ದಾಸಿಯಾಗಿದ್ದುಕೊಂಡು ಸಂತೋಷಪಡಿಸಬೇಕೆಂದು, ನಿಶ್ಚಯಿಸಿರುವೆನಾದುದರಿಂದ, ನೀನು ಅದಕ್ಕೆ ಸಮ್ಮತಿಸಬೇಕೆಂದು, ಬೇಡಿಕೊಳ್ಳುವೆನು. ಎಂದು ಹೇಳಿದೆನು. ಈಮಾತುಗಳನ್ನು ಕೇಳಿ, ರಾಜಪುತ್ರನು ಪ್ರಿಯೆ ! ನೀನು ನನ್ನನ್ನು ಪರಿಹಾಸವೂಡುತ್ತಿರುವಿಯೊ, ಏನೊ ? ನನಗೆ ತಿಳಿಯದು. ಆದರೂ ಚಿಂತೆಯಿಲ್ಲ, ನಾನು ಈ ನಿನ್ನ ಸಹೋದರಿಯರು,ನೋಡುತ್ತಿರುವಹಾಗೆಹೇಳುವುದೇನಂದರೆ, ನೀನು ಹೇಳಿದರ್ಥವನ್ನು ಈಗಲೆ ನಾನು ಅನುಮೋದಿಸಿ ಒಪ್ಪಿಕೊಂಡಿರುವುದರಿಂದ ನಿನ್ನನ್ನು ಪರಿಚಾರಕಳಾಗಿಟ್ಟುಕೊಳ್ಳುವುದಕ್ಕಿಂತಲೂ, ನನ್ನ ಪ್ರಾಣನಾಯಕಿಯೆಂದ ಹೆಂಡತಿಯೆನ್ನಾಗಿ ವರಿಸುವೆನು.

ಆದರೆ, ನಿನ್ನನ್ನು ಯಾವ ನಿರ್ಬಂಧಕ್ಕೂ, ಒಳಪಡದಂತೆಮಾಡಿ ನಿನ್ನ ಮನೋಭಿಪ್ರಾಯಾನುಸಾರವಾಗಿ ನಡೆದುಕೊಳ್ಳುವೆನೆಂದು ಹೇಳಿದನು. ಆ ಮಾತುಗಳನ್ನುಕೇಳಿ ನನ್ನ ಸಹೋದರಿಯರು ನನ್ನಲ್ಲಿ ವಿಶ್ವಾಹೀನರಾಗಿಯೇ ಇದ್ದರು. ನಾವು ಪಾರಸೀ ಸಮುದ್ರವನ್ನು ದಾಟಿ, ಬಾಲಸೂರಿಗೆ ಬರುವ ಮಾರ್ಗದಲ್ಲಿದ್ದೆವು. ಆಗ ನನಗೆ ತುಂಬ ನಿದ್ರೆಬಂದು ಮಲಗಿರುವಕಾಲದಲ್ಲಿ, ನನ್ನ ಅಕ್ಕಂದಿರು ನನ್ನಮೇಲಣ ಕ್ಷುದ್ರವನ್ನು, ಹೋಗಲಾಡಿಸಿಕೊಳ್ಳುವುದಕ್ಕಾಗಿ, ನನ್ನನ್ನು ಆ ರಾಜಪುತ್ರನನ್ನೂ, ಸಹ ಸಮುದ್ರದಲ್ಲಿ ನೂಕಿಬಿಟ್ಟರು. ರಾಜಪುತ್ರನಾದರೋ ಮುಳುಗಿಯೇ ಹೋದನು. ನಾನು ಸ್ವಲ್ಪಕಾಲದವರಿಗೆ ಈಜುತ್ತಾ ಬರುತ್ತಿರುವಾಗ, ನನ್ನ ಅದೃಷ್ಟದಿಂದಲೊ, ಅಥವಾ ಭಗವದನುಗ್ರಹದಿಂದಲೊ, ನಾನು ಭೂಮಿಯೆಂತೆ ಕರ್ಪಗೆ ಕಾಣುತ್ತಿರುವ ಒಂದು ಪ್ರದೇಶವನ್ನು ಕಂಡು, ಅಲ್ಲಿಗೆ ಹೋದೆನು. ಅದೊಂದು ಬಯಲುಪ್ರದೇಶವಾಗಿದ್ದಿತು. ಬಿಳಗಾದ ಕೂಡಲೆ ಬಟ್ಟೆಗಳನ್ನು ಒಣಗಿಸಿಕೊಂಡು, ನೋಡುತ್ತಿರುವಲ್ಲಿ ನಾನಿರುವ ಸ್ಥಳವು ಬಾಲಸೂರಿಗೆ ಇಪ್ಪತ್ತುಗಂಟೆಗಳ ಪ್ರಯಾಣವಿದ್ದಿತು. ಆಸ್ಥಳದಲ್ಲಿ ಉತ್ತಮವಾದ ತಿಳಿನೀರು, ರಸವತ್ತಾದ ಹಣ್ಣುಗಳೂ, ಯಥೇಚ್ಛವಾಗಿದ್ದುದರಿಂದ, ನಾನು ಹೇಗಾದರೂ ಪ್ರಾಣವಾರಣೆಯೆನ್ನು ಮಾಡಬಹುದೆಂದು, ಧೈರ್ಯವಾಗಿದ್ದೆನು. ಹೀಗಿರುವಲ್ಲಿ ನಾನು ನೆಲಲಾಗಿರುವ ಒಂದಾನೊಂದು ಮರದ ಬುಡವಲ್ಲಿ ಕುಳಿತುಕೊಂಡಿರುವಾಗ ಅತ್ತಿತ್ತ ಅಲುಗಾಡುತ್ತಾ ನಾಲಗೆಯನ್ನು ಹೊರಹಾಕಿ ತಿರುಗಿರುತ್ತಾ ಕಾಡುಮೇಡಿನ ದೊಡ್ಡ ಸರ್ಪವು, ರೆಕ್ಕೆಗಳನ್ನು ಹುದುಗಿಸಿಕೊಂಡು ನನ್ನಬಳಿಗೆ ಬರುತ್ತಾ ಇದ್ದಿತು. ಇದು ಏನೋ ಅವಸ್ಥೆ ಹೊಂದಿದ ಸರ್ಪವಾಗಿರಬಹುದೆಂದು, ನಾನು ಅದನ್ನು ಚೆನ್ನಾಗಿ ನೋಡುತ್ತಿರುವಲ್ಲಿ, ಅದಕ್ಕಿಂತಲೂ, ದೊಡ್ಡದಾದ ಮತ್ತೊಂದು ಸರ್ಪವು, ಅದನ್ನು ಬಾಲದಕಡೆಯಿಂದ ನುಂಗುತ್ತಾ ಇದ್ದಿತು. ಆಗ ನನಗೆ ಆ ಸರ್ಪದಮೇಲೆ ಕರುಣಹುಟ್ಟಿ ಹತ್ತಿರಿದ್ದ ಬಲವಾದ ಒಂದು ಕಲ್ಲನ್ನು ತೆಗೆದು, ದೊಡ್ಡ ಸರ್ಪದಮೇಲೆ ಹಾಕಿದೆನು. ಅದು ಸತ್ತು ಹೋಯಿತು.

ಕೂಡಲೆ ಆ ರೆಕ್ಕೆಯ ಸರ್ಪವು ಅಂತರಿಕ್ಷಕ್ಕೆ ಹಾರಿ ಕಣ್ಣಿಗೆಕಾಣದಷ್ಟು ದೂರ ಹೊರಟುಹೋಯಿತು. ಬಳಿಕ ನಾನು ಮತ್ತೊಂದು

ಗಿಡದ ನೆರಳಿಗೆ ಹೋಗಿ ಮಲಗಿಕೊಂಡೆನು. ಬಳಿಕ ಎದ್ದಕೂಡಲೆ ಸುತ್ತಲೂ ನೋಡಿದೆನು. ಆಗ ಒಬ್ಬಾನೊಬ್ಬ ಕರಿಯಹೆಂಗಸು ತನ್ನಕೈಯಲ್ಲಿ ಎರಡು ಕರಿಯನಾಯಿಗಳನ್ನು ಹಿಡಿದುಕೊಂಡು ನನ್ನಬಳಿಯಲ್ಲಿ ನಿಂತಿರುವುದನ್ನು ನೋಡಿ, ಅತಾಶ್ಚರ್ಯವನ್ನು ಹೊಂದಿ, ಅಮ್ಮಾ ! ಸ್ವಲ್ಪಹೊತ್ತಿನಮುಂಚೆ ನನ್ನನ್ನು ಕೊಲ್ಲುವುದಕ್ಕೆ ಬಂದ ಶತ್ರುವಿನಿಂದ, ನೀನು ಪ್ರಾಣವನ್ನು ಕಾಪಾಡಿದ ಸರ್ವಜ್ಞನಾನು, ನೀನು ಮಾಡಿದ ಮಹದುಪಕಾರವನ್ನು ಸ್ಮರಿಸಿ, ನಾನು ಈಗ ಮಾಡಿರುವಪ್ರತ್ಯುಪಕಾರಹೊರತು ಮತ್ತಾವುದನ್ನು ಮಾಡಲಾರದೆ ಹೋದೆನು. ಏನಂದರೆ ನೀನು ಕರುಣದಿಂದ ನನ್ನ ಸೆರೆಯನ್ನು ಬಿಡಿಸಿ, ನನ್ನ ಪ್ರಾಣವನ್ನು ಕಾಪಾಡಿದ ಕೂಡಲೇ, ನಿನಗೆ ದ್ರೋಹವನ್ನು ಮಾಡಿದ ಆ ಸಹೋದರಿಯೆರ ಮೇಲಣ ಹಗೆತನವನ್ನು ನನ್ನಂತಹ ಯಕ್ಷಕನ್ನಿಯರ ಮೂಲಕ, ತೀರಿಸಿಕೊಳ್ಳ ಬೇಕೆಂದಿರುವೆ, ಎಂದು ತಿಳಿದು ಕೊಂಡು, ನಿನ್ನ ಹಡಗನ್ನು ಪ್ರವೇಶಮಾಡಿ ನನ್ನಂತೆ ಇರುವ ಇತರ ಯಕ್ಷಕನ್ನಿಯರನ್ನು ಬರಮಾಡಿಕೊಂಡು, ಬಾಗದಾದು ಪಟ್ಟಣದಲ್ಲಿರುವ, ನಿನ್ನ ಋಣಾಣಕ್ಕೆ ಹಡಗಿನಲ್ಲಿರುವ ಸಾಮಾನುಗಳೆಲ್ಲವನ್ನೂ ಸಾಗಿಸಿ, ಹಡಗನ್ನು ಬಿಡದುಹಾಕಿ ಅದರಲ್ಲಿದ್ದ, ನಿನ್ನ ಅಕ್ಕಂದಿರನ್ನು ಈ ತೆರನಾಗಿ ಕರಿಯನಾಯಿಗಳಾಗುವಂತೆ ಮಾಡಿರುವೆನು. ದ್ರೋಹಿಗಳಾದ ಇವರಿಗೆ ಮಾಡಿರುವ ಶಿಕ್ಷೆಸಾಲದೆಂದು ಹೇಳಿ, ಆನಾಯಿಗಳನ್ನೂ, ನನ್ನನ್ನು ಸಹಾ ಎತ್ತಿಕೊಂಡು ಬಾಗದಾದು ಪಟ್ಟಣದಲ್ಲಿರುವ, ನನ್ನ ಮನೆಯೆನ್ನು ಸೇರಿಸಿ, ನನ್ನ ಹಡಗನ್ನಲ್ಲಿದ್ದ ಸರಕುಗಳೆಲ್ಲವೂ, ನನ್ನ ಋಣಾಣದಲ್ಲಿರುವುದೆಂಬುದನ್ನು ನನಗೆ ತೋರಿಸಿ, ಆನಾಯಿಗಳನ್ನು ನನ್ನ ವಶಮಾಡಿ, ಅಮ್ಮಾ ! ನೀನು ಇವರಂತೆಯೆ ನಾಯಿಯಾಗದೆ ಇರಬೇಕಾದರೆ ಇವರುಗಳು ನಿನಗೆ ಮಾಡಿದ ದ್ರೋಹಕ್ಕಾಗಿ ಪ್ರತಿರಾತ್ರಿಯಲ್ಲಾ ಬಲವಾದ ನೂರು ಚಿತ್ತ್ರದ ಚೆಬ್ಬಿಗಳನ್ನು ಹಾಕುತ್ತಾ ಇರು. ಎಂದು ಹೇಳಿ, ನನ್ನಿಂದ ಖಂಡಿತವಾದ ಪ್ರಮಾಣವನ್ನು ಮಾಡಿಸಿಕೊಂಡು. ಹೊರಟುಹೋಗಿ, ಹಾಗೆ ಮಾಡುತ್ತಾಳೋ, ಇಲ್ಲವೋ ಎಂಬುದನ್ನು ಆಗಾಗ್ಗೆ ಪರೀಕ್ಷಿಸುತ್ತಿರುವುದರಿಂದ, ನಾನು ಮಹಾವ್ಯಸನದಿಂದ ಆನಾಯಿಗಳನ್ನು ಹೊಡೆಯುತ್ತಿರುವುದನ್ನು ತಾವೇ ನೋಡಿರುವುದು. ನಿಯೆಯ್ಯೆ ಆನಾಯಿಗಳನ್ನುಹಿಂಸಿಸುವುದಕ್ಕೆ ನನಗಿಷ್ಟವಿಲ್ಲವಾದರೂ,ಬಲವಂತದಿಂದಬಂದದುಃಖವ

ನ್ನು ಸಹಿಸುತ್ತಾ ನಿರ್ಬಂಧದಿಂದ ಆ ಕೆಲಸವನ್ನು ಮಾಡುತ್ತಿರುವೆನೆಂಬುದಕ್ಕೆ ನನ್ನ ಕಣ್ಣೀರೇ ನಿಮಗೆ ಸಾಕ್ಷಿಯಾಗಿರುವುದು. ಆದುದರಿಂದ ನಾನು ನಿಷ್ಕರುಣಿಯೆಂಬ ನಿಂದೆಗೆ ಗುರಿಯಾಗಲಾರದೆ ಪಶ್ಚಾತ್ತಾಪಯುಕ್ತಳಾಗಿರುವನೆಂಬುದನ್ನು, ತಾವು ಊಹಿಸಿಕೊಳ್ಳಬಹುದು. ನನ್ನ ವಿಷಯವಾದ ಚರಿತ್ರೆಯು, ಇಷ್ಟೆ. ಇಲ್ಲಿಂದ ಮುಂದಿನ ವಿಚಿತ್ರವನ್ನು ಕೇಳಬೇಕಾದರೆ, ನನ್ನ ತಂಗಿಯಾದ ಅಮಿನಿಯು, ನಿನಗೆ ಸ್ಪಷ್ಟವಾಗಿ ಹೇಳುವಳೆಂದು, ಜೋಬಿದಿಯು, ಹೇಳಲು, ಅದನ್ನು ಅತ್ಯಾಶ್ಚರ್ಯಯುಕ್ತನಾಗಿ ಕೇಳಿ, ಕಲೀಫನು, ತನ್ನ ಮಂತ್ರಿಯನ್ನು ನೋಡಿ, ಅಮಿನಿಯು, ಎದೆಹುಣ್ಣಾಗಿರುವುದಕ್ಕೆ ಕಾರಣವೇನೊ ? ಅದನ್ನು ಕೇಳಬೇಕೆಂದು, ಹೇಳಿದನು. ಆಗ ಷಹರಜಾದಿಯು, ಬೆಳಗಾದುದನ್ನು ಕಂಡು, ಕಥೆಯನ್ನು ನಿಲ್ಲಿಸಿದಳು. ಸುಲ್ತಾನನು, ಅಮಿನಿಯ ಕಥೆಯನ್ನು ಕೇಳಿ ತಿಳಿದುಕೊಳ್ಳಬೇಕೆಂಬ, ಕುತೂಹಲದಿಂದ ಯಾವವಿಷಯವನ್ನೂ ಆಡದೆ ಹೊರಟು ಹೋದನು.

೬೭ ನೆಯ ರಾತ್ರಿ ಕಥೆ.

ಮರುದಿನ ದಿನರಜಾದಿಯು, ಬೆಳಗಾಗುವಷ್ಟರಿಗೆ ಸರಿಯಾಗಿ ಒಂದು ಜಾವಕ್ಕೆ ಮುಂಚೆ ಎದ್ದು, ತನ್ನ ಸಹೋದರಿಯನ್ನು ಕುರಿತು, ಅಕ್ಕಾ ! ನಿನ್ನ ಪ್ರಾಣಕಾಂತರಾದ ಸುಲ್ತಾನರು, ಅಮಿನಿಯು ಎದೆಯು ಹುಣ್ಣಾಗಿರುವುದಕ್ಕೆ ಕಾರಣವನ್ನು ತಿಳಿದುಕೊಳ್ಳಬೇಕೆಂದು, ಕಾದು ಕೊಂಡಿರುವರಾದುದರಿಂದ, ತಡವಾಡದೆ ಅವರ ಮನಸ್ಸನ್ನು ತೃಪ್ತಿಪಡಿಸು ಎಂದು ಹೇಳಲು, ಷಹರಜಾದಿಯು, ಸುಲ್ತಾನನನ್ನು ಕುರಿತು, ಪ್ರಿಯರೇ ! ಬಳಿಕ ಅಮಿನಿಯು, ಕಲೀಫರನ್ನು ಕುರಿತು, ತನ್ನ ಕಥೆಯನ್ನು ಹೇಳಲಾರಂಭಿಸಿದಳು.

ಅ ಮಿ ನಿ ಯ ಕ ಥೆ.

ಮಹಾರಾಜರಾದ ಸುಲ್ತಾನರೇ ! ನನ್ನಸಹೋದರಿಯು, ಹೇಳಿದ ಕಥೆಯನ್ನು ಪುನಹ ನಿಮಗೆ ಹೇಳಜೇಕಾದ ಅಗತ್ಯವೇನೂ ಇಲ್ಲ. ನನ್ನತಾಯಿಯು ನಿಧವೆಯಾದನೀಲೆ ನಾನು ನನ್ನ ತಾಯಿಯು, ಸ್ವತಂತ್ರರಾಗಿದ್ದುಕೊಂಡು, ಬಾಳಿದೆವು. ಬಳಿಕ ನಾನು ಐಶ್ವರ್ಯವಂತನಾದೊಬ್ಬ ವರ್ತಕನನ್ನು, ಮದುವೆಯಾಡಿಕೊಂಡು, ನಮ್ಮತಂದೆಯು ಕೊಟ್ಟ ಆಸ್ತಿಯನ್ನು ಆತನ ಸ್ವಾಧೀನವಾಡಿದೆನು. ಆದರೆ ನಾನು ಮದುವೆಯಾಡಿಕೊಂಡ ಮೂರನೇವರ್ಷವೇ ನನ್ನಗಂಡನು ಸತ್ತು ಹೋದುದರಿಂದ, ತೊಂಭತ್ತುಸಾವಿರ ರೂಪಾಯಿಗಳ ಆಸ್ತಿಯು, ನನಗೆ ದೊರೆಯಿತು. ಆ ಹಣದಿಂದ ಬರುವ ಬಡ್ಡಿಯಲ್ಲಿ ನಾನು ಜೀವನಮಾಡಿಕೊಳ್ಳಬಹುದಾಗಿದ್ದುದರಿಂದ ಆರುತಿಂಗಳವರೆಗೂ, ವ್ಯಸನಾಕ್ರಾಂತಳಾಗಿದ್ದು, ಬಳಿಕ ಉಡಿಗೆಯೊಂದಕ್ಕೆ ಸಾವಿರ ರೂಪಾಯಿಗಳನ್ನು ಕೊಟ್ಟು, ನಲವತ್ತು ವಿಧವಾದ ಉಡಿಗೆಗಳನ್ನು ಸಿದ್ಧವಾಡಿಕೊಂಡು, ನನ್ನಗಂಡನು, ಸತ್ತು ಒಂದು ಸಂವತ್ಸರವಾಗುತ್ತಲೆ, ಅದನ್ನು ಧರಿಸಿಕೊಳ್ಳಲಾರಂಭಿಸಿದೆನು. ಒಂದಾನೊಂದು ದಿನ ನಾನು ಒಬ್ಬಳೇ ಇರುವಕಾಲದಲ್ಲಿ ಒಬ್ಬ ಹೆಂಗಸು ನನ್ನ ಸಂಗಡ ಮಾತಾಡುವುದಕ್ಕಾಗಿ ಬಂದಿರುವಂತೆ, ವರ್ತಮಾನಕೇಳಿ ಒಳಕ್ಕೆ ಆಕೆಯನ್ನು ಬರವಾಡಿಕೊಂಡೆನು.

ಆಕೆಯು ನನ್ನನ್ನು ನೋಡುತ್ತಲೆ, ವಂದನೆಯೆನ್ನು ಮಾಡಿ, ಮುಂಡಿಯೊರಿ ಕುಳಿತುಕೊಂಡು, ನೆಲವನ್ನುಮುತ್ತಿಟ್ಟುಕೊಂಡು ಅವ್ಮಾ ನಾನು ನಿನ್ನನ್ನು ತೊಂದರೆ ಪಡಿಸುವುದಕ್ಕಾಗಿ ಬಂದಿದ್ದರೂ, ನಿನ್ನದಯೆಯಾ ಗುಣವನ್ನು ನೋಡಿ, ತನ್ನನ್ನು ಕ್ಷಮಿಸಜೇಕೆಂದು, ಧೈರ್ಯವಾಗಿ ಬೇಡಿಕೊಳ್ಳುವೆನು. ನನಗೊಬ್ಬ ಮಿಕ್ಕಿಲ್ಲದ ಮಾಹುಗಿ ಇರುವಳು. ಆಕೆಗೆ ಈದಿನ ವಿವಾಹಮುಹೂರ್ತವು ನಡೆವುದು. ನಾವು ಈ ದೇಶಕ್ಕೆ ಹೊಸ ಬರು. ಆದುದರಿಂದ ನಾನು ಬಂಟಿಯಾಗಿ ಮದುವೆಗೆ ಹೋಗುವುದರಿಂದ, ಭಾಗ್ಯವಂತರಾದ ನನ್ನ ಬೀಗರಮನೆಯವರು, ನನ್ನ ದೌರ್ಭಾಗ್ಯವನ್ನು

ನೋಡಿ, ವರದೇಶಿಯಾದ ಬಾಳುಮನೆಯವಳೆಂದು, ಹಿಯ್ಯಾಳಿಸುವರು. ಆದಕಾರಣ ನನಗೆ ಅವಮಾನವೂ ದುಃಖವೂ ಉಂಟಾಗುವುದು. ಇದಕ್ಕಾಗಿ ನೀನು ದಯವಾಡಿ, ಮದುವೆಗೆ ಬಂದುದಾದರೆ, ನಮ್ಮನ್ನು ಗೌರವಸ್ಥರೆಂದು, ಬೀಗರು ತಿಳಿದು ಕೊಳ್ಳುವರಲ್ಲದೆ, ಮರ್ಯಾದೆಯಿಂದಲೂ, ನೋಡುವರು. ನಿನ್ನಂತಹ ಉತ್ತಮಳಾದ ಗರತಿಯು, ಮದುವೆಗೆ ಬರುವುದರಿಂದ ನನಗೆ ತುಂಬ ಪ್ರಯೋಜನ ಉಂಟು. ನೀನು ಬಾರದೇಹೋದರೆ ನನಗೆ ಅವಮಾನವೂ ವ್ಯಥೆಯೂ, ಉಂಟಾಗುವುದು. ಆದುದರಿಂದ ದಯವಾಡಿ, ನನ್ನ ಕೋರಿಕೆಯನ್ನು ನೆರವೇರಿಸಬೇಕೆಂದು, ಬೇಡಿಕೊಳ್ಳುವೆನೆಂದು, ಬಹಳವಾಗಿ ಪ್ರಾರ್ಥಿಸಿಕೊಂಡಳು. ಹೀಗೆ ಹೇಳಿದ ಆ ಬಡಪೆಂಗಸಿನ ಪಶ್ಚಾತ್ತಾಪಯುಕ್ತವಾದ ಸ್ಥಿತಿಯನ್ನು ನೋಡಿ, ನಾನು ಕರುಣದಿಂದಾಕೆಯನ್ನು ಕುರಿತು, ಅವ್ವಾ! ನೀನು ಹೇಳಿದಂತೆ ನಾನು ಮಾಡಲು ಸಿದ್ಧಳಾಗಿರುವೆನು. ಆದುದರಿಂದ ನಾನು ಬರಬೇಕಾಕಿರುವ ಸ್ಥಳವನ್ನು ನಿರ್ದೇಶಿಸಿ ಹೇಳಿದರೆ, ಬಟ್ಟೆಗಳನ್ನು ಹಾಕಿಕೊಂಡು ಕೂಡಲೇ, ಬರುವೆನೆಂದು ಹೇಳಿದೆನು. ಆ ಮಾತನ್ನು ಕೇಳಿ ಆ ಮುದುಕಿಯು ಅತ್ಯಂತ ಸಂತೋಷಯುಕ್ತಳಾಗಿ, ಬೇಡಬೇಡವೆಂದರೂ, ಕಾಲುಮೇಲೆ ಬಿದ್ದು, ಮುತ್ತಿಟ್ಟುಕೊಂಡು, ಅವ್ವಾ! ನೀನುಹೇಳಿದ ಗಂಭೀರವಾದ ಮಾತುಗಳು, ನನಗೆ ತುಂಬ ಸಂತೋಷವನ್ನುಂಟುಮಾಡಿದವು. ನಿನಗೆ ನಾನಂತಹ ತೊಂದರೆಯನ್ನೆಂದಿಗೂ, ಕೊಡಲಾರೆನು. ಆದುದರಿಂದ ಈದಿನ ಸಾಯಂಕಾಲಕ್ಕೆ ನಾನು ಬಂದು ಕರೆದಾಗ ನೀನು ಬರಬೇಕೆಂದು ಬೇಡಿಕೊಳ್ಳುವೆನೆಂದು, ಹೇಳಿದಳು.

ಆ ಮದುವೆಯ ಮನೆಯಲ್ಲಿ ನಡೆಯುವ ಕಾರ್ಯಗಳೆಲ್ಲವೂ, ನನಗೆ ತಿಳಿದಿದ್ದುದರಿಂದ ನಾನು ನನ್ನುಡುಪುಗಳಲ್ಲಿ ಇಷ್ಟವಾದುದನ್ನು ಹಾಕಿಕೊಂಡು, ಕೊರಳಿಗೆ ಅವೋಘವಾದ ಮುತ್ತಿನ ಸರವನ್ನೂ, ಕೈಗೆ ಕಂಕಣಗಳನ್ನು ಕಿವಿಗೆ ಕರ್ಣಾಭರಣಗಳನ್ನೂ, ಅತ್ಯಂತ ಪ್ರಕಾಶಮಾನವಾದ ಹೊಳಪಿನಿಂದ ಕೂಡಿದ ವಜ್ರಯುಕ್ತವಾದ ಉಂಗುರವನ್ನೂ, ಉಳಿದಿತರ ಭೂಷಣಗಳನ್ನೂ, ಇಟ್ಟುಕೊಂಡು, ಅಲಂಕರಿಸಿಕೊಂಡೆನು. ಸಾಯಂಕಾಲವಾಗುತ್ತಲೆ ಆ ಮುದುಕಿಯು, ಅತ್ಯುತ್ಸಾಹಯುಕ್ತಳಾಗಿ ಮನೆಗೆ ಬಂದು, ಅವ್ವಾ! ನನ್ನ ಬೀಗರಮನೆಯವರು, ಇತರರಾದ ಮದುವೆಗೆ

ಬರಜೇಕಾಗಿರುವ ಮುತ್ಸೈದೆಯೆರೂ, ಎಲ್ಲರೂ ಬಂದು ಸಿದ್ಧರಾಗಿ ಕಾದು ಕೊಂಡಿರುವರು. ನಿನಗಿಷ್ಟವಾದ ಕಾಲದಲ್ಲಿ ನೀನು ಹೊರಟುಬರಬಹು ದೆಂದು, ಹೇಳಿ ಅದುವರಿಗೂ ನಾನಿಲ್ಲಿಯೆ ಕಾದುಕೊಂಡಿರುವೆನೆಂದಳು. ಬಳಿ ಕ ನಾನೂ ಅವಳಜೊತೆಯಲ್ಲಿ ಬಂದಿಷ್ಟ ಭಾಗ್ಯವಂತರಾದ ಇತರ ಹೆಂಗಸರು ಹೊರಟು, ನಿರ್ಮಲವಾಗಿ ಗುಡಿಸಿ ನೀರನ್ನುಚೆಲ್ಲಿ ತಂಪಾಗಿಮಾಡಿದ್ದ, ಮನೋಹರವಾದ ಮಾರ್ಗದಲ್ಲಿ ಬರುತ್ತಾ, ಬಂದಾನೊಂದು ದೊಡ್ಡ ಮನೆ ಯಮುಂದೆ ಪ್ರಕಾಶಿಸುತ್ತಿರುವ, ಬಂದು ದೀಪವನ್ನು ಕಂಡೆನು. ಆದರೆ, ಆದೀಪದ ಬೆಳಕಿನ ಬಳಿಯಲ್ಲಿ " ನಿತ್ಯಾನಂದ ಸುಖವಾಸ " ವೆಂದು ಬರೆದಿದ್ದುದನ್ನು, ಓದಿಕೊಂಡೆನು. ಆ ಮುದುಕಿಯು, ಬಾಗಿಲನ್ನು ತಟ್ಟಿದ ಕೂಡಲೆ, ಕದಗಳು ತೆರೆಯಲ್ಪಟ್ಟವು. ಆಕೆಯು, ನನ್ನನ್ನು, ಆ ಮನೆಯೊಳಕ್ಕೆ ಕರೆದುಕೊಂಡು ಹೋದಳು. ಅಲ್ಲಿ ಕುಳಿತಿದ್ದ ಅತ್ಯಂತ ರೂಪವತಿಯಾದ ಒಬ್ಬ ಹೆಂಗಸು ನನ್ನನ್ನು ಅತ್ಯಾದರದಿಂದ ಬರಮಾಡಿ, ಪ್ರತ್ಯುತ್ಥಾನವಂ ಕೊಟ್ಟು, ಪ್ರೀತಿಯಿಂದಾಲಿಂಗಿಸಿಕೊಂಡು, ತನ್ನಬಳಿಯಲ್ಲಿ ಕುಳ್ಳಿರಿಸಿಕೊಂಡಳು. ಆಕೆಯಬಳಿಯಲ್ಲಿರುವಮತ್ತೊಂದು ಕೊಠಡಿಯಲ್ಲಿ, ನಾನಾರತ್ನಗಳ ನಿರ್ಮಿತವಾದ ಒಂದು ಸಿಂಹಾಸನವೂ, ಇದ್ದಿತು. ಆಕೆಯು ನನ್ನನ್ನುನೋಡಿ, ನೀನು ವಿವಾಹಕ್ಕೆ ಸಹಾಯೆಯಾರ್ಥವಾಗಿ ಬಂದಿರುವೆಯೆಲ್ಲಾ ! ಆ ವಿವಾಹವು ನಿನ್ನಿಷ್ಟಾನುಸಾರವಾಗಲ್ಲದೆ ಬೇರೇವಿಧವಾಗಿ ನಡೆಯುವೀಕೆಂದು, ಕೋರುತ್ತಿರುವೆನು. ಪ್ರಪಂಚದಲ್ಲಿರುವ ಪುರುಷರಲ್ಲೆಲ್ಲ, ಅತ್ಯಂತಸುಂದರನಾದ ನನ್ನ ಸಹೋದರನಾದ ಪುರುಷನೋರ್ವನು, ನಿನ್ನ ರೂಪರೇಖಾಲಾವಣ್ಯಗಳನ್ನು ನೋಡಿ, ನಿನ್ನನ್ನು ಮೋಹಿಸಿರುವುದರಿಂದ, ಆತನ ಸುಖದುಃಖಗಳೆಲ್ಲವೂ, ನಿನ್ನ ಸ್ವಾಧೀನವೆ, ಆಗಿರುವುದು. ನೀನು ಆತನ ವಿಷಯದಲ್ಲಿ ದಯೆಯನ್ನು, ತೋರಿಸದೆ ಹೋದರೆ ಆತನು ನಿರ್ಭಾಗ್ಯನಾಗುವನು. ಅಲ್ಲದೆ ನಿನ್ನ ಸುಗುಣಗಳೆಲ್ಲವನ್ನು ಆತನು ಚೆನ್ನಾಗಿ ತಿಳಿದುಕೊಂಡಿರುವನು.

ಆದರೆ ಆತನು, ನಿನ್ನ ಸಂಬಂಧವನ್ನು ಹೊಂದುವದಕ್ಕೆಷ್ಟು ಮಾತ್ರವೂ ಯೋಗ್ಯನಲ್ಲವೆಂದು, ನಾನು ನಿಶ್ಚಯವಾಗಿ ಹೇಳುವೆನು. ಕರುಣಾಳುವಾದ ನಿನಗೆ ನನ್ನ ವಿಜ್ಞಾಪನೆಗಳು, ಸಮ್ಮತವಾದರೆ ನಾನು ಅದನ್ನು ಕೈಸು ಮಾಡಿಯೇ ನಡೆಸುತ್ತೇನೆಲ್ಲದೆ,ನನ್ನಭಿಮತವನ್ನು ತಿರಸ್ಕರಿಸ

ಕೊಡದೆಂದು, ನಿನ್ನನ್ನು ಬೇಡಿಕೊಳ್ಳುವೆನು. ಎಂದುಹೇಳಿದರು. ನನಗೆ ಗಂಡನು ಸತ್ತುಹೋದ ಬಳಿಕ ನಾನು ಮತ್ತೆ ವಿವಾಹವಾಡಿಕೊಳ್ಳಬೇಕೆಂಬ ಅಭಿಲಾಷೆಯೆನ್ನು ಹೊಂದಿರಲಿಲ್ಲ. ಆದರೆ ಆ ಲಲನಾಮಣಿಯ ಮಾತಿಗೆ ಯಾವ ಪ್ರತ್ಯುತ್ತರವನ್ನು ಹೇಳದೆ, ಅನುಮಾನದಿಂದಿದ್ದುದರಿಂದ ಆಕೆಯು ಸಮ್ಮತಿ ಪಟ್ಟರುವಳೆಂದು, ತಿಳಿದು, ಕೈಚಪ್ಪಾಳೆಯನ್ನು ಹಾಕಿದಳು. ಕೂಡಲೆ ಒಂದುಕೊಳಿಯ ಬಾಗಿಲನ್ನು ತೆರೆದುಕೊಂಡು, ಸರ್ವ ಲಕ್ಷಣ ಸಂಪನ್ನನಾದ ರಾಜಪುತ್ರನೊಬ್ಬನು, ಬಂದನು. ಆತನನ್ನು ನೋಡಿ, ನನಗೆ ಅತ್ಯಾನಂದ ವುಂಟಾಯಿತು. ಆತನು ನನ್ನ ಬಳಿಯಲ್ಲಿ ಕೂತುಕೊಂಡನು. ಆಗ ನಾವಿಬ್ಬರೂ, ಮಾತನಾಡುತ್ತಿರುವಲ್ಲಿ ಆ ಲಲನಾಮಣಿಯು, ಹೇಳಿದ ಸುಗುಣಗಳಿಗಿಂತಲೂ, ಅಧಿಕವಾದ ಗುಣಗಳು ಆತನಲ್ಲಿರುವುದನ್ನು ನಾನು ತಿಳಿದುಕೊಂಡೆನು. ಹೀಗಿರುವಲ್ಲಿ ನಾವಿಬ್ಬರೂ, ಮಾತನಾಡಿಕೊಂಡಿರುವೆವೆಂದು, ತಿಳಿದು ಆಕೆ ಪುನಹ ಕೈಚಪ್ಪಾಳೆಯೆನ್ನು ಹಾಕಿದಳು. ಕೂಡಲೆ ಒಳಗಿನಿಂದ ಖಾಜಿಯು, ಸುಲ್ತಾನರು, ಸಾಕ್ಷಿಗಾರರನ್ನು ಸಂಗಡ ಕರೆದುಕೊಂಡು, ಬಂದು ವಿವಾಹಪತ್ರಿಕೆಯೆನ್ನು ಬರೆದು ಸಾಕ್ಷಿಯೆನ್ನು ಹಾಕಿಸಿದನು.

ಆಗ ನನ್ನಗಂಡನು ನನ್ನನ್ನುನೋಡಿ, ನೀನು ಮತ್ತೊಬ್ಬಪುರುಷನನ್ನೂ ನೋಡಕೂಡದು, ಅಲ್ಲದೆ ಇತರ ಪುರುಷರಸಂಗಡ ಮಾತನಾಡಕೂಡದು. ಹೀಗಿರುವುದಾದರೆ ನಿನಗಾವ ವಿಧವಾದ ತೊಂದರೆಯೂ, ನನ್ನಿಂದುಂಟಾಗುವುದಿಲ್ಲವೆಂದು, ಹೇಳಿದನು. ಬಳಿಕ ನಾನು ಯಾವ ವಿವಾಹಕ್ಕಾಗಿ ಈ ಮನೆಗೆಬಂದೆನೋ, ಆ ಮದುವೆಗೆ ನಾನು ಮದುವೆಯೆ ಹೆಣ್ಣಾದೆನು. ನಂತರ ನವಿಬ್ಬರಿಗೂ, ವಿವಾಹವು ಜರಗಿತು. ಹೀಗಾದ ಕೆಲವುದಿನಗಳಿಗೆ ನನಗಿನ್ನು ಕೆಲವು ಬಟ್ಟೆಗಳು ಬೇಕಾದುದರಿಂದ, ನನ್ನ ಗಂಡನಪ್ಪಣೆಯೆನ್ನು ಪಡೆದುಕೊಂಡು, ಉಡುಪನ್ನು ತರುವುದಕ್ಕಾಗಿ, ಆ ಮುದುಕಿಯನ್ನೂ, ಇಬ್ಬರು ದಾಸಿಯರನ್ನೂ, ಕರೆದುಕೊಂಡು, ಹೊರಹೊರಟೆನು. ಬಳಿಕ ನಾವು ಅಂಗಡಿಬೀದಿಯಲ್ಲಿ ಬರುತ್ತಿರುವಾಗ, ಆ ಮುದುಕಿಯು, ನನ್ನನ್ನುನೋಡಿ, ಬೊರೆಸಾನಿ ನೀನು ಪಟ್ಟೆಯಬಟ್ಟೆಗಳನ್ನು ತೆಗೆದುಕೊಳ್ಳುವೆಯೊಮಾದರಿಂದ, ನನಗೆ ಗುರುತಾಗಿರುವ ಒಬ್ಬ ಸಾಹುಕಾರನ ಅಂಗಡಿಗೆ ಕರೆದುಕೊಂಡು ಹೋಗುವೆನು. ಅಲ್ಲಿ ನಿನಗೆ

ಚೀಕಾದ ಬಟ್ಟೆಬರೆಗಳಿಲ್ಲವೂ, ಇರುವುದರಿಂದ ಕೇಳಿದ ಪದಾರ್ಥವನ್ನು ಆತನೇ ಕೊಡುವನು. ಅಲ್ಲದೆ ಬೀದಿಬೀದಿಯನ್ನು ಸುತ್ತುವ ಶ್ರಮವು ತಪ್ಪುವುದೆಂದು, ಹೇಳಿ ನಮ್ಮ ಹಲ್ಲರನ್ನೂ, ಅಂಗಡಿಗೆ ಕರೆದುಕೊಂಡು ಹೋದಳು ಆ ಚಿಕ್ಕವಯಸ್ಸಿನ ಯುವತಿಯು, ಸುಂದರನಾಗಿ ಸೊಗಸುಗಾರನಾಗಿದ್ದನು ನಾನು ಆ ಮುದುಕಿಯನ್ನು ಕುರಿತು, ಬಟ್ಟೆಯವಸ್ತ್ರಗಳನ್ನು ತೆಗೆದು ತೋರಿಸುವಂತೆ, ಹೇಳು ಎಂದೆನು. ಅದಕ್ಕಾಕೆ ನೀನೇಕೇಳಿದು ಹೇಳಲು, ನಾನು ಪರಪುರುಷರಸಂಗಡ ಮಾತನಾಡುವುದಿಲ್ಲವೆಂದು, ನನ್ನ ವಿವಾಹಕಾಲದಲ್ಲಿ ಪತ್ರವನ್ನು ಬರೆದುಕೊಟ್ಟಿರುವೆನಾದುದರಿಂದ, ನಾನು ಮಾತನಾಡಬಾರದೆಂದೆನು. ಬಳಿಕ ಆ ವರ್ತಕನು ಬಟ್ಟೆಗಳನ್ನು ತೆಗೆದು ತೋರಿಸಿದನು. ಅವುಗಳಲ್ಲಿ ನನಗಿಷ್ಟವಾದೊಂದು, ಬಟ್ಟೆಯನ್ನು ತೆಗೆದುಕೊಂಡು ಅದರಬೆಲೆಯನ್ನು ಕೇಳಿಂದು ಹೇಳಿದೆನು.

ಆಗ ವರ್ತಕನು, ನಾನು ಈ ವಸ್ತ್ರವನ್ನು ಹಣಕ್ಕಾಗಲಿ, ಚಿನ್ನಕ್ಕಾಗಲಿ, ಕೊಡತಕ್ಕವನಲ್ಲ. ಹುತ್ತೀನೆಂದರೆ ಈ ನಾರೀಮಣಿಯು, ನನಗೊಂದು ಮುತ್ತುಕೊಟ್ಟರೆ, ನಾನು ಆ ಚುಂಬನದಿಂದ ಸಂತುಷ್ಟನಾಗಿ, ಈ ವಸ್ತ್ರವನ್ನು ಉಚಿತಾರ್ಥವಾಗಿ ಕೊಡುವೆನೆಂದನು. ಆಗ ನಾನು ಅದಕ್ಕೊಪ್ಪಲಿಲ್ಲ. ಕೂಡಲೆ ಮುದುಕಿಯು, ನನ್ನನ್ನುನೋಡಿ, ನೀನು ಅನುಮಾನಿಸುವುದೇತಕ್ಕೆ ಮಾತನಾಡುವ ಪ್ರಸಕ್ತಿಯೇ ಇಲ್ಲ, ಚುಂಬನವನ್ನು ಕೊಟ್ಟರೆ, ಬಟ್ಟೆಯು ದೊರೆಯುವುದಲ್ಲಾ ! ಎಂದು ಹೇಳಲು, ನನಗೆ ವಸ್ತ್ರದಮೇಲೆ ತುಂಬಾ ಆಸೆ ಯುಂಟಾಗಿದ್ದುದರಿಂದ, ನಾನು ಅವರುಗಳನ್ನು ಮರೆಯಾಗಿ ನಿಂತುಕೊಳ್ಳುವಂತೆ ಹೇಳಿ, ಮುಸುಕನ್ನು ತೆಗೆದೆನು. ಕೂಡಲೆ ಆ ವರ್ತಕನು, ಚುಂಬಿಸುವುದಕ್ಕೆ ಬದಲಾಗಿ ನನ್ನ ಉರೋಜಗಳೆರಡನ್ನೂ, ಬಲವಾಗಿ ಕಚ್ಚಿದನು. ಅದರಿಂದ ರಕ್ತವು ಸೋರಿತು. ನಾನು ನೋವನ್ನು ತಾಳಲಾರದೆ ಮೂರ್ಛಿಸಿಬೀದೆನು. ಅಂಗಡಿಯವನು ಹೆದರಿ ಬಾಗಿಲನ್ನು ಹಾಕಕೊಂಡು, ಹೊರಟುಹೋದನು. ನನಗೆ ಮೂರ್ಛೆ ತಿಳಿದಮೇಲೆ, ಮುದುಕಿಯು, ದಾದಿಯರು, ಮುಸುಕನ್ನು ಮುಚ್ಚಿದರು. ಆದರೂ ರಕ್ತವು ಸೋರುತ್ತಲೆ ಇದ್ದಿತು. ಆದರೆ ಮೇಲುಹೊದಿಕೆಯ ಮುಸುಕಿನಿಂದ ಜನರು ಅದನ್ನು ತಿಳಿದುಕೊಳ್ಳಲಾರದೆ ಹೋದರು. ಹೀಗೆಂದು ಹೇಳಿ, ಬೆಳಗಾದಕೂಡಲೆ ಪ್ರಯಾಣಿಕಾದಿಯು, ಕಥೆಯನ್ನು,

ನಿಲ್ಲಿಸಿದಳು. ಸುಲ್ತಾನನು, ಮುಂದಿನ ಕಥೆಯನ್ನು ಕೇಳಿ ಆನಂದಿಸಬೇಕೆಂದು, ಯೋಚಿಸಿ, ಯಾವಮೂತನ್ನೂ ಆಡದೆ ಹೊರಟು ಹೋದನು.

೬೮ ನೆಯ ರಾತ್ರಿ ಕಥೆ.

ಬಳಿಕ ದಿನರಜೋದಿಯು, ಆ ರೇಷ್ಮೆಯ ಬಟ್ಟೆಗಳನ್ನು ತರುವುದಕ್ಕಾಗಿ ಹೋಗಿದ್ದ ಸುಂದರೀಮಣಿಯು, ತವನೆ ಳೆಯು ಏನಾಯಿತೋ ತಿಳಿದುಕೊಳ್ಳಬೇಕೆಂದು, ತನ್ನಕ್ಕನನ್ನು ಎಚ್ಚರಗೊಳಿಸಿ, ಪ್ರಯೆಸಹೋದರಿ, ಅವಿನಿಯ ಕಥೆಯನ್ನು ಪೂರ್ತಿಯಾಗಿ ಹೇಳಿದ ಹೊರತು, ಸುಲ್ತಾನರ ಮನಸ್ಸು ಸಮಾಧಾನ ಹೊಂದಲಾರದೆಂದು, ನುಡಿಯಲು ಷಹರಜೋದಿಯು, ಕಥೆಯನ್ನು ಹೇಳಲಾರಂಭಿಸಿದಳು. ಬಳಿಕ ಆ ಮುದುಕಿಯು, ನನ್ನನ್ನು ನೋಡಿ, ಅಮ್ಮಾ! ನಿನ್ನೀವುರವಸ್ಥೆಗೆ ನಾನೇ ಕಾರಣಳಾದುದರಿಂದ ನೀನು ನನ್ನನ್ನು ಮನ್ನಿಸಬೇಕು. ಆವರ್ತಕನು ನಮ್ಮದೇಶದವನಾದುದರಿಂದ, ಸುಲಭವಾಗಿ ವಸ್ತ್ರಗಳನ್ನು ಕೊಡುವನೆಂದು, ನಾನಲ್ಲಿಗೆ ಕರೆದುಕೊಂಡು ಹೋದೆನು. ಆದರೆ ಇಂತಹ ದುಸ್ಕಾರ್ಯಕಾರ್ಯವನ್ನು ಆತನು ನಡೆಸುತ್ತಾನೆಂದು, ನಾನು ಸ್ವಪ್ನದಲ್ಲಿಯೂ ತಿಳಿದಿರಲಿಲ್ಲ. ಆದುವರಿಂದ ನೀನು ಅಂಗಲಾಚಿ ಸಮಾಧಾನವನ್ನು ಬೇಡಬಾ. ಬೇಗನೆ ಮನೆಯನ್ನು ಸೇರುವೆವು. ಮನೆಗೆ ಹೋದಕೂಡಲೆ ನನ್ನಬಳಿಯಲ್ಲಿ ಔಷಧವನ್ನು ಪಾಕುವೆನು. ಇವರಿವಾಘಾಯವು, ಗುಣವಾಗಿಲ್ಲದಂತೆ ಅಣಗಿ ಹೋಗುವುದೆಂದು, ಹೇಳಿದಳು. ನಾನು ನಡೆಯಲಾರದೆ ಅತ್ಯಂತಪ್ರಯಾಸವಟ್ಟು, ಮೆಲ್ಲಮೆಲ್ಲನೆ ಮನೆಯನ್ನು ಸೇರಿದೆನು.

ಕೂಡಲೆ ಅಂತಃಪುರಕ್ಕೆ ಹೋಗಲು, ಮೂರ್ಛೆಗಾಯುಂಟಾಯಿತು ಆದರೆ ಆ ಮುದುಕಿಯು, ನನಗೆಮೂಡಿದ ಶೈತ್ಯೋಪಚಾರದಿಂದ ಮೂರ್ಛೆತಿಳಿದು, ವಾಲಗಿಕೊಂಡೆನು. ರಾತ್ರಿಗೆ ನನ್ನಗಂಡನು ಬಂದು ತಲೆಕಟ್ಟಿರುವ ಕಟ್ಟನ್ನುನೋಡಿ, ಇದೇನೆಂದು ಕೇಳಿದನು. ಆದಕ್ಕೆ ನನಗೆತುಂಬ ತಲೆನೋವಾಗಿರುವುದೆಂದು, ನಾನು ಹೇಳಿದೆನು. ಆತನು ದೀಪವನ್ನು ತೆಗೆದುಕೊಂಡು ಬಂದು, ನನ್ನಕೈಗಳನ್ನುನೋಡಿ, ಇದಕ್ಕೆ ಕಾರಣವೇನೆಂದು ಕೇಳಿದನು. ನಾನು ನಿರಪರಾಧಿಯಾಗಿದ್ದರೂ, ಈ ವರ್ತಮಾನವನ್ನು ಆತನಲ್ಲಿ ಹೇಳುವುದು ಸರಿಯಲ್ಲವೆಂದು, ತಿಳಿದು, ನಾನು ನಿನ್ನಪ್ಪಣೆಯ

ನ್ನು ಹೊಂದಿ, ಅಂಗಡಿಗೆ ಹೋಗುತ್ತಿರುವಾಗ ಕಟ್ಟಿಗೆಯನ್ನು ಮಾರುವ ವವನು, ಎದುರಾಗಿಬಂದನು. ಆ ಬೀದಿಯು ಬಹು ಇಕ್ಕಟ್ಟಾಗಿದ್ದುದ ದರಿಂದ ಸೌದೆಯಹೊರೆಯು, ನನ್ನಕೆನ್ನೆಗೆ ಕಗಲಿ ತರೆದುಬಿಟ್ಟತು. ಎಂದು ಹೇಳಿದನು. ಅದಕ್ಕಾತನು ಕೋಪಗೊಂಡು ಆತನಿಗೆ ನಾನು ಶಿಕ್ಷೆಯನ್ನು ಮಾಡದೆ ಬಿಡುವೆನೆ ನಾಳೆಯದಿನ ಪೋಲಿಸ್ ಜವಾಬ್ದಾರನನ್ನು ಕರೆಸಿ, ಆತನಮೂಲಕ ಕಟ್ಟಿಗೆಯನ್ನು ಮಾರತಕ್ಕವರೆಲ್ಲರನ್ನು ಬರವಾಡಿ, ಅವರನ್ನು ಗಲ್ಲಿಗೆ ಹಾಕಿಸುವೆನೆಂದು, ಹೇಳಿದನು. ನಿಷ್ಕಾರಣ ಮರಣವನ್ನು ಹೊಂದುವ ಆ ಜನರ ಮರಣಕ್ಕೆ ನಾನೇ ಕಾರಣಭೂತಳಾದುದರಿಂದ ಮಹಾ ವ್ಯಸನವನ್ನು ಹೊಂದಿದವಳಾಗಿ, ಪಶ್ಚಾತ್ತಾಪದಿಂದ ದೊರೆಯೆ ! ನೀನು ಹೀಗೆ ನಿಷ್ಕಾರಣದಿಂದ ಆ ಜನರನ್ನು ಕೊಲ್ಲುವುದಾದರೆ, ನನಗೆ ತುಂಬ ವ್ಯಸನ ವುಂಟಾಗುವುದಲ್ಲದೆ ಭಗವಂತನು ನಮ್ಮನ್ನು ಮೆಚ್ಚನು. ಆದುದರಿಂದ ನೀನು ದಯೆಯಾಪಿ, ಈ ಯೋಚನೆಯನ್ನು ನಿಲ್ಲಿಸಬೇಕೆಂದು ಬೇಡಿಕೊಂಡೆನು. ಹಾಗಾದರೆ ನಿನಗೆ ಏಟು ತಗಲಿದುದುಸುಳ್ಳು. ಮತ್ತೇ ತರದಿಂದ ಹೀಗಾಯಿತು ಹೇಳೆಂದನು.

ಆಗನಾನು ಅಯ್ಯಾ ! ದಾರಿಯಲ್ಲಿ ಬೀಗುತ್ತಿರುವಾಗ ಕತ್ತೆಯೆಮೇಲೆ ಹುಚ್ಚಿಯು ಹೊರೆಯೆನ್ನು ಹೇರಿಕೊಂಡು, ಬರುತ್ತಿದ್ದ ಮನುಷ್ಯನು, ನುತ್ತಲೂ ನೋಡುತ್ತಾ, ಕತ್ತೆಯನ್ನು ನಡೆಸುತ್ತಿದ್ದನು. ಆಕತ್ತೆಯು ನನ್ನನ್ನು ನೂಕಲು, ನಾನು ಕೆಳಗೆಬಿದ್ದೆನು. ಆಗ ಗಾಜಿನ ಹೆಂಚು ನನ್ನ ಕೆನ್ನೆಯನ್ನು ಈಗತೆಗೆ ತುದಿತೆಂದು ಹೇಳಿದೆನು. ನನ್ನ ಗಂಡನು ಕೋಪಾಕ್ರಾಂತನಾಗಿ ಹಾಗಾದರೆ ನಾಳೆನದಿನ ಪ್ರಧಾನಮಂತ್ರಿಯನ್ನು ಕರೆಸಿ, ಕನ್ನಡಿಯ ವ್ಯಾಪಾರಗಾರರನ್ನೆಲ್ಲಾ, ಕೊಲ್ಲುವಂತೆ ಆಜ್ಞಾಪಿಸುವೆನೆಂದು, ಹೇಳಿದನು. ಆಗ ನಾನು ಅಯ್ಯಾ ! ರಾಜಾ ! ನಿನ್ನ ಪುಣ್ಯ, ಸಧ್ಯಕ್ಕೆ ಹಾಗೆಂದಿಗೂ, ಮಾಡಬೇಡ, ಅದು ಅವರ ತಪ್ಪಲ್ಲವೆಂದು, ಹೇಳಲು ಆತನು ಪ್ರಿಯೇ ! ಹಾಗಾದರೆ ನಾನು ಯಾವುದನ್ನು ನಂಬಬೇಕು. ನಿನ್ನ ಬಾಯಿಯಿಂದ ನಿಜಸ್ಥಿತಿಯನ್ನು ಬರಮಾಡಬೇಕೆಂದಿರುವೆನಲ್ಲಾ, ಜಾಗ್ರತೆಯಾಗಿ ನಿಜವನ್ನು ಹೇಳು. ಎಂದುಕೇಳಿದನು. ಪ್ರಿಯರಾಜಕುಮಾರನೇ ! ನನಗೆ ಬೆಂಬಿಡದೇ ಬಂದು ವಿಧವಾದ ವೈಕವು,

ತಲೆಗೇರಿದಕೂಡಲೇ ನಾನು ಕೆಳಗೆ ಬಿದ್ದೆನು. ಆಹಾ ! ನೀನು ಇದುವರಿಗೂ ಆಡುತ್ತಿದ್ದ ಕನವರಿಕೆಯನ್ನು ನಾನು ತಿಳಿದುಕೊಂಡೆನೆಂದು, ಕೈಯನ್ನು ತಟ್ಟಿದನು. ಕೂಡಲೆ ಮೂರುಜನ ಕಿಂಕರರು, ಬಂದರು. ಅವರನ್ನು ನೋಡಿ, ಇವಳನ್ನು ಹಾಸಿಗೆಯಿಂದೆಳೆದು, ಹೊರಕ್ಕೆ ಹಾಕಿ, ಎಂದು ಹೇಳಿದನು. ಅವರಲ್ಲಿಬ್ಬರು ನನ್ನನ್ನು ಕೆಳಗಿಳಿಸಿದರು, ಮತ್ತೊಬ್ಬ ನನ್ನನ್ನುನೋಡಿ, ಇವಳನ್ನು ಕತ್ತಿಯಿಂದ ಕಡಿದುಹಾಕು. ಎಂದುಹೇಳಿದನು. ಆತನು ಸುಮ್ಮನಿರಲು, ಹಾ ! ಪಾಪಿ ! ನನ್ನ ಅರ್ಥಾಂಗಿಯೆಂಬಿದ್ದಕೊಂಡು, ನನಗೆ ಅನ್ಯಾಯವು ಮಾಡಿದವರಿಗಾಗುವ ಶಿಕ್ಷೆಯೆ ಇದು. ಆದುದರಿಂದ ಇವಳನ್ನು ಕತ್ತರಿಸಿ, ಸೈಗಿ್ರಸೆಂಬ ನದಿಯಲ್ಲಿ ಹಾಕಿಬಿಡು. ಎಂದು ಆಗ್ರಹದಿಂದ ಕೂಗಿ ಹೇಳಿದನು. ಆಗ ಸೇವಕನು ನನ್ನನ್ನು ನೋಡಿ, ಅಮ್ಮಾ ! ನಿನಗಂತ್ಯಕಾಲವು ಸಂಭವಿಸಿರುವುದು. ಆದುದರಿಂದ ನೀವು ಸಾಯುವುದಕ್ಕೆ ಮುಂಚೆ ಮಾಡಬೇಕೆಂದಿರುವ ಯೋಚನೆಗಳೇನಾದರೂ, ಇದ್ದರೆ ಈಗಲೆ ಯೋಚಿಸು, ಎಂದು ಹೇಳಿದನು. ಬಳಿಕ ನಾನೊಂದು ಮಾತನಾಡುವುದಕ್ಕೆ ಸುಲ್ತಾನನಿಂದಪ್ಪಣೆಯೆನ್ನು ಹೊಂದಿ ಅಯ್ಯೋ ! ನನಗಿಂತೆಪ ದುರವಸ್ಥೆಯು ಬರುವುದಕ್ಕೆ ಕಾರಣವೇನು ? ನಿನ್ನನ್ನು ಮದುವೆಯಾದುದಕ್ಕೆ ಈ ಚಿಕ್ಕವಯಸ್ಸಿನಲ್ಲಿ ಪ್ರಾಣವನ್ನು ಬಿಡಬೇಕೆ ! ದಯೆಮಾಡಿ ನನ್ನಪ್ರಾಣವನ್ನುಳಿಸೆಂದು, ಬೇಡಿಕೊಂಡೆನು. ಆದರೂ ಆತನಿಗೆ ದಯೆಬಾರದಿರಲು, ಕಣ್ಣೀರನ್ನು ಸುರಿಸುತ್ತಾ ಕಾಲಿನ ಮೇಲೆಬಿದ್ದು, ಹೊರಳಾಡಿ ನಾನಾವಿಧದಿಂದ ಬೇಡಿಕೊಂಡರು, ಆತನಿಗೆ ದಯೆಬಾರದೆ ಹೋಯಿತು.

ಇಷ್ಟರಲ್ಲಿ ಆತನಿಗೆಚಿಕ್ಕತನದಿಂದ ಹಾಲನ್ನುಕೊಟ್ಟ ಸಾಕಿದವಳಾದ ಆ ಮುದುಕೆಯು, ಆತನಬಳಿಗೆ ಬಂದು, ನನ್ನ ಪ್ರೀತಿಪಾತ್ರನಾದ ಮಗನೇ ! ನೀನು ನನ್ನವೀಲಣ ವಿಶ್ವಾಸದಿಂದಲಾದರೂ, ಈಕೆಗೆ ಪ್ರಾಣದಾನವನ್ನು ಮಾಡಬೇಕೆಂದು ಬೇಡಿಕೊಂಡು, ನಾವು ಒಬ್ಬರಪ್ರಾಣವನ್ನು ಕೊಂದರೆ ಬೇಪರು ನಮ್ಮ ಪ್ರಾಣವನ್ನೂ, ಮತ್ತೊಬ್ಬರಿಂದ, ಕೊಲ್ಲಿಸುವನು. ಎಂಬುವ ನ್ಯಾಯವನ್ನು ನೀನು ಯೋಚಿಸಿ, ನನ್ನನೂ ತನ್ನು ನಡೆಸೆಂದು ಗೋಳಿಡುತ್ತಾ ಬೇಡಿಕೊಂಡಳು. ಆಗ ಆತನು ಆಗಲಿ ನಿನ್ನಮಾತಿನಂತೆ, ಇವಳ ಪ್ರಾಣವನ್ನುಳಿಸುವನು. ಆದರೆ ಇನಳುಮೂ

ಡಿದ ದುಷ್ಕೃತ್ಯಕ್ಕೆ ಶಿಕ್ಷೆಯಾಗಿ ಎಂದಿಗೂ ಮರೆಯದಿರುವಂತೆ ಕ್ರೂರವಾದ ದಂಡನೆಯನ್ನು ಕೊಡುವೆನೆಂದು ಹೇಳಿ ಸೇವಕರನ್ನು ಕರೆಸಿ ಇವಳ ಎದೆಯನ್ನು ಖಂಡಯುಕ್ತವಾದ ಚರ್ಮವು ಕಿತ್ತುಬರುವಂತೆ ಕೊಯ್ದು ಹಾಕಿರೆಂದು, ಹೇಳಿದೆನು. ಆಗ ಆ ಸೇವಕರು ನಿಷ್ಕಾರಣದಿಂದ ನನ್ನ ಎದೆಯಮೇಲೆ ಹರಿತವಾದ ಕತ್ತಿಯಿಂದ ಹೊಡೆಯಲು, ನಾನು ಮೂರ್ಛೆ ಹೋದೆನು. ಬಳಿಕ ನನ್ನನ್ನೊಂದು ಮನೆಯಲ್ಲಿ ಹಾಕುವಂತೆ ರಾಜಪುತ್ರನು ಸೇವಕರಿಗೆ ಆಜ್ಞಾಪಿಸಲು, ಅವರು ಹಾಗೆಯೇ ಮಾಡಿದರು. ಆದರೆ ಆ ಮುದುಕಿಯು, ನನಗೆಮಾಡಿದ ಶೈತ್ಯೋಪಚಾರದಿಂದ, ನಾನು ಬದುಕಿಕೊಂಡೆನು. ನಾಲ್ಕು ಐದು ತಿಂಗಳಾದ ಬಳಿಕ ನನಗೆ ನಡೆಯುವುದಕ್ಕೆ ಸ್ವಲ್ಪ ಶಕ್ತಿಯುಂಟಾಯಿತು. ಅಲ್ಲಿರುವುದಕ್ಕೆ ನನಗೆ ಸಹನೆಯೂ ಉಂಟಾಗಲಿಲ್ಲ. ಹೇಗಾದರೂಮಾಡಿ, ನನ್ನ ಮೊದಲಿನ ಗಂಡನಮನೆಗೆ ಹೋಗಬೇಕೆಂದು ಯೋಚಿಸಿದೆನು. ಆದರೆ ನನ್ನ ಎರಡನೆಯ ಗಂಡನು ಆ ಮನೆಯನ್ನು ಸಂಪೂರ್ಣವಾಗಿ ನೆಲಸಮಮಾಡಿಸಿ, ಆಸ್ತಿಯನ್ನೆಲ್ಲಾ ಇತರರಿಗೆ ಮಾಡಿಬಿಟ್ಟಿದ್ದನು. ಇಂತಹ ಘೋರವಾದ ಶಿಕ್ಷೆಯನ್ನು ಇದುವರೆಗೆ ಯಾರೂ ಮಾಡಿಯೂ ಇಲ್ಲ. ಮಾಡಿದುದನ್ನು ಕೇಳಿಯೂ ಇಲ್ಲ. ಕಲೀಫರೇ! ಹೀಗೆ ನಾನು ಅನಾಥಳಾದೆನು. ಬಳಿಕ ಅನ್ನ ವಸ್ತ್ರಗಳಿಗೆ ಗತಿಯಿಲ್ಲದೆ, ನಾನು, ಈಗ ಸ್ವಲ್ಪಹೊತ್ತಿನಹಿಂದೆ ನಿಮ್ಮ ಸಮ್ಮುಖದಲ್ಲಿ ತನ್ನ ಕಥೆಯನ್ನು ವಿವರಿಸಿ ಹೇಳಿದ ಮೋಬದಿಯೆಬಳಿಗೆ ಬಂದು, ನನ್ನ ದುರವಸ್ಥೆಯನ್ನು ಹೇಳಿಕೊಳ್ಳಲು, ಆಕೆಯು ನನ್ನನ್ನು ಮರ್ಯಾದೆಯಿಂದ ಬರಮಾಡಿಕೊಂಡು, ತಾಳ್ಮೆಯಿಂದ ನನಗೆ ಬುದ್ಧಿವಾದವನ್ನು ಹೇಳಿ, ಅಮ್ಮಾ! ಪ್ರಪಂಚದಲ್ಲಿರುವ ಸುಖವೇ ಇಷ್ಟು.

ಆದುದರಿಂದಲೆ, ನಾನುಕೊಡ ನನ್ನ ಪ್ರೀತಿಪಾತ್ರನಾದ ರಾಜಕುಮಾರನನ್ನು, ನನ್ನ ಉಳಿದ ಸರ್ವಸ್ವವನ್ನು ಹೋಗಲಾಡಿಸಿಕೊಂಡು, ಈಗಿನದುರವಸ್ಥೆಯನ್ನು ಅನುಭವಿಸುತ್ತಿರುವೆನೆಂದು, ತನಗೆ ತನ್ನ ಅಕ್ಕಂದಿರು ಮಾಡಿದ ದ್ರೋಹವನ್ನೂ, ಅದಕ್ಕೆ ತಕ್ಕಂತೆ ಅವರು ನಾಯಿಗಳಾಗಿ ವ್ಯಥೆಪಡುತ್ತಿರುವುದನ್ನು ಹೇಳಿ, ನನ್ನಲ್ಲಿ ಅತ್ಯಂತ ವಿಶ್ವಾಸವುಳ್ಳವಳಾಗಿ ತನ್ನ ಬಳಿಯಲ್ಲಿ ಇಟ್ಟುಕೊಂಡು, ತಾಯಿಯು, ಸತ್ತುಹೋದ ಬಳಿಕ ತನ್ನಬಳಿಗೆ ಬಂದು, ಸಂತ ನನ್ನತಂಗಿಯೆನ್ನು ತೋರಿಸಿದಳು. ಈ ತೆರ

ದಿಂದ ನಮ್ಮಗಳನ್ನು ಒಂದುಗೂಡಿಸಿದ ಭಗವಂತನಿಗೆ ವಂದನೆಗಳನ್ನಾಚರಿಸಿ, ಮತ್ತೊಂದಿಗೂ, ಎಡೆಬಿಡದಂತೆ ಇರುತ್ತಾ ಬಹು ಸಂವತ್ಸರದಿಂದಲೂ, ಇಲ್ಲಿಯೆ ವಾಸವೂಡಿಕೊಂಡು ಇರುತ್ತಾ, ಇರುವೆವು. ಅದರೆ ಗೃಹಕೃತ್ಯವನ್ನು ನೋಡಿಕೊಳ್ಳುತ್ತಾ, ಬೇಕಾದ ಪದಾರ್ಥಗಳನ್ನು ಕೊಂಡು ಕೊಂಡು ಬರುವುದೇ ನನ್ನ ಕೆಲಸವಾದುದರಿಂದ, ನಿನ್ನೆಯದಿನ ಬೆಳಿಗ್ಗೆ ನಾನು ಕೆಲವುಸಾಮಾನುಗಳನ್ನು ತರುವುದಕ್ಕಾಗಿ, ಬೇಟೆಗೆಬಂದು, ಒಬ್ಬ ಕೂಲಿಯವನನ್ನು, ಗೊತ್ತುಮಾಡಿಕೊಂಡು, ಅತನು ಚಟುವಟಿಕೆಯುಳ್ಳವನಾಗಿಯೂ, ವಿನೋದಪರನಾಗಿಯೂ, ಬುದ್ಧಿಶಾಲಿಯೂಗಿಯೂ, ಇದ್ದುದರಿಂದ, ಅತನನ್ನು ನಮ್ಮಬಳಿಯಲ್ಲಿ ಇಟ್ಟುಕೊಂಡೆವು. ಕತ್ತಲೆಯು ಬೆಚ್ಚಾಗಿ ಹಬ್ಬಿ ರಾತ್ರಿಯೆನಾಗುತ್ತಲೆ, ಮೂರುಜನ ಕಾಲೆಂಡರುಗಳು, ಬಂದರು. ಅವರು ತಮಗೆ ಸ್ವಲ್ಪ ಸ್ಥಳಕೊಡಬೇಕೆಂದು, ಬೇಡಿಕೊಳ್ಳಲು, ನಾವು ಹೇಳಿದಂತೆ ಒಪ್ಪಿಕೊಂಡುದರಿಂದ ಅವರನ್ನು ಮರ್ಯಾದೆಯಿಂದ ಬರಮಾಡಿಕೊಂಡು, ಅವರೊಡನೆನಿನಿನೋದನಾಗಿ ಮಾತನಾಡುತ್ತಾ ಭೋಜನಾದಿಗಳನ್ನು ಸಿದ್ಧಮೇರಿಸಿಕೊಂಡು, ಅವರು ತಮ್ಮದೇಶದ ರೀತಿಯಾಗಿ, ನರ್ತನವನ್ನು ಪ್ರಾರಂಭಿಸಿದರು. ಕೂಡಲೆ ಬಾಗಿಲು ತಟ್ಟುವ ಶಬ್ದವನ್ನುಕೇಳಿ, ಬಂದುನೋಡಲಾಗಲ್ಲಿ ಸುಂದರರಾದ ಮೂರುಜನ ಮಹಿಳಾಲೋಕವರ್ತಕರು, ಬಂದಿದ್ದರು.

ಅವರು ಕಾಲೆಂಡರುಗಳಂತೆ ಸ್ಥಳವನ್ನುಬೇಡಿ, ನಾವು ಹೇಳಿದಂತೆ ಕೇಳುವುದಕ್ಕೊಪ್ಪಿದುದರಿಂದ ಸ್ಥಳವನ್ನು ಕೊಟ್ಟೆವು. ಆದರೆ ಅವರು ತಮ್ಮ ಗಾಂಭೀರವನ್ನು ಕಾಪಾಡಿಕೊಳ್ಳಲಾರದೆ ಹೋದುದರಿಂದ, ನಮ್ಮ ಕೈಲಾದಮಟ್ಟಿಗೆ ಅವರಿಗೆ ಶಿಕ್ಷೆಯೆನ್ನು ಮಾಡಬೇಕೆಂದು, ಹೇಳಿ ಪ್ರಯತ್ನಿಸಿ, ಅವರ ಚರಿತ್ರೆಯನ್ನೆಲ್ಲಾ ಕೇಳಿ ತಿಳಿದುಕೊಂಡು, ನಮ್ಮಮನೆಯಿಂದ ಹೊರಟುಹೋಗುವುದಕ್ಕೆ ಅಪ್ಪಣೆಯನ್ನು ಕೊಟ್ಟೆವು. ಎಂದುಹೇಳಲು, ಕಲೀಫರು ಮೇಲೆಹೇಳಿದ, ಅತ್ಯಂತ ವಿನೋದಕರವಾದೆರಡು ಕಥೆಗಳನ್ನೂ ಕೇಳಿ, ಪರಮಾನಂದರಸದಿಂದ ನೆನೆಮುಚ್ಚಿದವರಾಗಿ ಈ ಕಥೆಗಳು ಅತ್ಯಂತ ರಮಣೀಯವಾದವುಗಳೆಂದು, ಮಂತ್ರಿಯಾಡನೆ ಹೇಳಿದರು. ಎಂದು ಹೇಳಿ, ಬೆಳಗಾದುದರಿಂದ ಷಹರಜಾದಿಯು, ಕಥೆಯನ್ನು ನಿಲ್ಲಿಸಿದಳು. ಸುಲ್ತಾನನು, ಆ ನಾಯಿಗಳ ರೂಪಾಂತರವನ್ನು ನಿವರ್ತಿಸಬೇಡು

ಪುದಕ್ಕೆ ಪೂರಿದ ಪ್ರಯತ್ನವನ್ನು ನಾಳೆಯದಿನ ಕೇಳಬೇಕೆಂದು ಹೊರ ಟು ಹೋದನು.

೬೯ ನೆಯ ರಾತ್ರಿ ಕಥೆ.

ಮರುದಿನ ಬೆಳಗಿನ ಜಾವದಲ್ಲಿದ್ದು, ದಿನರಜೊದಿಯು, ತನ್ನ ಸಹೋದರಿಯನ್ನೆಬ್ಬಿಸಿ, ಅಕ್ಕಾ ! ನಿನಗೆ ನಿದ್ರೆಬಾರದೆ ಇದ್ದರೆ, ಆನಾ ಯಿಗಳೂ, ಮತ್ತು ಮೂರುಜನ ಕಾಲೆಂಡರುಗಳೂ, ಏನಾದರೆಂಬುದನ್ನು ನಮಗೆ ತಿಳಿಯುವೆಳೆಂದು, ಪ್ರಾರ್ಥಿಸಲು, ಷಹರಜೊದಿಯು, ಕಥೆಯೆ ನ್ನು ಹೇಳಲಾರಂಭಿಸಿದಳು. ಸುಲ್ತಾನರೇ ! ಕಲೀಫರು ತಾವು ತಿಳಿದು ಕೊಳ್ಳಬೇಕಾದ ಸಂಗತಿಗಳೆಲ್ಲವನ್ನೂ, ತಿಳಿದುಕೊಂಡು, ತಮ್ಮ ಔದಾರ್ಯ ಸೂಚನೆಯನ್ನು ಈ ಜೊರೆಸಾನಿಯರಿಗೂ, ಮೂರುಜನ ಕಾಲೆಂಡರುಗಳಿ ಗೂ, ತೋರಿಸಬೇಕೆಂದು, ಮಂತ್ರಿಗೆ ಹೇಳಿದನು. ಆಗ ಪ್ರಧಾನಮಂ ತ್ರಿಯು, ಅಮ್ಮಾ ! ನಿಮ್ಮ ಅಕ್ಕಂದಿರನ್ನು ನಾಯಿಯಾಗಿ ವಿಕಾರಮೂ ಡಿ, ಆ ಯೆಕ್ಷಕನ್ನಿಕೆಯು ತಾನಿರುವಸ್ಥಳವನ್ನೂ, ಮುಶ್ಕೆಬರುವ ಕಾಲ ವನ್ನುಸಹ ನಿಮಗೇನಾದರೂ, ಹೇಳಿರುವಳೆ ? ನಾಯಿಗಳಾಗಿರುವ ನಿಮ್ಮ ಅಕ್ಕಂದಿರನ್ನು ಪುನಹ ಮನುಷ್ಯರನ್ನಾಗಿ ಮಾಡುತ್ತೇನೆಂದು ಹೇಳಿಲಿಲ್ಲ ವೆ ? ಎಂದು ಕೇಳಿದೆನು. ಆ ಮಾತನ್ನುಕೇಳಿ ಜೊಬೆದಯು, ಕಲೀಫರ ನ್ನು ನೋಡಿ ಸ್ವಾಮಿ ! ಆ ಯೆಕ್ಷಕನ್ನಿಕೆಯು, ತಾನು ಕಾಕಸನಸೊಪರ್ವ ತದಲ್ಲಿ ವಾಸವಾಮಾಡುತ್ತಿರುವಂತೆಯೂ, ತನ್ನನ್ನು ನೋಡಬೇಕಾದ ಅಗತ್ಯ ಬಂದಕಾಲದಲ್ಲಿ ಈ ಕೂಜಲುಗಳಲ್ಲಿ ಕೆಲವನ್ನು ತೆಗೆದು ಬೆಂಕಿಯಮೇಲೆ ಹಾಕಿದರೆ, ತಾನು ಬರುವಂತೆಯೂ, ಹೇಳಿ ನನ್ನಕೈಯಲ್ಲಿ ಕೆಲವು ಕೂಜ ಲುಗಳನ್ನು ಕೊಟ್ಟಿರುವಳು.

ಈ ವಿಷಯವನ್ನು ನಾನು ನಿಮ್ಮಸಮಕ್ಷ ಹೇಳುವುದನ್ನು ಮರೆ ತೆನೆಂದು, ಹೇಳಿದೆನು. ಆಗ ಕಲೀಫರು, ನನ್ನನ್ನುನೋಡಿ, ಅಮ್ಮಾ ! ಆದರೆ ಆ ಯೆಕ್ಷಕನ್ನಿಕೆಯನ್ನು ನನ್ನ ಬಳಿಗೆ ಬರಮಾಡು. ಆಕೆಯನ್ನು ನೋಡುವುದಕ್ಕೆ ಇದಕ್ಕಿಂತಲೂ, ಉತ್ತಮವಾದ ಸಮಯವು ದೊರೆಯಲಾ ರದೆಂದು, ಹೇಳಲು ನಾನು ಆ ಕೂಜಲಲ್ಲಿ ಕೆಲವನ್ನು ತೆಗೆದು, ಬೆಂಕಿಯ ಮೇಲೆ ಹಾಕಿದೆನು. ಆಗ ಆ ನಗರವು ಗಡಗಡನೆ ನಡುಗುತ್ತಿತ್ತು.

ಸ್ವಲ್ಪಹೊತ್ತಿಗೆ ರಾಜಪುತ್ರಿಯು ವೇಷವನ್ನು ಹಾಕಿಕೊಂಡು, ಕಲೀಫರ ಆಸ್ಥಾನವನ್ನು ಸೇರಿಬಂದಳು. ಬಳಿಕ ಆ ಯೆಕ್ಷಕನ್ನಿಕೆಯು, ಕಲೀಫರನ್ನುನೋಡಿ, ಅಯ್ಯಾ ! ನನ್ನನ್ನು ನಿಮ್ಮಬಳಿಗೆ ಬರಮಾಡಿದ ಕಾರಣವೇನು ? ನೀವು ಹೇಳಿದಂತೆ ನಡೆದುಕೊಳ್ಳಲು, ಸಿದ್ಧನಾಗಿರುವೆನು. ನಿಮ್ಮ ಆಜ್ಞಾನುಸಾರವಾಗಿ ನನ್ನನ್ನು ಇಲ್ಲಿಗೆ ಬರಮಾಡಿ, ಈಕೆಯು ಅಕ್ಕತಂಗಿಯರು, ಇವಳಿಗೆ ದೊ್ರಹವುಂಟಾದುದಕ್ಕಾಗಿ, ನಾನು ಅವರನ್ನು ನಾಯಿಗಳಾಗಿ ಮಾಡಿರುವೆನು. ಈಗ ನೀನು ಹೇಳಿದುದೇ ಆದರೆ ನಾನು ಯಥಾಪ್ರಕಾರ ಅವರನ್ನು ಮನುಷ್ಯರನ್ನಾಗಿ ಮಾಡುವೆನು. ನೀನು ಅವರನ್ನು ಎಂದಿನಂತೆ ಮಾನವರನ್ನಾಗಿ ಮಾಡುವುದಕ್ಕಿಂತಲೂ, ನನಗೆ ಆನಂದವನ್ನುಂಟು ಮಾಡುವುದೂ ಇಲ್ಲ. ಆದರೆ ದುರುಳನಾದ ಗಂಡನಿಂದ ಮಾಡಬಾರದ ಅಸಹ್ಯಕರವಾದ ಶಿಕ್ಷೆಯನ್ನು ಹೊಂದಿ, ನರಳುತ್ತಿರುವ ಈ ಅಮಿನಿಯ ಗಂಡನು ಎಲ್ಲಿರುವನು ? ಎಂಬುದನ್ನು ನನಗೆ ತಿಳಿಸಿದರೆ, ಆತನಿಗೆ ತಕ್ಕ ಶಿಕ್ಷೆಯನ್ನು ಮಾಡಿ ಇವಳಿಗೆ ನನ್ನಕೈಲಾದ ಉಪಕಾರವನ್ನು ಮಾಡುವೆನು ಈ ಎರಡು ಕೆಲಸಗಳೂ, ನನಗೆ ಅತ್ಯಾನಂದಕರಗಳಾದವುಗಳೆಂದು, ಹೇಳಿದನು. ಆಗ ಆ ಯೆಕ್ಷಿಣಿಯು ತನ್ನ ಇಷ್ಟಾನುಸಾರವಾಗಿ ಕಲೀಫನ ಎದುರಿಗೆ ನಿಂತುಕೊಂಡು, ಆ ಎರಡು ನಾಯಿಗಳನ್ನು ತನ್ನಬಳಿಗೆ ಕರೆಸಿಕೊಂಡು, ಬಂದು ಪಾತ್ರೆಯಲ್ಲಿ ನೀರನ್ನುತರಿಸಿ, ಅಭಿಮಂತ್ರಿಸಿದಮೇಲೆ, ಅವರುಗಳಮೇಲೆ ಪ್ರೋಕ್ಷಿಸಿ, ಅವರಿಬ್ಬರನ್ನೂ, ಹೆಂಗಸರನ್ನಾಗಿಮಾಡಿ, ಅಮಿನಿಯು ಎದೆಯಲ್ಲಿದ್ದ ಹುಣ್ಣುಗಳೆಲ್ಲವನ್ನೂ, ನಾಶಮಾಡಿ, ಅಮಿನಿಯ ಚರಿತ್ರೆಯನ್ನೂ, ಅವಳ ಗಂಡನ ಗುಣಗಳನ್ನೂ, ಅವನಿರುವ ಸ್ಥಳವನ್ನೂ, ವಿವರಿಸಿ ತಿಳಿಯಹೇಳಿ ಅಲ್ಲಿಂದ ಅತನಪ್ಪಣೆಯನ್ನು ಪಡೆದುಕೊಂಡು, ಅಂತರ್ಧಾನಳಾದಳು.

ಬಳಿಕ ಕಲೀಫನು, ತನ್ನ ಪ್ರಯತ್ನದಿಂದ ರೂಪವಿಕಾರಗಳನ್ನು ತೊರೆದು ಮೊಪಲಿನಂತೆ ಆದ ಸ್ತ್ರೀಯರುಗಳನ್ನು ನೋಡಿ, ಅತ್ಯಾನಂದಭರಿತರಾಗಿ, ತನ್ನ ಕುಮಾರನಾದ ಅಮಿನು ಎಂಬುವನನ್ನು ಕರೆಸಿ, ನೀನು ರಹಸ್ಯವಾಗಿ ಮುದುಮೆಯೂನಿಕೊಂಡು, ಕೂರನಾಗಿ ಆಕೆಗೆ ಮಾಡಿದ ಶಿಕ್ಷೆಯನ್ನು ನಾನು ತಿಳಿದುಕೊಂಡೆನು. ಈಕೆ ನಿರಪರಾಧಿಯಾದುದರಿಂದ,

ಇವಳನ್ನು ಪರಿಗ್ರಹಿಸೆಂದು, ಹೇಳಲು, ಆತನು ಎಂದಿನಂತೆ ತನ್ನ ಹೆಂಡತಿಯೆನ್ನು ಸೇರಿದನು. ಬಳಿಕ ಕಲೀಫನು, ಜೋಬದಿಯೆನ್ನು ತಾನುವು ದುವೆಮಾಡಿಕೊಳ್ಳುವುದಾಗಿ ಹೇಳಿ, ಉಳಿದ ಮೂವರನ್ನು ಮೂರುಜನಕಾಲೆಂಡರುಗಳಿಗೆ ಮದುವೆಮಾಡಿ, ತಾನು ಖಾಜೀಸಾಕ್ಷಿಯೊಳಗಿ, ಬಾಗದಾದುಪಟ್ಟಣದಲ್ಲಿ ಮದುವೆಪೂಡಿಕೊಂಡು, ತಮ್ಮ ಯೆಶಸ್ಸನ್ನು ದಿಕ್ಕು ದಿಕ್ಕುಗಳಲ್ಲಿಯೆಲ್ಲಾ, ವ್ಯಾಪಿಸುವಂತೆ ಮಾಡುತ್ತಾ ಮರೆಮೋಸ್ಕ್ಕವರ ದುರವಸ್ಥೆಯನ್ನು ಹೋಗಲಾಡಿಸಿ, ಅವರುಗಳನ್ನು ಭಾಗ್ಯವಂತರನ್ನಾಗಿ ಮಾಡಿ, ಲೋಕದ ಜನರಿಂದೆಲ್ಲ, ಸೊಂತ್ಕಾರಮಾಡಿಸಿಕೊಳ್ಳುತ್ತಿದ್ದರು.

ಸಿಂದುಬಾದು ನಾವಿಕನ ಕಥೆ.

ಬಳಿಕ ದಿನರಜೋದಿಯು, ತನ್ನ ಅಕ್ಕನನ್ನುನೋಡಿ, ನೀನು ಓದಿದ ಕಥೆಗಳಲ್ಲಿ ಮತ್ತೊಂದು ವಿಚಿತ್ರವಾದ ಕಥೆಯೆನ್ನು ಹೇಳೆಂದುಕೇಳಲು, ಷಹರಜೋದಿಯು, ಸುಲ್ತಾನನಿಂದಪ್ಪಣೆಯನ್ನು ತೆಗೆದುಕೊಂಡು, ಸುಲ್ತಾನರೇ ! ಕಲೀಫನಾದ ಹರೋನು ಅಲರಾಶ್ಚಿದನೆಂಬವನ ಆಳಿಕೆಯಲ್ಲಿ ಸಿಂದುಬಾದನೆಂಬ ಬಬ್ಬ ಕೂಲಿಯವನಿದ್ದನು. ಆತನು ಬಾದಾನೊಂದು, ದಿನ ಬಿಸಲುಕಾಲದಲ್ಲಿ ಒಂದು ಕಟ್ಟಿಗೆಯ ಹೊರೆಯನ್ನು ಬಾಗದಾದು ಪಟ್ಟಣದಲ್ಲಿ ಒಂದುಕಡೆಯಿಂದ ಮತ್ತೊಂದುಕಡೆಗೆ ಹೊತ್ತುಕೊಂಡು ಹೋಗುತ್ತಾ, ಬಿಸಿಲು ಹೆಚ್ಚಾದುದರಿಂದ ಬಹಳವಾಗಿ ಬಳಲಿ, ಆ ಹೊರೆಯನ್ನು ಇಳಿಸಿಕೊಂಡು, ಸುದಾರಿಸಿಕೊಳ್ಳಬೇಕೆಂದು, ಯೋಚಿಸುತ್ತಾ, ತನಗೆ ಸರಿಯಾದ ಸ್ಥಳವನ್ನು ಸಿಕ್ಕಬೆ ಹೋಗುವುದರಿಂದ ಮತ್ತೊಬ್ಬಾದು ಮೂಗದದಲ್ಲಿ ಬರುತ್ತಾ, ತಂಪಾಗಿ ನೀರುತ್ತಿರ ಪನ್ನೀರಾಳಿನಲ್ಲು, ಪಾರಿಯಲ್ಲಿ ಚೆಲ್ಲಿರುವ ಸುಗಂಧ ವಸ್ತುಗಳಿಂಬ ಬಿಸುಸು ಸುರಭಿಯನ್ನುನೋಡಿ, ಆನಂದವನ್ನು ಹೊಂದಿ ಆ ಸ್ಥಳದಲ್ಲಿ ಹೊರೆಯನ್ನಿಳಿಸಿಕೊಂಡು, ನೆಳಲಾದ ಒಂದು ಸ್ಥಳದಲ್ಲಿ ಕುಳಿತುಕೊಂಡನು. ಬಳಿಕ ಆ ಸ್ಥಳದಲ್ಲಿ ಬೀಸುತ್ತಿರುವ ಶೀತ

ಳವಾದ ಮುಂದಮೂರುತಪ್ಪು, ತನ್ನಬಳಿಗೆ ತಂದೊಡ್ಡುತ್ತಿರುವ ನಾನಾವಿಧವಾದ ಪುಷ್ಪಗಳ ಪನ್ನೀರುಗಳ ಸುವಾಸನೆಯಿಂದಲೂ, ಮಧುರವಾದ ವಾದ್ಯ ಮತ್ತು ಗೀತಧ್ವನಿಯಿಂದ ಹತ್ತಿರದಲ್ಲಿರುವ ದೊಡ್ಡ ಮನುಷ್ಯನ ಮನೆಯಲ್ಲಿ ಏನೋ ಹೆಚ್ಚಾಗಿ ಕಾರ್ಯಗಳು, ನಡೆಯುತ್ತಾ ಇರಬಹುದೆಂದು, ಊಹಿಸಿ, ತಾನು ಆ ದಿನವೇ ಆಬೀದಿಗೆ ಬಂದವನಾದುದರಿಂದ ಆ ಯೆಜಮಾನನ ಹೆಸರನ್ನು ಕಾಣದೆ ತಿಳಿದುಕೊಳ್ಳಬೇಕೆಂಬ ಕುತೂಹಲದಿಂದ ಮನೆಯ ಮುಂಭಾಗದಲ್ಲಿ ನಿಂತಿರುವ ಕೆಲಸಗಾರನನ್ನು ಕುರಿತು, ಈ ಮನೆಯ ಯೆಜಮಾನನಾರೆಂದು ಕೇಳಿದನು.

ಅದಕ್ಕೆ ಅವರಲ್ಲಿ ಒಬ್ಬನು, ಅವನನ್ನು ನೋಡಿ, ಅಯ್ಯಾ! ಜಗತ್ಪ್ರಸಿದ್ಧನಾದ ಸಿಂದುಬಾದು ನಾವಿಕನೆಂಬ ಮಹಾತ್ಮನೆಂಬುವನ ಮನೆಯೆ ಇದೆಂದು ತಿಳಿದುಕೊಳ್ಳದೆ, ಈ ಬಾಗದಾದು ಪಟ್ಟಣದಲ್ಲಿ ನೀನು ಹೇಗೆ ವಾಸವಾಡುವೆ ಎಂದು ಕೇಳಿದನು. ಆತನು ಆ ಮಾತನ್ನು ಕೇಳಿ, ಸಿಂದುಬಾದು ನಾವಿಕನ ಐಶ್ವರ್ಯವನ್ನು ನೋಡಿ ಸಹಿಸಲಾರದೆ ಕೈಗಳನ್ನು ಮೇಲಕ್ಕೆತ್ತಿ, ಆಕಾಶವನ್ನು ನೋಡುತ್ತಾ, ಭಗವಂತನನ್ನು ಕುರಿತು, ಅಯ್ಯಾ! ಸರ್ವಶಕ್ತನಾದ ಭಗವಂತನೇ! ನನಗೂ, ಈ ಸಿಂದುಬಾದು ನಾವಿಕನಿಗೂ, ನೀನುಮಾಡಿರುವ ಅನ್ಯಾಯವನ್ನು, ಈಗ ಗೊತ್ತಾಯಿತು. ಏನಂದರೆ ಪ್ರತಿದಿನವೂ ಕ್ಷಣವಾದರೆ ಪುರುಷತ್ವಕ್ಕೆಲ್ಲಿ ಮಾಡಮು ಜೀವಿಸುವ ನನಗೆ ಹೊಟ್ಟೆತುಂಬ ಅನ್ನ ದೊರಕುವುದೇ ಕಷ್ಟವಾಗಿದೆ. ಯಾವ ಕಾರ್ಯವನ್ನು ಮಾಡದೆ ಸುಖವಾಗಿ ಕಳತಿರುವ ಈ ಸಿಂದುಬಾದನನ್ನು, ಯಥೇಚ್ಛವಾದ ಐಶ್ವರ್ಯವನ್ನು ಹೊಂದಿ ಬೀಗಲಾಡುತ್ತಾ ಹಿಗ್ಗಿಹೋಗಿರುವನು. ಆಹಾ! ಆತನು ನಿನಗೆಮಾಡಿದ ಉಪಕಾರವೂ, ನಾನುಮಾಡಿದ ಅಪಕಾರವೂ ಒಂದೇ ರೂಪವಲ್ಲಿದ್ದರೂ, ನೀನು ನಮ್ಮಗಳ ಅದೃಷ್ಟರೂಪವಾದ ಫಲವನ್ನು ಜೀರೆಣಿಸಿಕೊಳ್ಳಬಹುದೆ? ಎಂದು ಗಟ್ಟಿಯಾಗಿ ಕೂಗಿ ಹೇಳುತ್ತಾ ರೋದನಮಾಡಿದನು. ಅಲ್ಲದೆ ತನ್ನಕೋಪವನ್ನು ತಣಿಸಿಕೊಳ್ಳಲಾರದೆ, ನೆಲವನ್ನು ಕಾಲಿನಿಂದೊದೆದನು. ಕೂಡಲೆ ಒಬ್ಬ ಕೂಲಿಯವನು ಮನೆಯೊಳಗಿನಿಂದ ಬಂದು ನಮ್ಮ ಯೆಜಮಾನನಾದ ಸಿಂದುಬಾದು ನಾವಿಕನು, ನಿನ್ನಸಂಗಡ ಮಾತನಾಡಬೇಕಾಗಿರುವಕಾರಣ ನಿನ್ನನ್ನು ಕರೆದುಕೊಂಡು ಬರುವಂತೆ ಹೇಳಿರುವನೆಂದು ಹೇಳಿ, ತನ್ನಹಿಂದೆ ಬರುವಂತೆ

ಕೇಳಿಕೊಂಡನು. ಬಿಳಗಾದುದರಿಂದ ಷಹರಜೋದಿಯು, ಕಥೆಯೆನ್ನು ನಿಲ್ಲಿಸಿದಳು. ಸುಲ್ತಾನರು ರಾಜಕಾರ್ಯವನ್ನು ಕುರಿತು, ಹೊರಟು ಹೋದರು.

೭೦ ನೆಯ ರಾತ್ರಿ ಕಥೆ.



ಮರುದಿನಬೆಳಗಿನಜಾವದಲ್ಲಿ ತಾನಾಗಿಯೆ ಷಹರಜೋದಿ, ಸುಲ್ತಾನನನ್ನು ಕುರಿತು, ಇಂತೆಂದಳು. ಸುಲ್ತಾನರೇ ! ಆ ಸಿಂದುಬಾದು ನಾವಿಕ ನಾಳುಗಳು, ಹಿಂದುಬಾದನನ್ನು ಕರೆದಕೊಡಲೇ ಆತನು ಅತ್ಯಂತ ಭೀತಿಯುಕ್ತನಾಗಿ, ಆತನನ್ನು ದಂಡಿಸುವುದಕ್ಕಾಗಿ, ಬರವೂಡಿಕೊಳ್ಳಿರುತ್ತಿರುವನೆಂದು, ಹೆದರಿ ತನ್ನನ್ನು ಮನ್ನಿಸಬೇಕೆಂದು ಬೇಡಿಕೊಂಡನು. ಚಾರಕರು, ಆತನನ್ನು ಸವೂಧಾನವೂಡಿ, ತಮ್ಮ ಯಜಮಾನನಬಳಿಗೆ ಕರೆದುಕೊಂಡು, ಹೋದರು. ಆತನು ಬಳಿಗೆ ಹೋದಕೂಡಲೇ ವಿಸ್ತಾರವಾದ ಒಂದು ಹಜಾರದಲ್ಲಿ ನಾನಾ ವಿಧವಾದ ಭೋಜನಪದಾರ್ಥಗಳನ್ನು ಸಿದ್ಧವೂಡಿರುವ ವೇಜೊಂದಿದ್ದಿತು. ಅದರ ಮಧ್ಯದಲ್ಲಿ ಗಂಭೀರನಾಗಿಯೂ, ಘನತೆಯೆನ್ನು ತೋರ್ಪಡಿಸುವ ಉದ್ದವಾದ ಬಿಳಿಯ ಗಡ್ಡವುಳ್ಳವನಾಗಿಯೂ, ಇರುವ ಸಿಂದುಬಾದುನಾವಿಕನು, ಕುಳಿತಿದ್ದನು. ಆತನ ಸುತ್ತಲೂ, ಅನೇಕಾನೇಕ ಪರಿಚಾರಕರೂ, ದಾಸಿಯೆರೂ ನಿಂತುಕೊಂಡು ಉಪಚರಿಸುತ್ತಿದ್ದರು. ಆತನನ್ನು ಹಿಂದುಬಾದನು ನೋಡಿದ ಕೂಡಲೆ ಭಯದಿಂದ ನಡುಗುತ್ತಾ, ಪಂದನೆಗಳನ್ನು ಆಚರಿಸಿದನು. ಆದರೆ ಕರುಣಾಶಾಲಿಯೊದ ನಾವಿಕನು, ಆತನನ್ನು ಪ್ರೀತಿಯಿಂದಪ್ಪಿಕೊಂಡು, ತನ್ನ ಬಲಭಾಗದಲ್ಲಿ ಆಸನದಲ್ಲಿ ಕುಳ್ಳಿರಿಸಿ, ತಾನೇ ಆತನಿಗೆ ಭೋಜನವೂಡಿಸಿದನು. ಬಳಿಕ ಸರ್ವರೂ, ಭೋಜನವನ್ನು ತೀರಿಸಿಕೊಂಡು, ಕುಳಿತುಕೊಂಡರು. ಆಗ ನಾವಿಕನು, ಕೂಲಿಯುವನನ್ನು ನೋಡಿ, ಮಾತನಾಡುವುದಕ್ಕೆ ಮೊದಲುಮಾಡಿ, ಅಣ್ಣಾ ! ನಿನ್ನ ಹೆಸರೇನು ? ನೀನುಮಾಡುವ ವೃತ್ತಿಯೆಂತಾವುದೆಂದು, ಕೇಳಿದನು. ಆಗ ಕೂಲಿಯುವನು, ನನ್ನ ಹೆಸರು ಹಿಂದುಬಾದನೆಂದು ಹೇಳಿದನು.

ಕೂಡಲೆ ಯೆಜವೂನನು, ಅಯ್ಯಾ! ನಿನ್ನನ್ನು ನೋಡುವುದಕ್ಕೆ ನನಗೆ ತುಂಬಾ ಉತ್ಸಾಹ ಉಂಟಾಗಿರುವುದು. ಅಲ್ಲದೆ ಈ ಸಭೆಯಲ್ಲಿರುವವರೆಲ್ಲರೂ, ನನ್ನಂತೆಯೆ ಇರುವರೆಂದು, ನಾನು ನಿಸ್ಸಂದೇಹವಾಗಿ ಹೇಳಬಲ್ಲೆನು. ಆದರೆ ನೀನು ಸ್ವಲ್ಪಹೊತ್ತಿಗೆ ಮುಂಚೆ ಮೂರ್ಖದಲ್ಲಿನಿಂತು ಭಗವಂತನನ್ನು ಕುರಿತು, ಆಡಿದ ಮಾತುಗಳನ್ನು ನಿನ್ನ ಬಾಯಿಯಿಂದಲೇ ಕೇಳಬೇಕೆಂದು, ತ್ವರೆಪಡುತ್ತಿರುವೆನೆ ದು, ಹೇಳಲು ಕೂಲಿಕಾರನಾದ ಹಿಂದುಬಾದನು, ಹೆದರಿ ಭಯದಿಂದ ನಡುಗುತ್ತಾ, ಅಯ್ಯಾ! ನಾನು ಶ್ರಮಪಡಲಾರದೆ ಆಯಾಸದಿಂದ ಪ್ರಜ್ಞೆತಪ್ಪಿ ಆಡಿದ ಕೆಲವು ತಪ್ಪುಮಾತುಗಳನ್ನು ತಾವು ಕ್ಷಮಿಸಬೇಕೆಂದು, ಬೇಡಿಕೊಳ್ಳುವೆನೆಂದು, ಹೇಳಿದನು ಅವನ್ನುಕೇಳಿ, ನಾವಿಕನು ಅಯ್ಯಾ! ನಾನು ನಿನ್ನ ಅವಸ್ಥೆಯನ್ನು ತಿಳಿದುಕೊಂಡು, ನಿನಗೆ ಪುಪಕಾರಮಾಡಬೇಕೆಂದಿರುವೆನೇ ಹೊರತು ನಿರಪರಾಧಿಯಾದ ನಿನ್ನಮೇಲೆ, ಕೋಪ ಮಾಡಿಕೊಳ್ಳಬೇಕೆಂದಿರುವ ಅನ್ಯಾಯಿಯಲ್ಲ. ಆದರೆ ನೀನುತಿಳಿದುಕೊಂಡಿರುವ ದುರಭಿಪ್ರಾಯವನ್ನು ತಿದ್ದಬೇಕೆಂಬುವುದೇ ನನ್ನ ತಾತ್ಪರ್ಯ ಏನೆಂದರೆ, ನಾನು ಯಾವತೆರೆಂದರೆಯನ್ನು ವಹಿಸದೆ ಐಶ್ವರ್ಯವ ತನಾಗಿ, ಸುಖಿಸುತ್ತಿರುವೆನೆಂದು, ನೀನು ತಿಳಿದುಕೊಂಡಿರುವೆಯೆಲ್ಲವೆ? ಹಾಗೆಂದಿಗೂ, ಯೋಚಿಸಬೇಡ.

ಆವಾಜ್ಞಾನಸಗೋಚರಗಳಾದ ನಾನಾವಿಧವಾದ ಶರೀರ ಕಷ್ಟಗಳನ್ನು ಅನುಭವಿಸಿದೆ. ಭಗವಂತನು, ನನಗಿಂತಲೂ ಉತ್ತಮವಾದ ಸ್ಥಿತಿಯನ್ನೆಂದಿಗೂ, ಕೊಡಲಿಲ್ಲ. ನಾನು ಇದಕ್ಕಾಗಿ ಹಡಗಿನ ವ್ಯಾಪಾರ ಮಾಡಲು ಪ್ರಯತ್ನಮಾಡಿ, ಏಳುಸಾರಿ ಸಮುದ್ರಯಾನವನ್ನು ಮಾಡುತ್ತಿರುವಾಗ ನಾನಾ ದುಃಖಗಳನ್ನು ಅನುಭವಿಸಿದೆನೆಂಬುದು, ಲೋಕಪ್ರಸಿದ್ಧವಾಗಿಯೇ ಇದೆ, ಆದರೆ, ಈ ಸಭೆಯವರೂ, ನೀನು ಒಪ್ಪಿ ಕೇಳುವುದಾದರೆ, ನನ್ನ ಏಳುವಿಧವಾದ ತೊಂದರೆಗಳನ್ನೊಳಗೊಂಡ ಪ್ರಯಾಣದ ಚರಿತ್ರೆಯನ್ನು ನಿನಗೋಸ್ಕರವಾಗಿ ಹೇಳುವೆನೆಂದು, ಆ ಸಭಿಕರನ್ನೂ, ಮುಖ್ಯವಾಗಿ ಕೂಲಿಕಾರನನ್ನೂ, ಕುರಿತು, ತನ್ನ ಕಥೆಯನ್ನು ಹೇಳಲಾರಂಭಿಸಿದನು.

ಸಿಂದುಬಾದು ನಾವಿಕನ ಮೊದಲನೆಯ ಪ್ರಯಾಣ.



ನಮ್ಮತಂದೆ ಸಂಪೂರ್ಣವಾದ ಆಸ್ತಿಯನ್ನು, ನನಗಾಗಿ ಇಟ್ಟಿದ್ದನು. ಆದರೆ ನಾನು ಯೌವನಕಾಲದಲ್ಲಿ ಬುದ್ಧಿಗೆಟ್ಟು, ಅದನ್ನು ಹಾಳುಮಾಡಿಕೊಂಡೆನು. ಬಳಿಕ ನನ್ನತಪ್ಪನ್ನು ನಾನೇ ತಿಳಿದುಕೊಂಡು, ಅಕಾಶ್ವತವಾದ ಐಶ್ವರ್ಯವು, ನನ್ನಂತಹ ಅವಿವೇಕಿಗಳ ಕೈಗೆ ಸಿಕ್ಕಿದರೆ ಬೇಗನೆ ಹಾಳಾಗುವುದೆಂದು, ತಿಳಿದುಕೊಂಡೆನು. ಪ್ರವಂಚದಲ್ಲಿ ಅತ್ಯಂತ ಕ್ಲೇಷ್ಮವಾದ ಕಾಲವನ್ನು ಕ್ಷಮವಾಗಿ ಉಪಯೋಗಿಸಿಕೊಳ್ಳದೆ, ಹಾಳುಮಾಡುವುದು, ತುಂಬ ಅಪಾಯಕರವೆಂಬುದನ್ನು ನನ್ನತಂದೆ ಆಗಾಗ್ಗೆ ಹೇಳುತ್ತಿದ್ದ ದಾರಿದ್ರ್ಯಕ್ಕಿಂತಲೂ, ಮರಣವೇಮೇಲು, ಎಂಬ ನಾಣ್ನುಡಿಯನ್ನು ನೆನೆದು ನನ್ನ ಆಸ್ತಿಪಾಸ್ತಿಗಳನ್ನು ಇತರರಿಗೆ ಮಾರಿ, ಸಮುದ್ರವ್ಯಾಪಾರಮಾಡುತ್ತಿದ್ದ ಕೆಲವು ವರ್ತಕರಸಂಗಡ ಸೇರಿ, ಅವರ ಆಪ್ತವಾಕ್ಯವನ್ನನುಸರಿಸಿ, ಬಾಲಸೂರೆಂಬ ಪಾರಶೀದೇಶದ ರೇವನ್ನು ಸೇರಿ ಅಲ್ಲಿ ಉತ್ತಮಸ್ಥಿತಿಯಲ್ಲಿ ವ್ಯಾಪಾರಮಾಡುತ್ತಿರುವ ಒಂದು ಹಡಗನ್ನು, ಗೊತ್ತುಮಾಡಿಕೊಂಡು, ಆ ವರ್ತಕರಸಂಗಡ, ಪಾಲುವ್ಯಾಪಾರಿಯಾಗಿ, ಸೇರಿಕೊಂಡು, ಹಡಗನ್ನೇರಿ ಹೊರಟೆನು. ಹಡಗನ್ನು ಪಾರಶೀದೇಶದಿಂದ ಪೂರ್ವದಿಕ್ಕಿಗೆ ಇಂಡಿಯಾದೇಶದ ಮುಖವಾಗಿ ತಿರುಗಿಸಿದೆನು. ಆ ಪರಿಷಿಯಾದೇಶದ ಬದಿಯು ಬಲಭಾಗದಲ್ಲಿ ಅರಬೀಸಮುದ್ರವೂ, ಎಡಭಾಗದಲ್ಲಿ ಪಾರ್ಶೀ ಸಮುದ್ರವೂ, ಅತ್ಯಂತ ವಿಶಾಲವಾಗಿರುವುದೆಂದು, ಎಲ್ಲರೂಹೇಳಿ ಬಲ್ಲರು. ಪೂರ್ವ ಸಮುದ್ರವುಕೂಡ, ಇಂಡಿಯಾದೇಶದ ಸಮುದ್ರದಂತೆ, ದೊಡ್ಡದಾಗಿರುವುದಲ್ಲದೆ, ಅಬ್ಸೀನಿಯಾದೇಶದ ಮೇರೆಯನ್ನು ಹೊಂದಿದ್ದಾಕ್ಕೆಂಬ ದಿವ್ಪೀಪಗಳವರೆಗೆ ನೂರುಯೋಜನ ವಿಸ್ತಾರವುಳ್ಳದಾಗಿರುವುದು. ಇಂತಹ ಸಮುದ್ರಮಧ್ಯದಲ್ಲಿ ನಾನು ಪ್ರಯಾಣಮಾಡುತ್ತಾ ಪ್ರಥಮದಲ್ಲಿ ಸಮುದ್ರಗಾಳಿಯಿಂದುಂಟಾಗುವ ರೋಗದಿಂದ ಹೇಳಲಸಾಧ್ಯವಾದ ಕೊಂದರೆಯನ್ನು ಅನುಭವಿಸಿ, ಗುಣಹೊಂದಿದಬಳಿಕ ನಾನು ಆರೋಗ್ಯಸ್ಥಿತಿಯಲ್ಲಿಯೇ ಇದ್ದೆನು.

ಹೀಗೆ ನಾವುಗಳು ದಾರಿಯಲ್ಲಿ ಸಿಕ್ಕಿದ ಅನೇಕಾನೇಕ ದ್ವೀಪಗಳಲ್ಲಿ ನಿಂತು ಸರಕುಗಳನ್ನು ಪೂರಿಕೊಂಡು, ಆ ಸ್ಥಳದಲ್ಲಿ ನಮಗೆ ಬೇಕಾಗಿರುವ ಪದಾರ್ಥಗಳನ್ನು ಕೊಂಡುಕೊಂಡು, ಮುಂದೆಹೋಗುವಾಗ ಸಮುದ್ರಮಧ್ಯದಲ್ಲಿ ಹಸಿದಾದ ಒಂದುನೆಲವನ್ನು ಕಂಡೆವು. ಆಗ ಸಮುದ್ರದಲ್ಲಿ ಗಾಳಿಯಿಲ್ಲದೆ ಜೋದುದರಿಂದ ನಾವಿಕನು, ಕೆಲವುಕಾಲದವರೆಗೆ ಬಾವುಟಗಳನ್ನು ಇಳಿಸಿ, ಹಡಗನ್ನುನಿಲ್ಲಿಸಿ, ಆ ದ್ವೀಪಕ್ಕೆಹೋಗಿಬರುವಂತೆ ಆಜ್ಞೆಪೂಡಿದನು. ಪ್ರಾರಕರು, ಅದರಂತೆ ಪೂಡಿದರು. ನಾನು ಅವರಲ್ಲೊಬ್ಬನಾಗಿದ್ದೆನು. ನಂತರ ನಾವೆಲ್ಲರೂ ಆ ದ್ವೀಪಕ್ಕೆ ಹೋದೆವು. ನಾವು ಆಸ್ಥಲವನ್ನು ಸೇರಿ ರುಚಿಕರವಾದ ಹಣ್ಣು ಹಂಪಲುಗಳನ್ನೂ, ಆರೋಗ್ಯಕರಗಳಾದ ಮಧ್ಯಗಳನ್ನೂ, ತಿಂದು ಸೇವಿಸುತ್ತ ಸಂತೋಷದಿಂದ ಕಾಲವನ್ನು ಕಳೆಯುತ್ತಿರುವಾಗ ಅಕಸ್ಮಾತ್ತಾಗಿ ಆ ದ್ವೀಪವು ನಡನಡುಗಿ ನಮ್ಮನ್ನು ಭಯಂಕರವಾದ ಭೀತಿಗೆ ಗುರಿಪೂಡಿತು. ಎಂದುಹೇಳಿ ಷಹರಜಾದಿಯು, ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನಜಾವದಲ್ಲಿ ಎಂದಿನಂತೆ ಕಥೆಯನ್ನು ಹೇಳಲಾರಂಭಿಸಿದಳು.

೭೧ನೆಯ ರಾತ್ರಿ ಕಥೆ.

ಸುಲ್ತಾನರೇ ! ಆ ಸಿಂದುಬಾದನೆಂಬ ನಾವಿಕನು, ತನ್ನ ಸಭಿಕರನ್ನೂ. ಕೂಲಿಯವನನ್ನೂ ಕರಿತು, ಮುಂದೆ ಕಥೆಯನ್ನು ಹೇಳಸಾಗಿದನು. ಆ ದ್ವೀಪವು ಹೀಗೆ ನಡುಗುತ್ತಿರುವುದನ್ನು ನೋಡಿ, ಹಡಗಿನ ಯಜಮಾನನು, ನಮ್ಮನ್ನುಕುರಿತು, ಬೇಗಬೆಂದು ಹಡಗನ್ನು ಹತ್ತಿ ಇಲ್ಲವಾದರೆ ಸಮುದ್ರವು ನಿಮ್ಮನ್ನು ಮುಳುಗಿಸಿ, ಕೊಲ್ಲುವುದೆಂದು, ಹೇಳಿ, ಕೆಲವು ಸಣ್ಣದೋಣಿಗಳನ್ನು ಕಳುಹಿಸಿದನು. ಆ ದೋಣಿಯವರು, ಕೂಗುತ್ತಾ ನಮ್ಮ ಪತ್ತಿರಕ್ಕೆ ಬಂದರು. ಅನೇಕಾನೇಕರು ಸಮುದ್ರದಲ್ಲಿಬಿದ್ದು, ಈಜಿಕೊಂಡು ಹಡಗಿನಬಳಿಗೆ ಹೋದರು. ಶಕ್ತಿಹೀನರಾದವರು ದೋಣಿಯನ್ನು ಪತ್ತಿಸಿಕೊಂಡರು.

ನಾನಾಪರಿಯ ಕಲ್ಲು ಇದ್ದುದರಿಂದ ಕೂಡಲೆ ಆ ದ್ವೀಪವು ಸಮುದ್ರದಲ್ಲಿ ಮುಳುಗಿ ಹೋಯಿತು. ಆದಕೆ ನಾವು ಒಲೆಯುರಿಸುವುದಕ್ಕಾಗಿ

ಹಡಗಿನಲ್ಲಿತುಂಬಿಕೊಂಡಿದ್ದ ಒಂದಾನೊಂದು ಸೌದೆಯಹೊರೆಯು, ಅಕ
ಸ್ಮಾತ್ತಾಗಿ, ಸಮುದ್ರದಲ್ಲಿಬಿದ್ದು ತೇಲುತ್ತಿದ್ದುದರಿಂದ, ನಾನು ಅದನ್ನು
ಹಿಡಿದುಕೊಂಡೆನು. ಅಷ್ಟರಲ್ಲಿ ನಾವಿಕನು, ಜನರನ್ನು ಹಡಗಿನಲ್ಲಿ ಕು
ಳ್ಳರಿಸಿಕೊಂಡು, ಬಹುದೂರದವರೆಗೂ ಹೊರಟು ಹೋದನು. ನಾನಾ
ದರೊ ಸಮುದ್ರದ ಅಲೆಯಿಂದ ಆದಿನವೂ ರಾತ್ರಿಯೂ, ತುಂಬ ಅವಸ್ಥೆ
ಯೆನ್ನು ಹೊಂದಿ, ನಾನುಸುನಹ ಬದುಕುವಹಾಗಿಲ್ಲವೆಂದು, ತಿಳಿದು ನಿಶ್ಚಿಂ
ತನಾಗಿದ್ದೆನು. ಆದರೆ ಅದೃಷ್ಟಾಯುಕ್ತದಿಂದೊಂದಾನೊಂದು, ದೊಡ್ಡ
ಅಲೆಯೆದ್ದು, ನನ್ನನ್ನು ಒಂದಾನೊಂದು ದ್ವೀಪದಬಳಿಗೆ ತೆಗೆದುಕೊಂಡು
ಹೋಯಿತು. ಆ ದ್ವೀಪವು ಬಹಳ ಎತ್ತರವಾಗಿ ಇತರವಿಧವಾದ ಯಾವ
ತೊಂದರೆಯೂ, ಇಲ್ಲದುದರಿಂದ, ಭಗವಂತನು ನನ್ನ ಪ್ರಾಣಸಂರಕ್ಷಣೆಗಾ
ಗಿ ನನ್ನನ್ನು ಇಲ್ಲಿಗೆ ಕರೆದುತಂದನೆಂದುಕೊಂಡೆನು. ಹಾಗಾಗದಿದ್ದರೆ
ನಾನು, ಬದುಕುವ ಪ್ರಸಕ್ತಿಯೇ ಇರುತ್ತಿರಲಿಲ್ಲ. ಆ ಗಟ್ಟಪನ್ನುರತ್ತಿ
ಹಸಿವಿನಿಂದಲೂ, ನೀರಿನಲ್ಲಿ ಬಿದ್ದು ಬಂದ ಆಯಾಸದಿಂದಲೂ, ದುರ್ಬಲನಾ
ಗಿದ್ದರೂ, ಕೂಡ ಆಹಾರವನ್ನು ಹುಡುಕಿಕೊಂಡು, ತಿನ್ನುತಕ್ಕ ಹಸುರು
ಲಿಗಳೇನಾದರೂ, ದೊರಕುವುದೇನೋ, ಎಂದೆಂದುಕೊಂಡು, ಹುಡುಕಲಾ
ರಂಭಿಸಿದೆನು.

ಭಗವದನುಗ್ರಹದಿಂದ ತಿನ್ನುವುದಕ್ಕನುಕೂಲವಾದ, ಕೆಲವು
ಎಲೆಗಳೂ, ಕುಡಿಯುವುದಕ್ಕೆ ಯೋಗ್ಯವಾದ ನೀರೂ, ದೊರಕುದರಿಂದ
ನನ್ನ ಆಯಾಸವನ್ನು ಪರಿಹರಿಸಿಕೊಂಡು, ಆ ದ್ವೀಪದಲ್ಲಿ ಸಂಚರಿಸುತ್ತಾ
ಒಂದಾನೊಂದು ಬಯಲು ಪ್ರದೇಶವನ್ನು, ಸೇರಿದೆನು. ಅಲ್ಲಿ ಬಹುದೂರ
ದಲ್ಲಿ ಮೇಯುತ್ತಿರುವ ಒಂದುಕುದುರೆಯನ್ನು ಕಂಡು, ಅದು ಬದುಕಿರುವು
ದೋ ! ಇಲ್ಲವೋ ಎಂಬ ಸಂಶಯದಿಂದ ನನಗೆ ಬದುಕಬಹುದೆಂಬ ಆಸೆ
ಯೂ, ಈ ಕಾಡಿನಲ್ಲಿ ಜೀವಿಸುವುದು ಹೇಗೆಂಬ ಭಯವೂ ಉಂಟಾಗಿ, ಕೊ
ನೆಗೆ ಧೈರ್ಯವನ್ನು ತಂದುಕೊಂಡು, ಅಲ್ಲಿಗೆಹೋಗಿ, ನೋಡಲು ಆ ಕು
ದುರೆಯು ಒಂದು ಗೂಟದಲ್ಲಿ ಬಿಗಿಯಲ್ಪಟ್ಟಿತ್ತು. ಕೂಡಲೆ ಭೂಮಿಯಿಂ
ದ ನೀನಾರೆಂಬ ಶಬ್ದವು ಕೇಳಿಬಂದಿತು. ಆ ಧ್ವನಿಯಸಂಗಡಲೇ ಒಬ್ಬ
ಮನುಷ್ಯನು ಬಂದು, ನೀನುಯಾರೆಂದು, ಕೇಳಿದನು. ನಾನು ಆತನಿಗೆ

ನನ್ನ ಚರಿತ್ರೆಯೆನ್ನುವ ಸಂಪೂರ್ಣವಾಗಿ ಹೇಳಿದೆನು. ಆತನು ನನ್ನ ಕೈಯೆನ್ನು ಹಿಡಿದುಕೊಂಡು, ಒಂದು ಗುಹೆಯೊಳಕ್ಕೆ, ಕರೆದುಕೊಂಡು ಹೋದನು. ಅಲ್ಲಿದ್ದ ಇತರಜನರು, ನನ್ನನ್ನು ನೋಡಿ, ಆಶ್ಚರ್ಯಯುಕ್ತರಾದರು. ನಾನೂ ಅವರನ್ನು ನೋಡಿದುದರಿಂದ, ಆನಂದಪರವಶನಾದೆನು. ಬಳಿಕ ಅವರು ನನಗೆ ಸ್ವಲ್ಪ ಆಹಾರವನ್ನುಕೊಡಲು, ನಾನು ಆದನ್ನು, ಭುಜಿಸಿದೆನು. ಊಟವಾದಮೇಲೆ ನಾನು ಅವರನ್ನುಕುರಿತು, ಅಯ್ಯಾ! ನರಹಿಳ್ಳೆಯೊಬ್ಬರೂ, ಇಲ್ಲದಿರುವ ಈ ದ್ವೀಪದಲ್ಲಿ ನೀವು ಹೇಗೆ ವಾಸಮಾಡುತ್ತೀರೆಂದು, ಕೇಳಿದೆನು. ಅದಕ್ಕೆ ಅವರು ನನ್ನನ್ನುನೋಡಿ, ಅಯ್ಯಾ ನಾವು ಈರಾಜ್ಯವನ್ನಾಳುವ ಮಹಾರಾಜನ ಕುದುರೆಯೆನ್ನು ಸಾಕತಕ್ಕವರು. ವರ್ಷಕ್ಕೊಂದುಸಾರಿ, ರಾಜನ ಕುದುರೆಯೆನ್ನು ಇಲ್ಲಿಗೆ ತಂದು, ಸಾಕುತ್ತಾ ಇರುವೆವು. ಸಮಯಕ್ಕೆ ಸರಿಯಾಗಿ, ಸಮುದ್ರಮಧ್ಯದಿಂದ ಒಂದುಕುದುರೆಯು ಬಂದು, ಇವುಗಳಮೇಲೆ ಬಿದ್ದು ಕೊಲ್ಲುವುದಕ್ಕೆ ಬರುವುದು. ನಾವು ಎಚ್ಚರಿಕೆಯಿಂದ ಗಲಭೆಮಾಡಿ, ಅದನ್ನು ಓಡಿಸಿಬಿಡುವೆವು. ನಂತರ ನಮ್ಮೀ ಕುದುರೆಗಳೀನುವ ಮರಿಗಳನ್ನು ಸಾಕಿ ಸಮುದ್ರದ ಕುದುರೆಗಳೆಂದು, ನಮ್ಮರಾಜನು ಬಳಸಿಕೊಳ್ಳುವನು. ನಾಳೆಯ ದಿನ ನಾವು ಇಲ್ಲಿಂದ ಹೊರಡುವೆವು. ನೀನು ಈದಿನ ಬಾರದೇಹೋಗಿದ್ದರೆ ನಿರ್ಮಾನುಷ್ಯ ಪ್ರದೇಶವಾದ ಈ ಕಾಡಿನಲ್ಲಿ ಸಾಯೆಬೇಕಾಗಿತ್ತೋ ಹೊರತು, ಬದುಕುವ ಆಸೆಯೆ ಇರುತ್ತಿರಲಿಲ್ಲವೆಂದು, ಹೇಳುತ್ತಿರುವ ಹೊತ್ತಿಗೆ ಸರಿಯಾಗಿ ಸಮುದ್ರದಿಂದ ಕುದುರೆಯೊಬ್ಬಂದು, ಆ ಕುದುರೆಗಳಮೇಲೆ ಹಾರಿ, ಬಳಿಕ ನುಂಗುವುದಕ್ಕೆ ಪ್ರಯತ್ನಮಾಡುವಷ್ಟರಲ್ಲಿ ನಾವುಗಳೆಲ್ಲರೂ ಸೇರಿ, ಗಲಭೆಮಾಡಿದುದರಿಂದ, ಸಮುದ್ರದಲ್ಲಿ ಮುಳುಗಿಕೊಂಡಿತು. ಮರುದಿನ ಆ ಜನರು, ತಂತಮ್ಮ ಕುದುರೆಗಳನ್ನು ತೆಗೆದುಕೊಂಡು, ರಾಜಧಾನಿಗೆ ಹೋಗುವಾಗ ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ, ರಾಜನ ದರ್ಶನವನ್ನು ಮಾಡಿಸಿದರು.

ಆತನು ನನ್ನನ್ನು ನೋಡಿ, ನೀನು ಯಾರು? ನನ್ನರಾಜ್ಯಕ್ಕೆ ಬರುವುದಕ್ಕೆ ಕಾರಣವೇನೆಂದು? ಕೇಳಲು, ನಾನು ನನ್ನ ದುರವಸ್ಥೆಗಳೆಲ್ಲವನ್ನೂ, ಹೇಳಿಕೊಂಡೆನು. ಪುಣ್ಯಾತ್ಮನಾದ ಆ ರಾಜನು, ತುಂಬ ಕನಿಕರದಿಂದ, ನನಗೆಬೇಕಾದ ಸಹಾಯವನ್ನುಮಾಡಿ, ಕಾಪಾಡುವಂತೆ,

ತನ್ನ ಮಂತ್ರಿಗಳಿಗೆ ಆಜ್ಞಾಪಿಸಿದನು. ಆ ಮಂತ್ರಿಗಳೂ ಸಹ ಹಾಗೆಯೇ ಮಾಡಿದರು. ನಾನು ಸ್ವಭಾವತಃ ವರ್ತಕನಾಗಿದ್ದುದರಿಂದ, ನನ್ನಂತಹ ವರ್ತಕರಬಳಿಗೆ ಹೋಗಿ, ಬಾಗದಾದು ಪಟ್ಟಣದ ಸಮಾಚಾರವೇನಾದರೂ ತಿಳಿಯಬರುವುದೇನೋ, ಎಂದು ವಿಚಾರಿಸುತ್ತಾ ಇದ್ದೆನು. ಅಲ್ಲದೆ ಆ ಮಿಹರೆ ರಾಜನ ರಾಜಧಾನಿಯು, ಸಮುದ್ರತಕ್ಕದಲ್ಲಿರುವ ರೇವಾಗಿದ್ದುದರಿಂದ, ನಾನಾದೇಶಗಳ ಹಡಗುಗಳು, ಬಂದು ನಿಲ್ಲುತ್ತಾ ಇರುತ್ತಿದ್ದವು. ಇದರಿಂದ ನನ್ನ ಇಷ್ಟಾರ್ಥವು, ನೆರವೇರಬಹುದೆಂದು, ಸಂತೋಷದಿಂದಿರುತ್ತಿದ್ದೆನು. ಅಲ್ಲದೆ ಇಂಡಿಯಾದೇಶದಮಹಾರಾಜರ ವಿದ್ವತ್ಸಭೆಗೂ, ನಮ್ಮ ಮಿಹರೆ ರಾಜನ ಸಾಮಂತರಾಜರಸಭೆಗೂ, ಆಗಿಂದಾಗ್ಗೆ ಹೋಗಿಬರುತ್ತಾ ಆ ದೇಶಾಚಾರವಾದ, ನ್ಯಾಯನಿಬಂಧನೆಗಳನ್ನು ಅವರಿಂದ ತಿಳಿದುಕೊಂಡು, ನಮ್ಮದೇಶದ ಪದ್ಧತಿಯನ್ನು ಅವರಿಗೆ ತಿಳಿಯಹೇಳುತ್ತಿದ್ದೆನು. ಆ ಮಿಹರೇ ರಾಜನಿಗೆ ಕಾಸೆಲ್ ದ್ವೀಪವು ಸೇರಿದ್ದಿತು. ಆ ದ್ವೀಪದಲ್ಲಿ ಪ್ರತಿದಿನವೂ ಸಾಯಂಕಾಲದಲ್ಲಿ ಭೇರಿಶಬ್ದವು ಕೇಳಬರುತ್ತಿದ್ದುದರಿಂದ ಆ ಸ್ಥಳವು, ದೇವದೂತರು ವಾಸಮಾಡತಕ್ಕ ಸ್ಥಳವೆಂದೂ, (ಡಿಜಿಯೋಲನೆಂಬ ಮಹಮ್ಮದರಗುರು.) ಅಲ್ಲಿನಜನರು, ನನ್ನ ಸಂಗಡ ಹೇಳಿದರು. ನಾನು ಇಂತಹ ಸ್ಥಳವನ್ನು ನೋಡಬೇಕೆಂದು, ಹೊರಟು, ಮೂರ್ಗದಲ್ಲಿ ಚಿತ್ರ ವಿಚಿತ್ರತರಗಳಾದ ಸಮುದ್ರದ ವೀನುಗಳನ್ನು ನೋಡಿದೆನು. ನಾನು ಪ್ರಯಾಣಮಾಡುವಕಾಲದಲ್ಲಿ, ನೂರಿನ್ನೂರು ಗೇಣುಗಳುದ್ದವಿದ್ದ ಒಂದು ವಿಾನನ್ನು ತಿಂದೆನು. ದ್ವೀಪದಿಂದ ಹೊರಟುಬಂದಮೇಲೆ, ನಾನು ಒಂದಾನೊಂದುದಿನ ಸಮುದ್ರತೀರದಲ್ಲಿ ನಿಂತುಕೊಂಡಿದ್ದೆನು. ಕೂಡಲೆ ಆ ರೇವಿಗೆ ಒಂದು ಹಡಗು ಬಂದಿತು.

ಆಗ ಹಡಗಿನ ಯಜಮಾನನು, ಸಾಮಾನುಗಳನ್ನು ಮಳಿಗೆಗೆ ಸಾಗಿಸುವಂತೆ ಹೇಳಿದನು. ಚಾರಕರಾದರೋ ಹಾಗೆಯೇ ಮಾಡುತ್ತಿದ್ದರು. ನಾನು ಆ ಮೂಟೆಗಳನ್ನು ನಿಧಾನಿಸಿ ನೋಡುತ್ತಿರುವಲ್ಲಿ, ಮೇಲು ವಿಳಾಸವನ್ನು ಓದಿದೆನು. ಅ ಸರಕಿನಮೂಟೆಗಳು ನನ್ನಹಡಗಿನಲ್ಲಿ ತುಂಬಿದ್ದ, ಸ್ವಂತಮೂಟೆಗಳಾಗಿದ್ದವು. ಆ ಹಡಗಿನ ಸರದಾರನು ನನ್ನನ್ನು ಸಮುದ್ರದಲ್ಲಿ ಮುಳುಗಿಹೋದನೆಂದು, ತಿಳಿದುಕೊಂಡಿದ್ದನು. ನಾನು ಆತನ ಬಳಿಗೆ ಹೋಗಿ, ಈ ಮೂಟೆಗಳಾರದೆಂದು, ಕೇಳಿದೆನು, ಆಗ ಆ ಸರದಾ

ರನು ನನ್ನನ್ನು ಕುರಿತು, ಅಯ್ಯಾ ! ಈ ಮೂಟೆಗಳು ಬಾಗದಾದು ಪಟ್ಟಣದ ವರ್ತಕನಾದ ಸಿಂದುಬಾದನೆಂಬುವನದು. ನಾನು ಆತನೂ ಸಹ ಹಡಗಿನಲ್ಲಿ ಪ್ರಯಾಣಮಾಡುತ್ತಾ, ಒಂದಾನೊಂದು ದಿನ ನೀರಿನಮೇಲೆ ನಿದ್ರೆ ಹೋಗುತ್ತಿದ್ದ ಒಂದು ದೊಡ್ಡ ವಿಾನನ್ನು ನೋಡಿ, ಅದೊಂದು ದ್ವೀಪವೆಂದು ತಿಳದು, ಆ ಸ್ಥಳದಲ್ಲಿ ಹಡಗನ್ನು ನಿಲ್ಲಿಸಿ, ಅಡಿಗೆ ಮಾಡುವುದಕ್ಕಾಗಿ ಬೆಂಕಿಯನ್ನು ಹೊತ್ತಿಸಿ, ಇಡುತ್ತಿದ್ದರು. ಆಗ ಆ ವಿಾನು ಉರಿಯ ಸೆಕೆಯನ್ನು ತಾಳಲಾರದೆ, ನೀರಿನಲ್ಲಿ ಮುಳುಗಿ ಹೋಯಿತು. ಆ ಕಾಲದಲ್ಲಿ ಅನೇಕಾನೇಕರು, ಸತ್ತುಹೋದರು. ಹಾಗೆ ಸತ್ತುಹೋದವರಲ್ಲಿ ಸಿಂದುಬಾದನೊಬ್ಬನಾಗಿದ್ದನು. ಆದುದರಿಂದ ಈ ಮೂಟೆಗಳನ್ನು ಮೂರಿ, ಬಂದಹಣದಲ್ಲಿ ವ್ಯಾಪಾರಮಾಡುತ್ತಾ, ಆತನ ವಂಶಸ್ಥರನ್ನು ಗೊತ್ತುಮಾಡಿ, ಲಾಭವನ್ನು ಕೊಡಬೇಕೆಂದಿರುವೆನು. ಎಂದು ಹೇಳಲು ನಾನು ಆ ಹಡಗಿನ ಸರದಾರನನ್ನು ಕುರಿತು, ಅಯ್ಯಾ ! ನೀನು ಸತ್ತು ಹೋದನೆಂದು ಹೇಳಿದ ಸಿಂದುಬಾದನೇ ನಾನು. ಈ ಮೂಟೆಗಳೂ ಸಹ ನನ್ನವೇ ಎಂದು ಹೇಳಿದೆನು. ಇಷ್ಟರಲ್ಲಿಯೆ ಬೆಳಗಾದುದರಿಂದ ಷಹರ ಜಾದಿಯು, ಕಥೆಯನ್ನು ನಿಲ್ಲಿಸಿ, ಬೆಳಗಿನ ಜಾವಕ್ಕೆ ಮರಳಿ ಹೇಳಲಾರಂಭಿಸಿದಳು.

ಎರಡನೆಯ ರಾತ್ರಿಯ ಕಥೆ.

ಆ ಸಮಾಜದಲ್ಲಿರುವ ಜನರನ್ನು ನೋಡಿ, ಸಿಂದುಬಾದನು ತನ್ನ ಕಥೆಯನ್ನು ಹೀಗೆಂದು, ಹೇಳಲಾರಂಭಿಸಿದನು. ನಾನು ಹೇಳಿದ ಮೂರು ಗಳನ್ನು ಕೇಳಿ ಹಡಗಿನ ಸರದಾರನು ನನ್ನನ್ನು ಕುರಿತು, ಆಹಾ ! ದೇವರೇ ! ಇದುಯಾರನ್ನೂ ನಂಬತಕ್ಕ ಕಾಲವಲ್ಲ. ಅದರಲ್ಲಿ ಮನುಷ್ಯರನ್ನಾದರೋ ನಂಬಲೇ ಕೂಡದು, ಸಿಂದುಬಾದನು ಸತ್ತು ಹೋದುದನ್ನು ನನ್ನ ಕಣ್ಣಾರ ನೋಡಿರುವೆನಲ್ಲಾ ! ಅಯ್ಯಾ ! ಇದಕ್ಕೆ ಸಾಕ್ಷಿಯಾಗಿ, ನನ್ನ ಹಡಗಿನಲ್ಲಿದ್ದ ಪ್ರಯಾಣಿಕರೆಲ್ಲ ನೋಡಿದ್ದರಲ್ಲಾ ! ಹೀಗಿರುವಲ್ಲಿ ಪರಸ್ವವಾದ ಈ ಮೂಟೆಗಳನ್ನು ಅಪಹರಿಸಬೇಕೆಂಬ ದುರಾಸೆಯಿಂದ, ನಾನೇ ಸಿಂದುಬಾದನೆಂದು ಹೇಳುತ್ತಿರುವೆಯಲ್ಲಾ ! ನಿನಗೆ ಈ ದುರ್ಮಾರ್ಗವು ಸರಿಯಾದುದಲ್ಲ. ನಿನ್ನನ್ನು ನೋಡಿದರೆ ಗೃಹಸ್ಥನಂತೆ ಕಾಣುತ್ತೀಯೆ,

ಸುಳ್ಳು ಹೇಳಬೇಡವೆಂದು, ಹೇಳಿದನು. ಆಗ ನಾನು ಆ ಸರದಾರನನ್ನು, ಕುರಿತು ವಿನಯೆ ವಚನದಿಂದ ಅಯ್ಯಾ ! ಘನವಂತನೇ ! ನಾನುಹೇಳು ವ ಮಾತುಗಳನ್ನು ನಿಧಾನವಾಗಿ ಕೇಳು ಎನಲು, ಆಗಲಿ ಹೇಳು ! ನೀ ನು ಹೇಳುವುದನ್ನೆಲ್ಲಾ ಸಾವಧಾನದಿಂದಲಿ ಕೇಳುವೆನು. ಎಂದು ಹೇಳಿದ ನು. ಬಳಿಕ ನಾನು ತಪ್ಪಿಸಿಕೊಂಡುಬಂದ ವೃತ್ತಾಂತವನ್ನು ವಿಹರೇರಾಜ ನ ಕುದುರೆಯ ವರ್ತಮಾನವನ್ನು ಅವರಿಂದಲೇ ತಾನಿಲ್ಲಿಗೆಬಂದು, ವಾಸ ಮಾಡುತ್ತಿರುವೆನೆಂಬುದನ್ನೂ, ವಿಸ್ತಾರವಾಗಿ ವಿವರಿಸಿ ತಿಳಿಯ ಹೇಳಿದೆನು ಆ ಮಾತುಗಳನ್ನು ಕೇಳಿಯೂ, ಆತನು ಸ್ವಲ್ಪ ಅನುಮಾನಗ್ರಸ್ತನಾದ ನು. ಆದರೆ ಆಅನುಮಾನವು ಕೊಂಚಹೊತ್ತಿನಲ್ಲಿಯೇನಾಶವಾಯಿತು. ಆತ ನ ಹಡಗಿನಲ್ಲಿ ನನ್ನ ಗುರುತನ್ನು ತಿಳಿದವರೂ ಕೆಲವರಿದ್ದರು. ಅವರ ಲೊಬ್ಬನು, ಬಂದು ನನ್ನನ್ನುನೋಡಿ, ಸಂತೋಷದಿಂದ ಆಲಂಗಿಸಿ ಕೊಂಡು, ವಂದನೆಗಳನ್ನು ಮಾಡಿ, ಸ್ನೇಹಿತನೇ ! ನೀನು ಬದುಕಿ ಬಂದು ದಕ್ಕಾಗಿ ನಾನು ನಿನ್ನಪರವಾಗಿ ಭಗವಂತನನ್ನು ವಂದಿಸುವೆನು. ನಿನ್ನದ ರ್ಶನದಿಂದ ತುಂಬ ಸಂತೋಷವಾಯಿತೆಂದು, ಹೇಳ ತನ್ನ ಸ್ನೇಹಿತರುಗಳ ಗೆಲ್ಲ ನನ್ನನ್ನು ತೋರಿಸಿದನು. ಆಗ ಹಡಗಿನ ಸರದಾರನ, ಅನುಮಾನ ವು, ನಾಶವಾಯಿತು. ಕೂಡಲೆ ಆತನು ಸಂತೋಷದಿಂದ, ನನ್ನನ್ನು ಆಲಂಗಿಸಿಕೊಂಡು, ಅಪಾರವಾದ ತನ್ನ ವಿಶ್ವಾಸವನ್ನು ತೋರ್ಪಡಿಸಿ, ಘೋರಾಪಾಯದಿಂದ ತಪ್ಪಿಸಿ ಪ್ರಾಣವನ್ನ ಕಾಪಾಡಿದುದಕ್ಕಾಗಿ ಭಗವಂತ ನನ್ನು ಧ್ಯಾನಿಸಿ, ಮಿತ್ರನೇ ! ನಿನ್ನನ್ನು ನೋಡಿ, ಪರಮಾನಂದವನ್ನು, ಹೊಂದಿದೆನು. ಇಗೋ, ನಿನ್ನ ಸರಕುಗಳೆಲ್ಲವನ್ನು, ತೆಗೆದುಕೊಂಡುಹೋ ಗಿ, ಜೀಕಾದಕಡೆ ಮೂರಿಕೊ ! ಹೋಗೆಂದನು.

ಬಳಿಕ ಆತನ ಉಪಕಾರಕ್ಕಾಗಿ, ನಾನು ಆತನಿಗೆ ವಂದನೆಗಳನ್ನಾ ಚರಿಸಿ, ತೃಪ್ತಿಯಾಗುವಂತೆ ಹೊಗಳಿ, ನನ್ನ ಮೂಟೆಗಳಲ್ಲಿ ಕೆಲವನ್ನು, ಆತನಿಗೆ ಬಹುಮಾನವಾಗಿ ಕೊಡುವುದಕ್ಕೆ ಹೋದೆನು. ಆದರೆ ಆತನು, ಅದನ್ನು ಖಂಡಿತವಾಗಿಯೂ, ಸ್ವೀಕರಿಸಲಾರೆನೆಂದು, ಹೇಳಬಿಟ್ಟನು. ಬಳಿಕ ನಾನು ನನ್ನ ಮೂಟೆಯಲ್ಲಿರುವ ಅಮೂಲ್ಯವಾದ ವಸ್ತುಗಳನ್ನು, ತೆಗೆದುಕೊಂಡು, ವಿಹರೇ ರಾಜನಿಗೆ ಕಾಣಿಕೆಯನ್ನಾಗಿ ಒಪ್ಪಿಸಿದೆನು. ಆತ ನು ಇಂತಹ ಉತ್ತಮವಾದ ಸರಕುಗಳೆಲ್ಲಿಂದ ಬಂದವೆಂದು ನನ್ನನ್ನು ಪ್ರ

ಶ್ನವಮಾಡಿದನು. ನಾನು ನನ್ನ ಚರಿತೆ ್ರಯನ್ನೆಲ್ಲಾ ಆತನಿಗೆ ತಿಳಿಯಪಡಿಸಿ ದೆನು. ಆತನು ಅನುಗ ್ರಹಿಸಿದಪನಾಗಿ ನನ್ನ ಬಹುಮೂನವನ್ನು ಸ್ವೀಕ ರಿಸಿ, ತನ್ನದೇಕದಲ್ಲಿರುವ ಉತ್ತಮವಾದ ಪದಾರ್ಥಗಳನ್ನು ನನಗೆ ಬಹು ಮೂನವಾಗಿ ಕೊಡಿಸಿದನು. ಬಳಿಕ ನಾನು, ಆತನ ಅಪ್ಪಣೆಯನ್ನು ಪಡೆ ದು, ನನ್ನ ಹಡಗಿನಲ್ಲಿದ್ದ ಶ ್ರೀಗಂಧ, ಕುಂಕುಮ, ಲವಂಗ, ಜಾಯಿಕಾಯಿ, ಮೆಣಸು, ಮೊದಲಾದ ಪದಾರ್ಥಗಳನ್ನು ಮೂರಿಕೊಂಡು, ನನಗೆಬೇಕಾದ, ಇತರ ಪದಾರ್ಥಗಳನ್ನು, ಕೊಂಡು, ಬಾಲಸೂರಿಗೆ ಹೋಗಿ, ಹತ್ತುಸಾವಿ ರ ಸೆಕ್ವೆಸುಗಳಿಗೆ ಸರಕನ್ನೆಲ್ಲಾಮೂರಿ, ನಂತರ ಈ ಬಾಗದಾದು ಪಟ್ಟಣ ಕ್ಕೆ, ಬಂದು, ನನ್ನ ಕುಟುಂಬದವರನ್ನು ನೋಡಿ, ಆನಂದವನ್ನುಹೊಂದಿ ಭೂಮಿಕಾಣಿಗಳನ್ನು ಮನೆಮಟಗಳನ್ನೂ ಆಳುಕಾಳುಗಳನ್ನೂ, ಮಾಡಿ ಕೊಂಡು, ನನ್ನ ದುರವಸೆ ್ಥಗಳನ್ನೆಲ್ಲಾ ತೊರೆದು, ಸುಖವಾಗಿ ವಾಸವಾ ಡುತ್ತಿರುವೆನೆಂದು, ಹೇಳಿದನು. ಸಿಂದುಬಾದನು ಹೀಗೆ ಕಥೆಯನ್ನು ಹೇ ಳುತ್ತಿರುವಾಗ ನಿಲ್ಲಿಸಿದ್ದ ನೃತ್ಯಗೀತ ವಾದ್ಯಗಳನ್ನು ಸಂಪೂರ್ಣಗೊಳಿ ಸಿ, ಸಾಯಂಕಾಲದ ಭೋಜನವನ್ನು ಮುಗಿಸಿ, ಕೂಲಿಯವನಿಗೆ ತನ್ನ, ಉಗಾ ್ರಣದಿಂದ ಒಂದುನೂರು ಸೆಕ್ವೆಸುಗಳನ್ನು, (ಮೂರುವರೆರೂಪಾ ಯಿ ಜಿಲೆಯುಳ್ಳ ಅರಬೀನಾಣ್ಯ) ತರಿಸಿಕೊಟ್ಟನು. ಕೂಲಿಕಾರನು ಅದನ್ನು ತೆಗೆದುಕೊಂಡು, ಅತ್ಯಾನಂದಭರಿತನಾಗಿ ಸಿಂದುಬಾದನ ಔದಾ ರ್ಯಯುಕ್ತ ಸುಗುಣಗಳನ್ನು ಕೊಂಡಾಡಿ, ಭಗವಂತನು ಆತನಿಗೆ ಸಕಲೈ ಶ್ವರ್ಯವನ್ನು ಶಾಶ್ವತಪಡಿಸೆಂದು ಪ ್ರಾರ್ಥಿಸುತಾ ್ತ, ತನ್ನ ಮನೆಗೆ ಹೋದನು.

ಈ ವರ್ತಮೂನವನ್ನು ಕೇಳಿ, ಆ ಕೂಲಿಕಾರನ ಪತ್ನೀಪುತ ್ರಾ ದಿಗಳು, ಬಹಳವಾಗಿ ಸಂತೋಷಿಸಿ, ಸಿಂದುಬಾದನನ್ನು ಹೊಗಳಿದರು. ಮರುದಿನ ಹಿಂದುಬಾದನು, ಉತ್ತಮವಾದ ವಸ ್ತ್ರಗಳನ್ನು ಧರಿಸಿಕೊಂ ಡು ಸಿಂದುಬಾದನ ಮನೆಗೆ ಬಂದನು. ಔತಣಕ್ಕೆ ಬರಬೇಕಾದವರೂ, ಬಂದರು. ಎಲ್ಲರೂ ಸೇರಿದಮೇಲೆ ಸಂತೋಷದಿಂದ ವಿನೋದವಾಗಿ ಬಹ ಹೊತ್ತಿನವರೆಗೂ, ಭೋಜನಾದಿಗಳನ್ನು ಪಾನಗಳನ್ನು ಮಾಡಿದರು. ಬಳಿ ಕ ಸಿಂದುಬಾದನು ತನ್ನ ಸಮಾಜದವರನ್ನು ಕುರಿತು, ಅಯ್ಯಾ ! ಘನ ಮಂತರುಗಳಿರಾ ! ತಾವು ದಯೆಮಾಡಿ, ಕೇಳುವುದಾದರೆ ನಾನು ಸಮುದ ್ರ

ದಲ್ಲಿ ಎರಡನೆಯ ಸಾರಿ ಪ್ರಯಾಣವೂಡಿದ ಕಥೆಯನ್ನು, ಹೇಳಬೇಕೆಂದಿರುವೆನೆಲು, ಅವರೆಲ್ಲರೂ, ಅನುವೋದಿಸಿದರು. ಬಳಿಕ ಸಿಂದುಬಾದನು ಹೀಗೆಂದು ಹೇಳಲಾರಂಭಿಸಿದನು.

ಸಿಂದು ಬಾದನ ಎರಡನೆಯ ಪ್ರಯಾಣ.

ಅಯ್ಯಾ ! ನಾನು ಮೊದಲನೆಯ ಪ್ರಯಾಣವನ್ನು ಮುಗಿಸಿ, ಬಾಗ್ದಾದಿಗೆಬಂದು, ಸ್ವಸ್ಥನಾಗಿ ವಾಸವೂಡಿಕೊಂಡಿರಬೇಕೆಂದು, ಬಹು ಕಾಲದವರೆಗೂ, ಸುಮ್ಮನೆ ಇದ್ದೆನು. ಆದರೆ ಯಾವಕಾರ್ಯವೂ ಇಲ್ಲದೆ ಸುಮ್ಮನೆ ಕಾಲ ಕಳೆಯುವುದಕ್ಕೆ ಮನಸ್ಸು ಬಾರದುದರಿಂದ, ಪುನಹ ವ್ಯಾಪಾರವೂಡಬೇಕೆಂಬ ಅಭಿಲಾಷೆಯಿಂದ, ನನಗೆಬೇಕಾದ ಸರಕುಗಳೆಲ್ಲವನ್ನೂ, ಸಿದ್ಧವೂಡಿಕೊಂಡು, ಘನವಂತರಾದ ವರ್ತಕರನ್ನು ಸೇರಿ, ಹಡಗಿನಲ್ಲಿ ಸಾಮಾನುಗಳನ್ನು ತುಂಬಿಕೊಂಡು, ಪ್ರಯಾಣವಾಡಿದೆನು. ಹೀಗೆ ಪ್ರಯಾಣವಾಡುತ್ತಾ ದಾರಿಯಲ್ಲಿ ಸಿಕ್ಕಿದ ದ್ವೀಪಗಳಲ್ಲಿ ಉತ್ತಮ ತರದ ಲಾಭವನ್ನು ಹೊಂದಿ, ನಮ್ಮ ಸರಕುಗಳನ್ನು ಮಾರಿಕೊಂಡು, ಮುಂದೆ ಹೊರಟು ಒಂದಾನೊಂದು, ದ್ವೀಪದಬಳಿಗೆ ಬಂದು, ಹಡಗನ್ನು ನಿಲ್ಲಿಸಿದೆವು. ಆ ದ್ವೀಪದಲ್ಲಿ ಮನುಷ್ಯರಾಗಲೀ, ಮೃಗಗಳಾಗಲಿ, ಪಕ್ಷಿಗಳಾಗಲಿ, ಇರಲಿಲ್ಲ. ಹಸುರಾಗಿರುವ ಸ್ಥಳದಲ್ಲಿ ಪ್ರವಾಹಗಳು ಮೂತ್ರ ಹರಿಯುತ್ತಿದ್ದವು.

ಆ ರಮಣೀಯವಾದ ಸ್ಥಳವನ್ನು ನೋಡುತ್ತಾ, ಕೆಲವರು, ಹಣ್ಣುಗಳನ್ನೂ, ಇನ್ನುಕೆಲವರು ಪುಷ್ಪಗಳನ್ನು ಕೊಯ್ದು ಸಂತೋಷದಿಂದ ವಿಹರಿಸುತ್ತಿದ್ದರು. ನಾನಾದರೋ ಪ್ರವಾಹದ ಮಧ್ಯದಲ್ಲಿದ್ದ, ಒಂದು ಬಂಡೆಯಮೇಲೆ ಕುಳಿತು, ಸ್ವಲ್ಪ ಸಾರಾಯಿಯನ್ನು ಕುಡಿದು, ಹಣ್ಣುಗಳನ್ನು ತಿಂದು, ಬಳಿಕ ಆ ರಮಣೀಯವಾದ ಸ್ಥಳದಲ್ಲಿಯೇ ಮಲಗಿಕೊಂಡು, ನಿದ್ದೆವೂಡುತ್ತಾ ಇದ್ದೆನು. ಆದರೆ ಎಷ್ಟುಹೊತ್ತಿನವ

ರಿಗೆ ನಿದ್ರೆಮಾಡುತ್ತಾ ಇದ್ದೆನೋ ನನಗೆತಿಳಿಯದು. ಬಳಿಕ ಎಚ್ಚತ್ತು ನೋಡುವಾಗ್ಗೆ ಹಡಗಾಗಲಿ, ಹಡಗಿನಲ್ಲಿದ್ದ ಜನರಾಗಲಿ, ನನ್ನಕಣ್ಣಿಗೆ ಕಾಣಿಸಲಿಲ್ಲ. ಇಂತೆಂದುಯೋಳ, ಪಹರಜಾವಿಯು, ಬೆಳಗಾದಕೂಡಲೆ, ಕಥೆಯನ್ನು ನಿಲ್ಲಿಸಿ, ಪುನಹ ಮರುದಿನಪ ಬೆಳಗಿನಜಾವದಲ್ಲಿ ಹೇಳಲಾ ರಂಭಿಸಿದಳು.

೭೩ ನೆಯ ರಾತ್ರಿ ಕಥೆ.

ಸಿಂದುಬಾದನು, ಸಭಿಕರನ್ನುಕುರಿತು, ಅಯ್ಯಾ ! ಬಳಿಕ ನನ್ನ ಹಡಗು, ಬಹುದೂರದಲ್ಲಿ ಪ್ರಯಾಣಮಾಡುತ್ತಿರುವುದನ್ನು ಕಂಡೆನು. ಆದರೆ ಸ್ವಲ್ಪಹೊತ್ತಿಗೆ ಅದೂ ಕಾಣದಂತಾಯಿತು. ಬಳಿಕ ಇಂತಹ ನಿರ್ಜನ ಮನುಷ್ಯ ಪ್ರದೇಶದಲ್ಲಿ ಅಸಹಾಯನಾಗಿ, ಪ್ರಾಣವನ್ನೊಪ್ಪಿಸುವ ಕಾಲಬಂದಿತಲ್ಲಾ ಎಂದು, ನಾನಾ ವಿಧವಾದ ವ್ಯಸನವನ್ನು ಹೊಂದಿದೆನು. ಕೆಲ[illegible]ದಿಂದಕೂಡಿದ ವ್ಯಸನವೆಂಬ ಸಮುದ್ರದ ದೊಡ್ಡ ಅಲೆಗಳು, ನನ್ನ ಮನಸ್ಸೆಂಬ ಸಮುದ್ರದಲ್ಲಿ ಕ್ಷಣಕ್ಷಣ ಏಳುತ್ತಲೆ ಇದ್ದವು. ಮೊದಲಿನ ಪ್ರಯಾಣದಿಂದ ಸಂಪಾದಿಸಿದ ಹಣವು, ನನ್ನ ಆಯುಷ್ಕಾಲವನ್ನು ಸುಖವಾಗಿ ಕಳೆವುದಕ್ಕೆ ಸಾಕಾಗಿದ್ದರೂ, ನಾನಾಗಿ ಇಂತಹ ದುರವಸ್ಥೆಯನ್ನು ತಂದುಕೊಂಡುದಕ್ಕಾಗಿ, ನನ್ನನ್ನು ನಾನೆ ನಿಂದಿಸಿಕೊಂಡೆನು. ಅದರಿಂದ ಫಲವೇನು ? ಭಗವತ್ಸಂಕಲ್ಪಾನುಸಾರವಾಗಿ, ಆಗತಕ್ಕುದೇ ಆಗುವುದೆಂಬ ಧೈರ್ಯದಿಂದ ನಾನು ಎತ್ತರವಾಗಿ ಬೆಳೆದಿರುವ ಒಂದು ಮರವನ್ನು ಹತ್ತಿ ನನಗೆ ಸಹಾಯಕರವಾದ ಯಾವ ವಸ್ತುವಾದರೂ, ಕಾಣಬರುವುದೇನೋ ಎಂದು ಸುತ್ತಲೂ ನೋಡಿದೆನು. ಆದರೆ ಸಮುದ್ರವೂ ಆಕಾಶವೂ, ವಿನಾ ಮತ್ತೇನು ಕಾಣಬರಲಿಲ್ಲ. ಆಗ ನಾನು ಭೂಮಿಯಕಡೆಗೆ ತಿರುಗಿನೋಡಿದಾಗ ಬಹುದೂರದಲ್ಲಿ ಬಿಳುಪಾಗಿ ಕಾಣುತ್ತಿರುವ, ಒಂದು ವಸ್ತುವನ್ನು ಕಂಡು, ಮರವಿಂದಿಳಿದು, ಅದನ್ನು ಹುಡುಕಿಕೊಂಡು, ಬೆಡಗಳ ಹೊತ್ತಿನವರೆಗೂ, ಪ್ರಯಾಣಮಾಡಿದರೂ, ಆ ವಸ್ತು ವಿಂಥದೆಂಬುದು, ನನಗೆ ತಿಳಿಯಲಿಲ್ಲ. ಕಡೆಗೆ ಅದರಹತ್ತಿರಕ್ಕೆ ಬಂದು ನೋಡಲು, ಬೆಳ್ಳಗೆ ಗುಂಡಾಗಿಯೂ, ದೊಡ್ಡದಾಗಿಯೂ, ಇರುವ ಒಂದು ಗೋಳವಾಗಿದ್ದಿತು. ಅದರಲ್ಲಿ ಎಲ್ಲಾವರೂ ಬಾಗಿಲುಂಟೆ ? ಎಂದು ಸುತ್ತಲೂ, ತಿರುಗಿನೋಡಿದೆನು.

ಏನೂ ಕಾಣಬರಲಿಲ್ಲ. ಅದು ನುಣುಪಾಗಿಯೂ, ಕಡಿದಾಗಿಯೂ, ಇದ್ದ ದರಿಂದ ಮೇಲಿಹತ್ತಿ ನೋಡುವುದಕ್ಕೆ ಅವಕಾಶವುಂಟಾಗಲಿಲ್ಲ. ಆದರೆ ಆ ಗೋಳದ ಮಧ್ಯದ ವ್ಯಾಸವು ಹತ್ತುಗಜಗಳಿಗಿಂತಲೂ, ಹೆಚ್ಚಾಗಿಯೇ ಇದ್ದಿತು. ಇಷ್ಟರಲ್ಲಿ ಸೂರ್ಯನು ಅಸ್ತಂಗತನಾದುದರಿಂದ ಕತ್ತಲೆಯು ಕವಿದುಕೊಂಡಿತು. ಆ ಕತ್ತಲಲ್ಲಿ ಆಕಾರ್ಯಯುಕ್ತನಾಗಿ, ದಿಕ್ಕು ದಿಕ್ಕುಗಳನ್ನು ನಾನು ನೋಡುತ್ತಿರುವಲ್ಲಿ, ಮಹದಾಕೃತಿಯುಳ್ಳ ಒಂದು ಪಕ್ಷಿಯು, ನನ್ನ ಬಳಿಗೆ ಬರುತ್ತಿರುವುದನ್ನು ಕಂಡು, ಇನ್ನೂ ನಿಸ್ಸಾಹಯಯುಕ್ತನಾದೆನು. ಅದು ಸಮುದ್ರದಲ್ಲಿ ಸಂಚರಿಸುವ ರಾಕೆಂಬ ಪಕ್ಷಿ ಎಂಬುದನ್ನು ನಾನು ಕೇಳಿದ್ದ ಕಾರಣ ಈ ಗೋಳವು ಅದರ ಮೊಟ್ಟೆಯಾಗಿರಬಹುದೆಂದು ಊಹಿಸಿದೆನು. ಆ ಪಕ್ಷಿಯು ತನ್ನ ಮೊಟ್ಟೆಯಮೇಲೆ ಕುಳಿತು, ಮರಿಮಾಡುವುದಕ್ಕಾಗಿ, ಅಲ್ಲಿಗೆಬಂದು ಕುಳಿತುಕೊಂಡಿತು. ಅದ ರಬುಡದಲ್ಲಿ ನಾನು ಕುಳಿತುಕೊಂಡೆನು. ಆಪಕ್ಷಿಯು ಕಾಲಿನಿಂದ ನನಗೊಂದು ಪದಾರ್ಥವು ದೊರೆಯಿತು. ಅದು ದೊಡ್ಡ ಮರದ ತುಂಡಿನಹಾಗಿದ್ದಿತು. ಆದರೆ ಈ ಪಕ್ಷಿಯು, ನಾಳೆ ಆಹಾರಕ್ಕಾಗಿ, ಭೂ ಭಾಗವನ್ನು ಕುರಿತು ಹೊರಡುವಾಗ ಇದರ ಜೊತೆಯಲ್ಲಿಯೆ, ನಾನು ಹೊರಡಬಹುದೆಂದು, ಊಹಿಸಿ, ನನ್ನ ತಲೆಯ ಪಾಗನ್ನು ಬಿಚ್ಚಿ, ಅದರಕಾಲಿಗೂ, ನನ್ನ ದೇಹಕ್ಕೂ, ಗಟ್ಟಿಯಾಗಿ ಬಿಗಿದು, ಕಟ್ಟಿಕೊಂಡೆನು. ರಾತ್ರಿಯೆಲ್ಲಾ ಎಚ್ಚರವಾಗಿಯೆ ಇದ್ದುದರಿಂದ ತುಂಬ ಆಯಾಸವಾಯಿತು.

ಕಡಲೆ ಪಕ್ಷಿಯು, ಆಕಾಶಕ್ಕೆಹಾರಿ ನನ್ನನ್ನು ಒಂದಾನೊಂದು ಭೂ ಭಾಗದಲ್ಲಿ ತಂದಿಳಿಸಿತು. ನಾನು ಭೂಮಿಯಮೇಲಿರುವುದನ್ನು ನೋಡಿ, ಕಟ್ಟನ್ನು ಬಿಚ್ಚಿಕೊಂಡೆನು. ಕೂಡಲೆ ಪಕ್ಷಿಯು, ಒಂದಾನೊಂದು ದೊಡ್ಡ ಸರ್ಪವನ್ನು ಬಾಯಿಯೆಲ್ಲಿ ಕಚ್ಚಿಕೊಂಡು, ಹಾರಿಹೋಯಿತು. ಆ ಪಕ್ಷಿಯು ನನ್ನನ್ನು ಪರ್ವತಮಧ್ಯದಲ್ಲಿರುವ ಕೊರಕಲಿನಲ್ಲಿ ಕೆಡೆದು ಕೊಂಡು ಹೋಗಿಬಿಟ್ಟಿತು. ಅಲ್ಲಿಂದ ಮತ್ತೊಂದು ಪ್ರದೇಶಕ್ಕೆ ಹೋಗುವುದಕ್ಕೆ ಪೂರ್ಗವಿಲ್ಲದಂತೆ, ಎತ್ತರವಾದ ಬಂಡೆಗಳಿರುವುದನ್ನು ನೋಡಿ ಆಹಾ! ನಾನು ಮೊದಲಿದ್ದ ಸ್ಥಳಕ್ಕಿಂತಲೂ, ಇದು ಅತ್ಯಂತ ಭಯಂಕರವಾದ ನಿರ್ಜನಪ್ರದೇಶವಾಯಿತಲ್ಲಾ! ಎಂದು ವ್ಯಸನಪಡುತ್ತಾ ಸುತ್ತಲೂ ನೋಡುವಲ್ಲಿ, ಹೊಳೆಯುತ್ತಿರುವ ವಜ್ರದ ಕಲ್ಲುಗಳನ್ನು ನೋಡಿ

ನಾನು ಆತ್ಯಾನಂದವನ್ನು ಹೊಂದಿದೆನು. ಅಂತಹ ಕಲ್ಲು ಆ ಸ್ಥಳದಲ್ಲಿ ಹೆಚ್ಚಾಗಿಯೇ ಇದ್ದವು. ಹೀಗೆ ನನಗುಂಟಾದ ಆನಂದವು ಕ್ಷಣ ಕಾಲದಲ್ಲಿ ನಾಶವಾಗಿ, ಮಹತ್ತಾದಭಯವು ವ್ಯಾಪ್ತವಾಯಿತು. ಅಯ್ಯಾ! ಆ ಸ್ಥಳದಲ್ಲಿರುವ ಘೋರಾಕಾರವಾದ ಕೂರಸರ್ಪಗಳನ್ನು ನೋಡಿದರೆ, ಕಲ್ಲುಗಳೂ ಬೆದರಿಹೋಗುತ್ತಿದ್ದವು. ಆದರೆ ಸರ್ಪಗಳು ಕೂಡ ಈ ರಾಕ್ಕಂಬ ಪಕ್ಷಿಯ ಭಯದಿಂದ ರಹಸ್ಯವಾಗಿ ಹೊರಗೆಬಾರದೆ, ಗುಹೆಯೆಲ್ಲಿಯೋ ಅಡಗಿಕೊಂಡಿರುತ್ತಿದ್ದವು. ಆದುದರಿಂದ ಅವುಗಳ ಸಂಚಾರವೆಲ್ಲ ರಾತ್ರಿಯೆಕಾಲದಲ್ಲಿ ಜರಗಬೇಕಾಗಿದ್ದಿತು. ಇದ್ದುದರಲ್ಲಿ ಸುಖಕರವಾದ ಸ್ಥಳದಲ್ಲಿ ಕಾಲವನ್ನು ಕಳೆಯುತ್ತಿರುವಲ್ಲಿ ಸಾಯಂಕಾಲವಾಯಿತು. ಬಳಿಕ ನಾನು ಪ್ರಾಣವನ್ನು ಕಾಪಾಡಿಕೊಳ್ಳುವುದಕ್ಕಾಗಿ, ಒಂದು ಗುಹೆಯಲ್ಲಿ ಸೇರಿಕೊಂಡು, ಬಾಗಿಲಿಗೆ ಒಂದು ಕಲ್ಲನ್ನು ಮುಚ್ಚಿಕೊಂಡೆನು. ಆದರೆ ಅದರಿಂದ ಬೆಳಕಾಗಲಿ, ಗಾಳಿಯಾಗಲಿ, ಬರುವುದಕ್ಕೇನೂ ಅಡ್ಡಿಯಾಗಿರಲಿಲ್ಲ. ಹೀಗಿರುವಲ್ಲಿ ಹಾವುಗಳು ಬುಸಬುಸನೆ ಶಬ್ದಮಾಡುತ್ತಾ ತಿರುಗುವುದಕ್ಕೆ ಪ್ರಾರಂಭಮಾಡಿದವು. ನಾನು ಭಯದಿಂದ ನಡುಗಿ ಸಂಕಟದಿಂದ ಕುದಿಯುತ್ತಾ, ರಾತ್ರಿಯನ್ನು ಅತಿಪ್ರಯಾಸದಿಂದ ಕಳೆದೆನು. ನಿದ್ರೆಬಾರದೆ ಹೋದುದರಿಂದ, ತುಂಬ ಶ್ರಮವನ್ನು ಹೊಂದಿ, ಹೊರಗೆ ಬಂದು, ಯಥೇಚ್ಛವಾಗಿ, ಬಿದ್ದಿರುವ ವಜ್ರಗಳನ್ನು ನೋಡುವುದಕ್ಕೆ, ಕೂಡ ಮನಸ್ಸುಬಾರದೆ ಒಂದಾನೊಂದುಸ್ಥಳದಲ್ಲಿ ಮಲಗಿಕೊಂಡೆನು. ಸ್ವಲ್ಪಹೊತ್ತಿನಲ್ಲೆ ನನ್ನಪಕ್ಕದಲ್ಲಿ ಏನೋ ಒಂದು ಪದಾರ್ಥವು, ಬಿದ್ದಹಾಗೆ ಸದ್ದುಕೇಳಿಸಿತು.

ಕೂಡಲೆ ಎದ್ದು ನೋಡುವಲ್ಲಿ ಆಗ ಕೊಯ್ದುಹಾಕಿದ ಮಾಂಸ ಖಂಡಗಳು, ಅತಿಶಯವಾಗಿ ಕಣ್ಣಿಗೆ ಕಾಣಿಸಿದವು. ಸಮುದ್ರಸಂಚಾರಿಗಳೂ, ಇತರ ಕೆಲವು ವರ್ತಕರೂ, ವಜ್ರಪರ್ವತಗಳಿರುವ ಸ್ಥಳಗಳಿಗೆ ಹೋಗಿ, ಆ ಪರ್ವತಕಣಿವೆಗಳಿರುವ, ಸ್ಥಳದಿಂದ ವಜ್ರಗಳನ್ನು ತಂದುಮಾರುವರೆಂಬ ಕಥೆಯನ್ನು ಕೇಳಿದ್ದೆನು. ಆಗ ಮಾಂಸಖಂಡಗಳು ಬೀಳುತ್ತಿರುವುದನ್ನು ನೋಡಿ, ಆ ಪರ್ವತದ ತಪ್ಪಲಲ್ಲಿ ವಾಸಮಾಡಿಕೊಂಡಿರುವ ಜನರು, ಈ ಮಾಂಸಖಂಡವನ್ನು, ಹೀಗೆ ಬಿಸಾಡಿರುವೆ, ಮೃದುವಾದ ಮಾಂಸಖಂಡಗಳಲ್ಲಿ ವಜ್ರಗಳು, ಸೇರಿಕೊಳ್ಳುವುವು. ಆ ಮಾಂಸಖಂಡಗಳನ್ನು ಪರ್ವ

ತಾಗ್ರದಲ್ಲಿ ವಾಸವಮಾಡುತ್ತಿರುವ ಪಕ್ಷಿಗಳು, ಎತ್ತಿಕೊಂಡುಹೋಗಿ, ಗೂಡುಗಳಲ್ಲಿರುವ ತಮ್ಮ ಮರಿಗಳಿಗೆ ಕೊಡುತ್ತಿರುವಾಗ, ವರ್ತಕರು ಅವುಗಳ ಬಳಿಗೆಬಂದು, ವಜ್ರಗಳನ್ನು ತೆಗೆದುಕೊಂಡು, ಹೋಗುವರೆಂಬುದನ್ನು ತಿಳಿದು, ನಾನು ಇದುವರಿಗೂ, ನನ್ನ ಕಷ್ಟಪರಂಪರೆಯನ್ನು ಈ ಸ್ಥಳದಲ್ಲಿ, ಮಾಡಿಕೊಳ್ಳಬೇಕೆಂದು, ಗೊತ್ತುಮಾಡಿದ್ದ ಯೋಚನೆಯನ್ನು ತೊರೆದು, ಹೇಗಾದರೂಮಾಡಿ, ಆ ವರ್ತಕರಿರುವ ಸ್ಥಳಕ್ಕೆಹೋಗಿ, ಸೇರಿಕೊಳ್ಳಬೇಕೆಂದು, ತುಂಬ ಕುತೂಹಲಯುಕ್ತನಾದೆನು. ಎಂದು ಹೇಳಿದನೆಂದು ನುಡಿದು, ಪಹರಜಾದಿ, ಬಿಳಗಾದುದರಿಂದ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನಜಾವದಲ್ಲಿ ಕಥೆಯನ್ನು ಹೇಳಲಾರಂಭಿಸಿದಳು.

೭೪ ನೆಯ ರಾತ್ರಿ ಕಥೆ

ಅನಂತರ ಸಿಂದುಬಾದನು, ತನ್ನ ಸಭಿಕರನ್ನು ಕುರಿತು, ಇಂತೆಂದು ಕಥೆಯೆನ್ನು ಹೇಳಲಾರಂಭಿಸಿದನು. ಬಳಿಕ ನಾನು ಅಲ್ಲಿರುವ ವಜ್ರಗಳಲ್ಲಿ ಉತ್ತಮವಾದ ಕೆಲವನ್ನು ಆರಿಸಿಕೊಂಡು, ಅದನ್ನು ಗಂಟುಕಟ್ಟಿ, ನಡುವಿನಲ್ಲಿ ಸೇರಿಸಿದೆನು. ಹೊರಗೆ ಹೋಗುವುದಕ್ಕೆ ಉಪಾಯವನ್ನು, ಯೋಚಿಸಿ, ದೊಡ್ಡದಾದ ಮಾಂಸಖಂಡವನ್ನೆತ್ತಿ ತಲೆಯಮಾಗಿನಲ್ಲಿ ಸುತ್ತಿಕೊಂಡು, ಬೋರಲಾಗಿ ಮಲಗಿಕೊಂಡೆನು. ಹೀಗೆ ನಾನು ಮಲಗಿಕೊಂಡಿರುವಾಗ ಆ ಪಕ್ಷಿಯೊಂದು, ನನ್ನ ಬೆನ್ನಿನಲ್ಲಿ ಕಟ್ಟಿಕೊಂಡಿದ್ದ, ಮಾಂಸದ ತುಂಡನ್ನು, ತನ್ನ ಕೊಕ್ಕಿನಿಂದ ಬಲವಾಗಿ ಕಚ್ಚಿಕೊಂಡು, ಪರ್ವತಾಗ್ರದಲ್ಲಿ ತನ್ನ ಗೂಡಿನಬಳಿಗೆ ಹೋಯಿತು. ಅಲ್ಲಿ ವರ್ತಕರು ಗೊಂದಲಮಾಡುತ್ತಾ ಇದ್ದರು. ಅವರಲ್ಲೊಬ್ಬನು ನನ್ನಬಳಿಗೆ ಬರುತ್ತಿರುವುದನ್ನುನೋಡಿ, ನಾನು ಧೈರ್ಯವನ್ನು ಉತ್ಸಾಹವನ್ನು ಹೊಂದಿದವನಾದೆನು. ಬಳಿಕ ಆತನು ನನ್ನ ಕ್ಷೇಮಸಮಾಚಾರವನ್ನು ವಿಚಾರಿಸಿ, ತುಲಗೊತ್ರಾದಿಗಳನ್ನು ತಿಳಿದುಕೊಳ್ಳುವುದಕ್ಕಾಗಿ ಪ್ರಶ್ನೆಮಾಡಿದನು. ನಾನು ನನ್ನ ಕಥೆಯೆನ್ನು ಸಂಪೂರ್ಣವಾಗಿ ಆತನಿಗೆ ಹೇಳಿ, ಅಯ್ಯಾ! ವಜ್ರಗಳಿಗಾಗಿ ಏಕೆ ತೊಂದರೆಪಡುತ್ತೀಯೆ ನಾನು ಅಮೂಲ್ಯವಾದ ವಜ್ರಗಳನ್ನು ತಂದಿರುವೆನು. ನಿನಗೂ ಕೊಡುವೆನು, ಬಾ ಯೆಂದು ಗಂಟನ್ನು ತೋರಿಸಿದೆನು. ಅಷ್ಟರಲ್ಲಿ ವರ್ತಕರೆಲ್ಲರೂ, ನನ್ನನ್ನುನೋಡಿ, ಆಶ್ಚ

ರ್ಯವನ್ನು ಹೊಂದುತ್ತಾ, ನನ್ನ ಚರಿತ್ರೆಯನ್ನು ಕೇಳಿ ಹೊಗಳುತ್ತಿದ್ದರೇ ಹೊರತು, ನಾನುನೂಡಿದ ಉಪಾಯವನ್ನು ಮೂತ್ರ ಲಕ್ಷ್ಯಕ್ಕೆ ತಾರಲಿಲ್ಲ. ಅಲ್ಲದೆ ಅದು ಅವರಿಗೆ ತಿಳಿಯಲೂ ಇಲ್ಲ. ಬಳಿಕ ಆ ವರ್ತಕರು ನನ್ನನ್ನು ತಮ್ಮ ಬಿಡಾರದಬಳಿಗೆ ಕರೆದುಕೊಂಡುಹೋಗಿ, ಗಂಟುಬಿಚ್ಚಿ, ರತ್ನಗಳನ್ನು ನೋಡಿದರು. ಆ ವಜ್ರಗಳು ತುಂಬ ಹೊಳಪಾಗಿದ್ದುದರಿಂದ ತಾವು ಇದುವರಿಗೂ ನೋಡಿದ ವಜ್ರಗಳಲ್ಲಿ ಇಂತಹರತ್ನವನ್ನು ನೊಡಲಿ ಇಲ್ಲವೆಂದು ಹೇಳಿ ತಾವೆಲ್ಲರೂಸೇರಿ, ಗೊತ್ತುಮಾಡಿಕೊಂಡಿದ್ದ, ವ್ಯಾಪಾರಗಾರನ ಬಳಿಗೆ ನನ್ನನ್ನು ಕರೆದುಕೊಂಡು ಹೋದರು. ಆತನು ಅವುಗಳನ್ನುನೋಡಿ, ಅತ್ಯಂತ ಆನಂದಭರಿತನಾದನು. ನಾನು ಆತನನ್ನು ನೋಡಿ, ಅಯ್ಯಾ! ಈ ವಜ್ರಗಳಲ್ಲಿ ನಿನಗೆ ಬೇಕಾದಷ್ಟನ್ನು ನೀನು ತೆಗೆದುಕೊಳ್ಳಬಹುದೆಂದು, ಜ್ಞಾಪಿಸಿದೆನು. ಆದರೂ ಆತನು ಆ ವಜ್ರಗಳೆಲ್ಲ ಬಹಳ ಸಣ್ಣದಾಗಿರುವ ಒಂದೇ ಒಂದು ವಜ್ರವನ್ನು ತೆಗೆದುಕೊಂಡನು. ಆತನು ನನಗೇನಾದರೂ ತೊಂದರೆಮಾಡೀಯಾನೆಂಬ ಭಯದಿಂದ, ನಾನು ಇನ್ನು ಕೆಲವುರತ್ನಗಳನ್ನು ತೆಗೆದುಕೊಳ್ಳುವಂತೆ ಜ್ಞಾಪಿಸಲು, ಆತನು ಒಲ್ಲದೆ ಇದೊಂದು ರತ್ನದಿಂದ ಬರುವ ಹಣದಿಂದಲೆ ನಾನು ಐಶ್ವರ್ಯವಂತನಾಗಿ ಜೀವಿಸಬಹುದೆಂದು ಹೇಳಿದನು.

ಆ ವರ್ತಕರು ಬಹುದಿನಗಳವರಿಗೂ, ಮಾಂಸಖಂಡವನ್ನು ಹಾಕಿ ವಜ್ರಗಳನ್ನು ಸಂಪಾದಿಸುತ್ತಿದ್ದರು. ಬಳಿಕ ವಜ್ರಗಳು, ತೃಪ್ತಿಯಾಗಿ ದೊರೆತವೆಂದು, ನಾವೆಲ್ಲರೂ, ಸರ್ಪಗಳಿರುವ ಆ ವಜ್ರದಕಣಿವೆಯ ಪರ್ವತವನ್ನುದಾಟಿ, ಮುಂದೆಹೋದೆವು, ಸ್ವಲ್ಪದೂರದಲ್ಲಿ ಇರುವ ರೇವನ್ನುಕಂಡು, ಹಡಗನ್ನುಹತ್ತಿ ಕರ್ಪೂರವೃಕ್ಷಗಳಿಂದ ತುಂಬಿರುವ ದೀರೊಹ, ಎಂಬದ್ವೀಪವನ್ನು ಸೇರಿದೆವು. ಆಕರ್ಪೂರದವೃಕ್ಷವು ಎತ್ತರವಾಗಿ, ವಿಶಾಲವಾಗಿಯೂ, ನೂರುಮಂದಿಜನರು, ಕೆಳಗಡೆವಾಸಮಾಡುವುದಕ್ಕೆ ಅನುಕೂಲವಾಗಿರುವಂತೆಯೂ, ಬೆಳೆದಿರುತ್ತಿತ್ತು. ಆಗಿಡದಹಾಲಿನಿಂದಲೇ ಕರ್ಪೂರವಾಗುವುದೆಂದು, ತಿಳಿದುಕೊಂಡೆನು. ಆ ಗಿಡದ ಮೇಲ್ಭಾಗದಲ್ಲಿ ರಂಧ್ರವನ್ನು ಮಾಡಿದರೆ, ಹಾಲು ಸೋರುವುದು. ಅದನ್ನು ತೆಗೆದುಕೊಂಡು, ಕಾಯಿಸಿ, ಕರ್ಪೂರವನ್ನು ತಯಾರುಮಾಡುವರು. ಹೀಗೆ ಹಾಲು ತೆಗೆದಬಳಿಕ ಮರವು ಒಣಗಿಹೋಗುವುದು. ಈ ದ್ವೀಪದಲ್ಲಿ ಕೋಣಗಿಂತ

ದೊಡ್ಡದಾಗಿಯೂ, ಆನೆಗಿಂತ ಚಿಕ್ಕದಾಗಿಯೂ, ಇರುವ ಖಡ್ಗಮೃಗಗಳು, ಬಹಳ ಹೆಚ್ಚಾಗಿರುವುವು. ಅವುಗಳಿಗೆ ಮುಖದಮೇಲೊಂದು, ಕೊಂಬುಂಟು. ಅದಕ್ಕೆ ಮಧ್ಯದಲ್ಲಿ ರಂಧ್ರವು ಇರುವುದು. ಆ ಕೊಂಬಿನ ಮೇಲೆ ಮನುಷ್ಯಾಕಾರವಾದ ಬಿಳಿಯ ರೇಖೆಯೂ ಇರುವುದು. ಆ ಖಡ್ಗಮೃಗವು ಆನೆಯೊಂದಿಗೆ ಬಹು ಸಾಹಸದಿಂದ ಹೋರಾಡಿ, ರಕ್ತಸೋರುವಂತಹ ಗಾಯವನ್ನು ಮಾಡುವುದು. ಆಗ ಆನೆಯು ರಕ್ತವನ್ನು ಕಾರುತ್ತಾ ಓಡಿ, ಅದರ ಕಣ್ಣಿನಮೇಲೆ ಸುರಿಸುವುದು. ಕೂಡಲೆ ಆ ಮೃಗವು ಗರ್ಜನೆ ತಿರುಗಿ ಬಿದ್ದು ಪ್ರಾಣವನ್ನು ಬಿಡುವುದು. ಇಂತಹ ಆಶ್ಚರ್ಯಕ್ಕಿಂತಲೂ, ಅತಿಶಯವಾದುದು, ಮತ್ತೊಂದುಂಟು. ಏನೆಂದರೆ, ರಾಕ್ಕೆಂಬ ಪಕ್ಷಿಯು, ಆ ಆನೆಯನ್ನು ಖಡ್ಗಮೃಗವನ್ನು ಎತ್ತಿಕೊಂಡುಹೋಗಿ, ತನ್ನಮರಿಗೆ ಆಹಾರವಾಗಿ ಕೊಡುತ್ತಿರುವುದು. ಇನ್ನೂ, ವಿಚಿತ್ರವಾದ ಇತರ ವಿನೋದಗಳನ್ನು ಬಹಳವಾಗಿ ನೋಡಿದೆನು. ಆದರೆ, ಅವುಗಳನ್ನು ವಿಸ್ತರಿಸುವುದರಿಂದ, ನಿಮಗೆ ತೊಂದರೆಯಾಗುವುದೆಂದು ಮನಸಿಕವೂಡಬೀಕಾಗಿದೆ. ಆ ದ್ವೀಪದಲ್ಲಿ ನಮ್ಮ ಸರಕುಗಳಲ್ಲಿ ಕೆಲವನ್ನುಮಾರಿ, ಮುಂದೆ ಹೊರಟು ದಾರಿಯಲ್ಲಿ ಸಿಕ್ಕಿದ ಇತರದ್ವೀಪಗಳಲ್ಲಿಯೂ, ವ್ಯಾಪಾರಮಾಡಿಕೊಂಡು, ಬಳಿಕ ಅಖಂಡಭೂಮಿಯೆಲ್ಲಿರುವ ಬಾಲಸೂರ ನಗರವನ್ನು ಬಂದು ಹೊಕ್ಕೆವು. ಅಲ್ಲಿಂದ ನಾನು ಹೊರಟು, ಬಾಗದಾದುಪಟ್ಟಣವನ್ನು ಸೇರಿದೆನು.

ಆದುದರಿಂದಲೆ ನಾನು ಸುಖವಾಗಿ ಜೀವನವೂಡುತ್ತಾ, ಬಾಹಿರರಿಗಳಿಗೆ ಉಪಕಾರವೂಡಬಹುದಾದನ್ನು, ಐಶ್ವರ್ಯವನ್ನು ಸಂಪಾದಿಸಿದೆನೆಂದು, ತನ್ನ ಎರಡನೆಯ ಪ್ರಯಾಣದ ಕಥೆಯನ್ನು ಹೇಳಿ, ಪುನಹ ನೂರು ಸೆಕ್ವಿನ್ಸುಗಳನ್ನು ಕೊಟ್ಟು, ಮೂರನೇಯಂತೆ ಪ್ರಯೆ ಕಥೆಯನ್ನು ಕೇಳುವುದಕ್ಕೆ, ಮರುದಿನ ಬರುವಂತೆ ಹೇಳಿದನು. ಕೂಲಿಕಾರನು ಸಭಿಕರೂ, ತಂತಮ್ಮ ಮನೆಗಳಿಗೆ ಹೊರಟುಹೋದರು. ಮರುದಿನ ಗೊತ್ತಾದ ಕಾಲಕ್ಕೆ, ಸರಿಯಾಗಿ ಸಭಿಕರೆಲ್ಲರೂ ಬಂದರು. ಕೂಡಲೆ ತನ್ನ ದಾರಿದ್ರ್ಯವನ್ನು ಜಾಳು ಮಾಡಿಕೊಂಡು, ಸಂತೋಷದಿಂದಿರುತ್ತಿರುವ, ಕೂಲಿಕಾರನಾದ ಹಿಂದುಬಾದನೂ, ಒಂದು ನಾವಿಕನಿಗೆ ವಂದನೆಗಳನ್ನು,

ಮಾಡಿದನು. ಬಳಿಕ ಸಿಂದುಬಾದನು, ಸಭಿಕರನ್ನುನೋಡಿ, ತನ್ನ ಮೂರನೆಯ ಪ್ರಯಾಣದ ಕಥೆಯನ್ನು ಹೇಳಲಾರಂಭಿಸಿದನು.



ಸಿಂದುಬಾದು ನಾವಿಕನ ಮೂರನೆ ಪ್ರಯಾಣದ ಕಥೆ.



ಬಳಿಕ ನಾನು, ಅನುಭವಿಸಿದ ಸಂಭವ್ರ, ನನ್ನ ಒಂದು ಎರಡನೆ ಪ್ರಯಾಣಗಳಲ್ಲುಂಟಾದ ಕಷ್ಟನಷ್ಟಗಳನ್ನು ಶೀಘ್ರವಾಗಿ ಮರೆಯುವಂತೆ ಮಾಡಿತು. ಆದುದರಿಂದ ನಾನು ಯೌವನದ ದೆಶೆಯಲ್ಲಿರುವ ಈ ಕಾಲದಲ್ಲಿ ವ್ಯಾಪಾರಮಾಡದೆಯೂ, ಹಣವನ್ನು ಸಂಪಾದಿಸದೆಯೂ, ಇದ್ದರೆ ಮುಂದೆ ಉಂಟಾಗುವ ತೊಂದರೆಯನ್ನು ಹೇಳಲಾಗದೆಂದು, ಯೋಚಿಸಿ, ಬಾಗದಾದಿನಲ್ಲಿ ದೊರೆಯುವ ಅತ್ಯುತ್ತಮವಾದ ಸರಕುಗಳನ್ನು ತೆಗೆದು, ಬಾಲಸೂರನ್ನುಸೇರಿ, ಅಲ್ಲಿ ಉತ್ತಮರಾದ ವರ್ತಕರ ಸಹವಾಸವನ್ನುಮಾಡಿಕೊಂಡು, ಹಡಗನ್ನು ಹತ್ತಿ, ಪ್ರಯಾಣಮಾಡುತ್ತಾ, ಅನೇಕಾನೇಕ ರೇವುಗಳಲ್ಲಿನಿಂತು, ವ್ಯಾಪಾರಮಾಡಿಕೊಂಡು, ಹೋಗುತ್ತಿರುವಲ್ಲಿ, ಒಂದು ದಿನ ಸಮುದ್ರಮಧ್ಯದಲ್ಲಿರುವಾಗ ಬಿರುಗಾಳಿಯು ಬೀಸಿ, ನಮ್ಮ ಹಡಗನ್ನು ದಾರಿತಪ್ಪಿಸಿತು. ಬಹುದಿನಗಳವರಿಗೂ, ಗಾಳಿಯು ಬೀಸುತ್ತಿದ್ದುದರಿಂದ ನಾವು ಕೊನೆಗೆ, ಒಂದು ದ್ವೀಪದರೇವನ್ನುಸೇರಿ, ಸರದಾರನಪ್ಪಣೆಯಂತೆ, ಹಡಗನ್ನು ನಿಲ್ಲಿಸಿದೆವು. ಆಗ ಆತನು ನಮ್ಮಗಳನ್ನು ನೋಡಿ, ಅಯ್ಯಾ! ಈ ದ್ವೀಪದಲ್ಲಿಯಾ, ಇದಕ್ಕೆ ಸೇರಿದ ಇತರಪ್ರಾಂತಗಳಲ್ಲಿಯೂ, ಕುಳ್ಳರಾಗಿಯೂ, ಕಾಡುಜನರಂತೆ ಮೈಮೇಲೆಲ್ಲಾ ಕೂದಲುಳ್ಳವರಾಗಿಯೂ, ಇರುವ ಒಂದು ಜಾತಿಯ ಜನಚರರು, ವಿಷಿತೆಯ ಗುಂಪುಗಳಹಾಗೆ ವಾಸಮಾಡುತ್ತಿರುವರು. ಆ ಜನಚರರಲ್ಲೊಬ್ಬನನ್ನು ಕೊಂದೆವೆಂದು, ಅವರು ನಮ್ಮಗಳಮೇಲೆ ಬಹಳವಾಗಿ ಆಗ್ರಹಮಾಡುತ್ತಿರುವ

ರು. ಆದುದರಿಂದ ಅವರಿಂದ ತಪ್ಪಿಸಿಕೊಳ್ಳುವುದು, ನಮಗೆ ಅಸಾಧ್ಯವಾಗಿಧೆ ಎಂದು ಹೇಳಿದನು. ಇಂತೆಂದು ನುಡಿದು, ಷಹರಜಾದಿಯು, ಬಿಳಿಗಾದಕೂಡಲೆ, ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನಜಾವದಲ್ಲಿ ಏಂದಿನಂತೆ ಹೇಳಲಾರಂಭಿಸಿದಳು.

ಒಂಬತ್ತನೆಯ ರಾತ್ರಿಯ ಕಥೆ.

ಸರದಾರನು, ಹೀಗೆ ಹೇಳುತ್ತಲೇ ನಾವುಗಳೆಲ್ಲರೂ, ಅತ್ಯಂತ ಭೀತರಾಗಿದ್ದೆವು. ಸ್ವಲ್ಪಹೊತ್ತಿಗೆ ಅವನು, ಹೇಳಿದುದೆಲ್ಲ ನಿಜವೆಂದು ತಿಳಿದುಕೊಂಡೆವು. ಮೈಮೇಲೆಲ್ಲಾ ಎರಡುಗೇಣುವದ್ದ ಕೆಂಪಗಿರುವ ಕೂದಲುಳ್ಳ ಕುಳ್ಳರಾದ ಜನಗಳು ನೀರಿನಲ್ಲಿ ಈಜಿಕೊಂಡು, ನಮ್ಮ ಬಳಿಗೆ ಬರುತ್ತಿರುವುದನ್ನು ಕಂಡೆವು. ಆದರೆ ಆಗನಾವು ತಪ್ಪಿಸಿಕೊಳ್ಳುವುದಕ್ಕೆ ಯಾವ ಉಪಾಯವನ್ನು ಮಾಡಲಿಲ್ಲ. ಬಳಿಕ ಅವರುಗಳು ನಮ್ಮ ಹಡಗಿನ ಬಳಿಗೆ ಬಂದು, ಏನೇನೋ ಮಾತನಾಡುವುದಕ್ಕೆ ಪ್ರಾರಂಭಮಾಡಿದರು. ಅವರಮಾತುಗಳು ನಮಗೆ ತಿಳಿಯದಿರೋಯಿತು. ನಂತರ ಹಡಗನ್ನುಹತ್ತಿ, ಸಾಮಾನುಗಳನ್ನು ಕೇಳುತ್ತಾ ತೊಂದರೆಮಾಡುತ್ತಿದ್ದರೂ, ನಾವು ಏನನ್ನೂಮಾಡದೆ ಸುಮ್ಮನೆ ಇದ್ದೆವು. ಆಗ ಅವುಗಳು, ಬಹುದೂರ ಹಗ್ಗವನ್ನುಬಿಚ್ಚಿ ಬಾವುಟಗಳನ್ನೇರಿಸಿ, ನಮ್ಮಗಳನ್ನು ಆ ದ್ವೀಪದಲ್ಲಿ ನಿಲ್ಲಿಸಿ ಹಡಗನ್ನು ನಡೆಸಿಕೊಂಡು, ತಮ್ಮ ದ್ವೀಪದಬಳಿಗೆ ಹೊರಟವು. ಆದರೆ ಅದರಲ್ಲಿದ್ದ ಪ್ರಯಾಣಿಕರು ಬಹು ಎಚ್ಚರಿಕೆಯಿಂದ, ತಾವು ಈಗ ಹೋಗುತ್ತಿರುವ ಸ್ಥಳವು, ಅನಾಯವೆಂದು, ತಿಳಿದು ನುಖವಾಗಿದ್ದರು. ಅದು ಮಾತ್ರ ಅನಾಯ ಸ್ಥಳವಾಗಿದ್ದರೂ, ನಮಗೆ ಸಂಭವಿಸಿದ ತೊಂದರೆ ಮಾತ್ರ ತುಂಬ ಕಷ್ಟಸಾಧ್ಯವಾಗಿಯೆ ಇದ್ದಿತು. ಆದರೂ ಅವನ್ನು ಅನುಭವಿಸಿಯೇ ಅನುಭವಿಸಿದೆವು. ನಾವು ಆ ದ್ವೀಪದಲ್ಲಿ ಸ್ವಲ್ಪದೂರ ಪ್ರಯಾಣಮಾಡಿದಮೇಲೆ, ಪ್ರಾಣಾಧಾರವಾದ ಕೆಲವು ಹಣ್ಣುಗಳುಮಾತ್ರ ದೊರೆತುದರಿಂದ, ನಾವುಗಳನ್ನುಮೇಲೆ ನಮ್ಮ ಆಯುಷ್ಯಕ್ಕಲವನ್ನು ಎಣಿಸುವ ಶ್ರಮವನ್ನು ಮರೆಪಂತಾಗುವುದೆಂದು ಭಾವಿಸಿಕೊಂಡು, ಮುಂದೆ ಹೋಗುತ್ತಿರುವಲ್ಲಿ, ಪರಳದಿಂದಮಾಡಿದ ಬಾಗಿಲೊಂದು, ಕಾಣಿಸಿತು. ಅದನ್ನು ತೆರೆದುಕೊಂಡು ಒಳಗೆ ಪ್ರವೇಶಮಾಡಿ, ನೋಡಲು ಜನರಾರು

ಇರಲಿಲ್ಲ. ಆದರೆ ಸತ್ತುಹೋದ ಮನುಷ್ಯರ ತಲೆಯ ಮೂಳೆಗಳೂ, ಕೈ ಕಾಲುಗಳು ಬಿದ್ದು ಇದ್ದವು. ಅವರ ಪಕ್ಕದಲ್ಲಿರುವ ಮತ್ತೊಂದುಗೃಹದಲ್ಲಿ ಮಾಂಸವನ್ನು ಹುರಿಯುವ ಓಜು, ಒಲೆಯೂ, ದೊಡ್ಡದಾದ ಒಂದು ಸೌಟೂ, ಕಾಣಬಂದವು. ಇದನ್ನು ನೋಡಿದ ಕೂಡಲೆ, ರಾಕ್ಷಸನಮನೆಯಾಗಿರಬೇಕೆಂದು, ಗೊತ್ತುಮಾಡಿಕೊಂಡೆವು. ಆದರೆ ಸ್ಥಳವನ್ನು ಬಿಟ್ಟು, ಓಡಿಹೋಗುವುದಕ್ಕೆ ನಾವಿದುವರಿಗೂ ಮಾಡಿದ ಪ್ರಯತ್ನದಿಂದ, ನಮ್ಮ ಕಾಲುಗಳು ಕಕ್ಕಿಕುಂದಿ ಹೋಗಿದ್ದವು. ಅಷ್ಟರಲ್ಲಿ ಸೂರ್ಯನು ಮುಳುಗಿ ಹೋದನು. ಕೂಡಲೆ, ನಾವು ಬಾಗಿಲು ಮುಚ್ಚಿಕೊಂಡು ಹೊರಗೆಬಂದೆವು. ಆಗ ಘೋರಾಕಾರಿಯಾದ ಒಬ್ಬರಾಕ್ಷಸನು, ಗಂಡುಸಿಂಡದಂತೆ ಗಟ್ಟಿಯಾಗಿ ಗರ್ಜಿಸುತ್ತಾ ಹೊರಕ್ಕೆಬಂದನು. ಆತನು ಒಂದು ತಾಳೆಯ ಮರವನ್ನು ಎತ್ತರದಲ್ಲಿ ಬೋಳಾಗಿದೆಯೆಂದು, ತೋರಿತು. ಹಣೆಯಲ್ಲಿ ಒಂದೇ ಒಂದು ಕಣ್ಣು, ಮಾಣಿಕ್ಯದಂತೆ ಕೆಂಪಾಗಿ, ಕುದುರೆಯ ಮುಖವನ್ನು ವಿಕಾರಿಸುವಂತಹ ಮುಖ, ಇವುಗಳ ಹಲ್ಲುಗಳು ಬಿಲ್ಲಿನ ಅಲಗುಗಳಂತಿದ್ದವು. ಕೈಕಾಲಿನ ಬೆರಳುಗಳು, ದೊಡ್ಡಪಕ್ಷಿಯ ಕೊಕ್ಕಿನಂತಿರುವುದು. ಇಂತಹ ಘೋರಾಕಾರವನ್ನು ಹೊಂದಿದ ರಾಕ್ಷಸನನ್ನು ನೋಡುತ್ತಲೆ, ನಾವು ನಿರ್ಜೀವಭಾವವನ್ನು ಹೊಂದಿ, ಭೂಗತರಾಗಿ ಬಿದ್ದುಹೋದೆವು.

ನಾವು ಹೀಗೆಬಿದ್ದುಹೋದಮೇಳೆ ರಾಕ್ಷಸನು, ನನ್ನ ಹತ್ತಿರಕ್ಕೆ ಬಂದು, ಮೊದಲು ತಲೆಯೆನ್ನು ಹಿಡಿದು, ಸುತ್ತಲೂ ತಿರುಗಿಸಿನೋಡಿ, ಚರ್ಮವೂ ಅಸ್ಥಿಯೂ, ಹೊರತು ಮತ್ತೇನೂ ಇಲ್ಲವೆಂದು ತೊರೆದು, ಅಲ್ಲಿರುವ ಜನರಲ್ಲೆಲ್ಲಾ ಕೊಬ್ಬಿದವನಾಗಿ ಬೆಳೆದಿದ್ದ ನಮ್ಮ ಹಡಗಿನ ಸರದಾರನನ್ನು ಕತ್ತುಮುರಿದು ಎಳೆದುಕೊಂಡುಹೋಗಿ, ಒಲೆಯಮೇಲಿರುವ ಓಡಿನಲ್ಲಿಹಾಕಿ ಹುರಿದು ರಾತ್ರಿ ಭೋಜನವನ್ನು ತೀರಿಸಿಕೊಂಡು, ಮೇಘಗರ್ಜನೆಯಂತೆ ಮೊರೆಯುತ್ತಾ, ನಿದ್ರೆಮಾಡಿ ಬೆಳಗಾಗುವಲೆ ನಮ್ಮನ್ನು ಯಾವತೊಂದರೆಯೂ, ಮಾಡದೆ ಹೊರಟುಹೋದನು. ಬಳಿಕ ಆತನು ಬಹಳ ದೂರದವರಿಗೂ, ಕೂಗಿಹೇಳುವಂತೆ ಶಿಳಿಸು, ನಾವೆಲ್ಲರು ನಮ್ಮ ಪ್ರಾಣಗಳನ್ನು ಕಳೆದುಕೊಳ್ಳಬೇಕಲ್ಲಾ ! ಎಂದು ಬಹಳವಾಗಿ ರೋದನಮಾಡಿದೆವು. ಆ ನಗರವೆಲ್ಲ, ನಮ್ಮ ರೋದನಧ್ವನಿಯಿಂದ ತುಂಬಿ

ಹೋಗಿದ್ದುದಲ್ಲದೆ, ದಿಕ್ಕುಗಳು ಕೂಡ, ಪ್ರತಿಧ್ವನಿಗೊಡುತ್ತಿದ್ದವು. ಇಂತಹ ದುರವಸ್ಥೆಯಲ್ಲಿರುವ ನಮಗೆ ಯಾವ ಉಪಾಯವೂ ತೋರಲಿಲ್ಲ. ಆದುದರಿಂದ ಭಗವಂತನಮೇಲೆ ಭಾರವನ್ನುಹಾಕಿ, ಆಹಾರವನ್ನು ಹುಡುಕಿ ನೋಡಿದೆವು. ಅಲ್ಲಲ್ಲಿ ದೊರೆತ ಅಲ್ಪಾಹಾರವನ್ನುತಿಂದು, ಸ್ವಲ್ಪ ನೀರನ್ನು ಕುಡಿದು, ರಾತ್ರಿ ಮಲಗುವುದಕ್ಕೆ ಅನುಕೂಲವಾದ ಸ್ಥಳವನ್ನು, ಹುಡುಕಿದೆವು. ದೊರಕದೆ ಹೋದುದರಿಂದ ಪುನಹ ಆ ನಗರಿಗೆ ಬಂದು ಮಲಗಿಕೊಂಡು, ರಾಕ್ಷಸನು ಎಂದಿನಂತೆ ಒಬ್ಬ ಮನುಷ್ಯನನ್ನು ತನಗೆ ಆಹಾರವನ್ನಾಗಿ ಮಾಡಿಕೊಂಡು, ರಾತ್ರಿ ಸುಖವಾಗಿ ನಿದ್ರೆಮಾಡಿ, ಬೆಳಗ್ಗೆ ನಮ್ಮನ್ನು ತೊಂದರೆಪಡಿಸದೆ, ಹೊರಟುಹೋದನು. ಇಂತಹ ದುಸ್ಥಿತಿಯಲ್ಲಿರುವ ನಾವು ಸಮುದ್ರದಲ್ಲಿಯಾದರೂ ಬಿದ್ದು ಪ್ರಾಣವನ್ನು ಕಳೆದುಕೊಳ್ಳಬೇಕೆಂದು, ಗೊತ್ತುಮಾಡಿದೆವು. ಆದರೆ ಆತ್ಮಹತ್ಯವು ಪಾಪಕರವಾದ ಕೆಲಸವೆಂದು, ಶಾಸ್ತ್ರವಿರುದ್ಧವೆಂದು ತಿಳಿದು, ಹೇಗಾದರೂಮಾಡಿ ಈ ರಾಕ್ಷಸನನ್ನು ಕೊಲ್ಲುವ ಉಪಾಯವನ್ನು ಮಾಡಬೇಕೆಂದು, ಯೋಚಿಸಿದೆವು. ಬಳಿಕ ನಾನು ಒಂದು ಉಪಾಯವನ್ನು ಹೇಳಿದೆನು. ಅದಕ್ಕಲ್ಲಿದ್ದವರೆಲ್ಲರೂ, ಸಮ್ಮತಿಸಿದರು.

ಏನಂದರೆ ಈ ದ್ವೀಪದಲ್ಲಿ ಬಣಗಿದ ಸೌದೆಯು, ಬಹಳವಾಗಿರುವುದು. ಇದೆಲ್ಲವನ್ನೂ ಸೇರಿಸಿ, ಒಂದು ತೆಪ್ಪವಾಗಿ ಕಟ್ಟಿಕೊಂಡು, ನಮಗೆ ಅನುಕೂಲವಾದರೆ ಅದರಲ್ಲಿಕುಳಿತುಕೊಂಡು, ಸಮುದ್ರವನ್ನು ಸೇರೋಣ? ಇಲ್ಲದೆ ರಾಕ್ಷಸನನ್ನು ಕೊಲ್ಲುವುದು ಸಾಧ್ಯವಾದರೆ, ಪುನಹ ನಾವು ಹೊರಡಬೇಕಾದ ಕಾಲ ಬರುವವರಿಗೂ, ಇಲ್ಲೇ ಇರೋಣ ! ಈ ಎರಡರಲ್ಲಿ ಯಾವದು ಸೂಕ್ತವೋ ! ಅದನ್ನು ಮಾಡಿಯೇಮಾಡೋಣ ? ಆದರೆ ಯಾವಕಾರ್ಯವನ್ನು ಮಾಡದೆ ರಾಕ್ಷಸನಬಾಯಿಗೆ ತುತ್ತಾಗುವುದಕ್ಕಿಂತಲೂ, ತೆಪ್ಪವನ್ನು ಕಟ್ಟಿಕೊಂಡು, ಸಮುದ್ರದಲ್ಲಿಯಾದರೂ ಪ್ರಯಾಣ ಮಾಡುವುದು, ಉತ್ತಮವಲ್ಲವೇ ಎಂದು ಹೇಳಿದೆನು. ನನ್ನ ಸ್ನೇಹಿತರೆಲ್ಲರೂ, ಅತ್ಯಾದರದಿಂದದನ್ನು ಒಪ್ಪಿಕೊಂಡರು. ನಾವು ಕಟ್ಟಿಗೆಗಳನ್ನು ಕೂಡಿಸುತ್ತಾ ತೆಪ್ಪವನ್ನು ಕಟ್ಟಿದೆವು. ಇನ್ನೂ ಸ್ವಲ್ಪ ಕಟ್ಟಿಗೆ ಉಳಿಯಿತು. ಇಷ್ಟರಲ್ಲಿ ಸಾಯಂಕಾಲವಾಗಲು, ನಗರಿಗೆ ಬಂದೆವು. ರಾಕ್ಷಸನು ಎಂದಿನಂತೆ ನಮ್ಮಗಳಲ್ಲೊಬ್ಬನನ್ನು ಹೊತ್ತುಕೊಂಡು ಹೋಗಿ,

ಹುರಿದುಕೊಂಡುಂಡು ಗೊರಕೆಯನ್ನು ಹಾಕುತ್ತಾ, ಮಲಗಿಕೊಂಡನು. ಆಗ ನಮ್ಮಗಳಲ್ಲಿ ಧೈರ್ಯಶಾಲಿಗಳಾದ ಇಬ್ಬರು, ಬಲವಾದ ಕಬ್ಬಿಣದ ಸಲಾಕೆಗಳನ್ನು ಬೆಂಕಿಯಲ್ಲಿಕಾಸಿ, ಅದನ್ನುತೆಗೆದುಕೊಂಡು, ಹೋಗಿ ರಾಕ್ಷಸನ ಕಣ್ಣಿನಮೇಲೆ ಚುಚ್ಚಿದರು. ಘೋರವಾದ ಧ್ವನಿಯೆನ್ನು ಮಾಡುತ್ತಾ ಆ ರಾಕ್ಷಸನು, ಅರಚಿ ಅಂಗಲಾಚಿ, ಹೊರಳಾಡುತ್ತಾ ಕೈಚಾಚಿ ತಬ್ಬಿಕೊಳ್ಳುವುದಕ್ಕೆ ಬರಲು, ಚತುರರಾದ ಅವರು ತಪ್ಪಿಸಿಕೊಂಡು ಓಡಿಬಂದರು. ಬಳಿಕ ರಾಕ್ಷಸನು, ನೋವನ್ನು ತಾಳಲಾರದೆ ಬಹುತೆರನಾಗಿ ದುಃಖಿಸುತ್ತಾ, ತಡವರಿಸಿಕೊಂಡು ಬಾಗಿಲಿಗೆಬಂದು ನೋಡಿ, ಬೆಳಗಾದಕೂಡಲೆ, ಎಲ್ಲಿಯೋ ಹೊರಟುಹೋದನು. ಇಂತೆಂದುಹೇಳಿ, ಬೆಳಗಾದಕೂಡಲೆ ಕಥೆಯನ್ನು ನಿಲ್ಲಿಸಿ, ಷಹರಜಾದಿಯು, ಸ್ವಲಹ ಮರುದಿನದ ಬೆಳಗಿನಜಾವದಲ್ಲಿ ಹೇಳಲಾರಂಭಿಸಿದಳು.

೨೬ ನೆಯ ರಾತ್ರಿ ಕಥೆ.

ಸಿಂದುಬಾದನು, ಸಭೆಯವರನ್ನು ಕುರಿತು, ಹೇಳಿದುದೇನಂದರೆ ಅಯ್ಯಾ ! ಬಳಿಕ ನಾವುಗಳೆಲ್ಲರೂ, ನಗರವನ್ನುಬಿಟ್ಟು, ತೆಪ್ಪವನ್ನುಕಟ್ಟಿರುವ ಸ್ಥಳಕ್ಕೆ ಬಂದು ಕುಳಿತುಕೊಂಡು, ರಾತ್ರಿಯನ್ನು ಕಳೆದೆವು. ಆ ರಾಕ್ಷಸನಿಗೆ ಸಹಾಯಕೆರು ಮತ್ತಾರಾದರೂ ಬರುವರೇನೋ, ಎಂಬ ಭಯದಿಂದ ನಾವು ತೆಪ್ಪವನ್ನುಹತ್ತಿ ರಾತ್ರಿಯೆಲ್ಲಿ ಪ್ರಯಾಣಮಾಡಿ, ಬಳಿಕ ಬೆಳಗಾಗುತಲೆ, ಅಳುವ ಧ್ವನಿಯು ನಿಂತು ಹೋದುದರಿಂದ ಆ ರಾಕ್ಷಸನು ಸತ್ತುಹೋಗಿರಬಹುದು, ಹಾಗಾಗಿದ್ದರೆ ನಾವು ಇಲ್ಲೆ ಕೆಲವುಕಾಲ ಇರಬಹುದೆಂದುಕೊಂಡೆವು. ಸ್ವಲ್ಪಹೊತ್ತಿನಲ್ಲಿ ಬಹುದೂರದಲ್ಲಿ ಆ ರಾಕ್ಷಸನು ಮತ್ತಿಬ್ಬರ ಸಹಾಯೆವನ್ನು ಹೊಂದಿ, ನಮ್ಮನ್ನು ಹಿಂದಟ್ಟಿಸಿಕೊಂಡು, ಬರುತ್ತಿರುವುದನ್ನುಕಂಡು, ನಾವುಗಳೆಲ್ಲರೂ, ತೆಪ್ಪದಮೇಲಿಕ್ಕುಳಿತು, ಸಮುದ್ರವನ್ನು ಸೇರಿದೆವು. ಆಗ ರಾಕ್ಷಸನು, ರೋಷಾವೇಷದಿಂದೋಡಿಬಂದು, ಪರ್ವತಪ್ರಾಯವಾದ ಗುಂಡುಗಳನ್ನೆತ್ತಿ ಹೊಡೆಯುತ್ತಿರುವಾಗ, ಅದರ ಪೆಟ್ಟಿನಿಂದ ಅನೇಕರು, ನೀರಿನಪಾಲಾಗಿ ಸತ್ತರು. ನಾನು ನನ್ನಪಕ್ಕದಲ್ಲಿದ್ದವನು, ಮೂರ್ಖ ನಮ್ರಶಕ್ತಿಯೆನ್ನೆಲ್ಲಾ ವೆಚ್ಚವೂಡಿ, ಎರಡು ಹಗಲೂ, ಒಂದುರಾತ್ರಿಯೂ, ಸಮುದ್ರದಲ್ಲಿ ಪ್ರಯಾಣವೂ

ಡಿ, ಕಡೆಗೆ ಒಂದುದ್ವೀಪವನ್ನುಸೇರಿ, ತೆಪ್ಪವನ್ನುನಿಲ್ಲಿಸಿ, ನಮ್ಮನಿದ್ದೆಯಾ ಗಿಸಿಕ್ಕಿದ ಹಣ್ಣುಗಳನ್ನುತಿಂದು, ನೀರನ್ನು ಕುಡಿದು, ಎಂದಿನಂತೆ ಕಕ್ಕಿ ವಂತರಾದೆವು. ಆಗನಾವು ಸ್ವಲ್ಪಹೊತ್ತು ಮಲಗಿಕೊಂಡು, ನಿದ್ರೆಹೋ ಗುತ್ತಿರುವಾಗ ಬುಸಬುಸನೆ ಉಸುರುಬಿಡುತ್ತಾ ಬರುತ್ತಿರುವುದನ್ನುನೋ ಡಿ, ನಾವು ಎಚ್ಚೆತ್ತೆವು. ಆ ಸರ್ಪವು ನಮ್ಮಗಳತೊಲ್ಲಬ್ಬನನ್ನು ಹಿಡಿ ದು ನುಂಗುವುದಕ್ಕೆ ಪ್ರಯತ್ನವೂಡಲು, ಆತನುತಪ್ಪಿಸಿಕೊಳ್ಳುವ ಯತ್ನ ವನ್ನುವೂಡಿ, ಗಟ್ಟಿಯಾಗಿ ಕೂಗಿಕೊಂಡುದರಿಂದ ಅದು ಆತನನ್ನು ಬಲ ವಾಗಿ ಹಿಡಿದು ನೆಲಕ್ಕೆಬಡಿದು ನುಂಗುವಕಾಲದಲ್ಲಿ ಆತನಮೂಳೆಯ, ಪಟ ಪಟ ಶಬ್ದವನ್ನುಕೇಳಿ ನಾನು ದೂರಕ್ಕೆ ಓಡಿಹೋಗಿ, ಓ ಭಗವಂತ ನಾವು ರಾಕ್ಷಸನ ನಗರಿಯಲ್ಲಿ ನಾನಾದುಃಖಗಳನ್ನು ಅನುಭವಿಸಿ, ಸಮುದ್ರಪ್ರ ಯಾಣದಲ್ಲಿ ಸಂಕಟಪಟ್ಟು, ಈ ಸ್ಥಳಕ್ಕೆಬಂದರೆ ಇಲ್ಲಿಯೂ, ಇಂತಹ ದುರವಸ್ಥೆಗೆ ನಮ್ಮನ್ನು ಈತನುಗುರಿಮಾಡಿದೆಯಾ! ಎಂದು ಮೊರೆಯಿಟ್ಟನು. ಅಲ್ಲಿಂದ ಮುಂದೆ ನಾನು ನನ್ನಜೊತೆಯವನೂ, ಹೊರಟು ದೊಡ್ಡದಾಗಿ ರುವ ಒಂದು ವೃಕ್ಷವನ್ನುಹತ್ತಿ, ಅದರಮೇಲೆ ರಾತ್ರಿಯನ್ನು ಕಳೆಯು ತ್ತಿರುವಾಗ, ಆ ಸರ್ಪವು ಎಂದಿನಂತೆ ಆ ವೃಕ್ಷದಬಳಿಗೆಬಂದು ಮೇಲಕ್ಕೆ ಹಾರಿ ನನಗಿಂತಲೂ ಕೆಳಗಡೆಯಿದ್ದ ನನ್ನಜೊತೆಯವನನ್ನು ಹಿಡಿದು ನುಂ ಗಿಬಿಟ್ಟಿತು. ನಾನು ಬೆಳಗಾಗುವವರೆಗೂ, ಸುಮ್ಮನಿದ್ದೆ ಬಳಿಕ ಮರದಿಂದಿಳಿದು, ನನ್ನ ಸ್ನೇಹಿತನಗತಿ ನನಗೂ ಉಂಟಾಗುವುದೆಂದು, ಹೆ ದರಿ, ಸಮುದ್ರದಲ್ಲಿಬಿದ್ದು, ಪ್ರಾಣವನ್ನು ಬಿಸಜೀಕೆಂದು, ಯೋಚಿಸಿದೆ ನು. ಆದರೆ ಭಗವಂತನ ದಯೆದಿಂದ ಇನ್ನು ಆಯುಸ್ಸಿದ್ದುದರಿಂದ ಹಾಗೆ ಮಾಡದೆ ಸರ್ವಶಕ್ತನಮೇಲೆ ಭಾರವನ್ನುಹಾಕಿ, ಬಳಿಕ ಆ ದ್ವೀಪದಲ್ಲಿ ದೊರೆಯುವ ದಗ್ಗಳೆಮುಳ್ಳುಗಳನ್ನು ತಂದು ಮರದಸುತ್ತಲೂ, ಬಲವಾದ ಬೇಲಿಯೆನ್ನು ಕಟ್ಟಿಕೊಂಡೆನು.

ನಂತರ ಆ ವೃಕ್ಷದಮೇಲೆ ಮಲಗುವುದಕ್ಕೆ ಅನುಕೂಲವಾದ, ಒಂದು ಗುದಿಸಲನ್ನು ಕಟ್ಟಿಕೊಂಡು, ಸುತ್ತಲೂ ಮುಳ್ಳಿನ ಕೋಟೆಯೆ ನ್ನು ಹಾಕಿ, ಸೇಗಾಗರೊಳಮೂಡಿ, ಪ್ರಾಣಭಯದಿಂದ ತಪ್ಪಿಸಿಕೊಳ್ಳಬೇಕೆಂ ದು, ಧೈರ್ಯವನ್ನವಲಂಬಿಸಿ, ತಕ್ಕಪ್ರಯತ್ನವನ್ನು ಮಾಡಿದೆನು. ಆಸ ರ್ಪವು ಎಂದಿನಂತೆ ಸಾಯಂಕಾಲವಾದ ಕೂಡಲೆ ಅಲ್ಲಿಗೆಬಂದು, ನನ್ನನ್ನು

ನುಂಗಬೇಕೆಂದು, ಬೆಲಿಯೆಸುತ್ತಲೂ, ತಿರುಗಿನೋಡಿ, ದಾಟಿಬರುವುದಕ್ಕೆ ವಕಾಶ ದೊರೆಯದೆ ಹೋದುದರಿಂದ, ಟೇಟೆಸಿಕ್ಕದೆ ಇರುವ ಚಿಕ್ಕನಂತೆ, ಬೆಳಗಾಗುವವರೆಗೂ, ಕಾದುಕೊಂಡಿದ್ದು ನಂತರ ಹೊರಟು ಹೋಯಿತು. ನಾನಾದರೋ ನಿರ್ಭಯನಾಗಿ, ನನ್ನ ಕೋಟೆಯೆಲ್ಲಿದ್ದೇನೆಹೊರತು, ಹೊರಕ್ಕೆ ಬರಲೇ ಇಲ್ಲ. ಇಂತಹ ಸರ್ಪದ ಬಾಧೆಯಿಂದಲೂ, ಅದರ ವಿಷ ಜ್ವಾಲೆಯ ಶ್ವಾಸದಿಂದಲೂ, ನಾನು ತುಂಬ ಬಲಹೀನನಾಗಿ, ರೋಗಗ್ರಸ್ತನಾದೆನು. ಆದುದರಿಂದ ಹಿಂದಿನಬಿನ ನಾನು ಮೂಡಿಕೊಂಡಿದ್ದ, ವೈರಾಗ್ಯವನ್ನು ಮರೆತು, ಸಮುದ್ರದಲ್ಲಿಬಿದ್ದು ಪ್ರಾಣವನ್ನು ಬಿಡಬೇಕೆಂದು, ಸಮುದ್ರದಮುಖನಾಗಿ ಓಡುತ್ತಾ ಇದ್ದೆನು. ಇಂತೆಂದು ಹೇಳಿ ಷಹರ ಜಾಡಿಯು, ಬೆಳಗಾದಕೂಡಲೆ ಕಥೆಯನ್ನು ನಿಲ್ಲಿಸಿ, ಮರುದಿನದ ಬೆಳಗಿನ ಜಾವದಲ್ಲಿ, ಮತ್ತೆ ಹೇಳತೊಡಗಿದಳು.

೭೭ ನೆಯ ರಾತ್ರಿ ಕಥೆ

ಸಿಂದುಬಾದನು, ತನ್ನ ಸಭಿಕರನ್ನುನೋಡಿ, ಕಥೆಯೆನ್ನು ಇಂತೆಂದು ಹೇಳಲಾರಂಭಿಸಿದನು. ಹೀಗೆ ನಾನು ಸಮುದ್ರದಲ್ಲಬಿದ್ದು ಸಾಯಬೇಕೆಂದು, ಹೋಗುತ್ತಿರುವಾಗ ಭಗವಂತನು, ನನ್ನಮೇಲಣ ಕರುಣದಿಂದ ದಯೆವಾಯಿ, ಬಂದು ಪ್ರಾಣರಕ್ಷಣೋಪಾಯವೊಂದನ್ನು ತೋರಿಸಿದನು. ಅದೇನಂದರೆ ನಾನು ಸ್ವಲ್ಪದೂರದಲ್ಲಿ ಬಗುತ್ತಿರುವ ಒಂದು ಹಡಗನ್ನು, ಕಂಡೆನು. ಕೂಡಲೆ ಕೈಲಾದ ಸಿಟ್ಟಿಗೂ, ಕೂಗಿಕೊಂಡು ನನ್ನ ತಲೆಯು ರುಮಾಲನ್ನು ತೆಗೆದು ಆಡ್ಡಲಾಗಿಬೀಸಿ, ನನ್ನನ್ನೂ ಅವರು ನೋಡುವಂತೆಮಾಡಿದೆನು. ಅವರೆಲ್ಲರೂ, ನನ್ನ ದೀನಾವಸ್ಥೆಯನ್ನು ನೋಡಿದರು. ಕೂಡಲೆ ಹಡಗಿನ ಯೆಜಮಾನನು ನನ್ನಬಳಿಗೊಂದು ದೋಣಿಯನ್ನು ಕಳುಹಿಸಿದನು. ನಾನು ಆ ದೋಣಿಯೆಮುಖಾಲಕವಾಗಿ ಹಡಗನ್ನು ಸೇರಿದಕೂಡಲೆ, ಅಲ್ಲಿನವರೆಲ್ಲರೂ, ನನ್ನನ್ನು ಸುತ್ತಿಕೊಂಡು, ಈ ನಿರ್ಮಾನುಷಪ್ರದೇಶದಲ್ಲಿ ನೀನಿರಲು ಕಾರಣವೇನೆಂದು ಕೇಳಿದರು. ನಾನು ಇನ್ನುವರೆಗೂ, ಅನುಭವಿಸಿದ ದುರವಸ್ಥೆಗಳನ್ನು ಕ್ರಮವಾಗಿ ವಿವರಿಸಿ ಹೇಳಿದೆನು. ಬಳಿಕ ಅವರು, ಈ ಪ್ರಾಂತದಲ್ಲಿ ರಾಕ್ಷಸರ ಮತ್ತು ಸರ್ಪಗಳ ಕಾಟವ್ರುಂಟೆಂಬುದನ್ನು ಕೇಳಿದ್ದೆವೆಂದು, ಬಳಿಕ ನನಗೆ ಆಹಾರವನ್ನು ಕೊಟ್ಟರು. ನಾನು

ಸಂತೋಷದಿಂದ ಊಟವೂಡಿ, ಪಾನಕವನ್ನು ಕುಡಿದೆನು. ಹಡಗಿನ ಯೆಜಮಾನನು ನನ್ನಸ್ಥಿತಿಯನ್ನು ನೋಡಿ, ಸಹಿಸಲಾರದೆ ಹರಿದುಹೋಗಿದ್ದ ಬಟ್ಟೆಗಳನ್ನು ತೆಗೆದುಹಾಕಿಸಿ, ಬೇರೆ ವಸ್ತ್ರಗಳನ್ನು ಕೊಟ್ಟನು. ಅಲ್ಲಿಂದ ನಾವೆಲ್ಲರೂ, ಔಷಧಿಗಳು ಸಿಕ್ಕುವ ಮತ್ತು ವನಮೂಲಿಕೆಗಳಿರುವ, ಸಲಬಾದೆಂಬ ದ್ವೀಪವನ್ನುಸೇರಿ, ಅಲ್ಲಿ ತಂಗಿಕೊಂಡೆವು. ಆಗ ವರ್ತಕರೆಲ್ಲರೂ ತಂತಮ್ಮಸರಕುಗಳನ್ನು ಮಾರಿಕೊಳ್ಳುವುದಕ್ಕೆ ಹೋದರು. ಇಷ್ಟರಲ್ಲಿ ಹಡಗಿನಯೆಜಮಾನನು, ನನ್ನನ್ನುಕುರಿತು, ಅಯ್ಯಾ! ನನ್ನ ಬಳಿಯಲ್ಲಿ ಸತ್ತುಹೋದ ಒಬ್ಬಬ್ಬನೊಬ್ಬ ವರ್ತಕನ ಕೆಲವು ಮೂಟೆಗಳಿರುವುವು. ಅವುಗಳನ್ನು ಮಾರಿದರೆ ನನಗೆ ತರಗು ಸಿಕ್ಕುವುದೆಂದು ಹೇಳಿದನು. ಅದನ್ನುಕೇಳಿ ನಾನು ಹಿಂದೆ ನಡೆದುದನ್ನು ನೆನಪಿಗೆ ತಂದುಕೊಂಡು ಅಯ್ಯಾ! ಆ ಮೂಟೆಗಳನ್ನು ತೋರಿಸಿಂದೆನು. ಆತನು ಮೂಟೆಗಳನ್ನು ತೋರಿಸಿದನು. ಆದರೆ ಹಡಗಿನ ಗುಮಾಸ್ತನೂ, ಈ ಮೂಟೆಗಳನ್ನು ಯಾರಯೆಸರಿಗೆ ಬರೆದುಕೊಳ್ಳಬೇಕೆಂದು, ಕೇಳಲು ಯೆಜಮಾನನು, ಹಡಗು ನಡೆಸುತ್ತಿದ್ದವನಾದ ಸಿಂದುಬಾದನಯೆಸರಿನಲ್ಲಿ ಬರೆದುಕೋ ಎಂದು ಹೇಳಿದುದರಿಂದ, ನನ್ನ ಎರಡನೆ ಪ್ರಯಾಣದಲ್ಲಿ ನನ್ನನ್ನು ಆ ದ್ವೀಪದ ಬಳಿ ಬಿಟ್ಟುಬಂದ ಸರದಾರನೇ ಈತನೆಂದು ಗೊತ್ತುಮಾಡಿಕೊಂಡೆನು. ಆದರೆ ಆತನು ರೂಪದಲ್ಲಿ ಬಹಳವಾಗಿ ಬದಲಾಯಿಸಿದ್ದುದರಿಂದ, ಆತನೇ! ಎಂದು ಖಂಡಿತವಾಗಿ ನಿರ್ಧರಿಸಲಾರದೆ ಹೋದೆನು. ಆದರೆ ಹಡಗಿನ ಸರದಾರನು, ನನ್ನನ್ನು ಗುರುತು ಹಿಡಿಯಲಾರದೆ ಹೋದುದಕ್ಕಾಗಿ, ನಾನು ಆಶ್ಚರ್ಯಪಡದೆ, ಆತನನ್ನುಕುರಿತು, ಅಯ್ಯಾ! ಈ ಮೂಟೆಗಳು, ಸಿಂದುಬಾದು ನಾವಿಕನವುಗಳೇ ಎಂದು ಕೇಳಿದೆನು. ಅದಕ್ಕಾತನು, ಹೌದು, ಈ ಮೂಟೆಗಳು, ಬಾಗದಾದು ಪಟ್ಟಣದ ಸಿಂದುಬಾದುನಾವಿಕನವುಗಳು. ನಾನು ಆತನು ಪ್ರಯಾಣಮಾಡುತ್ತಾ ಬಂದು ದ್ವೀಪದಬಳಿಯಲ್ಲಿ ಹಡಗನ್ನು ನಿಲ್ಲಿಸಿದ್ದೆವು.

ಆದರೆ ಯಾವುದೋಕಾರಣದಿಂದ ಆತನು, ಬಂದ ವರ್ತಮಾನವನ್ನು ತಿಳಿಯದೆ ಹಡಗನ್ನು ಮುಂದೆ ನಡೆಸಿಕೊಂಡು ಹೋದೆವು. ನಾಲ್ಕು ಘಂಟೆಗಳಬಳಿಕ ನನಗೆ ಸಿಂದುಬಾದುನಾವಿಕನ ಜ್ಞಾಪಕಬಂದಿತು. ಆದರೆ ಹಿಂದಿನಗಾಳಿಯು, ಬಲವಾಗಿ ನಮ್ಮಹಡಗಿಗೆ ಬೀಸುತ್ತಾ ಇದ್ದುದರಿಂ

ಪ ಹಿಂದಿರುಗಿಸಲಾರದೆ ಹೋದೆವು. ಎಂದು ಹೇಳಲು, ಆತನನ್ನು ನೋಡಿ ನಾನು, ಅಯ್ಯೋ! ಹಾಗಾದರೆ ಸಿಂದುಬಾದನು, ಸತ್ತುಹೋದನೆಂದು, ಹೇಳುತ್ತೀಯ ಎನಲು, ಆತನು, ಹೌದು, ಅದಕ್ಕೇನು ಸಂದೇಹವೆಂದನು ಆಗ ನಾನು ಅಯ್ಯಾ! ಸರದಾರನೇ! ನನ್ನನ್ನು ನೋಡು, ನೀನು ತಪ್ಪಿಸಿ ಬಿಟ್ಟುಬಂದ ಸಿಂದುಬಾದನೆ ನಾನೆಂದು ಹೇಳಿದನು. ಆಗ ಆತನು ಒಪ್ಪಿ ಕೊಂಡು, ಸುಮ್ಮನಾದನು. ಇಷ್ಟರಲ್ಲಿ ಬೆಳಗಾದುದರಿಂದ ಷಹರಜಾದಿ ಕಥೆಯನ್ನು ನಿಲ್ಲಿಸಿ, ಬೆಳಗಿನಜಾವದಲ್ಲಿ ಪುನಃ ಹೇಳಲಾರಂಭಿಸಿದಳು.

೭೮ನೆಯ ರಾತ್ರಿ ಕಥೆ

ಬಳಿಕ ಸರದಾರನ, ನನ್ನನ್ನು ನೋಡಿ, ಅಯ್ಯಾ! ಹೇಳಲಾಗದ ದುರವಸ್ಥೆಯನ್ನು ಹೊಂದಿದ್ದ ನಿನ್ನನ್ನು ಪುನಃ ನಮ್ಮಬಳಿಗೆ ಕರೆದುತಂದು ಬಿಟ್ಟುದಕ್ಕಾಗಿ, ಭಗವಂತನನ್ನು ಬಹಳವಾಗಿ ಪ್ರಾರ್ಥಿಸುವೆನು. ಇಗೋ ನಿನ್ನ ಮೂಟೆಗಳೆಲ್ಲವೂ, ಇಲ್ಲಿರುವುವು. ಇವುಗಳನ್ನು ಭದ್ರವಾಗಿ ಕಾಪಾಡುತ್ತಾ ಇದ್ದು, ಪ್ರತಿರೇವಿನಲ್ಲೂ, ಹೆಚ್ಚು ಲಾಭಕ್ಕೆ, ವಾರುತ್ತಿದ್ದೆನೆಂದು ಹೇಳಿ, ಅದರಿಂದುಂಟಾದ ಲಾಭವನ್ನೂ ಸಹ ಕೊಟ್ಟನು. ನಾನು ಆತನುಮಾಡಿದ ಉಪಕಾರವನ್ನು ಬಹಳವಾಗಿಹೊಗಳಿ ಅವುಗಳನ್ನು ತೆಗೆದುಕೊಂಡು ವಂದಿಸಿದೆನು. ಬಳಿಕ ಅಲ್ಲಿಂದಹೊರಟು ಮತ್ತೊಂದು ದ್ವೀಪವನ್ನು ಸೇರಿದಮೇಲೆ ಲವಂಗವನ್ನೂ, ಲವಂಗಪಟ್ಟೆಯನ್ನು ಸ್ವಲ್ಪ ಸಂಗ್ರಹಿಸಿಕೊಂಡೆನು. ಅಲ್ಲಿಂದಮುಂದೆ ಬಂದು ಸಮುದ್ರದಲ್ಲಿ ನಾನಾವಿಧವಾದ ವಿಚಿತ್ರಗಳನ್ನು ನೋಡುತ್ತಾ ಬಾಲಸೂರಿಗೆಬಂದು, ನನ್ನ ಸರಕುಗಳೆಲ್ಲವನ್ನೂ ವಾರಿ, ಅತ್ಯಂತವಾದ ದ್ರವ್ಯವನ್ನು ಸಂಪಾದಿಸಿಕೊಂಡು, ಅಲ್ಲಿಂದ ಬಾಗಡಾದು ಪಟ್ಟಣವನ್ನು ಸೇರಿ, ಸಂತೋಷದಿಂದ ಕೆಲವುಕಾಲ ವಿಹರಿಸುತ್ತಿದ್ದು, ಅಲ್ಲಿಂದ ನಮ್ಮ ಭೂಮಿಕಾಮಿಗಳನ್ನು ಮೊದಲಿಗಿಂತಲೂ, ಹೆಚ್ಚಿಸಿ, ಸುಖದಿಂದಿರುತ್ತಿದ್ದೆನೆಂದು, ಹೇಳಿ ಆ ಕೂ

ಲಿಕಾರನಿಗೆ ಮತ್ತೊಂದು ನೂರುಸಿಕ್ವೆಸುಗಳ ಚೀಲವನ್ನುಕೊಟ್ಟು, ಎಲ್ಲ ರೂಭೋಜನವೂಡಿದವೀಲೆ, ಅವರವರವುನೆಗಳಿಗೆ ಕಳುಹಿಸಿ, ಹಿಂದುಬಾದ ನನ್ನು ನೋಡಿ: ನಾಳೆಯೆದಿನ ಸಭೆಗೆಬಂದರೆ ನಾಲ್ಕನೆಯ ಪ್ರಯಾಣದ ಕಥೆಯನ್ನು ಹೇಳುತ್ತೇನೆಂದು, ಹೇಳಿ ಕಳುಹಿಸಿದನು. ಮರುದಿನ ಹೆಳಗ್ಗೆ ಹೊತ್ತಿಗೆ ಸರಿಯಾಗಿ, ಸಭಿಕರೂ, ಕೂಲಿಕಾರನಾದ ಹಿಂದುಬಾದನೂ, ಬಂದು ಸೇರಿದರು. ಆಗ ಸಿಂದುಬಾದನು, ತನ್ನ ಸಭಿಕರನ್ನು ನೋಡಿ, ಹೀಗೆಂದು ಹೇಳಲಾರಂಭಿಸಿದನು.

ಸಿಂದುಬಾದ ನಾಲ್ಕನೆಯ ಪ್ರಯಾಣ.

ನಾನು ಮೂರನೆಯ ಪ್ರಯಾಣವನ್ನು ಮುಗಿಸಿ, ಮನೆಯನ್ನು ಸೇರಿದಮೇಲೆ, ನಾನು ಅನುಭವಿಸಿದಸೌಖ್ಯವೂ, ಉತ್ಸಾಹವೂ, ಆರೋಗ್ಯವೂ, ಕೂಡ ಪುನಹ ಸಮುದ್ರಪ್ರಯಾಣವನ್ನು ಮಾಡಬೇಕೆಂಬ ಕೋರಿಕೆಯನ್ನುಂಟುಮಾಡಲಿಲ್ಲ. ಆದರೆ ವಿಚಿತ್ರಕರಗಳಾದ ವದಾರ್ಥಗಳನ್ನು ಆಯಾಸ್ಥಳದಲ್ಲಿರುವಂತೆಯೆ, ನೋಡಿಕೊಂಡು ಬರಬೇಕೆಂಬ ಕುತೂಹಲ ಒಂದು, ನನ್ನನ್ನು ಬಹಳವಾಗಿ ಬಾಧಿಸಿದುದರಿಂದ, ನಾನು ಪ್ರಯಾಣ ಹೊರಡುವಸ್ಥಳಕ್ಕೆ ಬೇಕಾಗುವ ಸರಕುಗಳನ್ನು ಆಹಾರವದಾರ್ಥಗಳನ್ನು ಸಿದ್ಧಪಡಿಸಿಕೊಂಡು, ಬಾಗಡಾದುವಟ್ಟಣದಿಂದ ಹೊರಟು, ನಾನಾದೇಶಗಳನ್ನು ಸುತ್ತಿಕೊಂಡು, ಪರಷಿಯೆವಾದೇಶವನ್ನು ಸೇರಿ, ಅಲ್ಲಿ ಹಡಗನ್ನು ಹತ್ತಿದೆನು. ಅಲ್ಲಿಂದ ಹಡಗನ್ನು ನಡೆಸುತ್ತಾ ದಾರಿಯಲ್ಲಿ ಸಾಲಾಗಿ ದೊರಕಿದ ಅನೇಕಾನೇಕದ್ವೀಪಗಳಲ್ಲಿ ವ್ಯಾಪಾರ ಮಾಡಿಕೊಂಡು, ವ್ಯುಂದೆ ಬರುತ್ತಿರುವಾಗ ಮಹತ್ತರವಾದ ಗಾಳಿ ಬೀಸುತ್ತಿದ್ದುದರಿಂದ, ಸರದಾರನು ಬಾವುಟಗಳನ್ನು ಇಳಿಸಿ, ಹಡಗನ್ನುನಿಲ್ಲಿಸಿ, ಜನರ ಪ್ರಾಣಗಳನ್ನು ಕಾಪಾಡಬೇಕೆಂದು, ತನ್ನ ಕೈಲಾದಪ್ರಯತ್ನವನ್ನೆಲ್ಲಾ ಮಾಡಿದನು. ಆದರೂ ಅದು ನಿಷ್ಪ್ರಯೋಜನವಾಗಿ, ನಾನಾಜನರು ಪ್ರಾಣಗಳನ್ನು,

ಕಳೆದುಕೊಂಡರು. ಎಂದುಹೇಳಿ ಬೆಳಗಾದಕೂಡಲೆ ಕಥೆಯನ್ನು ನಿಲ್ಲಿಸಿ, ಷಹರಜಾದಿಯು, ಬೆಳಗಿನಜಾವದಲ್ಲಿ ಪುನಹ ಕಥೆಯನ್ನು ಹೇಳ ತೊಡ ಗಿದಳು.

೭೮ ನೆಯ ರಾತ್ರಿ ಕಥೆ.

ಹೀಗೆ ಸಮುದ್ರವಧ್ಯವಸ್ತಿ ಬಿದ್ದು, ಪ್ರಾಣವನ್ನು ಕಳೆದುಕೊ ಳ್ಳುತ್ತಿದ್ದ, ನನಗೂ ನನ್ನ ಸ್ನೇಹಿತರಿಗೂ, ತೇಲಾಡುವ ಒಂದು ಹಲಗೆ ದೊರಕಿತು. ಅದನ್ನು ಹಿಡಿದುಕೊಂಡು, ನಾವುಗಳೆಲ್ಲರೂ, ಒಂದು ದ್ವೀ ಪದಬಳಿಗೆ ಬಂದು ಸೇರಿದೆವು. ನಂತರ ಹಸಿವಿನಿಂದಲೂ, ಬಾಯಾರಿಕೆ ಯಿಂದಲೂ, ಬಳಲಿಹೋಗಿದ್ದ ನಮ್ಮಗಳನ್ನು ಆ ದ್ವೀಪದ ಫಲವೃಕ್ಷಗ ಳೂ, ತಿಳಿನೀರು ಸಹ ಉಪಚರಿಸಲಾಗಿ, ನಾವುಗಳು ಸ್ವಲ್ಪಮಟ್ಟಿಗೆ ಸು ಧಾರಿಸಿಕೊಂಡು, ರಾತ್ರಿಯೆಲ್ಲಾ ಪ್ರಯಾಸದಿಂದ, ಕಾಲವನ್ನು ಕಳೆದು, ಮುಂದೆ ಎಲ್ಲಿಹೋಗಬೇಕು ? ಏನುಮಾಡಬೇಕು ! ಎಂಬುದಾಗಿ ವ್ಯಸನಾ ಕ್ರಾಂತರಾಗಿ, ಸೂರ್ಯೋದಯವಾದುದನ್ನು ಕಂಡೆವು. ಬಳಿಕ ನಾವು, ಸಮುದ್ರತೀರವನ್ನುಬಿಟ್ಟು, ಆ ದ್ವೀಪದಲ್ಲಿ ಸ್ವಲ್ಪದೂರ ಪ್ರಯಾಣ ಮಾಡಲು, ಕೆಲವುಮನೆಗಳು ಕಾಣಬಂದವು. ಕೂಡಲೆ ಆ ಮನೆಗಳಲ್ಲಿ ವಾಸಮಾಡುತ್ತಿದ್ದ ಕಾಫರು ನಮ್ಮಬಳಿಗೆ ಬಂದು ಮಾತನಾಡಿ, ಕೆಲಕೆಲ ವರನ್ನು ಬೇರೆಬೇರೆಯಾಗಿ, ಕೆಲಕೆಲವರು ತಂತಮ್ಮ ಮನೆಗಳಿಗೆ ಕರೆದು ಕೊಂಡು ಹೋದರು. ಆದರೆ ಅದರಲ್ಲಿ ನಾನು ನನ್ನ ಸ್ನೇಹಿತರಲ್ಲಿ ಐವರು ಸೇರಿ, ಒಂದು ಗುಂಪಾಗಿ ಒಬ್ಬ ಕಾಫರನಮನೆಗೆ ಹೋದೆವು. ಆತನು ಕೆಲವು ಹಸುರೆಲೆಗಳನ್ನುತಂದು, ತಿನ್ನುವಂತೆ ನಮ್ಮೆವಾಡಿದನು. ನನ್ನ ಜೊತೆಯಲ್ಲಿದ್ದವರು, ಹೇಗಾದರೂ ಹಸಿವು ತೀರಿದರೆ ಸಾಕೆಂದು, ಅವುಗಳ ನ್ನು ಸ್ವಲ್ಪವೂ ಅನುಮಾನವಿಲ್ಲದೆ ತಿಂದುಬಿಟ್ಟರು. ಆದರೆ ನಾನುಮಾತ್ರ ಇದರಲ್ಲೇನೋ ಕೃತ್ರಿಮವಿರಬಹುದೆಂದು ತಿನ್ನದೆಹೋದುದರಿಂದ, ನನ್ನ ಸ್ನೇಹಿತರಿಗುಂಟಾದ ದುರವಸ್ಥೆಯು ನನಗುಂಟಾಗದೆ ನಾನು ಸ್ವಸ್ಥನಾ ಗಿದ್ದೆನು. ಅವರು ಆ ಹಸುರೆಲೆಗಳನ್ನು ತಿಂದ ಸ್ವಲ್ಪಹೊತ್ತಿಗೆ ಪ್ರಜ್ಞೆ ತಪ್ಪಿದವರಂತೆ ಕಾಣಿಸಿಕೊಂಡರಲ್ಲದೆ, ಅವರಾಡಿದ ಮಾತುಗಳೇ ಅವರಿಗೆ ಅರ್ಥವಾಗುತ್ತಿರಲಿಲ್ಲ.

ಇಂತಿರುತ್ತಿರುವಾಗ, ಆ ಕಾಫರರು, ಕೊಬ್ಬರಿ ಎಣ್ಣೆಯಿಂದ ಮಾಡಿದನ್ನವನ್ನು ತಂದುಕೊಡಲು, ಪ್ರಜ್ಞೆತಪ್ಪಿದವರೆಲ್ಲರೂ, ಸಂತೋಷದಿಂದ ಊಟವಮಾಡಿದರು. ನಾನಂದರೊ ವಿತವಾಗಿ ಸ್ವಲ್ಪ ಅನ್ನವನ್ನು ತಿಂದೆನು. ಆ ಕಾಫರರು ತಾವುಮಾಡುವ ಕ್ರೂರಕೃತ್ಯವು ನನಗೆ ತಿಳಿಯದಿರುವಂತೆ, ಪ್ರಜ್ಞಾಭಂಗವನ್ನುಂಟುಮಾಡುವುದಕ್ಕಾಗಿ, ಮೊಟ್ಟ ಮೊದಲು, ಹಸುರೆಲೆಗಳನ್ನು ತಂದುಕೊಟ್ಟಿದ್ದರು. ಆ ಜನರು ನರ ಮಾಂಸ ಭಕ್ಷಕರಾದುದರಿಂದ, ಆ ಅನ್ನವನ್ನು ತಿನ್ನಿಸಿ ನನಗೆ ಮತ್ತುಬಂದ ಮೇಲೆ, ನಮ್ಮನ್ನು ಕೊಯ್ದುತಿನ್ನಬೇಕೆಂದು, ಎರಡನೆಯೆಸಾರಿ ಅನ್ನವನ್ನು ತಂದಿತ್ತರು. ಹೀಗೆ ಅವರ ಮಾಯೆಜಾಲಕ್ಕೊಳಪಟ್ಟ ನನ್ನ ಸ್ನೇಹಿತರನ್ನು ಕೊಂದು ತಿಂದಬಳಿಕ ನನ್ನಬಳಿಗೆಬಂದು, ನೋಡಿ, ದುರ್ಬಲನಾಗಿಯೂ, ರೋಗಪೀಡಿತನಾಗಿಯೂ, ಇರುವನೆಂದು ಆಲಸ್ಯವಾಗಿದ್ದು ನಾನುಮಾಡುವ ಕಾರ್ಯವನ್ನು ನಿಧಾನವಾಗಿ ಯೋಚಿಸದೆ, ನನ್ನನ್ನು, ಸ್ವತಂತ್ರನಾಗಿ ಬಿಟ್ಟುದುದರಿಂದ, ನಾನುಹೊರಗೆ ಸಂಚರಿಸುವಾಗ ತಪ್ಪಿಸಿಕೊಂಡು, ಹೊರಟೆನು. ಆಗ ಬಬಾ ಬ್ಬನೊಬ್ಬ ಮುದುಕನು ನನ್ನನ್ನು ನೋಡಿ, ತಪ್ಪಿಸಿಕೊಂಡುಹೋಗುತ್ತನೆಂದು ತಿಳಿದು ಬಾ ! ಬಾ ! ಇಲ್ಲಿಬಾ! ಎಂದು ಗಟ್ಟಿಯಾಗಿ, ಕೂಗಿಕೊಂಡನು. ನಾನು ಆತನ ಮಾತನ್ನು ಕಿವಿಗೆ ಹಾಕಿಕೊಳ್ಳದೆ ಕಣ್ಣಿಗೆಕಾಣದಷ್ಟುದೂರ ಹೊರಟುಹೋದೆನು. ಆಗ ಆ ಮುದುಕನು ಹೊರತಾಗಿ, ಮತ್ತಾರು ಇರಲಿಲ್ಲ. ಈ ಕಾಫರರೆಲ್ಲರೂ, ಸಂಜೆಯಾಗುವವರೆಗೂ, ಹೊರಗಿದ್ದು ಬಳಿಕ ಮನೆಗೆಬರುವ ಪದ್ಧತಿಯುಳ್ಳವರಾಗಿದ್ದುದರಿಂದ, ನನ್ನನ್ನು ಹಿಂಬಾಲಿಸಿ ಬರಲಾರರೆಂದು, ತಿಳಿದು, ನಾನು ಬಹುದೂರದವರೆಗೂ, ಪ್ರಯಾಣಮಾಡಿ, ರಾತ್ರಿ ಒಂದುಕಡೆ ಅಡಗಿಕೊಂಡಿದ್ದು, ನನ್ನಬಳಿಯಲ್ಲಿದ್ದ ಆಹಾರವನ್ನುತಿಂದು, ಬೆಳಗಾವಕಾಶದಲಿ ಪ್ರಯಾಣಹೊರಟು, ಏಳುದಿನಗಳವರೆಗೂ, ದಾರಿಯನ್ನು ನಡೆಯುತ್ತಲೂ, ಕೊಬ್ಬರಿಯನ್ನುತಿಂದು, ನೀರನ್ನು ಕುಡಿಯುತ್ತಲೂ, ಬಂದು ಎಂಟನೆಯೆದಿನ ಬೆಳಗ್ಗೆ ಸಮುದ್ರತೀರವನ್ನುಸೇರಿ, ನನ್ನಂತೆ ಬಿಳಿಯವರ್ಣದವನಾಗಿ, ಮೀಸೆಯನ್ನು ಪುಡಿಮಾಡಿ, ಲೇಡ್ಯಮಾಡುತ್ತಿರುವ ಮನುಷ್ಯನನ್ನು ಕಂಡು, ಇದು ನನ್ನ ಭಾಗ್ಯದೇವತೆಯು, ಸೂಚಿಸಿದ ಶುಭಸಂದರ್ಶನವೆಂದು ಹೇಳಿಕೊಳ್ಳುತ್ತಾ ಸಂತೋಷದಿಂದಕೂಡಿ, ನಿರ್ಭಯದಿಂದಾತನ

ಖಳಗೆಬಂದೆನು. ಎಂದುಹೇಳಿ ಷಹರಜಾದಿಯು, ಬೆಳಗಾದುದರಿಂದ ಕಥೆಯೆನ್ನು ನಿಲ್ಲಿಸಿ, ಮರುದಿನ ಬೆಳಗಿನಜಾವದಲ್ಲಿ ಹೇಳಲಾರಂಭಿಸಿದಳು.

೪೦ನೆಯ ರಾತ್ರಿಕಥೆ.

ಸಿಂದುಬಾದನು ತನ್ನ ಸಖಿಕರನ್ನುಕುರಿತು, ಹೀಗೆಂದು ಹೇಳಿದನು. ನಾನು ಅಮೆಣಸಿನ ಲೇಹ್ಯವನ್ನು ಮಾಡುತ್ತಿದ್ದ ಜನರನ್ನು ನೋಡಿದಕೂಡಲೆ, ಅವರೂ ನನ್ನನ್ನುನೋಡಿ, ಒಡಿಬಂದು ನೀನು ಯಾರು ? ಎಂಲ್ಲಿದಬಂದೆ ? ಎಂದು ಅರಬೀಭಾಷೆಯಿಂದಲೆ, ಮಾತನಾಡಿಸಲು, ಅವರನ್ನುನೋಡಿ, ನಾನು ಸಂತೋಷಚಿತ್ತನಾಗಿ ನಾನು ಕಾಫರರ ಗೃಹದಲ್ಲಿ ಸಿಕ್ಕಿಹೋಗಿದ್ದ ಚರಿತೆಯೆನ್ನು ಹೇಳಿದೆನು. ಅದಕ್ಕವರು, ಅಯ್ಯೋ ಆ ಕಾಫರರು, ಮನುಷ್ಯರನ್ನು ತಿನ್ನುತಕ್ಕವರಲ್ಲಾ ! ಅವರಿಂದ ಹೇಗೆ ತಪ್ಪಿಸಿಕೊಂಡು ಬಂದೆ ಎಂದು ಕೇಳಿದರು ಆದುದರಿಂದ ನಾನು ಆ ಕಥೆಯೆಲ್ಲವನ್ನು ಸವಿಸ್ತಾರವಾಗಿ ಹೇಳಲು, ಅವರೆಲ್ಲರೂ ಆಶ್ಚರ್ಯಯುಕ್ತರಾದರು. ಬಳಿಕ ಆ ಜನರು ಮೆಣಸಿನ ಲೇಹ್ಯವನ್ನು ಮಾಡುವವರೆಗೂ, ಸುಮ್ಮನೆ ಮಾತನಾಡುತ್ತಾ ಇದ್ದು, ಅವರೊಡನೆ ಹಡಗನ್ನುಹತ್ತಿ ಅವರು ಯಾವಸ್ಥಳದಿಂದ ಬಂದಿದ್ದರೋ, ಆ ದ್ವೀಪಕ್ಕೆ ನನ್ನನ್ನು ಕರೆಯುಕೊಂಡು ಹೋಗಿ, ತಮ್ಮರಾಜನಬಳಿಯಲ್ಲಿ ನನ್ನನ್ನು ಬಿಟ್ಟರು. ಆತನು ಬಹಳ ದಯಾಳುವಾದುದರಿಂದ, ನನ್ನ ಚರಿತೆಯೆನ್ನೆಲ್ಲಾ ಕೇಳಿ, ಕನಿಕರದಿಂದ ಈತನಿಗೆ ಜೀಕಾದುದನ್ನು ಕೊಟ್ಟು ಸಂರಕ್ಷಿಸಿ, ಎಂದು ತನ್ನಮಂತ್ರಿಗಳಿಗೆ ಆಜ್ಞಾಪಿಸಿದನು. ಆದೇಶದಲ್ಲಿ ವ್ಯಾಪಾರಸ್ಥರು ಅನೇಕರಿದ್ದರು. ಆವರೆ ಅಲ್ಲಿನಜನರು ತುಂಬ ಗೌರವಶಾಲಿಗಳು. ರಾಜಧಾನಿಯೆಯು, ವಿಸ್ತಾರವಾಗಿಯೂ, ಹಡಗಿನವ್ಯಾಪಾರಕ್ಕೆ ಅನುಕೂಲವಾದ ಸ್ಥಳವಾಗಿಯೂ, ಇದ್ದಿತು. ಅಲ್ಲಿಯ ದಯಾಳುವಾದ ಆ ರಾಜನಿಗೆ ನನ್ನಲ್ಲಿ ಅತ್ಯಂತ ವಿಶ್ವಾಸವಿದ್ದುದರಿಂದ, ಜನರೆಲ್ಲರೂ ನನ್ನನ್ನು ಗೌರವದಿಂದ ನೋಡುತ್ತಿದ್ದರಲ್ಲದೆ, ನಾನು ಸ್ವಲ್ಪದಿನಗಳಲ್ಲಿ ಸ್ವದೇಶಸ್ಥನಂತೆ ಭಾಸಿಸಲ್ಪಡುತ್ತಿದ್ದೆನು. ಆದರೆ ನಾನು ಆ ರಾಜ್ಯದಲ್ಲಿ ಬಹು ವಿಚಿತ್ರವಾದ ಒಂದು ವಿಷಯವನ್ನು ನೋಡಿದೆನು. ಅದೇನೆಂದರೆ ಅಲ್ಲಿರುವ ಸರ್ವರೂ, ಕುದುರೆಗಳಿಗೆ ಜೀನನ್ನಾಗಲೀ, ತಡಿಯನ್ನಾಗಲಿ, ಹಾಕದೆ ಬರಿಯಮೈನಿನಮೇಲೆ,

ಸವಾರಿಮಾಡುತ್ತಿದ್ದರು. ನಾನು ರಾಜನನ್ನುಕುರಿತು, ಇದೇನಾಶ್ಚರ್ಯ ಕುದುರೆಯಮೇಲೆ ಹೀಗೆ ಸವಾರಿಮಾಡುತ್ತಾರಲ್ಲಾ ! ಎಂದು ಕೇಳಿದೆನು. ಆಗ ರಾಜನು ನನ್ನರಾಜ್ಯದಲ್ಲಿ ಯಾರಿಗೂ ತಿಳಿಯದಿರುವ ಸಂಗತಿಗಳನ್ನು ಕುರಿತು, ಪ್ರಶ್ನೆಮಾಡುತ್ತೀಯಾ ? ಎಂದು ರಾಜನು ಕೇಳಿದನು.

ಬಳಿಕ ನಾನು ಬಡಗಿಯ ಹತ್ತಿರಕ್ಕೆ ಹೋಗಿ, ಮಾದರಿಯನ್ನು ಕೊಟ್ಟು, ತೆಳುವಾದ ಮರದಿಂದ ಹೂಕೆಯಮರವನ್ನು ಮಾಡಿಸಿಕೊಂಡು ಬಂದು,ಅದನ್ನು ಚರ್ಮಾರನಬಳಿಗೆ ತೆಗೆದುಕೊಂಡುಹೋಗಿ, ಅದರಮೇಲೆಚರ್ಮವನ್ನು ಹಾಕಿಸಿ, ಹೊಲಿಸಿ ನಂತರ ಜರತಾರಿಕೆಲಸವನ್ನು ನಾನೇಮಾಡಿ, ಸುಂದರವಾದ ಜೀನನ್ನು ತೆಗೆದುಕೊಂಡುಹೋಗಿ, ರಾಜನಿಗೆಕೊಟ್ಟೆನು. ಆತನು ಅದನ್ನುಕುದುರೆಗೆಬಿಗಿದು ಸವಾರಿಮಾಡಿ, ಸಂತೋಷವನ್ನು ಹೊಂದಿ, ನನ್ನನ್ನು ಬಹಳವಾಗಿ ಹೊಗಳಿದನು. ಬಳಿಕ ನಾನು ಅದರಂತೆ ಇರುವ ಅನೇಕವಾದ ಜೀನುಗಳನ್ನು ಮಾಡಿಸಿ, ಅಲ್ಲಿನ ದೊಡ್ಡಮನುಷ್ಯರಿಗೆಲ್ಲಾ ಕೊಟ್ಟೆನು. ಇದರಿಂದ ನನಗೆ ಗೌರವವೂ ಕೀರ್ತಿಯೂ, ಸಹವೂ ಮೊದಲಿಗಿಂತಲೂ, ಅಧಿಕವಾಯಿತು. ಹೀಗಿರುವಾಗ ಆ ರಾಜನನ್ನು ನಾನು ಎಡೆಬಿಡದೆ, ಆಶ್ರಯಿಸಿಕೊಂಡಿದ್ದುದರಿಂದ, ಆತನು ಸಂತೃಪ್ತನಾಗಿ ಒಂದಾನೊಂದುದಿನ ನನ್ನನ್ನುಕುರಿತು, ಅಯ್ಯಾ ! ಸಿಂದುಬಾದನೇ ! ನಾನು ನಿನ್ನನ್ನು ಅಗಲಿ ಕ್ಷಣಕಾಲವಾದರೂ ಇರಲಾರೆನು. ಆದುದರಿಂದ ನಿನ್ನನ್ನು ಒಂದು ವಿಷಯವನ್ನುಮಾತ್ರ ಕೇಳಬೇಕೆಂದಿರುವೆನು. ಅದೇನೆಂದರೆ ನೀನು ಇಲ್ಲಿಂದ ನಿನ್ನರಾಜ್ಯಕ್ಕೆಹೋಗುವ ಯೋಚನೆಯನ್ನು ಮರೆತುಬಿಡಬೇಕು. ಆದುದರಿಂದ ಈ ಊರಿನಲ್ಲಿರುವ ಒಬ್ಬ ಸುಂದರೀಮಣಿಯನ್ನು ಮದುವೆಮಾಡಿಕೊಂಡು, ಸುಖವಾಗಿಲ್ಲಿಯೆ ಇರಬೇಕೆಂದು, ಬೇಡಿಕೊಳ್ಳುವೆನೆಂದನು.

ನಾನು ರಾಜನಮಾತಿಗೆ ಪ್ರತ್ಯುತ್ತರವನ್ನು ಹೇಳಲಾರದೆ ಸುಮ್ಮನಿದ್ದುದರಿಂದ ಆತನು ತನ್ನ ಸಂಸ್ಥಾನದಲ್ಲಿನ್ನಾ ಅತ್ಯಂತ ಸುಂದರಿಯಾಗಿಯೂ, ಅದಕ್ಕೆ ತಕ್ಕಂತೆ ಸುಗುಣಗಳುಳ್ಳವಳಾಗಿಯೂ, ಧನವಂತಳಾಗಿಯೂ, ಇದ್ದ ಒಬ್ಬಾನೊಬ್ಬ ಯುವತಿಯನ್ನು ವಿವಾಹಮಾಡಿಸಿದನು. ನಾನು ಆಕೆಯೊಡನೆ ಮಹದಾನಂದವನ್ನನುಭವಿಸುತ್ತಿದ್ದರೂ, ನ

ನ್ನ ಮನಸ್ಸು ಸಮಾಧಾನಸ್ಥಿತಿಯಲ್ಲಿಲ್ಲದುದರಿಂದ, ನಾನು ಹೇಗಾದರೂ, ತಪ್ಪಿಸಿಕೊಂಡು ಬಾಗದಾದಿಗೆ, ಹೊರಟುಬರಬೇಕೆಂದಿದ್ದೆನು. ಈ ಕಾಲದಲ್ಲಿ ನಾನಿಂತಹ ಸುಖವನ್ನನುಭವಿಸುತ್ತಿದ್ದರೂ, ಆಗ ನಾನನುಭವಿಸಿದ ಪಿನೋದಗಳನ್ನು ಮರೆಯದೆ, ಜ್ಞಾಪಕದಲ್ಲಿಟ್ಟುಕೊಂಡಿರುವೆನು. ನಾನು ಹೀಗೆ ಯೋಚಿಸುತ್ತಿರುವಾಗ, ನನ್ನನೆರೆಯಲ್ಲಿ ವಾಸಮಾಡುತ್ತಿದ್ದ, ಸ್ನೇಹಿತನ ಹೆಂಡತಿಯು, ದೇಹದಲ್ಲಿ ಸ್ವಸ್ಥನಿಲ್ಲದೆ ಸತ್ತುಹೋದಳು. ಆತನು ಅತ್ಯಂತವಾದ ದುಃಖಸಾಗರದಲ್ಲಿ ಮುಳುಗಿ ಹೋಗಿದ್ದನು. ನಾನು ಆತನನ್ನು ಸಮಾಧಾನಮಾಡುವುದಕ್ಕಾಗಿ, ಹೋಗಿ ಅಯ್ಯಾ! ಭಗವಂತನು ನಿನಗೆ ದೀರ್ಘಾಯುರಾರೋಗ್ಯಗಳನ್ನುಂಟುಮಾಡಲಿ, ಎಂದು ಹೇಳಿದೆನು. ಆತನು ಅಯ್ಯೋ! ನಾನು ಇನ್ನೊಂದುಕ್ಷಣದಲ್ಲಿ ಪ್ರಾಣವನ್ನು ಕಳೆದುಕೊಳ್ಳಗೇಕಾಗಿರುವುದು. ಹೀಗಿರುವಲ್ಲಿ ನೀನು ಹೇಳಿದಸುಖವು ನನಗೆ ಹೇಗೆ ಉಂಟಾಗುವುದು ಎಂದನು. ಅದಕ್ಕೆ ನಾನು ನೀನು ಹಾಗೆ ಎಣಿಸಬೇಡ. ನಾನು ಇನ್ನು ಬಹುದಿನಗಳವರಿಗೆ ನಿನ್ನ ಸ್ನೇಹದಲ್ಲಿರಬೇಕೆಂಕೆಂದು ಭಗವಂತನನ್ನು ಬೇಡಿಕೊಳ್ಳುತ್ತಿರುವೆನೆಂದು, ಹೇಳಲು, ಅತನು, ಅಯ್ಯಾ! ನೀನು ನನ್ನನ್ನು ನೋಡಿ, ದೀರ್ಘಾಯುಷ್ಮಂತನಾಗೆಂದು, ಹರಸಿದಂತೆ, ನನಗೆಂದಿಗೂ, ಉಂಟಾಗದು.

ಅದು ಹೇಗೆನ್ನುವಿಯೋ, ನನ್ನ ಹೆಂಡತಿಯಸಂಗಡ ನನ್ನನ್ನು ಇನ್ನು ಸ್ವಲ್ಪಹೊತ್ತಿಗೆ ಸಮಾಧಿಯೆಲ್ಲಿ ಹೂಳಿಬಿಡುವರು. ಏತಕ್ಕೆಂದರೆ ಹೆಂಡತಿಯು, ಬದುಕಿರುವಾಗ ಗಂಡನು ಸತ್ತುಹೋದರೆ ಗಂಡನ ಶವದೊಂದಿಗೆ ಹೆಂಡತಿಯೆನ್ನು ಗಂಡನು ಬದುಕಿರುವಾಗ ಹೆಂಡತಿಸತ್ತರೆ, ಹೆಂಡತಿಯ ಶವದೊಡನೆ ಗಂಡನನ್ನೂ, ಹೂಳಿಬಿಡುವ ವಾಡಿಕೆಯೆನ್ನು, ನಮ್ಮ ಪೂರ್ವಿಕರೆಲ್ಲರೂ, ಆಚರಿಸುತ್ತಿರುವುರು. ಈ ಪದ್ಧತಿಯು ನಮ್ಮದೇ ಶವಾಡಿಕೆಯಾಗಿ, ನಡೆದುಬರುತ್ತಾ ಇದೆ. ಆದುದರಿಂದ ಸರ್ವರೂ ಈವಿಧಿಗೆ ಒಳಪಡಬೇಕಾಗಿರುವುದೇ ಹೊರತು, ತಪ್ಪಿಸಿಕೊಳ್ಳುವುದಕ್ಕೆ ಯಾರಿಂದಲೂ, ಆಗದು ಎಂದು ಹೇಳಿದನು. ಕೂಡಲೆ ಆತನ ಬಂಧುಮಿತ್ರರೆಲ್ಲರೂ ಬಂದು ಶವವನ್ನು ಉತ್ತಮವಾದ ವಸ್ತ್ರಗಳಿಂದ ವಿವಾಹದಿನದಲ್ಲಲಂಕರಿಸುವಂತೆ, ಅಲಂಕಾರಮಾಡಿ, ಅದನ್ನು ಹಲಗೆಯಮೇಲಿಟ್ಟುಕೊಂಡು ಸ್ಮ

ಶಾನಕ್ಕೆ ತೆಗೆದುಕೊಂಡು ಹೋಗುವುದಕ್ಕಾಗಿ, ಹೊರಟರು. ಆ ಜನಗಳ ಗುಂಪಿನಲ್ಲಿ ಗಂಡನೂಸಹ ಶವವನ್ನು ಹಿಂಬಾಲಿಸುತ್ತಾ ಬಂದನು. ಅವರೆಲ್ಲರೂ, ಹೊರಟು ಕಾಡಿನಲ್ಲಿ ಒಂದು ದೊಡ್ಡಗುಡ್ಡವನ್ನು ಹತ್ತಿಹೋದರು ಅಲ್ಲೊಂದು ಹಳ್ಳವಿದ್ದಿತು. ಅವರಬಾಗಿಲನ್ನು ತೆರೆದು, ಶವವನ್ನು ಒಳಕ್ಕೆ ತೆಗೆದುಕೊಂಡುಹೋದರು. ಅನಂತರದಲ್ಲಿ ಗಂಡನು ತನ್ನ ಬಂಧುವಿತ್ರರನ್ನೆಲ್ಲಾ ಆಲಿಂಗಿಸಿಕೊಂಡು, ಕಣ್ಣೀರನ್ನು ಸುರಿಸಿದನು. ಆ ಜನರು ಅವನಕೈಗೆ ಒಂದುಪೊಗೆಯೆಲ್ಲಿ ನೀರನ್ನು ಬಳು ರೊಟ್ಟಿಗಳನ್ನೂ ಕೊಟ್ಟು, ಆತನ ಹೆಂಡತಿಯನ್ನು ಇರಿಸಿದಕಡೆಯಲ್ಲಿ ಆತನನ್ನು ಇರುವಂತೆ ಹೇಳಿ, ಹೊರಗೆಬಂದು ಬಾಗಿಲನ್ನುಮುಚ್ಚಿ, ಶಂತಮ್ಮ ಮನೆಗಳಿಗೆ ಹೋದರು. ಆ ಪರ್ವತವಾದರೋ, ಒಹು ಉದ್ದವಾಗಿಸವುದ್ರವನ್ನು ಸೇರಿಕೊಂಡಿದ್ದಿತು. ಸಭಿಕರೇ! ಇಂತಹ ಕೂರಕೃತ್ಯವನ್ನು ನೋಡಿ, ವ್ಯಸನಪಟ್ಟವನು, ಆ ಗುಂಪಿನಲ್ಲಿ ನಾನೊಬ್ಬನೇ ಹೊರತು, ಮತ್ತಾರು ಇಲ್ಲ. ಇಂತಹ ಕಾರ್ಯವು, ಆ ಜನರಿಗೆ ಸರ್ವಸಾಧಾರಣವಾಗಿದ್ದುದರಿಂದ, ಎಲ್ಲರೂ ಸಂತೋಷಚಿತ್ತರಾಗಿಯೆ ಇದ್ದರು.

ಇಂತಹ ಆಶ್ಚರ್ಯಕರವಾದ ಮತ್ತು ದುಃಖಕರವಾದ ಸಂಗತಿಯೆನ್ನು ಕುರಿತು, ಸುಲ್ತಾನರಲ್ಲಿ ಪ್ರಾರ್ಥನಾಪೂರ್ವಕವಾಗಿ ಒಂದಾನೊಂದು ದಿನ ಆತನಬಳಿಗೆಹೋಗಿ, ಘನವಂತರೇ! ತಮ್ಮರಾಜ್ಯದಲ್ಲಿ ಸತ್ತವರೊಡನೆ ಸಂಯುದನರನ್ನು ಹೂಳಿಬಿಡುವ ವಿಚಿತ್ರಕರವಾದ ಕೂರವಾಡಿಕೆಯು ಇರುತ್ತಿರುವದಲ್ಲಾ! ಇದೇನು ಆಶ್ಚರ್ಯ! ಇದು ನ್ಯಾಯವೆನಾದುದೇ? ಎಂದು ಕೇಳಿದೆನು. ಆತನು ಅಯ್ಯಾ! ನಿಂದುಬಾದು, ನೀನು ಇಂತಹ ಆಶ್ಚರ್ಯಕರವಾದ ನಡವಳಿಕೆಯನ್ನು ಯಾವದೇಶದಲ್ಲಿಯೂ, ನೋಡಿಲಿಲ್ಲವೆಂದು ಹೇಳುತ್ತೀಯೆ! ನಮ್ಮದೇಶದಲ್ಲಾದರೂ, ಇದು ಸಾಮಾನ್ಯ ಶಾಸ್ತ್ರವಾಗಿರುವುದು. ನನ್ನ ಹೆಂಡತಿಯು, ಸತ್ತುಹೋದರೆ ನನ್ನನ್ನು, ಅವಳಸಂಗಡ ಹೂಳಿಬಿಡುವರಲ್ಲಾ! ಎಂದು ಹೇಳಿದನು. ಆಗ ನಾನುಸ್ವಾಮಿ! ಅನ್ಯದೇಶಸ್ಥರುಕೂಡ ಈ ವಿಧಿಯನ್ನು ಆಚರಿಸಬೇಕೆ? ಎಂದು ಕೇಳಿದೆನು. ಆತನು ನನ್ನ ಅಭಿಪ್ರಾಯವನ್ನು ಗ್ರಹಿಸಿ, ಹುಸುಗೆಯನ್ನು ಬೀರುತ್ತಾ ನಂದೇಹವಿಲ್ಲದೆ ಈ ದ್ವೀಪದಲ್ಲಿ ಮದುವೆಮಾಡಿಕೊಂಡವರೆಲ್ಲರೂ, ಈ ವಿಧಿಯನ್ನು ಅನುಸರಿಸಬೇಕೆಂದು ಹೇಳಲು, ನಾನು

ಅತ್ಯಂತನಾದ ದುಃಖವನ್ನು ಹೊಂದಿ, ನನ್ನಹೆಂಡತಿಯು, ಸತ್ತುಹೋದರೆ, ನನ್ನನ್ನೂ ಅವಳಜೊತೆಯಲ್ಲಿಯೇ ಹೂತುಬಿಡುವರಲ್ಲಾ! ಎಂದು ವ್ಯಸನಾಕ್ರಾಂತನಾಗಿ ಬಿದ್ದು ಚೀಗುವಿಯೊಗುತ್ತಾ, ಈ ತೊಂದರೆಯನ್ನು ನಿವಾರಣೆಮಾಡುವುದಕ್ಕಾಗಿ, ಸುಲೈಮಾನಿಂದ ಭಗವತ್ಸಹಾಯವನ್ನು, ಕೋರುತ್ತಾ, ನನ್ನ ಹೆಂಡತಿಯಬೇಡವೆಂದು ಅಲಸ್ಯವುಂಟಾಗಲಿಲ್ಲ. ನಾನು ಹೆದರಿ ನಡುಗುತ್ತಾ ಕೂಡಲನ್ನು ಕಳೆಯುತ್ತಿದ್ದೆನು. ಹೀಗಿರುವಲ್ಲಿ ನನಗೆ ಉಂಟಾಗತಕ್ಕ ಭಯವೆಲ್ಲವೂ ಒಟ್ಟಾಗಿ ಬಂದೇಸೇರಿ ಬಂದೊಡಗಿ ತುಂಬ ವ್ಯಸನವನ್ನು ತಂದೊಡ್ಡಿತು. ಇವರಿಂದ ನನ್ನಪ್ರಾಣವೇ ಹಾಳಾಗುವ ಹೊತ್ತುಬಂದಿತು. ಏನೆನ್ನುವಿರೊ, ನನ್ನಹೆಂಡತಿ ರೋಗಗ್ರಸ್ತಳಾಗಿ ಸತ್ತುಹೋದಳು. ಎಂದು ಹೇಳಿ ಷಹರಜಾದಿ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೮೧ ನೆಯ ರಾತ್ರಿ ಕಥೆ.

ಬಳಿಕ ಸಿಂದುಬಾದನು, ತನ್ನ ಸಖಿಕನ್ನುಕುರಿತು, ಹೇಳಿದುದೇನೆಂದರೆ, ಅಯ್ಯಾ! ಕೂಫಲೆ ರಾಜನು ಮೃತ್ಯುವಾಗಿ, ನನ್ನಮನೆಗೆ ಬಂದು ಸಂತೋಷದಿಂದಲೂ, ವಿಶ್ವಾಸದಿಂದಲೂ, ಪ್ರೇತಕಾರ್ಯವನ್ನುಮಾಡತೊಡಗಿ, ನನ್ನ ಹೆಂಡತಿಯು ಕಫನನ್ನು ಬಿಚ್ಚಿಸುಂದರವಾಗಿ ರಮಣೀಯವಾದ ವಸ್ತ್ರಾಭರಣಗಳಿಂದ ಸಿಂಗರಿಸಿ, ಹಲಗೆಯಮೇಲೆ ಮಲಗಿಸಿಕೊಂಡು, ಸ್ಮಶಾನಭೂಮಿಗೆ ತೆಗೆದುಕೊಂಡು ಹೊರಟರು. ನಾನಾದರೊ ದುಃಖನುಯವೆಂಬ ನಾಟಕದಲ್ಲಿಬರುವ ಸೂತ್ರಧಾರನಂತೆ, ಕಣ್ಣೀರನ್ನು ಸುರಿಸುತ್ತ, ಶವವನ್ನುಹಿಂಬಾಲಿಸಿದೆನು. ಆದರೆ ಮಧ್ಯಮಾರ್ಗದಲ್ಲಿ ನನ್ನ ಸಂಗಡ ಬರುತ್ತಿರುವ ಜನಗಳಮನಸ್ಸನ್ನು ಪರೀಕ್ಷಿಸುವೇಕೆಂದು, ಅವರುಗಳಿಗೆ ಸಾಷ್ಟಾಂಗಪ್ರಣಾಮವನ್ನು ಮಾಡಿ, ಅಯ್ಯಾ! ನಾನು ಅನ್ಯದೇಶಸ್ಥನು. ಇಂತಹ ಕಠಿಣವಾದ ಶಾಸ್ತ್ರವನ್ನು ಕಿನುಸರಿಸುವುದಕ್ಕೆ ಹೆದರತಕ್ಕವನು. ಅಲ್ಲದೆ ಸ್ವದೇಶದಲ್ಲಿ ವಾಸಮಾಡುತ್ತಿರುವ ಪಶ್ಚಿಮೇಷ್ಟತಕ್ರದಿಗಳನ್ನುಳ್ಳವನೆಂದು, ನೀವು ಖಂಡಿತವಾಗಿಯೂ ಹೇಳಬಲ್ಲಿರಿ, ಆದುದರಿಂದ ನೀವು ದಯೆಯೊಡಿ ನನ್ನನ್ನು ಬ್ರಾಹ್ಮಣಿಂದ ಕಾಪಾಡಬೇಕೆಂದು ಬೇಡಿಕೊಂಡೆನು. ಆದರೂ ಆದರಿಂದ ಯಾವಾನ್ಯಯೋಜನವೂ ಕಾಣಬರಲಿಲ್ಲ. ಅವ

ರವುದಸ್ಸೂ ಕೆರಗಲಿಲ್ಲ. ಆದುದರಿಂದ ಅವರು ತಮ್ಮ ಪ್ರದೇಶದವದ್ಧತಿಯಂತೆ, ನನ್ನನ್ನು ನನ್ನ ಹೆಂಡತಿಯನ್ನು ಸ್ಮಶಾನದಗೂಡಿನಲ್ಲಿರಿಸಿ, ನಮ್ಮಗಳಬಳಿಯಲ್ಲಿ ಒಂದು ಕುಡಿಕೆ ನೀರನ್ನೂ, ಏಳು ರೊಟ್ಟಿಗಳನ್ನೂ, ಇಟ್ಟು ಬಾಗಿಲನ್ನುಮುಚ್ಚಿಕೊಂಡು ಹೊರಟುಹೋದರು. ನಾನು ಆ ಬಿಲದಲ್ಲಿ ಸೇರಿಕೊಂಡಿರುವಾಗ ಮೇಲಿನಿಂದ ಸ್ವಲ್ಪಬೆಳಕು ಕಂಡುಬಂತು. ಅದರಿಂದಾಭೂತಾಳಗೃಹದ ಸ್ವಭಾವವನ್ನು ತಿಳಿದುಕೊಂಡೆನು. ಆ ಗೃಹವು ಅತ್ಯಂತವಿಶಾಲವಾಗಿಯೂ, ಉದ್ದವಾಗಿಯೂ, ಎಂಭತ್ತುಮಾರುದ್ದ ಆಳವುಳ್ಳದ್ದಾಗಿಯೂ, ಇದ್ದಿತು. ಆದರೆ ನನ್ನ ಎಡಬಲಭಾಗಗಳಲ್ಲಿ ಕಾಣಲ್ಪಡುತ್ತಿದ್ದ ಹೆಣಗಳಿಂದ ಹೊರಹೊರಡುತ್ತಿರುವ, ಅಸಹ್ಯಕರವಾದ ದುರ್ಗಂಧವು ಬಲವಾಗಿ ಬೀಸುತ್ತಿದ್ದಿತು.

ನಾನು ಆ ಗುಹೆಯೆನ್ನು ಸೇರಿದಕೂಡಲೆ, ನಾನಿದ್ದಸ್ಥಳವನ್ನು ಬಿಟ್ಟು, ದೂರವಾಗಿಕುಳಿತು, ಮುಖವನ್ನು ಹಿಡಿದುಕೊಂಡು, ಬೊರಲು ಬಿದ್ದು, ನನ್ನಲ್ಲಿನಾನು ಹೀಗೆಂದು ಯೋಚಿಸಿದೆನು. ಅಯ್ಯೋ ! ನಿರ್ಭಾಗ್ಯನಾದ ಸಿಂದುಬಾದನೇ ! ನೀನಿಂತಹ ದುರ್ಮರಣವನ್ನು ಹೊಂದಿ, ಸಾಯುವುದಕ್ಕೆ ನೀನೆಕಾರಣನಾದೆಯೆಲ್ಲಾ ! ಅದೃಷ್ಟಾನುಸಾರವಾಗಿ ದೊರೆತ ಐಶ್ವರ್ಯದಿಂದ ಸುಖವನ್ನು ಹೊಂದಲಾರದೆ ದುರಾಕೆಯಿಂದ ಈ ಸ್ಥಿತಿಯನ್ನು ಹೊಂದಿದೆಯೊ ! ಈದುರ್ಮರಣವನ್ನು ಹೊಂದುವುದಕ್ಕಿಂತ ಭಗವದಾಜ್ಞಾನುಸಾರವಾಗಿ, ಗಾಳಿಮಳೆಗಳಿಂದಲಾದರೂ, ಸತ್ತುಹೋಗದೆ ಇಂತಹ ದುರವಸ್ಥೆಯನ್ನು ಹೊಂದಿದೆಯೊ ! ಅಯ್ಯೋ ! ಹಾ ! ಅಕಟಕಟಾ ! ಅದೃಷ್ಟಹೀನ ! ನಿರ್ಭಾಗ್ಯಶಿಖಾಮಣಿ ! ನಿನ್ನನ್ನೇನಂಬಿಕೊಂಡಿದ್ದ ಹೆಂಡತಿಮಕ್ಕಳಿಗೆ ಮುಖವನ್ನುಕೂಡ ತೋರಿಸದೆ ಸಾಯುವಸ್ಥಿತಿಗೆ ಬಂದೆಯೊ ! ಎಂದು ಮೊರೆಯಿಟ್ಟುದರಿಂದ, ಪ್ರತಿಧ್ವನಿಮಾತ್ರ ಕೇಳಬಂದಿತೆಹೊರತು, ಮತ್ತಾವಪ್ರಯೋಜನವೂ ಉಂಟಾಗಲಿಲ್ಲ. ಆದುದರಿಂದ ನಾನು ಎದೆಯನ್ನು ಬಾಯಿಯೆನ್ನು ಬಡಿದುಕೊಂಡು ಅಳುತ್ತಾ ಸಾಯುವುದಕ್ಕಿಷ್ಟವಿಲ್ಲದೆ, ಕೈಲಾದಮಟ್ಟಿಗೂ, ನನ್ನ ಆಯುಸ್ಸನ್ನು ವೃದ್ಧಿಮಾಡಿಕೊಳ್ಳಬೇಕೆಂದು, ಮೆಲ್ಲಗೆ ತಲ್ಲಣಿಸುತ್ತಾಹೋಗಿ, ಆ ರೊಟ್ಟಿಯನ್ನು ನೀರನ್ನು ತೆಗೆದುಕೊಂಡು, ಬಂದು ಆಹಾರವನ್ನು ಮಾಡಿಕೊಂ

ಡು, ಕಾಲವನ್ನು ಕಳೆದೆನು. ಆದರೆ ಆ ಗುಹೆಯು ಬಹಳವಾಗಿ ಕತ್ತಲಾಗಿದ್ದರೂ, ನನ್ನಸ್ಥಳವನ್ನುಮಾತ್ರ ನಾನು ಕಂಡುಕೊಳ್ಳಬಹುದಾಗಿತ್ತು. ಅಲ್ಲದೆ ಮೊದಲಿಗಿಂತಲೂ, ಈಗ ವಿಶಾಲವಾಗಿ ಕಂಡುಬಂದಿತು. ಹೀಗಿರುವಲ್ಲಿ ನಾನು ಆ ರೊಟ್ಟಿಯಿಂದಲೂ, ನೀರಿನಿಂದಲೂ, ಜೀವನವೂಡುತಾ, ಅವುಗಳೂ ಮುಗಿದುಹೋದಮೇಲೆ, ಪ್ರಾಣವನ್ನು ಬಿಡುವುದಕ್ಕೆ ಸಿದ್ಧನಾಗಿದ್ದೆನು. ಇಂತೆಂದುಹೇಳಿ ಕ್ಷಹರಜಾದಿ ಬಳಿಗಾದಕೊಡಲೆ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನಜಾವದಲ್ಲಿ ಹೇಳಲಾರಂಭಿಸಿದಳು.

೮೨ನೆಯ ರಾತ್ರಿ ಕಥೆ.

ಸಿಂದುಬಾದನು ತನ್ನ ಸಖಿಕರನ್ನುಕುರಿತು, ಇಂತೆಂದು ಹೇಳಿದನು. ಬಳಿಕ ನನಗೆ ಮರಣವೆ ಗತಿಯೆಂದು, ತಿಳಿದುಕೊಂಡಿದ್ದೆನು. ಆದರೆ ಸ್ವಲ್ಪಹೊತ್ತಿಗೆ ಬಾಗಿಲನ್ನುತೆಗೆಯುವ ಶಬ್ದವುಕೇಳಬಂದಿತು, ಕೂಡಲೆ ಒಬ್ಬ ಪುರುಷನ ಶವವು ಇಳಿಸಲ್ಪಟ್ಟಿತು. ಮಾನವರು ತಮ್ಮ ಪ್ರಾಣಾಪತ್ತಿನಲ್ಲಿ ಕೈಲಾದ ಸಾಹಸವನ್ನೆಲ್ಲಾ ಮೂಡಿ ತೋರುವರಲ್ಲವೆ ? ಆಹಾ! ನಾನಾದರೊ, ನನ್ನಬಳಿಯಲ್ಲಿ ಬಿದ್ದು ಇದ್ದ ಒಂದಾನೊಂದು ಕಬ್ಬಿಣದ ಹಾರೆಯೆನ್ನು, ತೆಗೆದುಕೊಂಡು ಆ ಪುರುಷನ ಹೆಂಡತಿಯ ತಲೆಯಮೇಲೆ ಬಲವಾದ ಎರಡು ಏಟುಗಳನ್ನು ಹಾಕಿದೆನು. ಅದರಿಂದ ಅವಳು ಸತ್ತೇ ಹೋದಳು. ಅವಳಬಳಿಯಲ್ಲಿದ್ದ ರೊಟ್ಟಿಗಳನ್ನು ತೆಗೆದುಕೊಳ್ಳುವುದಕ್ಕಾಗಿ, ಇಂತಹ ಕ್ರೂರಕೃತ್ಯವನ್ನು ಮಾಡಬೇಕಾಯಿತು. ಪುನಹ ಮತ್ತೊಂದು ಶವವು, ಬಂದಕೂಡಲೆ ನಾನು ಮೊದಲಿನಂತೆಯೆ, ಮಾಡಿದುದರಿಂದ ಕೆಲವುದಿನಗಳ ಆಹಾರವು ನನಗೆ ದೊರೆಯಿತು. ಆದರೆ ಮತ್ತೊಂದುಶವವನ್ನುತಂದು ಆ ಗುಹೆಯೆಲ್ಲಿ ಇರಿಸಿದಾಗ ಆ ಸ್ಥಳದಲ್ಲಿ ಯಾವುದೋ ಒಂದು ಮೃಗವು, ಓಡಾಡುತ್ತಿರುವಂತೆಯೂ, ಅದನ್ನುನೋಡಿ, ಅಳುತ್ತಿರುವಂತೆಯೂ, ಧ್ವನಿಯೆನ್ನು ಕೇಳಿದವನಾದ ನಾನು, ಆ ಮೃಗವನ್ನು ಹಿಂದಟ್ಟಿಕೊಂಡು ಹೋಗುತ್ತಾ, ಒಂದಾನೊಂದು ಬೆಳಕು ನಕ್ಷತ್ರದಂತೆ, ಹೊಳೆಯುತ್ತಿರುವುದನ್ನು ಕಂಡೆನು. ಹಾಗೆ ಅದನ್ನು ಹಿಂಬಾಲಿಸಿ ನೋಡಹೋದೆನು. ಆ ಸ್ಥಳವು ಒಬ್ಬ ಮನುಷ್ಯನು ನುಗ್ಗಿಹೋಗಬಹುದಾದ ಒಂದಾನೊಂದು, ಪರ್ವತದ ಸಂದಿಯಾಗಿದ್ದಿತು. ಆದುದರಿಂದ ಸ್ವಲ್ಪ

ಹೊತ್ತು ಆ ಸ್ಥಳದಲ್ಲಿ ನಿಂತುಕೊಂಡು, ನನ್ನ ಬಳಲಿಕೆಯನ್ನು ತೀರಿಸಿಕೊಂಡು, ನಂತರ ಕಿಂಡಿಯನ್ನು ದೂರಿ ಹೊರಗೆಬಂದೆನು. ಆದರೆ ಅಗಾಧವಾದ ಸಮುದ್ರದಂತೆ ನನ್ನ ಕಣ್ಣಿಗೆ ಕಾಣಬಂದಿತು.

ಸಖಿಕರೇ ! ಅದನ್ನು ನೋಡಿದಕೂಡಲೇ, ನನಗೆಷ್ಟರಮಟ್ಟಿನ ಸುಖವೂ, ಆನಂದವೂ, ಧೈರ್ಯವೂ, ಉಂಟಾಗಿರಬಹುದೆಂಬುದನ್ನು ನೀವೇ ಊಹಿಸಿ ತಿಳಿದುಕೊಳ್ಳಬಹುದಾದುದರಿಂದ, ನಾನು ಹೇಳಬೇಕಾದ ಅಗತ್ಯವೇನೂ ಇಲ್ಲ. ಬಳಿಕ ಭ್ರಮೆಯೆ ! ಅಥವ ಸಹಜವಾದ ಸಮುದ್ರದ್ರವೊ, ಎಂಬನುವಾನವು, ನನಗೆ ತೋರಿಬಂದುದರಿಂದ, ನಾನು ಸ್ವಲ್ಪ ಹೊತ್ತು ಸುಮ್ಮನಿದ್ದು, ಭ್ರಮೆಯು ತೀರಿದಮೇಲೆ, ಸುತ್ತಲೂನೋಡಿ, ಅದು ನಿಜವಾದ ಸಮುದ್ರನೆಂದೂ, ನಾನು ಯಾವುದರ ಶಬ್ದವನ್ನುಕೇಳಿ ಹೊರಗೆಬಂದೆನೋ ! ಅದು ಸಮುದ್ರದಿಂದಬಂದು, ಆ ಸ್ಥಾನದಲ್ಲಿರುವ ಹೆಣಗಳನ್ನುತಿಂದು, ಜೀವಿಸುವ ಬಂದು ಮೃಗವಾಗಿತ್ತೆಂದೂ, ತಿಳಿದುಕೊಂಡೆನು. ನಾನು ಆಪರ್ವತವನ್ನು ಚೆನ್ನಾಗಿ ನಿದಾನಿಸಿ ನೋಡಿದೆನು. ಆದರೆ ಅದು ಸಮುದ್ರತೀರಕ್ಕೂ, ಆ ಪಟ್ಟಣಕ್ಕೂ, ಮಧ್ಯದಲ್ಲಿದ್ದಿತು. ಆದರೆ ಅಲ್ಲಿಂದ ಪಟ್ಟಣಕ್ಕೆಹೋಗುವುದಕ್ಕಾಗಲಿ, ಸಮುದ್ರತೀರಕ್ಕೆ ಬರುವುದಕ್ಕಾಗಲಿ, ಅವಕಾಶವಿಲ್ಲದಂತೆ, ದಟ್ಟವಾಗಿದ್ದಿತು. ನಿಕ್ಷೇಪರೂಪವಾಗಿಯೂ, ಕ್ಷೇಮಕರವಾಗಿಯೂ, ಇರುವ ಇಂತಹಸ್ಥಳಕ್ಕೆ ನನ್ನನ್ನು ಬರಮಾಡಿದುದಕ್ಕಾಗಿ, ನಾನು ಸಮುದ್ರತೀರದಲ್ಲಿ ನಿಂತು, ಭಗವಂತನನ್ನು ಸಾಷ್ಟಾಂಗನಮಸ್ಕಾರಪೂರ್ವಕವಾಗಿ, ವಂದಿಸಿ ಪುನಹ ಗುಹೆಯೊಳಕ್ಕೆ ಹೋಗಿ, ಅಲ್ಲಿಂದ ರೊಟ್ಟಿಗಳನ್ನೂ, ನೀರನ್ನೂ ತೆಗೆದುಕೊಂಡುಬಂದು, ಇತರ ದಿನಗಳಿಗಿಂತಲೂ, ಅಧಿಕವಾದಆನಂದದಿಂದ ಊಟಮಾಡಿದೆನು. ಬಳಿಕ ನಾನುಗುಹೆಯೆನ್ನುಸೇರಿ, ಹೆಣಗಳಿಗೆ ಅಲಂಕರಿಸಿರುವ ವಜ್ರ, ಮತ್ತು ಹವಳ, ಚಿನ್ನ, ಮೊದಲಾದ ಆಭರಣಗಳನ್ನು ತೆಗೆದುಕೊಂಡು, ಹಲಗೆಗಳಿಗೆ ಬಿಗಿದು ಕಟ್ಟಿರುವ, ಹಗ್ಗಗಳಿಂದ ಅವುಗಳನ್ನುಬಿಗಿದು ಕಟ್ಟಿ ಸಮುದ್ರತೀರವನ್ನುಸೇರಿ, ಪರ್ವತಾಪುರದಿಂದ ಯಾವುದಾದರೂ, ಹಡಗು, ಸಂಚರಿಸುತ್ತಾ ನನ್ನಬಳಿಗೆಬರಬಹುದೆಂದು, ನಿರೀಕ್ಷಿಸುತ್ತಿದ್ದೆನು ಬಳಿಕ ಎರಡು ಮೂರುದಿನಗಳಮೇಲೆ, ಆಗತಾನೇ ರೇವಿನಿಂದ ಹೊರಟು, ನನ್ನಬಳಿಯ ಮಾರ್ಗದಿಂದ ಸಮುದ್ರದಲ್ಲಿ ಪ್ರಯಾಣಮಾಡುತ್ತಿದ್ದ ಒಂದು

ಹುಡಗನನ್ನು ಕಂಡು ನನ್ನ ತಲೆಯ ಪಾಗನ್ನು ಬೀಸಿ, ಕೈಲಾದ ಮಟ್ಟಿಗೂ ಕೂಗಿಕೊಂಡೆನು. ಆಗ ಆ ಜನರಿಗೆ ನನ್ನ ಧ್ವನಿಯು ಕೇಳಬಂದ ಕೂಡಲೆ, ಹಡಗಿನ ಯಜಮಾನನು ನನ್ನನ್ನು ಹಡಗಿಗೆ ಬರಮಾಡಿಕೊಳ್ಳು ವುದಕ್ಕಾಗಿ, ದೋಣಿಯನ್ನು ಕಳುಹಿಸಿದನು. ಆ ದೋಣಿಯವರು ನನ್ನ ಬಳಿಗೆ ಬಂದು ಯಾವ ದುರದೃಷ್ಟದಿಂದ ಇಲ್ಲಿಗೆ ಬಂದೆ, ಎಂದು ಕೇಳಿದರು. ನಾನು ಅವರನ್ನು ಕುರಿತು, ಅಯ್ಯಾ! ನಾನು ಮೂರು ದಿನಗಳ ಮುಂಚೆ, ಈ ಸ್ಥಲದಲ್ಲಿ ಪ್ರಯಾಣಮಾಡುತ್ತಿದ್ದು ದೋಣಿಯು ಮುಳುಗಿ ಹೋದುದರಿಂದ, ಅದೃಷ್ಟಾಧೀನದಿಂದ ನನ್ನ ಸಾಮಾನುಗಳ ಸಮೇತನಾಗಿ, ಇಲ್ಲಿಗೆ ಬಂದೆನೆಂದು, ಹೇಳಿದೆನು. ಆದರೆ ಆ ಜನರು, ಯಾವ ಕಾರಣದಿಂದಲೊ, ಪುನಃ ನನ್ನನ್ನು ಕುರಿತು ಪ್ರಶ್ನೆಮಾಡಿದರು. ನಾನು ಹೇಳಿದುದನ್ನೇ ನಂಬಿನನ್ನನ್ನು ಸಾಮಾನುಗಳ ಸಹಿತವಾಗಿ ದೋಣಿಯಲ್ಲಿ ಕುಳ್ಳಿರಿಸಿಕೊಂಡು, ತಮ್ಮ ಹಡಗನ್ನು ಸೇರಿದರು. ನಾನು ಹಡಗನ್ನು ಹತ್ತಿದ ಕೂಡಲೆ, ಹಡಗಿನ ಸರದಾರನು ನನ್ನನ್ನು ಬಹಳ ವಿಶ್ವಾಸದಿಂದ ನೋಡಿ ನನಗೆ ಬೇಕಾದ ಅನುಕೂಲಗಳನ್ನೆಲ್ಲಾ ಈಡ್ಪಿಸಿ ಕೊಟ್ಟನು. ಬಳಿಕ ನನ್ನ ಕಥೆಯೆನ್ನು ಸಂಪೂರ್ಣವಾಗಿ ಕೇಳಿ, ಬಹಳ ವಾಗಿ ವೇಚಾಡಿಕೊಂಡು, ನಾನು ಆತನಿಗೆ ಬಹುಮಾನವಾಗಿ ಕೊಡುವು ದಕ್ಕೆ ಹೋದ ರತ್ನಗಳನ್ನು ಕೂಡ ತೆಗೆದುಕೊಳ್ಳದೆ! ಪುಣ್ಯವೆಯಿಂದ ನನ್ನನ್ನು ಮನ್ನಿಸಿದನು.

ಅನಂತರ ಅಲ್ಲಿಂದ ಪ್ರಯಾಣ ಹೊರಟು, ಬರುತ್ತಾ ಸುವರ್ಣದ್ವೀಪಕ್ಕೆ ಹತ್ತುದಿನಗಳ ಮತ್ತು ಕೆಲಬಾಕ್ ದ್ವೀಪಕ್ಕೆ ಆರು ದಿನಗಳ ಪ್ರಯಾಣವುಳ್ಳ ಬೀಲ್ಸ್ ಎಂಬ ದ್ವೀಪವನ್ನು ಸೇರಿದೆವು. ಅಲ್ಲಿಯಾದ ರೋ, ಸೀಸ, ಬೆತ್ತ, ಕರ್ಪೂರ, ಗೋದುವೆ ಮೊದಲಾದವುಗಳು, ಬಹಳ ವಾಗಿ ಇರುವುವು. ಕೇಲಾದ್ವೀಪದ ರಾಜನೂ, ಶೂರನಾದ ಧನಿಕನಾಗಿ ಯೂ, ಪರಾಕ್ರಮಿಯಾಗಿಯೂ, ಇರುವನು. ಎಲ್ಲಾ ಮೂರು ದಿನಗಳ ಪ್ರಯಾಣದ ಭೂವಿಸ್ತಾರವುಳ್ಳ ವಿಸ್ತಾರವಾದ ಭೂವಿಸ್ತಾರವುಳ್ಳ ಬೀಲ್ಸ್ ದ್ವೀಪವು ಆತನ ಅಧಿಕಾರಕ್ಕೊಳಪಟ್ಟಿದ್ದಿತು. ಆ ದ್ವೀಪದ ಜನರು ಅತ್ಯಂತ ಅನಾಗರಿಕರಾಗಿದ್ದರು. ನರಮಾಂಸವನ್ನು ತಿನ್ನುತ್ತಿದ್ದುದರಿಂದ, ನಾವು ಆ ದ್ವೀಪದಲ್ಲಿ ವ್ಯಾಪಾರವನ್ನು ಮುಗಿಸಿದ ಕೂಡಲೆ, ಸಮುದ್ರವ

ನ್ನು ಸೇರಿ ಮುಂದೆ ಅನೇಕವಾದ ದ್ವೀಪಗಳನ್ನು ಸೇರಿ, ಅಲ್ಲಿಯೂ ವ್ಯಾಪಾರ ಮಾಡಿದೆವು. ಈತೆರದಿಂದ ನಾವು ಅನೇಕಾನೇಕ ದ್ವೀಪಗಳಲ್ಲಿ ಸಂಚಾರಮಾಡಿ, ಯಥೇಚ್ಛವಾದ ದ್ರವ್ಯವನ್ನು ಸಂಪಾದಿಸಿಕೊಂಡು, ಕ್ಷೇಮವಾಗಿ ಬಾಗದಾದುಪಟ್ಟಣವನ್ನು ಸೇರಿದೆನು. ಬಳಿಕ ನನಗೆ ಉಂಟಾಗಿದ್ದ ನಾನಾತೊಂದರೆಗಳಿಂದ, ಕರೆತೇಲಿಸಿ ನನ್ನನ್ನು ಸುರಕ್ಷಿತವಾದ ಸ್ಥಲವನ್ನು ಸೇರಿಸಿದ ಭಗವಂತನಿಗೆ ವಂದನೆಗಳನ್ನಾಚರಿಸಿ, ಬಿಸ್ತಗಾರರಿಗೂ ಬಡವರಿಗೂ, ನಾನಾ ವಸ್ತ್ರಗಳನ್ನು ದಾನಮಾಡಿ. ಪುತ್ರಮಿತ್ರಬಾಂಧವರಿಂದೊಡಗೂಡಿ ಅತ್ಯಾನಂದ ಸುಖದಿಂದಿರುವೆನು, ಎಂದು ಸಿಂದುಬಾದನು ತನ್ನ ನಾಲ್ಕನೆಯ ಪ್ರಯಾಣದ ಚರಿತ್ರೆಯನ್ನು ಸಭಿಕರಿಗೆ ವಿವರಿಸಿ ಹೇಳಿದನು. ಅವರು ಮೊದಲಿನ ಮೂರುಯಾತ್ರೆಗಳಿಗಿಂತಲೂ, ಅತ್ಯಂತವಾದ ಆಶ್ಚರ್ಯವನ್ನು ವಿನೋದವನ್ನು ಉಂಟುಮಾಡುವ, ಈ ನಾಲ್ಕನೆ ಪ್ರಯಾಣವು ಬಹು ಕಷ್ಟಸಾಧ್ಯವಾದುದಾಗಿತ್ತೆಂದು, ಸಮ್ಮತಿಸಲು ಸಿಂದುಬಾದನು ಮೊದಲಿನಂತೆ ಕೂಲಿಕಾರನಿಗೆ ಒಂದುನೂರು ಸೆಕ್ವಿನ್ಸುಗಳನ್ನು ಕೊಡಿಸಿ, ಅಯ್ಯಾ ! ನೀನು ಎಂದಿನಂತೆ ನಾಳೆಯದಿನವೂ ಕೂಡ, ನಿನ್ನ ಮಿತ್ರರೊಂದಿಗೆ ನನ್ನ ಐದನೆ ಯಾತ್ರೆಯ ಚರಿತ್ರೆಯನ್ನು ಕೇಳುವುದಕ್ಕೆ ಬರಬೇಕೆಂದು ಪ್ರಾರ್ಥಿಸುತ್ತೇನೆನಲು, ಸಭಿಕರೂ ಕೂಲಿಯೆವನೂ, ಹೊರಟುಹೋದರು. ಮರುದಿನ ಬೆಳಿಗ್ಗೆ ಗೊತ್ತಾದ ಕಾಲಕ್ಕೆ ಅವರೆಲ್ಲರೂ ಬಂದು, ಸಂತೋಷದಾಯಕವಾದ ಭೋಜನವಾದ ಮೇಲೆ ಕುಳಿತುಕೊಂಡಿರುವುದನ್ನು ನೋಡಿ, ಸಿಂದುಬಾದನು ತನ್ನ ಐದನೆಯ ಪ್ರಯಾಣವನ್ನು ಹೇಳಲಾರಂಭಿಸಿದನು.

ಸಿಂದುಬಾದನ ಐದನೆಯ ಪ್ರಯಾಣ.

ಅಯ್ಯಾ ! ನಂತರ ನಾನು ಬಾಗದಾದು ಪಟ್ಟಣದಲ್ಲನುಭವಿಸಿದ, ಕೀರ್ತಿಯುಕ್ತವಾದ ಸುಖವು, ಮರಳಿ ಸಮುದ್ರವ್ಯಾಪಾರವನ್ನು ಮಾಡಬೇಕೆಂಬ ಕೋರಿಕೆಯನ್ನು ಹೆಚ್ಚುಮಾಡಿತೇ ಹೊರತು, ಸ್ವಲ್ಪವನ್ನಾದರೂ

ಕುಂದಿಸಲಿಲ್ಲ. ಆದುದರಿಂದ ಬೇಕಾದ ಸರಕುಗಳನ್ನು ತೆಗೆದುಕೊಂಡು, ಮೂಟೆಕಟ್ಟಿ ಅನುಕೂಲವಾದ ಒಂದು ರೇವನ್ನು ಸೇರಿದೆನು. ಆದರೆ ಇನ್ನು ಮುಂದೆ ಬೇರೆಯೊಬ್ಬ ಹಡಗಿನ ಯಜಮಾನನ ಅಧೀನಲ್ಲಿದ್ದುಕೊಂಡು ವ್ಯಾಪಾರಮಾಡುವುದು ಅಪಾಯಕರವೆಂದು ತಿಳಿದು ಸ್ವಂತವಾಗಿ ಒಂದು ಹಡಗನ್ನು ತಯಾರು ಮಾಡಿಸಿದೆನು. ಆ ಹಡಗು ತಯಾರಾಗುವ ವರಿಗೂ, ಆ ರೇವಿನಲ್ಲಿ ವಾಸಮಾಡಿಕೊಂಡಿದ್ದು, ನಂತರ ಅದಕ್ಕೆ ತಕ್ಕಷ್ಟು ಭಾರವು ನನ್ನಲ್ಲಿಲ್ಲದುದರಿಂದ, ನಾನಾದೇಶದ ವರ್ತಕರನ್ನು ಕರೆದುಕೊಂಡು, ಅವರ ಸಾಮಾನುಗಳನ್ನು ಹಡಗಿನಲ್ಲಿ ಭರ್ತಿಮಾಡಿಕೊಂಡು, ಮುಂದೆ ಹೊರಟೆನು. ಹೀಗೆ ಸಮುದ್ರದಲ್ಲಿ ಪ್ರಯಾಣಮಾಡುತ್ತಾ, ಒಂದಾನೊಂದು ನಿರ್ಜನುಷ್ಯ ಪ್ರದೇಶವಾದ ದ್ವೀಪದ ಬಳಿಯಲ್ಲಿ ಹಡಗನ್ನು ನಿಲ್ಲಿಸಿದೆನು. ಅಲ್ಲಿಂದ ಮೊದಲು ಹೇಳಿದಂತೆ ಭೌರಾಕಾರದ ರಾಕ್ಕಂಬ ಪಕ್ಷಿಯ ಮೊಟ್ಟೆಯೊಡೆದು, ಆಗತಾನೆ ಉರಿಯು ಹೊರಹೊರಬಿತು. ಆದುದರಿಂದ ಅವಕ್ಷಿ ಶಾಖದ ಕೊಕ್ಕು ಹೊರಗೆ ಕಾಣುತ್ತಾ ಇದ್ದಿತು. ಇತೆಂದು ಹೇಳಿ ಷಹರಜಾದಿಯು ಬೆಳಗಾದುದರಿಂದ ಕಥೆಯನ್ನು ನಿಲ್ಲಿಸಿ, ಬೆಳಗಿನಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೪೫ನೆಯ ರಾತ್ರಿ ಕಥೆ

ಸಿಂದುಬಾದನು ತನ್ನ ಐದನೆಯ ಪ್ರಯಾಣದ ಕಥೆಯನ್ನು ತನ್ನ ಸಭೆಯಲ್ಲಿರುವ ಜನಗಳಿಗೆ ಹೇಳಲಾರಂಭಿಸಿ, ಇಂತೆಂದನೆಂದು ಷಹರಜಾದಿಯು ಸುಲ್ತಾನರಿಗೆ ಕಥೆಯನ್ನು ಹೇಳತೊಡಗಿದಳು. ಬಳಿಕ ನನ್ನ ಹಡಗಿನಲ್ಲಿ ಪ್ರಯಾಣಮಾಡುತ್ತಿದ್ದ, ವರ್ತಕರಲ್ಲಿ ಕೆಲವರು ಆ ಪಕ್ಷಿಯ ಮೊಟ್ಟೆಯ ಬಳಿಗೆ ಹೋಗಿ, ಉಳಿದ ಮೊಟ್ಟೆಗಳನ್ನು ಹಾರೆಗಳಿಂದ ತೂತುಮಾಡಿ ಒಳಗಿರುವ ಮರಿಗಳನ್ನು ತೆಗೆದುಕೊಳ್ಳುತ್ತಾ ಇದ್ದರು. ನಾನು ಅವರನ್ನು ನೋಡಿ ಅಯ್ಯಾ ! ನೀವು ಹೀಗೆ ಮಾಡುವುದರಿಂದ ನಮಗೆಲ್ಲರಿಗೂ ಅತ್ಯಂತ ದುಃಖವು ಪ್ರಾಪ್ತಿಯಾಗುವುದು. ದಯೆಮಾಡಿ ಅದರ ತಂಟೆಗೆ ಹೋಗದಂತೆ ಸುಮ್ಮನಿರಬೇಕೆಂದು, ಬೇಡಿಕೊಂಡೆನು. ಆದರೂ ಅವರು ನಮ್ಮ ಮಾತನ್ನು ಕೇಳಲಿಲ್ಲ. ಅಷ್ಟರಲ್ಲಿ ಆಕಾಶದಲ್ಲಿ ಬಹು

ದೊಡ್ಡದಾದ ಕರಿಯ ಮೀಘದಂತೆ ಓಡಾಡುತ್ತಿರುವ ಎರಡು ಹಕ್ಕಿಗಳನ್ನು ಕಂಡು, ನಮ್ಮ ಹಡಗಿನ ಸರದಾರನು ಅಯ್ಯಾ ! ಇಗೋ ಆ ಮೊಟ್ಟೆಯ ತಾಯ್ತಂದೆಗಳು ಬರುತ್ತಿವೆ, ಜಾಗ್ರತೆಯಾಗಿ ಹಡಗನ್ನು ಹತ್ತಿರಿ ! ಬನ್ನಿ ! ಇಲ್ಲವಾದರೆ ತುಂಬ ಭಯಂಕರವಾದ ಅನರ್ಥಕ್ಕೆ ಗುರಿಯಾಗುವಿರಿ ಎಂದು ಹೇಳಿದನು. ಕೂಡಲೆ ನಾವೈಗಳೆಲ್ಲರೂ ಹಡಗು ಹತ್ತಿರಿ ಬಾವುಟಗಳನ್ನು ಎತ್ತಿಕಟ್ಟಿ, ಸಮುದ್ರದಲ್ಲಿ ಬಿಟ್ಟಿವು. ಇಷ್ಟರಲ್ಲಿ ಆ ಎರಡು ಹಕ್ಕಿಗಳೂ, ಭಯಂಕರವಾದ ಧ್ವನಿಯಿಂದ ಆ ಸ್ಥಳಕ್ಕೆ ಬಂದು ಮೊಟ್ಟೆಗಳೆಲ್ಲಾಡದೆ ಹೋಗಿರುವುದನ್ನು ಮರಿಗಳಿಲ್ಲದಿರುವುದನ್ನು ಕಂಡು, ಮೊದಲಿಗಿಂತಲೂ, ಗಟ್ಟಿಯಾಗಿಯೂ, ಭಯಂಕರವಾಗಿಯೂ ಕೂಗುತ್ತ, ನಮ್ಮ ಮರಿಗಳನ್ನು ಹಾಳುಮಾಡಿದವರಿಗೆ ತಕ್ಕ ಶಿಕ್ಷೆಯನ್ನು ಮಾಡಬೇಕೆಂದು, ಅವುಗಳು ಆಕಾಶಕ್ಕೆ ಹಾರಿ, ತಾವು ಹೊಡಲಿದ್ದ ಸ್ಥಳವನ್ನು ನೋಡಿದ ಬಳಿಕ ಸ್ವಲ್ಪ ಹೊತ್ತು ಕಣ್ಣಿಗೆ ಕಾಣಿಸದೆ ಹೋದವು. ಆದುದರಿಂದ ನಮ್ಮ ಭೈಲಾದಮಟ್ಟಿಗೂ ಜಾಗ್ರತೆಯಾಗಿ ಹಡಗನ್ನು ಸಾಗಿಸಿಕೊಂಡು ಹೊರಟಿವು. ಆದರೆ ಪಕ್ಷಿಗಳೆರಡು ಬಂದೆಯಂತಿರುವ, ದೊಡ್ಡದಾದ ಕಲ್ಲುಗಳನ್ನು ತಮ್ಮ ಕಾಲುಗಳಲ್ಲಿರಿಸಿಕೊಂಡು ಬಂದು, ಬಂದು ಹಕ್ಕಿಯೆಯು ಅದನ್ನು ನಮ್ಮ ಹಡಗಿಗೆ ಸರಿಯಾಗಿ ಹಾಕಿತು. ಆದರೆ ಹಡಗನ್ನು ನಡೆಸತಕ್ಕವನ ಬುದ್ಧಿವಂತಿಕೆಯಿಂದ ಅದು ನಮ್ಮ ಹಡಗಿಗೆ ತಾಕದೆ, ಅದರ ಬಳಿಕ್ಕಿದ್ದಲ್ಲಿ ಬಿದ್ದು ಸಮುದ್ರದಲ್ಲಿ ಮುಳುಗಿ ಹೋದಕೂಡಲೆ, ನೀರುಬಿಕ್ಕುಗಳು ಬಂದು ತೊಂದರೆಮಾಡತೊಡಗಿದವು. ಆದರೆ ಮತ್ತೊಂದು ಪಕ್ಷಿಯು ಹಾಕಿದ ಕಲ್ಲಾದರೊ, ಹಡಗಿನ ಮಧ್ಯದಲ್ಲಿದ್ದ ಪ್ರಯಾಣಿಕರಲ್ಲಿ ಕೆಲವರನ್ನು ಕೊಂದುಬಿಲ್ಲದೆ, ನಮ್ಮ ಹಡಗನ್ನು ಚೂರು ಚೂರುಮಾಡಿತು. ಆದುದರಿಂದೆಲ್ಲರೂ, ನೀರಿನಲ್ಲಿ ಬಿದ್ದು, ಸಾಯುವಕಾಲ ಬಂದಿಹೆದು ನೀರಿನಲ್ಲಿ ಮುಳುಗಿ ತೇಲಾಡುತ್ತಾ ಇದ್ದರು. ಆದರೆ ಅದೃಷ್ಟಪೂರ್ವಕವಾಗಿಯೂ, ಅಥವ ಭಗವದನುಗ್ರಹದಿಂದಲೋ ನಾನು ತೇಲಾಡುತ್ತಿದ್ದ ಒಂದು ಹಲಗೆಯನ್ನು ಕಂಡು, ಅದನ್ನು ಬಿಗಿದಿ ಗಟ್ಟಿಯಾಗಿ ಹಿಡಿದುಕೊಂಡು ರಾಜಾತ್ತಾ ಗಾಳಿಯಾ, ಅಲೆಯೂ, ಅನುಕೂಲವಾಗಿ ಬಂದಕಾಲದಲ್ಲಿ, ಬಂದಾನೊಂದು ರೇವನ್ನು ಸೇರಿದೆನು. ಆದರೆ ಅದರ ದಡವು ಬಹಳ ಕಡಿದಾಗಿದ್ದುದರಿಂದ ಅತ್ಯಂತ ಪ್ರಯಾಸದಿಂದ, ನಾನು ಆ ದಡವನ್ನು ಹತ್ತಿದೆನು.

ಬಳಿಕ ಆಯಾಸಪರಿಹಾರಾರ್ಥವಾಗಿ ಸ್ವಲ್ಪ ಹೊತ್ತು ಆ ಸ್ಥಳದಲ್ಲಿ ಕುಳಿತುಕೊಂಡಿದ್ದು, ಅಲ್ಲಿಂದ ಹೊರಟು ಆ ದ್ವೀಪವನ್ನು ರಂಜಿಸುತ್ತಿರುವ, ರಮಣೀಯವಾದ ಉದ್ಯಾನವನವನ್ನು, ಮನೋಹರಗಳಾದ ಹಣ್ಣುಗಳಿಂದಲೂ, ಹೂಗಳಿಂದಲೂ, ಕಾಯಿಗಳಿಂದಲೂ, ಪೋಲಿಕಾಯಿಗಳಿಂದಲೂ, ಹೀಚುಗಳಿಂದಲೂ, ರುಚಿಕರವಾದ ಎಲೆಗಳಿಂದಲೂ, ಹಾಲಿನಂತೆ ನಿರ್ಮಲವಾದ ಬಿಳಿಯಬಣ್ಣವುಳ್ಳ ಸೀನೀರಿನಿಂದಲೂ ಕೂಡಿದ್ದಿತು. ಅಂತಹ ರಮಣೀಯವಾದ ತೋಟದ ಸೊಬಗನ್ನು ನೋಡುತ್ತಾ, ಸ್ವಲ್ಪ ಹಣ್ಣು ಕಾಯಿಗಳನ್ನು ಕಿತ್ತು ತಿಂದು ಬಳಿಕ ನೀರನ್ನು ಕುಡಿದು, ಸುಧಾರಿಸಿಕೊಂಡು, ಉಚ್ಛ್ವಾಸನಿರ್ಭರವಾಗಿರುವ ಒಂದು ಸ್ಥಳದಲ್ಲಿ ಕುಳಿತುಕೊಂಡೆನು. ಅಯ್ಯೋ! ನಾನು ಐದನೆಯ ಸಾರಿ ಪ್ರಯಾಣ ಹೊರಡದೆ ಊರಲ್ಲಿ ಇದ್ದರೆ ಎಷ್ಟು ಚೆನ್ನಾಗಿದ್ದಿತು. ಇಂತಹ ನಿರ್ಜನಾನುಷ ಪ್ರದೇಶದಲ್ಲಿ ಯಾವ ದೊಂದು ಭಯವುಗಿ ಇಲ್ಲದಿದ್ದರೂ, ನಾನೊಬ್ಬನೇ ಇರಲಾರೆನು ಹೇಗೆ? ನನ್ನ ಜನಿವೇಚನೆಯಿಂದಲೆ ನಾನಿಂತಹ ದುರವಸ್ಥೆಯನ್ನು ಹೊಂದಿದೆನು. ಯಾರಿಂದ ತಾನೆ ಏನು ಮಾಡಲಾದೀತೆಂದು, ನನ್ನನ್ನು ನಾನೇ ಸಂಬಸಿಕೊಳ್ಳುತ್ತಿರುವಲ್ಲಿ, ಸಾಯಂಕಾಲವಾಯಿತು. ಆಗಲೂ ನಾನಾವಿಧವಾಗಿ ನನ್ನ ಮನಸ್ಸನ್ನು ತಲ್ಲಣಿಸುತ್ತಿದ್ದುದರಿಂದ, ನಾನು ಹೀಗೆ ಕೆಟ್ಟ ಕೆರವಾದ ಸ್ಥಿತಿಯಲ್ಲಿರುವುದಕ್ಕಿಂತ, ಪ್ರಾಣವನ್ನೇ ಬಿಸುವುದು ಲೇಸೆಂದು ಗೊತ್ತುಮಾಡಿದೆನು. ಆದರೆ ಕೂಡಲೆ ಬೆಳಗಾದುದರಿಂದ ವ್ಯಸನಕರವಾದ, ಈ ನನ್ನ ಯೋಜನೆಗಳನ್ನು ಸ್ವಲ್ಪ ಮುಬ್ಬಿಗೆ ನಿಲ್ಲಿಸಿ, ಇಲ್ಲಿಂದ ಮುಂದೆ ನನಗಾಗತಕ್ಕೊಂದರೆ ಸಂಭವಿಸುವುದೋ ಎಂಬ ಭಯದಿಂದ, ನಾನು ಆ ವೃಕ್ಷಗಳಮಧ್ಯವಲ್ಲಿ ಸುಜರಿಸುತ್ತಾ ಇದ್ದೆನು.

ಹೀಗೆ ಸ್ವಲ್ಪ ದೂರ ಹೋಗುತ್ತಲಿ, ಒಂದಾನೊಂದು ಕಾಲು ಮುರಿದು ಕುಳಿತಿರುವ, ಬಲಹೀನನಾದ, ವಿಕಾರರೂಪಿಯಾದ ಒಬ್ಬಾನೊಬ್ಬ ಮುದುಕನನ್ನು ಕಂಡೆನು. ಆತನು ನನ್ನಂತೆ ಹಡಗನ್ನು ತಪ್ಪಿಸಿಕೊಂಡು ಬಂದಿರುವನಾಗಿರಬಹುದೆಂದು ತಿಳಿದು, ಅವನ ಬಳಿಗೆ ಹೋಗಿ ನಾನು ಪಂಚನೆಗಳನ್ನು ಹೇಳಿದೆನು. ಆದಕ್ಕೆ ಆತನು ಪ್ರತಿವಂದನೆಗಳನ್ನು ಮಾಡದೆ ನುಣ್ಣಗೆ ತಲೆಯನ್ನು ಅಲ್ಲಾಡಿಸಿದನು. ಆತನು ಯಾವ ಮಾತನ್ನು ಆಡದೆ ನನ್ನ ಬೆನ್ನಿನಮೇಲೆ ಕುಳಿತುಕೊಂಡು ಆ ಕಾಲುವೆ

ಯೆನ್ನು ದಾಟಿ ಹೊರಗೆ ಹೋಗಬೇಕೆಂದು, ಅಲ್ಲಿರುವ ಹಣ್ಣುಗಳು ತನಗೆ ಆಹಾರವಾಗಿರುವುದೆಂದು, ಸನ್ನೆ ಮಾಡಿ ತೋರಿಸಿದನು. ನನ್ನ ಸಹಾಯವು ಆತನಿಗೆ ಬೇಕಾಗಿರುವುದೋ, ಏನೋ ಎಂದೆಂದುಕೊಂಡು ನಾನು ಆತನನ್ನು ಬೆನ್ನಿನಮೇಲೆ ಕುಳ್ಳಿರಿಸಿಕೊಂಡು, ಆಚೆಯ ದಡಕ್ಕೆ ನೆಗೆದು ಕೊಂಡು ಇಳಯುವುದಕ್ಕೆ ಸುಲಭವಾಗಿರುವಂತೆ, ಬಗ್ಗಿನಿಂತುಕೊಂಡು, ಇಳಿಯುವಂತೆ ಹೇಳಿದೆನು. ಆದರೆ ಆ ಮುದುಕನು ಬಲಹೀನವಾಗಿದ್ದಾಗ್ಯೂ, ನನ್ನ ಕುತ್ತಿಗೆಯನ್ನು ಹಿಸುಕಿ, ಬೆನ್ನಿನಮೇಲೆ ಕುಣಿಯುತ್ತ ತಲೆಯನ್ನು ಹಿಡಿದು ತಿರುಗಿಸುತ್ತ, ನಾನಾವಿಧವಾದ ಕ್ರೂರಕೃತ್ಯವನ್ನು ಮಾಡುತ್ತಿದ್ದುದರಿಂದಲೂ, ಅವನ ಮೈ ಚರ್ಮವು ಎಮ್ಮೆಯ ಚರ್ಮದಂತೆ ಮಂದವಾಗಿದ್ದುದರಿಂದಲೂ, ಆತನು ನನ್ನನ್ನು ಕೊಲ್ಲದೆ ಬಿಡನೆಂದು ತಿಳಿದುಕೊಂಡನು. ಇಂತೆಂದು ಹೇಳಿದ ಷಹರಜಾದಿಯು, ಬಿಳಿಗಾದ ಕೂಡಲೆ ಕಥೆಯನ್ನು ನಿಲ್ಲಿಸಿ ಮರುದಿನ ಬಿಳಿಗಿನಜಾವದಲ್ಲಿ ಪುನಹ ಕಥೆಯನ್ನು ಹೇಳ ತೊಡಗಿದಳು.

೪೪ನೆಯ ರಾತ್ರಿ ಕಥೆ,

ಸಿಂದುಬಾದನು ತನ್ನ ಸಖಿಕರನ್ನು ಕುರಿತು ಹೀಗೆಂದು ಹೇಳ ಲಾರಂಭಿಸಿದನು. ಅಯ್ಯಾ! ಆ ಮುದುಕನು ನನ್ನನ್ನು ಕೊಲ್ಲುತ್ತಾನೆಂದು ತಿಳಿದು ಕೂಡಲೆ, ನಾನು ಆತನಿಗೆ ಪೆದರಿ ಮೂರ್ಛೆಹೋದೆನು. ಆದರೂ, ಆತನು ನನ್ನನ್ನು ಬಿಡದೆ ಹೊಟ್ಟೆಯಮೇಲೆ, ಕಿಬ್ಬರಿಯಮೇಲೂ ಹೊಡೆಯುತ್ತಾ, ಕಾಲುಗಳನ್ನೆಳೆದು, ಏಳುವುದಕ್ಕೆ ಮನಸ್ಸಿಲ್ಲದಿದ್ದರೂ, ಬಲಾತ್ಕಾರದಿಂದ ನನ್ನನ್ನು ಏಳಿಸಿದನು. ನಾನು ಎದ್ದ ಕೂಡಲೆ ಮರಗಳ ಕೆಳಭಾಗದಲ್ಲಿ ಬಿದ್ದಿರುವ ಹಣ್ಣುಗಳನ್ನು ಆರಿಸಿಕೊಂಡು, ತಿನ್ನುವುದಕ್ಕಾಗಿ ಹೊರಡಿಸಿಕೊಂಡು ಹೋಗಿ, ಹಗಲೆಲ್ಲಾ ನಾನಾವಿಧವಾದ ಚಿತ್ರಹಿಂಸೆಗಳನ್ನು ಮಾಡಿ, ರಾತ್ರಿ ಯಾವ ತೊಂದರೆಯೂ ಇಲ್ಲದಂತೆ ನನ್ನ ಪಕ್ಕದಲ್ಲಿ ಮಲಗಿರುತ್ತಾ, ಬೆಳಗಾದಕೂಡಲೆ ಬಲಾತ್ಕಾರದಿಂದ, ನನ್ನನ್ನು ಹೊಡೆದು ಏಳಿಸುತ್ತಾ, ಇದ್ದನು. ಘನವಂತರೇ! ನಾನು ಯಾವ ಕಾರಣದಿಂದ ಇಂತಹ ದುರವಸ್ಥೆಗೆ ಗುರಿಯಾದೆನೋ ಆಕಾಲದಲ್ಲಿ ಎಂತಹ ವ್ಯಸನವು, ನನಗೆ ಪ್ರಾಪ್ತವಾಯಿತೋ, ಎಂಬುದನ್ನು ನೀವೇ

ಯೋಚಿಸಿ ತಿಳದುಕೊಳ್ಳಬಹುದಾದುದರಿಂದ ನಾನು ವಿವರಿಸಿ ಹೇಳಬೇಕಾದುದೇನೂ ಇಲ್ಲ. ಒಂದಾನೊಂದು ದಿನ ನಾನು ಸಂಚಾರಮಾಡುತ್ತಿರುವಾಗ, ಕಲಭಾಷೆಂಬ ಗಿಡದ, ಒಣಗಿದ ಕಾಯಿಗಳು (ಬುರುಡೆಯಂತಿರುವುವು) ಬಿದ್ದು ಇದ್ದವು. ಅದರಲ್ಲೊಂದು ದೊಡ್ಡ ಕಾಯನ್ನು ತೆಗೆದು ಕೊಂಡು, ರಂಧ್ರವಂ ಮಾಡಿ, ನಾನು ಆ ದ್ವೀಪದಲ್ಲಿರುವ ದ್ರಾಕ್ಷೆಗಳ ರಸವನ್ನು ಆ ಬುರುಡೆಗೆ ತುಂಬಿ ಅನುಕೂಲವಾದ ಒಂದು ಸ್ಥಳದಲ್ಲಿ ಬಚ್ಚಿಟ್ಟೆನು.

ಕೆಲವು ದಿನಗಳು ಕಳೆದಮೇಲೆ ನಾನು ಆ ಸ್ಥಳಕ್ಕೆ ಆ ಬುರುಡೆಯನ್ನು ತೆಗೆದುಕೊಂಡುಹೋಗಿ ರುಚಿನೋಡಿದೆನು. ಆದರೆ ದ್ರಾಕ್ಷಾರಸವು ಮಾಗಿದ್ದುದರಿಂದ, ಬಹು ಸಂತೋಷವಾಗಿ, ನಾನು ಅದನ್ನು ಕುಡಿಯಲಾರಂಭಿಸಿದೆನು. ಇದರಿಂದುಂಟಾದ ಗುಣವನ್ನು ಇಷ್ಟೆಂದು ಹೇಳಲಾರೆನು, ಈ ಪಾನದಿಂದುಂಟಾದ ಆನಂದವನ್ನು ಅಷ್ಟಷ್ಟೆಂದು ಹೇಳುವುದಕ್ಕೆ ತೀರದು. ಆ ಮುದುಕನು ಆ ದ್ರಾಕ್ಷಾರಸವನ್ನು ತನಗೆ ಕೊಡುವಂತೆ ಸನ್ನೆಮಾಡಿದನು. ನಾನು ಅದನ್ನು ಅವನ ಕೈಗೆ ಕೊಟ್ಟುಕೂಡಲೆ, ಅದನ್ನು ಬಾಯಿಯೆಲ್ಲಿಟ್ಟುಕೊಂಡು ಚೀಪುತ್ತಾ ರಸವನ್ನು ಕುಡಿದುಕೊಂಡನು. ಅದರಲ್ಲಿದ್ದ ರಸವು ಅವನಿಗೆ ವ್ಯೆಕ (ಮತ್ತು೦ನ್ನು) ವನ್ನುಂಟುಮಾಡುವುದಕ್ಕೆ ಸಾಕಾದಷ್ಟು ಇದ್ದುದರಿಂದ, ಅದನ್ನು ಕುಡಿದ ಸ್ವಲ್ಪ ಹೊತ್ತಿಗೆ ಮದವೇರಿ, ಮನಸ್ಸು ಬಂದಂತೆ ನನ್ನ ಬೆನ್ನಿನಮೇಲೆ ಓಡಾಡಲಾರಂಭಿಸಿದನು. ಇನ್ನೂ ಸ್ವಲ್ಪಹೊತ್ತು ತಲೆಗೇರಿದ ಪಿತ್ತದಿಂದ ಕೈಕಾಲುಗಳಲ್ಲಿ ನಡುಕಹುಟ್ಟಿ, ಆತನು ಕೊಸೆಗೆ ಪ್ರಜ್ಞೆತಪ್ಪಿ ಕೆಳಗೆ ಬಿದ್ದನು. ಅದೇ ಸಮಯವನ್ನು ನೋಡಿಕೊಂಡಿದ್ದು, ನಾನು ದೊಡ್ಡದಾದ ಒಂದು ಕಲ್ಲನ್ನು ತೆಗೆದುಕೊಂಡು, ಅವನ ತಲೆಯಮೇಲೆ ಹಾಕಿ ಕೊಂದುಹಾಕಿದೆನು. ಈ ದುರಾತ್ಮನಾದ ಮುದುಕನ ಕಾಟ ತಪ್ಪಿಸಿಕೊಂಡು, ಸಂತೋಷದಿಂದ ಸಮುದ್ರತೀರವನ್ನು ಸೇರಿ, ಸೌದೆಯನ್ನು ಒಡವುದು, ಮೊದಲಾದ ಕೆಲಸಗಳನ್ನು ಮಾಡಿಕೊಂಡು ಇರುತ್ತಾ, ನನ್ನ ಸ್ನೇಹಿತರಾದ ಜನಗಳಿಗೆಲ್ಲರಿಗೂ, ನನ್ನ ದುಸ್ಥಿತಿಯನ್ನು ಪುರಿಪು ಹೇಳಲು, ಅವರುಗಳು ಅಯ್ಯಾ ! ನೀನೇ ಪುಣ್ಯಶಾಲಿ ! ಇದುವರಿಗೆ ಆ ಮುದುಕನು ನಾನಾ ಜನರನ್ನು ಹಿಡಿದುಕೊಂಡು ಕೊಂದುಹಾಕಿರುವನು.

ಆತನ ಕೈಗೆ ಸಿಕ್ಕಿದವರು ಮರಳಿ ತಪ್ಪಿಸಿಕೊಂಡು ಬಂದವರೇ ಇಲ್ಲ. ನೀವೇ ಅದೃಷ್ಟಶಾಲಿಯೆಂದು, ಹೇಳಿದರು. ಆದುದರಿಂದಲೆ ಪ್ರಸಿದ್ಧವಾದ ಈ ದ್ವೀಪದಲ್ಲಿ ಹಡಗವನ್ನು ನಿಲ್ಲಿಸಿದರೆ, ಜನಗಳು ಗುಂಪಾಗಿ ಸೇರಿದರೆ, ಒಳಗೆ ಪ್ರವೇಶವಾಗುವುದಿಲ್ಲ, ಎಂದು ಹೇಳಿ ಸಂತೈಸಿದ ಬಳಿಕ ಅವರು ನನ್ನನ್ನು ತಮ್ಮ ಸರದಾರನ ಬಳಿಗೆ ಕರೆದುಕೊಂಡು ಹೋಗಿ, ನನ್ನ ಚರಿತ್ರೆಯನ್ನೆಲ್ಲಾ ಹೇಳಲು, ಅತ್ಯಂತ ಆಶ್ಚರ್ಯವುಂಟಾಗಿ, ದಯಾರಸದಿಂದ ನನ್ನನ್ನು ಬಿಗಿವಾಡಿಕೊಂಡು, ಬಹು ವಿಶ್ವಾಸದಿಂದ ನೋಡುತ್ತಾ ಕೆಲವು ದಿನಗಳವರಿಗೆ ಹಡಗನ್ನು ನಡೆಸಿದ ಬಳಿಕ, ನಾವುಗಳೆಲ್ಲರೂ ಒಂದಾನೊಂದು ವಿಧವಾದ, ಉತ್ತಮವಾದ ಶಿಲೆಯಿಂದ ಸುಂದರವಾಗಿಕಟ್ಟಿದ್ದ ಮಹಾಪಟ್ಟಣವನ್ನು ಸೇರಿದೆವು. ಹಡಗಿನಲ್ಲಿ ನನಗೆ ಸ್ನೇಹಿತನಾಗಿದ್ದ ಒಬ್ಬ ಮನುಷ್ಯನು ನನ್ನ ಕೈಗೊಂದು ಚೀಲವನ್ನು ಕೊಟ್ಟು, ನನ್ನನ್ನು ಆ ದ್ವೀಪದ ಜನರ ಬಳಿಗೆ ಕರೆದುಕೊಂಡು ಹೋಗಿ, ಈತನನ್ನು ನಿಮ್ಮಲ್ಲಿ ಕೊಬ್ಬರಿಯೆಣ್ಣೆಗಾಗುವುದಕ್ಕಾಗಿ, ಕೂಲಿ ಕೊಟ್ಟು ಇಟ್ಟುಕೊಳ್ಳಿರೆಂದು ನುಡಿದು, ನನ್ನನ್ನು ನೋಡಿ ಅಯ್ಯಾ ! ಈ ಜನರನ್ನು ಬಿಟ್ಟು ನೀನು ಎಲ್ಲಿಯೂ, ಹೋಗಬೇಡ, ಹಾಗೆ ಹೋದುದೇ ಆದರೆ ನಿನಗೆ ಮರಣವುಂಟಾಗುವುದು. ಇವರು ಮಾಡಿದ ಕೆಲಸವನ್ನು ಮಾಡಿಕೊಂಡು, ನೀನು ಸುಖವಾಗಿರು ಎಂದು ಹೇಳಿ, ನನ್ನ ವ್ಯಯಾಣಕ್ಕೆ ಬೇಕಾದ ಸಾಮಾನುಗಳನ್ನು ಕೊಟ್ಟನಾದುದರಿಂದ, ನಾನು ಅವರ ಸಂಗಡ ಹೊರಟೆನು. ಅಲ್ಲಿ ನಾವು ಅತ್ಯಂತ ಸುಂದರವಾಗಿಯೂ ಉನ್ನತವಾಗಿಯೂ, ಕಾಯಿಗಳಿಂದ ತುಂಬಿದುದಾಗಿಯೂ ಇದ್ದ ಕೊಬ್ಬರಿಯೆ ಮರಗಳನ್ನು ನೋಡಿದೆನು. ಆ ತೆಂಗಿನ ಮರಗಳನ್ನು ನೋಡಿ ನನಗೆ ತುಂಬ ಸಂತೋಷವುಂಟಾಯಿತು. ಅಲ್ಲಿಂದ ಆ ವನದಲ್ಲಿರುವ ವಿವಿಧಾಕೃತಿಗಳ ವನಜಂತುಗಳು (ಪ್ರಾಣಿಗಳು) ನಮ್ಮನ್ನು ನೋಡಿದ ಕೂಡಲೆ, ಗುಂಪುಗುಂಪಾಗಿ ಓಡಿಹೋಗಿ ತೆಂಗಿನ ಮರಗಳನ್ನು ಹತ್ತಿಕೊಂಡರು. ಎಂದು ಹೇಳಿ ಮಹರಜಾವಿಯೆಂಬ, ಬೆಳಗಾದಕೂಡಲೆ ಕಥೆಯನ್ನು ನಿಲ್ಲಿಸಿ, ಮರುದಿನದ ಬೆಳಗಿನಜಾವದಲ್ಲಿ, ಮತ್ತೆ ಹೇಳತೊಡಗಿದಳು.

೪೫ನೆಯ ರಾತ್ರಿಕಥೆ.

ಸಿಂದುಬಾದನು ತನ್ನ ಸಖಿಕರನ್ನು ಕುರಿತು, ಇಂತೆಂದು ಹೇಳಲಾರಂಭಿಸಿದನು. ಬಳಿಕ ನಾವುಗಳು ಆ ತೋಟವನ್ನು ಸೇರಿ, ಮುರದ ಮೇಲಿದ್ದ ಕೋತಿಗಳಿಗೆ ಕಲ್ಲುಗಳನ್ನು ಬೀರಿದೆವು. ಅವುಗಳು ಕೋಪದಿಂ ಕಾಯಿಗಳನ್ನು ಕಿತ್ತು, ನಮ್ಮಗಳ ಮೇಲೆ ಬಿಸಾಡಿದವು. ಅವುಗಳನ್ನೆಲ್ಲಾ ಆರಿಸಿ ಚೀಲಕ್ಕೆ ತುಂಬಿಕೊಂಡು, ಪುನಹ ಆ ಕೋತಿಗಳನ್ನು ರೇಗಿಸಲು, ಅವುಗಳು ಕಾಯಿಗಳನ್ನೆಲ್ಲಾ ಕಿತ್ತು ಹಾಕಿದವು. ಈ ತೆರದಿಂದ ನಮ್ಮ ಚೀಲಗಳು ತುಂಬಿಹೋದವು. ನಾವು ಹೀಗೆ ಮಾಡದೆ ಹೋಗಿದ್ದರೆ, ಕೊಬ್ಬರಿಯು ಸ್ವಪ್ನದಲ್ಲಿಯೂ, ನಮಗೆ ದೊರಕುತ್ತಿರಲಿಲ್ಲ. ಬಳಿಕ ಅವುಗಳನ್ನು ತೆಗೆದುಕೊಂಡು ಊರಿಗೆ ಬಂದು, ನನ್ನನ್ನು ಕಳುಹಿಸಿದ ಯೆಜಮಾನನಿಗೆ ಆ ಕಾಯಿಗಳನ್ನು ಕೊಟ್ಟೆನು. ಆತನು ಅದರಿಂದುರೀದಿಯೆನ್ನು, ಕೂಡಲೆ, ನನ್ನ ಕೈಗೆ ಕೊಟ್ಟು ಅಯ್ಯಾ! ನೀನು ಸುಖವಾಗಿ ಊರನ್ನು ಸೇರುವುದಕ್ಕೆಷ್ಟು ಹಣಬೇಕಾಗಿರುವುದೊ, ಅಷ್ಟು ದ್ರವ್ಯವನ್ನು ಕೂಡಿಸುವ ವರೆಗೂ ನೀನು ಹೀಗೆಯೇ ಮಾಡುತ್ತಿರು ಎಂದು ಹೇಳಿದನು. ಆತನ ದಯಾಗುಣಕ್ಕೆ ವೆಚ್ಚಿ ಬುದ್ಧಿವಾದವನ್ನು ಹೇಳಿದುದಕ್ಕಾಗಿ ವಂದಿಸಿ ಪ್ರತಿದಿನವೂ ಬೇಕಾದಷ್ಟು ಕಾಯಿಗಳನ್ನು ತಂದು ಆತನಿಗೆ ಕೊಡುತಾ ಬಂದೆನು, ಅದರ ಬೆಲೆಯನ್ನು ವಸೂಲಾಮಡಿಕೊಳ್ಳುತ್ತಿದ್ದನು. ಹೀಗೆವರ್ತಕರೆಲ್ಲರೂ ಆ ಹಡಗಳನ್ನು ಕೊಬ್ಬರಿಯ ಕಾಯಿನಿಂದ ತುಂಬಿಬಿಟ್ಟರು.

ನಂತರ ಅವರು ಹಡಗನ್ನು ನಡೆಸಿಕೊಂಡು ಮುಂದೆ ಪ್ರಯಾಣಮಾಡಿದರು. ಅದುವರಿವಿಗೂ, ನಾನು ಇನ್ನು ಕೆಲವು ತೆಂಗಿನಕಾಯಿಗಳನ್ನು, ಕೂಡಿಹಾಕಿದೆನು. ಮತ್ತೊಂದು ಹಡಗು ಬಂದಕೂಡಲೆ, ಆ ಹಡಗಿಗೆ ತೆಂಗಿನಕಾಯಿಗಳನ್ನು ತುಂಬಿ, ನನ್ನ ಯೆಜಮಾನನಾದ ವರ್ತಕನಿಂದ ಆಜ್ಞೆಯನ್ನು ತೆಗೆದುಕೊಂಡು, ಪ್ರಯಾಣಸನ್ನದ್ಧನಾದೆನು. ಆದರೆ ಆ ನನ್ನ ಯೆಜಮಾನನು ತಾನು ಬಂದ ಕೆಲಸವನ್ನು ಮುಗಿಸಿಕೊ

ಳ್ಳುವುದಕ್ಕೆ, ಇನ್ನೂ ಕೆಲವು ಕಾಲಬೇಕಾಗಿದ್ದುದರಿಂದ, ನಾವುಗಳೇ ಹೊರಟೆವು. ಹೀಗೆ ಪ್ರಯಾಣ ಮಾಡಿ ಬರುತ್ತಾ ಲಕ್ಷದ್ವೀಪಗಳಲ್ಲಿ ಮೆಣಸನ್ನೂ, ಕನ್ಯಾಕುಮಾರಿಯ ದ್ವೀಪಗಳಲ್ಲಿ ಗಂಧದಮರ ಮತ್ತು ಇತರ ಸುಗಂಧದ್ರವ್ಯಗಳನ್ನೂ, ಅಲ್ಲದೆ ಸಮುದ್ರದಲ್ಲಿ ಮುತ್ತು ಹವಳ ಮೊದಲಾದ ದಿವ್ಯವಾದ ವಸ್ತುಗಳನ್ನು ತೆಗೆದುಕೊಂಡು, ಬಾಲಸೋರಿಗೆ ಬಂದು, ಅಲ್ಲಿಂದ ಬಾಗದಾದುಪಟ್ಟಣವನ್ನು ಸೇರಿ, ವಿಶೇಷ ಧನವನ್ನು ಸಂಪಾದಿಸಿ, ಅದರಲ್ಲಿ ಬಂದ ಲಾಭದಲ್ಲಿ ಹತ್ತರಲ್ಲೊಂದು ಭಾಗವನ್ನು ಬಡವರಿಗೆ ದಾನ ಮಾಡಿ, ಉಳಿದ ಹಣದಿಂದ ನನ್ನ ಆಸ್ತಿಯೆನ್ನು ಹೆಚ್ಚು ಮಾಡಿಕೊಂಡು, ಸಂತೋಷದಿಂದ ಕೂಡಿ, ನನ್ನ ಶ್ರಮವನ್ನು ಪರಿಹಾರ ಮಾಡಿಕೊಳ್ಳುತ್ತಿದ್ದೆನೆಂದು ಹೇಳಿ, ಸಿಂದುಬಾದನು ಮತ್ತೊಂದು ನೂರು ಸೆಕ್ವಿನ್ಸುಗಳನ್ನು ಆ ಕೂಲಿಕಾರನಾದ ಹಿಂದುಬಾದನಿಗೆ ಕೊಡಿಸಿ, ದಿವ್ಯವಾದ ಭೋಜನವನ್ನು ಮಾಡಿಸಿ ಅವರವರ ಮನೆಗಳಿಗೆ ಕಳುಹಿಸಿಕೊಡಲು, ಅವರೆಲ್ಲರೂ ತಂತಮ್ಮ ಮನೆಗಳಿಗೆಹೋಗಿ ಸಿಂದುಬಾದನ ಸಾಹಸವನ್ನು, ಆತನಿಗೆ ಸಹಾಯಮಾಡಿ ವ್ಯಸನಕರವಾದ ಗಂಡಾಂತರದಿಂದ ಉಳಿಸಿ ಕಾಪಾಡುತ್ತಿದ್ದ, ಭಗವಂತನ ಗುಣಗಳನ್ನು ಕೊಂಡಾಡುತ್ತಾ ರಾತ್ರಿಯೆನ್ನು ಕಳೆದು, ಬೆಳಗಾಗುತ್ತಲೆ, ಕ್ಲೃಪ್ತಕಾಲಕ್ಕೆ ಸರಿಯೊಗಿ ಸಿಂದುಬಾದನ ಮನೆಗೆ ಬರಲು, ಅತನು ಊಟ ಪುಪಚಾರಗಳಿಂದವರನ್ನು ಸಂತೈಸಿದ ಮೇಲೆ, ಆತನ ಆರನೆಯ ಸಮುದ್ರ ಯಾನವನ್ನು ಕುರಿತು ವಿವರಿಸಲಾರಂಭಿಸಿದನು.

ಸಿಂದು ಬಾದನ ಆರನೆಯ ಪ್ರಯಾಣ.

ಹಿಂದೆ ಹೇಳಿದ ನಾಲ್ಕು ಪ್ರಯಾಣಗಳಲ್ಲಿ ನನಗುಂಟಾದ ಮಹಾ ವಿಪತ್ತುಗಳನ್ನು ಕಳೆದು, ನಾನು ಸ್ಥಳವನ್ನು ಸೇರಿದಮೇಲೆ ಸುಮ್ಮನಿರದೆ ಪುನಃ ದ್ರವ್ಯಾರ್ಜನೆಯ ನೆವದಿಂದ ಹೊರ ಹೊರಡಲುದ್ಯುಕ್ತನಾದೆನು. ಸಭಿಕರೇ ಇದನ್ನು ಕೇಳಿದರೆ ನಿಮಗೆ ತುಂಬ ಆಶ್ಚರ್ಯವುಂಟಾಗಬಹುದು.

ನಾನು ಕೂಡ ಹಾಗೆಯೇ ಯೋಚಿಸಿದೆನು. ಇಷ್ಟೊಂದು ಧೈರ್ಯವೂ ಉತ್ಸಾಹವೂ ನನ್ನ ಜನನಕಾಲದ ಲಕ್ಷಣವೆಂದುಕೊಂಡು, ಬಂಧುಮಿತ್ರರನ್ನೂ, ಪತ್ನಿಪುತ್ರರನ್ನೂ ತೊರೆದು ದ್ರವ್ಯಾರ್ಜನೆಯ ನೆವದಿಂದ, ಪುನಹ ಪ್ರಯಾಣವನ್ನು ನಿಶ್ಚಯಿಸಿ, ಭೂಮಾರ್ಗವಾಗಿ ಪಾರಶೀ ಮತ್ತು ಇಂಡಿಯಾ ರಾಜ್ಯಗಳನ್ನು ಸುತ್ತಿಕೊಂಡು, ಕಡೆಗೆ ಇಂಡಿಯಾದೇಶದ ಮಧ್ಯ ಭಾಗದಲ್ಲಿರುವ, ಬಿಂದುರೇವಿನಲ್ಲಿ ಹಡಗನ್ನು ಹತ್ತಿದೆನು. ಆ ಹಡಗಿನ ಯಜಮಾನನು ಬಹುದೂರ ಪ್ರಯಾಣಮಾಡಬೇಕೆಂದು, ನಿಶ್ಚಯಿಸಿದ್ದನು. ಆದೇ ವೇರಿಗೆ ನಾವು ಬಹು ದೂರದ ವರಿಗೂ ಪ್ರಯಾಣ ಮಾಡಿದೆವು. ಬಳಿಕ ಯಾವದೋ ಕಾರಣದಿಂದ ನಮ್ಮ ಹಡಗಿನ ಸರದಾರನು, ಇತರ ಸೇವಕರೂ ಹಡಗನ್ನು ಮಾರ್ಗತಪ್ಪಿ ನಡೆದುದರಿಂದ, ನಾವುಗಳೆಲ್ಲರೂ, ಮಹಾ ವ್ಯಸನಾಕ್ರಾಂತರಾದೆವು. ಕಡೆಗೆ ದೈವಾಧೀನದಿಂದ ಹಡಗನ್ನು ತಿರಿಗಿಸಿ ಬೇರೆ ಮಾರ್ಗದಲ್ಲಿ ನಡೆಸಿಕೊಂಡು ಬರುತ್ತಿರುವಾಗ್ಗೆ, ನಮ್ಮ ಹಡಗಿನ ಸರದಾರನು ತನ್ನ ತಲೆಯ ಪಾಗನ್ನು ತೆಗೆದು ಹಾಕಿ, ಎದೆಯ ಮೇಲು, ಬಾಯಿಮೇಲು ಹೊಡೆದುಕೊಂಡು ಗಟ್ಟಿಯಾಗಿ ಅಳತೊಡಗಿದನು. ಆತನ ದುರವಸ್ಥೆಯನ್ನು ನೋಡಿದ ಕೂಡಲೆ, ನಮಗೆ ತುಂಬ ದುಃಖವುಂಟಾಯಿತು. ಆತನ ಈ ದುಸ್ಥಿತಿಗೆ ಕಾರಣವೇನೆಂದು, ನಾವು ಕೇಳುವಲ್ಲಿ ಅಯ್ಯೋ ! ಸಮುದ್ರದಲ್ಲಿ ಬಹು ಅಪಾಯಕರವಾದ ಸ್ಥಳದಲ್ಲಿ ನಮ್ಮ ಹಡಗು ಇರುವುದು. ಇನ್ನು ಸ್ವಲ್ಪ ಹೊತ್ತಿನಲ್ಲಿ ಮುಳುಗಿ ಹೋಗುವುದು.

ಭಗವಂತನು ಕರುಣದಿಂದ ನಮ್ಮನ್ನು ಕಾಪಾಡುವಂತೆ ಪ್ರಾರ್ಥಿಸಿಕೊಳ್ಳಿರೆಂದು, ನಮ್ಮಗಳಿಗೆ ಆತನು ಹೇಳುತ್ತಿರುವಷ್ಟರಲ್ಲಿ ಬಿರ್ರನೆ ಬೀಸಿದ ಬಿರುಗಾಳಿಯಿಂದ ಹಡಗು ಪಕ್ಕದಲ್ಲಿದ್ದ ಕಲ್ಲುಗುಡ್ಡಕ್ಕೆ ತಗಲಿ, ಒಡೆದುಹೋಯಿತು. ಆದರೆ ನಾನು ನನ್ನ ಸರದಾರನೂ, ನಮ್ಮ ಬಳಿಯಲ್ಲಿ ಆಹಾರಪದಾರ್ಥಗಳೂ, ಇತರ ಉತ್ತಮವಾದ ಸಾಮಾನುಗಳೂ, ಸಹ ಭಗವಂತನ ದಯೆದಿಂದ ಯಾವ ಅಪಾಯಕ್ಕೂ ದೊರಕದೆ ಸುರಕ್ಷಿತವಾಗಿದ್ದೆವು. ಬಳಿಕ ಸರದಾರನು ನಮ್ಮನ್ನು ನೋಡಿ ಅಯ್ಯಾ ! ಭಗವಂತನ ದಯೆದಿಂದ ನಾವುಗಳು ಈಗ ಬದುಕಿದಂತಿರುವೆವು. ಮುಂದೆ ಏನಾಗುವುದೋ ಕಾಣೆ, ಈ ಸ್ಥಳಕ್ಕೆ ಬಂದ ಮಾನವರಲ್ಲಿ ಮರಳಿ ಮನೆಯನ್ನು

ಸೇರಿದವರನ್ನು ನೋಡಲೇ ಇಲ್ಲವೆಂದು ಶೇಳಲು, ನಾವುಗಳೆಲ್ಲರೂ, ವ್ಯಸ ನಾಕ್ರಾಂತರಾಗಿ ಒಬ್ಬರನೊ್ನಬ್ಬರು ಆಲಿಂಗಿಸಿಕೊಂಡು, ಗಟ್ಟಿಯಾಗಿ ಅಳ ತೊಡಗಿದೆವು. ಅದರ ಪಕ್ಕದಲ್ಲಿರುವ ಪರ್ವತದ ದಡವು ಅತ್ಯಂತ ವಿಶಾಲ ವಾದುದಾಗಿ, ನಾನಾ ವಿಧವಾದ ಹಲಗೆಗಳಿಂದ ಒಡೆದುಹೋದ ಹಡಗುಗ ಳಿಂದಲೂ, ಸತ್ತುಹೋದ ಮನುಷ್ಯರ ಮೂಳೆಗಳಿಂದಲೂ, ತುಂಬಿಹೋ ಗಿದ್ದಿತಲ್ಲದೆ, ಆ ಸ್ಥಳದಲ್ಲಿ ಇದ್ದ ಧನರಾಶಿಯೆನ್ನು ಇಷ್ಟೆಂದು ಹೇಳುವು ದಕ್ಕೆ ಆಗದಂತೆ, ನನ್ನ ಮನಸ್ಸಿಗೆ ತೋಚಿತು. ಇವೆಲ್ಲವೂ ಕೂಡಿ, ನಮ್ಮುಗಳ ದುಃಖವನ್ನು ಹೆಚ್ಚಾಮಾಡಿದವೇ ಹೊರತು, ಮತ್ತೇನೂ ಇಲ್ಲಾ! ಆದರೆ ಪ್ರಪಂಚದಲ್ಲಿ ನದಿಗಳು ಸಮುದ್ರಕ್ಕೆ ಹರಿಯುತ್ತಿರುವುದನ್ನು ನಾವು ಕಂಡಿರುವೆವು. ಆ ಸ್ಥಳದಲ್ಲಿಯೊದರೊ, ಸಮುದ್ರದಿಂದ ಹೊರಟು ಹರಿ ಯುತ್ತಿರುವ ಶುದ್ಧೋದಕದ ಪ್ರವಾಹವು ಬಂದು, ಪಕ್ಕದಲ್ಲಿರುವ ಒಂದಾ ನೊಂದು ಗುಹೆಯೊಳಕ್ಕೆ ಹರಿಯುತ್ತಿರುವುದು.

ಇಂತಹ ಸ್ಥಳದಲ್ಲಿ ಮುಖ್ಯವಾಗಿ ತೋರಿಬಂದ ವಿಶೇಷವೇನೆಂ ದರೆ, ಆ ಪರ್ವತದಲ್ಲಿರುವ ಶಿಲೆಗಳೆಲ್ಲವೂ ಉತ್ತಮವಾದ ರತ್ನಗಳಾಗಿರು ವುವು. ಕೆಂಪು, ವಜ್ರ, ಪಚ್ಚೆ, ಪುಷ್ಯರಾಗ, ಗೋಮೇಧಿಕ ಮೊದಲಾ ದ ಕಲ್ಲುಗಳೆಲ್ಲದೆ, ಉತ್ತಮವಾದ ಶಿಲಾಚಿತ್ರುಗಳನ್ನು ಮತ್ಸ್ಯಗಳು ನುಂಗಿ ಪುನಹ ಕಾರುತ್ತಿರುವುವು. ಆದುದರಿಂದ ಆ ಪರ್ವತವು ರತ್ನಮಯವಾ ಗಿರುವುದು, ಇದಕ್ಕೆ ಸಮಾನವಾದ ಕನ್ಯಾಕುಮಾರಿಯೇ ಹೊರತು ಮ ತ್ತಾವದೂ ಇಲ್ಲ. ಆ ಸ್ಥಳವಾದ ಇಕ್ಕಟ್ಟಾದ ಮತ್ತು ಅಸಾಧ್ಯವಾದ ಸಮುದ್ರಶಾಖೆಯಾಗಿದ್ದುದರಿಂದಲೂ, ಆ ಸ್ಥಳಕ್ಕೆ ಹೋದವರು ಪುನಹ ಸು ರಕ್ಷಿತರಾಗಿ ಬರುವುದಕ್ಕೆ ಮಾರ್ಗವಿಲ್ಲದುದರಿಂದ, ಉನ್ನತವಾದ ಆ ಪರ್ವ ತವು ಗಾಳಿಯನ್ನು ತಡೆವುದರಿಂದ, ಮಂದಮಾರುತನಿಗೆ ಸಿಕ್ಕಿದ ಹಡಗನ್ನು ಉತ್ಕಟವಾದ, ಈ ಪ್ರವಾಹವು ಹೊಡೆದುಕೊಂಡು ಗುಹಾಮುಖಕ್ಕೆ ತೆಗೆ ದುಕೊಂಡು ಹೋಗುವುದರಿಂದಲೂ, ನಾವುಗಳು ಯಾವ ವಿಧದಿಂದಲೂ ಸಂಚಾರಮಾಡುವುದಕ್ಕೆ ಶಕ್ತರಲ್ಲದೆ ಹೋದುದೇ ನಮ್ಮ ದುರವಸ್ಥೆಗೆ ಮುಖ್ಯವಾದ ಕಾರಣವಾಯಿತು. ಆದುದರಿಂದ ನಾವು ನಮ್ಮ ಆಹಾರಪದಾ ರ್ಥಗಳನ್ನು ಸಮವಾಗಿ ಹಂಚಿಕೊಂಡು, ಅವರವರ ಇಷ್ಟಾನುಸಾರವಾಗಿ ತಿನ್ನುತ್ತಾ, ಕೆಲವು ದಿನಗಳ ವರೆಗೂ, ಬದುಕಿರಬಹುದೆಂದು ಕೊಂಡೆವು.

ಎಂದುಹೇಳಿ ಷಹರಜಾದಿಯು, ಬೆಳಗಾದುದರಿಂದ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನಜಾವದಲ್ಲಿ ಹೇಳಲಾರಂಭಿಸಿದಳು.

೮೬ ನೆಯ ರಾತ್ರಿ ಕಥೆ.

ಸಿಂದುಬಾದನು ತನ್ನ ಸಖಿಕರನ್ನು ಕುರಿತು ಹೀಗೆಂದು ಹೇಳಿದನು. ಸತ್ತು ಹೋದವರನ್ನು ಬದುಕಿದ್ದವರು ಸಮಾಧಿ ಮಾಡಿದರು. ಹೀಗೆ ನನ್ನ ಸ್ನೇಹಿತರಲ್ಲಿ ಕೆಲವರನ್ನು ನಾನು ಸಮಾಧಿಮಾಡಿದೆನು. ಆದರೆ ನಾನು ಆಹಾರವನ್ನು ಮಿತವಾಗಿ ಉಗಯೋಗಿಸುತ್ತಿದ್ದುದರಿಂದ, ಬಹು ದಿನಗಳು ಬದುಕುವ ಹಾಗಿದ್ದೆನು. ಕಡೆಯವನಾದ ನನ್ನ ಸ್ನೇಹಿತನನ್ನು ನಾನು ಸಮಾಧಿಮಾಡುವಾಗ್ಗೆ, ನನ್ನ ಬಳಿ ಆಹಾರವಸ್ತುವು ಸ್ವಲ್ಪವಾಗಿದ್ದುದರಿಂದ ನನ್ನ ಹೊರತಾಗಿ, ಇತರರಾರೂ ಇಲ್ಲದುದರಿಂದಲೂ, ನನ್ನ ಸಮಾಧಿಯೆನ್ನು ನಾನೇ ತೋಡಿಕೊಂಡು ಅದರಲ್ಲಿ ಕುಳಿತು ನನಗೆ ಬಂದೊದಗಿದ ದುರವಸ್ಥೆಯನ್ನು, ನನ್ನ ಅವಿವೇಕವನ್ನು ಕುರಿತು, ಬಹಳ ಹೊತ್ತಿನವರೆಗೂ ಚಿಂತಿಸುತ್ತಾ, ದಿಕ್ಕುತೋಚದೆ ಕೋವದಿಂದ ನನ್ನ ಕೈ ಬೆರಳನ್ನು ನಾನೇ ಕಚ್ಚಿಕೊಂಡೆನು. ಆದರೆ ಇಂತಹ ದುರವಸ್ಥೆಯಲ್ಲಿರುವ, ನನಗೆ ಭಗವಂತನು ಮತ್ತೊಂದು ಸಾರಿ ಆ ಗುಹೆಯ ಬಳಿಗೆ ಹೋಗುವಹಾಗೆ ಆಜ್ಞಾಪಿಸಿದನು. ಆದುದರಿಂದ ಆ ಗುಹೆಯ ಬಳಿಗೆ ಹೋಗಿ, ಹರಿಯುತ್ತಿರುವ ನೀರನ್ನು ನೋಡಿ, ನನ್ನ ಮನಸ್ಸಿನಲ್ಲಿ ನಾನು, ಈ ಪ್ರವಾಹವೂ, ಯಾವದೋ ಒಂದು ಸ್ಥಳಕ್ಕೆ ಹೋಗುತ್ತಿದೆಯೆಲ್ಲವೇ, ಇದರ ಮೇಲೆ ಒಂದು ತೆಪ್ಪವನ್ನು ಹಾಕಿಕೊಂಡು, ನಾನು ಕುಳಿತುಕೊಂಡರೆ, ಇಲ್ಲವೆ ಮನುಷ್ಯ ಸಂಚಾರವಿರುವ ಪ್ರದೇಶವನ್ನು ಸೇರಬೇಕು. ಅದೂ ಇಲ್ಲವಾದರೆ, ಸಾಯಬೇಕು, ಸತ್ತರೆ ವ್ಯಸನವೇ ಇಲ್ಲ, ನನ್ನ ತೊಂದರೆಯೆಲ್ಲವೂ ಕಳೆಯಿತು, ಆದರೆ ಈ ದುಃಖಕರವಾದ ಸ್ಥಳದಲ್ಲಿ ಪ್ರಾಣವನ್ನೊಪ್ಪಿಸುವುದಕ್ಕಿಂತಲೂ ಮನುಷ್ಯಪ್ರಯತ್ನವನ್ನು ಮಾಡಿ ಸಹವಾಸದೊರೆಯೆದೆ ಇದ್ದರೆ, ಪ್ರವಾಹದಲ್ಲಿ ಪ್ರಾಣವನ್ನೊಪ್ಪಿಸುವುದೇ ಉತ್ತಮವೆಂದು ತಿಳಿದು, ಹತ್ತಿರಿದ್ದ ಕಟ್ಟಿಗೆಗಳನ್ನು ಹಗ್ಗಗಳನ್ನು ತೆಗೆದುಕೊಂಡು, ನನಗಿಷ್ಟವಾದ ತೆರದಿಂದೊಂದು ತೆಪ್ಪವನ್ನು ನಿರ್ಮಾಣಮಾಡಿ, ನನ್ನ ಬಳಿಯಲ್ಲಿದ್ದ ವಜ್ರ, ಕೆಂಪು, ಮೊದಲಾದ ಪದಾರ್ಥಗಳನ್ನು ಗಂಟುಕಟ್ಟಿ,

ಆ ತೆಪ್ಪದ ಮೇಲಿಟ್ಟುಕೊಂಡು ಭಗವದನುಗ್ರಹದಂತೆ, ಆದುದನ್ನು ಅನು ಭವಿಸುವುದಕ್ಕೆ ಸಿದ್ಧನಾಗಿರುವೆನೆಂದು ಹೇಳಿ, ಪ್ರವಾಹದಲ್ಲಿಳಿದೆನು. ಈ ಪ್ರವಾಹದಲ್ಲಿ ನಾನು ಹೋಗುತ್ತಿರುವಾಗ ಸ್ವಲ್ಪವೂ ಬೆಳಕಿಲ್ಲದೆ ನಾನು ಯಾ ವ ಸ್ಥಳಕ್ಕೆ ಹೋಗುತ್ತಿದ್ದೆನೋ, ಅದು ನನಗೆ ಗೊತ್ತಾಗಲಿಲ್ಲ. ಹೀಗಿರು ವಲ್ಲಿ ನನ್ನ ಬಳಯಲ್ಲಿರುವ ಆಹಾರವಸ್ತುಗಳನ್ನು ಸ್ವಲ್ಪವಾಗಿ ನಾನು ತಿಂ ದು ಜೀವಿಸುತ್ತಾ, ಇರುವಲ್ಲಿ ಆ ಗುಹೆಯನ್ನು ದಾಟಿಹೋಗುವಾಗ ತಲೆ ಗೆ ತಗಲುತ್ತಿದ್ದ, ಬಂಡೆಗಳಿಂದ ನನ್ನ ತಲೆಗೆ ಅಪಾಯವೇನೂ ಆಗದಂತೆ ಎಚ್ಚರಿಕೆಯಿಂದ ನೋಡಿಕೊಂಡು ಜಾಗರೂಕನಾಗಿದ್ದೆನು. ಹೀಗಿರುವಲ್ಲಿ ನನಗೆ ಅತ್ಯಾನಂದಕರವಾದ ನಿದ್ದೆ ಬಂದಿತು. ಎಷ್ಟು ಹೊತ್ತು ನಿದ್ದೆ ಹೋಗುತ್ತಿದ್ದೆನೋ, ನನಗೆ ಗೊತ್ತಾಗಲಿಲ್ಲ.

ಆದರೆ ನಾನು ನಿದ್ರೆ ತಿಳಿದುನೋಡುವಾಗ, ಒಂದಾನೊಂದು ದೇಶ ದಲ್ಲಿ ನದಿಯ ಮಧ್ಯದಲ್ಲಿರುವ, ಕಾಫರರುಗಳ ನಡುವೆ ನನ್ನ ತೆಪ್ಪವಿರು ವುದನ್ನು ಕಂಡು, ಮಹದಾನಂದಭರಿತನಾಗಿ, ಅವರಿಗೆ ವಂದನೆಗಳನ್ನಾಚ ರಿಸಿದೆನು. ಅವರು ಏನೋ ಮಾತನಾಡಿದರು. ಅವರ ಭಾಷೆಯು ನನಗೆ ತಿಳಯದೆ ಹೋದುದರಿಂದ ನನಗೆ ಮತ್ತೆ ಮತ್ತೆ ನಿದ್ದೆ ಬರುತ್ತಿರುವುದ ನ್ನು ಕಂಡು ಎಲ್ಲೆ ನಿಂದುಬಾದನೇ ! ಸರ್ವಶಕ್ತನಾದ ಭಗವಂತನಲ್ಲಿ ಭಕ್ತಿ ಯನ್ನಿಟ್ಟು, ಆತನನ್ನೇ ಧ್ಯಾನಮಾಡು, ಆತನು ನೀನು ನಿದ್ದೆ ಮಾಡುತ್ತಿ ರುವಾಗಲೆ, ನಿನ್ನ ತೊಂದರೆಗಳನ್ನು ಪರಿಹರಿಸುವನೆಂದು ಅರಬೀಭಾಷೆ ಯಿಂದ ಗಟ್ಟಿಯಾಗಿ ಕೂಗಿಕೊಂಡನು. ಆಗ ಆ ಮಾತನ್ನು ಕೇಳಿ, ಆ ಕಾಫರರುಗಳಲ್ಲಿ ಅರಬೀಭಾಷೆಯನ್ನು ತಿಳಿದವನಾದವನೊಬ್ಬನು, ಮುಂ ದೆ ಬಂದು ಅಯ್ಯಾ ! ನೀನು ಹೆದರಬೇಡ, ನಾವು ಈ ದೇಶವಾಸಿಗಳು, ಈ ಝರಿಯಿಂದ ಬರುತ್ತಿರುವ ನೀರನ್ನು ಸಣ್ಣಕಾಲುವೆಗಳ ಮೂಲಕ ಹೊ ಲಗದ್ದೆಗಳಿಗೆ ಹಾಯ್ಸಿಕೊಂಡು, ವ್ಯವಸಾಯಮಾಡುವುದಕ್ಕಾಗಿ ಇಲ್ಲಿಗೆ ಬಂದಿರುವೆವು. ನಾವು ಇಲ್ಲಿಗೆ ಬಂದ ಸ್ವಲ್ಪ ಹೊತ್ತಿನಲ್ಲಿ ನೀರಿನಲ್ಲೇನೊ ತೇಲಿಕೊಂಡು ಬರುವಂತೆ ತೋರುತ್ತಿದ್ದಿತು. ಬಳಿಕ ನಮ್ಮಲ್ಲೊಬ್ಬನು ಅದನ್ನು ಪರೀಕ್ಷಿಸಬೇಕೆಂದು ಹೋಗಿ ನೋಡಿ, ದೋಣಿಯೆಂಬುದು ತಿಳಿ ದು, ಅದರಲ್ಲಿ ನೀನು ಮಲಗಿಕೊಂಡು ನಿದ್ರೆಮಾಡುವವರೆಗೂ, ಕಟ್ಟಪಹಾಕಿ ದ್ದೆವು. ಈಗತಾನೇ ಎಚ್ಚರಿತ್ತಿರುವೆ, ನಿನ್ನ ಚರಿತ್ರೆಯು ಬಹು ಆಶ್ಚರ್ಯ

ಕರವಾಗಿರಬಹುದು ? ನೀನು ಈ ಗುಹೆಯಿಂದ ಹೇಗೆ ಬಂದೆ ! ಈ ಚರಿತ್ರೆಯಂ ನಮ್ಮಗಳಿಗೆ ಹೇಳಬೇಕೆಂದು, ಬೇಡಿಕೊಂಡರು. ಆಗ ನಾನು ಅವರನ್ನು ಕುರಿತು, ಅಯ್ಯಾ ! ನನಗೆ ಮೊದಲು ಸ್ವಲ್ಪ ಆಹಾರವನ್ನು ಕುಡಿಯುವುದಕ್ಕೆ ಸ್ವಲ್ಪ ನೀರನ್ನು ಕೊಟ್ಟರೆ, ನಾನು ನನ್ನ ಚರಿತ್ರೆಯನ್ನು ಹೇಳುವೆನೆಂದು ನುಡಿದುದನ್ನು ಕೇಳದಕೂಡಲೆ, ಅವರು ತಮ್ಮ ಬಳಿಯಲ್ಲಿದ್ದ, ನಾನಾವಿಧವಾದ ಆಹಾರವಸ್ತುಗಳನ್ನು ತಂದಿತ್ತರು. ನಾನು ಅದನ್ನು ತಿಂದು ಸ್ವಲ್ಪ ನೀರನ್ನು ಕುಡಿದು, ಬಳಲಿಕೆಯನ್ನು ತೀರಿಸಿಕೊಂಡು ನನ್ನ ಚರಿತ್ರೆಯನ್ನು ಸಮಗ್ರವಾಗಿಯೂ, ಸಂಪೂರ್ಣವಾಗಿಯೂ, ಅವರಿಗೆ ತಿಳಿಯಪಡಿಸಿದೆನು. ಅವರಾದರೋ ವಿಚಿತ್ರವಾದ ಈ ಕಥೆಯು ನಮಗೆ ಹೊಸದಾಗಿರುವುದರಿಂದ, ಅತ್ಯಾನಂದಕರವಾಗಿರುವುದೆಂದು ಹೇಳಿ, ಸಂತೋಷದಿಂದ ಕೇಳಿದರು. ಅವರಲ್ಲಿ ಅರಬೀಭಾಷೆಯನ್ನು ತಿಳಿದವನು, ನನ್ನ ಕಥೆಯನ್ನು ತಿಳಿಯಹೇಳಿದನು. ಆ ಜನರು ಇಂತಹ ವಿಚಿತ್ರಕರವಾದ ಕಥೆಯನ್ನು ತಮ್ಮ ರಾಜನಿಗೆ ತಿಳಿಯಪಡಿಸಬೇಕೆಂದು, ಮಾತನಾಡಿಕೊಂಡು, ಒಂದು ಕುದುರೆಯನ್ನು ತೆಗೆದುಕೊಂಡು ಬಂದರು. ನಾನು ಅದರಮೇಲೆ ಕೂತುಕೊಂಡೆನು. ಅವರಲ್ಲೊಬ್ಬನು ದಾರಿಯನ್ನು ತೋರಿಸುತ್ತಾ ಮುಂದೆ ಹೊರಟನು. ಉಳಿದವರು ನನ್ನ ಪದಾರ್ಥಗಳೆಲ್ಲವನ್ನೂ ತೆಗೆದುಕೊಂಡು ಬರುತ್ತಿದ್ದರು. ನಂತರ ನಾನು ನಿಮ್ಮಗಳ ಇಷ್ಟಾನುಸಾರವಾಗಿ ಪುನಹ ಕಥೆಯನ್ನು ಹೇಳ ನಿಮ್ಮಗಳ ಮನಸ್ಸನ್ನು ಸಮಾಧಾನಪಡಿಸುತ್ತೇನೆಂದು ಹೇಳಿದೆನು. ಇಂತೆಂದುಹೇಳಿ ಷಹರಜಾದಿ ಬಿಳಗಾದಕೂಡಲೆ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಹೇಳಲಾರಂಭಿಸಿದಳು.

೪೨ ನೆಯ ರಾತ್ರಿ ಕಥೆ.

ಬಳಿಕ ಸಿಂದುಬಾದನು, ತನ್ನ ಸಭಿಕರನ್ನು ನೋಡಿ, ಇಂತೆಂದು ಹೇಳಿದನು. ಈ ಪ್ರಕಾರದಿಂದ ನಾನು ಕುದುರೆಯೆನ್ನೇರಿ, ಸಿರಂದಿಬ್ಬವೆಂಬ ದ್ವೀಪವನ್ನು ಸೇರಿ, ಅದೇ ಹೆಸರಿನ ರಾಜಧಾನಿಗೂ ಬಂದೆನು. ಆಗ ಕಾಫರರು ನನ್ನನ್ನು ಬಹುಸಂತೋಷದಿಂದ ತಮ್ಮ ರಾಜನ ಬಳಿಗೆ ಕರೆದುಕೊಂಡುಹೋಗಿ ಅತನ ಸಿಂಹಾಸನದ ಬಳಿಯಲ್ಲಿ ನಿಲ್ಲಿಸಿದರು. ನಾನು

ಆ ರಾಜನನ್ನು ನೋಡಿ, ಕೊಡಲೆ ಇಂಡಿಯಾದೇಶದ ರಾಜರಿಗೆ ಮಾಡುವ ಮರ್ಯಾದೆಯಂತೆ, ಕಾಲೂರಿಕುಳಿತು ಪಾದಗಳಿಗೆರಗಿ ವಸ್ತ್ರಪಸಿರಗನ್ನು ಮುತ್ತಿಟ್ಟುಕೊಂಡು, ವಿನಯದಿಂದ ತಲೆವಾಗಿ ನಮಿಸಿದೆನು. ಆತನು ಬ ಹು ಪ್ರೀತಿಯಿಂದ ನನ್ನನ್ನು ಕರೆದು, ತನ್ನ ಹತ್ತಿರದಲ್ಲಿ ಕುಳ್ಳಿರಿಸಿಕೊಂ ಡು, ಸಂತೋಷದಿಂದ ನೀನಾರೆಂದು ಕೇಳಿದನು. ಆಗ ನಾನು ಅಯ್ಯಾ ! ನಾನು ಹಲವು ಬಾರಿ ಸಮುದ್ರದಲ್ಲಿ ಸಂಚರಿಸಿ ವ್ಯಾಪಾರಮಾಡಿದುದರಿಂದ ನನ್ನನ್ನು ಸಿಂದುಬಾದುನಾವಿಕನೆಂದು ಕರೆಯುವರು. ನನ್ನ ವಾಸಸ್ಥಳ ಪೂ ರಬೀದೇಶದಲ್ಲಿ ಬಾಗದಾದುಪಟ್ಟಣವೆಂದು ಹೇಳಿದೆನು. ಆತನು ನ ನ್ನನ್ನು ನೋಡಿ ನೀನು ನಿನ್ನ ರಾಜ್ಯವನ್ನು ಬಿಟ್ಟು ನನ್ನ ದೇಶದಲ್ಲಿ ಹೇಗೆ ಪ್ರವೇಶಮಾಡಿದೆ ? ಇಲ್ಲಿಗೆ ಬರುವಂತೆ ನಿನ್ನನ್ನು ಕರೆದುಕೊಂಡು ಬಂದವ ರಾರೆಂದು ಪ್ರಶ್ನೆಮಾಡಲು, ನಾನು ಮೊದಲು ಕಾಫರರಿಗೆ ಹೇಳದಂತೆ ನನ್ನ ಚರಿತ್ರೆಯನ್ನು ವಿಸ್ತಾರವಾಗಿ ಬಾ, ಚೂ, ತಪ್ಪದೆ ಹೇಳಿದೆನು. ಅದ ನ್ನು ಕೇಳಿ ಆತನು ಪರಮಾಶ್ಚರ್ಯಭರಿತನಾಗಿ, ವಿಚಿತ್ರತರವಾದ ನನ್ನ ಚರಿ ತ್ರೆಯನ್ನು ಬಂಗಾರದ ಅಕ್ಷರಗಳಿಂದ ಬರೆಯಿಸಿ, ತನ್ನ ಪುಸ್ತಕಭಂಡಾರ ದಲ್ಲಿರಿಸಿದನು. ಬಳಿಕ ನನ್ನ ತಪ್ಪದಲ್ಲಿದ್ದ ಮೂಟೆಗಳನ್ನು ಆತನೆದುರಿಗೆ ಬಿಚ್ಚಿದರು. ಆತನು ಅತ್ಯುತ್ತಮವಾಗಿದ್ದ ಅಂಬರುಕಡ್ಡಿಗಳನ್ನು, ಅಗರು ಚೆಕ್ಕೆಗಳನ್ನು ನೋಡಿ ಪರಮಾನಂದಭರಿತನಾಗಿ, ತನ್ನ ಭಂಡಾರವಲ್ಲಿರುವ ಪಚ್ಚೆ ವಜ್ರ ಮೊದಲಾದ ರತ್ನಗಳಿಗಿಂತಲೂ, ಅತಿಶಯವಾಗಿರುವ ರತ್ನಗ ಳನ್ನು ನೋಡಿ ಮತ್ತಷ್ಟು ಆನಂದಭರಿತನಾದನು.

ಆಗ ಆತನು ನನ್ನಲ್ಲಿದ್ದ ರತ್ನಗಳನ್ನು ಪರೀಕ್ಷಿಸುತ್ತಿರುವುದನ್ನು ಕಂಡು, ನಾನು ಆತನ ಕಾಲುಗಳ ಮೇಲೆ ಬಿದ್ದು, ಅಯ್ಯಾ ! ರಾಜಾಧಿರಾ ಜಾ ! ನಾನು ಹೇಗೆ ನಿನ್ನ ಸ್ವಾಧೀನನಾಗಿರುವೆನೋ ಹಾಗೆಯೇ, ನನ್ನೀರ ತ್ನಗಳೂ ನಿನ್ನ ಸ್ವಾಧೀನವಾಗಿರುವುದರಿಂದ ನಿನಗಿಷ್ಟವಾಗಿರುವ ರತ್ನಗ ಳನ್ನು ಉಪಯೋಗಿಸಿಕೊಳ್ಳಬಹುದೆಂದು, ಹೇಳಿದೆನು. ಆತನು ನನ್ನ ನ್ನು ನೋಡಿ ಅಯ್ಯಾ ! ಸಿಂದುಬಾದನೇ, ಭಗವಂತನು ನಿನಗಾಗಿ ಕೊಟ್ಟ ರುವ ಪದಾರ್ಥಗಳನ್ನು ನಾನೆಂದಿಗೂ ಅಪಹರಿಸಲಾರೆನು. ಆತನು ನಿನ್ನ ಐಶ್ವರ್ಯವನ್ನು ಇನ್ನೂ ವೃದ್ಧಿಮಾಡುವನೆಂಬುದಕ್ಕೆ ನಿನಗಿರುವೀ ಬೆಡಾ ರ್ಯಗುಣವೇ ಸಾಕ್ಷಿಯಾಗಿರುವುದು. ಎಂದು ಹೇಳಿ ತನ್ನ ಪ್ರಧಾನ

ಮಂತ್ರಿಯನ್ನು ಕರೆದು, ನನ್ನನ್ನು ನನ್ನ ಪದಾರ್ಥಗಳನ್ನು ಎಚ್ಚರಿಕೆಯಿಂದ ನೋಡಿಕೊಳ್ಳುವಂತೆ ಆಜ್ಞಾಪಿಸಿದನು. ಆ ಪ್ರಧಾನಮಂತ್ರಿಯು ರಾಜಾಜ್ಞೆಯಂತೆ, ಅತ್ಯಂತ ವಿಶ್ವಾಸಪುರಸ್ಸರವಾಗಿ, ನನ್ನನ್ನು ಆದರಿಸುವುದಕ್ಕಾಗಿ, ಗೊತ್ತುಮಾಡಿದ ಬಿಡದಿಯ ಮನೆಗೆ ಕರೆದುಕೊಂಡು ಬಂದು, ಸಾವಧಾನುಗಳ ಪಹಿತವಾಗಿ ನನ್ನನ್ನು ಆ ಬಿಡದಿಯಲ್ಲಿ ಸೇರಿಸಿ, ನನ್ನ ಉಪಚಾರಕ್ಕಾಗಿ ಬೇಕಾದಷ್ಟು ಜನ ಪರಿಚಾರಕರನ್ನು ಗೊತ್ತುಮಾಡಿದನು. ಆ ಜನರು ಗೌರವದಿಂದ ನನ್ನನ್ನು ಸುಖವಾಗಿ ಕಾಪಾಡುತ್ತಿದ್ದರು. ನಾನು ಪ್ರತಿದಿನವೂ ಗೊತ್ತಾದ ಕಾಲದಲ್ಲಿ ಹೋಗಿ ರಾಜದರ್ಶನವನ್ನು ಮಾಡಿಕೊಂಡು ಬರುತ್ತಿದ್ದೆನು.

ಕೆಲವು ಕಾಲ ಆತನೊಡನೆ ವಿನೋದವಾಗಿ ಮಾತನಾಡುತ್ತಿದ್ದು, ಬಳಿಕ ಆ ದ್ವೀಪದಲ್ಲಿರುವ ವಿಚಿತ್ರಕರಗಳಾದ, ವಸ್ತುಗಳನ್ನು ನೋಡುತ್ತಾ ಸಂತೋಷದಿಂದ ಕಾಲವನ್ನು ಕಳೆಯುತ್ತಿದ್ದೆನು. ಆ ದ್ವೀಪವು ಸಮುಭಾಜಕವೃತ್ತವೆಂಬ ಭೂಮಧ್ಯ ರೇಖೆಗೆ ಸಮವಾಗಿದ್ದುದರಿಂದ, ಅಹೋರಾತ್ರಿಗಳು ಮುವ್ವತ್ತು ಘಳಿಗೆಗಳಿಗಿಂತಲೂ ಕಡಿಮೆಯಾಗಿರಲಿಲ್ಲ. ಅಲ್ಲದೆ ಅತ್ಯಂತ ವಿಸ್ತಾರವಾಗಿಯೂ, ಅದರಷ್ಟೇ ಅಗಲವಾಗಿಯೂ, ಇದ್ದಿತು. ಆ ದ್ವೀಪದ ರಾಜಧಾನಿಯಾದರೋ ಪ್ರಪಂಚದಲ್ಲಿರುವ ಇತರ ಪಟ್ಟಣಗಳಿಗಿಂತಲೂ, ಅಧಿಕವಾಗಿಯೂ, ಅತಿಶಯವಾಗಿಯೂ, ಇರುವ ಒಂದಾನೊಂದು ಪರ್ವತದ ಶಿಖರದಲ್ಲಿದ್ದಿತು. ಸಮುದ್ರತೀರದಿಂದ ಮೂರು ದಿನಗಳು ಪ್ರಯಾಣಮಾಡುವಷ್ಟು ದೂರವಾಗಿದ್ದಿತು. ಇಂತಹ ದ್ವೀಪದಲ್ಲಿ ನಾನಾವಿಧವಾದ ರತ್ನಗಳು ಹೊಳೆಯುತ್ತಿರುವುವು. ಅಲ್ಲಿರುವ ಕಲ್ಲುಗಳೆಲ್ಲವೂ ರತ್ನವಾಗಿಯೇ ಇದ್ದಿತು. ಆ ದ್ವೀಪದಲ್ಲಿ ಮನೋಹರವಾಗಿಯೂ, ಫಲವುಷ್ಪಗಳನ್ನೊಳಗೊಂಡಿರತಕ್ಕವುಗಳಾಗಿಯೂ, ಇರುವ ನಾನಾ ಜಾತಿಯ ವೃಕ್ಷಗಳಿದ್ದವು. ಅವುಗಳಲ್ಲಿ ತೆಂಗಿನ ಮತ್ತು ಜಾಜಿಯ ಗಿಡಗಳು ಹೇರಳವಾಗಿದ್ದುವು. ಆ ದೇಶದ ರೇವಿನಲ್ಲಿ ಮುತ್ತಿನ ಮತ್ತು ಹವಳದ ಕೋಟಿಗಳು ಮನೋಹರವಾಗಿ ಹೊಳೆಯುತ್ತಿದ್ದಿತು. ವಜ್ರಗಳಾದರೊ, ಕಗ್ಗಲ್ಲಿನಂತೆ ತಡಹಾಯ್ದು ಬೀದಿಬೀದಿಯಲ್ಲಿಯೂ ಬಿದ್ದಿರುತ್ತಿದ್ದುವು. ನಾನಾದರೊ ಭಕ್ತಿಮಾರ್ಗದಿಂದ ಕೂಡಿದವನಾಗಿ, ಆದಮನು ಭಗವಂತನ ಉದ್ಯಾನವನದಿಂದ ಹೊರ ಹೊರಟುಬಂದು ನೆಲೆಯಾಗಿ ನಿಂತ ಆ ಪರ್ವತದ ಶಿಖರ

ವನ್ನು ಹೋಗಿ ನೋಡಿಕೊಂಡು, ಯಾತ್ರೆಯನ್ನು ತೀರಿಸಿಕೊಂಡು, ಬರ ಬೇಕೆಂಬಭಿಲಾಷೆಯುಳ್ಳವನಾಗಿದ್ದೆನು.

ನಾನು ಯಾತ್ರೆಯನ್ನು ಮುಗಿಸಿಕೊಂಡು, ರಾಜನ ಬಳಿಗೆ ಬಂದು, ನನ್ನ ಸ್ವದೇಶಕ್ಕೆ ಪ್ರಯಾಣಮಾಡಲು ಅಪ್ಪಣೆ ಕೊಡಬೇಕೆಂದು ಬೇಡಿಕೊಂಡೆನು. ಆತನು ನನಗೆ ಬಹಳವಾಗಿ ಮರ್ಯ್ಯಾದೆಮಾಡಿ, ತನ್ನ ರಾಜ್ಯದಲ್ಲಿರುವ ಉತ್ತಮ ವಸ್ತುಗಳನ್ನು ಬಹುಮಾನವಾಗಿ ಕೊಟ್ಟು ನನ್ನೂರಿಗೆ ಪ್ರಯಾಣಮಾಡಲು, ಅಪ್ಪಣೆ ಕೊಟ್ಟನು. ಅಲ್ಲದೆ ಬಳಿಕ ನಮ್ಮ ರಾಜೌಧಿರಾಜರಿಗೊಂದು, ವಿಜ್ಞಾಪನಾಪತ್ರಿಕೆಯನ್ನು ಬರೆದು, ನನ್ನ ಕೈಗೆ ಕೊಟ್ಟು, ಅಯ್ಯಾ ! ನೀನು ಇದನ್ನು ಬಹು ಜಾಗ್ರತೆಯಿಂದ ತೆಗೆದುಕೊಂಡು, ನನ್ನ ಮೂಲಕವಾದ ಮರ್ಯ್ಯಾದೆಯನ್ನು ಅವರಿಗೆ ತಿಳಿಸಿ, ಈ ಪತ್ರವನೊಪ್ಪಿಸಿ, ನಾನು ಬೆಳೆಸಬೇಕೆಂದಿರುವ ಸ್ನೇಹದ ತಾತ್ಪರ್ಯ್ಯವನ್ನಾತನಿಗೆ, ತಿಳಿಸಬೇಕೆಂದು ನುಡಿದನು. ನಾನು ಆತನನ್ನು ಕುರಿತು, ತಮ್ಮ ಅಪ್ಪಣೆಯಂತೆ ಈ ಕಾಗದವನ್ನು ತೆಗೆದುಕೊಂಡು, ಹೋಗಿ, ನಮ್ಮಧಿರಾಜನಾದ ಹರೋರ್ಷ ಅಲರಾಶ್ಚಿದವರ ಸನ್ನಿಧಿಯಲ್ಲಿ ಕೊಟ್ಟು ತಾವು ಮಾಡಿದ ಮನ್ನಣೆಯನ್ನು ಅವರಿಗೆ ತಿಳಿಯಪಡಿಸುವೆನೆಂದು ಹೇಳಿದ ಕೂಡಲೆ, ಆ ರಾಜನು ಹಡಗಿನ ಯಜಮಾನನನ್ನು ಕರೆಸಿ, ಈ ದೊಡ್ಡ ಮನುಷ್ಯನಾದ ಸಿಂದುಬಾದನನ್ನು ಬಹು ಮರ್ಯ್ಯಾದೆಯಿಂದ ನನ್ನಂತೆ ಭಾವಿಸಿ, ಆತನ ಊರಿಗೆ ಕರೆದುಕೊಂಡು ಹೋಗಬೇಕೆಂದು ಹೇಳಿದನು. ನಂತರ ನಾನು ಆತನು ಕೊಟ್ಟ ವಿಜ್ಞಾಪನಾಪತ್ರಿಕೆಯನ್ನು ನೋಡಲು ಅದು ಅತ್ಯುತ್ತಮವಾದ ಹಳದಿಬಣ್ಣದ ಹುಲಿಯ ಚರ್ಮದಮೇಲೆ, ನೀಲ ವರ್ಣದ ಅಕ್ಷರಗಳನ್ನು ಕೆತ್ತಿರುವುದರಿಂದ, ನೋಡುವುದಕ್ಕೆ ಬಹು ಸುಂದರವಾಗಿದ್ದಿತು. ಆ ಕಾಗದದ ವಿವರವೇನೆಂದರೆ:—

ಸಾವಿರ ಆನೆಗಳನ್ನು ಸಹಜದಿಂದ ಪೋಷಿಸುತ್ತ ಲಕ್ಷೋಪಲಕ್ಷ ರತ್ನರಾಜಿಗಳಿಂದ ಹೊಳೆಯುತ್ತಿರುವ ಬಾಗಿದಾದು ಪಟ್ಟಣವನ್ನಾಳುವ ಕಿರೀಟಕೋಟೀರಸಂಘಟ್ಟಿತ ರತ್ನಕಾಂತಿಯಿಂದ ದಿಙ್ಮಂಡಲವಂ ಬೆಳಗುತ್ತಿರುವ ರತ್ನಮುಕುಟಧಾರಕರಾದ ಸರ್ವಸಂಪದ್ಯುಕ್ತವಾದ ಇಂಡಿಯಾದೇಶದ ರಾಜರಾದ ಕಲೀಪು, ಹರೋರ್ಷ ಅಲರಾಶ್ಚಿದವರ ಸನ್ನಿಧಿಗೆ—"ಸಿರಂದಿಬಾ"

ಎಂಬ ದ್ವೀಪದ ರಾಜನಾದ ನಾನು ವಿಜ್ಞಾಪಿಸಿ, ಕಳುಹಿಸಿದ ಪತ್ರವೇನೆಂದರೆ, ನಾನು ತಮ್ಮ ಸನ್ನಿಧಾನಕ್ಕೆ ಕಳುಹಿಸಿರುವ ಬಹುಮಾನಗಳು, ಅತ್ಯಲ್ಪವಾಗಿದ್ದರೂ, ನನಗೆ ತಮ್ಮಲ್ಲಿ ಉಂಟಾದ ಭಕ್ತಿವಾತ್ಸಲ್ಯಗಳನ್ನು ತೋರ್ಪಡಿಸುವುದಕ್ಕಾಗಿ ಕಳುಹಿಸಲ್ಪಟ್ಟಿರುವುವು. ಈ ವಿಧವಾದ ನನ್ನ ಸ್ನೇಹವನ್ನು ಕುರಿತು, ತಾವು ಮಿತ್ರ ಸಹೋದರ ವಾತ್ಸಲ್ಯಯುಕ್ತರಾಗಿ ಪರಿಗ್ರಹಿಸಿ, ನಾವು ಸಮಾನ ಯೋಗ್ಯತೆಯನ್ನು ವಹಿಸಿದ, ಪರಸ್ಪರಾನುರಾಗವುಳ್ಳವರಾದ, ಅಣ್ಣತಮ್ಮಂದಿರೆಂದು ತಿಳಿದು, ಸಂಪೂರ್ಣ ಭ್ರಾತೃವಾತ್ಸಲ್ಯವುಳ್ಳವರಾಗಿರಬೇಕೆಂದು, ಪ್ರಾರ್ಥಿಸಿ, ಬರೆದುಕೊಂಡ ವಿಜ್ಞಾಪನಾಪತ್ರ—ಸಹಿಸಲಾಮು.

ಬಹುಮಾನಗಳ ವಿವರ.



(೧) ಕೆಂಪಿನಿಂದ ಮಾಡಿದ ಆರು ಅಂಗುಲ ಉದ್ದವೂ, ಒಂದಂಗುಲ ಸುತ್ತಳತೆಯೂ ಉಳ್ಳ ಬಟ್ಟಲು, ಅದರ ತುಂಬ ತುಂಬಿರುವ ಆಣಿಮುತ್ತುಗಳು. (೨) ಮತ್ತೊಂದು ಬಹುಮಾನವು ಬಂಗಾರದ ನಾಣ್ಯದಂತೆ ಮನೋಹರವಾದ ಮಚ್ಚೆಗಳಿರುವ ಹುಲಿಯಪೊರೆ, ಇದರಮೇಲೆ ಮಲಗಿದರೆ ಸರ್ವ ರೋಗಗಳೂ ನಿವಾರಣೆಯಾಗುವುವು. ಬಳಿಕ ಎಂಟು ಸಾವಿರ ಡ್ರಾಮುಗಳ ತೂಕವಿರುವ ಅಗರುಪಚ್ಚೆ ಅತ್ಯಂತ ಉತ್ಕೃಷ್ಟವಾದ ಕರ್ಪೂರದ ಹೂ, ಮತ್ತು ನವರತ್ನಮಯವಾದ ಸರ್ವಾಭರಣಗಳಿಂದ ಶೋಭಿತಗಳಾಗಿ ಉತ್ತಮ ವಸ್ತ್ರಗಳನ್ನು ಧರಿಸಿರುವ ಉತ್ತಮ ಸ್ತ್ರೀ, ಇವುಗಳನ್ನು ಘನವಂತರಾದ ತಮ್ಮ ಸನ್ನಿಧಿಗೆ ಕಳುಹಿಸಿರುವೆನೆಂದು ಅದರಲ್ಲಿ ಬರೆದಿದ್ದಿತು. ಬಳಿಕ ಅದನ್ನು ತೆಗೆದುಕೊಂಡು, ನನ್ನ ಸ್ನೇಹಿತರಿಂದಲೂ, ರಾಜನಿಂದಲೂ, ಅಪ್ಪಣೆಯನ್ನು ಪಡೆದು, ಹಡಗನ್ನು ಹತ್ತಿ, ನಾನಾರೇವುಗಳಲ್ಲಿ ನಿಂತು, ಸುಖವಾಗಿ ಬಾಲಸೂರನ್ನು ತಲಪಿ ಕ್ಷೇಮದಿಂದ ಬಾಗದಾದಿಗೆ ಬಂದು, ನಾನು ಮಾಡಬೇಕಾದ ಕೆಲಸಗಳನ್ನು ಮಾಡಬೇಕೆಂದಿದ್ದೆನು. ಎಂದು ನುಡಿದನೆಂದು ಮೇಳಿ ಬೆಳಗಾದಕೂಡಲೆ ಕಥೆಯನ್ನು

ನಿಲ್ಲಿಸಿ, ಮರುದಿನದ ಬೆಳಗಿನಜಾವದಲ್ಲಿ, ಪುನಹ ಷಹರಜಾದಿಯು ಹೇಳ ಲಾರಂಭಿಸಿದಳು.

೪೪ ನೆಯ ರಾತ್ರಿಕಥೆ.

ನಂತರ ಸಿಂದುಬಾದನು ತನ್ನ ಸಖಿಕರನ್ನು ಕುರಿತು ಇಂತೆಂದು, ಹೇಳಲಾರಂಭಿಸಿ, ನಾನು, ಸಿರಂದಿಬಾ, ದ್ವೀಪದ ರಾಜನ ಕಾಗದವನ್ನೂ ಸುಂದರೀಮಣಿಯಾದ ಆ ಹೆಂಗಸನ್ನು ಅವನು ಕಳುಹಿಸಿದ ಬಹುಮಾನವ ನ್ನು ತೆಗೆದುಕೊಂಡು,ಕಲೀಫ್ ಹರೋ೯ ಅಲರಾಶ್ಚಿದರ ಅರಮನೆಯನ್ನು ಸೇರಿ, ತಾನು ತಂದಿರುವ ಬಹುಮಾನಗಳನ್ನು ವಿವರಿಸಿ ಹೇಳಿ, ತಮ್ಮ ಸಂದರ್ಶನಕ್ಕಾಗಿ ಬಂದಿರುವೆನೆಂದು ಹೇಳಿ ಕಳುಹಿಸಿದೆನು. ನಂತರ ರಾಜ ನು ಸಿಂಹಾಸನಾರೂಢನಾಗಿ ಕುಳಿತು, ನನ್ನನ್ನು ತನ್ನ ಹತ್ತಿರಕ್ಕೆ ಕರೆಸಿ ಕೊಂಡು, ಮರ್ಯಾದೆಯಿಂದ ಮಾತನಾಡಿಸಿದ ನಂತರ, ನಾನು ಆತನಿಗೆ ದೀರ್ಘದಂಡ ಪ್ರಣಾಮಾದಿಗಳನ್ನು ಮಾಡಿದೆನು. ಬಳಿಕ ಆತನು ಕಳುಹಿಸಿದ ಬಹುಮಾನಗಳನ್ನು ಹರೋ೯ಅಲರಾಶ್ಚಿದರಿಗೊಪ್ಪಿಸಿ, ನಿಂತುಕೊಂಡೆನು.

ಆಗ ಆತನು ನನ್ನನ್ನು ನೋಡಿ, ಅಯ್ಯಾ! ಈ ಕಾಗದಲ್ಲಿ ಬರೆ ದಿರುವ ಆ ರಾಜನು, ಶೌರ್ಯ ಧೈರ್ಯ ಪರಾಕ್ರಮವುಳ್ಳ ಧನವಂತನಾಗಿ ರುವನೆ ? ಎಂದು ಕೇಳಿದನು. ನಾನು ಎರಡನೆಯ ಸಾರಿ ಆತನಿಗೆ ಪ್ರಣಾ ಮವಂಗೈಯ್ದು, ಓ ರಾಜಾಧಿರಾಜಾ ! ಆತನ ನಿಜವಾದ ಸಂಗತಿಗಳಿಗಿಂ ತಲೂ, ಅತಿಶಯವಾಗಿ ಬರೆದಿಲ್ಲ. ಆತನ ಐಶ್ವರ್ಯವನ್ನು ನಾನು ಕಣ್ಣಿ ನಿಂದ ನೋಡಿರುವೆನು. ಭಾಗ್ಯಶಾಲಿಯೆಂದು ಹೇಳುವುದಕ್ಕೆ ಆತನ ಪಟ್ಟ ಣವೊಂದೇ ಸಾಕು. ಇಂತಿರುವ ಆತನ ಐಶ್ವರ್ಯಸ್ಥಿತಿಯನ್ನು ಕುರಿತು ನಿಮ್ಮ ಕೈಯೆಲ್ಲಿರುವ ಕಾಗದಕ್ಕಿಂತಲೂ ಅತಿಶಯವಾಗಿ ನಾನು ಹೇಳಲಾರೆ ನು. ಇದರರ್ಥವನ್ನು ತಾವು ಮೊದಲೇ ಗ್ರಹಿಸಿಕೊಂಡಿರುವರಾದುದರಿಂ ದ, ನಾನು ಪುನಹ ವಿವರಿಸಲಶಕ್ತನಾಗಿರುವೆನು. ಆ ರಾಜನು ದಿವ್ಯಾಲಂ ಕಾರ ಭೂಷಿತವಾದ ಮದ್ದಾನೆಯಮೇಲೆ, ಮಣಿಮಯ ಸಿಂಹಾಸನದಲ್ಲಿ ಕುಳಿತು ಪ್ರಯಾಣಮಾಡುತ್ತಿರುವಾಗ, ತನ್ನ ಬೆಡಗಿನ ಬಾಕದಿಂದ ಇಂದ್ರ

ನನ್ನು ಸಹ ತಿರಸ್ಕರಿಸುವನು. ಇಂತಹ ರಾಜನ ಕೀರ್ತಿಯನ್ನು, ಪ್ರಜೆಯವನ್ನು ಕುರಿತು, ಸುತ್ತಲೂ ಬರುತ್ತಿರುವ ವಂದಿಮಾಗಧರು, ಹೊಗಳುತ್ತಿರುವ ಒಕ್ಕಣೆಗಳನ್ನು ಲೆಕ್ಕಮಾಡುವುದಾದರೆ, ಉಕ್ಕಿಬರುವ ಸಮುದ್ರದಂತೆ ಶಬ್ದಜಾಲವು ಏರುತ್ತಲೂ ಇಳಿಯುತ್ತಲೂ, ಇರುವುದು. ಇಂತಹ ರಾಜನು ನೀತಿವಂತನಾಗಿ ಧರ್ಮದಿಂದ ಪ್ರಜಾಪರಿಪಾಲನೆಯನ್ನು ಮಾಡುತ್ತಾ, ತನ್ನ ರಾಜ್ಯದಲ್ಲಿ ನಡೆಯುವ ನ್ಯಾಯಾನ್ಯಾಯಗಳನ್ನು ವಿಚಾರಿಸುವುದಕ್ಕಾಗಿ, ಯೋಗ್ಯರಾದ ನ್ಯಾಯಾಧಿಪತಿಗಳನ್ನು ಗೊತ್ತುಮಾಡಿರುವನು. ಅಲ್ಲದೆ ಆ ದೇಶದ ಜನರು ಕೀರ್ತಿವಂತರಾಗಿಯೂ, ಚತುರರಾಗಿಯೂ, ದಯಾವರರಾಗಿಯೂ ಇರುವರೆಂದು ನಾನು ವಿನ್ನೈಸಿದೆನು.

ಬಳಿಕ ಕಲೀಫರು ನಾನು ಹೇಳಿದ ವರ್ತಮಾನವನ್ನು ಅತ್ಯುತ್ತಾಸ್ಪದಿಂದ ಕೇಳಿ, ಆ ಸಿರಂದಿಬಾ, ದ್ವೀಪದ ರಾಜನ ಕೀರ್ತಿಯುಕ್ತವಾದ ಗುಣಗಳನ್ನು ವಿವೇಕವನ್ನು ಕೊಂಡಾಡಿ, ಆತನ ಪ್ರಜೆಗಳಿಗೆ ಆತನೇ ತಕ್ಕ ರಾಜನೆಂದು, ವಿವೇಕಶಾಲಿಗಳಲ್ಲಿ ಮೊದಲನೆಯವನೆಂದೂ, ಈ ಕಾಗದದಿಂದ ನನಗೆ ತೋರಿಬರುವುದೆಂದು ಹೇಳಿ, ಆತನ ಮೂಲಕವಾಗಿ ಬಂದಿರುವ, ನೀನು ಈ ಬಹುಮಾನಗಳನ್ನು ಪರಿಗ್ರಹಿಸಬೇಕೆಂದು, ಉತ್ತಮ ಪದಾರ್ಥಗಳನ್ನಿತ್ತು, ನನ್ನನ್ನು ಮನೆಗೆ ಕಳುಹಿಸಿಕೊಟ್ಟರು. ಎಂದು ಹೇಳಿ ಸಿಂದುಬಾದನು ತನ್ನ ಸಭಿಕರನ್ನೆಲ್ಲಾ ಸಂತುಷ್ಟಗೊಳಿಸಿ, ಕೂಲಿಕಾರನಿಗೆ ಮತ್ತೊಂದು ನೂರು ಸೆಕ್ವಿನ್‌ಗಳನ್ನು ಕೊಟ್ಟು ಆದರದಿಂದ ಮನೆಗೆ ಕಳುಹಿಸಿದನು. ಆ ಸಭಿಕರಾದರೊ ಸಂತೋಷದಿಂದ ತಂತಮ್ಮ ಮನೆಗಳನ್ನು ಸೇರಿ, ಬಿಳಗಾದ ಕೂಡಲೆ ಸಿಂದುಬಾದನ ಕಡೆಯ ಸಮುದ್ರಯಾನದ ಚರಿತ್ರೆಯನ್ನು ಕೇಳಬೇಕೆಂಬ ಕುತೂಹಲದಿಂದ, ಕ್ಲಿಪ್ತಕಾಲಕ್ಕೆ ಸರಿಯಾಗಿ ಬಂದು ಆತನ ಮನೆಯನ್ನು ಸೇರಿದರು.



ಸಿಂದುಬಾದನು ಮಾಡಿದ ಕಡೆಯ ಪ್ರಯಾಣ.



ಆರನೆಯ ಸಾರಿ ಪ್ರಯಾಣಮಾಡಿದ ಬಳಿಕ ನಾನು ಹಿಂದೆ ಅನುಭವಿಸಿದ ತೊಂದರೆಗಳಿಂದಲೂ, ವಯಸ್ಸುಗಳತವಾದುದರಿಂದ ದೇಹದಲ್ಲಿ ಮೊದಲಿನಂತೆ ಶಕ್ತಿ ಇಲ್ಲದುದರಿಂದಲೂ, ನಾನು ಪ್ರಯಾಣಮಾಡಬೇಕೆಂಬಾಸೆಯನ್ನು ತೊರೆದು ಸ್ವಸ್ಥವಾಗಿ ನನ್ನ ಮನೆಯಲ್ಲೇ ಇರುತ್ತಿದ್ದೆನು. ಹೀಗಿರುವಲ್ಲಿ ಒಂದಾನೊಂದು ದಿನ ಸಂತೋಷಕ್ಕಾಗಿ ನನ್ನ ಸ್ನೇಹಿತರನ್ನು ಔತಣಕ್ಕೆ ಕರೆದು ಉಪಚರಿಸುತ್ತಿದ್ದೆನು. ಆಗ ನನ್ನ ಸೇವಕರಲ್ಲೊಬ್ಬನು ನನ್ನ ಬಳಿಗೆ ಓಡಿಬಂದು, ಅಯ್ಯಾ! ಕಲೀಫರ ಕಡೆಯ ಚಾರಕರು ತಮ್ಮನ್ನು ನೋಡಬೇಕೆಂದು ಹುಡುಕುತ್ತಿರುವರೆಂದು ಹೇಳಿದನು. ಕೂಡಲೇ ನಾನು ಆ ಚಾರಕರ ಬಳಿಗೆ ಬಂದು ಮಾತನಾಡಿದೆನು. ಅವರು ಕಲೀಫರು ತಮ್ಮ ಸಂಗಡ ಏನೋ ಮಾತನಾಡಬೇಕೆಂದಿರುವುದರಿಂದ ತಮ್ಮನ್ನು ಕರೆದುಕೊಂಡು ಬರುವಂತೆ ಹೇಳಿರುವರೆಂದು ನುಡಿದನು. ನಾನು ಅವರ ಸಂಗಡಲೆ ಹೊರಟು ಕಲೀಫರ ಅರಮನೆಯನ್ನು ಸೇರಿ, ಅವರಿಗೆ ಪಾದಾಕ್ರಾಂತನಾಗಿ ವಂದನೆಗಳನ್ನು ಮಾಡಿ ನಿಂತುಕೊಂಡೆನು. ಆಗ ಕಲೀಫರು ನನ್ನನ್ನು ನೋಡಿ, ಅಯ್ಯಾ! ಸಿಂದುಬಾದನೆ, ನಿನ್ನಿಂದ ನನಗೊಂದು ಕಾರ್ಯವಾಗಬೇಕಾಗಿರುವುದು. ಅದು ನಿನಗೂ ಕೂಡ ಉತ್ಸಾಹಕರವಾದುದು. ಅದೇನೆಂದರೆ, ಸಿರಂದಿಬಾ ದ್ವೀಪದ ರಾಜನಿಗೆ ನಾನು ಕೊಡುವ ಉಡುಗರೆಗಳನ್ನು ಬಹುಮಾನಗಳನ್ನು ಸಹ ತೆಗೆದುಕೊಂಡು, ನನ್ನ ಕಡೆಯ ರಾಯಭಾರಿಯಾಗಿ ನೀನು ಹೋಗಿ ಬರಬೇಕೆಂದು ಬೇಡಿಕೊಳ್ಳುವೆನು. ಆತನು ನನಗೆ ಬಹುಮಾನವನ್ನು ಕಳುಹಿಸಿದಮೇಲೆ, ನಾನೂ ಆತನಿಗೆ ಬಹುಮತಿಯನ್ನು ಕಳುಹಿಸುವುದು ಅಗತ್ಯವೇ ಅಲ್ಲವೆ? ಎಂದು ಹೇಳಿದರು.


ಕಲೀಫರು ಹೇಳಿದ ಮಾತುಗಳು ನನ್ನ ಕಿವಿಗಳಿಗೆ ಸಿಡಿಲಿನಂತೆ ಬಿದ್ದವು. ನಾನು ಕಲೀಫರನ್ನು ನೋಡಿ, ಸ್ವಾಮಿಾ! ನಾನು ಇದುವರೆಗೂ ಅನುಭವಿಸಿರುವ ತೊಂದರೆಗಳನ್ನು ಸಾವಧಾನಚಿತ್ತರಾಗಿ ಕೇಳಿ, ಅದ

ರಂತೆ ನಾನು ನಡೆದಿರುವನೋ ಇಲ್ಲವೋ ಎಂಬುದನ್ನು ವಿಚಾರಿಸಿ, ಯುಕ್ತವಾದ ತೆರದಿಂದ ಆಜ್ಞಾಪಿಸಿದರೆ, ನಾನು ಅದರಂತೆ ನಡೆದುಕೊಳ್ಳುವುದಕ್ಕೆ ಸಿದ್ಧನಾಗಿರುವೆನು. ನನಗೆ ತುಂಬ ವಯಸ್ಸಾದುದರಿಂದ ಹಡಗಿನ ಪ್ರಯಾಣದಿಂದುಂಟಾಗುವ ತೊಂದರೆಗಳನ್ನು ನಿರ್ವಹಿಸಲಾರೆನಾದುದರಿಂದಲೂ, ತಾವು ದಯವಿಟ್ಟು ಮನ್ನಿಸಬೇಕು. ನಾನು ಇನ್ನು ಮೇಲೆ ಬಾಗದಾದುಪಟ್ಟಣವನ್ನು ಬಿಟ್ಟು ಹೋಗುವುದಿಲ್ಲವೆಂದು ಪ್ರತಿಜ್ಞೆ ಮಾಡಿರುವೆನೆಂದು, ನನ್ನ ಚರಿತ್ರೆಯನ್ನು ವಿಸ್ತಾರವಾಗಿಯೂ, ಸಂಪೂರ್ಣವಾಗಿಯೂ ಹೇಳಿದೆನು. ಕಲೀಫರಾದರೊ, ಕರುಣಾರಸಭರಿತರಾಗಿ ನನ್ನ ಚರಿತ್ರೆಯನ್ನು ಕೇಳಿ, ಅಯ್ಯಾ! ನಿನ್ನ ಚರಿತ್ರೆಯು ಅತ್ಯಂತ ವಿಚಿತ್ರವಾಗಿಯೂ ಮನೋಹರವಾಗಿರುವುದು. ಆದರೂ ನೀನು ನನಗೋಸ್ಕರವಾಗಿ ಮತ್ತೊಂದು ಪ್ರಯಾಣವನ್ನು ಮಾಡಬೇಕಾಗಿರುವುದು. ಈ ಪ್ರಯಾಣದಲ್ಲಿ ನಾನು ಮಾಡುವ ಬಹುಮಾನವನ್ನು ತೆಗೆದುಕೊಂಡು ಹೋಗಿ, "ಸಿರಂದಿಬಾ" ದ್ವೀಪದ ರಾಜನಿಗೆ ಕೊಟ್ಟು, ಪುನಃ ಹಿಂದಕ್ಕೆ ಬರುವುದೊಂದೇ ಕೆಲಸವೇ ಹೊರತು ಮತ್ತಾವ ಕೆಲಸವೂ, ನಿನಗೆ ಸಂಭವಿಸಲಾರದು. ಆ ದ್ವೀಪದ ರಾಜನು ನನಗೆ ಬಹುಮಾನ ಮಾಡಿದಮೇಲೆ ನಾನು ಆತನಿಗೆ ಬಹುಮಾನವನ್ನು ಮಾಡಬೇಕೆಂಬ ಕುತೂಹಲದಿಂದಿರುವೆನೆಂದು, ಹೇಳಿದ ಕಲೀಫರಿಗೆ ನಾನು ಪ್ರತ್ಯುತ್ತರವನ್ನು ಹೇಳಲಾರದೆ ನಾನು ಅವರ ಆಜ್ಞೆಗೆ ಬಳಪಟ್ಟವನಾಗಿರುವೆನೆಂದು ಹೇಳಿದೆನು. ಕೂಡಲೆ ಅವರು ಸಂತುಷ್ಟರಾಗಿ ನನ್ನ ಮಾರ್ಗದ ಖರ್ಚಿಗಾಗಿ, ಒಂದು ಸಹಸ್ರ ಸೆಕ್ವಿನ್ಸುಗಳನ್ನು ಕೊಡಿಸಿದರು.

ಕೆಲವು ದಿನಗಳಲ್ಲಿ ನಾನು ಪ್ರಯಾಣವನ್ನು ಹೊರಡಲುದ್ಯುಕ್ತನಾಗಿ, ಕಲೀಫರಿಂದ ಕೊಡಿಸಿದ ಹಣವನ್ನು ಬಹುಮಾನ ಪದಾರ್ಥಗಳನ್ನು ತೆಗೆದುಕೊಂಡು, ಬಾಲಸೋರುಪಟ್ಟಣಕ್ಕೆ ಹೋಗಿ, ಹಡಗನ್ನೇರಿ ಅಲ್ಲಿಂದ ಸಮುದ್ರದ ಮೇಲೆ ಸುಖವಾಗಿ ಪ್ರಯಾಣಮಾಡುತ್ತಾ ಸಿರಂದಿಬಾ ದ್ವೀಪವನ್ನು ಸುರಕ್ಷಿತವಾಗಿ ಸೇರಿ, ನಾನು ತಂದಿರುವ ವರ್ತಮಾನವನ್ನು ರಾಜನಿಗೆ ತಿಳಿಯಪಡಿಸುವಂತೆ ಅಲ್ಲಿನ ಪ್ರಧಾನ ಮಂತ್ರಿಗಳಿಗೆ ಹೇಳಿಕೊಂಡು, ಶೀಘ್ರವಾಗಿ ರಾಜನ ದರ್ಶನವನ್ನು ಮಾಡಿಸಬೇಕೆಂದು ಬೇಡಿಕೊಂಡೆನು. ಬಳಿಕ ಅವನು, ನಾನು ಬಂದಿರುವ ವರ್ತಮಾನವನ್ನು

ತಮ್ಮ ರಾಜನಿಗೆ ತಿಳಿಯಪಡಿಸಿ, ಆತನಪ್ಪಣೆಯನ್ನು ಪಡೆದು ಸಮುಯೋ ನುಸಾರವಾಗಿ ನನ್ನನ್ನು ಆತನ ಬಳಿಗೆ ಕರೆದುಕೊಂಡು ಹೋದರು. ನಾನು ಆತನನ್ನು ನೋಡಿದಕೂಡಲೇ ಪರಮಾನಂದಯುಕ್ತನಾಗಿ, ಮೊದಲಿನಂತೆ ಸಾಷ್ಟಾಂಗ ಪ್ರಣಾಮವನ್ನು ಮಾಡಿದೆನು. ಆತನು ಅತ್ಯಂತ ವಿಶ್ವಾಸದಿಂದ ನನ್ನನ್ನು ಆಲಿಂಗಿಸಿಕೊಂಡು, ತನ್ನ ಅರ್ಧಾಸನದಲ್ಲಿ ಕೂಳ್ಳರಿಸಿಕೊಂಡು, ಅಯ್ಯಾ! ಮಿತ್ರನಾದ ಸಿಂದುಬಾದನೇ, ನೀನು ನಮ್ಮ ರಾಜ್ಯದಿಂದ ಹೋದಮೇಲೆ ಸುಖವಾಗಿದ್ದೆಯಾ? ನಿನ್ನ ಕುಟುಂಬದವರು ಕ್ಷೇಮದಿಂದಿರುವರೇ? ರಾಜಾಧಿರಾಜನಾದ ಕಲೀಫನು ಆರೋಗ್ಯವಂತನಾಗಿರುವನೇ? ಆಹಾ! ಬಹು ದಿನಗಳಿಂದಲೂ, ಅಗಲಿದ್ದ ನಿನ್ನನ್ನು ನೋಡಿದುದರಿಂದ ಈ ದಿನವೇ ಸುದಿನವೆಂದು, ನಾನು ಭಾವಿಸುವೆನೆಂದು ಹೇಳಿ, ನನ್ನನ್ನು ಪುನಹ ಆಲಿಂಗಿಸಿಕೊಂಡನು. ನಂತರ ನಾನು ಆತನಿಗೆ ಪ್ರತಿವಂದನೆಗಳನ್ನು ಮಾಡಿ, ಕಲೀಫರು ಕೊಟ್ಟ ಕಳುಹಿಸಿದ್ದ, ಮುಯರ್ಮಾದೆಗಳನ್ನು ಒಪ್ಪಿಸಿದೆನು. ಆತನು ಅದನ್ನು ಸಂತೋಷದಿಂದ ಪರಿಗ್ರಹಿಸಿದನು. ಆದರೆ ತಾನು ಕಳುಹಿಸಿದ ಬಹುಮಾನಗಳಿಗಿಂತ ಅತ್ಯುತ್ತಮವಾದ ವಸ್ತ್ರಗಳು, ನಾಣ್ಯಗಳು, ರತ್ನಗಳು, ಆಭರಣಗಳಿಂದ ಕೂಡಿದ, ಆ ಬಹುಮಾನದ ಪದಾರ್ಥಗಳನ್ನು ಆತನು ನೋಡಿ ಆನಂದ ಪರವಶನಾಗಿ, ಬಳಿಕ ಕಾಗದವನ್ನೊಡೆದು ಓದಲಾರಂಭಿಸಿದನು.

ಕಲೀಫನು ಬರೆದು ಕಳುಹಿಸಿದ ಕಾಗದದ ವಿವರ.



ಮಹಾಸಾಮ್ರಾಜ್ಯ ವೈಭವ ಸಂಪನ್ನನಾದ, ಸನ್ಮಾರ್ಗ ಸಂದರ್ಶಕನಾದ, ಪೂರ್ವಿಕರಾದ ಭಗವದ್ಭಕ್ತರ ಆಶೀರ್ವಾದದಿಂದ ಮಹೊನ್ನತ ಪದವಿಯನ್ನು ಪಡೆದು ಮೆರೆಯುತ್ತಿರುವ, ಅಬ್ದುಲ್ಲಾ ಹರೋ೯ ಅಲರಾಶ್ಚಿದನು ಬರೆದುಕೊಂಡ ವಿಜ್ಞಾಪನೆ. ತಾವು ಬರೆದುಕಳುಹಿದ ಪತ್ರವನ್ನು ನಾವು ಮಹದಾನಂದ ಭರಿತರಾಗಿ, ಪರಿಗ್ರಹಿಸಿದವರಾಗಿ, ಉತ್ಕೃಷ್ಟತರವಾದ ಬುದ್ಧಿಚಾತುರ್ಯಗಳಿಗೆ ಮಾತೃಸಾಧನವಾದ ನಮ್ಮ ರಾಜಸಭೆಯಿಂದ, ಈ ವಿಜ್ಞಾಪನಾಪತ್ರಿಕೆಯನ್ನು ಕಳುಹಿಸಿರುವೆವು. ಇದನ್ನು

ತಾವು ತಮ್ಮ ಕರುಣಾಕಟಾಕ್ಷದಿಂದ ಪರಿಗ್ರಹಿಸಿ, ಇದರಲ್ಲಿ ಗರ್ಭೀಕರಿಸಿರುವ ವಾತ್ಸಲ್ಯಯುಕ್ತವಾದ ವಂದನೆಗಳನ್ನು ಅನುವೋದಿಸುವಿರೆಂದು, ನಂಬುವೆವು. ಇತಿ ಸಲಾಮು, ಸಿರಂದಿಬಾದ ರಾಜನು, ನಮ್ಮ ರಾಜರು ಕಳುಹಿಸಿದ ಪತ್ರವನ್ನೂ ಅವರ ಸ್ನೇಹವನ್ನೂ ಅಂಗೀಕರಿಸಿ, ಅವರನ್ನು ಬಹಳವಾಗಿ ಕೊಂಡಾಡಿ, ನನ್ನನ್ನು ಬಹು ಮರ್ಯಾದೆಯಿಂದ ಕಂಡು ಉಪಚರಿಸಿದನು. ಆದರೆ ಪುನಹ ಬಾಗದಾದಿಗೆ ಬರವುದಕ್ಕಾಗಿ ಆತನಪ್ಪಣೆಯನ್ನು ಕೇಳಿದೆನು. ಎಷ್ಟು ಮಾತ್ರಕ್ಕೂ ಆತನು ಒಪ್ಪದೆ ಹೋದುದರಿಂದ ಅತ್ಯಂತ ಪ್ರಯಾಸಪಟ್ಟು ಆತನಿಂದಪ್ಪಣೆಯನ್ನು ಪಡೆದು, ನನಗಾಗಿ ಕೊಟ್ಟ ಬಹುಮಾನಗಳನ್ನು ತೆಗೆದುಕೊಂಡು, ಆ ರಾಜನನ್ನು ಬೀಳ್ಕೊಂಡು ಹಡಗನ್ನು ಹತ್ತಿ ಬಾಗದಾದಿಗೆ ನೇರವಾಗಿ ಬರಬೇಕೆಂದು ಯೋಚಿಸಿದೆನು. ಆದರೇನು ನನ್ನ ಯೋಚನೆಯೆಂತೆ ನೆರವೇರಲಿಲ್ಲ. ನಾನು ಪ್ರಯಾಣಮಾಡಿದ ಮೂರು ನಾಲ್ಕು ದಿನಗಳಲ್ಲಿ ಹಡಗಿನ ಕಳ್ಳರು ನಮ್ಮ ಹಡಗನ್ನು ಸುಲಭನಾಗಿ ಹಿಡಿದುಕೊಂಡರು. ಕೂಡಲೆ ಶೌರ್ಯವನ್ನು ತೋರಿಸಿದ ಕೆಲವು ಜನರನ್ನು ಕೊಂದುಹಾಕಿದರು. ಆದರೆ ನಾನು ನನ್ನ ಸ್ನೇಹಿರತಲ್ಲಿ ಕೆಲವರೂ, ಅಂತಹ ಶೌರ್ಯವನ್ನು ಮಾಡದೆ ಇದ್ದುದರಿಂದ ಅವರು ನಮ್ಮ ಪ್ರಾಣಗಳನ್ನು ಕಾಪಾಡಿದರು. ಎಂದು ಹೇಳಿ ಷಹರಜಾದಿಯು ಬೆಳಗಾದಕೂಡಲೆ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನಜಾವದಲ್ಲಿ ಹೇಳಲಾರಂಭಿಸಿದಳು.

೪೯ನೆಯ ರಾತ್ರಿಕಥೆ.

ಬಳಿಕ ಷಹರಜಾದಿಯು ಸುಲ್ತಾನರನ್ನು ಕುರಿತು, ಸ್ವಾಮಿಾ! ಸಿಂದುಬಾದನು ತನ್ನ ಸಖಿಕರನ್ನು ಕುರಿತು ಇತೆಂದು ಹೇಳಲಾರಂಭಿಸಿದನು. ಏನೆಂದರೆ, ಆ ಕಳ್ಳರು, ನಮ್ಮ ಬಟ್ಟೆ ಬರೆಗಳನ್ನೆಲ್ಲ ತೆಗೆದುಕೊಂಡು, ಹರುಕುಬಟ್ಟೆಗಳನ್ನು ಕೊಟ್ಟು, ಬಹು ದೂರದಲ್ಲಿರುವ ಒಂದ ದ್ವೀಪಕ್ಕೆ ಕರೆದುಕೊಂಡುಹೋಗಿ ನಮ್ಮಗಳನ್ನು ಮಾರಿಬಿಟ್ಟರು. ನನ್ನನ್ನು ಒಬ್ಬಾನೊಬ್ಬ ಐಶ್ವರ್ಯವಂತನು ಕೊಂಡುಕೊಂಡನು. ಆತನು ನನ್ನನ್ನು ಕುರಿತು, ನೀನು ಯಾವದಾದರೂ ಕೆಲಸವನ್ನು ಮಾಡಬಲ್ಲೆಯಾ? ಎಂದು ಕೇಳಿದನು. ನಾನು ಆತನನ್ನು ನೋಡಿ, ಅಯ್ಯಾ!

ನಾನು ಕೂಲಿಕಾರನಲ್ಲ. ವರ್ತಕನಾದ ಒಬ್ಬ ದೊಡ್ಡ ಮನುಷ್ಯನು. ನನ್ನ ಪದಾರ್ಥಗಳನ್ನೆಲ್ಲಾ ಕಳ್ಳರು ಕಿತ್ತುಕೊಂಡು, ನನ್ನನ್ನು ಇಲ್ಲಿಗೆ ತಂದು ಮಾರಿಬಿಟ್ಟರು ಎಂದು ಹೇಳಿದನು.

ಅದಕ್ಕಾತನು ಅಯ್ಯಾ ! ನಿನಗೆ ಬಿಲ್ಲುಬಾಣಗಳಲ್ಲಿ ಬೇಟೆಯಾಡುವುದು ಬರುವುದೇ ಎಂದು ಕೇಳಿದನು. ನಾನು ಚಿಕ್ಕಂದಿನಲ್ಲಿ, ಈ ವಿದ್ಯವನ್ನು ಕಲಿತಿದ್ದೆನಾದುದರಿಂದ ನನಗೆ ಚೆನ್ನಾಗಿಯೇ ಬರುವುದೆಂದು ಹೇಳಿದೆನು. ನಂತರ ಆತನು ಒಂದಾನೊಂದು ದೊಡ್ಡ ಬಿಲ್ಲನ್ನು ಕೆಲವು ಬಾಣಗಳನ್ನು ತೆಗೆದುಕೊಳ್ಳುವಂತೆ, ನನ್ನನ್ನು ತನ್ನ ಸಂಗಡ ಆನೆಯಮೇಲೆ ಕುಳ್ಳಿರಿಸಿಕೊಂಡು, ಸವಿಾಪದಲ್ಲಿರವ ಅಡವಿಗೆ ಕರೆದುಕೊಂಡು ಹೋಗಿ, ತನಗಿಷ್ಟವಾದ ಒಂದು ಕಡೆ ನಿಲ್ಲಿಸುವಂತೆ ಹೇಳಿದನು. ಹತ್ತಿರದಲ್ಲಿರುವ ಒಂದು ದೊಡ್ಡ ಮರದಕೆಳಗೆ ಇಳಿದು, ಅಯ್ಯಾ ನೀನು ಈ ಮರವನ್ನು ಹತ್ತಿಸುತ್ತಲೂ ನೋಡುತ್ತಾ ಎಚ್ಚರಿಕೆಯಿಂದ ತಿರುಗಾಡುತ್ತಿರುವ ಆನೆಗಳನ್ನು ಈ ಬಿಲ್ಲುಬಾಣಗಳಿಂದ ಬೇಟೆಯಾಡುತ್ತಿರೆಂದು ಹೇಳಿ, ಪುನಹ ತಾನು ಆನೆಯನ್ನು ಹತ್ತಿಕೊಂಡು ಹೊರಟುಹೋದನು. ನಾನಾದರೊ, ರಾತ್ರಿಯೆಲ್ಲಾ ಮರದಮೇಲೆಯೇ ಇದ್ದೆನು. ಆದರೂ ಒಂದು ಆನೆಯಾದರೂ ಬರಲಿಲ್ಲ. ಬೆಳಗಾದ ಮೇಲೆ ನೂರಾರು ಆನೆಗಳು ಕಂಡುಬಂದುವು. ನಾನಾದರೊ, ಬಹು ಧೈರ್ಯದಿಂದ ಬಾಣಗಳನ್ನು ಹೂಡಿಬಿಟ್ಟೆನು. ಅವುಗಳಲ್ಲಿ ಒಂದು ಆನೆಯು ನೆಲಕ್ಕೆ ಬಿದ್ದಿತು. ಉಳಿದವು ಓಡಿಹೋದವು. ನಾನು ಧೈರ್ಯದಿಂದ ನಮ್ಮ ಯಜಮಾನನ ಬಳಿಗೆ ಹೋಗಿ ಈ ವರ್ತಮಾನವನ್ನು ಹೇಳಿದೆನು. ಆತನು ನನಗೆ ಸಂತೋಷದಿಂದ ಊಟಕ್ಕೆ ಒಳ್ಳೆಯ ತಿಂಡಿಪುಗಳನ್ನು ಕೊಟ್ಟು ಕಾಡಿಗೆ ಬಂದು ಆ ಆನೆಯನ್ನು ಹೂತಿಹಾಕಿದನು. ಬಳಿಕ ಅದು ಕೊಳೆತು ಹೋದಮೇಲೆ ಅದರ ದಂತವನ್ನು ತೆಗೆದುಕೊಂಡು ಮಾರುವಂತೆ ನನಗೆ ಹೇಳಿದನು.

ಈ ತೆರದಿಂದ ನಾನು ಎರಡು ಆನೆಗಳನ್ನು ಕೊಂದು, ಅವುಗಳನ್ನು ಯಜಮಾನನಿಗೆ ತೋರಿಸಿದೆನು. ಒಂದು ಮರದಮೇಲೆ ಒಂದು ದಿನವೂ, ಇನ್ನೊಂದು ದಿನದಮೇಲೆ ಮತ್ತೊಂದು ಮರದಮೇಲೆ ನಿಂತು ಬೇಟೆಯಾಡಿದೆನು. ಆದರೆ, ಮಾರನೇ ದಿನ ಬೆಳಗಾಗುವ ವರೆಗೂ, ಆನೆಗಳೇ

ಬಾರಲಿಲ್ಲ. ಮತ್ತು ನನಗೆ ಆಶ್ಚರ್ಯವುಂಟಾಗುವಂತೆ ಅವುಗಳೆಲ್ಲವೂ ಸುತ್ತಿಕೊಂಡು, ನಾನಿರುವ ಮರದ ಬುಡಕ್ಕೆ ಬಂದು ಅತ್ಯಂತ ಕ್ರೂರದೃಷ್ಟಿಯಿಂದ ನನ್ನನ್ನು ನೋಡುತ್ತಾ ಬಹಳವಾಗಿ ಘರ್ಜಿಸಿದುದರಿಂದ, ನಾನು ಹೆದರಿ, ಬಿಲ್ಲನ್ನೂ ಬಾಣವನ್ನೂ ಕೆಳಗೆ ಹಾಕಿದೆನು. ಹೀಗೆ ನಾನು ಭಯಪಡುತ್ತಿದ್ದುದಕ್ಕೆ ಸರಿಯಾಗಿ ಒಂದಾನೊಂದು ಮದ್ದಾನೆಯು ಆ ಮರದ ಬಳಿಗೆ ಬಂದು ತನ್ನ ಸೊಂಡಲಿನಿಂದ ಮರದ ಬುಡವನ್ನು ಸುತ್ತಿಕೊಂಡು, ಬಲವಾಗಿ ಅದನ್ನು ಕಿತ್ತು ಉರುಳಿಸಿತು. ನಾನು ಕೆಳಗೆ ಬಿದ್ದೆನು.

ಆಗ ಆ ಮದ್ದಾನೆಯು ನನ್ನ ಬಳಿಗೆ ಬಂದು ತನ್ನ ಸೊಂಡಲಿನಿಂದೆತ್ತಿ ತನ್ನ ಬೆನ್ನಿನಮೇಲೆ ಕುಳ್ಳಿರಿಸಿಕೊಂಡಿತು. ಆ ಕಾಲದಲ್ಲಿ ನನ್ನ ಬಳಿಯಲ್ಲಿ ಬಾಣಗಳಿದ್ದರೂ, ನಾನು ಸತ್ತನೆಂದು ತಿಳಿದುಕೊಂಡಿದ್ದೆನು. ಆದರೆ ಆನೆಯು ನನ್ನನ್ನು ಒಂದಾನೊಂದು ಸ್ಥಳಕ್ಕೆ ಕರೆದುಕೊಂಡುಹೋಗಿ, ಅಲ್ಲಿಯೇ ಬಿಟ್ಟು, ತಾನು ಮಾತ್ರ ಹೊರಟುಹೋಯಿತು. ಆಕಾಲದಲ್ಲಿ ನನ್ನ ಸ್ಥಿತಿಯೇನಾಗಿದ್ದಿತೆಂಬುದನ್ನು ನೀವು ನಿಮ್ಮಗಳ ಶಕ್ತ್ಯಾನುಸಾರ ತಿಳಿದುಕೊಳ್ಳಬಹುದು. ನಾನು ಬಹಳ ಹೊತ್ತಿನವರೆಗೂ, ಮೂರ್ಛಾಕ್ರಾಂತನಂತೆ ಜೋರಲು ಬಿದ್ದುಕೊಂಡಿದ್ದು, ಆನೆಗಳೆಲ್ಲವೂ, ಬಹುದೂರಕ್ಕೆ ಹೊರಟುಹೋದವೆಂಬುದನ್ನು ತಿಳಿದು, ಬಳಿಕ ಎದ್ದು ಕುಳಿತುಕೊಂಡೆನು. ಆಗ ಹುಲಿಗಳು ತಿಂದುಹಾಕಿದ ಮನುಷ್ಯರ ಮೂಳೆಗಳಿಂದಲೂ, ಆನೆಗಳ ದಂತದಿಂದಲೂ, ಹುಲಿಯ ಉಗುರುಗಳಿಂದಲೂ, ಕೂಡಿದ ಒಂದಾನೊಂದು ಪರ್ವತದ ಶಿಖರದಲ್ಲಿರುವಂತೆ ನನಗೆ ತೋರಿತು. ಆ ಸ್ಥಳವನ್ನು ನಾನು ನೋಡಿದ ಕೂಡಲೆ, ಈಂತಹ ಸ್ಥಳದಲ್ಲಿ ನಾನು ಮಾಡಬೇಕಾದ ಕೆಲಸವೇನೂ ಇಲ್ಲವೆಂದು ತಿಳಿದುಕೊಂಡು, ಅಲ್ಲಿಂದ ಹೊರಟು, ಒಂದು ಹಗಲೂ, ಒಂದು ರಾತ್ರಿಯೂ, ಪ್ರಯಾಣಮಾಡಿ ನಿರ್ಭಯದಿಂದ ನನ್ನ ಯಜಮಾನನ ಬಳಿಗೆ ಬಂದೆನು.

ಹಾಗೆ ಹೊರಟು ಬರುವಾಗ, ಪಟ್ಟಣಕ್ಕೆ ಬರುವ ಮಾರ್ಗವು, ನನಗನುಕೂಲವಾಗಿಯೇ ಇದ್ದಿತು. ನನ್ನನ್ನು ನೋಡಿದ ಕೂಡಲೆ, ಯಜಮಾನು, ಓ ಸಿಂದುಬಾದನೇ! ನಿನಗೇನುತೊಂದರೆಯುಂಟಾಯಿತು? ಹೇಗೆ ತಪ್ಪಿಸಿಕೊಂಡು ಬಂದೆ? ಅರಣ್ಯದಲ್ಲಿ ಆನೆಗಳು, ನಿನ್ನನ್ನು ಸುಮ್ಮನೆ

ತೊರೆದು ಬಿಟ್ಟುಬಿಟ್ಟದು, ಆಶ್ಚರ್ಯವಾಗಿದೆಯೆಲ್ಲಾ ! ಬಿಲ್ಲುಬಾಣಗಳನ್ನು ಬಿಸುಟು, ಇಲ್ಲಿಗೆ ಬಂದುದಕ್ಕೆ ಕಾರಣವೇನು ? ನೀನು ನೆಲದವೇಲೆ ಬಿದ್ದು ಕೈ ಕಾಲುಗಳನ್ನು ಮೈ ಮಾರುಗಳನ್ನು ಮಣ್ಣುಮಾಡಿಕೊಂಡು, ಇಂತಹ ದುರವಸ್ಥೆಯಲ್ಲಿ ಬಂದಿರುವೆಯೆಲ್ಲಾ ! ಎಂದು ಅಂಗಲಾಚಿದನು. ನಾನಾದರೋ, ನಡೆದ ಸಂಗತಿಯೆನ್ನೆಲ್ಲಾ ಹೇಳಿದ ಕೂಡಲೆ, ಆತನು ನನ್ನ ಪ್ರಾಣವು ಉಳಿದು ನಾನು ಸುರಕ್ಷಿತನಾಗಿ ಮನೆಗೆ ಬಂದುದಕ್ಕಾಗಿ, ಸಂತೋಷಿಸಿ, ಭಗವಂತನನ್ನು ಪ್ರಾರ್ಥಿಸಿ, ನನ್ನನ್ನು ಆಲಿಂಗಿಸಿಕೊಂಡು ಸವಾಧಾನವಾಡಿ, ಮಾರನೆಯ ದಿನ ಬೆಳಗ್ಗೆ ಆನೆಯನ್ನು ಹತ್ತಿ ನನ್ನನ್ನು ಸಂಗಡ ಕರೆದುಕೊಂಡು, ಅರಣ್ಯಕ್ಕೆ ಹೋಗಿ, ಅಲ್ಲಿ ನಡೆದಿರುವ ಸಂಗತಿಯನ್ನು ಕಣ್ಣಾರ ನೋಡಿ, ಆಶ್ಚರ್ಯಯುಕ್ತನಾಗಿ, ನಾವು ಮೊದಲು ಹೂಳಿದ್ದ ಆನೆಯ ಕೊಂಬುಗಳನ್ನೆಲ್ಲಾ ಕಿತ್ತು ತೆಗೆದುಕೊಂಡು, ನನ್ನನ್ನು ನೋಡಿ ಅಯ್ಯಾ ! ಶೂರನಾದ ಸಿಂದುಬಾದನೇ ! ನೀನು ನನ್ನ ಐಶ್ವರ್ಯವನ್ನು ವೃದ್ಧಿಮಾಡುವುದಕ್ಕೆ ಭಗವಂತನಿಂದ ಕಳುಹಿಸಲ್ಪಟ್ಟ ಮಾನವನಾದುದರಿಂದ, ನಾನು ನಿನ್ನನ್ನು ಬಹಳವಾಗಿ ವಂದಿಸುವೆನಲ್ಲದೆ, ನಿನ್ನ ಆಯುರಾರೋಗ್ಯ ಐಶ್ವರ್ಯಗಳು ವೃದ್ಧಿಯಾಗಲೆಂದು, ಭಗವಂತನಲ್ಲಿ ಪ್ರಾರ್ಥಿಸುವೆನು. ಇನ್ನುಮೇಲೆ ನಿನ್ನನ್ನು ಸೇವಕನೆಂತೆ ಭಾವಿಸದೆ,ನನ್ನ ಯಜಮಾನನಂತೆ ತಿಳಿದುಕೊಂಡಿರುವೆನೆಂದು ಹೇಳಿ, ತನ್ನ ಗೃಹಕೃತ್ಯದ ವಿಚಾರವನ್ನೆಲ್ಲಾ ನನಗೆ ತಿಳಿಯಹೇಳಿದನು.

ಅಯ್ಯಾ ! ನಾನಿದುವರೆಗೂ, ಆನೆಯೆದಂತಗಳನ್ನು, ಸಂಪಾದಿಸಿಕೊಳ್ಳುವುದಕ್ಕಾಗಿ, ಅನೇಕ ಜನ ಚಾರಕರನ್ನು ಕಳುಹಿಸಿ, ಅವರ ಪ್ರಾಣಗಳನ್ನು ಕಳೆದುಕೊಂಡುದನ್ನು ಕಂಡನೇ ಹೊರತು, ಅವರು ಬಂದಾನೆಯೆನ್ನಾದರೂ ಹಿಡಿದುದನ್ನು ನಾನು ನೋಡಲಿಲ್ಲ. ಭಗವಂತನ ದಯೆದಿಂದ ಈ ಸಂವತ್ಸರದಲ್ಲಿ ನೀನು ಮಾಡಿದ ಉಪಕಾರದಿಂದ, ನನಗೆ ತುಂಬ ಹಣವು ದೊರಕುವಂತಾಯಿತು. ಇದಕ್ಕಾಗಿ ನಾನು ತುಂಬ ಕೃತಜ್ಞನಾಗಿರುವೆನಲ್ಲದೆ, ನಿನ್ನಿಷ್ಟಾನುಸಾರವಾಗಿ ನಡೆದುಕೊಳ್ಳುವೆನು. ನೀನೇ ನನಗೆ ಇಲ್ಲಿಂದ ಮುಂದೆ ಯಜಮಾನನಾಗಿರುವೆ, ದಯೆಮಾಡಿ ನಿನ್ನಿಷ್ಟಾರ್ಥವನ್ನು ತಿಳಿಸೆಂದು ಬೇಡಿಕೊಂಡನು. ಆತನ ದಯಾಗುಣವನ್ನು ಕೊಂಡಾಡಿ, ಸ್ವಾಮಿ ! ನನ್ನ ಸೆರೆಯನ್ನು ಬಿಡಿಸಿ, ನಾನು ಸ್ಥಳವನ್ನು ಸೇ

ರುವಂತೆ ಮಾಡುವುದಕ್ಕಿಂತಲೂ, ಅನ್ಯವಾದ ಪ್ರತ್ಯುಪಕಾರವಾವುದೂ, ನನಗೆ ಬೇಕಾಗಿಲ್ಲ. ಆದುದರಿಂದ ತಾವು ದಯೆಮಾಡಿ ನನ್ನನ್ನು ಕಳುಹಿಸಿಕೊಡಬೇಕೆಂದು ಬೇಡಿಕೊಂಡೆನು.

ಕೂಡಲೆ ಆತನು ಅಯ್ಯಾ! ಈಗತಾನೆ ಪೂರ್ವದಿಕ್ಕಿನ ಘಾಳಿ ಬೀಸುತ್ತಿರುವುದು. ಇನ್ನು ಕೆಲವು ದಿವಸಗಳಿಗೆ ಗಜದಂತದ ವ್ಯಾಪಾರಕ್ಕಾಗಿ, ಅನೇಕಾನೇಕ ಹಡಗುಗಳು ಇಲ್ಲಿಗೆ ಬರುವುವು. ಕೂಡಲೆ ಅವುಗಳ ಮೇಲೆ ನಿನ್ನನ್ನು ಕಳುಹಿಸಿಕೊಡುವೆನು. ಹೆದರಬೇಡವೆಂದು ಹೇಳಲು, ನಾನು ಎಂದಿಗೆ ಹಡಗುಗಳು ಬರುತ್ತವೆಯೊ? ಎಂದು ಹಂಬಲಿಸುತ್ತಾ, ಪ್ರತಿದಿನವೂ ವಿಚಾರಿಸುತ್ತಿದ್ದೆನಲ್ಲದೆ, ಹಡಗುಗಳು ಬರುವವರೆಗೂ ಆ ಪರ್ವತಾಗ್ರಕ್ಕೆ ಹೋಗಿ ಬೇಕಾದಷ್ಟು ದಂತಗಳನ್ನು ತಂದು, ಕೂಡಿಹಾಕುತ್ತಿದ್ದೆನು. ಬಹಳವಾಗಿ ಹೇಳಿ ಪ್ರಯೋಜನವೇನು? ನಮ್ಮ ದೇಶದಲ್ಲಿ ಪ್ರಚಾರದಲ್ಲಿರುವ ಉತ್ತಮವಾದದಂತಗಳೆಲ್ಲವೂ, ಆಪರ್ವತದಿಂದಲೇ ತೆಗೆದುಕೊಂಡು ಬಂದವುಗಳೇ ಹೊರತು, ಮತ್ತೆಲ್ಲಿಂದಲೂ ತಂದವುಗಳಲ್ಲ. ಇಂತೆಂದುಹೇಳಿ ಷಹರಜಾದಿಯು, ಬೆಳಗಾದ ಕೂಡಲೆ ಕಥೆಯನ್ನುನಿಲ್ಲಿಸಿ, ಮರುದಿನ ಬೆಳಗಿನಜಾವದಲ್ಲಿ ಎಂದಿನಂತೆ ಸುಲ್ತಾನನ್ನು ಕುರಿತು ಹೇಳಲಾರಂಭಿಸಿದಳು.

೯೦ ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನರನ್ನು ನೋಡಿ! ಸ್ವಾಮಿಾ! ಬಳಿಕ ಸಿಂದುಬಾದನು ತನ್ನ ಸಖಿಕರನ್ನು ಕುರಿತು, ಹೀಗೆಂದು ಹೇಳತೊಡಗಿದನು. ಬಳಿಕ ನಮ್ಮ ರೇವಿಗೆ ಹಡಗುಗಳು ಬಂದಕೂಡಲೇ ನಮ್ಮ ಯಜಮಾನನು ನನ್ನ ಪ್ರಯಾಣಕ್ಕಾಗಿ, ಒಂದು ಹಡಗನ್ನು ತಾನೇ ಗೊತ್ತುಮಾಡಿ, ನನಗೂ ಬೇಕಾದಷ್ಟು ದಂತಗಳನ್ನು ಕೊಟ್ಟು ನಾನು ಊರು ಸೇರುವರೆಗೂ, ಸಾಕಾದಷ್ಟು ಆಹಾರವದಾರ್ಥಗಳನ್ನು ಹಡಗಿನಲ್ಲಿ ತುಂಬಿ ತನ್ನ ದೇಶದಲ್ಲಿರುವ ಅತ್ಯುತ್ತಮವಾದ ವಸ್ತುಗಳನ್ನು ಬಹುಮಾನವಾಗಿ ಕೊಟ್ಟು, ಸಂತೋಷಯುಕ್ತನಾಗಿ ನನ್ನನ್ನು ಆಲಿಂಗಿಸಿಕೊಂಡು, ಸುಖ ಪ್ರಯಾಣವನ್ನು ಬಯಸಿ, ನನ್ನನ್ನು ಸಾಗಕಳುಹಿಸಿದನು. ಅತನು ಮಾಡಿದ ಉಪಕಾರಕ್ಕಾಗಿ, ಆತನನ್ನು ಬಹಳವಾಗಿ ವಂದಿಸಿ, ಹಡಗನ್ನು

ಹತ್ತಿ ಮುಂದೆ ಹೊರಟೆನು. ಆದರೂ, ಆ ದೊಡ್ಡ ಮನುಷ್ಯನು ನನ್ನ ಸೆರೆಯನ್ನು ಬಿಡಿಸಿದುದಕ್ಕಾಗಿ, ತುಂಬ ಸಂತೋಷಯುಕ್ತನಾಗಿ ಸದಾ ಕಾಲವೂ ಸ್ಮರಿಸುತ್ತಿದ್ದೆನು.

ಹೊಸಹೊಸದಾಗಿ ಆಹಾರಪದಾರ್ಥಗಳನ್ನು ಸಂಗ್ರಹಿಸುವುದರಲ್ಲಿ ಅಲ್ಲಲ್ಲಿ ನಿಂತು, ವ್ಯಾಪಾರಮಾಡುತ್ತಾ, ಬಾಲಸೂರು ಪ್ರಾಂತ್ಯಕ್ಕೆ ಬಂದು ನೆಲದಮೇಲೆ ಪ್ರಯಾಣಮಾಡುತ್ತಾ, ನಾನಾ ತೊಂದರೆಗಳನ್ನು ಅನುಭವಿಸಿಕೊಂಡು, ಜನಗಳ ಗುಂಪಿಗೆ ಸೇರಿಕೊಂಡು, ಹೊರಟುಬರುತ್ತಿರುವ ಕಾಲದಲ್ಲಿ, ಹಿಂದೆ ನಾನು ಅನುಭವಿಸಿದಂತಹ, ಸಮುದ್ರದ ಕಳ್ಳರ, ಸರ್ಪಗಳ, ಮತ್ತು ಸಮುದ್ರದ ಭಯವೇನೂ ಇಲ್ಲವೆಂದು ತಿಳಿದು, ಶಾಂತಿಯಿಂದ ಪ್ರಯಾಣಮಾಡಿ, ಬಾಗದಾದು ಪಟ್ಟಣವನ್ನು ಸೇರಿ, ಕಲೀಫರ ಆಸ್ಥಾನವನ್ನು ಹೊಕ್ಕು, ನಾನಿದುವರಿಗೂ, ಅನುಭವಿಸಿದ ತೊಂದರೆಗಳನ್ನು ಅವರ ಸನ್ನಿಧಿಯಲ್ಲಿ ವಿಜ್ಞಾಪಿಸಿಕೊಂಡೆನು. ಕಲೀಫರಾದರೊ, ಅತ್ಯುತ್ಸಾಹದಿಂದ ನನ್ನನ್ನು ಆಲಿಂಗಿಸಿಕೊಂಡು, ಅಯ್ಯಾ ! ನೀನು ಬರುವುದು ಸಾವಕಾಶವಾದುದರಿಂದ ನಾನು ವ್ಯಸನಾಕ್ರಾಂತನಾಗಿ ಭಗವಂತನು ನಿನಗೆ ಆಯುರಾರೋಗ್ಯವನ್ನು ಕೊಡಲೆಂದು, ಸರ್ವದಾ ಪ್ರಾರ್ಥಿಸುತ್ತಿದ್ದೆನೆಂದು ಹೇಳಿದರು. ಬಳಿಕ ನಾನು ಆನೆಗಳ ದಂತವನ್ನು ಅವರಿಗೆ ತೋರಿಸಿ, ಆನೆಗಳಿಂದ ನನಗೆ ಉಂಟಾದ ತೊಂದರೆಯನ್ನು, ನನ್ನ ಯಜಮಾನನು ಮಾಡಿದ ಬಹುಮಾನವನ್ನೂ, ನಾನು ಪ್ರಯಾಣಮಾಡಿ ಬಂದ ಚರಿತ್ರೆಯನ್ನೂ ವಿಶದವಾಗಿ ಕಲೀಫರಿಗೆ ಹೇಳಲು, ಅವರು ಮೊದಲಿಗಿಂತಲೂ ಸಂತೋಷಚಿತ್ತರಾಗಿ, ಆ ಚರಿತ್ರೆಯನ್ನು ಬಂಗಾರದ ಶಾಸನದಲ್ಲಿ ಕೆತ್ತಿಸಿ, ತಮ್ಮ ಬಂಡಾರದಲ್ಲಿಡುವಂತೆ ಆಜ್ಞೆಮಾಡಿದರು.

ನಂತರ ನಾನು ಕಲೀಫರಿಂದ ಆಜ್ಞೆತೆಗೆದುಕೊಂಡು, ನನ್ನ ಮನೆಯನ್ನು ಸೇರಿ ಪತ್ನಿ ಪುತ್ರ ಪರಿವಾರಯುಕ್ತನಾಗಿ ಸಂತೋಷದಿಂದಿದ್ದೆನು. ಎಂದು ಹೇಳಿ ಸಿಂದುಬಾದನು, ಕೂಲಿಕಾರನಾದ ಹಿಂದುಬಾದನನ್ನು ನೋಡಿ ಅಯ್ಯಾ ! ಸ್ನೇಹಿತನೆ ! ಇಂತಹ ದುರವಸ್ಥೆಗಳನ್ನು ಪ್ರಾಣಕಷ್ಟಗಳನ್ನು ಅನುಭವಿಸಿ, ಪರದೇಶದಲ್ಲಿ ನಾನಾತೊಂದರೆಗಳಗೀಡಾಗಿ ಬಂದಿರುವ ನಾನು ಕಡೆಗಾಲದಲ್ಲಿ ಇಂತಹ ಐಶ್ವರ್ಯವನ್ನು ಅನುಭವಿಸುವುದು.

ಅನ್ಯಾಯವೆ ? ಎಂದು ಹೇಳದಕೊಡಲೆ, ಆತನು ಸಿಂದುಬಾದನ ಬಳಿಗೆ ಬಂದು, ಆತನ ಕೈಗಳನ್ನು ಮುತ್ತಿಟ್ಟುಕೊಂಡು, ಸ್ವಾಮಿ ! ನಾನು ಇದುವರಿಗೂ ಕೇಳಿದ ತಮ್ಮ ಚರಿತ್ರೆಯಿಂದ ತಾವು ನಾನಾ ಕಷ್ಟಗಳನ್ನು ಅನುಭವಿಸಿರುವಿರೆಂಬುದು ಸ್ಪಷ್ಟವಾಗಿಯೇ ಗೊತ್ತಾಗುತ್ತದೆ. ತಾವು ಇಂತಹ ತೊಂದರೆಗಳನ್ನನುಭವಿಸಿ, ಸಂಪಾದಿಸಿದ ಹಣವನ್ನು ಸತ್ಪಾತ್ರದಲ್ಲಿ ದಾನಮಾಡುತ್ತ, ಸತ್ಯವಂತನಾಗಿ ಬಾಳುತ್ತಿರುವುದರಿಂದ, ಭಗವಂತನು ತಮಗೆ ಸಕಲ ಸಾಮ್ರಾಜ್ಯ ಸುಖವನ್ನು ಬಹು ಕಾಲ ಅನುಭವಿಸುತ್ತಿರುವಂತೆ, ಮಾಡಲೆಂದು ಬೇಡುವೆನು.

ನಾನು ಕಷ್ಟಪಡಲಾರದೆ ಸಂಕಟದಿಂದಾಡಿದ ಮಾತುಗಳನ್ನು ನೀವು ದಯೆಮಾಡಿ ಮರೆತುಬಿಟ್ಟು, ನನ್ನನ್ನು ಕ್ಷಮಿಸಬೇಕೆಂದು ಬೇಡಿಕೊಳ್ಳಲು, ಸಿಂದುಬಾದನು ಕೂಲಿಕಾರನಿಗೆ ಪುನಹ ಒಂದು ನೂರು ಸೆಕ್ವಿನ್ ಸುಗಳನ್ನು ಕೊಟ್ಟು, ಅಯ್ಯಾ ! ನೀನು ಇನ್ನುಮೇಲೆ, ಕೂಲಿಮಾಡಬೇಕಾದ ಅಗತ್ಯವೆನೂ ಇಲ್ಲ. ಭೋಜನಕಾಲದಲ್ಲಿ ಬಂದು ನನ್ನ ಮನೆಯಲ್ಲಿ ಊಟಮಾಡಿಕೊಂಡು ಹೋಗಿ, ಸ್ವಸ್ಥವಾಗಿ ಜೀವನಮಾಡಿಕೊಂಡು ಸುಖವಾಗಿರೆಂದು ಹೇಳಿದ ಸಿಂದುಬಾದನ ದಯಾಗುಣವನ್ನು ಕೂಲಿಕಾರನು, ತನ್ನ ಯಾವಜ್ಜೀವವೂ ನೆನೆಯುತ್ತಾ, ಸಂತೋಷಯುಕ್ತನಾಗಿ ಭಗವಧ್ಯಾನದಿಂದ, ಕಾಲವನ್ನು ಕಳೆಯುತ್ತಿದ್ದನೆಂದು, ಷಹರಜಾದಿ ಕಥೆಯನ್ನು ನಿಲ್ಲಿಸಿ, ಬೆಳಗಾಗದಿರುವುದನ್ನು ಕಂಡು, ಸುಮ್ಮನಿರದೆ ಮತ್ತೊಂದು ಕಥೆಯನ್ನು ಹೇಳಿ ಆಳಿದ ಸ್ವಾಮಿಯೆನಿಸಿದ ಸುಲ್ತಾನರ ಮನಸ್ಸನ್ನು ಸಂತೋಷ ಪಡಿಸಬೇಕೆಂಬಭಿಲಾಷೆಯನ್ನು ಸಾರ್ಥಕಗೊಳಿಸಲಾರಂಭಿಸಿದಳು.



ಜಂಬೂಫಲತ್ರಯದ ಕಥೆ.

ಬಳಿಕ ಷಹರಜೌದಿ ಸುಲ್ತಾನರನ್ನು ನೋಡಿ, ಸ್ವಾಮಿಾ ! ನಾನು ಇದುವರಿಗೂ ಕಲೀಫ್ರು ಹರೋ್ಣ ಅಲರಾಶ್ಚಿದರು ನಗರಶೋಧನೆಗಾಗಿ ಹೊರಟುಬಂದ ಕಥೆಯೆನ್ನು ನಿಮಗೆ ಹೇಳಿದ್ದರೂ, ಪುನಹ ಅವರು ಮಾಡಿದ ಮತೊ್ತಂದು ವಿಚಿತ್ರನಾದ ಸಂಗತಿಯೆನ್ನು ತಿಳಿಯೆಪಡಿಸುವುದಕ್ಕಾಗಿ ತಮಗೆ ಅವರ ಚರಿತೆ್ರಯನ್ನು ಹೇಳಬೇಕಾಗಿರುವುದು. ಒಂದಾನೊಂದು ದಿನ ಕಲೀಫರು ತಮ್ಮ ಮಂತ್ರಿಯಾದ ಗಯೆಫರನನ್ನು ಕುರಿತು ನಮ್ಮ ಪಟ್ಟಣದ ಜನರು ನ್ಯಾಯೆದಿಂದುಂಟಾದ ಸಂತೋಷವನ್ನು ನುಭವಿಸುತ್ತಿರುವರೊ ? ಇಲ್ಲವೊ ? ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ, ನಾವು ಮತೊ್ತಂದುಸಾರಿ ಪ್ರಯೆಾಣವಾಡಬೇಕಾಗಿರುವುದು. ಪ್ರಜೆಗಳು ಯಾವಯೆಾವ ಉದೆ್ಯೋಗಸ್ಥರ ವಿಷಯೆದಲ್ಲಿ ಎಂಥೆಂತಹ ಅಭಿಪ್ರಾಯವುಳ್ಳವರಾಗಿರುವರೆಂಬುದನ್ನು ತಿಳಿದು, ಅನ್ಯಾಯೆವಂತರಾದ ಉದೆ್ಯೋಗಸ್ಥರಿರುವರೆಂಬುದು ತಿಳಿದುಬಂದರೆ, ಅವರನ್ನು ತೆಗೆದುಹಾಕಿ ಅವರಿಗೆ ತಕ್ಕ ಶಿಕ್ಷೆಯೆನ್ನಿತ್ತು, ಗೌರವಸ್ಥರಾದವರಿಗೆ ಬಹುಮಾನವಾಡಿ, ಉತ್ತಮರಾದವರನ್ನು ಕಾರ್ಯೆದಲ್ಲಿ ನಿಯೋಗಿಸಬೇಕಾಗಿರುವುದು. ಆದುದರಿಂದ ಈದಿನ ರಾತ್ರಿ ನಗರಶೋಧನೆಗೆ ಹೊರಡಲು ಸಿದ್ಧನಾಗಿರಬೇಕೆಂದು ಹೇಳಲು ಮಂತ್ರಿಯು, ರಾಜೌಜೆ್ಞಯಂತೆ ಕ್ಲಿಪ್ತಕಾಲಕ್ಕೆ ಸರಿಯೆಾಗಿ ರಾಜನ ಬಳಿಗೆ ಬಂದು ಸೇರಿದನು.

ಬಳಿಕ ಕಲೀಫರೂ ಗಯೆಫರನೆಂಬ ಮಂತ್ರಿಯೂ, ಜೋಜೆಾಸರ ದಾರನಾದ ಮಸೋ್ರರು, ಎಂಬುವರು ಸಹ ತಮ್ಮ ವೆೀಷಗಳನ್ನು ಮಾರಿಸಿಕೊಂಡು ಹೊರಟರು. ಅವರು ನಾನಾ ಬೀದಿಗಳನ್ನು ತಿರಿಗಿಕೊಂಡು ಕಟ್ಟಕಡೆಗೆಬಂದ, ಸಣ್ಣಸಂದಿಗೆ ಬಂದರು. ಅಲೆ್ಲಾಬ್ಬ ಮುದುಕನು, ತಲೆಯ ಮೇಲೆ ಬಲೆಯನ್ನು ಹೊತ್ತು, ಕೈಯೆಲೆ್ಲಾಂದು ಗಾಳದ ಬೆತ್ತವನ್ನು ಹಿಡಿದುಕೊಂಡು, ಮುಂದೆ ಹೋಗುತ್ತಿರುವ ಬೆಳದಿಂಗಳ ಬೆಳಕಿನಲ್ಲಿ ಕಲೀಫರು ಅಯ್ಯಾ ಈತನು ತುಂಬ ದರಿದ್ರನಂತೆ ಕಾಣುತ್ತದೆ. ಇವನ ಯೋಗಕ್ಷೇಮವನ್ನು ವಿಚಾರಿಸಬೇಕೆಂದು ನುಡಿಯಲು, ಗಯೆಫರು ಆತನ

ಬಳಿಗೆ ಬಂದು, ನೀನು ಯಾರು ಎಂದು ಕೇಳಿದನು. ಅದಕ್ಕಾಮುದುಕನು, ಅಯ್ಯಾ ! ನಾನೊಬ್ಬ ಬಿಸ್ತಾರವನು, ಈ ಊರಿನಲ್ಲಿರುವ ಮನುಷ್ಯರಲ್ಲೆಲ್ಲಾ ಬಹು ದರಿದ್ರನಾದವನು. ಈ ದಿನ ಬೆಳಿಗ್ಗೆ ನಾನು ಹಿಡಿಯುವುದಕ್ಕಾಗಿ ಹೋಗಿ, ಇದುವರಿಗೂ ಶ್ರಮಪಟ್ಟರೂ, ನನಗೊಂದು ಮೀನಾದರೂ ದೊರಕಲಿಲ್ಲ. ನನಗೊಬ್ಬ ಹೆಂಡತಿಯೂ, ಮಕ್ಕಳೂ ಇರುವರು. ಅವರಿಗೆ ಅನ್ನವು ದೊರಕದೆ ಹೋಯಿತೆಂದು ಹೇಳಿದನು.

ಬಳಿಕ ಕಲೀಫರಿಗೆ ಆತನಮೇಲೆ ಕರುಣ ಹುಟ್ಟಿದುದರಿಂದ, ಅಯ್ಯಾ ! ನೀನು ಮತ್ತೊಂದು ನದಿಯಲ್ಲಿ ಬಲೆಯನ್ನು ಬೀಸಿನೋಡು. ನಿನಗೇನೂ ದೊರಕದಿದ್ದರೆ, ನಾನು ಒಂದು ನೂರು ಸೆಕ್ವೀನುಗಳನ್ನು ಕೊಡುವೆನೆಂದು ಹೇಳಿದರು. ಆ ಮಾತುಗಳನ್ನು ಕೇಳಿದ ಕೂಡಲೆ, ಆ ಮುದುಕನು ತಾನಿದುವರೆಗೂ, ಅನುಭವಿಸಿದ ಶ್ರಮವನ್ನು ಮರೆತು, ಅವರುಗಳನ್ನು ಕರೆದುಕೊಂಡು, ಟೈಗ್ರಿಸ್ ನದಿಯಬಳಿಗೆ ಬಂದು, ತನ್ನ ಮನಸ್ಸಿನಲ್ಲಿ ಈ ದೊಡ್ಡಮನುಷ್ಯರು, ನ್ಯಾಯಸ್ಥರಾಗಿಯೂ, ಸತ್ಯವಂತರಾಗಿಯೂ, ದಯಾಪರರಾಗಿಯೂ ಇರುವರು. ನನ್ನ ಶ್ರಮಕ್ಕೆ ತಕ್ಕಷ್ಟು ಪ್ರತ್ಯುಪಕಾರವನ್ನು ಮಾಡದಿದ್ದರೂ, ಅವರು ಹೇಳಿದಂತೆ ನಡೆಸಿಕೊಟ್ಟರೆ, ಅದು ನನಗೆ ದೊಡ್ಡ ಭಾಗ್ಯವಿರುವುದೆಂದುಕೊಂಡನು. ಬಳಿಕ ಅವರೆಲ್ಲರೂ ನದಿಯನ್ನು ಸೇರಿದ ಬಳಿಕ, ಬಿಸ್ತಾನು ತನ್ನ ಬಲೆಯನ್ನು ಬೀಸಿ, ಬಲವಾಗಿ ಹಿಡಿದೆಳೆದನು. ಆದರೆ ಅದರಲ್ಲಿ ಬಹು ಭಾರವಾದದೊಂದು ಪೆಟ್ಟಿಗೆ ಬಂದುದನ್ನು ನೋಡಿ, ಕಲೀಫರು ಕೂಡಲೆ ಬಿಸ್ತಾನಿಗೆ ಒಂದು ನೂರು ಸೆಕ್ವೀನುಗಳನ್ನು ಕೊಟ್ಟು ಕಳುಹಿಸಿದರು. ಮುಸೋದನು ಕಲೀಫರ ಅಪ್ಪಣೆಯಂತೆ, ಆ ಪೆಟ್ಟಿಗೆಯನ್ನು ಹೊತ್ತುಕೊಂಡನು. ಮೂವರು, ಬೇಗ ನಡೆದು ನಗರವನ್ನು ಸೇರಿ ಆ ಪೆಟ್ಟಿಗೆಯನ್ನು ತೆರೆದು ನೋಡಬೇಕೆಂದು ಬಾಗಿಲನ್ನು ತೆರೆದನು. ಆಗ ಅದರಲ್ಲಿ ಕೆಂಪಿನ ದಾರದಿಂದ ಹೊಲಿದು ಕಟ್ಟಿದ್ದ ಒಂದು ತೊಳೆಯೊಲೆಯು ದೊಡ್ಡ ಗಂಟಿದ್ದಿತು. ಅದನ್ನು ಬಿಚ್ಚಿನೋಡಬೇಕೆಂಬ ಕುತೂಹಲದಿಂದ ಕಲೀಫನು, ಕತ್ತಿಗಳಿಂದ ಕಟ್ಟುಗಳನ್ನು ಕೊಯ್ದು ನೋಡುವಲ್ಲಿ, ಅದರಲ್ಲಿ ಬಹು ರೂಪವತಿಯಾದ ಒಬ್ಬ ಹೆಂಗಸು ತುಂಡುತುಂಡಾಗಿ ಕತ್ತರಿಸಿ, ತುಂಬಲ್ಪಟ್ಟಿರುವುದನ್ನು ಕಂಡು ಅತ್ಯಾಶ್ಚರ್ಯಭರಿತನಾದನು. ಎಂದು ಹೇಳಿ ಷಹರಜಾದಿಯು ಬೆಳಗಾದ

ಕೂಡಲೆ ಕಥೆಯನ್ನು ನಿಲ್ಲಿಸಿ, ಮರುದಿನದ ಬೆಳಗಿನಜಾವದಲ್ಲಿ, ಪುನಹ ಹೇಳಲಾರಂಭಿಸಿದಳು.

೯೧ನೆಯ ರಾತ್ರಿಯ ಕಥೆ.

ಸುಲ್ತಾನರೇ! ಕಲೀಫರು ಅದನ್ನು ನೋಡಿದ ಕೂಡಲೆ, ಎಷ್ಟೊಂದು ಆಶ್ಚರ್ಯಯುಕ್ತರಾದರೆಂಬುದನ್ನು, ನೀವು ತಿಳಿದುಕೊಳ್ಳಬಹುದೆಂದು ನಾನು ಖಂಡಿತವಾಗಿ ಹೇಳುವೆನು. ಆತನು ಅದನ್ನು ನೋಡಿದ ಕೂಡಲೆ ಹೊಂದಿದ ಆಶ್ಚರ್ಯವೆಲ್ಲವೂ, ಕೋಪರೂಪವಾಗಿ ಪರಿಣಮಿಸಿ, ತನ್ನ ಮಂತ್ರಿಯನ್ನು ಕುರಿತು, ಅಯ್ಯಾ! ನಿರ್ಭಾಗ್ಯನಾದ ಮಂತ್ರಿಯೇ! ನಿನ್ನಂತಹ ಅಯೋಗ್ಯನು ನನ್ನ ದೇಶದಲ್ಲಿ ಮಂತ್ರಿಯಾಗಿರುವುದರಿಂದ, ನನ್ನ ದೇಶದ ಪ್ರಜೆಗಳಿಗಿಂತಹ, ದುರವಸ್ಥೆಯುಂಟಾಗಿರುವುದಲ್ಲಾ ! ಹಾ ! ಇದನ್ನು ನಾನೆಂತು ತಾಳಲಿ ! ಈ ಕ್ರೂರಕೃತ್ಯನನ್ನು ಮಾಡಿದ ದುರಾತ್ಮನನ್ನು ಹಿಡಿದು, ಆತನನ್ನು ಕೊಲ್ಲಿಸದೆ ಹೋದರೆ, ನಿನ್ನನ್ನು ನಿನ್ನ ಸಂಗಡ ಇರುವ ನಲವತ್ತು ಜನರನ್ನು ಪ್ರಮಾಣಪೂರ್ವಕವಾಗಿಯೂ ಸಂಹರಿಸುವೆನೆಂದು ಹೇಳಲು, ಮಂತ್ರಿಯು ಆಕೆಲಸವನ್ನು ನಿರ್ವಹಿಸುವುದಕ್ಕೆ ಸಾಕಾದಷ್ಟು ಕಾಲವನ್ನು ಅನುಗ್ರಹಿಸಬೇಕೆಂದು ಬೇಡಿಕೊಳ್ಳಲು, ಆತನು,ಮೂರು ದಿನಗಳಿಗಿಂತಲೂ,,ಹೆಚ್ಚಾದ ಅವಧಿಯು ಬೊರೆಯಲಾರದೆಂದು ಹೇಳಿದನು.

ಬಳಿಕ ಮಂತ್ರಿಯು ವ್ಯಸನಾಕ್ರಾಂತನಾಗಿ ತನ್ನ ಮನೆಯೆನ್ನು ಸೇರಿ, ಆಹಾ ! ಇಷ್ಟೊಂದು ಜನ ನಿಬಿಡವಾದ ಈ ಪಟ್ಟಣದಲ್ಲಿ ಗೂಢವಾಗಿ ಪ್ರಾಣಹತ್ಯಮಾಡಿದವನನ್ನು ನಾನು ಹೇಗೆ ಕಂಡು ಹಿಡಿಯಬಹುದು. ಅಂಥವನು ಈ ಊರಲ್ಲಿ ತಾನೆ ಹೇಗಿರುವನು ? ಎಲ್ಲಿ ಹೋಗಿರುವನೋ ಕಾಣೆನಲ್ಲಾ ! ಅಯ್ಯೋ ! ನನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕಾಪರೆ, ಕಾರಾಗೃಹದಲ್ಲಿರುವ ಯಾವನಾದರೂ ಒಬ್ಬ ನಿರ್ಭಾಗ್ಯನನ್ನು ಕೊಲ್ಲಿಸಿ, ನಾನು ಬದುಕುವ ಮಾರ್ಗವನ್ನು ನೋಡಿಕೊಳ್ಳಬೇಕು. ನನ್ನಜೊಂದು ಪ್ರಾಣವನ್ನುಳಿಸಿಕೊಳ್ಳುವುದಕ್ಕಾಗಿ, ಇಂತಹ ಕ್ರೂರ ಕರ್ಮವನ್ನು ಮಾಡಬೇಕಾಗಿರುವುದಲ್ಲಾ ! ಈ ಪಾಪಕರ್ಮವನ್ನು ಮಾಡುವುದಕ್ಕಿಂತಲೂ, ಪ್ರಾಣವನ್ನೇ ಬಿಡುವುದು ಲೇಸೆಂದು ಯೋಚಿಸಿದನು.

ಬಳಿಕ ತನ್ನ ಪರಿವಾರಜನರನ್ನು ಕರೆದು, ಪ್ರಾಣಹತ್ಯವಮಾಡಿದ ಆ ದುರಾತ್ಮನನ್ನು ಹುಡುಕಿ ತರುವಂತೆ ಹೇಳಲು, ಅವರೂ ಅವರ ಕೈ ಕೆಳಗಿನವರೂ, ಹುಡುಕಿ ಸಾಕಾಗಿ, ಕೊಲೆಪಾತಕನು ದೊರಕದೆ ಹೋದು ದರಿಂದ ತನುಗೆ ಪ್ರಾಣಹಾನಿಯೋ ಗತಿಯೆಂದು ಚಿಂತಿಸುತ್ತಿದ್ದರು. ಇಷ್ಟರಲ್ಲೇ ಮೂರು ದಿನಗಳು ಕಳೆದು ಹೋಗಲು, ಒಬ್ಬಾನೊಬ್ಬ ರಾಜಭಟನು ಬಂದು ಮಂತ್ರಿಯನ್ನು ಕಲೀಫನ ಆಸ್ಥಾನಕ್ಕೆ ಕರೆದುಕೊಂಡು ಹೋಗಲು ಕಲೀಫರು ಆತನನ್ನು ನೋಡಿ, ಅಯ್ಯಾ! ಪ್ರಾಣಹತ್ಯವಮಾಡಿದ ಆ ದುರಾತ್ಮನನ್ನು ಕಂಡು ಹಿಡಿದೆಯಾ ? ಎಂದು ಕೇಳಲು, ಆತನು ಅಯ್ಯಾ! ಆತನ ವಿಷಯವನ್ನು ಕಂಡು ಜೀವಿತಕ್ಕವರು ಕೂಡ, ಯಾರೂ ಇಲ್ಲವೆಂದು ಕಣ್ಣೀರನ್ನು ಸುರಿಸುತ್ತ ಜೀವಿಸಲು, ಕಲೀಫನು ಕೋಪಯುಕ್ತನಾಗಿ ಮಂತ್ರಿಯನ್ನೂ ಅವನ ಕೈಕೆಳಗಿರುವ ನಲವತ್ತು ಮಂದಿಯನ್ನೂ, ತಮ್ಮ ಆಸ್ಥಾನದ ಮುಂದೆ ಬಲಿಗೊಡುವಂತೆ ಆಜ್ಞಾಪಿಸಿದನು. ಇಷ್ಟರಲ್ಲಿ ಕಲೀಫನ ಆಜ್ಞೆಯಂತೆ ಮಂತ್ರಿಯನ್ನು, ಅವನ ಕೈ ಕೆಳಗಿನವರಾದ ನಲವತ್ತು ಮಂದಿ ಜನರನ್ನೂ ಕೊಂದು ಹಾಕುವರೆಂಬ, ಪದಂತಿಯು ಊರಲ್ಲೆಲ್ಲಾ ಹರಡಿಕೊಂಡಿತು.

ರ ಜನು ಇಂತಹವರ ಕೊಲೆಯನ್ನು ನೋಡಲಪೇಕ್ಷೆಯುಳ್ಳವರು, ಆಸ್ಥಾನದ ಬಳಿಗೆ ಬರಬಹುದೆಂದು ಡಂಗೂರವನ್ನು ಹೊಯ್ಸಿದನು. ಬಳಿಕ ಕೊಲ್ಲಿಸಿಕೊಳ್ಳತಕ್ಕವರಿಲ್ಲರೂ, ತಂತಮ್ಮ ಸ್ಥಾನಗಳಲ್ಲಿ ಬಂದು ನಿಂತರು. ಅವರ ಕುತ್ತಿಗೆಗೆ ಉರುಳನ್ನು ತಗಲಿಸಿ ಹಿಡಿದುಕೊಂಡರು. ಆಗ ಪ್ರಧಾನಮಂತ್ರಿಯು ಮತ್ತು ಆತನ ಸೇವಕರಾದ ಇತರ ಜನರ ಸ್ನೇಹಿತರುಗಳೂ, ಬಂಧು ಮಿತ್ರರುಗಳೂ, ಅವರಿಗುಂಟಾಗಿರುವ ದುರವಸ್ಥೆಯನ್ನು ನೋಡಿ, ಬಹಳವಾಗಿ ರೋಧನ ಮಾಡತೊಡಗಿದರು. ಹೀಗಿರುವಲ್ಲಿ ಅತಿ ಕ್ರೂರವಾದ ಕಲೀಫರ ಆಜ್ಞೆಗೆ ಪ್ರತಿಯೇ ಇಲ್ಲವಾದುದರಿಂದ, ಅದನ್ನು ನಿವಾರಣೆ ಮಾಡುವುದಕ್ಕಾರೂ ಶಕ್ತರಿಲ್ಲದೆ, ಬಹಳವಾಗಿ ದುಃಖಪಡುತ್ತಿದ್ದರು. ಹೀಗಿರುತ್ತಿರಲು ಆ ಜನರ ಗುಂಪಿನಲ್ಲಿ ಉತ್ತಮವಾದ ವಸ್ತ್ರಗಳನ್ನು ಧರಿಸಿಕೊಂಡಿರುವ, ಒಬ್ಬಾನೊಬ್ಬ ಯುವಕನು, ಜನರನ್ನು ನೋಡಿಕೊಂಡು ಮುಂದೆ ಬಂದು, ಮಂತ್ರಿಯ ಕೈಯನ್ನು ಮುತ್ತಟ್ಟಿಕೊಂಡು, ಅಯ್ಯಾ ನ್ಯಾಯವಾರ್ಗ ಪ್ರವರ್ತಕನಾಗಿ ಪ್ರಜೆಗಳನ್ನು ಕಾಪಾಡು

ತ್ತಿದ್ದ ಮಂತ್ರಿವರ್ಯನೇ ! ನೀನು ಈಗ ಹೊಂದಹೋಗುತ್ತಿರುವ, ಈ ಕ್ರೂರ ಶಿಕ್ಷೆಯನ್ನನುಭವಿಸುವಂತಹ, ನೀಚಕೃತ್ಯವನ್ನು ಮಾಡಿದವನು ನಾನಾದುದರಿಂದ ನಿನ್ನಿಂದಾದ ತಪ್ಪಿತವಲ್ಲವು. ಟೈಗ್ರಿಸ್ ನದಿಯಲ್ಲಿ ಹೆಂಗಸನ್ನು ಕಡಿದುಹಾಕಿದ್ದ ಘೋರಕೃತ್ಯವನ್ನು ಮಾಡಿದವನು ನಾನೇ ಆದುದರಿಂದ, ನಿನ್ನ ಶಿಕ್ಷೆಗೆ ನಾನು ಬಾಧ್ಯನಾಗಿರುವೆನು. ನಾನೇ ಹೊರತು ಮತ್ತಾರೂ ಇಲ್ಲವೆಂದು ಹೇಳಿದನು. ಆ ಬಾಲಕನ ಮಾತನ್ನು ಕೇಳಿ, ಅತ್ಯಾನಂದಭರಿತನಾದ ಮಂತ್ರಿಯು ಯಾವ ಮಾತನ್ನು ಹೇಳದೆ ಸುಮ್ಮ ನಾದನು. ಕೂಡಲೆ ಆ ಜನರ ಗುಂಪಿನಿಂದೊಬ್ಬ ಮುದುಕನು ಬಂದು, ಅಯ್ಯಾ ! ಮಂತ್ರಿವರ್ಯನೇ ! ಸ್ತ್ರೀಹತ್ಯವನ್ನು ಮಾಡಿದ ಪಾಪಿಯು ನಾನೇ ಆಗಿರುವದರಿಂದ ಈ ಘೋರಶಿಕ್ಷೆಯು ನನಗೆ ಆಗಬೇಕಾಗಿರುವುದೆಂದು ಹೇಳಿದುದನ್ನು ಕೇಳಿ, ಅಲ್ಲ ಅಲ್ಲ ! ಆತನೆಂದಿಗೂ ಅಲ್ಲ ! ನಾನೇ ಈ ಕೃತ್ಯ ವನ್ನು ಮಾಡಿದೆನಲ್ಲದೆ, ಮತ್ತೊಬ್ಬನಲ್ಲವಾದುದರಿಂದ, ದಯೆಮಾಡಿ ಆ ಶಿಕ್ಷೆ ಯನ್ನು ನನಗೆ ಕೊಡುವನಾಗೆಂದು ಹೇಳಿದನು.

ಆ ಮಾತನ್ನು ಕೇಳಿ ಮುದುಕನು, ಅಯ್ಯಾ ! ನೀನಿನ್ನು ಚಿಕ್ಕ ವನಾದುದರಿಂದ ಬಾಳಬದುಕುವ ಲೋಕಾನುಭವವು ನಿನಗುಂಟಾಗಬೇಕಾ ಗಿರುವುದು. ಆದುದರಿಂದ ನೀನಿದಕ್ಕೊಪ್ಪಬೇಡ. ನಾನಾದರೊ ಲೋಕ ದಲ್ಲಿರುವ ಸಮಸ್ತ ಸುಖಗಳನ್ನು ಅನುಭವಿಸಿ ಸಾಯುವುದಕ್ಕೆ ಸಿದ್ಧನಾ ಗಿರುವೆನೆಂದು ಹೇಳಿ, ಕಲೀಫರನ್ನು ನೋಡಿ ಅಯ್ಯಾ ! ಸ್ತ್ರೀಹತ್ಯದೋ ಷಕ್ಕೆ ನಾನೇ ಮೂಲಕಾರಣನಾದುದರಿಂದ, ಈ ಶಿಕ್ಷೆಯನ್ನು ಹೊಂದು ವುದಕ್ಕೆ ನಾನೇ ಅರ್ಹನಾಗಿರುವೆನೆಂದು, ಹೇಳಿದನು. ಇವರುಗಳ ವಿವಾ ದವನ್ನು ನೋಡಿ, ಅಲ್ಲಿದ್ದವರು ಅತ್ಯಾಶ್ಚರ್ಯಯುಕ್ತರಾಗಿ ಸುಲ್ತಾನನಾ ದ ಕಲೀಫನ ಬಳಗೆ ಕರೆದುಕೊಂಡು ಹೋದರು. ಆಗ ಆವರೆಲ್ಲರೂ ಕಲೀ ಫನಿಗೆ ವಂದನೆಗಳನ್ನು ಮಾಡಿ ನಿಂತುಕೊಂಡರು.

ಬಳಿಕ ಚಾರರು ಸ್ವಾಮಿ ! ಇವರಿಬ್ಬರೂ ಸ್ತ್ರೀಹತ್ಯವನ್ನು ಮಾಡಿದವರು ನಾವೇ ಎಂದು ಒಪ್ಪಿಕೊಳ್ಳುವರೆಂದು ನುಡಿದನು. ಕಲೀ ಫನು ಗಯಫರನನ್ನು ನೋಡಿ ಇವರಿಬ್ಬರನ್ನೂ ಗಲ್ಲಿಗೆ ಹಾಕಿಸೆಂದು ನುಡಿದನು. ಅದನ್ನು ಕೇಳಿ ಮಂತ್ರಿಯು ಇವರಿಬ್ಬರಲ್ಲಿ ತಪ್ಪುಮಾಡಿದವ

ರನ್ನು ಕಂಡುಹಿಡಿದು ಗಲ್ಲಿಗೆ ಹಾಕುವುದು ನ್ಯಾಯವಾಗಿದೆ ಎಂದು ಹೇಳಲು, ಕಲೀಫನು ಅವರನ್ನು ನೋಡಿ, ನಿಮ್ಮಲ್ಲಿ ಯಾರು ಈ ಕೃತ್ಯವನ್ನು ಮಾಡಿದವರೆಂದು ಕೇಳಿದನು. ಮುದುಕನು, ಹುಡುಗನು, ನಾನು ತಾನೆಂದು ಕೆಕ್ಷಿಪ್ರತಿಕೆಕ್ಷಿಗಳಾಗಿ ಹೇಳಿದನು. ಕಡೆಗೆ ಬಾಲಕನು, ಅಯ್ಯಾ ! ಭಗವತ್ಸಾಕ್ಷಿಯಾಗಿಯೂ, ನಾನು ಆ ಹೆಂಗಸನ್ನು ನಾಲ್ಕು ದಿನಗಳ ಮುಂಚೆ ಕಡಿದುಹಾಕಿ ಟೈಗ್ರಿಸ್ ನದಿಯಲ್ಲಿ ಹಾಕಿದುದುಂಟೆಂದು, ಸತ್ಯವಾಗಿ ಹೇಳುತ್ತೇನೆಂದು ನುಡಿದನು. ಮುದುಕನು, ಭಗವಂತನಮೇಲೆ ಸಾಕ್ಷಿಯನ್ನಿಡಲಾರದೆ ಸುಮ್ಮನಿದ್ದನು. ಆಗ ಕಲೀಫನು, ಆ ಬಾಲಕನನ್ನು ಕುರಿತು ಅಯ್ಯಾ ! ದುರಾತ್ಮನೇ ! ನೀನಿಂತಹ ಕ್ರೂರಕೃತ್ಯವನ್ನು ಮಾಡುವುದಕ್ಕೆ ಕಾರಣವೇನೆಂದು ಕೇಳದಕೂಡಲೆ, ಆ ಬಾಲಕನು, ಕಲೀಫನನ್ನು ಕುರಿತು, ಎಲೈ ರಾಜಾಧಿರಾಜನೇ ! ಆ ಸ್ತ್ರೀಯಳು ಕೊಲ್ಲಲ್ಪಡುವುದಕ್ಕೆ ಕಾರಣವನ್ನು ತಿಳಿದುಕೊಂಡು, ಅದನ್ನೊಂದು ಪುಸ್ತಕದಲ್ಲಿ ಬರೆದಿಟ್ಟರೆ, ನಮ್ಮ ದೇಶಕ್ಕೆ ತುಂಬ ಉಪಯೋಗವಾಗುವುದೆಂದು ಹೇಳಲು, ಕಲೀಫನು ಅದಕ್ಕೆ ಸಮ್ಮತಿಸಿದ ಕೂಡಲೆ, ಬಾಲಕನು ಕಥೆಯನ್ನು ಹೇಳಲಾರಂಭಿಸಿದನೆಂದು ಹೇಳಿ ಷಹರಜಾದಿಯು, ಬೆಳಗಾದ ಕೂಡಲೆ ಕಥೆಯನ್ನು ನಿಲ್ಲಿಸಿ ಮರುದಿನ ಬೆಳಗಿನಜಾವದಲ್ಲಿ ಪುನಹಕಥೆಯನ್ನು ಹೇಳ ತೊಡಗಿದಳು.

೪೪೪ನೆಯ ರಾತ್ರಿ ಕಥೆ,

ಷಹರಿಯೆನ್ನು, ಆ ಬಾಲಕನು ಹೇಳಿದ ಕಥೆಯನ್ನು ಕೇಳಬೇಕೆಂಬಭಿಲಾಷೆಯಿಂದ ಸುಲ್ತಾನಿಯನ್ನು ಕೇಳಲು, ಷಹರಜಾದಿ ಸುಲ್ತಾನರನ್ನು ಕುರಿತು ಇಂತೆಂದು ಹೇಳಲಾರಂಭಿಸಿದಳು.

ಕೊಲೆಯಾದ ಹೆಂಗಸು ಮತ್ತು ಅವಳ ಗಂಡನ ಕಥೆ.



ಎಲೈ ಮಹಾರಾಜನೇ ! ಕೊಲ್ಲಲ್ಪಟ್ಟ ಹೆಂಗಸು ನನ್ನ ತಂದೆಯ ಸಹೋದರನಾದ ಈ ಮುದುಕನಿಗೆ ಮಗಳೆಂತಲೂ, ನನಗೆ ಹೆಂಡತಿಯಾಗಿ

ದ್ದಳೆಂತಲೂ ನೀವು ತಿಳಿದುಕೊಳ್ಳಬೇಕು. ಅವಳಿಗೂ ನನಗೂ ಮದುವೆ ಯಾದಾಗ, ಆಕೆಗೆ ಹನ್ನೆರಡು ವರುಷ ವಯೆಸ್ಸು, ನಂತರ ಅವಳಿಂದ ಮೂ ರುಜನ ಪುತ್ರರರನ್ನು ಪಡೆದು, ನಾನು ಬಹುವಿಶ್ವಾಸದಿಂದಾಕೆಯೊಡನೆ ಸಂ ಸಾರವಾಡಿಕೊಂಡಿದ್ದೆನು. ಆ ಮಕ್ಕಳು ಈಗಲೂ ಬದುಕಿರುವರು. ಆಕೆ ನನಗೆ ಯಾವಾಗಲೂ ಕೋಪಬರುವಂತೆ ಮಾಡಿದವಳಲ್ಲವೆಂದು, ನಾನು ಖಂಡಿತವಾಗಿ ಹೇಳುವೆನು. ಆಕೆಗೆ ಪತಿವ್ರತಾವಿ ಗುಣಗಳದ್ದುದರಿಂದ ನನ್ನನ್ನು ತೃಪ್ತಿಪಡಿಸುವುದೇ ಮುಖ್ಯವಾದ ಕಾರ್ಯವೆಂದುತಿಳಿದು ಕೊಂಡಿದ್ದಳು. ನಾನಾದರೂ ಅವಳ ಇಷ್ಟಾನುಸಾರವಾಗಿ ನಡೆ ದು, ಉತ್ಸಾಹವನ್ನುಂಟುಮಾಡಿ ಸಂತೋಷ ಪಡಿಸುತ್ತಿದ್ದೆನು. ಎರಡು ತಿಂಗಳ ಕೆಳಗೆ ಆಕೆಗೆ ದೇಹದಲ್ಲಿ ಆಲಸ್ಯವುಂಟಾಯಿತು. ಅದಕ್ಕೆ ಔಷ ಧೋಪಚಾರಗಳಿಂದ ನಾನು ಅವಳನ್ನು ಸಂತೈಸಿದ ಬಳಿಕ, ಗುಣಹೊಂದಿ ಸ್ವಸ್ಥವಾಗಿದ್ದಳು.

ಬಳಿಕ ಒಂದು ತಿಂಗಳವೇಲೆ, ನಾನು ಬಂದಾನೊಂದು ದಿನ ಟೈ ಗ್ರಿಸ್ ನದಿಗೆ ಸ್ನಾನಕ್ಕಾಗಿ ಹೊರಡುತ್ತಿದ್ದೆನೆಂಬುದನ್ನು ತಿಳಿದುಕೊಂಡು, ಎಂದಿನಂತೆ ಅತ್ಯಂತ ವಿಶ್ವಾಸದಿಂದ ನನ್ನನ್ನು ಪ್ರಿಯನೇ! ಎಂದು ಸಂಬೋ ಧಿಸಿ ಕರೆದು, ನನಗೆ ನೇರಳೇ ಹಣ್ಣುಗಳನ್ನು ತಿನ್ನಬೇಕೆಂಬ ಆಶೆಯು ಬಹುದಿನಗಳಿಂದಲೂ ಇದ್ದಿತು. ಈಗಲಾದರೂ ಅದು ಅತಿಶಯವಾಗಿ ಹೆಚ್ಚಿ ನನ್ನನ್ನು ತೊಂದರೆ ಪಡಿಸುತ್ತಿರುವುದು. ಆದುದರಿಂದ ನೀನು ಹೇಗಾದ ರೂ ನದಿಗೆ ಹೋಗುತ್ತೀಯೆಲ್ಲಾ ! ಬರುವಾಗ್ಗೆ ನೇರಳೇ ಹಣ್ಣುಗಳನ್ನು ತೆಗೆದುಕೊಂಡುಬಾ ! ಇಲ್ಲವಾದರೆ ನನ್ನ ಗತಿಯೇನಾಗುವದೊ ಕಾಣೆನೆಂದು ಹೇಳಲು, ನನ್ನ ಕೈಲಾದಮಟ್ಟಿಗೂ ತರುವ ಪ್ರಯತ್ನ ಮಾಡುವೆನೆಂದು ನಾನು ಹೇಳಿದೆನು.

ಬಳಿಕ ನಾನು ಊರನ್ನೆಲ್ಲಾಸುತ್ತಿ ಒಂದು ಹಣ್ಣಿಗೆ ಒಂದು ವರಹ ಕೊಡುವೆನೆಂದು ಹೇಳಿ, ಹುಡುಕಿದರೂ ಸಿಕ್ಕದೇ ಹೋದುದರಿಂದ ಮನೆಗೆ ಬಂದೆನು. ನನ್ನ ಪೆಂಡತಿಯಾದರೋ ಸ್ನಾನವಾದ ನಂತರ ಹಣ್ಣು ದೊ ರೆಯಲಿಲ್ಲವೆಂಬ ವ್ಯಸನದಿಂದ ನಿದ್ರೆಯನ್ನೇ ಮಾಡದೆ, ಹೊರಳಾಡುತ್ತ ರಾ ತ್ರಿಯನ್ನು ಕಳೆದಳು. ನಾನು ಬೆಳಗಾದ ಕೂಡಲೆ, ಊರು ಸುತ್ತಲೂ

ಇರುವ ತೋಟಗಳಲ್ಲಿ ಹುಡುಕಿ ಹುಡುಕಿಸಾಕಾಯಿತು. ಆದರೂ ಎಲ್ಲಿಯೂ ದೊರೆಯಲಿಲ್ಲ. ಹೀಗಿರುವಲ್ಲಿ ಒಬ್ಬಾನೊಬ್ಬ ತೋಟಗಾರನು, ಅಯ್ಯಾ ! ನೀನು ಹೀಗೆ ತೋಟಗಳನ್ನು ಸುತ್ತುವುದರಿಂದ ಯಾವ ಪ್ರಯೋಜನವೂ ಇಲ್ಲ. ಈ ಸುತ್ತಿನಲ್ಲಿ ಆ ಹಣ್ಣುಗಳೇ ದೊರಕುವುದಿಲ್ಲ. ಆದರೆ ಬಾಲ ಸೋರಿನಲ್ಲಿರುವ ಸುಲ್ತಾನರ ತೋಟದಲ್ಲಿ ಮಾತ್ರ ಬಂದು ಮರವಿರುವುದು. ಅಲ್ಲಿಗೆ ಹೋದರೆ ದೊರಕಬಹುದೆಂದು ಹೇಳಿದನು. ಆ ಮಾತುಗಳನ್ನು ಕೇಳಿ ನನ್ನ ಹೆಂಡತಿಯಲ್ಲಿ ನನಗುಂಟಾದ ವ್ಯಾಮೋಹದಿಂದ ಹೇಗಾದರೂ ಮಾಡಿ ಅವಳನ್ನು ತೃಪ್ತಿಪಡಿಸಬೇಕೆಂದು ನೆನೆದು, ಅವಳಿಗೆ ಈ ವಿಷಯವನ್ನು ತಿಳಿಸಿ, ಹೊರಡುವುದಕ್ಕೆ ಬೇಕಾದ ಸನ್ನಾಹವನ್ನು ಮಾಡಿಕೊಂಡು ಉತ್ತಮವಾದ ವಸ್ತ್ರಗಳನ್ನುಧರಿಸಿ, ಹಡಗನ್ನುಹತ್ತಿ ಬಾಲಸೂರಿಗೆಹೋಗಿ, ಹಣ್ಣು ಬಂದಕ್ಕೆ ಬಂದು ಪರಹಪಂತೆ ಜೆಲೆಮಾಡಿ, ಮೂರುಹಣ್ಣುಗಳನ್ನು ತೆಗೆದುಕೊಂಡು, ಹದಿನೇಳುದಿನಗಳಾದನಂತರ ಊರನ್ನು ಸೇರಿದೆನು. ಆ ಕಾಲದಲ್ಲಿ ಹಣ್ಣುಗಳು ಸಿಕ್ಕುವುದು ತುಂಬ ದುರ್ಲಭವಾಗಿದ್ದುದರಿಂದ, ತೋಟಗಾರನು ಕೊಡಮಿದ್ದರೂ, ನಾನು ಬಲವಂತದಿಂದ ತೆಗೆದುಕೊಂಡುಬಂದ ಹಣ್ಣುಗಳನ್ನು ನನ್ನಹೆಂಡತಿಯಕೈಗೆ ಕೊಟ್ಟೆನು. ಅವಳು ಅದನ್ನು ಅತ್ಯಾದರದಿಂದ ತೆಗೆದುಕೊಂಡಳು.

ಆದರೂ ಅವಳದೇಹದಲ್ಲಿ ಇನ್ನೂ ಅಸ್ವಾಸ್ಥ್ಯವುಂಟಾಗಿದ್ದುದರಿಂದ, ಅದಕ್ಕಾಪಚಿಕಿತ್ಸೆಯನ್ನು ಮಾಡಬೇಕೆಂಬುದನ್ನು ನಾನು ತಿಳಿದುಕೊಳ್ಳಲಿಲ್ಲ. ಆದರೆ ಒಂದಾನೊಂದು ದಿನ ನಾನು ರಾಜಬೀದಿಯಲ್ಲಿರುವ ಅಂಗಡಿಯ ಚೌಕವಲ್ಲಿ ಕುಳಿತಿರುವಾಗ, ಕಪ್ಪಗಿರುವ ಕರಿಯ ಕುಳ್ಳನಾದ ನಾದ ಕುರೂಪಿಯೊಬ್ಬನು ಒಂದಾನೊಂದು ಜಂಬೂಫಲವನ್ನು ಕೈಯಲ್ಲಿ ಹಿಡಿದುಕೊಂಡಿರುವುದನ್ನು ಕಂಡೆನು. ಕೂಡಲೆ ಈ ಸ್ಥಳದಲ್ಲಿ ಎಲ್ಲಿ ಹುಡುಕಿದರೂ ಜಂಬೂಫಲವು ದೊರೆಯದೆಂಬ ನಂಬಿಕೆಯಿದ್ದುದರಿಂದ ನಾನು ಆತನನ್ನು ಕರೆದು, ಅಣ್ಣಾ ! ಈ ಹಣ್ಣು ನಿನಗೆಲ್ಲಿಂದ ಬಂದಿತೆಂದು ಕೇಳಿದೆನು. ಆತನು ಹುಸಿನಗೆಯನ್ನು ಬೀರುತ್ತಾ, ಅಯ್ಯಾ! ಈ ದಿನ ನಾನು ನನ್ನ ದೊರೆಸಾನಿಯನ್ನು ನೋಡುವುದಕ್ಕೆ ಹೋಗಿದ್ದೆನು. ಆಕೆಗೆ ದೇಹದಲ್ಲಿ ಸ್ವಸ್ಥವಿರಲಿಲ್ಲ. ತಲೆಯು ಬಿಳಿಯುಳ್ಳ ಈ ಹಣ್ಣಿನಂತೆ ಮೂರು ಹಣ್ಣುಗಳಿದ್ದವು. ನಾನು ಈ ಹಣ್ಣುಗಳೆಲ್ಲಿಯೆಂದು ಕೇಳಿದೆನು. ಅದ

ಕ್ಕಾಕೆ ನನ್ನ ಗಂಡನಾದ ಪುಣ್ಯಾತ್ಮನು ಬಹುವ್ಯಯಾಸದಿಂದ ಬಾಲಸೂರಿಗೆ ಹೋಗಿ ಹದಿನೇಳುದಿನ ಪ್ರಯಾಣಮಾಡಿ ತಂದುಕೊಟ್ಟನೆಂದೂ, ಇದಕ್ಕಿಂತಲೂ ಉತ್ತಮವಾದ ಹಣ್ಣುಗಳಿಲ್ಲವೆಂದು ಹೇಳಿದಳು. ಬಳಿಕ ನಾವು ಸ್ವಲ್ಪ ಹೊತ್ತು ವಿನೋದವಾಗಿ ಮಾತನಾಡುತ್ತಿದ್ದೆವು. ನಾನು ಬರುವಾಗ ಹಣ್ಣನ್ನು ಕೈಯಲ್ಲಿ ಹಿಡಿದುಕೊಂಡು ಬಂದೆನೆಂದು ಹೇಳಿದನು. ಆ ಮಾತನ್ನು ಕೇಳಿ, ಕೋಪಾಕ್ರಾಂತನಾದುದರಿಂದ, ಪ್ರಜ್ಞೆ ತಪ್ಪಿದವನಾಗಿ ಅಂಗಡಿಯನ್ನು ಮುಚ್ಚಿಕೊಂಡು ಮನೆಗೆ ಹೋಗಿ, ನನ್ನ ಹೆಂಡತಿಯು ಮಲಗಿಕೊಳ್ಳುವ ಅಂತಃಪುರವನ್ನು ಸೇರಿದೆನು. ಅಲ್ಲಿ ಹುಡುಕಿ ನೋಡುವಾಗ ಎರಡೇ ಎರಡು ಹಣ್ಣುಗಳಿರುವುದನ್ನು ನೋಡಿ ಮತ್ತೊಂದೇನಾಯಿತೆಂದು ಕೇಳಿದೆನು.

ಆಗ ಆಕೆ ಹಣ್ಣುಗಳಿದ್ದ ಕಡೆಗೆ ತಿರಿಗಿನೋಡಿ, ಆಹಾ! ಇದೇನು? ಇಲ್ಲಿದ್ದ ಹಣ್ಣುಗಳೇನಾಯಿತು? ನಾನು ಕಾಣೆನಲ್ಲಾ! ಅಯ್ಯೋ! ನಾನು ಕಾಣೆನೆಂದು ಮೆಲ್ಲಗೆ ಹೇಳಿದಳು. ಆ ಮಾತುಗಳನ್ನು ಕೇಳಿ ನಾನು ವಿಚಾರಕನು ಹೇಳಿದ ಮಾತು ಸತ್ಯವೆಂದರಿತು ಅವಳು ಮಾಡಿದ ದುರ್ಮಾರ್ಗದಿಂದ ನನ್ನಲ್ಲಿ ಉತ್ಪನ್ನವಾದ ಅಸೂಯೆಯಿಂದ, ಕೂಡಲೆ ಕತ್ತಿಯನ್ನು ತೆಗೆದುಕೊಂಡು, ಅವಳ ದೇಹವನ್ನು ತುಂಡುತುಂಡಾಗಿ ಕತ್ತರಿಸಿ, ಚೀಲದಲ್ಲಿ ಹಾಕಿ ಕೆಂಪುದಾರದಲ್ಲಿ ಹೊಲಿದು, ಅದನ್ನೊಂದು ಪೆಟ್ಟಿಗೆಯಲ್ಲಿಟ್ಟುಕೊಂಡು, ಸಾಯಂಕಾಲವಾದನಂತರ, ಅದನ್ನು ತೆಗೆದುಕೊಂಡುಹೋಗಿ ಟೈಗ್ರಿಸ್ ನದಿಯಲ್ಲಿ ಹಾಕಿದೆನು. ನಾನು ನದಿಗೆ ಹೋಗುವಾಗ, ನನ್ನ ಮಕ್ಕಳಿಬ್ಬರು ಮಲಗಿದ್ದರು. ಹಿರಿಯವನು ಎಲ್ಲಿಯೋ ಹೋಗಿದ್ದನು. ನಾನು ಪುನಹ ಮನೆಗೆ ಬರುವಾಗ್ಗೆ ಹಿರಿಯವುಗನು ಬಾಗಿಲಲ್ಲಿ ಕುಳಿತುಕೊಂಡು ಅಳುತ್ತಾ ಇದ್ದನು. ನಾನು ಅವನನ್ನು ನೋಡಿ ಏತಕ್ಕಾಗಿ ಅಳುತ್ತಿಯೆ? ಎಂದು ಕೇಳಿದೆನು. ಆತನು ಅಪ್ಪಾ! ನೀನು ತಂದುಕೊಟ್ಟಿದ್ದ ಮೂರು ಹಣ್ಣುಗಳನ್ನು ನನ್ನ ತಾಯಿ ಹಶ್ತಿರದಲ್ಲಿಟ್ಟುಕೊಂಡು ಕುಳಿತಿರಲು ಈ ದಿನ ಬೆಳಿಗ್ಗೆ ನನ್ನ ತಮ್ಮನು ಒಂದು ಹಣ್ಣನ್ನು ಹಿಡಿದುಕೊಂಡು ಹೋಗುತ್ತಿರುವಾಗ, ನಾನು ಹಿಂದೆಯೇ ಹೋಗುತ್ತಿದ್ದೆನು. ಆಗ ಒಬ್ಬಾನೊಬ್ಬ ಕರಿಯಬಣ್ಣದ ವಿಚಾರಕನು,ನನ್ನ ತಮ್ಮನ ಕೈಯಿಂದ ಹಣ್ಣನ್ನು ಕಿತ್ತುಕೊಂಡು ಓಡಿಹೋಗ

ತೊಡಗಿದನು. ನಾನು ಆತನನ್ನು ನೋಡಿ, ಅಯ್ಯಾ ! ನಮ್ಮತಂದೆ ಹದಿನೇಳುದಿನಗಳು ಪ್ರಯಾಸಪಟ್ಟು, ಬಾಲಸೂರಿಗೆಹೋಗಿ ನಮ್ಮ ತಾಯಿಗೆ ತಂದುಕೊಟ್ಟ ಹಣವನ್ನುಗಳು, ಮೂಠರಲ್ಲಿ ಇದೂ ಒಂದಾಗಿರುವುದು. ಇದನ್ನು ಹಾಳುಮಾಡಿಕೊಂಡರೆ, ನಮ್ಮತಾಯಿ ಹೊಡೆಯುವಳು. ಕೊಡು ಎಂದು ಕೇಳಿದರೂ, ಕೊಡದೆ ಮುಂದೆಹೋಗುತ್ತಿರುವಾಗ, ನಾನು ಆತನ ಹಿಂದೆಯೇ ಹೋದೆನು. ಆಗ ಆತನು ಸಂದಿಯಿಂದ ಸಂದಿಗೆ ಮುಂದಾಗಿ ಹಾರುತ್ತ, ನನ್ನನ್ನು ತಪ್ಪಿಸಿ ಎಲ್ಲಿಯೋ ಹೊರಟುಹೋದನು.

ಈ ವಿಷಯವನ್ನು ನಮ್ಮತಾಯಿಯು ಕೇಳಿದರೆ, ಮೊದಲೇ ಅಸ್ವಸ್ಥಳಾಗಿರುವುದರಿಂದ ಮುಂದೇನಾಗುವುದೋ ಎಂದು ಅಳುತ್ತಿರುವೆನು. ದಯೆಮಾಡಿ, ನೀನು ಈ ವಿಷಯವನ್ನು ಅವಳಿಗೆ ತಿಳಿಸಬೇಡವೆಂದು, ಹೇಳುತ್ತಾ ಬಲವಾಗಿ ಅಳತೊಡಗಿದನು. ಆ ಮಾತುಗಳನ್ನುಕೇಳಿ ಅತ್ಯಂತವ್ಯಸನಾಕ್ರಾಂತನಾಗಿ ಮಾಡಬಾರದ ಕ್ರೂರಕೃತ್ಯವನ್ನು ದುರಾತ್ಮನಾದ ಆ ಚಾರಕನ ವಾಕ್ಯದಿಂದ ನಾನುಮಾಡಿ, ಮಹತ್ತರವಾದ ಪಾಪರಾಶಿಯೆನ್ನು ಮನೆಗೆ ತಂದುಕೊಂಡೆನಲ್ಲಾ ! ಎಂದು ಪಶ್ಚಾತ್ತಾಪಯುಕ್ತನಾದೆನು. ಬಳಿಕ ನನ್ನನ್ನು ನೋಡುವುದಕ್ಕಾಗಿ ಬಂದ ಈ ಮುದುಕನು ತನ್ನಮಗಳ ಯೋಗಕ್ಷೇಮವನ್ನು ವಿಚಾರಿಸಿದಾಗ, ನಾನು ಸ್ವಲ್ಪವೂ ಮರೆಮಾಚದೆ ನಡೆದಸಂಗತಿಯೆನ್ನೆಲ್ಲಾ ಹೇಳಿದೆನು. ಆತನಾದರೋ ನನ್ನನ್ನು ಯಾವಮಾತನ್ನೂ ಆಡದೆ ಸುಮ್ಮನೆ ನನ್ನಂತೆಯೆ ಅಳುವುದಕ್ಕೆ ತೊಡಗಿದನು. ಹಾ ! ಪ್ರಾಣಕಾಂತೆ ಅನ್ಯಾಯಕರನಾದ ಬಾಣಸಿಗನನೂತನನ್ನು ನಂಬಿ, ಪ್ರಾಣಪ್ರಿಯೆಯಾದ ನಿನ್ನನ್ನು ಕೊಂದೆನಲ್ಲಾ ! ನನಗೆ ಗತಿಯೇನೆಂದು ಹೇಳಿಕೊಂಡು, ಅಳುತ್ತಾ ಇದ್ದೆನು. ಈ ಮುದುಕನು ತನ್ನಮಗಳನ್ನು ನೆನೆನೆನೆದು ವ್ಯಸನಪಡುತ್ತಿದ್ದನು. ಓ ಚಕ್ರವರ್ತಿಯಾದ ಕಲೀಫರೇ ! ನಿಮ್ಮ ಆಜ್ಞಾನುಸಾರವಾಗಿ, ನಾನು ನಡೆದ ಸಂಗತಿಯೆನ್ನೆಲ್ಲಾ ವಿಜ್ಞಾಪಿಸಿರುವೆನು. ಇದಕ್ಕಿಂತಲೂ, ಅತಿಶಯವಾದುದಾವುದೂ ಇಲ್ಲವೆಂಬುದು, ತಮಗೆ ತಿಳಿದೇ ಇರುವುದರಿಂದ, ಈ ಕ್ರೂರಕೃತ್ಯಕ್ಕೆ ತಕ್ಕುದಾದಯಾವಶಿಕ್ಷೆಯನ್ನು ಕೊಟ್ಟರೂ, ನಾನು ಅನುಭವಿಸುವುದಕ್ಕೆ ಸಿದ್ಧನಾಗಿರುವೆನು. ಅಲ್ಲದೆ ನೀವುಕೊಡುವ ಶಿಕ್ಷೆಯು ಎಂತಹ ಕಠಿಣವಾಗಿದ್ದರೂ, ನಾನು ಅದನ್ನು ಒಹು ಸುಲಭವಾದುದೆಂದು,

ಸಂತೋಷದಿಂದ ಪರಿಗ್ರಹಿಸುವೆನೆಂದು, ಹೇಳಿದನೆಂದು ನುಡಿದು, ಷಹರ ಜೌದಿ, ಬೆಳಗಾದಕೂಡಲೆ ಕಛೆಯನ್ನು ನಿಲ್ಲಿಸಿ, ಮರುದಿನ ಬೆಳಗಿನಜಾವ ದಲ್ಲಿ ಹೇಳತೊಡಗಿದಳು.

೯೩ ನೆಯ ರಾತ್ರಿಕಥೆ.

ಷಹರಜೌದಿ ಸುಲ್ತಾನರನ್ನು ನೋಡಿದವಳಾಗಿ, ಆಳಿದ ಸ್ವಾಮಿಗಳೇ ! ಕಲೀಫರು, ಆ ಯುವಕನ ಮಾತುಗಳನ್ನುಕೇಳಿ, ಅವನಲ್ಲಿ ಕರುಣ ಹುಟ್ಟಿ, ಹೀಗೆಂದು ಹೇಳಲಾರಂಭಿಸಿದರು. ಸ್ತ್ರೀಹತ್ಯವಾಡಿದ ದೋಷವು, ಈತನಿಗೆಂದಿಗೂ ಸೇರದು, ಮತ್ತೇನೆಂದರೆ ಈತನು ಮಾಡಿರುವ ಅಪರಾಧವನ್ನು ಭಗವತ್ಸನ್ನಿಧಿಯಲ್ಲಿ ಮನ್ನಿಸಬಹುದು, ಆದರೆ ಇಂತಹ ಕ್ರೂರವಾದ ಸ್ತ್ರೀಹತ್ಯವು ನಡೆವುದಕ್ಕೆ ಆ ಬಾಣಸಿಗನೇ ಕಾರಣನಾದುದರಿಂದ, ಈತನಿಗೆ ಕೊಡಬೇಕಾಗಿರುವ ಪ್ರಾಣದಂಡನೆಯನ್ನು ಆ ಬಾಣಸಿಗನಿಗೆ ಕೊಡಬೇಕಾಗಿರುವುದೆಂದು ಹೇಳಿ, ತನ್ನ ಪ್ರಧಾನಮಂತ್ರಿಯಾದ ಗಯಫರನ ಕಡೆಗೆ ತಿರುಗಿ, ಅಯ್ಯಾ ! ಮಂತ್ರಿವರ್ಯ ! ಇಗೋ ! ನಿನಗಿನ್ನು ಮೂರುದಿನಗಳವಾಯಿದೆಯನ್ನು ಕೊಟ್ಟಿರುವೆನು. ಅದರೊಳಗಾಗಿ, ಆ ಬಾಣಸಿಗನನ್ನು ಹುಡುಕಿ, ಹಿಡಿದು ತರದಿದ್ದರೆ, ಆತನಿಗಾಗಬೇಕಾಗಿರುವ ದಂಡನೆಯು ನಿನ್ನನ್ನೇ ಕೊಂದುವುದೆಂದು ಹೇಳಿದರು. ಇದುವರಿಗೂ ತನ್ನಪ್ರಾಣಕ್ಕೆ ಭಯವಿಲ್ಲವೆಂದು ತಿಳಿದುಕೊಂಡಿದ್ದ ಮಂತ್ರಿಯು, ಈಗ ಪ್ರಾಪ್ತವಾದ ರಾಜಾಜ್ಞೆಯಿಂದ ತಾನು ಉಳಿಯುವಹಾಗಿಲ್ಲವೆಂದು ತಿಳಿದುಕೊಂಡು, ಮುಂಗೋಪಿಯೂ ಆದ ಕಲೀಫನ ಸ್ವಭಾವವನ್ನು ತಿಳಿದವನಾದುದರಿಂದ, ಯಾವಮಾತನ್ನೂ ಆಡದೆ, ಸುಮ್ಮನೆ ತನ್ನಮನೆಯನ್ನು ಸೇರಿ, ಆಹಾ ! ಇನ್ನು ಮೂರೇದಿನಗಳಲ್ಲವೆ ? ನಾನು ಬದುಕಿರುವುದು, ಬಾಣಸಿಗರಾದ ಕಾಫರರು ಅಗಣಿತರಾಗಿರುವ ಈ ಮಹಾಪಟ್ಟಣದಲ್ಲಿ ಅವರಾಧಿಯೊದವನನ್ನು, ನಾನು ಹೇಗೆ ಗೊತ್ತುಮಾಡಲಿ, ಭಗವಂತನು, ಕೃಪಾನ್ವಿತನಾಗಿದ್ದರೆ, ಮೊದಲು ಈಮುದುಕನನ್ನು, ಯುವಕನನ್ನು ತಮ್ಮ

ಷ್ಟಕ್ಕೆತಾವೇ ಹೊರಹೊರಡುವಂತೆ ಮಾಡಿದಹಾಗೆ ಈಗಲೂ, ಆ ಬಾಣಸಿಗನನ್ನು, ನನಗೆ ತೋರಿಸಲಿ, ಇಲ್ಲವಾದರೆ ನನ್ನಪ್ರಾಣವೆಂದಿಗೂ, ಉಳಿಯುವುದಿಲ್ಲವೆಂದು ಚಿಂತಿಸುತಿದ್ದನು.

ಈ ತೆರದಿಂದಾತನು, ಎರಡುದಿನಗಳವರಿಗೂ, ತನ್ನಕುಟುಂಬದ ಜನರ ಮಧ್ಯದಲ್ಲಿ ವ್ಯಸನಾಕ್ರಾಂತನಾಗಿ ಹೊರಳಾಡುತ್ತಿದ್ದು, ಬಳಿಕ ಮೂರನೆಯದಿನದಲ್ಲಿ ಯೋಗ್ಯನಾಗಿಯೂ, ಬುದ್ಧಿಶಾಲಿಯಾಗಿಯೂ, ಇರುವಮಂತ್ರಿಯು ಧೈರ್ಯವನ್ನವಲಂಬಿಸಿ, ತನ್ನಕೈಕೆಳಗಿನ ಗುಮಾಸ್ತರನ್ನು ಇತರ ಅಧಿಕಾರಿಗಳನ್ನು ಬರಮಾಡಿ, ಮರಣಶಾಸನವನ್ನು ಬರೆಯಿಸಿ, ತಾನು ಮಾಡಬೇಕೆಂದಿರುವ ಕಾರ್ಯವನ್ನವರಿಗೆ ತಿಳಿಸಿ, ತನ್ನ ಪತ್ನೀಪುತ್ರಾದಿಗಳನ್ನು ಅವರವಶಪಡಿಸಿ, ಅವರುಗಳಿಂದಪ್ಪಣೆಯನ್ನು ತೆಗೆದುಕೊಂಡು, ಮರಣದಂಡನೆಯನ್ನು ಹೊಂದಲು ಸಿದ್ಧನಾಗಿದ್ದನು. ಆಗ ಆತನ ಕುಟುಂಬದವರು, ಕಲೀಫನ ಅನ್ಯಾಯವನ್ನುಕುರಿತು, ಆತನನ್ನು ನಿಂದಿಸುತ್ತಾ ತಮ್ಮ ವ್ಯಸನವನ್ನು ತಾಳಲಾರದೆ ಮಂತ್ರಿಯನ್ನುತ್ತಲೂ, ಕುಳಿತು ಬಹಳವಾಗಿ ರೋಧಿಸುತ್ತಿರುವುದನ್ನು ನೋಡಿದವರು, ಅದಕ್ಕಿಂತಲೂ ಅತಿಶಯವಾದ ವ್ಯಸನವನ್ನು ಅನುಭವಿಸಿದವರು, ಲೋಕದಲ್ಲಿರುವರೆ ಎನ್ನುವಹಾಗೆ ತೋರುತಿದ್ದಿತು. ಇಷ್ಟರಲ್ಲಿಯೇ ಕಲೀಫನಕಡೆಯ ದೂತರು, ಮಂತ್ರಿಯಬಳಿಗೆಬಂದು, ಅಯ್ಯಾ! ತಾವು ಇಬ್ಬರಿಗೂ, ಕಾಫರನಾದ ಬಾಣಸಿಗನ ವಿಷಯದಲ್ಲಿ ಯಾವ ವರ್ತಮಾನವನ್ನು ಹೇಳಿಕಳುಹಿಸಿದೆ ಇರುವುದನ್ನುನೋಡಿ, ಕಲೀಫರು, ಕೋಪಾಕ್ರಾಂತರಾಗಿ ತಮ್ಮನ್ನು ಸಿಂಹಾಸನದಬಳಿಗೆ ಕರೆದುತರುವಂತೆ, ಆಜ್ಞಾಪಿಸಿರುವರೆಂದು, ಹೇಳಿದರು. ವ್ಯಸನಾಕ್ರಾಂತನಾದ ಮಂತ್ರಿಯು, ಅವರೊಡನೆ ಹೊರಡಲುದ್ಯುಕ್ತನಾದುದನ್ನುಕಂಡು, ದಾದಿಯರು ಆತನ ಮುದ್ದುಮಕ್ಕಳನ್ನು ಕರೆದುಕೊಂಡುಬಂದು, ಆತನಿಗೆ ತೋರಿಸಿದರು.

ಆ ಮಕ್ಕಳಲ್ಲಿ ಅತ್ಯ ತಸಿರ್ಯಾಸಪ್ರಾಯರಾಗಿದ್ದುದರಿಂದ, ಮಂತ್ರಿಯು ಸ್ವಲ್ಪಕಾಲನಿಲ್ಲುವಂತೆ ರಾಜಭಟರಿಂದ ಆಜ್ಞೆಯನ್ನುಪಡೆದು, ತನ್ನ ಮಕ್ಕಳನ್ನು ಮೋಹದಿಂದ ಆಲಿಂಗಿಸಿ ಮುತ್ತಿಟ್ಟುಕೊಳ್ಳುವಾಗ, ಬಾಯಿಯಿಂದ ಬರುವ ಒಂದಾನೊಂದು ವಸ್ತುವಿನ ವಾಸನೆಯನ್ನುಕಂಡು, ಮಗು

ವೆ ! ನಿನ್ನ ಬಾಯಿಯಲ್ಲಿ ಏನೋ ವಾಸನೆ ಹೊರಡುತ್ತಿರುವುದಲ್ಲಾ ! ಏನೆಂದುಕೇಳಿದನು. ಆಗ ಆ ಮಗುವು, ತಂದೆಯೇ ! ಇದು ಜಂಬೂಫಲದವಾಸನೆ, ಅದನ್ನು ನಾನು ಸ್ವಲ್ಪಹೊತ್ತಿನಮುಂಚೆ ಮಡಲಲ್ಲಿಟ್ಟುಕೊಂಡೆನು ಅದರಮೇಲೆ ಕಲೀಫರಹೆಸರು ಬರೆದಿರುವುದು, ಅದನ್ನು ನಮ್ಮಚಾಕರರಲ್ಲೊಬ್ಬನಾದ, ರಿಹಾಸನೆಂಬುವನು, ತಂದುಕೊಟ್ಟ ನನ್ನಿಂದ ಎರಡು ಸೆಕ್ವೆಸುಗಳನ್ನು ತೆಗೆದುಕೊಂಡನೆಂದು ಹೇಳಿತು. ಜಂಬೂಫಲದ ವಿಷಯವನ್ನು ಹೇಳದಕೂಡಲೆ, ಮಂತ್ರಿಯು, ಮಹಡಾಶ್ಚರ್ಯಯುಕ್ತನಾಗಿ, ತನ್ನಮಗಳ ಮಡಲಿನಲ್ಲಿದ್ದ ಆ ಹಣ್ಣುಗಳನ್ನು ತೆಗೆದುಕೊಂಡು, ಸಂತೋಷದಿಂದ ನಲಿಯುತ್ತ, ತನ್ನ ಚಾರಕನಾದ ರಿಹಾಸನನ್ನು ಕರೆಸಿ, ಎಲಾ ! ದುರಾತ್ಮನಾದ ಕಾಫರನೇ ! ಈ ಸೇರಳೆಯಹಣ್ಣು ನಿನಗೆಲ್ಲಿಂದ ಬಂದಿತೆಂದು ಕೇಳಲು, ಆತನು ಸ್ವಾಮಿಾ ! ನಾನು ಈ ಹಣ್ಣನ್ನು ತಮ್ಮ ಮನೆಯಿಂದಲಾಗಲಿ, ಕಲೀಫರ ತೋಟದಿಂದಲಾಗಲಿ ಕದ್ದುತಂದವನಲ್ಲವೆಂದು ನಿಜವಾಗಿಯೂ, ಖಂಡಿತವಾಗಿಯೂ, ಧೈರ್ಯದಿಂದಲೂ, ಹೇಳುವೆನು. ಆದರೆ ನಾನು ಒಂದಾನೊಂದುದಿನ ಮಾರ್ಗದಲ್ಲಿ ಬರುತ್ತಿರುವಾಗ, ನಾಲ್ಕು ಐದುಜನ ಹುಡುಗರು ಸೇರಿ, ಆಟವಾಡುತ್ತಾ ಇದ್ದರು. ಅವರಲ್ಲೊಬ್ಬನಕೈಯ್ಯಲ್ಲಿ ಈ ಹಣ್ಣು ಇದ್ದುದನ್ನುನೋಡಿ, ನಾನು ತೆಗೆದುಕೊಂಡೆನು.

ಆ ಹುಡುಗನು ನನ್ನಹಿಂದೆಯೇ ಬರುತ್ತಾ ! ಅಯ್ಯಾ ! ನಮ್ಮ ತಾಯಿಗೆ ಸ್ವಾಸ್ಥವಿಲ್ಲದಕಾಲದಲ್ಲಿ ಅವಳು ಬಯುವಿಕ್ವಾಸದಿಂದ ಈ ಹಣ್ಣನ್ನು ಬಯಸಲು ನಮ್ಮತಂದೆಯು, ಬಹುಪ್ರಯತ್ನಸಪಟ್ಟು ದೇಶಾಂತರ ಪ್ರಯಾಣದಿಂದ ಈ ಮೂರುಹಣ್ಣುಗಳನ್ನು ತಂದು ಕೊಟ್ಟಿದ್ದನು. ಅದರಲೊಂದನ್ನು ನಾನು ನಮ್ಮತಾಯಿಗೆ ಕಾಣದಂತೆ ತೆಗೆದುಕೊಂಡು, ಬಂದಿರುವೆನು. ಇದನ್ನು ನೀನು ತೆಗೆದುಕೊಂಡುಹೋದರೆ, ನಮ್ಮತಾಯಿಯು, ಉಳಿಯುವಹಾಗಿಲ್ಲವಾದುದರಿಂದ, ದಯವಾಡಿಕೊಡೆಂದು ಅಳುತ್ತಿದ್ದರೂ, ನಾನು ಆ ಹುಡುಗನನ್ನು ತಪ್ಪಿಸಿ, ಈ ಹಣ್ಣನ್ನು ತೆಗೆದುಕೊಂಡುಬಂದು, ನಿಮ್ಮ ಕುಮಾರ್ತೆಗೆ ಎರಡು ಸೆಕ್ವೆಸುಗಳಿಗೆ ಮಾರಿರುವೆನು. ಇದೆ ನನ್ನ ನಿಜವಾದಸಂಗತಿಯೆಂದು, ಹೇಳಿದನು. ಆಗ ಪ್ರಧಾನಮಂತ್ರಿಯಾದ ಗಯಫರನು, ಒಬ್ಬಬ್ಬನೊಬ್ಬ ಬಾಣಸಿಗನ ದುರ್ಮಾ

ರ್ಗದಿಂದ, ಸ್ತ್ರೀಹತ್ಯವು ನಡೆದು ಇತರವಿಧವಾದ ಅನರ್ಥಗಳಿಗೂ, ಕಾರಣವಾಗಿ ವರಿಣವಿಸುತ್ತಿದ್ದುದಕ್ಕಾಗಿ, ಆಶ್ಚರ್ಯವನ್ನು ಹೊಂದಿದವನಾಗಿ, ಆತನನ್ನು ಕಲೀಫರಬಳಿಗೆ ಕರೆದುಕೊಂಡುಹೋಗಿ, ಆತನುಹೇಳಿದವುತುಗಳನ್ನೆಲ್ಲಾ ಸ್ಪಷ್ಟವಾಗಿತಿಳಿಯಪಡಿಸಿ, ತನಗೀತನು ಅಪ್ರಯತ್ನದಿಂದ ಅಕಸ್ಮಾತ್ತಾಗಿ, ದೊರತಸೆಂಬುದನ್ನು ತಾನು ಅದುವರಿಗೂವೂಡಿದ ಕಾರ್ಯವನ್ನು ಕಲೀಫರಿಗೆ ವಿನರಿಸಿ ಹೇಳಿದನು. ಬಳಿಕ ಕಲೀಫನು, ಈ ವಿಚಿತ್ರವಾದ ಸಂಗತಿಯನ್ನುಕೇಳಿ, ಅತ್ಯಾಶ್ಚರ್ಯ ಹೊಂದಿದವನಾಗಿ ನಕ್ಕು, ನಕ್ಕು, ಮೂರ್ಛೆಹೋದನು. ನಂತರ ಎಚ್ಚತ್ತು ಮಂತ್ರಿಯನ್ನುನೋಡಿ, ಅಯ್ಯಾ! ಈ ದುರಾತ್ಮನು, ನಿನ್ನಪರಿಚಾರಕನಾಗಿದ್ದರೂ, ನಮ್ಮ ರಾಜ್ಯದಲ್ಲಿರುವ ಇತರಜನರಿಗೆ ಭೀತಿಯುಂಟಾಗುವುದಕ್ಕಾಗಿ, ಈತನಿಗೆ ಮರಣದಂಡನೆಯನ್ನೆ ವಿಧಿಸಬೇಕೆಂದು, ಹೇಳಲು ಮಂತ್ರಿಯು ಸ್ವಾಮಿ! ನಾನು ತಾವುಜೇಳಿದ ಅರ್ಥವನ್ನೇ ಅನುಮೋದಿಸಿರುವೆನು. ಆತನು ಮಾಡಿದ ತಪ್ಪು ಎಂದಿಗೂ, ಕ್ಷಮಿಸತಕ್ಕುದಲ್ಲ. ಕೈರೋರಾಜ್ಯದ ಮಂತ್ರಿಯಾದ ನೌರೋಜೀನಲ್ಲಿ, ಖಾಲಸೂರಿನವನಿಂದ ಬದರದ್ದೀನಲ್ಲಿ, ಇವರುಗಳ ಚರಿತ್ರೆಯೊಂದು, ನನಗೀಗ ಜ್ಞಾಪಕಕ್ಕೆ ಬಂದಿತು.

ಇಂತಹ ವಿಚಿತ್ರವಾದ ಕಥೆಗಳನ್ನು ಕೇಳುವುದರಲ್ಲಿ ತಮಗೆ ಉತ್ಸಾಹವಿರುವುದರಿಂದ, ಆಜ್ಞೆ ಮಾಡಿದರೆ ವಿಜ್ಞಾಪಿಸುವೆನು. ಯಾವಸಂಗತಿಯನ್ನು ಕುರಿತು, ನಾನು ಈ ಕಥೆಯನ್ನು ಹೇಳುವೆನೋ, ಆ ಸಂಗತಿಗಿಂತಲೂ, ಈ ಕಥೆಯು, ಬಹು ವಿಚಿತ್ರವಾಗಿರುವುದೆಂದು ತಮಗೆ ತೋರಿಬಂದರೆ, ಈ ಬಾಣಸಿಗನ ಪ್ರಾಣವನ್ನುಳಿಸಿ, ಕಾಪಾಡಬೇಕೆಂದು ಬೇಡಲು, ಕಲೀಫರು ಅಯ್ಯಾ! ನೀನು ಹೇಳಿದುದಕ್ಕೆ ನಾನು ಸಮ್ಮತಿಸಬೇಕಾಗಿರುವುದೇಹೊರತು, ಈ ಜಂಬೂಫಲದ ಕಥೆಗಿಂತಲೂ, ವಿಚಿತ್ರಕರವಾದ ಕಥೆಯೆ ಇಲ್ಲದುದರಿಂದ ನೀನು ಅಸಾಧ್ಯವಾದ ಕಾರ್ಯದಲ್ಲಿ ಪ್ರವರ್ತಿಸಿದಹಾಗಾಯಿತು. ನಿನ್ನ ಬಾಣಸಿಗನ ಪ್ರಾಣವು ಹೇಗೆ ಉಳಿಯುವುದೋ! ಕಾಣೆನೆಂದು ಹೇಳಿದಬಳಿಕ ಗಯಫರನು, ಕಥೆಯನ್ನು ಹೇಳಲಾರಂಭಿಸಿದನು.

ನೌರೋದೀಕ್ ಅಲ್ಲಿ, ಬಾದರೋದೀಕ್ ಅಲ್ಲಿಗಳ ಕಥೆ.



ಓ ಸಾರ್ವಭೌಮ ! ಈಜಿಪ್ಟ್ (ಐಗುಪ್ತ) ರಾಜ್ಯದಲ್ಲಿ, ಆಡಿದವಾತನ್ನು ಕಪ್ಪದೆ ನಡೆಸತಕ್ಕವನಾಗಿ, ಉದಾರಗುಣಾನ್ವಿತನಾಗಿ, ದೀನರಲ್ಲಿ ಜಯೋಪರನಾಗಿ, ಶೌರ್ಯಗಂಭೀರ್ಯಾದಿ ಗುಣಗಳಿಂದ ಶೋಭಿತನಾಗಿ, ತನ್ನ ಹೆಸರಕ್ಷರಗಳಿಂದ ಅರಿಮಂಡಲ ಪರಬಲಂಗಳನ್ನು ಭೇದಿಸತಕ್ಕವನಾದ ಒಬಾ್ಬನೊಬ್ಬ ರಾಜನಿದ್ದನು. ಆತನ ಆಸ್ಥಾನದಲ್ಲಿ ಲೋಕವಿಖ್ಯಾತರಾದ ಅನೇಕಮಂದಿ ವಿದ್ವಾಂಸರು ವಾಸಪೂಡಿಕೊಂಡಿರುವರು. ಇಂತಹ ರಾಜಶ್ರೇಷ್ಠನಿಗೆ, ಸಕಲಶಾಸ್ತ್ರಗಳನ್ನು ಬಲ್ಲವನಾಗಿಯೂ, ಲೌಕಿಕವ್ಯವಹಾರದಲ್ಲಿ ನಿಪುಣನಾಗಿಯೂ, ನೀತಿಶಾಸ್ತ್ರಸಂಪನ್ನನಾಗಿಯೂ, ಇರುವ ಒಬಾ್ಬನೊಬ್ಬ ಮಂತ್ರಿವರ್ಯನುಂಟು, ಆತನಿಗೆ ಇಬ್ಬರು ಮಕ್ಕಳು. ಅವರಲ್ಲಿ ಹಿರಿಯವನಹೆಸರು ಷಂಸುದ್ದೀನ್ ಮಹಮ್ಮದು. ಕಿರಿಯವನಾದರೊ ನೌರೋದಿನಲ್ಲಿ ಈತನು ತನ್ನತಂದೆಯಂತೆ ಸಕಲಗುಣಗಳನ್ನು ಹೊಂದಿದವನಾಗಿ ಚತುರನಾಗಿದ್ದನು. ಹೀಗಿರುವಲ್ಲಿ ಮಂತ್ರಿಯು ದೈವಯೋಗದಿಂದ ಸತ್ತುಹೋದನು. ಬಳಿಕ ರಾಜನು, ವ್ಯಸನಾಕ್ರಾಂತನಾಗಿ, ಆ ಮಂತ್ರಿಪುತ್ರರನ್ನು ಕರೆಸಿ, ಅವರಿಗೆ ಮಂತ್ರಿಯು ಹಾಕಿಕೊಳ್ಳುತ್ತಿದ್ದ ಸಾಧಾರಣವಾದ ಉಡುಪುಗಳನ್ನು ತೊಡಿಸಿ, ಅಯ್ಯಾ ! ನಿಮ್ಮತಂದೆಯು ಗತಿಸಿಹೋದುದರಿಂದ ನಿಮಗೆಷ್ಟವ್ಯಸನವುಂಟಾಗಿರುವುದೋ ! ಅದಕ್ಕಿಂತಲೂ, ಅಧಿಕವಾದಶೋಕವು ನನ್ನನ್ನು ಪೀಡಿಸುತ್ತಿರುವುದು, ಆದುದರಿಂದ ನೀವಿಬ್ಬರೂ, ಏಕಗೃಹಕೃತ್ಯದಲ್ಲಿ ಅನ್ಯೋನ್ಯವಾಗಿದ್ದುಕೊಂಡು, ನಮ್ಮಮಂತ್ರಿಪದವಿಯೆನ್ನು ಅನುಭವಿಸುತ್ತ, ನಿಮ್ಮತಂದೆಯಂತೆ ಸದ್ಗುಣಾನ್ವಿತರಾಗಿರಿ ಎಂದು ಹೇಳಿಕಳುಹಿಸಿದನು.

ಬಳಿಕ ಮಂತ್ರಿಪುತ್ರರು, ವಂದನಾಪೂರ್ವಕವಾಗಿ ತಂತಮ್ಮ ವಸ್ತ್ರಗಳನ್ನು ರಾಜನಬಳಿಯಲ್ಲಿಟ್ಟು, ಮನೆಗೆಹೋಗಿ ಪಿತೃಕರ್ಮವನ್ನು ಪೂರೈಸಿಕೊಂಡು, ಬಂದುತಿಂಗಳವರೆಗೂ ಸುಮ್ಮನಿದ್ದು ನಂತರ, ರಾಜನಾಸ್ಥಾನಕ್ಕೆ ಹೋಗುವುದಕ್ಕೆ ಪ್ರಾರಂಭಮಾಡಿ, ಸಭಾದಿನಗಳಲ್ಲಿ

ಅಲ್ಲಿಯೇ ಇದ್ದು, ಮನೆಗೆಬರುತ್ತಾ, ರಾಜನು ಊರಿಂದಹೊರಟು, ಜೀಟೆ ಗೆಹೋದಕಾಲದಲ್ಲಿ, ರಾಜ್ಯಾಡಳಿತವನ್ನುನೋಡುವ ಕಾರ್ಯವನ್ನು ಒಬ್ಬ ನೂ, ಆತನ ಬಿಂಗಾವಲಿಗಾಗಿ ಹೋಗುವುದನ್ನು ಮತ್ತೊಬ್ಬನು ವಹಿಸಿ ಕೊಂಡು, ಅನ್ಯೋನ್ಯಭಾವದಿಂದ ಸರದಿಯಮೇಲೆ ತಮ್ಮಾಳಿಗವನ್ನು, ಮಾಡಿಕೊಳ್ಳುತ್ತಿದ್ದರು. ಹೀಗಿರುವಲ್ಲಿ ಒಂದಾನೊಂದುದಿನ ಹಿರಿಯವನು, ತನ್ನ ಸರದಿಯಮೇರಿಗೆ ರಾಜನೊಡನೆ ಬೇಟೆಗೆ ಹೊರಡಬೇಕಾಗಿರುವುದ ನ್ನು ನೆನೆದು ರಾತ್ರಿ ಭೋಜನವಾದಮೇಲೆ, ತಮ್ಮನೊಡನೆ ಮಾತನಾಡು ತ್ತ, ಅಯ್ಯಾ ! ನಾವಿಬ್ಬರೂ, ಈಗ ಮದುವೆಮಾಡಿಕೊಳ್ಳದಿರುವುದರಿಂ ದ, ಅನ್ಯೋನ್ಯಸ್ನೇಹದಿಂದಿರುವೆವು. ಇನ್ನುಮುಂದೆಯಾ, ಹೀಗಿರು ವಂತೆ ನಾವು ಈಗಲೆ, ಏರ್ಪಡಿಸಿಕೊಳ್ಳುವುದಕ್ಕಾಗಿ, ನಮ್ಮಸಂಬಂಧಕ್ಕೆ, ಯೋಗ್ಯರಾದ ಕುಟುಂಬದವರಲ್ಲಿನ ಅಕ್ಕತಂಗಿಯರನ್ನು ಹುಡುಕಿ, ಏಕ ಕಾಲದಲ್ಲಿ ಇಬ್ಬರು ಮದುವೆಮಾಡಿಕೊಳ್ಳಬೇಕೆಂದಿರುವೆನು. ಈ ವಿಷಯ ದಲ್ಲಿ ನಿನ್ನ ಅಭಿಪ್ರಾಯವೇನೆಂದು, ಹೇಳಿದನು. ಆ ಮಾತನ್ನುಕೇಳಿ, ನೌರೋದೀನಲ್ಲಿಯು, ಅಣ್ಣಾ ! ನೀನುಹೇಳಿದ ಯೋಚನೆ ನಮ್ಮಿಗಳ ಅನ್ಯೋನ್ಯವೈಮೈತ್ರಿಯನ್ನು ಹೆಚ್ಚಿಸುತ್ತಿರುವ ಹಾಗಿರುವುದರಿಂದ ಇದಕ್ಕಿಂತಲೂ, ಅತಿಶಯವಾದ ಮಾರ್ಗವೇ ಇಲ್ಲ. ಆದುದರಿಂದ ನಾನು, ನೀನುಹೇಳಿದ ಅರ್ಥವನ್ನು ಅನುಮೋದಿಸುವೆನೆಂದನು. ಅದನ್ನು ಕೇಳಿ, ಹಿರಿಯವನು, ಅಯ್ಯಾ ! ನನ್ನಭಿಮತವು ಇಷ್ಟೆ ಅಲ್ಲ ! ನಾವಿಬ್ಬರೂ ಒಂದೇದಿನದಲ್ಲಿ ಮದುವೆಮಾಡಿಕೊಂಡು, ನಮ್ಮಹೆಂಡತಿಯರು, ಒಂದೇದಿನ ದಲ್ಲಿ ಗರ್ಭವನ್ನುಧರಿಸಿ, ನಿನ್ನ ಹೆಂಡತಿ ಗಂಡುಮಗುವನ್ನು, ನನ್ನಭಾರ್ಯೆ ಹೆಣ್ಣುಮಗುವನ್ನು, ಪೆತ್ತರೆ ಅವರಿಬ್ಬರಿಗೂ, ವಯಸ್ಸುಬಂದಮೇಲೆ ವಿವಾಹ ಮಾಡಬೇಕೆಂಬ, ಅಭಿಲಾಷೆ ಯುಂಟಾಗಿರುವುದೆಂದು, ಹೇಳಲು ಅಣ್ಣಾ ! ಈಯೋಚನೆಯು ಇನ್ನೂ ಉತ್ತಮವಾದುದು. ಇದುನಮ್ಮ ಯಾವಜ್ಜೀವವು, ಮೈತ್ರಿಯನ್ನುಭಿನ್ನವಿಲ್ಲದಿರಿಸುವುದರಿಂದ ಇದಕ್ಕಿಂತ ಲೂ, ಅತಿಶಯವಾದ ಯೋಚನೆಯೇ ಸರಿ ! ಅಣ್ಣಾ ! ಆದರೆ ಈ ವಿಧವಾ ದ ವಿವಾಹವು, ನಡೆಯದೆ ನಿಂತುಹೋದರೆ ನನ್ನಮಗನು ನಿಮ್ಮಮಗಳಿಗೆ, ನನ್ನ ಆಸ್ತಿಯೆಲ್ಲರ್ಧಭಾಗವನ್ನು ಕೊಡಬೇಕೊ ? ಎಂದುಕೇಳಲು ಹಿರಿ ಯವನು, ಅಯ್ಯಾ ! ಅದೇನು ಅಷ್ಟೊಂದು ಕಷ್ಟಕರವಾದುದಲ್ಲ,

ನೀನು ವಿವಾಹಕಾಲದಲ್ಲಿಕೊಡಬೇಕಾಗಿರುವ ಮುಡುಪಿಗಿಂತಲೂ, ಮೂರು ಸಾವಿರ ಸೆಕ್ವೆಸುಗಳನ್ನು, ಮೂರು ಉತ್ತಮವಾದ ಗಾವುಗಳನ್ನು, ಮೂರುಬಾಣಸಿಗರನ್ನೂ, ಕೊಡದೆ ಇರಲಾರೆ ಎಂದು ನನಗೆ ತೋರುವುದೆಂದು ಹೇಳಿದನು.

ಆಗ ! ಕಿರಿಯವನು, ಆಹಾ ! ಇಲ್ಲ ! ಇಲ್ಲ ! ನಾನಿದಕ್ಕೆ ಸಮ್ಮತಿಸಲಾರೆನು, ನಾವಿಬ್ಬರೂ, ಸಹೋದರರಲ್ಲವೋ ? ಕೀರ್ತಿವ್ರತಿಷ್ಠಾದಿಗಳು, ನವುಗಿಲ್ಲವೋ ? ನ್ಯಾಯಾನ್ಯಾಯಗಳನ್ನು ತಿಳಿದವರಲ್ಲವೋ ? ಸ್ತ್ರೀಯೆರಿಗಿಂತಲೂ, ಪುರುಷರು ಹೆಚ್ಚು ಸ್ವಾತಂತ್ರ್ಯವುಳ್ಳವರೆಂಬುದನ್ನು ನೀನುಕಾಣೆಯೊ ? ಆದುದರಿಂದ ನೀನೇ ನಿನ್ನಮಗಳಿಗೆ ಕೊಡಬೇಕಾದ ಸ್ತ್ರೀಧನವನ್ನು ಕೊಡಬೇಕು ! ಆದರೆ ನೀನುಹೇಳಿದ ಮೂತಿನಿಂದ ನನಗೆ ತೋರುವುದೇನಂದರೆ, ಅನ್ಯರ ಖರ್ಚಿನಿಂದ ನಿನ್ನಕೆಲಸವನ್ನು ತೂಗಿಸಿಕೊಳ್ಳಬೇಕೆಂದು, ನೀನು ಯೋಚಿಸಿರುವುದೇ ಎಂದುಹೇಳಿದನು. ನೌರೋದೀನನು ಈ ಮೂತುಗಳನ್ನು ಪರಿಹಾಸರೂಪದಿಂದಾಡಿದರೂ, ಆತನ ಅಣ್ಣನು ಅತ್ಯಂತಕೋಪಿಯಾದುದರಿಂದ ರೇಗಿಕೊಂಡು, ವಿರೋಧವಾಗಿ ಭಾವಿಸಿ, ನೀನು ನನ್ನ ಕುವೂರಿಗಿಂತಲೂ, ನಿನ್ನಮಗನನ್ನೇ ಅಧಿಕನೆಂದು ಭಾವಿಸಿದೆಯೆಲ್ಲಾ ! ಇದು ನಿನಗೆ ಹಾನಿಕರವಾದುದೆ ಹೊರತು ಮತ್ತೇನು ಅಲ್ಲ ನಿನ್ನಮಗನು ನನ್ನಮಗಳನ್ನು ಮದುವೆಯಾಗುವುದಕ್ಕೆ ಯೋಗ್ಯನೆಂದು ತಿಳಿದಿರುವೆಯೊ ? ಹಾಗೆ ತಿಳಿದುಕೊಂಡಿದ್ದರೆ, ಅದರಿಂದ ನನಗೆ ತುಂಬ ಆಶ್ಚರ್ಯವುಂಟಾಗುತ್ತಿರುವುದು. ಅಲ್ಲದೆ ನಾವಿಬ್ಬರೂ, ಸಮಾನಪ್ರತಿಷ್ಠೆಯುಳ್ಳವರೆಂದು, ನೀನು ಹೇಳಿದುದರಿಂದ ನಿನ್ನಬುದ್ಧಿಯು, ಮಲಿನವಾಗಿರುವುದೆಂದು, ತೋರುತ್ತದೆ. ಎಲೋ ! ಹುಚ್ಚ ನೀನು ಇಂತಹ ಅವಿವೇಕಿಯಾದುದರಿಂದ, ನಿನ್ನ ಆಸ್ತಿಗಿಂತಲೂ ಅಧಿಕವಾದ ಧನವನ್ನು ಕೊಟ್ಟರೂ, ನಾನು ನನ್ನಮಗಳನ್ನು ನಿನ್ನಮಗನಿಗೆ ಕೊಡಲಾರೆನೆಂದು ಹೇಳಿದನು. ಮಕ್ಕಳು ಹುಟ್ಟುವುದಕ್ಕೆ ಮೊದಲೆ, ಮದುವೆಯ ವಿಷಯದಲ್ಲಿ ವಿವಾದಹುಟ್ಟಿಸಿ, ಪ್ರಮಾದವನ್ನುಂಟುಮಾಡುತ್ತಿರುವ, ಷಂಸುದೀನ್ಮಹಮ್ಮದನು, ತಮ್ಮನನ್ನುನೋಡಿ, ನಾನು ನಾಳೆದಿನ ಸುಲ್ತಾನರೊಡನೆ ಹೊರಡಬೇಕಾಗಿ ಬಾರದಿರುವಪಕ್ಷದಲ್ಲಿ, ನಿನಗೆ ತಕ್ಕ ಶಿಕ್ಷೆಯನ್ನು ಮಾಡುವೆನು. ಮುಂದುವೇಳೆ ನಾನು ಬೇಟೆಗೆಹೋದರೂ, ಬಂದಮೇಲೆ

ನಿನ್ನಗರ್ವವನ್ನು ಮುರಿಯುವೆನೆಂದುಹೇಳಿ. ಅಂತಃಪುರವನ್ನು ಸೇರಿದನು ಬಳಿಕ ಮಾರನೇದಿನ ಸುಲ್ತಾನನೊಡನೆ ಕೈರೋಪಾ್ರಂತ್ಯಕ್ಕೆ ಬೇಟೆಯಾಡುವುದಕ್ಕೆ ಹೊರಟುಹೋದನು.

ನೌರೋದೀನನು, ತನ್ನನ್ನು ಧಿಕ್ಕರಿಸಿ ಮಾತನಾಡಿದ ಅಣ್ಣನೊಡನೆ ಇನ್ನುಮೇಲೆ ವಾಸಮಾಡುವುದು ತುಂಬ ಕಷ್ಟಕರವೆಂದು, ತಿಳಿದು ತನಗೆಬೇಕಾದಷ್ಟು ಹಣವನ್ನು, ಆಭರಣಗಳನ್ನು, ವಸ್ತ್ರಗಳನ್ನು, ತೆಗೆದುಕೊಂಡು, ಒಂದು ಹೇಸರಕತ್ತೆಯಮೇಲೆ ಹೇರಿಕೊಂಡು, ಎರಡು ದಿನಗಳು ಪ್ರಯಾಣಹೋಗಿ, ಬರುವೆನೆಂದು ತನ್ನ ಚಾಕರರಿಗೆಹೇಳಿ ಹೊರಟನು. ಆದರೆ ಕೈರೋಪಟ್ಟಣವನ್ನು ದಾಟಿ, ಅರಬೀದೇಶದ ಮೈದಾನದಲ್ಲಿ ತನ್ನಕುದುರೆಯನ್ನು ಬಿಟ್ಟುಕೊಂಡು, ಹೋಗುತ್ತಿರುವಾಗ ಅದಕ್ಕೆ ತುಂಬ ಅಲಸಟೆಯುಂಟಾದುದರಿಂದ, ತಾನು ಪಾದಚಾರಿಯಾಗಿ ನಡೆದುಬರುತ್ತಿದ್ದನು. ಅದೃಷ್ಟವಶಾತ್ತಾಗಿ, ಒಬ್ಬಾನೊಬ್ಬ ವ್ಯಾಪಾರಸ್ಥನು, ಆ ಮಾರ್ಗವಾಗಿಬಂದು ಆತನನ್ನು ತನ್ನ ಒಂಟೆಯಮೇಲೆ ಕೂಳ್ಳಿರಿಸಿಕೊಂಡು, ಬಾಲಸೂರಿಗೆ ಕರೆದುಕೊಂಡುಹೋದನು. ಆತನು ಹೊಸದಾಗಿರುವ ಬಾಲಸೂರಿನಲ್ಲಿ, ಎಲ್ಲಿಳಿದುಕೊಳ್ಳಬೇಕೆಂದು, ಯೋಚಿಸುತ್ತಿರುವಾಗ, ಆ ರಾಜ್ಯದ ಪ್ರಧಾನಮಂತ್ರಿಯು, ಪ್ರಜೆಗಳ ಕಷ್ಟಸುಖಗಳನ್ನು ವಿಚಾರಿಸುವುದಕ್ಕಾಗಿ, ಆನೆಯಮೇಲೆಕುಳಿತು ಮಾರ್ಗದಲ್ಲಿ ಬರುತ್ತಿರಲು, ಜನರು ಗುಂಪುಗುಂಪಾಗಿ ಆತನಿಗೆ ವಂದನೆಗಳನ್ನು ಸಮರ್ಪಿಸುತ್ತಿದ್ದರು. ಇಂತಹ ಜನರಗುಂಪಿನಲ್ಲಿ ಈ ನೌರೊದೀನನು, ನಿಂತುಕೊಂಡಿದ್ದನು. ಅಕಸ್ಮಾತ್ತಾಗಿ ಆ ಪ್ರಧಾನಮಂತ್ರಿಯು, ನೌರೊದೀನನನ್ನು ನೋಡಿ, ಆತನ ಮುಖಭಾವದಿಂದೇನೋ ವಿಷಯವನ್ನು ಗ್ರಹಿಸಿಕೊಂಡು ಹತ್ತಿರಕ್ಕೆ ಬಂದು ಅಯ್ಯಾ ! ನೀನಾರು ? ಎಲ್ಲಿಂದಬಂದೆ ? ಎಂದುಕೇಳಲು, ನೌರೊದೀನನು, ತನ್ನಚರಿತ್ರೆಯನ್ನುಹೇಳಿ, ತಾನಿನ್ನು ಬದುಕಿರುವುದಕ್ಕಿಂತಲೂ, ಪರದೇಶಸಂಚಾರದಿಂದ ಪ್ರಾಣವನ್ನು ಕಳೆದುಕೊಳ್ಳುವುದುತ್ತಮವೆಂದು, ಇಲ್ಲಿಗೆ ಬಂದಿರುವೆನೆಂದು ಹೇಳಿದನು.

ಅದನ್ನು ದಯಾಪರನಾದ ಆವೃದ್ಧಮಂತ್ರಿಯುಕೇಳಿ, ಅಯ್ಯಾ ಕುಮಾರನೇ ! ನಿನ್ನಮನಸ್ಸುಬಂದಂತೆ ನೀನು ನಡೆಯಬೇಡ. ಪ್ರಪಂ

ಚದಲ್ಲಿ ದುಃಖವೇ ಸಾರವಾಗಿರುವುದೇಹೊರತು, ಮತ್ತೇನೂ ಇಲ್ಲ. ನನ್ನ ಸಂಗಡಬಾ!ನಿನ್ನದುಃಖವನ್ನು ಮರೆಯುವಂತೆಮಾಡುವೆನೆಂದು ಹೇಳಿದನು. ಆಮಾತಿಗೆ ಸಮ್ಮತಿಸಿ, ನೌರೊದೀನನು, ಮಂತ್ರಿಯನ್ನು ಹಿಂಬಾಲಿಸಿದನು. ಮಂತ್ರಿಯು, ಆತನನ್ನು ತನ್ನಮನೆಗೆ ಕರೆದುಕೊಂಡುಹೋಗಿ, ಆತನ ಗುಣಗಳನ್ನು ಚೆನ್ನಾಗಿ ಪರೀಕ್ಷಿಸಿ, ವಿಶ್ವಾಸಪಾತ್ರನಾಗಿ, ಅಯ್ಯಾ! ನನಗಾದರೋ ವೃದ್ಧಾಪ್ಯವು ಪ್ರಾಪ್ತವಾಯಿತು. ಸಂತಾನವಿಲ್ಲವಾದರೂ ಒಬ್ಬಳೇ ಒಬ್ಬಳು ಸುಂದರಾಂಗಿಯೊವಾದ ಪುತ್ರಿ ಇರುವಳು. ಅವಳನ್ನು ನಮ್ಮದೇಶದ ದೊಡ್ಡಮನುಷ್ಯರಲ್ಲನೇಕರು ಕೇಳುವುದಕ್ಕೆ ಬಂದಿದ್ದರು. ನಾನು ಕೊಡುವುದಿಲ್ಲವೆಂದು, ಖಂಡಿತವಾಗಿ ಹೇಳಿಬಿಟ್ಟೆನು. ನಿನ್ನಂತೆ ಗುಣಾಢ್ಯನಾಗಿ, ನಿನ್ನನ್ನು ಸೇರುವುದಕ್ಕೆ ಯೋಗ್ಯನಾಗಿರುವ ನನ್ನ ಮಗಳನ್ನು ನಿನಗೆಕೊಟ್ಟು, ವಿವಾಹಮಾಡಿಕೊಡಬೇಕೆಂಬ ಆಸೆಯು, ನನಗೆ ತುಂಬ ಇರುವುದು. ಅಲ್ಲದೆ ನಿನ್ನನ್ನು ನನ್ನ ದತ್ತಪುತ್ರನೆಂದು, ಹೇಳಿ, ಸುಲ್ತಾನರಮೂಲಕ ನಿನಗೆ ಮಂತ್ರಿಪದವಿಯನ್ನು ಕೊಡಿಸುವೆನು ವೃದ್ಧಾಪ್ಯದಲ್ಲಿರುವ ನನಗೆ ಸ್ವಸ್ಥನಾಗಿರುವುದೇ ಕಾರ್ಯವಾಗಿರುವುದರಿಂದ ನನ್ನ ಸರ್ವಸ್ವವನ್ನು ನಿನ್ನ ಸ್ವಾಧೀನವೂಡುವೆನು. ಈ ವಿಷಯದಲ್ಲಿ ನಿನ್ನ ಅಭಿಮತವನ್ನು ತಿಳಿಸಬೇಕೆಂದು ಕೇಳಿದನು. ಇಂತುಹೇಳಿದ ಪ್ರಧಾನಮಂತ್ರಿಯೆನೂತನ್ನುಕೇಳಿ, ನೌರೊದೀನನು, ಮಹಾಸಂತೋಷಯುಕ್ತನಾಗಿ, ವಿನಯಸಂಪನ್ನನಾಗಿ, ಆತನ ಪಾದಗಳಿಗೆರಗಿ ಸ್ವಾಮಿ! ನಾನು ನನ್ನಪ್ರಾಣವೂ ತಮ್ಮಧೀನವಾದವುಗಳಾದುದರಿಂದ, ನಿಮ್ಮ ಆಜ್ಞಾನುಸಾರವಾಗಿ ನಡೆಯೆಲು, ಮನಃಪೂರ್ವಕವಾಗಿ ಸಮ್ಮತಿಸಿರುವೆನೆಂದು, ಹೇಳಿ, ತನ್ನ ಸಂತೋಷಾತಿಶಯವನ್ನು ತಿಳಿಯಪಡಿಸಿದನು. ಕೂಡಲೆ ಮಂತ್ರಿಯು, ತನ್ನ ಚಾರಕರಮುಖದಿಂದ ಮನೆಯೆನ್ನು ಶೃಂಗಾರಮಾಡಿಸಿ, ದೊಡ್ಡಚಪ್ಪರವನ್ನು ಹಾಕಿಸಿ, ದೊಡ್ಡಮನುಷ್ಯರಾದ ರಾಜಕುಮಾರರನ್ನೆಲ್ಲಾ ಔತಣಕ್ಕೆ ಕರೆಸಿ, ಅವರೆಲ್ಲರೂಬಂದು ಸೇರುವ ಸಂಭ್ರಮಯುಕ್ತವಾದ ಸಮಯವನ್ನುನೋಡಿ, ತನ್ನ ಪಟ್ಟಣದಲ್ಲಿರುವ ದೊಡ್ಡಮನುಷ್ಯರೆಲ್ಲರನ್ನೂ ಬರಮಾಡಿ, ತನ್ನ ಮನೋಭಿಪ್ರಾಯವನ್ನು ಅವರಸಂಗಡ ಹೇಳತೊಡಗಿ, ಅಯ್ಯಾ ! ಈನೌರೊದೀನನೆಂಬುವನು, ನನ್ನ ಅಣ್ಣನಮಗನಾದ ರಾಜಪುತ್ರನು.

ಈತನತಂದೆಯು, ನನ್ನಂತೆ ಕೈರೋರಾಜ್ಯದಲ್ಲಿ ಮಂತ್ರಿಪದವಿಯಲ್ಲಿರುವನು. ಆತನಿಗೆ ಇವನೇ ಪ್ರೀತಿಪಾತ್ರನಾದ ಮಗನು. ನನ್ನ ಅಣ್ಣನಿಗೂ, ನನಗೂ, ಉಂಟಾಗಿರುವ ಬಂಧುತ್ವವಿಶೇಷವು ನಮ್ಮಗಳ ತಲೆಗೆ ಮುಗಿದುಹೋಗದಂತೆ, ಅದನ್ನು ಅಲ್ಲಿಂದಮುಂದೆ ಅಭಿವೃದ್ಧಿಪಡಿಸುವುದಕ್ಕಾಗಿ, ನನ್ನಮಗಳನ್ನು ಮದುವೆಮಾಡಿಕೊಳ್ಳುವಂತೆ, ಒಪ್ಪಿ ನನ್ನಬಳಿಗೆ ಕಳುಹಿಸಿರುವನು. ನಾನಾದರೊ, ನನ್ನಮಗಳನ್ನು ಈತನಿಗೆಕೊಟ್ಟು, ಮದುವೆಮಾಡಬೇಕೆಂಬ ಉದ್ದೇಶದಲ್ಲಿರುವೆನಾದುದರಿಂದ, ಘನವಂತರಾದ ನಿಮ್ಮಗಳ ಇಷ್ಟಾನುಸಾರವಾಗಿ, ಮುಂದೆ ನಡೆಸಬೇಕೆಂದು, ಮೊದಲು ಅಂತಸ್ಥವಾಗಿ ನೆನೆದುಕೊಂಡಿದ್ದ ನನ್ನ ಸಂಕಲ್ಪವನ್ನು ಈಗ ನಿಮ್ಮಗಳೆದುರಿಗೆ ವಿಶದಪಡಿಸಿರುವೆನೆಂದು ಹೇಳಿದನು. ಅದನ್ನುಕೇಳಿ ಅಲ್ಲಿ ನೆರೆದಿದ್ದ ಜನರೂ, ಮೊದಲು ಆ ಹುಡುಗಿಯೆನ್ನುಕೇಳಿದ ಇತರ ಘನವಂತರೂ ಸಹ, ಅಯ್ಯಾ ! ನೀವು ಈಗ ಮಾಡಿರುವ ಯೋಚನೆಯು, ಅತ್ಯುತ್ತಮವಾಗಿರುವುದರಿಂದ ಅಗತ್ಯವಾಗಿ ನಿಮ್ಮಿಷ್ಟಾನುಸಾರವಾಗಿ ನೆರವೇರಿಸಬಹುದು. ಇದರಿಂದ ದಂಪತಿಗಳು, ಬಹುಕಾಲ ಭಗವಂತನದಯೆಯಿಂದ ದಾಂಪತ್ಯಸುಖವನ್ನನುಭವಿಸುತ್ತಿದ್ದು, ದೀರ್ಘಾಯುರಾರೋಗ್ಯಯುಕ್ತರಾಗಿ ಬಾಳಲೆಂದು ನಾವು ಹರಸುವೆವೆಂದು, ನುಡಿದರು. ಎಂದುಹೇಳಿ ಷಹರಜಾದಿ, ಕಥೆಯೆನ್ನುನಿಲ್ಲಿಸಿ, ಬೆಳಗಾದಕೂಡಲೇ ಮತ್ತೆ ಹೇಳಲಾರಂಭಿಸಿದಳು.

೯೪ ನೆಯ ರಾತ್ರಿ ಕಥೆ.

ಷಹರಜಾದಿ, ಸುಲ್ತಾನರನ್ನುನೋಡಿ, ಸ್ವಾಮಿ ! ಪ್ರಧಾನ ಮಂತ್ರಿಯೊದ ಗಯೆಫರನು, ಕಲೀಫರನ್ನುಕುರಿತು, ಮುಂದೆ ಹೇಳಸಾಗಿದನು. ಬಾಲಸೂರಿನ ಮಂತ್ರಿಯಮನೆಯಲ್ಲಿ ನೆರೆದಿದ್ದ ದೊಡ್ಡಮನುಷ್ಯರೆಲ್ಲರೂ, ನೌರೋದೀನಲ್ಲಿಗೂ, ಮಂತ್ರಿಪುತ್ರಿಗೂ, ವಿವಾಹವನ್ನು ಬೆಳೆಸಲನುಮೋದಿಸಿ, ಅದರಂತೆ ವಿವಾಹವನ್ನು ನೆರವೇರಿಸಿದನಂತರ, ಸರ್ವರೂ ಭೋಜನಕ್ಕೆಕುಳಿತು, ವಿನೋದವಾಗಿ ಊಟಮಾಡುತ್ತಿರುವಾಗ, ರುಚಿಕರವಾದ ಉತ್ತಮ ಭಕ್ಷ್ಯಗಳನ್ನು ತಂದೊಪ್ಪಿಸುತ್ತಿರಲು, ಕುಲಾಚಾರದಪದ್ಧತಿಯೆಂತೆ ಅವರವರಿಗಿಷ್ಟವಾದ ಪದಾರ್ಥಗಳನ್ನು ಅವರವರೇತೆಗೆದುಕೊಂ

ಡು, ಭೋಜನವೂಡಿದರು. ನಂತರ ಮಂತ್ರಿಯು ನೌರೋದೀನನ್ನು, ಮಜ್ಜನಶಾಲೆಗೆ ಕಳುಹಿಸಿ, ತನ್ನ ಪರಿಚಾರಕರಮೂಲಕ ಮಂಗಳಸ್ನಾನವನ್ನು ಮಾಡಿಸಿದನಂತರ, ಆತನಿಗೆ ಉತ್ತಮತರದ ಜರತಾರಿವಸ್ತ್ರಗಳನ್ನು ಉಡುವುದಕ್ಕೆ ಕೊಟ್ಟನು. ನೌರೊದೀನನು, ಸಂತೋಷಪೂರ್ವಕವಾಗಿ, ಆ ವುಡುಪುಗಳನ್ನು ಧರಿಸಿಕೊಂಡಮೇಲೆ, ತನ್ನ ಮೊದಲಿನ ಉಡುಪುಗಳ ಸೌಂದರ್ಯಕ್ಕಿಂತಲೂ, ಹೆಚ್ಚಾದ ಅಂದವುಳ್ಳವನಾಗಿದ್ದನು. ಬಳಿಕ ಆತನು ಸಂತೋಷಸಮುದ್ರದಲ್ಲಿ ಮುಳುಗಿ ತೇಲುತ್ತಾ, ತನ್ನಮಾವನಾದ ಪ್ರಧಾನಮಂತ್ರಿಯ ದರ್ಶನಾರ್ಥವಾಗಿ, ಆತನಬಳಿಗೆ ಬಂದನು. ಮಂತ್ರಿಯು, ನೌರೋದೀನಲ್ಲಿಯ, ರೂಪಲಾವಣ್ಯಗಳನ್ನುನೋಡಿ, ಅತ್ಯಾನಂದಭರಿತನಾಗಿ ಆತನನ್ನುಕರೆದು, ತನ್ನಬಳಿಯಲ್ಲಿ ಕುಳ್ಳರಿಸಿಕೊಂಡು, ಅಯ್ಯಾ! ರಾಜಪುತ್ರನೆ ನೀನು ಐಗುಪ್ತರಾಜ್ಯದ ಪ್ರಧಾನಮಂತ್ರಿಯು ಮಗನೆಂಬುದನ್ನು, ನಿಮ್ಮ ಅಣ್ಣತಮ್ಮಂದಿರಿಗೆ ಸ್ನೇಹಭಂಗವುಂಟಾದುದರಿಂದ, ಇಲ್ಲಿಗೆ ಬಂದನೆಂಬುದನ್ನೂ ತಿಳಿಸಿದಂತೆ, ನಿನಗೂ ನಿನ್ನ ಅಣ್ಣನಿಗೂ, ಮನಸ್ತಾಪವುಂಟಾಗುವುದಕ್ಕೆ ಕಾರಣವನ್ನು ಮರೆಮಾಜದೆ ನನ್ನ ಸಂಗಡ ದಯೆಮಾಡಿ ಹೇಳಬೇಕೆಂದು, ಕೇಳಿಕೊಳ್ಳುವೆನು. ಈಗಿನ ನಿಮ್ಮಿಬ್ಬರಿಗೂ ಉಂಟಾಗಿರುವ ಬಾಂಧವ್ಯವು, ಅನ್ಯೋನ್ಯಭಾವವನ್ನು ಹೆಚ್ಚಿಮಾಡುವುದೇ ಹೊರತು, ಎಂದಿಗೂ ಕಡವೆಮಾಡದಾದುದರಿಂದ, ನೀನು ಮರೆಮಾಜಬೇಕಾದುದೇನೂ ಇಲ್ಲವೆಂದು, ನಾನು ನಂಬುತ್ತೇನೆಂದು, ಹೇಳಿದನು. ಕೂಡಲೇ ನೌರೊದೀನಲ್ಲಿಯು, ತನಗೂ ತನ್ನ ಅಣ್ಣನಿಗೂ, ಮನಸ್ತಾಪವುಂಟಾಗುವುದಕ್ಕೆ ಕಾರಣವನ್ನು ಸವಿಸ್ತಾರವಾಗಿ ತಿಳಿಯಹೇಳಿದಕೂಡಲೆ, ಮಂತ್ರಿಯು ಫಕಫಕನೆ ನಕ್ಕು ಅಯ್ಯಾ! ಇಂತಹ ವಿಚಿತ್ರವಾದ ಮನಸ್ತಾಪದಕಾರಣವನ್ನು ನಾನೆಲ್ಲಿಯೂ ಕೇಳಲಿಲ್ಲ. ನೀನು ವಿನೋದಕ್ಕಾಗಿ, ಹೇಳಿದ ಮಾತುಗಳನ್ನು ನಿಮ್ಮಣ್ಣನು ತಿಳಿದುಕೊಳ್ಳದೆ, ಹೋದುದು ತಪ್ಪು. ಅಲ್ಲದೆಮಾನಸಿಕವಿನಾಹಕಕ್ಕಾಗಿ ನವುಗಿಂತಹ ಕ್ರೂರವಾದ ಮನೋವ್ಯಥೆಯುಂಟಾಗಿ, ಒಬ್ಬರನೊಬ್ಬರಗಲಿ, ಪರದೇಶವನ್ನು ಕುರಿತು, ಪ್ರಯಾಣವೂಡಬೇಕಾದ ದುರವಸ್ಥೆಯು, ನಿನಗುಂಟಾದುದಕ್ಕಾಗಿ, ನಾನು ತುಂಬ ಆಶ್ಚರ್ಯವನ್ನು ಹೊಂದಿದವನಾದರೂ, ವ್ಯಸನಪಡುತ್ತಿರುವೆನು.

ಆಹಾ ! ನೀವಿಬ್ಬರೂ ಈ ತೆರನಾದ ಕಲಹದಿಂದ ಮನಸ್ತಾಪ ಹೊಂದಿ, ನೀನು ಇಲ್ಲಿಗೆ ಬಂದುದರಿಂದಲ್ಲವೆ ನನಗೆ ನಿನ್ನಂತಹ ಉತ್ತಮನಾದ ಅಳಿಯನು ದೊರೆತನು. ಇದಕ್ಕಾಗಿ ಅತ್ಯುತ್ಸಾಹಯುಕ್ತನಾಗಿ, ನಾನು ಭಗವಂತನನ್ನು ಧ್ಯಾನಿಸುವೆನಲ್ಲದೆ ನಿಮ್ಮಿಬ್ಬರಬಾಂಧವ್ಯವು, ಚಿರಕಾಲ ಅನ್ಯೋನ್ಯಮೈತ್ರಿಯಿಂದಿರಲೆಂದು, ಪ್ರಾರ್ಥಿಸುವೆನು. ಅಯ್ಯಾ ! ಕುಮಾರಕೆಶ್ಮನೆ ಹೊತ್ತು ಬಹಳವಾಗಿರುವುದರಿಂದ, ನಿನ್ನ ಹೆಂಡತಿಯು ನಿನಗಾಗಿ ಕಾದುಕೊಂಡಿರುವಳು. ಆದುದರಿಂದ ನೀನು ಅಂತಃಪುರವನ್ನು ಸೇರಿ ಸುಖವಾಗಿ ನಿದ್ರಿಸು, ನಾಳೆಯದಿನಬೆಳಿಗ್ಗೆ ಸುಲ್ತಾನರಬಳಿಗೆ ಕರೆದುಕೊಂಡುಹೋಗಿ, ನಿನ್ನ ವರ್ತಮಾನವನ್ನುಹೇಳಿ, ನನ್ನ ಅಭಿಮತವನ್ನು ಹೇಳಿಕೊಳ್ಳುವೆನು. ಸುಲ್ತಾನರು, ಸಪುತ್ನಿಯಿಂದ ನಮ್ಮನ್ನು ಗೌರವಿಸುವಹಾಗೆ, ತೋರುವುದೆಂದು ಹೇಳಿದನು. ನೌರೊದೀನಲ್ಲಿಯು ತನ್ನ ಮಾವನಿಂದ ಆಜ್ಞೆಯನ್ನು ಹೊಂದಿದವನಾಗಿ, ಅಂತಃಪುರವನ್ನು ಸೇರಿದನೆಂದುಹೇಳಿ ಗಯೆಳರನು, ಸುಲ್ತಾನರಾದ ಕಲೀಫರೇ ! ಇದರಲ್ಲಿ ಮತ್ತೊಂದು ವಿಚಿತ್ರವಿರುವುದು. ಅದೇನೆನ್ನುವಿರೋ, ನೌರೋದಿನನಿಗೆ ಬಾಲಸೋರಿನಲ್ಲಿ ವಿವಾಹವಾದದಿನವೇ, ಷಂಸುದೀನ್ಮಹಮ್ಮದನಿಗೂ, ಕೈರೋಪಟ್ಟಣದಲ್ಲಿ ವಿವಾಹವು ನೆರವೇರಿತು. ಹೇಗಂದರೆ ನೌರೊದೀನಲ್ಲಿಯು, ನಾನು ಪುನಹ ಬರುವುದಿಲ್ಲವೆಂದು, ಹೇಳಿ ಕೈರೋಪಟ್ಟಣದಿಂದ ಬಾಲಸೂರಿಗೆ ಸೇರಿದಮೇಲೆ, ಐಗುಪ್ತರಾಜ್ಯದ ಮಂತ್ರಿಯಾದ ಷಂಸುದೀನನು ತನ್ನ ರಾಜನೊಡನೆ ಬೇಟೆಯಾಡುವುದಕ್ಕೆ ಹೋಗಿ ಒಂದು ತಿಂಗಳಾದರೂ ಬರಲೇ ಇಲ್ಲ. ರಾಜನ ಸಂಗಡ ಏನೋದವಾಗಿ ಒಂದು ತಿಂಗಳ ದಿನವನ್ನು ಕಳೆದು ರಾಜಧಾನಿಗೆ ಬಂದಕೂಡಲೆ ಅಂತಃಪುರದಲ್ಲಿ ನೌರೋದಿನನಿಲ್ಲದಿರುವುದನ್ನು ನೋಡಿ, ಚಾರಕರನ್ನು ಕರೆದು, ನೌರೋದೀನನೆಲ್ಲಿ ಹೋದನೆಂದು ಕೇಳಿದನು.

ಚಾರಕರು ಸ್ವಾಮಿ! ತಾವು ಬೇಟೆಗೆ ಹೋದ ದಿನವೇ ನೌರೋದೀನನು ಹೇಸರಕತ್ತೆಯನ್ನು ಹತ್ತಿ ಎರಡು ಮೂರು ದಿನದಲ್ಲೀ ಬರುತ್ತೇನೆಂದು ಹೇಳಿ ಹೊರಟುಹೋದನು. ಇದುವರಿಗೂ ಬರಲಿಲ್ಲವೆಂದು ಹೇಳಿದರು. ಕೂಡಲೆ ಆತನು ಅತ್ಯಂತವಾಗಿ ಪ್ರಲಾಪಿಸುತ್ತ ತನ್ನ ಕೋಪದಿಂದುಂಟಾದ ಕಠಿಣನ ವಾಕ್ಯಗಳು ಆತನನ್ನು ಈ ದುರವಸ್ಥೆಗೆ ತಂದುಬಿಟ್ಟ

ವೆಂದು ಹೇಳಿ, ಉತ್ತಮರಾದ ಪರಿಚಯಸ್ಥರನ್ನು ಕರೆಸಿ, ತನ್ನ ತಮ್ಮ ನನ್ನು ಹುಡುಕಿಕೊಂಡು ಬರುವಂತೆ ಹೇಳಕಳುಹಿಸಿದನು. ಅವರಾದರೊ ನಾನಾದೇಶಗಳಲ್ಲಿಯೂ ಸಂಚರಿಸಿ, ತಮ್ಮ ದೇಶದ ಪ್ರಸಿದ್ಧಪಟ್ಟಣಗಳಾದ ದಮಾಸ್ಕನ್, ಅಲಿಫ, ಬಾಲಸೂರು, ಬಾಗದಾದು, ವೊದಲಾದ ಸ್ಥಳದಲ್ಲಿ ಹುಡುಕಿ ಅಲ್ಲೆಲ್ಲಿಯೆ ೂ ಆತನ ವರ್ತಮಾನವೇ ತಿಳಿಯದೆ ಹೋದುದರಿಂದ ನುರಳಿ ಷಂಸುದೀನನ ಬಳಿಗೆ ಬಂದು, ನಿಮ್ಮ ತಮ್ಮನು ಯಾವ ದೇಶದಲ್ಲಿ ಯೂ ನಮಗೆ ದೊರಕಲಿಲ್ಲವೆಂದು ಹೇಳಿದರು.

ಆಬಳಿಕ ಷಂಸುದೀದನನು ತಾನು ಮದುವೆ ಮಾಡಿಕೊಳ್ಳುವುದ ಕ್ಕೆ ಪ್ರಯತ್ನಮಾಡಿ, ನೌರೋದೀನನಿಗೆ ಬಾಲಸೂರಿನಲ್ಲಿ ಮದುವೆಯಾದ ದಿನವೇ ತಾನೂ ಕೈರೋಪಟ್ಟಣದಲ್ಲಿ ಒಬ್ಬ ದೊಡ್ಡಮನುಷ್ಯನ ಮಗಳ ನ್ನು ಮದುವೆ ಮಾಡಿಕೊಂಡನು. ಬುದ್ಧಿಶಾಲಿಗಳಾದ ಕಲೀಫರೇ ! ಇದ ಲ್ಲದೆ ಮತ್ತು ಒಂದು ವಿಶೇಷವುಂಟು. ಹೀಗೆ ಮದುವೆಯಾದ ಒಂಭತ್ತು ತಿಂಗಳನಂತರ ಕೈರೊನಗರದ ಮಂತ್ರಿಯ ಹೆಂಡತಿಯೊಂದು ಹೆಣ್ಣುಮಗು ನ್ನು ಹೆತ್ತಳು. ಆದಿನವೆ ಬಾಲಸೂರಿನಲ್ಲಿರುವ ನೌರೋದೀನನ ಹೆಂಡತಿ ಯೂ ಸಹ ಒಂದು ಗಂಡುಮಗುವನ್ನು ಹೆತ್ತಳು. ಆ ಮಗುವಿನ ಹೆಸರು ಬದರೊದೀನ್ ಹಸನ್. ಬಳಿಕ ಬಾಲಸೂರಿನ ಪ್ರಧಾನಮಂತ್ರಿಯು ತನಗೆ ವೊಮ್ಮಗನು ಹುಟ್ಟಿದುದಕ್ಕಾಗಿ ಬಹಳವಾಗಿ ಸಂತೋಹಿಸಿ, ದಾನಗಳ ನ್ನೂ, ಔತಣಗಳನ್ನೂ, ಉತ್ಸವಗಳನ್ನೂ ಮಾಡಿಸಿ, ದೇಶದ ಜನರನ್ನೆ ಲ್ಲಾ ತೃಪ್ತಿಪಡಿಸಿ, ತನ್ನಳಿಯನೆಲ್ಲಿ ವೊದಲಿಗಿಂತಲೂ, ಅತಿಶಯವಾದ ಗೌ ರವವನ್ನು ತೋರುತ್ತ, ನಾಳೆ ಸುಲ್ತಾನರ ಬಳಿಗೆ ಹೋಗಿ, ಸ್ವಾವಿಾ ! ನನಗೆ ವೃದ್ಧಾಪ್ಯ ಪ್ರಾಪ್ತವಾಗಿರುವುದರಿಂದ, ತಾವು ದಯಮಾಡಿ ಮಂತ್ರಿ ಪದವಿಯನ್ನು ನೌರೋದೀನಲ್ಲಿಗೆ ಕೊಟ್ಟುದಾದರೆ, ನಾನು ಆತನ ರಾಜ್ಯ ಭಾರವನ್ನು ನೋಡಿ ಸಂತೋಷಿಸುವೆನೆಂದ ಕೇಳಿಕೊಳ್ಳಬೇಕೆಂದಿದ್ದನು. ನೌರೋದೀನನಿಗೆ ಮದುವೆಯಾದಕೂಡಲೆ, ಪ್ರಧಾನಮಂತ್ರಿಯು ತನ್ನಳಿ ಯನನ್ನು ಕರೆದುಕೊಂಡುಹೋಗಿ, ಸುಲ್ತಾನರ ದರ್ಶನವನ್ನು ಮಾಡಿಸಿ ದನು. ಕೂಡಲೆ ಸುಲ್ತಾನರ ಮನಸ್ಸು ಕರಗಿತು. ಅಲ್ಲದೆ ಆತನು ವೊ ದಲಿನಿಂದಲೂ, ಯೋಗ್ಯನೆಂಬುದು ಸರ್ವರೂ ಹೇಳುತ್ತಿದ್ದುದರಿಂದಲೂ, ಪ್ರಧಾನಮಂತ್ರಿಯು ಬೇಡಿಕೊಂಡುದರಿಂದಲೂ, ಸುಲ್ತಾನನು ಪ್ರಧಾನ

ಮಂತ್ರಿಯ ಪದವಿಯನ್ನು ಕೊಟ್ಟನು. ಮರುದಿನ ಪ್ರಧಾನಮಂತ್ರಿಯು ತನ್ನಳಿಯನು ರಾಜಸ್ಥಾನದಲ್ಲಿ ಪ್ರಧಾನಮಂತ್ರಿಯಾಗಿರುವುದನ್ನು ನೋಡಿ, ಆನಂದಭರಿತನಾದನು. ಸಭಾಸದರು ನೌರೋದೀನನ ಕಾರ್ಯನಿರ್ವಹಣಶಕ್ತಿಯನ್ನು ಕಂಡು, ಆಶ್ಚರ್ಯಯುಕ್ತರಾದರು. ಈತರದಿಂದ ತನ್ನ ಪಂಕಾಭಿವೃದ್ಧಿಯಾದುದನ್ನು ಸಂಪೂರ್ಣಸುಖದಿಂದ ಕಂಡು, ನಾಲ್ಕು ಸಂವತ್ಸರಗಳ ವರಿಗೆ ಕಾಲವನ್ನು ಕಳೆದು, ಪ್ರಧಾನಮಂತ್ರಿಯು ದೈವಯೋಗದಿಂದ ಮರಣಹೊಂದಿದನು. ನೌರೋದೀನನು ತನ್ನ ಮಾವನ ಉತ್ತರಕ್ರಿಯಾದಿಗಳನ್ನು ಯಥಾಕ್ರಮವಾಗಿ ಅತ್ಯಂತ ಭಕ್ತಿಯಿಂದ ಮಾಡಿ, ತನ್ನ ಮಗನಾದ ಬದರೊದೀನನಿಗೆ ಏಳು ಸಂವತ್ಸರಗಳು ಕಳೆದ ಕೂಡಲೆ, ಉತ್ತಮರಾದ ಉಪಾಧ್ಯಾಯರನ್ನು ನಿಯೋಗಿಸಿ, ವಿದ್ಯೆಯನ್ನು ಕಲಿಸಿದನು. ಆ ಹುಡುಗನಾದರೊ ಬುದ್ಧಿಚಾತುರ್ಯದಲ್ಲಿ ಬಹು ಗಟ್ಟಿಗನಾದುದರಿಂದ ಸಕಲ ವಿದ್ಯೆಗಳನ್ನೂ ಕಲಿತುಕೊಂಡನು. ಎಂದು ಹೇಳಿ ಷಹರಜಾದಿ, ಬೆಳಗಾಯಕೂಡಲೆ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನಜಾವದಲ್ಲಿ ಹೇಳತೊಡಗಿದಳು.

೯೫ನೆಯ ರಾತ್ರಿಕಥೆ.

ಗಯೆಫರನು ಕಲೀಫರನ್ನು ನೋಡಿ ಇಂತೆಂದನು. ಬದರೋದೀನನು ಎರಡು ಸಂವತ್ಸರಗಳ ವರಿಗೆ ವಿದ್ಯಾಭ್ಯಾಸಮಾಡಿ ಬಳಕ ಖುರಾನನ್ನು ಕಂಠಪಾಠಮಾಡಿದನು. ಆದುದರಿಂದ ಲೋಕವ್ಯವಹಾರವನ್ನು ತಿಳಿಯುವುದಕ್ಕೆ ವಿದ್ಯೆಗಳನ್ನು ಅಭ್ಯಾಸಮಾಡಿ, ತನ್ನ ಪಾಂಡಿತ್ಯದಿಂದ ಪಂಡಿತಮಂಡಲಿಯವರನ್ನು ಒಪ್ಪಿಸಿದನು. ಬಳಿಕ ತಂದೆಯಾದ ನೌರೋದೀನನು ಮಗನ ಪಾಂಡಿತ್ಯಕ್ಕೂ, ಮುಖಭಾವಕ್ಕೂ ಸಂತುಷ್ಟಗೊಂಡವನಾಗಿ ಸಂತೋಷದಿಂದಿದ್ದನು. ಈತನು ವಿದ್ಯಾಭ್ಯಾಸಮಾಡುತ್ತಾ ಇದ್ದಕಾಲದಲ್ಲಿ, ಆತನ ತಂದೆಯು ತನ್ನ ಮಗನನ್ನು ಎಲ್ಲಿಯೂ ಕರೆದುಕೊಂಡೇ ಹೋಗಲಿಲ್ಲ.

ಬಳಿಕ ತನ್ನ ಮಗನ ಪಾಂಡಿತ್ಯವನ್ನು ಸುಲ್ತಾನರಿಗೆ ತಿಳಿಯಪಡಿಸಬೇಕೆಂದು, ಆತನನ್ನು ರಾಜಸ್ಥಾನಕ್ಕೆ ಕರೆದುಕೊಂಡು ಹೋಗಿ,

ರಾಜನ ದರ್ಶನವನ್ನು ಮಾಡಿಸಿದನು. ಸುಲ್ತಾನನು ಆ ಹುಡುಗನ ಬುದ್ಧಿಕೌಶಲ್ಯಗಳಿಗೂ, ಸೌಂದರ್ಯಕ್ಕೂ ಬಹಳವಾಗಿ ಮೆಚ್ಚಿ ಹೊಗಳಿದನು. ಮಂತ್ರಿಯೊದ ನೌರೋದೀನನು ತನ್ನಧಿಕಾರವನ್ನು ತನ್ನ ಮಗನು ಅನುಭವಿಸುವಂತೆ ಮಾಡಬೇಕೆಂಬಭಿಲಾಷೆಯಿಂದ, ತಾನು ಮಾಡಬೇಕಾದ ಪ್ರಯತ್ನಗಳನ್ನು ಮಾಡಿ, ದೈವಯೋಗದಿಂದ ದೇಹಾಲಸ್ಯವುಂಟಾಗಿ ಸಾಯುವಹಾಗಾದನು. ಆಗಲೇ ತನ್ನ ಮಗನನ್ನು ಕರೆದು, ಅಯ್ಯಾ ! ಕುಮಾರಕ, ಈ ಪ್ರಪಂಚವು ಶಾಶ್ವತವಾದುದಲ್ಲ, ನಾನು ಈಗ ಸಾಯುವುದಕ್ಕೆ ಸಿದ್ಧನಾಗಿರುವೆನು. ನೀನು ಕೂಡ ಇದಕ್ಕೆ ಹೆದರದೆ ನಡತೆಯನ್ನು ಯೋಗ್ಯರೀತಿಯಿಂದಿಟ್ಟುಕೊಂಡಿರುತ್ತಾ ಇರು. ಮರಣಕಾಲದಲ್ಲಿ ಮನಸ್ಸಿಗೆ ಬಹು ಕಷ್ಟವುಂಟಾಗುವುದರಿಂದ ನೀನು ಈ ವಿಷಯದಲ್ಲಿ ಜಾಗರೂಕನಾಗಿ, ಭಗವದ್ವಿಷಯವನ್ನು ನಿನ್ನ ಉಪಾಧ್ಯಾಯರಿಂದ ತಿಳಿದುಕೊಂಡಿರುವ, ಇತರ ವಿಷಯಗಳನ್ನೂ ಆಗಾಗ್ಗೆ ನೆನೆಯುತ್ತಾ ಇರು. ಮನುಷ್ಯನಾದವನು ತನ್ನನ್ನು ತಾನುತಿಳಿದುಕೊಳ್ಳಲೇಬೇಕಾಗಿರುವುದರಿಂದ ಮೊದಲು ತಾನೆಂಥವನೆಂಬುದನ್ನು ತಿಳಿದುಕೊಳ್ಳಬೇಕು. ಅದನ್ನು ತಿಳಿಯದಿದ್ದರೆ ತನಗೆ ಸುಖವೆಂದಿಗೂ ಉಂಟಾಗಲಾರದು. ಆದುದರಿಂದ ನಾನು ಇಂಥವನೆಂಬ ಸಂಗತಿಯನ್ನು ನಾನು ನಿನಗೆ ಹೇಳುತ್ತೇನೆ ಕೇಳು.

ನಾನು ಈಜಿಪ್ಟ್ ದೇಶದವನು, ನನ್ನ ತಂದೆಯು ಸ್ವಭಾವತಃ ಆ ದೇಶದ ರಾಜನಿಗೆ ಮಂತ್ರಿಯಾಗಿದ್ದನು, ನಾನು ಕೆಲವು ಕಾಲ ಮಂತ್ರಿಪದವಿಯನ್ನು ಅನುಭವಿಸಿದೆನು. ಆದರೆ ನಿನ್ನ ದೊಡ್ಡಪ್ಪನಾದ ಷಂಸುದ್ದೀನ್‌ಮಹಮ್ಮದನೆಂಬ ನನ್ನ ಅಣ್ಣನಿಗೂ, ನನಗೂ ಸರಿಬೀಳದುದರಿಂದ ನಾನು ಇಲ್ಲಿಗೆ ಬಂದು, ಗೌರವವನ್ನು ಸಂಪಾದಿಸಿಕೊಂಡು ಸುಖವನ್ನು ಹೊಂದುತ್ತಿರುವೆನು. ಈ ವಿಷಯವನ್ನು ನನ್ನ ಬಳಿಯಲ್ಲಿರುವ ಓಲೆಯ ಬುಕ್ಕಿನಲ್ಲಿ ವಿಸ್ತಾರವಾಗಿ ಬರೆದಿರುವುದರಿಂದ ನೀನು ಅದನ್ನು ಓದಿದರೆ ಸಮಗ್ರವಾಗಿ ತಿಳಿಯುವುದೆಂದು ಹೇಳಿ, ತನ್ನ ಚರಿತ್ರೆಯನ್ನು ಸ್ಪಷ್ಟವಾಗಿ ಬರೆದಿರುವ ಸಣ್ಣಪುಸ್ತಕವನ್ನು ಜೇಬಿನಿಂದ ತೆಗೆದು, ಇಗೋ ! ಇದನ್ನು ತೆಗೆದುಕೊ! ನಿನಗೆ ಸಾವಕಾಶವಾದಕಾಲದಲ್ಲಿ ಓದಿಕೊಂಡರೆ, ನಿನಗಾವಶ್ಯವಾದ ವಿಷಯಗಳೆಲ್ಲವೂ, ಇದರಲ್ಲೇ ಇರುವುದೆಂದು ಹೇಳಿದನು.

ಆಮಾತುಗಳನ್ನು ಬಹುಜಾಗರೂಕನಾಗಿ ಕೇಳಿ, ತಿಳಿದುಕೊಂಡು, ಕಣ್ಣೀರನ್ನು ಸುರಿಸುತ್ತ, ತಂದೆಯೇ ಇದನ್ನು ಭದ್ರವಾಗಿಟ್ಟುಕೊಂಡು, ನಿನ್ನ ಆಜ್ಞೆಯಂತೆ ನಡೆಯುತ್ತೇನೆಂದು ಹೇಳಲು, ನೌರೋದೀನನು ಮೂರ್ಛಾಕ್ರಾಂತನಾಗಿದ್ದು, ಸ್ವಲ್ಪ ಹೊತ್ತು ಹೋದನಂತರ ಮಗನನ್ನು ನೋಡಿ ಇಂತೆಂದನು. ಮಗುವೆ ! ನೀನು ಎಲ್ಲರಲ್ಲಿಯೂ ಸಾಮಾನ್ಯನಾಗಿರಬೇಡ, ನಿನ್ನ ಮನೋಭಿಪ್ರಾಯವನ್ನು ಇತರರು ಸುಲಭವಾಗಿ ತಿಳಿದುಕೊಳ್ಳುವಂತೆ ಮಾಡಿಕೊಳ್ಳಬೇಡ, ಇತರರಿಗೆ ಕೇಡನ್ನು ಬಯಸಬೇಡ, ಪರರು ದೂಷಿಸುವಕಾಲದಲ್ಲಿ ಮಾತನಾಡುವುದನ್ನು ಮರೆತುಬಿಡು, ಮದ್ಯಪಾನವನ್ನು, ಮಾದಕವೃತ್ತಿಯನ್ನು ತೊರೆದುಬಿಡು, ಹೆಚ್ಚಾಗಿಯಾಗಲಿ, ಅಥವಾ ಕಡಿಮೆಯಾಗಿಯೆ ಆಗಲಿ, ಧನವನ್ನು ವ್ಯಯಮಾಡಬೇಡ, ನಿನ್ನ ಆದಾಯವನ್ನು ಕುರಿತು ವ್ಯಯವನ್ನು ಸರಿಪಡಿಸು, ನಿನಗೆ ಅತ್ಯಂತಪ್ರೀತಿಪಾತ್ರರಾದ ಸ್ನೇಹಿತರು ಬಹುಮಂದಿ ಇರುವುದರಿಂದ, ನಿನ್ನ ಆಸ್ತಿಯನ್ನು ಯುಕ್ತಾಯುಕ್ತ ಜ್ಞಾನವಿಲ್ಲದೆ, ಖರ್ಚುಮಾಡಬೇಡ, ನಾನು ಹೇಳಿರುವ ಸಂಗತಿಗಳಲ್ಲಿ ಯಾವುದಕ್ಕಾದರೂ, ನೀನು ವಿರೋಧವಾಗಿ ನಡೆದರೆ, ನಿನಗೆ ತೊಂದರೆಯುಂಟಾಗುವುದು, ಅಲ್ಲದೆ ಜನರು ನಿನ್ನ ಬಳಿಯಲ್ಲಿ ಸೇರಲಾರರೆಂದು ತನ್ನ ಪ್ರಾಣವಿರುವವರೆವಿಗೂ ಮಗನಿಗೆ ಬುದ್ಧಿವಾದವನ್ನು ಹೇಳಿ, ಮಂತ್ರಿಯು ಸತ್ತುಹೋಗಲು, ಮಗನು ಉತ್ತರಕ್ರಿಯಾದಿಗಳನ್ನು ನೆರವೇರಿಸಿದನು. ಎಂದು ಹೇಳಿ ಷಹರಜಾದಿ ಕಥೆಯನ್ನು ನಿಲ್ಲಿಸಿ, ಬೆಳಗಾದಕೂಡಲೆ ಹೇಳಲಾರಂಭಿಸಿದಳು.

೯೬ ನೆಯ ರಾತ್ರಿ ಕಥೆ.

ಷಹರಜಾದಿಯು ತನ್ನಗಂಡನಾದ ಸುಲ್ತಾನನ್ನು ನೋಡಿ, ಆಳಿದವರಾದ ಮಹಾಸ್ವಾಮಿಯೆವರೇ ! ಗಯೆಘರನು ಹೇಳಿದ ವಿಚಿತ್ರವಾದ ಈ ಕಥೆಯನ್ನು ಕಲೀಫನು ಅತ್ಯಾದರದಿಂದ ಕೇಳುತಿದ್ದುದರಿಂದ, ಪ್ರಧಾನ ಮಂತ್ರಿಯು ಮುಂಗಥೆಯನ್ನು ಹೇಳಸಾಗಿದನು. ನೌರೋದೀನನುತ್ತರಕ್ರಿಯಾದಿಗಳು, ಗೌರವಕ್ಕೆ ತಕ್ಕಂತೆ ನಡೆದನೆಂಬಲ್ಲಿ, ಬದರದೀನನು ತನ್ನ ಕುಲಾಚಾರಾನುಗತವಾಗಿ ಬಂದಿರುವ ಕ್ರಮವನ್ನು ಅನುಸರಿಸಿ, ವ್ಯಸನಕಾಲವನ್ನು ಏಕಾಂತದಲ್ಲಿ ಕಳೆಯುವುದಕ್ಕಾರಂಭಿಸಿ, ಎರಡು ತಿಂಗಳವರಿಗೂ,

ಎಲ್ಲಿಯೂ ಹೋಗದೆ ಮನೆಯಲ್ಲಿಯೇ ಇರುತ್ತಿದ್ದನು. ಆದುದರಿಂದ ಸು ಲ್ತಾನರನ್ನು ನೋಡುವುದಕ್ಕೆ ಆತನು ಹೋಗಲೇ ಇಲ್ಲ. ಸುಲ್ತಾನನು, ತನ್ನನ್ನು ಬದರೋದೀನನು, ಲಕ್ಷ್ಯಮಾಡದೆ ಹೋದನೆಂದು ಕೋಪಿಸಿ ಕೊಂಡು, ತನ್ನ ಇತರ ಮಂತ್ರಿಗಳನ್ನು ಕರೆದು ಅಯ್ಯಾ! ನೀವುಗಳು ತಡ ಮಾಡದೆ ಈಕ್ಷಣವೇ ಹೋಗಿ ಮಾಜಿಮಂತ್ರಿಯ ಮನೆಯನ್ನು ಸೂರೆಮಾ ಡಿ, ಆತನ ಮಗನನ್ನು ಸೆರೆಹಿಡಿದುಕೊಂಡು ಬನ್ನಿರೆಂದು ಆಜ್ಞಾಪಿಸಿದನು.

ಕೂಡಲೆ ಹೊಸಬನಾದ ಪ್ರಧಾನಮಂತ್ರಿಯು ತನ್ನ ಸೇವಕರನ್ನು ಹಿಂದಿಟ್ಟುಕೊಂಡು, ಬಂದು, ಬದರೋದೀನನ ಮನೆಯೆಬಳಯೆನ್ನು ಸೇ ರಿ ನಿಂತಿರುವುದನ್ನು, ಅದಕ್ಕೆ ಕಾರಣವನ್ನು ತಿಳಿದು, ಬದರೋದೀನನ ಸೇವಕನು, ಆತನ ಬಳಿಗೆ ಓಡಿಹೋಗಿ ಅಯ್ಯಾ! ಪ್ರಧಾನಮಂತ್ರಿ ಪದವಿ ಯಲ್ಲಿದ್ದ ತಂದೆಯನ್ನು ಹೋಗಲಾಡಿಸಿಕೊಂಡು, ವ್ಯಸನದಲ್ಲಿರುವ ನಿಮ್ಮ ಮೇಲೆ ರಾಜನು ಕೋಪಿಸಿಕೊಂಡು, ನಿಮ್ಮ ಆಸ್ತಿಯೆನ್ನು ದಂಡವಾಗಿ ತೆಗೆದುಕೊಂಡು, ನಿಮ್ಮನ್ನು ಸೆರೆಹಿಡಿದು ತರುವಂತೆ, ಇತರ ಮಂತ್ರಿಗಳಿಗೆ ಆಜ್ಞಾಪಿಸಿ ಕಳುಹಿಸಿರುವನು. ಅವರು ಬರುತ್ತಿರುವರಾದುದರಿಂದ ನೀ ನು ಆಲಸ್ಯಮಾಡದೆ ತಪ್ಪಿಸಿಕೊಳ್ಳುವ ಉಪಾಯವನ್ನುಮಾಡು ! ಇನ್ನು ತಡವಾಡಬೇಡವೆಂದು ಹೇಳಿದನು. ನಂಬಿಕೆಯೂ ವಿಶ್ವಾಸವೂ ಉಳ್ಳವ ನಾದ ಆಚಾರ್ಯನ ಮಾತುಗಳನ್ನು ಕೇಳಿ, ಅಯ್ಯಾ ! ಸ್ವಲ್ಪನಾಣ್ಯವನ್ನು ರತ್ನಗಳನ್ನು ತೆಗದುಕೊಳ್ಳುವಷ್ಟು ಅವಕಾಶವಾದರೂ ಇಲ್ಲವೆ ? ಎಂದು ಕೇಳಿದನು. ಅಯ್ಯಾ ! ಈಗತಾನೆ, ಪ್ರಧಾನಮಂತ್ರಿಯು ತನ್ನ ಸೇವಕ ರೊಡನೆ ಇಲ್ಲಿಗೆ ಬಂದಿರುವನು, ತ್ವರೆಮಾಡು, ಬೇಗನೇಳು, ಎಂದು ಹೇಳ ಲು, ಬದರೋದೀನನು, ಜಾಗ್ರತೆಯಾಗಿ ಎದ್ದು, ತನ್ನ ಅಂಗಿಯೆಕೊನೆ ಯೆನ್ನು ತಲೆಯೆಮೇಲೆ ಹಾಕಿಕೊಂಡು, ಯಾರಿಗೂ ತಿಳಿಯದಂತೆ ಓಡಿ ಹೋಗುತ್ತಿರುವಷ್ಟರಲ್ಲಿ ಸಂಜೆಯಾಗಿ, ಕತ್ತಲು, ಕವಿದುಕೊಂಡುದರಿಂದ ಬದರೋದೀನನು ಆ ರಾತ್ರಿಯೆನ್ನು ತನ್ನ ತಂದೆಯ ಗೋರಿಯ ಬಳಯೆಲ್ಲಿ ಕಳಿಯೆಬೇಕೆಂದು ಯೋಚಿಸಿದನು. ತನ್ನ ತಂದೆಯಾದ ನೌರೋದೀನನು ತಾನು ಬದುಕಿರುವಾಗಲೆ, ಕಟ್ಟಿಸಿಕೊಂಡಿದ್ದ, ಆಗುಮ್ಮಟದ ಬಳಯೆಲ್ಲಿ ಬದರದೀನನು ನಿಂತಿರುವ ಸಮಯೆದಲ್ಲಿ, ಅಲ್ಲಿಗೆ ಬಂದ ಬದರೋದೀನನ ಗು ರುವಿಗೆ ತಿಳಿದವನಾದ ಒಬ್ಬಾನೊಬ್ಬ ದೊಡ್ಡವರ್ತಕನು, ಆತನನ್ನು ಸೋ

ಡಿ ವಂದನೆಗಳನ್ನಾಚರಿಸಿದನು. ಎಂದು ಹೇಳಿ ಷಹರಜಾದಿ ಕಥೆಯನ್ನು ನಿಲ್ಲಿಸಿ ಬೆಳಗಿನ ಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೯೭ ನೆಯ ರಾತ್ರಿ ಕಥೆ.

ಷಹರಜಾದಿ ಸುಲ್ತಾನರನ್ನು ನೋಡಿ, ಸ್ವಾಮಿಾ ! ಗಯಫರನು ಹೇಳುವ ಕಥೆಯು ಕಲೀಫರಮನಸ್ಸನ್ನು ಆಕರ್ಷಿಸಿ, ಅವರನ್ನು ಆನಂದ ಭರಿತರನ್ನಾಗಿ, ಮಾಡುತ್ತಿರುವುದನ್ನು ಕಂಡು ಮುಂದೆ ಹೇಳಸಾಗಿದನು. ಬಳಿಕ ಹಿಪ್ಪಾಕನೆಂಬ ಆವರ್ತಕನು ಬದರದೀನ ಹುಸೇನನ್ನು ಕಂಡು, ಸ್ವಾಮಿಾ ! ತಾವು ಮಂತ್ರಿಪುತ್ರರಾಗಿ, ಮಹದೈಶ್ವರ್ಯವನ್ನು ಅನುಭವಿಸುತ್ತಿದ್ದರೂ, ಯಾವುದೊಂದು ಭಯದಿಂದ ಈ ರಾತ್ರಿಯಲ್ಲಿ ನಗರಕ್ಕೆ ದೂರವಾದ, ಈ ಸ್ಥಳದಲ್ಲಿ ಓಡಿಹೋಗುವರಂತೆ ನಿಂತಿರುವಿರಲ್ಲ ಇದಕ್ಕೆ ಕಾರಣವೇನೆಂದು ಕೇಳಲು, ಆತನು ಹೌದಯ್ಯಾ ! ನಾನು ಈ ದಿನ ಮಲಗಿನಿದ್ರೆ ಮಾಡುತ್ತಿರುವ ಕಾಲದಲ್ಲಿ, ನನ್ನ ತಂದೆಯು ಸ್ವಪ್ನದಲ್ಲಿಬಂದು ಬಹುಕೂರವಾಗಿ ನನ್ನನ್ನು ದಂಡಿಸುದರಿಂದ, ಆತನ ಗೋರಿಯಬಳಿಗೆ ಹೋಗಿ ಪ್ರಾರ್ಥನೆ ಮಾಡಬೇಕೆಂಬ ಅಭಿಲಾಷೆಯಿಂದ, ಹೋಗುತ್ತಿರುವೆನೆಂದು ಹೇಳಿದ ಮಾತುಗಳನ್ನು ನಂಬಿ, ಆ ವರ್ತಕನು ಅಯ್ಯಾ ! ನಿಮ್ಮ ಯಜಮಾನರಿಗೂ ನನಗೂ, ಅನೇಕವಾದ ಹಡಗಿನಲ್ಲಿ ತುಂಬಿರುವ ಸರಕುಗಳುಂಟು, ಈಗ ಅವನು ಸತ್ತು ಹೋದುದರಿಂದ, ನೀವೇ ಅದಕ್ಕೆ ಬಾಧ್ಯರಾಗಿರುವಿರಿ, ನನ್ನವೇಲೆ ದಯವಿಟ್ಟು ನೀವು ಮಾಡಿಕೊಡಬೇಕಾಗಿರುವ, ಕೆಲಸವೊಂದುಂಟು ಅದೇನೆನ್ನುವಿರೊ, ಆ ಹಡಗುಗಳಲ್ಲಿ ಮೊದಲು ಬರುವ ಪದಾರ್ಥಗಳನ್ನು ನನಗೆ ಮಾರಿಬಿಟ್ಟರೆ, ನಿಮಗೆ ಒಂದುಸಾವಿರ ಸೆಕ್ವೀನುಗಳನ್ನು ಕೊಡುವೆನೆಂದು ಹೇಳಿ, ತನ್ನ ಬಳಿಯೆಲ್ಲಿದ್ದ ಹಣದಗಂಟನ್ನು ತೋರಿಸಿದನು. ಬದರದೀನನು ಆಗತಾನೆ ತನ್ನ ಆಸ್ತಿಯೆನ್ನು ತೊರೆದು ಏಕಾಂಗಿಯಾಗಿ ಬರುತ್ತಿರುವಾಗ, ನಷ್ಟುದಾರಿಯಲ್ಲಿ ವರ್ತಕನು ಹೇಳಿದ ಮಾತುಗಳನ್ನು ಕೇಳಿ, ಅದು ಭಗವದನುಗ್ರಹವೆಂಬು ತಿಳಿದು, ಆಗಲಿ ಹಣವನ್ನು ಕೊಡೆಂದು, ಕೇಳಿ, ಒಂದು ಸಾವಿರ ಸೆಕ್ವೀನುಗಳನ್ನು ತೆಗೆದುಕೊಂಡನು. ಸ್ವಾಮಿಾ ! ಈ ರೀತಿಗೆ ಮೊದಲುಬರುವ ಹಡಗಿನಲ್ಲಿರುವ, ಸಾಮಾನುಗಳಿಗಾಗಿ ನನ್ನಿಂದ ಒಂದು ಸಾವಿರ ಸೆಕ್ವೀನುಗಳನ್ನು ತೆಗೆದುಕೊಂಡಿರು

ವಿರಾ ! ಎಂದು ವರ್ತಕನು ಕೇಳಲು, ಬದರದೀನನು ಹೌದಯ್ಯಾ ! ನೀನು ಅನುಮಾನಿಸಬೇಕಾದ ಕೆಲಸವಿಲ್ಲ. ನನ್ನ ಬಾಬ್ತು ಹಡಗುಗಳ ಸರಕನ್ನು ನಿನಗೆ ಮಾರಿಬಿಟ್ಟಿರುವೆನೆಂದು ನಂಬಿಕೆಯಾಗಿ ಹೇಳುವೆನು, ಎನಲು, ಆದರೂ ವರ್ತಕನು, ಒಂದು ಚೀಟಿಯನ್ನು ಬರೆದು ಕೊಡಬೇಕೆಂದು ಕೇಳಿದುದಕಾ್ಕಗಿ, ಆತನು ಹೀಗೆ ಬರೆದನು, ಬಾಲಸೂರಿನ ಬದರೋದೀನನಾದ ನಾನು, ಹಿಪ್ಪಾಕನೆಂಬವರ್ತಕನಿಗೆ ಬರೆದು ಕೊಟ್ಟ ವಿಕ್ರಯಪತ್ರ:- ನಾನು ನನ್ನ ಪಿತರಾರ್ಜಿತವಾದ ಈ ರೇನಿಗೆ ಬರುವ ಹಡಗುಗಳಲ್ಲಿನ, ಮೊದಲನೆಯ ಸರಕುಗಳನ್ನು ನಿನಗೆ ಒಂದು ಸಾವಿರ ಸೆಕ್ವಿನ್ಸುಗಳಿಗೆ ಮಾರಿರುವುದರಿಂದ, ಈ ಚೀಟಿಯು ದಸ್ತೈವಜಾಗಿರತಕ್ಕುದೆಂದು ಬರೆದು, ಕೆಳಗೆ ರುಜುವನ್ನು ಮಾಡಿದನು.

ಬಳಿಕ್ ಆ ಚೀಟಿಯನ್ನು ತೆಗೆದುಕೊಂಡು, ಬದರೋದೀನನಿಂದ ಅಪ್ಪಣೆಯನ್ನು ಪಡೆದು, ತನ್ನ ನೂರಿಗೆ ಹೊರಟು ಹೋದನು. ಬದರೊದೀನನು ತನ್ನ ತಂದೆಯ ಸಮಾಧಿಗೆ ಹೋಗಿ ಭೂಮಿಗೆ ಬಾಗಿ ನಮಸ್ಕರಿಸಿ ಕಣ್ಣೀರಿನಿಂದ ನೆನೆಯುತಾ್ತ ಅಗೋರಿಗೆ ತಲೆಯನಿ್ನಟ್ಟು ಕುಳಿತು, ಎಲೈ ನಿರ್ಭಾಗ್ಯನಾದ ಬದರೋದೀನನೆ ! ತಂದೆಯನ್ನು ಕಳೆದುಕೊಂಡು, ದುಃಖಿಸುತ್ತಿರುವ ನಿನ್ನನ್ನು ಅನಾ್ಯಯವಾಗಿ ತೊಂದರೆ ಪಡಿಸಬೇಕೆಂದು ಕಾದುಕೊಂಡಿರುವ, ಸುಲ್ತಾನನ ಬಾಧೆಯನ್ನು ತಪ್ಪಿಸಿಕೊಳ್ಳುವುದಕಾ್ಕಗಿ, ಎಲ್ಲಿಹೋಗುವೆ, ನೀನು ಮೊದಲು ಅನುಭವಿಸುತ್ತಿದ್ದುದೇ ಸಾಲದೆ, ಎಂದು ಅತ್ತು ಮೂರ್ಛಾಕಾ್ರಂತನಾಗಿ, ಮರಳಿ ಎಚ್ಚತ್ತು ಪುನಹ ನೆಲಕ್ಕೆ ಬಿದ್ದನು. ನಗರಿಯೆಲ್ಲಿ ವಾಸಮಾಡುತಾ್ತ ಹಗಲೆಲ್ಲಾ ಅಡಗಿಕೊಂಡಿದ್ದು ರಾತ್ರಿ ಕಾಲದಲ್ಲಿ ಸಂಚಾರಮಾಡುತ್ತಿದ್ದ, ಒಬ್ಬಾನೊಬ್ಬ ರಾಕ್ಷಸನು ಆ ಗೋರಿಯ ಬಳಿಗೆ ಬಂದು, ಮೂರ್ಛೆಹೊಂದಿ ಬಿದ್ದಿರುವ ಬದರೋದೀನನ ಸೌಂದರ್ಯವನ್ನು ನೋಡಿ, ವಿಸ್ಮಯಯುಕ್ತನಾದನು. ಏಂದು ಹೇಳಿ ಬೆಳಗಾದಕೂಡಲೆ ಕಥೆಯನ್ನು ನಿಲ್ಲಿಸಿ, ಮರುದಿನ ಹೇಳಲಾರಂಭಿಸಿದಳು.

೯೮ ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು, ಸ್ವಾಮಿಾ ! ಬಳಿಕ ಗಯೆಫರನೆಂಬ ಪ್ರಧಾನ ಮಂತ್ರಿ ಕಲೀಫರನ್ನು ನೋಡಿ ಇಂತೆಂದನು,

ಆ ರಾಕ್ಷಸನು, ಬದರೋದೀನನ ರೂಪು ಸೌಂದರ್ಯ ಲಾವಣ್ಯ ವಿಶೇಷಗಳನ್ನು ಕುರಿತು, ಯೋಚಿಸಿ, ಭಗವಂತನು, ಈ ಪ್ರಪಂಚದಲ್ಲಿ ಸರ್ವರೂ ಮೋಹವನ್ನು ಹೊಂದಿ ಮರುಗುವುದಕ್ಕಾಗಿ, ಈತನನ್ನು ಸೃಷ್ಟಿಮಾಡಿ ಕಳುಹಿಸಿರುವನೋ, ಎಂದಂದುಕೊಂಡು, ಆಕಾಶಕ್ಕೆ ಹಾರಿ, ಹೋಗುತ್ತಾ ಇರುವಲ್ಲಿ ಮಧ್ಯ ಮಾರ್ಗದಲ್ಲಿ ಒಬ್ಬಾ ನೊಬ್ಬ ಯಕ್ಷಕನ್ನಿಕೆಯನ್ನು ಕಂಡು, ನಾನು ವಾಸಮಾಡುತ್ತಿರುವ, ಪಟ್ಟಣದ ಸವಿಾಪದಲ್ಲಿರುವ ಗೋರಿಯೆಬಳಿಗೆ ಬಂದುದೇ ಅದರೆ, ಅತ್ಯಂತ ಸುಂದರನಾದೊಬ್ಬ ಪುರುಷನನ್ನು ತೋರಿಸುವೆನೆಂದು ಹೇಳಲು, ಆ ಯಕ್ಷಕನ್ನಿಕೆಯು ಅದಕ್ಕೆ ಸಮ್ಮತಿಸಿದುದರಿಂದ. ಉಭಯತ್ರರೂ, ಭೂಮಿಗಿಳಿದು ಗೋರಿಯ ಬಳಿಗೆ ಬಂದಮೇಲೆ ರಾಕ್ಷಸನು ಆ ಯಕ್ಷಕನ್ನಿಕೆಗೆ, ಬದರೋದೀನನನ್ನು ತೋರಿಸಿ, ನೀನು ಇಂತಹ ಸುಂದರಪುರುಷನನ್ನು ಎಂದಾದರೂ ನೋಡಿರುವೆಯಾ ! ಎಂದು ಕೇಳಿದನು.

ಆಗ ಯಕ್ಷಕನ್ನಿಕೆಯು, ಬದರೋದೀನನ್ನು ನಿದಾನಿಸಿ ನೋಡಿ, ಈತನೇನೋ ರೂಪ ರೇಖಾ ಲಾವಣ್ಯಯುಕ್ತನೇ ಹೌದು, ಆದರೂ, ನಾನು ಕೈರೊ, ಪಟ್ಟಣದಲ್ಲಿ ನೋಡಿಬಂದಿರುವ, ಹೆಂಗಸಿನ ಲಾವಣ್ಯವು ಈತನ ಸೌಂದರ್ಯಕ್ಕಿಂತಲೂ ಅತಿಶಯವಾದುದು, ಆಸ್ತ್ರೀ ಸಂಬಂಧವಾದ ಚರಿತ್ರೆಯೆನ್ನು ನಿನಗೋಸ್ಕರವಾಗಿ ವಿವರಿಸಿ ಹೇಳುವೆನಾದುದರಿಂದ, ನೀನು ಸಾವಧಾನ ಚಿತ್ತನಾಗಿಕೇಳು, ಎಂದು ಹೇಳಿ ಐಗುಪ್ತರಾಜ್ಯದಲ್ಲಿ ಷಂಸುರ್ದೀ ಮಹಮ್ಮದನೆಂಬ ಪ್ರಧಾನಮಂತ್ರಿಯೋರ್ವನುಂಟು. ಆತನಿಗೆ ಇಪ್ಪತ್ತು ವರ್ಷ ವಯಸ್ಸುಳ್ಳ ಒಬ್ಬಾ ನೊಬ್ಬ ಕುಮಾರಿ ಇರುವಳು. ಆಕೆಯ ಸೌಂದರ್ಯಾತಿಶಯವನ್ನು ನಾನು ಹೇಳಲಾರೆನು. ಸುಲ್ತಾನನು ಆ ಹುಡುಗಿಯ ಲಾವಣ್ಯಾದಿಗಳನ್ನು ಕೇಳಿ, ತನ್ನ ಪ್ರಧಾನಮಂತ್ರಿಯಾದ ಆ ಹುಡುಗಿಯ ತಂದೆಯನ್ನು ಬರಮಾಡಿ ಅಯ್ಯಾ ! ನಿನಗೆ ಬಹುಸುಂದರಳಾದ ಒಬ್ಬ ಮಗಳಿರುವಳೆಂದು ನಾನು ಕೇಳಿರುವೆನು, ಅವಳನ್ನು ಮದುವೆ ಮಾಡಿಕೊಳ್ಳಬೇಕೆಂಬ ಕುತೂಹಲವು ನನಗುಂಟು ಅದಕ್ಕೆ ನೀನೊಪ್ಪುವೆಯೋ, ಎಂದು ಕೇಳಿದನು. ಪ್ರಧಾನಮಂತ್ರಿಯು ರಾಜನ ಅಭಿಪ್ರಾಯವನ್ನು ತಿಳಿದು, ಸರ್ವರೂ, ಮೋಹದಿಂದ ಮಾಡುವ ಕಾರ್ಯವನ್ನು ತಾನು ಮಾಡಲಾರದೆ, ಮಹಾಸ್ವಾಮಿ ! ತಮ್ಮ ಆಜ್ಞಾನುಸಾರವಾಗಿ ನಾನೆಂದಿಗೂ ನಡೆ

ಯೆತಕ್ಕವನಲ್ಲ, ಆದರೆ ಈ ವಿಷಯೆದಲ್ಲಿ ಮಾತ್ರ ತಾವು ನನ್ನನ್ನು ಕ್ಷಮಿಸ ಬೇಕೆಂದು, ಅತ್ಯಂತ ವಿನಯದಿಂದ ಬೇಡಿಕೊಳ್ಳುವೆನು, ಏಕೆಂದರೆ ನನಗೆ ನೌರೋದ್ದೀನಲ್ಲಿ ಯೆಂಬ ಸಹೋದರನೊಬ್ಬನಿದ್ದನೆಂಬುದೂ, ಆತನು ತಮ್ಮ ಬಳಯಲ್ಲಿ ಪ್ರಧಾನಮಂತ್ರಿಯೋಗಿದ್ದನೆಂಬುದೂ, ತಮಗೆ ವೇದ್ಯವೇ ಇದೆ, ಆತನಿಗೂ ನನಗೂ ಯಾವದೋ ಒಂದು ಕಾರಣದಿಂದ ಮನಸ್ತಾಪ ವುಂಟಾಗಿ, ನೌರೋದೀನನು ಪೊರಟು ಹೋದನು. ಅಂದಿನಿಂದಲೂ ಆತನ ವಿಷಯವೇ ನನಗೆ ಗೊತ್ತಾಗಿರಲಿಲ್ಲ. ಆದರೆ ಮೊನ್ನೆ ನಾಲ್ಕುದಿನ ಗಳ ಕೆಳಗೆ, ನೌರೋದೀನನು, ಬಾಲಸೂರಿನ ಸುಲ್ತಾನನ ಬಳಿ ಪ್ರಧಾನ ಮಂತ್ರಿಯಾಗಿದ್ದು ಸತ್ತು ಹೋದನೆಂಬ ವರ್ತಮಾನವನ್ನು ಕೇಳಿದೆನು. ಆತನಿಗೆ ಒಬ್ಬ ಕುಮಾರನು, ಇರುವನು, ಅಲ್ಲದೆ ಪೂರ್ವದಲ್ಲಿ ನನಗೂ ನನ್ನ ಸಹೋದರನಿಗೂ, ಒಂದು ನಿಬಂಧನೆಯು ನಡೆದಿರುವುದು, ಹೇಗಂದ ರೆ ನಮ್ಮಿಗಳ ಮಕ್ಕಳಿಗೆ ಪರಸ್ಪರ ವಿವಾಹವನ್ನು ಮಾಡಿ ನಾವು ಧನ್ಯರಾ ಗಬೇಕೆಂಬ ಕೋರಿಕೆಯಿಂದ ಬಾಲ್ಯದಲ್ಲಿ ಈ ನಿಬಂಧನೆಯೆನ್ನು ಮಾಡಿ ಕೊಂಡುದರಿಂದ, ನನ್ನ ತಮ್ಮನು ಇದೇ ಕೋರಿಕೆಯನ್ನು ಮನಸ್ಸಿನಲ್ಲಿ ಟ್ಟುಕೊಂಡು, ತನ್ನ ಮಗನಿಗೆ ವಿವಾಹ ಮಾಡದೆ ಸತ್ತು ಹೋಗಿರುವನು. ಆ ವರ್ತಮಾನವನ್ನು ಕೇಳಿ, ನಾನು ಆತನ ಮಗನಿಗೆ ಕನ್ನೆಯನ್ನು ಕೊ ಟ್ಟು, ವಿವಾಹ ಮಾಡಬೇಕೆಂದಿರುವುದರಿಂದ, ತಾವು ದಯೆಮಾಡಿ ಮನ್ನಿಸ ಬೇಕಲ್ಲದೆ, ನನ್ನಂತೆ ಪುತ್ರಿಯೆರನ್ನು ಹೊಂದಿರುವ ಇತರ ಮಂತ್ರಿಯರ ಸಂಬಂಧದಿಂದ, ನಿಮ್ಮ ಇಷ್ಟಾರ್ಥವನ್ನು ನೆರವೇರಿಸಿ ಕೊಳ್ಳಬಹುದೆಂದು, ಹೇಳಲು, ಐಗುಪ್ತ ಪ್ರಭುವು ಅತ್ಯಂತವಾದ ಕೋಪದಿಂದ, ಗುಡಿಗುಡಿಸು ತ್ತಿದ್ದನೆಂದು ಹೇಳಿ, ಷಹರಜಾದಿಯು ಕಥೆಯನ್ನು ನಿಲ್ಲಿಸಿ, ಮರುದಿನ ಬೆ ಳಗಿನ ಜಾವದಲ್ಲಿ ಹೇಳಲಾರಂಭಿಸಿದಳು.

೯೯ನೆಯ ರಾತ್ರಿ ಕಥೆ.

ಬಳಿಕ ಗಯೆಫರನು, ಕಲೀಫರನ್ನು ಕುರಿತು ಇಂತೆಂದನು. ಹೀಗೆ ಧೈರ್ಯದಿಂದ ತನಗೆ ಪ್ರತ್ಯುತ್ತರವನ್ನು ಹೇಳಿದ ಷಂಸುದೀನನನ್ನು ನೋಡಿ, ಸುಲ್ತಾನನು, ನಾನು ಸಂಬಂಧವನ್ನು ಮಾಡಿ ಕೊಳ್ಳಬೇಕೆಂಬ ಅಭಿಲಾಷೆ ಯಿಂದ, ಕೇಳಿದುದಕ್ಕೆ ನೀನು ನನಗಿಂತಹ ಅವಮಾನವನ್ನು ಮಾಡಿರುವೆ,

ಇರಲಿಚಿಂತೆಯಿಲ್ಲ. ನಿನ್ನ ವೇಲಿನ ಕೋಪವನ್ನು ತೀರಿಸಿಕೊಳ್ಳುವ ಮಾರ್ಗವು ನನಗೆ ತಿಳಿಯುವುದು. ನನಗಿಂತಲೂ ಸುಂದರನಾದ ಪುರುಷನಿಗೆ ನಿನ್ನ ಮಗಳನ್ನು ಕೊಡಬೇಕೆಂಬ ದುರಭಿಮಾನದಿಂದ, ನೀನು ಪ್ರತ್ಯುತ್ತರವನ್ನು ಹೇಳದಕಾರಣ, ನನ್ನ ಆಳುಗಳಲ್ಲಿ ಅತ್ಯಂತ ಕುರೂಪಿಯಾದ ಒಬ್ಬಾನೊಬ್ಬ ಅಸಹ್ಯ ಪುರುಷನು, ನಿನ್ನ ಮಗಳಿಗೆ ಗಂಡನಾಗುವನೆಂದು, ನಾನು ಪ್ರಮಾಣ ಪೂರ್ವಕವಾಗಿ ಹೇಳಬಲ್ಲೆನು, ಛೀ! ಮೂಢಾ! ಕೃತಘ್ನ! ನನ್ನೆದುರಿಗೆ ನಿಲ್ಲಬೇಡ, ಹೊರಟುಹೋಗೆಂದು, ಗದರಿಸಲು ಮಂತ್ರಿಯು ಅಲ್ಲಣಿಸುತ್ತಾ, ತನ್ನ ಮನೆಗೆ ಬಂದನು.

ಈ ದಿನ ಸುಲ್ತಾನನು ತನ್ನ ಕುದುರೆ ಯಾಳುಗಳಲ್ಲಿ, ದೊಡ್ಡ ಹೊಟ್ಟೆಯವನಾಗಿಯೂ, ಗೂನಾದ ಬೆನ್ನುಳ್ಳವನಾಗಿಯೂ, ಬಹು ಕುರೂಪಿಯಾಗಿಯೂ, ಇರುವ ಒಬ್ಬಾನೊಬ್ಬನ ಕುರೂಪಿಗೆ, ಮಂತ್ರಿಯ ಮಗಳನ್ನು ಕೊಟ್ಟು ಮದುವೆ ಮಾಡಿಸಬೇಕೆಂದು ಆಜ್ಞಾಪಿಸಿರುವುದರಿಂದ ಸರ್ವಸನ್ನಾಹವು ನಡೆದಿರುವುದು. ವರನು ಮಜ್ಜನ ಶಾಲೆಯಲ್ಲಿ ರಾಜಯೋಗ್ಯವಾದ ದಿವ್ಯ ಸ್ನಾನವನ್ನು ಮಾಡುತ್ತಾ ಸಂತೋಷಿಸುತ್ತಿರುವನು. ಸ್ನಾನಾನಂತರದಲ್ಲಿ ಆತನನ್ನು ಬರಮಾಡಿಕೊಳ್ಳುವುದಕ್ಕಾಗಿ, ಬಹುವಂದಿ ದೊಡ್ಡ ಮನುಷ್ಯರು ಕಾದುಕೊಂಡಿರುವರು. ಮಂತ್ರಿ ಪುತ್ರಿಯನ್ನು ಅಲಂಕಾರಮಾಡಿ ಬಹುವಂದಿ ದಾದಿಯೆರು ಕಾದುಕೊಂಡಿರುವರು. ವಿವಾಹ ಮುಹೂರ್ತವನ್ನು ನೆರವೇರಿಸುವುದಕ್ಕಾಗಿ ಘನವಂತರ ಮನೆಯವರಾದ ಸಕಲ ಮುತ್ತೈದೆಯೆರೂ, ಬಂದು ನೆರೆದಿರುವರು. ಇಷ್ಟೆಲ್ಲವೂ ನಡೆದು, ಒಂದೇ ಒಂದು ನಿಮಿಷವಾಗಿರುವುದು. ಆ ಮಂತ್ರಿಯ ಮಗಳನ್ನು ನಾನು ನೋಡಿರುವೆನು. ಅವಳನ್ನು ನೋಡಿದವರೆಲ್ಲರೂ ಆಶ್ಚರ್ಯ ಹೊಂದದಿರುವ ಮಾನವರೇ ಇಲ್ಲವೆಂದು, ನಾನು ಖಂಡಿತವಾಗಿ ಹೇಳುವೆನು. ಎಂದು ಹೇಳಿದ ಯಕ್ಷಕನ್ನಿಕೆಯು ಮಾತನ್ನು ಕೇಳಿ ರಾಕ್ಷಸನು, ಅಮ್ಮಾ! ಆ ಕನ್ಯೆಯೆನ್ನು ನಾನು ಬೇರೆ ನೋಡಿಲ್ಲ, ಆದರೆ ಗೂನುಪುರುಷನಿಗೆ ಗೊತ್ತುಮಾಡಿರುವ ಮಂತ್ರಿಯ ಮಗಳು ಸಹಜವಾಗಿಯೂ, ಈ ಸುಂದರ ಪುರುಷನನ್ನು ಮದುವೆ ಮಾಡಿ ಕೊಳ್ಳುವುದಕ್ಕೆ ಯೋಗ್ಯಳೆಂದು, ನನಗೆ ತೋರುವುದು, ಎಂದು ಹೇಳಲು ಯಕ್ಷಿಣಿಯು, ಹೌದು! ಹೌದು! ಐಗುಪ್ತರಾಜ್ಯದ ಸುಲ್ತಾನನು ಮಾಡುತ್ತಿರುವ, ಕ್ಷುದ್ರ ಕೃತ್ಯವನ್ನು ನಿಗಾಹಿ

ಸಿ, ಕೋಕಾಕ್ಯಾಂತನಾಗಿರುವ ಮಂತ್ರಿಯನ್ನು ಸವಾಧಾನ ಗೊಳಿಸಿ, ಆ ಬಾಣಸಿಗನ ಸ್ಥಾನದಲ್ಲಿ ಈ ಸುಂದರ ಪುರುಷನನ್ನು ನಿಯೋಗಿಸಿ, ಬಿಡುವುದೆ ಯೋಗ್ಯವಾವ ಕಾರ್ಯವೆಂದು, ನನಗೆ ತೋರುವುದು, ಎಂದು ನುಡಿದ ಯೆಕ್ಷಕನ್ನಿಕೆಯೆನ್ನು ಕುರಿತು, ಈ ಕಾರ್ಯವನ್ನು ನಾವಿಬ್ಬರೂ ಸೇರಿ, ಪ್ರಯತ್ನಮಾಡುವುದು, ಉತ್ತಮವೆಂದು, ತೋರುವುದು, ನಾನು ಇದಕ್ಕೆ ತಕ್ಕ ಉಪಾಯವನ್ನು ಮಾಡುತ್ತಾ ನಿನಗೆ ಸಹಾಯಮಾಡುವೆನು. ಎಂದು ಹೇಳಲು, ಯೆಕ್ಷಕನ್ನಿಕೆಯು, ಅಯ್ಯಾ! ಹಾಗಾದರೆ, ಈತನು ನಿದ್ರೆಯಿಂದೇಳುವುದರೊಳಗಾಗಿ ಕೈರೊ ಪಟ್ಟಣವನ್ನು ಸೇರಿಸಿ, ಅಲ್ಲಿನ ಕಾರ್ಯಗಳನ್ನು ನೆರವೇರಿಸಿ ಕೊಂಡು ಬಂದು, ನಿನ್ನ ಬಳಿಯಲ್ಲಿ ಬಿಡುವೆನು, ನಂತರ ನೀನು ಏನು ಬೇಕಾದರೂ ಮಾಡಬಹುದೆಂದು ಹೇಳಿದನು. ಹೀಗೆ ವಾಗ್ದಾನವು ನಡೆದ ಬಳಿಕ ರಾಕ್ಷಸನು ಮೆತ್ತಗೆ ಆತನನ್ನು ಎತ್ತಿಕೊಂಡು ಕೈರೊ ನಗರದಲ್ಲಿ, ಆ ಬಾಣಸಿಗನಾದ ಕುರೂಪಿಯು ಸ್ನಾನಮಾಡುತ್ತಿದ್ದ ಸ್ನಾನಗಟ್ಟದ ಬಳಿಯಲ್ಲಿ ತಂದು ನಿಲ್ಲಿಸಿದನು. ಕೂಡಲೆ ಬದರೋದೀನನು, ತನ್ನ ನಿದ್ರೆಯವೊಬ್ಬನ್ನು ತೀರಿಸಿಕೊಂಡು, ಎಚ್ಚತ್ತು ನೋಡುವಲ್ಲಿ ತಾನು ಕೈರೊ ಪಟ್ಟಣದಲ್ಲಿರುವುದನ್ನು ಕಂಡು ಚಿಂತಿಸುತ್ತಿರುವಾಗ, ರಾಕ್ಷಸನು ಆತನ ಬಳಿಗೆ ಬಂದು ಕೈಯ್ಯಲ್ಲಿ ಒಂದು ಪಂಜನ್ನು ಹಿಡಿದುಕೊಂಡು, ಆ ಬದರೋದೀನನು, ಮದುವೆಯೆಜನರ ಗುಂಪನ್ನು ಸೇರುವವರೆಗೂ ಕಾದುಕೊಂಡಿದ್ದನು.

ಅಲ್ಲದೆ ಆತನನ್ನು ಕಳುಹುವುದಕ್ಕೆ ಮೊದಲೆ, ಅಯ್ಯಾ! ನೀನು ಆ ಸ್ಥಲಕ್ಕೆ ಹೋಗಿ, ಗೂನು ಬೆನ್ನಿನವನಾದ ಬಾಣಸಿಗನ ಬಲಭಾಗದಲ್ಲಿ ನಿಂತುಕೊಂಡು, ಅಲ್ಲಿರುವ ವಾದ್ಯಗಾರರಿಗೂ, ದಾಸಿಯೆರಿಗೂ, ಇತರಜನಗಳಿಗೂ, ನಿನ್ನ ಬಳಿಯಲ್ಲಿರುವ ಹಣವನ್ನು ತೆಗೆದು ಧಾರಾಳವಾಗಿ ಕೊಡುಯಾರಿಗೂ, ಜೊರಿಕೊಳ್ಳಬೇಡ, ನೀನು ಹೀಗೆ ಧೈರ್ಯದಿಂದ ಲಂಚಕೊಟ್ಟ ಅಲ್ಲಿರುವ ಜನರನ್ನು ಬೇರಗು ಮಾಡಿಕೊಂಡರೆ, ಉಳಿದಕಾರ್ಯಗಳನ್ನು ನಾನು ಮಾಡುವುದಕ್ಕೆ ಸಿದ್ಧನಾಗಿರುವೆನೆಂದು ಹೇಳಿದನು. ಈ ರೀತಿಯಾಗಿ ತಾನು ಮಾಡಬೇಕಾದ ಕಾರ್ಯಗಳೆಲ್ಲ ಸಲಹೆಯೆನ್ನು ರಾಕ್ಷಸನಿಂದ ಹೊಂದಿದವನಾಗಿ, ತಾನು ಧೈರ್ಯದಿಂದ ಆ ದೀವಟಿಗೆಯೆನ್ನು ತೆಗೆದುಕೊಂಡು, ತಾನು ಒಬ್ಬ ಪರಿಚಾರಕನಂತೆ ವೇಷವನ್ನು ಹಾಕಿಕೊಂಡು, ಆ ಬಾಣಸಿಗನು

ಸ್ನಾನ ಮಾಡುವ ಸ್ಥಲವನ್ನು ಸೇರಿ, ಅಂಲ್ಲಿಂದ ಹೊರಟು, ಸುಲ್ತಾನನ ಲಾಯದಿಂದ ತೆಗೆದುಕೊಂಡು ಬಂದ, ಕುದುರೆಯನ್ನು ಹತ್ತಿ ಹೋಗುತ್ತಿರುವ, ಗೂನು ಪುರುಷನನ್ನು ಹಿಂದೆ ಹಾಕಿ ತಾನು ಹೊರಟನು, ಇಂತೆಂದು ಹೇಳಿ ಷಹರಜೌದಿ ಬೆಳಗಾದಕೂಡಲೆ, ಕಥೆಯೆನ್ನು ನಿಲ್ಲಿಸಿ ಮರುದಿನ ಬೆಳಗಿನ ಜಾವದಲ್ಲಿ ಮರಳಿ ಇಂತೆಂದು ಹೇಳಲಾರಂಭಿಸಿದಳು.

೧೦೦ನೆಯ ರಾತ್ರಿ ಕಥೆ.

ಬಳಿಕ ಷಹರಜೌದಿ ಸುಲ್ತಾನರನ್ನು ಕುರಿತು ಸ್ವಾಮಿಾ! ನಂತರ ಗಯೆಫರನು, ಕಲೀಫರನ್ನು ಕುರಿತು ಇಂತೆಂದು ಹೇಳಿದನು, ಏನಂದರೆ, ಬದರೋದೀನನು, ತಾನು ಹೀಗೆ ಬರುತ್ತಿರುವಾಗ, ಸತ್ತಲೂ ಇರುವ ವಾದ್ಯಗಾರರು, ಕಾವಲಿನವರು ಮೊದಲಾದ ಸಮಸ್ತರಿಗೂ, ತನ್ನ ಕೈ ಚೀಲದಿಂದ ಹೆಚ್ಚ್ಚಿ ಹೆಚ್ಚ್ಚಾಗಿ ಹಣವನ್ನು ತೆಗೆದುಕೊಡುತ್ತಾ ಬಂದನು. ಆಗ ಆ ಜನಗಳು ಆತನ ಸೌಂದರ್ಯವನ್ನೇ ನೋಡುತ್ತಿರುವ, ತಮ್ಮ ದೃಷ್ಟಿಗಳನ್ನು ಹಿಂದಿರುಗಿಸಲಾರದೆ ಹೋದರು, ಹೀಗೆ ಅವರುಗಳ ಉತ್ಸವ ಹೊರಟು ನಗರ ಮಧ್ಯದಲ್ಲಿರುವ ಬದರೋದೀನನ ದೊಡ್ಡಪ್ಪನಾದ, ಷಂಸುದೀನು ಮಹಮ್ಮದನ ಮನೆಯ ಬಾಗಿಲಿಗೆ ಬರುವಾಗ, ಅಲ್ಲಿ ಕಾವಲುಗಾರರು, ಗುಂಪು ಗುಂಪಾಗಿ ನೆರೆದಿರುವ ಜನರನ್ನು ಒಳಗೆ ಬಿಡದಂತೆ, ಎಚ್ಚರಿಕೆಯಿಂದ ನೋಡಿಕೊಳ್ಳುವುದಕ್ಕಾಗಿ ಕಾದುಕೊಂಡಿದ್ದು, ಆ ಜನಗಳು ಬಂದಕೂಡಲೆ, ನವುಕರರನ್ನು ಹೊರಗೆ ದೊಬ್ಬಿ ಬದರೋದೀನನು ಒಬ್ಬ ನವುಕರನೆಂದು ತಿಳಿದು, ಆತನನ್ನು ಅಡ್ಡಿಪಡಿಸಿದರು.

ಆಗ ವಾದ್ಯಗಾರರು, ಹೋಗುವುದಕ್ಕೆ ಮನಸ್ಸುಬಾರದೆ, ಕಾವಲು ಗಾರರನ್ನು ನೋಡಿ ಅಯ್ಯಾ! ಈತನು ನೌಕರನಲ್ಲವೆಂಬುದಕ್ಕೆ ಈತನ ಮುಖವರ್ಚಸ್ಸೇ ಸಾಕ್ಷಿಯಾಗಿದೆ, ಮತ್ತೇನೆಂದರೆ ಪರದೇಶಸ್ಥನಾದ ಈತನು, ನಮ್ಮದೇಶದ ಮದುವೆಯ, ರೀತಿಯನ್ನು ತಿಳಿದುಕೊಂಡು ಹೋಗುವುದಕ್ಕಾಗಿ ಬಂದಿರುವನೆಂದು ಹೇಳಿ, ಅವನ ಕೈಯೆಲ್ಲಿದ್ದ ದೀವಟಿಗೆಯನ್ನು ಮತ್ತೊಬ್ಬನ ಕೈಗೆ ಕೊಟ್ಟು, ಆತನನ್ನು ತಮ್ಮಸಂಗಡ ಕರೆದುಕೊಂಡು, ಅರಮನೆಗೆ ಹೋಗಿ ಶೃಂಗಾರವಾದ ಮಂಟಪ ಮಧ್ಯದಲ್ಲಿರುವ, ಸಿಂಹಾಸನದಮೇಲೆ ಮಂತ್ರಿ ಪುತ್ರಿಯೊಂದಿಗೆ ಕುಳಿತಿರುವ ಗೂನು ಮಾನವನ ಪಕ್ಕದಲ್ಲಿ ಕುಳ್ಳರಿಸಿದರು:— ಬಹುಸೌಂದರ್ಯವತಿಯಾಗಿಯೂ, ದಿವ್ಯಾ

ಲಂಕಾರ ಭೂಷಿತೆಯೊಾಗಿಯೂ, ಸ್ತ್ರೀರತ್ನ ಶಿರೋಮಣಿಯೆಂತೆ ಹೊಳೆ ಯುತ್ತಿರುವ ಆಕೆಯ ಮುಖವಾದರೋ, ತನ್ನ ಪಕ್ಕದಲ್ಲಿ ರೂಪಲೇಖಾಲಾ ವಣ್ಯ ಹೀನನಾಗಿ ತನ್ನ ವೋಹಕ್ಕೆ ಯೋಗ್ಯನಲ್ಲದವನಾದ, ಕುರೂಪಿ ವರ ನು ಕುಳಿತಿರುವುದನ್ನು ನೋಡಿ, ತನಗುಂಟಾದ ಕೋಕರಸವನ್ನು ಹೊರ ಹೊರಡಿಸುತ್ತಿತ್ತು, ಈತರನಾದ ಈಡಿಲ್ಲದ ವಧೂವರರನ್ನು ನೋಡಿ, ಅಲ್ಲಿ ನೆರೆದಿರುವ ಜನರೆಲ್ಲರೂ, ರಾಗಹೀನರಾಗಿ ವ್ಯಸನಾಕ್ರಾಂತರಾಗಿದ್ದರು. ಆ ದರೆ ಮದುವೆಗಾಗಿ ಅಲ್ಲಿಗೆ ನಡತಂದು ಸೇರಿರುವ ರಾಜಸ್ತ್ರೀಯೆರು, ಘನ ವಂತೆಯರು, ಇತರ ಸೌಭಾಗ್ಯವತಿಯೆರೂ ಸಹ, ತಂತಮ್ಮ ಯೋಗ್ಯತಾ ನು ಸಾರವಾಗಿ ಅಲಂಕಾರ ಭೂಷಿತೆಯೆರಾಗಿ, ಸುಗಂಧಯುಕ್ತವಾದ ಪೌ ಣದಬತ್ತಿಗಳ ದೀಪದ ಬೆಳಕಿನಲ್ಲಿ, ಆ ಸಿಂಹಾಸನದ ಇದಿರಾಗಿ ಸುತ್ತಲೂ ಕುಳಿತಿದ್ದರು. ಕುರೂಪಿಯೊದ ವರನ ಪಕ್ಕದಲ್ಲಿ ಕುಳಿತಿರುವ, ಸುಂದರ ನಾದ, ಸಲ್ಲಕ್ಷಣಯುಕ್ತನಾದ, ನೀತಿಸಂಪನ್ನನಾದ ಆ ಬದರೋದೀನನನ್ನು ಅಲ್ಲಿರುವ ಸ್ತ್ರೀಯೆರೆಲ್ಲರೂ ನೋಡಿ ವೋಹದಿಂದ ತಂತಮ್ಮ ಸ್ಥಳಗಳನ್ನು ತೊರೆದು ಆತನ ಹತ್ತಿರಕ್ಕೆ ಬಂದು ಆತನನ್ನು ನೋಡಿ, ಆತನ ಪಕ್ಕದಲ್ಲಿ ಕುಳಿತಿರುವ ಕುರೂಪಿಗೆ ಈ ಸುಂದರೀ ಮಣಿಯೆನ್ನು ಕೊಡುವುದು, ನ್ಯಾ ಯವಲ್ಲವಾದುದರಿಂದ ಹೇಗಾದಗೂ ಮಾಡಿ, ನವಿನ್ಯಾ ಮಂತ್ರಿಪುತ್ರಿಯೆನ್ನು ಈ ಸುಂದರ ಪುರುಷನಿಗೆ, ಮದುವೆ ಮಾಡುವಂತೆ ಮಾಡಬೇಕೆಂದು ಯೋ ಚಿಸಿ, ಇಂತಹ ಕುರೂಪಿಯೊದ ಪುರುಷನಿಗೆ ಸೌಂದರ್ಯಶಾಲಿಯೆದ ಈ ಬಾಲಿಕಾಮಣಿಯೆನ್ನು ಕೊಟ್ಟು, ವಿವಾಹಮಾಡುವುದು ಸರ್ವಥಾ,ಅಯೋಗ್ಯ ವಾದ ಕಾರ್ಯವೇ ಸರಿ ಎಂದು ಗಟ್ಟಿಯೆಗಿ ಕೂಗಿ ಹೇಳಿ, ಸುಲ್ತಾನನು ಮಾಡಿದ ಅವಿವೇಕವಾದ ಕಾರ್ಯವನ್ನು ಬಹುವಾಗಿ ನಿಂದಿಸಿದರು. ಕೂಡಲೆ, ಅಲ್ಲಿ ನೆರೆದಿದ್ದ ಸಭಾಸದರೆಲ್ಲರಿಗೂ ಸಂತೋಷವಾಗುವಂತೆ, ಆವರನನ್ನು ನಿಂದಿಸಿ, ತಮ್ಮ ಕೈಲಾದಮಟ್ಟಿಗೂ ಹೇಳನವಾಡಿ ಅದನ್ನೆ ಮದುವೆಯ ವಿನೋದವನ್ನಾಗಿ ಮಾಡಿದರು. ಅದೇರೀತಿಯಲ್ಲಿ ವಾದ್ಯಗಳು ಸ್ವಲ್ಪ ಹೊತ್ತು ನಿಶ್ಶಬ್ದವಾಗಿದ್ದು ಮತ್ತೆ ಎಂದಿನಂತೆ ಮೊಳಗಲಾರಂಭಿಸಿದವು, ವಧುವಿಗೆ ಅಲಂಕಾರಮಾಡಿದ ಸ್ತ್ರೀಯೆರು, ಆಕೆಯ ಬಳಿಗೆ ಬಂದು ನಿಂತು ಕೊಂಡರು ಎಂದು ಹೇಳಿ ಷಹರಜಾದಿಯು ಬೆಳಗಾದುದನ್ನು ಕಂಡು ಕಥೆ ಯನ್ನು ನಿಲ್ಲಿಸಿ, ಮರುದಿನ ಬೆಳಗಿನಜಾವದಲ್ಲಿ ಮತ್ತೆ ಹೇಳಲಾರಂಭಿಸಿದಳು,

ನೂರೊಂದು ಮತ್ತು ನೂರೆರಡನೆಯ ರಾತ್ರಿಗಳಲ್ಲಿ ವಾದ್ಯಗಾರರು, ಮಂತ್ರಿ ಪುತ್ರಿಯು ಸಮಯೋಚಿತವಾಗಿ ಅಲಂಕರಿಸಿಕೊಂಡ ಏಳು ವಿಧವಾದ ನೂತನಾಲಂಕಾರಗಳನ್ನು ಕುರಿತು ವಿವರಿಸುವ ಅರಬೀಭಾಷೆಯ ಹಾಡುಗಳನ್ನು ಹಾಡುತ್ತಲೇ ಇದ್ದರು, ಅಂತಹ ಹಾಡುಗಳನ್ನು ಸ್ವಭಾವವತ್ತಾಗಿ ಕನ್ನಡದಲ್ಲಿ ರಚಿಸಿ, ವಚನ ರೂಪವಾಗಿ ಬರೆದುದರಿಂದ ವಾಚಕರಿಗೆ ಆನಂದ ವುಂಟಾಗದೆ ಕಾಲವಿಳಂಬಕ್ಕೂ, ಗ್ರಂಥ ವಿಸ್ತಾರಣಕ್ಕೂ ಕಾರಣವಾಗುವುದೆಂದು, ಆ ಕಾರ್ಯವನ್ನು ಮಾನಸವಾಡಿದೆ ಎಂಬುದನ್ನು, ವಾಚಕರೇಗ್ರಹಿಸಿಕೊಳ್ಳಬಹುದು.

೧೦೩ನೆಯ ರಾತ್ರಿ ಕಥೆ

ಷಹರಜಾದಿ ಸುಲ್ತಾನನನ್ನು ಕುರಿತು. ಚಕ್ರವರ್ತಿಯೇ! ಈ ವಿನೋದಕರವಾದ ಕಥೆಯನ್ನು ನೀನುಕೇಳುತ್ತಿರುವುದರಿಂದ ಗಯೆಘರನು, ಕಲೀಫನಿಗೆ ಹೇಳುತ್ತಿದ್ದ ಹಿಂದಿನ ಕಥೆಯನ್ನು ಮರೆತಿರಬಹುದು, ಆದರೂ ಮುಂದಿನ ವಿನೋದವನ್ನು ಚಿತ್ತೈಸಬೇಕೆಂದು, ನುಡಿದು, ಮುಂದರಿದು ಕಥೆಯನ್ನು ಹೇಳ ತೊಡಗಿದಳು. ಮಂತ್ರಿ ಪುತ್ರಿಯು, ಕಾಲಕಾಲಕ್ಕೆ ಸರಿಯಾಗಿ ಉಡುಪನ್ನು ಬದಲಾಯಿಸುತ್ತ ಹೊಸ ಹೊಸ ಅಲಂಕಾರಗಳನ್ನು ಮಾಡಿಕೊಂಡು ಬಂದಾಗಲೆಲ್ಲ, ಕುರೂಪಿಯನ್ನು ನೋಡುವುದಕ್ಕೆ ಮನವೊಪ್ಪದೇ, ಹೋದುದರಿಂದ ಸುಂದರಾಂಗನಾದ ಬದರೋದೀನನು, ರಾಕ್ಷಸನು ಹೇಳಿದ ಬುದ್ಧಿವಾದವನ್ನು ಮರೆಯದೆ ಆಕೆಯ ಸಂಗಡ ಬರುತ್ತಿರುವ ದಾದಿಯರಿಗೆ ತನ್ನ ಕೈ ಚೀಲದಿಂದ ಹಣವನ್ನು ತೆಗೆದು, ಕೊಡುತ್ತಿದ್ದನು. ಅದನ್ನು ತೆಗೆದುಕೊಳ್ಳುವುದಕ್ಕಾಗಿ ಮೇಲ್ವಾಯ್ದು ಬರುತ್ತಿದ್ದ ಜಾರಕರ, ಸಂದಣಿಯು ನೋಟಕರಿಗಾನಂದವನ್ನುಂಟು ಮಾಡುತ್ತಿತ್ತು, ಈ ತೆರನಾದ ಸಂದಣಿಯಿಂದ ಮಂತ್ರಿ ಪುತ್ರಿಯು ನಿನ್ನೆನ್ನೇ ವರಿಸುವಳೇ ಹೊರತು, ಈ ಕುರೂಪಿಯನ್ನು ಎಂದಿಗೂ ಮೆಚ್ಚಳೆಂದು ಹೇಳುವಂತೆ, ಆ ಚಾರಕರು, ಆ ಬದರದೀನನ ಹತ್ತಿರಕ್ಕೆ ಸನ್ನೆಮಾಡಿ ತೋರಿಸುತ್ತಿದ್ದರು. ಮಂತ್ರಿ ಪುತ್ರಿಯ ಕಟಾಕ್ಷವು ಆತನ ಮುದ್ದುಮುಖದ ಚೆಂದುಟಿಗಳನ್ನು ಚುಂಬಿಸಿ, ಹೃದಯೋಂತರಾಳವನ್ನು ಒಳಹೊಕ್ಕಿತು. ಈ ತೆರನಾದ ಕಾರ್ಯವು ಅಲ್ಲಿ ನೆರೆದಿದ್ದ ಸರ್ವಜನರಿಗೂ ಸಮ್ಮತವಾಗಿಯೇ

ಇದ್ದಿತು. ಈ ತೆರದಿಂದ ಮಂತ್ರಿ ಪುತ್ರಿಯು ಏಳುಸಾರಿ ತನ್ನ ಅಲಂಕಾರ ಗಳನ್ನು ಬದಲಾಯಿಸಿದ ನಂತರ, ವಾದ್ಯಘೋಷವು ನಿಂತಿತು. ಬದರೋ ದೀನನು ಸ್ವಲ್ಪ ಮರೆಯಾಗಿರುವಂತೆ ಸಂಜ್ಞೆ ಮಾಡಲ್ಪಟ್ಟು, ಹಾಗೆಯೇ ಇದ್ದನು. ಇತರ ದೊಡ್ಡ ಮನುಷ್ಯರೆಲ್ಲರೂ ತಂತಮ್ಮ ಮನೆಗಳಿಗೆ ಹೋದರು. ಆದುದರಿಂದ ಆ ಮಂತ್ರಿ ಪುತ್ರಿಯೆ ಕುಟುಂಬಕ್ಕೆ ಸೇರಿದ ಜನಗಳೇ ಅಲ್ಲಿದ್ದರು. ಬಳಿಕ ವಧುವು ತನ್ನ ವಸ್ತ್ರಗಳನ್ನು ಬದಲಾಯಿ ಸುವುದಕ್ಕಾಗಿ, ಒಬ್ಬ ದಾದಿಯೊಡನೆ ತನ್ನ ಅಂತಃಪುರವನ್ನು ಸೇರಿದಳು. ಆಗ ಆ ಮನೆಯಲ್ಲಿ ಗೂನು ಮನುಷ್ಯನೂ, ಬದರೋದೀನನೂ, ಚಾರಕ ರಲ್ಲಿ ಕೆಲವರೂ ಇದ್ದರೇ ಹೊರತು ಮತ್ತಾರೂ ಇರಲಿಲ್ಲ. ಹೀಗಿರುವಲ್ಲಿ ಆ ಗೂನನು ಬದರೋ ದೀನನನ್ನು ನೋಡಿ ಅಸೂಯೆಯಿಂದ ಎಲಾ ! ನೀ ನು ಯಾಕೆ ಎಲ್ಲರಂತೆ ತೊಲಗಿ ಹೋಗಲಿಲ್ಲ. ಇಲ್ಲಿ ನಿಂತಿರುವುದಕ್ಕೆ ಕಾರ ಣವೇನು ! ಕೂಡಲೆ ಈ ಸ್ಥಳವನ್ನು ಬಿಟ್ಟು ಹೊರಟು ಹೋಗೆಂದು, ನಿರ್ಲಕ್ಷ್ಯವಾಗಿ ಮಾತನಾಡಲು, ಬದರೋದೀನನು, ಸುಮ್ಮನೆ ತೆರಳಲಾ ರಂಭಿಸಿ, ಸ್ವಲ್ಪ ದೂರ ಹೋಗಲು, ಕೂಡಲೆ ಆತನನ್ನು ರಾಕ್ಷಸನು, ಯಕ್ಷಕನ್ನಿಕೆಯೂ, ಸಹ ಕೈ ಹಿಡಿದು ಅಲ್ಲಿಯೇ ನಿಲ್ಲಿಸಿ, ಅಯ್ಯಾ ! ಏತ ಕ್ಕೆ ಹೊರಟು ಹೋಗುತ್ತಿಯೆ ! ಈಗ ಆ ಗೂನನು ಅಂತಃಪುರದಲ್ಲಿಲ್ಲ, ಏನೋ ಕೆಲಸದ ನಿಮಿತ್ತವಾಗಿ ಹೊರಗೆ ಹೋಗಿರುವನು. ಆದುದರಿಂದ ನೀನಿಲ್ಲಿಯೇ ನಿಂತು, ಏಕಾಂತದಲ್ಲಿ ಮಂತ್ರಿ ಪುತ್ರಿಯೆಸಂಗಡ ಇರುವಾಗ, ನಾನೇ ನಿನ್ನ ಗಂಡನು, ಸುಲ್ತಾನನು, ಕುದುರೆಚಾಕರನಾದ ಆ ಗೂನನ್ನು ಪರಿಹಾಸಮಾಡಿ ಕಳುಹಿಸಿದನು. ಆತನು, ಕುದುರೆ ಲಾಯೆದಲ್ಲಿ ಹುರಳಿ ಯೆನ್ನು ಬೇಯಿಸುತ್ತಿರುವನು. ನಾನೇ ನಿನ್ನ ಗಂಡನಲ್ಲದೆ ಮತ್ತಾರೂ ಇಲ್ಲವೆಂದು ಧೈರ್ಯದಿಂದ ಹೇಳು. ಅದಕ್ಕವಳು ಒಪ್ಪದೆ ಹೋದರೆ, ನಿನ್ನ ಬುದ್ಧಿ ಚಾತುರ್ಯವನ್ನು ಖರ್ಚುಮಾಡಿ, ಆಕೆಯ ಮನಸ್ಸು ಕರಗುವಂತ ಹ ಮಾತುಗಳನ್ನಾಡಿದರೆ, ಸ್ವಭಾವ ಸುಂದರನಾದ ನಿನ್ನ ಮಾತುಗಳಿಗೆ ಸೋ ತು, ಆಕೆ ನಿನ್ನನ್ನು ವರಿಸುವಳು. ಅವಳೇ ನಿನ್ನ ಹೆಂಡತಿಯೆಲ್ಲದೆ ಮ ತ್ತಾರು ಇಲ್ಲ. ಇದಕ್ಕೆ ಅಡ್ಡಿಯಾಗಿ ಮಧ್ಯದಲ್ಲಿ ಆ ಗೂನನು ಬಂದರೆ ನಾ ನು ಅವನನ್ನು ನೋಡಿ, ಕೊಳ್ಳುವೆನು. ಅಲ್ಲದೆ ನಿರ್ವಿಘ್ನವಾಗಿ ನಿನ್ನ ವಿವಾಹವು ನೆರವೇರುವಂತೆ ನಾನು ಮಾಡುವೆನು. ನೀನು ಸಂತೋಷದಿಂ

ದ ಕಾರ್ಯ ನಿರ್ವಾಹಕವನ್ನು ಮಾಡಿಕೊಳ್ಳ ಬಹುದೆಂದು, ಆ ಯೆಕ್ಷಕನ್ನಿ ಕೆಯು ಬದರೋದೀನನ ಧೈರ್ಯದಿಂದ ಹೇಳಿದ ವಾಕ್ಯವನ್ನು ಕೇಳಿ, ಅಂತಃಪುರಕ್ಕೆ ಹೊರಟು ಹೋದನು.

ಅಷ್ಟರಲ್ಲಿ ರಾಕ್ಷಸನು ಮಹಾ, ಮಾರ್ಜಾಲ ರೂಪವನ್ನು ಹೊಂದಿ ಆ ಗೂನನಿದಿರಿಗೆ ಬಂದು, ಕೂಗಲಾರಂಭಿಸಲು, ಗೂನನು, ಅದ ನ್ನು ಓಡಿಸುವುದಕ್ಕಾಗಿ, ಕೈ ತಟ್ಟಿ ಗದರಿಸಿದನು. ಆದರೂ, ಅದು ಅಲ್ಲಿಂ ದ ಹೊರಟು ಹೋಗದೆ, ಹಿಂಗಾಲುಗಳವೇಲೆ ನಿಂತು, ದೀಪದಂತೆ ಉರಿ ಯುತ್ತಿರುವ ತನ್ನ ಕಣ್ಣುಗಳಿಂದ ಆತನ ಮುಖವನ್ನು ಕ್ರೂರದೃಷ್ಟಿ ಯಿಂದ ನೋಡುತ್ತಾ ಮೊದಲಿಗಿಂತಲೂ, ಗಟ್ಟಿಯಾಗಿ ಕೂಗಿತು. ಭಯಂ ಕರವಾದ ಆ ಧ್ವನಿಯನ್ನು ಕೇಳಿ, ಆ ಗೂನನು, ಕೂಡಲೆ ಮೂರ್ಛೆಹೋ ದನು. ಆತನು, ಎಚ್ಚರಗೊಳ್ಳುವುದಕ್ಕೆ ಮೊದಲೆ ರಾಕ್ಷಸನು, ಮಹಿಷಾ ಕಾರವನ್ನು ಹೊಂದಿ, ಎಲಾ ! ಮೂರ್ಖನಾದ ಗೂನನೇ ! ನೀನು ಸುಂದ ರಾಂಗಿಯಾದ ನಮ್ಮ ಮಂತ್ರಿಪುತ್ರಿಯನ್ನು ಮದುವೆಮಾಡಿಕೊಂಡು, ಆಕೆ ಯ ಶೋಕವನ್ನು ಹೆಚ್ಚು ಮಾಡಬೇಕೆಂದಿರುವೆಯೊ ! ಎಂದು ಮತ್ತೊಂ ದುಸಾರಿ, ಉದ್ಘೋಷಿಸಲು, ಆತನು ಕಣ್ದೆರೆದು ನೋಡಿ, ಪೆದರಿ ಹವ್ಮೈ ಸುತ್ತಾ, ಓ ಮಹಿಷರಾಜನೆ ! ನಾನೆಂದಿಗೂ ನಿಮ್ಮ ಆಜ್ಞೆಯನ್ನುಮೀ ರತಕ್ಕವನಲ್ಲ, ತಾವು ಹೇಳಿದಂತೆ ಕೇಳಿಕೊಂಡಿರುವೆನು, ಆದುದರಿಂದ ದ ಯೆಮಾಡಿ ನನ್ನ ಪ್ರಾಣವನ್ನುಳಿಸೆಂದು ಬೇಡಿಕೊಳ್ಳಲು, ರಾಕ್ಷಸನಿಗೆ ಕರು ಣಹುಟ್ಟಿ ಸುಖದಿಂದ ಜೀವಿಸಿಕೊಂಡಿರಬೇಕಾದರೆ, ಯಾವ ಮಾತನ್ನು ಆಡ ದೆ ಅತ್ತಿತ್ತ ಅಲುಗಾಡದೆ, ಸೂರ್ಯೋದಯವಾಗುವವರಿವಿಗೂ, ಇಲ್ಲಿಯೇ ಕುಳಿತು ಕೊಂಡಿರಬೇಕು. ಹಾಗಿಲ್ಲದೆ ಸೂರ್ಯೋದಯವಾಗುವುದಕ್ಕೆ ಮುಂಚೆ ಈ ಸ್ಥಳವನ್ನು ಬಿಟ್ಟದ್ದುದೇ ಆದರೆ ನಿನ್ನ ತಲೆಯು ಸಾವಿರ ಹೋಳಾಗಿ ಸೀಳಿಹೋಗುವುದು, ಇದು ಖಂಡಿತವೆಂದುತಿಳಿ. ಎಂದು ಹೇಳಿ ಆ ರಾಕ್ಷಸನು ಮನುಷ್ಯಾಕಾರವನ್ನು ಹೊಂದಿ ಆ ಗೂನನನ್ನು ತಲೆಕೆಳಗಾಗಿ ತಿರುಗಿಸಿ ಬಿಗ್ಗನೆ ಮೇಲಕ್ಕೆತ್ತಿ ಒಂದು ಸ್ಥಳದಲ್ಲಿ ಕುಕ್ಕಿಹಾಕಿದನು.

ಇದನ್ನುನೋಡಿ ಬದರೋದೀನನು, ಅಂತಃಪುರವನ್ನು ಒಳಹೊ ಕ್ಕಿದ ಸ್ವಲ್ಪ ಹೊತ್ತಿಗೆ ಒಬ್ಬಾನೊಬ್ಬ ಮುದುಕಿಯು ಮಂತ್ರಿ ಪುತ್ರಿ

ಯೆನ್ನು ಕರೆದುತಂದು, ಆ ಅಂತಃಪುರದಲ್ಲಿ ಬಿಟ್ಟು ತ್ವರೆಯೊಗಿಬಾಗಿಲನ್ನು ಮುಚ್ಚಿಕೊಂಡು, ಅತ್ತಿತ್ತ ನೋಡದೆ ಹೊರಟು ಹೋದಳು. ಬಳಿಕ ಮಂತ್ರಿ ಪುತ್ರಿಯು, ಗೂನ ಪುರುಷನಲ್ಲದೆ ಸರ್ವಾಂಗ ಸುಂದರನಾದ ಒಬ್ಬ ಪುರುಷನು ಕುಳಿತಿರುವುದನ್ನು ಕಂಡು ಏನಯ್ಯಾ ! ಸ್ನೇಹಿತನೇ ! ನನ್ನ ಗಂಡನು ಇಲ್ಲಿಲ್ಲದೆ ! ನೀನುಮಾತ್ರ ಕುಳಿತಿರುವುದಕ್ಕೆ ಕಾರಣವೇನು, ನೀನು ಆತನ ಸ್ನೇಹಿತನೇ ? ಎಂದು ಕೇಳಿದಳು. ಆತನು, ಪ್ರಿಯೆ, ನಾನಾದರೂ ನೀನು ಗಂಡನೆಂದು ಹೇಳಿದ ಗೂನು ಮನುಷ್ಯನಂತಿರುವವನಲ್ಲ. ನನ್ನ ಹೆಸರು ಬದರೋದೀನು ಹರ್ಷೀ, ಎಂದು ಹೇಳಲು, ಆಕೆ, ಇದೇನು ನನ್ನ ಗಂಡನನ್ನು ನಿಂದಿಸುತ್ತಿರುವೆ ಎಂದು ಕೇಳಿದಳು, ಅಯ್ಯೋ ! ನಾನೇ ನಿನ್ನ ಗಂಡನಾಗಿರುವಲ್ಲಿ, ನಾನು ಯಾರನ್ನು ನಿಂದಿಸಲಿ ! ಆ ಗೂನನು ಕುದುರೆಯ ಚಾಕರನೇ ಹೊರತು ನಿನ್ನಗಂಡನೆಂದಿಗೂ, ಅಲ್ಲ, ಸುಲತ್ತಾನನು ನಿಮ್ಮ ತಂದೆಯನ್ನು ಪರಿಹಾಸವಮಾಡುವುದಕ್ಕಾಗಿ, ಹೀಗೆ ಮಾಡಿದನೆಂಬುದು, ವಿವಾಹ ಮಂಟಪದಲ್ಲಿ ನೆರೆದಿದ್ದವರೆಲ್ಲರೂ, ಮಾಡುತ್ತಿದ್ದ ಹಾಸ್ಯದಿಂದಲೇ ನಿನಗೆ ಗೊತ್ತಾಗಿರಬಹುದು, ಈಗ ಆ ಗೂನನು, ಕುದುರೆಲಾಯದಲ್ಲಿ ಹುರಳಿಯನ್ನು ತಿನ್ನುತ್ತಾ ಕುಳಿತಿರುವನು. ಇನ್ನು ಆತನ ಮಾತನ್ನು ಮರೆತುಬಿಡು, ನಾನೇ ನಿನ್ನ ಗಂಡನಲ್ಲದೆ, ಆ ಗೂನನ್ನು ಪುನಹ ನಿನ್ನ ಕಣ್ಣಿಗೆ ಕಾಣಬರನು ಎಂದು, ಬದರೋದೀನನು ಹೇಳಿಬಿಟ್ಟನು. ಆ ಮಾತುಗಳನ್ನು ಕೇಳಿ, ಅಂತಃಪುರವನ್ನು ಸೇರುವ ಕಾಲದಲ್ಲಿ ಸತ್ತವಳಂತೆ ಉತ್ಸಾಹ ಹೀನಳಾಗಿದ್ದ ಮಂತ್ರಿ ಪುತ್ರಿಯ ಸಂತೋಷವು, ಅಧಿಕವಾಗಿ ಮುಖವು ಮೋಹರಸವನ್ನು ಸುರಿಸುತ್ತಾ, ಇದ್ದುದನ್ನು ನೋಡಿ ಬದರೋದೀನನು ಆನಂದ ಪರವಶನಾದನು.

ಆಗ ಮಂತ್ರಿ ಪುತ್ರಿಯು, ಪ್ರಿಯಕಾಂತನೇ ! ನಾನು ನಿನ್ನಂತಹ ಸುಂದರಾಂಗನ, ಸಂಗಸುಖದಿಂದ ಸಂತೋಷವನ್ನು, ಹೊಂದುವೆನೆಂದು ಸ್ವಪ್ನದಲ್ಲಿಯೂ ತಿಳಿದಿರಲಿಲ್ಲ. ಆದರೆ ಆ ಕುರೂಪಿಯಾದ ವರನನ್ನು ಮದುವೆಯಾಗಿ, ಯಾವಜ್ಜೀವವು, ದುಃಖಸಾಗರದಲ್ಲಿ ಮುಳುಗಿ ತೇಲುವುದಕ್ಕೆ ಸಿದ್ಧಳಾಗಿದ್ದೆನು. ನನ್ನ ಅದೃಷ್ಟವಶದಿಂದ, ನಿನ್ನಂತಹಸುಂದರಾಂಗನು ದೊರೆತುದರಿಂದ, ಭಗವಂತನು ಸಂಪೂರ್ಣ ಕಟಾಕ್ಷವನ್ನು ತೋರಿದಂತೆ, ನಾನು ಭಾವಿಸುವೆನೆಂದು ಹೇಳಿ, ಆತನನ್ನು ಆಲಿಂಗಿಸಿಕೊಂಡು,

ಶಯನಾಲಂಕಾರ ಭೂಷಿತೆಯಾಗಿ, ಪರ್ಯಂಕವನ್ನು, ಹತ್ತಿದಳು. ಬದರೋದೀನನು, ತನ್ನ ಉಡುಪುಗಳನ್ನು ಬದಲಾಯಿಸಿ, ತನ್ನ ಮೂವನು ತನಗಾಗಿ ಹೊಲಿಸಿ, ಉಡುಗೆರೆಗಾಗಿ ಇಟ್ಟಿದ್ದ, ರಾತ್ರಿಯ ವುಡುಪನ್ನು ಹಾಕಿಕೊಂಡು, ಹಣದ ಚೀಲವನ್ನು ತನ್ನ ವೊದಲಿನ ಉಡುಪನ್ನು, ಒಂದು ಕುರ್ಚಿಯಮೇಲಿಟ್ಟು, ತಾನು ಮಂಚವನ್ನು ಹತ್ತಿ ಸುಖ ಶಯನಲ್ಲಿದ್ದನು. ಎಂದು ಷಹರಜಾದಿ ಕಥೆಯನ್ನು ನಿಲ್ಲಿಸುವ ಕಾಲಕ್ಕೆ ಸರಿಯಾಗಿ ಸೂರ್ಯೋದಯವಾಯಿತು. ಆದುದರಿಂದ ಮರುದಿನ ಬೆಳಗಿನ ಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೧೦೪ನೆಯ ರಾತ್ರಿ ಕಥೆ

ಷಹರಜಾದಿ ಸುಲ್ತಾನರನ್ನು ಕುರಿತು, ಸ್ವಾಮಿ! ಪ್ರಧಾನ ಮಂತ್ರಿಯಾದ ಗಯೆಘರನು, ಕಲೀಫನನ್ನು ಕುರಿತು ಇಂತೆಂದು ಹೇಳತೊಡಗಿದನು. ಬಳಿಕ ಆ ದಂಪತಿಗಳಿಬ್ಬರೂ, ಸುಖಶಯನದಲ್ಲಿ ಮಲಗಿ ನಿದ್ರೆ ಮಾಡುತ್ತಿರುವಾಗ, ಬೆಳಗಾಗುವುದಕ್ಕೆ ಸ್ವಲ್ಪವೇ ಹೊತ್ತಿರುವುದನ್ನು ನೋಡಿ, ಆ ಯೆಕ್ಷಕನ್ನಿಕೆಯು, ನಾನು ಇದುವರಿವಿಗೂ ಪ್ರಯತ್ನವಮಾಡಿ ನಡೆಸಿದಕಾರ್ಯವನ್ನು ಪೂರ್ತಿ ಗೊಳಿಸುವುದಕ್ಕಿದೆ ಸಮಯವಾಗಿರುವುದು. ಬೆಳಗಾದಮೇಲಾದರೆ, ನನ್ನ ಕಾರ್ಯಕ್ಕೆ ಅಡ್ಡಿಯುಂಟಾಗುವುದೆಂದು ತಿಳಿದು, ಆ ಯುವಕನನ್ನು ನಿದ್ರೆ ತಿಳಿಯದಂತೆ ಎತ್ತಿಕೊಂಡು, ಆತನು ಹಾಕಿಕೊಂಡಿರುವ ಉಡುಪನ್ನು ಸಹ ಬದಲಾಯಿಸದಂತೆ, ರಾಕ್ಷಸನನ್ನು ಹಿಂದೆ ಕರೆದು ಕೊಂಡು, ಆಕಾಶಮಾರ್ಗಕ್ಕೆ ನೆಗೆದು, ಸಿರಿಯಾ ದೇಶದಲ್ಲಿರುವ, ದಮಾಸ್ಕಸ್ ಪಟ್ಟಣದ ಬಳಿಗೆ ಬಂದು, ನೋಡುವಲ್ಲಿ ಆ ಪಟ್ಟಣದ ಜನರು ಪ್ರಭಾತಕಾಲವ ವಂದನೆಗಾಗಿ ಎಚ್ಚತ್ತಿತ್ತು. ತಮ್ಮ ಕಾರ್ಯಗಳನ್ನು ಮಾಡುತ್ತಿದ್ದರು. ಆದುದರಿಂದ ಆ ಯೆಕ್ಷಿಣಿಯೂ, ರಾಕ್ಷಸನೂ, ಮಂತ್ರಿ ಪುತ್ರನನ್ನು ಆ ಪುರದ್ವಾರದ ಬಳಯಲ್ಲಿರುವ ಬಂದಾನೊಂದು, ಗುಡ್ಡದ ಸಮಿಾಪದಲ್ಲಿ ಮಲಗಿಸಿ ಹೊರಟು ಹೋದರು.

ಬಳಿಕ ಆ ಪುರದ್ವಾರವು ತೆರೆಯಲ್ಪಟ್ಟು, ತಂಡ ತಂಡವಾಗಿ ಹೊರಗೆ ಬಂದ ಜನರು ಗುಡ್ಡದ ಬಳ ಮಲಗಿರುವ ಬದರೋದೀನನ್ನು ನೋಡಿ

ನಾನಾವಿಧವಾಗಿ ತಮತಮಗೆ ತೋರಿದಂತೆ, ಮಾತನಾಡಿಕೊಳ್ಳುತ್ತಾ, ಆತನ ಸೌಂದರ್ಯವನ್ನು ಆಶ್ಚರ್ಯಪಟ್ಟು ನೋಡುತ್ತಿರುವಾಗ, ಬದರೋದೀನನು ಎಚ್ಚತ್ತನು. ಬಳಿಕ ತಾನಿರುವ ಸ್ಥಳವನ್ನು ತನ್ನ ಬಳಿಯಲ್ಲಿ ಗುಂಪು ಗುಂಪಾಗಿ ನೆರೆದಿರುವ ಜನರನ್ನು ನೋಡಿ, ಬದರೋದೀನನು, ಅವರಿಗಿಂತಲೂ, ಅತ್ಯಾಶ್ಚರ್ಯಯುಕ್ತನಾಗಿ, ಎಲ್ಲಿ ಘನವಂತರಾದ ದೊಡ್ಡಮನುಷ್ಯರುಗಳಿರಾ! ನಾನು ಈಗ ಯಾವಸ್ಥಳದಲ್ಲಿರುವೆನು? ನನ್ನನ್ನು ನೀವು ಏನು ಮಾಡಬೇಕೆಂದಿರುವಿರಿ! ಎಂದುಕೇಳಿದನು. ಆಗ ಆ ಗುಂಪಿನವರಲ್ಲಿ ಒಬ್ಬನು ತಮ್ಮಾ! ಇದು ದಮಾಸ್ಕಸ್ ಪಟ್ಟಣ, ನಾವು ಈ ಪೂರಿನ ಪ್ರಜೆಗಳು, ಈಗತಾನೆ ಪೂರಬಾಗಿಲನ್ನು ತೆರೆದುಕೊಂಡು ಹೊರಗೆ ಬಂದು, ನೀನು ಈ ಸ್ಥಿತಿಯಲ್ಲಿ ಬಿದ್ದಿರುವುದನ್ನು ಕಂಡೆವು, ಅಲ್ಲದೆ ಮತ್ತೇನು ನಮಗೆ ತಿಳಿಯದು, ನೀನು ರಾತ್ರಿಯೆಲ್ಲಾ ಇಲ್ಲಿ ಇದ್ದೆಯಾ? ಎಂದು ನುಡಿಯಲು, ಬದರೋದೀನನು, ಅಹಾ! ಇದುದಮಾಸ್ಕಸ್ ಪಟ್ಟಣವೆ! ನೀವೆಲ್ಲರೂ ನನ್ನನ್ನು ನೋಡಿ, ಪರಿಹಾಸ ಮಾಡುತ್ತಿರುವಿರಲ್ಲಾ! ನಾನಾದರೂ, ನಿನ್ನೆ ರಾತ್ರಿ ಕೈರೋ ಪಟ್ಟಣದಲ್ಲಿದ್ದೆನಲ್ಲಾ! ಎಂದು ಅಂಗಲಾಚಿದನು, ಅದನ್ನುಕೇಳಿ ಆ ಜನರು ಕನಿಕರಯುಕ್ತರಾಗಿ, ಆಹಾ! ಇದೆಂತಹ ವ್ಯಸನಕರವಾದ ಸ್ಥಿತಿ, ಇಂತಹ ಯೌವನ ಪುರುಷನಿಗೆ ಹುಚ್ಚು ಹಿಡಿದಿರುವುದಲ್ಲಾ! ಎಂದು ಹೇಳುತ್ತಾ ಹೊರಟು ಹೋದರು.

ಆಗೊಬ್ಬ ಮುದುಕನು ಆತನ ಬಳಿಗೆ ಬಂದು, ಮಗುವೆ, ನೀನು ನೆನ್ನೆಯರಾತ್ರಿ ಕೈರೊ ನಗರದಲ್ಲಿದ್ದೆಯೆಂದು, ಹೇಳಿದೆ, ಈಗಲಾದರೂ, ಈ ದಮಾಸ್ಕಸ್ ಪಟ್ಟಣದ ಬಳಿ ಬಿದ್ದಿರುವೆಯೆಲ್ಲಾ! ಇದನ್ನು ನಂಬುವುದು ಹೇಗೆ ಎಂದು ನುಡಿಯಲು, ಅಯ್ಯಾ! ಇದೆಲ್ಲವೂ ಸತ್ಯವೇ ಹೊರತು, ಎಂದಿಗೂ ಅಸತ್ಯವಲ್ಲ. ನೆನ್ನೆ ಹಗಲಿನಲ್ಲಿ ನಾನು ಬಾಲಸೂರಿನಲ್ಲಿದ್ದೆನೆಂದು, ಪ್ರಮಾಣ ಪೂರ್ವಕ ಹೇಳುವೆನೆನಲು, ಅವರುಅಯ್ಯೋ, ಈತನು ನಿಜವಾಗಿಯೂ ಹುಚ್ಚನೇ ಸರಿ! ಇವನಿಗೆ ಸಂಭವಿಸಿರುವ ದುರವಸ್ಥೆಯನ್ನು ನೋಡುವುದಕ್ಕೆ ಯಾರಿಂದ ಸಾಧ್ಯವಾದೀತೆಂದು ಕನಿಕರದಿಂದ ಮಾತೂ ಆತನನ್ನು ಕುರಿತು, ಅಯ್ಯೋ ನೀನು ನಿನ್ನೆದಿನ ಬಾಲಸೂರಿನಲ್ಲೂ, ರಾತ್ರಿ ಕೈರೋವಿನಲ್ಲೂ, ಈಗ ದಮಾಸ್ಕಸ್ಸಿನಲ್ಲೂ ಇರುವೆನೆಂದು ಹೇಳಿದೆಯಲ್ಲಾ! ಇದನ್ನು ಹೇಗೆ ನಂಬುವುದೆಂದು ನುಡಿಯಲು,

ಅಯ್ಯೋ ! ನಿಜವಾಗಿಯೂ ನಿನ್ನೆರಾತ್ರಿ ನನಗೆ ಕೈರೊನಗರದಲ್ಲಿ ವಿವಾಹವು ಜರಗಿತಲ್ಲಾ ! ಎಂದು ಹೇಳಿದನು. ಆ ಮಾತನ್ನುಕೇಳಿ ಅವರು ಮತ್ತಷ್ಟು ನಕ್ಕು ಅಯ್ಯಾ ! ನೀನು ಹೇಳುವುದೆಲ್ಲ ಸುಳ್ಳು ನೀನು ಮನೋರಾಜ್ಯದಲ್ಲಿ ಮತ್ತನಾಗಿರುವಂತೆ ತೋರುವುದು, ಬಿಡು ! ನಿನ್ನ ಈ ಮತ್ತನ್ನು ತೊರೆದು ತಿಳುವಳಿಕೆಯಿಂದ ಮಾತನಾಡೆಂದು ಹೇಳಿದರು, ಅಯ್ಯಾ ! ತಿಳಿದೆ ಮಾತ ನಾಡುತ್ತಿರುವೆನು. ಕೈರೊರಾಜ್ಯದಲ್ಲಿ ನನ್ನನ್ನು ಮದುವೆಮಾಡಿಕೊಂಡ ಹುಡುಗಿ ಏಳುಸಾರಿ ಉಡುಪುಗಳನ್ನು ಬಟ್ಟೆಗಳನ್ನು ಧರಿಸಿಕೊಂಡು, ನನ್ನಮುಂದೆ ಬಂದುದೂ, ಕುರೂಪಿಯಾದ ಪುರುಷನಿಗೆ ಅವಳನ್ನು ಕೊಡ ಬೇಕೆಂದಿದ್ದುದೂ, ಆದರೂ ನನ್ನ ಅದೃಷ್ಟದಿಂದ ಆ ಹುಡುಗಿಯನ್ನು ಕೊಟ್ಟ ವಿವಾಹಮಾಡಿದುದೂ, ನನ್ನ ಉಡುಪುಗಳನ್ನು ಸೆಕ್ವಿನುಗಳ ಚೀಲವನ್ನು ತೆಗೆದು ಒಂದು ಕುರ್ಚಿಯೆಮೇಲಿಟ್ಟ ನಾನು ಮಂಚದಲ್ಲಿ ಮಲಗಿಕೊಂಡುದೂ ಸಹ ಸ್ವಪ್ನದಲ್ಲಿ ಹೇಗೆ ಪ್ರತ್ಯಕ್ಷವಾದೀತು, ನೀವೇ ಹೇಳಿ. ಈಗ ನಾನುಹೇಳಿದ ಸಂಗತಿಗಳೆಲ್ಲವೂ ನಿಜವಾಗಿಯೂ ಸತ್ಯ ವೆಂದು ಆತನು ಎಷ್ಟು ಹೇಳಿದಾಗ್ಯೂ ಜನಗಳಿಗೆ ನಂಬಿಕೆಯುಂಟಾಗದೆ, ಮತ್ತಷ್ಟು ನಗಲಾರಂಭಿಸಿದರು. ಅದನ್ನುನೋಡಿ ಬದರೋದೀನನು ಸಂದೇಹಯುಕ್ತನಾಗಿ ತಾನು ಇದುವರೆಗೂ ಅನುಭವಿಸಿದುದು ನಿಜವೊ ಅಥವಾ ಸುಳ್ಳೊ ಕಾಣೆನಲಾ ! ಎಂದು ಚಿಂತಿಸುತ್ತಿದ್ದನೆಂದು ಹೇಳಿ, ಷಹರಜಾದಿ ಬೆಳಗಾದಕೂಡಲೆ ಕಥೆಯೆನ್ನು ನಿಲ್ಲಿಸಿ, ಮರಳಿ ಬೆಳಗಿನ ಜಾವದಲ್ಲಿ ಹೇಳಲಾರಂಭಿಸಿದಳು.

೧೦೫ನೆಯ ರಾತ್ರಿ ಕಥೆ.

ಕಲೀಫರೇ ! ಬಳಿಕ ಬದರೋದೀನನು, ಅಯ್ಯಾ ! ನಾನಿದು ವರಿಗೂಹೇಳಿದ ಸಂಗತಿಗಳೆಲ್ಲವೂ, ವಾಸ್ತವ್ಯವಾದವುಗಳೇ ಎಂದುಹೇಳುತ್ತಾ ಬೀದಿಯೆಲ್ಲಿ ಹೋಗುತ್ತಿರುವಾಗ, ಊರಿನವರೆಲ್ಲರೂ ಬಂದು ಆತನನ್ನು ನೋಡುತ್ತಾ, ಓ ಹುಚ್ಚಾ ! ಎಲೆ ಮರುಳಾ ! ಎಂದು ಕೂಗಲಾರಂಭಿಸಿ ದರು. ಅದರಲ್ಲಿಯೂ ಕೆಲವರು ಆತನನ್ನುಬಿಡದೆ ಬೆನ್ನುಹತ್ತಿ ಬಾಧಿಸು ತ್ತಿದ್ದರು. ಹೀಗಿರುವಲ್ಲಿ ಬದರೋದೀನನು, ಒಂದಾನೊಂದು ರೊಟ್ಟಿ ಯಂಗಡಿಯ ಬಳಿಗೆಬಂದು, ತನ್ನನ್ನು ಬೆನ್ನಟ್ಟಬಂದಿರುವ ಜನರನ್ನು

ತಪ್ಪಿಸಬೇಕೆಂದು ಅದರೊಳಕ್ಕೆ ತೂರಿಕೊಂಡನು ; ಆ ಅಂಗಡಿಯವನು ಮೊದಲು ಅರಬೀದೇಶದವನಾಗಿ ಮುಸ್ಲಾದಾಚಾರಗಳ ಗುಂಪಿಗೆ ಬೆಜಮಾನನಾಗಿ ದೊಡ್ಡಿಕೊಳ್ಳುವಂತಹ ಕೂರಕೃತ್ಯವನ್ನು ಮಾಡುತ್ತಿದ್ದ ರಿಂದ ಮಾಸ್ಕಸ್ ನಗರದಲ್ಲಿ ರೊಟ್ಟಿಯಂಗಡಿಯನ್ನಿಟ್ಟಿರುವನೆಂಬುದನ್ನು, ಆ ಜನರು ಚೆನ್ನಾಗಿತಿಳಿದಿದ್ದರಿಂದ, ಆತನಬಳಿಗೆ ಹೋಗಲು ಹೆದರಿ, ಜನರೆಲ್ಲ ಚದರಿಹೋಗಿ ಮೂಲೆಗೊಬ್ಬೊಬ್ಬರಂತೆ ಸೇರಿಕೊಂಡರು. ಆಗ ಅಂಗಡಿಯವನು ಬದರೋದೀನನನ್ನು ಕರೆದು, ಅಯ್ಯಾ ! ನೀನು ಯಾರು ? ಎಲ್ಲಿಂದಬಂದೆ ? ಇಲ್ಲಿಗೆ ನಿನ್ನನ್ನು ಕರೆದುತಂದವರು ಯಾರು ? ಎಂದು ಕೇಳಲು, ಆತನು ತನ್ನ ಜನನಾರಭ್ಯ ಈವರಿಗೂ ನಡೆದ ಸಂಗತಿಗಳನ್ನು, ಪ್ರಧಾನ ಮಂತ್ರಿಯಾದ ತನ್ನತಂದೆಯ ಮರಣವನ್ನೂ, ತಾನು ಬಾಲಸೂರನ್ನುಬಿಟ್ಟು ತಂದೆಯ ಗೋರಿಬಳಿ ಮಲಗಿಕೊಂಡೇಳುವಷ್ಟರಲ್ಲಿ, ಕೈರೋವನ್ನು ಅಲ್ಲಿ ವಿವಾಹಮಾಡಿಕೊಂಡು, ಮಲಗಿದ್ದೇಳುವಷ್ಟರಲ್ಲಿಯೇ ದಮಾಸ್ಕಸ್ಸನ್ನು ಸೇರಿದುದು ಇದಕ್ಕಾಗಿ ತನಗುಂಟಾಗಿರುವ ಆಶ್ಚರ್ಯವನ್ನುಸಹ ವಿಸ್ತಾರವಾಗಿ ಹೇಳಿದನು.

ಆಗ ಅಂಗಡಿಯವನು ಆಹಾ ! ನಿನ್ನಿಚರಿತ್ರೆಯು ಬಹು ಆಶ್ಚರ್ಯಕರವಾದುದು. ನಾನು ಹೇಳುವಂತೆ ನೀನು ಕೇಳುವೆಯಾದರೆ, ನಿನಗೆ ಸುಖ ಉಂಟಾಗುವುದು, ಏನಂದರೆ:-ನೀನು ನಿನ್ನಚರಿತ್ರೆಯನ್ನು ಮತ್ತಾರಿಗೂ ಹೇಳದೆ, ಭಗವಂತನು ನಿನ್ನಮೇಲೆ ಕರುಣವನ್ನು ತೋರುವವರೆಗೂ, ನನ್ನಬಳಿಯಲ್ಲಿರು. ನನಗೆ ಸಂತಾನ ಹಾನಿಯಾಗಿರುವುದರಿಂದ, ನಾನು ನಿನ್ನನ್ನು ಪುತ್ರನನ್ನಾಗಿ ಸ್ವೀಕರಿಸುವೆನು. ಬಳಿಕ ನೀನು ಈ ಪಟ್ಟಣದಲ್ಲೆಲ್ಲಿ ಸಂಚರಿಸಿದರೂ, ನಿನ್ನನ್ನು ಮಾತನಾಡಿಸತಕ್ಕವರೇ ಇಲ್ಲ. ನೀನು ಇಷ್ಟಪಡುವುದಾದರೆ ನಾನು ಅದರಂತೆ ನಡೆಸುವೆನೆಂದು ಹೇಳಿದನು. ಆಗ ಬದರೋದೀನನನು ಮಂತ್ರಿಪುತ್ರನಾಗಿರುವುದಕ್ಕಿಂತಲೂ ಈ ರೊಟ್ಟಿಗಾರನ ಮಗನಾಗುವುದು ತನಗವಮಾನಕರವೆಂದು ತಿಳಿದುಕೊಂಡಿದ್ದರೂ ಸಮಯಾನುಸಾರವಾಗಿ ಒಪ್ಪಿಕೊಂಡುದರಿಂದ ಅಂಗಡಿಯವನು ಆತನಿಗೆ ಬಟ್ಟೆಬರೆಗಳನ್ನುಕೊಟ್ಟು, ರಾಜೌಧಿಕಾರಿಗಳಬಳಿಗೆ ಹೋಗಿ ಈತನನ್ನು ನಾನು ಪುತ್ರನಾಗಿ ಸ್ವೀಕರಿಸುವೆನೆಂದು ಹೇಳಿ, ಪತ್ರವೆಪತ್ರವನ್ನು ಬರೆಸಿದನು. ಬಳಿಕ ಬದರೋದೀನನು ಆ ರೊಟ್ಟಿಯಂಗಡಿಯವನ ಮಳಿಗೆಯಲ್ಲಿ ಅಡಿಗೆ

ಯನ್ನುಕಲಿಯುತ್ತಾ ಇದ್ದನು. ಹೀಗಿರುವಾಗ ಕೈರೋನಗರದಲ್ಲಿ ಮಂತ್ರಿ ಪುತ್ರಿಯು ಎಚ್ಚತ್ತು ತನ್ನಪಕ್ಕದಲ್ಲಿದ್ದ ಗಂಡನು ಇಲ್ಲದಿರುವುದರಿಂದ, ಆಹಾ ! ನಾನು ಎಚ್ಚರವಾಗಿ ನಿದ್ರೆಯನ್ನು ತೊರೆದೆನೆಂದು, ನನ್ನಗಂಡನು ಮೊತ್ತಗೆ ಎದ್ದುಹೋಗಿರಬೇಕು, ಪುನಹ ಇಲ್ಲಿಗೆಬಂದೇಬರುವನೆಂದು ಎದುರು ನೋಡುತ್ತಾ ಇದ್ದಳು. ಇತ್ತ ಸುಲ್ತಾನನು ತನಗೆಮಾಡಿದ ದುಷ್ಕೃತ್ಯ ದಿಂದ, ಅತ್ಯಂತ ವ್ಯಸನಾಕ್ರಾಂತನಾದ ಮಂತ್ರಿಯು ತನ್ನ ಮಗಳು ಹೊಂದಿರುವ ದುರ್ದಶೆಗಳನ್ನು ನೋಡಬೇಕೆಂದು, ಅವಳು ಮಲಗಿಕೊಂಡಿ ರುವ ಮನೆಯ ಬಾಗಲಿಗೆ ಬಂದು, ಕದವನ್ನು ತಟ್ಟಿದನು. ಆತನ ದನಿ ಯಿಂದ ತಂದೆಯಂದರಿತು ಬಾಗಿಲನ್ನು ತೆಗೆದು, ಸಂತೋಷದಿಂದ ಬರಮಾಡಿ ಕೊಂಡಳು. ಆ ಮಂತ್ರಿಯಾದರೋ ತನ್ನ ಮಗಳು ಕುರೂಪಿಯೆನ್ನು ಮದುವೆ ಮಾಡಿಕೊಂಡುದರಿಂದ ವ್ಯಸನಾಕ್ರಾಂತಳಾಗಿ, ಚಿಂತಿಸುವಳೆಂದು ಯೋಚಿಸಿ ನೋಡುವುದಕ್ಕೆ ಬಂದಾಗ ಸಂತೋಷಚಿತ್ತಳಾಗಿರುವ ಮಗಳನ್ನು ಕಂಡು, ಎಲೆಗೆ ನಿರ್ಭಾಗ್ಯಶಿರೋಮಣಿ ! ನೀನು ಅಂತಹ ಕುರೂಪಿಯಾದ ಪುರುಷನನ್ನು ಮದುವೆ ಮಾಡಿಕೊಂಡು, ನನ್ನಮುಂದೆ ಇಷ್ಟೊಂದು ಆನಂದದಿಂದಿರುವೆಯೋ ? ಎಂದು ಗಟ್ಟಿಯಾಗಿ ಕೂಗಿ ಹೇಳಿದನು. ಇಂತೆಂದು ಹೇಳಿ ಬೆಳಗಾದಕೂಡಲೆ ಕಥೆಯನ್ನು ನಿಲ್ಲಿಸಿದ, ಷಹರಜಾದಿ ಮರುದಿನ ಬೆಳಗಿನ ಜಾವದಲ್ಲಿ ಹೇಳಲಾರಂಭಿಸಿದಳು.

೧೦೬ ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನನನ್ನು ಕುರಿತು, ಆಳಿದ ಮಹಾ ಸ್ವಾಮಿಾ ! ಬಳಿಕ ಗಯಫರನೆಂಬ ಪ್ರಧಾನಮಂತ್ರಿಯು, ತನ್ನ ಯೆಜ ಮಾನನಾದ ಕಲೀಫನನ್ನು ಕುರಿತು ಇಂತೆಂದು ಹೇಳಲಾರಂಭಿಸಿದನು. ತನ್ನ ತಂದೆಯು, ತಪ್ಪು ಅಭಿಪ್ರಾಯದಿಂದ ತನ್ನನ್ನು ನಿಂದಿಸುತ್ತಿರುವ ನೆಂದು ತಿಳಿದು, ಮಂತ್ರಿಪುತ್ರಿಯು ತಂದೆಯೇ ! ಆ ಗೂನನು ನನ್ನಗಂಡ ನಲ್ಲ. ಆತನನ್ನು ಮದುವೆ ಮಾಡಿಕೊಳ್ಳುವದಕ್ಕಿಂತಲೂ ಸಾಯುವುದು ಮೇಲೆಂಬುದು ನನಗೆ ತಿಳಿದಿರುವುದು, ಮದುವೆಗಾಗಿ ಬಂದ ಜನರೆಲ್ಲರೂ, ಹುಸಿನಗೆಯಿಂದ ನಕ್ಕು ಪರಿಹಾಸ ಮಾಡಿದುದರಿಂದ ಆ ಗೂನನು ಎಲ್ಲಿಯೋ ಹೊರಟುಹೋದನು. ಬಳಿಕ ಸುಂದರಾಂಗನಾದ ಯುವಕನೊಬ್ಬನು ನನ್ನ ಪಾಣಿಗ್ರಹಣವನ್ನು ಮಾಡಿದುದರಿಂದ, ಆತನೇ ನನ್ನಗಂಡನೆಂದು

ಹೇಳಲು, ಮಂತ್ರಿಯು ಆಹಾ ! ಏನು ನಿನ್ನ ಬುದ್ಧಿಬಲದಿಂದ ಕಥೆಯನ್ನು ಕಲ್ಪಿಸಿ ಹೇಳುವೆಯಾ ? ನಿನ್ನ ರಾತ್ರಿ ಆ ಕುರೂಪಿಯು ನಿನ್ನ ಬಳಿಯಲ್ಲಿ ಮಲಗಿರಲಿಲ್ಲವೆ ? ಎಂದು ಕೇಳಿದನು. ಆಗ ಕುಮಾರ್ತೆಯು ತಂದೆಯನ್ನು ನೋಡಿ, ಅಪ್ಪಾ ! ನಾನು ನಿಮಗೆಹೇಳಿದ ಯೌವನಪುರುಷನೇ ನನ್ನನ್ನು ಪಾಣಿಗ್ರಹಣ ಮಾಡಿಕೊಂಡಿರುವನೆಂದು, ಖಂಡಿತವಾಗಿ ಹೇಳುವೆನೆಂದು ಹೇಳಿದಳು. ಆಗ ತಂದೆಯೂ ಆಹಾ ಮಾಯೆಗಾತಿ, ಇನ್ನೆಷ್ಟು ಚಮತ್ಕಾರವನ್ನು ಮಾಡುವೆ, ಆ ಗೂನನು ನಿಜವಾಗಿಯೂ ನಿನ್ನನ್ನು ಮದುವೆ ಮಾಡಿಕೊಳ್ಳಲಿಲ್ಲವೆ ? ಎಂದು ಕೇಳಲು, ತಂದೇ ! ವ್ಯರ್ಥವಾಗಿ ನನ್ನನ್ನು ಭ್ರಮಾಯುಕ್ತಳನ್ನಾಗಿ ಮಾಡುವೆಯೆಲ್ಲಾ ! ಆ ಹಾಳು ಗೂನನು ಹಾಳಾಗ ? ಇನ್ನು ಆತನ ಸಂಗತಿಯನ್ನು ನನ್ನೆದುರಿಗೆ ಹೇಳಬೇಡ ಎಂದು ನಿಂದಿಸಿ, ತಂದೆಯನ್ನುಕುರಿತು, ತಾತಾ ? ನಿಜವಾಗಿಯೂ ನಾನು ತಮ್ಮ ಸನ್ನಿಧಾನದಲ್ಲಿ ಪುನಹ ವಿಜೃಂಭಿಸಿಕೊಳ್ಳುವುದೇನಂದರೆ :=ನಾನು ಹೇಳಿದ ಸುಂದರಾಂಗನ ಅಂಗಸಂಗದಿಂದ ಅತ್ಯಾನಂದಭರಿತಳಾಗಿ, ನೆನ್ನೆ ರಾತ್ರಿಯೆನ್ನು ಕಳೆದೆನು. ಇದು ಖಂಡಿತವಾಗಿಯೂ ಸತ್ಯವಾದ ಮಾತು, ಆತನೂ ನನ್ನ ಬಳಿಯಲ್ಲಿಯೇ ಇರುವನೆಂದು ನಂಬಿಕೆಯಾಗಿ ನುಡಿದಳು. ಆಗ ಆ ಸುಂದರಾಂಗನನ್ನು ಹುಡುಕುವುದಕ್ಕಾಗಿ ಬಂದ ಮಂತ್ರಿಯು ಮಾರ್ಗದಲ್ಲಿ ತಲೆಕೆಳಗಾಗಿ ನೇತಾಡುತ್ತಾ ನಿಂತಿರುವ ಗೂನನನ್ನು ಕಂಡು, ಆಶ್ಚರ್ಯಯುಕ್ತನಾಗಿ, ನಿನ್ನನ್ನು ಯಾರು ಹೀಗೆಮಾಡಿದರೆಂದು ಕೇಳಿದನು. ಆ ಗೂನನು ಮಂತ್ರಿ ಎಂಬುದನ್ನು ತಿಳಿದುಕೊಂಡು, ಆಹಾ ! ಕೋಣನ ರೂಪವನ್ನು ಧರಿಸಿದ್ದ ರಾಕ್ಷಸನ ಹೆಂಡತಿಗೆ ನನ್ನನ್ನು ಮದುವೆ ಮಾಡಬೇಕೆಂದು ಯೋಚಿಸಿದೆಯೋ ? ನಾನೇನೂ ಹುಚ್ಚನಲ್ಲ. ನೀನು ನನ್ನನ್ನು ಮೋಸ ಮಾಡಲಾರೆ ಎಂದು ಹೇಳಿದನು. ಇಂತೆಂದು ಹೇಳಿ, ಷಹರಜಾದಿಯು ಕಥೆಯನ್ನು ನಿಲ್ಲಿಸಿ, ಬಳಿಗಿನ ಜಾವದಲ್ಲಿ ಮರಳಿ ಹೇಳಲಾರಂಭಿಸಿದಳು.

೧೦೭ ನೆಯ ರಾತ್ರಿಕಥೆ.

ಷಹರಜಾದಿ ಸುಲ್ತಾನರನ್ನು ಕುರಿತು, ಬಿಜ್ಞಯರೇ ! ಗಯೆಫರನು ಕಲೀಫರನ್ನುಕುರಿತು, ಕಥೆಯನ್ನುಹೇಳತೊಡಗಿದಳು. ಆ ಗೂನನು ಮಂತ್ರಿಯು ಹೇಳಿದ ಮಾತುಗಳನ್ನುಕೇಳಿ ಏನೇನೋ ಗೊಣಗುತ್ತಿರುವು

ದನ್ನುಕಂಡು, ಮಂತ್ರಿಯು ಆತನನ್ನು ಏಳು ಎಂದು ಹೇಳಿದನು. ಅಯ್ಯಾ! ನಾನು ಸೂರ್ಯೋದಯವಾಗುವವರಿಗೂ, ಏಳಕೂಡದೆಂದು ಹೇಳಿದ ರಾಕ್ಷಸನ ಮಾತುಗಳನ್ನು ನೆನಪಿನಲ್ಲಿಟ್ಟುಕೊಂಡಿರುವೆನೆಂದು ಹೇಳಿದನು. ಬಳಿಕ ಮಂತ್ರಿಯು ಅತ್ಯಾಶ್ಚರ್ಯಯುಕ್ತನಾಗಿ, ಆ ಗೂನನನ್ನು ಕೈಯ್ಯಿಂದೆತ್ತಿ ಮೇಲಕ್ಕೇಳಿಸಿಬಿಡಲು, ಆತನು ಭಯದಿಂದ ನಡುಗುತ್ತಾ ಓಡಿಹೋಗಿ ಸುಲ್ತಾನನ ಆಸ್ಥಾನದಲ್ಲಿ ನಿಂತು, ತನಗೆಸಂಭವಿಸಿದ ದುರವಸ್ಥೆಯೆನ್ನೆಲ್ಲಾ ಹೇಳಿಕೊಳ್ಳಲು, ಆತನು ನಕ್ಕು ಬಹುವಾಗಿ ಪರಿಹಾಸಮಾಡಿ ಕಳುಹಿಸಿದನು.

ಬಳಿಕ ಷಂಸುದೀನುಮಹಮ್ಮದನು, ಇದೇನೋ ವಿಚಿತ್ರಕರವಾದ ಸಂಗತಿಯು ನಡೆದಿರುವುದು, ಇದರ ಮೂಲವನ್ನು ಹೇಗಾದರೂ ಗೊತ್ತುಮಾಡಿ ತಿಳಿದುಕೊಳ್ಳಬೇಕೆಂದು, ಮರಳಿ ತನ್ನ ಮಗಳ ಅಂತಃಪುರವನ್ನು ಸೇರಿ, ತನ್ನ ಮಗಳನ್ನುಕುರಿತು, ಅಮ್ಮಾ! ನಿನ್ನೆರಾತ್ರಿ ನಡೆದ ವಾಸ್ತವ್ಯವಾದ ಸಂಗತಿಯೆನ್ನುಕುರಿತು ವಿವರಿಸಿ ಹೇಳಲಾರೆಯಾ? ಎಂದು ಕೇಳಲು, ಆಕೆ ತಂದೆ! ನಾನು ಮೊದಲು ಹೇಳಿದುದಕ್ಕಿಂತಲೂ, ಅತಿಶಯವಾಗಿ ಮತ್ತೇನನ್ನು ಹೇಳಲಾರೆನು. ಇಗೋ ಇಲ್ಲಿ ನನ್ನಗಂಡನು ಧರಿಸಿಕೊಂಡಿದ್ದ ಬಟ್ಟೆಗಳಿರುವುವು. ಅದನ್ನು ನೋಡಿದರೆ ನಿನಗೆ ಗೊತ್ತಾಗುವುದೆಂದು ನುಡಿದು, ತನ್ನಗಂಡನು ತಲೆಗೆ ಸುತ್ತಿಕೊಂಡಿದ್ದ ಪಾಗನ್ನು ತೆಗೆದು ತೋರಿಸಿದಳು, ಆತನು ಅದನ್ನು ಚೆನ್ನಾಗಿ ತಿರುಗಿಸಿ ನೋಡಿ ಇದು ಮುಸೌರಿದೇಶದ ವಜೀರರು ಸುತ್ತುವಂತಹ ಪಾಗಿನಂತೆ ತೋರುತ್ತಿರುವದಲ್ಲಾ! ಎಂದು ಕೊನೆಯಲ್ಲಿ ಗಂಟುಹಾಕಿದ್ದ ಒಂದು ಕಟ್ಟನ್ನು ಬಿಚ್ಚಿನೋಡಲು, ನೌರೋದೀನನು ತನ್ನ ಅಂತ್ಯಕಾಲದಲ್ಲಿ, ತನ್ನ ಮಗನಾದ ಬದರೋದೀನನಿಗೆ ಕೊಟ್ಟ ಕಾಗದ ಪುಸ್ತಕವನ್ನು ತೆಗೆದು, ಆ ಪಾಗನ್ನು ತನ್ನ ಕುರ್ಚಿಯಮೇಲಿಟ್ಟುಕೊಂಡು, ಆ ಪುಸ್ತಕವನ್ನು ನೋಡುತ್ತಿರುವಾಗ ಅದರಲ್ಲಿರುವ ತನ್ನ ತಮ್ಮನ ಕೈಬರವಣಿಗೆಯನ್ನು ನೋಡಿ, ಮಗನಾದ ಬದರೋದೀನಲ್ಲಿಗೆ ಎಂದು ಬರೆದಿರುವ ಮೇಲುವಿಳಾಸವನ್ನು ಓದುತ್ತಾ ಇದ್ದನು. ಆಗ ಮಂತ್ರಿಪುತ್ರಿಯು ತನ್ನಗಂಡನು ಬಿಟ್ಟುಹೋಗಿದ್ದ, ಸೆಕ್ವೆಸುಗಳ ಚೀಲವನ್ನು ತೆಗೆದು ಆತನಕೈಗೆ ಕೊಟ್ಟಳು, ಆತನು ಅದನ್ನು ಬಿಚ್ಚಿ ನೋಡುವಲ್ಲಿ, ಚೀಲದ ತುಂಬ ನಾಣ್ಯಗಳಿದ್ದವು. ಬದರೋದೀನನು, ಎಷ್ಟೆಷ್ಟು ಖರ್ಚುಮಾಡಿದ್ದನೊ ಅಷ್ಟಷ್ಟು ಹಣವು ರಾಕ್ಷಸರ

ಮಹಿಮೆಯಿಂದ ಹೆಚ್ಚಿ ಹೋಗಿದ್ದಿತು. ಬಳಿಕ ಅದರಲ್ಲಿರುವ ಚೀಟಿಯನ್ನು ಕಂಡು, ಮಂತ್ರಿಯು ಕೈಗೆ ತೆಗೆದುಕೊಂಡು, ಬದರೋದೀನನ ತಂದೆಯಾದ, ನೌರೋದೀನನ ಹಡಗುಗಳಲ್ಲಿ ಮೊದಲು ಬರುವ ಸರಕುಗಳು ರೇವನ್ನು ಸೇರಿದಕೂಡಲೆ, ಯಾರಾದರೂ ಸರಿಯೆ ಅವನ್ನು ಹಿಪ್ಪಾಕನ ಸ್ವಾಧೀನವಾಡಬೇಕು, ನಾನು ಆತನಿಂದ ಬಂದುಸಾವಿರ ಸೆಕ್ವೆಸುಗಳನ್ನು ತೆಗೆದುಕೊಂಡು, ಸರಕುಗಳನ್ನು ಮಾರಿರುವೆನೆಂದು ಬರೆದಿರುವುದನ್ನು ನೋಡಿದ ಕೂಡಲೆ, ಷಂಸುದೀನ್ ಮಹಮ್ಮದನು ಮೂರ್ಛಾಕ್ರಾಂತನಾದ ನೆಂದು ಹೇಳಿ, ಷಹರಜೌದಿ ಕಥೆಯನ್ನು ನಿಲ್ಲಿಸಿ ಎಂದಿನಂತೆ ಬೆಳಗಿನ ಜಾವ ದಲ್ಲಿ ಹೇಳತೊಡಗಿದನು.

೧೮೪ನೆಯ ರಾತ್ರಿ ಕಥೆ.

ಷಹರಜೌದಿ ಸುಲ್ತಾನನ್ನು ನೋಡಿ, ಪ್ರಿಯರೇ ! ಗಯೆಫರನು, ಕಲೀಪರನ್ನು ಕುರಿತು, ಇಂತೆಂದು ಹೇಳತೊಡಗಿದನು :—ಬಳಿಕ ಮೂರ್ಛಾಕ್ರಾಂತನಾದ ಷಂಸುದೀನನು, ತನ್ನ ಮಗಳ ಶೈತ್ಯೋಪಚಾರದಿಂದ ಎಚ್ಚತ್ತು ಕುಳಿತು, ಪುತ್ರಿ ನೀನು ಹೇಳಿದ ಮಾತುಗಳನ್ನೂ ನಂಬತಕ್ಕವುಗಳಾಗಿಲ್ಲ ಇದರ ಕಾರಣವನ್ನು ಕೇಳಿದರೆ ನೀನು ಆಶ್ಚರ್ಯವನ್ನು ಹೊಂದುವೆ, ನಿನ್ನನ್ನು ಮದುವೆಮಾಡಿಕೊಂಡ ಪುರುಷನು, ನಿನ್ನ ಚಿಕ್ಕಪ್ಪನಾದ ನೌರೋದೀನಲ್ಲಿಯೆ ಕುಮಾರನು, ಈ ಚೀಲದಲ್ಲಿರುವ ಬಂದುಸಾವಿರ ಸೆಕ್ವೆಸುಗಳನ್ನು ನೋಡಿದಕೂಡಲೆ, ಪೂರ್ವದಲ್ಲಿ ನನಗೂ ನನ್ನ ತಮ್ಮನಿಗೂ ನಡೆದ ಬಂದಾನೊಂದು ವಿವಾದವು ಜ್ಞಾಪಕಕ್ಕೆ ಬರುವುದು. ಈ ಹಣವು ನಿನಗೆ ಆತನು ಬಲುವಳಿಯಾಗಿ ಕೊಟ್ಟ ಹಣವೆಂದು, ಸಿಸ್ಸಂದೇಹವಾಗಿ ಹೇಳಬಲ್ಲೆನು. ಇದೆಲ್ಲಕ್ಕೂ ಸರ್ವಶಕ್ತನಾದ ಭಗವಂತನದಯೆಯು ಈಗ ನಮ್ಮ ಅದೃಷ್ಟರೂಪವಾಗಿ ಪರಿಣಮಿಸಿದುದರಿಂದ, ನಾನು ಆತನನ್ನು ವಂದಿಸುವೆನು. ಅಲ್ಲದೆ ಈ ಕಾರ್ಯವು ಸರ್ವಶಕ್ತನಾದ ಭಗವಂತನ ಶಕ್ತಿಯೆನ್ನು ನಿದರ್ಶನವಾಡಿ ತೋರಿಸುವುದೆಂದು ನುಡಿದು, ತನ್ನನುಜನ ಕೈಬರಹವನ್ನು ನೋಡಿ, ಹಲವುಬಾರಿ ಮುತ್ತಿಟ್ಟುಕೊಂಡು ಅಳುತ್ತಾ ಇದ್ದನು. ಸ್ವಲ್ಪಹೊತ್ತಿನಮೇಲೆ ಆ ಪುಸ್ತಕವನ್ನು ತೆಗೆದುನೋಡುವಲ್ಲಿ ನೌರೋದೀನನು ಬಾಲಸೂರನನ್ನು ಸೇರಿದ ದಿನವೂ, ಆತನಿಗೆ ವಿವಾಹ ಮಾಡಿದ

ರ್ತಪ್ಪೂ, ಅವನ ಮಗಳು ಹುಟ್ಟಿದ ಕಾಲಪ್ಪೂ, ಸರಿಯಾಗಿ ತನ್ನನುಭವ ದಂತೆಯೂ, ತಾವು ಮೊದಲು ಮಾಡಿದ್ದ ಪ್ರತಿಜ್ಞೆಯಂತೆಯೂ ಇದ್ದುದ ರಿಂದ, ಅವನ್ನು ನೋಡಿ ಅತ್ಯಾಶ್ಚರ್ಯಪಟ್ಟನಾದನು. ದೈವಯೋಗದಿಂದ ನಡೆದಿರುವ ಈ ವಿಚಿತ್ರತರವಾದ ಸಂಗತಿಯನ್ನು ಆತನ ಬಟ್ಟೆಗಳನ್ನು ಆ ಪುಸ್ತಕವನ್ನು ತೆಗೆದುಕೊಂಡುಹೋಗಿ, ಮಂತ್ರಿಯು ಸುಲ್ತಾನನಿಗೆ ತೋರಿಸಲು, ಆತನು ಆನಂದಪಟ್ಟನಾಗಿ ಆಶ್ಚರ್ಯವನ್ನುಹೊಂದಿ, ಮಂತ್ರಿಯನ್ನು ಮನ್ನಿಸಿದ್ದಲ್ಲದೆ, ಈ ವಿಷಯವಾದ ಸಂಬಂಧವನ್ನು ವಂಶಪಾರಂಪರ್ಯವಾಗಿ ಅನುಭವಿಸುವಂತೆ ರಾಜಶಾಸನವನಿತ್ತನು. ಆದರೆ ಷಂಸುದೀನನು ತನ್ನ ತಮ್ಮನ ಮಗನನ್ನು ಕಾಣದೆ, ಆತನನ್ನು ಹುಡುಕಿಸುವುದಕ್ಕೂ ಶಕ್ತಿಸಾಲದೆ, ಎಂದಿಗೆ ಆತನು ಬರುವನು, ಅವನನ್ನು ನಾನೆಂದಿಗೆ ಆಲಿಂಗಿಸಿ ಕೊಳ್ಳುವೆನೆಂದು ಹಂಬಲಿಸುತ್ತಿದ್ದನು. ಈಪ್ರಕಾರದಿಂದೇಳುದಿನಗಳ ವರೆಗೂ ಎದುರುನೋಡುತ್ತಿದ್ದರೂ, ಅತನು ಬಾರದುದರಿಂದ ಕೈರೋ ಮೊದಲಾದ ಪಟ್ಟಣಗಳಲ್ಲಿ ಹುಡುಕಿಸಿ, ಎಲ್ಲಿಯೂ ಆತನ ಗುರುತೆ ಸಿಕ್ಕಲಿಲ್ಲವಾದುದರಿಂದ, ಮಂತ್ರಿಯು ಪ್ರಪಂಚದಲ್ಲಿ ನಡೆವ ವಿಚಿತ್ರ ಕಾರ್ಯಗಳಿಗಿಂತಲೂ, ಈ ಮದುವೆಯ ಕಾರ್ಯವು ಬಹು ಆಶ್ಚರ್ಯವಾಗಿ ನಡೆದಿರುವುದರಿಂದ, ಇನ್ನು ಮುಂದೆ ಏನಾಗುವುದೋ ನೋಡಬೇಕೆಂದು ಚಿಂತಿಸಿ, ಆ ಅಂತಃಪುರದಲ್ಲಿ ಪೂರ್ಣವಾದ ಚರಿತ್ರೆಯನ್ನು ತನ್ನ ಕೈಯಾರೆ ಬರೆದಿಟ್ಟುದಲ್ಲದೆ ಆ ಬದರೋದೀನಿನ ಸಾಮಾನುಗಳನ್ನು ಒಂದು ಬಟ್ಟೆಯಲ್ಲಿ ಕಟ್ಟಿ ಬೇರೆಕಡೆಯಲ್ಲಿ ಬಚ್ಚಿಟ್ಟನು ಎಂದು ಹೇಳಿ ಕಥೆಯನ್ನು ನಿಲ್ಲಿಸಿ, ಷಹರೆಜಾದಿ ಬೆಳಗಿನ ಜಾವದಲ್ಲಿ ತಿರುಗಿ ಹೇಳತೊಡಗಿದಳು.

೧೦೫ನೆಯ ರಾತ್ರಿಯ ಕಥೆ.

ಸುಲ್ತಾನರೇ ! ಪ್ರಧಾನಮಂತ್ರಿಯೆನಿಸಿದ ಗಯೆಘರನು, ಕಲೀಫರನ್ನು ಕುರಿತು ಇಂತೆಂದನು :— ಬಹಳ ಕೆಲವುದಿನಗಳವೇಲೆ ಮಂತ್ರಿಪುತ್ರಿಯು ಗರ್ಭವನ್ನು ಧರಿಸಿ ನವಮಾಸವು ಕಳೆದಮೇಲೆ ಒಂದು ಗಂಡು ಮಗುವನ್ನು ಹೆತ್ತಳು. ಆ ಮಗುವನ್ನು ದಾದಿಯರ ಮೂಲಕವಾಗಿ ಮೋಹದಿಂದ ಸಾಕಿಸುತ್ತಾ, ತನ್ನ ಸಂತೋಷಕ್ಕೆ ಪಾತ್ರನಾದ ಆ ಮಗನಿಗೆ ಏಜೀಬನೆಂದು ಹೆಸರನ್ನು ಇಡಿಸಿದಳು. ಆದರೆ ಆತನಿಗೆ ವಯಸ್ಸು ಬಂದ

ಮೇಲೆ, ಆತನಿಗೆ ಮನೆಯಲ್ಲಿ ಓದು ಹೇಳಸದೆ, ಒಬ್ಬಾನೊಬ್ಬ ವಿದ್ವಾಂಸನ ಮನೆಗೆ ಕರೆದುಕೊಂಡುಹೋಗಿ, ಪಾಠವನ್ನು ಕಲಿತಮೇಲೆ ಪುನಹ ಕರೆದು ಕೊಂಡು ಬರುವಂತೆ, ಇಬ್ಬರು ಸೇವಕರನ್ನು ನೇಮಿಸಿದ್ದನು. ಆ ಏಜೀಬನು ತಾನು ಓದುತ್ತಿರುವ ಕಾಲದಲ್ಲಿ ತನ್ನ ಸಹಪಾಠಿಗಳೊಂದಿಗೆ ಆಟವಾಡುತ್ತಾ ಇದ್ದನು. ಆತನು ಸ್ವಭಾವತಃ ಕೂರನಾದುದರಿಂದ, ಹುಡುಗರೆಲ್ಲರೂ, ಆತನನ್ನು ಗೌರವದಿಂದ ಕಾಣುತ್ತಿದ್ದರು. ಆ ಬಡ ಉಪಾಧ್ಯಾಯನು, ಇತರ ಹುಡುಗರ ತಪ್ಪನ್ನು ತಿದ್ದಿ ಶಿಕ್ಷಿಸಿದಂತೆ, ಈ ಮಂತ್ರಿಯ ಮೊಮ್ಮಗನನ್ನು ಶಿಕ್ಷಿಸದೆ, ದಾಕ್ಷಿಣ್ಯದಿಂದ ಸುಮ್ಮನಿರುತಿದ್ದುದರಿಂದ, ಏಜೀಬನು ಗರ್ವಿಷ್ಠನಾಗಿ, ತಾನೇ ದೊಡ್ಡವನೆಂದು ತಿಳದು, ತನ್ನ ಕೈಕೆಳಗೆ ಹುಡುಗರೆಲ್ಲರೂ, ಇರಬೇಕೆಂದು ತನ್ನ ತಪ್ಪನ್ನು ಮತ್ತಾರೂ, ಹೇಳಕೂಡದೆಂದು ಅಹಂಕಾರದಿಂದ ಅವರೆಲ್ಲರಿಗೂ, ಆಜ್ಞೆ ಮಾಡಿ ಅದಕ್ಕೆ ವಿರೋಧವಾಗಿ ನಡೆದವರನ್ನು ಹೊಡೆದು ಪೀಡಿಸುತ್ತಿದ್ದನು.

ಹುಡುಗರೆಲ್ಲರೂ ಸೇರಿ ತಮ್ಮ ಉಪಾಧ್ಯಾಯರಲ್ಲಿ ಹೇಳಲು, ಅತನು ಅವರನ್ನು ಸಮಾಧಾನ ಮಾಡಿ, ಏಜೀಬನ ಸುಮ್ಮನೆ ಇಲ್ಲದಿರುವುದನ್ನುಕಂಡು, ಅವನು ದೊರೆಯಮಗನೆಂಬ ಅಹಂಕಾರದಿಂದ ನಿಮ್ಮನ್ನು ಹೀಗೆ ಪೀಡಿಸುತ್ತಿರುವನು, ಇನ್ನುಮೇಲೆ ಅವನು ನಿಮ್ಮತಂಟೆಗೆ ಬಾರದಂತೆ ಮಾಡುವುದಕ್ಕಾಗಿ, ನನಗೊಂದು ಉಪಾಯವು ತೋರುವುದು, ಏನೆಂದರೆ :- ನಾಳನದಿನಅವನು ಇಲ್ಲಿಗೆಬಂದಮೇಲೆ, ನೀವುಗಳೆಲ್ಲರೂ ಆಟವಾಡುವುದಕ್ಕೆ ಮಾತನಾಡುವುದಕ್ಕಾಗಿ, ಆತನ ಸುತ್ತಲೂ ಕುಳಿತುಕೊಂಡು, ನಾವುಗಳು ಈದಿನ ಆಡುವ ಆಟಕ್ಕೆ ಬರಬೇಕಾದವರು, ತಮ್ಮ ತಮ್ಮ ತಂದೆ ತಾಯಿಗಳ ಹೆಸರನ್ನು ಹೇಳಬೇಕು, ಹಾಗೆ ಹೇಳದವರೊಡನೆ ನಾವೆಂದಿಗೂ ಆಡುವುದಿಲ್ಲವೆಂದು ಹೇಳಬಿಡಿ ಎಂದು ನುಡಿದನು. ಆದುದರಿಂದ ಹುಡುಗರೆಲ್ಲರೂ ಗುಂಪುಕೂಡಿ, ಹಾಗೆ ಮಾಡಲಾರಂಭಿಸಿ ಏಜೀಬನಬಳಿಗೆ ಬಂದು, ನಾವುಗಳೆಲ್ಲರೂ ಈದಿನ ಬಂದು ಆಟವನ್ನು ಆಡಬೇಕೆಂದು ಗೊತ್ತುಮಾಡಿರುವೆವು. ಅದಕ್ಕೆ ಬರತಕ್ಕವರೆಲ್ಲರೂ, ತಂತಮ್ಮ ಹೆಸರುಗಳನ್ನು ತಮ್ಮ ತಂದೆಗಳ ಹೆಸರನ್ನು ಹೇಳಬೇಕು, ಹಾಗೆ ಹೇಳದಿದ್ದವರನ್ನು ನಾವು ನಮ್ಮಕೂಟಕ್ಕೆಂದಿಗೂ ಕರೆದುಕೊಳ್ಳಲಾರೆವೆಂದು ಹೇಳಲು, ಸರ್ವರೂ ಸಮ್ಮತಿಸಿದರು. ಬಳಿಕ, ಈ ಸಮ್ಮತಿಪತ್ರಿಕೆಯನ್ನು ಹಾಕಿದ ಹುಡುಗನು, ಎಲ್ಲರನ್ನೂ

ಪ್ರಶ್ನೆಮಾಡಿ ಅವರವರ ಹೆಸರನ್ನು ಅವರವರ ತಂದೆತಾಯಿಗಳ ಹೆಸರನ್ನು ತಿಳಿದುಕೊಂಡನು. ಆದರೆ ಏಜೀಬನುದಾತ್ರ ಹಾಗೆ ಮಾಡದೆ, ತಪ್ಪು ವರ್ತಮಾನವನ್ನು ಹೇಳಿದನು. ಹೇಗಂದರೆ:—ತನ್ನ ಹೆಸರು ಏಜೀಬನೆಂದು, ತನ್ನ ತಾಯಿಯ ಹೆಸರು ಸೌಂದರ್ಯವತಿಯೆಂದು, ತನ್ನತಂದೆಯು ಮುಂತ್ರಿಯಾದ ಷಂಸುದೀನನೆಂದು, ಹೇಳಿದನು. ಅದನ್ನುಕೇಳಿ, ಹುಡುಗರೆಲ್ಲರೂ ಆತನನ್ನುಕುರಿತು, ಓಹೋ! ಏಜೀಬು ನಿನ್ನತಂದೆಯ ಹೆಸರು ಷಂಸುದೀನನೋ! ಎಂದಿಗೂ ಅಲ್ಲವಲ್ಲಾ! ಅತನು ನಿಮ್ಮ ತಾತನಾದನು. ಎಂದು ಹೇಳಲು, ಏಜೀಬನು ಛೀ! ಮೂರ್ಖರಿರಾ! ಷಂಸುದೀನನು ನಮ್ಮ ತಂದೆಯಲ್ಲವೊ? ಎಂದು ಅತಿ ರೋಷಾವೇಶದಿಂದ ಕೇಳಿದನು.

ಆಗ ಹುಡುಗರೆಲ್ಲರೂ ಫಕಫಕನೆ ನಗುತ್ತಾ ಆಹಾ! ಆತನೆಂದಿಗೂ ನಿಮ್ಮ ತಂದೆಯಲ್ಲ. ನೀನು ನಮ್ಮ ಕೂಟವನ್ನು ಸೇರಲಾರೆ, ನಾವು ನಿನ್ನನ್ನು ಆಟಕ್ಕೆ ಕರೆದುಕೊಳ್ಳಲಾರೆವೆಂದು ಹೇಳಿ ತಿರಸ್ಕರಿಸಿ, ತಮ್ಮಲ್ಲಿ ತಾವು ಹಾಸ್ಯ ಮಾಡಿಕೊಂಡರು. ಇದನ್ನು ನೋಡಿ ಏಜೀಬನು ಅಳುವದಕ್ಕೆ ಮೊದಲುಮಾಡಿದನು. ಆಗ ಉಪಾಧ್ಯಾಯನು ಆತನಬಳಿಗೆ ಬಂದು, ಷಂಸುದೀನನು ನಿನಗೆ ತಂದೆ ಅಲ್ಲವೆಂದೂ, ಆತನು ನಿನ್ನ ತಾಯಿಗೆ ತಂದೆ ಎಂದೂ, ನಿನಗೆ ತಿಳಿಯದೆಹೋಯಿತೆ? ನಿನಗೆ ಹೇಗೆ ನಿಮ್ಮ ತಂದೆಯ ಹೆಸರು ತಿಳಿಯೆದೊ, ಹಾಗೆ ನಮಗೂ ಅದು ತಿಳಿಯುವು. ಆದರೆ ಸುಲ್ತಾನನ ಕುದುರೆ ಚಾಕರರಲ್ಲೊಬ್ಬನಿಗೆ ನಿಮ್ಮ ತಾಯಿಯನ್ನು ಮದುವೆ ಮಾಡಿಕೊಡುವಂತಿದ್ದರೆಂದೂ, ಅಲ್ಲದೆ ಆಕೆಯೊಡನೆ ಭೂತವು ಸಂಸರ್ಗ ಸುಖದಿಂದಿತ್ತೆಂಬುದನ್ನು ನಾವು ಕೇಳಿದ್ದೆವಾದುದರಿಂದ, ಇದು ಕಷ್ಟಸಾಧ್ಯ ಪ್ರಶ್ನೆ ನೀನು ಇನ್ನುಮೇಲೆ ನಮ್ಮ ಹುಡುಗರ ಬಳ್ಳಿಯಲ್ಲಿ ಮೊದಲಿನಂತೆ ಗರ್ವದಿಂದ ನಡೆದುಕೊಳ್ಳಬೇಡವೆಂದು ಹೇಳಿದನು ಎಂದು ಹೇಳಿ, ಷರಜೌದಿ ಬೆಳಗಾದಕೂಡಲೆ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ, ಸುಲ್ತಾನರನ್ನು ತನ್ನ ತಂಗಿಯನ್ನು ಎಚ್ಚರಗೊಳಿಸಿ, ಅತ್ಯಾನಂದದಿಂದ ಮುಂದಿನ ಕಥೆಯನ್ನು ಹೇಳಸಾಗಿದಳು.

೧೧೦ನೆಯ ರಾತ್ರಿ ಕಥೆ

ಷಹರಜೌದಿ ಸುಲ್ತಾನರನ್ನುಕುರಿತು, ಸ್ವಾಮಿಾ! ಗಯಥರನು ಕಲೀಥರನ್ನುಕುರಿತು ಇಂತೆಂದನೆಂದು ಮುಂದೆ ಹೇಳುವುದಕ್ಕಾರಂಭಿಸಿದನು.

ಆ ವಿಜೀಬನು ಬಹಳಹೊತ್ತಿನವರಿಗೆ ಅಳುತ್ತಿದ್ದು, ಮನೆಗೆಹೋದಕೊಡಲೆ ಅವನ ತಾಯಿಯು ತನ್ನ ಮಗನು ಅತ್ತಿರುವಂತೆ ಕಾಣುವುದು ಏತಕ್ಕೊ ವಿಚಾರಿಸಬೇಕೆಂದು ಆತನಬಳಿಗೆ ಬಂದು, ಮಗು ! ನೀನು ಬಹಳವಾಗಿ ರೋದಿಸಿರುವಂತೆ ತೋರುತ್ತಿದೆ ಏತಕ್ಕೆ ? ಎಂದು ಕೇಳಲು, ಆತನು ತಾನು ಓದುವ ಶಾಲೆಯಲ್ಲಿ ಕೇಳಿದ ಸಂಗತಿಗಳನ್ನೆಲ್ಲ ಸ್ಪಷ್ಟವಾಗಿ ತಿಳಿಯಹೇಳಿ, ಅಮ್ಮಾ ! ನನ್ನತಂದೆ ಯಾರು ? ಎಂಬುದನ್ನು ನನಗೆ ದಯೆಮಾಡಿ ತಿಳಿಯಹೇಳೆಂದು ಕೇಳಲು, ಆಕೆಯು ಮಗನನ್ನುನೋಡಿ, ಅಪ್ಪಾ ! ಸದಾ ಸಂತೋಷದಿಂದ ನಿನ್ನನ್ನು ಪರಿಪಾಲಿಸುತ್ತಿರುವ, ಷಂಸುದೀನಮಹಮ್ಮದನೇ ನಿನ್ನತಂದೆ ಎಂದು ಹೇಳಿದಳು. ಆಗ ಬಾಲಕನು ಅಮ್ಮಾ ! ನೀನು ನಿಜವನ್ನು ಹೇಳಲಿಲ್ಲ. ಆ ಷಂಸುದೀನ ಮಹಮ್ಮದನು, ನಿನ್ನತಂದೆಯೇ ಹೊರತು, ನನ್ನತಂದೆ ಎಂದಿಗೂ ಅಲ್ಲ. ಚೆನ್ನಾಗಿ ತಿಳಿದು ಹೇಳೆನಲು, ಆ ಸೌಂದರ್ಯವತಿಯು, ತನ್ನ ನಿಷೀಕದ ದಿನವನ್ನು ನೆನೆದು ಆಹಾ ! ವೋಹ ನಾಂಗನಾದ ಪಾಣಕಾಂತನು, ನನ್ನನ್ನು ತೊರೆದು ಹೋದನು, ಆದರೂ ಇದುವರಿಗೂ, ಆತನ ವಿಷಯವೇ ನನಗೆ ತಿಳಿಯಲಿಲ್ಲವಲ್ಲಾ ! ಎಂದಂದು ಕೊಂಡು, ದುಃಖಪಡುತ್ತಿದ್ದಳು.

ಹೀಗೆ ಸೌಂದರ್ಯವತಿಯೂ, ಆ ವಿಜೀಬನೂ, ಅಳುತ್ತಿರುವ ವರ್ತಮಾನವನ್ನು ಕೇಳಿ, ಮಂತ್ರಿಯು ಆತನ ಬಳಿಗೆ ಬಂದು, ನಡೆದ ವರ್ತಮಾನಗಳನ್ನು ಮಗಳ ಮುಖದಿಂದಲೆಕೇಳಿ, ತಾನು ವ್ಯಸನಾಕ್ರಾಂತನಾಗಿ, ಆಹಾ ! ನನ್ನ ಮಗಳ ವಿಚಾರದಲ್ಲಿ ಪ್ರಜೆಗಳು ಆಡಿಕೊಳ್ಳುವ ನಾನಾವಿಧ ಮಾತುಗಳನ್ನು ಕೇಳಲಾರದೆ, ಕೊರಗುತ್ತಿದ್ದನು. ಇನ್ನು ಸ್ವಲ್ಪ ಹೊತ್ತಿನಮೇಲೆ, ಮಂತ್ರಿಯು ಸುಲ್ತಾನನಬಳಿಗೆ ಹೋಗಿ, ನನ್ನಮಗಳು ರಾಕ್ಷಸನನ್ನು ಮದುವೆಯಾಗಿ, ಮಗನನ್ನುಹೆತ್ತಳೆಂದು ಮಾತನಾಡಿಕೊಳ್ಳುತ್ತಿರುವುದನ್ನು ನೋಡಿ, ನಾನು ಸಹಿಸಲಾರೆನು, ಆದುದರಿಂದ ತಾವು ದಯೆಮಾಡಿ ನನ್ನ ತಮ್ಮನ ಮಗನಾದ, ಬದರೋದೀನನು ಹುಸೇನನನ್ನು ಹುಡುಕಿಕೊಂಡು ಬರುವುದಕ್ಕಾಗಿ, ಅಪ್ಪಣೆ ಕೊಡಬೇಕೆಂದು ಬೇಡಿಕೊಂಡನು. ಸುಲ್ತಾನನು ಮಂತ್ರಿಗೆ ಉಂಟಾಗಿರುವ ವ್ಯಸನಕ್ಕಾಗಿ, ತುಂಬ ಆಶ್ಚರ್ಯಯುಕ್ತನಾಗಿ, ಆತನಿಷ್ಟಾನುಸಾರವಾಗಿ, ದೇಶಾಂತರಕ್ಕೆ ಹೋಗಿ ಬರುವುದಕ್ಕೆ ಅಪ್ಪಣೆಯನಿತ್ತು, ವಿಜೀಬನ ತಂದೆಯಾದ ಬದರೋದೀನನು

ಯಾವ ದೇಶದಲ್ಲಿದ್ದರೂ, ಅಲ್ಲಿನ ರಾಜರಾಗಲಿ, ರಾಜಾಧಿಕಾರಿಗಳಾಗಲಿ, ಆತನನ್ನು ಮರ್ಯಾದೆಯಿಂದ ಈ ಷಂಸುದೀನನಸಂಗಡ ಕಳುಹಿಸಿಕೊಡಬೇಕೆಂದು, ಸಮಸ್ತ ದೇಶದ ರಾಜಾಧಿರಾಜರಿಗೂ, ಒಂದು ವಿಜ್ಞಾಪನಾಪತ್ರಿಕೆಯನ್ನು ಬರೆದು, ಮಂತ್ರಿಯಕೈಗೆ ಕೊಟ್ಟನು. ಷಂಸುದೀನನು ಮಹಮ್ಮದನು ಸುಲ್ತಾನನು ತನಗೆ ಮಾಡಿದ ಉಪಕಾರಕ್ಕಾಗಿ, ಆತನನ್ನು ವಂದಿಸಿ, ಎರಡನೆಯಸಾರಿ ದೀರ್ಘದಂಡ ನಮಸ್ಕಾರವಂ ಮಾಡಿ, ತನ್ನ ಕೃತಜ್ಞತೆಯನ್ನು ಸಂಪೂರ್ಣವಾಗಿ ತೋರ್ಪಡಿಸಿಕೊಂಡು, ಅಲ್ಲಿಂದ ತನ್ನಮನೆಗೆ ಬಂದು, ಪ್ರಯಾಣಾನುಕೂಲಂಗಳನ್ನು ಸಿದ್ಧಮಾಡಿಕೊಂಡು ನಾಲ್ಕು ದಿನಗಳನಂತರ ಮಿತ್ರನಾದ ಪರಿಜನರಿಂದ, ತನ್ನ ಮಗಳನ್ನೂ, ಏಜೀಬನೆಂಬ ಮೊಮ್ಮಗನನ್ನು ಕರೆದುಕೊಂಡು, ತನ್ನನಗರವನ್ನುಬಿಟ್ಟು ಹೊರಟನು ಎಂದು ಹೇಳಿ ಷಹರಜಾದಿ ಬೆಳಗಾದಕೂಡಲೆ ಕಥೆಯನ್ನು ನಿಲ್ಲಿಸಿ, ಮರು ದಿನ ಬೆಳಗಿನ ಜಾವದಲ್ಲಿ ಮರಳಿ ಹೇಳತೊಡಗಿದಳು.

೧೦೧ ನೆಯ ರಾತ್ರಿಯ ಕಥೆ.

ಷಹರಜಾದಿಯು ಇಂಡಿಯಾದೇಶದ ಸುಲ್ತಾನರನ್ನು ಕುರಿತು, ಮಹಾಸ್ವಾಮಿ ! ಪ್ರಧಾನಮಂತ್ರಿಯಾದ ಗಯೆಫರನು, ಕಲೀಫರನ್ನು ನೋಡಿ ಮತ್ತಿಂತೆಂದನು :—ಹೀಗೆ ಷಂಸುದೀನು ಮಹಮ್ಮದನು, ತನ್ನ ಮಗಳನ್ನೂ, ಮೊಮ್ಮಗನನ್ನೂ, ಮಿತ್ರವಾದ ಪರಿಜನರನ್ನೂ ಕರೆದು ಕೊಂಡು, ಹತ್ತೊಂಭತ್ತು ದಿನಗಳವರೆಗೂ, ಪ್ರಾರ್ತಿಯಾಗಿ ಪ್ರಯಾಣ ಮಾಡಿ, ಇಪ್ಪತ್ತನೆಯ ದಿನದ ಮಾಸ್ಕಸ್ ಪಟ್ಟಣದಬಳಿಯಲ್ಲಿರುವ ಒಂದಾನೊಂದು ಮೈದಾನವನ್ನು ಸೇರಿ, ಅತಿ ರಮಣೀಯವಾಗಿರುವ, ಆ ಸ್ಥಲದ ಸೊಬಗನ್ನೂ, ಅಲ್ಲಿ ಹರಿಯುತ್ತಿರುವ ಪ್ರವಾಹವನ್ನು ನೋಡಿ, ಆ ಸ್ಥಲದಲ್ಲಿ ಗುಡಾರವನ್ನು ಹಾಕಿಸಿ ಇನ್ನು ಮೂರು ದಿನಗಳವರೆಗೂ, ಈ ಊರಿನಲ್ಲಿದ್ದು ನಂತರ ಮುಂದಕ್ಕೆ ಪ್ರಯಾಣ ಮಾಡಬೇಕಾಗಿರುವುದರಿಂದ, ನೀವೆಲ್ಲರೂ ಎಚ್ಚರಿಕೆಯಿಂದ ಈಪಟ್ಟಣದಲ್ಲಿ ಹುಡುಕಿನೋಡಿರಿಂದು, ಚಾರಕರನ್ನು ಕಳುಹಲು, ಅವರೆಲ್ಲರೂ ತಂತಮ್ಮ ಕಾರ್ಯನುಸಾರವಾಗಿ ಆ ಪಟ್ಟಣಕ್ಕೆ ಹೊರಟರು. ಆಗ ಸೌಂದರ್ಯವತಿಯು ತನ್ನಮಗ ಏಜೀಬನನ್ನು ಸಂಗಡಾ ಕರೆದುಕೊಂಡುಬೇಗಿ, ಊರನ್ನು ತೋರಿಸಿಕೊಂಡುಬರುವಂತೆ, ಒಬ್ಬ ಬೋಜಿ ಸವಾರನಿಗೆ ಆಜ್ಞೆ ಮಾಡಿ ಕಳುಹಿಸಿದಳು! ಏಜೀಬನು

ಉತ್ತಮವಾದ ವಸ್ತ್ರಗಳನ್ನುಧರಿಸಿ ಸರ್ವಾಲಂಕಾರಸುಂದರನಾಗಿ ಖೋಜೌ ಸವಾರನ ಸಂಗಡ ಹೊರಟನು. ಆತನು ಕೈಯ್ಯಲ್ಲಿ ಒಂದು ಚಿತ್ರವನ್ನು ಹಿಡಿದುಕೊಂಡಿದ್ದನು. ಆ ನಗರ ಪ್ರವೇಶವನ್ನು ಹೊಡುತ್ತಲೆ, ಚಂದ್ರ ಬಿಂಬದಂತೆ ಹೊಳೆಯುತ್ತಿರುವ, ಆ ಮಗುವನ್ನು ಊರಿನವರೆಲ್ಲರೂ ಬಂದು ಬಂದು ನೋಡಿಹೋಗುತ್ತಾ ಅತ್ಯಂತ ಸಂತೋಷದಿಂದ, ಬೀದಿಗಳಲ್ಲಿದ್ದವರೂ, ಮನೆಯಲ್ಲಿದ್ದವರೂ, ಸ್ನಾನಮಾಡುತ್ತಿದ್ದವರೂ, ಊಟಕ್ಕೆ ಕುಳಿತಿದ್ದವರೂ ಸಹಾ ವಿಭ್ರಮದಿಂದ ಬಂದು ನೋಡುತಾ ಆ ಮಗುವಿನ ಸೌಂದರ್ಯಕ್ಕೂ, ಆತನ ತಂದೆತಾಯಿಗಳ ಪುಣ್ಯಕ್ಕೂ, ಎಣೆಯಿಲ್ಲವೆಂದು ಕೊಂಡಾಡುತ್ತಿದ್ದರು.

ಹೀಗಿರುವಲ್ಲಿ ಆ ಏಜೀಬನು ಖೋಜೌ ಸರದಾರನೂಸಹ ಊರೆಲ್ಲವನ್ನು ಸುತ್ತಿಕೊಂಡು, ಬದರೋದೀನ ಹುಸೇನನು ಇರುವ ಅಂಗಡಿಯ ಬಳಿಗೆ ಬಂದು, ಅಲ್ಲಿ ಜನರು ಬಹಳವಾಗಿ ಗುಂಪುಕೂಡಿದ್ದುದರಿಂದ, ಸ್ವಲ್ಪ ಹೊತ್ತು ನಿಂತುಕೊಂಡರು. ಆ ಅಂಗಡಿಗೆ ಮೊದಲಿನ ಯಜಮಾನನಾಗಿದ್ದವನು ಬದರೋದೀನನನ್ನು ದತ್ತುಮಾಡಿಕೊಂಡಿದ್ದನು. ಸ್ವಲ್ಪದಿನಗಳ ಮುಂಚೆ ಸತ್ತುಹೋದುದರಿಂದ, ಆತನ ಆಸ್ತಿಯೆಲ್ಲವೂ ಬದರೋದೀನನಿಗೆ ಬಂದಿತು. ಆದುದರಿಂದ ರೊಕ್ಕ ಅಂಗಡಿಗೆ ತಾನು ಯಜಮಾನನಾಗಿ ವ್ಯಾಪಾರ ಮಾಡುತ್ತಿದ್ದವನು ಆ ಮಗುವನ್ನು ನೋಡಿದಕೂಡಲೆ, ತಾನು ಹತ್ತಿರ ಹೋಗಿ ನೋಡಬೇಕೆಂಬ ಕುತೂಹಲದಿಂದ, ಎದ್ದು ನಿಂತುಕೊಂಡನು ಎಂದು ಹೇಳಿ ಖಡರಜೌದಿ ಕಥೆಯನ್ನು ನಿಲ್ಲಿಸಿ, ಬೆಳಗಿನ ಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೧೧೨ ನೆಯ ರಾತ್ರಿಯ ಕಥೆ.

ಸುಲ್ತಾನರೇ ಗಯಾಫರನು ಕಳೇಬರನ್ನು ಕುರಿತು ಇಂತೆಂದನು. ಆ ಏಜೀಬನನ್ನು ನೋಡಿದಕೂಡಲೆ, ಬದರೋದೀನನಿಗೆ ಮನಸ್ಸಿನಲ್ಲಿ ಏನೋ ಒಂದುವಿಧವಾದ ಆನಂದ ಉಂಟಾಯಿತು. ಅದು ಏತಕ್ಕೊಸ್ಕರ ಉಂಟಾಯಿತೋ ಆತನಿಗೇ ತಿಳಿಯದು. ಬಳಿಕ ಆತನು, ಕಣ್ಣೀರನ್ನು ಸುರಿಸುತ್ತ ಆ ಹುಡುಗನನ್ನು ನೋಡಿದುದರಿಂದ, ತನಗುಂಟಾದ ಆನಂದಕ್ಕೆ ಉಬ್ಬಿ ಆತನಬಳಿಗೆ ಬಂದರೂ ಪ್ರೀತಿಯುಕ್ತನಾದ ತಂದೆಗೆ ಇಂತಹ

ಅಭಿಲಾಷೆಯನ್ನು ಹುಟ್ಟಿಸಿದುದು, ಅವರವರ ಪರಸ್ಪರ ರಕ್ತಸಂಬಂಧವೇ ಹೊರತು ಮತ್ತಾವದೂ ಅಲ್ಲ. ಆದರೆ ಏಜೀಬನು ಆ ದೊಡ್ಡ ಮನುಷ್ಯನನ್ನು ನೋಡಿದಕೂಡಲೆ, ತನ್ನ ಮನಸ್ಸನ್ನು ಕರಗುತ್ತಿರುವದನ್ನು ನೋಡಿ, ತನ್ನ ಚಾಕರನಕಡೆಗೆ ತಿರುಗಿ ಅಯ್ಯಾ! ಈತನ ಮುಖವನ್ನು ನೋಡಿದಾಗ, ನನಗುಂಟಾದ ಉಪಶಾಂತಿಯು ಇವನ ಮಧುರವಾಕ್ಯಗಳಿಂದ ನನ್ನ ಮನಸ್ಸನ್ನು ಸಂತೋಷವಾಗುತ್ತಿರುವುದು. ಆದುದರಿಂದ ಈ ಯಜಮಾನನು ಬೇಡಿದಂತೆ ಅಂಗಡಿಯೊಳಗೆ ಹೋಗಿ ನಾವಿಬ್ಬರೂ ಸ್ವಲ್ಪ ಮಿಠಾಯಿಯನ್ನು ತಿಂದು ಆತನನ್ನು ತೃಪ್ತಿಪಡಿಸೋಣವೆಂದು ಹೇಳಿದನು. ಬದರೋದೀನನು ಆ ಬಾಲಕನನ್ನು ನೋಡಿ ಅಯ್ಯಾ ರಾಜಪುತ್ರನೇ! ನೀನು ದಯಮಾಡಿ ನನ್ನ ಅಂಗಡಿಯೊಳಕ್ಕೆ ಬಂದು, ಸ್ವಲ್ಪ ಮಿಠಾಯಿಯನ್ನು ತಿಂದು ದಣಿವಾರಿಸಿಕೊಂಡು, ಹೋಗಬೇಕೆಂದು ಬೇಡಿಕೊಂಡಿದ್ದುದರಿಂದ, ಏಜೀಬನು ಖೋಜಸವಾರನಸಂಗಡ ಹೀಗೆಹೇಳಿದನೆಂಬುದು, ವಾಚಕರಿಗೆ ಗ್ರಾಹ್ಯವಾಗದೆ ಇರಲಾರದು.

ಬಳಿಕ ಆ ಖೋಜಸವಾರನು ಏಜೀಬನನ್ನು ನೋಡಿ ಅಯ್ಯಾ! ನಿನ್ನಂತಹ ರಾಜಪುತ್ರನು, ಈ ಅಂಗಡಿಯಲ್ಲಿ ಕುಳಿತು, ಮಿಠಾಯಿಯನ್ನು ತಿನ್ನುವುದು ಯೋಗ್ಯವಾದ ಕಾರ್ಯವಲ್ಲವೆಂಬುದನ್ನು, ನೀನು ಚೆನ್ನಾಗಿ ತಿಳಿದುಕೊಂಡಿರಬೇಕೆಂದು ಹೇಳಿದನು. ಆಗ ಬದರೋದೀನನು ಏಜೀಬನನ್ನುಕುರಿತು, ಅಯ್ಯಾ! ನಿನ್ನಂತಹ ರಾಜಕುಮಾರನು ಇಂತಹ ಕಠಿಣನಾದ ಸವಾರನ ಬಳಿಯಲ್ಲಿರುವುದು ಬಹು ಕಷ್ಟಕರವಾದುದಲ್ಲವೆ? ಎಂದು ಹೇಳಿ, ಸರದಾರನನ್ನು ನೋಡಿ ಅಯ್ಯಾ! ನನ್ನಲ್ಲಿ ಇಷ್ಟೊಂದು ಕಾಠಿಣ್ಯವನ್ನು ತೋರದೆ, ಈ ಮಗುವನ್ನು ಅಂಗಡಿಯೊಳಕ್ಕೆ ಕರೆದುಕೊಂಡು ಹೋಗುವುದಕ್ಕೆ, ಅಪ್ಪಣೆಮಾಡು, ಹಾಗೆಮಾಡಿದರೆ, ಮೇಲಿಕರ್ಪಗಿದ್ದರೂ ಅಂತರಂಗದಲ್ಲಿ ಬಿಳುಪಾಗಿರುವ ಚೇಸ್‌ನಟ್‌ಬೈಂಬಹಣಿನ್ನನಂತೆ, ನನ್ನ ಮಾನಸವು ಆನಂದವನ್ನು ಹೊಂದುವುದು. ಅಲ್ಲದೆ ಸಕಲವನ್ನು ತಿಳಿದ, ನಿನ್ನಂತಹವರು ಮೇಲಿ ಕಾಠಿಣ್ಯವನ್ನು ತೋರಿದರೂ ಹೃದಯದಲ್ಲಿ ಮಾರ್ದವವುಳ್ಳವರಾಗಿರುವರೆಂಬುದು, ನನಗೆ ಚೆನ್ನಾಗಿ ತಿಳಿದಿರುವುದೆಂದು, ಸೊಗಸಾಗಿ ಮಾಡಿಹೇಳಲು, ಸರದಾರನು ಆತನ ಮಾತಿಗೆ ಸಮ್ಮತಿಸಿ,

ಆ ಹುಡುಗನನ್ನು ಕರೆದುಕೊಂಡು ತಾನೂ, ಅಂಗಡಿಯೆನ್ನು ಪ್ರವೇಶವಾಡಿ ದನು. ಆಗ ಬದರೋದೀನನು ತನ್ನ ಮನೋಭೀಷ್ಟವು ನೆರವೇರಿದುದ ಕ್ಕಾಗಿ, ಅತ್ಯಾನಂದಯುಕ್ತನಾಗಿ, ಆ ಹುಡುಗನಸಂಗಡ ವಿನೋದವಾಗಿ ಮಾತನಾಡುತ್ತಾ, ಅಯ್ಯಾ ! ಇದೋ ನಾನು ಮಾಡಿರುವ ರುಚಿಕರಗ ಳಾದ ಈ ಮಿಠಾಯಿಗಳನ್ನು ತಿಂದು ನೀನು ತೃಪ್ತಿ ಹೊಂದು, ಈ ಊರಿ ನಲ್ಲಿದ್ದ ಒಬ್ಬ ದೊಡ್ಡಮನುಷ್ಯನು ನನಗೆ ಇದನ್ನು ಮಾಡುವುದನ್ನು ಕಲಿಸಿಕೊಟ್ಟನೆಂದು ಹೇಳಿ, ತನ್ನಲ್ಲಿದ್ದ ಉತ್ತಮವಾದ ಸಕ್ಕರೆಯ ಭಕ್ಷ್ಯಗಳನ್ನು ಆತನಿಗೂ, ಆ ಖೋಜಾ ಸರದಾರನಿಗೂ ಕೊಡಲು, ಅವ ರಿಬ್ಬರೂ ತಿಂದು, ಅತ್ಯಾನಂದವನ್ನು ಹೊಂದಿ, ನಲಿಯುತ್ತಾ ಆ ಅಡಿಗೆ ಯಜಮಾನನಾದ ಬದರೋದೀನನ್ನು ಹೊಗಳಿದರು. ಅವರಿಬ್ಬರು ಭಕ್ಷ್ಯ ಗಳನ್ನು ತಿನ್ನುತ್ತಿರುವಾಗ, ಬದರೋದೀನನು ಅತ್ಯಾನಂದದಿಂದ ವಿನೋದ ವಾಗಿ ಆತನ ಸಂಗಡ ಮಾತನಾಡುತ್ತಾ ನಾನು ಮದುವೆ ಮಾಡಿಕೊಂಡು ಕೂಡಲೆ ಹೆಂಡತಿಯೆನ್ನಗಲಿ ಹೊರಟು ಬಂದುದರಿಂದ, ಈ ಪುತ್ರನು ಹುಟ್ಟಿರಬಹುದೆಂದು ಯೋಚಿಸುತ್ತಿದ್ದನು. ಆಗ ಆತನಿಗೆ ಆನಂದಬಾಷ್ಪ ಗಳುಕ್ಕಿ ಬಂದುದರಿಂದ, ಆ ಹುಡುಗನ ಸಂಗಡ ಕೆಲವು ಮಾತನಾಡಬೇಕೆಂ ದಿದ್ದನು. ಆದರೆ ಖೋಜಾ ಸವಾರನು, ಕಾಲವಿಳಂಬವಾಗುವುದೆಂಬ ಭಯದಿಂದ, ಅದಕ್ಕವಕಾಶಗೊಡದೆ ಆತನನ್ನು ಊರಹೊರಗೆ ಹಾಕಿರುವ, ತಾತನ ಡೇರೆಯಬಳಿಗೆ ಕರೆದುಕೊಂಡು ಹೋದನು. ಬದರೋದೀನನು ಏಜೀಬನನ್ನು ಅಗಲಿರಲಾರದೆ, ಅಂಗಡಿಯೆನ್ನು ಮುಚ್ಚಿ, ಆತನ ಸಂಗಡಲೇ ಹೊರಟನೆಂದು ಹೇಳಿ ಷಹರಜಾದಿ ಬಿಳಗಾದಕೂಡಲೆ ಕಥೆಯನ್ನು ನಿಲ್ಲಿಸಿ, ಮರಳಿ ಬಿಳಗಿನ ಜಾವದಲ್ಲಿ ಹೇಳಲಾರಂಭಿಸಿದಳು.

೧೧೩ ನೆಯ ರಾತ್ರಿ ಕಥೆ.

ಷಹರಜಾದಿ ಸುಲ್ತಾನರನ್ನು ಕುರಿತು, ರಾಜಾಧಿರಾಜರೇ ! ಪ್ರಧಾನಮಂತ್ರಿಯಾದ ಗಯೆಫರನು ಕಲೀಫರನ್ನು ಕುರಿತು ಇಂತೆಂದು ಹೇಳಿದನು. ಬಳಿಕ ಏಜೀಬನು ಖೋಜಾ ಸರದಾರನು ಊರಹೊರಗೆ ಹೋಗುವುದರೊಳಗಾಗಿ, ಬದರೋದೀನನು ಅವರನ್ನು ಹೊಂದಿ ಸೇರಿದನು. ಆಗ ಆ ಖೋಜಾ ಸರದಾರನು, ಆತನನ್ನು ನೋಡಿ ಕೋಪಿಸಿಕೊಂಡು, ಎಲಾ ! ದುರ್ಮಾರ್ಗಿಯಾದ ಪುರುಷನೇ ! ನೀನು ನಮ್ಮ ಸಂಗಡ ಬರುವು

ದಕ್ಕೆ ಕಾರಣವೇನು ? ಎಲ್ಲಿಗೆ ಹೊರಗುತ್ತಿಯೇ, ಎಂದು ಕೇಳಿದನು. ಆಗ ಬದರೋದೀನನು, ಅಯ್ಯಾ ! ನನಗೆ ಊರುಹೊರಗೆ ಸ್ವಲ್ಪ ಕೆಲಸವಿರುವುದರಿಂದ, ನಾನು ಅಲ್ಲಿಗೆ ಹೋಗುತ್ತಿರುವೆನು, ಆದುದರಿಂದ ನೀನು ಕ್ಷಮಿಸಬೇಕೆಂದು ನುಡಿಯಲು, ಆತನು ಏಜೀಬನಕಡೆಗೆ ತಿರುಗಿ, ಅಯ್ಯಾ ! ನಿನ್ನಿಂದಲ್ಲವೆ ನನಗಿಂತಹ ದುರವಸ್ಥೆ ಪ್ರಾಪ್ತನಾಯಿತು. ನಾನು ಬೇಡಿಯಿಂದರೂ ನೀನು ದಾಕ್ಷಿಣ್ಯಕ್ಕೊಳಪಟ್ಟು, ವಿಶ್ವಾಸಿಯೆನ್ನುತಿಂದುದರಿಂದ, ಮುಂದೆ ಹೀಗಾಗುವುದೆಂಬುದನ್ನು, ನಾನು ತಿಳಿದೇ ಇದ್ದೆನು ಎಂದು ತಿರಸ್ಕರಿಸಿ ನುಡಿದು ನಂತರ ಸ್ವಲ್ಪ ಸಮಾಧಾನವನ್ನು ತಂದುಕೊಂಡು, ಆಹಾ ! ಇದಕ್ಕೇಕೆ ನಾವಿಷ್ಟು ಪ್ರಯತ್ನ ಪಡಬೇಕು ! ಮಾರ್ಗದಲ್ಲಿ ಬಹುಮಂದಿ ಹೋಗುತ್ತಲೂ ಬರುತ್ತಲೂ ಇರುವ ನಾಡಿಕೆ ನ್ಯಾಯವಾದುದೇ, ನಮ್ಮ ಷ್ಟಕ್ಕೆ ನಾವು ಹೋಗೋಣವೆಂದು ಹೇಳಿ, ಜೀಗಜೀಗನೆ ಹಿಂದಿರುಗಿ ನೋಡದೆ, ತಮ್ಮ ಹೇರೆಯಬಳಿಗೆ ಬಂದು ಸೇರಿಕೊಂಡರು.

ಆದರೆ ಏಜೀಬನು, ಹಿಂದಿರುಗಿ ನೋಡಲು, ಎರಡು ಮೂರು ಹೆಜ್ಜೆಗಳ ದೂರದಲ್ಲಿ ಬದರೋದೀನನು ಬರುತ್ತಿರುವುದನ್ನು ಕಂಡು, ತಾನು ಅಂಗಡಿಯೆಲ್ಲಿ ವಿಶ್ವಾಯಿತಿಂದ ವರ್ತಮಾನವು, ತನ್ನ ತಾತನಿಗೆ ತಿಳಿಯುವುದೆಂದು, ಭಯಗ್ರಸ್ತನಾಗಿ, ಹತ್ತಿರದಲ್ಲಿದ್ದ ಒಂದು ದೊಡ್ಡ ಕಲ್ಲನ್ನು ತೆಗೆದು, ಬದರೋದೀನನ ತಲೆಯೆಮೇಲೆ ಹಾಕಿದನು. ಆತನಿಗೆ ಪೆಟ್ಟು ಬಲವಾಗಿ ತಗಲಿ, ತಲೆಯು ಗಾಯವಾದುದಲ್ಲದೆ, ರಕ್ತವೂ ಸೋರಿತು, ಆ ನೋವನ್ನು ಸಹಿಸಲಾರದೆ, ಆತನು ಖೋಜಾ ಸವಾರನ ಹೇರೆಯೊಳಕ್ಕೆ ಹೋಗಲು, ಆತನು ಅಯ್ಯಾ ! ನಾನು ಮಾಡಿದ ದುರ್ಮಾರ್ಗಗುಣದಿಂದ ನನಗಿಂತಹ ಗತಿಯೊದುದಕ್ಕಾಗಿ, ನೀನೇನು ವ್ಯಸ ಪಡಬೇಕಾದ ಅಗತ್ಯವಿಲ್ಲವೆಂದು ಹೇಳಿದನು. ಬಳಿಕ ಆತನು ತನ್ನ ಬಟ್ಟೆಯಿಂದ ರಕ್ತವನ್ನು ಒರಿಸಿಕೊಂಡು, ಹಿಂದಿರುಗಿ ಪಟ್ಟಣಕ್ಕೆ ಬರುತ್ತಾ ತನ್ನಲ್ಲಿತಾನು ಅಯ್ಯೋ ! ನಾನು ಆ ಮಗುವಿನವೇಲಿನ ವ್ಯಾಮೋಹದಿಂದ, ಅಂಗಡಿಯ ಕೆಲಸವನ್ನು ತೊರೆದು, ಇಲ್ಲಿಗೆ ಬಂದುದನ್ನು ನೋಡಿ, ಅದರಿಂದ ತನಗೇನೋ ಕೇಡುಂಟಾಗುವುದೆಂದು ತಿಳಿದು, ಆ ಮಗುವು ನನ್ನನ್ನು ಕಲ್ಲಿನಿಂದ ಹೊಡೆದುದಲ್ಲಾ ! ನಾನು ಹೀಗೆ ಮೂಢಪಡಿದ್ದರೆ, ಅವನೆಂದಿಗೂ ನನ್ನನ್ನು ಹೊಡೆಯುತ್ತಿರಲಿಲ್ಲವೆಂಬು ಹೇಳಿ, ಮನೆಗೆ ಹೋಗಿ ಮುಕ್ಕಬರುತ್ತಿರುವ ದುಃಖವನ್ನು ತನಗಿಂ

ತಲೂ ನಿರ್ಭಾಗ್ಯರಾದ ಜನರನ್ನೇಕರಿರುವರೆಂಬ ನೆನಪಿನಿಂದ ಉದ್ವೇಗಾಂತಿ
ಯನ್ನು ಹೊಂದಿಸಿಕೊಂಡಿದ್ದನು ಎಂದು ಹೇಳಿ ಷಹರಜೋದಿ ಕಥೆಯನ್ನು
ನಿಲ್ಲಿಸಿ, ಬೆಳಗಿನ ಜಾವದಲ್ಲಿ ಮರಳಿ ಹೇಳಲಾರಂಭಿಸಿದಳು.

೧೧೪ ನೆಯ ರಾತ್ರಿ ಕಥೆ.

ಷಹರಜೋದಿ ಸುಲ್ತಾನರನ್ನು ನೋಡಿ, ಪ್ರಿಯರೇ ! ಪ್ರಧಾನ
ಮಂತ್ರಿಯಾದ ಗಯಫರನು, ಕಳೀಫರನ್ನು ನೋಡಿ ಮುಂದಿನ ಕಥೆಯನ್ನು
ಹೇಳತೊಡಗಿದನು. ಬದರೋದೀನನು ಎಂದಿನಂತೆ ತನ್ನ ಕೆಲಸವನ್ನು
ಮಾಡತೊಡಗಿದನು. ಮೂರು ದಿನಗಳು ಕಳೆದವೇಲೆ ಷಂಸುದೀನನು,
ಆ ಸ್ಥಲದಿಂದ ಹೊರಟು, ಏನಾನು, ಹಾನಾ, ಹಾಲೀಪು, ಯೂಪ್ರಟಿಸ್,
ಮಾರ್ಡಿನು, ಮುಸೌರು, ಗಿಂಜಿಯಾ, ದಯೊಲೆಬ್ಬೀಕರ್ ಮೊದಲಾದ ನಾನಾ
ದೇಶಾಂತರಗಳಲ್ಲಿ ಸಂಚಾರ ಮಾಡಿ ಕಡೆಗೆ ಬಾಲಸೊರಿಗೆ ಬಂದನು. ಆತನು
ಬಂದಿರುವ ವರ್ತಮಾನವನ್ನು ಕೇಳಿ, ಅಲ್ಲಿನ ಸುಲ್ತಾನನು, ಮರ್ಯಾದೆ
ಯಿಂದ ಬರಮಾಡಿಕೊಂಡು, ಆತನು ಬರುವುದಕ್ಕೆ ಕಾರಣವೇನೆಂದು ವಿಚಾ
ರಿಸುವಲ್ಲಿ, ಷಂಸುದೀನನು, ತನ್ನ ತಮ್ಮನ ಮಗನಾದ ಬದರೋದೀನನ
ಚರಿತ್ರೆಯನ್ನು ಕೇಳಿ, ಆತನನ್ನು ಹುಡುಕಿಕೊಂಡು ಬಂದಿರುವೆನೆಂದು
ಹೇಳಲು, ಸುಲ್ತಾನನು ಅಯ್ಯಾ ! ನಿನ್ನ ತಮ್ಮನಾದ ನೌರೋದೀನನು
ಬಹುದಿನಗಳ ಕೆಳಗೆ ಸತ್ತುಹೋದನು. ಆತನ ಮಗನು ತಂದೆ ಸತ್ತು
ಹೋದ ಎರಡುತಿಂಗಳಿಗೆ ಇಲ್ಲಿಂದ ಹೊರಟುಹೋದನು. ಅವನನ್ನು ಕರೆತರಿ
ಸುವುದಕ್ಕಾಗಿ, ನಾನು ಕೈಲಾದ ಪ್ರಯತ್ನವನ್ನು ಮಾಡಿದರೂ, ಆತನು
ದೊರಕಲಿಲ್ಲ, ನನ್ನಮಂತ್ರಿಗಳಲ್ಲೊಬ್ಬನ ಮಗಳಾದ, ಚಿತನತಾಯಿಯೂ
ಇನ್ನು ಬದುಕಿರುವಳೆಂದು ಹೇಳಲು, ಷಂಸುದೀನನು ಆಕೆಯನ್ನು ತನ್ನ
ಸಂಗಡ ಕರೆದುಕೊಂಡು ಹೋಗುವಂತೆ ಅಪ್ಪಣೆ ಮಾಡಬೇಕೆಂದು ಬೇಡಿ
ಕೊಂಡು, ಆಕೆಯನ್ನು ನೋಡುವುದಕ್ಕಾಗಿ, ಮನೆಯನ್ನು ವಿಚಾರಿಸಿ
ಕೊಂಡು, ತನ್ನ ಮಗಳನ್ನು ಮೊಮ್ಮಗನನ್ನು ಸಂಗಡ ಕರೆದುಕೊಂಡು
ಅಲ್ಲಿಗೆ ಹೋದನು. ತನ್ನ ಗಂಡನು ಸತ್ತುಹೋದಾಗಿನಿಂದಲೂ, ಬದರೋ
ದೀನನ ತಾಯಿಯು, ಆತನರಮನೆಯೆಲ್ಲಾ ವಾಸ ಮಾಡುತ್ತಿದ್ದಳು. ಆ
ಮನೆಯು ರಮಣೀಯರೂಪವಾಗಿ, ಸೌಂದರ್ಯಯುಕ್ತವಾದ ಅಮೃತ

ಶಿಲೆಗಳಿಂದ ಕಟ್ಟಲ್ಪಟ್ಟಿತ್ತು. ಷಂಸುದೀನನು ಮನೆಯಬಳಿಗೆ ಬಂದಾಗ್ಗೆ ಬಾಗಲಲ್ಲಿ, ತನ್ನ ತಮ್ಮನ ನಾಮಾಕ್ಷರಗಳನ್ನು ಸುಂದರವಾಗಿ ಕೆತ್ತಿರುವ, ಚಂದ್ರಕಾಂತದ ಶಾಶನವನ್ನು ನೋಡಿ ಮುತ್ತಿಟ್ಟುಕೊಂಡು, ತನ್ನ ನಾದಿನಿ ಇರುವ ಸ್ಥಲವನ್ನು ವಿಚಾರಿಸಿಕೊಂಡು, ಒಂದಾನೊಂದು ಗುಮ್ಮಟದ ಬಳಿಗೆ, ಚಾರಕರಿಂದ ತೋರಿಸಿದ ಮಾರ್ಗವಾಗಿ ಬಂದನು. ತನ್ನ ಮಗನಾದ ಬದರೋದೀನನು ಹೊರಟುಹೋಗಿ, ಬಹುದಿನಗಳಾದರೂ, ಬಾರದುದರಿಂದ ಸತ್ತುಹೋದನೆಂದು ತಿಳಿದು, ತನ್ನ ಗೋರಿಗಾಗಿ, ಅವನ ತಾಯಿ ಈ ಕಟ್ಟಡವನ್ನು ಕಟ್ಟಿಸಿದಳು. ಇಂತಹ ಗೋರಿಯೆಲ್ಲಿ ಕುಳ್ಳಿತುಕೊಂಡು, ತನ್ನ ಮಗನನ್ನು ನೆನೆದು ದುಃಖಿಸುತ್ತಾ ಹೊರಳಾಡುತ್ತಿರುವ, ಸಮಯಕ್ಕೆ ಸರಿಯಾಗಿ ಅಲ್ಲಿಗೆ ಬಂದು ವ್ಯಸನಪಡಬೇಡವೆಂದು ಸಮಾಧಾನ ಮಾಡಿ, ತಾನು ಆಕೆಗೆ ಭಾವನಾಗಬೇಕೆಂಬ ಸಂಬಂಧವನ್ನು, ತಾನು ಬಂದಿರುವ ಕಾರ್ಯವನ್ನು ತಿಳಿಸಿದನೆಂದು ಹೇಳಿ, ಷಹರಜಾದಿ ಕಥೆಯನ್ನು ನಿಲ್ಲಿಸಿ, ಬೆಳಗಿನ ಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೧೧೫ನೆಯ ರಾತ್ರಿ ಕಥೆ.

ಷಹರಜಾದಿ ಬಳಿಕ ಸುಲ್ತಾನನನ್ನು ಕುರಿತು, ಪ್ರಭುವರೇ! ಗಯಾಥರನೆಂಬ ಪ್ರಧಾನಮಂತ್ರಿಯು ಕಲೀಫರನ್ನು ಕುರಿತು, ಇಂತೆಂದು ಹೇಳಿದನು. ಬಳಿಕ ಷಂಸುದೀನನು ತನ್ನ ಮಗಳ ವಿವಾಹದದಿನ, ಕೈರೋ ನಗರದಲ್ಲಿ ನಡೆದ ಸಂಗತಿಯೆನ್ನು ನಂತರ ತನಗೆದೊರೆತ, ಆತನಬಳಿಯಲ್ಲಿದ್ದ ತನ್ನ ತಮ್ಮನು ಬರೆದು ಇಟ್ಟಿದ್ದ, ಪುಸ್ತಕವನ್ನು ತೋರಿ, ವಿವರಿಸಿ ಹೇಳಿ, ತನ್ನ ಮಗಳಾದ ಸೌಂದರ್ಯವತಿಯೆನ್ನು ಮೊಮ್ಮಗನಾದ ಏಜೀಬನನ್ನು ತೋರಿಸಲು, ಆಕೆ ಅತ್ಯಂತ ಆನಂದವನ್ನು ಹೊಂದಿದವಳಾಗಿ, ಇದುವರಿಗೂ ತನ್ನ ಮಗನು ಸತ್ತುಹೋಗಿರುವನೆಂದು ತಿಳಿದುಕೊಂಡಿದ್ದ, ದುರಭಿಪ್ರಾಯವನ್ನುನೀಗಿ, ಸೊಸೆಯನ್ನೂ ಮೊಮ್ಮಗನನ್ನೂ ನೋಡಿದುದರಿಂದ, ಆತನು ಬದುಕಿರುವನೆಂದು ತಿಳಿದು, ಅತಾನಂದವನ್ನು ಹೊಂದಿ ಸಂತೋಷದಿಂದಿದ್ದಳು. ಬಳಿಕ ಅವರೆಲ್ಲರೂ ಅನ್ಯೋನ್ಯವಾಗಿ ಆಲಿಂಗಿಸಿಕೊಂಡು, ಸ್ವಲ್ಪಹೊತ್ತು ಸುಮ್ಮನೆ ಕುಳಿತುಕೊಂಡಿದ್ದು ತರುವಾಯ ಷಂಸುದೀನನು ತನ್ನ ನಾಡನಿಯನ್ನು ಕುರಿತು, ಅಮ್ಮಾ! ನೀನು ಇಲ್ಲಿ ಇರುವುದು ಸರಿಯಲ್ಲ, ನಿನ್ನನ್ನು ಏಗುಪ್ತರಾಜ್ಯಕ್ಕೆ ಕರೆದುಕೊಂಡುಹೋ

ಗಲು ನಾನು ಸುಲ್ತಾನರಿಂದಪ್ಪಣೆಯನ್ನು ತೆಗೆದುಕೊಂಡಿರುವೆನು. ನಮ್ಮ ಪ್ರಯತ್ನದಿಂದ ಹ್ಯಾಗಾದರೂ ಮಾಡಿ, ಬದರೋದೀನನನ್ನು ಹುಡುಕಿ, ಕರೆದುತರಬೇಕೆಂದಿರುವೆನು. ಹಾಗೆ ಆತನು ನಮಗೆತೋರಿಬಂದುದೇ ಆದರೆ ಆತನ ಕಥೆಯನ್ನು ನಿನ್ನ ಚರಿತ್ರೆಯನ್ನೂ ನನ್ನಮಗಳ ಸಂಗತಿಯನ್ನೂ ಬರೆಯಿಸಿ, ಲೋಕೋಪಕಾರಾರ್ಥವಾಗಿ, ಹುಚ್ಚಟ್ಟಿಕೊಂದಿರುವೆನು. ಆದರೆ ನನ್ನ ಸಂಗಡ ಕೈರೋನಗರಕ್ಕೆ ನೀನುಬರುವುದಕ್ಕೆಂದಿಗೂ, ಅನುಮಾನಿಸಲಾರೆ ಎಂದು ನಾನು ನಂಬುವೆನೆಂದು ಹೇಳಿದನು. ಕೂಡಲೆ ಬದರೋದೀನನ ತಾಯಿಯು ಅದಕ್ಕೊಪ್ಪಿದುದರಿಂದ ಪ್ರಯಾಣಸನ್ನದ್ಧರಾಗಿ ಸುಲ್ತಾನನನ್ನು ಕಾಣಿಸಿಕೊಂಡು ಆತನಿಂದಪ್ಪಣೆಯನ್ನು ತೆಗೆದುಕೊಳ್ಳಲು, ಷಂಸುದೀನನಿಗೆ ಸುಲ್ತಾನನು ಬಹುಮರ್ಯಾದೆಯನ್ನು ಮಾಡಿ, ತನ್ನದೇಶದಲ್ಲಿರುವ ಉತ್ತಮವಸ್ತುಗಳನ್ನು ಉಚಿತವಾಗಿ ಕೊಟ್ಟು ಐಗುಪ್ತರಾಜ್ಯದ ಸುಲ್ತಾನರಿಗೂಕೂಡ ಬಹುಮಾನವನ್ನು ಕಳುಹಿಸಿದನು. ಷಂಸುದೀನನು ಅವುಗಳೆಲ್ಲವನ್ನೂ, ತೆಗೆದುಕೊಂಡು,ಬಾಲಸೂರನ್ನುತಲಪಿದಮಾಸ್ಕಸ್ಸಿಗೆ ಹೋಗುವುದಕ್ಕಾಗಿ ಪ್ರಯಾಣ ಮಾಡಿ ಆ ಸ್ಥಲವನ್ನುಸೇರಿ ಗುಡಾರವನ್ನು ಹಾಕಿಸಿ, ಅಲ್ಲಿನ ಉತ್ತಮವಸ್ತುಗಳನ್ನು ಕೊಂಡುಕೊಳ್ಳುವುದಕ್ಕೂ, ತನ್ನ ಪರಿವಾರದವರೂ ಸುದಾರಿಸಿಕೊಳ್ಳುವುದಕ್ಕೂಸಹಾ ಅನುಕೂಲವಾಗುವಂತೆ ಮೂರುದಿನಗಳಿರಬೇಕೆಂದು ಗೊತ್ತು ಮಾಡಿದನು.

ಬಳಿಕ ಆತನು ಹೀಗೆ ನಿಂತು ಆ ಊರಿನ ಉತ್ತಮರಾದ ವರ್ತಕರನ್ನು ಬರಮಾಡಿ, ಅವರಿಂದ ಶ್ರೇಷ್ಠವಾದ ರತ್ನಗಳನ್ನು ತೆಗೆದುಕೊಳ್ಳುತ್ತಿರುವಾಗ, ಏಜೀಬನು ತಾನು ಮೊದಲು ನೋಡದೆ ಉಳಿದ ಸ್ಥಲಗಳನ್ನು ಅವುಗಳ ಚಿತ್ರಗಳನ್ನು ನೋಡಿಕೊಂಡು ಬರುವುದಕ್ಕಾಗಿ, ತನ್ನ ತಾಯಿಯಿಂದ ಅಪ್ಪಣೆಯನ್ನು ಪಡದು, ಖೋಜ ಸವಾರನನ್ನು ಹಿಂದೆ ಕರೆದುಕೊಂಡು ಹೊರಟನು. ಬಳಿಕ ಅವರಿಬ್ಬರೂ ತಮ್ಮ ಡೇರೆಗೆ ಸವಿಾಪವಾಗಿದ್ದ, (ಪ್ಯಾರಡೈಜ್ ಗೇಟೆಂಬ) ಉದ್ಯಾನವನದ ಬಾಗಿಲನ್ನು ದಾಟಿ, ಆ ಊರಿನಲ್ಲಿ ಶ್ರೇಷ್ಠಪುರುಷನ ಹೆಸರಿನಲ್ಲಿ ಕಟ್ಟಿಸಿದ್ದ ಮಸೀತಿಯಬಳಿಗೆ ಬಂದು, ಅಲ್ಲಿ ಧ್ಯಾನಕಾಲವು ಮುಗಿಯುವವರೆಗೂ ನಿಂತು ನೋಡುತ್ತಿದ್ದು, ರಾಜಬೀದಿಯನ್ನೆಲ್ಲಾ ಸುತ್ತಿಕೊಂಡು ಮರಳಿ ಬದರೋದೀನನ ವಿಥಾಯಿ ಅಂಗಡಿಯಬಳಿಗೆ ಬಂದು, ನೋಡುವಲ್ಲಿ ಆತನು

ವೊದಲಿನಂತೆ ವ್ಯಾಪಾರ ಮಾಡುತ್ತಿರುವುದನ್ನು ಕಂಡು, ಆತನನ್ನು ಕುರಿತು ಸಲಾಮಯ್ಯಾ ! ನೀನು ನನ್ನನ್ನು ಯಾವಾಗಲಾದರೂ ನೋಡಿರುವೆಯಾ ? ನನ್ನ ಗುರುತು ನನಗಿರುವುದೇ ಎಂದುಕೇಳಲು, ಆತನು ಹಿಂದಿರುಗಿ ನೋಡಿ ಆತನನ್ನು ನೋಡಿದಕೂಡಲೆ, ತನ್ನಲ್ಲಿ ಹುಟ್ಟಿದ ಪುತ್ರವಾತ್ಸಲ್ಯದಿಂದ ಸ್ವಲ್ಪಹೊತ್ತು ಮಾತನಾಡದೆ, ಸುಮ್ಮನಿದ್ದು, ಆಯ್ಯಾ ! ಪ್ರೀತಿಪಾತ್ರನಾದ ರಾಜಕುಮಾರನೇ ! ನೀನು ವೊದಲಿನಂತೆ ದಯೆಮಾಡಿ, ನನ್ನ ಅಂಗಡಿಯಲ್ಲಿ ಈಗಲೂ ಸ್ವಲ್ಪ ತಿಂಡಿಯೆನ್ನು ತಿಂದು ಹೋಗಬೇಕೆಂದು ಬೇಡಿಕೊಳ್ಳುವೆನು. ಅಲ್ಲದೆ ನಾನು, ಹಿಂದಿನಸಾರಿ ಸ್ವಲ್ಪ ಮಾದಕದ್ರವ್ಯವನ್ನು ಸೇವಿಸಿದ್ದರಿಂದ, ಯುಕ್ತಾಯುಕ್ತ ಜ್ಞಾನವಿಲ್ಲದೆ, ನಡೆಸಿದಂತೆ ಈಗೆಂದಿಗೂ ಮಾಡಲಾರೆನು. ಆದರೂ ನಿನ್ನಲ್ಲಿ ನನಗುಂಟಾದ ಪ್ರೀತಿವಾತ್ಸಲ್ಯದಿಂದ, ನಾನು ನಿನ್ನ ಬೆನ್ನುಹತ್ತಿ ಬರಬೇಕಾಯಿತೇಹೊರತು, ನೀನೇ ನನ್ನನ್ನು ಕರೆದುಕೊಂಡು ಹೋದೆ ಎಂದು ಹೇಳಬೇಕಾದುದೇನೂ ಇಲ್ಲವೆಂದು ನುಡಿದನೆಂದು ಹೇಳಿ, ಷಹರಜಾದಿ ಕಥೆಯನ್ನು ನಿಲ್ಲಿಸಿ, ಬೆಳಗಿನ ಜಾವದಲ್ಲಿ ಪುನಹಾ ಹೇಳಲಾರಂಭಿಸಿದಳು.

೧೧೬ನೆಯ ರಾತ್ರಿ ಕಥೆ.

ಷಹರಜಾದಿ ಸುಲ್ತಾನನ್ನು ಕುರಿತು, ಪ್ರಿಯರೇ ! ಗಯಫರನು ಕಲೀಫನನ್ನು ಕುರಿತು, ಮತ್ತಿಂತೆಂದನು :—ಹೀಗೆ ಹೇಳಿದ ಬದರೋದೀನನನ್ನು ನೋಡಿ ಏಜೀಬನು ಅಯ್ಯಾ ! ನೀನು ನನ್ನಲ್ಲಿ ತೋರಿಸುವ ಕರುಣವು ಸಾಮಾನ್ಯವಾದುದಕ್ಕಿಂತಲೂ, ಅತಿಶಯವಾಗಿರುವುದರಿಂದ, ನನ್ನ ಬೆನ್ನುಹತ್ತಿ ಬರುವದಿಲ್ಲವೆಂದು, ನೀನು ಹೇಳಿದಹೊರತು ನಾನು ಅಂಗಡಿಯೊಳಕ್ಕೆ ಬರುವುದಿಲ್ಲ. ನನ್ನ ತಾತನಾದ ಮುಂತ್ರಿಯು, ಈಜಿಪ್ಟ್ ದೇಶದ ಸುಲ್ತಾನರಿಗೆ, ಬೇಕಾಗುವ ಸಾಮಾನುಗಳನ್ನು ಕೊಳ್ಳುವುದಕ್ಕಾಗಿ ಇನ್ನು ಮೂರು ದಿನಗಳು ಇಲ್ಲಿ ಇರುವನು. ಆದುದರಿಂದ ಪುನಹ ನಾನು ನಿನ್ನನ್ನು ನೋಡುವೆನೆಂದು ಹೇಳಲು, ಬದರೋದೀನನು, ನಿನ್ನ ಇಷ್ಟಾನುಸಾರವಾಗಿ, ನಡೆವುದಕ್ಕೆ ಸಿದ್ಧನಾಗಿರುವೆನೆಂದುಹೇಳಲು ಕೂಡಲೆ ಅವರಿಬ್ಬರೂ ಅಂಗಡಿಗೆ ಹೋದರು. ಬಳಿಕ ಬದರೋದೀನನು ಅವರ ಮುಂದೆ ಮಿಠಾಯಿಗಳನ್ನು ತಂದಿಟ್ಟನು. ಅವರು ಅದನ್ನು ತಿನ್ನುತ್ತಾ

ಆತನಸಂಗಡ ಮಾತನಾಡುತ್ತಿರುವಾಗ, ಏಜೀಬನು ಅಯ್ಯಾ ! ಇಲ್ಲಿಬಾ ! ಎಂದು ಕರೆಯಲು, ಬದರೋದೀನನು ಅತ್ಯಾನಂದದಿಂದಾತನ ತಟ್ಟೆಯಬಳಿಯಲ್ಲಿ ಕುಳಿತುಕೊಂಡು, ಆತನನ್ನು ಆಲಿಂಗಿಸಿಕೊಳ್ಳುವುದಕ್ಕೆ ಹೋದನು. ಆಗ ಏಜೀಬನು ಸುಮ್ಮನಿರು, ನೀನು ದೂರವಾಗಿ ಕುಳಿತು ಮಾತನಾಡುವುದೇ ಸಾಕೆಂದು ಹೇಳುತ್ತಾ ತಾನೆ ಮಾಡಿದ್ದ ಮೊದಲಿಗಿಂತಲೂ ರುಚಿಕರವಾಗಿದ್ದ ಪಿಠಾಯಿ ಮೊದಲಾದ ಭಕ್ಷ್ಯಗಳನ್ನು ಅವರಿಬ್ಬರೂ ತಿಂದು ಸಂತೋಷಯುಕ್ತರಾಗಿ ಕೈತೊಳೆದುಕೊಂಡು ಕುಳಿತರು. ಆಗ ಬದರೋದೀನನು, ಅತ್ಯುತ್ತಮವಾದ ಗುಲಾಬಿಹೂವಿನ ಷರಬತ್ತಿಗೆ ತಂಪಾದ ಮಂಜುಗಡ್ಡೆಯನ್ನು ಸೇರಿಸಿ, ತೆಗೆದುಕೊಂಡುಬಂದು, ಅಯ್ಯಾ ! ರಾಜಪುತ್ರ ! ಈ ದೇಶದಲ್ಲಿ ಇದು ಅತ್ಯುತ್ಕೃಷ್ಟವಾದ ಪಾನಕವಾಗಿರುವುದು. ಇಂಥಾದ್ದನ್ನು ನೀನು ಯೆವಾಗಲೂ ಕುಡಿದವನಲ್ಲ. ಇದನ್ನು ಕುಡಿದು ನೋಡೆಂದು ಕೊಡಲು, ಆತನು ಅದನ್ನು ಕುಡಿದಬಳಿಕ ಬದರೋದೀನನು ಆ ಬಟ್ಟಲನ್ನು ತೆಗೆದುಕೊಂಡು, ಅದರತುಂಬ ಷರಬತ್ತನ್ನು ಹಾಕಿ, ನಪುಂಸಕನಿಗೆ ಕೊಟ್ಟು, ಆತನು ಕುಡಿದಬಳಿಕ ತಾನು ಸ್ವಲ್ಪವನ್ನು ಕುಡಿದು ತೃಪ್ತನಾದನು.

ಏಜೀಬನು ಮತ್ತು ಆತನ ಕಾವಲಗಾರನೂಸಹ, ಬದರೋದೀನನು ತಮಗೆ ಮಾಡಿದ ಉಪಚಾರಕ್ಕಾಗಿ, ಆತನನ್ನು ಬಹಳವಾಗಿ ವಂದಿಸಿ, ಸ್ವಲ್ಪಹೊತ್ತು ಅಲ್ಲೆ ಕುಳಿತುಕೊಂಡಿದ್ದು, ಆತನಿಂದಪ್ಪಣೆಯನ್ನುತೆಗೆದುಕೊಂಡು, ತಮ್ಮ ಗುಡಾರದಬಳಿಯನ್ನು ಸೇರಿದರು. ಕೂಡಲೇ ಏಜೀಬನು ರಾಣಿವಾಸದವರಿರುವ ಜೀರೆಗೆ ಬರಲು, ಅವನ ಅಜ್ಜಮ್ಮನು ತನ್ನ ಮಗನಾದ ಬದರೋದೀನನನ್ನು ನೆನಸಿಕೊಂಡು ವ್ಯಥೆಪಡುತ್ತಿದ್ದುದನ್ನು ತೊರೆದು, ಏಜೀಬನನ್ನು ಆನಂದದಿಂದ ಆಲಿಂಗಿಸಿ ಮುತ್ತಿಟ್ಟುಕೊಂಡು, ನಿನ್ನ ತಂದೆಯನ್ನು ಆಲಿಂಗಿಸಿಕೊಂಡರೆ, ನನ್ನಮನೋರಥವು ಪೂರ್ತಿಯಾಗುವುದೆಂದು ಹೇಳಿದಳು. ಏಜೀಬನಾದರೋ ತನ್ನ ನಪುಂಸಕ ಸರದಾರನನ್ನು ಹತ್ತಿರ ಕುಳ್ಳಿಸಿಕೊಂಡು, ಬದರೋದೀನನು ತಮಗೆಮಾಡಿದಉಪಚಾರವನ್ನು ಕುರಿತು ಮಾತನಾಡುತ್ತಿರುವಾಗ, ಸರ್ವರೂ ಭೋಜನಕ್ಕೆ ಹೊರಟರು. ಏಜೀಬನು ತನ್ನಜ್ಜಿಯಸಂಗಡ, ತನಗೆ ಹಸಿವಿಲ್ಲವೆಂದು

ಹೇಳಿದುದರಿಂದ ಆಕೆ ದಾರಿಗಾಗಿ ಮಾಡಿಕೊಂಡುಬಂದಿದ್ದ ಮಿಠಾಯಿಗಳನ್ನು ತಿನ್ನುವುದಕ್ಕೆ ತಂದುಕೊಟ್ಟಳು. ಅದು ಸ್ವಭಾವತಃ ಬಹು ರುಚಿಕರವಾಗಿದ್ದಿತು. ಏಜೀಬನು ತನ್ನಸರದಾರನಿಗೂ ಸ್ವಲ್ಪವನ್ನುಕೊಟ್ಟನು. ಆದರೂ, ಅವರಿಬ್ಬರೂ, ಬದರೋದೀನನ ಅಂಗಡಿಯಲ್ಲಿ ತೃಪ್ತಿಯಾಗಿ ಭಕ್ಷಿಸಿದಂತೆ ಇಲ್ಲಿ ತಿನ್ನಲಾರದೆ ಹೋದರು ಎಂದುಹೇಳಿ, ಬೆಳಗಾದುದರಿಂದ ಕಥೆಯನ್ನು ನಿಲ್ಲಿಸಿ, ಷಹರಜಾದಿ ಮರಳಿ ಬೆಳಗಿನ ಜಾವದಲ್ಲಿ ಹೇಳಲಾರಂಭಿಸಿದಳು.

೧೧೭ ನೆಯ ರಾತ್ರಿ ಕಥೆ.

ಬಳಿಕ ಷಹರಜಾದಿಯು ಸುಲ್ತಾನನ್ನು ನೋಡಿ, ಪ್ರಭುವೇ! ಗಯೆಫರನು ಕಲೀಫರನ್ನು ಕುರಿತು, ಇಂತೆಂದು ಹೇಳಲಾರಂಭಿಸಿದನು. ಹೀಗೆ ತಮ್ಮ ಅಜ್ಜಿಯು ತಂದಿಟ್ಟ ಮಿಠಾಯಿಯೆನ್ನು ಮುಟ್ಟಿನೋಡಿ, ತಮಗಿಷ್ಟವಿಲ್ಲದುದರಿಂದ, ಏಜೀಬನೂ ಅವನ ಕಾವಲುಗಾರನಾದ ಷಾಬಾನನೂಸಹ, ಸುಮ್ಮನಾದರು. ಅದನ್ನುಕಂಡು ನೌರೋದೀನನ ಹೆಂಡತಿಯು ವ್ಯಸನಾಕ್ರಾಂತಳಾಗಿ, ಏನಯ್ಯಾ! ನಾನು ಮಾಡಿದುದನ್ನು ನೀನು ತಿನ್ನಬಾರದೆಂದಿರುವೆಯೋ, ಇದು ಬಹು ರುಚಿಕರವಾಗಿರುವುದು. ನಿಮ್ಮ ತಂದೆಯಾದ ಬದರೋದೀನನ ಹೊರತು, ಮತ್ತಾರೂ ಇಂತಹ ರುಚಿಕರವಾದ ಮಿಠಾಯಿಗಳನ್ನು ಮಾಡಲಾರರೆಂದು ಹೇಳಿದಳು. ಆ ಮಾತನ್ನು ಕೇಳಿ ಏಜೀಬನು, ಅಜ್ಜೀ! ನೀನು ಹಾಗೆಂದಿಗೂ ಯೋಚಿಸಬೇಡ! ಈ ಊರಲ್ಲೊಬ್ಬ ಮಿಠಾಯಿ ಅಂಗಡಿಯವನಿರುವನು. ಆತನು ಮಾಡಿದ ಪದಾರ್ಥಗಳು ಇದಕ್ಕಿಂತಲೂ ರುಚಿಕರವಾಗಿರುವುದು. ನಾವು ಇಬ್ಬರೂ ಈಗತಾನೆ ಅಂಗಡಿಗೆ ಹೋಗಿ ಸ್ವಲ್ಪಹೊತ್ತು ಕುಳಿತಿದ್ದು, ಆತನು ಮಾಡಿದುಪಚಾರಕ್ಕೆ ತುಂಬ ಸಂತೋಷಪಟ್ಟು, ಹೊಟ್ಟೆತುಂಬ ಮಿಠಾಯಿಯನ್ನು ತಿಂದುಬಂದೆವೆಂದು ಹೇಳಿದನು. ಏನು ನೀವಿಬ್ಬರೂ ಅಂಗಡಿಗೆ ಹೋಗಿ ಮಿಠಾಯಿಯನ್ನು ತಿಂದುಬ್ಂದಿರಾ! ಎಂದು ಕೇಳಲು, ಅಮ್ಮಾ! ಕ್ಷಮಿಸಬೇಕು. ನಾನೂ ಈ ಹುಡುಗನೂ ಹೋಗುತ್ತಿರುವಾಗ, ಆತನು ಬಲಾತ್ಕಾರದಿಂದ, ನಮ್ಮನ್ನು ಪ್ರಾರ್ಥಿಸಿದುದರಿಂದ ನಾವು ತಿಂದುಬಂದುದುಂಟೆಂದು, ಷಾಬಾನನೆಂಬ ನಪುಂಸಕನೂ ಹೇಳಿದನು. ಈ ಮಾತುಗಳನ್ನು ಕೇಳಿಕೊಂಡುಹೋಗಿ ಆ ಮುದುಕಿಯು ತನ್ನ ಮೈದುನ ಸಂಗಡ ಹೇಳಿದಳು. ಆತನು ಸ್ವಭಾವತಃ ಕೋಪಿಷ್ಟನಾದುದರಿಂದ, ತನ್ನವೊಮ್ಮಗ

ನನ್ನು ಖೋಜೌ ಪುರುಷನಿಂದ ಷಾಖಾನನನ್ನು ಬರವಾಡಿ ಕೇಳಲು, ಏಜೀಬನು ತಾತಾ ! ನಾವಿಬ್ಬರೂ, ಆ ಮಿಠಾಯಿಯಂಗಡಿಯಲ್ಲಿ ರುಚಿಕರವಾದ ಆಹಾರವನ್ನು ಸಂಪೂರ್ಣವಾಗಿ ತಿಂದು ಷರಬತ್ತನ್ನು ಕುಡಿದೆವೆಂದು ದೇಳಿದನು. ಆದರೆ ಷಾಬಾನನು, ಸ್ವಭಾವತಃ ಯುಕ್ತಿವಂತನಾದುದರಿಂದ, ನಾವು ತಿನ್ನಲಿಲ್ಲವೆಂದು ಸಾಧಿಸಿದನು. ಷಂಸುದೀನನು ಬಹು ಕೋಪದಿಂದ ಹಾಗೆ ನೀನು ತಿನ್ನದಿರುವುದು ನಿಜವಾದರೆ ಈ ವೇಜೌದವೇಲಿರುವ ಮಿಠಾಯಿಯನ್ನು ತಿಂದರೆ ನಿನ್ನ ಮಾತನ್ನು ನಂಬುವೆನು. ಇಲ್ಲವಾದರೆ ನನ್ನ ವೊಮ್ಮಗನು ಹೇಳುವ ಮಾತೇ ಸಹಜವೆಂದು ಭಾವಿಸುವೆನೆಂದು ಕೋಪಿಸಿ ಕೊಳಲು, ಹಟವಾದಿಯೊದ ಷಾಬಾನನು, ತಾನು ವೊದಲು ಬದರೋದೀನನ ಅಂಗಡಿಯೆಲ್ಲಿ ಕಂಠಪೂರ್ತಿಯಾಗಿ ತಿಂದಿದ್ದರೂ, ತನ್ನಹಟವನ್ನು ಸಾಧಿಸುವುದಕ್ಕೆ ತಟ್ಟೆಯ ಮುಂದೆ ಕುಳಿತು, ಒಂದು ಚೂರನ್ನು ತೆಗೆದು ಬಾಯಿಯೆಲ್ಲಿ ಹಾಕುತ್ತಲೆ, ಹೊಟ್ಟೆತುಂಬ ಊಟಮಾಡಿದವನು ತೇಗುವಂತೆ ತೇಗಿದನು. ಅದನ್ನು ನೋಡಿ, ಈತನು ಸುಳ್ಳುಗಾರನು, ಇವನ ಮಾತನ್ನು ನಾನು ನಂಬಲಾರೆನು, ನನ್ನಸಂಗಡ ವೋಸದ ಮಾತುಗಳ ನ್ನಾಡಿದುದರಿಂದ, ಈತನು ಭೂಮಿಗೆ ಬೀಳುವವರಿಗೂ ಹೊಡೆಯೆರೆಂದು, ತನ್ನ ಚಾರಕರಿಗೆ ಆಜ್ಞಾಪಿಸಲು, ಅವರು ಅವನ ವೈಯ್ಯನ್ನು ಸಂಪೂರ್ಣವಾಗಿ ಬಿಚ್ಚಗೆ ಮಾಡಿದರು. ಆತನು ನೋವನ್ನು ತಾಳಲಾರದೆ ಅಯ್ಯೊ ! ನಾನು ಆ ಮಿಠಾಯಿಯಂಗಡಿಯಲ್ಲಿ ತಿಂದುದುಂಟು. ಆ ಭಕ್ಷ್ಯಗಳು ಇದಕ್ಕಿಂತಲೂ ಅತ್ಯಂತ ರುಚಿಕರವಾಗಿದ್ದವೆಂದು ಕೂಗಿಕೊಂಡನು.

ಬಳಿಕ ನೌರೋದೀನಲ್ಲಿಯೆ ಹೆಂಡತಿಯು ಇವರಿಬ್ಬರೂ, ನಾನು ಮಾಡಿದ ಮಿಠಾಯಿಯನ್ನು ನಿಂದಿಸಿ, ಈ ಊರಿನ ಅಂಗಡಿಯವನನ್ನು ಹೊಗಳಿದರು. ಆದುದರಿಂದ ಅದನ್ನು ಪರೀಕ್ಷಿಸಿ ನೋಡಬೇಕೆಂದು, ಬೇಕಾದಷ್ಟು ಹಣವನ್ನು ಕೊಟ್ಟು ಆ ನಪುಂಸಕನಾದ ಷಾಬಾನನನ್ನು ಕುರಿತು, ನೀನು ಈಗಲೆ ಹೋಗಿ ಆ ಮಿಠಾಯಿಯಂಗಡಿಯಲ್ಲಿ ಉತ್ತಮವಾದುದನ್ನು ತೆಗೆದುಕೊಂಡುಬಾ ಎಂದು ಹೇಳಲು, ಕೂಡಲೆ ಓಡಿಬಂದು ಅಂಗಡಿಯವನನ್ನು ನೋಡಿ, ಅಯ್ಯಾ ! ಈ ರೂಪಾಯಿಯನ್ನು ತೆಗೆದುಕೊಂಡು, ನಿನ್ನಲ್ಲಿರುವ ಉತ್ತಮವಾದ ಮಿಠಾಯಿಯನ್ನು ಕೊಡು. ನಮ್ಮ ಬಿಡಾರ

ದಲ್ಲಿರುವ ಒಬ್ಬ ದೊಡ್ಡಸಾನಿಯು ಅದನ್ನು ತಿನ್ನಬೇಕೆಂದಿರುವಳೆಂದು ಹೇಳಲು, ಬದರೋದೀನನು ಕೂಡಲೆ ತನ್ನಲ್ಲಿದ್ದ ಉತ್ತಮವಾದ ಪದಾರ್ಥಗಳನ್ನು ತೆಗೆದುಕೊಂಡು, ಇಂತಹ ವಿಚಾರಯಿಯೆನ್ನು ಮಾಡುವುದಕ್ಕೆ ನಮ್ಮ ತಾಯಿಗೆ ಹೊರತು, ಮತ್ತಾರಿಗೂ ಬರದು. ಆಕೆ ಈಗ ಬದುಕಿರುವಳೊ ಇಲ್ಲವೊ, ಕಾಣೆನೆಂದು ಹೇಳಿದನು. ನಂತರ ಅದನ್ನು ಆ ನಪುಂಸಕನು ವೇಗವಾಗಿ ತೆಗೆದುಕೊಂಡುಬಂದು ನೌರೋದೀನಲ್ಲಿಯ ಹೆಂಡತಿಯ ಕೈಗೆ ಕೊಟ್ಟನು. ಆಕೆ ಅದನ್ನು ನೋಡಿ, ಬಹು ಸಂತೋಷದಿಂದ ಬಾಯಿಯೆಲ್ಲಿ ಹಾಕಿಕೊಂಡು, ಕೂಡಲೆ ಮೂರ್ಛಾಕ್ರಾಂತಳಾದಳು. ಆಗ ಷಂಸುದೀನನು ಮೊದಲಾದವರು ಮಾಡಿದ ಶೈತ್ಯೋಪಚಾರದಿಂದ ಮೂರ್ಛೆತಿಳಿದೆದ್ದು, ಹಾ ! ಆಹಾ ! ದೇವರೇ ! ಈ ವಿಚಾರಯಿಯೆನ್ನು ಮಾಡಿದವನು ನನ್ನ ಮಗನಾದ ಬದರೋದೀನನೇ ಹೊರತು, ಮತ್ತಾರೂ ಅಲ್ಲವೆಂದು ಹೇಳಲು, ಷಂಸುದೀನನು ಅದನ್ನು ಕೇಳಿ ಆಶ್ಚರ್ಯಯುಕ್ತನಾದನು ಎಂದ ಹೇಳುತ್ತಿರುವಾಗಲೆ, ಸೂರ್ಯೋದಯವಾದುದರಿಂದ ಕಥೆಯನ್ನು ನಿಲ್ಲಿಸಿ, ಷಹರಜಾದಿಯು ಬೆಳಗಿನಜಾವದಲ್ಲಿ ಮತ್ತೆ ಹೇಳಲಾರಂಭಿಸಿದಳು.

೧೧೪ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು, ಪ್ರಭುವರೇ ! ಪ್ರಧಾನಮಂತ್ರಿಯಾದ ಗಯಿಫರನು ಕಲೀಫರನ್ನು ಕುರಿತು ಇಂತೆಂದು ನುಡಿದನು. ಷಂಸುದೀನನು ತನ್ನ ನಾದಿನಿಯ ಮಾತುಗಳನ್ನು ಕೇಳಿ, ಆನಂದಭರಿತನಾದನು. ಆದರೆ ತನ್ನ ಆನಂದವು ಎಲ್ಲಿ ವ್ಯರ್ಥವಾಗುವುದೊ, ಇಲ್ಲವೆ ನನ್ನ ನಾದಿನಿಯ ಮಾತುಗಳು ಸುಳ್ಳಾಗುವವೊ, ಎಂದು ಯೋಚಿಸುತ್ತ, ತನ್ನ ನಾದಿನಿಯೆನ್ನು ಕುರಿತು ಅಮ್ಮಾ ! ಈ ವಿಚಾರಯಿಯೆನ್ನು ಮಾಡಿದವನೇ ನಿನ್ನ ಮಗನೆಂದು ಹೇಗೆ ಹೇಳುವೆ ? ಆತನಂತೆ ವಿಚಾರಯಿಯೆನ್ನು ಮಾಡತಕ್ಕವರು ಯಾರೂ ಇಲ್ಲವೆ ? ಎಂದು ಕೇಳಿದನು. ಅಯ್ಯಾ ! ಲೋಕದಲ್ಲಿ ಉತ್ಕೃಷ್ಟವಾದ ವಿಚಾರಯಿಯೆನ್ನು ಮಾಡತಕ್ಕವರು ಬಹು ಮಂದಿ ಇದ್ದರೂ, ನಾನು ಮಾಡತಕ್ಕ ತರಹೆಯ ವಿಚಾರಯಿಯೆನ್ನು ಮಾಡತಕ್ಕವನು ನನ್ನ ಮಗನುಬೊರತಾಗಿ ಮತ್ತಾರೂ ಇಲ್ಲ. ಅದನ್ನು ಮಾಡುವ ರಹಸ್ಯವು ಆತನಿಗೆ ತಿಳಿಯುವುದು. ಇದರಿಂದ ಇದನ್ನು

ಮಾಡಿದವನು ನನ್ನ ಮಗನೇ ಸರಿಯೆಂದು ನಾನು ಖಂಡಿತವಾಗಿ ಹೇಳುವೆನೆಂದಳು. ನಾವು ಬಹುದಿನಗಳಿಂದ ಹುಡುಕುತ್ತಿದ್ದರೂ, ನಮ್ಮ ಶ್ರಮವು ಸಾರ್ಥಕವಾಗದೆ ಹೋಗಿ ಈಗಮಾತ್ರ ಅತ್ಯುತ್ಸಾಹ ಉಂಟಾಗುವಂತಿದೆ. ಅಮ್ಮಾ ! ಹೇಗಾದರೂ ಮಾಡಿ, ಇದರ ಕೂಲಂಕಷವನ್ನು ವಿಚಾರಿಸಲೇ ಬೇಕು. ಇದಕ್ಕಾಗಿ ನಾವು ಮಾಡಬೇಕಾದುದೇನಂದರೆ :-ನಿನಗೂ, ನನ್ನ ಮಗಳಿಗೂ, ಬದರೋದೀನನ ಗುರುತು ಚೆನ್ನಾಗಿ ತಿಳಿದಿರುವುದರಿಂದ, ಆತ ನನ್ನು ನೋಡಿದಕೂಡಲೆ ಹೌದು ಅಲ್ಲವೆಂಬುದನ್ನು ಹೇಳಬಲ್ಲಿರಿ, ಆದುದ ರಿಂದ ನೀವು ಅವನನ್ನು ನೋಡುವಂತೆ ಅಡಗಿಕೊಂಡಿರಿ, ಏತಕ್ಕಂದರೆ :— ಆತನು ನಿಮ್ಮನ್ನು ನೋಡದಂತೆ, ನಾನು ಎಚ್ಚರಿಕೆಯಿಂದ ನೋಡಿಕೊ ಳ್ಳುವೆನು. ಈ ಸ್ಥಲದಲ್ಲಿ ನಾವುಗಳು ಇಂಥವರೆಂದು ಒಬ್ಬರಿಗೊಬ್ಬರು ಕಲಿಯುವುದಕ್ಕನುಕೂಲವಾಗಿದ್ದರೂ, ನನಗದು ಇಷ್ಟವಿಲ್ಲ.

ನಾವು ಕೈರೋ ನಗರದ ಸವಿಾಪವನ್ನು ಸೇರಿದಾಗ, ನಾವಿಂಥವರೆಂದು ತಿಳಿಸಿ, ನಿಮ್ಮಗಳಿಗೆ ಸಂತೋಷವನ್ನುಂಟುಮಾಡುವೆನೆಂದು ಹೇಳಿ, ಅಲ್ಲಿಂದ ಹೊರಟು, ತನ್ನ ಗುಲಾಮರನ್ನು ಸೇರಿ, ಎಂಟುಜನ ಸೇವಕರನ್ನು ಕರೆದು, ಅಯ್ಯಾ ! ನೀವುಗಳು, ಈ ಊರಿನಲ್ಲಿ ಮಿಠಾಯಿಯಂಗಡಿಯವನ ಬಳಿಗೆ ಹೋಗಿ, ಆತನಬಳಿಯಿಲ್ಲಿರುವ ಪದಾರ್ಥಗಳನ್ನು ಹೊಡೆದು ಚೂರು ಚೂರು ಮಾಡುತ್ತಿರಿ, ಆಗ ಆತನು ಏತಕ್ಕೆ ಹೀಗೆ ಮಾಡುತ್ತಿರುವಿರೆಂದು ಕೇಳಿದರೆ, ನಮ್ಮಗಳಿಗೆ ಮಿಠಾಯಿಯೆನ್ನು ಕೊಟ್ಟು ಕಳುಹಿಸಿದವನು ನೀನೆಯೊ ? ಹೌದು ನಾನೇ ಆತನೆಂದು ಹೇಳಿದರೆ, ಆತನನ್ನು ಹಿಂಸೆ ಮಾಡ ದಂತೆ ಜೋಪಾನದಿಂದಿಲ್ಲಿಗೆ ಕರೆದುಕೊಂಡು ಬನ್ನಿರೆಂದು ಹೇಳಿ, ಅವರನ್ನು ಕಳುಹಿಸಿದನು. ಆ ಚಾರಕರು, ಅಲ್ಲಿಂದ ಹೊರಟು ಆ ಖೋಜಾ ಸರದಾರ ನನ್ನು ಹಿಂದೆಹಾಕಿಕೊಂಡು, ಬದರೋದೀನನ ಅಂಗಡಿಗೆ ಬಂದು, ಅಲ್ಲಿರುವ ಪದಾರ್ಥಗಳನ್ನೆಲ್ಲ ಒಡೆದು ಚೂರು ಚೂರು ಮಾಡುತ್ತಿರಲು, ಬದರೋ ದೀನನು ಅಯ್ಯಾ ! ನೀವು ಹೀಗೆ ನನ್ನ ಪದಾರ್ಥಗಳನ್ನೆಲ್ಲಾ ಏತಕ್ಕೆ ಒಡೆದುಹಾಕುತ್ತಿರುವಿರಿ, ನಾನು ಅಂತಹ ಅಪರಾಧವನ್ನೇನೂ ಮಾಡಿದವನಲ್ಲ ವಲ್ಲಾ ! ಎಂದು ಹೇಳಲು, ಚಾರಕರು ಅವನನ್ನು ನೋಡಿ, ಮಿಠಾಯಿ ಯನ್ನು ಮಾಡಿ ಗುಡಾರಕ್ಕೆ ಕಳುಹಿಸಿದವನು ನೀನೆಯೊ, ಎಂದು ಕೇಳಿದರು,

ಆಗ ಬದರೋದೀನನು ಅಯ್ಯಾ ! ನಾನೇ ನಿಮ್ಮಗುಡಾರಕ್ಕೆ ಮಿಠಾಯಿ ಯೆನ್ನು ಕಳುಹಿಸಿದವನು, ಅದಕ್ಕಿಂತಲೂ ಉತ್ತಮವಾದ ಮಿಠಾಯಿ ಯೆನ್ನು ಮತ್ತಾರೂ ಮಾಡಲಾರರು. ಆ ಮಿಠಾಯಿಯು ಚೆನ್ನಾಗಿರಲಿಲ್ಲ ವೆಂದು ನಿಮಗಾರುಹೇಳಿದರು ತಿಳಿಸಿ ಎನ್ನುತ್ತಿರುವಾಗಲೆ ಚಾರಕರು ತಮ್ಮ ತಲೆಯ ಪಾಗಿನಿಂದಾತನ ಕೈಗಳನ್ನು ಕಟ್ಟಿ, ಕರೆದುಕೊಂಡು ಹೊರಟರು. ಆಗ ಊರಿನವರೆಲ್ಲರೂ, ಬದರೋದೀನನ ವಿಷಯದಲ್ಲಿ ಈ ಚಾರಕರು, ಅನ್ಯಾಯ ಮಾಡಿರುವರೆಂದು ಹೇಳಿಕೊಳ್ಳುತ್ತಿದ್ದರು. ರಾಜಭಟರು, ಈ ಚಾರಕರನ್ನು ನಿಗ್ರಹಿಸಿ ಬದರೋದೀನನ್ನು ಕರೆದುಕೊಂಡು ಹೋಗು ವುದರಲ್ಲಿದ್ದರು. ಅಷ್ಟರಲ್ಲಿಯೇ ಷಂಸುದೀನನು ಸುಲ್ತಾನರಬಳಿಗೆ ಹೋಗಿ ತಾನು ಮಾಡಿದ ಕಾರ್ಯವನ್ನು ಹೇಳಿಕೊಂಡನು. ಆಗ ಸುಲ್ತಾನನು ಆ ಮಂತ್ರಿಯನ್ನು ಕುರಿತು, ಅಯ್ಯಾ ! ಬದರೋದೀನನು ನನ್ನ ಪ್ರೀತಿ ಪಾತ್ರನಾದುದರಿಂದ, ಆತನನ್ನು ಹಿಂಸಿಸಬೇಡವೆಂದು ಹೇಳಿಕಳುಹಿಸಿದನು. ಆದುದರಿಂದ ಷಂಸುದೀನನು ಮಹಮ್ಮದನು ಬದರೋದೀನನು ಎಷ್ಟು ಹೇಳಿಕೊಂಡಾಗ್ಯೂ ಕೇಳದೆ, ಆತನನ್ನು ಹಿಡಿದುಕೊಂಡು ಹೊರಟು ಹೋದರೆಂದು, ಷಹರಜಾದಿಯು ಹೇಳುವಷ್ಟರಲ್ಲಿ, ಬೆಳಗಾದುದರಿಂದ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಹೇಳಲಾರಂಭಿಸಿದಳು.

೧೧೫ ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನನ್ನು ನೋಡಿ, ಪ್ರಭುವರೇ ! ಬಳಿಕ ಗಯಾಥುದೀನು ಕಲೀಫರನ್ನು ನೋಡಿ, ಇಂತೆಂದು ಹೇಳತೊಡಗಿದನು. ಆ ಬದರೋದೀನನು ತನ್ನನ್ನು ಕರೆದುಕೊಂಡುಹೋಗುತ್ತಿರುವ ಆಳುಗಳನ್ನು ಕುರಿತು, ಅಯ್ಯಾ ! ನಾನು ಮಾಡಿದ ಮಿಠಾಯಿಯಲ್ಲಿ, ಏನಾದರೂ ತಪ್ಪುಗ ಳಿದ್ದರೆ ಹೇಳಿ, ಸುಮ್ಮನೆ ನನ್ನನ್ನು ಏಕೆ ಹೀಗೆ ಪೀಡಿಸುವಿರಿ ಎಂದು ಬೇಡಿಕೊಂಡರೂ ಆ ಜನರು ತಮ್ಮ ಮಂತ್ರಿಯು, ಪವಾಸ್ಕಸ್ಸಿನ ರಾಜನಬಳಿಗೆ ಹೋಗಿದ್ದುದರಿಂ ಆತನು ಬರುವವರೆಗೂ, ಕುಳ್ಳಿರಿಸಿ ಕೊಂಡಿದ್ದರು. ಮಂತ್ರಿಯು ಬಂದಕೂಡಲೆ, ಬದರೋದೀನನು ಆತನನ್ನು ಕುರಿತು, ನಾನು ಮಾಡಿದ ಅಪರಾಧವೇನೆಂಬುದನ್ನು ದಯೆಮಾಡಿ ತಿಳಿಸ ಬೇಕೆಂದು ಬೇಡಿಕೊಂಡನು. ಆಗ ಮಂತ್ರಿಯು ಎಲಾ ! ನಿರ್ಭಾಗ್ಯ

ಶಿಖಾಮಣಿ, ವಿಶ್ವಾಯಿಯೆನ್ನು ಕಳುಹಿಸಿದವನು ನೀನೆಯೊ ? ಎಂದು ಕೇಳಲು, ಆತನು ಹೌದಯ್ಯಾ ! ನಾನೆ ನಿಮ್ಮಬಳಿಗೆ ವಿಶ್ವಾಯಿಯೆನ್ನು ಕಳುಹಿಸಿದವನು. ಆದರೆ ನನ್ನ ಅಪರಾಧವೇನು ಹೇಳಬಲ್ಲಿರಾ ? ಎಂದು ಕೇಳಿದನು. ಮಂತ್ರಿಯು ಆತನನ್ನು ಕುರಿತು, ನೀನು ಅಂತಹ ಅಸಹ್ಯ ಕರವಾದ ವಿಶ್ವಾಯಿಯೆನ್ನು ಕಳುಹಿಸಿದುದಕ್ಕಾಗಿ, ನಿನ್ನ ಪ್ರಾಣವನ್ನು ತೆಗೆದುಕೊಳ್ಳಬೇಕೆಂದು ಹೇಳಿದರೂ ಆಹಾ ! ಇದೇನು ಆಶ್ಚರ್ಯ ! ವಿಶ್ವಾಯಿಯು ಕೆಟ್ಟುಹೋಗಿದ್ದರೆ, ಮಾಡಿದವನನ್ನು ಕೊಲ್ಲಬೇಕೆ ? ಎನಲು ಮಂತ್ರಿಯು, ಅಯ್ಯಾ ನನ್ನಿಂದ ನಿನಗೆ ತೊಂದರೆಯೆಂಟಾಗುವುದೇ ಹೊರತು, ಸುಖವೆಂದಿಗೂ ಇಲ್ಲವೆಂದು ಹೇಳಿದನು. ಇಂತಹ ವಾಗ್ವಾದವನ್ನು ನೋಡುತ್ತಿದ್ದ ರಾಣಿವಾಸದವರು, ಬದರೋದೀನನನ್ನು ಚೆನ್ನಾಗಿ ದೃಷ್ಟಿಸಿನೋಡಿ ಈತನೆ, ನಮ್ಮಕೋರಿಕೆಯ ಬದರೋದೀನನೆಂದು ಆನಂದಭರಿತರಾಗಿ, ಆಲಿಂಗಿಸಿಕೊಳ್ಳುವ ಅನಂದಕ್ಕಾಗಿ ತವಕಪಡುತ್ತಿದ್ದರೂ, ತಾವು ಮಂತ್ರಿಯ ಆಜ್ಞೆಗೆ ಬಳಪಟ್ಟವರಾಗಿ, ಸುಮ್ಮನಾಗಿ, ಮ್ಮೈಮರೆದು ಪುನಹ ಎಚ್ಚೆತ್ತರು.

ಬಳಿಕ ಷಂಸುದೀನನು, ಆದಿನ ಸಾಯಿಂಕಾಲವೇ ತನ್ನ ಸುಡಾರವನ್ನು ಕೀಳಿಸಿ, ಹೊರಡುವುದಕ್ಕೆ ಬೇಕಾದ ಸನ್ನಾಹಗಳನ್ನು ಮಾಡಿಸಿದನು. ಆದರೆ ಬದರೋದೀನನನ್ನು ಬಲವಾಡೊಂದು ಪೆಟ್ಟಿಗೆಯಲ್ಲಿ ಹಾಕಿಸಿ, ಅದನ್ನು ಒಂಟೆಯೆಮೇಲೆ ಹೇರಿಕೊಂಡು, ಮೊದಲನೆಯ ಮಜಲಿನಲ್ಲಿ ಆತನ ತಾಯಿಯೆನ್ನು ಹೆಂಡತಿಯೆನ್ನು ಬಹುದೂರದಲ್ಲಿಟ್ಟು, ಆತನನ್ನು ಹೊರಕ್ಕೆ ತೆಗೆದು ಅನ್ನಪಾನಾದಿಗಳನ್ನು ಕೊಟ್ಟು, ಇಪ್ಪತ್ತು ದಿನಗಳವರೆಗೂ, ಇದೇತೆರದಿಂದ ಪ್ರಯಾಣ ಮಾಡುತಾ, ಕೊನೆಗೆ ಕೈರೊನಗರದ ಸವಿಾಪದಲ್ಲಿ ಬಂದಿಳಿದರು. ಆಗ ಮಂತ್ರಿಯು, ಬದರೋದೀನನನ್ನು ಕರೆಸಿ, ತನ್ನೆದುರಿಗೆ ನಿಲ್ಲಿಸಿಕೊಂಡು, ಒಂದು ಕೊರಡೆಯನ್ನು ತರುವಂತೆ ಹೇಳಿದನು. ಬದರೋದೀನನು ಕೊರಡೆ ಏತಕ್ಕೆಂದು ಕೇಳಲು, ಮೆಣಸನ್ನು ಹಾಕದೆ ನೀನು ನಮಗೆ ಕಳುಹಿಸಿದ್ದ ವಿಶ್ವಾಯಿಗಳನ್ನು ಮಾಡಿದುದಕ್ಕಾಗಿ, ನಿನ್ನನ್ನು ಈ ಪಟ್ಟಣದವರೆಲ್ಲರೂ ನೋಡುವಂತೆ ಹೊಡೆಯುವುದಕ್ಕಾಗಿಎಂದು ಹೇಳಿದನು. ಆಹಾ ! ಮೆಣಸನ್ನುಮಾತ್ರ ಹಾಕದಿದ್ದಿ

ದೋಷಕ್ಕಾಗಿ, ಪ್ರಾಣವನ್ನು ತೆಗೆಯಬಹುದೇ? ಎಂದು ಬದರೋದೀನನು ಬಹಳವಾಗಿ ಅಳುತ್ತಿದ್ದನೆಂದು ಹೇಳಿ, ಷಹರಜಾದಿ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಹೇಳತೊಡಗಿದಳು.

೧೨೧ ನೆಯ ರಾತ್ರಿ ಕಥೆ.

ಷಹರಜಾದಿ ಸುಲ್ತಾನನ್ನು ನೋಡಿ ಪ್ರಿಯರೇ! ಗಯಘರನು ಕಲೀಫರನ್ನು ಕುರಿತು, ಮುಂದೆ ಕಥೆಯನ್ನು ಹೇಳತೊಡಗಿದನು. ಎಂತೆಂದರೆ:—ಷಂಸುದೀನನು ಬದರೋದೀನನಿಗೆ ಪ್ರಾಣದಂಡನೆಯನ್ನು ಮಾಡಬೇಕೆಂದಿರುವುದನ್ನು ಹೇಳಿದಕೂಡಲೆ, ಆಹಾ! ಮಿಠಾಯಿಯೆಲ್ಲಿ ಮೊಣಸನ್ನು ಹಾಕುವುದುಂಟೆ? ಹಾಗೆ ಹಾಕಬೇಕಾಗಿದ್ದರೂ, ಹಾಕದಿದ್ದರೆ ಇಂತಹ ಶಿಕ್ಷೆಯನ್ನು ಮಾಡಬೇಕೆ? ಇದೆಂತಹ ವಿಚಿತ್ರವಾದ ಬುದ್ಧಿ ಎಂದು ಪರಿಹಾಸ್ಯ ಮಾಡಿ ನಗುತ್ತ ಮುಂದಿನ ಕಥೆಯನ್ನು ಕೇಳತೊಡಗಿದನು. ಬಳಿಕ ಬದರೋದೀನನು, ಅಯ್ಯಾ! ನಿರಪರಾಧಿಯಾದ ನನ್ನ ಅಂಗಡಿಯ ಸಾಮಾನುಗಳನ್ನು ಹಾಳುಮಾಡಿ, ನನ್ನನ್ನು ಮೃಗದೋಪಾದಿಯಲ್ಲಿ ಪೆಟ್ಟಿಗೆಯಲ್ಲಿ ಕೂಡಿ, ನಿರ್ಬಂಧದಲ್ಲಿಟ್ಟಿರುವದೂ ಸಾಲದೆ. ನನ್ನ ಪ್ರಾಣವನ್ನು ತೆಗೆಯಬೇಕೆಂದಿರುವಿರಲ್ಲಾ! ಉತ್ತಮರಾದ ಮುಸಲ್ಮಾನಪ್ರಭುಗಳು ಇಂತಹ ಕೃತ್ಯವನ್ನು ಮಾಡಬಹುದೆ? ಎಂದು ಹೇಳುತ್ತಿರುವಾಗ ಚಾಗಕರು ತನ್ನನ್ನು ದಂಡಿಸುವುದಕ್ಕೆ ಸಿದ್ಧರಾಗಿ ನಿಂತಿರುವುದನ್ನು ನೋಡಿ, ಬಹಳವಾಗಿ ಅಳುವುದಕ್ಕೆ ಪ್ರಾರಂಭಿಸಿದನು. ಮತ್ತು ಭಗವಂತನನ್ನು ಕುರಿತು, ಆಹಾ ದೈವವೇ! ನನಗೆ ಈಗ ಪ್ರಾಪ್ತವಾಗಿರುವ ದುರವಸ್ಥೆಯನ್ನು ನೋಡಿದೆಯಾ! ನಾನು ಯಾರನ್ನು ಹಿಂಸೆ ಮಾಡಿದೆನು, ಯಾರ ಪ್ರಾಣವನ್ನು ತೆಗೆದುಕೊಂಡೆನು. ಮತಾಚಾರವಿರುದ್ಧವನ್ನು ಆಚರಿಸಿದವನಾಗಿ ಏನಾದರೂ ಇರುವೆನೆ? ಯಾವುದೊಂದು ತಪ್ಪೂ ಇಲ್ಲದಿದ್ದರೂ, ಮಿಠಾಯಿಯೆಲ್ಲಿ ಮೊಣಸನ್ನು ಹಾಕದಿರುವುದಕ್ಕಾಗಿ ನನ್ನನ್ನು ಹೀಗೆ ದಂಡನೆಗೆ ನೀನು ಗುರಿಮಾಡಬಹುದೆ? ಎಂದು ಮೊರೆಯಿಟ್ಟನು.

ಅಷ್ಟರಲ್ಲಿ ರಾತ್ರಿಯು ಬಹಳಹೊತ್ತು ಕಳೆದುಹೋದುದರಿಂದ, ಷಂಸುದೀನನು ಬದರೋದೀನನನ್ನು ನೋಡಿ, ಹಾಗಾದರೆ ನಾಳೆರಾತ್ರಿಯವರೆಗೂ ಈ ಪೆಟ್ಟಿಗೆಯಲ್ಲಿರು. ಬಳಿಕ ನಿನ್ನನ್ನು ತಕ್ಕಂತೆ ಶಿಕ್ಷಿಸುವೆನೆಂದು ಹೇಳಿ, ಆತನನ್ನು ಪುನಶ್ಚ ಪೆಟ್ಟಿಗೆಗೆ ಸೇರಿಸಿ, ಒಂಟೆಯಮೇಲೆ ಹೇರಿ

ಕೊಂಡು ಮುಂದೆ ಹೊರಡುವಂತೆ ಆಜ್ಞಾಪಿಸಿ, ತನ್ನ ಪರಿವಾರಜನರಿಂದ ಕೂಡಿ, ನಗರದವರೆಲ್ಲರೂ ನಿದ್ರಿಸುತ್ತಿರುವ ಕಾಲದಲ್ಲಿ, ಪಟ್ಟಣವನ್ನು ಪ್ರವೇಶಿಸಿ, ತನ್ನ ಮನೆಯಬಳಿಗೆ ಬಂದು, ಯಾರಿಗೂ ತಿಳಿಯದೇನೆ, ಆ ಪೆಟ್ಟಿಗೆಯನ್ನು ಮನೆಗೆ ಸಾಗಿಸಿ, ನಾನು ಬರುವವರೆಗೂ ತೆರೆಯಕೂಡ ದೆಂದು ಆಜ್ಞೆ ಮಾಡಿದನು. ಚಾರಕರು ಸಾಮಾನುಗಳನ್ನು ಮನೆಗೆ ಸೇರಿಸುತ್ತಿದ್ದರು. ಷಂಸುದೀನನು ತನ್ನ ಮಗಳನ್ನು ಕರೆದು, ಮಗುವೆ ! ನಿನ್ನ ಚಿಕ್ಕಪ್ಪನ ಮಗನಾದ ನಿನ್ನುಗಂಡನನ್ನು ಕಂಡುಕೊಂಡುದುದಕ್ಕಾಗಿ ನೀನು ಭಗವಂತನಿಗೆ ವಂದನೆಗಳನ್ನಾಚರಿಸು ! ಸಂತೋಷದಿಂದ ಹಿರಿಯರಿಗೆ ಮರ್ಯಾದಾಪೂರ್ವಕವಾಗಿ ನಮಸ್ಕರಿಸು, ನಿನ್ನ ವಿವಾಹದ ದಿನದಲ್ಲಿ ಅಲಂಕಾರ ಮಾಡಿಕೊಂಡಿದ್ದ ತೆರದಿಂದ ಆಚರಿಸಿ, ತಪ್ಪದೆ ನಿನ್ನ ಅಂತಃಪುರವನ್ನು ಅಲಂಕರಿಸು, ಆ ಅಲಂಕಾರಗಳು ಮೊದಲಿನಂತೆಯೇ ಇರಲಿ, ನಿನಗಾ ಆಲಂಕಾರಗಳು ಮರೆತುಹೋಗಿದ್ದರೆ, ನನ್ನ ಪೆಟ್ಟಿಗೆಯಲ್ಲಿರುವ ಕಾಗದವನ್ನು ತೆಗೆದು ನೋಡಿದುದೆ ಆದರೆ, ತಿಳಿವುದೆಂದು ಹೇಳಿದನು.

ಆನಂತುಗಳನ್ನು ಕೇಳಿ, ಸೌಂದರ್ಯವತಿಯು ಸಂತೋಷದಿಂದ ಹಿಗ್ಗುತ್ತಾ ತನ್ನ ಚಾರಕರಿಂದ ಅಂತಃಪುರವನ್ನು ಮೊದಲಿನ ವಿವಾಹದದಿನದಂತೆ ಅಲಂಕರಿಸಿ ಸಿಂಹಾಸನವನ್ನು ಮಧ್ಯದಲ್ಲಿರಿಸಿ ವೀಣಾದಬತ್ತಿಗಳ ದೀಪವನ್ನು ಹೊತ್ತಿಸಿ, ತನ್ನ ಮಲಗುವ ಮನೆಯಲ್ಲಿ, ಆತನ ಬಟ್ಟೆಗಳನ್ನು ಸೆಕ್ವೆಸುಗಳಚೀಲವನ್ನು ತಂದಿಟ್ಟುಕೊಂಡು, ಸರ್ವವನ್ನು ಸಿದ್ಧಪಡಿಸಿಕೊಂಡಿರುವ ಸಮಯಕ್ಕೆ ಸರಿಯಾಗಿ ಮಂತ್ರಿಯು ಅಲ್ಲಿಗೆಬಂದು, ಮಗಳೆ ! ಈ ಉಡುಪುಗಳನ್ನು ಬದಲಾಯಿಸಿ, ನೀನು ಮಂಚವನ್ನು ಸೇರು. ಬದರೋದೀನನು ಬರುತ್ತಲೆ ಆತನನ್ನು ಆಲಿಂಗಿಸಿಕೊಂಡು, ನೀನು ನನ್ನನ್ನು ಅಗಲಿ ಇಷ್ಟು ದಿನವೂ ಎಲ್ಲಿಹೋಗಿದ್ದೆ, ನಾನು ನಿದ್ರೆತಿಳಿದೆದ್ದು ನಿನ್ನನ್ನು ಕಾಣದೆ ಬಹು ಆಶ್ಚರ್ಯಯುಕ್ತಳಾದೆನಲ್ಲಾ ! ಎಂದು ಹೇಳಿ, ಆತನೊಡನೆ ಸುಖಶಯನದಲ್ಲಿದ್ದು, ರಾತ್ರಿಯೆಲ್ಲಾ ನಿನಗೂ ಆತನಿಗೂ ನಡೆದ ಸಂಭಾಷಣೆಯನ್ನು ನಮ್ಮಸಂಗತಿ ಹೇಳಿ, ನನ್ನನ್ನೂ ನಿನ್ನ ಅತ್ತೆಯನ್ನೂ ಸಹಾ ಸಂತೋಷಪಡಿಸುವಳಾಗು ಎಂದು ಹೇಳಿ, ಮಂತ್ರಿಯು ಅಂತಃಪುರದಿಂದ ಹೊರಟು ಹೋದನೆಂದು ನುಡಿದಕೂಡಲೆ, ಸೂರ್ಯೋದಯವಾದ್ದರಿಂದ, ಷಹರಜಾದಿ ಕಥೆಯನ್ನು ನಿಲ್ಲಿಸಿದಳು. ಮರುದಿನ ಜಳಗಿನ ಜಾವದಲ್ಲಿ ಪುನಹ ಕಥೆಯನ್ನು ಹೇಳತೊಡಗಿದಳು.

೧೨೧ ನೆಯ ರಾತ್ರಿ ಕಥೆ.

ಷಹರಜಾದಿಯು ತನ್ನ ಪ್ರಾಣಕಾಂತನನ್ನು ಕುರಿತು, ಪ್ರಿಯರೇ! ಗಯೆಫರನು ಹೇಳುತ್ತಿರುವ ಕಥೆಯನ್ನು ಅತ್ಯಾದರದಿಂದ ಕೇಳುತ್ತಾ, ವಿನೋದಚಿತ್ತರಾಗಿ, ಮಂತ್ರಿಯನ್ನು ಕುರಿತು, ಕಥೆಯನ್ನು ಮುಂದೆ ಸಾಗುವಂತೆ ಮಾಡೆಂದು ಹೇಳಿದುದರಿಂದ, ಗಯೆಫರನು ಇಂತೆಂದನು. ಷಮ್ಸುದ್ದೀನನು ತನ್ನ ಚಾರಕರಲ್ಲಿ ಮೂವರನ್ನು ಮಾತ್ರ ನಿಲ್ಲುವಂತೆ ಆಜ್ಞಾಪಿಸಿ, ಉಳಿದವರನ್ನು ಅಪ್ಪಣೆಕೊಟ್ಟು ಕಳುಹಿಸಿ, ಆ ಮೂವರನ್ನು ಕರೆದು ನೀವು ಆ ಪೆಟ್ಟಿಗೆಯಲ್ಲಿರುವ, ಬದರೋದ್ದೀನನಿಗೆ ಉತ್ತಮವಾದ ವಸ್ತ್ರಗಳನ್ನು ಹಾಕಿಸಿ ಅವನನ್ನು ನನ್ನ ಮಗಳ ಅಂತಃಪುರದ ಇದಿರಿನಲ್ಲಿ ನಿಂ, ಹಜಾರದಲ್ಲಿ ಬಿಡಿರೆಂದು ಹೇಳಲು, ಕೂಡಲೆ ಆ ಚಾರಕರು ಉತ್ತಮವಾದ ವಸ್ತ್ರಾಭರಣಗಳನ್ನು ತೆಗೆದುಕೊಂಡುಬಂದು, ಆ ಪೆಟ್ಟಿಗೆಯನ್ನು ತೆರೆದು ನೋಡುವಲ್ಲಿ, ಬದರೋದ್ದೀನನು ವ್ಯಸನಾಕ್ರಾಂತನಾಗಿದ್ದರೂ, ಸುಖವಾಗಿ ನಿದ್ರೆ ಮಾಡುತ್ತಿದ್ದನು. ಆಗ ಆ ಚಾರಕರು, ಆತನನ್ನು ಎಚ್ಚರಗೊಳಿಸಿ, ಮಂತ್ರಿಯು ಆಜ್ಞೆಯಂತೆ ಅಂಗಿಯನ್ನೂ ಷರಾಯಿಯನ್ನೂ ತೊಡಿಸಿ, ಅವನನ್ನು ಸಂಗಡ ಕರೆದುಕೊಂಡುಬಂದು ಮಂತ್ರಿಪುತ್ರಿಯೆ ಮಂದಿರದಮುಂದಿರುವ ಹಜಾರದಲ್ಲಿಬಿಟ್ಟು, ಬಾಗಿಲನ್ನು ಮುಚ್ಚಿಕೊಂಡು ಹೊರಟುಹೋದರು.

ಬಳಿಕ ಬದರೋದ್ದೀನನು ಆ ಹಜಾರವನ್ನು ಚೆನ್ನಾಗಿ ನೋಡಿ, ಅಲ್ಲಿ ಮಾಡಿರುವ ಅಲಂಕಾರವನ್ನು ಕಂಡಕೂಡಲೆ, ತನ್ನ ಮದುವೆಯ ದಿನವನ್ನು ನೆನೆದುಕೊಂಡು, ಇದಿರಿಗಿರುವ ಕೊಠಡಿಯ ಬಾಗಿಲು ತೆರೆದಿದ್ದುದರಿಂದ, ಒಳಹೊಕ್ಕು ನನ್ನ ವಿವಾಹದ ದಿನದಲ್ಲಿ ಅಲಂಕರಿಸಿದ್ದಂತೆಯೇ ಇರುವ ಕೊಠಡಿಯನ್ನು, ತನ್ನ ಉಡುಪುಗಳು ತಾನಿಟ್ಟಿದ್ದ ಸ್ಥಳದಲ್ಲಿಯೇ ಇರುವುದನ್ನು ನೋಡಿ, ಮಹದಾನಂದಭರಿತನಾಗಿ, ಅಯ್ಯೋ! ದೇವರೇ! ಇದೇನು? ನಾನು ನಿದ್ದೆ ಹೋಗುತ್ತಿರುವೆನೊ, ಇಲ್ಲವೆ ಎಚ್ಚರದಿಂದಿರುವೆನೊ, ನನಗೇ ತಿಳಿಯದಲ್ಲಾ! ಈ ಮನೆಯನ್ನು ನೋಡಿ ನನಗೆ ಆಶ್ಚರ್ಯವಾಗುತ್ತಿದೆಯಲ್ಲಾ! ಎಂದು ಕೇಳಿದನು. ಆಗ ಆ ಸೌಂದರ್ಯವತಿಯು ಬದರೋದ್ದೀನನು ಆಶ್ಚರ್ಯ ಪಡುತ್ತಿರುವುದನ್ನು ನೋಡಿ, ತೆರೆಯನ್ನು

ಹಿಂದೆಹಾಕಿ, ನನ್ನ ಪ್ರಾಣಕಾಂತಾ ! ಬಾಗಿಲಬಳಿಯೆಲ್ಲಿ ಏನುಮಾಡುತ್ತಿರುವೆ. ನಾನು ನಿನ್ನನ್ನು ಅಗಲಿ ಬಹುಕಾಲವಿದ್ದೆನಲ್ಲಾ ! ನಿದ್ರೆಯಿಂದ ಎಚ್ಚರ್ತು ನೋಡುವಲ್ಲಿ, ನೀನು ಕಾಣದೆ ಹೋದುದರಿಂದ, ಬಹಳವಾದ ಆಶ್ಚರ್ಯವನ್ನು ಹೊಂದಿದೆನು, ಒಳಗೆ ಬಂದು ಸುಖಶಯನದಲ್ಲಿ ಮಲಗಿ ನಿದ್ರಿಸಲು, ನಿನಗೆ ಅಡ್ಡಿಯುಂಟೆ ? ಎಂದು ಹೇಳಿದಳು. ಆ ಮಾತನ್ನು ಕೇಳಿ, ತನ್ನ ಹೆಂಡತಿಯು ಮಾತನಾಡಿದಂತೆ, ಧ್ವನಿಯು ಕೇಳಿಬಂದುದರಿಂದ ಒಳಹೊಕ್ಕು ತಾನು ಮೊದಲು ಹಾಕಿಕೊಂಡಿದ್ದ ಬಟ್ಟೆಗಳೂ ಸೆಕ್ರ್ವಿಸಿನ ಚೀಲವೂ, ಮೊದಲು ತನ್ನ ಮುದುವೆಯ ದಿನದಲ್ಲಿ ತಾನಿಟ್ಟದ್ದ ಸ್ಥಳದಲ್ಲಿ ಇರುತ್ತಿರುವುದನ್ನು, ಆ ಮನೆಯ ಅಲಂಕಾರವನ್ನು ನೋಡಿ, ತನ್ನ ವಿವಾಹದದಿನವು ಇದೇ ಇರಬಹುದೇ, ಎಂದು ಅನುಮಾನಿಸುತ್ತ, ಹುಸಿನಗೆಯೆನ್ನು ಬೀರಿ ನಗುತ್ತಾ, ಆ ಬಟ್ಟೆಗಳನ್ನಿಟ್ಟಿರುವ ಕುರ್ಚಿಯ ಬಳಿಗೆ ಹೋಗಿ, ಅವುಗಳು ಎಂದಿನಂತೆಯೆ ಇದ್ದುದರಿಂದ, ಭಗವಂತನೇ ! ಇದೇನು ಬಹು ಆಶ್ಚರ್ಯವಾಗಿ ತೋರುತ್ತಿದೆಯೆಲ್ಲಾ ! ಎಂದು ಆಶ್ಚರ್ಯಯುಕ್ತನಾಗಿ ಅತ್ಯಂತವಾದ ಭ್ರಮೆಯೆನ್ನು ಹೊಂದಿದನು.

ಆಗ ಸೌಂದರ್ಯವತಿಯು, ಪ್ರಾಣನಾಥ ! ಆಲಸ್ಯವೇತಕ್ಕೆ ? ಮುಂಚವು ಬರೀದಾಗಿರುವುದು, ಮಲಗಿ ನಿದ್ರಿಸಬಾರದೆ ಎಂದು ಎರಡನೆಯ ಸಾರಿ ಕೂಗಿದುದನ್ನು ಕೇಳಿದೊಡನೆ ಮುಂಚದಬಳಿಗೆಬಂದು ಪ್ರಾಣಕಾಂತೆ ! ನಾನು ನಿನ್ನನ್ನು ಬಹುಕಾಲದವರೆಗೂ ಅಗಲಿದ್ದೆನೆ ? ಹೇಳು ಎಂದು ಕೇಳಿದನು. ಸೌಂದರ್ಯವತಿಯು, ಆಹಾ ! ನೀನು ಕೇಳುವ ಪ್ರಶ್ನೆಯು ನನಗೆ ಆಶ್ಚರ್ಯವನ್ನುಂಟುಮಾಡುತ್ತಿದೆ. ನೀನು ಈಗತಾನೆ ಎದ್ದು ಹೋದೆಯಲಾ್ಲ ! ನಿನ್ನ ಮನಸ್ಸು ಸ್ವಾಧೀನದಲ್ಲಿಲ್ಲದೆ ಕಲಿವಿಲಿಯಾಗಿದೆ ಎಂದು ತೋರುವುದೆನಲು, ಹೌದು ! ನನ್ನಮನಸ್ಸು ಕಲಿವಿಲಿಯಾಗಿರುವುದೇನೋ ನಿಜ, ನಾನು ನಿನ್ನಬಳಿಯೆಲ್ಲಿದ್ದಂತೆಯೂ, ಮತ್ತು ದಮಾಸ್ಕಸ್ ನಗರದಲ್ಲಿ ಹತ್ತುವರ್ಷ ವಾಸಮಾಡುತ್ತಿದ್ದಂತೆಯೂ, ಜ್ಞಾಪಕವಿದೆ. ರಾತ್ರಿ ನಿನ್ನ ಬಳಿಯಲ್ಲಿದ್ದೆನೊ ? ಅಥವಾ ಅಗಲಿದ್ದೆನೊ, ನಿಜವಾಗಿ ಹೇಳು. ಪರಸ್ಪರ ವಿರೋಧವಾಗಿ ತೋರುವ, ನನ್ನಮನಸ್ಸಿನಲ್ಲಿ ನನಗೆ ನಂಬಿಕೆ ಇಲ್ಲವೆಂದು, ನಾನು ಖಂಡಿತವಾಗಿ ಹೇಳುವೆನು. ಆದರೆ ನಾನು ನಿನ್ನನ್ನು ಮುದುವೆ ಮಾಡಿಕೊಂಡುದೂ, ದಮಾಸ್ಕಸ್ಸಿನಲ್ಲಿದ್ದುದೂ, ಸುಳ್ಳು. ನೀನು ಹೇಳಿದನಲು,

ಸೌಂದರ್ಯವತಿ ನೀನು ದಮಾಸ್ಕಸ್ಸಿನಲ್ಲಿದ್ದಂತೆ ತೋರುವುದು ಶುದ್ಧ ಭ್ರಾಂತಿಯೇ ಹೊರತು ಮತ್ತೇನೂ ಅಲ್ಲವೆಂದಳು. ಆಗ ಬದರೋದೀನನು ಥಕಥಕನೆ ನಗುತ್ತಾ, ಆಹಾ ! ನನ್ನ ಮುದ್ದಿನ ಮುದ್ದೆಯೋ ! ! ನಿನ್ನ ಭ್ರಾಂತಿಯು ನನಗೆ ಸಂತೋಷವನ್ನುಂಟುಮಾಡುತ್ತಿದೆ. ಹಾಗಾದರೆ ಕೇಳು. ನಾನು ವಿವಾಹದ ದಿನದಲ್ಲಿ ಇಲ್ಲಿ ಮಲಗಿದ್ದಂತೆಯೆ ಅಂಗಿ ಪರಾಯಿಗಳನ್ನು ಹಾಕಿಕೊಂಡು, ಬಿಳಿಗಿನ ಜಾವದಲ್ಲಿ ದಮಾಸ್ಕಸ್ ನಗರದ ಬಾಗಿಲ ಬಳಿ ಮಲಗಿರಲು, ಅಲ್ಲಿದ್ದವರೆಲ್ಲರೂ ನನ್ನನ್ನು ನೋಡಿ ಹುಚ್ಚನೆಂದು ಪರಿಹಾಸ ಮಾಡುತ್ತಿದ್ದರು. ಆಗ ನಾನು ಒಬ್ಬ ಮಿಠಾಯಿ ಅಂಗಡಿಯವನ ಬಳಿಗೆ ಹೋಗಿ ಸೇರಿಕೊಂಡೆನು. ಆತನು ನನ್ನನ್ನು ಮಗನಾಗಿ ಸ್ವೀಕರಿಸಿದನು. ಆತನು ಸತ್ತುಹೋದಮೇಲೆ ನಾನೇ ಅಂಗಡಿಯನ್ನು ನಡೆಸುತ್ತಾ ಇದ್ದೆನು. ಹೀಗಿರುವಲ್ಲಿ ನನ್ನನ್ನು ಕೊಲ್ಲುವುದಕ್ಕೆ ಉದ್ಯುಕ್ತರಾದರಲ್ಲಾ ! ಎನಲು ಹಾ ! ಪ್ರಾಣಕಾಂತಾ ! ಹಾಗಾಗುವುದಕ್ಕೆ ಕಾರಣವೇನು ? ನೀನೇನಾದರೂ ತಪ್ಪು ಮಾಡಿರಬಹುದು, ಎನಲು, ಅದು ಅತ್ಯಲ್ಪವಾದುದು, ಅಪಹಾಸ್ಯಕರವಾದುದು, ನಿಂದಾಸ್ಪದವಾದುದು, ಮಿಠಾಯಿಯೆಲ್ಲಿ ವೆಣಸನ್ನು ಹಾಕದೆ ಮಾರಿದೆನೆಂದು, ನನ್ನನ್ನು ಕೊಲ್ಲುವುದಕ್ಕೆ ಉದ್ಯುಕ್ತರಾದರಲ್ಲಾ ! ಎನಲು ಇದಕ್ಕಾಗಿ, ನಿನ್ನಲ್ಲಿ ಇಂತಹ ಅನ್ಯಾಯವನ್ನು ಹೇಗೆ ಮಾಡಿದರೆಂದು, ಸೌಂದರ್ಯವತಿಯು ನಗುತ್ತಾ ಕೇಳಿದಳು.

ಅಯ್ಯೊ ! ಇಷ್ಟೆ ಅಲ್ಲ. ನನ್ನ ಅಂಗಡಿಯ ಸಾಮಾನುಗಳನ್ನು ಹಾಳುಮಾಡಿ, ನನ್ನನ್ನು ಪೆಟ್ಟಿಗೆಯಲ್ಲಿ ಹಾಕಿದ್ದು, ಕೊನೆಗೆ ಗಲ್ಲಿಗೇರಿಸುವುದಕ್ಕೆ ಉದ್ಯುಕ್ತರಾದರು. ಇದೆಲ್ಲವೂ ನನಗೆ ಜೊಪ್ಪಸಕವಿರುವದಲ್ಲಾ ! ಬಹುಶಃ ಸ್ವಪ್ನವಿರಬಹುದು ಏನಾದರೂ ಆಗಲಿ ನಮ್ಮಬ್ಬರನ್ನೂ ಒಟ್ಟುಗೂಡಿಸಿದ, ಭಗವಂತನಿಗೆ ವಂದನೆಗಳನ್ನು ಸಮರ್ಪಿಸುವೆನೆಂದು ಹೇಳಿದ, ಕೂಡಲೆ ಬೆಳಗಾದುದರಿಂದ ಷಹರಜಾದಿ ಕಥೆಯನ್ನು ನಿಲ್ಲಿಸಲು, ಇಂತಹ ವಿನೋದಕರವಾದ ಕಥೆಯನ್ನು ಹೇಳದುದರಿಂದ, ಅತ್ಯಾನಂದಭರಿತಂತಾಗಿ, ಆ ಕಥೆಯನ್ನು ಪೂರ್ತಿಯಾಗಿ ಕೇಳುವವರೆಗೂ, ಸುಲ್ತಾನಿಯನ್ನು ಕೊಲ್ಲಕೂಡದೆಂದು ಆಜ್ಞೆ ಮಾಡಿ ಧೊರೆಯು ಹೊರಟುಹೋದನು.

೧೨೨ ನೆಯ ರಾತ್ರಿ ಕಥೆ.

ಷಹರಜೆಂದಿಯು ಸುಲ್ತಾನರನ್ನು ಕುರಿತು, ಪ್ರಭುರೇ ! ಗಯೆ ಥರನು ಕಲೀಫರಿಗೆ ಹೇಳಿದ ವಿಚಿತ್ರತರವಾದ ಈ ಕಥೆಯೆನ್ನು ಸಾವಧಾನ ದಿಂದ ಕೇಳಬೇಕು. ಏನಂದರೆ :-ಬದರೋದೀನನು ತನ್ನ ಮನದಲ್ಲಿ ಆಹಾ ! ಈಗ ನಾನು ನೋಡುತ್ತಿರುವ ವಿವಾಹಮಂದಿರವೂ, ಇದರಲ್ಲಿರುವ ನನ್ನ ಹೆಂಡತಿಯೂ, ಪೊದಲಿನ ನನ್ನ ಬಟ್ಟೆಗಳೂ, ನಾನು ಗೂನುಮನುಷ್ಯ ನನ್ನು ನೋಡಿದ ಸ್ಥಲವೂ, ಇವೆಲ್ಲವೂ ನಿಜವಾದ ಸುಗತಿಯೋ ಅಥವಾ ಮಾಯೆಯಿಂದ ತೋರುತ್ತಿರುವುದೋ ಕಾಣೆನಲಾಲ್ಲ ! ಎಂದು ಸಂದೇ ಹಾಸ್ಪದಮನಸ್ಕನಾಗಿ, ಹಲಪ್ರಬಾರಿ ಹಂಬಲಿಸುತ್ತಿದ್ದುದರಿಂದ, ಆತನಿಗೆ ನಿದ್ರೆಯೆ ಬಾರಲಿಲ್ಲ. ಇಷ್ಟರಲ್ಲಿಯೇ ಷಂಸುದೀನ ಮಹಮ್ಮದನು ನಿನ್ನೆ ರಾತ್ರಿ ತನ್ನ ಮಗಳ ಅಂತಃಪುರದಲ್ಲಿ ನಡೆದ ಸಂಗತಿಗಳನ್ನು ವಿಚಾರಿಸಿ ತಿಳದುಕೊಳ್ಳಬೇಕೆಂದು ಬಂದು ಬಾಗಿಲು ತಟ್ಟಿ, ಒಳಹೊಕ್ಕು ಬದರೋ ದೀನನಿಗೆ ಸಲಾಮು ಮಾಡಿದನು. ಯಾವ ಮನುಷ್ಯನು ಬದರೋದೀನನ್ನು ಮರಣದಂಡನೆಗೆ ಗುರಿಪಾಡಬೇಕೆಂದಿದ್ದನೋ, ಆತನೇ ತನ್ನೆದುರಿಗೆಬಂದು ನಿಂತುಕೊಂಡು ಸಲಾಮುಮಾಡುತ್ತಿರುವುದನ್ನು ಕಂಡಮೇಲೆ, ಬದರೋ ದೀನನಿಗೆ ಮತ್ತಷ್ಟು ಆಶ್ಚರ್ಯ ಉಂಟಾಗಿ, ಆಹಾ ! ಎಷ್ಟು ಚೆನ್ನಾ ಯಿತು, ನೀನೆ ಅಲ್ಲವೆ ? ಮಿಠಾಯಿಯಲ್ಲಿ ವಿಷವನ್ನು ಹಾಕಲಿಲ್ಲವೆಂಬ ಕೋಪದಿಂದ ನನ್ನನ್ನು ಕೊಲ್ಲಿಸಬೇಕೆಂದು ಪ್ರತಿಜ್ಞೆ ಮಾಡಿದ್ದ ದೊಡ್ಡ ಮನುಷ್ಯನು. ನಿನ್ನ ಗುರುತನ್ನು ಚೆನ್ನಾಗಿ ತಿಳದುಕೊಂಡಿರುವೆ, ನಾನು ಮರೆತರೂ, ನೀನು ನನಗುಂಟುಮಾಡಿದ ಭಯೋತ್ಪಾತವು ನಿನ್ನನ್ನು ಮರೆಯದಂತೆ ಮಾಡುತ್ತಿರುವುದಲ್ಲಾ ! ಎಂದು ಕೇಳಿದನು.

ಆ ಮಾತನ್ನು ಕೇಳಿ ಷಂಸುದೀನನು ನಕ್ಕು, ಅಯ್ಯಾ ! ರಾಕ್ಷಸನ ಮಾಯೆಯಿಂದ, ಗೂನುಮನುಷ್ಯನನ್ನು ತಿರಸ್ಕರಿಸಿ, ಆತನ ಸ್ಥಾನದಲ್ಲಿ ನಿಂತು, ನನ್ನ ಮಗಳನ್ನು ಮದುವೆಮಾಡಿಕೊಂಡಿರುವೆ ಎಂಬು ದನ್ನು, ಆ ಗೂನನು ಹೇಳಿದಮಾತಿನಿಂದಲೆ, ನಾನು ತಿಳದುಕೊಂಡೆನು. ಬಳಿಕ ನೌರೋದೀನಲ್ಲಿಯ ಕೈಬರಹದ ಪುಸ್ತಕವನ್ನು ಓದಿಕೊಂಡು, ನೀನು ನನ್ನ ತಮ್ಮನ ಮಗನೆಂದು ತಿಳದುಕೊಂಡೆನು. ಕೂಡಲೆ ಕೈರೋ,

ಬಾಲಸೂರು ಮೊದಲಾದ ಸ್ಥಲಗಳಲ್ಲಿ, ನಿನ್ನನ್ನು ಹುಡುಕತೊಡಗಿದೆನು. ಎಲೈ ಪ್ರಿಯೆಪುತ್ರನೇ ! ಎಂದು ಸಂತೋಷಸಂಜನ್ಯವಾದ, ಪ್ರೀತಿವಾಕ್ಯಗಳಿಂದ ಆತನನ್ನು ದೃಢವಾಗಿ ಆಲಿಂಗಿಸಿಕೊಂಡು ನಾನು ನಿನ್ನನ್ನು ಕಂಡುಕೊಂಡ ಮೊದಲು ಇದುವರಿಗೂ ಮಾಡಿದ ತೊಂದರೆಗಳನ್ನು ಮನಃಪೂರ್ವಕವಾಗಿ, ನಾನು ಮಾಡಿದವನಲ್ಲವಾದುದರಿಂದ, ಅದನ್ನು ಕ್ಷಮಿಸುವಂತೆ ಬೇಡಿಕೊಳ್ಳುವೆನು. ಮತ್ತೇನೆಂದರೆ:—ನಿನ್ನ ಕಷ್ಟಗಳನ್ನೆಲ್ಲಾ ಮರೆಮಾಚಿ, ನನ್ನಮನೆಗೆ ಕರೆದುತಂದು ನಿನ್ನ ಪೂರ್ವದ ಆನಂದವನ್ನು ನಿನಗುಂಟು ಮಾಡಬೇಕೆಂಬ ಯೋಚನೆಯಿಂದ, ನಾನು ಹೀಗೆ ಮಾಡಿದೆನು. ನೀನು ನಿನ್ನೆಯರಾತ್ರಿ ನಿನಗಿಷ್ಟರಾದ, ಜನರನ್ನೊಡಗೂಡಿದ್ದುದರಿಂದ, ನಿನ್ನ ಮೊದಲಿನ ಕಷ್ಟಗಳೆಲ್ಲವೂ ನಿವಾರಣೆಯಾಯಿತೆಂದು ತಿಳಿದುಕೊ ? ಇನ್ನು ಮೇಲೆ ಅವುಗಳೆಂದಿಗೂ, ನಿನ್ನಬಳಿಗೆ ಬರಲಾರವು. ನೀನು ವಸ್ತ್ರಗಳನ್ನು ಧರಿಸಿಕೊಂಡು ಸ್ವಲ್ಪಹೊತ್ತು ಕುಳಿತುಕೊಂಡಿದ್ದರೆ, ನಿನ್ನತಾಯಿಯನ್ನು ನಿನ್ನಬಳಿಗೆ ಕರೆದುಕೊಂಡು ಬರುವೆನು. ಆಕೆ ನಿನ್ನನ್ನು ನೋಡುವುದಕ್ಕಾಗಿ, ಬಹಳವಾಗಿ ಹಂಬಲಿಸುತ್ತಿರುವಳು. ಆಕೆಗೆ ತಿಳಿಯದಂತೆ ನೀನು ದಮಾಸ್ಕಸ್ಸಿನಲ್ಲಿ ನೋಡಿದ ಮನುಷ್ಯನು, ಇಂಥವನೆಂದು ಗೊತ್ತಾದ ತೆರದಿಂದ, ನಿನ್ನ ಮಗನನ್ನು ಕರೆದುತರುವೆನೆಂದು ಹೇಳಿ ಸ್ವಲ್ಪಹೊತ್ತಿಗೆ ಆಕೆಯನ್ನು ಕರೆದುಕೊಂಡುಬಂದನು.

ಬದರೋದೀನನು ತನ್ನ ತಾಯಿಯನ್ನೂ ತನ್ನ ಮಗನನ್ನು ನೋಡಿದಕಾಲದಲ್ಲಿ ಅವರಿಗುಂಟಾದ ಆನಂದವನ್ನು ತಿಳಿಯಪಡಿಸತಕ್ಕ ಪದಗಳು, ಈ ಲೋಕದಲ್ಲಿಯೇ ಇಲ್ಲವೆಂದು ಹೇಳಬೇಕು. ಆ ಮೂವರೂ, ಅನ್ಯೋನ್ಯಭಾವದಿಂದ ಒಬ್ಬರನ್ನೊಬ್ಬರು, ಆಲಿಂಗಿಸಿಕೊಂಡು, ಸಂತೋಷಪವನ್ನು ಹೊಂದಿದರು. ಬದರೋದೀನನ ತಾಯಿಯು ಆತನನ್ನುನೋಡಿ ಬಹುಕಾಲ ಅಗಲಿಹೋಗಿದ್ದುದರಿಂದ, ತನಗುಂಟಾದ ದುಃಖವನ್ನೆಲ್ಲ ಹೊರಹೊಮ್ಮಿಸಿ, ತನ್ನ ಮಗನಿಗೆ ತನಗುಂಟಾಗಿದ್ದ ದುಃಖವನ್ನೆಲ್ಲ ತೋರ್ಪಡಿಸಿದಳು. ಏಜೀಬನು ದಮಾಸ್ಕಸ್ಸಿನಲ್ಲಿ ತನ್ನತಂದೆಯು ಆಲಿಂಗಿಸಿಕೊಳ್ಳುವುದಕ್ಕೆ ಬಂದಾಗ, ಓಡಿಹೋದಂತೆ ಈಗ ಓಡಿಹೋಗದೆ ಅದನ್ನು ಅಂಗೀಕರಿಸಿ ಆತನಿಗೆ ಪ್ರೇಮವನ್ನುಂಟುಮಾಡಿದನು. ಬದರೋದೀನನು ತನ್ನ ಪ್ರೇಮವನ್ನು ಸಮವಾಗಿ ಎರಡುಭಾಗಮಾಡಿ ತಾಯಿಗೂ ಮಗನಿಗೂ ಹಂಚಿ,

ತಾನು ಆನಂದಭರಿತನಾಗಿದ್ದನು. ಷಂಸುದೀನಮಹಮ್ಮದನು ತನ್ನ ಪ್ರಯತ್ನವು ಸಾರ್ಥಕವಾದುದನ್ನು ತಿಳಿಯಪಡಿಸುವುದಕ್ಕಾಗಿ, ಸುಲ್ತಾನರಬಳಿಗೆ ಹೋಗಿ ಎಲ್ಲವನ್ನೂ ಅರಿಕೆಮಾಡಿಕೊಂಡನು. ಸುಲ್ತಾನನು ಈ ವಿಚಿತ್ರತರವಾದಕಥೆಯನ್ನು ಪುಸ್ತಕರೂಪವಾಗಿಬರೆಸಿ, ತನ್ನಬಂಡಾರದಲ್ಲಿರಿಸಿಕೊಂಡನು. ಷಂಸುದೀನನು ಮನೆಗೆ ಬಂದಕೂಡಲೆ ಸಂತೋಷಪ್ರದರ್ಶನಾರ್ಥವಾಗಿ, ಸಕಲ ದೊಡ್ಡಮನುಷ್ಯರನ್ನು ಸೇರಿಸಿ, ಔತಣಮಾಡಿದ ಬಳಿಕ ಸರ್ವರೂ ಸುಖದಿಂದ ತಮ್ಮ ಆಯುಃಕಾಲವನ್ನು ಕಳೆದರೆಂದು, ಗಯೆಘರನು ಹೇಳಿದ ಕಥೆಯನ್ನು ಕಲೀಫುಹರೋನ್ ಅಲರಾಶ್ಚ, ದರು ಕೇಳಿ, ಅತ್ಯಾನಂದವನ್ನು ಹೊಂದಿ, ಆ ಬಾಣಸಿಗನಾದ ರಿಹಾಸನ ಪ್ರಾಣವನ್ನುಳಿಸಿ, ಶಿಂಡತಿಯನ್ನು ಕಳೆದುಕೊಂಡು, ತೊಂದರೆಪಡುತ್ತಿದ್ದ ಮಾನವನಿಗೆ, ತನ್ನ ದಾದಿಯೆರಲೊಬ್ಬಳನ್ನುಕೊಟ್ಟುವಿವಾಹವಹಾಡಿ, ನಾನಾವಿಧವಾದ ಬಹುಮತಿಗಳನ್ನು ಕೊಟ್ಟು, ಆತನ ಆಯುಸ್ಸನ್ನು ವೃದ್ಧಿಮಾಡಿದನು. ಸುಲ್ತಾನರೇ ! ನಾನಿದುವರಿಗೂ ಹೇಳಿದ ಕಥೆಯು ಬಹು ವಿನೋದಕರವಾಗಿದ್ದರೂ, ಇದಕ್ಕಿಂತಲೂ ಅತಿಶಯವಾದ ಕಥೆಯನ್ನು ತಾವು ದಯೆಮಾಡಿ ಕೇಳುವುದಾದರೆ ನಾಳೆ ಬೆಳಗಿನ ಜಾವದಲ್ಲಿ ಬಿನ್ನವಿಸುವೆ. ಈದಿನ ಅರಣೋದಯವಾಯಿತೆಂದು ಹೇಳಲು, ಸುಲ್ತಾನನು ಈಕೆಯ ಬುದ್ಧಿ ಸಾಮರ್ಥ್ಯವನ್ನು ಕೊನೆಯವರಿಗೂ, ನೋಡಬೇಕೆಂದು ಯೋಚಿಸಿ, ಆಕೆಯನ್ನು ಕೊಲ್ಲಕೂಡದೆಂದು ಗೊತ್ತುಮಾಡಿ, ಹೊರಟುಹೋದನು. ಹೆಳಗಾಗುವುದಕ್ಕೆ ಮೊದಲೇ ದಿನರಜಾದಿಯು ತನ್ನ ಅಕ್ಕನನ್ನು ಎಚ್ಚರಗೊಳಿಸಲು, ಷಹರಜಾದಿಯು ಸುಲ್ತಾನರಿಂದ ಅಪ್ಪಣೆಯನ್ನುಪಡೆದು ಕಥೆಯನ್ನು ಹೇಳತೊಡಗಿದಳು.

ಗೂನೆಮನುಷ್ಯನನ್ನು ಕುರಿತು, ೧೦೩ನೆಯ ರಾತ್ರಿ ಕಥೆ.

ಟಾರ್ಟರಿದೇಶದಲ್ಲಿ ಒಬ್ಬಾಬ್ಬನೊಬ್ಬ ದರ್ಜಿಯಿದ್ದನು. ಆತನಿಗೆ ಒಬ್ಬ ರೂಪವತಿಯಾದ ಹೆಂಡತಿ ಇರುವಳು. ಇವಳು ತನ್ನ ಗಂಡನಲ್ಲಿ ಅತ್ಯಂತ ವ್ಯೋಹವನ್ನಿಟ್ಟುಕೊಂಡು ಪ್ರೀತಿಯಿಂದ ಕಾಣುತ್ತಿದ್ದುದಕ್ಕಿಂತಲೂ, ಅತಿಶಯವಾಗಿ ಗಂಡನೂ ಇವಳಲ್ಲಿ ವ್ಯೋಹವನ್ನು ತೋರುತ್ತಿದ್ದನು. ಒಂದಾನೊಂದುಕಾಲದಲ್ಲಿ ಒಬ್ಬಾಬ್ಬನೊಬ್ಬ ಗೂನನು, ಆತನ

ಅಂಗಡಿಯವುಂದೆ ನಿಂತು, ಮನೋಹರವಾಗಿ ಹಾಡುತ್ತ ಪುದ್ದಳಿಯನ್ನು ಬಾರಿಸಿದನು. ಅದನ್ನು ಕೇಳಿ, ಆನಂದಭರಿತನಾದ ಆ ಹೊಲಿಗೆಯವನು, ತನ್ನ ಹೆಂಡತಿಗೂ ಈ ಗಾನಾನಂದ ಉಂಟಾಗುವಂತೆ ಮಾಡಬೇಕೆಂದು, ಮನೆಗೆ ಬಂದು, ತಾನು ಕರೆದುಕೊಂಡುಬಂದಿದ್ದ ಗೂನನನ್ನು ತೋರಿಸಿ, ಈತನು ಈ ರಾತ್ರಿ ನಮಗೆ ಸಂಗೀತದಿಂದ ಉತ್ಸಾಹವನ್ನು ಉಂಟು ಮಾಡುವನೆಂದು ಹೇಳಲು, ಆಕೆಯು ಅದಕ್ಕೆ ಸಮ್ಮತಿಸಿದಳು. ಬಳಿಕ ಸಾಯಂಕಾಲವಾಗುತ್ತಲಿ, ದರ್ಜಿಯವನು ಊಟಮಾಡುವಕಾಲಕ್ಕೆ ಸರಿಯಾಗಿ, ಗೂನನೂ ಆತನ ಮನೆಗೆ ಬಂದನು. ಆಗ ಆ ದರ್ಜಿಯವನ ಹೆಂಡತಿ ಒಂದು ದುಪಟಿಯನ್ನುಹಾಸಿ. ಅದರಮೇಲೆ ಆತನನ್ನುಕುಳ್ಳಿರಿಸಿ, ಒಂದು ತಟ್ಟೆಯಲ್ಲಿ ಕೆಲವು ಮಾಂಸಗಳನ್ನು ತಂದಿಟ್ಟಳು. ಆ ಗೂನನು ಅದನ್ನು ತಿನ್ನುವಾಗ ಒಂದು ಮೂಳೆಯು ಗಂಟಲಿನಲ್ಲಿ ಸಿಕ್ಕಿಕೊಂಡಿತು. ಗಂಡಹೆಂಡರು ಎಷ್ಟೊತ್ತಾದರು ಉಪಾಯ ಮಾಡಿದರೂ, ಆತನು ಬದುಕಲೇ ಇಲ್ಲ. ಆಗ ದರಜಿಯವನಿಗೂ, ಆತನಹೆಂಡತಿಗೂ, ಈ ವರ್ತಮಾನು ನಗರವಾಸಿಗಳು ತಿಳಿದುಕೊಂಡರೆ, ನೀವೇ ಕೊಂದವರೆಂದು ನಮ್ಮನ್ನು ಶಿಕ್ಷಿಸುವರಲ್ಲಾ ! ಎಂದು ಚಿಂತಿಸುತ್ತಾ, ಆತನು ಬಂದುಪಾಯವನ್ನು ಯೋಚಿಸಿದನು. ತನ್ನ ಪಕ್ಕದಮನೆಯಲ್ಲಿರುವ ವೈದ್ಯನಮನೆಯಬಳಿಗೆ ಈ ಶವವನ್ನು ತೆಗೆದುಕೊಂಡುಹೋಗಬೇಕೆಂದು ಯೋಚಿಸಿ, ಗಂಡಹೆಂಡರು ಇಬ್ಬರೂ ಅದನ್ನು ತೆಗೆದುಕೊಂಡುಬಂದು, ಆ ವೈದ್ಯನ ಮನೆಬಾಗಿಲಲ್ಲಿ ಇಟ್ಟುಕೊಂಡಿದ್ದರು.

ಆಗ ಆ ಮನೆಯ ದಾದಿಯು, ಬೆಳಗಿನ ಜಾವದಲ್ಲಿದ್ದ ಬಾಗಿಲನ್ನು ತೆಗೆದುಕೊಂಡು ಹೊರಗೆ ಬರುವುದಕ್ಕಾಗಿ, ನೋಡುತ್ತಿರುವಲ್ಲಿ ಅಮ್ಮಾ ನೀವು ಹೊರಗೆ ಬರಬೇಡಿ. ನಾವು ಬಬ್ಬ ರೋಗಿಯನ್ನು ಕರೆದು ಕೊಂಡುಬಂದಿರುವೆವೆಂದು, ತಾವು ದಯೆಮಾಡಿ ವೈದ್ಯರಿಗೆ ತಿಳಿಸಬೇಕೆಂದು, ಆಕೆಯಕೈಗೊಂದು ಮೊಹರೀನಾಣ್ಯವನ್ನು ಕೊಡಲು, ತನ್ನ ಯಜಮಾನನಿಗೆ ಈ ಸಂಗತಿಯನ್ನು ಹೇಳಬೇಕೆಂದು, ಅವಳು ಹೊರಟು ಹೋದಳು. ಆಗ ಅವರಿಬ್ಬರೂ, ಆ ಶವವನ್ನು ಮೆಟ್ಟಿಲಿನಿಂದ ಮೇಲಕ್ಕೆ ಎತ್ತಿಟ್ಟು ಯಾರಿಗೂ ತಿಳಿಯದಂತೆ ಹೊರಟು ಹೋದರು. ಬಳಿಕ ಆ ದಾದಿಯು ತನ್ನ ಯಜಮಾನನಬಳಿಗೆ ಬಂದು ಬಾಗಿಲಲ್ಲಿ ಸಿವುಗೋಸ್ಕರ

ಯಾರೋ ಒಬ್ಬ ರೋಗಿಯನ್ನು ಕರೆದುಕೊಂಡುಬಂದು ಕಾದುಕೊಂಡಿರುವರು. ನಿಮ್ಮ ದರ್ಶನಕ್ಕಾಗಿ, ಇದುಗೊ! ಇದೊಂದು ಮೊಹರೀ ನಾಣ್ಯವನ್ನು ತೆಗೆದುಕೊಟ್ಟರೆಂದು ತೋರಿಸಲು, ಆತನು ಬಹು ಸಂತುಷ್ಟನಾಗಿ ದೀಪವನ್ನು ತೆಗೆದುಕೊಂಡುಬರುವಂತೆ, ತನ್ನ ದಾದಿಗೆ ಹೇಳಿ, ತಾನು ಕತ್ತಲೆಯೆಲ್ಲಿ ಬಾಗಿಲನ್ನು ತೆಗೆದುಕೊಂಡು ಹೊರಗೆ ಬರುತ್ತಾ, ಹಂತದ ಬಳ್ಳಯೆಲ್ಲಿದ್ದ ಹೆಣವನ್ನು ತುಳ್ಳಿದು, ಓಹೋ! ಇದೇನು? ದೀಪ! ದೀಪ! ಬೇಗ ತಾ! ಎಂದು ಕೂಗುತ್ತ ಬೆಳಕು ಬಂದಬಳಿಕ ಸತ್ತುಹೋಗಿರುವ ಆ ಮನುಷ್ಯನನ್ನು ಕಂಡು ಅಯ್ಯೋ! ರೋಗವನ್ನು ನಾಸಿಮಾಡಿಕೊಳ್ಳ ಬೇಕೆಂದು, ನನ್ನಬಳಿಗ ಬಂದವನು, ನನ್ನ ಕಾಲಿನ ತುಳಿತದಿಂದ, ಸತ್ತು ಹೋದನಲ್ಲಾ! ದೀರ್ಘದರ್ಶಿಗಳನ್ನೂ, ಗುರುಗಳನ್ನೂ, ಧ್ಯಾನಿಸುತ್ತ ನನ್ನನ್ನು ಉದ್ಧರಿಸಿ, ಅಪವಾದದಿಂದ ಕಾಪಾಡಿರೆಂದು ಬೇಡಿಕೊಂಡನು. ಅಯ್ಯೋ! ನಾನೇ ಈತನನ್ನು ಕೊಂದೆನೆಂದು ಈ ಊರಿನವರೆಲ್ಲಾ ಆಡಿಕೊಳ್ಳುವರಲ್ಲಾ ಎಂದು, ಅಳುತ್ತಿದ್ದನು. ಬಳಿಕ ದುಃಖಪಡುವುದರಿಂದ ಪ್ರಯೋಜನವಿಲ್ಲವೆಂದು ತಿಳಿದು, ಜನರು ಇದನ್ನು ತಿಳಿದುಕೊಳ್ಳುವುದಕ್ಕೆ ಮುಂಚೆ, ಮರೆಮಾಚಬೇಕೆಂದು ಬಾಗಿಲನ್ನುತೆರೆದು, ಆ ಶವವನ್ನು ಮನೆಯೊಳಕ್ಕೆ ತೆಗೆದುಕೊಂಡುಹೋಗಿ, ತನ್ನಹೆಂಡತಿಗೆ ತೋರಿಸಿದನು. ಆಕೆ ಬಹಳ ವ್ಯಸನಾಕ್ರಾಂತಳಾಗಿ, ಅಯ್ಯೋ! ಇದೇನು ಈ ದುರವಸ್ಥೆ? ಇವನು ಹೇಗೆ ಸತ್ತನು? ನಮ್ಮ ಪ್ರಾಣಗಳೇ ಹೋಗುವಹಾಗಾಯಿತಲ್ಲಾ! ಮುಂದೆ ಮಾಡತಕ್ಕದ್ದೇನು? ಈತನು ಹೇಗೆಸತ್ತನೊ ಅದನ್ನು ಹೇಳೆನಲು, ಅದನ್ನು ಕೇಳುವುದರಿಂದ ಪ್ರಯೋಜನವಿಲ್ಲ. ಈಗ ಮುಂದೆ ನಾವು ಮಾಡಬೇಕಾಗಿರುವುದನ್ನು ಮುಖ್ಯವಾಗಿ ಯೋಚಿಸಬೇಕೆಂದನು. ಷಹರ ಜೌದಿಯು ಇಂತೆಂದು ನುಡಿವುದರಲ್ಲಿ ಅರುಣೋದಯವಾಗಲು, ಕಥೆಯನ್ನು ನಿಲ್ಲಿಸಿ ಮರುದಿನ ಬೆಳಗಿನಜಾವದಲ್ಲಿ ಮರಳಿ ಹೇಳಲಾರಂಭಿಸಿದಳು.

೧೨೪ನೆಯ ರಾತ್ರಿ ಕಥೆ.

ಷಹರಜೌದಿಯು ಸುಲ್ತಾನರನ್ನು ಕುರಿತು, ಇಂತೆಂದಳು :—

ವೈದ್ಯನು ಆ ಹೆಣವನ್ನು ಹೇಗೆ ಮಾಡಿದರೆ ತನಗೆ ಬರುವ ಅಪವಾದವು ತಪ್ಪುವುದೆಂದು ಯೋಚಿಸುತ್ತಿದ್ದರೂ, ಆತನಿಗೆ ಯಾವ ಆಲೋಚನೆಯೂ ತೋರಲಿಲ್ಲ. ಆದರೆ ಸಮಯಾನುಸಾರವಾಗಿ ಯುಕ್ತಿಯನ್ನು ಕಂಡು

ಹಿಡಿಯುವದರಲ್ಲಿ, ಪ್ರವೀಣಳಾದ ಆತನಹೆಂಡತಿಯು, ಗಂಡನನ್ನುಕುರಿತು, ಆಹಾ ! ನನಗೊಂದು ಉಪಾಯವು ತೋರುತ್ತಿರುವುದು, ಏನಂದರೆ :— ಈ ಶವವನ್ನು ನಮ್ಮ ಮಹಡಿಯಮೇಲಿನಿಂದ, ಪಕ್ಕದಮನೆಯವನಾದ ಕೊಬ್ಬನ ವ್ಯಾಪಾರದ ಮುಸಲ್ಮಾನನ ಮನೆಯ ಕಿಟಕಿಯಲ್ಲಿ ಹಾಕಿ ಬಿಟ್ಟರೆ, ನಮಗೆ ಈ ಅಪವಾದವು ನಿವಾರಣೆಯಾಗುವುದೆಂದಳು. ಬಳಿಕ ವೈದ್ಯನು ತನ್ನಹೆಂಡತಿಯು ಹೇಳಿದ ಉಪಾಯದಂತೆ, ಆ ಶವವನ್ನು ಮಹಡಿಯಮೇಲಕ್ಕೆತ್ತಿ ಪಕ್ಕದಮನೆಯ, ಮುಸಲ್ಮಾನನ ಗೃಹದಲ್ಲಿರುವ ಕಿಟಕಿಯ ಮೂಲಕ, ಒಳಗೆ ಸೇರಿಸಿ, ಬಾಣದಿಂದಿರುವ ಮನುಷ್ಯನು ನಿಂತಿರುವಂತೆಯೇ ನಿಲ್ಲಿಸಿದರು.

ಇಷ್ಟರಲ್ಲಿ ಆ ಯಜಮಾನನು ಮದುವೆಗಾಗಿ ಪರಸ್ಥಳಕ್ಕೆ ಹೋಗಿದ್ದವನು, ಮನೆಗೆ ಬರುವಾಗ, ಲಾಂಡ್ರಿಯನ್ನುಹಿಡಿದುಕೊಂಡು ಬರುತ್ತಾ, ಅದರ ಬೆಳಕಿನಿಂದ ತನ್ನ ಮನೆಯ ಕೊಠಡಿಯಲ್ಲಿ ಒಬ್ಬ ಮನುಷ್ಯನು ನಿಂತುಕೊಂಡಿರುವುದನ್ನು ಕಂಡು, ನನ್ನ ಮನೆಯಲ್ಲಿ ಇರುವ ಪದಾರ್ಥಗಳನ್ನು ಕದಿಯುವುದಕ್ಕಾಗಿ, ಬಂದಿರುವ ಕಳ್ಳನೆಂದು ಹೇಳಿ, ಆತನಕೈಯ್ಯಲ್ಲಿರುವ ದೊಡ್ಡ ಬತ್ತ್ರವನ್ನು ತಿರುಗಿಸುತ್ತಾ, ಆಹಾ ! ನನ್ನಮನೆಯಲ್ಲಿರುವ ಪದಾರ್ಥಗಳನ್ನು ಕದಿಯುವುದಕ್ಕಾಗಿ ಬಂದಿದ್ದಿಯಾ? ಇನ್ನುಮೇಲೆ ಹೇಗೆ ಬರುವೆಯೊ, ನೋಡುತ್ತೇನೆ ಎಂದು ಬಲವಾಗಿ ಹೊಡೆದನು. ಕೂಡಲೆ ಶವವು ನೆಲಕ್ಕೆಬಿದ್ದು ಅಲುಗಾಡದೆ ಇದ್ದುದನ್ನುಕಂಡು, ಓಹೋ ! ಇದು ಹೆಣವೇಹೊರತು ಮತ್ತೇನೂ ಅಲ್ಲವೆಂದು ತಿಳಿದು, ತನ್ನ ಕೋಪವನ್ನು ಬಿಟ್ಟು, ವ್ಯಸನಾಕ್ರಾಂತನಾಗಿ ಆಹಾ ! ನಾನು ಮೋಸದಿಂದ ಎಂತಹ ಕಾರ್ಯವನ್ನುಮಾಡಿದೆ? ನನ್ನಕೋಪವನ್ನುಣಗಿಸಿಕೊಳ್ಳಲಾರದೆ, ಒಬ್ಬ ಮನುಷ್ಯನನ್ನು ಕೊಂದೆನಲ್ಲಾ ! ಅಯ್ಯೋ ! ರಾಜಭಟರು ಬಂದು ನನ್ನನ್ನು ಎಳೆದುಕೊಂಡುಹೋಗಿ, ಶಿಕ್ಷಿಸುವರಲ್ಲಾ ! ಏನುಮಾಡಲೆಂದು ಚಿಂತಿಸುತ್ತಿದ್ದನು ಎಂದು ಹೇಳಲು, ಅಷ್ಟರಲ್ಲಿಯೆ, ಬೆಳಗಾದುದರಿಂದ ಷಹರಜಾದಿಯು ಕಥೆಯನ್ನುನಿಲ್ಲಿಸಿ, ಮರುದಿನ ಬೆಳಗಿನಜಾವದಲ್ಲಿ ಪುನಹ ಹೇಳಲಾರಂಭಿಸಿದಳು.



೧೫ನೇ ನೆಯ ರಾತ್ರಿಯ ಕಥೆ.

ಷಹರಜಾದಿಯು ಸುಲ್ತಾನರನ್ನುಕುರಿತು ಇಂತೆಂದು, ಬಳಿಕ ಆ ಮುಸಲ್ಮಾನವರ್ತಕನು, ತಾನು ಯೋಚಿಸದೆ ಮುಂದರಿದು ದುಡುಕಿ ದುದಕ್ಕಾಗಿ, ಅತ್ಯಂತ ವ್ಯಸನಾಕ್ರಾಂತನಾಗಿ, ಆಯ್ಯೋ ನಾನು ನೊದಲೇ ನಿನ್ನನ್ನು ನೋಡಿದ್ದರೆ, ಈ ನಿನ್ನ ಗೂನುಬೆನ್ನಿಗಾಗಿ ವ್ಯಸನಪಡುವ ಹಾಗಾಗುತ್ತಿರಲಿಲ್ಲವೆಂದು ಕೋಪಿಸಿ, ಬಳಿಕ ರಾಜಭಟರ ಹಾವಳಿಯನ್ನು ತಪ್ಪಿಸಿಕೊಳ್ಳಬೇಕೆಂದು ಬಗೆದು, ಆ ಶವವನ್ನು ತನ್ನ ಬೆನ್ನಿನಮೇಲೆ ಹೊತ್ತುಕೊಂಡುಹೋಗಿ ಆ ಬೀದಿಯಲ್ಲಿರುವ ಅಂಗಡಿಮುಂದೆ ನಿಲ್ಲಿಸಿ, ಅಲ್ಲಿಂದ ಹೊರಟು ಯಾರಿಗೂ ತಿಳಿಯದಂತೆ, ತನ್ನ ಮನೆಯನ್ನು ಸೇರಿದನು. ಆಗ ಆ ಊರಿನ ಸುಲ್ತಾನನಿಗೆ ಸಾಮಾನುಗಳನ್ನು ಸರಬರಾಯಿ ಮಾಡುವ, ಕ್ರಿಸ್ಟಿಯಾನನೆಂಬ ವರ್ತಕನು ರಾತ್ರಿಯೆಲ್ಲಾ ಸ್ತ್ರೀಲೋಲನಾಗಿದ್ದು ತಾನು ಮೊದಲು ಕುಡಿದಿದ್ದ ಸಾರಾಯಿಯೆಮತ್ತು ಇನ್ನೂ ಹೋಗದಿದ್ದುದರಿಂದ, ಬೆಳಗಾಗುವುದಕ್ಕೆ ಸ್ವಲ್ಪಹೊತ್ತು ಇರುವಸಮಯದಲ್ಲಿ, ಈ ಊರಿನವರು ಕಂಡರೆ, ನನ್ನನ್ನಾ ಕುಡುಕನೆಂದು ನಿಂದಿಸಿ, ತಮ್ಮ ಸಭೆಗೆ ಸೇರಿಸಲಾರರೆಂಬ, ಭಯದಿಂದ ಬೇಗದಿಂದ ಬಂದು ಮಸೀತಿಯಲ್ಲಿರುವ ಕೊಳದಲ್ಲಿ, ಸ್ನಾನ ಮಾಡುವುದಕ್ಕಾಗಿ ಬರುತ್ತಾ, ಕೊಬ್ಬಿನ ವ್ಯಾಪಾರವಮಾಡುವ ಮುಸಲ್ಮಾನನು ತಂದುನಿಲ್ಲಿಸಿದ್ದ ಗೂನನ ಶವದ ಬಳಿಯಲ್ಲಿ, ಜಲಸ್ಪರ್ಶಕ್ಕಾಗಿ, ಕುಳಿತುಕೊಂಡನು.

ಆ ಶವವು ಗಾಳಿಯಿಂದ ಜೋರಿ ಆತನಮೇಲೆ ಬೀಳಲು, ಕ್ರಿಸ್ಟಿಯಾನನು ಕೋಪದಿಂದ ತಳ್ಳಿ ಕಳ್ಳನೆಂದು ಕೂಗುತ್ತ, ಬೆನ್ನಿನಮೇಲೆ ಬಲವಾದೊಂದು ಗುದ್ದನ್ನುಹಾಕಿ, ನೆಲಕ್ಕೆ ಕೆಡವಿ, ಬಳಿಕ ಒದೆದು, ಹಾ ! ಕಳ್ಳ ! ಅಯ್ಯೋ ! ಕಳ್ಳ ! ಎಂದು ಗಟ್ಟಿಯಾಗಿ ಕೂಗಲು, ಹತ್ತಿರದ ಮನೆಯೆಲ್ಲಿದ್ದ ಒಬ್ಬ ಮನುಷ್ಯನು ಅಲ್ಲಿಗೆಬಂದು, ನೀನು ಏತಕ್ಕಾಗಿ ಹೀಗೆ ಕೂಗಿಕೊಂಡೆ, ಎಂದು ಕೇಳಿದನು. ಅಯ್ಯಾ ! ಅಗೋ ಆಮನುಷ್ಯನು ನನ್ನನ್ನು ಸೂರೆಮಾಡುವುದಕ್ಕಾಗಿ, ನನ್ನಮೇಲೆಬಿದ್ದು ಕತ್ತನ್ನು ಹಿಸುಕಿದನು. ಆದುದರಿಂದ ನಾನು ಕೂಗಿಕೊಂಡೆನೆನಲು, ಆಮನುಷ್ಯನು

ಆದರೆ ಆತನಿಗೆ ತಕ್ಕ ಶಿಕ್ಷೆಯನ್ನು ಮಾಡಿದೆಯೆಲ್ಲಾ! ಇನ್ನು ಸಾಕು ಮಾಡೆಂದು ಹೇಳಿ, ಆ ಗೂನನನ್ನು ಎತ್ತುವುದಕ್ಕಾಗಿ ಬಂದು, ಸತ್ತುಹೋಗಿರುವುದನ್ನು ಕಂಡು, ಅಯ್ಯೋ! ಮುಸಲ್ಮಾನನನ್ನು ಹೀಗೆ ಕೊಲ್ಲಬಹುದೆ? ಎಂದು ಕೂಗಿಹೇಳಿ, ಆ ಕ್ರಿಷ್ಟಿಯಾವನ್ನು ಹಿಡಿದುಕೊಂಡು, ತನ್ನ ಯಜಮಾನನಬಳಿಗೆ ಹೋಗಿ, ಆತನು ಬಂದು ವಿಚಾರಣೆ ಮಾಡುವವರಿಗೂ, ಅಲ್ಲಿಯೇ ಕೂರಿಸಿಕೊಂಡಿದ್ದನು. ಆಗ ತಾನೇ ಕ್ರಿಷ್ಟಿಯಾನನಿಗೆ ಸಾರಾಯಿಯನ್ನುಮತ್ತು ಇಳಿದಿದ್ದುದರಿಂದ ತಾನು ಗುದ್ದಿದ ಗುದ್ದಿನಿಂದ ಹೇಗೆ ಒಬ್ಬ ಮನುಷ್ಯನು ಸತ್ತುಹೋದನೆಂದು, ಯೋಚಿಸುತ್ತಿದ್ದನು.

ಇಷ್ಟರಲ್ಲಿ ನ್ಯಾಯಾಧಿಪತಿಯು, ತಳವಾರನು ಹೇಳಿದ ಮಾತನ್ನು ಕೇಳಿ, ಕ್ರಿಷ್ಟಿಯಾನನ್ನು ಪ್ರಶ್ನೆ ಮಾಡಲು, ಆತನು ತಾನು ನಿರಪರಾಧಿಯೆಂದು ಹೇಳಲಾರದೆ ಹೋದನು. ಬಳಿಕ ಮಂತ್ರಿಯು, ಗೂನನು ಸುಲ್ತಾನನಿಗೆ ಪ್ರೀತಿಪಾತ್ರನಾದ ನಕಲಿಯವನಾಗಿದ್ದುದರಿಂದ, ಆತನ ಮರಣವನ್ನು ಸುಲ್ತಾನನಿಗೆ ತಿಳುಹಲು, ಆತನು ಕೋಪದಿಂದ ಅಯ್ಯಾ! ಮುಸಲ್ಮಾನನನ್ನು ಕೊಂದ ಕ್ರಿಷ್ಟಿಯಾನನ ವಿಷಯದಲ್ಲಿ ದಯೆಯನ್ನು ತೋರಿಸಬೇಕಾದುದೇನೂ ಇಲ್ಲ. ನಿನ್ನ ಕಾರ್ಯವನ್ನು ನೀನು ಜರಗಿಸಬಹುದೆಂದು ಹೇಳಲು, ಮಂತ್ರಿಯು ಹಿಂದಿರುಗಿ ಬಂದು, ಗಲ್ಲಿನ ಮರವನ್ನು ನೋಡಿ, ಮುಸಲ್ಮಾನನ್ನು ಕೊಂದ ಕ್ರಿಷ್ಟಿಯಾನನ್ನು ಗಲ್ಲಿಗೆ ಹಾಕುವರೆಂದು, ಡಂಗುರವನ್ನು ಆ ಊರಲ್ಲೆಲ್ಲಾ ಹೊಡೆಸಿದನು. ಬಳಿಕ ರಾಜಭಟರು ಆತನನ್ನು ನೇಣು ಹಾಕುವುದಕ್ಕೆ ತೆಗೆದುಕೊಂಡು ಹೋಗಿ, ಕೊರಳಿಗೆ ಹಗ್ಗವನ್ನು ಬಿಗಿದು, ನೇಣೆತ್ತುವುದಕ್ಕೆ ಪ್ರಾರಂಭಿಸಲು, ಆ ಕೊಬ್ಬಿನ ವ್ಯಾಪಾರಗಾರನು, ಅಲ್ಲಿನ ಗುಂಪನ್ನು ನೂಕಿಕೊಂಡು ಮುಂದೆ ಬಂದು, ಅಯ್ಯಾ! ತಾಳು! ಸ್ವಲ್ಪ ತಾಳು! ನೇಣಿಕ್ಕಿ ಪ್ರಾಣವನ್ನು ತೆಗೆಯಬೇಡ. ಆ ಕ್ರಿಷ್ಟಿಯಾನನು ಪ್ರಾಣವನ್ನು ತೆಗೆದವನಲ್ಲ. ನಿರಪರಾಧಿಯಾದ ಈತನನ್ನು ಅನ್ಯಾಯವಾಗಿ ಏತಕ್ಕೆ ಕೊಲ್ಲುವಿರಿ. ನಾನು ಆ ಮುಸಲ್ಮಾನನನ್ನು ಕೊಂದುಹಾಕಿದವನು, ಆ ಪಾಪವೇ ನನಗೆ ಸಾಲದೆ ಈ ಕ್ರಿಷ್ಟಿಯನನ ಹತ್ಯಕ್ಕೂ ಗುರಿಯಾಗಬೇಕಲ್ಲಾ! ಎಂದು ತಾನು ಮಾಡಿದ

ಕೃತ್ಯವನ್ನು, ಸವಿಸ್ತಾರವಾಗಿ ಹೇಳಿದನು. ಇಷ್ಟರಲ್ಲಿ ಅರುಣೋದಯವಾದುದರಿಂದ, ಷಹರಜಾದಿಯು ಕಥೆಯನ್ನು ನಿಲ್ಲಿಸಿ, ಬೆಳಗಿನ ಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೧೨೬ ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು, ಪ್ರಾಯರೇ! ಇಂತು, ಸುಲ್ತಾನರಿಗೆ ಕೊಬ್ಬನ್ನುತಂದು ಮಾರುವ ವ್ಯಾಪಾರಗಾರನು ಗಟ್ಟಿಯಾಗಿ ತಾನು ಮಾಡಿದ ಕೃತ್ಯವನ್ನೆಲ್ಲಾ ಧೈರ್ಯದಿಂದ ಹೇಳಿದುದರಿಂದ ನ್ಯಾಯಾಧಿಪತಿಯು ತಾಳು! ತಾಳು! ಆ ಕ್ಷಿಪ್ಟಯಾನನಿಗೆಬದಲಾಗಿ ತನ್ನ ಅಪರಾಧವನ್ನು ತಾನೇ ಒಪ್ಪಿಕೊಂಡು ಬರುತ್ತಿರುವ, ಈ ವರ್ತಕನನ್ನು ಗಲ್ಲಿಗೆ ಹಾಕಬೇಕಾಗಿದೆ ಎನಲು, ಮುಂಶ್ರಿಯಾಜ್ಞೆಯಂತೆ ಕೊಲೆಗಾರನು, ಉರುಳನ್ನುತಂದು ಆ ವರ್ತಕನ ಕೊರಳಿಗೆ ಹಾಕಿದುದನ್ನು ನೋಡಿ, ವೈದ್ಯನು ಅಯ್ಯಾ! ಸ್ವಲ್ಪ ನಿದಾನಿಸು! ನಾನು ಗಲ್ಲಿನ ಮರದಬಳಿಗೆ ಬರುವುದಕ್ಕೆ ಮಾರ್ಗವನ್ನು ಕೊಡೆಂದು ಬೇಡುವೆನೆಂದು ಹೇಳಿದನು. ಬಳಿಕ ಆ ವೈದ್ಯನು ನ್ಯಾಯಾಧಿಪತಿಯಬಳಿಗೆ ಬಂದು, ಸ್ವಾಮಿ! ಈ ವರ್ತಕನು, ಆತನ ಪ್ರಾಣವನ್ನು ಕೊಂದವನಲ್ಲ. ನನಗೆ ತಿಳಿದ ಸಂಗತಿಯನ್ನು ನಾನು ಹೇಳುವೆನು.

ನಾನು ನಿನ್ನೆದಿನ ರಾತ್ರಿ ಮನೆಯೆಲ್ಲಿ ಮಲಗಿರುವಾಗ್ಗೆ ನನಗೆ ಗುರುತಿಲ್ಲದವರಾದ, ಇಬ್ಬರು ಗಂಡಹೆಂಡರು, ಈ ರೋಗಿಯೆನ್ನು ನನ್ನ ಮನೆಯ ಬಾಗಿಲಲ್ಲಿ ಮಲಗಿಸಿಕೊಂಡು, ನನ್ನಮೂಲಕ ಚಿಕಿತ್ಸೆ ಮಾಡಿಸ ಬೇಕೆಂದು, ಕುಳಿತಿದ್ದರಂತೆ. ಆಗ ಏನೋ ಕಾರಣದಿಂದ, ನಮ್ಮ ದಾದಿಯು ಹೊರಗೆ ಬಂದಾಗ್ಗೆ, ತಾವು ಬಂದಿರುವ ವರ್ತಮಾನವನ್ನುಹೇಳಿ, ಒಂದು ವೊಹರಿ ನಾಣ್ಯವನ್ನು ಕೊಟ್ಟರಂತೆ. ಈ ವರ್ತಮಾನವನ್ನು ನಮ್ಮ ದಾದಿಯು ಬಂದು ಹೇಳಲು, ನಾನು ಅವಳಿಗೆ ದೀಪವನ್ನು ತರುವಂತೆ ಹೇಳಿ, ಹೊರಗೆ ಬಂದು ಬಾಗಿಲ ಮೆಟ್ಟಿಲಮೇಲೆ ಮಲಗಿಸಿದ್ದ ಈ ರೋಗಿಯೆನ್ನು ಕಾಣದೆ ತುಳಿದುಬಿಟ್ಟೆನು. ಬಳಿಕ ದೀಪವನ್ನು ತಂದಮೇಲೆ ನೋಡುವಲ್ಲಿ ಆತನು ಸತ್ತುಹೋಗಿದ್ದನು. ನಾನು ಬಹಳವಾಗಿ ವ್ಯಸನಪಟ್ಟು, ಈ ಶವವನ್ನು ಮನೆಯೊಳಕ್ಕೆ ತೆಗೆದುಕೊಂಡು ಹೋದೆನು. ನನ್ನ ಹೆಂಡತಿಯು,

ಅಯ್ಯೋ! ಮುಸಲ್ಮಾನನನ್ನು ಕೊಂದೆಯೊ? ಎಂದು ಅಂಗಲಾಚಿದಳು ಬಳಿಕ ನಾವಿಬ್ಬರೂ ಈ ಹೆಣವನ್ನು ನಮ್ಮಮನೆಯ ಮಹಡಿಯಮೇಲೆ ತೆಗೆದುಕೊಂಡುಹೋಗಿ, ನೆರೆಯಲ್ಲಿರುವ ಈ ವರ್ತಕನ ಮನೆಯ ಗವಾಕ್ಷದ ಮೂಲಕವಾಗಿ, ಒಳಕ್ಕೆ ಇಳಿಯಿಸಿದೆವು. ಆತನು ಮದುವೆಗಾಗಿ, ಯಾರ ಮನೆಗೋ ಹೋಗಿದ್ದ, ಬರುವಾಗ ಕೈಯ್ಯಲ್ಲಿ ಲಾಂದ್ರವನ್ನು ಹಿಡಿದು ಕೊಂಡು, ಈ ಹೆಣವನ್ನುನೋಡಿ, ಕಳ್ಳನೆಂದು ಬೆತ್ತದಲ್ಲಿ ಹೊಡೆದನು. ಆದುದರಿಂದ ಈ ಗೂನುಮುಸಲ್ಮಾನನನ್ನು ಕೊಂದವನು ನಾನೇ. ಈ ಹತ್ಯವು ಅಕಸ್ಮಾತ್ತಾಗಿ ನಡೆದುದರಿಂದ, ನಾನು ಒಬ್ಬ ಮುಸಲ್ಮಾನರ ಮರಣಕ್ಕೆ ಕಾರಣವಾಗಬೇಕಾಗಿದೆಯಲ್ಲಾ ಎಂಬ ವ್ಯಸನದಿಂದ ಕೊರಗುತ್ತಿರುವೆನು. ಆದಕಾರಣ ತಾವು ದಯೆಮಾಡಿ ನಿರಪರಾಧಿಯಾದ, ಈ ವ್ಯಾಪಾರಸ್ಥನ ಪ್ರಾಣವನ್ನು ಉಳಿಸಿ, ಕೃತ್ಯ ನಡೆಯಲು ಮುಖ್ಯ ಕಾರಣನಾದ ನನ್ನನ್ನು ಅವನ ಸ್ಥಾನದಲ್ಲಿ ನಿಯೋಗಿಸಬೇಕಾಗಿರುವುದೆಂದು ಬೇಡಿಕೊಂಡನೆಂದು ಹೇಳಿ, ಬಿಳಗಾದಕೂಡಲೆ ಕಥೆಯನ್ನು ನಿಲ್ಲಿಸಿ ಷಹರ ಜಾದಿಯು ಮರುದಿನ ಬೆಳಿಗ್ಗೆ ಹೇಳಲಾರಂಭಿಸಿದಳು.

೧೨೭ನೆಯ ರಾತ್ರಿಯ ಕಥೆ.

ಷಹರಜಾದಿಯು ಸುಲ್ತಾನರನ್ನು ನೋಡಿ, ಇಂತೆಂದುಹೇಳಲಾರಂಭಿಸಿದಳು. ಬಳಿಕ ನ್ಯಾಯಾಧಿಪತಿಯು, ವೈದ್ಯನ ಮಾತುಗಳನ್ನು ಕೇಳಿ, ಆಹಾ! ಇದೇನು ವಿಚಿತ್ರವಾಗಿರುವುದಲ್ಲಾ! ಈ ವೈದ್ಯನ ಮಾತುಗಳಿಂದ, ಈತನೇ ಅಪರಾಧಿಯೆಂದು ತಿಳಿಯಬರುವುದು. ಆದುದರಿಂದ ಈ ವರ್ತಕನ ಪ್ರಾಣವನ್ನುಳಿಸಿ, ಅದಕ್ಕೆ ಬದಲಾಗಿ ವೈದ್ಯನನ್ನು ನಿಯೋಗಿಸಬೇಕೆಂದುತಿಳಿದು ಕೊಲೆಗಾರನನ್ನುನೋಡಿ, ಅಯ್ಯಾ! ಆವರ್ತಕನನ್ನು ಬಿಟ್ಟು ಈ ವೈದ್ಯನ ಕೊರಳಿಗೆ ಉರುಳುಹಾಕು ಎಂದು ಹೇಳಲು, ಆತನು ಹಾಗೆ ಮಾಡಿದಕೂಡಲೆ, ದರ್ಜಿಯವನು ಕೊಲೆಗಾರನನ್ನುನೋಡಿ, ಅಯ್ಯಾ! ಸ್ವಲ್ಪ ತಾಳು. ನಾನು ನ್ಯಾಯಾಧಿಪತಿಯನ್ನು ಕುರಿತು, ಮಾತನಾಡುವುದಕ್ಕೆ ಸ್ಥಲವನ್ನು ಕೊಡಿಸು. ನಂತರ ನಿನ್ನ ಕೆಲಸವನ್ನು ಜರುಗಿಸಬಹುದೆಂದು ಜೀಡಲು, ಆತನು ಸ್ಥಲವನ್ನು ಬಿಡಿಸಿದಕೂಡಲೆ, ನ್ಯಾಯಾಧಿಪತಿಯಬಳಿಗೆ ಬಂದು, ಸ್ವಾಮಿ! ಈ ಅಪರಾಧವು ಆ ವೈದ್ಯನದಲ್ಲ. ಪ್ರಾಣವನ್ನು ತೆಗೆದುಕೊಳ್ಳಬೇಕಾದರೆ, ನ್ಯಾಯವಾಗಿ ನನ್ನ

ಪ್ರಾಣವನ್ನೆ ತೆಗೆದುಕೊಳ್ಳಬೇಕು! ಹೇಗೆಂದರೆ:—ನಿನ್ನೆದಿನ ಸಾಯಂಕಾಲದಲ್ಲಿ, ನಾನು ಅಂಗಡಿಯಲ್ಲಿ ವಿನೋದವಾಗಿ ಕುಳಿತುಕೊಂಡಿರುವಕಾಲದಲ್ಲಿ ಈ ಗೂನನು ಬಂದು, ನನ್ನ ಎದಿರಿಗೆ ನಿಂತು, ಮನೋಹರವಾಗಿ ಹಾಡಿದನು. ನಾನು ಮನೆಗೆ ಕರೆದುಕೊಂಡುಹೋಗುವುದಕ್ಕೆ ಆತನು ಸಮ್ಮತಿಸಿದುದರಿಂದ, ನಾವಿಬ್ಬರೂ ಮನೆಗೆಹೋಗಿ, ರಾತ್ರಿ ಭೋಜನಮಾಡುವಾಗ್ಗೆ ಆತನಿಗೂ ಒಂದು ತಟ್ಟೆಯಲ್ಲಿ ಕೆಲವು ಮಾಂಸುಗಳನ್ನು ತಂದುಕೊಟ್ಟೆನು. ಆತನು ಅದನ್ನು ತಿನ್ನುವಾಗ, ಒಂದು ಮೂಳೆಯು ಗಂಟಲಿನಲ್ಲಿ ಸಿಕ್ಕಿಕೊಂಡಿತು, ಅದನ್ನು ತೆಗೆಯಬೇಕೆಂದು, ನಾನೂ ನನ್ನಹೆಂಡತಿಯೂ, ಎಷ್ಟು ಪ್ರಯತ್ನ ಮಾಡಿದರೂ, ಪ್ರಯೋಜನವಿಲ್ಲದೆ, ಈತನು ಸತ್ತುಹೋದನು.

ಬಳಿಕ ನಾವು ಹೆದರಿ ಈ ಅಪರಾಧವು ನಮ್ಮಗಳವೀಲೆ ಬಾರದಂತೆ ಮಾಡಬೇಕೆಂದು, ನಾನೂ ನನ್ನಹೆಂಡತಿಯೂಸಹ, ಈತನನ್ನು ತೆಗೆದುಕೊಂಡುಬಂದು, ಈ ವೈದ್ಯನ ಮನೆಯಬಾಗಿಲಲ್ಲಿ ಕುಳಿತಿರುವಾಗ, ಈತನ ದಾದಿಯು, ಹೊರಗೆ ಬಂದಳು. ಆಕೆಯನ್ನುನೋಡಿ, ಅಮ್ಮಾ! ನಿಮ್ಮ ವೈದ್ಯರನ್ನು ಬರಹೇಳಿ, ಅವರಿಂದ ಚಿಕಿತ್ಸೆ ಮಾಡಿಸುವುದಕ್ಕಾಗಿ ಒಬ್ಬ ರೋಗಿಯನ್ನು ಕರೆದುತಂದಿರುವೆವೆಂದು ಹೇಳಿ, ಒಂದು ಮೊಹರಿ ನಾಣ್ಯವನ್ನು ಕೊಟ್ಟೆನು. ಆಕೆಯು ಒಳಗೆಹೋದಕೂಡಲೆ, ನಾವು ಈ ಹೆಣವನ್ನು ಹಂತದಮೇಲೆ ಮಲಗಿಸಿ ಯಾರಿಗೂ ತಿಳಿಯದಂತೆ ಹೊರಟು ಹೋದೆವು. ಬಳಿಕ ವೈದ್ಯನು ಬಂದು ಹಂತದಮೇಲಿದ್ದ ಈ ಹೆಣವನ್ನು ತಾನು ತುಳಿದುದರಿಂದ, ತಾನೆ ಕೊಂದನೆಂದು ತಿಳಿದುಕೊಂಡನು. ಆದುದರಿಂದ ಈ ವೈದ್ಯನನ್ನು ಕೊಲ್ಲದೆ, ನನ್ನ ಪ್ರಾಣವನ್ನುಮಾತ್ರ ತೆಗೆದುಕೊಳ್ಳಬೇಕಾಗಿರುವುದು ಎಂದು ಹೇಳಲು, ಅಲ್ಲಿ ನೆರೆದಿದ್ದವರೆಲ್ಲರೂ, ಆ ಗೂನು ಮನುಷ್ಯನ ಮರಣಕಾರಣಗಳೆನ್ನುಕುರಿತು, ಆಶ್ಚರ್ಯಯುಕ್ತರಾದರು. ನ್ಯಾಯಾಧಿಪತಿಯು, ತಾನು ಮಾಡಿದ ತಪ್ಪನ್ನು, ತಾನೇ ಒಪ್ಪಿಕೊಳ್ಳುತ್ತಿರುವುದರಿಂದ. ವೈದ್ಯನನ್ನು ಬಿಟ್ಟು, ಈ ದರ್ಜಿಯವನನ್ನು ಗಲ್ಲಿಗೆ ಹಾಕೆಂದು ಹೇಳಿದನು. ಕೂಡಲೆ, ಕೊಲೆಗಾರನು ಆತನನ್ನು ಗಲ್ಲಿಗೆ ಎತ್ತುವುದಕ್ಕೆ ಸಿದ್ಧನಾದನೆಂದು ಹೇಳಿ, ಬೆಳಗಾದಕೂಡಲೆ ಕಥೆಯನ್ನು ನಿಲ್ಲಿಸಿ, ಬೆಳಗಿನ ಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೧೨೪ನೆಯ ರಾತ್ರಿ ಕಥೆ.

ಷಹರಜಾದಿಯು, ಸುಲ್ತಾನರನ್ನು ಕುರಿತು, ಇಂತೆಂದಳು :— ಆ ದರ್ಜಿಯವನು, ಅಲ್ಲಿಗೆ ಹೋಗುವುದಕ್ಕೆ ಸಿದ್ಧನಾಗಿರುವಲ್ಲಿ, ಕಾಸುಗಾರರಾಜನು, ತನ್ನ ಪ್ರೀತಿಪಾತ್ರನಾದ ನಕಲಿಯವನನ್ನು ನೋಡಬೇಕೆಂದು, ಕರೆಸುವಂತೆ ಹೇಳಿದನು. ಆಗ ಆತನ ಸಭಿಕರಲೊಬ್ಬನು, ಅಯ್ಯಾ! ನಿಮ್ಮ ಗೂನನಾದ, ನಕಲಿಯವನು ಈದಿನ ಸಾರಾಯಿಕುಡಿದು ಮತ್ತಿನಿಂದ ಒಬ್ಬ ವರ್ತಕನಮೇಲೆ ಬೀಳುವುದಕ್ಕೆ ಹೊದುದರಿಂದ, ಆತನು ಕಳ್ಳನೆಂದು ತಿಳಿದು ಅವನನ್ನು ಗುದ್ದಿ ಕೊಂದನೆಂಬ ವರ್ತಮಾನಹುಟ್ಟಿ, ನ್ಯಾಯಾಧಿಪತಿಗೆತಿಳಿದು, ಆತನನ್ನು ಅಪರಾಧಿಯೆಂದು ಗೊತ್ತುಮಾಡಿ, ಅವನನ್ನು! ಗಲ್ಲಿಗೆ ಹಾಕುತ್ತಿರುವಾಗ, ಮತ್ತೊಬ್ಬನು ಇನ್ನೊಬ್ಬನನ್ನು ಉರುಳು ಕಟ್ಟುವಾಗ ಮಗದೊಬ್ಬನೂ, ಈತರದಿಂದ ನಾಲ್ಕುಜನಗಳು ಬರಲು, ಕೊನೆಗೆ ತಾನಾಗಿ ತಪ್ಪನ್ನು ಒಪ್ಪಿಕೊಂಡಿರುವ, ಒಬ್ಬ ದರ್ಜಿಯವನನ್ನು ಮಂತ್ರಿಯು ಗಲ್ಲಿಗೆಹಾಕಿಸುತ್ತಿರುವನೆಂದು ಹೇಳಲು ರಾಜನು ಆ ನಿರ್ಭಾಗ್ಯನಾದ ಗೂನನನ್ನು ನೋಡಬೇಕಾಗಿರುವುದರಿಂದ, ಆ ಶವವನ್ನೂ ಅಪರಾಧಿಗಳನ್ನೂ ಕರೆದುಕೊಂಡುಬರುವಂತೆ ಮಂತ್ರಿಗೆ ಹೇಳಿಬಾ ! ಎಂದು ಸೇವಕನನ್ನು ಕಳುಹಿಸಿದನು.

ಆ ಸೇವಕನು, ಬೇಗದಿಂವೋಡಿಬಂದು, ಕೊಲೆಗಾರನನ್ನುನೋಡಿ ಅಯ್ಯಾ ! ಸ್ವಲ್ಪ ನಿದಾನಿಸು. ನಾನು ಮಂತ್ರಿಯಸಂಗಡ ಮಾತನಾಡಬೇಕಾಗಿದೆ ಎಂದು ಹೇಳಿ, ರಾಜನು ಮಾಡಿದ ಅಪ್ಪಣೆಯನ್ನು ತಿಳಿಸಲು, ಮಂತ್ರಿಯು ಆ ಗೂನನ ಶವವನ್ನೂ, ದರ್ಜಿಯವನನ್ನೂ, ವೈದ್ಯನನ್ನೂ, ವರ್ತಕನನ್ನ ಕ್ರಿಷ್ಟಯಾನನ್ನು ಕರೆದುಕೊಂಡುಬಂದರು ಆಗ ಮಂತ್ರಿಯು ರಾಜನಿಗೆ ನಮಸ್ಕಾರ ಮಾಡಿ, ತಾನು ವಿಚಾರಿಸಿದ, ಸಕಲವಿಷಯಗಳನ್ನು ಆತನಿಗೆ ಅರಿಕೆಮಾಡಿದನು. ರಾಜನು ವಿಚಿತ್ರತರವಾದ ಈ ಕಥೆಯನ್ನು ಸುವರ್ಣಾಕ್ಷರಗಳಿಂದ ಬರೆಸಿ, ತನ್ನ ಬಂಡಾರದಲ್ಲಿರಿಸಿದನು. ಆಗ ರಾಜನು ತನ್ನ ಸಭೆಯಲ್ಲಿರುವ ವಿದ್ವಾಂಸರನ್ನು ನೋಡಿ, ಇಂತಹ ವಿಚಿತ್ರಕರವಾದ ಚರಿತ್ರೆಯನ್ನು ನೀವು ಯಾವಾಗಲಾದರೂ ಕೇಳಿರುವಿರಾ ! ಎಂದು ನುಡಿ

ಯಲು, ಕ್ರಿಷ್ಟಯೋನನು ಎದ್ದು ರಾಜನಿಗೆ ನಮಸ್ಕಾರಮಾಡಿ, ಅಯ್ಯಾ! ಇದಕ್ಕಿಂತಲೂ ಅತಿಶಯವಾದ ಮತೊಂದು ಕಥೆ ಇರುವುದು, ಅದನ್ನು ತಾವು ದಯವಮಾಡಿ ಅಪ್ಪಣೆಮಾಡಿದರೆ ಕೇಳಿದವರಿಗೆಲ್ಲರಿಗೂ, ಆಶ್ಚರ್ಯ ಉಂಟಾಗುವಂತಹ, ನರಣಿಯಲ್ಲಿ ಹೇಳುವೆನೆಂದು, ಬೇಡಿಕೊಂಡು ಸುಲ್ತಾನನಿಂದ ಅಪ್ಪಣೆಯನ್ನು ಪಡೆದು, ಹೇಳಲಾರಂಭಿಸಿದನು.

ಕ್ರಿಷ್ಟಯೋನನು ಹೇಳಿದ ಕಥೆ.

ಅಯ್ಯಾ! ರಾಜಾಧಿರಾಜನೇ! ನಾನು ನಿನಗೆ ಕಥೆಯೆನ್ನು ಹೇಳುವುದಕ್ಕೆ ನಿನ್ನ ದೇಶದಲ್ಲಿ ಹುಟ್ಟಿದವನಲ್ಲವೆಂಬುದನ್ನು ವಿಜ್ಞಾಪಿಸಿಕೊಳ್ಳುವೆನು. ಮತ್ತೇನಂದರೆ;-ಈಜಿಪ್ಟ್ ದೇಶದ ರಾಜಧಾನಿಯಾದ, ಕೈರೋ ನಗರದಲ್ಲಿ ಹುಟ್ಟಿದವನು, ನಾನು ನಾನು ಕ್ರಿಸ್ತಮತದವನು. ನನ್ನತಂದೆ ದೊಡ್ಡ ದಳ್ಳಾಳಿಯಾಗಿದ್ದು, ಬಹಳವಾಗಿ ಹಣವನ್ನು ಸಂಪಾದಿಸಿದನು. ನಾನು ಆತನ ಉದ್ಯೋಗವನ್ನೇ ಅವಲಂಬಿಸಿ, ಒಂದಾನೊಂದುದಿನ ಕೈರೋ ನಗರದ ಮುಸಾಫರಖಾನೆಯಲ್ಲಿ ಎದುರಾಗಿ ಕುಳಿತಿರುವಲ್ಲಿ, ನನ್ನಬಳಿಗೆ ಸುಂದರನಾದೊಬ್ಬ ಪುರುಷನು ಉತ್ತಮವಸ್ತ್ರಗಳನ್ನು ಧರಿಸಿಕೊಂಡು ಬಂದು, ಸಲಾಮು ಮಾಡಿ, ರುವಾಲಿನ ಕೊನೆಯಲ್ಲಿ ಕಟ್ಟಿದ್ದ ತುರ್ಕಿ ದೇಶದ ಉತ್ತಮಧಾನ್ಯವನ್ನು ತೋರಿಸಿ, ಈ ಧಾನ್ಯವು ಬುಷೆಲ್ ಒಂದಕ್ಕೆ ಎಷ್ಟು ಬೆಲೆ ಬಾಳಬಹುದೆಂದು ಕೇಳಿದನು. ಹೀಗೆಂದು ಹೇಳುತ್ತಿರುವಾಗಲೆ ಬೆಳಗಾದುದರಿಂದ ಷಹರಜಾದಿಯು ಕಥೆಯೆನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಮತ್ತೆ ಹೇಳತೊಡಗಿದಳು.

೧೩ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನರನ್ನುದ್ದೇಶಿಸಿ ಪ್ರಿಯರೇ! ನಂತರ ಕ್ರಿಷ್ಟಯೋನನು, ಸುಲ್ತಾನನಿಗೆ ಹೀಗೆಂದು ಹೇಳಿದನು. ಆತನು ನನಗೆ ತೋರಿಸಿದ ಧಾನ್ಯವನ್ನು ನೋಡಿ, ಬಹಳ ಉತ್ತಮವಾಗಿದ್ದುದರಿಂದ ಬುಷೆಲ್ ಒಂದಕ್ಕೆ ನೂರುರೂಪಾಯಿ ಬೀಳಬಹುದೆಂದು, ನಾನುಹೇಳಿದೆನು. ಈ ದರದಮೇರೆ ಕೊಡುಕೊಳ್ಳುವ ವರ್ತಕರನ್ನು ಗೊತ್ತುಮಾಡಿಕೊಡುವೆಯಾ! ಹಾಗೆ ಕುದುರಿಸಿಕೊಡುವ್ರದಾದರೆ, ವಿಕ್ಟೋರಿಯಾ ಗೇಟಿಗೆ ಎದುರಿನಲ್ಲಿರುವ, ಮುಸಾಫರಖಾನೆಗೆ ಬಂದು, ನನ್ನನ್ನು ನೋಡಿದರೆ, ನಾನು

ಧಾನ್ಯವನ್ನು ಕೊಡುವೆನೆಂದು ಹೇಳಿ, ಮಾದರಿಯು ಕೊಟ್ಟು ಹೊರಟು ಹೋದನು. ನಾನು ಮಾದರಿ ಧಾನ್ಯವನ್ನು ತೆಗೆದುಕೊಂಡುಹೋಗಿ, ವರ್ತಕರಿಗೆ ತೋರಿಸುವಲ್ಲಿ, ಅವರು ಒಂದು ಬುಷೆಲ್ಲಿಗೆ ನೂರಹತ್ತುರೂಪಾಯಿನಂತೆ ತೆಗೆದುಕೊಳ್ಳುತ್ತೇವೆಂದು ಹೇಳಿದರು. ನನಗೆ ಒಂದು ಬುಷೆಲ್ಲಿಗೆ ಹತ್ತುರೂಪಾಯಿ ಲಾಭಬರುವುದೆಂಬಾಸೆಯಿಂದ, ಆ ವರ್ತಕರನ್ನು ಕರೆದು ಕೊಂಡು, ನಾನು ಆ ವಿಕ್ಟೋರಿಯಾ ಗೇಟಿನಬಳಿ ಇರುವ ಮುಸಾಫರ ಖಾನೆಯಬಳಿಗೆ ಹೋದೆನು, ಆ ಯುವಕನು ನನಗೋಸ್ಕರ ಅಲ್ಲಿಯೇ ಕಾದುಕೊಂಡಿದ್ದನು. ನಾವು ಅಲ್ಲಿಗೆ ಹೋದಕೂಡಲೆ, ಆತನು ನಮ್ಮನ್ನು ಮಳಿಗೆಯೊಳಕ್ಕೆ ಕರೆದುಕೊಂಡುಹೋಗಿ, ತನ್ನಲ್ಲಿದ್ದ ಧಾನ್ಯವನ್ನೆಲ್ಲಾ ಅಳೆದುಕೊಟ್ಟು, ಅಮಿದುಸಾವಿರರೂಪಾಯಿಗಳನ್ನು ತೆಗೆದುಕೊಂಡು, ನನ್ನ ಭಾಗಕ್ಕೆ ಬರಬೇಕಾದ ಇನ್ನೂರುರೂಪಾಯಿಗಳನ್ನು ಕೊಟ್ಟು, ಉಳಿದ ಹಣವನ್ನು ತಾನಿಟ್ಟುಕೊಂಡನು.

ಬಳಿಕ ನಾನು ಸಂತೋಷದಿಂದ ಅವನ ಕೈಯ್ಯನ್ನು ಮುದ್ದಿಸಿ, ಅವನಪ್ಪಣೆಯನ್ನು ಪಡೆದು, ನೀನು ಅಪೇಕ್ಷಿಸಿದ ಕಾಲದಲ್ಲಿ ಬರಲು ಸಿದ್ಧನಾಗಿ ಇರುವೆನೆಂದುಹೇಳಿ, ಹೊರಟುಬಂದೆನು. ಹೀಗೆ ನಾನು ಹೊರಟುಬರುತ್ತಿರುವಾಗ ಆತನು ನನ್ನನ್ನುಕರೆದು, ಈ ನಾಲ್ಕುಸಾವಿರಐನೂರುರೂಪಾಯಿಗಳನ್ನು ನೀನೆ ಇಟ್ಟುಕೊಂಡಿರು. ನಾನೇ ಬಂದು ಕೇಳಿದಾಗ ಕೊಡುವೆಯೆಂತೆ, ಎಂದು ಹೇಳಿ, ಹಣವನ್ನು ಕೊಟ್ಟು ಹೊರಟುಹೋಗಿ, ಒಂದು ತಿಂಗಳು ಕಳೆದಮೇಲೆ ನನ್ನಬಳಿಗೆ ಬಂದು ನಾಲ್ಕುಸಾವಿರಐನೂರು ರೂಪಾಯಿಗಳನ್ನು ಕೊಡು ಎಂದು ಕೇಳಿದನು. ಹಣವು ಸಿದ್ಧವಾಗಿರುವುದು, ನಾನು ನಿನ್ನಿಷ್ಟಾನುಸಾರ ಕೊಡುವೆನು. ಆದರೆ ತಾವು ಕುದುರೆಯಿಂದಿಳಿದು, ಭೋಜನವನ್ನು ಮಾಡಿಕೊಂಡು, ಹಣವನ್ನು ತೆಗೆದುಕೊಂಡು ಹೋಗಬಹುದೆಂದು ಹೇಳಿದೆನು. ಅದಕ್ಕಾತನು, ನಾನು ಈಗ ಇಳಿಯಲಾರೆನು, ನಾನು ಮತ್ತೊಂದುಕಡೆಗೆ ಹೋಗಬೇಕಾಗಿರುವುದು. ಬರುವಾಗ ಇದೇ ಮಾರ್ಗದಲ್ಲಿ ಬರುವೆನು. ಆಗ ಹಣವನ್ನು ಸಿದ್ಧಪಡಿಸಿಟ್ಟುಕೊಂಡಿದ್ದರೆ, ನಾನು ಅದನ್ನು ತೆಗೆದುಕೊಂಡು ಹೋಗುವೆನೆಂದುಹೇಳಿ ಹೊರಟು ಹೋದನು. ನಾನು ಹಣವನ್ನು ಸಿದ್ಧಮಾಡಿ, ಕಾದುಕೊಂಡಿದ್ದೆನು.

ಆದರೂ ಆತನು, ಒಂದುತಿಂಗಳವರೆಗೂ ಬಾರದುದರಿಂದ, ಆತನಿಗೆ ನನ್ನಲ್ಲಿ ತುಂಬ ನಂಬಿಕೆ ಇರುವುದೆಂದೂ, ಇಲ್ಲವಾದರೆ ಗುರುತೇ ಇಲ್ಲದವನಾದ ನನ್ನಲ್ಲಿ ಇಷ್ಟೊಂದು ಹಣವನ್ನು ಸುಮ್ಮನೆ ಕೊಟ್ಟು ಹೋಗಲಾರನೆಂದು, ಯೋಚಿಸುತ್ತಾ, ಎರಡನೆತಿಂಗಳಲ್ಲಿ ಬರುವನೇನೋ ಎಂದು ತಿಳಿದುಕೊಂಡಿದ್ದೆನು. ಅವನು ಆಗಲೂ ಬರಲಿಲ್ಲ. ಆದರೆ ಮೂರನೆತಿಂಗಳಲ್ಲಿ, ತಾನು ಮೊದಲು ಕುಳಿತುಕೊಂಡಿದ್ದ ಕುದುರೆಯಮೇಲೆ ಕುಳಿತುಕೊಂಡು ಉತ್ತಮವಾದ ವಸ್ತ್ರಗಳನ್ನು ಧರಿಸಿಕೊಂಡು, ನನ್ನಬಳಿಗೆ ಬಂದು ನಿಂತನು. ಇಷ್ಟರಲ್ಲಿ ಬೆಳಗಾದುದರಿಂದ ಷಹರಜಾದಿಯು ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಪುನಹ ಹೇಳತೊಡಗಿದಳು.

೧೩೦ ನೆಯ ರಾತ್ರಿಯ ಕಥೆ.

ಷಹರಜಾದಿಯು ಸುಲ್ತಾನರನ್ನುನೋಡಿ, ಪ್ರಿಯರೇ! ಕ್ರಿಷ್ಟಯಾನನು ಆ ರಾಜನನ್ನುಕುರಿತು ಇಂತೆಂದನು. ದಳ್ಳಾಳಿಯು ಆ ವರ್ತಕಪುತ್ರನನ್ನು ನೋಡಿದಕೂಡಲೆ, ಆತನಹತ್ತಿರಕ್ಕೆ ಬಂದು, ಸ್ವಾಮಿ! ತಾವು ಕುದುರೆಯನ್ನಿಳಿದುಬಂದು ನನ್ನಮನೆಯೆನ್ನು ಹೊಕ್ಕು ಸಂತೋಷವಡಿಸಿ, ನಿಮ್ಮ ಹಣವನ್ನು ತೆಗೆದುಕೊಂಡು ಹೋಗಬಹುದೆಂದು ಹೇಳಿದೆನು. ಆಗ ವರ್ತಕಪುತ್ರನು ಅಯ್ಯಾ! ನನಗೆ ಈಗ ಹಣವು ಅಗತ್ಯವಿಲ್ಲ. ನನ್ನಹಣವು ಉತ್ತಮವಾದ ಸ್ಥಲದಲ್ಲಿ ಭದ್ರವಾಗಿರುವುದು. ನನ್ನಲ್ಲಿ ಹಣವಿಲ್ಲದಾಗ ಬಂದು ನಿನ್ನನ್ನು ಕೇಳಿ ತೆಗೆದುಕೊಳ್ಳುವೆನೆಂದು ಹೇಳಿ, ಹೊರಟುಹೋದನು. ಆದುದರಿಂದ ನಾನು ಈತನು ಇನ್ನು ಬಹುದಿನಗಳವರಿಗೂ ಬರಲಾರನು. ಆದುದರಿಂದ ಈ ಹಣದಲ್ಲಿ ವ್ಯಾಪಾರಮಾಡಿ ಲಾಭವನ್ನು ಸಂಪಾದಿಸಬಹುದೆಂದು ತಿಂದುಕೊಂಡೆನು. ಈ ನನ್ನಯೋಚನೆಯು ವ್ಯರ್ಥವಾಗಲಿಲ್ಲ. ಆತನು ಮರಳಿ ಒಂದುವರ್ಷದಮೇಲೆ ಮೊದಲಿಗಿಂತಲೂ. ಉತ್ತಮವಾದ ವಸ್ತ್ರಗಳನ್ನು ಧರಿಸಿಕೊಂಡು, ನನ್ನ ಮನೆಯಬಳಿಗೆ ಬಂದನು. ನಾನು ಆತನನ್ನು ಮರ್ಯಾದೆಯಿಂದ ಕಂಡು, ಅಯ್ಯಾ! ತಾವು ದಯೆಮಾಡಿ, ನನ್ನಮನೆಗೆ ಬಂದು ಭೋಜನಮಾಡಿಕೊಂಡು ಹೋಗಬೇಕೆಂದು, ಬೇಡಿಕೊಂಡೆನು. ಆಗ ಆತನು, ನಾನು ನಿನ್ನಮನೆಗೆ ಬರುವುದಕ್ಕಡ್ಡಿಯೇನೂ ಇಲ್ಲ. ಆದರೆ ನೀನು ನನಗೋಸ್ಕರವಾಗಿ, ದೊಡ್ಡ ಖರ್ಚನ್ನು ಇಟ್ಟುಕೊಳ್ಳಬೇಡವೆಂದು ಹೇಳಿದನು. ನಾನು ಆತನಿಗೆ ಚಿತನವನ್ನು

ಮಾಡುವುದಕ್ಕೆ ಬೇಕಾದ ಪರಿಕರಗಳನ್ನು ಸಿದ್ಧಪಡಿಸಿಕೊಂಡು, ಆತನನ್ನು ಮನೆಗೆ ಕರೆದು ಕುಳ್ಳಿರಿಸಿ ಭೋಜನವು ತಯಾರಾಗುವವರೆಗೂ, ಆತನ ಸಂಗಡ ಮಾತನಾಡುತ್ತಾ ಇದ್ದು, ಭೋಜನವು ಸಿದ್ಧವಾಗುತ್ತಲೇ, ನಾವಿಬ್ಬರೂ ಒಂದೇ ಮೇಜವಮೇಲೆ ಜೊತೆಯಲ್ಲಿ ಊಟಕ್ಕೆ ಕುಳಿತುಕೊಂಡೆವು. ಆಗ ವರ್ತಕಪುತ್ರನು ಮೊದಲನೆಯ ತುತ್ತನ್ನು 'ಎಡದಕೈಯ್ಯಲ್ಲಿ ತೆಗೆದುಕೊಂಡು ತಿಂದನು. ದಳ್ಳಾಳಿಯು, ಆತನನ್ನುನೋಡಿ, ಆಹಾ! ಈತ ನಿಗೂ ನನಗೂ ಪರಿಚಯವಾದಂದಿನಿಂದಲೂ ನನ್ನನ್ನು ಬಹು ಗೌರವದಿಂದ ನೋಡುತ್ತಾ ಇದ್ದನು. ಆದರೆ ನನ್ನನ್ನು ಲಕ್ಷ್ಯವಮಾಡದೆ ಅವಮಾನವಮಾಡುತ್ತಾನೆಯೆ ? ಈತನು ಏತಕ್ಕಾಗಿ ಎಡದಕೈಯ್ಯಲ್ಲಿ ಊಟವಮಾಡಿದನೆಂದು, ಯೋಚಿಸುತ್ತಿದ್ದನು. ಇಂತೆಂದು ಹೇಳುತ್ತಿರುವಾಗ ಸೂರ್ಯೋದಯವಾದುದರಿಂದ, ಷಹರಜಾದಿಯು ಕಥೆಯನ್ನುನಿಲ್ಲಿಸಿ, ಮರುದಿನ ಸುಲ್ತಾನನೊಡನೆ ಸುಖಶಯನವಲ್ಲಿ ಮಲಗಿದ್ದು, ಬೆಳಗಿನ ಜಾವವಲ್ಲಿ ಆ ಇಂಡಿಯಾ ದೇಶದ ಸುಲ್ತಾನರನ್ನು ಕುರಿತು, ಇಂತೆಂದು ಕಥೆಯನ್ನು ಪುನಹಾ ಹೇಳಲಾರಂಭಿಸಿದಳು.

೧೩೧ ನೆಯ ರಾತ್ರಿ ಕಥೆ.

ಬಳಿಕ ಷಹರಜಾದಿಯು ಸುಲ್ತಾನರನ್ನುನೋಡಿ, ಪ್ರಿಯರೇ ! ಕ್ರಿಷ್ಟಯಾನನು ರಾಜನನ್ನು ಕುರಿತು ಇಂತೆಂದು ಹೇಳಲಾರಂಭಿಸಿದನು. ಆ ದಳ್ಳಾಳಿಯು, ವರ್ತಕನಪುತ್ರನು ಎಡದಕೈಯ್ಯಲ್ಲಿ ಊಟಮಾಡುವುದಕ್ಕೆ ಕಾರಣವೇನೊ ತಿಳಿದುಕೊಳ್ಳಬೇಕೆಂದಿದ್ದನು. ಊಟವಾದಮೇಲೆ ಅವರಿಬ್ಬರೂ ಒಂದು ಸೋಫಾದಮೇಲೆ ಕುಳಿತುಕೊಂಡರು. ಆಗ ದಳ್ಳಾಳಿಯು, ಆ ವರ್ತಕಪುತ್ರನಿಗೊಂದು, ವೊಗವಾಸದುಂಡೆಯನ್ನು ಕೊಟ್ಟನು. ಆ ವರ್ತಕಪುತ್ರನು, ಅದನ್ನು ಎಡದಕೈಯ್ಯಲ್ಲಿಯೇ ತೆಗೆದುಕೊಂಡುದರಿಂದ, ಆ ದಳ್ಳಾಳಿಯು, ಆತನನ್ನುಕುರಿತು ಅಯ್ಯಾ ! ಬಲದ ಕೈಯನ್ನು ಏತಕ್ಕೆ ಉಪಯೋಗಿಸುವುದಿಲ್ಲ. ಅದಕ್ಕೆ ಪೆಟ್ಟೇನಾದರೂ, ತಗಲಿರುವುದೇ ? ನಾನು ಕೇಳಬಾರದಕ್ಕಾಗಿ, ನನ್ನನ್ನು ಮನ್ನಿಸಬೇಕೆಂದು ಬೇಡುವೆನು ಎಂದನು. ವರ್ತಕಪುತ್ರನು ತನ್ನ ಬಲಗೈಯ್ಯ ಅಂಗಿಯ ತೋಳನ್ನು ಹಿಂದಕ್ಕೆ ಸರಿಸಿ ಕೈಯ್ಯನ್ನು ತೋರಿಸಿದನು. ಆತನ ಬಲಗೈಯ್ಯು ಕೊಯ್ಯಲ್ಪಟ್ಟಿದ್ದುದರಿಂದ, ದಳ್ಳಾಳಿಯು ಬಹಳವಾಗಿ ವ್ಯಸನ

ಪಟ್ಟನು. ಕೂಡಲೆ ವರ್ತಕಪುತ್ರನು ಆತನನ್ನುನೋಡಿ, ಅಯ್ಯಾ ನಾನು ಎಡದಕೈಯಿಂದ ಭೋಜನಮಾಡಿದುದಕ್ಕಾಗಿ, ತಾವು ಬೇಜಾರು ಪಟ್ಟುಕೊಂಡಿದ್ದೀರೋ! ನಾನೇನುಮಾಡಲಿ! ವಿಧಿಯಿಲ್ಲದುದರಿಂದ ಹೀಗೆ ಮಾಡಿದೆನೆಂದು ಹೇಳಿದನು. ದಳಾಳಿಯು ಆತನನ್ನುಕುರಿತು, ತಮ್ಮಕೈ ಊನವಾಗುವುದಕ್ಕೆ ಕಾರಣವೇನೆಂದು ಕೇಳಲು, ವರ್ತಕಪುತ್ರನು ಕಣ್ಣೀರನ್ನು ಸುರಿಸುತ್ತಾ, ಆ ದಳಾಳಿಯನ್ನು ನೋಡಿ ಬಹಳವಾಗಿ ವ್ಯಸನವನ್ನುಹೊಂದಿ, ಇಂತೆಂದು ಹೇಳಿದನು. ನಾನು ಬಾಗ್ದಾದುನಗರದಲ್ಲಿರುವ ಬಬ್ಬಾನೊಬ್ಬ ಐಶ್ವರ್ಯವಂತನ ಮಗನು. ನನ್ನ ತಂದೆಯು ನನ್ನನ್ನು ಬಹು ವಿಶ್ವಾಸದಿಂದ ಸಲಹಿದನು. ನಾನು ಪ್ರಬುದ್ಧನಾದಕೂಡಲೆ, ಪರದೇಶಿಗಳ ಗುಂಪಿಗೆ ಸೇರಿ, ನಾನಾದೇಶದ ಚಿತ್ರವರ್ತಮಾನಗಳನ್ನು ಕೇಳಿತಿಳಿದುಕೊಂಡು ಆಯಾದೇಶಗಳನ್ನು ಸಂಚರಿಸಿನೋಡಬೇಕೆಂದು ಪ್ರಯತ್ನಪಟ್ಟೆನು. ಆಗ ನನ್ನತಂದೆಯು ಜೀವಿಸಿದ್ದುದರಿಂದ ನನ್ನನ್ನು ಅಡ್ಡಿಮಾಡಿದನು. ಆತನು ಸತ್ತುಹೋದಮೇಲೆ, ನಾನು ಸ್ವತಂತ್ರನಾಗಿ ನಾನಾದೇಶದ ನಾಣ್ಯಗಳನ್ನು ತೆಗೆದುಕೊಂಡು, ಪ್ರಯಾಣ ಹೊರಟೆನು. ಕೈರೋನಗರವನ್ನು ಸೇರಿದಕೂಡಲೆ, ಮುಸೂರುಖಾನೆಯೆಂಬ ಮುಸಾಫರಖಾನೆಯಲ್ಲಿಳಿದು, ನನ್ನ ಪದಾರ್ಥಗಳೆಲ್ಲವನ್ನೂ ಒಂದು ಕೊಠಡಿಯಲ್ಲಿ ಹಾಕಿ, ಪ್ರಯಾಣದ ಬಳಲಿಕೆಯನ್ನು ತೀರಿಸಿಕೊಳ್ಳುವುದಕ್ಕಾಗಿ, ನನ್ನಡಿಗೆಯವನಿಗೆ ಹೇಳಿ, ಆತನಿಂದಡಿಗೆಮಾಡಿಸಿ, ಊಟಮಾಡಿದಬಳಿಕ, ಕೈರೋನಗರವನ್ನು ನೋಡುವುದಕ್ಕೆ ಹೊರಟು ನೋಡತಕ್ಕಸ್ಥಳಗಳನ್ನೆಲ್ಲ ನೋಡಿದೆನು.

ಮರುದಿನ ಬೆಳಿಗ್ಗೆ ನಾನು ಉಡುಪನ್ನು ಧರಿಸಿಕೊಂಡು, ನಾನು ತಂದಿರುವ ಉತ್ತಮ ಪದಾರ್ಥಗಳನ್ನು ತರಗುಮಂಡಿಗೆ ತೆಗೆದುಕೊಂಡು ಬರುವಂತೆ, ನನ್ನ ಚಾಕರರಿಗೆ ಹೇಳಿ, ನಾನು ಅವರಹಿಂದೆಯೆ ಅಲ್ಲಿಗೆ ಹೋದೆನು. ನಾನು ಬಂದಿರುವ ವರ್ತಮಾನವನ್ನು ಕೇಳಿ, ವರ್ತಕರೂ, ದಳಾಳಿಗಳೂ, ಬಂದು ನನ್ನನ್ನು ಸುತ್ತಿಕೊಂಡರು. ಆಗ ನಾನು ತೆಗೆದುಕೊಂಡುಬಂದಿದ್ದ ಸರಕುಗಳನ್ನು ಆ ವರ್ತಕರಿಗೆ ಕೊಟ್ಟೆನು. ಅವರು ಅದನ್ನು ತೆಗೆದುಕೊಂಡುಹೋಗಿ, ಪೇಟೆಯಲ್ಲಿ ಇರುವ ಇತರ ಜನಗಳಿಗೂ, ವರ್ತಕರಿಗೂ ತೋರಿಸಿದ್ದರೆಹೊರತು, ಅದರ ಕ್ರಯವಿಲ್ಲದಿದ್ದರೆ ಹೋಗಲಿ.

ಇಲ್ಲಿಗೆ ತರುವುದಕ್ಕೆ ಮುಟ್ಟಿದ ಖರ್ಚಿಗೂ ಕೇಳಲಿಲ್ಲ. ಆದುದರಿಂದ ವ್ಯಸನಾಕ್ರಾಂತನಾಗಿದ್ದೆನು. ವ್ಯಾಪಾರಸ್ಥರು ನಾವು ಹೇಳಿದಂತೆ ನೀವು ಕೊಡುವುದಾದರೆ, ನಿಮ್ಮ ಸರಕುಗಳು ಬೇಗ ಖರ್ಚಾಗುವುದರಲ್ಲಿ ಯಾವ ಸಂದೇಹವೂ ಇಲ್ಲವೆಂದು ಹೇಳಿದರು. ಇಂತೆಂದು ಹೇಳಿದ ಷಹರಜಾದಿಯು ಬೆಳಗಾದಕೂಡಲೆ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ, ಪುನಹಾ ಹೇಳತೊಡಗಿದಳು.

೧೩೨ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನನ್ನು ಕುರಿತು, ಪ್ರಭುವೇ! ಆ ಕ್ರೈಸ್ತನು, ವರ್ತಕನನ್ನು ಕುರಿತು, ಇಂತೆಂದು ಹೇಳಿದನು. ತರಗಿನ ವರ್ತಕರು ನನ್ನ ಸರಕುಗಳನ್ನು ನಷ್ಟವಿಲ್ಲದಂತೆ ಮಾರಬಹುದೆಂದು ಹೇಳಿದಬಳಿಕ, ನಾನು ಅದು ಹೇಗೆಂದು ಕೇಳಿದೆನು. ಆಗ ವರ್ತಕರು, ಅಯ್ಯಾ! ವರ್ತಕರಿಗೆ ನಮ್ಮ ಸರಕುಗಳನ್ನು ಹಂಚಿಕೊಟ್ಟರೆ, ಅವರು ಅದನ್ನು ಚಿಲ್ಲರೆಯಾಗಿ ಮಾರಿಕೊಂಡುಬಂದು, ಬಂದುವಾರಕ್ಕೆರಡುಸಾರಿ, ಅಂದರೆ ಸೋಮವಾರ ಗುರುವಾರಗಳಲ್ಲಿ ಹಣವನ್ನು ತಂದುಕೊಡುವರು. ಹೀಗೆ ನಾವು ವ್ಯಾಪಾರಮಾಡಿದುದಾದರೆ, ನಮಗೆ ಲಾಭವೇಹೊರತು ನಷ್ಟವೆಂದಿಗೂ ಬಾರದು. ಅಲ್ಲದೆ ನೀನೂ, ಈ ಪಟ್ಟಣವನ್ನು ಇಲ್ಲಿರುವ ಚಿತ್ರವಸ್ತುಗಳನ್ನು ಸಾವಕಾಶವಾಗಿ ನೋಡಬಹುದು ಎಂದು ಹೇಳಿದರು, ಬಳಿಕ ನಾನು ಅವರ ಮಾತಿನಂತೆ ನನ್ನ ಸರಕುಗಳನ್ನು ತರಿಸಿ, ಚಿಲ್ಲರೆ ವರ್ತಕರನ್ನು ಕರೆಸಿ, ಹಂಚಿದೆನು. ನಂತರ ಅವರೆಲ್ಲರೂ ಸಾಕ್ಷಿಗಳ ಮೂಲಕ ತಂತಮ್ಮ ಒಪ್ಪಿಗೆಯ ರಶೀದಿಯೆನ್ನೂ ಕೊಟ್ಟರು. ಈತೆರದಿಂದ ನನ್ನ ಸರಕುಗಳನ್ನು ಹಂಚಿದಮೇಲೆ, ನನಗೆ ತುಂಬ ಸಂತೋಷವಾದುದರಿಂದ, ನಾನು ಆ ಊರಿನಲ್ಲಿರುವ ನನ್ನ ಸಹಪಾಠಿಗಳೊಡನೆ ಸೇರಿ, ವಿಚಿತ್ರವಿನೋದಗಳನ್ನೆಲ್ಲಾ ನೋಡುತ್ತಾ, ಒಂದುತಿಂಗಳು ಕಳೆದಬಳಿಕ, ನನ್ನ ಗುಮಾಸ್ತನನ್ನೂ ನಾಣ್ಯಪರೀಕ್ಷಕನನ್ನೂ ಸಂಗಡ ಕರೆದುಕೊಂಡು, ಆ ವರ್ತಕರ ಬಳಿಗೆಹೋಗಿ, ಅವರಿಂದ ಹಣವನ್ನು ತೆಗೆದುಕೊಂಡುಬಂದು, ನನ್ನ ಬಿಡದಿಯಲ್ಲಿಟ್ಟುಕೊಳ್ಳುತ್ತಿದ್ದೆನು. ಉಳಿದಕಾಲದಲ್ಲಿ ವಿನೋದವಾಗಿ ಬೆಳಗಿನ ಹೊತ್ತು ಒಬ್ಬ ವರ್ತಕನಮನೆಗೂ, ಸಾಯಂಕಾಲದಲ್ಲಿ ಪೇಟೆಯಗುಜರಿಗೂ,

ವರ್ತಕರ ಅಂಗಡಿಗೂ ಹೋಗಿಬರುತ್ತಾ, ಸಂತೋಷದಿಂದ ಕಾಲವನ್ನು ಕಳೆಯುತ್ತಿದ್ದನು. ಒಂದು ಸೋಮವಾರದದಿನ, ನಾನು ಬದರೀದೀನ ನೆಂಬುವನ ಅಂಗಡಿಯಲ್ಲಿ ಕುಳಿತಿರುವಾಗ, ನಡತೆಯಲ್ಲಿಯೂ,ಮುಖವರ್ಚಸ್ಸಿನಲ್ಲಿಯೂ, ಗೌರವದಿಂದಲೂ, ಜೀವಿಸುತ್ತಿರುವ ಧೊರೆಸಾನಿಯೆಂದು ನೋಡಿದವರು ತಿಳಿದುಕೊಳ್ಳುವಂತಿಗುವ, ಒಬ್ಬ ನಾಯಿಕಾಮಣಿಯು, ತನ್ನದಾದಿಯೆರಸಂಗಡ ಬಂದು, ನನ್ನ ಬಳಿಯಲ್ಲಿ ಕ್ಯುತುಕೊಂಡಳು. ಆಕೆಯ ಸೌಂದರ್ಯವನ್ನೂ, ಲಾವಣ್ಯವಿಶೇಷವನ್ನು ನೋಡಿ, ಅವಳಲ್ಲಿ ಸ್ನೇಹವನ್ನು ಬೆಳಸಬೇಕೆಂಬಭಿಲಾಷೆಯುಂಟಾಯಿತು. ನಾನು ವೋಹದಿಂದಾಕೆಯನ್ನು ನೋಡುತ್ತಿದ್ದುದನ್ನು ಅವಳು ತಿಳದುಕೊಂಡಳು. ಅವಳು ನನ್ನನ್ನು ತನ್ನ ಅಪಾಂಗದೃಷ್ಟಿಯಿಂದ, ನೋಡುತ್ತಿರುವುದು, ನನಗೆ ತೃಪ್ತಿಕರವಾಗಿದ್ದಿತು. ಆದರೆ ಯಾವಕಾರಣದಿಂದಲೋ, ಆ ಬಾಲಿಕಾಮಣಿಯು ವೇಲುವುಸುಕು ಹೊರಿಹೋದುದರಿಂದ, ವಿಶಾಲವಾದ ನೇತ್ರಗಳು ಎರಡೂ, ನನ್ನ ವೋಹವನ್ನು ಅನುವೋದಿಸಿ, ಒಪ್ಪಿಕೊಂಡವು.

ಆ ಮನೋಜ್ಞವಾದ ಕಂಠಸ್ವರವುಳ್ಳ ಬಾಲಿಕಾಮಣಿಯು, ವರ್ತಕನಿಗೆ ವಂದನೆಗಳನ್ನು ಸಮರ್ಪಿಸಿ, ನೀನು ಕ್ಷೇಮವಾಗಿರುವೆಯಾ ? ಎಂದು ಕೇಳಲು, ಆಕೆಯ ತಳಕುಬಳಕುಗಳೆರಡೂ, ನಮ್ಮಗಳ ವೋಹವನ್ನು ಬಲಪಡಿಸಿತು. ಆಕೆ ಅಂಗಡಿಯವನಸಂಗಡ ಸ್ವಲ್ಪಹೊತ್ತು ಮಾತನಾಡುತ್ತಿದ್ದು, ಬಳಿಕ ಆತನನ್ನುಕುರಿತು, ಅಯ್ಯಾ ! ನಮಗೆ ಉತ್ತಮ ತರದ, ಜರತಾ ವಸ್ತ್ರಗಳು ಹೇಕಾಗಿರುವುದು. ನಮಗೆ ಬೇಕಾಗಿರುವ ಪದಾರ್ಥಗಳೆಲ್ಲವೂ, ನಿನ್ನ ಅಂಗಡಿಯಲ್ಲಿ ದೊರಕಬಹುದೆಂದು, ಬಂದಿರುವೆನು. ಹಾಗೆ ನನಗೆ ಬೇಕಾದ ಪದಾರ್ಥಗಳು ನಿನ್ನಬಳಿಯಲ್ಲಿದ್ದರೆ ತೆಗೆದು ತೋರಿಸು. ಬಳಿಕ ನಾವು ನವಂಗಿಷ್ಟವಾದುದನ್ನು ತೆಗೆದುಕೊಳ್ಳುವೆವೆಂದು ಹೇಳಿದಳು. ಆತನು ಸರಕನ್ನು ತೋರಿಸಿದಕೊಡಲೆ, ಆಕೆ ತನಗೆಬೇಕಾದ ವಸ್ತ್ರವನ್ನು ತೆಗೆದಿಟ್ಟುಕೊಂಡು, ಬೆಲೆಯನ್ನು ಕೇಳಲು, ವರ್ತಕನು ಒಂದುಸಾವಿರರೂಪಾಯಿಗಳೆಂದು ಹೇಳಿದನು. ಆಕೆ ಈದಿನ ನನ್ನಬಳಿಯಲ್ಲಿ ಅಷ್ಟೊಂದುಹಣವಿಲ್ಲವಾದುದರಿಂದ, ನಾಳೆ ಸಾಯಂಕಾಲದೊಳಗಾಗಿ ನೀನು ಹಣವನ್ನು ತೆಗೆದುಕೊಳ್ಳುವದಾದರೆ, ನಾನು ಈ ವಸ್ತ್ರವನ್ನು ತೆಗೆದು ಕೊಂಡು ಹೋಗುವೆನೆನಲು, ವರ್ತಕನು ಇದು ನನ್ನ ಪದಾರ್ಥವಾಗಿದ್ದರೆ,

ನಿನಗೆ ಕೊಟ್ಟುಬಿಡುತ್ತಿದ್ದೆನು. ಇಗೋ ಇಲ್ಲಿ ಕುಳಿತುಕೊಂಡಿರುವ ದೊಡ್ಡವನುಷ್ಯನೇ ಇದಕ್ಕೆ ಯಜಮಾನನು. ಈದಿನ ನಾವು ನಮ್ಮ ಲಿಖ್ಖಗಳನ್ನು ಫೈಸಲಾಮಡಿಕೊಳ್ಳಬೇಕೆಂದಿರುತ್ತೇವೆಂದು ಹೇಳಲು, ಆಕೆಯು ಅತ್ಯಾಶ್ಚರ್ಯದಿಂದ, ಅಯ್ಯಾ! ನಾನು ನಿನ್ನ ಅಂಗಡಿಗೆ ವರ್ತನೆಯ ಗಿರಾಕಿಯಲ್ಲವೆ? ಎಷ್ಟೋಸಾರಿ ಬಂದು, ಹಣವನ್ನು ಕೊಡದೆ ಸರಕುಗಳನ್ನು ತೆಗೆದುಕೊಂಡು, ಮರಳಿ ವಾಯಿದೆಗೆಸರಿಯಾಗಿ ಹಣವನ್ನು ತಲಪಿಸಲಿಲ್ಲವೊ? ಎಂದು ಕೇಳಲು, ವರ್ತಕನು ಅಮ್ಮಾ ನೀವು ಹೇಳಿದು ದೆಲ್ಲಾ ನಿಜವೇಸರಿ! ಆದರೆ ಈದಿನ ನಮಗೆ ದುಡ್ಡು ಅಗತ್ಯವಾಗಿ ಬೇಕಾಗಿರುವುದರಿಂದ, ನಾನು ಹೀಗೆಹೇಳಬೇಕಾಯಿತು ಎನಲು ಆಕೆಯು, ಇಗೋ ನಿನ್ನ ಬಟ್ಟೆಯನ್ನು ನೀನೆ ಇಟ್ಟುಕೊ? ನೀನಾಗಲಿ, ನಿನ್ನಜೊತೆಯವರಾಗಲಿ, ಯಾರಾದರೇನೂ! ನೀವುಗಳು ಯಾರನ್ನೂ ಲಕ್ಷ್ಯವಾಡದಂಥ, ಗರ್ವಿಷ್ಠರೆಂದು ಹೇಳಿ, ಕೋಪದಿಂದ ಹೊರಟುಹೋದಳು ಎಂದು ಹೇಳಿದ ಕೂಡಲೆ, ಸೂರ್ಯೋದಯವಾದುದರಿಂದ, ಷಹರಜಾದಿಯು ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ, ಪುನಃ ಹೇಳಲಾರಂಭಿಸಿದಳು.

೧೩೩ನೆಯ ರಾತ್ರಿಯ ಕಥೆ.

ಷಹರಜಾದಿಯು ಸುಲ್ತಾನರನ್ನುನೋಡಿ, ಪ್ರಿಯರೇ! ಕ್ರಿಸ್ತ ಪುತ್ರನು ತನ್ನ ಕಥೆಯನ್ನು ದಳ್ಳಾಳಿಗೆ ಹೀಗೆಂದು ಹೇಳಿದನು. ಹೀಗೆ ಆಬಾಲಿಕಾಮಣಿಯು ಕೊಪಿಸಿಕೊಂಡು ಹೊರಟುಹೋಗುತ್ತಿರುವುದನ್ನು ನೋಡಿ, ನನಗೆ ತುಂಬ ಕೊರತೆಯುಂಟಾದುದರಿಂದ, ಅವರಿಬ್ಬರನ್ನೂ ಸಮಾಧಾನ ಮಾಡಬೇಕೆಂದು, ನಾನು ಆಕೆಯನ್ನು ಕರೆದೆನು. ಆಕೆಯಾದರೋ ಮರಳಬುದು ಕುಳಿತುಕೊಂಡು, ನೀನು ಕರೆದುದರಿಂದ ಬಂದಿರುವೆನು ಎಂದು ಹೇಳಲು, ನಾನು ವರ್ತಕನನ್ನು ಕುರಿತು, ಅಯ್ಯಾ! ಈ ವಸ್ತ್ರವು ನನ್ನದೇ! ಅಲ್ಲವೇ! ಇದರಮೇಲೆ ನೀನೇನು ಲಾಭವನ್ನು ಕೇಳುವೆ? ಎಂದು ಕೇಳಿದೆನು. ಆತನು ನೂರುರೂಪಾಯಿ ಲಾಭಕ್ಕಿಂತಲೂ ಕಡಿವೆಯಾಗಿ ನಾ ೨ ಕೊಡಲಾರೆನೆಂದು ಹೇಳಿದನು. ನಂತರ ನೀನು ನನಗೆ ಕೊಡಬೇಕಾಗಿರುವ ಹಣದಲ್ಲಿ ನೂರುರೂಪಾಯಿ ಲಾಭವನ್ನು ಕಡಿವೆ ಮಾಡಿಕೊಂಡು, ಕೊಡಬಹುದೆಂದು ಹೇಳಿ, ಆತನಿಗೆ ಚೀಟಿಯನ್ನು ಬರೆದು

ಕೊಟ್ಟು ಬಿಟ್ಟ, ವಸ್ತ್ರವನ್ನು ತೆಗೆದು ಆ ಧೂರೆಸಾನಿಗೆ ಕೊಟ್ಟು ಬಿಟ್ಟ, ಆ ಲಲನಾ ಮಣಿಯನ್ನು ಕುರಿತು, ನೀನು ಇದನ್ನು ತೆಗೆದುಕೊಂಡುಹೋಗು, ರೂಪಾಯಿಗಳನ್ನು ನಾಳೆಯಾಗಲಿ ಅಥವಾ ಈದಿನ ಸಾಯಂಕಾಲವಾಗಲಿ ಕೊಟ್ಟುಬಿಡಲಿ ಹೇಳಿಸು, ಅಲ್ಲದೆ ನಿನಗಿಷ್ಟವಾದರೆ ಇದನ್ನು ನಾನುಕೊಟ್ಟ ಬಹುಮಾನವಾಗಿ ಅಂಗೀಕರಿಸು ಎಂದು ಹೇಳಿದೆನು. ಆಕೆ ಅಯ್ಯಾ ! ನನ್ನ ತಾತ್ಪರ್ಯವು ಹಾಗಿಲ್ಲ. ನೀನು ನನ್ನಲ್ಲಿ ಬಹಳವಾದ ಗೌರವವನ್ನು ತೋರ್ಪಡಿಸಿರುವೆಯಾದುದರಿಂದ, ನಾನುಕೂಡ ಅದಕ್ಕಿಂತಲೂ, ಹೆಚ್ಚಾದ ಗೌರವವನ್ನು ನಿನ್ನಲ್ಲಿ ತೋರದೆಯಿದ್ದರೆ, ನಾನು ಪುನಹ ಮುಖವನ್ನು ಹೊತ್ತುಕೊಂಡು, ಮರಳಿ ನಿನ್ನಬಳಿಗೆ ಬರಬಹುದೆ ? ನಿನ್ನ ಸಂಪತ್ತು ಅಭಿವೃದ್ಧಿಯಾಗುವಂತೆ ಭಗವಂತನು ಅನುಗ್ರಹಿಸುವನು. ನಾನು ಸತ್ತಮೇಲೂ, ನೀನು ಬಹುದಿನಗಳು ಬದುಕಿರುವೆ. ನೀನು ಸಾಯುವಾಗ ಸ್ವರ್ಗದ್ವಾರವು ತೆರೆಯಲ್ಪಡುವುದು. ಇದಲ್ಲದೆ ಈ ಪುರಜನರೆಲ್ಲರೂ, ನಿನ್ನ ಸದ್ಗುಣಗಳನ್ನು ಕೊಂಡಾಡುವರೆಂದು ಹೇಳಿದಳು.

ಈ ಮಾತುಗಳನ್ನು ನಾನು ಕೇಳಿದಕೂಡಲೆ, ನಿನ್ನ ಮುಖ ಸಂದರ್ಶನವು ಪುನಹ ನನಗಾಗುವುದರಿಂದ, ಅಸಲಾಗಲಿ, ಅಥವಾ ಬಡ್ಡಿಯಾಗಲಿ, ನನಗೆ ಬರುವುದೆ ! ಆದರೆ ಮತ್ತೊಂದನ್ನೂ ನಾನು ಅಪೇಕ್ಷಿಸುವನಲ್ಲವೆನಲ , ಆಕೆ ನನ್ನಕಡೆಗೆ ತಿರುಗಿ, ಮೆಲ್ಲಗೆ ತನ್ನ ಮೇಲುಮುಸುಕನ್ನು ತೆಗೆದು, ಸುಂದರವಾದ ಮುಖವನ್ನು ತೋರಿಸಿದಳು. ಅದನ್ನು ನೋಡಿದಕೂಡಲೆ, ನನ್ನಬುದ್ಧಿಯು ಏನಾಯಿತೊ ಅದನ್ನು ನಾನೇ ಹೇಳಲಾರೆನು. ಆ ಧೂರೆಸಾನಿಯು, ರೆಪ್ಪೆಹಾಕದೆ ನನ್ನನ್ನು ನೋಡುತ್ತಾ ಇದ್ದು, ಇತರರು ಎಲ್ಲಿನೋಡುವರೋ ಎಂಬ ಭಯದಿಂದ ಮುಸುಕನ್ನು ಹಾಕಿಕೊಂಡು, ತಾನು ತೆಗೆದುಕೊಂಡ ಬಟ್ಟೆಯನ್ನು ಕೈಯಲ್ಲಿ ಹಿಡಿದು, ನನ್ನ ಮನೋದಾರ್ಢ್ಯವನ್ನುಸಹಾ ಸೂರೆಮಾಡಿಕೊಂಡು, ಹೊರಟು ಹೋದಳು. ಬಳಿಕ ನಾನು ಮನೆಗೆಹೋಗುವುದಕ್ಕೆ ಪ್ರಯತ್ನಿಸಿ, ಆತನಿಂದ ಅಪ್ಪಣೆಯನ್ನು ತೆಗೆದುಕೊಂಡು, ಅಯ್ಯಾ ! ನೀನು ಆ ಹೆಂಗಸಿನ ಮನೆಯ ಗುರುತು ಬಲ್ಲೆಯಾ ! ಎಂದು ಕೇಳಿದೆನು. ಆತನು ಹೌದು, ಅವಳೊಬ್ಬ ಸರದಾರನ ಮಗಳು. ತಂದೆಯು ಸತ್ತುಹೋದಮೇಲೆ, ಅವಳಿಗೆ ತುಂಬ

ಆಸ್ತಿಯು ಸೇರಿತು ಎಂದು ಹೇಳಿದನು. ಬಳಿಕ ನಾನು ನನ್ನ ಬಿಡಾರವನ್ನು ಸೇರಿ, ರಾತ್ರಿ ಭೋಜನವನ್ನು ಮಾಡುವುದಕ್ಕೆ ಕುಳಿತುಕೊಂಡುದೇನೋ ಉಂಟು. ಆದರೆ ಊಟವೇ ಬೇಕಾಗಿಲ್ಲ. ಹೇಗೊ ಊಟದ ಶಾಸ್ತ್ರವನ್ನು ಮಾಡಿಕೊಂಡು, ರಾತ್ರಿಯೆಲ್ಲಾ ನಿದ್ರೆ ಬಾರದೆ ಕುದಿಯುತ್ತಿರುವ ಮನಸ್ಸನ್ನು ಸಮಾಧಾನಪಡಿಸಲಾರದೆ, ಬೆಳಗಿನ ಜಾವದಲ್ಲಿ, ಆಹಾ ! ನನ್ನ ಚಿತ್ತವೃತ್ತಿಯನ್ನೆತ್ತಿಕೊಂಡುಹೋದ ವ್ಯಕ್ತಿಯನ್ನು ಮತ್ತೊಂದುಸಾರಿ ನೋಡಬಹುದಲ್ಲಾ ! ಎಂದು, ಆಕೆಗೆ ವೇಷ ಉಂಟಾಗುವಂತೆ ಉತ್ತಮವಾದ, ವಸ್ತ್ರಗಳನ್ನು ಧರಿಸಿಕೊಂಡೆನು ಎಂದು ಹೇಳಿ, ಬೆಳಗಾದುದರಿಂದ ಕಥೆಯನ್ನು ನಿಲ್ಲಿಸಿ, ಬೆಳಗಿನ ಜಾವದಲ್ಲಿ ಪುನಃ ಹೇಳಲಾರಂಭಿಸಿದಳು.

೧೩೪ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು, ಇಂತೆಂದಳು :— ನಂತರ ಆತನು ಉತ್ತಮಾಲಂಕಾರಭೂಷಣನಾಗಿ, ನಿನ್ನೆಯಂತೆ ಆ ಪರ್ತಕನ ಅಂಗಡಿಗೆಬಂದು ಕುಳಿತುಕೊಂಡಿರುವಕಾಲದಲ್ಲಿ ಆ ಬಾಲಿಕಾಮಣಿಯು ನಿನ್ನೆಗಿಂತಲೂ, ಶ್ರೇಷ್ಠವಾದ ಉಡುಪನ್ನು ಹಾಕಿಕೊಂಡುಬಂದು, ಅಂಗಡಿಯವನನ್ನು ಲಕ್ಷ್ಯಮಾಡದೆ, ನನ್ನನ್ನು ಕುರಿತು, ಇಗೋ ! ನಾನು ನಿನ್ನೆ ಹೇಳಿದಂತೆ, ನಿನ್ನಬಳಿಗೆ ಮರಳಿ ಬಂದಿರುವೆನು. ಹಣವನ್ನು ತೆಗೆದುಕೊ ? ನೀನು ನನ್ನ ಗುರುತಿಲ್ಲದವನಾದರೂ, ನಾನು ನಾಮಿಡಿಗೆ ಸರಿಯಾಗಿಬಂದು ನಿನ್ನ ಹಣವನ್ನು ಒಪ್ಪಿಸಿರುವೆನೆಂದಳು. ನಾನು ಆಹಾ ! ಹಣಕ್ಕಾಗಿ ಅಷ್ಟೇನೂ ವಿಚಾರ ಮಾಡಲಿಲ್ಲವಲ್ಲಾ ! ನೀನು ಇದಕ್ಕಾಗಿ, ಇಷ್ಟೊಂದು ತೊಂದರೆ ತೆಗೆದುಕೊಂಡುದಕ್ಕಾಗಿ, ತುಂಬ ವ್ಯಸನಪಡುವೆನು ಎಂದು ಹೇಳಲು, ಬಾಲಿಕಾಮಣಿ ಅಯ್ಯಾ ! ನೀನು ಧಾರಾಳವಾಗಿ ಸರಕನ್ನು ಕೊಟ್ಟಂತೆ, ನಾನು ಧಾರಾಳವಾಗಿ ಹಣವನ್ನು ಕೊಡದೆಹೋದರೆ, ನನ್ನನ್ನು ಉತ್ತಮಳೆಂದು ಹೇಳುವರೆ ? ಎಂದಂದುಕೊಂಡು, ಹಸ್ತಿರದಲ್ಲಿ ಕುಳಿತುಕೊಂಡಳು. ಬಳಿಕ ಸ್ವಲ್ಪಹೊತ್ತಿನವರಿಗೆ ಮಾತನಾಡುತ್ತಿದ್ದು, ನನಗೆ ಉಂಟಾಗಿರುವ ವ್ಯೋಹವನ್ನು ಆಕೆಗೆ ತಿಳಿಸಿದೆನು. ಕೂಡಲೆ ಅವಳು ಕೋಪಿಸಿಕೊಂಡವಳಂತೆ, ಬಿರುಬಿರನೆನಡೆದು ಹೊರಟುಹೋದಳು, ಅವಳು ಕಣ್ಣಿಗೆ ಕಾಣುವವರಿಗೂ, ನೋಡುತ್ತಿದ್ದು ಮರೆಯಾದಬಳಿಕ, ಅಂಗಡಿ

ಯುವನಿಂದಪ್ಪಣೆಯನ್ನು ಪಡೆದು, ಇಂತಹ ಸ್ಥಲಕ್ಕೆ ಹೋಗುತ್ತೇನೆಂದು ಹೇಳದೆ ಹೊರಟೆನು. ಹಾಗೆ ಹೋಗುತ್ತಿರುವಾಗ, ಯಾರೋ ನನ್ನನ್ನು ಹಿಂದಕ್ಕೆಳದಂತೆಕಂಡಿತು. ಕೂಡಲೆ ನಾನು ಹಿಂದಿರುಗಿನೋಡಲು ಆ ಬಾಲಿಕಾ ಮಣಿಯದಾದಿಯು ನಿಂತಿರುವದನ್ನು ಕಂಡು, ವಿಸ್ಮಯವನ್ನು ಹೊಂದಿದೆನು. ಆಗ ಆಕೆಯು ನನ್ನನ್ನುನೋಡಿ ಅಯ್ಯಾ ! ನೀನು ಈದಿನ ಮಾತನಾಡುತ್ತಿದ್ದ, ಲಲನಾಮಣಿಯು ನಿಮ್ಮಸಂಗಡ ಏನೋ ಮಾತನಾಡಬೇಕೆಂದು, ಅಪೇಕ್ಷಿಸುತ್ತಿರುವುದರಿಂದ, ತಾವು ದಯೆಮಾಡಿ, ನನ್ನ ಸಂಗಡ ಬರಬೇಕೆಂದು ನುಡಿದಳು. ನಾನು ಅವಳಂದೆ ಹೋದೆನು. ಅಲ್ಲಿಕುಳಿತಿದ್ದ ಬಾಲಿಕಾ ಮಣಿಯು, ನನ್ನನ್ನುನೋಡಿ, ಹತ್ತಿರ ಕುಳ್ಳರಿಸಿಕೊಂಡು, ಪ್ರಾಣ ನಾಥಾ ! ನಾನು ನಿನ್ನನ್ನು ಅಗಲಿ ಕೋಪದಿಂದ ಹೊರಟುಬಂದೆನೆಂದು, ನೀನೆಂದಿಗೂ ತಿಳಿಯಬೇಡ, ಮತ್ತೇನೆಂದರೆ :—

ನಿನ್ನಲ್ಲಿ ನನಗೆ ಮೋಹ ಉಂಟಾಗಿರುವುದೆಂದು, ನೀನು ಹೇಳಿದ ಮಾತಿಗೆ ಪ್ರತ್ಯುತ್ತರವನ್ನು ಆ ವರ್ತಕನೆದುರಿಗೆ ಹೇಳುವುದು ಸರಿಯಲ್ಲವೆಂದು, ನಾನು ಹೊರಟುಬಂದೆನು. ತಾವು ಆಡಿದಮಾತಿನಿಂದ ನನಗೆ ಸಂತೋಷವೇ ಹೊರತು ಕೋಪವೆಂದಿಗೂ ಇಲ್ಲ. ಅಲ್ಲದೆ ನಿಮ್ಮನ್ನು ನಿನ್ನೆದಿನ ಅಂಗಡಿಯಲ್ಲಿ ನೋಡಿದಾಗಲೆ, ನನ್ನ ಎದೆ ಕರಗಿಹೋಯಿತು. ನಂತರ ನೀವುಮಾಡಿದ ಸನಾಮನವು, ಆಡಿದಮಾತೂ, ಸಹಾ ನನ್ನ ಮೋಹವನ್ನು ಬಹಿರಂಗಪಡಿಸುವುದಕ್ಕಾರಂಭಿಸಿ, ತುಂಬ ತೊಂದರೆಯನ್ನುಂಟುಮಾಡಿದವು. ಅದನ್ನು ನಿಗ್ರಹಿಸಬೇಕೆಂದು, ನಾನು ರಾತ್ರಿಯೆಲ್ಲಾ ಸಂತೈಸಲ್ಪಟ್ಟರೂ, ಆಗದೆಹೋದುದರಿಂದ, ಮರಳಿ ನಿಮ್ಮ ಸಂದರ್ಶನಾರ್ಥವಾಗಿ ಬೆಳಿಗ್ಗೆ ಎದ್ದುಬಂದೆನು. ಈಗ ನಿಮ್ಮನ್ನು ನೋಡಿದಕೂಡಲೆ, ಆ ನನ್ನ ಮೋಹವು ಹೊರಹೊಮ್ಮಿತೆಂದು ಹೇಳಿ, ಇದರಿಂದ ನನಗುಂಟಾಗಿರುವ, ಪ್ರೇಮಾತಿಶಯವಿಂಥದೆಂಬುದನ್ನು, ನೀನು ತಿಳಿದುಕೊಳ್ಳಬಹುದೆಂದು, ನುಡಿದಳು. ಆಗ ನಾನು ಮೋಹಪರವಶನಾಗಿ, ಈಗ ನೀನು ಹೇಳಿದುದಕ್ಕಿಂತಲೂ, ಆನಂದಕರವಾದ ಸಂಗತಿ ಮತ್ತೊಂದು ಇಲ್ಲ. ನಾನು ನಿನ್ನ ಸುಂದರಾವಯವಗಳನ್ನು ನೋಡಿದಕೂಡಲೆ, ಪಂಚಬಾಣನಾದ ಮನ್ಮಥನು ಲಕ್ಷಬಾಣಗಳಿಂದ ನನ್ನನ್ನು ಪೀಡಿಸಿದನು. ಅದರ ವಿವರವನ್ನು ವಿಸ್ತರಿಸಿ

ಕಾಲವನ್ನು ಕಳೆವುದಕ್ಕೆ, ನನಗಿಷ್ಟವಿಲ್ಲ. ನನಗುಂಟಾಗಿರುವ ಮೋಹವು ನಿನಗೆ ಸ್ವಲ್ಪಹೊತ್ತಿನಲ್ಲಿ, ತಿಳಿಯಬರುವುದು ಈಗ ಹೊತ್ತು ಬಹಳವಾಗಿರುವುದರಿಂದ, ನೀನು ನಮ್ಮ ಮನೆಗೆ ಬರುವುದಕ್ಕೆ, ಸಮ್ಮತಿಸಿರುವೆಯೊ ಅಥವಾ ನಿನಗಿಷ್ಟವಾದ ಸ್ಥಲಕ್ಕೆ ನನ್ನನ್ನು ಕರೆದುಕೊಂಡುಹೋಗುವೆಯೊ ? ನಾನಾದರೊ, ಪರದೇಶದವನಾದುದರಿಂದ, ಮುಸಾಫರಖಾನೆಯಲ್ಲಿ ವಾಸವಮಾಡುತ್ತಿರುವೆನೆಂದು ಹೇಳಿದೆನು ಎಂದು ಹೇಳಿ, ಪಟಹರಜೌದಿಯು ಕಥೆಯನ್ನುನಿಲ್ಲಿಸಿ, ಬೆಳಗಿನ ಜಾವದಲ್ಲಿ ಮರಳ ಹೇಳಲಾರಂಭಿಸಿದಳು.

೧೩ನೇ ನೆಯ ರಾತ್ರಿ ಕಥೆ.

ಪಟಹರಜೌದಿಯು ಸುಲ್ತಾನನ್ನು ಕುರಿತು, ಇಂತೆಂದಳು :— ಓ ಲಲನಾಮಣಿ, ನಾನೇ ನಿನ್ನ ಮನೆಗೆ ಬರುವುದು ಯುಕ್ತವಾಗಿ ತೋರುವುದು. ನೀನೆಲ್ಲಿ ಮನೆಯನ್ನು ಮಾಡಿರುವೆ, ಹೇಳೆಂದೆನು. ಆಕೆ ನನ್ನನ್ನು ಕುರಿತು, ನಾನು ಪಿರೊಷ್ಕಸಿ ಪ್ಲೇಟಿನಲ್ಲಿ, (ಭಕ್ತಿಮಾರ್ಗವೆಂಬ ಬೀದಿ) ವಾಸವಮಾಡುತ್ತಿರುವೆನು. ನೀನು ಮುಂದಿನ ಶುಕ್ರವಾರ ಜಪಾದಿಗಳನ್ನು ತೀರಿಸಿಕೊಂಡು, ಆ ಬೀದಿಗೆ ಬಂದು ಅನಿವಾರರಿಗೆ ನಾಯಕನಾಗಿದ್ದ ಅಬಾನುಷಾ ಎಂಬುವನಮನೆ ಯಾವುದೆಂದು, ವಿಚಾರಿಸಿಕೊಂಡುಬಂದರೆ ನಾನು ಅಲ್ಲಿ ಇರುವೆನೆಂದು ಹೇಳಿ ಹೊರಟುಹೋದಳು. ನಾನು ನನ್ನ ಬಿಡಾರವನ್ನು ಸೇರಿಕೊಂಡೆನು. ಬಳಿಕ ನಾನು ಶುಕ್ರವಾರದದಿನ ನನ್ನ ಕೆಲಸಗಳನ್ನು ತೀರಿಸಿಕೊಂಡು, ಮೊದಲೆ ಗೊತ್ತುಮಾಡಿದ್ದ, ಕುದುರೆಯನ್ನು ಹತ್ತಿ ಜವಾನನನ್ನು ಸಂಗಡ ಕರೆದುಕೊಂಡು, ಬೇಕಾದಷ್ಟು ಹಣವನ್ನು ತೆಗೆದುಕೊಂಡು, ಹೊರಟು ಆ ಬಾಲಿಕಾಮಣಿಯು ವಾಸವಮಾಡುತ್ತಿರುವ, ಬೀದಿಗೆ ಬಂದು, ಜವಾನನನ್ನು ಮನೆಯನ್ನು ವಿಚಾರಿಸುವಂತೆ ಹೇಳಿ, ಆತನು ಕರೆದುಕೊಂಡುಹೋದ ದಾರಿಯಲ್ಲಿ ಹೋಗಿ, ಆ ಮನೆಯನ್ನು ಸೇರಿ, ಆತನಿಗೆ ಬೇಕಾದಷ್ಟು ಹಣವನ್ನುಕೊಟ್ಟು, ಅಯ್ಯಾ ! ಈ ಮನೆಯವರು ತನ್ನ ಚೆನ್ನಾಗಿ ತಿಳಿದುಕೊಂಡಿರು. ನಾಳೆ ಬೆಳಿಗ್ಗೆ ನೀನು ಇಲ್ಲಿಗೆಬಂದು, ಪುನಹ ನನ್ನ ಬಿಡಾರಕ್ಕೆ ಕರೆದುಕೊಂಡು ಹೋಗಬೇಕೆಂದು ಹೇಳಿ ಆತನನ್ನು ಕಳುಕಳುಹಿಸಿದೆನು. ಬಳಿಕ ನಾನು ಬಾಗಿಲನ್ನು ತಟ್ಟಿದ ಕೂಡಲೆ ಇಬ್ಬರು ಬಾಣಸಿಗ ಸ್ತ್ರೀಯರು ಬಂದು, ಬಹು ಮರ್ಯಾದೆಯಿಂದ

ಬರಮಾಡಿಕೊಂಡು, ಅಯ್ಯಾ! ನಮ್ಮ ಧೊರಸಾನಿಯು ನಿಮ್ಮನ್ನು ಬಹುತ್ವರೆಯಿಂದಕಾದುಕೊಂಡಿರುವಳು. ಎರಡುದಿನಗಳಿಂದಲೂ, ನಿಮ್ಮ ಧ್ಯಾನದಲ್ಲಿ ಇದ್ದರೆಂದು ಹೇಳಲು, ನಾನು ಒಳಹೊಕ್ಕುಹೋಗಿ ಮನೋಹರವಾದ ಹಜಾರವನ್ನು, ಅದರ ಮಧ್ಯದಲ್ಲಿರುವ ಉದ್ಯಾನವನವನ್ನು ಕಂಡು, ಸಂತೋಷಭರಿತನಾದೆನು. ಆ ಉದ್ಯಾನವನವು ಅತ್ಯಂತರಮಣೀಯವಾದ ಗಿಡಗಳ ನೆಳಲಿನಿಂದಲೂ, ಸುಗಂಧವನ್ನು ಬೀರುತ್ತಿರುವ ಪುಷ್ಪ ಸಮೂಹದಿಂದಲೂ, ಅಲ್ಲಲ್ಲಿ ನಿಬಿಡವಾಗಿ ಮಧುರಧ್ವನಿಯಿಂದ ಗಾನ ಮಾಡುತ್ತಿರುವ ಮರಿದುಂಬಿಗಳಿಂದಲೂ. ನೋಟಕರ ಮನವನ್ನು ಆಕರ್ಷಿಸುವ ತೆರದಿಂದ ಕಾಣುತ್ತಲಿತ್ತು. ಆ ಉದ್ಯಾನವನದ ಮಧ್ಯದಲ್ಲಿರುವ ಸುಂದರವಾದ ಸುವರ್ಣನಿರ್ಮಿತದ ಜಲಯಂತ್ರದಿಂದ, ಮೇಲಕ್ಕೆ ಹಾರುತ್ತಿದ್ದ ಜಲಕಣಗಳು ನೋಡುವವರನ್ನು ಆನಂದವರವಶರಾಗುವಂತೆ ಮಾಡುತ್ತಾ ಇದ್ದವು. ಇಂತಹ ಸೌಂದರ್ಯವುಳ್ಳ ಉದ್ಯಾನವನವನ್ನು ನಿದಾನಿಸಿ ನೋಡುತ್ತಾ, ಬಹಳಬೆರಗುತ್ತ ವಿಸ್ಮಯವನ್ನು ಹೊಂದಿದೆನು. ಆಗ ಒಬ್ಬ ದಾದಿಯು ತನ್ನಧೊರೆಸಾನಿಗೆ, ನಾನುಬಂದಿರುವ ವರ್ತಮಾನವನ್ನು ಹೇಳುವುದಕ್ಕೆ ಹೋದಳು. ಮತ್ತೊಬ್ಬಳು ಆ ಉದ್ಯಾನವನದ ಮತ್ತು ಸಭಾಮಂಟಪದ ವಿಚಿತ್ರಗಳನ್ನು ನನಗೆ ತೋರಿಸುತ್ತಾ ಇದ್ದಳು ಎಂದು ಹೇಳಿ ಸೂರ್ಯೋದಯವಾದಬಳಿಕ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಿಗಿನ ಜಾವದಲ್ಲಿ ಷಹರಿಯಾರಿನ ಕುತೂಹಲವನ್ನು ತೀರಿಸುವುದಕ್ಕಾಗಿ ರಾಣಿಯು ಹೀಗೆಂದು ಪುನಹ ಹೇಳಲಾರಂಭಿಸಿದಳು.

೧೩ನೆಯ ರಾತ್ರಿಯ ಕಥೆ.

ಷಹರಜಾದಿಯು ಸುಲ್ತಾನರನ್ನುನೋಡಿ, ಮತ್ತೆ ಇಂತೆಂದಳು. ನಾನು ಆ ಕೊಟಡಿಯಲ್ಲಿಯೂ, ಉದ್ಯಾನವನದಲ್ಲಿಯೂ, ಇರುವ ಚಿತ್ರವಿಚಿತ್ರ ಪದಾರ್ಥಗಳನ್ನು ನೋಡುತ್ತಿರುವಾಗ, ಆ ನನ್ನ ವೋಹನಾಂಗಿಯಾದ, ಬಾಲಿಕಾಮಣಿಯು ಮುತ್ತುವಜ್ರಗಳ ಆಭರಣವನ್ನು ಧರಿಸಿಕೊಂಡು, ನನ್ನಬಳಿಗೆ ಬರಲು, ಆ ಆಭರಣಗಳೆಲ್ಲವೂ ಆಕೆಯ ಕಟಾಕ್ಷದಯಿಷ್ಟಯ ಪ್ರಭೆಯನ್ನು ವಿಾರಿಸಲಾರದೆ ಹೋದುವು. ಆಕೆಯು ಆಕಾಲದಲ್ಲಿ ಮುಸುಕಿಲ್ಲದೆ ಬಂದಿದ್ದುದರಿಂದ, ತನ್ನ ರೂಪವನ್ನು ಪ್ರಕಾಶಪಡಿಸುತ್ತಿದ್ದಳು.

ಆಕೆಯ ಸೌಂದರ್ಯವನ್ನು ನೋಡಿ ವಿವರಿಸುವುದಕ್ಕೆ ಯಂತಹ ಪಂಡಿತನಿಗೂ ಅಸಾಧ್ಯವಾಗಿದ್ದಿತು. ಬಳಿಕ ನಾವಿಬ್ಬರೂ ವಂದನೆಗಳನ್ನು ಆಚರಿಸಿ, ಪರಸ್ಪರಾಲಿಂಗನಾದಿಗಳನ್ನು ಮಾಡಿಕೊಂಡು ಬಂದು ಮಂಚದ ಮೇಲೆ ಕುಳಿತು ಮಾತನಾಡುತ್ತಿದ್ದೆವು. ಅಷ್ಟರಲ್ಲಿ ಸಿದ್ಧವಾದ ಭೋಜನ ಪದಾರ್ಥಬರಲು, ಸಂತೋಷದಿಂದ ಭುಜಿಸಿ, ರಾತ್ರಿಯಾಗುವವರೆಗೂ ವಿನೋದದಿಂದ ಕಾಲವನ್ನು ಕಳೆಯುತ್ತಿದ್ದೆವು. ರಾತ್ರಿಯಾಗುತ್ತಲೆ ಒಬ್ಬಳು ಸಂಗೀತವನ್ನು ಹಾಡಲಾರಂಭಿಸಿದಳು. ಮತ್ತೊಬ್ಬಳು ಮೃದಂಗವನ್ನು ಬಾರಿಸಿದಳು. ಇನ್ನೊಬ್ಬಳು ತಾಳವನ್ನು ಹಾಕುತ್ತಿದ್ದಳು. ಆ ನನ್ನ ಮೋಹನಾಂಗಿಯು ತಾನು ತನ್ನ ಕಂಠಸ್ವರವನ್ನೆತ್ತಿ ಮುಹೋತ್ಸುಖದಿಂದ ಹಾಡುತಾ ನರ್ತಿಸಿದುದರಿಂದ ನಾನು ಮೋಹಾವಿಷ್ಟನಾದೆನು. ಬಹಳವಾಗಿ ಹೇಳಿದುದರಿಂದ ಫಲವೇನು ? ಆ ರಾತ್ರಿಯೆಲ್ಲಾ ಸಂಪೂರ್ಣವಾದ ಆನಂದಸಮುದ್ರದಲ್ಲಿ ಮುಳುಗಿ, ಸಕಲಸುಖಗಳನ್ನೂ ಭವಿಸಿದೆನು, ಮರುದಿನ ಬೆಳಿಗ್ಗೆ ನಾನು ತಂದಿದ್ದ ಮೊಹರಿಗಳನ್ನು ಮಂಚದಮೇಲಿಟ್ಟು, ಆಕೆಯಿಂದಪ್ಪಣೆಯೆನ್ನು ತೆಗೆದುಕೊಂಡು, ಹೊರಡಲು ಸಿದ್ಧನಾದೆನು.

ಆಕೆ ಪುನಹ ತಾವು ಯಾವಾಗಬರುವಿರೆಂದು ಕೇಳಿದಳು. ನಾನು ಸಂಜೆಗೆ ಬರುತ್ತೇನೆಂದು ಹೇಳಿ ಹೊರಟುಬರುವಾಗ, ಆ ಲಲನಾಮಣಿಯು ತಲೆಬಾಗಿಲವರಿಗೂ ಬಂದು, ನೀನು ಕೊಟ್ಟವಾತು ಜ್ಞಾಪಕವಿರಲಿ ಎಂದು ಹೇಳಿದಳು. ನಾನು ಗೊತ್ತುಮಾಡಿದ್ದ ಕುದುರೆಯವನುಬಂದು ಬಾಗಿಲಲ್ಲಿ ಕಾದುಕೊಂಡಿದ್ದುದರಿಂದ, ಕುದುರೆಯನ್ನೇರಿ ನನ್ನಬಿಡಾರವನ್ನು ಸೇರಿದ ಬಳಿಕ, ಮರಳಿ ಸಾಯಂಕಾಲಕ್ಕೆ ಕುದುರೆಯನ್ನು ತರುವಂತೆ ಹೇಳಿ, ದುಡ್ಡು ಕೊಡದೆ, ಹಾಗೆ ಕಳುಹಿಸಿದೆನು. ನಂತರ ನನ್ನ ಚಾರಕನಲ್ಲಿಬ್ಬನನ್ನು ಕರೆದು ಅತ್ಯುತ್ತಮವಾದ ಭಕ್ಷ್ಯಗಳನ್ನು ಫಲಗಳನ್ನು ತರಿಸಿ, ಆ ಬಾಲಿಕಾಮಣಿಯಮನೆಗೆ ಕಳುಹಿಸಿ, ಭೋಜನಾದಿಗಳನ್ನು ತೀರಿಸಿಕೊಂಡು, ನನ್ನ ಕೆಲಸಕಾರ್ಯಗಳನ್ನು ನೋಡಿಕೊಳ್ಳುತ್ತಿರುವಷ್ಟರಲ್ಲಿ ಕುದುರೆಯವನು ಬರಲು, ಆ ಕುದುರೆಯನ್ನುಹತ್ತಿ ಬಾಲಿಕಾಮಣಿಯ ಮನೆಗೆಹೋಗಿ, ನಿನ್ನೆಯಂತೆಯೇ ಬಹು ಗೌರವಪುರಸ್ಸರವಾಗಿ, ಅವರಿಂದ ಬರಮಾಡಿಕೊಳ್ಳಲ್ಪಟ್ಟು ಹಿಂದಿನರಾತ್ರಿಯಂತೆ, ಆನಂದಭರಿತವಾಗಿ ಸಕಲ

ಸುಖಸಂಭ್ರಮಗಳನ್ನು ಅನುಭವಿಸಿದೆನು. ಮರುದಿನ ಬೆಳಿಗ್ಗೆ ಪುನಃ ಮತ್ತೆಂಟು ಮೊಹರಿಗಳುಳ್ಳ, ಚೀಲವನ್ನು ಮುಂಜಕಾಣಿಕೆಯೆಂತಾಗಿ ಕೊಟ್ಟು, ಅಲ್ಲಿಂದ ಬೀಳ್ಕೊಂಡು, ನನ್ನ ಬಿಡಾರವನ್ನು ಸೇರಿದೆನೆಂದು, ಕ್ರಯ್ಯರ್ಥ ವರ್ತಕನು ಹೇಳಿದನೆಂದು ನುಡಿದು, ಷಹರಜಾದಿಯು ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಪುನಃ ಹೇಳಲಾರಂಭಿಸಿದಳು.

೧೩೭ ನೆಯ ರಾತ್ರಿಯ ಕಥೆ.

ಬಾಗದಾದುಪಟ್ಟಣದ ವರ್ತಕನು, ಹೀಗೆಂದು ಹೇಳಿದನೆಂಬದಾಗಿ ಕ್ರಿಸ್ತವರ್ತಕನು, ಕಾಸುಗಾರು ರಾಜನಿಗೆ ಹೇಳಿದನೆಂದು, ಷಹರಜಾದಿಯು ತನ್ನ ಪ್ರೀತಿಪಾತ್ರನಾದ ಸುಲ್ತಾನನಿಗೆ ಹೇಳತೊಡಗಿದಳು. ಹೇಗೆಂದರೆ :— ನನ್ನ ಸರಕುಗಳನ್ನು ತೆಗೆದುಕೊಂಡುಹೋಗಿದ್ದ ವರ್ತಕರು, ಕ್ರಮ ತಪ್ಪದೆ ವಾರಕ್ಕೆರಡುಸಾರಿ ತಂದುಕೊಡುತ್ತಾ ಇದ್ದ ಹಣದಲ್ಲಿ ಪ್ರತಿದಿನವೂ ಎಂಟೆಂಟು ಮೊಹರಿಗಳ ಬಂದೊಂದು ಚೀಲವನ್ನು ತೆಗೆದುಕೊಂಡು, ಆ ಬಾಲಿಕಾಮಣಿಯ ಮನೆಗೆಹೋಗಿ, ಆಕೆಗೆ ಕೊಟ್ಟು ಎಂದಿನಂತೆ ಸಕಲ ಸುಖಗಳನ್ನು ಅನುಭವಿಸಿಬರುತ್ತಾ ಇದ್ದೆನು. ಇನ್ನು ಅತಿಶಯವಾಗಿ ಹೇಳಿ ಫಲವೇನು ? ಕಟ್ಟಕಡೆಗೆ ನನಗೊಂದುಕಾಸಿಗೂ ಮಾರ್ಗವಿಲ್ಲದೆ ದ್ರವ್ಯ ಸಂಪಾದನೆಯೆಂತಾಗುವಸ್ಥಿತಿಯೂ ತಪ್ಪಿಹೋಯಿತು. ಅಲ್ಲಿಂದಮುಂದೆ ನಾನೇನುಮಾಡಬೇಕೆಂದು ಚಿಂತಿಸುತ್ತಾ, ನನ್ನ ಬಿಡದಿಯಿಂದ ಹೊರಟು ಬರುತ್ತಾ, ಈಜಿಪ್ಟ್‌ದೇಶದ ಸುಲ್ತಾನನು ಮಾಡಿಸುತ್ತಿದ್ದ, ವಿನೋದವನ್ನು ನೋಡುವುದಕ್ಕಾಗಿ, ನೆರೆದಿದ್ದ ಗುಂಪಿನಬಳಿಗೆ ಬಂದು, ಅಕಸ್ಮಾತ್ತಾಗಿ ಜನರನ್ನು ನೂಕಿಕೊಂಡು, ಒಳಹೊಕ್ಕು, ದಿವ್ಯಾಲಂಕಾರಭೂಷಿತನಾಗಿ, ಉತ್ತಮವಸ್ತ್ರಗಳನ್ನು ಧರಿಸಿಕೊಂಡಿದ್ದ, ಒಬ್ಬಾಬ್ಬನೊಬ್ಬ ರಾವುತನ ಬಳಿಯಲ್ಲಿ ನಿಂತುಕೊಂಡೆನು. ಆತನು ತನ್ನಕುದುರೆಯಜೀನಿನಮೇಲೊಂದು ದೊಡ್ಡ ಚೀಲವನ್ನು ಕಟ್ಟಿದ್ದನು. ಅದರಮೇಲೊಂದು ಹಸುರುದಾರವು ನೇತಾಡುತ್ತಿತ್ತು. ಆ ದೊಡ್ಡಚೀಲವು, ಅರ್ಧ ತೆರೆಯಲ್ಪಟ್ಟಿದ್ದುದರಿಂದ ಆ ಹಸುರುಪಟ್ಟೆಯದಾರವು, ಅದರಲ್ಲಿರುವ ಮತ್ತೊಂದುಚೀಲವೆಂದು, ನಾನು ತಿಳಿದು, ಆ ದೊಡ್ಡಚೀಲದಮೇಲೆ, ಕೈಯಿಟ್ಟೆನು. ಇಷ್ಟರಲ್ಲಿ ಒಬ್ಬಾಬ್ಬನೊಬ್ಬ ಕೂಲಿಕಾರನು ಸೌದೆಯಹೊರೆಯನ್ನು ಹೊತ್ತುಕೊಂಡು

ತನಗೆದುರಾಗಿ ಬರುತ್ತಿರುವುದನ್ನು ಕಂಡು ಹೊರೆಯುತಗಲಿ ತನ್ನ ಬಟ್ಟೆಯು ಹರಿದುಹೋಗುವುದೇನೋ ಎಂಬ ಭಯದಿಂದ, ಸವಾರನು ಕುದುರೆಯನ್ನು ತಿರುಗಿಸಿದನು. ಆಗ ನಾನು ದೊಡ್ಡ ಚೀಲದ ದಾರವನ್ನು ಒಂದುಕೈಯ್ಯಲ್ಲಿ ಹಿಡಿದುಕೊಂಡು, ಮತ್ತೊಂದುಕೈಯ್ಯಲ್ಲಿ ಸಣ್ಣ ಚೀಲವನ್ನು ಹೊರಕ್ಕೆ ತೆಗೆದೆನು. ಆ ಚೀಲವು ಭಾರವಾಗಿದ್ದುದರಿಂದ, ಅದರಲ್ಲಿ ದ್ರವ್ಯವಿರಬಹುದೆಂದು ಸಂದೇಹವಿಲ್ಲದೆ ತಿಳಿದುಕೊಂಡೆನು. ಕಟ್ಟಿಗೆಹೊರೆಯವನು ಹೊರಟುಹೋಗುತ್ತಲೆ, ಸವಾರನು ತನ್ನ ಚೀಲದಲ್ಲಿ ಕೈಹಾಕಿನೋಡಿ, ಸಣ್ಣ ಚೀಲವಿಲ್ಲದೆ ಅನುಮಾನದಿಂದ, ನನ್ನನ್ನು ಹೊಡೆದು ನೆಲಕ್ಕೆ ಕೆಡವಿದನು. ಆಗ ಅಲ್ಲಿದ್ದವರೆಲ್ಲರೂ, ಆಶ್ಚರ್ಯಯುಕ್ತರಾದರು. ಕೆಲವರು ಆತನನ್ನು ಹಿಡಿದುಕೊಂಡು, ನೀನು ಈ ಮುಸಲ್ಮಾನನನ್ನು, ಏತಕ್ಕೆ ಹೀಗೆ ಹೊಡೆದಿರುವೆ, ಇದು ನ್ಯಾಯವೆ ? ಎಂದು ಕೇಳಿದರು.

ಅಯ್ಯೋ ! ಈತನು ದೊಡ್ಡ ಕಳ್ಳ ನೀವು ಸುಮ್ಮನೆ ವ್ಯರ್ಥಾತೊಂದರೆಯನ್ನುಪಡಬೇಡಿ. ನಾನು ನ್ಯಾಯವಾಗಿಯೆ ಶಿಕ್ಷಿಸಿರುವೆನೆಂದನು. ಆಗ ನಾನು ಇದ್ದ ಸ್ಥಿತಿಯನ್ನುಕಂಡು. ಅಲ್ಲಿನವರು, ಅಯ್ಯೋ ! ಇಂತಹ ಯೋಗ್ಯನಾದಮನುಷ್ಯ ಈ ನೀಚಕೃತ್ಯವನ್ನು ಮಾಡುವನೆ ? ನೀನು ಸುಳ್ಳುಹೇಳುತ್ತೀಯೆಂದು ನುಡಿದು, ಹೇಗಾದರೂಮಾಡಿ ಈತನನ್ನು ಬಿಡಿಸಬೇಕೆಂದು ತಿಳಿದು, ಆತನ ಕುದುರೆಯನ್ನು ಹಿಡಿದುಕೊಂಡರು. ಅಕಸ್ಮಾತ್ತಾಗಿ ಆ ಮಾರ್ಗದಲ್ಲಿ ಬರುತ್ತಿದ್ದ, ನ್ಯಾಯಾಧಿಪತಿಯು ಗುಂಪುನೆರೆದಿದ್ದ ಸ್ಥಳಕ್ಕೆ ಬಂದು, ಏನೆಂದು ಕೇಳಿದನು. ಆಗ ಅಲ್ಲಿದ್ದ ಜನರು, ಈ ರಾವುತನು, ಈ ಚಿಕ್ಕವನಮೇಲೆ ಅನ್ಯಾಯವಾಗಿ, ಕಳ್ಳತನವನ್ನು ಹೊರಿಸಿ, ಹಿಡಿದುಕೊಂಡು, ಹೊಡೆದನೆಂದು ಹೇಳಿದರು. ನ್ಯಾಯಾಧೀಶನು ಆಮಾತುಗಳನ್ನು ಕಿವಿಯಲ್ಲಿ ಹಾಕಿಕೊಳ್ಳದೆ, ರಾವುತನನ್ನುನೋಡಿ, ನಿನಗೆ ಈತನ ಮೇಲಲ್ಲದೆ, ಮತ್ತಾರಮೇಲಾದರೂ, ಅನುಮಾನ ಉಂಟೆ ? ಎನಲು, ರಾವುತನು ಈತನೆಹೊರತು ಮತ್ತಾರಮೇಲೂ ಅನುಮಾನವಿಲ್ಲವೆಂದೂ, ಇವನ ಮೇಲೆ ಸಂದೇಹಹುಟ್ಟಲು, ಇಂಥಿಂಥ ಕಾರಣಗಳಿರುವುವೆಂದೂ, ವಿವರಿಸಿ ಹೇಳಿದನು. ನಂತರ ಜಡ್ಜಿಯು ತನ್ನ ಸೇವಕರನ್ನುಕುರಿತು, ಈತನನ್ನು ಶೋಧಿಸಿನೋಡಿರೆಂದು, ಆಜ್ಞಾಪಿಸಲು ಅವರು ಹುಡುಕಿನೋಡಿ ಚೀಲವನ್ನು ತೆಗೆದು ಎಲ್ಲರಿಗೂ ತೋರಿಸಿದರು. ಆಗ ನನಗುಂಟಾದ ಅಪಮಾನವನ್ನು

ನೋಡಿ, ನಾನು ಸಹಿಸಲಾರದೆ ಮೂರ್ಛಾಕ್ರಾಂತನಾದೆನು. ನ್ಯಾಯಾಧಿಪತಿಯು ಚೀಲವನ್ನು ತರಿಸಿಕೊಂಡನು ಎಂದು ಹೇಳುವಷ್ಟರಲ್ಲಿ, ಬೆಳಗಾಗಲು ಷಹರಜಾದಿಯು ಕಥೆಯನ್ನು ನಿಲ್ಲಿಸಿ, ಸುಲ್ತಾನನ ಪ್ರೀತಿಪಾತ್ರಳಾಗಿ, ಮರುದಿನ ಬೆಳಗಿನಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೧೩೪ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು, ಇಂತೆಂದಳು :— ಬಳಿಕ ನ್ಯಾಯಾಧಿಪತಿಯು ಆ ಚೀಲವನ್ನು ರಾವುತನಕೈಗೆ ಕೊಟ್ಟು, ಅಯ್ಯಾ! ಇದೇ ನಿನ್ನ ಚೀಲವೊ? ಇದರಲ್ಲಿ ಎಷ್ಟು ರೂಪಾಯಿಗಳನ್ನು ಹಾಕಿದ್ದೆ, ಎಂದು ಕೇಳಲು, ರಾವುತನು, ಸ್ವಾಮಿ! ಇದು ನನ್ನ ಚೀಲವೇಹೌದು. ನಾನು ಇದರಲ್ಲಿ ಇಪ್ಪತ್ತು ಸೆಕ್ವಿನ್ಸುಗಳನ್ನು ಹಾಕಿದ್ದೆನೆಂದು, ನಿಜವಾಗಿ ಹೇಳಿದನು. ನಂತರ ನ್ಯಾಯಾಧಿಪತಿಯು, ನನ್ನನ್ನು ಕರೆದು, ಅಯ್ಯಾ! ನಿಜವನ್ನು ಹೇಳಿದರೆ, ನಿನಗೇನೊ ಅಂತಹ ಕೂರವಾದ ಶಿಕ್ಷೆಯಾಗಲಾರದು. ನೀನು ಈ ಚೀಲವನ್ನು ತೆಗೆದುಕೊಂಡುಬಾ ಎಂದು ಹೇಳಿದನು. ಆಗ ನಾನು ಲಜ್ಜೆಯಿಂದ ತಲೆಬಾಗಿ, ನಾನು ತೆಗೆದುಕೊಳ್ಳಲಿಲ್ಲವೆಂದು ಹೇಳಿದರೆ, ಆ ಚೀಲವು ನನ್ನಬಳಿ ಇದ್ದುದನ್ನು ಎಲ್ಲರೂ ನೋಡಿರುವುದರಿಂದ, ಕಳ್ಳತನವಲ್ಲದೆ ಸುಳ್ಳುಹೇಳಿದ ದೋಷವು ನನ್ನಮೇಲೆ ಹೊರುವುದೆಂದು ನಾನು ಒಪ್ಪಿಕೊಂಡೆನು. ಆಗ ನ್ಯಾಯಾಧಿಪತಿಯು ನನ್ನಕೈಯ್ಯನ್ನು ಕೊಯ್ದುಬಿಡುವಂತೆ, ಆಜ್ಞಾಪಿಸಿದನು.

ಕೂಡಲೆ ರಾಜಾಜ್ಞೆಯುನೆರವೇರಿದುದರಿಂದ, ಅಲ್ಲಿ ನೆರೆದಿದ್ದವರೆಲ್ಲರೂ, ಕನಿಕರಪಡುತ್ತಿದ್ದರು. ಎಲ್ಲರಂತೆ ಆ ರಾವುತನುಕೂಡ, ಪಶ್ಚಾತ್ತಾಪಯುಕ್ತನಾದನೆಂಬುದನ್ನು, ನಾನು ಆತನ ಮುಖಭಾವದಿಂದ ತಿಳಿದುಕೊಂಡೆನು, ನ್ಯಾಯಾಧಿಪತಿಯು, ನನ್ನಕಾಲನ್ನು ತೆಗೆದುಹಾಕುವಂತೆ, ಆಜ್ಞೆ ಮಾಡಿದ್ದನು. ಆದರೆ ನಾನು ಬಹುವಿಧದಿಂದ ಆತನನ್ನು ಬೇಡಿಕೊಂಡುದರಿಂದ, ಮನ್ನಿಸಿದನು. ನ್ಯಾಯಾಧಿಪತಿಯು ಹೊರಟುಹೋದ ಮೇಲೆ, ರಾವುತನು ನನ್ನಬಳಿಗೆಬಂದು, ಇಷ್ಟು ಸುಂದರನಾಗಿ ಯೌವನಾವಿರ್ಭಾವಪ್ರಶ್ನೆನೀನು, ಅಗತ್ಯವಾದುದರಿಂದಲೆ, ಅಯೋಗ್ಯಕರವಾಗಿಯೂ, ಅವಮಾನಕ್ಕೆ ಹೇತುವಾಗಿಯೂ, ಇರುವ ಇಂತಹ ಕಾರ್ಯವನ್ನು ಮಾಡಿ

ರುವೆ ! ಎಂಬುದು ಚೆನ್ನಾಗಿ ತಿಳಿಯಬರುತ್ತದೆ. ಇಗೋ ! ಈ ಚೀಲವನ್ನು ತೆಗೆದುಕೊ ? ನಿನಗುಂಟಾದ ಈ ದುರವಸ್ಥೆಗಾಗಿ, ನಾನು ತುಂಬ ವ್ಯಸನಪಡುವೆನೆಂದುಹೇಳಿ, ಹೊರಟುಹೋದನು. ನಾನು ರಕ್ತನಷ್ಟದಿಂದ ಶಕ್ತಿಗುಂದಿದವನಾಗಿ, ಹೊರಳಾಡುತ್ತಿರುವುದನ್ನುಕಂಡು, ಅಲ್ಲಿನ ಕೆಲವು ಪುಣ್ಯಾತ್ಮರು ತಮ್ಮ ಮನೆಗೆ ಕರೆದುಕೊಂಡುಹೋಗಿ ಒಂದುಬಟ್ಟಲು ದಾಕ್ಷಾರಸವನ್ನು ಕುಡಿಸಿ, ಕೈಗೆ ಚಿಕಿತ್ಸೆಯೆನ್ನು ಮಾಡಿದರು, ಬಳಿಕ ನಾನು ಅಲ್ಲಿಂದಹೊರಟು ಈ ದುರವಸ್ಥೆಯಲ್ಲಿ ಮುಸಾಫರಖಾನೆಗೆ ಹೋದರೆ ನನಗೆ ಸರಿಯೊದ ಉಪಚಾರವು ನಡೆಯಲಾರದು. ನನ್ನ ಸ್ನೇಹಿತರೂ, ಅವಮಾನ ಪಡಿಸುವರಾದುದರಿಂದ, ಬಾಲಿಕಾಮಣಿಯೆಮನೆಗೆ ಹೋಗಬೇಕೆಂದುಬಯಸಿ, ಅತ್ಯಂತ ಪ್ರಯಾಸದಿಂದ ನನ್ನನ್ನು ಹಿಂದಟ್ಟಿಬರುತ್ತಿರುವ, ಜನರನ್ನು ತಪ್ಪಿಸಿ, ಆಕೆಯ ಮನೆಯನ್ನುಸೇರಿ, ಒಂದು ಮಂಚದ ಮೇಲೆ ಬಿದ್ದು ಹೊರಳಾಡುತ್ತ, ಊನವಾದ ಕೈಯ್ಯನ್ನು ಆಕೆಗೆತೋರಿಸಬಾರದೆಂದು, ಬೆಯ್ಯಿಯ್ಯಲ್ಲಿ ಮರೆಮಾಡಿಕೊಂಡಿದ್ದೆನು. ನಾನು ಬಂದಿರುವೆನೆಂಬ ವರ್ತಮಾನವೂ, ನನ್ನದೇಹದಲ್ಲಿ ಸ್ವಸ್ಥವಿಲ್ಲವೆಂಬ ಸುದ್ದಿಯೂ, ಆಕೆಗೆ ತಿಳಿದಿರಬೇಕಲೆ, ಭಯದಿಂದೋಡಿಬಂದು ನಾನು ಕಾಂತಿಹೀನನಾಗಿ, ಖಿನ್ನವಾದ ಮುಖದಿಂದ ನರಳುತ್ತಿರುವ್ರದನ್ನು ಕಂಡು, ಹಾ ! ಪ್ರಾಣನಾಥ ! ನಿನಗೇನು ? ದೇಹದಲ್ಲಿ ಸ್ವಸ್ಥವಿಲ್ಲವೆ ? ಎಂದು ಕೇಳಿದೆನು.

ಆಗ ನಾನು ನನಗೆ ತಲೆನೋವುವುಂಟಾಗಿದೆ, ಎಂದು ಹೇಳಿದೆನು. ಆಹಾ ! ಈದಿನ ಬೆಳಿಗ್ಗೆ ನಾನು ನಿನ್ನನ್ನುನೋಡಿದಾಗ, ಸೌಖ್ಯವಾಗಿ ಪೂರ್ಣಚಂದ್ರನಂತೆ ಹೊಳೆಯುತ್ತಿದ್ದೆಯಲ್ಲಾ ! ಈಗ ಇಂತಹ ದುರವಸ್ಥೆಯಲ್ಲಿರುವುದಕ್ಕೆ ಕಾರಣವೇನು ? ಏನೋ ವಿಶೇಷಸಂಗತಿ ಇದ್ದೀ ಇರಬೇಕು. ನನ್ನಸಂಗಡ ಹೇಳಿದೆ ಮರೆಮಾಚುವೆಯಾ ? ಎನಲು, ನನ್ನ ಕಣ್ಣುಗಳಿಂದ ಹರಿಯುತ್ತಿರುವ, ಧಾರಾಪೂರವಾದ ಕಣ್ಣೀರು ಆಕೆಯ ಹಂಬಲನ್ನು ಇನ್ನೂ ಹೆಚ್ಚುಮಾಡಿತು ಹಾ ! ಪ್ರಾಣನಾಯಕಾ ! ಏತಕ್ಕೆ ನಿನಗಿಂತಹ ದುರವಸ್ಥೆಯುಂಟಾಯಿತು. ನನ್ನಸಂಗಡ ಮೊದಲಿನಂತೆ ವಿಶ್ವಾಸವಾಗಿ ಮಾತನಾಡು, ನೀನು ಹೀಗೆ ವ್ಯಸನಪಡುವುದಕ್ಕೆ ನಾನೇನು ಅಪರಾಧ ಮಾಡಿದೆ. ನನ್ನಲ್ಲಿ ನಿನಗುಂಟಾದ ಮೋಹವನ್ನು ಸಂಪೂರ್ಣ

ವಾಗಿ, ನೀಗಿಕೊಂಡೆನೆಂದು ಹೇಳುವುದಕ್ಕಾಗಿ, ನೀನು ಇಲ್ಲಿಗೆ ಬಂದೆಯಾ ? ಎಂದು, ತಾನು ಕಣ್ಣೀರನ್ನು ಸುರಿಸುತ್ತಾ, ಪ್ರಿಯನಾಯಕಾ ! ನೀನು ಹೀಗೆ ಹಂಬಲಿಸುತ್ತಿರುವುದು, ನನ್ನ ವ್ಯಸನವನ್ನು ಇನ್ನೂ ಜಾಜ್ವಲ್ಯ ಮಾಡುವುದೆಂದು ನುಡಿದಳು. ನಾನು ನಿಜವಾದ ಸಂಗತಿಯನ್ನು ಆಕೆಯಸಂಗಡ ಹೇಳಬಾರದೆಂದು ಗೊತ್ತುಮಾಡಿಕೊಂಡಿದ್ದೆನು. ಆದರೆ ಸಾಯಂಕಾಲ ವಾಗುತ್ತಲೆ, ಭೋಜನವು ಸಿದ್ಧವಾದುದರಿಂದ, ನಾನು ಎಡದಕ್ಕೈಯ್ಯಲ್ಲಿ ಲೂಟಮಾಡುವುದೆಂದು ಗೊತ್ತುಮಾಡಿಕೊಂಡೆನು. ಅನಂತರ ಬಾಲಿಕಾ ಮಣಿಯು ಬಂದು, ಭೋಜನಕ್ಕೆ ದಯಮಾಡಬೇಕೆನಲು, ನನಗೆ ಹಸಿವಿಲ್ಲ ವೆಂದು ಹೇಳಬಿಟ್ಟೆನು. ಆಗ ಆ ಬಾಲಿಕಾಮಣಿಯು ನನಗೆ ತಿಳಿಯಬಾರ ದೆಂದು, ನೀನು ಮುಚ್ಚಿಕೊಂಡಿರುವ ವಿಷಯವನ್ನು ನನಗೆ ತಿಳಿಯಪಡಿಸಿ ದರೆ, ನಿನಗೆ ಹಸಿವಾದೀತು. ನೀನು ಹಸಿವಿಲ್ಲವೆಂದು ಹೇಳುವುದು, ಅಧೈರ್ಯ ದಿಂದಲೆ ಎಂದು, ನಾನು ನಿಸ್ಸಂದೇಹವಾಗಿ ಹೇಳುವೆನೆನಲು, ಪ್ರಿಯೇ ! ನಾನು ಇಲ್ಲಿಂದಮುಂದೆ ದೃಢಪಡಿಸಿಕೊಳ್ಳಬೇಕಾದುದೇನು ? ಎನಲು, ಆಕೆ ಬಂದು ಬಟ್ಟಲುತುಂಬ ಸಾರಾಯಿಯೆನ್ನು ತೆಗೆದುಕೊಂಡುಬಂದು, ಇದನ್ನು ಕುಡಿ ಎಂದು ಹೇಳಲು, ನಾನು ಅದನ್ನು ಎಡಗೈಯ್ಯಿಂದ ತೆಗೆದುಕೊಂಡೆನು ಎಂದು ಹೇಳಿ, ಬೆಳಗಾದಕೂಡಲೆ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ, ಪುನಹ ಹೇಳಲಾರಂಭಿಸಿದಳು.

೧೩೯ ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನನನ್ನುಕುರಿತು ಇಂತೆಂದಳು :— ನಾನು ಎಡದಕ್ಕೈಯಿಂದ ಆ ಬಟ್ಟಲನ್ನು ತೆಗೆದುಕೊಂಡಕೂಡಲೆ, ಕಣ್ಣಿ ನಲ್ಲಿ ನೀರು ಧಾರಾಳವಾಗಿ ಸುರಿಯುತ್ತಿರುವುದನ್ನುಕಂಡು, ಆ ಬಾಲಿಕಾ ಮಣಿಯು, ಓ ವೋಹನಾಂಗಾ ! ನೀನು ಇಷ್ಟೊಂದು ಕಠಿಣವಾಗಿ, ವ್ಯಸನಪಡುತ್ತಿರುವುದಕ್ಕೆ ಕಾರಣವೇನೆಂದುಕೇಳಿ, ನಿನ್ನ ಬಲಗೈಯ್ಯ ನ್ನೇಕೆ ನೀಡಲಾರೆ ? ಸಾರಾಯಿಯನ್ನು ಎಡಗೈಯ್ಯಲ್ಲಿ ತೆಗೆದುಕೊಳ್ಳಲು ಕಾರಣವೇನೆನಲು, ನಾನು, ಆಹಾ ! ನನ್ನ ಮುದ್ದಿನಮುದ್ದೆಯೆ. ನನ್ನ ಕೈಗೆ ನೋವುಕಂಡಿರುವುದರಿಂದ ಪಟ್ಟಿಹಾಕಿ ಕಟ್ಟಿಕೊಂಡಿರುವೆನು. ಅದನ್ನು ಈಗ ಬಿಚ್ಚಿಕೊಡಬೇಡಂದು ಹೇಳಿ, ಸಾರಾಯಿಯನ್ನು ಕುಡಿದುದರಿಂದ

ಮತ್ತು ಬಂದು ಬೆಳಗಾಗುವವರಿಗೂ ಬಂದೇಸವನಾಗಿ ನಿದ್ರೆ ಮಾಡಿದೆನು. ಆಗ ಪಸಿತಾಮಣಿಯು ನನ್ನ ಬಲಗೈಗೆ ಯಾವನೋವು ಉಂಟಾಗಿರುವುದೊ? ನೋಡಬೇಕೆಂದು, ಮೆಲ್ಲಗೆಬಂದು ಕಟ್ಟು ಬಿಚ್ಚಿನೋಡಿ, ಆಹಾ! ಇಂತಹ ಬಲವಾದ ನೋವಿನಿಂದಲೆ, ಈತನು ಬಹು ಗಟ್ಟಿಯಾಗಿ ಅಳುತ್ತಿದ್ದನು. ಅಲ್ಲದೆ ನನ್ನಮೋಲಣ ಮೋಹದಿಂದಲೆ, ಈತನು ಇಂತಹ ದುರವಸ್ಥೆಗೆ ಗುರಿಯಾಗಿರಬಹುದೆಂದು, ರಾತ್ರಿಯೆಲ್ಲಾ ಚಿಂತಿಸುತ್ತಲೇ ಇದ್ದಳು. ಬಳಿಕ ನಾನು ಎಚ್ಚರಿತ್ತನೋಲೆ ಆಕೆ ಬಹುಬಾಗಿ, ವ್ಯಸನಪಟ್ಟವಳಂತೆ ಕಾಣಿಸಿಕೊಂಡಳು. ಆದರೆ ಆ ವಿಷಯವನ್ನು ಕುರಿತು ಕೇಳಿದರೆ, ನನ್ನ ವ್ಯಸನವು ಅಧಿಕವಾಗುವುದೆಂದು ತಿಳಿದು, ನನ್ನನ್ನು ಪ್ರಶ್ನೆ ಮಾಡದೆ ಮೊದಲೇ, ಅಪ್ಪಣೆಮಾಡಿ ಸಿದ್ಧಪಡಿಸಿದ್ದ ಕೋಳಿಯ ಮಾಂಸವನ್ನು ತರಿಸಿಕೊಟ್ಟು, ನೀನು ಇದನ್ನು ತಿಂದರೆ, ನಿನಗೆ ಬಲ ಬರುವುದು ಎಂದು ಹೇಳಿದಳು.

ಆಗ ನಾನು ಬೇಗಿಬರುತ್ತೇನೆಂದು ಹೇಳಲು, ಆಕೆ ಈಬಾಗಿಲಿಂದ ಹೊರಗೆ ಹೋಗಲಾಪದು. ನೀನು ನಿನ್ನ ವ್ಯಸನಕ್ಕೆ ಕಾರಣವನ್ನು ಹೇಳದೆಹೋದರೂ, ಅದಕ್ಕೆ ನಾನೇ ಕಾರಣಳೆಂಬುದನ್ನು ಗ್ರಹಿಸಿಕೊಂಡೆನು. ನಾನು ಅನುಭವಿಸಿದ ಶೋಕವು ಶೀಘ್ರವಾಗಿಯೇ ನನ್ನಪ್ರಾಣವನ್ನು ತೆಗೆದುಕೊಳ್ಳುವುದು. ಆದರೆ ನಾನು ಸಾಯುವುದಕ್ಕೆ ಮೊದಲು, ನಿನಗೊಂದು ಉಪಕಾರವನ್ನು ಮಾಡುವೆನೆಂದು ಜೇಳಿ ಖಾಜಿಯನ್ನೂ, ಸಾಕ್ಷಿಗಳನ್ನೂ, ಬರಮಾಡಿ, ಆಸ್ತಿಯನ್ನೆಲ್ಲಾ ನನ್ನಪೆಸರಿಗೆ ಬರೆಸಿದಳು. ಬರೆದಾಗುತ್ತಲೆ, ಅವರು ಹೊರಟುಹೋದರು. ಬಳಿಕ ಆಕೆ, ತನ್ನಪೆಟ್ಟಿಗೆಯನ್ನು ತೆರೆದು, ನಾನು ಮೋಹಾವೇಶದಿಂದಾಕೆಗೆ ಕೊಟ್ಟಿದ್ದ ಹಣದಚೀಲಗಳನ್ನು ತೆಗೆದುಕೊಟ್ಟು, ಇಗೋ ಇದೆಲ್ಲವೂ ನಿನ್ನಹಣವೇ! ನಾನಿದರಲ್ಲಿ ಒಂದು ಕಾಸನ್ನು ಖರ್ಚುಮಾಡಿಕೊಂಡಿಲ್ಲ. ಇಗೊ! ನನ್ನ ಸರ್ವಸ್ವವೂ ಇರುವ ಧನಕೋಶದ ಬಿಗುವಕ್ಕೆಯನ್ನು ತೆಗೆದುಕೊ ಎನಲು, ನಾನು ಆಕೆಯ ದಯಾಗುಣವನ್ನು ನೋಡಿ, ನಿನಗೆ ನಾನೇನು ಇಂತಹ ದೊಡ್ಡದಾದ, ಉಪಕಾರವನ್ನು ಮಾಡದಿದ್ದರೂ, ನೀನು ಬೇಗ ಮಾಡಿದುದಕ್ಕಾಗಿ, ವಂದನೆಗಳನ್ನು ಅರ್ಪಿಸುವೆನು. ಆ ಬಾಲಿಕಾಮಣಿ, ಪ್ರಿಯನೇ! ನಾನುತಾನೆ ನಿನಗೇನುಮಾಡಿದೆನು. ನಿನ್ನಲ್ಲಿ ನನಗುಂಟಾದ ಮೋಹವನ್ನು ತೋರ್ಪಡಿ

ನುವುದಕ್ಕೆ, ಮರಣವೇ ಮೂಲಕಾರಣವಾಗಿರುವುದೆಂದು, ಹೇಳಿದಳು, ಇಂತಹ ಕ್ರೂರವಾದ ಮನೋನಿಶ್ಚಯವನ್ನು ಶೀಘ್ರವಾಗಿ ತೊರೆಯಬೇಕೆಂದು, ನಾನು ಅವಳನ್ನು ಬೇಡಿಕೊಂಡೆನು. ಆದರೂ ನನ್ನ ಪ್ರಾರ್ಥನೆಯು ಸಾರ್ಥಕವಾಗಲಿಲ್ಲ. ನನಗೊಂದು ಕೈ ಊನವಾದುದಕ್ಕಾಗಿ, ಆಕೆ ಅತ್ಯಂತ ವ್ಯಸನಾಕ್ರಾಂತಳಾಗಿ, ರೋಗದಿಂದ ನರಳುತ್ತಾ ಆರುವಾರಗಳವರಿಗಿದ್ದು, ಬಳಿಕ ತಾನು ಹೇಳಿದಂತೆ ಪ್ರಾಣವನ್ನು ಕಳೆದುಕೊಂಡಳು. ಆಕೆ ಸತ್ತುಹೋದಮೇಲೆ, ಕ್ಲುಪ್ತಕಾಲದವರಿಗೂ ನಾನು ವ್ಯಸನವನ್ನು ಆಚರಿಸಿ ಆಕೆಯು ಬರೆಸಿವ ಉಯಿಲುವ್ರಕಾರ, ಅಕೆಯ ಆಸ್ತಿಯೆನ್ನೆಲ್ಲಾ ತೆಗೆದುಕೊಂಡೆನು. ನಿನ್ನಮೂಲಕವಾಗಿ ಮಾರಿಸಿದ, ಧಾನ್ಯಪುಂಜವೂ, ಅದರದೇ ಎಂದು ಹೇಳಿದನು. ಎಂದು ಹೇಳಿ, ಬೆಳಗಾದುದರಿಂದ ಕಥೆಯನ್ನು ನಿಲ್ಲಿಸಿ, ಬೆಳಗಿನ ಜಾವದಲ್ಲಿ ಮತ್ತೆ ಹೇಳಲಾರಂಭಿಸಿದಳು.

೧೪೦ ನೆಯ ರಾತ್ರಿಯ ಕಥೆ.

ಷಹರಜಾದಿಯು ಸುಲ್ತಾನರನ್ನುಳಿದು, ಇಂತೆಂದಳು :— ನಾನು ಇದುವರಿಗೂ ಹೇಳಿದ ಕಥೆಯನ್ನು ನೀನು ಕೇಳಿರುವೆಯೆಲ್ಲಾ ! ಆದುದರಿಂದಲೇ ನಾನು ಎಡದಕೈಯಿಂದ ಊಟ ಮಾಡಿದೆನು. ಇದಕ್ಕಾಗಿ ನನ್ನನ್ನು ಕ್ಷಮಿಸಬೇಕು ! ನೀನು ನನಗೋಸ್ಕರವಾಗಿ, ಇಷ್ಟೊಂದು ತೊಂದರೆಯನ್ನು ಪಡಿಸುವದಕ್ಕಾಗಿ, ನಾನು ನಿನ್ನನ್ನು ವಂದಿಸುವೆನಲ್ಲದೆ ಇದಕ್ಕೆತಕ್ಕ ಪ್ರತ್ಯುಪಕಾರವನ್ನು ಮಾಡಲಾರೆನು. ನನ್ನ ಆಸ್ತಿಯಲ್ಲಿ ಬಹಳ ಹಣವು ಖರ್ಚಾಗಿಹೋಗಿದ್ದರೂ, ಇನ್ನು ವಿಸ್ತಾರವಾಗಿ ಧನವಿರುವುದರಿಂದ, ನೀನು ನನಗೆ ಕೊಡಬೇಕಾಗಿರುವ ಹಣವನ್ನು ನಾನೆ ನಿನಗುಚಿತವಾಗಿ ಕೊಡುವೆನು. ಅದನ್ನು ನೀನು ಸ್ವೀಕರಿಸಬೇಕೆಂದು ನುಡಿದು, ಅಯ್ಯಾ ! ನನಗಿಂತಹ ದುರವಸ್ಥೆಯುಂಟಾದಾಗಲೆ, ನಾನು ಕೈರೋ, ನಗರದಿಂದ ತೆರಳಿಬಂದೆನು. ಮತ್ತೊಂದುಸಾರಿಯಾದರೂ, ನಾನಲ್ಲಿಗೆ ಹೋಗಲಿಲ್ಲ. ಯಾವಸ್ಥಲಕ್ಕೂ ಹೋಗದೆ ಇಲ್ಲಿಯೇ ನಿಲ್ಲಬೇಕೆಂದಿದ್ದೆನು. ನೀನು ನನ್ನಸಂಗಡ ಬರುವುದಾದರೆ ನಾವಿಬ್ಬರೂ ಅಲ್ಲಿಗೆಹೋಗಿ ವ್ಯಾಪಾರ ಮಾಡುತ್ತಾ ಅನ್ಯೋನ್ಯಭಾವದಿಂದ ನಮ್ಮ ಆಸ್ತಿಯನ್ನು ಹಂಚಿಕೊಳ್ಳೋಣವೆಂದು ಹೇಳಿದನು. ಅತನು ನನಗೆ ಧನವನ್ನು ಬಹುಮತಿಯಾಗಿ

ಕೊಟ್ಟ, ತನ್ನಕೂಡ ಬರುವಂತೆ ಹೇಳಿದುದಕ್ಕಾಗಿ, ನಾನು ಸಮ್ಮತಿಸಿ ಇರುವೆನೆಂದು, ವಂದನಾಪೂರ್ವಕವಾಗಿ, ಬಹು ಮರ್ಯಾದೆಯಿಂದಲೂ, ವಿನಯದಿಂದಲೂ, ದಳಾಳಿಯು ಬೇಡಿಕೊಂಡನು. ಬಳಿಕ ನಾವು ಗೊತ್ತುಮಾಡಿಕೊಂಡಿದ್ದ ದಿನವೇ ಪ್ರಯಾಣಮಾಡಿ ಹೊರಟು, ನಾನಾದೇಶಗಳನ್ನು ಅಲ್ಲಿನ ಪಟ್ಟಣಗಳನ್ನು ನೋಡಿಕೊಂಡು, ನಿಮ್ಮರಾಜ್ಯಕ್ಕೆ ಬಂದುಸೇರಿ, ಕೆಲವು ದಿನಗಳು ವಾಸಮಾಡುತ್ತಿದ್ದೆವು. ಆತನು ಪರಿಯೋದೇಶದಲ್ಲಿ ವ್ಯಾಪಾರ ಮಾಡಬೇಕೆಂಬಲಿಭಿಲಾಷೆಯಿಂದ, ತನ್ನ ಆಸ್ತಿಯನ್ನು ತೆಗೆದುಕೊಂಡು ಹೊರಟುಹೋದನು. ತಾನುಮಾತ್ರ ಇಲ್ಲಿಯೇ ವಾಸಮಾಡುತ್ತಿರುವೆನು. ನೀನು ಇದಕ್ಕೆಮುಂಚೆ ಕೇಳಿದ ಈ ಗೂನನ ಚರಿತ್ರೆಗಿಂತಲೂ, ನನ್ನ ಕಥೆಯು ವಿಚಿತ್ರಕರವಾದುದಲ್ಲವೆ? ಎಂದು ಕೇಳಿದನು. ಬಳಿಕ ಕಾಸುಗಾರು ಧೊರೆಯು, ಕಿಸ್ತನಮೇಲೆ ಕೋಪಗೊಂಡು, ಇದು ಕೇಳುವುದಕ್ಕೆ ಯೋಗ್ಯವಾದುದೇಹೊರತು, ಅಕೊಟ್ಟಂದು ವಿಚಿತ್ರಕರವಾಗಿಲ್ಲವೆಂದು ಹೇಳಿದನು. ವೇಶ್ಯಾಲಂಪಟನಾಗಿದ್ದ ಒಬ್ಬಾನೊಬ್ಬ ವಿಷಯವ್ಯಾಳನ ಚರಿತ್ರೆಯು, ಈ ನನ್ನ ಪರಿಹಾಸಕನಚರಿತ್ರೆಗೆ ಸಮವೆಂದು ಹೇಳಬಹುದೆ? ಆತನ ಮರಣಕ್ಕಾಗಿ, ಕಾರಣವಿಲ್ಲದಿದ್ದರೂ, ನಿಮ್ಮಾನಾಲ್ವರನ್ನು ಉರುಳು ಹಾಕಿಸುತೆನೆಂದು ಹೇಳಿದನು. ಆಗ ಭಯಾಕ್ರಾಂತನಾದ ಕೊಬ್ಬಿನ ವ್ಯಾಪಾರದ ವರ್ತಕನು, ಅಯ್ಯಾ! ದಯೆಮಾಡಿ ಇನ್ನು ಸ್ವಲ್ಪಹೊತ್ತು ಅವಕಾಶವಿತ್ತು, ನನ್ನ ಚರಿತ್ರೆಯನ್ನು ಕೇಳಿ, ಅದು ಹಾಸ್ಯರಸಭರಿತವಾಗಿಯೂ, ವಿನೋದವಾಗಿಯೂ, ಇದ್ದುದೇ ಆದರೆ, ನಮ್ಮಾನಾಲ್ವರನ್ನು ಪ್ರಾಣದಿಂದ ಉಳಿಸಬೇಕೆಂದು ಬೇಡಿಕೊಳ್ಳಲು, ಕಾಸುಗಾರರ ಧೊರೆಯು ಒಪ್ಪಿದುದರಿಂದ, ದಳಾಳಿಯು ಕಥೆಯನ್ನು ಹೇಳಸಾಗಿದನು.

ದಳಾಳಿಯು ಕಾಸುಗಾರು ರಾಜನಿಗೆ ಹೇಳಿದ ಕಥೆ.

ಪ್ರಿಯರಾಜನೇ! ನಿನ್ನೆದಿನ ಸಾಯಂಕಾಲದಲ್ಲಿ ಒಬ್ಬ ದೊಡ್ಡಮನುಷ್ಯನು ತನ್ನಮಗಳ ವಿವಾಹಕ್ಕಾಗಿ, ನನ್ನನ್ನು ಔತಣಕ್ಕೆ ಕರೆದಿದ್ದನು. ನಾನು ಕ್ಲಿಪ್ತಕಾಲಕ್ಕೆ ಸರಿಯಾಗಿ, ಅಲ್ಲಿಗೆ ಹೋಗಲು, ಅನೇಕಮಂದಿ ವಿದ್ವಾಂಸರೂ, ಧರ್ಮಾಧಿಕಾರಿಗಳೂ, ಈ ಪಟ್ಟಣದಲ್ಲಿನ ಬಹುಮಂದಿ ದೊಡ್ಡಮನುಷ್ಯರೂ, ನೆರೆದಿದ್ದರು. ಮದುವೆಯೆಕಾರ್ಯವು ನೆರವೇರಿದ

ಮೇಲೆ, ನಮ್ಮಗಳಿಗೆ ದೊಡ್ಡ ಔತನವೂ, ಜರುಗಿತು. ಆಗ ತಟ್ಟೆಗಳಲ್ಲಿ ಅನೇಕವಾದ ರುಚಿಕರ ಪದಾರ್ಥಗಳನ್ನು ಬಡಿಸಿದ್ದರು. ಅದರಲ್ಲಿ ಬೆಳ್ಳುಳ್ಳಿಯ ಪಚ್ಚಡಿಯು ಬಹು ರುಚಿಕರವಾಗಿದ್ದಿತು. ನಮ್ಮಪಕ್ಕದಲ್ಲಿ ಕುಳಿತಿದ್ದವ ನೊಬ್ಬ ಅದನ್ನು ಕೈಯ್ಯಲ್ಲಿಸಹ ಮುಟ್ಟಲಿಲ್ಲ. ಅದನ್ನು ತೆಗೆದುಕೊಳ್ಳುವಂತೆ, ನಾನೆಷ್ಟು ಬೇಡಿಕೊಂಡಾಗ್ಯೂ, ಆತನು ಕೇಳದೆ, ಅಯ್ಯೋ! ಬೆಳ್ಳುಳ್ಳಿಯ ಪದಾರ್ಥಗಳನ್ನು ನಾನಾ ತಿನ್ನುವುದಿಲ್ಲ. ತಿಂದಾಗ ಅನುಭವಿಸಿದ ತೊಂದರೆಯು ಬಹಳವೆನ್ನಾಗಿ ಜ್ಞಾಪಕವಿದೆ ಎಂದನು. ಇದನ್ನು ತಿನ್ನುವುದರಿಂದ ನಿನಗೇನು ಕೊರತೆಯುಂಟಾಗುವುದೆಂದು, ನಾವು ಕೇಳಿದೆವು. ಆತನು ಉತ್ತರ ಹೇಳುವುದಕ್ಕೆ ಮೊದಲೇ, ಯಜಮಾನನು, ಅಯ್ಯೋ! ನಾನು ಮಾಡಿಸಿದ ಔತನವನ್ನು ಸ್ವೀಕರಿಸುವುದು ಹೀಗೆಯೋ! ಈ ಬೆಳ್ಳುಳ್ಳಿಯ ಪಚ್ಚಡಿಯು ಬಹು ಉತ್ತಮವಾದುದು. ಇದನ್ನು ತಿನ್ನಲೊಲ್ಲೆನೆಂದು ಹೇಳಬೇಡ. ಎಲ್ಲರಂತೆ ನೀನೂ ಅಂಗೀಕರಿಸಬೇಕು. ಎನಲು, ಬಾಗದಾದುಪಟ್ಟಣದ ವರ್ತಕರಲ್ಲೊಬ್ಬನು. ಅಯ್ಯಾ! ನಿನ್ನ ಆಜ್ಞಾನುಸಾರವಾಗಿ, ನಾನು ತಿನ್ನುವೆನು. ಆದರೆ, ತಿಂದಮೇಲೆ ಕೈಯ್ಯನ್ನು ವೀಳೆಯದೆಲೆಯಿಂದ ನಲವತ್ತುಸಾರಿಯೂ, ಬೂದಿಯಿಂದ ನಲವತ್ತುಬಾರಿಯೂ, ಬಳಿಕ ಸಾಬೂನಿನಿಂದಲೂ, ತೊಳೆದುಕೊಳ್ಳುವುದಕ್ಕೆ ಅಪ್ಪಣೆ ಮಾತಬೇಕೆಂದನು. ಹಾಗೆ ಮಾಡದೆ ಬೆಳ್ಳುಳ್ಳಿಯನ್ನು ತಿನ್ನುವುದಿಲ್ಲವೆಂದು, ನಾನು ಪ್ರಮಾಣ ಮಾಡಿಕೊಂಡಿರುವುದರಿಂದ, ತಾವು ಮನ್ನಿಸಬೇಕೆಂದು ಬೇಡಿಕೊಳ್ಳುವೆನು ಎಂದು ಹೇಳಿದಕೂಡಲೆ ಬೆಳಗಾದುದರಿಂದ, ಷಹರಜಾದಿಯು ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೧೪೧ ನೆಯ ರಾತ್ರಿಯ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು, ಇಂತೆಂದಳು;— ಆ ವರ್ತಕನ ಮಾತನ್ನುಕೇಳಿ, ಮನೆಯ ಯಜಮಾನನು ಆತನು ಕೈ ತೊಳೆವುದಕ್ಕಾಗಿ ಕೇಳಿದ ಪದಾರ್ಥಗಳೆಲ್ಲವನ್ನೂ ಕೊಡಿಸಿ, ಕೈ ತೊಳೆದು ಕೊಂಡವೇಲೆ, ಈಗ ನಮ್ಮಗಳಂತೆ ನೀವೂ ತಿನ್ನಬೇಕೆಂದು ಬೇಡಿಕೊಂಡನು. ಬಳಿಕ ಆತನು ಬಹುಕಷ್ಟದಿಂದ ಕೈ ನೀಡಿ ಸ್ವಲ್ಪವನ್ನು ತೆಗೆದು ಕೊಂಡು, ಬಹು ಅಸಹ್ಯದಿಂದ ತಿಂದನು. ಅದನ್ನುನೋಡಿ ನಾವು ಆಶ್ಚರ್ಯ

ಯುಕ್ತರಾದೆವು. ಇದೂ ಅಲ್ಲದೆ ಮತ್ತೊಂದು ವಿಶೇಷವೂ, ಅವನಲ್ಲಿ ಕಂಡು ಬಂದಿತು. ಏನೆಂದರೆ :—ಆತನಿಗೆ ನಾಲ್ಕೈನಾಲ್ಕು ಬಿರಳುಗಳಿದ್ದವೇಹೊರತು, ಐದನೆಯದಾದ ಹೆಬ್ಬೆರಳು ಇರಲಿಲ್ಲ. ಇದುವರಿಗೂ, ನಾವು ಅದನ್ನು ನೋಡಲೇ ಇಲ್ಲ. ಮನೆಯ ಯಜಮಾನನು, ಅದನ್ನು ಕಂಡಕೂಡಲೆ, ಆಯ್ಯಾ ! ನಿನಗೆ ಹೆಬ್ಬೆರಳಿಲ್ಲದಿರುವುದಕ್ಕೆ ಕಾರಣವೇನು ? ಏನೋ ಒಂದು ವಿಜಿತ್ರದಿಂದ, ಹೀಗಾಗಿರಬಹುದೆಂದು, ಇದಕ್ಕೆ ಕಾರಣವನ್ನು ಹೇಳ ಬೇಕೆಂದು ಅಲ್ಲಿದ್ದವರೆಲ್ಲರೂ, ಬೇಡಿಕೊಂಡರು. ಆಗ ಆತನು ಅಯ್ಯಾ ! ನನ್ನ ಬಲಗೈಯ್ಯಲ್ಲಿ ಅಲ್ಲದೆ ಎಡಪಕ್ಕೆಯ್ಯಲ್ಲಿಯೂ, ಆ ಹೆಬ್ಬೆರಳಿಲ್ಲ ವೆಂದು, ತೋರಿಸಿದನು. ಮತ್ತೂ ನೀವುಗಳು ನಂಬುವುದಾದರೆ, ನನ್ನ ಎರಡುಕಾಲುಗಳಲ್ಲಿಯೂ ಹೆಬ್ಬೆರಳು ಇಲ್ಲವೆಂದು ದೃಢವಾಗಿ ಹೇಳುವೆನು. ಅತ್ಯಂತ ಆಶ್ಚರ್ಯಕರವಾದ, ಒಂದು ಸಂಗತಿಯಿಂದ ನಾನು ಹೀಗೆ ಮೊಂಡ ನಾದೆನು. ಅದನ್ನು ಕೇಳಿದರೆ ನಿಮಗೆ ಆಶ್ಚರ್ಯ ಉಂಟಾಗುವದಲ್ಲದೆ, ಕನಿಕ ರವೂ ಹುಟ್ಟುವುದು. ಇಂತಹ ವಿಚಿತ್ರಕರವಾದ ಕಥೆಯನ್ನು ನೀವು ಎಂದಿಗೂ ಕೇಳಿರಲಾರಿರಿ ! ನೀವು ಹೇಳುವಂತೆ ಅಪ್ಪಣೆಮಾಡಿದರೆ, ಹೇಳುವೆ ನೆಂದು ಹೇಳಿ, ಅಲ್ಲಿಂದೆದ್ದುಹೋಗಿ, ನೂರಿಪ್ಪತ್ತುಸಾರಿ ಕೈ ತೊಳೆದು ಕೊಂಡು ಬಳಿಕ, ತನ್ನ ಕಥೆಯನ್ನು ಹೇಳತೊಡಗಿದನು.

ಅಯ್ಯಾ ! ಬಾಗದಾದುಪಟ್ಟಣದಲ್ಲಿ ಆಳುತ್ತಿದ್ದ ಕಲೀಫುಹ ರೋನ್ ಅಲರಾಶ್ಚಿದರ ಆಳಿಕೆಯಲ್ಲಿ, ನನ್ನತಂದೆಯು ಬಬಾ್ಬನೊಬ್ಬ ಗುಜರಿ ವರ್ತಕನಾಗಿದ್ದ, ತನ್ನಕಾಲವನ್ನು ಉತ್ಸಾಹದಿಂದಲೂ, ವ್ಯಾಪೋ ಹದಿಂದಲೂ, ಕಳೆಯುತ್ತಾ ತನ್ನ ವ್ಯಾಪಾರದಲ್ಲಿ ಅಸಡ್ಡೆಯನ್ನು ತೋರಿ ದುದರಿಂದ, ಸಾಲವು ಬಹಳವಾಯಿತು. ನಾನು ಕೈಲಾದಮಟ್ಟಿಗೂ ಮಿತ ವ್ಯಯವಾಡಿ, ನಂತರ ಸ್ವಲ್ಪಸ್ವಲ್ಪವಾಗಿ ಆಸ್ತಿಯನ್ನು ವೃದ್ಧಿಮಾಡಿ ದೆನು. ಹೀಗಿರುವಲ್ಲಿ ನಾನು ಒಂದಾನೊಂದುದಿನ ಬೆಳಿಗ್ಗೆ ಅಂಗಡಿಯನ್ನು ತೆರೆದು ಕುಳಿತುಕೊಂಡಿರಲು, ಬಬಾ್ಬನೊಬ್ಬ ಯುವತಿಯು, ಒಂದು ಕುದುರೆಯಮೇಲೆ ಕುಳಿತುಕೊಂಡು ಹಿಂದೆ ಇಬ್ಬರುಸೇವಕರನ್ನು ಕರೆದು ಕೊಂಡು, ಅಂಗಡಿಯಬಳಿಗೆಬಂದು, ಕುದುರೆಯಿಂದ ಇಳಿದಳು. ಆಗ ಚಾರಕನೊಬ್ಬನು, ಅಮ್ಮಾ ! ನೀವು ಯಾರಿಗಿದ್ದೀಬಂಡಿರುವಂತೆ ತೋರು

ವುದು. ಪೇಟೆಗೆ ಇನ್ನೂ ಯೊರೂ ಬುದಿಲ್ಲವಲ್ಲಾ ! ನಾನು ಹೇಳುವ ಮಾತನ್ನು ನೀನು ಕೇಳುವುದಾದರೆ, ಇಲ್ಲಿ ಕಾದುಕೊಂಡಿರಬೇಕಾದ ಲಗತ್ಯವೇ ಇಲ್ಲವೆಂದು, ಹೇಳುವೆನು ಎನಲು, ಆಕೆ ಸುತ್ತಲೂನೋಡಿ ಯೊವ ಅಂಗಡಿಯೂ ತೆರೆಯದೆ ಇರುವುದರಿಂದ, ನನ್ನಳಿಗೆ ಬಂದು, ನಿನ್ನಂತೆ ಉಳಿದ ವರ್ತಕರು ಬುದು, ಅಂಗಡಿಗಳನ್ನು ತೆರೆಯುವವರಿಗೂ, ನಾನಿಲ್ಲಿ ಕುಳಿತುಕೊಂಡಿರಬಹುದೇ ! ಎಂದು ಕೇಳಲು, ನಾನು ಗೌರವವಾಗಿ ಜವಾಬನ್ನುಹೇಳಿ ಬರಮಾಡಿಕೊಂಡೆನು. ಇಷ್ಟರಲ್ಲಿಯೆ ಬಿಳಗಾದುದರಿಂದ ಷಹರಜೌದಿಯು ಆ ರಾತ್ರಿ ಸುಲ್ತಾನನೊಡನೆ ಸುಖಕಯನದಲ್ಲಿದ್ದು ಮಾರನೆಯದಿನದ ಉಷಃಕಾಲದಲ್ಲಿ ಮರಳಿ ದಳಾಳಿಯ ಕಥೆಯನ್ನು ಹೀಗೆಂದು ಹೇಳಲಾರಂಭಿಸಿದಳು.

೧೪೨ನೆಯ ರಾತ್ರಿ ಕಥೆ.

ಷಹರಜೌದಿಯು ಸುಲ್ತಾನರನ್ನು ಕುರಿತು ಮತ್ತೆ ಇಂತೆಂದು ಹೇಳತೊಡಗಿದಳು. ನನ್ನ ಅಂಗಡಿಯೆಲ್ಲಿ, ಆ ಲಲನಾಮಣಿಯೂ, ನಪುಂಸಕ ಸೇವಕನೂ, ನಾನೂಹೊರತೂ ಮತ್ತಾರೂ ಮಾರ್ಗದಲ್ಲಿಕೂಡ ಸಂಚರಿಸದೆ ಇದ್ದುದರಿಂದ, ಆಕೆ ಗಾಳಿಗೋಸ್ಕರವಾಗಿ, ಮುಸುಕನ್ನು ತೆರೆದಳು. ಆಕೆಯಂತೆ ಸೌಂದರ್ಯವತಿಯರಾದವರನ್ನು, ನಾನೆಂದಿಗೂ ನೋಡಿರಲಿಲ್ಲ. ಆದರೆ ಅವಳನ್ನು ನೋಡಿದಕೂಡಲೆ, ನನಗೆ ಮೋಹ ಉಂಟಾಗಿ, ಆಕೆಯನ್ನೇ ನೋಡುತ್ತಿದ್ದೆನು. ಅದಕ್ಕಾಕೆ ಸಮ್ಮತಿಸಿದವಳಾಗಿ, ಬಹಳಹೊತ್ತಿನವರಿಗೂ ಮುಸುಕನ್ನು ತೆರೆದಿದ್ದು, ಒಳಿಕ ಮತ್ತಾರಾದರೂ ಬರುವರೋ, ಏನೋ ಎಂಬ ಭಯದಿಂದ ಮುಸುಕು ಹಾಕಿಕೊಂಡಳು. ಇನ್ನು ಸ್ವಲ್ಪ ಹೊತ್ತಿಗೆ ಮರಳಿ ಮುಸುಕು ತೆಗೆದು, ನನ್ನನ್ನುನೋಡಿ, ಬೆಲೆಬಾಳುವ ಉತ್ತಮವಾದ ರತ್ನದ ಬಟ್ಟಲುಗಳು, ನನಗೆ ಬಹಳವಾಗಿ ಜೇಕಾಗಿವೆ. ನಿನ್ನಲ್ಲೇನಾದರೂ ದೊರೆವುದೇ ? ಎಂದು ಕೇಳಿದಳು. ಆಗ ನಾನು ಆಕೆಯನ್ನುಕುರಿತು ಅಯ್ಯೋ ! ನಾನು ಬಡವನಲ್ಲಾ ! ಈಗತಾನೆ ವ್ಯಾಪಾರಕ್ಕೆ ಆರಂಭಿಸಿರುವೆನು. ನಿನಗೆ ಜೇಕಾದ ಉತ್ತಮವಸ್ತುಗಳು ನನ್ನಲ್ಲಿ ಇಲ್ಲದಿರುವುದಕ್ಕಾಗಿ, ನಾನು ತುಂಬ ವ್ಯಸನಪಡುತ್ತೇನೆ, ಅಲ್ಲದೆ ವರ್ತಕರು ಬಂದಮೇಲೆ, ನಾನೇ ಹೊರಟು ಅಂಗಡಿಗಳನ್ನು ತಿರುಗಿ, ನಿನಗೆ

ಬೇಕಾದ ಸಾಮಾನುಗಳನ್ನು ತಂದುಕೊಟ್ಟು, ಬಿಲೆಯನ್ನು ತೆಗೆದುಕೊಳ್ಳು ವೆನು. ನೀನು ಎಲ್ಲಿಯೂ ಹೋಗಬೇಡ, ಇಲ್ಲಿಯೇ ಇದ್ದು ನಿನ್ನಕೆಲಸ ಕಾರ್ಯಗಳನ್ನು ಸರಿವಡಿಸಿಕೊಳ್ಳಬಹುದೆಂದು, ಹೇಳಿದೆನು. ಆಕೆ ಅದಕ್ಕೆ ಸಮ್ಮತಿಸಿದಬಳಿಕ, ಬಹುಹೊತ್ತಿನವರಿಗೂ, ಮಾತನಾಡುತ್ತಿದ್ದಳು- ನಿನಗೆ ಬೇಕಾದ ಸರಕುಗಳನ್ನುಕೊಡುವ ವರ್ತಕರು ಇನ್ನು ಬರಲಿಲ್ಲವೆಂದು, ನಾನು ಹೇಳುತ್ತಿದ್ದೆನು. ಆ ಸುಂದರೀಮಣಿಯ ರೂಪಲಾವಣ್ಯಾದಿಗಳಿಂದ ನನಗೆಷ್ಟು ಮೋಹ ಉಂಟಾಯಿತೋ ! ಅಷ್ಟೊಂದುಮೋಹವುಕೂಡ ಆಕೆಯಬುದ್ಧಿ ಚಾತುರ್ಯಯುಕ್ತವಾದ ಮಾತಿನಿಂದಲೆ ಹೊರಪಡುತ್ತಿರುವುದನ್ನುಕಂಡು, ಸಂತೋಷಚಿತ್ತನಾದೆನು. ಮೋಹದಿಂದ ನನ್ನ ಅಂಗಡಿಯನ್ನು ಬಿಟ್ಟು ಎದ್ದುಹೋಗಿ, ಬೀದಿಬೀದಿಯನ್ನು ಸುತ್ತಿ ಆಕೆಗೆ ಬೇಕಾದ ಸರಕುಗಳನ್ನು ತಂದುಕೊಟ್ಟು ಅವಳಿಗೆ ಸಮ್ಮತಿಯಾದುದಕ್ಕಾಗಿ ಐದುಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಗೊತ್ತುಮಾಡಿದೆನು.

ಬಳಿಕ ನಾನು ಆ ಸಾಮಾನುಗಳನ್ನು ಗಂಟುಕಟ್ಟಿ, ಸೇವಕನ ಬಳಿಯಲ್ಲಿ ಕೊಡಲು, ಆ ಸುಂದರಿಯು ಕುದುರೆಯನ್ನೇರಿ ಹೊರಟು ಹೋದಳು. ಕಣ್ಣಿಗೆ ಕಾಣುವವರಿಗೂ, ನಾನು ಆಕೆಯನ್ನು ನೋಡುತ್ತಲೆ ಇದ್ದೆನು. ಆಕೆಯು ಮರೆಯಾದ ಸ್ವಲ್ಪಹೊತ್ತಿಗೆ, ಆ ಹೆಂಗಸಿನ ರೂಪರೇಖಾಲಾವಣ್ಯಕ್ಕೆ ಮೋಹಿಸಿ, ನಾನು ಮೋಸಹೋದೆನೆಂಬುದನ್ನು ತಿಳಿದುಕೊಂಡೆನು. ಆಕೆ ಹಣವನ್ನು ಕೊಡದೆ ಹೊರಟುಹೋದಳು. ಅವಳ ಗುರುತಾಗಲಿ, ಆಕೆಯ ವಾಸಸ್ಥಾನವಾಗಲಿ, ನನಗೆ ತಿಳಿಯದುದರಿಂದ, ವರ್ತಕರಿಗೆ ಕೊಡಬೇಕಾದ ಹಣಕ್ಕೆ, ನಾನೆ ಗುರಿಯಾದೆನೆಂದಂದುಕೊಂಡೆನು. ನಂತರ ವರ್ತಕರು ಈಗಲಿಬಂದು ಹಣವನ್ನು ಎಲ್ಲಿ ಕೇಳುವರೋ ಎಂಬ ಭಯದಿಂದ, ನಾನು ಅವರಬಳಿಗೆಹೋಗಿ, ಅವಳು ನನ್ನಗುರುತು ಕಂಡವಳೆಂದುಹೇಳಿ,ಸಮಾಧಾನಪಡಿಸಿ, ಪುನಹ ನನ್ನಅಂಗಡಿಗೆಬಂದು, ಎಂದಿನಂತೆ ಮೋಹಾವಿಷ್ಟನಾಗಿದ್ದೆನು ಎಂದುಹೇಳಿ, ಸೂರ್ಯೋದಯವಾದಕೂಡಲೆ, ಕಥೆಯನ್ನುನಿಲ್ಲಿಸಿ, ಬೆಳಗಿನ ಜಾವದಲ್ಲಿ ಮುರಳಿ ಹೇಳಲಾರಂಭಿಸಿದಳು.

೧೪೩ ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತ ಇಂತೆಂದು ನುಡಿಯ ತೊಡಗಿದಳು. ಆ ವರ್ತಕರಬಳಿಗೆ ನಾನುಹೋದಾಗ ಇಂದಿಗೆ ಎಂಟುದಿನ ದಲ್ಲಿ, ನಿಮ್ಮಹಣವನ್ನು ಕೊಡುವೆನೆಂದು, ಸಮಾಧಾನ ಮಾಡಿಕೊಂಡಿದ್ದೆನು. ಅದರಂತೆ ಅವರು, ಎಂಟುದಿನಗಳಿಗೆಬಂದು ಹಣವನ್ನುಕೇಳಲು, ಇನ್ನೂ ಎಂಟುದಿನಗಳು ವಾಯಿದೆಯನ್ನು ಕೇಳಿಕೊಂಡೆನು. ಆದುದರಿ ದ ಅವರು ಸಮ್ಮತಿಸಿ ಹೊರಟುಹೋದರು. ಆದರೆ ನಾಲ್ಕುದಿನಗಳಬಳಿಕ ಆ ಸುಂದ ರಾಂಗಿಯು ಮೊದಲಿನಂತೆ, ಇಬ್ಬರು ನಪುಂಸಕಸೇವಕರೊಡನೆ ಕಾದುರೆಯ ನ್ನೇರಿಬರುತ್ತಿರುವುದನ್ನು, ನಾನು ಅಂಗಡಿಯಲ್ಲಿ ಕುಳಿತುಕೊಂಡಿರುವಾಗಲೆ ಕಂಡೆನು. ಆ ಸುಂದರಿಯು ನನ್ನಬಳಿಗೆಬಂದು, ಬಹು ಆಲಸ್ಯವಾಯಿ ತೆಂದು ಬೇಜಾರುಪಡಬೇಡ- ಇಗೋ ! ನಿನ್ನ ಸರಕುಗಳ ಹಣವನ್ನು ತೆಗೆದುಕೊಂಡು, ನಾಣ್ಯವನ್ನು ನೋಡಿಕೊ, ಎಂದು ಹೇಳಿ, ತನ್ನ ಸೇವ ಕನಬಳಿಯಲ್ಲಿದ್ದ ಹಣದಗಂಟನ್ನು ಕೊಡಲು, ನಾನು ಅದನ್ನು ತೆಗೆದು ಕೊಂಡುಹೋಗಿ, ಸರಾಫನಿಗೆ ತೋರಿಸುವಲ್ಲಿ ನಾಣ್ಯಗಳೆಲ್ಲವೂ ಉತ್ತಮ ಗಳಾಗಿದ್ದವು. ಆ ಸುಂದರಿಯು ಮೊದಲುದಿನದಂತೆ, ಇತರ ವರ್ತಕರು ಬಂದು ಅಂಗಡಿಯಲ್ಲಿ ವ್ಯಾಪಾರನಡಸುವವರೆಗೂ, ನನ್ನ ಅಂಗಡಿಯಲ್ಲಿ ಕುಳಿತುಕೊಂಡಿದ್ದಳು. ನಾವು ಕೆಲವುಕಾಲ ವಿನೋದವಾಗಿ, ಮಾತನಾ ಡುತ್ತಿದ್ದೆವು.ಸಾಮಾನ್ಯವಿಷಯದಲ್ಲಿ ನಾನು ಚರ್ಚಿಸುತ್ತಿದ್ದರೂ, ಆಕೆಯ ಮುದ್ದುಮುಖದಿಂದ ಹೊರಟುಬರುವ, ಆ ಮಾತುಗಳು ನನಗೆ ಉಲ್ಲಾಸ ಕರವಾಗಿದ್ದುದರಿಂದ, ಅತಿಶಯವಾದವುಗಳೆಂದು ಭಾವಿಸಿ, ಆಕೆಯ ನಾಕ್ ಚಾತುರ್ಯವನ್ನು ಬಹಳವಾಗಿ ಕೊಂಡಾಡಿದೆನು.

ಬಳಿಕ ಸ್ವಲ್ಪಹೊತ್ತು ಹೋದಮೇಲೆ ಅವರವರ ಅಂಗಡಿಗೆ ಕೊಡ ಬೇಕಾಗಿದ್ದ ಹಣವನ್ನುಸಲ್ಲಿಸಿ, ಮರಳಿ ಆಕೆಗೆಬೇಕಾಗಿದ್ದ ಸರಕುಗಳನ್ನು ತಂದುಕೊಟ್ಟೆನು. ಬಹುಮಾತುಗಳಿಂದ ಪ್ರಯೋಜನವೇನು ? ಆಕೆಯು ಬಂದುಸಾವಿರ ರೂಪಾಯಿಗಳ ಸರಕನ್ನು ತೆಗೆದುಕೊಂಡು ಹೊರಟುಹೋ ದಳು. ಆದುದರಿಂದ ನಾನು ಮೊದಲಿನಂತೆ ಮೋಸಹೋದೆನೆಂದುಕೊಂಡು

ಮರಳಿ, ಆಹಾ! ಆ ಸುಂದರಿಯು ನನ್ನಬಳಿಗೆ ಬಂದು ಹಣವನ್ನುಸಲ್ಲಿಸಿ, ಪುನಹ ಸರಕುಗಳನ್ನು ತೆಗೆದುಕೊಂಡುಹೋವಳು. ಆದುದರಿಂದ ಆಕೆ ಎಂದಿಗೂ ವೋಸಗಾತಿಯೆಲ್ಲ; ನನ್ನನ್ನು ಮುಳುಗಿಸಬೇಕೆಂಬತಾತ್ಪರ್ಯವೂ ಅವಳಿಗಿಲ್ಲ. ಆದರೆ ವರ್ತಕರು, ಆಕೆಯೆ ಗುರುತು ಕಾಣರಾದುದರಿಂದ, ನನ್ನನ್ನೇ ಕೇಳುವರು, ಎಂಬ ಭಯವು ನನಗುಂಟಾಯಿತು. ಆದರೆ ಆ ಭಯವು ಆಕೆಯಲ್ಲಿ ನನಗುಂಟಾದ ವೋಹಕ್ಕಿಂತಲೂ, ಅತಿಶಯವಾಗಿ ಇದ್ದುದರಿಂದ, ಅದನ್ನು ಅಣಗಿಸಿಕೊಳ್ಳಲಾರದೆಹೋದೆನು. ಮರಳಿ ಒಂದು ತಿಂಗಳವರಿಗೂ, ಆಕೆಯ ವರ್ತಮಾನವೇ ನನಗೆ ತಿಳಿಯಲಿಲ್ಲ. ಅದುದರಿಂದ ನನಗೆ ತುಂಬ ಭಯವುಂಟಾಯಿತು. ವರ್ತಕರ ತಗಾದೆಗಾಗಿ, ನನ್ನ ಸ್ವತ್ತುಗಳನ್ನುಮಾರಿ ಹಣವನ್ನು ಕೊಡಲುದ್ಯುಕ್ತನಾದೆನು. ಅಷ್ಟರಲ್ಲಿ ಆಕೆಯು ಮರಳಬಂದು ಇಗೋ ನಿನ್ನ ಹಣವನ್ನು ನೋಡಿಕೊ! ತಂದಿರುವೆನು ಎಂದು ಹೇಳಿದುದರಿಂದ, ನನ್ನ ಭಯವೆಲ್ಲವೂ ನಾಶವಾಗಿ, ವೋಹವು ಅಧಿಕವಾಯಿತು. ಆಗ ಆಕೆ ನನ್ನನ್ನುಕುರಿತು ನಿನಗೆ ಮದುವೆಯಾಗಿರುವುದೆ? ಎಂದು ಕೇಳಿದಳು ನಾನು ಇಲ್ಲವೆಂದು ಹೇಳಿದೆನು. ಆಗ ಆಕೆಯು ಹುಸುನಗೆಯೆನ್ನುನಗುತ್ತಾ, ನಪುಂಸಕನನ್ನುನೋಡಿ, ನೀನು ಈತನಿಗೆ ನಾನುಕೊಟ್ಟ ಹಣಕ್ಕೆ ಸಾಕ್ಷಿಯಾಗಿರು ಎಂದು ಹೇಳಿದಳು.

ಬಳಿಕ ಆ ನಪುಂಸಕನು, ನನ್ನನ್ನುನೋಡಿ, ಅಯ್ಯಾ! ನಿನಗೆ ಈಕೆಯಮೇಲೆ ವೋಹ ಉಂಟಾಗಿರುವುದೆಂಬುವುದು, ನಿನ್ನನ್ನು ನೋಡಿದಾಗಲೆ ಕಾಣಬರುವುದು. ನೀನು ಅದನ್ನು ಆಕೆಗೆ ತಿಳಿಸಲು ಶಕ್ತನಲ್ಲದಿರುವುದಕ್ಕಾಗಿ, ನಾನು ಬಹಳವಾಗಿ ಆಶ್ಚರ್ಯಪಡುವೆನು. ನಿನ್ನ ಅಂಗಡಿಯಲ್ಲಿರುವ ಸಾಮಾನುಗಳು, ಆಕೆಗೇನೂ, ಅವಶ್ಯಕವಿಲ್ಲವಿದ್ದರೂ, ನಿನ್ನ ವೋಲಣ ವೋಹದಿಂದ ಪದೇ ಪದೇ ಇಲ್ಲಿಗೆ ಬರುವುದಕ್ಕೆ ಅದೇ ವ್ಯಾಜ್ಯವಾಗಿರುವುದು. ಆದುದರಿಂದಲೆ ನಿನಗೆ ಮದುವೆಯಾಗಿರುವುದೆ? ಎಂದು ಕೇಳಿದಳು. ನೀನು ಆಕೆಯನ್ನು ನಿರಾಶವಾಡಿಕೊಳ್ಳದೆಹೋದರೆ, ಅದು ನಿನ್ನತಪ್ಪೇಹೊರತು ಮತ್ತಾವುದೂ ಅಲ್ಲವೆಂದು ಹೇಳಿದನು. ಹಾದಯ್ಯಾ! ನಾನು ಈ ಸುಂದರಿಯನ್ನು ನೋಡಿದಾಗಿನಿಂದಲೂ, ವೋಹಾಕ್ರಾಂತನಾಗಿ ಇರುವುದೇನೋ ದಿಟ, ಆದರೆ ಈ ಸುಂದರಿಯು ಅದನ್ನುಂಗೀಕರಿಸುವಳೊ,

ಇಲ್ಲವೊ, ಎಂಬ ಅನುಮಾನದಿಂದಿದ್ದೆನು. ಈಗ ಸರ್ವಪ್ರಕಾರದಿಂದಲೂ, ನಾನು ಆಕೆಗೆ ಸ್ವಾಧೀನನಾಗಿಯೆ ಇರುವೆನು. ಅಲ್ಲದೆ ನೀನು ಮಾಡಿದ ಉಪಕಾರಕ್ಕಾಗಿ, ನಿನ್ನನ್ನು ವಂದಿಸುವೆನೆಂದು ಹೇಳಿದೆನು. ಆಗ ಆ ನಪುಂಸಕನು, ಸುಂದರಾಂಗಿಯನ್ನುನೋಡಿ, ನಾನು ಈತನನ್ನು ಸಮ್ಮತಿಪಡಿಸಿರುವೆನೆಂದು ಹೇಳಲು, ಆಕೆ ನನ್ನಕಡೆಗೆ ತಿರುಗಿ, ಈ ಸೇವಕನನ್ನು ನಿನ್ನಬಳಿಗೆ ಕಳುಹಿಸುತ್ತೇನೆ, ನೀನು ಹೇಳಿದತೆರದಿಂದ ನಡೆದುಕೊ ಎಂದು ಹೇಳಿ, ನನ್ನಿಂದ ಅಪ್ಪಣೆಯನ್ನು ತೆಗೆದುಕೊಂಡು, ಹೊರಟುಹೋದಳು. ಬಳಿಕ ನಾನು ವರ್ತರಿಗೆ ಕೊಡಬೇಕಾದ ಹಣವನ್ನು ಸಲ್ಲಿಸಿ, ಆ ನಪುಂಸಕನು ಯಾವಾಗಬರುವನೊ, ಎಂದು ಅತ್ಯಾತುರದಿಂದ ಕಾದುಕೊಂಡಿರಲು, ಆತನು ನನ್ನಬಳಿಗೆ ಬಂದುದಿನ ಬಂದಂಥಾವನಾದನು. ಇಂತೆಂದು ಹೇಳಿ, ಷಹರಜಾದಿ ಬೆಳಗಾದುದರಿಂದ ಕಥೆಯನ್ನುನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಮರಳ ಹೇಳಲಾರಂಭಿಸಿದಳು.

೧೪೪ ನೆಯ ರಾತ್ರಿಯ ಕಥೆ.

ಷಹರಜಾದಿಯು ಸುಲ್ತಾನನ್ನು ಕುರಿತು ಇಂತೆಂದಳು :=ಬಳಿಕ ಆತನು ಆ ನಪುಂಸಕನನ್ನು ಬಹು ಮರ್ಯಾದೆಯಿಂದ ಬರಮಾಡಿಕೊಳ್ಳಲು, ಆತನು ನನ್ನ ಯೋಗಕ್ಷೇಮವನ್ನು ವಿಚಾರಿಸಿದನು. ನಾನು ಆ ಸುಂದರೀಮಣಿಯ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದೆನೆಂದು ತಿಳಿಸು, ಅಯ್ಯಾ! ಆ ಸುಂದರೀಮಣಿಯು, ನಿನ್ನವೋಲಣ ವೋಹದಿಂದುಂಟಾದ ವಿರಹವ್ಯಥೆಯನ್ನನುಭವಿಸುತ್ತ, ಪ್ರಜ್ಞೆತಪ್ಪಿ ಹಾಸಿಗೆಯಲ್ಲಿ ಹೊರಳಾಡುತ್ತಿರುವಳು. ನೀನು ಎಂದಿಗೆ ಬರುವೆಯೊ! ಎಂದು ಕಾದುಕೊಂಡಿರುವಳು. ಅವಳು ದೇಹದಲ್ಲಿ ಸ್ವಸ್ಥತೆಯುಳ್ಳವಳಾಗಿದ್ದರೆ, ನಿನ್ನಬಳಿಗೆ ಬಂದು ನಿನ್ನನ್ನು ವಿಚಾರಿಸಿಕೊಂಡು ಹೋಗುತ್ತಿದ್ದಳು ಎಂದು ಹೇಳಿದನು. ನಾನು ಅಯ್ಯಾ! ಆ ಸುಂದರೀಮಣಿಯ ಮುಖವನ್ನು ನೋಡಿದಾಗಲೆ, ಸಾಮಾನ್ಯಳಲ್ಲವೆಂದು ತಿಳಿದುಕೊಂಡೆನು ಎನಲು, ನಪುಂಸಕನು ಹೌದಯ್ಯಾ, ಹೌದು! ನೀನು ಸರಿಯಾಗಿ ಯೋಚಿಸಿದೆ, ಸುಲ್ತಾನರ ಪೀಡತಿಯಾದ ಜೋಬೈದಿಯು, ಆ ಹುಡುಗಿಯನ್ನು ಬಾಲ್ಯದಿಂದಲೂ ಸಾಕಿ, ಅಕ್ಕರೆಯಿಂದ ತನ್ನ ಚಾತುರ್ಯವನ್ನೆಲ್ಲಾ ಕಲಿಸಿರುವಳು. ಆದುದರಿಂದ ಈ ಸುಂದರೀಮಣಿಯು ತನಗೆ

ಉಂಟಾಗಿರುವ ವ್ಯೋಹವನ್ನು ಆಕೆಗೆ ತಿಳಿಯಪಡಿಸಿ, ಮದುವೆಮಾಡಿಕೊಳ್ಳುವುದಕ್ಕೆ ಅಪ್ಪಣೆಯನ್ನು ಬೇಡಲು, ಆಗಬಹುದೆಂದು ಒಪ್ಪಿ, ನೊದಲು ನಿನ್ನನ್ನು ನೋಡಬೇಕೆಂದು ಹೇಳಿರುವಳು. ನೀನು ಅವಳಿಗೆತಕ್ಕ ವರನಾಗಿ ಜೋಬದಿಗೆ ಕಾಣಬಂದರೆ, ಮದುವೆಯ ಖರ್ಚನ್ನುಸಹ, ಕೊಡುವೆನೆಂದು ಹೇಳಿರುವುದರಿಂದ, ನಿನ್ನ ಅಭ್ಯುದಯಕ್ಕೆ ಮುಖ್ಯವಾಗಿ ಜೋಬದಿಯೆನ್ನು ಒಪ್ಪಿಸಬೇಕಾಗಿರುವುದು. ಜೋಬದಿಯು ಒಪ್ಪುವದಾದರೆ, ನಿನಗೆ ಮದುವೆಯಾದಂತೆಯೆ ಭಾವಿಸು. ಹಾಗಿಲ್ಲದಿದ್ದರೆ ಅನುಮಾನ ? ನೀನು ನಗರಕ್ಕೆ ಬರುವುದೊಂದೆ ಬಾಕಿ. ಯಾವಾಗ ಬರುವೆಯೊ, ಆಗಲೆ ನಿನ್ನನ್ನು ಕರೆದು ಕೊಂಡುಬರುವುದಕ್ಕಾಗಿ, ನನ್ನನ್ನು ಇಲ್ಲಿಗೆ ಕಳುಹಿಸಿರುವುದು ಎನಲು, ನಾನು ಅಯ್ಯಾ ! ನೀನು ಕರೆದುಕೊಂಡುಹೋಗುವ ಸ್ಥಲಕ್ಕೆ ನಾನು ಬರಲು ಸಿದ್ಧನಾಗಿರುವೆನೆಂದು ಹೇಳಲು, ಆತನು ಒಳ್ಳೀದು ಅರಮನೆಯೆಲ್ಲಿ ಇರುವ ರಾಜಸ್ತ್ರೀಯರ ಅಂತಃಪುರಕ್ಕೆ ಹೋಗುವುದು ತುಂಬ ಅಪಾಯಕರವಾಗಿಯೂ, ಅಸಾಧ್ಯವಾಗಿಯೂ, ಇರುವುದೆಂಬುದು, ನಿನಗೆ ತಿಳಿದೇ ಇರುವುದರಿಂದ, ಆ ಸುಂದರೀಮಣಿಯು ಮಾಡಿದ ಉಪಾಯದಂತೆ, ನೀನು ಎಚ್ಚರಿಕೆಯಾಗಿರಬೇಕು. ಇಲ್ಲವಾದರೆ ನಿನಗೆ ಪ್ರಾಣಹಾನಿ ಸಂಭವಿಸುವುದು ಎನಲು, ನಾನು ಅಯ್ಯಾ ! ನೀನುಹೇಳಿದಂತೆ ನಡೆದುಕೊಳ್ಳುವುದಕ್ಕೆ ಸಿದ್ಧನಾಗಿರುವೆನೆಂದು ಹೇಳಿದೆನು.

ಬಳಿಕ ಆತನು ಅಯ್ಯಾ ! ನೀನು ಈದಿನ ಸಾಯಂಕಾಲ ಟೈಗ್ರಿಸ್ ನದಿಯಬಳಿ ರಾಣಿಯು ಕಟ್ಟಿಸಿರುವ, ಮುಸೀದಿಯಲ್ಲಿದ್ದುಕೊಂಡು ಯಾರಾದರೂಬಂದು ಕೂಗಿದರೆ, ಹೊರಗೆಬಾಯೆಂದು ಹೇಳಲು, ನಾನು ಅದಕ್ಕೆ ಸಮ್ಮತಿಸಿ, ಹಗಲನ್ನು ಬಹುಪ್ರಯಾಸದಿಂದ ಕಳೆದು, ಸಾಯಂಕಾಲಕ್ಕೆ ಸರಿಯಾಗಿ ಆ ಮುಸೀತಿಗೆಹೋಗಿ, ಪ್ರಾರ್ಥನೆಯೆನ್ನು ಮಾಡುತ್ತಿದ್ದೆನು. ಧ್ಯಾನವನ್ನು ತೀರಿಸಿಕೊಂಡು ಎಲ್ಲರೂ ಹೊರಟು ಹೋದರು. ನಾನಾದರೋ ಅಲ್ಲಿಯೆ ಇದ್ದೆನು. ಸ್ವಲ್ಪಹೊತ್ತಿಗೆ ಕೆಲವುಜನ ಖೋಜಾಸವಾರರು, ಪಹರೆಯೆನ್ನು ಕೊಡುತ್ತಿರುವ ಒಂದು ಗಾಡಿಯು ಬಂದಿತು. ಆಗ ಅವರೆಲ್ಲರೂ, ಮುಸೀದಿಗೆಬಂದು ತಮ್ಮ ಸಾಮಾನುಗಳನ್ನು ಇಳಿಸಿದಬಳಿಕ, ಎಲ್ಲರೂ ಹೊರಟುಹೋಗಿ, ನನ್ನಸಂಗಡ ಬಿಳಿಗ್ಗೆ ಬಂದು

ಮಾತನಾಡಿದ ನಪುಂಸಕನುಮಾತ್ರ ಅಲ್ಲಿಯೆ ಇದ್ದನು. ಸ್ವಲ್ಪಹೊತ್ತಿನ ಮೇಲೆ ಆ ಸುಂದರೀಮಣಿಯು, ನನಗೆ ಕಾಣಬಂದುದರಿಂದ ನಾನು ಮೆಲ್ಲಗೆ ಆಕೆಯಬಳಿಗೆ ಹೋಗಿ, ನಿನ್ನಿಷ್ಟಾನುಸಾರವಾಗಿ ನಡೆಯಿಲು, ಸಿದ್ಧನಾಗಿ ಇರುವೆನೆಂದು ಹೇಳಿದೆನು. ಬಳಿಕ ಆಕೆ ನಾನಿನ್ನು ಆಲಸ್ಯಮಾಡಬಾರದೆಂದು ಹೇಳಿ, ಪ್ರಿಯನೇ! ಹೆದರಬೇಡ? ನೀನು ಇದರಲ್ಲಿ ಕುಳಿತುಕೊ, ನಾನು ಮುಂದಿನ ಕಾರ್ಯವನ್ನು ನಿರ್ವಹಿಸುವೆನೆಂದು ಹೇಳಿ, ಒಂದುಪೆಟ್ಟಿಗೆಯನ್ನು ತೋರಿಸಿದಳು. ಕೂಡಲೆ ಬಾಗಿಲು ಮುಚ್ಚಿ, ಆಕೆಯ ನಂಬಿಕೆಗೆ ಪಾತ್ರನಾದ ಒಬ್ಬ ಸೇವಕನು, ಇತರರನ್ನು ಕರೆದು ಪೆಟ್ಟಿಗೆಯನ್ನು ಗಾಡಿಯಲ್ಲಿಡಿಸಿಕೊಂಡು, ತಾನು ತನ್ನ ಧೊರೆಸಾನಿಯು ಕುಳಿತುಕೊಂಡು, ಅರಮನೆಗೆಬಂದು, ಜೋಬದಿಯ ಅಂತಃಪುರಕ್ಕೆ ಪೆಟ್ಟಿಗೆಯನ್ನು ತೆಗೆದುಕೊಂಡುಹೋದರು. ಹೀಗಿರುವಲ್ಲಿ ನಾನು ಪೆಟ್ಟಿಗೆಯಲ್ಲಿ ಸಿಕ್ಕಿಕೊಂಡೆನಲಾ! ಎಂದು ಚಿಂತಿಸುತ್ತಿದ್ದು, ಮಿಂಚಿಹೋದುದಕ್ಕೆ ಯೋಚಿಸಿ ಫಲವಿಲ್ಲವೆಂದು, ಭಗವಂತನನ್ನು ಧ್ಯಾನಮಾಡುತ್ತಿದ್ದೆನು. ಅಷ್ಟರಲ್ಲಿ ಗಾಡಿಯುಹೋಗಿ, ಅರಮನೆಯ ಮಧ್ಯಾಂಕಣದಲ್ಲಿ ನಿಂತುಕೊಂಡಿತು. ಅಂತಃಪುರದ ಬಾಗಿಲನ್ನು ತೆರೆದುಕೊಂಡುಹೋಗುತ್ತಿದ್ದ, ನಪುಂಸಕಸೇವಕರನ್ನು ಅವರಹಿಂದೆ ಪೆಟ್ಟಿಗೆಯನ್ನು ತೆಗೆದುಕೊಂಡು, ಹೋಗುತ್ತಿರುವುದನ್ನು ಕಂಡೆನು. ಆದರೆ ಅವರೆಲ್ಲರೂ ಮಲಗಿಕೊಂಡು ಇದ್ದುದರಿಂದ, ಅವರನ್ನು ಏಳಿಸುವುದು, ಆವಶ್ಯಕವಾಗಿದ್ದಿತು ಎಂದುಹೇಳಿ, ಬೆಳಗಾಯುದರಿಂದ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಿಗ್ಗೆ ಮರಳಿ ಹೇಳಲಾರಂಭಿಸಿದಳು.

೧೪೫ನೆಯ ರಾತ್ರಿಯ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು ಇಂತೆಂದಳು :— ಅಲ್ಲಿರುವ ಖೋಜಾಸರದಾರನು ಅಷ್ಟುಹೊತ್ತಿನಲ್ಲಿ, ನಿದ್ರಾಭರದಿಂದ ರೇಗಿ ಆಗಹೋಗದ ಮಾತುಗಳನ್ನಾಡಿ, ನೀವು ಬಂದಾಗಲೆಲ್ಲ ಸಿದ್ಧನಾಗಿರಬೇಕೊ? ನಾನು ಈ ಪೆಟ್ಟಿಗೆಗಳೆಲ್ಲವನ್ನೂ ಪರಿಶೀಲಿಸಿ ನೋಡಿದಹೊರತು, ಅವುಗಳನ್ನು ತೆಗೆದುಕೊಂಡುಹೋಗುವುದಕ್ಕೆ ಅವಕಾಶವನ್ನು ಕೊಡಲಾರೆನು. ಅಯ್ಯಾ! ಸೇವಕಶಿಖಾಮಣಿ! ಈ ಪೆಟ್ಟಿಗೆಗಳನ್ನು ಒಂದೊಂದು

ತೆರೆದು ನನಗೆ ತೋರಿಸು ಎಂದನು. ಆಗ ಆಕೆ ಎಲ್ಲಾ ಪೆಟ್ಟಿಗೆಗಳನ್ನು ತೆಗೆದು ತೋರಿಸಿ, ನಾನಿರುವ ಪೆಟ್ಟಿಗೆಯೆಬೀಗವು ಜೋಬದಿಯೆಬಳಿಯೆಲ್ಲಿ ಇರುವುದೆಂದು, ಅದರಲ್ಲಿ ನನಗೂ ಜೋಬದಿಗೂ ಬೇಕಾದವಸ್ತುಗಳೇ ಇರುವುವೆಂದೂ, ಆ ಪದಾರ್ಥಗಳ ಜೊತೆಯಲ್ಲಿ ಮಕ್ಕಾಪಟ್ಟಣದಿಂದ ತೆಗೆದು ಕೊಂಡುಬಂದಿರುವ, ತೀರ್ಥವೂ ಇರುವುದರಿಂದ, ಇದನ್ನು ತೆಗೆದರೆ ವಸ್ತ್ರಗಳು ಕೆಡುತ್ತವೆಂದೂ, ಅದರಿಂದುಂಟಾಗುವ ನಷ್ಟಕ್ಕೆ ನೀನೇ ಗುರಿಯಾಗಬೇಕೆಂದೂ ಆ ಬಾಲಿಕಾಮಣಿಯು ಆತನನ್ನು ಗದರಿಸಿದುದರಿಂದ, ಆ ಖೋಜ ಸರದಾರನು ಹೇಗಾದರೂ ಆಗಲಿ, ತೆಗೆದುಕೊಂಡು ಹೋಗೆಂದುಬೇಗ ಸುಮ್ಮನಾದನು. ಆಗ ಪೆಟ್ಟಿಗೆಗಳೆಲ್ಲವೂ ಅಂತಃಪುರಕ್ಕೆ ತರಲ್ಪಟ್ಟವು. ಇಷ್ಟರಲ್ಲಿ ಖಲೀಫರು ಬಂದರೆಂಬ ವರ್ತಮಾನವನ್ನು ಕೇಳಿದೆನು. ಆಗ ನನಗೆ ಉಂಟಾದ ಭಯವು ಎಷ್ಟರದೋ ನನಗೆ ತಿಳಿಯದು. ಸ್ವಲ್ಪಹೊತ್ತಿಗೆ ಖಲೀಫರು ಬಂದೇಬಿಂದರು. ಪೆಟ್ಟಿಗೆಗಳನ್ನು ಇದರಲ್ಲಿರುವುದೇನು ಎಂದು ಕೇಳಲು, ಜನಾನಿಯವರಿಗೆ ಬೇಕಾದ ಉಡುಪುಗಳೆಂದು ಆಕೆ ಹೇಳಿದಳು.

ಇದರಲ್ಲಿರುವುದನ್ನು ನಾನುನೋಡಬೇಕು, ತೆರೆದು ತೋರಿಸೆಂದು ಕೇಳಿದರು. ಸ್ವಾಮಿ ! ಇದು ಸುಲ್ತಾನಿಯೆರಿಗೆ ಆವಶ್ಯಕವಾದ ಪದಾರ್ಥ ಆದುದರಿಂದ, ಅವರಿಗೆ ಮೊದಲು ತೋರಿಸದೆಹೋದರೆ, ಅವರು ಕೋಪಿಸಿಕೊಳ್ಳುವರು. ಆದುದರಿಂದ ನಾನು ತೆರೆಯಲಾರೆನೆಂದಳು. ಆಕೆಯು ಕೋಪಿಸಿಕೊಳ್ಳದಂತೆ, ನಾನು ನೋಡಿಕೊಳ್ಳುವೆನು, ಖಂಡಿತವಾಗಿಯೂ ಇದನ್ನು ನಾನು ನೋಡಬೇಕಾಗಿರುವುದು, ಆದುದರಿಂದ ತೆರೆದು ತೋರಿಸು ಎಂದು ಹೇಳಿದನು. ಆಗ ಬಾಲಿಕಾಮಣಿಯು, ಇನ್ನು ತೆರೆಯದಿದ್ದರೆ ಖಲೀಫರು ಬಿಡುವುದಿಲ್ಲವೆಂದು, ಇತರ ಸಾಮಾನುಪೆಟ್ಟಿಗೆಗಳನ್ನು ತೆರೆದು ಅವುಗಳಲ್ಲಿರುವ ಪದಾರ್ಥಗಳನ್ನು ತೋರಿಸಿ, ಕಾಲಹರಣ ಮಾಡುತ್ತಿದ್ದಳು. ಆದರೂ ಅವಳುಮಾಡಿದ ಉಪಾಯಗಳೆಲ್ಲವೂ ಅಸಾರ್ಥಕಗಳಾದವು. ಬಳಿಕ ನಾನಿರುವ ಪೆಟ್ಟಿಗೆಯನ್ನು ತೆರೆದಹೊರತು ನಾನಿಲ್ಲಿಂದ ಹೋಗುವುದಿಲ್ಲವೆಂದು, ಖಲೀಫರು ಹೇಳಿಬಿಟ್ಟರು. ಆಗ ನಾನು ಸತ್ತವನಂತಿದ್ದೆನೋ, ಬದುಕಿದವನಂತಿದ್ದೆನೋ, ನನಗೆ ತಿಳಿಯದು. ಈ ಆಪದವು ಹೇಗೆ ನಿವಾರಣೆ

ಆಗುವುದೋ, ಎಂದು ಚಿಂತಿಸುತ್ತಿದ್ದೆನು. ಎಂದು ಹೇಳಿ ಬೆಳಗಾದಕೂಡಲೆ ಕಥೆಯನ್ನು ನಿಲ್ಲಿಸಿ, ಷಹರಜೌದಿಯು ಮರುದಿನ ಬೆಳಗಿನ ಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೧೪೬ ನೆಯ ರಾತ್ರಿ ಕಥೆ.

ಷಹರಜೌದಿಯು ಸುಲ್ತಾನರನ್ನು ಕುರಿತು ಇಂತೆಂದಳು :— ಈತರದಿಂದ ಆ ಬಾಲಿಕಾಮಣಿಯು, ಎಲ್ಲಾ ಪೆಟ್ಟಿಗೆಗಳನ್ನು ತೆರೆದು ತೋರಿಸಿ, ಸ್ವಾಮಿ ! ನಿಮ್ಮ ಆಜ್ಞೆಯಂತೆ ಈ ಪೆಟ್ಟಿಗೆಗಳನ್ನೆಲ್ಲಾ ತೆರೆದು ತೋರಿಸಿದೆನು. ಆದರೆ ಈ ಪೆಟ್ಟಿಗೆಯೆಲ್ಲಿರುವ ಪದಾರ್ಥಗಳು ರಾಣಿಯವರದಾದುದರಿಂದ, ನಾನು ಖಂಡಿತವಾಗಿಯೂ, ತೆರೆಯಲಾರೆನು. ಕ್ಷಮಿಸಬೇಕೆಂದು, ಮುಖ್ಕರದಿಂದ ನುಡಿದಳು. ಹಾಗಾದರೆ ತೆಗೆದುಕೊಂಡು ಹೋಗು ಎಂದು ಕಲೀಫರು ಹೇಳಿದುದರಿಂದ, ನನಗೆ ಹೋಗಿದ್ದ ಪ್ರಾಣವು ಸ್ವಲ್ಪ ಕೂಡಿಕೊಂಡಿತು. ಅವರೆಲ್ಲರೂ ಹೊರಟುಹೋದಮೇಲೆ, ಬಾಗಿಲನ್ನು ತೆರೆದು, ನನ್ನನ್ನು ಹೊರಗೆ ಕರೆದು, ನಾನು ಬರುವವರೆಗೂ ನೀನು ಈ ಮನೆಯಲ್ಲಿರು ಎಂದು ಹೇಳಲು, ನಾನುಹೋಗಿ ನೋಡುವಲ್ಲಿ ಆ ಕೊಠಡಿಯು ಬೀಗಮುದ್ರಿತವಾಗಿದ್ದಿತು ಅಷ್ಟರಲ್ಲಿ ಕಲೀಫರು ವಿನೋದಾರ್ಥವಾಗಿ ನಡೆದುಬಂದು, ಆ ಪೆಟ್ಟಿಗೆಯಮೇಲೆ ಕುಳಿತುಕೊಂಡು, ಸ್ವಲ್ಪ ಹೊತ್ತು ಮಾತನಾಡುತ್ತಿದ್ದು ಹೊರಟುಹೋದರು.

ಬಳಿಕ ಯಾರೂ, ಇಲ್ಲಿರುವ ಕಾಲದಲ್ಲಿ, ಆಕೆ ನನ್ನಬಳಿಗೆಬಂದು, ನಿನಗೆ ಭಯೋತ್ಪಾತವನ್ನು ಹುಟ್ಟಿಸಿದುದಕ್ಕಾಗಿ, ನೀನು ನನ್ನನ್ನು ಕ್ಷಮಿಸಬೇಕು ; ನನಗೆ ನಿನ್ನಮೇಲೆ ಉಂಟಾದ ವ್ಯಾಮೋಹದಿಂದ, ನಾನು ಇಂತಹ ಸಾಹಸಕಾರ್ಯವನ್ನು ಮಾಡಿದೆನು. ಈ ಕಾರ್ಯವು ನನ್ನಿಂದಲ್ಲದೆ ಮತ್ತಾರಿಂದಲೂ ಸಾಧ್ಯವಾಗುತ್ತಿರಲಿಲ್ಲ. ಸಮಯೋಚಿತವಾದ ಬುದ್ಧಿಯೂ, ಸಾಹಸವೂ, ಧೈರ್ಯವೂ, ನನಗಿದ್ದುದರಿಂದಲೆ, ನಿನ್ನಮೇಲಣ ವ್ಯಾಮೋಹಾತುರದಿಂದ, ನಾನೆ ಹೀಗೆ ಮಾಡಿರುವೆನು. ನೀನು ಇನ್ನುಮೇಲೆ ಭಯಪಡತಕ್ಕ ಅಗತ್ಯವಿಲ್ಲ. ಧೈರ್ಯವಾಗಿರು, ಎಂದು ಪ್ರೀತಿಯಿಂದ ಮಾತನಾಡುತ್ತಿದ್ದು, ಇನ್ನು ನಾವು ಸುಖಕಯನದಲ್ಲಿ ಪವಡಿಸಬಹುದು. ನಾಳೆ ಇಷ್ಟುಹೊತ್ತಿಗೆ

ನಿನ್ನನ್ನು ಜೋಬದಿಯೆಬಳಿಗೆ ಕರೆದುಕೊಂಡು ಹೋಗುವೆನು. ಕಲೀಫರು ರಾತ್ರಿಕಾಲವಿನಹ ಹಗಲುಹೊತ್ತಿನಲ್ಲಿ ಅಂತಃಪುರಕ್ಕೆ ಬರುವದಿಲ್ಲವಾದುದರಿಂದ ನಾಳೆ ಹಗಲಿನಲ್ಲಿ ನಿನಗೆ ಜೋಬದಿಯೆ ದರ್ಶನವಾಡಿಸಲು, ಅನುಕೂಲವಾಗಿರುವುದು, ಎಂದು ಹೇಳಲು, ನಾನು ಧೈರ್ಯಯುಕ್ತನಾಗಿ ನಿದ್ರಿಸಿದೆನು. ನನಗೆ ಎಚ್ಚರವಾದಾಗಲಿಲ್ಲಾ ಎಂದಿಗೆ ನನ್ನ ಮೋಹನಾಂಗಿಯ ಸಂದರ್ಶನವಾಗುವುದೋ! ಎಂದು, ನೆನೆನೆನೆದು ಹಂಬಲಿಸುತ್ತಿದ್ದನು. ಮರುದಿನ ಬೆಳಗಿನಜಾವದಲ್ಲಿ ಆಕೆ ನನ್ನ ಬಳಿಗೆಬಂದು, ಜೋಬದಿಯಲ್ಲಿ ನಾನು ನಡೆದುಕೊಳ್ಳಬೇಕಾಗಿರುವ, ತೆರವನ್ನೂ, ಅವಳು ಕೇಳುವ ಪ್ರಶ್ನೆಗಳಿಗೆ ತಕ್ಕ ಸದುತ್ತರಗಳನ್ನು ಹೇಳಿಕೊಟ್ಟು, ವಿಚಿತ್ರಕರಗಳಾದ ರತ್ನಾಭರಣಗಳಿಂದ, ನನ್ನನ್ನು ಅಲಂಕರಿಸಿ, ಸುಂದರಾಲಂಕಾರಯುಕ್ತವಾದ, ಒಂದು ಅರಮನೆಯೊಳಕ್ಕೆ ನನ್ನನ್ನು ಕರೆದುಕೊಂಡುಹೋದಳು. ಅಲ್ಲಿ ನಾನು ಹೋಗುತ್ತಲೆ ಸ್ವಲ್ಪ ವಯಸ್ಸುಕಳೆದ ಇಪ್ಪತ್ತುಮಂದಿ ದಾದಿಯೆರು ಬಂದು, ಸಿಂಹಾಸನದಬಳಿಯಲ್ಲಿ ಎದುರಾಗಿ ನಿಂತುಕೊಂಡರು. ಬಳಿಕ ಇನ್ನೂ ಬಾಲ್ಯವಯಸ್ಕರಾದ, ಇಪ್ಪತ್ತುಮಂದಿ ದಾದಿಯೆರಿಂದ ಕೂಡಿ, ರಾಣಿಯಾದ ಜೋಬದಿಯು, ಬಂದು ಸಿಂಹಾಸನಾಸೀನಳಾಗಿ ಕುಳಿತುಕೊಂಡಳು. ಆಗ ಆಕೆಯ ಪ್ರೀತಿಗೆ ಪಾತ್ರಳಾದ, ಬಾಲಿಕಾಮಣಿಯು ಅವಳ ಬಳಿಯಲ್ಲಿ ನಿಂತುಕೊಳ್ಳಲು, ದಾದಿಯೆರೆಲ್ಲರೂ, ಸ್ವಲ್ಪದೂರದಲ್ಲಿ ನಿಂತುಕೊಂಡರು. ಆಗ ರಾಣಿಯು ನನ್ನನ್ನು ಬರುವಂತೆ ಆಜ್ಞಾಪಿಸಲು, ನಾನು ಆ ದಾಸೀಜನರ ಮಧ್ಯದಲ್ಲಿ ದೂರಿಹೋಗಿ, ಸಿಂಹಾಸನದಮುಂದೆ ಅಡ್ಡಬಿದ್ದೆನು. ಆಗ ಆಕೆ ಏಳಯ್ಯಾ! ಏಳು? ಹೆದರಬೇಡ. ನಿನ್ನಹೆಸರೇನು? ಕುಲವಾವುದು? ಜೀವನವೇತರಿಂದ? ಎಂಬ ಪ್ರಶ್ನೆ ಮಾಡಿದಳು.

ನಾನು ಹೇಳಿದ ಉತ್ತರಗಳಿಂದ ಆಕೆಗೆ ತೃಪ್ತಿಯುಂಟಾದುದರಿಂದ, ಆಕೆ ನನ್ನ ಮುಖವನ್ನುನೋಡಿ, ನೀನು ನನ್ನ ಆಶ್ರಿತಳಾದ ಈ ಬಾಲಿಕಾಮಣಿಗೆ ನೀನು, ಪ್ರೀತಿಪಾತ್ರನಾದವನೆಂದು ಹೇಳುವುದನ್ನು ಕೇಳಿ, ನನಗೆ ತುಂಬ ಸಂತೋಷವಾಯಿತು. ನೀವಿಬ್ಬರೂ ವಿವಾಹ ಮಾಡಿಕೊಳ್ಳುವುದು, ನಿಮಗಿಷ್ಟವಾಗಿಯೆ ಇರುವುದು. ಇದಕ್ಕೆ ತಕ್ಕ ಸಲಕರಣೆಗಳನ್ನು ಧನವನ್ನು ನಾನು ಸಹಾಯ ಮಾಡುವೆನು. ಆದರೆ ವಿವಾಹವು ನಡೆಯುವದಕ್ಕಿಂತ ಮುಂಚೆ, ಈಕೆ ನನ್ನಬಳಿಯಲ್ಲಿ ಹತ್ತುದಿನಗಳಿರಬೇಕು. ಬಳಿಕ ನಾನು

ಕಲೀಫರಿಂದ ಆಜ್ಞೆಯನ್ನುಪಡದು, ಸಹಾಯ ಮಾಡುವೆನು. ನೀನು ಅದುವರಿಗೂ ಇಲ್ಲಿ ಇರು. ನಿನ್ನನ್ನು ಚೆನ್ನಾಗಿ ಆದರಿಸುವರೆಂದು, ನುಡಿದಳು. ಅಷ್ಟರಲ್ಲಿ ಬೆಳಗಾದುದರಿಂದ ಕಥೆಯನ್ನುನಿಲ್ಲಿಸಿ, ಬೆಳಗಿನ ಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೧೪೭ ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು, ಇಂತೆಂದಳು :— ನಾನು ಅವಳ ಆಜ್ಞಾನುಸಾರವಾಗಿ ಅಂತಃಪುರದಲ್ಲಿ ಇದ್ದರೂ, ಬಾಲಿಕಾ ಮಣಿಯೆನ್ನು ಮಾತ್ರ ನೋಡಲಿ ಇಲ್ಲ. ಆದರೂ ನನಗೆ ನಡೆಯತಕ್ಕ ಉಪಚಾರಗಳೆಲ್ಲವೂ, ಚೆನ್ನಾಗಿಯೇ ನಡೆದವು. ಬಳಿಕ ಕಲೀಫರನ್ನುಕುರಿತು ಜೋಬದಿಯು ನನ್ನತಂಗಿಯಾದ ನಾಯಿಕಾಮಣಿಗೆ ವಿವಾಹ ಮಾಡಬೇಕೆಂದು, ಪ್ರಯತ್ನಪಟ್ಟರುವೆನೆಂದು ಹೇಳಿದಳು. ಸುಲ್ತಾನರು ನಿನ್ನ ಇಷ್ಟಾನುಸಾರವಾಗಿ ನಡೆಸಬಹುದೆಂದುಹೇಳಿದರು. ನಂತರ ಜೋಬದಿಯು, ವಿವಾಹನಿಬಂಧನೆಯನ್ನು ಬರೆಸಿ, ತರುವಂತೆ ಹೇಳಿದಳು. ಅದೂ ಆದಬಳಿಕ ಪಟ್ಟಣದಲ್ಲೂ, ಅರಮನೆಯಲ್ಲಿಯೂ, ಒಂಭತ್ತುದಿನಗಳವರಿಗೆ ಔತನಗಳು ನಡೆದವು. ಹತ್ತನೆದಿನ ಶುಭಮುಹೂರ್ತದಲ್ಲಿ, ವಧೂವರರಿಬ್ಬರಿಗೂ ಮಂಗಳಸ್ನಾನವನ್ನು ಮಾಡಿಸಿ, ಸಾಯಂಕಾಲವಾಗುತ್ತಲೆ, ವಿವಾಹಕಾರ್ಯವನ್ನು ನೆರವೇರಿಸುವುದಕ್ಕಾಗಿ, ಭೋಜನಕ್ಕಾಗಿ ನನ್ನನ್ನು ಬಂದು, ಮೇಜೆಯಾದಮುಂದೆ ಊಟಕ್ಕೆ ಕೂಡಿಸಿದರು.

ಆಗ ಇಗೋ ಈ ಬೆಳ್ಳುಳ್ಳಯ ಪಚ್ಚಡಿಯು, ತಟ್ಟೆಯಲ್ಲಿದ್ದುದರಿಂದ, ರುಚಿಕರವಾದ ಅದನ್ನು ನಾನು ಬಹು ಆತುರದಿಂದ ಹೆಚ್ಚಾಗಿಯೇ ತಿಂದೆನು. ಊಟವಾದಬಳಿಕ, ಕೈಯ್ಯನ್ನು ಚೆನ್ನಾಗಿ ತೊಳೆದುಕೊಳ್ಳುವುದನ್ನು ಮರೆತು, ಸುಮ್ಮನೆ ಒರಸಿಕೊಂಡೆನು. ನನ್ನ ಪುರುಷಾಯುಸ್ಸಿನಲ್ಲಿ ನಾನು ಅಜಾಗರೂಕನಾಗಿದ್ದುದು, ಅಕಾಲದಲ್ಲಿಯೆಯೊರತು ಮತ್ತಾವ ಕಾಲದಲ್ಲಿಯೂ ಇಲ್ಲ. ಆ ರಾತ್ರಿಯಲ್ಲಿ ನಾನಾವಿಧವಾದ, ದೀಪಗಳು ಹೊಳೆಯುತ್ತಿದ್ದುದರಿಂದ, ಹಗಲಿನಂತೆಯೆ ಇದ್ದಿತು. ಅರಮನೆಯೆಲ್ಲವೂ, ವಾದ್ಯಘೋಷದಿಂದ ತುಂಬಿಹೋಗಿತು. ನಂತರ ಪಧೂವರರನ್ನು ಶಾಸ್ತ್ರವಿಧಿಯಂತೆ ಏಳುಸಾರಿ ವಿಚಿತ್ರತರವಾಗಿ ಅಲಂಕರಿಸಿ, ದಾದಿಯರು ಪ್ರತ್ಯೇಕ

ವ್ಯತ್ಯೇಕವಾದ ಗದ್ದಿಗೆಗಳಲ್ಲಿ ಕೂರಿಸಿದರು. ಬಳಿಕ ಅವರೆಲ್ಲರೂ ಹೊರಟು ಹೋದಮೇಲೆ ನಾವುಗಳು ಮಂಚವನ್ನು ಹತ್ತಿದೆವು. ನಂತರ ಸರಸ ಸಲ್ಲಾಪಗಳನ್ನಾಡುತ್ತಾ, ನಾನು ಬಾಲಿಕಾಮಣಿಯನ್ನು ಆಲಿಂಗಿಸಿಕೊಳ್ಳುವುದಕ್ಕೆ ಹೋಗಲು, ಆಕೆ ಗಟ್ಟಿಯಾಗಿ ಕೂಗಿಕೊಂಡಳು. ನಾನು ದಿಗಿಲಿನಿಂದ ಹಾರಿಬಿದ್ದು, ಸ್ತಂಭೀಭೂತನಾಗಿ ನಿಂತುಕೊಂಡೆನು. ಬಳಿಕ ಆ ಧ್ವನಿಯನ್ನು ಕೇಳಿದಕೂಡಲೆ, ದಾದಿಯರು ಬಂದರು. ಏಕೆ ಹೀಗೆ ಕೂಗಿಕೊಂಡೆ, ಎಂದು ಕೇಳಲು, ಈ ನೀಚನನ್ನು ಹೊರಗೆನೂಕಿ ನನ್ನ ಕಣ್ಣಿಗೆ ಕಾಣದಂತೆಮಾಡಿ, ಎಂದಳು. ಪ್ರಿಯನಾಯಿಕಾ ! ನಾನೇನು ಅಪರಾಧ ಮಾಡಿದೆನೆಂದು ಕೇಳಿದೆನು. ಆಕೆ ಈ ನೀಚನು, ಬೆಳ್ಳುಳ್ಳಿಯನ್ನು ತಿಂದು ಕೈಯ್ಯನ್ನುಸಹ ತೊಳೆದುಕೊಳ್ಳದೆ, ಅಸಭ್ಯಭಾವದಿಂದ ನನ್ನನ್ನು ಪೀಡಿಸುತ್ತಿರುವನು. ಹೊರಗೆ ಹೋಬಿ, ಆಚೆಗೆ ನೂಕಿ, ಒಂದು ಹರಿತವಾದ ಕತ್ತಿಯನ್ನು ತೆಗೆದುಕೊಂಡು ಬಾ ! ಎಂದು ಹೇಳಲು, ಅವರೆಲ್ಲರೂ ನನ್ನನ್ನು ನೆಲಕ್ಕೆ ಕೆಡವಿ, ಕೆಲವರು, ಕಾಲುಗಳನ್ನೂ, ಮತ್ತೆಕೆಲವರು ಕೈಗಳನ್ನೂ, ಹಿಡಿದುಕೊಂಡರು. ಬಳಿಕ ಆ ನಾಯಿಕಾಮಣಿಯು, ನನ್ನನ್ನು ಖಾಜಿಬಳಿಗೆ ಕರೆದುಕೊಂಡುಹೋಗಿ, ಇವನು ಬೆಳ್ಳುಳ್ಳಿಯನ್ನು ತಿಂದ ದೋಷಕ್ಕಾಗಿ, ಇದನ್ನು ಮುಟ್ಟಿದ ಕೈಯ್ಯನ್ನು ಕೊಯ್ದು ಹಾಕಿಸಿ, ಎಂದು ಹೇಳಿದಳು. ಆಗ ನಾನು ಅಯ್ಯೋ ! ಆ ಬೆಳ್ಳುಳ್ಳಿಯ ಪಚ್ಚಡಿಯನ್ನು ತಿಂದುದಕ್ಕಾಗಿ, ನನ್ನನ್ನು ಹೀಗೆ ತೊಂದರೆಪಡಿಸಬಹುದೆ. ಇಂತಹ ಕ್ರೂರವಾದ ಆಜ್ಞೆಯನ್ನು ಹೇಗೆ ಸಹಿಸಲಿ ! ಈ ಹಾಳು ಪಚ್ಚಡಿಯನ್ನು ಮಾಡಿದವನು, ಹಾಳಾಗ, ತಂದವನು ಮಾಯವಾಗ, ಬಡಿಸಿದವನು ಮಟ್ಟವಾಗ. ನನಗೇಕೆ ಇಂಥಗತಿ ಬಂದಿತು ಎಂದುಕೊಂಡೆನು. ಇಂತೆಂದು ಹೇಳಿ, ಷಹರಜಾದಿಯು ಬೆಳಗಾದಕೂಡಲೆ, ಕಥೆಯನ್ನು ನಿಲ್ಲಿಸಿ, ಬೆಳಗಿನ ಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೧೪೪ನೆಯ ರಾತ್ರಿಯ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು ಇಂತೆಂದಳು :—

ಬಳಿಕ ನಾನು ಅನುಭವಿಸುತ್ತಿರುವ ತೊಂದರೆಯನ್ನು, ಕೊರಡೆಯ ಪೆಬ್ಬೆಗಳನ್ನುನೋಡಿ, ಅಲ್ಲಿದ್ದ ದಾದಿಯರು ಅಮ್ಮಾ ! ಇಂತಹ ಕ್ರೂರವಾದ ಶಿಕ್ಷೆಯನ್ನು ಈತನಿಗೆಮಾಡಿಸುವುದು ನಿನಗೆ ಯೋಗ್ಯವಾದುದಲ್ಲವಾದುದರಿಂದ

ದಯೆವಿಟ್ಟು ಈತನನ್ನು ಮನ್ನಿಸು. ಈತನಿಗೆ ಲೌಕಿಕವ್ಯಾಪಾರವನ್ನು ತಿಳಿಯೆಪಡಿಸಿ, ದುರ್ಮಾರ್ಗವನ್ನು ಹೋಗಲಾಡಿಸಿ, ಇನ್ನುಮೇಲೆ ಜಿಳ್ಳುಳ್ಳ ಯೆನ್ನು ತಿನ್ನದಂತೆ ನಾವು ತಿಳಿಯೆಹೇಳುವೆವು. ಅಮ್ಮಾ ! ನೀನು ದಯ ಮಾಡಿ ಭಗವತ್ಪ್ರತ್ಯರ್ಥವಾಗಿ, ಈತನಿಗೆ ಕೊಟ್ಟರುವ ಶಿಕ್ಷೆಯನ್ನು ಮನ್ನಿಸಿ, ಕಾಪಾಡಬೇಕೆಂದು, ಆಕೆಯ ಕಾಲುಮೇಲೆಬಿದ್ದು, ಕೈಗಳನ್ನು ಮುತ್ತಿಟ್ಟುಕೊಂಡರು, ಬೇಡಿಕೊಂಡರು. ಆದರೆ ಆಕೆಗೆ ಪ್ರತ್ಯುತ್ತರವನ್ನು ಹೇಳುವುದಕ್ಕೆ ಮನಸ್ಸುಬಾರದೆ, ತೃಪ್ತಿಯಿಲ್ಲದವಳಾಗಿ, ಅಲ್ಲಿಂದ ಹೊರಟುಹೋದಳು. ಬಳಿಕ ಅವರೆಲ್ಲರೂ, ಹೊರಟುಹೋದರು. ಹೀಗೆ ನಾನು ಹತ್ತುದಿನಗಳವರಿಗೂ, ನಾನು ಅಲ್ಲಿ ಇದ್ದರೂ ನನ್ನನ್ನು ಕೇಳತಕ್ಕವರೇ ಯಾರೂ ಇಲ್ಲವಾದರು. ಆದರೆ ಒಬ್ಬಾನೊಬ್ಬ ಮುದುಕಿಯು ಮಾತ್ರ ಆಗಾಗ್ಗೆ ಅನ್ನವನ್ನು ತಂದುಕೊಡುತ್ತ ನನ್ನನ್ನು ಆದರಿಸುತ್ತಿದ್ದಳು. ಒಂದಾನೊಂದುದಿನ ನಾನು ಆಕೆಯನ್ನು ಕುರಿತು, ಬಾಲಿಕಾಮಣಿಯು ಸ್ವಸ್ಥವಾಗಿರುವಳೇ ! ಎಂದು ಕೇಳಿದೆನು. ಅಯ್ಯೋ ! ನೀನು ತಂದ ವಿಷದವಾಸನೆಯಿಂದ ಆಕೆಗೆ ರೋಗ ಪ್ರಾಪ್ತವಾಗಿ, ಅದರಿಂದಲೇ ನರಳುತ್ತಿರುವಳು. ಆಹಾ ನೀನು, ಆ ಹಾಳು ಪಚ್ಚಡಿಯನ್ನು ತಿಂದು, ಏಕೆ ಕೈ ತೊಳೆದುಕೊಳ್ಳದೆಯೋದೆ ? ಎಂದು ಕೇಳಿದಳು.

ನಾನು ಇಷ್ಟೊಂದು ಸೂಕ್ಷ್ಮದೃಷ್ಟಿಯಿಂದ ಕಾಣಬರುತ್ತ ವೋಹನಾಂಗಿಯೆರಾಗಿದ್ದು, ಸ್ವಲ್ಪ ತಪ್ಪಿಗೆಲ್ಲ ಇಂತರವೇಲೆ ಈತೆರದಿಂದ ಕೋಪಿಸಿಕೊಳ್ಳಬಹುದೆ ? ಎಂದು ಯೋಚಿಸಿದೆನು. ಆ ಬಾಲಿಕಾಮಣಿಯು ನನ್ನಲ್ಲಿಂತಹ ಕ್ರೂರವಾದ ಶಿಕ್ಷೆಯನ್ನು ವಿಧಿಸಿದರೂ, ನನಗೆ ಬೇರೆ ಅವಳಲ್ಲಿ ಉಂಟಾದ ವೋಹವು ಎಂದಿಗೂ ಕಡಿಮೆಯಾಗಲಿಲ್ಲ. ಹೀಗಿರುವಲ್ಲಿ ಆ ಮುದುಕಿಯು ಒಂದಾನೊಂದುದಿನ ನನ್ನನ್ನುಕುರಿತು, ನಿನ್ನ ಹೆಂಡತಿಗೆ ಗುಣವಾಗಿರುವುದು. ನೀರನ್ನು ಹಾಕಿಕೊಂಡಳು. ಈದಿನ ನಿನ್ನಬಳಿಗೆ ಬರುವಳೆಂದು ಹೇಳಿ, ಆ ಬಾಲಿಕಾಮಣಿಯು ಅತ್ಯಂತ ಗುಣವಂತೆಯಾಗಿ ಇರುವಳಲ್ಲದೆ, ಜೋಬದಿಯೆ ಪ್ರೀತಿಗೆ ಪಾತ್ರಳಾಗಿರುವುದರಿಂದ, ನಮ್ಮಲ್ಲಿಯೂ ಆಕೆಗೆ ವಿಶ್ವಾಸ ಉಂಟು. ಆಕೆ ನಿನ್ನಬಳಿಗೆ ಬಂದಾಗ್ಗೆ ನಾನುಬಂದು ನಿನ್ನ ತಪ್ಪನ್ನು ಕ್ಷಮಿಸುವಂತೆ ಹೇಳಿ, ನಿನಗೊಳ್ಳೆಯದನ್ನೇ ಮಾಡುವೆನು,

ಎಂದು ಹೇಳಿದಳು. ಮರುದಿನ ಬೆಳಿಗ್ಗೆ ನನ್ನ ಹೆಂಡತಿ ನನ್ನಬಳಿಗೆ ಬಂದು, ನೀನು ಇಂತಹ ಅಪರಾಧವನ್ನು ಮಾಡಿದ್ದರೂ, ಮತ್ತೆ ನಿನ್ನ ಬಳಿಗೆ ಬಂದಿರುವೆನು ನೋಡು. ಆದರೆ ನೀನು ಬೆಳ್ಳುಳ್ಳಿಯನ್ನು ತಿಂದು ಕೈತೊಳೆದುಕೊಳ್ಳದೆ ಹೋದುದಕ್ಕಾಗಿ, ನಿನಗೆ ತಕ್ಕ ಶಿಕ್ಷೆಯನ್ನು ಮಾಡದೆ ನಾನೆಂದಿಗೂ ಬಿಡಲಾರೆನೆಂದು ಹೇಳಿ, ತನ್ನದಾದಿಯರನ್ನು ಕರೆಯಲು, ಅವರೆಲ್ಲರೂ ಬಂದು, ನನ್ನನ್ನು ಹಿಡಿದು ಕೈಕಾಲುಗಳನ್ನು ಕಟ್ಟಿ, ನೆಲದಮೇಲೆ ಕೆಡವಿದರು. ಆಗ ಆಕೆ ಕತ್ತಿಯನ್ನು ತೆಗೆದುಕೊಂಡು, ನನ್ನ ಹೆಬ್ಬೆಟ್ಟುಗಳನ್ನು ಕಾಲುಬೆರಳುಗಳನ್ನು ನಿರ್ದಯೆಯಿಂದ ಕೊಯಿದುಹಾಕಿದಳು. ಕೂಡಲೆ ದಾದಿಯೊಬ್ಬಳು ಔಧವನ್ನು ಹಾಕಿ ರಕ್ತವು ಸೋರದಂತೆ ನಿಲ್ಲಿಸಿದಳು. ಆದರೂ ನಾನು ಮೂರ್ಛೆ ಹೊಂದಿದೆನು. ಸ್ವಲ್ಪಹೊತ್ತಿನಲ್ಲಿ ಮೂರ್ಛೆ ತಿಳಿದೆದ್ದು, ನಾನು ನನ್ನಹೆಂಡತಿಯೆನ್ನುನೋಡಿ, ಇನ್ನುಮೇಲೆ ನಾನು ಬೆಳ್ಳುಳ್ಳಿಯನ್ನುತಿಂದರೆ, ವಿಳ್ಳೆಯೆಲೆಯಿಂದಲೂ, ಬೂದಿಯಿಂದಲೂ, ಸೋಪೆಂಬ ಸಾಬೂನಿನಿಂದಲೂ, ಒಟ್ಟಿಗೆ ನೂರಿಪ್ಪತ್ತುಸಾರಿ ತೊಳೆದುಕೊಳ್ಳುವೆನೆಂದು, ಹೇಳಿದೆನು. ಆಕೆಯು, ಆಗ ನನ್ನನ್ನುನೋಡಿ ಹಾಗಾದರೆ ಹಿಂದೆ ಕಳೆದುಹೋದುದನ್ನು ಮರೆತು, ನನ್ನಲ್ಲಿ ವಿಶ್ವಾಸದಿಂದ ವರ್ತಿಸತಕ್ಕ ಗಂಡನಾಗಿರೆಂದು ಹೇಳಿದಳು. ಆದಕಾರಣದಿಂದಲೆ, ನಾನು ಬೆಳ್ಳುಳ್ಳಿಯ ಪಚ್ಚಡಿಯೆನ್ನು ತಿನ್ನಲೊಲ್ಲೆನೆಂದು ಹೇಳಿದನು. ಅಷ್ಟರಲ್ಲಿ ಬೆಳಗಾದುದರಿಂದ, ಷಹರಜಾದಿಯು ಕಥೆಯನ್ನುನಿಲ್ಲಿಸಿ, ಬೆಳಗಿನ ಜಾವಗಲ್ಲಿ ಪುನಹ ಹೇಳಲಾರಂಭಿಸಿದಳು.

೧೪೯ ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು ಇಂತೆಂದಳು :— ನಾನು ಹಿಂದೆ ಹೇಳಿದಂತೆ ಆ ಸ್ತ್ರೀಯರು ಕಲೀಫರ ಔಷಧಶಾಲೆಯಿಂದ, ಉತ್ತಮವಾದ ಔಷಧಗಳನ್ನು ತಂದುಹಾಕಿದರು. ನಂತರ ಕೆಲವುದಿನಗಳಮೇಲೆ, ನನ್ನ ಗಾಯವು ವಾಸಿಯಾದಕೂಡಲೆ, ದಂಪತಿಗಳು ಅನ್ಯೋನ್ಯವಾಗಿರಲಾರಂಭಿಸಿದೆವು. ಆದರೆ ಮಹಾರಾಜನಮನೆಯಲ್ಲಿ ನಾನು ವಾಸಮಾಡಬೇಕಾಗಿರುವುದರಿಂದ, ಸ್ವತಂತ್ರವೆಂಬುದಿಲ್ಲದೆ, ನಾನು ಖಿನ್ನನಾಗಿ ಇರುತ್ತಿದ್ದೆನು. ಈ ವರ್ತಮಾನವನ್ನು ಬಾಲಿಕಾಮಣಿಯೊಡನೆ ಹೇಳಿದರೆ,

ಏನು ತೊಂದರೆಯುಂಟಾಗುವುದೊ, ಎಂದು ನಾನು ಹೇಳದಿದ್ದರೂ, ನನ್ನ ಮನೋಭಿಪ್ರಾಯವನ್ನು ಆಕೆ ತಿಳಿದುಕೊಂಡು, ತನ್ನ ಪ್ರಾಣನಾಯಕನಿಂದ, ತನಗಿರುವ ತೊಂದರೆಯೆನ್ನು ರಾಣಿಯೆಲ್ಲಿ ಅರಿಕೆಮಾಡಿ, ಅವರಿಂದ ಅಪ್ಪಣೆಯೆನ್ನು ಕೇಳಿ, ಪ್ರತ್ಯೇಕವಾದ ಒಂದು ಮನೆಯೆನ್ನು ಕಟ್ಟಿಸಿ, ನಗರ ವಾಸಿಗಳಾದ ಇತರ ಜನಗಳ ಜೊತೆಯೆಲ್ಲಿ ವಾಸಮಾಡುವಂತೆ, ಅವಳ ರಾಣಿಯಾದ ಜೋಬದಿಯಿಂದಾಜ್ಞೆಯೆನ್ನು ಹೊಂದಿ, ನನ್ನ ಖರ್ಚಿಗೋಸ್ಕರ ಎಂಭತ್ತುಸಾವಿರ ಸೆಕ್ವೆಸುಗಳನ್ನು ತಂದಿತ್ತ್ರು. ನಾನು ನಿರ್ಬಂಧವಿಲ್ಲದಂತೆ, ಸ್ವತಂತ್ರನಾಗಿ ವಾಸವಮಾಡುವಹಾಗೆ ಮಾಡಿಬಳು. ನನಗೆ ಮದುವೆಯಾದ ಒಂದುತಿಂಗಳಒಳಿಕ ನನ್ನ ಹೆಂಡತಿಯು ನನ್ನಒಳಿಗೆಬಂದು, ನಿನಗೆ ಅರಮನೆಯೆಲ್ಲಿ ವಾಸವಮಾಡಿಕೊಂಡಿರಲು. ಇಷ್ಟವಿಲ್ಲವೆಂಬ ಸಂಗತಿಯೆನ್ನು ನನಗೆ ನೀನು ತಿಳಿಯಹೇಳಲಿಲ್ಲ. ಆದರೂ ನಿನ್ನತಾತ್ಪರ್ಯವನ್ನು ಜೋಬದಿಗೆ ತಿಳಿಸಿ, ಅದರಂತೆ ನೆರವೇರಿಸಿರುವುದರಿಂದ ನೀನು, ಪಟ್ಟಣಮಧ್ಯದಲ್ಲಿ ಒಂದುಮನೆಯನ್ನು ಕೊಂಡುಕೊಳ್ಳುವುದಕ್ಕಾಗಿ, ಈ ಎಂಭತ್ತುಸಾವಿರ ಸೆಕ್ವೆಸುಗಳನ್ನು ನಿನಗೆಕೊಟ್ಟರುವೆನೆಂದುಹೇಳಿ,ಹಣವನ್ನುಕೊಟ್ಟಳು.

ಬಳಿಕ ನಾನು ಒಂದು ಸುಂದರವಾದ ಮನೆಯೆನ್ನು ಕೊಂಡು, ಅಂದವಾಗಿ ಅಲಂಕರಿಸಿಕೊಂಡು, ಹೆಂಡತಿಯೊಡನೆ ಗೌರವದಿಂದ ಸಂಸಾರ ಮಾಡಿಕೊಂಡಿದ್ದೆನು. ಒಂದು ಸಂವತ್ಸರವು ಕಳೆದಬಳಿಕ, ನನ್ನ ಹೆಂಡತಿಯು ದೇಹಾಲಸ್ಯದಿಂದ ಸತ್ತುಹೋದಳು. ಬಳಿಕ ಬೇರೆ ವಿವಾಹ ಮಾಡಿಕೊಂಡರೂ, ದೇಶಸಂಚಾರ ಮಾಡಬೇಕೆಂಬ ಆಸೆಯಿಂದ, ಸರಕುಗಳನ್ನು ತುಂಬಿಕೊಂಡು, ನಾನು ದೇಶವನ್ನು ಸುತ್ತಿಕೊಂಡು, ಈಗ ಇಲ್ಲಿಗೆ ಬಂದಿರುವೆನು ಎಂದು ಹೇಳಿದನು. ಕಥೆಯೆನ್ನು ಬಾಗದಾದು ಪಟ್ಟಣದ ವರ್ತಕನು ಭೋಜನಕಾಲದಲ್ಲಿ ಹೇಳಿದರೂ, ಬಹು ವಿಚಿತ್ರವಾಗಿಲ್ಲವೆ ? ಎಂದು ದಳಾಳಿಯು ಕಾಸುಗಾರು ರಾಜನನ್ನು ಕೇಳಿದಕೂಡಲೇ ಇದುಕೂಂಚ ವಿನೋದವಾದುದೇಹೊರತು, ಈ ಗೂನನ ಕಥೆಗಿಂತ ವಿಚಿತ್ರವಾದುದಲ್ಲವೆಂದು, ರಾಜನು ಹೇಳಿದನು. ನಂತರ ವೈದ್ಯನು ಸಿಂಹಾಸನದಬಳಿಗೆ ಬಂದು, ನಮಸ್ಕಾರ ಮಾಡಿ, ಆಯ್ಯಾ ! ಮಹಾರಾಜ ಈ ಕಥೆಗಳೆಲ್ಲಕ್ಕಿಂತಲೂ, ಅತ್ಯುತ್ತಮವಾದ ನನ್ನ ಕಥೆಯೆನ್ನು ಕೇಳೆಂದೆನು. ನೀನು ಹೇಳುವ

ಕಥೆಯು, ಅತ್ಯಾಶ್ಚರ್ಯಕರವಾಗಿಲ್ಲದಿದ್ದರೆ, ನಿನ್ನ ಪ್ರಾಣವೇ ಉಳಿಯುವುದಿಲ್ಲವೆಂದು, ರಾಜನು ಹೇಳಿದನು. ಅಷ್ಟರಲ್ಲಿ ಬೆಳಗಾದುದರಿಂದ ಕಥೆಯನ್ನು ಪೂರೈಸಿದ, ಷಹರಜಾದಿಯು, ಮರುದಿನ ಬೆಳಗಿನ ಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

ವೈದ್ಯನು ಹೇಳಿದ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು ಇಂತೆಂದು ಹೇಳಿದಳು. ನಾನು ಡಮಾಸ್ಕಸ್ ಪಟ್ಟಣದ ಒಬ್ಬಾಬ್ಬನೊಬ್ಬ ವೈದ್ಯನು. ಒಂದುದಿನ ಅರಮನೆಯಲ್ಲಿ ಯಾರಿಗೋ ಹಾಯಿಲೆಯಾದುದರಿಂದ, ರಾಜನಪ್ಪಣೆಯಂತೆ ಸೇವಕರು ನನ್ನನ್ನು ಅರಮನೆಗೆ ಕರೆದುಕೊಂಡು ಹೋದರು. ನಾನು ಅರಮನೆಯಲ್ಲಿ ರೋಗದಿಂದ ಖಿನ್ನನಾಗಿ ನರಳುತ್ತಿರುವ, ಒಬ್ಬ ರೋಗಿಯನ್ನು ನೋಡಿ, ಸಲಾಮು ಮಾಡಿದೆನು. ಆತನು ಪ್ರತಿಯಾಗಿ ನನಗೆ ಸಲಾಮು ಮಾಡದೆ, ಕಣ್ಣುಸನ್ನೆಯಿಂದ ಮರ್ಯಾದೆ ಮಾಡಿದನು. ನಂತರ ನಾನು ಆತನನ್ನು ನೋಡಿ, ಧಾತುಪರೀಕ್ಷೆಗಾಗಿ, ಕೈಯ್ಯನ್ನು ಕೊಡೆಂದು ಹೇಳಿದೆನು- ಆತನು, ಬಲಗೈಯ್ಯನ್ನು ಕೊಡದೆ ಎಡಗೈಯ್ಯನ್ನು ನೀಡಿದುದರಿಂದ, ಅನುವೇಕೆಯೆಂದು ತಿಳಿದು, ಧಾತುಪರೀಕ್ಷೆಯೆನ್ನು ಮಾಡಿದ ಬಳಿಕ, ಒಂದು ಕಾಗದವನ್ನು ಬರೆದುಕೊಟ್ಟು, ಅಲ್ಲಿಂದ ಹೊರಟುಬಂದೆನು. ನಾನು ಒಂಭತ್ತುದಿನಗಳವರಿಗೂ, ಹಾಗೆಯೆಹೋಗಿ ಔಷಧವನ್ನುಕೊಟ್ಟು, ಬರುತ್ತಿದ್ದೆನು. ಹತ್ತನೆಯದಿನದಲ್ಲಿ ಆತನಿಗೆ ಗುಣವಾದುದರಿಂದ ರಾಜನು ಸಂತೋಷಿಸಿ, ನನಗೆ ಬಹುಮಾನ ಮಾಡಿ, ರಾಜವೈದ್ಯಶಾಲೆಗೆ ಯಜಮಾನನನ್ನಾಗಿ ಮಾಡಿ, ಅತ್ಯಂತ ವಿಶ್ವಾಸದಿಂದ ನನ್ನನ್ನು ಕರೆಸಿಕೊಂಡು, ತನ್ನ ಜೊತೆಯಲ್ಲಿ ಭೋಜನ ಮಾಡುತ್ತಿದ್ದನು.

ಬಳಿಕ ಆ ರೋಗಿಯು ನನ್ನನ್ನು ಬಹು ಮರ್ಯಾದೆಯಿಂದನೋಡಿ, ತಾನು ಸ್ನಾನಮಾಡುವುದಕ್ಕಾಗಿ ನನ್ನನ್ನು ಕರೆದುಕೊಂಡುಹೋಗಲು, ಆತನಿಗೆ ಒಲಗೈ ಇಲ್ಲದಿರುವುದನ್ನುಕಂಡು, ಆಶ್ಚರ್ಯಯುಕ್ತನಾಗಿ, ಆಕೈಯ್ಯನ್ನು ಕೊಯ್ದುಹಾಕಿದುದರಿಂದಲೆ, ಜ್ವರಹೀಡಿತನಾಗಿದ್ದು ಬಳಿಕ ಗುಣ ಹೊಂದಿದನೆಂದು, ಊಹಿಸಿಕೊಂಡೆನು. ಆ ಹುಡುಗನು ಅಯ್ಯಾ!

ವೈದ್ಯಶಿಖಾಮಣಿಯೇ ! ನನಗೆ ಬಲಗೈ ಇಲ್ಲದಿರುವುದನ್ನು ನೀನು ಕೇಳಿ, ಆಶ್ಚರ್ಯವನ್ನು ವ್ಯಸನವನ್ನು ಹೊಂದಿದವನಾಗಿರುವೆ, ಎಂಬುದನ್ನು ನಾನು ತಿಳಿದುಕೊಂಡೆನು. ಅದಕ್ಕೆ ಕಾರಣವನ್ನು ಹೇಳುವೆನು ಕೇಳು ! ಅದನ್ನು ಕೇಳಿದರೆ, ನೀನು ಇನ್ನೂ ಆಶ್ಚರ್ಯವನ್ನು ಹೊಂದಬಹುದೆಂದು ಹೇಳಿದನು. ಬಳಿಕ ಸ್ನಾನವಾದಮೇಲೆ, ನಾವಿಬ್ಬರೂ ಊಟಮಾಡಿ ಸ್ವಲ್ಪಹೊತ್ತು ವಿನೋದವಾಗಿ ಮಾತನಾಡುತ್ತಿದ್ದಾಗ, ಆತನು ಅಯ್ಯಾ ! ಅರಮನೆಯಬಳಿಯಲ್ಲಿರುವ, ಉದ್ಯಾನವನವನ್ನು ನಾವು ಸೇರಿದರೆ ನಮಗೆ ಆರೋಗ್ಯಕರವಾದ, ಪೂಲಿಕೆಗಳೇನಾದರೂ, ದೊರಕುವುದೇ ಎಂದು ಕೇಳಿದನು. ಆತನು ಅಯ್ಯಾ ! ನೀನು ಎಲ್ಲಿಹೋದರೂ, ನಿನ್ನ ಆರೋಗ್ಯಕ್ಕೆ ಅನುಕೂಲವಾಗಿರುವುದೆಂದು ಹೇಳಲು, ಆತನು ಅಯ್ಯಾ ! ನೀನು ನನ್ನ ಸಂಗಡ ಉದ್ಯಾನವನಕ್ಕೆ ಬಂದರೆ, ನನ್ನ ಚರಿತ್ರೆಯನ್ನು ವಿಶದವಾಗಿ ತಿಳಿಯಪಡಿಸುವೆನೆನಲು, ನಾವಿಬ್ಬರೂ ಆ ಉದ್ಯಾನವನಕ್ಕೆ ಹೋಗಿ, ಅಲ್ಲಿನ ಸೊಬಗನ್ನು ನೋಡಿದನಂತರ ಒಂದಾನೊಂದು ಸ್ಥಲದಲ್ಲಿ ಕುಳಿತುಕೊಂಡು, ತನ್ನ ಕಥೆಯನ್ನು ಹೇಳಲಾರಂಭಿಸಿದನು. ನಾನು ಮಸೌಲಿನಗರದಲ್ಲಿರುವ ಬಬ್ಬಾನೊಬ್ಬ ದೊಡ್ಡಮನುಷ್ಯನ ಮಗನು. ಆತನಿಗೆ ಹತ್ತುಮಂದಿ ಅಣ್ಣತಮ್ಮಂದಿರಿರುವರು. ಆತನು ಸತ್ತಕೂಡಲೆ ಉಳಿದವರು ವಿವಾಹ ಮಾಡಿಕೊಂಡರು. ಆದರೆ ನನ್ನತಂದೆಗೆ ಹೊರತು ಮತ್ತಾರಿಗೂ ಸಂತಾನ ಉಂಟಾಗಲಿಲ್ಲ. ನಾನು ನನ್ನತಂದೆಗೊಬ್ಬನೆ ಮಗನಾದುದರಿಂದ, ಆತನು ನನ್ನನ್ನು ಒಹುಪ್ರೀತಿಯಿಂದ ಸಾಕಿ, ಚೆನ್ನಾಗಿ ವಿದ್ಯೆಯನ್ನು ಕಲಿಸಿದ್ದನು. ಇಂತೆಂದು ಹೇಳಿ, ಷಹರಜೌದಿಯು ಕಥೆಯನ್ನುನಿಲ್ಲಿಸಿ, ಬೆಳಗಿನ ಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೧೫೦ ನೆಯ ರಾತ್ರಿ ಕಥೆ.

ಷಹರಜೌದಿಯು ಸುಲ್ತಾರನ್ನು ಕುರಿತು, ಇಂತೆಂದಳು :— ಒಂದಾನೊಂದುದಿನ, ನಾನು ನನ್ನತಂದೆಯೊಡನೆಯೂ, ಚಿಕ್ಕಪ್ಪನೊಡನೆಯೂ, ದಮಾಸ್ಕಸ್, ಪಟ್ಟಣದ ಮುಖ್ಯವಾದ ಮಸೀತಿಗೆ ಹೋಗಿ, ಧ್ಯಾನವನ್ನು ಮಾಡಿಕೊಂಡಮೇಲೆ, ಜನರೆಲ್ಲರೂ ಗುಂಪುಕೂಡಿ, ಹಡಗಿನ ವ್ಯಾಪಾರದವಿಷಯದಲ್ಲಿ, ಬಹಳವಾಗಿ ಚರ್ಚೆ ಮಾಡುತ್ತಿದ್ದರು. ಅದರಲ್ಲಿ

ನಾನಾದೇಶದ ಸೊಗಸೂ, ಇತರ ಪಟ್ಟಣಗಳ ಸೌಭಾಗ್ಯವೂ, ಆಶ್ಚರ್ಯ ಕರಗಳಾದ ಸಂಗತಿಗಳೂ, ತಿಳಿಯಬರುತ್ತಿದ್ದವು. ಆಗ ನನ್ನ ಚಿಕ್ಕಪ್ಪನು, ಈಜಿಪ್ಟಿಗಿಂತ ಸುಂದರವಾದ ರಾಜ್ಯವೂ, ನೈಲು ನದಿಗಿಂತಲೂ, ಉತ್ತಮವಾದ ನದಿಯೂ, ಭೂಮಂಡಲದಲ್ಲಿ ಇಲ್ಲವೆಂದು, ದೇಶಸಂಚಾರ ಮಾಡಿದವರೆಲ್ಲರೂ ಹೇಳುವರೆಂದು ಅಲ್ಲಿನ ವರ್ತಮಾನಗಳನ್ನು ತಿಳಿಯುಹೇಳಿದನು. ಆ ವರ್ತಮಾನವನ್ನು ಕೇಳಿದಕೂಡಲೆ, ನಾನು ಅಲ್ಲಿಗೆಹೋಗಿ ನೋಡಬೇಕೆಂಬ ಕುತೂಹಲ ಉಳ್ಳವನಾದೆನು. ಬಾಗದಾದುಪಟ್ಟಣವು ಶ್ರೇಷ್ಠವಾದುದೆಂದೂ, ಟೈಗ್ರಿಸ್‌ನದಿಯಿಂದ ಶ್ರೇಷ್ಠವಾಗಿ ಇರುವುದೆಂದೂ, ಮುಸಲ್ಮಾನಮತಕ್ಕೆ ಮಾತೃಸ್ಥಾನವಾದುದೆಂದೂ, ನನ್ನ ಚಿಕ್ಕಪ್ಪನು, ಎಷ್ಟುಹೇಳಿದರೂ, ಅದು ನನ್ನವನಸ್ಸಿಗೆ ಬಾರಲೇಯಿಲ್ಲ. ಆಗ ನನ್ನ ಚಿಕ್ಕಪ್ಪಂದಿರಲ್ಲಿ ಮತೊಬ್ಬನು, ಈಜಿಪ್ಟ್‌ದೇಶವನ್ನು ನೋಡಿದವನು. ದೇಶದಲ್ಲಿರುವ ಸಮಸ್ತವಾದ ಆಶ್ಚರ್ಯಗಳನ್ನೂ ನೋಡುವುದಲ್ಲದೆ, ಆ ದೇಶವು ಸುವರ್ಣಭೂಯಿಷ್ಠವಾಗಿರುವುದರಿಂದ, ಅಲ್ಲಿನ ಪ್ರಜೆಗಳೆಲ್ಲರೂ, ಐಶ್ವರ್ಯಯುಕ್ತರಾಗಿ ಬಾಳುವರು. ಅಲ್ಲಿನ ಸ್ತ್ರೀಯರೆಲ್ಲರೂ ತಮ್ಮ ಸೌಂದರ್ಯದಿಂದಲೂ, ಗಣಾತಿಶಯದಿಂದಲೂ, ತಂತಮ್ಮ ಪುರುಷರನ್ನು ಮೋಹಿಸುತ್ತಿರುವರು. ಅಲ್ಲಿರುವ ನೈಲುನದಿಯಾದರೊ, ಎಲ್ಲಾ ನದಿಗಳಿಗಿಂತಲೂ ಉತ್ಕೃಷ್ಟವಾದುದರಿಂದ ಅದರನೀರಿನಿಂದಲೇ ಅತ್ಯುತ್ತಮವಾದ ಬೆಳೆಯನ್ನು ಹೇರಳವಾಗಿ ಮಾಡುತ್ತಾ, ಜನರು ಸುಖದಿಂದಿರುವರು.

ಆ ದೇಶದ ಒಬ್ಬಬ್ಬನೊಬ್ಬ ಕವಿಯು ಆ ರಾಜ್ಯವನ್ನುಬಿಟ್ಟು ಹೋಗುವಾಗ, ಈ ಮಾತುಗಳನ್ನಾಡಿದನು. ಈ ನೈಲುನದಿಯು ನಿಮಗೆ ಸಮಸ್ತ ಐಶ್ವರ್ಯಗಳನ್ನು ಉಂಟುಮಾಡುತ್ತದೆ. ಅದು ಬಹುಪಾತ್ರವಿಸ್ತಾರವಾಗಿ ಹರಿಯುತ್ತಿರುವುದು. ನಿಮ್ಮನ್ನು ನಾನು ತೊರೆದುಹೋಗಬೇಕಾಗಿರುವುದನ್ನುನೋಡಿ, ನನ್ನಕಣ್ಣಿನಲ್ಲಿ ಸುರಿಯುತ್ತಿರುವ ನೀರಿನಿಂದ, ನೈಲುನದಿಯು ಪ್ರವಾಹಕ್ಕಿಂತಲೂ, ಅಧಿಕವಾದ ಜಲವು ಇಗೋ ! ಹರಿದುಹೋಗುತ್ತಿರುವುದು, ಎಂದು ತನ್ನ ವ್ಯಾಸನವನ್ನು ತೋರ್ಪಡಿಸಿರುವನು. ಆಹಾ ! ಆ ನೈಲುನದಿಯ ಪ್ರಯೋಜನಕರವಾದ ಸೌಭಾಗ್ಯಗಳನ್ನು ನಾನು ಎಷ್ಟೆಂದು ಹೇಳಿದರೂ, ತೀರದು. ಪಕ್ಕದಲ್ಲಿರುವ ಭೂಮಿಯು

ಪಚ್ಚೆಯಂತೆ ಹಸುರಾಗಿರುವುದು. ಇರ್ಕಡೆಗಳಲ್ಲಿರುವ ವೃಕ್ಷಲತಾದಿಗಳು ಸುಗಂಧಯುಕ್ತವಾದ ಪರಿಮಳವಾಯುತನಗ್ನು ತಂದೊಡ್ಡುತ್ತಿರುವುದು. ಇಂತಹ ಸೊಬಗಿನಿಂದಿರುವ, ಆ ನದೀಪರ್ಯಂತದ ರಾಜ್ಯಕ್ಕೆ ಕೈರೋ ನಗರವು ರಾಜಧಾನಿಯಾಗಿ ಕನ್ನಡಿಯಂತೆ ಹೊಳೆಯುತ್ತಿರುವುದು. ಆ ಪಟ್ಟಣವಲ್ಲಿ ಅತ್ಯುತ್ತಮವಾದ ಕಟ್ಟಡಗಳೂ, ಮಸೀತಿಗಳೂ, ಗೋರಿಗಳೂ, ಇರುವುವು. ಅವುಗಳನ್ನು ವಿವರಿಸಿ ಹೇಳುವುದು ಯಾರಿಗೂ ಸಾಧ್ಯವಿಲ್ಲ. ಇಂತಹ ನಗರದಲ್ಲಿ ಉತ್ತಮಗುಣಾನ್ವಿತರಾದ, ಭೂಪಾಲರು ಧರ್ಮದಿಂದ ರಾಜ್ಯವಾಳುತ್ತಿರುವರು. ಆ ದೇಶದ ಸಮುದ್ರತೀರದಲ್ಲಿರುವ, ಅಲೆಗ್ಜಾಂಡ್ರಿಯಾನಗರದ ವೈಭವವನ್ನು, ವರ್ತಕರ ಮಹತ್ವವನ್ನೂ, ಹೇಳತೀರದು. ಅಲ್ಲಿನ ಅತ್ಯುತ್ತಮವಾದ ಸರಕುಗಳನ್ನು ಕೊಂಡುಕೊಳ್ಳುವುದಕ್ಕಾಗಿ, ಜನರು ತುಂಡತುಂಡಾಗಿ ಬರುತ್ತಿರುವರು. ನಾನು ಬಾಲ್ಯದಲ್ಲಿ ಅನೇಕ ಸಂವತ್ಸರಗಳವರಿಗೂ, ಆ ನಗರದಲ್ಲಿದ್ದುದರಿಂದ, ನನ್ನ ಆಯುಷ್ಕಾಲದಲ್ಲಿ ಅದು ಒಂದು ವಿಚಿತ್ರವಾದ ಸೌಖ್ಯಜೀವನವಾಗಿದ್ದಿತೆಂದು, ಸಹಜ ಭಾವದಿಂದ ಹೇಳುತ್ತಿರುವೆನು, ಎಂದು ಹೇಳಿದೆನೆಂದು, ಷಹರ ಭಾವದಿಂದ ಹೇಳುತ್ತಿರುವೆನು. ಎಂದು ಹೇಳಿದೆನೆಂದು, ಷಹರಜಾದಿ ನುಡಿದಕೂಡಲೆ, ಬೆಳಗಾದುದರಿಂದ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ, ಸುಲ್ತಾನರನ್ನು ಕುರಿತು, ಎಂದಿನಂತೆ ಹೇಳಲಾರಂಭಿಸಿದಳು.

೧೫೧ ನೆಯ ರಾತ್ರಿ ಕಥೆ.

ಮುಸೌಲಿ ಪಟ್ಟಣದ ಯುವಕನು, ವೈದ್ಯನನ್ನು ಕುರಿತು, ಹೀಗೆಂದು ಹೇಳಿದನು. ಹೀಗೆ ನನ್ನತಂದೆಯು ವಿವರಿಸಿಹೇಳಿದ, ಸಕಲವನ್ನು ಆಶ್ಚರ್ಯಯುಕ್ತರಾಗಿ ಕೇಳಿನುದಲ್ಲದೆ, ಮತ್ತಾವ ಪ್ರತ್ಯುತ್ತರವನ್ನೂ ಹೇಳಿಯೂ ಇಲ್ಲ. ಆದುದರಿಂದ ಅವರುಗಳು ಅದಕ್ಕೊಪ್ಪಿಕೊಂಡಂತೆಯೆ ಇದ್ದರು. ಆದುದರಿಂದ ಅವರೆಲ್ಲರೂ, ಈಜಿಪ್ಟ್‌ದೇಶಕ್ಕೆ ಹೊರಡಬೇಕೆಂದು, ಉದ್ಯುಕ್ತರಾದರು. ನಾನು ಅವರಸಂಗಡ ಬರುತ್ತೇನೆಂದು ಹೇಳಿದಕೂಡಲೆ, ಅವರು ಸಮ್ಮತಿಸಿ, ಬೇಕಾದ ಸರಕುಗಳೆಲ್ಲವನ್ನೂ ಸಿದ್ಧವಡಿಸಿಕೊಂಡು, ಹೊರಡಲುದ್ಯುಕ್ತರಾದರು. ಬಳಿಕ ನಾನು, ತಂದೆಯ ಬಳಿಗೆಬಂದು, ತಾತಾ ! ನಾನು ನಿನ್ನಸಂಗಡ ಈಜಿಪ್ಟ್‌ದೇಶಕ್ಕೆ ಬರುವೆನು.

ತಪ್ಪದೆ ನನ್ನನ್ನು ಕರೆದುಕೊಂಡುಹೋಗಿ, ವ್ಯಾಪಾರ ಮಾಡುವುದಕ್ಕೆ ಪ್ರಶಸ್ತವಾದ, ಪದಾರ್ಥಗಳನ್ನು ಕೊಡಬೇಕೆಂದು ಬೇಡಿಕೊಂಡೆನು. ಆಗ ನನ್ನತಂದೆಯು, ಅಯ್ಯಾ! ನೀನು ಇನ್ನೂ ಚಿಕ್ಕವನು. ಸಮುದ್ರದಲ್ಲಿ ಪ್ರಯಾಣಮಾಡುವುದು ಕಷ್ಟ. ಅಲ್ಲದೆ ದೂರದೇಶದಲ್ಲಿ ವಾಸಮಾಡುವುದರಿಂದ, ನಾನಾತೊಂದರೆಗಳನ್ನು ಅನುಭವಿಸಬೇಕಾಗುವುದು. ನೀನು ವ್ಯಾಪಾರಮಾಡುವುದರಿಂದ, ನಷ್ಟವೇಹೊರತು ಲಾಭವೆಂದಿಗೂ, ಅಲ್ಲ. ಎಂದು ಎಷ್ಟುವಿಧವಾಗಿ ಬೇಳಿದರೂ, ನಾನುಸಮ್ಮತಿಸದೆ, ನನ್ನಚಿಕ್ಕಪ್ಪನಿಂದ ಆತನಿಗೆ ಶಿಫಾರಸು ಪತ್ರವನ್ನು ಬರೆಯಿಸಿದೆನು. ಆಗ ಆತನು, ಅಯ್ಯಾ! ನಿನ್ನ ಕುಮಾರನು ದಮಾಸ್ಕಸ್‌ಪಟ್ಟಣದವರಿಗೂ ಬಂದು, ಅದನ್ನು ನೋಡಿಕೊಂಡು, ಹಿಂದಿರುಗಿ ಇಲ್ಲಿಗೆ ಬಂದನೆ, ಸಾಕೆಂದು ಹೇಳಲು, ನನಗೆ ಈಜಿಪ್ಟ್‌ರಾಜ್ಯವನ್ನು ನೋಡಬೇಕೆಂಬ, ಅಭಿಲಾಷೆಯುಂಟಾಗಿದ್ದರೂ, ತಂದೆಯಮಾತಿಗೆ ಕಟ್ಟುಬಿದ್ದು ಒಪ್ಪಿಕೊಂಡೆನು. ಬಳಿಕ ನಾನು ಮುಸೌಲಿ ಪಟ್ಟಣದಿಂದ ಹೊರಟು, ನಾನಾವಿಧವಾದ ವಿಚಿತ್ರಗಳನ್ನು ನೋಡುತ್ತಾ, ದಮಾಸ್ಕಸ್ ನಗರವನ್ನುನೋಡಿ, ಕೃತಾರ್ಥನಾದೆನು.

ಆ ಊರಿನಲ್ಲಿ ಬಹು ದೊಡ್ಡದಾದ ಮುಸಾಫರಖಾನೆಯಲ್ಲಿ ಇಳಿದುಕೊಂಡು, ಆ ಪಟ್ಟಣವನ್ನು ನೋಡುವುದಕ್ಕಾಗಿ, ರಮ್ಯವಾಗಿಯೂ, ಮನೋಹರವಾಗಿಯೂ, ಇರುವ ಅಲ್ಲಿನ ಕಟ್ಟಡಗಳನ್ನೂ, ನೇತಾರನಂದ ಕರವಾದ ಅರಮನೆಯೆನ್ನೂಸಹ ನೋಡಿ, ಆಶ್ಚರ್ಯಯುಕ್ತನಾದುದಲ್ಲದೆ, ಸಂತೋಷವನ್ನು ಹೊಂದಿದೆನು. ಆ ಪಟ್ಟಣದ ಉದ್ಯಾನವನವನ್ನು ನೋಡಿ, ಭೂಲೋಕದಲ್ಲಿರುವ, ಸಮಸ್ತವಾದ ಉದ್ಯಾನವನಗಳಲ್ಲಿಯೂ ಅತ್ಯುತ್ತಮವಾದ ಸೊಬಗನ್ನುನೋಡಿ, ದೇವಲೋಕದ ನಂದನವನವನ್ನು ಮೀರಿಸುತ್ತಿರುವುದೆಂದು, ನಾನು ಖಂಡಿತವಾಗಿ ತಿಳಿದುಕೊಂಡೆನು. ನಂತರ ನನ್ನಬಳಿಯೆಲ್ಲಿದ್ದ ಸರಕುಗಳನ್ನು ನೂರಕ್ಕೆ ಮೂರರಂತೆ ಲಾಭವನ್ನು ಸಂಪಾದಿಸಿ ಮಾರಿದೆನು. ಅದರಿಂದ ನನಗೆ ಅಧಿಕವಾದ ಲಾಭ ಉಂಟಾದುದರಿಂದ, ಬಹಳ ಹಣವನ್ನು ನಾನು ಸಂಪಾದನೆ ಮಾಡಿದೆನಲ್ಲಾ! ಎಂದು ಸಂತೋಷಯುಕ್ತನಾದೆನು. ಅಷ್ಟರಲ್ಲಿ ನನ್ನತಂದೆಯೂ, ಚಿಕ್ಕಪ್ಪಂದಿರೂ ಸಹ ತಂತಮ್ಮ ಹಡಗನ್ನೇರಿ ಮುಂದೆ ಪ್ರಯಾಣ ಮಾಡಿದರು. ಅವರು

ಹೊರಟುಹೋದಬಳಿಕ, ನಾನು ನನ್ನಋಣವನ್ನು ವೃಥಾ ದುರುಪಯೋಗ ಪಡಿಸದಂತೆ, ಆ ಹಣವನ್ನುಹಾಕಿ, ವಜ್ರ, ಕೆಂಪು, ಮುತ್ತು, ಸುವರ್ಣ ರೇಕು, ಬೆಳ್ಳಿ ಭಂಗಾರದ ತಗಡುಗಳನ್ನುತರಿಸಿ, ನಾನು ವಾಸವಾಡುವ ಮನೆಯನ್ನು ಬಹು ಮನೋಜ್ಞವಾಗಿಲ್ಲವಿದ್ದರೂ, ನನ್ನ ಗೌರವಕ್ಕೆ ತಕ್ಕಂತೆ ಅಲಂಕರಿಸಿದೆನು. ಆ ಮನೆಯು, ಮೊದಲು ಆ ಪಟ್ಟಣದಲ್ಲಿದ್ದ ಒಬ್ಬಾಬ್ಬನೊಬ್ಬ ದೊಡ್ಡಮನುಷ್ಯನಾ', ಅಲಲ್‌ಹಾಂ ಎಂಬವನದಾಗಿತ್ತು, ಅಂತಹ ರತ್ನಪರೀಕ್ಷಾವ್ಯಾಪಾರದವನ ಮನೆಯನ್ನು ಬಾಡಿಗೆಗೆತೆಗೆದುಕೊಂಡು, ಮನೋಹರವಾಗಿ ಅಲಂಕರಿಸಿ, ಅಲ್ಲಿನ ದೊಡ್ಡಮನುಷ್ಯರಿಗೆ ಔತನವಾಡಿಸುತ್ತಲೂ, ಸ್ನೇಹಿತರಿಗೆ ವಿನೋದವನ್ನುಂಟುಮಾಡುತ್ತಲೂ, ಬಹುತೆರನಾದ ಉತ್ಸಾಹದಿಂದ ನನ್ನತಂದೆಯೂ, ಚಿಕ್ಕಪ್ಪಂದಿರೂ, ಯಾವಾಗಬರುವರೋ ನೋಡಬೇಕೆಂದು, ಕುತೂಹಲಯುಕ್ತನಾಗಿ, ಸತ್ಸಂಗದಿಂದ ಕಾಲವನ್ನು ಕಳೆಯುತ್ತಿದ್ದೆನು. ಒಂದಾನೊಂದುದಿನ ನಾನು ತಂಗಾಳಿಯು ಅಲೆಯುತ್ತಿರುವ ಕಾಲದಲ್ಲಿ ಅದನ್ನು ಸೇವಿಸುವುದಕ್ಕಾಗಿ, ಬಾಗಿಲಲ್ಲಿ ಕುಳಿತುಕೊಂಡಿರುವಾಗ, ಒಬ್ಬಾಬ್ಬನೊಬ್ಬ ಸುಂದರೀಮಣಿಯು, ಉತ್ತಮ ಅಲಂಕಾರಭೂಷಿತೆಯೊಂಗಿ, ನನ್ನಬಳಿಗೆಬಂದು ನೀನು ಬಟ್ಟೆಗಳನ್ನ್ಯಾಪಾರ ಮಾಡತಕ್ಕವನೋ! ಎಂದು ಕೇಳುತ್ತಾ, ನನ್ನಮನೆಯೊಳಕ್ಕೆ ಹೋದಳು. ಇಂತೆಂದು ಹೇಳಿ, ಬೆಳಗಾದಕೂಡಲೆ, ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಿಗಿನ ಜಾವದಲ್ಲಿ ಪುನಹ ಇಂತೆಂದು ನುಡಿಯಲು ಪ್ರಾರಂಭಿಸಿದಳು.

೧೫೨ ನೆಯ ರಾತ್ರಿ ಕಥೆ.

ಬಳಿಕ ಆ ವೈದ್ಯನನ್ನುಕುರಿತು, ಬಾಲಕನು ಇಂತೆಂದನು:— ಆ ಕನ್ಯಾಮಣಿಯು ಮನೆಯೊಳಕ್ಕೆ ಹೋದಕೂಡಲೆ, ನಾನು ಬಾಗಿಲನ್ನು ಮುಚ್ಚಿಕೊಂಡು, ಬಳಿಹೊಕ್ಕು ಆಕೆಯನ್ನು ಕುಳಿತುಕೊಳ್ಳುವಂತೆಹೇಳಿ, ಅಯ್ಯೋ! ನಾನೇನುಮಾಡಲಿ! ನಿನಗೆ ಬೇಕಾದ ಉಡುಪುಗಳು ನನ್ನ ಬಳಯಲ್ಲಿದ್ದುವು, ಎನಲು, ನನಗೇನೂ ಉಡುಪುಗಳು ಅಗತ್ಯವಾಗಿಲ್ಲ. ಅದರೆ ನಿನ್ನಸಂಗಡ ಈದಿನ ಸಾಯಂಕಾಲವೆಲ್ಲ ವಿನೋದವಾಗಿ ಕಾಲವನ್ನು ಕಳೆಯಬೇಕೆಂದು ಬಂದಿರುವೆನು. ನನಗೆ ಸ್ವಲ್ಪ ಫಲಾಹಾರದ್ರವ್ಯಗಳು ಬೇಕಾಗಿದೆ, ಇದ್ದರೆ ಕೊಡು ಎಂದು ಕೇಳಿದಳು. ಬಳಿಕ ಚಾರಕರಮೂಲಕ

ಫಲಹಾರದ್ರವ್ಯಗಳನ್ನೂ, ದ್ರಾಕ್ಷಾರಸವನ್ನುತರಿಸಿ ವಿನೋದವಾಗಿ ಮಾತ ನಾಡುತ್ತಾ, ಭಕ್ಷಿಸುತ್ತಿದ್ದು, ನಂತರ ಆಕೆಯೊಡನೆ ಬಹು ಉತ್ಸಾಹಭರಿತ ನಾಗಿದ್ದುಕೊಂಡು, ರಾತ್ರಿಯನ್ನುಕಳೆದು ಬೆಳಗಾದಕೂಡಲೆ, ಆಕೆಗೆ ಹತ್ತುವೊಹರಿಗಳನ್ನು ಕೊಡುವುದಕ್ಕೆಹೋಗಲು, ನಾನು ನಿನ್ನಬಳಿಗೆ ಲಾಭಸಂಪಾದನೆಗಾಗಿ ಬಂದವಳಲ್ಲ. ನೀನು ನನಗೆ ಅವಮಾನಮಾಡಬೇಕೆಂದು ಇರುವೆಯೋ ? ಇಗೋ ನಾನು ಕೊಡುವ ಈ ಹತ್ತುವೊಹರಿಗಳನ್ನು ತೆಗೆದುಕೊ, ನಾಳೆದ್ದು ಸಾಯಂಕಾಲಕ್ಕೆ ನಾನು ಪುನಹ ನಿನ್ನ ಬಳಿಗೆ ಬರುವೆನು. ಈ ಹಣವನ್ನು ನೀನು ತೆಗೆದುಕೊಳ್ಳದೆಹೋದರೆ, ಮರಳಿ ನಿನ್ನಮುಖವನ್ನು ನೋಡಲಾರೆನೆಂದು ಹೇಳಿ, ಬಲಾತ್ಕಾರದಿಂದ ಹಣವನ್ನು ಕೈಗೆಕೊಟ್ಟು, ಹೊರಟುಹೋದಳು. ಮೂರುದಿನಗಳವರಿಗೂ ನಾನು ಆಕೆ ಯಾವಾಗಬರುವಳೊ, ಎಂದು ಕುತೂಹಲಯುಕ್ತನಾಗಿ, ಎದುರುನೋಡು ತ್ತಿರುವಲ್ಲಿ, ಆಕೆಯೂ ಬಂದಳು. ನಂತರ ಮೊದಲಿನಂತೆ ನಾನು ಅತ್ಯು ತ್ಸಾಹದಿಂದ ಆ ರಾತ್ರಿಯನ್ನು ಕಳೆದಬಳಿಕ, ಮರುದಿನ ಬಲಾತ್ಕಾರದಿಂದ ಹತ್ತುವೊಹರಿಗಳನ್ನು ನನ್ನಕೈಗೆ ಕೊಟ್ಟಳು.

ಮೂರನೇಸಾರಿ ಆಕೆ ನನ್ನಮನೆಗೆಬಂದಾಗ್ಗೆ ಸಾರಾಯಿಯೆನ್ನು ಕುಡಿದು, ಮಡವೇರಿ ಮೋಹಾವೇಶದಿಂದಿರುವಕಾಲದಲ್ಲಿ, ನನ್ನನ್ನುನೋಡಿ, ಪ್ರಾಣಕಾಂತ ! ನಾನು ಸುಂದರಾಂಗಿಯೊಂಗಿಯೂ, ಮೋಹದಕಣಿಯೂ ಗಿಯೂ, ಸುಖದಗಣಿಯಾಗಿಯೂ, ಇರುವೆನೆ ? ಅಥವಾ ಮತ್ತೆಹೇಗಿರು ವೆನು, ಹೇಳೆನಲು, ನಾನು ಮೋಹನಾಂಗಿ, ನೀನು ನನ್ನನ್ನು ಸ್ವಭಾವತಃ ಒಲಿದು ವರಿಸಿದುದರಿಂದ, ನಿನ್ನ ರೂಪರೇಖಾಲಾವಣ್ಯಗಳು ನನ್ನ ಮನಸ್ಸನ್ನು ಆಕರ್ಷಿಸಿಕೊಂಡಿರುವುವು. ಅಲ್ಲದೆ ನಾನು ಅನುಭವಿಸುವ ಹೆಂಡಿರುಗಳಿಗೆಲ್ಲ ನೀನೆ ರಾಣಿ. ನನ್ನಮನಸ್ಸಾದರೊ, ನಿನ್ನನ್ನುಹೊರತು ಮತ್ತೊರನ್ನೂ ಚಿಂತಿಸದು, ಎಂದೆನು. ಆಗ ಆಕೆ ಮೋಹನಾಂಗ ನನಗಿಂತಲೂ, ಅಧಿಕ ಸೌಂದರ್ಯಯುಕ್ತಳಾಗಿಯೂ, ಯೌವ್ವನವತಿಯಾಗಿಯೂ, ಇರುವ ಮತ್ತೊಬ್ಬ ಸ್ತ್ರೀಯಳಿರುವಳು ಅವಳನ್ನು ನೋಡಿದರೆ ನೀನೆಂದಿಗೂ ನನ್ನನ್ನು ಹೀಗೆ ಹೊಗಳಲಾರೆ. ನಾನು ಆ ನನ್ನ ಸಖಿಯೊಡನೆ ನಿನ್ನ ಗುಣಾತಿಶಯಗಳನ್ನು ಹೇಳಿದುದರಿಂದ, ಆಕೆಯು ಮೋಹಯುಕ್ತಳಾಗಿ

ನನ್ನನ್ನು ಆತನಬಳಿಗೆ ಕರೆದುಕೊಂಡುಹೋಗೆಂದು ಪೀಡಿಸುತ್ತಿರುವಳು. ನಾಳೆ ಆಕೆಯನ್ನು ನಿನ್ನಬಳಿಗೆ ಕರೆದುಕೊಂಡುಬರುವೆನು. ಆದರೆ ಮೊದಲು ನಿನಗೆ ತಿಳಿಸಬೇಕಾದುದರಿಂದ ಹೀಗೆ ಹೇಳಿರುವೆನೆನಲು, ನಾನು ಪ್ರಿಯೇ ! ನಿನ್ನಿಷ್ಟಾನುಸಾರವಾಗಿ ಮಾಡಬಹುದು. ನನ್ನ ಪ್ರಾಣಕಾಂತೆಯಾದ, ನೀನು ನನ್ನನ್ನು ಮೋಹದಿಂದ ಪರಿಸಿರುವುದರಿಂದ, ನಮ್ಮಿಗಳ ಮೋಹಕ್ಕೆಂದಿಗೂ, ಕೊರತೆಬಾರದೆಂದು, ನಾನು ದೃಢವಾಗಿ ಹೇಳುವೆನು. ಆದರೆ ನಾನೆಂದಿಗೂ, ನಿನ್ನ ಇಷ್ಟವನ್ನು ವಿಾರಿ ನಡೆಯತಕ್ಕವನಲ್ಲವೆಂದೆನು. ಆಗ ಮೋಹನೆಯು, ಹುಸಿನಗೆಯನ್ನುಬೀರುತ್ತ, ನಿನ್ನಹೃದಯವನ್ನು ಪರೀಕ್ಷಿಸಬೇಕೆಂದು ಹೀಗೆನಾಡಿದೆನೆಂದು ಹೇಳಿದಳು. ಹೀಗೆ ನಾವು ರಾತ್ರಿಯೆಲ್ಲಾ ವಿನೋದವಾಗಿ ಮಾತನಾಡುತ್ತ, ಉತ್ಸಾಹಯುಕ್ತರಾಗಿದ್ದೆವು. ಬೆಳಗಾದಕೂಡಲೆ ಆಕೆ ಹದಿನೆಂಟುಮೊಹರಿಗಳನ್ನು ನನ್ನಕೈಗೆ ಕೊಟ್ಟು, ನಾಳೆದ್ದು ಸಾಯಂಕಾಲ ಎಂದಿನಂತೆ ನಾನು ಆ ಸುಂದರಿಯನ್ನು ಕರೆದು ಕೊಂಡು ಬರುವೆನು. ನೀನು ಅವಳನ್ನು ಬಹು ಗೌರವದಿಂದ ಬರಮಾಡಿಕೊಳ್ಳಬೇಕೆಂದು ಹೇಳಿ, ಹೊರಟುಹೋದಳು. ಆದುದರಿಂದ ನಾನು ಮನೆಯನ್ನು ಮನೋಜ್ಞವಾಗಿ ಅಲಂಕರಿಸಿ, ಉತ್ತಮವಾದ ಹಾರ ತುರಾಯಿಗಳನ್ನು ಸಿದ್ಧಪಡಿಸಿಕೊಂಡಿದ್ದೆನು. ಎಂದು ಹೇಳಿ ಪಹರಜಾದಿ ಕಥೆಯನ್ನುನಿಲ್ಲಿಸಿ, ಮರುದಿನ ಬೆಳಿಗಿನ ಜಾವದಲ್ಲಿ ಹೇಳಲಾರಂಭಿಸಿದಳು.

೧೫೩ನೆಯ ರಾತ್ರಿ ಕಥೆ.

ಆ ವರ್ತಕನು ವೈದ್ಯನನ್ನುಕುರಿತು ಇಂತೆಂದು ಹೇಳಿದನು. ಬಳಿಕ ನಾನು ಆ ಸ್ತ್ರೀಯರು ಬರುವುದನ್ನೆ ಎದುರುನೋಡುತ್ತಾ ಕಾದುಕೊಂಡು ಇದ್ದೆನು. ಕ್ಲಿಪ್ತಕಾಲಕ್ಕೆ ಸರಿಯಾಗಿ ಆ ಮೋಹನಾಂಗಿಯು ತನ್ನ ಸಖಿಯನ್ನು ಸಂಗಡ ಕರೆದುಕೊಂಡುಬಂದಳು. ಅವರು ಮನೆಗೆ ಬಂದ ಕೂಡಲೆ ಮುಸುಕನ್ನು ತೆರೆಯಲು ಹೊಸದಾಗಿಬಂದ ನವಯೌವನಾಂಗಿಯ ಮುಖವನ್ನು ನೋಡಿದಕೂಡಲೆ, ನನಗೆ ಮೋಹೋದ್ರೇಕವುಂಟಾಗಿ ಆಕೆಯ ಲಾವಣ್ಯವಿಂಥಾದ್ದೆಂದು, ನಾನು ತಿಳಿದುಕೊಳ್ಳಲಾರದೆ, ರೆಪ್ಪೆಯೆನ್ನುಹಾಕದೆ, ಮಿಟಿಮಿಟನೆ ನೋಡುತ್ತಿದ್ದೆನು. ವಿಶಾಲವಾದ ಆಕೆಯ ನೇತ್ರಯುಗ್ಮವು, ನಜ್ಜದಬಟ್ಟಲಿನಂತೆ ಹೊಳೆಯುತ್ತಿದ್ದಿತು. ನೆಟ್ಟನೋಟವು ಹಿಂದಿರುಗದಂತೆ

ಆಕೆಯನ್ನು ವೀಕ್ಷಿಸಿದಂತೆ ನೋಡುತ್ತಿದ್ದೆನು. ಆಕೆಯು ಥಳಥಳಿಪ ಲಾವಣ್ಯ ದಿಂದ ಕೂಡಿದಂಥಾ, ತಳಕುಬಳಕು ಮಾತುಗಳನ್ನುಕೇಳಿ, ಅತ್ಯಾಶ್ಚರ್ಯ ಯುಕ್ತನಾಗಿ, ನಾನುಮಾಡಿದ ಉಪಚಾರಗಳಲ್ಲಿ ಏನಾದರೂ ಕುಂದುಕೊರತೆ ಗಳಿದ್ದರೆ, ಅದನ್ನು ಕ್ಷಮಿಸಬೇಕೆಂದು ಬೇಡಿಕೊಂಡೆನು. ಆಗ ಆ ನವೀನ ಯುವತಿಯು ನನ್ನನ್ನುನೋಡಿ, ಈ ನಿನ್ನ ಉಪಚಾರದಮಾತುಗಳನ್ನು ಕೇಳುವುದಕ್ಕಾಗಿ, ನಾನು ಬರಲಿಲ್ಲ. ಆದರೆ ನನ್ನ ಬಿನ್ನಹವನ್ನುಲಾಲಿಸಿ, ನೀನು ನನ್ನನ್ನು ಇಲ್ಲಿಗೆ ಬರಮಾಡಿಕೊಂಡುದಕ್ಕಾಗಿ, ನಾನು ನಿನಗೆ ವಂದನೆ ಗಳನ್ನು ಆಚರಿಸುವೆನು. ಇನ್ನು ಈ ಮಾತುಗಳನ್ನು ತೊರೆದು, ಉತ್ಸಾಹ ದಿಂದ ಕಾಲವನ್ನು ಕಳೆವಂತೆ, ನಮ್ಮನ್ನು ನಿಯೋಗಿಸು, ಏನಲು ನಾನು ಆಹಾರಪದಾರ್ಥಗಳನ್ನು ತರಿಸಿದೆನು. ಕೂಡಲೆ ನಾವು ಮೂವ್ವರು ಒಂದು ಕಡೆಯಲ್ಲಿ ಕುಳಿತು ಸರಸಸಲ್ಲಾಪಗಳಿಂದ ಮಾತನಾಡುತ್ತಾ, ಊಟಮಾಡಿ ದೆವು. ಬಳಿಕ ನಾನು ಆಕಡೆ ಎದುರಾಗಿ ಕುಳಿತುಕೊಂಡಿದ್ದುದರಿಂದ, ಅವಳ, ಹುಸಿನಗೆಯಿಂದ ನನ್ನಮುಖವನ್ನು ನೋಡಲಾರಂಭಿಸಿದಳು. ಅದರಿಂದ ಬಲಾತ್ಕಾರವಾಗಿ ಆಕೆಯಬಳಿಗೆ ಹೊರಟುಹೋದ, ಮನಸ್ಸನ್ನು ನಾನು ಪುನಹ ಹಿಂದಿರುಗಿಸಲಾರದೆ ಹೋದೆನು. ನನ್ನಂತೆ ಆಕೆಯು ವ್ಯೋಹ ಯುಕ್ತಳಾಗಿ, ನನ್ನನ್ನೇ ನೋಡುತ್ತಿದ್ದರೂ ವಿನೋದಕರವಾದ ಮಾತು ಗಳನ್ನು ಧಾರಾಳವಾಗಿ ಆಡುತ್ತಿದ್ದಳು.

ಹೀಗೆ ನಾವಿಬ್ಬರೂ, ನೋಡುತ್ತಿರುವಾಗ, ಮತ್ತೊಬ್ಬಳು, ಏನನ್ನೂ ಹೇಳದೆ, ಸುಮ್ಮನೆ ನಕ್ಕು ನನ್ನಸಖಿಯು ಬಹು ರೂಪವತಿ ಯೆಂದು, ನಾನು ನಿನ್ನಸಂಗಡ ಹೇಳಿದೆನಲ್ಲವೆ. ಅದರಿಂದ ನನ್ನಮೇಲಿನ ವ್ಯೋಹವು ಕಡಿಮೆಯಾಗುವುದೆಂದು, ನಾನು ಹೇಳಿದಂತೆ ನೀನು ಮಾಡಿದೆ ಯೆಲ್ಲಾ ! ಏನಲು ಆದಕ್ಕೆ ನಾನು ನೀನು ಮೊದಲೆ ಹೇಳಿದ್ದಂತೆ, ಗೌರವ ದಿಂದ ಬರಮಾಡಿಕೊಳ್ಳದೆಹೋದರೆ, ನಿಮ್ಮಿಬ್ಬರಿಗೂ ಕೋಪಬರುವುದಲ್ಲಾ ! ಎಂದೆನು. ಹೀಗಿರುವಲ್ಲಿ ದ್ರಾಕ್ಷಾರಸದಿಂದುಂಟಾದುದ್ರೇಕದಿಂದ, ನವೀನ ಯುವತಿಯೂ ನಾನು, ನಮ್ಮಗಳ ವ್ಯೋಹವನ್ನು ಹೊರಪಡಿಸಿದೆವು. ಆಗ ಮತ್ತೊಬ್ಬಳು ಅಸೂಯೆಪಟ್ಟು ನಮ್ಮಗಳಮೇಲೆ ಬಹಳವಾಗಿ ಕೋಪಿಸಿ ಕೊಂಡು, ನಾನು ಪುನಹ ಬರುವೆನೆಂದು ಹೊರಕ್ಕೆ ಹೋದಳು. ಕೂಡಲೆ

ಹೊಸಬಳು, ವಿಲವಿಲನೆ ಬಿದ್ದಾಡಲು ಆರಂಭಿಸಲು, ನಾನು ಹಿಡಿದು ಕೊಂಡು ಉಪಚರಿಸುತ್ತಿರುವಾಗ, ನನ್ನ ಕೈಯ್ಯವೇಲೆ ಪ್ರಾಣವನ್ನು ಬಿಟ್ಟಳು. ಆಗ ನಾನು ಹೊರಗೆಬಂದು, ಮತ್ತೊಬ್ಬಳಿಲ್ಲಿಹೋದಳೆಂದು ಕೇಳಿಲು, ಆಕೆ ಬಾಗಿಲನ್ನು ತೆರೆದುಕೊಂಡು ಹೋದಳೆಂದು, ಚಾರಕರು ಹೇಳಿದರು. ಆಗ ನಾನು, ಈ ನನ್ನ ಪ್ರಾಣಕಾಂತೆಯು ನವೀನಯುವತಿಯ ಮರಣಕ್ಕೆ ಕಾರಣಳೆಂದೂಹಿಸಿದೆನು. ಅದು ನಿಜವೇ ಸರಿ. ಏಕಂದರೆ :— ಸಾರಾಯಿಯಲ್ಲಿ ವಿಷಬೆರಸಿ ಆಕೆಗೆ ನನ್ನವೋಹನಾಂಗಿಯು ಕೊಟ್ಟಿದ್ದಳು. ಬಳಿಕ ನಾನು ಅತ್ಯಂತ ವ್ಯಸನಾಕ್ರಾಂತನಾಗಿ, ಇದನ್ನು ಹೇಗೆ ತಪ್ಪಿಸಿ ಕೊಳ್ಳಬೇಕೆಂದು ಆ ಮನೆಯ ಬಂದಾನೊಂದುಕಡೆಯಲ್ಲಿ, ನನ್ನ ಸೇವಕರಿಂದ ಆ ಹೆಣವನ್ನು ಹೂಳಿಸಿ, ನನ್ನ ಸಾಮಾನುಗಳನ್ನು ಹಣವನ್ನು ತೆಗೆದು ಕೊಂಡು, ಮನೆಗೆ ಬೀಗವನ್ನು ಹಾಕಿ, ಯಜಮಾನನಬಳಿಗೆ ಹೋಗಿ, ಬೀಗ ನನ್ನು ಬಾಕಿ ಇದ್ದ ಬಾಡಿಗೆಯನ್ನು ಸಲ್ಲಿಸಿ, ನಮ್ಮ ತಂದೆಯಬಳಿಯಲ್ಲಿ ಅಗತ್ಯವಾಗಿ ನಾನು ಮಾಡಬೇಕಾಗಿರುವ, ಕೆಲಸಗಳಿರುವುದರಿಂದ ಕೆಲವು ದಿನಗಳವರಿಗೆ ಕೈರೋನಗರಕ್ಕೆ ಹೋಗಿಬರುವೆನೆಂದು ಹೇಳಿ, ಆಳುಗಳನ್ನು ಕರೆದುಕೊಂಡು ಹೊರಟೆನು ಎಂದು ಹೇಳಿ ಷಹರಜಾದಿಯು ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನಜಾವದಲ್ಲಿ ಮರಳಿ ಹೇಳತೊಡಗಿದಳು.

೧೫೪ನೆಯ ರಾತ್ರಿ ಕಥೆ.

ಮಸ್ರೂರಿ ವರ್ತಕನು ವೈದ್ಯನನ್ನು ಕುರಿತು, ಇಂತೆಂದನು :— ಬಳಿಕ ನಾನು ವೇಗವಾಗಿ ಪ್ರಯಾಣಮಾಡಿ, ಕೈರೋ, ನಗರವನ್ನು ಸೇರಿ, ನನ್ನ ಚಿಕ್ಕಪ್ಪಂದಿರನ್ನು ಕಂಡೆನು. ಅವರು ಅತ್ಯಾಶ್ಚರ್ಯಯುಕ್ತರಾಗಲು, ಅಯ್ಯಾ! ನಿಮ್ಮನ್ನು ಇದುವರಿಗೂ, ಎದುರುನೋಡುತ್ತಾ ಇದ್ದೆನು. ಆದರೂ, ನೀವುಗಳಾರೂ ಬರಬೇಕೆಂಬುದರಿಂದ, ನಾನು ನಿಮ್ಮಗಳನ್ನು ನೋಡಬೇಕೆಂಬುವ ಕುತೂಹಲದಿಂದ, ಹೊರಟುಬಂದೆನೆಂದು ಹೇಳಿದೆನು. ಆಗ ಅವರು ನನ್ನನ್ನು ಅತಿವಿಶ್ವಾಸದಿಂದ ಬರಮಾಡಿಕೊಂಡು, ತಾವಿಳಿದಿರುವ ಮುಸಾಫರಖಾನೆಯಲ್ಲಿ ಇಳಿಸಿಕೊಂಡು ತನ್ನ ಮಾತನ್ನು ಮೀರಿಬಂದನಲ್ಲವೆ! ಎಂದು ಕೋಪಿಸಿಕೊಂಡ ನನ್ನ ತಂದೆಗೆ ಸಮಾಧಾನ ಹೇಳಿ, ಪೋಷಿಸುತ್ತಿದ್ದರು. ನಾನು ಬಳಿಕ ಆ ಕೈರೋನಗರದಲ್ಲಿರುವ ಆಶ್ಚರ್ಯಕರವಾದ

ವಿನೋದಗಳನ್ನೆಲ್ಲಾ ನೋಡುತ್ತಾ ಕಾಲವನ್ನು ಸಂತೋಷದಿಂದ ಕಳೆಯುತ್ತಿದ್ದೆನು. ಬಳಿಕ ಅವರೆಲ್ಲರೂ ತಮ್ಮ ವ್ಯಾಪಾರವನ್ನು ತೀರಿಸಿಕೊಂಡು ನಮ್ಮ ಊರಿಗೆ ಹೊರಡಲು ಸಿದ್ಧವಾದರು. ಆಗ ನಾನು ಕೈರೋನಗರವನ್ನು ಮತ್ತೊಂದುಸಾರಿ ನೋಡಬೇಕೆಂಬಾಸೆಯಿಂದ, ಅವರಿಗೆ ಮರೆಯಾಗಿ ಇದ್ದೆನು. ಅವರು ನನ್ನನ್ನು ಕಾಣದೆ, ಅವನು ತಂದೆಯಾಜ್ಞೆಯನ್ನು ವಿಾರಿ ಇಲ್ಲಿಗೆಬಂದ ಭಯದಿಂದ, ತಿರುಗಿ ದಮಾಸ್ಕಸ್‌ನಗರಕ್ಕೆ ಹೋಗಿರಬಹುದು. ನಾವೆ ಅಲ್ಲಿಗೆ ಹೋಗಿ, ಆತನನ್ನು ಕರೆದುಕೊಂಡು ಹೋಗೋಣವೆಂದು ತಿಳಿದು, ನನ್ನನ್ನು ಬಿಟ್ಟು ಹೊರಟುಹೋದರು. ಅವರು ಹೊರಟು ಹೋದಬಳಿಕ, ನಾನು ಮೂರುವರ್ಷಗಳವರಿಗೂ, ಕೈರೋನಗರದಲ್ಲಿದ್ದುಕೊಂಡು, ದಮಾಸ್ಕಸ್‌ನಗರದ ರತ್ನಪಡಿನ್ಯಾಪಾರದ ವರ್ತಕನಿಗೆ, ನನ್ನ ಮನೆಯನ್ನು ಹಾಗೆ ಇಟ್ಟಿರುವಂತೆ ಬಾಡಿಗೆಯನ್ನು ಕಳುಹಿಸುತ್ತಾ ಕಾಗದವನ್ನು ಬರೆಯುತ್ತಿದ್ದೆನು. ಏಕೆಂದರೆ :—

ನಾನು ಪುನಹ ದಮಾಸ್ಕಸ್ಸಿಗೆ ಬಂದು, ಕೆಲವುದಿನಗಳು ವಾಸ ಮಾಡಬೇಕೆಂಬ ಅಭಿಲಾಷೆಯುಳ್ಳವನಾಗಿದ್ದೆನು. ನಾನು ಅಲ್ಲಿಗೆ ಹೋದ ಮೇಲೆ, ನಡೆದ ವರ್ತಮಾನವನ್ನು ಕೇಳಿ, ನೀನು ಬಹಳವಾಗಿ ಆನಂದವನ್ನು ಹೊಂದುವೆ ! ನಾನು, ದಮಾಸ್ಕಸ್ಸಿಗೆ ಬಂದಮೇಲೆ, ಆ ವರ್ತಕನು ಬಹು ಮರ್ಯಾದೆಯಿಂದ ನನ್ನನ್ನು ಬರಮಾಡಿಕೊಂಡು ಮನೆಯನ್ನು ನನ್ನ ಸ್ವಾಧೀನ ಮಾಡಿದನು. ಬಾಗಿಲಿಗೆ ನಾನು ಹಾಕಿದ್ದ ಮುದ್ರೆಯು ಹಾಗೆಯೆ ಇದ್ದಿತು. ಒಳಗೆಹೋಗಿ ನೋಡಲಾಗಿ, ನಾನು ವಾಸಮಾಡುವಾಗ ಹೇಗೆ ಹೇಗೆ ಪದಾರ್ಥಗಳನ್ನು ಇಟ್ಟಿದ್ದೆನೊ, ಹಾಗೆಯೆ ಇದ್ದಿತು. ನಂತರ ನನ್ನ ಚಾರಕರಲ್ಲೊಬ್ಬನು, ನಾನು ನನ್ನ ಮೋಹನಾಂಗಿಯೆರೂ, ಮೊದಲು ಕುಳಿತು ಊಟಮಾಡುತ್ತಿದ್ದ ಮನೆಯನ್ನು ಗುಡಿಸುತ್ತಿರುವಾಗ, ಮನೋಹರವಾದ ಕಾಂತಿಯಿಂದ ಹೊಳೆಯುತ್ತಿರುವ, ಕೆಲವು ಆಣಿಮುತ್ತುಗಳು ದೊರಕಲು, ಅದನ್ನು ನನ್ನಕ್ಕೆ ತಂದುಕೊಟ್ಟನು. ಅದನ್ನು ನೋಡಿ ನಾನು ಆಯಾಸಃ ಇದು ಮೋಹನಾಂಗಿಯಾದ, ಆ ಸುಂದರೀಮಣಿಯ ಕೊರಳಹಾರದಿಂದ ಕಳಚಿಬಿದ್ದುದೆಂದು ತಿಳಿದು, ಆಕೆಯನ್ನು ಕುರಿತು, ಬಹಳವಾಗಿ ವ್ಯಸನಪಡುತ್ತಿದ್ದೆನು. ಪ್ರಯಾಣದ ಆಯಾಸವನ್ನು ಪರಿ

ಹರಿಸಿಕೊಂಡವೀಲೆ, ನಾನು ನನ್ನ ಸ್ನೇಹಿತರಸಂಗಡ ವೋಹದಿಂದ, ಸಾಹಸ ಕಾರ್ಯವನ್ನು ಮಾಡುತ್ತಾ, ದರಿದ್ರನಾಗಿ ನನ್ನಬಳಿಯಲ್ಲಿರುವ ಸರಕು ಳನ್ನು ಮಾರಿಕೊಳ್ಳಲಾರದೆ, ಆ ಮುತ್ತಿನಸರವನ್ನು ಮಾರಬೇಕೆಂದು ಪೇಟೆಗೆ ಹೋಗಿ, ದಳ್ಳಾಳಿಯನ್ನು ಬರಮಾಡಿ, ಅವನಕೈಗೆ ಅದನ್ನು ಕೊಟ್ಟು, ವ್ಯಾಪಾರಮಾಡಿ ಹಣವನ್ನು ತರಬೇಕೆಂದು ಪ್ರಯತ್ನಪಟ್ಟೆನು. ಆ ದಳ್ಳಾಳಿಯು ಮುತ್ತಿನಸರವನ್ನುನೋಡಿ, ಅತ್ಯಂತ ಸಂಭ್ರಮದಿಂದ ಕುಣಿಯುತ್ತಾ, ಅಯ್ಯಾ! ಇದು ಅತ್ಯುತ್ತಮವಾದ ಸರವಾಗಿದೆ. ಬೆಚ್ಚು ಬೆಲೆ ಬಾಳುವುದು. ಆದುದರಿಂದ ನೀನು ನನ್ನ ಜೊತೆಯಲ್ಲಿಯೇ ಬಾರೆಂದ ಹೇಳಿ, ನನ್ನನ್ನು ಕೈಪಿಡಿ ವ್ಯಾಪಾರದ ದೊಡ್ಡ ವರ್ತಕನಬಳಿಗೆ ಕರೆದು ಕೊಂಡುಹೋದನು. ಆ ವ್ಯಾಪಾರಸ್ಥನನ್ನು ಮಾಡಿದುಹೋದ ವೋಹ ನಾಂಗಿಯೆ ಗಂಡನಾಗಿದ್ದನು. ಆತನು ಸರವನ್ನು ನೋಡಿ ನನ್ನೊಡನೆ, ಅಯ್ಯಾ! ಸ್ವಲ್ಪಹೊತ್ತು ಕುಳಿತುಕೊಂಡಿರು, ಬಂದಬಳಿಕ ನಿನಗೆ ಉತ್ತರವನ್ನು ಹೇಳುವೆನೆಂದು ಹೇಳಿ, ಹೊರಟುಹೋದನು.

ಆತನು ಸರವನ್ನು ತೆಗೆದುಕೊಂಡು ಬಹು ವೇಗವಾಗಿ ಓಡಿಹೋದರೂ, ನಮ್ಮ ದಳ್ಳಾಳಿಯು ಸ್ತೋಭಯುಕ್ತನಾಗಿದ್ದುದರಿಂದ, ನಾವಿಬ್ಬರೂ, ಮಾತನಾಡುತ್ತಾ ಕುಳಿತುಕೊಂಡೇ ಇದ್ದೆವು. ಸ್ವಲ್ಪ ಹೊತ್ತಿಗೆ ಆತನು ಸರವನ್ನು ತೆಗೆದುಕೊಂಡುಬಂದು, ನನ್ನನ್ನು ಹೊರಗೆ ಕರೆದು, ತಾನು ಎರಡುಸಾವಿರ ವೊಹರಿಗಳಿಗೆ ಕ್ರಯಮಾಡಿರುವುದನ್ನು ಹೇಳಿದೆ, ಅಯ್ಯಾ! ಇವು ಅಷ್ಟೊಂದು ಬೆಳ್ಳಿ ಮುತ್ತುಗಳಲ್ಲವಾದುದರಿಂದ, ಇಲ್ಲಿನ ವರ್ತಕರು, ಎಂಟುನೂರು ಸೆಕ್ವಿನ್ಸುಗಳಿಗಿಂತಲೂ, ಅಧಿಕವಾಗಿ ಯಾರೂ, ಕೇಳಲಿಲ್ಲ. ಆ ಬೆಲೆಗೆ ಇದನ್ನು ಕೊಡಬಹುದೋ, ಕೂಡದೋ, ನನಗೆ ತಿಳಿಯದು. ನಿನ್ನ ಇಷ್ಟವೇನೆಂದು ನುಡಿದನು. ಆಗ ನನಗೆ ಅವಶ್ಯಕವಾಗಿ ಹಣವು ಬೇಕಾಗಿದ್ದುದರಿಂದ, ಅಯ್ಯಾ! ನಿನ್ನಲ್ಲಿ ನನಗೆ ನಂಬಿಕೆ ಇರುವದು. ಅಲ್ಲದೆ ನೀನು ನನಗಿಂತಲೂ ಬುದ್ಧಿಶಾಲಿಯಾಗಿರುವುದರಿಂದ, ಹೇಗಾದರೂ ನನಗೆ ಸಮ್ಮತವೇಸರಿ! ಹಣವನ್ನು ಕೊಡು ಎಂದು ಹೇಳಿದೆನು. ಆಗ ಅವನ ವರ್ತಕರಲ್ಲೊಬ್ಬನು, ಎಂಟು ನೂರುರೂಪಾಯಿಗಳನ್ನು ಕೊಡಬಹುದೆ, ಎಂದು ಕೇಳಲು, ನಾನು ಯಾವ

ಮಾತನ್ನು ಆತನ ಸಮಕ್ಷದಲ್ಲಿ ನುಡಿದೆನು. ತಾನುತಂದ ಸರಕಿನ ಬೆಲೆಯು, ತನಗೆ ತಿಳಿಯದುದರಿಂದಲೂ, ನಾನು ಯಾವಮಾತನ್ನೂ ಆತನ ಸಮಕ್ಷದಲ್ಲಿ ನಿಂತುಕೊಂಡಿದ್ದುದರಿಂದಲೂ, ಆ ಅಂಗಡಿಯವನು ನ್ಯಾಯಾಧಿಪತಿಯ ಬಳಿಗೆ ಹೋಗಿ, ಈಸರವು ನನ್ನದು. ಇದನ್ನೊಬ್ಬ ಪುರುಷನು ಮಾರುವುದಕ್ಕೆ ತಂದಿರುವನು. ಇದರಬೆಲೆಯು ಆತನಿಗೆ ತಿಳಿಯದು. ಎರಡು ಸಾವಿರ ರೂಪಾಯಿಗಳ ಈ ಸರವನ್ನು ಎಂಟುನೂರು ರೂಪಾಯಿಗಳಿಗೆ ಮಾರುವುದಕ್ಕೆ, ಸಿದ್ಧನಾಗಿ ನಿಂತಿರುವುದೇ ಕದ್ದುದಕ್ಕೆ ಸಾಕ್ಷಿಯಾಗಿರುವುದೆಂದುಹೇಳಲು, ನ್ಯಾಯಾಧಿಪತಿಯು ನನ್ನನ್ನು ತನ್ನ ಬಳಿಗೆ ಕರೆಸಿಕೊಂಡು, ನೀನು ಈ ಸರವನ್ನು ಮಾರುವುದಕ್ಕಾಗಿ, ಪೇಟೆಗೆ ತಂದೆಯೊ ? ಇದನ್ನು ಎಂಟುನೂರುರೂಪಾಯಿಗಳಿಗೆ ಮಾರುವುದಕ್ಕೊಪ್ಪಿಕೊಂಡೆಯೊ ? ಎನಲು, ಹೌದಯ್ಯಾ ! ನಾನು ಮಾರುವುದಕ್ಕೆ ಎಂಟುನೂರುರೂಪಾಯಿಗಳಿಗೆ ಕ್ರಯವನ್ನು ಗೊತ್ತುಮಾಡಿ ಕೊಟ್ಟುಬಿಡಲು ಸಿದ್ಧನಾಗಿದ್ದೆನೆಂದು ಹೇಳಿದನು. ನ್ಯಾಯಾಧಿಪತಿಯು ಈತನಮಾತಿನಿಂದಲೆ ಇವನು ಕಳ್ಳನೆಂದು ತೋರುವುದು. ಆದುದರಿಂದ ವರ್ತಕನವೇಷವನ್ನು ಹಾಕಿಕೊಂಡಿರುವ ಈತನು ನಿಜವನ್ನು ಹೇಳುವವರೆಗೂ, ಚೆನ್ನಾಗಿ ದಂಡಿಸಿ ಎಂದು, ತನ್ನ ಭಟರಿಗೆ ಆಜ್ಞಾಪಿಸಲು, ಆಗ ಅವರು ಮಾಡುತ್ತಿದ್ದ ಉಪದ್ರವವನ್ನು ತಡೆಯಲಾರದೆ, ನಾನು ಕದ್ದುದುಂಟೆಂದು ಸುಳ್ಳುಹೇಳಿ ಒಪ್ಪಿಕೊಂಡೆನು.

ಬಳಿಕ ನ್ಯಾಯಾಧಿಪತಿಯು ಕೈಯ್ಯನ್ನು ಕೊಯಿದುಹಾಕುವಂತೆ, ಆಜ್ಞಾಪಿಸಿದನು. ಅವರು ಅದರಂತೆ ನಡೆಸಿದಮೇಲೆ, ನಾನು ಪೇಟೆಯೆಲ್ಲಿ ಬರುತ್ತಿರುವಾಗ, ರತ್ನವಡಿ ವ್ಯಾಪಾರಗಾರನು ನೋಡಿ, ನನ್ನನ್ನು ಕುರಿತು, ಅಯ್ಯಾ ! ನೀನು ವಿದ್ಯಾವಂತನೂ, ಆಗಿರುವ ಜಾಣನೆಂದು ನಾನು ತಿಳಿದುಕೊಂಡಿದ್ದೆ. ಇಂತಹ ಅಯೋಗ್ಯಕರನಾದ ಕೆಲಸವನ್ನು ನೀನು ಮಾಡಬಹುದೆ ? ಹಣವಿಲ್ಲವಾಗಿದ್ದರೆ, ನನ್ನನ್ನು ಕೇಳಿದ್ದರೆ ಕೊಡುತ್ತಿದ್ದೆನಲ್ಲಾ ! ಅಯ್ಯೋ ! ಪಾಪಿ. ನೀನು ಹೀಗಾದಮೇಲೆ ನನ್ನಮನೆಯೆಲ್ಲಿರಕೂಡದು, ಮತ್ತೆಲ್ಲಿಯಾದರೂ, ಸ್ಥಲವನ್ನು ನೋಡಿಕೋ ಎಂದು ಹೇಳಿದನು. ಆಗ ನಾನು ಅತ್ಯಂತ ಶೋಕಾಕ್ರಾಂತನಾಗಿ, ಆಯ್ಯಾ ! ಇನ್ನು ಮೂರುದಿನಗಳು ನಿನ್ನಮನೆಯೆಲ್ಲಿರುವುದಕ್ಕೆ, ಅಪ್ಪಣೆ ಕೊಡಬೇಕೆಂದು

ಬೇತಲು, ಅವನು ಸನ್ಮತಿಸಿದನು. ನಂತರ ನಾನು ಮನೆಯೆನ್ನು ಸೇರಿ, ನೋವನ್ನು ತಾಳಲಾರದೆ, ಅಯ್ಯಾ ! ನಾನಿನ್ನು ಮಾಡತಕ್ಕದ್ದೇನು. ಈ ದುರವಸ್ಥೆಯನ್ನು ಅನುಭವಿಸು ತ್ತಾ ನನ್ನ ತಂದೆಯಬಳಗೆ ಹೇಗೆ ಹೋಗಲಿ, ಎಂದು ಚಿಂತಿಸುತ್ತಿದ್ದೆನು. ಇತೆಂದು ಹೇಳಿ ಷಷರಜೋದಿಯು ಬಿಳಗಾವಕೂಪಲೆ ಕಥೆಯನ್ನು ನಿಲ್ಲಿಸಿ, ಮರಳಿ ಬಿಳಗಿನಜೋವಯಲ್ಲಿ ಪುನಹಾ ನುಡಿಯೆಲಾರಂಭಿಸಿದಳು.

೧೫೫ನೆಯ ರಾತ್ರಿಯ ಕಥೆ.

ಬಳಿಕ ಆ ವರ್ತಕಪುತ್ರನು ವೈದ್ಯನನ್ನುನೋಡಿ, ಇಂತೆಂದನು. ನಾನು ಮನೆಯೆನ್ನುಸೇರಿದ ಸ್ವಲ್ಪಹೊತ್ತಿಗೆ ಸರಿಯಾಗಿ, ನ್ಯಾಯಾಧಿಪತಿಯು ಭಂಟರು ದಳ್ಳಾಳಿಯೆನ್ನೂ ನನ್ನವೇಲೆ ಕಳ್ಳತನವನ್ನು ಅನ್ಯಾಯವಾಗಿ ಹೊರಿಸಿದ, ಅಂಗಡಿಯವನನ್ನೂ ಕರೆದುಕೊಂಡು ನನ್ನ ಮನೆಗೆ ಬಂದರು. ಅವರು ಬರುವುದಕ್ಕೆ ಕಾರಣವೇನೆಂದು ನಾನು ಯೋಚಿಸಿ, ಅವರನ್ನೆ ಪ್ರಶ್ನೆ ಮಾಡಿದೆನು. ಆವರೆ ಅವರು ನನಗೆ ಪ್ರತ್ಯುತ್ತರವನ್ನು ಹೇಳದೆ, ಹಿಂಗುಟ್ಟು ಮುಂಗುಟ್ಟುಗಳನ್ನು ಕಟ್ಟಿ, ಕೂಗದಂತೆ ಬಾಯಿಯನ್ನು ಬಲವಾಗಿ ಮುಚ್ಚಿ, ಆ ಕಂತಮಾಲೆಯು ಈ ಪಟ್ಟಣವನ್ನಾಳುವ ರಾಜನದು. ಇದುಹೋಗಿ ಮೂರುವರ್ಷಗಳಾಯಿತು. ಆಗಿನಿಂದಲೂ ಆತನ ಕುಮಾರಿಯಲ್ಲೊಬ್ಬಳು, ಕಣ್ಣಿಗೆ ಕಾಣದೆ ಹೊರಟುಹೋದಳೆಂದು ಹೇಳಿವರು. ಅದನ್ನು ಕೇಳಿದಕೂಡಲೆ, ನನ್ನಮನಸ್ಸು ಹೇಗಾಯಿತ್ತೋ ಅದನ್ನು ನೀನೆ ಯೋಚಿಸು. ಆದರೂ, ಧೈರ್ಯಾವಲಂಬನೆಯೆನ್ನುಹೊಂದಿ, ನನ್ನನ್ನು ಕೊಂದುಹಾಕಿದರೂ, ನಿಜವನ್ನು ಹೇಳಬಾರದೆಂದು ಅಂದುಕೊಂಡೆನು. ಅವರು ನನ್ನನ್ನು ರಾಜನಬಳಿಗೆ ಕರೆದುಕೊಂಡುಹೋದಾಗ ಆತನು ನನ್ನನ್ನುನೋಡಿ, ಕರುಣಾದೃಷ್ಟಿಯೆನ್ನು ಬೀರುತ್ತಿರುವುದನ್ನು ಕಂಡು, ಇದೇ ನನಗೆ ಶುಭಸೂಚಕವೆಂದಂದುಕೊಂಡೆನು. ಬಳಿಕ ಆತನು ನನ್ನ ಕಟ್ಟುಗಳನ್ನು ಬಿಚ್ಚಿಸಿ, ವರ್ತಕನನ್ನೂ ದಳ್ಳಾಳಿಯನ್ನೂ ನೋಡಿ ಮುತ್ತಿನಕಂಠಿಯನ್ನು ಮಾರುವುದಕ್ಕೆ ತಂದಿದ್ದವನು ಈತನೆಯೊ ? ಎಂದು ಕೇಳಿದನು. ಅವರು ಹೌದೆಂದರು. ಆಗ ರಾಜನು, ಈತನನ್ನು ಕೊಡಿದರೆ, ಅಂತಹ ಅಪರಾಧವನ್ನು ಮಾಡಿದವನಂತೆ ಕಾಣಬರುವುದಿಲ್ಲ,

ಈತನಿಗುಂಟಾಗಿರುವ ದುರವಸ್ಥೆಗಾಗಿ, ನಾನು ತುಂಬ ವ್ಯಸನಪಡುತ್ತಿರುವೆನೆಂದು ಹೇಳಲು, ನಾನು ರಾಜನನ್ನು ಕುರಿತು ಅಯ್ಯಾ! ನಾನು ನಿರಪರಾಧಿಯೊದವನು ಈ ದುರ್ಮಾರ್ಗಿಗಳು ಆಕಾಲದಲ್ಲಿ ನನಗೆವಾಡಿದ ಕೊಂದರೆಯನ್ನು ಸಹಿಸಲಾರದೆ, ನ್ಯಾಯಾಧಿವತಿಯು ಬಳಯಲ್ಲಿ ನಾನು ಕಳ್ಳನೆಹೌದೆಂದು ಒಪ್ಪಿಕೊಂಡೆನು. ಆದರೆ ಈ ಅಪರಾಧವು ನನ್ನಮೇಲೆ ಹೊರುವುದಕ್ಕೆ ಮತ್ತೊಂದು ಕಾರಣವಿರುವುದು. ತಾವು ದಯವಾಡಿ ಕೇಳುವುದಾದರೆ, ಬಿನ್ನೈಸುವೆನೆನಲು, ಆತನು ತನಗಿಂತಲೂ ಮೊದಲು ನಾನು ಹೇಳತಕ್ಕ ಕಾರಣವನ್ನು ಚೆನ್ನಾಗಿ ತಿಳಿದುಕೊಂಡಿರುವುದರಿಂದ, ಆ ಜನರನ್ನುಕುರಿತು, ಅಯ್ಯಾ! ನಿಷ್ಕಾರಣವಾಗಿ ಈತನಮೇಲೆ ದೋಷವನ್ನು ನೀವುಗಳು ಆಪಾದಿಸಿರುವಿರೆಂಬುದು, ನನಗೆ ಚೆನ್ನಾಗಿ ತಿಳಿದಿರುವುದರಿಂದ ನಿರಪರಾಧಿಯೊದ ಈ ಬಾಲಕನಿಗೆ, ನಡೆಸಿದ ದಂಡನೆಯನ್ನು ಇವರುಗಳಿಗೆ ಕೀಳ್ಪುದಲ್ಲಿ ನಡೆಸಬೇಕಾಗಿರುವುದೆಂದು, ತನ್ನ ಮಂತ್ರಿಗೆ ಆಜ್ಞಾಪಿಸಲು, ಆ ತಕ್ಷಣವೆ ದಂಡನೆಯೂ ಜರುಗಿತು.

ಬಳಿಕ ಎಲ್ಲರೂ ಹೊರಟುಹೋದಮೇಲೆ ರಾಜನು ನನ್ನನ್ನು ನೋಡಿ, ಕುಮಾರಕ, ಈ ಹಾರವು ನಿನಗೆ ಹೇಗೆ ದೊರಕಿತು. ಹೆದರಿಕೆಯಿಂದ ಮರೆನಾಚದೆ ಧೈರ್ಯದಿಂದ ನಿಜವನ್ನು ಹೇಳು ಎಂದು ಕೇಳಲು, ನಾನು ಸರ್ವವನ್ನು ಸ್ವಲ್ಪವೂ ಮರೆಮಾಚದೆ, ಆತನಸಂಗಡ ಹೇಳಿ, ಅಯ್ಯಾ! ಈ ರಹಸ್ಯವನ್ನು ಹೊರಪಡಿಸುವುದಕ್ಕಿಂತಲೂ, ಕಳ್ಳತನವನ್ನು ಒಪ್ಪಿಕೊಳ್ಳುವುದೇ ಉತ್ತಮವೆಂದು, ಒಪ್ಪಿಕೊಂಡೆನೆನಲು, ಹಾ! ದೈವವೇ! ಆವಾಜ್ಞಾನಸಗೋಚರವಾದ, ನಿನ್ನ ಮಹಿಮೆಯನ್ನು ನಾನು ಸಮ್ಮತಿಯಿಂದ, ಒಪ್ಪಿ ಸ್ವೀಕರಿಸುವೆನು. ಆದರೂ ನನಗೆ ಪ್ರಾಪ್ತವಾದ ದುಃಖವನ್ನು ಸವಿನಯದಿಂದ ಕೆಲವಿಗಾಣಿಸಿದುದಕ್ಕಾಗಿ, ನಾನು ನಿನ್ನನ್ನು ವಂದಿಸುವೆನು, ಎಂದುಹೇಳಿ, ನನ್ನಕಡೆಗೆ ತಿರುಗಿ, ಕುಮಾರನೇ! ನಿನಗೆ ಪ್ರಾಪ್ತವಾದ ವ್ಯಸನವನ್ನುನೋಡಿ, ನಾನು ಬಹಳವಾಗಿ ವ್ಯಸನಪಡುತ್ತಿರುವೆನಲ್ಲದೆ, ನನಗುಂಟಾದ ಅವಮಾನವನ್ನು ನಿನಗೆ ಹೇಳುವೆನುಕೇಳು,

ಏನಂದರೆ :—ನೀನು ಇದುವರಿಗೂ ವಿವರಿಸಿದ ಚರಿತೆ ್ರಯುಳ್ಳ ಆ ಇಬ್ಬರು ಯುವತಿಯೆರೂ ನನ್ನವುಕ್ಕಳು ಎಂದು ಹೇಳದನೆಂದು ನುಡಿದಬಳಿಕ ಷಹರಜಾದಿಯು ಬಿಳಗಾದಕೂಡಲೆ ಕಥೆಯನ್ನು ನಿಲ್ಲಿಸಿ, ಮರಳಿ ಬಿಳಗಿನ ಜಾವದಲ್ಲಿ ಹೇಳಲಾರಂಭಿಸಿದಳು.

೧೫೬ ನೆಯ ರಾತ್ರಿ ್ರಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು ಇಂತೆಂದು ನುಡಿಯಲಾರಂಭಿಸಿದಳು. ರಾಜನು ಬಾಲಕನನ್ನು ಕುರಿತು ವತ್ಸಾ ! ನಿನ್ನವುನೆಗೆ ವೊದಲುಬಂದ ಹುಡುಗಿ, ನನ್ನ ಹಿರಿಯವುಗಳು. ನಾನು ಆಕೆಯನ್ನು ಕೈರೋನಗರದಲ್ಲಿರುವ ನನ್ನ ಅಣ್ಣನವುಗನಿಗೆ ಕೊಟ್ಟು ವುದುವೆವಾಡಿದ್ದೆನು. ಆತನು ಸ್ವಲ್ಪದಿನಗಳಿಕೆಳಗೆ ದೈವಾಧೀನನಾದನು. ಆಗ ಅವಳು ಏಗುಪ್ತರಾಜ್ಯದಲ್ಲಿ ದುರ್ಮಾರ್ಗವನ್ನು ಕಲಿತುಕೊಂಡು ನಂತರ, ನನ್ನ ವುನೆಗೆ ಬಂದಳು. ಅವಳು ನನ್ನವುನೆಗೆ ಬರುವುದಕ್ಕಿಂತ ವುಂಚೆ ಬುದ್ಧಿ ಕೌಸಲ್ಯವುಳ್ಳವಳಾಗಿದ್ದು, ನಿನ್ನಕೈವೀಲೆ ಪ್ರಾಣವನ್ನುಬಿಟ್ಟ ಆಕೆಯು ನನ್ನ ಕಿರಿಯವುಗಳು. ಆಕೆಯ ವಿಷಯದಲ್ಲಿ, ನಾನೆಂದಿಗೂ ಕೋಪಿಸಿದವನಲ್ಲ. ಹೀಗಿರುವಲ್ಲಿ ಹಿರಿಯವಳು, ಕಿರಿಯವಳನ್ನೂ ತನ್ನ ದುರ್ಮಾರ್ಗಕಕ್ಕೆ ಎಳೆದುಕೊಂಡಳು. ಆಕೆ ಸತ್ತುಹೋದ ವುರುದಿನ ಭೋಜನಕಾಲದಲ್ಲಿ, ನಿನ್ನತಂಗಿ ಎಲ್ಲಿಹೋದಳೆಂದು, ಹಿರಿಯವಳನ್ನು ನಾನು ಕೇಳಲು, ಅವಳು ಯಾವವುಾತನ್ನೂ ಆಡದೆ ಅಳುವುದಕ್ಕೆ ವೊದಲುವಾಡಿದುದರಿಂದ, ನಾನು ಸತ್ತುಹೋಗಿರಬಹುದೆಂದು ತಿಳದುಕೊಂಡೆನು.

ಬಳಿಕ ಇದರ ಕಾರಣವನ್ನು ಸ್ಪಷ್ಟವಾಗಿ ಹೇಳೆಂದು ನಿರ್ಬಂಧಪಡಿಸಿದ್ದರಿಂದ, ಹಿರಿಯವಳು ಅಪ್ಪಾ ! ನಿನ್ನೆ ಸಾಯಂಕಾಲದಲ್ಲಿ ನನ್ನ ತಂಗಿಯು ಉತ್ತವು ವಸ್ತ್ರಗಳನ್ನು ಧರಿಸಿ ವುುತ್ತಿನಹಾರವನ್ನು ಹಾಕಿಕೊಂಡು ಹೊರಗೆಹೋದಳು ಇನ್ನು ಬರಲೀಯಿಲ್ಲ. ಇಪ್ಪೆಹೊರತು ನನಗೆ ವುತ್ತೇನೂ ತಿಳಯೆದು, ಎಂದುಹೇಳಿ, ತಾನು ದುರ್ಮಾರ್ಗದಿಂದುಂಟಾದ ಅಸೂಯೆಯಿಂದ ತಂಗಿಯೆನ್ನು ಕೊಂದುದಕ್ಕಾಗಿ, ತನ್ನಲ್ಲಿತಾನೇ ಕೊರಗುತ್ತ ರೋಗಪೀಡಿತಳಾಗಿ ಸತ್ತುಹೋದಳು. ಅಯ್ಯಾ ! ಮನುಷ್ಯರು ಮಾಡುತ್ತಿರುವ ದುರ್ಮಾರ್ಗಗಳಿಗೆ ಉಂಟಾಗುವ ಫಲವಿದೆ ನೋಡು ಈಪರಿ

ನಾವಿಬ್ಬರೂ, ಇನ್ನುಮೇಲೆ ಅನ್ಯೋನ್ಯರಾಗಿ ಒಬ್ಬರನ್ನೊಬ್ಬರು ಕದಲದವರಾಗಿರಬೇಕು. ನನ್ನ ಸಂತಾನವು ಅಭಿವೃದ್ಧಿ ಹೊಂದಲೆಲ್ಲವಾದರೂ, ಮೂರನೆಯವಳಾದೊಬ್ಬ ವಯಸ್ಸಾದವಳಿರುವಳು. ಆಕೆಯು ಸನ್ಮಾರ್ಗನಿರತಳಾಗಿ ಸುಂದರಿಯಾಗಿರುವುದರಿಂದ ನೀನು ಅವಳನ್ನು ಅನುಮಾನವಿಲ್ಲದೆ ವರಿಸಬಹುದು. ನೀನು ಆಕೆಯನ್ನು ಮದುವೆಮಾಡಿಕೊಂಡು, ಸಂತೋಷದಿಂದ ನನ್ನ ಅರಮನೆಯಲ್ಲಿ ವಾಸಮಾಡಿಕೊಂಡಿದ್ದರೆ, ನಿನ್ನನ್ನು ನನ್ನ ಆಸ್ಥಾನಕ್ಕೆಲ್ಲನಾಯಕನನ್ನಾಗಿ ಮಾಡುವೆನೆಂದನು. ನಾನು ಅಯ್ಯಾ ! ತಾವು ದಯೆಮಾಡಿ, ನನ್ನನ್ನು ಕರುಣಾದೃಷ್ಟಿಯಿಂದ ನೋಡಿ, ಕಾಪಾಡಿದುದೇ ಸಾಕೆನಲು, ಆತನು ಕೂಡಲೆ, ಒಡಂಬಡಿಕೆಯೆನ್ನು ಬರೆಯಿಸಿ, ತನ್ನ ಮಗಳನ್ನು ಕೊಟ್ಟು, ಮದುವೆಮಾಡಿದನು. ಅಲ್ಲದೆ ನನ್ನಮೇಲೆ ಅನ್ಯಾಯವಾಗಿ ಅಪರಾಧವನ್ನು ಹೊರಿಸಿದವರ ಆಸ್ಥಿಯನ್ನು ನನಗೆ ಕೊಡಿಸಿದನು. ಆತನು ನನಗೆ ಮಾಡುತ್ತಿರುವ ಮರ್ಯಾದೆಯನ್ನು ಉಪಚಾರವನ್ನು ನೀನೆ ನೋಡುತ್ತಿರುವೆಯಲ್ಲ ! ನಾನು ಹೇಳಬೇಕಾದುದೇನು ? ಇಷ್ಟರಲ್ಲಿ ನನ್ನ ಚಿಕ್ಕಪ್ಪಂದಿರು ನನ್ನನ್ನು ಹುಡುಕಿಕೊಂಡುಬರುವುದಕ್ಕಾಗಿ ಚಾರಕರನ್ನು ಕಳುಹಿಸಿದ್ದನು. ಆತನು ನಿನ್ನೆ ನನ್ನನ್ನು ಕಂಡು ಕಾಗದವನ್ನು ಕೊಟ್ಟನು. ಅದನ್ನು ಓದಿನೋಡುವಲ್ಲಿ, ನನ್ನತಂದೆಯು ಸತ್ತುಹೋಗಿಯಿರುವಂತೆಯೂ, ಆತನಸಂಬಂಧವಾದ ಆಸ್ಥಿಯನ್ನೆಲ್ಲಾ ನೀನು ಬೇಕಾದ ಕಡೆಗೆ ತೆಗೆದುಕೊಂಡು ಹೋಗಬಹುದೆಂದೂ, ಬರೆದಿದ್ದನು.

ಇಲ್ಲಿನ ರಾಜನಿಗೂ, ನನಗೂ, ಉಂಟಾಗಿರುವ ಸಂಬಂಧವನ್ನೂ, ಸ್ನೇಹವಾತ್ಸಲ್ಯಾದಿಗಳನ್ನುನೋಡಿ, ನಾನು ಇಲ್ಲಿಂದ ಹೋಗಲಾರದೆ ನನ್ನ ಚಿಕ್ಕಪ್ಪಂದಿರಿಗೆ ಕಾಗದವನ್ನು ಬರೆದಿರುವೆನು. ಆದರೂ ನನ್ನ ಆಸ್ಥಿಯು ಭದ್ರವಾಗಿಯೇ ಇಗುವುದು. ಈ ವರ್ತಮಾನವನ್ನು ನೀನು ಕೇಳಿರುವೆಯಾದುದರಿಂದ, ನಾನು ಶರೀರಸ್ವಸ್ಥತೆಯನ್ನು ನೀಗಿಕೊಳ್ಳುವುದಕ್ಕೂ, ನೀನು ಧಾತುಪರೀಕ್ಷೆಗೆ ಬಂದಾಗ್ಯೆ ಎಡಗ್ಯೆಯ್ಯನ್ನು ನೀಡಿದುದಕ್ಕೂ, ಕಾರಣವನ್ನು ತಿಳಿದುಕೊಂಡು, ನನ್ನನ್ನು ಮನ್ನಿಸಬೇಕೆಂದು ಪ್ರಾರ್ಥಿಸುವೆನೆಂದನು. ಆಗ ವೈದ್ಯನು ಕಾಸುಗಾರು ರಾಜನನ್ನು ನೋಡಿ ಅಯ್ಯಾ ! ಆ ವರ್ತಕಪುತ್ರನು ಹೀಗೆ ತನ್ನ ಚರಿತ್ರೆಯನ್ನು ಹೇಳದಬಳಿಕ, ನಾನು

ಆತನಬಳಿಯಲ್ಲಿ ರಾಜವೈದ್ಯನಾಗಿದ್ದು, ಆತನು ಗತಿಸಿಹೋದಮೇಲೆ, ದೇಶ ಸಂಚಾರ ಮಾಡಬೇಕೆಂಬ ಅಭಿಲಾಷೆಯಿಂದ, ನಾನಾದೇಶಗಳನ್ನು ತಿರುಗಿ, ನಿನ್ನರಾಜ್ಯಕ್ಕೆಬಂದು, ಬಹು ಗೌರವವಾಗಿ ವೈದ್ಯಮಾಡುತ್ತಿರುವೆನೆಂದು ಹೇಳಲು, ರಾಜನು ಸಂತುಷ್ಟಾಂತರಂಗನಾಗಿ, ಅಯ್ಯಾ! ನೀನು ಹೇಳಿದ ಕಥೆಯು, ವಿಚಿತ್ರವಾದುದೇನೋ ಹೌದು, ಆದರೆ ಈ ಕುಬ್ಜನ ಚರಿತ್ರೆಗೆ ಎಂದಿಗೂ ಸಮವಾಗಲಾರದುದರಿಂದ, ನಿನ್ನ ಪ್ರಾಣವೆಂದಿಗೂ ಉಳಿಯಲಾರದು. ನಿಮ್ಮಾನಾಲ್ವರನ್ನು ಗಲ್ಲಿಗೆಹಾಕಿಸುವೆನೆಂದು ಹೇಳಲು, ಅಷ್ಟರಲ್ಲಿಯೆ ದರ್ಜಿಯೆವನು ರಾಜನಮುಂದೆ ಬಂದು ನಮಸ್ಕಾರ ಮಾಡಿ, ಅಯ್ಯಾ! ಸ್ವಲ್ಪ ತಾಳು. ನಾನುಯಿನ್ನೊಂದು ಕಥೆಯನ್ನು ಹೇಳಬೇಕಾಗಿರುವುದೆಂದನು. ಬಳಿಕ ಕಾಸುಗಾರುರಾಜನು, ನೀನು ಹೇಳುವದನ್ನು ಹೇಳು. ಆದರೆ ಈ ಕುಬ್ಜನ ಚರಿತ್ರೆಗೆ ಸಮಾನವಲ್ಲದಿದ್ದರೆ, ನಿನ್ನ ಪ್ರಾಣವೆಂದಿಗೂ ಉಳಿಯಲಾರದೆಂದು ಹೇಳಲು, ಸಮಯೋಚಿತವಾದ ಉಪಾಯವನ್ನು ಚಿಂತಿಸಿ, ದರ್ಜಿಯವನು ಧೈರ್ಯದಿಂದ ಇಂತೆಂದನು :—

ದರ್ಜಿಯವನು ಹೇಳಿದ ಕಥೆ.

ಎರಡುದಿನಗಳ ಕೆಳಗೆ, ಈಪೂರಿನ ದೊಡ್ಡಮನುಷ್ಯನೊಬ್ಬನು ನನ್ನನ್ನು ತನ್ನ ಮನೆಗೆ ಔತನಕ್ಕೆ ಕರೆದುದರಿಂದ, ನಾನು ಬೆಳಗಾದಕೂಡಲೆ ಅಲ್ಲಿಗೆ ಹೋಗಿ, ಇಪ್ಪತ್ತುಜನರು ನೆರೆದಿರುವುದನ್ನು ಕಂಡೆನು. ಮನೆಯ ಯಜಮಾನನು ಕಾರ್ಯಾಂತರದಿಂದ, ಎಲ್ಲಿಗೋ ಹೋಗಿದ್ದು, ಸ್ವಲ್ಪ ಹೊತ್ತಿಗೆ ಸುಂದರನಾಗಿಯೂ, ಉತ್ತಮವಾದ ವಸ್ತ್ರಗಳಿಂದ ಅಲಂಕೃತನಾಗಿಯೂ, ಇರುವ ಒಬ್ಬ ಕುಂಟ ಹುಡುಗನನ್ನು ಸಂಗಡ ಕರೆದುಕೊಂಡು ಬಂದನು. ನಾವೆಲ್ಲರೂ ಆತನಿಗೆ ಮರ್ಯಾದೆ ಮಾಡಿ, ಕರೆತಂದು ಬಿಂಚಿನ ಮೇಲೆ ಕುಳ್ಳಿರಿಸಿಕೊಂಡೆವು. ಆತನು ನನ್ನಬಳಿಯಲ್ಲಿ ಕುಳಿತಿದ್ದ ಒಬ್ಬಾಬ್ಬನೊಬ್ಬ ಕ್ಷೌರಿಕನನ್ನು ನೋಡಿ. ಹಿಂದೆಸರಿದು, ಬಾಗಿಲಬಳಿಗೆ ಹೋದನು. ಆಗ ಯಜಮಾನನು ಏನಯ್ಯಾ! ನೀ ಎಲ್ಲಿಗೆ ಹೋಗುತ್ತೀಯೇ, ನನ್ನ ಸ್ನೇಹಿತರ ಜೊತೆಯಲ್ಲಿ ನಾನು ಮಾಡುವ ಔತನವನ್ನು ಸ್ವೀಕರಿಸಿ, ನನ್ನನ್ನು ಗೌರವಿಸಬೇಕೆಂಬ ಮರ್ಯಾದೆ ನಿನಗಿಲ್ಲವೋ? ನಾನು ನಿನ್ನನ್ನು ಬಹು ಮರ್ಯಾದೆಯಿಂದ ಕರೆದುಕೊಂಡುಬಂದಿದ್ದರೂ, ನೀನು ಓಡಿಹೋಗುತ್ತಿರುವೆಯಾ? ಎಂದು ಕೇಳಿದನು. ಆಗ ಆ ಕುಂಟಹುಡುಗನು, ಅಯ್ಯಾ!

ನಿನ್ನುಧರ್ಮ ನನ್ನನ್ನು ಬಿಡು. ನಾನು ಕ್ಷೌರಕನನ್ನು ನೋಡಲಾರೆನು. ಜನಗಳೆಲ್ಲರೂ ಬಿಳುಪಾಗಿರುವ ದೇಶದಲ್ಲಿ ಹುಟ್ಟಿದರೂ ಬಹು ಕರ್ಪಗಿರುವನು. ಆತನ ಹೃದಯವು ಅವನ ಮುಖಕ್ಕಿಂತಲೂ, ಮಲಿನವಾಗಿರುವುದೆಂದು ಹೇಳಿದನು ಎಂದು ನುಡಿದು ಷಹರಜಾದಿಯು ಬೆಳಗಾದಕೂಡಲೆ, ಕಥೆಯನ್ನು ನಿಲ್ಲಿಸಿ, ಮರಳಿ ಮುಂಬೆಳಗಿನಲ್ಲಿ ನುಡಿಯಲಾರಂಭಿಸಿದಳು.

೧೫೭ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು, ಇಂತೆಂದಳು :— ಆ ಹುಡುಗನು ಹೇಳಿದವುಗಳನ್ನು ಕೇಳಿ, ನಾವುಗಳು ಆಶ್ಚರ್ಯಯುಕ್ತರಾಗಿ, ಆ ನಾಯಿಂದನು, ಕೂರನಾಗಿರಬಹುದೆಂದು, ಆತನನ್ನು ಧೂರವಾಗಿ ಇರೆಂದು ಹೇಳಿದೆವು. ಆಗ ಯಜಮಾನನು ಬಂದು, ಈ ಕ್ಷೌರಕನವೀಲೆ ಅಪರಾಧ ಏನುಂಟೆಂದು ಕೇಳಲು, ಕುಂಟನು ಇಂತೆಂದನು :—ಅಯ್ಯಾ ! ನಾನು ಕುಂಟನಾಗಿ ದುರವಸ್ಥೆಯನ್ನು ಹೊಂದುವುದಕ್ಕೆ, ಈ ಕ್ಷೌರಕನೇ ಕಾರಣನಾದುದರಿಂದ, ನಾನು ಈತನಿರುವ ಸ್ಥಲದಲ್ಲಿ ಇರಲೊಲ್ಲೆನೆಂದು ಖಂಡಿತವಾಗಿ ಹೇಳುವೆನಲ್ಲದೆ, ಆತನು ವಾಸವಾಡುವ ಪಟ್ಟಣದಲ್ಲಿಸಹಾ ನಾನಿರಲಾರೆನೆಂದು ಪ್ರಮಾಣಪೂರ್ವಕವಾಗಿ ಹೇಳುವೆನು. ಇದಕ್ಕಾಗಿಯೆ ನಾನು ಬಾಗದಾದುನಗರವನ್ನು ಬಿಟ್ಟು, ಇಲ್ಲಿಗೆ ಬಂದೆನು. ಟಾರ್ಟರಿ ರಾಜ್ಯಕ್ಕೆ ಬಹುದೂರವಿರುವ ಈ ಪಟ್ಟಣಕ್ಕೆ ಈತನು, ಬರಲಾರನೆಂದು ತಿಳಿದುಕೊಂಡಿದ್ದೆನು. ಆದುದರಿಂದ ನಿರ್ಭಯವಾಗಿ ನಾನಿಲ್ಲಿ ವಾಸವಾಡಿಕೊಂಡಿದ್ದೆನು. ನನ್ನ ಕೋರಿಕೆಗೆ ವಿರೋಧವಾಗಿ ಈತನು ಇಲ್ಲಿಗೂ ಬಂದುದರಿಂದ, ನಾನು ನಿಮ್ಮಸಂಗಡ ಭೋಜನ ಮಾಡುವುದನ್ನು ತೊರೆದು, ಈತನು ಬಾರದಿರುವ, ಮತ್ತೊಲ್ಲಿಗಾದರೂ ಹೋಗಬೇಕೆಂದಿರುವೆನು. ದಯೆ ಮಾಡಿ ನನ್ನನ್ನುಬಿಟ್ಟು ಕಳುಹಿಸಬೇಕೆಂದು ಹೇಳಿದಂಥಾವನಾದನು.

ಬಳಿಕ ಯಜಮಾನನು ಆ ಬಾಲಕನನ್ನುಕುರಿತು, ಕ್ಷೌರಕನ ಮೇಲೆ ನಿನಗೆ ಆಗ್ರಹ ಉಂಟಾಗುವುದಕ್ಕೆ ಕಾರಣವನ್ನು ವಿಸ್ತರಿಸಬೇಕೆಂದು ನಿರ್ಬಂಧಪಡಿಸಿದ್ದರಿಂದ, ಆ ಬಾಲಕನು, ನಾಯಿಂದನನ್ನು ನೋಡದೆ, ಆತನಕಡೆಗೆ ಬೆನ್ನುಮಾಡಿ ಕುಳಿತುಕೊಂಡು, ನಮ್ಮಗಳನ್ನು ನೋಡಿ ಇಂತೆಂದನು :—ನನ್ನತಂದೆಯು, ಬಾಗದಾದುನಗರದಲ್ಲಿ ಅತ್ಯಂತ

ಐಶ್ವರ್ಯಯುಕ್ತನಾಗಿದ್ದರೂ, ಆಡಂಬರವಾಗಿರುವುದಕ್ಕಿಂತಲೂ, ನೆಮ್ಮದಿಯಾಗಿಯೂ, ಗೌರವಸ್ಥನಾಗಿಯೂ, ಇರುವುದೇವೇಲೆಂದು, ಗೋಪ್ಯದಿಂದ ವಾಸಮಾಡುತ್ತಿದ್ದನು. ಆತನಿಗೆ ನಾನೊಬ್ಬನೇ ಮಗನು. ಆತನು ಸತ್ತುಹೋದವೇಲೆ, ವಿದ್ಯಾವಂತನಾಗಿಯೂ, ಅಧಿಕವಾದ ಐಶ್ವರ್ಯವನ್ನು ಅನುಭವಿಸುವುದಕ್ಕೆ ಯೋಗ್ಯನಾಗಿದ್ದೆನು. ಆದುದರಿಂದ ನಾನು ಧನವನ್ನು ವ್ಯರ್ಥಮಾಡದೆ ಜನರು ಮೆಚ್ಚುವಂತೆ ಉಪಯೋಗಿಸುತ್ತ, ಸ್ತ್ರೀವ್ಯಾಮೋಹವನ್ನು ತೊರೆದು, ಅವರಸಂಗಡ ಸಂಭಾಷಣಾದಿಗಳನ್ನೂ ಸಹಾ ತೊರೆದು, ಎಚ್ಚರಿಕೆಯಿಂದ ಇರುತಿದ್ದೆನು. ಹೀಗಿರುವಲ್ಲಿ ನಾನು ಒಂದಾನೊಂದುದಿನ, ದಾರಿಯೆಲ್ಲಿ ಹೋಗುತ್ತಿರುವಾಗ, ಅನೇಕಜನರು ಗುಂಪು ಕೂಡಿದ್ದುದರಿಂದ, ಅವರನ್ನು ಸಂದಿಸಬಾರದೆಂದು ಬೇರೆಮಾರ್ಗದಲ್ಲಿ ತಿರುಗಿ ಒಂದಾನೊಂದು ಮನೆಯಬಾಗಿಲಲ್ಲಿ ನಿಂತುಕೊಂಡೆನು. ಕಿಟಕಿಯಲ್ಲಿ ಆಮನೆಯ ಒಳಭಾಗವು ಮನೋಹರವಾದ, ಹೂಗಿಡದಿಂದ ಕೂಡಿದ್ದ ಒಂದು ಕುಂಡವಿದ್ದುದನ್ನು ನೋಡಿದೆನು. ಅದನ್ನು ನೋಡಿದಕೂಡಲೆ, ಬಾಗಿಲನ್ನು ತೆರೆದುಕೊಂಡು ಒಬ್ಬಾಬ್ಬನೊಬ್ಬ ಮೋಹಿನಿಯು ಹೊರಗೆಬಂದು, ಹೂವಿನ ಕುಂಡದಲ್ಲಿದ್ದ ನೀರನ್ನು ತೆಗೆದು ನನ್ನನ್ನು ದೃಷ್ಟಿಸಿನೋಡಲು, ನಾನು ಆಕೆಯನ್ನುನೋಡಿ, ಮೊದಲು ಸ್ತ್ರೀ ವಿಷಯದಲ್ಲಿ ಎಷ್ಟು ವೈರಾಗ್ಯಯುಕ್ತನಾಗಿದ್ದೆನೊ, ಆಗ ಅದಕ್ಕಿಂತಲೂ, ಅಧಿಕವಾದ ವ್ಯಾಮೋಹವನ್ನು ಹೊಂದಿದೆನು.

ಇಷ್ಟೆಲ್ಲವೂ ಆದಬಳಿಕ ಆಕೆ ನನ್ನನ್ನು ಮದನಬಾಣಗಳಪೆಟ್ಟಿಗೆ ಗುರಿಮಾಡಿ, ಬಾಗಿಲನ್ನು ಹಾಕಿಕೊಂಡು ಹೊರಟುಹೋದಳು. ಬಳಿಕ ನಾನು ಮೋಹಾವೇಶದಿಂದ ಮೂರ್ಛಾಕ್ರಾಂತನಾಗಿರುವಲ್ಲಿ, ಬೀದಿಯಲ್ಲಿ ಒಬ್ಬಾಬ್ಬನೊಬ್ಬ ಖಾಜಿಯು ಕುದುರೆಯನ್ನೇರಿ, ನಾಲ್ಕೈದುಮಂದಿ ಪರಿವಾರದವರೊಡನೆ, ನಾನು ಕುಳುತಿದ್ದ ಮನೆಯಬಳಿಗೆ ಬರಲು, ಆತನೇ ಆ ಹುಡುಗಿಯ ತಂದೆಯೆಂಬುದನ್ನು ನಾನು ತಿಳಿದುಕೊಂಡೆನು. ಬಳಿಕ ನಾನು ಮೋಹನಿದ್ರೆಯನ್ನು ಅನುಭವಿಸುತ್ತ, ಮನೆಗೆಬಂದು ತಾಪವನ್ನು ಸೈರಿಸಲಾರದೆ, ಹಾಸಿಗೆಯಲ್ಲಿ ಮಲಗಿ ಹೊರಳಾಡುತ್ತಿರಲು, ಮನೆಯವರೆಲ್ಲರೂ, ನನ್ನ ದುರವಸ್ಥೆಯನ್ನು ನೋಡಿ, ವ್ಯಸನಾಕ್ರಾಂತರಾದರು.

ನನ್ನ ಈ ದುರವಸ್ಥೆಗೆ ಕಾರಣವೇನೆಂದು, ಅವರು ಬಹುವಾಗಿ ನಿರ್ಬಂಧ ಪಡಿಸಿದರೂ, ನಾನು ನಿಜವನ್ನು ಹೇಳದೆ ಹೋದುದರಿಂದ, ಅವರು ವೈದ್ಯನನ್ನು ಕರೆಸಿ, ಔಷಧವನ್ನು ಕೊಡಿಸಿದರು. ಅದರಿಂದ ನನ್ನ ರೋಗವು ಪ್ರಬಲವಾಯಿತೇಹೊರತು, ತಗ್ಗಲಿಲ್ಲ. ಆದುದರಿಂದ ನನ್ನ ಕುಟುಂಬದವರ ವ್ಯಸನವು ಇನ್ನೂ ಅಧಿಕವಾಯಿತು. ಅವರು ನನ್ನವೇಲಣ್ಣಾಸೆಯೆನ್ನು ತೊರೆದಿರುವುದನ್ನು ಕೇಳಿ, ನನ್ನಗುರುತು ತಿಳಿದವಳಾದ ಒಬ್ಬ ಮುದುಕಿ ನನ್ನನ್ನು ನೋಡುವುದಕ್ಕೆ ಬಂದು, ನಿಜಸ್ಥಿತಿಯೆನ್ನು ಊಹಿಸಿ ತಿಳಿದು ಕೊಂಡು, ನನ್ನತಾಯಿ ವೊದಲಾದವರನ್ನು ಹೊರಕ್ಕೆ ಕರೆದು, ಆ ರೋಗಿಯನ್ನು ಗೋಪ್ಯವಾಗಿ ಕೆಲವುಕಾಲ ನನ್ನಬಳಿಯಲ್ಲಿಡುವಂತೆ ಮಾಡಬೇಕೆಂದು ಕೇಳಿದಳು. ಆಗ ಅವಳ ಇಷ್ಟಾನುಸಾರವಾಗಿ ಅಲ್ಲಿದ್ದವರೆಲ್ಲರೂ ಹೊರಟುಹೋಗಲು, ಆಮುದುಕಿಯು ನನ್ನ ಬಳಗೆಬಂದು ಕುಳಿತುಕೊಂಡು, ತಮ್ಮಾ ! ನಿನ್ನ ರೋಗಕ್ಕೆ ಕಾರಣವಿಂಥದೆಂಬುದನ್ನು ಹೇಳದೆ ಮರೆಮಾಚಬಹುದೆ ? ಆದರೂ ನೀನು ಹೇಳಬೇಕಾದುದೇನೂ ಇಲ್ಲ.

ನಾನು ಅನುಭವಶಾಲಿಯಾದುದರಿಂದ, ನಿನ್ನ ರೋಗಕ್ಕೆ ಕಾರಣವನ್ನು ತಿಳಿದುಕೊಂಡೆನು. ಇದು ಸ್ತ್ರೀವಾ ವ್ಯವೋಹದಿಂದ ಉಂಟಾದ ಜಾಡ್ಯ. ನೀನು ಸ್ತ್ರೀಯರ ವಿಷಯದಲ್ಲಿ ವಾ ವ್ಯವೋಹರಹಿತನಾದ ವೈರಾಗ್ಯಶಾಲಿಯೆಂಬ ಹೆಸರನ್ನು ಪಡೆದಿದ್ದರೂ, ಯಾವ ಕನ್ಯಾಮಣಿಯ ವೇಲಣ ವೋಹದಿಂದ ಇಂತಹ ದುರವಸ್ಥೆಯನ್ನು ಹೊಂದಿದೆಯೋ ಅದನ್ನು ತಿಳಿಸಿದರೆ, ನಿನ್ನರೋಗ ದರಿಹಾರಕಾರಣವನ್ನು ತಿಳಿದು, ಆಕೆಯನ್ನು ಸಮಯೋಚಿತವಾಗಿ, ನಿನ್ನಸಹವಾಸಕ್ಕೆ ಯೋಗ್ಯಳಾಗುವಂತೆ ಮಾಡುವೆನೆಂದು ಹೇಳಿದಳು. ಇಂತೆಂದು ಹೇಳಿ, ಷಹರಜಾದಿ ಬಿಳಗಾದಕೂಡಲೆ ಕಥೆಯನ್ನು ನಿಲ್ಲಿಸಿ, ಮರಳಿ ಬೆಳಗಿನಜಾವದಲ್ಲಿ ಹೇಳಲಾರಂಭಿಸಿದಳು.

೧೫೪ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು, ಇಂತೆಂದಳು :—

ಆ ಮುದುಕಿಯು ನನ್ನ ಮನೋಭಿಭಾ್ರಯವನ್ನು ತಿಳಿದುಕೊಳ್ಳಬೇಕೆಂದು ಹೀಗೆ ಹೇಳಿದಳೆಂದುತಿಳಿದು, ನಾನು ಯಾವಮಾತನ್ನು ಆಡದೆ, ಮುಖವನ್ನು ತಿರುಗಿಸಿಕೊಂಡು ನಿಟ್ಟುಸುರು ಬಿಡುತ್ತಿದ್ದೆನು. ಆಗ ಆಕೆ ಅಯ್ಯಾ ! ನೀನು ನಾಚಿಕೆಯಿಂದ ಹೇಳದಿರುವೆಯೋ ? ಅಲ್ಲದೆ ನನ್ನಲ್ಲಿ

ನಂಬಿಕೆ ಇಲ್ಲವೊ ? ಓಹೋ ? ಮುದುಕಿಯಾದ ನಾನುಹೇಳಿದಂತೆ ನಡೆಸ ಲಾರೆನೆಂಬ ಸಂದೇಹವೊ ಹೇಳು. ನಿನ್ನಗುರುತು ಕಂಡಿರುವ, ನನ್ನವಯಸ್ಸಿ ನಲ್ಲಿ, ಬಾಲಕರನೇಕರಿಗೆ ಸುಖವನ್ನು ಉಂಟುಮಾಡಿರುವೆನು. ಅದನ್ನು ಹೇಳುತ್ತೇನೆ ಕೇಳು ಎಂದು ನಾನಾವಿಧವಾದ ಕಥೆಗಳನ್ನು ಹೇಳಿದುದರಿಂದ ನಾನು ಬಿರಗಾಗಿ, ಬಾಯನ್ನು ಹಿಡಿಯಲಾರದೆ, ನಾನು ನೋಡಿದ ಕನ್ಯಾ ಮಣಿಯನ್ನೂ, ಅವಳವಮನೆಯ ಗುರುತನ್ನೂ, ಆಕೆಯ ರೂಪಲಾವಣ್ಯ ವಿಶೇಷಗಳನ್ನು ಹೇಳಿ, ಅಂತಹ ಕನಾ್ಯಮಣಿಯನ್ನು ನನ್ನ ಸಹವಾಸ ದಲ್ಲಿ ನೀನು ನಿಯೋಗಿಸುವುದಾದರೆ, ಅದನ್ನು ಪರಮಸಂಪದವೆಂದಂಗೀಕರಿಸಿ, ಅದಕ್ಕೆ ತಕ್ಕ ಪ್ರತ್ಯುಪಕಾರವನ್ನು ನಿನಗೆ ಮಾಡುವೆನೆಂದು ನಂಬು. ಅಲ್ಲದೆ ನೀನುಮಾಡಿದ ಉಪಕಾರವನ್ನು ನಾನೆಂದಿಗೂ, ಮರೆಯಲಾರೆನೆಂಬು ದನ್ನೂ ನೆನಪಿನಲ್ಲಿಡು, ಎಂದು ನುಡಿದೆನು. ಒಳಿಕ ಆ ಮುದುಕಿಯು, ವತ್ಸಾ ! ನೀನು ಮೋಹಿಸಿರುವ ಸುಂದರಿಯನ್ನು ನಾನು ಬಲ್ಲೆನು. ಅವಳು ಈ ಊರಿನ ದೊಡ್ಡ ಖಾಜಿಯವುಗಳೇ ಹೌದು. ಅವಳಿಗಿಂತಲೂ, ಸುಂದರ ರಾದವರು ಈ ಊರಿನಲ್ಲಿ ಇಲ್ಲ. ಆದರೆ ಆ ಹುಡುಗಿಯು ಬಹು ಗರ್ವಿಷ್ಠೆ ಯಾದುದರಿಂದ, ಸ್ವಾಧೀನವಾಗುವುದು ತುಂಬ ಕಷ್ಟವೆಂದು ಯೋಚಿಸು ತ್ತಿರುವೆನು. ಹೆಂಗಸರನ್ನು ಬಲಾತ್ಕಾರದಿಂದ ಸ್ವೀಕರಿಸಿದವರಿಗೆ ಈ ಬಾಗ ದಾದುನಗರದ ನ್ಯಾಯಾಧೀಶನು ತಿಳಿಸಿರುವನಿಬಂಧನೆಯು ನಿನಗೆ ಗೊತ್ತೇ ಇರುವುದು. ಹೀಗಿರುವಲ್ಲಿ ಖಾಜಿಯ ಸಂಸಾರದಲ್ಲಿ ನಾವು ಬಲಾ ತ್ಕರಿಸುವುದು ಹೇಗೆ ?

ಆ ಖಾಜಿಯು ನ್ಯಾಯಾಧಿಪತಿಗಳಿಗಿಂತಲೂ, ಕ್ರೂರನಾಗಿ ತನ್ನ ಮುಕ್ಕಳಿಗೆ ಪುರುಷರನ್ನೇ ನೋಡಕೂಡದೆಂದು, ಬುದ್ಧಿಯನ್ನು ಹೇಳು ತ್ತಿರುವನು. ಆದುದರಿಂದ ಅವರು ಹೊರಗೆ ಸಂಚಾರಮಾಡದೆ, ಲೋಕ ವ್ಯವಹಾರವನ್ನು ಕಾಣದೆ, ಒಳಗೆ ಇದ್ದುಕೊಂಡಿರುವರು. ಆ ಹುಡುಗಿ ಯಲ್ಲಿಯೂಕೂಡ ಅಂತಹಗುಣವನ್ನು ನಾನು ನೋಡಲಿಲ್ಲವಾದುದರಿಂದಲೂ, ಅವಳತಂದೆಯ ನಿರ್ಬಂಧದಿಂದಲೂ, ಆಕೆಯನ್ನು ನೋಡುವುದೇ ಅಸಾಧ್ಯ ವೆಂದು ನಾನು ತಿಳಿದುಕೊಂಡಿರುವೆನು. ಅಯ್ಯೋ ! ಅವಳನ್ನುಹೊರತು ಮತ್ತಾರನ್ನಾದರೂ, ಭಯಸಿದರೆ ಸುಲಭವಾಗಿ ದೊರಕಿಸುವೆನು. ಆದರೂ,

ನನ್ನುಕ್ಕೆಲಾದ ಸಾಹಸವನ್ನು ಮಾಡಿನೋಡುವೆನು. ಅದುವರಿಗೂ, ನೀನು ನೆಮ್ಮದಿಯಾಗಿ ನಂಬಿಕೊಂಡಿರು, ಎಂದು ಹೇಳಿ, ಮುದುಕಿಯು ಹೊರಟು ಹೋದಮೇಲೆ, ಆಕೆ ಹೇಳಿದ ಪ್ರತಿಕೂಲಗಳಿಂದ ಅವಳನ್ನು ಸಾಧಿಸುವುದು ಅಸಾಧ್ಯವೆಂದು ತಿಳಿದು, ಆ ಮುದುಕಿಯೆಮಾತನ್ನು ಸ್ಮರಿಸುತ್ತ, ನನ್ನ ವ್ಯೋಹವೂ ಇನ್ನೂ ಅಧಿಕವಾಯಿತು. ಮರುದಿನ ಆ ಮುದುಕಿಯು, ನನ್ನಬಳಿಗೆ ಬಂದು, ಅಯ್ಯಾ ! ನಾನುಹೇಳುವ ವರ್ತಮಾನವನ್ನು ಕೇಳು. ಆ ನಿನ್ನ ವ್ಯೋಹಿನಿಗೆ ತಂದೆಯು ನಿರ್ಬಂಧ ಬಂದೇ ಅಲ್ಲ. ಇನ್ನೂ ಇತರ ವಿಧವಾದ ಆತಂಕಗಳೂ ಉಂಟು. ಆಹಾ ! ಎಂತಹ ಅಸಾಧ್ಯವಾದ ಸ್ತ್ರೀಯನ್ನು ವ್ಯೋಹಿಸಿದೆ. ನಾನು ಈದಿನ ಅವಳಮನೆಗೆ ಹೋಗಿ, ನಿನ್ನ ದುರವಸ್ಥೆಯನ್ನು ಹೇಳುತ್ತಿದ್ದರೂ, ಹುಸಿನಗೆಯೆನ್ನುಬೀರುತ್ತಾ ಕೇಳುತ್ತಿದ್ದಳ್ಳೇಹೊರತು, ಸ್ವಲ್ಪವಾದರೂ ಮನ ಕರಗದವಳಾಗಿದ್ದಳು. ಆ ಬಾಲೆಯು ನಿನ್ನಂತೆ ಬಹುಜನರಿಗೆ ವ್ಯಥೆಯನ್ನುಂಟುಮಾಡಿಸಿ ಕೊರಗಿಸುತ್ತಿರುವಳೆಹೊರತು, ಒಬ್ಬರಿಗಾದರೂ, ಆನಂದವನ್ನು ಉಂಟುಮಾಡಿ ತೃಪ್ತಿಪಡಿಸಲಿಲ್ಲ. ನಂತರ ನಾನು ಆಕೆಯನ್ನುಕುರಿತು, ರಾಣಿ ! ನೀನು ಬಂದು, ಆತನನ್ನು ನೋಡಿ ಮಾತನಾಡುವುದಕ್ಕೆ ಯಾವಸಮಯವು ಅನುಕೂಲವಾಗಿ ಇರುವುದು ಹೇಳೆನಲು, ಅವಳು ಕೋಪದಿಂದ ದುರದುರನೆ ನೋಡುತ್ತ ಇಂತಹ ಮಾತುಗಳನ್ನು ಧೈರ್ಯದಿಂದ ಹೇಳಿದ, ನಿನ್ನನ್ನು ನನ್ನಮನೆಯಬಳಿಗೆ ಬಾರದಂತೆ ಮಾಡುವೆನೆಂದುಹೇಳಿ ಹೊರಟುಹೋದಳು.

ಆದರೂ, ನೀನು ಧೈರ್ಯಗೆಡಬೇಡ, ನನ್ನುಕ್ಕೆಳಾದ ಸಾಹಸವನ್ನು ಮಾಡಿ, ನಿನಗೆ ವ್ಯೋಹವನ್ನು ಉಂಟುಮಾಡಿರುವ, ಆಕೆಯೆನ್ನು ನಿನ್ನಸ್ವಾಧೀನ ಮಾಡುವೆನು, ಎಂದು ಹೇಳಿ, ಹೊರಟುಹೋಗಿ ಅದಕ್ಕೆ ತಕ್ಕ ಉಪಾಯಗಳನ್ನು ಮಾಡಿದರೂ, ಅದು ಸಫಲವಾಗಲಿಲ್ಲ. ಆದುದರಿಂದ ನಾನು ವ್ಯಥೆಯೆನ್ನು ತಾಳಲಾರದೆ ಸಾಯುವ ಸ್ಥಿತಿಯಲ್ಲಿದ್ದೆನು. ಅಷ್ಟರಲ್ಲಿ ಮುದುಕಿಯು ಬಂದು ನನ್ನ ಪ್ರಾಣವನ್ನು ಉಳಿಸಿದಳು. ಒಳಿಕ ಆ ಮುದುಕಿಯು ನನ್ನಬಳಿಗೆ ಬಂದು ಮೆಲ್ಲಗೆ ತನ್ನ ಬಹುಮಾನವನ್ನು ಕೇಳಲಿಳಿಸಿ, ನಾನು ತಂದಿರುವ ಸಂತೋಷಕರವಾದ ವರ್ತಮಾನಕ್ಕಾಗಿ, ತಕ್ಕ ಬಹುಮಾನವನ್ನು ಕೊಡುವುದಕ್ಕೆ ಮರೆಯಬೇಡ ಎನಲು, ನೀನು

ಬಹುಮಾನವು ತೆಗೆದುಕೊಳ್ಳುವೆಯೆಂತೆ ಸಂಗತಿ ಏನು ಹೇಳೆಂದು, ಎದ್ದು ಕುಳಿತುಕೊಂಡು, ಸಂತೋಷದಿಂದ ಆಕೆಯ ಮುಖವನ್ನು ನೋಡಿದೆನು. ಅಯ್ಯಾ! ನಿನ್ನ ಕಾರ್ಯವು ಶೀಘ್ರವಾಗಿ ನೆರವೇರುವುದು, ನಿನ್ನೆ ಸೋಮವಾರವಾದುದರಿಂದ, ನಾನು ಆ ಖಾಜಿಯಮನೆಗೆ ಹೋದೆನು. ಅಲ್ಲಿ ಆಕೆ ಬಹುಸಂತೋಷದಿಂದಿರುವುದನ್ನು ಕಂಡು, ನಾನು ಮುಸುಕನ್ನು ಹಾಕಿಕೊಂಡು, ಕಣ್ಣೀರನ್ನು ಸುರಿಸುತ್ತ ಅತ್ಯಂತ ವ್ಯಸನದಿಂದ ಅವಳಬಳಿಗೆ ಹೋಗಲು, ಆಕೆ ನನ್ನನ್ನುನೋಡಿ, ಅಯ್ಯೋ! ಏತಕ್ಕಾಗಿ ವ್ಯಸನಪಡುತ್ತಿರುವಿ ಎಂದು ಕೇಳಿದಳು. ಆಗ ನಾನು, ಅಕ್ಕಟಾ, ನಾನು ಆದಿನ ನಿನ್ನ ಸಂಗಡ ಹೇಳಿದ್ದ ಬಾಲಕನು ನಿನ್ನಮೋಲಣ ಮೋಹಾವೇಶದಿಂದ, ನರುಳುತ್ತಾ ಸಾಯುವ ಸ್ಥಿತಿಯಲ್ಲಿರುವನು. ಆತನು ಇನ್ನು ಉಳಿಯುವಂತೆ ತೋರುವುದಿಲ್ಲ. ಆತನಬಳಿಗೆ ಈದಿನಬೆಳಿಗ್ಗೆ ಹೋಗಿದ್ದೆನು. ಆತನ ದುಸ್ಥಿತಿಯನ್ನುನೋಡಿ, ನೀನು ನಿಜವಾಗಿಯೂ, ಬಹುಕಂಟಕಿಯೆಂದು ಕೂರ್ರಳೆಂದೂ, ಮೋಹಿಸಿದವರನ್ನು ಕೊಲ್ಲುವ ಮಾರಿಯೆಂದು, ತಿಳಿದುಕೊಂಡೆನೆಂದು ನುಡಿಯಲು, ಆಕೆ ಆಹಾ! ಆತನ ಅವಸ್ಥೆಗೆ ನಾನೆ ಕಾರಣಳೆಂದು ಹೇಗೆ ಹೇಳುವೆ ಎಂದಳು. ಅಮ್ಮಾ ನೀನು ಹೂವಿನಗಿಡಗಳಿಗೆ ನೀರನ್ನು ಹಾಕುವಕಾಲದಲ್ಲಿ ಕಿಟಕಿಯನ್ನು ತೆರೆದು ನೋಡುವಾಗ, ನಿನ್ನನ್ನುನೋಡಿ ಹುಸಿನಗೆಯೆನ್ನು ನಕ್ಕಳೆಂದು ಆತನು ನನ್ನಸಂಗಡ ಹೇಳಿದನು. ಆಗಿನಿಂದಲೂ, ಆತನು ನಿನ್ನಮೋಲಣ ಮೋಹದಿಂದ ಕೊರಗಿ ಕೊರಗಿ ಸಾಯುತ್ತಿರುವನೆಂದು ಹೇಳಿದೆನು. ಇಂತೆಂದು ಹೇಳಿದ ಷಹರಜಾದಿಯು ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಿಗಿನಜಾವದಲ್ಲಿ ಮತ್ತು ಹೇಳಲಾರಂಭಿಸಿದಳು.

೧೫೬ ನೆಯ ರಾತ್ರಿ ಕಥೆ.

ಷಹರಜಾದಿಯು ಸುಲಾತ್ತಾನರನ್ನು ಕುರಿತು, ಇಂತೆಂದಳು :— ಆ ಮುದುಕಿಯು ಖಾಜಿಯಮಗಳನ್ನು ಕುರಿತು, ಮಗೂ ಇಂತೆಂದಳು. ನಾನು ಇದಕ್ಕಿಂತಲೂ ಮೊದಲೆ ಒಂದುಸಾರಿ ನಿನ್ನಬಳಿಗೆ ಬಂದು, ಆತನ ವೃತ್ತಾಂತವನ್ನು ತಿಳಿಸಿ ಅದನ್ನು ಪರಿಹರಿಸುವಂತೆ ಮಾಡಬೇಕೆಂದು ಹೇಳಿದುದರಿಂದ, ನೀನು ಕೋಪಿಸಿಕೊಂಡು, ನನ್ನನ್ನು ಗದರಿಸಿದಕೂಡಲೆ, ನಾನು ಆತನಬಳಿಗೆಹೋಗಿ ನಡೆದ ಸಂಗತಿಯೆನ್ನು ಹೇಳಲು, ನಿನ್ನ ಮೇಲೆ

ಉಂಟಾಗಿದ್ದ ವ್ಯೋಹವು ಮತ್ತೂ ಅಧಿಕವಾಗಿ, ಆತನು ಅಂದಿನಿಂದಲೂ ನಾನಾವಿಧವಾದ ವಿರಹವ್ಯಥೆಯನ್ನು ಅನುಭವಿಸಿ, ಸಾಯುವಂತೆ ಸವೆದು ಹೋಗಿರುವನು. ಈಗ ನೀನು ಆತನಬಳಿಗೆಬಂದು ಸಮಾಧಾನಮಾಡಿದರೂ, ಆತನು ಬದುಕುವನೋ ಇಲ್ಲವೋ ನನಗೆ ತಿಳಿಯದೆಂದು ಹೇಳಲು, ಆಕೆ ಅತ್ಯಂತ ಕರುಣಾಪೂರ್ಣಳಾಗಿ, ಆಹಾ! ಆತನರೋಗಕ್ಕೆ ನಾನೇ ಕಾರಣಳೆಂದು ನೀನು ಖಂಡಿತವಾಗಿ ಹೇಳುವೆಯೇನು? ಎನಲು, ನಾನು ಹೌದಮ್ಮಾ! ಖಂಡಿತವಾಗಿ ನೀನೇ ಆತನ ವ್ಯಥೆಗೆ ಕಾರಣಳೆಂದೂ, ಪುನಹ ನೀನು ಆತನನ್ನುನೋಡಿ ಸಮಾಧಾನಮಾಡಿದರೆ, ಆತನು ಬದುಕಿಕೊಳ್ಳುವನೆಂದೂ, ನಾನು ಖಂಡಿತವಾಗಿ ಹೇಳುವೆನೆಂದು ನುಡಿಯಲು, ಆ ಸುಂದರಿಯು, ನಿಟ್ಟುಸುರನ್ನು ಬಿಡುತ್ತಾ, ಆಹಾ! ಹಾಗಾದರೆ ನೀನು ನನ್ನನ್ನು ನೋಡಬೇಕಾದರೆ ಒಂದು ವಳ್ಳೆಯದಿನ ನೋಡಬಹುದು.

ಆದರೆ ನಮ್ಮ ತಂದೆಯನ್ನು ಒಪ್ಪಿಸಿ ಮದುವೆಯಾದಹೊರತು, ನಿನಗಾವಪ್ರಯೋಜನವೂ ಇಲ್ಲ ಅಲ್ಲದೆ ಆತನಿಗೆ ದೇಹದಲ್ಲಿ ಆಲಸ್ಯವು ಕಡಿಮೆಯಾಗಿದ್ದು ನನ್ನನ್ನು ನೋಡಿ ಮಾತನಾಡಬೇಕೆಂಬ ಅಭಿಲಾಷೆ ಇದ್ದರೆ, ನಾಳೆ ಶುಕ್ರವಾರದದಿನ ಮಧ್ಯಾಹ್ನದ ಧ್ಯಾನಕಾಲದಲ್ಲಿ, ಆತನು ನಮ್ಮಮನೆಗೆ ಎದುರಾಗಿಬಂದು ನಿಂತುಕೊಂಡಿದ್ದರೆ, ನಮ್ಮ ತಂದೆಯು ಮಸೀತಿಗೆ ಹೋದಮೇಲೆ, ನಾನು ಆತನನ್ನುಕಂಡು ಮಾತನಾಡಿ ಪುನಹಾ ನಮ್ಮತಂದೆ ಬರುವುದರೊಳಗಾಗಿ, ಕಳುಹಿಸಿಕೊಡಲು, ಸಿದ್ಧವಾಗಿರುವೆನೆಂದು ಹೇಳು, ಎಂದು ನುಡಿಯೆಲು, ಈ ಸುಂದರೀಮಣಿಯ ಗುಣಾತಿಶಯಗಳು, ವಿಶೇಷವಾಗಿ ಇರುವುದೆಂದು ಹೇಳಿ, ಮುದುಕಿ ನನ್ನನ್ನು ಕುರಿತು, ಈದಿನ ಮಂಗಳವಾರವಾದುದರಿಂದ ಶುಕ್ರವಾರದವರಿಗೂ ಸ್ವಲ್ಪ ಆರೋಗ್ಯವನ್ನು ಸಂಪಾದಿಸಿಕೊಂಡರೆ, ಆ ಖಾಜಿಯೆಮಗಳನ್ನು ಕುರಿತು, ಮಾತನಾಡುವುದಕ್ಕೆ ಅನುಕೂಲವಾಗುವುದೆಂದು ನುಡಿಯಲು, ನನಗೆ ಸಂಪೂರ್ಣವಾಗಿ ವ್ಯೋಹಬಂಧವು ನಾಶವಾಗಿ ಗುಣಮುಖವನ್ನು ಹೊಂದಿದೆನು. ಕೂಡಲೆ ನಾನು ಎದ್ದು ಕುಳಿತುಕೊಂಡು, ಅಧಿಕವಾಗಿ ಹಣವಿರುವ ಒಂದು ಹಣದಚೀಲವನ್ನು ತೆಗದು, ಆ ಮುದುಕಿಯಕೈಗೆ ಕೊಟ್ಟು, ಅಮ್ಮಾ! ನಾನಿದುವರಿಗೂ, ನನ್ನರೋಗವನ್ನು ಅಧಿಕವಾಡಿದ ವೈದ್ಯರಿಗೆ ಕೊಟ್ಟ ಹಣವು ನಿರರ್ಥವಾದರೂ, ಈಗ ನಿನಗೆಕೊಟ್ಟ ಈಹಣವುಮಾತ್ರ ಸಾರ್ಥಕ

ವಾಯಿತೆಂದು ಹೇಳಲು, ಆ ಮುದುಕಿ ನನ್ನರೋಗವು ನಾಶವಾಯಿತೆಂದು ತಿಳಿದು, ನನ್ನನ್ನೂ ನನ್ನಬಂಧುಗಳನ್ನೂ ಸಮಾಧಾನಪಡಿಸಿ ಹೊರಟು ಹೋದಳು. ಬಳಿಕ ಶುಕ್ರವಾರದಬೆಳಗ್ಗೆ ನಾನು ಉತ್ತಮವಾದ ಉಡುಪನ್ನು ಧರಿಸಿಕೊಳ್ಳುತ್ತಿರುವಾಗ ಆ ಮುದುಕಿಯುಬಂದು ನನ್ನನ್ನುನೋಡಿ ನಿನ್ನ ದೇಹಸ್ಥಿತಿಯನ್ನು ವಿಚಾರಿಸಿ ಹೇಗಿರುವುದೆಂದು ತಿಳಿದುಕೊಳ್ಳಬೇಕಾದ ಅಗತ್ಯವಿಲ್ಲ. ಆದರೆ ನಿನ್ನ ಆರೋಗ್ಯಕ್ಕೆ ತಕ್ಕಂತೆ ಕಾರ್ಯವನ್ನು ಮಾಡುವುದಕ್ಕಾಗಿ, ಸ್ನಾನಮಾಡದೆ ಖಾಜಿಯೆಮನೆಗೆ ಹೋಗಬಹುದೆ, ಎಂದು ಕೇಳಲು, ಆಕೆ ಸ್ನಾನಮಾಡಿದರೆ, ಆಲಸ್ಯವಾದೀತು. ಆದುದರಿಂದ ಉತ್ತಮನಾದ ಕೆಲಸಗಾರನನ್ನುಕರಸಿ, ಕ್ಷೌರವನ್ನು ಮಾಡಿಸಿಕೊಂಡರೆ, ಸಾಕೆಂದು ನುಡಿಯಲು, ನಾನು ನನ್ನಜವಾನನ್ನು ಕರೆದು, ಒಳ್ಳೆಯ ಕೆಲಸಗಾರನಾದ ಕ್ಷೌರಿಕನ್ನು ಕರೆದುತರುವಂತೆ ಹೇಳಿದೆನು.

ಆ ಚಾರಿಕನು ಓಡಿಹೋಗಿ ಇಗೋ ! ನೀವು ನೋಡುತ್ತಿರುವ ಪಾಪಿಯೊದ, ಈ ದುರಾತ್ಮನನ್ನು ಕರೆದುಕೊಂಡುಬಂದನು. ಆಗ ಈತನು ಅಯ್ಯಾ ! ನಿಮಗೆ ಮೈಬಲಗೂಡಿದಂತೆ, ಕಾಣುವುದು. ದೇವರು ನಿಮ್ಮ ಆರೋಗ್ಯವನ್ನು ವೃದ್ಧಿಮಾಡಲೀ ಎಂದು ನುಡಿಯಲು, ನಾನು ಅಯ್ಯಾ ! ನನಗೆ ಈಗತಾನೆ ಮೈ ಸ್ವಸ್ಥವಾದುದರಿಂದ ಎದ್ದುಬಂದಿರುವೆನು. ದೇವರ ದಯದಿಂದ ನನ್ನ ಆರೋಗ್ಯವು ವೃದ್ಧಿ ಹೊಂದಲೆಂದು ಪ್ರಾರ್ಥಿಸುವೆನು ಎಂದು ನುಡಿದಕೂಡಲೆ, ಈ ದುರಾತ್ಮನು ನಾನು ನಿಮ್ಮ ಆರೋಗ್ಯವನ್ನು ಐಶ್ವರ್ಯವನ್ನು ಅಭಿವೃದ್ಧಿಪಡಿಸುವಂತೆ, ಭಗವಂತನಲ್ಲಿ ಬೇಡಿಕೊಳ್ಳುವೆನು. ಇದೋ ! ನನ್ನ ಶಸ್ತ್ರಗಳನ್ನು ಸಿದ್ಧಮಾಡಿಕೊಂಡು, ಕುಳಿತಿರುವೆನು. ನಿಮಗೆ ಕ್ಷೌರವನ್ನು ಮಾಡಬೇಕೇ ಎನಲು ವೃಥಾ ಮಾತುಗಳನ್ನು ಆಡಿ ಕಾಲವನ್ನು ಕಳೆಯಬೇಡ. ನಾನು ನಿನ್ನನ್ನು ಕರೆಸಿದುದರಿಂದಲೆ, ಕ್ಷೌರವನ್ನು ಮಾಡಿಸಿಕೊಳ್ಳುವುದಕ್ಕಾಗಿಂದು ನೀನು ತಿಳಿದುಕೊಳ್ಳಲಾರೆಯೊ ? ಹೊತ್ತು ಹೋಗುವುದು, ಬೇಗ ನಿನ್ನ ಕೆಲಸವನ್ನು ಮಾಡು. ಈದಿನ ಮಧ್ಯಾಹ್ನ ನಾನು ಒಂದಾನೊಂದು ಸ್ಥಳಕ್ಕೆ ಹೋಗಬೇಕೆಂದು ಹೇಳಿದೆನು. ಇಂತೆಂದು ಹೇಳಿ ಪಹರಜಾವದಿಯು ಬೆಳಗಾದುದರಿಂದ, ಕಥೆಯನ್ನು ನಿಲ್ಲಿಸಿ, ಬಳಿಕ ಮರುದಿನ ಬೆಳಗಿನಜಾವದಲ್ಲಿ ಸುಲ್ತಾನನನ್ನು ಮೆಚ್ಚಿಸುವುದಕ್ಕಾಗಿ, ಕಥೆಯೆನ್ನು ಪುನಹ ಹೇಳಲಾರಂಭಿಸಿದಳು.

೧೬೦ ನೆಯ ರಾತ್ರಿ ಕಥೆ.

ಬಳಿಕ ಷಹರಜಾದಿಯು ಸುಲ್ತಾನರನ್ನು ಕುರಿತು ಇಂತೆಂದಳು. ಆ ಕ್ಷೌರಿಕನು ತನ್ನ ಕತ್ತಿಗಳನ್ನು ಸರಿಮಾಡಿಕೊಳ್ಳುವುದರಲ್ಲಿ, ಕಾಲವನ್ನು ಕಳೆದು ನೀರಿನಬಟ್ಟಲನ್ನು ತೆಗೆವುದಕ್ಕೆ ಬದಲಾಗಿ, ಚೀಲದಿಂದ ಮತ್ತೊಂದು ಜಲಯಂತ್ರವನ್ನು ತೆಗೆದುಕೊಂಡು, ಮನೆಯ ನಡುಹಜಾರಕ್ಕೆ ಬಂದು ಸೂರ್ಯನಿರುವ ಸ್ಥಲವನ್ನು ದೃಷ್ಟಿಸಿ ನೋಡಿ, ಮರಳಿ ಕೊಠಡಿಯೊಳಕ್ಕೆ ಬಂದು, ಅಯ್ಯಾ ! ಈದಿನ ಶುಕ್ರವಾರ. ಅಲ್ಲದೆ ದೊಡ್ಡ ಇಸ್ಕಂದರನಶಕೆಯಲ್ಲಿ ಏಳುನೂರಿಪ್ಪತ್ತನೆ ಸಂವತ್ಸರಕ್ಕೆ ಸರಿಯಾದ ನಮ್ಮ ಪ್ರಧಾನ ದೀರ್ಘದರ್ಶಿಗಳು ಮಕ್ಕಾದಿಂದ ಮದೀನಾಕ್ಕೆ ಹೊರಟುಬಂದ ಜರಿಯೆಂಬಶಕೆಯಲ್ಲಿ ಆರುನೂರ ಎಂಭತ್ತೊಮ್ಮೂರನೆಯ ವರ್ಷವು, ಸಫರ್ ತಿಂಗಳಲ್ಲಿ ಹದಿನೆಂಟನೆದಿನ, ಈದಿನ ಬುಧ ಕುಜ ಯೋಗವಾದುದರಿಂದ, ಈ ದಿನವೂ, ಈ ವೇಳೆಯೂ, ಕ್ಷೌರಕ್ಕೆ ಯೋಗ್ಯವಾದುದೇಹೊರತು, ನಿನಗಾದರೆ ಈ ಯೋಗವು, ಉತ್ತಮವಾದುದಲ್ಲ. ಅದರಿಂದ ನನಗೆ ತೋರುವುದೇನಂದರೆ :-ನಿನಗೆ ಮಹತ್ತಾದ ಆಪದವು ಸಂಭವಿಸುವುದು. ಆದರೆ ಪ್ರಾಣಭಯವೇನೂ ಇಲ್ಲ. ಇಂತಹ ದುರವಸ್ಥೆಯು ಪ್ರಾಪ್ತವಾಗುವುದಕ್ಕೆ ಮೊದಲೇ, ನೀನು ಎಚ್ಚರಿಕೆಯಾಗಿರುವುದಕ್ಕಾಗಿ, ನಾನು ಹೇಳಿದ ಬುದ್ಧಿವಾದವನ್ನು ಕುರಿತು, ನೀನು ನನ್ನಲ್ಲಿ ವಿಶ್ವಾಸವುಳ್ಳವನಾಗಿ ಇರಬೇಕು. ನಿನಗಂತಹವ್ಯಸನವು ಪ್ರಾಪ್ತವಾದರೆ, ನಾನು ಮಹತ್ತರವಾದ ವ್ಯಸನವನ್ನು ಹೊಂದುವೆನು.

ಮಹಾತ್ಮರೇ ! ಇಂತಹ ಅಧಿಕಪ್ರಸಂಗಿಯಾದ, ಆ ಕ್ಷೌರಿಕನಿಂದ ಆಕಾಲದಲ್ಲಿ ನನಗೆಂತಹ ವ್ಯಸನ ಉಂಟಾಗಿರಬಹುದು, ನೀವೇ ಯೋಚಿಸಿ, ನಂತರ ನಾನು ಈತನಮೇಲೆ ಕೋಪಿಸಿಕೊಂಡು, ನಿನ್ನ ಜ್ಯೋತಿಷವನ್ನಾಗಲಿ, ಶಕುನವನ್ನಾಗಲಿ, ಕೇಳುವುದಕ್ಕಾಗಿ ನಿನ್ನನ್ನು ಕರೆಸಿದವನಲ್ಲ. ನಿನಗೆ ಇಷ್ಟವಾದರೆ ಕೆಲಸ ಮಾಡು, ಇಲ್ಲವಾದರೆ ಹೊರಟುಹೋಗು ಎಂದು ಸಾಮಾನ್ಯವಾಗಿ ಕಾಮುಕರ ಗುಣವನ್ನು ಹಿಡಿದು ಪ್ರಾತನಾಡಿದೆನು. ಅಯ್ಯಾ ! ಏಕೆ ಕೋಪಿಸಿಕೊಳ್ಳುವಿರಿ. ಈ ಊರಿನಲ್ಲಿರುವ ಇತರನಾವಿಪಿತರು ನನಗೆಂದಿಗೂ, ಸಮಾನರಾಗಲಾರರು. ನಾನು ಕುಲಕಸಬಿನಲ್ಲಿ ಜಾಣ.

ತರ್ಕಶಾಸ್ತ್ರನಿಪುಣ. ಜ್ಯೋತಿಷದಲ್ಲಿ ಪ್ರವೀಣ. ವೈಯಾ್ಯಕರಣನಾದುದ ರಿಂದ, ವಾ್ಯಕರಣದಲ್ಲಿ ಅಸಮಾನ. ಸಂಖ್ಯಾಗಣಿತ, ಬೀಜಗಣಿತ, ರೇಖಾ ಗಣಿತಗಳಲ್ಲಿ ಪಂಡಿತ. ಇಷ್ಟಕ್ಕೂ ಸರಿಯೊದ ವಾಗ್ವೈಖರಿಯನ್ನು ಹೊಂದಿದ ವಾಕ್ಪಟುತ್ವವುಳ್ಳ ವಾಜ್ಮಯಪ್ರಪಂಚದಲ್ಲಿರುವ, ನಾನಾಶಾಸ್ತ್ರ ಗಳನ್ನು ಬಲ್ಲವನಾದರೂ, ವೇದಾಂತಸಿದಾ್ಧಂತವನ್ನೂ, ಬೋಧಾಯನ ಸೂತ್ರವನ್ನೂ, ಕರತಲಾಮಲಕವಾಗಿ ತಿಳಿದಿರುವೆನು. ನಮ್ಮ ಮತ ಗ್ರಂಥಗಳೆಲ್ಲವನ್ನೂ ತಿಳಿದಿರುವೆನು. ನಾನು ಈ ದೇಶದಲ್ಲೆಲ್ಲಾ ಪ್ರಬಲ ನಾದ ಕವೀಶ್ವರನು. ನನಗೆ ತಿಳಿಯದಿರತಕ್ಕ ವಿಷಯೆಗಳೇ ಇಲ್ಲವು. ನನ್ನ ಪ್ರೀತಿಪಾತ್ರನಾದ ತಂದೆಯು, ನನ್ನನ್ನು ಈತರದಿಂದ ಪ್ರಬಲನನ್ನಾಗಿ ಮಾಡಿದನಾದಕಾರಣ, ಆತನನ್ನು ನೆನಸಿಕೊಂಡ ಕಾಲದಲ್ಲೆಲ್ಲ ಮಹಕಾ್ಷದ ವ್ಯಸನ ಉಂಟಾಗುವುದು. ಆತನಿಗೆ ನನ್ನಯೋಗ್ಯತೆಯು ಸಂಪೂರ್ಣ ವಾಗಿ ತಿಳಿಯುವುದು. ಆತನು ಹೋದಕಡೆಯಲ್ಲೆಲ್ಲಾ ನನ್ನ ಪ್ರಸಕ್ತಿ ಯನ್ನೇ ಅಧಿಕವಾಗಿ ಹೊಗಳುತ್ತಿರುವನು. ಆತನಿಗೆ ನನ್ನಲ್ಲಿರುವ ವಿಶ್ವಾಸದ ಮೂಲಕವಾಗಿ, ನನಗೆಬರುವ ಆಪತ್ತುಗಳನ್ನು ನಾಶಮಾಡಿಸಬೇಕೆಂದು ಕೊರುವೆನೆಂದು ಹೇಳಿದನು. ಈ ಮಾತುಗಳನ್ನುಕೇಳಿ ನಾನು ಅತ್ಯಂತ ವ್ಯಸನದಿಂದ ಕುದಿಯುತ್ತಿದ್ದರೂ, ಹುಸಿನಗೆಯೆನ್ನುಬೀರುತ್ತ ಅಯ್ಯಾ! ನಿನ್ನ ಮಾತುಗಳನ್ನು ನಿಲ್ಲಿಸಿ, ಕ್ಷೌರವನ್ನು ಮಾಡಲಾರೆಯಾ! ಎಂದು ಕೇಳಿದೆನು. ಇಂತೆಂದು ನುಡಿದು, ಷಹರಜೋದಿಯು ಮರುದಿನ ಬೆಳಗಿನ ಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೧೬೧ ನೆಯ ರಾತ್ರಿ ಕಥೆ.

ಷಹರಜೋದಿಯು ಸುಲ್ತಾನರನ್ನು ಕುರಿತು, ಇಂತೆಂದಳು:— ಅಯ್ಯಾ! ನೀನಾದರೆ ನನ್ನನ್ನು ಅಧಿಕಪ್ರಸಂಗಿಯೆಂದು ಹೇಳುತ್ತಿರುವೆ. ಆದರೆ ಲೋಕದ ಜನರೆಲ್ಲರೂ, ನನ್ನನ್ನು ವಿತಭಾಷಿಯೊದ ಪುರುಷನೆಂದು ಹೇಳುತ್ತಿರುವರು. ಆದರೆ ಆಜನರೆ ನನ್ನಕೂಡ ಹುಟ್ಟಿದವರಾದ ಆರು ಜನ ಅಣ್ಣತಮ್ಮಂದಿರನ್ನು, ಅಧಿಕಪ್ರಸಂಗಿಗಳೆಂದು ಹೇಳುವರು. ಅವ ರನ್ನು ನೀನು ನೋಡಿದರೆ, ಏನುಹೇಳುತ್ತಿದ್ದೆಯೋಕಾಣೆನೆಂದು ಹೇಳಲು, ಮಹನೀಯರೇ! ನಾನು ಈವಿಧವಾದ ಕೊರತೆಯಿಂದ ಕೊರಗುತ್ತಿದ್ದು,

ನನ್ನ ಉಗಾ್ರಣದವನನ್ನು ಕುರಿತು, ಅಯ್ಯಾ! ಈತನಿಗೆ ಮೂರುವೊಹರಿ ಗಳನ್ನು ಕೊಟ್ಟುಬಿಡು. ಹಾಗಾದರೂ ಹೋಗುವನೇಸೊ ಎಂದು ನುಡಿ ಯಲು, ಈ ನಾಯಿಂದನು ನನ್ನನ್ನು ನೋಡಿ, ಅಯ್ಯಾ! ನಾನಾಗಿ ನಿಮ್ಮ ಮನೆಗೆಬಂದವನಲ್ಲ! ನೀವಾಗಿ ನನ್ನನ್ನು ಕರೆಸಿದುದರಿಂದ ನಾನು ಶ್ರಾೌರವನ್ನು ಪೂಾಹದೆ ಎಂದಿಗೂ ಹೊರಕ್ಕೆ ಹೊರಡತಕ್ಕವನಲ್ಲವೆಂದು ಪ್ರಮಾಣಪೂರ್ವಕ ವಾಗಿ ಹೇಳುವೆನು. ನಿಮ್ಮ ತಂದೆಯು ನನ್ನ ಯೋಗ್ಯತೆಯನ್ನು ಚೆನ್ನಾಗಿ ತಿಳದುಕೊಂಡಿದ್ದುದರಿಂದ, ನಾನು ಅವರಬಳಿಯಲ್ಲಿ ಕುಳಿತು ತೃಪ್ತಿಕರ ವಾಗಿ ಮಾತನಾಡುತ್ತ, ನನ್ನ ಉದ್ಯೋಗದಮಹಿಮೆಯನ್ನು ತೋರಿಸಲು, ನೀನು ಉತ್ತಮನಾದ ಕಾರೀಗಾರನಾಗಿಯೂ, ಒಳ್ಳೆಯ ಪಾಂಡಿತ್ಯವುಳ್ಳವ ನಾಗಿಯೂ, ಇರುವೆ. ನಿನ್ನಂತಹ ಪುಣ್ಯಾತ್ಮರು ಮತ್ತಾರೂ ಇಲ್ಲ ವೆಂದು ಹೊಗಳುತ್ತಿದ್ದನು. ನಾನಾದರೋ ಆತನನ್ನು ನೋಡಿ ಅಯ್ಯಾ! ನನಗೆ ನೀವು ಬಹುವಾಗಿ ಮರಾ್ಯದೆ ಮಾಡುತ್ತಿರುವಿರಿ. ನನ್ನಲ್ಲಿ ಅಂತಹ ದೊಡ್ಡ ಗುಣಗಳೇನಾವರೂ, ಕಾಣಬಂದರೆ, ಅದು ನಿಮ್ಮಂಥವರ ಪಾದ ಸೇವಾಬಲದಿಂದ ದೊರತುದೇಹೊರತು, ಮತ್ತು ಬೇರೆ ಇಲ್ಲವೆಂದು ಹೇಳಿ, ಆತನ ಇಷಾ್ಟನುಸಾರವಾಗಿ ಸ್ವಲ್ಪಹೊತ್ತು ಮಹದ್ವಿಷಯೆಗಳನ್ನು ಕುರಿತು ಚರ್ಚಿಸುತ್ತಿರುವಲ್ಲಿ ಆತನು ನನಗೆ ಒಂದುನೂರುವೊಹರಿಗಳನ್ನು ಕೊಡು ತ್ತಿದ್ದನು ಎಂದು ಹೇಳದುದಲ್ಲದೆ, ಇನ್ನೂ ತರತರವಾದ ಮಾತುಗಳನ್ನು ಆಡಿ, ಕಾಲವನ್ನು ಕಳೆಯುತ್ತಿದ್ದನು. ಆತನಮಾತುಗಳನ್ನು ಕೇಳುವುದಕ್ಕೆ ಅಸಹ್ಯವಾಗಿ, ನನ್ನ ಕಾರ್ಯವು ನೆರವೇರದೆ ಹೊತ್ತುಹೋಗುತ್ತಿರುವುದ ರಿಂದ ನಾನು ಆತನನ್ನು ಕುರಿತು, ಅಯ್ಯಾ! ನಿನ್ನತಹ ಮನುಷ್ಯನು ಈ ಲೋಕದಲ್ಲಿರುವನೇ! ಎಂದು ಕೇಳದೆನು. ಇಂತೆಂದು ಹೇಳಿ, ಪಹರ ಜಾವಿಯು ಬೆಳಗಾದಕೂಡಲೆ, ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೧೬೨ ನೆಯ ರಾತ್ರಿ ಕಥೆ.

ನಂತರ ಪಹರಜಾವಿಯು ಸುಲ್ತಾನರನ್ನು ಕುರಿತು, ಬಾಗದಾದು ನಗರದ ಕುಂಟಮನುಷ್ಯನು ಇಂತೆಂದನೆಂದು ಹೇಳಿದಳು. ಒಳಕ ನಾನು ಆತನಸಂಗಡ ಉತ್ತಮತರದ ಸಂಭಾಷಣೆಯನ್ನು ಮಾಡತೊಡಗಿ, ಅಯ್ಯಾ! ನಿನ್ನಧರ್ಮ ಸದ್ಯಕ್ಕೆ ಕೆಲಸವನ್ನು ಆಗವಾಡು. ನಾನು ಜರೂರಾಗಿ

ಒಂದುಕಡೆಗೆ ಹೋಗಬೇಕಾಗಿರುವುದೆಂದು ಮೊದಲೆ, ನಿನ್ನಸಂಗಡ ಹೇಳಿ ಕೊಂಡೆನಲ್ಲ, ಎಂದು ವಿನಯದಿಂದ ಹೇಳಲು, ಆತನು ಫಕ್‌ಫಕನೆ ನಕ್ಕು ಕಾವು ಮೊದಲಿಸಿಂದಲೂ ಹೀಗೆ ಬುದ್ಧಿವಂತರಾಗಿದ್ದರೆ, ಬಹುಚೆನ್ನಾಗಿದ್ದಿತು. ಆದರೆ ತಮಗುಂಟಾದ ಕೋಪವು ತಮ್ಮ ರೋಗದಿಂದಲೆ ಎಂದು, ನಾನು ಖಂಡಿತವಾಗಿ ಹೇಳುವೆನು. ಅಲ್ಲದೆ ನಿಮ್ಮ ತಂದೆಯು ತಾನುಮಾಡುತ್ತಿದ್ದ ಯಾವ ಕಾರ್ಯಕ್ಕೂ, ನನ್ನ ಆಲೋಚನೆಯನ್ನು ಕೇಳದೆ ಎಂದಿಗೂ ಮಾಡಿದವನಲ್ಲ! ಈ ಮಾತನ್ನು ನಾನೆಂದಿಗೂ ಡಂಬವಾಗಿ ಹೇಳತಕ್ಕವನಲ್ಲ. ನೀನೇ ಚೆನ್ನಾಗಿ ಯೋಚಿಸಿನೋಡು. ಉತ್ತಮರಾದ ವಿವೇಕಿಗಳಮಾತನ್ನು ಅವರ ಹಿತಭಾಷೆಯನ್ನು ಕೇಳದೆ, ಯಾರುತಾನೆ ತಮ್ಮ ಕಾರ್ಯಗಳನ್ನು ಸಾಧಿಸಿಕೊಳ್ಳಬಲ್ಲರು? ವಿವೇಕಿಗಳ ಮಾತನ್ನು ಕೇಳದ ಮಾನವನು ಎಂದಿಗೂ ಬುದ್ಧಿಶಾಲಿಯೆಂಬ ನಾಣ್ಯುಡಿಯೊಂದು ಇರುವುದು. ನಾನು ಈಗ ನಿಮ್ಮ ಸ್ವಾಧೀನನಾಗಿರುವುದರಿಂದ ಆಜ್ಞೆ ಮಾಡಿದರೆ ಸಾಕು ಎಂದು ನುಡಿದನು. ಬಳಿಕ ನಾನು ಅಯ್ಯಾ! ನಿನ್ನಪ್ರಸಂಗದಿಂದ ನನಗೆ ತುಂಬ ಆಯಾಸ ಉಂಟಾಗುವುದಲ್ಲದೆ, ಕಾರ್ಯಹಾನಿಯೂ ಆಗುವುದಲ್ಲವೆ! ಕೆಲಸಮಾಡುವಹಾಗಿದ್ದರೆ ಮಾಡು, ಇಲ್ಲವಾದರೆ ಹೊರಡೆಂದು ಹೇಳಿದೆನು.

ಆಗ ನನಗೆ ಕೋಪ ಉಂಟಾಯಿತ್ತೆಂದು ತಿಳಿದು, ಆತನು ತಲೆಗೆ ಸಾಬೂನು ಹಚ್ಚಿ ನಾಲ್ಕುಸಾರಿ ತಲೆಯಮೇಲೆ ಕತ್ತಿಯನ್ನು ಆಡಿಸಿ, ಅಯ್ಯಾ! ನೀನು ಬಹು ಆತುರದಲ್ಲಿರುವೆ. ಇಂತಹ ಆತುರದ ಕೆಲಸವು ಎಂದಿಗೂ, ಹೋಗ್ಯವಾದುದಲ್ಲ. ಇದು ರಾಕ್ಷಸಕೃತ್ಯ, ನಾನು ನಿನಗಿಂತಲೂ ದೊಡ್ಡವನಾದುದರಿಂದ, ನಿನಗೆ ಬುದ್ಧಿಯನ್ನುಹೇಳುವ ಬಾಧ್ಯತೆಯನ್ನು ಹೊಂದಿರುವೆನೆಂದನು. ಬಳಿಕ ನಾನು ಆತನಿಗೆ ನಮಸ್ಕಾರ ಮಾಡಿ ಅಯ್ಯಾ! ಕ್ಷೌರವನ್ನು ಮಾಡು. ನನಗೆ ತ್ವರೆಯಾಗಿ ಹೋಗಬೇಕಾದ ಕಾರ್ಯವಿರುವುದೆಂದು, ನಾನು ಮೊದಲೆ ನಿನಗೆ ಹೇಳಿದ್ದೆನಲ್ಲಾ! ಎನಲು ಹೌದು. ನೀವು ಹೊರಡಬೇಕೆಂದು ಊಹಿಸಿರುವ ಕಾರ್ಯವನ್ನು ನಾನು ತಿಳಿದು ಹೇಳಲೆ ಅಥವಾ ನೀವೆಯಾದರೂ ಹೇಳುವಿರೊ. ನೀವು ಅದನ್ನು ಹೇಳಿದರೆ, ನನಗೆ ತೋರಿದಂತೆ ನಿಮಗೆ ಅನುಕೂಲವಾದ ಉಪಾಯವನ್ನು ಹೇಳುತ್ತಿದ್ದೆನು. ಈಗಲೇ ದಯಮಾಡಿ ನನಗೆ ತಿಳಿಸಿದಲ್ಲಿ ಅದನ್ನು

ಸಾಧಿಸುವುದಕ್ಕೆ ತಕ್ಕ ಉಪಾಯವನ್ನು ಹೇಳುವೆನು. ನಿಮ್ಮ ಕಾರ್ಯಕ್ಕಾಗಿ, ನೀವು ಹೊರಡಬೇಕಾದರೆ, ಮಧ್ಯಾಹ್ನಕಾಲವನ್ನು ನಿಶ್ಚಯಿಸಿ ಇರುವುದರಿಂದ, ಇನ್ನೂ ಎರಡುಗಳಿಗೆಗಳ ಕಾಲವಿರುವುದು. ಉತ್ತಮರಾದಜನರು ತಾವು ಮಾಡುವ ಕಾರ್ಯಕ್ಕೆ ಕಾಲವನ್ನು ಮೊದಲೆ ಗೊತ್ತು ಮಾಡಿಕೊಂಡು, ಅದರಂತೆ ನಡೆಸುವರಲ್ಲಾ ! ಎಂದು ಹೇಳಿದನು. ಬಳಿಕ ನಾನು ಆತನನ್ನುಕುರಿತು ಅಯ್ಯಾ ! ನಿನ್ನ ಸಂಗಡ ರಹಸ್ಯವನ್ನು ಹೇಳಬೇಕಾದರೆ, ನಿನ್ನಂತಹ ಬಾಯಿಬಡುಕನು ಹೇಳಬೇಕೇಹೊರತು ನನ್ನಂಥವರೆಂದಿಗೂ ಹೇಳಲಾರರೆಂದು, ನುಡಿದೆನು. ಬಳಿಕ ಆತನು ನನಗೆ ಕೋಪವು ಅಧಿಕವಾದುದನ್ನು ತಿಳಿದು ಕತ್ತಿಗಳನ್ನು ತಿರುಗಿಸುವುದರಲ್ಲಾ, ಜಲಯಂತ್ರವನ್ನು ತಿರುಗಿಸಿ ನೋಡುವುದರಲ್ಲಾ, ಕಾಲಹರಣವನ್ನು ಮಾಡತೊಡಗಿದನು. ಇಂತೆಂದು ಷಹರಜಾದಿಯು ನುಡಿದವಳಿಗೆ ಸೂರ್ಯೋದಯವಾಗಲು ಕಥೆಯನ್ನುನಿಲ್ಲಿಸಿ, ಮರುದಿನದ ಬೆಳಗಿನ ಜಾವದಲ್ಲಿ ಪುನಹ ಹೇಳಲು ಆರಂಭಿಸಿದಳು.

೧೬೩ ನೆಯ ರಾತ್ರಿ ಕಥೆ.

ಬಳಿಕ ಆ ಕುಂಟಹುಡುಗನು ಹೇಳಿದುದೇನಂದರೆ :—ಆತನು ಪುನಹ ಕತ್ತಿಯನ್ನು ತೆಗೆದುಕೊಂಡು ಅರ್ಧ ಕ್ಷೌರಮಾಡಿ, ಕತ್ತಿಯನ್ನು ಕೆಳಗಿಟ್ಟ ಅಯ್ಯಾ ! ನಾನು ಹೇಳುವ ಮಾತನ್ನು ಕೇಳು, ನಿನಗೆ ಉತ್ತಮವಾದ ಯೋಚನೆಯನ್ನು ಹೇಳುವುದಕ್ಕಾಗಿ, ನಿನ್ನನ್ನು ಈತೆರದಿಂದ ನಿರ್ಬಂಧಪಡಿಸುತ್ತಿರುವೆನು. ದಯವಮಾಡಿ ನನಗೆ ಅದನ್ನು ತಿಳಿಯೆ ಹೇಳೆಂದು ನುಡಿದು, ತನ್ನಬಳಿಯಲ್ಲಿದ್ದ ಜಲಯಂತ್ರವನ್ನು ಆಗಾಗ್ಗೆ ನೋಡುತ್ತಾ, ಹೊತ್ತುಕಳೆಯುತ್ತಿದ್ದನು. ಆಗ ನಾನು ಆತನನ್ನುನೋಡಿ ಎಲಾ ! ದುರಾತ್ಮ ! ಕಾರ್ಯನಾಶಕನಾದ ಪಾಪಿ ! ಈದಿನ ನನಗೆ ನೀನಲ್ಲಿದೊರತೆ ! ನಿನ್ನನ್ನು ನಾನೇನುಮಾಡುವೆನೊ ನೋಡು ಎಂದು ಹೇಳಿದೆನು. ಅದಕ್ಕಾತನು ಕೋಪಿಸಿಕೊಳ್ಳದೆ, ಸ್ವಾಮಿ ! ಕೋಪಮಾಡಬೇಡಿ. ನೀವು ಹೋಗಬೇಕಾದ ಕಾಲವು ಇನ್ನೂ ದೂರವಾಗಿರುವುದು. ಸಂತೋಷವಾಗಿ ನನ್ನಸಂಗಡ ಮಾತನಾಡಿ, ನಿಮ್ಮ ಕಾರ್ಯವನ್ನು ನಾನೆಂದಿಗೂ ಕೆಡಿಸುವುದಿಲ್ಲವೆಂದು, ಕತ್ತಿಯನ್ನು ತೆಗೆದುಕೊಂಡು, ಮೂರುನಿಮಿಷಗಳು ಕೆಲಸ

ಮಾಡಿ ನಂತರ, ನನ್ನನ್ನು ನೋಡಿ, ಅಯ್ಯಾ ! ನೀನು ಹೋಗಬೇಕಾಗಿರುವ ಸ್ಥಲವಾವುದು, ಮಾಡಬೇಕಾಗಿರುವ ಕಾರ್ಯವೇನು ದಯವಿಟ್ಟು ತಿಳಿಸಿದರೆ, ನಾನು ನಿನ್ನ ಮನಸ್ಸು ತೃಪ್ತಿಪಡಿಸುವುದಲ್ಲದೆ, ಕಾರ್ಯವೂ ಕೈಗೂಡುವಂತೆ ಮಾಡುವೆನೆಂದು ಹೇಳಿದನು. ಆಗ ನಾನು ನನ್ನ ಸ್ನೇಹಿತರು ಔತನಕ್ಕೆ ಕರೆದಿರುವುದರಿಂದ, ಹೋಗಬೇಕೆಂದು ಹೇಳಿದೆನು. ನಾನು ಔತನಕ್ಕೆ ಹೋಗಬೇಕೆಂಬ ಮಾತನ್ನು ಹೇಳಿದಕೂಡಲೆ, ಆತನು ಅತಾ ್ಯನಂದದಿಂದ ಅಯ್ಯೋ ! ನನ್ನನ್ನು ಆ ದೊಡ್ಡವನುಷ್ಯನು, ಊಟಕ್ಕೆ ಕರೆದಿದ್ದನು. ನಾನು ಹೋಗಬೇಕೆಂಬ ಅಭಿಲಾಷೆಯಿಂದ ಬೆಳಗಿನಿಂದಲೂ, ಏನೂತಿನ್ನದೆ ಇರುವೆನು, ಎಂದು ಹೇಳಲು, ಅಯ್ಯಾ ! ನೀನು ದಯವಿಟ್ಟು ಕ್ಷೌರ ಮಾಡಿದರೆ, ನಿನಗೆ ಔತನಕ್ಕೆ ಬೇಕಾದ ಸಾವಮಾನುಗಳೆಲ್ಲವನ್ನೂ, ನಾನು ಕೊಡಿಸಿ ಉತ್ತಮವಾದ ಭೋಜನವನ್ನು ಸಿದ್ಧಪಡಿಸುವೆನು.

ಆದರೆ ನನ್ನತಂದೆಯು ನಿನ್ನಮಾತಿಗಾಗಿ ಬಹುಮಾನವನ್ನು ಮಾಡುತ್ತಿದ್ದನೆಂದು ನೀನು ಹೊಗಳುತ್ತಿದ್ದೆಯಲ್ಲಾ ! ನಾನಾದರೋ ಈಗ ನೀನು ಮಾತನಾಡದೆಹೋದರೆ ಅದಕ್ಕಿಂತಲೂ, ಅತ್ಯಂತ ಅಧಿಕವಾದ ಬಹುಮಾನವನ್ನು ಕೊಡುವೆನು ಎಂದಕೂಡಲೆ, ಆತನು ಅಯ್ಯಾ ! ಭಗವಂತನು ನಿಮ್ಮ ಐಶ್ವರ್ಯವನ್ನು ವೃದ್ಧಿಮಾಡಲಿ ! ನೀವು ಕೊಡುವ ಬಹುಮಾನವು ಇರಲಿ ! ನಾನು ನನ್ನ ಸ್ನೇಹಿತರಿಗೆ ಔತನ ಮಾಡುವುದಕ್ಕಾಗಿ, ಕೊಡುವ ಸಾವಮಾನುಗಳನ್ನು ಕೊಡಿಸಿರಿ, ನೋಡಬೇಕೆಂದು ಹೇಳಿ ತಂದುಕೊಟ್ಟ ಪದಾರ್ಥಗಳೆಲ್ಲವನ್ನು ನೋಡುತ್ತಾ, ಕಾಲವನ್ನು ಕಳೆದು, ಇಲ್ಲದ ವ್ಯಾಜ್ಯವನ್ನು ಹೂಡಿ, ಮಾತನಾಡತೊಡಗಿದನು. ಪುನಹ ನಾನು ಆತನವೀಲೆ ಕೋಪವಮಾಡಿಕೊಳ್ಳಲು, ಆತನು ನಾಲ್ಕು ನಿಮುಷಗಳು ಕೆಲಸವಮಾಡಿ, ಅಯ್ಯಾ ! ನಿಮ್ಮಲ್ಲಿ ಇಂತಹ ಉದಾರಭಾವವಿರುವುದೆಂದು ತಿಳಿದಿರಲಿಲ್ಲ. ಇದರಿಂದ ಸತ್ತುಹೋದ ನಿಮ್ಮತಂದೆಯೇ ಇನ್ನು ಬದುಕಿರುವಂತೆಯೆ ತೋರುವುದು. ನಿಮ್ಮ ಉದಾರಗುಣಕ್ಕೆ ನಾನು ಪಾತ್ರನೆಂಬುದಕ್ಕೆ ನನಗೆ ಕೆಲವುಸಂಗತಿಗಳು, ಜ್ಞಾಪಕಕ್ಕೆ ಬರುವುದು ಹೇಗಂದರೆ :— ಸ್ನಾನಕಾಲದಲ್ಲಿ ಮೈಯೆಜ್ಜುವವನಾದ ಜೊಂಟವುಟು, ಕಡಲೆಗುಗ್ಗರಿಯನ್ನು ಮಾರುವ ಸಾಲಿ, ಅವರೇಕಾಯಿನ್ನು ಮಾರುವ ಸಾಲಿವ, ತರಕಾರಿ

ಯನ್ನು ಮಾಡುವ ಆಕರುಷ, ದಾರಿಯನ್ನು ಗುಡಿಸುವ ಅಬೋವಿ, ಕಲೀಫರ ಸೇವಕರಲ್ಲಿ ಒಬ್ಬನಾದ ಕಾಸೀಮು, ಇವರುಗಳ ಜ್ಞಾಪಕವು ನನಗೆ ತೋರುತ್ತಿರುವುದು. ಇವರಲ್ಲೊಬ್ಬರಾದರೂ ವ್ಯಸನವಡತಕ್ಕವರಲ್ಲ. ಎಲ್ಲರೂ ಸುಲ್ತಾನರಿಗಿಂತಲೂ, ಅಧಿಕವಾದ ಆನಂದವನ್ನೇ ವಹಿಸಿಕೊಂಡಿರುವರು. ಅವರು ಸದಾ ಸಂಗೀತಸಾಹಿತ್ಯ ನೃತ್ತ ಗೀತ ವಾದ್ಯಗಳ ಸೊಬಗನ್ನು ಅನುಭವಿಸುತ್ತ, ಈ ನಗರದಲ್ಲಿರುವ ಸಮಸ್ತವಾದ ವಿನೋದಗಳನ್ನು ಅನುಭವಿಸುತ್ತಿರುವರು. ಇಂಥವರಲ್ಲಿರುವ ಒಂದು ಸುಗುಣವನ್ನು ನಾನು ಮೆಚ್ಚಿಕೊಂಡೆನು. ಅದೇನೆಂದರೆ :—ಈ ನಿಮ್ಮ ಸೇವಕನಾದ ನಾನು ಯಾವಾಗಲೂ ಹೇಗೆ ಮಾತನಾಡುವುದರಲ್ಲಿ ವಿಶೇಷಾಸಕ್ತಿಯನ್ನಿಟ್ಟಿಕೊಂಡಿರುವೆನೊ, ಹಾಗೆ ಅವರೂ ಇರುವರಲ್ಲದೆ, ಒಂದುಮಾತನ್ನಾದರೂ, ಹೆಚ್ಚಾಗಿ ಆಡಲಾರರೆಂಬುದೊಂದೇ, ಅವರು ಮಾಡುವ ಸಕಲ ಕಾರ್ಯಗಳನ್ನು ನನಗೆತಿಳಿಸಿ, ಅದರ ಗುಣಾಗುಣಗಳನ್ನು ನನ್ನಿಂದ ಕೇಳಿ ತಿಳಿದುಕೊಳ್ಳುತ್ತಿದ್ದರು. ಇಂತೆಂದು ಹೇಳಿ ಷಹರಜೌದಿಯು ಬಿಳಗಾದಕೂಡಲೆ ಕಥೆಯನ್ನು ನಿಲ್ಲಿಸಿ, ಮರಳಿ ಮರುದಿನ ಬಿಳಗಿನ ಜಾವದಲ್ಲಿ ಪುನಹಾ ಹೇಳಲಾರಂಭಿಸಿದಳು.

೧೬೪ ನೆಯ ರಾತ್ರಿಯ ಕಥೆ.

ಷಹರಜೌದಿಯು ಸುಲ್ತಾನರನ್ನು ಕುರಿತು, ಆ ಕುಂಟಹುಡುಗನು ಇಂತೆಂದನೆಂದು ಹೇಳತೊಡಗಿದಳು. ಅಯ್ಯಾ! ಬಹಳವಾಗಿ ಹೇಳಿದುದರಿಂದ ಫಲವೇನು. ಅವರು ತಾವು ಆನಂದಭರಿತರಾಗುವಂತೆ ತಮ್ಮ ಸಂಗಡ ಸೇರಿದ ಇತರರನ್ನೂ ಸಂತೋಷಸಾಗರದಲ್ಲಿ ಮುಳುಗಿಸುವರು. ನೀವು ನಿಮ್ಮ ಸ್ನೇಹಿತರ ಮನೆಗೆಹೋದರೆ, ನಿಮ್ಮ ವ್ಯಥೆಯು ಇನ್ನೂ ಅಧಿಕವಾಗಬಹುದು. ಆದುದರಿಂದ ನೀವು ನಾನು ಹೇಳುವ ಮಾತನ್ನು ಅಂಗೀಕರಿಸಿ, ನನ್ನ ಮನೆಗೆ ಬರುವುದಾದರೆ, ನಿಮಗೆ ಸದಾ ಆನಂದ ಉಂಟಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ನೀವು ನಾನುಹೇಳಿದ ಮಾತುಗಳನ್ನು ನಿಜವೆಂದು ನಂಬಿ, ನನ್ನ ಮನೆಗೆಬಂದು ನೋಡಿದರೆ, ಅದರ ಆನಂದವನ್ನು ನೀನೆ ಕೊಂಡಾಡುತ್ತಿರುವೆಯೆಯಯ್ಯಾ! ಎಂದು ಈ ನಾಯಿಂದನು ಬಾಯಿ ಬಿಡಿದನು. ಆ ಮಾತುಗಳನ್ನು ಕೇಳಿದಕೂಡಲೆ, ನನಗೆ ಅತ್ಯಂತವಾದ

ಕೋಪ ಬಂದರೂ, ನಾನು ಅದನ್ನು ಮರೆಮಾಚಿ ಹುಸಿನಗೆಯೆನ್ನು ಬೀರುತ್ತಾ, ಅಯ್ಯಾ ! ನನಗೆ ಕೆಲಸವಿಲ್ಲದಿದ್ದರೆ, ನಾನು ನಿನ್ನಮನೆಗೆ ಬರುತ್ತಿದ್ದೆನು. ಈದಿನ ನನಗೆ ತುಂಬ ಆವಶ್ಯಕವಾದ ಕಾರ್ಯವಿರುವುದು. ಈದಿನದಮಟ್ಟಿಗೆ ನನ್ನ ಇಷ್ಟಾನುಸಾರವಾಗಿ ಮಾಡಬೇಕಾಗಿರುವುದು. ಆದುದರಿಂದ ಬೇಗ ಕ್ಷೌರಮಾಡಿ ನಿನ್ನಷ್ಟಕ್ಕೆನೀನು ಹೊರಟುಹೋಗು. ಬಂದುವೇಳೆ ನಿನ್ನಸ್ನೇಹಿತರು ಬಂದು ಕಾದುಕೊಂಡಿರಬಹುದೆಂದು ಹೇಳಿದೆನು. ಆದರೂ ಆತನು ಸುಮ್ಮನಾಗದೆ, ಅಯ್ಯಾ ! ನಾನು ಹೇಳಿದಮಾತುಗಳನ್ನುಕೇಳಿ, ನನ್ನಸ್ನೇಹಿತರು ಬಹು ಒಳ್ಳೆಯವರು. ನೀವು ಬಂದು ಸಾರಿ ನನ್ನಮನೆಗೆಬಂದು ನಮ್ಮ ಸಮೂಹದಲ್ಲಿ ಕಲೆತುದುದೇ ಆದರೆ, ಬಳಿಕ ನಿಮ್ಮಸ್ನೇಹಿತರೆಲ್ಲರನ್ನೂ ಮರತೇಬಿಡುವಿರಿ. ಆದುದರಿಂದ ನೀವು ನಮ್ಮ ಸ್ನೇಹವನ್ನೆಂದಿಗೂ, ಬಿಡಲಾರದೆ ಆನಂದಸಂತೋಷದಲ್ಲಿ ಮುಳುಗಿರುವಿರಿ ಎಂದು ಹೇಳಲು, ನಾನು ಈ ವಿಷಯವನ್ನು ಕುರಿತು, ನೀನು ಮಾತನಾಡಬೇಡ, ನಾನು ನಿನ್ನಮನೆಗೆ ಬರುವುದಿಲ್ಲವೆಂದು ಹೇಳಿದೆನು.

ಹೀಗೆ ವಿನಯದಿಂದಲೂ, ಕೋಪದಿಂದಲೂ, ಆತನನ್ನು ಎಷ್ಟು ವಿಧವಾಗಿ ಕೇಳಿಕೊಂಡರೂ, ಪ್ರಯೋಜನ ವಿಲ್ಲವಾಯಿತು. ಆದರೆ ನಾಯಿಂದನು, ನನ್ನನ್ನುನೋಡಿ, ಸ್ವಾಮಿ ! ನೀವು ನನ್ನಮನೆಗೆ ಬಾರದೆ ಹೋದರೆ, ನಾನಾದರೂ ನಿಮ್ಮಸಂಗಡ ಬರಬೇಕು. ನೀವು ಇನಾಮು ಕೊಟ್ಟಿರುವ ಈ ಪದಾರ್ಥಗಳನ್ನು ತೆಗೆದುಕೊಂಡುಹೋಗಿ ನನ್ನಮನೆಗೆ ತಲಪಿಸಿಬರುವೆನು. ಬಂದುವೇಳೆ ನನ್ನಸ್ನೇಹಿತರು ಬಂದರೆ ಸುಖವಾಗಿ ಭುಂಜಿಸುತ್ತಿರಲಿ. ನಿಮ್ಮನ್ನು ಒಂಟಿಯಾಗಿ ಕಳುಹಿಸುವುದು ನಮಗೆ ಮರ್ಯಾದೆಯುಲ್ಲ. ಅಂತಹ ಕಾರ್ಯವನ್ನು ನಾನು ಮಾಡತಕ್ಕವನೂ ಅಲ್ಲ. ದಯಮಾಡಿ ನನ್ನ ವಿಜ್ಞಾಪನೆಯೆನ್ನು ನಡೆಸಿಕೊಡಬೇಕೆಂದು ಬೇಡಿಕೊಂಡನು. ನಾನು ಆತನನ್ನುನೋಡಿ, ಅಯ್ಯಾ! ಸದ್ಯ ನಿನ್ನಪುಣ್ಯಕ್ಕೆ ನನ್ನನ್ನು ಇಷ್ಟಕ್ಕೆ ಆದರೂ ಬಿಟ್ಟುಬಿಡು. ನಿನ್ನ ಈ ಹಾಳು ಹರಟೆಗಳನ್ನು ಸಾಕುಮಾಡಿ, ನಿನ್ನಮನೆಗೆಹೋಗಿ ಸ್ನೇಹಿತರಸಂಗಡ ಮಾತನಾಡಿ ಅವರಸಂಗಡ ಊಟ ಉಪಚಾರಾದಿಗಳನ್ನು ಮಾಡುತ್ತಾ, ಆನಂದದಿಂದಿರು. ನಾನು ನನ್ನಸ್ನೇಹಿತರಮನೆಗೆ ಹೋಗುವಾಗ, ಒಬ್ಬನೇ ಹೋಗಬೇಕು.

ಅದು ರಹಸ್ಯವಾದ ಕಾರ್ಯ. ಅಲ್ಲದೆ ನೀನು ಬರತಕ್ಕ ಸ್ಥಲವೂ ಅಲ್ಲ. ಆದುದರಿಂದ ನಾನು ವಿನಹ ಮತ್ತಾರೂ ಅಲ್ಲಿಗೆ ಹೋಗಕೂಡದೆಂದೆನು. ಆಗ ಆತನು, ನಿಮ್ಮನ್ನೇಹಿತರ ಮನೆಯೆಲ್ಲಿ ಔತನವಾದರೆ, ನಿಮ್ಮಸಂಗಡ ನಾನು ಬರುವುದಕ್ಕೇನಾದರೂ ಅಡ್ಡಿಯುಂಟೆ? ಏಕೆ, ನನ್ನಂತಹ ಪರಿಹಾಸಕನು ನಿಮ್ಮಸಂಗಡ ಕುಳಿತುಕೊಂಡು ಮಾತನಾಡುತ್ತಿದ್ದರೆ, ನಿಮ್ಮಗಳಿಗೆ ಮಹ ದಾನಂದ ಉಂಟಾಗುವದಲ್ಲಾ ! ನೀನು ಏನುಮಾಡಿದರೂ, ನಾನು ಬಿಡ ತಕ್ಕವನಲ್ಲ. ನಿಮ್ಮಸಂಗಡ ಬರುವುದಕ್ಕೆ ಸಿದ್ಧನಾಗಿರುವೆನು, ಎಂದನು. ಈ ನಿರ್ಭಾಗ್ಯನ ಮಾತುಗಳನ್ನು ಕೇಳಿ, ನನ್ನವ್ಯಥೆಯು ಅಧಿಕವಾಯಿತು. ಅಷ್ಟರಲ್ಲಿ ಮಧ್ಯಾಹ್ನಕಾಲದ ಜಪಕ್ಕಾಗಿ ಮಸೀತಿಗೆ ಸರ್ವರೂ ಬರು ವಂತೆ ಕೂಗಿ ಹೇಳುವ ಮುಂತ್ರವಾಲಿಯು ನನ್ನಕಿವಿಗೆ ಬಿದ್ದಿತು. ಇನ್ನು ಈತನಸಂಗಡ ಮಾತನಾಡಿ ಹೊತ್ತುಕಳೆವುದು ಸರಿಯಲ್ಲವೆಂದು ತಿಳಿದು, ಸುಮ್ಮನಾದೆನು. ನಂತರ ಕ್ಷೌರವಾದಮೇಲೆ ನಾನು ನನ್ನ ಆಳುಗಳನ್ನು ಕರೆದುಕೊಂಡು, ಈ ಪದಾರ್ಥಗಳನ್ನು ನಿನ್ನಮನೆಗೆ ಸೇರಿಸಿ ಪುನಹ ಬೇಗ ಬಾ ! ನಿನಗೋಸ್ಕರವಾಗಿ ನಾನು ಕಾದುಕೊಂಡಿರುವೆನು, ಎಂದು ಹೇಳಲು, ಆತನು ಹೊರಟನು. ಬಳಿಕ ನಾನು ಬಟ್ಟೆಗಳನ್ನು ಹಾಕಿಕೊಂಡು, ಹೊರಡುವುದಕ್ಕೆ ಸಿದ್ಧನಾದಕೂಡಲೆ, ಜಪಾಂತ್ಯದಲ್ಲಿ ಧ್ವನಿಸುವ ಮೂಲ ಮುಂತ್ರಧ್ವನಿಯನ್ನು ಕೇಳಿ, ಸಡಗರದಿಂದ ಹೊರಡಲಾರಂಭಿಸಿದೆನು.

ಆದರೆ ಈ ನಿರ್ಭಾಗ್ಯನಾದ ಮೃತ್ಯುವು ನನ್ನ ಚಾರಕರಿಗೆ ತನ್ನ ಮನೆಯನ್ನು ತೋರಿಸಿ, ತಾನು ನನ್ನಹಿಂದೆ ಬರುವುದಕ್ಕಾಗಿ, ಬೀದಿಯಲ್ಲಿ ಕಾದುಕೊಂಡಿದ್ದನು. ನಾನು ಖಾಜಿಯ ಮನೆಯಬಳಿಗೆ ಬಂದು, ಹಿಂತಿರುಗಿ ನೋಡಿದಾಗ, ಈ ದುಷ್ಟನು ಹಿಂದೆ ಬರುತ್ತಿರುವುದನ್ನು ಕಂಡು, ಭಯ ಪಟ್ಟೆನು. ನಾನು ಬರುವಹೊತ್ತಿಗೆ ಸರಿಯಾಗಿ, ಖಾಜಿಮನೆಯ ಬಾಗಿಲು ತೆರೆದು ಇದ್ದಿತು. ಮುದುಕಿಯು ಕಾದುಕೊಂಡಿದ್ದು, ನನ್ನನ್ನು ಆ ಕನ್ಯಾ ಮಣಿಯರು ಅಂತಃಪುರಕ್ಕೆ ಕರೆದುಕೊಂಡು ಹೋದಳು. ನಾವು ಸ್ವಲ್ಪ ಹೊತ್ತು ವಿನೋದವಾಗಿ ಮಾತನಾಡುತ್ತಿರುವಲ್ಲಿ ಬೀದಿಯಲ್ಲಿ ಶಬ್ದವಾಯಿತು. ಆಗ ಕಿಟಕಿಯಲ್ಲಿ ನೋಡುವಾಗ, ಖಾಜಿಯು ಧ್ಯಾನವನ್ನು ತೀರಿಸಿಕೊಂಡು ಮನೆಗೆ ಬರುವುದಕ್ಕಾಗಿ ಬರುತ್ತಿದ್ದನು. ಹೊರಗಡೆಬೀದಿಯಲ್ಲಿ ಕ್ಷೌರಕನೂ

ನಿಂತಿದ್ದನು. ಇವರಿಬ್ಬರನ್ನೂ ನೋಡಿ ನನಗೆ ತುಂಬ ಭಯ ಆಗುತ್ತಾ ಯಿತು. ಆಗ ಆ ಸುಂದರೀಮಣಿಯು, ಪ್ರಿಯನೇ ! ನೀನು ನನ್ನ ತಂದೆಗೆ ಹೆದರತಕ್ಕ ಕಾರಣವಿಲ್ಲ. ಆತನು ಬಂದರೂ, ನನ್ನ ಅಂತಃಪುರಕ್ಕೆ ಬರುವು ದಿಲ್ಲ. ನಿನ್ನನ್ನು ಯಾವ ತೊಂದರೆಯೂ ಇಲ್ಲದೆ ಮನೆಗೆ ಕಳುಹಿಸುವ ಭಾರವು ನನ್ನದು. ನೀನು ಯೋಚಿಸಬೇಡ. ಸುಮ್ಮನಿರು. ಎಂದು ಹೇಳಿ ದಳು. ಎರಡುವಿಧವಾಗಿ ನನಗೆ ಪ್ರಾಪ್ತವಾದ ತೊಂದರೆಗಳಲ್ಲಿ ಮೊದಲನೆ ಯದು ನಿವಾರಣೆಯಾಯಿತು. ಈ ಹಾಳು ಕ್ಷೌರಕನಿಂದ ನನಗೆ ತೊಂದರೆ ಯುಂಟಾದುದನ್ನೂ ಮತ್ತೊಂದು ಭಯಕ್ಕೆ ಕಾರಣವನ್ನೂ ನನ್ನ ಮುಂದಿನ ಕಥೆಯನ್ನು ಕೇಳುವುದರಿಂದ, ನೀವೇ ತಿಳಿದುಕೊಳ್ಳಬಹುದು.

ಬಳಿಕ ಖಾಜಿಯು ಮನೆಗೆ ಬಂದಮೇಲೆ, ಆತನ ನೌಕರರಲ್ಲಿ ಒಬ್ಬನು ಏನೋ ತಪ್ಪುಮಾಡಿದ್ದಕ್ಕಾಗಿ, ಆತನನ್ನು ಬೆತ್ತದಿಂದ ಹೊಡೆ ದನು. ಪೆಟ್ಟುತಿಂದು ಅಳುತ್ತಿರುವ, ಶಬ್ದವು ಈ ಹಜಾಮನಿಗೆ ಕೇಳಿಬಂದ ಕೂಡಲೆ ಆತನು ತನ್ನ ಬಟ್ಟೆಗಳನ್ನು ಹರಿದುಹಾಕಿಕೊಂಡು, ಗಟ್ಟಿ ಯಾಗಿ ಅಳುತ್ತಾ, ಕುಯ್ಯೋ ! ಮರ್ಯೋ ! ಎಂದು ಅರಚಿಕೊಂಡನು. ನೆರೆಹೊರೆಯವರು, ಆತನನ್ನುನೋಡಿ ಅಯ್ಯಾ ! ನೀನು ಹೀಗೆ ಅಳುವು ದಕ್ಕೆ ಕಾರಣವೇನೆನಲು, ಸ್ವಾಮಿ ! ನನ್ನ ರಕ್ಷಕನಾದ ಯಜಮಾನನನ್ನು ಈ ಖಾಜಿಯು ಹೊಡೆದು ಕೊಲ್ಲುತ್ತಿರುವನೆಂದು ಹೇಳಿ, ಓಡಿಹೋಗಿ ನನ್ನ ಸೇವಕರನ್ನು ಕುರಿತು ದೊಣ್ಣೆಗಳನ್ನು ತೆಗೆದುಕೊಂಡುಬರುವಂತೆ ಹೇಳಲು, ಅವರು ರೋಷಾವೇಶದಿಂದಬಂದು ಖಾಜಿಯಮನೆಯ ಬಾಗಿಲನ್ನು ತಟ್ಟಿದರು, ಆಗ ಖಾಜಿಯು ಬಾಗಿಲಬಳಿ ಗಲಾಟೆ ನಡೆವುದಕ್ಕೆ ಕಾರಣ ವೇನೆಂದು, ತನ್ನ ಚಾರಕರನ್ನು ಕೇಳಲು, ಅವರು ಬಂದು ಬಾಗಿಲಬಳಿ ನೋಡಿ ಭಯದಿಂದ ಓಡಿಹೋಗಿ, ಅಯ್ಯಾ ! ಹತ್ತುಸಾವಿರಮಂದಿ ನಿನ್ನ ಮನೆಯನ್ನು ದೋಚಿಕೊಳ್ಳುವುದಕ್ಕಾಗಿ ಬಂದಿರುವರೆನಲು, ಕೂಡಲೆ ಖಾಜಿ ಹೊರಗೆಬಂದು ನೀವು ಬರುವುದಕ್ಕೆ ಕಾರಣವೇನು, ಎಂದರು ! ಆಗ ಚಾರಕರು ಸ್ವಲ್ಪವೂ ಮರ್ಯಾದೆ ಇಲ್ಲದೆ, ಎಲಾ ! ದುರಾತ್ಮನಾದ ಪಾಪಿ. ನೀನು ನಮ್ಮ ಯಜಮಾನನನ್ನು ಕೊಲ್ಲುತ್ತಿರುವುದೇತಕ್ಕೆ ? ಆತನು ನಿನಗೆ ಏನು ಅಪರಾಧ ಮಾಡಿದನು ಎನಲು ಖಾಜಿಯು, ಅಯ್ಯೋ ! ನಿಮ್ಮ

ಯೆಜಮಾನರಾರೊ, ನಾನು ಕಾಣೆ. ಆತನನ್ನು ನಾನೇಕೆ ಕೊಲ್ಲಲಿ, ಆತನು ನನಗಾವ ಅಪಕಾರವನ್ನು ಮಾಡಲಿಲ್ಲವಲ್ಲಾ! ನೀವು ನನ್ನ ಮನೆಗೆ ಬಂದು ಧಾರಾಳವಾಗಿ ನೋಡಿಕೊಳ್ಳಿ! ಎನಲು, ನಾಯಿಂದನು ಅಯ್ಯೋ! ಮೂರುನಿಮುಷಗಳಮುಂಚೆ ನೀನು ನನ್ನ ಯೆಜಮಾನನನ್ನು ಹೊಡೆಯಲಿಲ್ಲವೆ. ಆತನು ಅಳುತಿದ್ದುದನ್ನು ನಾನು ಚೆನ್ನಾಗಿ ಕೇಳಿದೆನಲ್ಲಾ! ಎಂದು ಹೇಳಿದನು. ನಿಮ್ಮ ಯೆಜಮಾನನನ್ನು ನಾನು ಹೊಡೆಯುವುದಕ್ಕೆ ಆತನು ನನ್ನ ಮನೆಯಲ್ಲಿರುವನೆ? ಹೇಗಬಂದ? ಯಾರು ಕರೆದುಕೊಂಡುಬಂದರು? ಯಾರು ನೋಡಿದವರು? ಎಂದು ಖಾಜಿ ಕೇಳದಕೂಡಲೆ, ಆಹಾ! ನೀಚನಾದ ಕೊಲೆಪಾತಕನೆ! ನಿನ್ನ ಮಾತುಗಳನ್ನು ನಾನು ನಂಬಲಾರೆ! ನಿನ್ನ ಮಗಳು ನಮ್ಮ ಯೆಜಮಾನರನ್ನು ಮೋಹಿಸಿ ಧ್ಯಾನಕಾಲದಲ್ಲಿ, ಆತನನ್ನು ತನ್ನಬಳಿಗೆ ಬರಮಾಡಿಕೊಂಡಳು. ನೀನು ಮನೆಗೆ ಬಂದಮೇಲೆ ಆತನನ್ನುನೋಡಿ ಆಶ್ಚರ್ಯಯುಕ್ತನಾಗಿ ನಿನ್ನ ಚಾರಕರಿಂದ ಆತನನ್ನು ನೀನು ಹೊಡೆಸುತ್ತಿರಲಿಲ್ಲವೆ? ಇಂತಹ ದುರ್ಮಾರ್ಗವನ್ನು ಕಲೀಫರು ಕೇಳಿದರೆ, ನಿನಗೆ ಶಿಕ್ಷೆಯೆನ್ನು ಮಾಡದೇ ಬಿಡಲಾರರು. ನನ್ನ ಯೆಜಮಾನನನ್ನು ಹೊರಗೆಕಳುಹಿಸು. ನಾವು ಆತನನ್ನು ಕರೆದುಕೊಂಡು ಹೋಗಬೇಕಾಗಿದೆವು. ಎಂದು ನಾಯಿಂದನು ಹೇಳಲು, ಆ ಖಾಜಿಯು ಇಷ್ಟು ಕೂಗಾಟವೂ ದುಷ್ಟವಾದ ನಿನ್ನವಾದವೂ ಏಕೆ. ಮನೆಯೊಳಕ್ಕೆ ಬಂದು ನಿನ್ನ ಯೆಜಮಾನನನ್ನು ತೋರಿಸು ಕರೆದುಕೊಂಡು ಹೋಗುವೆಯೆಂತೆ ಎಂದು ಅಪ್ಪಣೆ ಮಾಡಲು, ಆ ನಾಯಿಂದನೂ, ನನ್ನ ಚಾಕರರೂ, ಒಳಗೆಬಂದು ನನ್ನನ್ನು ಹುಡುಕುತ್ತಿದ್ದರು. ಎಂದು ಷಹರಜಾದಿಯು ಹೇಳದಕೂಡಲೆ, ಸುಲ್ತಾನರು ಆಶ್ಚರ್ಯಯುಕ್ತರಾದರು. ಆಗಲೆ ಬೆಳಗಾದುದರಿಂದ ಕಥೆಯನ್ನು ನಿಲ್ಲಿಸಿ, ಸುಲ್ತಾನಿಯು ಮರಳಿ ಹೇಳಲಾರಂಭಿಸಿದಳು.

೧೬ನೆ ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನರನ್ನುಕುರಿತು ಇಂತೆಂದಳು :-ಹೀಗೆ ಜನರೆಲ್ಲರೂ ಹುಡುಕುತ್ತಿರುವಾಗ, ನಾನು ಎಲ್ಲಿಯಾದರೂ ಮರೆಯಾಗಿರಬೇಕೆಂದು, ಆ ಮನೆಯಲ್ಲಿದ್ದ ಒಂದು ಪೆಟ್ಟಿಗೆಯೊಳ್ಗೆ ಮಲಗಿಕೊಂಡು, ಬಾಗಿಲು ಮುಚ್ಚಿಕೊಂಡನು. ಆತನು ನನ್ನನ್ನು ಹುಡುಕುವುದಕ್ಕೆ ಬಂದು

ಪೆಟ್ಟಿಗೆಯಲ್ಲಿ ನಾನಿರುವುದನ್ನು ಕಂಡು, ಅದನ್ನು ತಲೆಯಮೇಲೆ ಹೊತ್ತು ಕೊಂಡು ಹೊರಗೆ ಬರುತ್ತಿರುವಾಗ, ಪೆಟ್ಟಿಗೆಯಬಾಗಿಲು ತೆರೆದುಕೊಂ ಡುದರಿಂದ, ಬೀದಿಯಲ್ಲಿ ಜನರೆಲ್ಲರೂ, ನನ್ನನ್ನುನೋಡಿ ನಗುತ್ತಾ ಇದ್ದರು. ನಾನು ಅವರನ್ನುನೋಡಿ ನಾಚಿಕೆಯಿಂದ ತಲೆಯೆನ್ನುಬಗ್ಗಿಸಿ, ಅವಮಾನ ವನ್ನು ಸಹಿಸಲಾರದೆ, ಪೆಟ್ಟಿಗೆಯಿಂದ ಕೆಳಕ್ಕೆ ಧುಮುಕಿದೆನು. ಆಗ ನನ್ನ ಕಾಲಿಗೆ ಪೆಟ್ಟು ಬಲವಾಗಿ ತಗಲಿದುದರಿಂದ, ನಾನು ಕುಂಟನಾಗಿ ಕಾಲು ಮುರಿದುಕೊಂಡೆನು. ಈ ನನ್ನ ಅವಸ್ಥೆಯನ್ನುನೋಡಿ, ಜನರೆಲ್ಲರೂ, ಮತ್ತಷ್ಟು ಹಾಸ್ಯಮಾಡುವುದಕ್ಕಾರಂಭಿಸಿದುದರಿಂದ, ನಾನು ನನ್ನಬಳಿ ಯೆಲ್ಲಿದ್ದ ನಾಣ್ಯಗಳನ್ನು ಚೆಲ್ಲಲು, ಆ ಜನರು, ಅದನ್ನು ಆರಿಸಿಕೊಳ್ಳುವ ಅವಸರದಲ್ಲಿದ್ದರು. ಬಳಿಕ ನಾನು ತಪ್ಪಿಸಿಕೊಂಡು ಬರುವುದಕ್ಕೆ ಮಾಡಿದ ಉಪಾಯೆಗಳೆಲ್ಲವೂ ಸಾರ್ಥಕವಾಗಿ, ನಾನು ಸಂದುಗೊಂದುಗಳಲ್ಲಿ ದೂರಿ ಕೊಂಡು ಹೋಗುತ್ತಿರುವಾಗ ಈ ದುಷ್ಟ ಕ್ಷೌರಕನು ನನ್ನ ಹಿಂದೆಯೇ ಬಂದು, ಸ್ವಾವಿಾ ! ಎಲ್ಲಿಗೆ ಹೋಗುತ್ತೀರಿ ! ನಿಲ್ಲಿ ನಿವುಗೆ ಬಿದ್ದ ದೆಬ್ಬೆ ಗಳನ್ನು ನೋಡಿ, ನಾನು ಬಹಳವಾಗಿ ವ್ಯಸನಪಟ್ಟೆನಲ್ಲಾ ! ನಾನು ನಿವ್ಮ ಹಿಂದಟ್ಟಿಬಾರದೆ ಇದ್ದರೆ ನಿವ್ಮಗತಿ ಏನಾಗುತ್ತಿತ್ತೊ ! ನೀವೇ ಯೋಚಿಸಿ. ನನಗೂ, ನನ್ನಸ್ನೇಹಿತರಿಗೂ, ನಿವ್ಮಿಂದ ನಾನಾವಿಧವಾದ ಉಪಕಾರ ಉಂಟಾಗಿರುವುದನ್ನು, ನಾನು ಮರೆಯಲಾರೆನು.

ನಾನು ಮೊದಲೆ ನಿವ್ಮಸಂಗಡ ಬರುತ್ತೇನೆಂದು ಹೇಳಿದರೂ, ನೀವು ಕೇಳದೆ ಏಕಾಂಗಿಯಾಗಿ ಬಂದುದರಿಂದಲ್ಲವೆ ನಿವುಗಿಂತಹ ದುರವ ಸ್ಥೆಯು ಪ್ರಾಪ್ತವಾಯಿತು. ಇದನ್ನುಕುರಿತು ನಾನು ಮೊದಲೆ ನಿವುಗೆ ಹೇಳಿದ್ದೆನಲ್ಲಾ ! ಆದರೂ ನನ್ನಮಾತನ್ನು ಲಕ್ಷ್ಯಮಾಡದೆ, ನೀವುಯಿಂಥ ತೊಂದರೆಯೆನ್ನು ಅನುಭವಿಸುತ್ತ ಎಲ್ಲಿಹೋಗುವಿರಿ. ನಿಲಿ ! ನಿಲ್ಲಿ ! ಎಂದು ಹೇಳುತ್ತಾ, ನನ್ನಹಿಂದೆಯೇ ಬಂದನು. ಈ ಪಾಪಾತ್ಮನಾದ ದುರಾತ್ಮನು ಖಾಜಿಯೆಮನೆಯೆಲ್ಲಿ ಆಪೊಟ್ಟಂದು ರಗಳೆಯೆನ್ನು ಮಾಡಿದರೂ, ನಾಕು ಮಾಡದೆ ಬೀದಿಯಲ್ಲಿಯೂ, ಅವಮಾನಕರವಾದ ಮಾತುಗಳನ್ನಾಡುತ್ತಾ, ನನ್ನನ್ನು ಹಿಂದಟ್ಟಿಕೊಂಡು ಬರುತ್ತಿರುವಾಗ, ಆತನನ್ನು ಕೊಲ್ಲುವಷ್ಟು ಕೋಪಬಂದರೂ ಪ್ರಯೋಜನವಾಗುವುದೆಂದುತಿಳಿದು ಬೇರೊಂದುಉಪಾಯವನ್ನು

ಯೋಚಿಸಿ, ಸುಮ್ಮನಾದೆನು. ಈ ದುಷ್ಟನು ಮಾಡುತ್ತಿದ್ದ ರಗಳೆಯಿಂದ ಜನವೆಲ್ಲರು ಬೀದಿಗೆಬಂದು ಬಾಗಿಲಲ್ಲಿ ನಿಂತು, ನೋಡಲಾರಂಭಿಸಿದರು. ನಾನು ಹತ್ತಿರಿದ್ದ ಒಂದಾನೊಂದು ಛತ್ರವನ್ನು ಒಳಹೊಕ್ಕೆನು. ಅಲ್ಲಿನ ಯಜಮಾನನು ನನ್ನನ್ನು ಚೆನ್ನಾಗಿ ಬಲ್ಲವನಾದುದರಿಂದ, ಈ ಪಾಪಿಯನ್ನು ಒಳಗೆ ಬರದಂತೆ, ನಿರೋಧಿಸಬೇಕೆಂದು, ನಾನು ಆತನನ್ನು ಬೇಡಿಕೊಂಡೆನು. ಆತನು ತನ್ನ ಸರ್ವಪ್ರಯತ್ನವನ್ನು ಮಾಡಿ, ಈ ಹಜ್ಜಾಮನನ್ನು ಹೊರಗೆ ಹೊರಡಿಸುವುದಕ್ಕೆ ಹೋದರೂ, ಸಾಧ್ಯವಾಗದೆ ಬಾಗಿಲನ್ನು ಮುಚ್ಚಿಕೊಂಡನು. ಆದರೂ, ಈತನು ನನಿಗೆಮಾಡಿದ ಉಪಕಾರವನ್ನು ಬೀದಿಯಲ್ಲಿ ಹೋಗುವವರಿಗೆಲ್ಲಾ ಹೇಳುತ್ತಾ, ಗುಲ್ಲುಮಾಡುತ್ತ ಇದ್ದನು. ಆಗ ನಾನು ಛತ್ರದ ಯಜಮಾನನಿಗೆ ನನ್ನ ಅವಸ್ಥೆಯನ್ನೆಲ್ಲಾ ವಿವರಿಸಿಹೇಳಿ, ಕಾಲು ವಾಸಿಯಾಗುವವರಿಗೂ, ಒಂದು ಕೊಠಡಿಯನ್ನು ಕೊಡುವಂತೆ ಕೇಳಲು, ಆತನು ಅಯ್ಯಾ! ನೀನು ಮನೆಗೆಹೋದರೆ ಉಪಚಾರಾದಿಗಳು ಚೆನ್ನಾಗಿ ನಡೆಯುವುದಿಲ್ಲವೆ? ಎನಲು, ನಾನು ಒಪ್ಪಿ ಮನೆಗೆಹೋದೆನು. ಅಲ್ಲಿಗೂ, ಈ ಪಾಪಿಷ್ಠನು ಬಂದು, ನನ್ನಮಾನವನ್ನು ಕಳೆಯುವುದಕ್ಕೆ ಮೊದಲುಮಾಡಿದನು.

ನಾನು ಆ ಅವಮಾನವನ್ನು ಸಹಿಸಲಾರದೆ ಇವನಿಗೆ ಕಾಣದಂತೆ ಎಲ್ಲಿಯೊದರೂ, ಹೊರಟುಹೋಗಬೇಕೆಂದು ಯೋಚಿಸಿ, ಈ ದುರಾತ್ಮನಾದ ಕ್ಷೌರಿಕನ ಬಾಧೆಯನ್ನು ಸಹಿಸಲಾರದೆ, ನನ್ನ ಆಸ್ತಿಯನ್ನೆಲ್ಲಾ ಬಂಧುಗಳಿಗೆ ಹಂಚಿ, ನನಗೆ ಬೇಕಾದಷ್ಟು ಹಣವನ್ನು ತೆಗೆದುಕೊಂಡು, ನನ್ನ ಅದೃಷ್ಟವು ನನ್ನನ್ನು ಎಲ್ಲಿಗೆ ಕರೆದುಕೊಂಡು ಹೋಗುವುದೊ, ಅಲ್ಲಿಗೆ ಹೋಗುವುದೇ ಸರಿ! ಎಂದು ನಿಶ್ಚಯಿಸಿಕೊಂಡು ಹೊರಟೆನು. ಆದುದರಿಂದ ಬಾಗದಾದುನಗರವನ್ನು ಬಿಟ್ಟುಬಂದು, ಮಿತ್ರರನ್ನು ತೊರೆದು, ಅದಕ್ಕೆ ಬಹಳ ದೂರದಲ್ಲಿರುವ ಈ ಪಟ್ಟಣಕ್ಕೆ ಬಂದರೂ, ಈತನು ನನ್ನಸಂಗಡ ಬಂದಿರುವುದನ್ನು ನೋಡಿದರೆ, ನನಗೆ ತುಂಬ ವ್ಯಸನವಾಗುವುದು. ಆದುದರಿಂದ ನೀವು ನನ್ನನ್ನು ಕಳುಹಿಸಿಕೊಡಿರೆಂದು ಹೇಳಲು, ಮನೆಯ ಯಜಮಾನನು, ಆ ಕುಂಟಹುಡುಗನನ್ನು ಮನ್ನಿಸಿ ಮರ್ಯಾದೆಯಿಂದ ಕಳುಹಿಸಿಕೊಟ್ಟನು. ಬಳಿಕ ನಾನೂ ಮತ್ತು ನನ್ನಸ್ನೇಹಿತರೂ

ಆ ಕ್ಷೌರಿಕನನ್ನುಕುರಿತು ಅಯ್ಯಾ ! ಆ ಹುಡುಗನು ಈಗ ಹೇಳದುದೆಲ್ಲಾ ನಿಜವೇ ಆಗಿದ್ದರೆ, ನಿನ್ನವೇಲೆ ಬಹಳವಾದ ಅಪರಾಧ ಉಂಟಾಗುವುದೆಂದು ನುಡಿಯಲು, ನಾಯಿಂದನು ಅಯ್ಯಾ ! ಆ ಹುಡುಗನು ತನ್ನ ಕಥೆಯನ್ನು ಹೇಳುತ್ತಿದ್ದಾಗ, ನಾನು ಯಾವವಮಾತನ್ನು ಆಡದೆ ಸುಮ್ಮನಿದ್ದುದರಿಂದಲೆ, ಆತನು ಹೇಳದುದೆಲ್ಲವೂ ನಿಮಗೆ ಚೆನ್ನಾಗಿ ಗೊತ್ತಾಗಿರಬಹುದು. ಆದರೆ ಆತನು ಹೇಳಿದುದೆಲ್ಲಾ ಹಾಗಿರಲಿ, ನಾನು ಆತನಿಗೆವಮಾಡಿದ ಉಪಕಾರವನ್ನು ವಿವರಿಸಿ ಹೇಳಿದರೆ, ನಾನು ಆತನಿಗೆ ತೊಂದರೆಯೆನ್ನು ಉಂಟುಮಾಡಿ ಕುಂಟು ನಾಗುವಂತೆ ಮಾಡಿದರೂ ಚಿಂತೆಯಿಲ್ಲ. ಅವನು ಪ್ರಾಣದಿಂದವಾತ್ರ ಹೊರಗೆಬಂದನಲಾ ! ಆತನನ್ನು ಹೊಡೆಯುತ್ತಿರುವ ಶಬ್ದವನ್ನುಕೇಳಿ, ಆತನನ್ನು ಹೊರಹೊರಡಿಸುವುದಕ್ಕೆ ನಾನು ಮಾಡಿದ ಉಪಾಯವು ಉಪ ಕಾರವಲ್ಲವೇ ! ನಾನು ಆತನಿಗೆ ಮಾಡಿರುವ ಉಪಕಾರದಲ್ಲಿ ತಪ್ಪೇನು ? ಇಂತಹ ಕೃತಘ್ನನಿಗೆ ಉಪಕಾರಮಾಡಿ, ಕಟಕಿಯೆಂದು, ಬಾಯಿಬ್ಬಡುಕ ನೆಂದು, ದುರ್ಮಾರ್ಗಿಯೆಂದು, ಅಪವಾದವನ್ನು ಹೊಂದಬೇಕಾಯಿತಲ್ಲಾ ! ನನಗಿರುವ ಏಳುಜನ ಸಹೋದರರಲ್ಲಿ, ನಾನೇ ವಿಶಭಾಷಿಯಾಗಿಯೂ, ಚತುರನಾಗಿಯೂ, ಇರುವೆನೆಂಬುದನ್ನು ತಿಳಿಯಹೇಳುವುದಕ್ಕಾಗಿ, ನಿಮಗೆ ನನ್ನ ಚರಿತ್ರೆಯನ್ನೂ ಉಳಿದ ನನ್ನ ಸಹೋದರರ ಕಥೆಯನ್ನೂ ಹೇಳು ವೆನು. ದಯಮಾಡಿ ತಾವು ಅದನ್ನು ಕೇಳಬೇಕೆಂದು ನುಡಿದು ಇಂತೆಂದನು.

ಕ್ಷೌರಿಕನ ಕಥೆ.

ದೀನರಲ್ಲಿಯೂ, ದರಿದ್ರರಲ್ಲಿಯೂ, ದಯಾವಂತನಾಗಿದ್ದ ನುನು ಷಾ೯ಟನಸರ್ ಬ್ಲೈಲಾ ಎಂಬ ಕಲೀಫರ ಆಳ್ವಿಕೆಯಲ್ಲಿ ಎಂಟು ಹತ್ತುಮಂದಿ ದಾರಿಹೋಕರು, ಆಗಾಗ್ಗೆ ದಾರಿಗರನ್ನು ಕೊಲೆಮಾಡಿ ದೋಚಿಕೊಳ್ಳುತ್ತಾ ಬಹಳವಾಗಿ ತೊಂದರೆಯೆನ್ನು ಉಂಟುಮಾಡುತಿದ್ದುದನ್ನು ತಿಳಿದು, ಕಲೀ ಫರು, ಬೈರಾಮನ ಹಬ್ಬಕ್ಕೆ ಮೊದಲು, ಆ ಕಳ್ಳರನ್ನು ಹಿಡಿದುತಾರ ದಿದ್ದರೆ ನಿನ್ನನ್ನು ಗಲ್ಲಿಗೆ ಹಾಕಿಸುವೆನೆಂದು, ತನ್ನ ಮಂತ್ರಿಗೆ ಆಜ್ಞಾಪಿಸಿ ದರು. ಇಂತೆಂದು ಹೇಳಿದ ಷಹರಜಾದಿಯು ಬೆಳಗಾದಕೂಡಲೆ ಕಥೆ ಯನ್ನುನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಹೇಳಲಾರಂಭಿಸಿದಳು.

೧೬೬ ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು, ಇಂತೆಂದಳು :— ಆಗ ಮಂತ್ರಿಯು ಬಹು ಎಚ್ಚರಿಕೆಯಿಂದ, ತನ್ನಜನರನ್ನು ಕಳುಹಿಸಿ, ಹುಡುಕಲಾರಂಭಿಸಿದನು. ಆ ಜನರು ನಾನಾದಿಕ್ಕುಗಳಲ್ಲಿ ಹುಡುಕಿ ಕೊನೆಗೆ ಆ ಹತ್ತುಮಂದಿಯನ್ನು ಬೈರಾಮನ ಹಬ್ಬದದಿನವೇ ಕಂಡುಹಿಡಿದರು. ಆಗ ನಾನು ಟೈಗ್ರಿಸ್ ನದಿಯ ದಡದಲ್ಲಿ ಸಂಚರಿಸುತ್ತಾ ಕಾವಲುಗಾರರೊಡನೆ ಗಾಡಿಯಲ್ಲಿ ಹೋಗುತ್ತಿರುವ ಈ ಕಳ್ಳರನ್ನು ನೋಡಿ, ಹಬ್ಬವಾದುದರಿಂದ ಹುಡುಗಾಟಕ್ಕಾಗಿ ವೇಷವನ್ನು ಹಾಕಿಕೊಂಡು ಹೋಗುತ್ತಾರೆಂದು ತಿಳಿದು, ನಾನು ಅವರಸಂಗಡ ಹೋಗಿ ಕುಳಿತುಕೊಂಡೆನು. ಆಗ ಅಲ್ಲಿದ್ದವರಲ್ಲಿ ಎಲ್ಲರೂ ಕಳ್ಳರಾಗಿದ್ದರೂ, ನಾನುಮಾತ್ರ ಅವರಕಾರ್ಯವನ್ನು ಎಂದಿಗೂ ಮಾಡಿದವನಲ್ಲ ! ಹೀಗಿರುವಲ್ಲಿ ಆ ಗಾಡಿಯು ಕಲೀಫರ ಅರಮನೆಯ ಬಾಗಿಲಲ್ಲಿ ಬಂದುನಿಂತಿತು. ಕೂಡಲೆ ಹೊಸಬರಾದ ಪಹರೆಯವರು ಬಂದು, ಎಲ್ಲರನ್ನು ಕೈಕಾಲು ಕಟ್ಟುತ್ತಿದ್ದರು. ನಾನು ಕಳ್ಳರ ಗುಂಪಿನಲ್ಲಿದ್ದುದರಿಂದ, ಈಗ ಮಾತನಾಡಿದರೆ, ನಿಷ್ಕಾರಣವಾದ ಶಿಕ್ಷೆಗೆ ಗುರಿಯಾಗುವೆನೆಂದು ಸುಮ್ಮನಿರಲು, ಕಟ್ಟುಗಳಿಂದ ಬಿಗಿದು ನನ್ನನ್ನು ಆ ಹತ್ತುಮಂದಿ ಕಳ್ಳರನ್ನು, ರಾಜಭಟರು ಕಲೀಫರಮುಂದೆ ಕಲಿದುತಂದು ನಿಲ್ಲಿಸಿದರು. ಆಗ ಕಲೀಫರು ಆ ಹತ್ತುಮಂದಿಯನ್ನು ಕಡಿದುಹಾಕುವಂತೆ ಆಜ್ಞೆಯನ್ನು ಮಾಡಿದರು.

ಬಳಿಕ ಕಟುಕರು ಬಂದು ಅವರನ್ನು ಸಾಲಾಗಿ ನಿಲ್ಲಿಸಿದರು. ನಾನಾದರೊ, ಅದೃಷ್ಟವಶಾತ್ತಾಗಿ ಕಡೆಯವನಾಗಿದ್ದೆನು. ಆಗ ಒಬ್ಬ ನೊಬ್ಬ ಕಟುಕನು ಕ್ರಮವಾಗಿ ಹತ್ತುಮಂದಿಯನ್ನು ಕಡಿದುಹಾಕಿ, ನನ್ನಬಳಿಗೆ ಬಂದು ಸುಮ್ಮನೆ ನಿಂತುಕೊಂಡನು. ಆಗ ಸುಲ್ತಾನನು ಆ ಕಟುಕನನ್ನುನೋಡಿ ಎಲಾ ! ನೀಚ, ನಾನು ಹತ್ತುಜನರನ್ನು ಕಡಿದು ಹಾಕೆಂದು ಹೇಳಿದರೆ, ನೀನು ಒಂಭತ್ತುಮಂದಿಯನ್ನು ಕಡಿದು ಸುಮ್ಮನೆ ನಿಂತಿರುವೆಯಾ ! ಎಂದು ಕೇಳಿದರು. ಆಗ ಅವನು ಸ್ವಾಮಿ ! ನಾನು ತಮ್ಮ ಆಜ್ಞೆಯನ್ನು ವಿಚಾರಿ ನಡೆದಿದ್ದರೆ ಭಗವಂತನು ನನ್ನನ್ನು ಮೆಚ್ಚ

ಲಾರನಾದುದರಿಂದ ಕೃಮವಾಗಿ ಹತ್ತುವುಂದಿಯೆನ್ನು ಕೆಡಿದುಹಾಕಿರುವೆನು. ಇಗೋ ಈ ಹತ್ತು ತಲೆಗಳನ್ನು ನೋಡಿ, ನಿಮುಗೇನೆ ಗೊತಾಗುವು ದೆಂದು ಹೇಳಲು, ಕಲೀಫರು ಆಗಲೇ , ನನ್ನನ್ನು ಚೆನ್ನಾಗಿ ಪರೀಕ್ಷಿಸಿ, ಕಳ್ಳನಲ್ಲವೆಂದು ತಿಳಿದು, ಅಯ್ಯಾ ! ನೀನೀಕಳ್ಳರ ಗುಂಪಿನಲ್ಲಿ ಹೇಗೆಸೇರಿದೆ ಎಂದು ಕೇಳಿದರು. ನಾನು ಸ್ವಾವಿಾ ! ನಿಜವಾಗಿ ಹೇಳುತ್ತೇನೆ ಕೇಲಿ, ಈದಿನ ಬೆಳಿಗೆ ನಾನು ಟೈಗ್ರಿಸ್‌ನದಿಯೆ ದಡದಲ್ಲಿ ನಿಂತಿರುವ ಸಮಯೆದಲ್ಲಿ ಈ ಕಳ್ಳರು ಉತ್ತಮವಸ್ತ್ರವನ್ನು ಧರಿಸಕೊಂಡು, ಬರುತ್ತಿರುವುದನ್ನು ನೋಡಿ, ಬೈರಾಗುನ ಹಬ್ಬದ ವೇಷವನ್ನುಹಾಕಿಕೊಂಡು ವಿನೋದವಾಗಿ ಹೋಗುತ್ತಿರುವರೆಂದು ತಿಳಿದು, ನಾನು ಅವರಸಂಗಡ ಸೇರಿಕೊಂಡೆನೆಂದು ಹೇಳಿದೆನು. ಆಗ ಕಲೀಫರು ನಕ್ಕು ನನ್ನನ್ನು ಹಾಸ್ಯಗಾರನೆಂದು ಹೇಳಿದ ರಲ್ಲದೆ, ಈ ಹುಡುಗನು ಹೇಳಿದಂತೆ ಅಧಿಕಪ್ರಸಂಗಿಯೆಂದು ಹೇಳಲಿಲ್ಲ.

ಬಳಿಕ ನಾನು ಕಲೀಫರನ್ನುಕುರಿತು, ಸ್ವಾವಿಾ ! ನಾನು ಕೊಲ್ಲ ಲ್ಪಡುವಂತಹ ದುರವಸ್ಥೆಗೆ ಸಿಲುಕಿದ್ದರೂ, ಮಾತನಾಡದೆ ಸುಮ್ಮಗಿದ್ದು ದನ್ನುನೋಡಿ, ನೀವು ಆಶ್ಚರ್ಯಪಡಬೇಕಲ್ಲವೆ ? ಈ ಊರಿನವರೆಲ್ಲರೂ ನನ್ನನ್ನು ನೋಡಿದರೆ, ಮೌನಿಯೆಂದು, ವಿಿತಭಾಷಿಯೆಂದು ಹೊಗಳುತ್ತ ಇರುವರು. ಆದುದರಿಂದಲೆ ನಾನು ನನ್ನ ಅಣ್ಣತಮ್ಮಂದಿರಲ್ಲಿ ಹಿರಿಯವ ನಾದೆನು. ನನ್ನ ಪಾಂಡಿತ್ಯದಿಂದ ನನಗುಂಟಾದ ಫಲವನ್ನು, ಸಂಕ್ಷೇಪ ವಾಗ ಹೇಳುವೆನು. ಈ ಗುಣದಿಂದಲೇ ನಾನು ಸಕಲ ಸೌಭಾಗ್ಯಗಳನ್ನು ಹೊಂದಿದೆನೆಂದು ಹೇಳಲು, ಸುಲ್ತಾನರು ನಗುತ್ತ ಅಯ್ಯಾ ! ನಿನ್ನಸ್ಥಿತಿ ಯನ್ನು ನೋಡಿ, ನನಗೆ ಸಂತೋಷವಾಯಿತು. ಆದರೆ ನಮ್ಮಲ್ಲಿ ನೀನು ಹೇಳಿದ ನಿನ್ನಸಹೋದರರೂ ನಿನ್ನಂಥವರೆ ಹೌದೆ ! ಎನಲು ನಾನು ಅವರು ಒಬ್ಬರನ್ನೊಬ್ಬರು ವಿಿಾರಿಸಿದವರು. ಶರೀರಧರ್ಮದಲ್ಲಿಮಾತ್ರ ನಾನು ಹಿರಿಯವನು. ಅವರಿಗೂ ನನಗೂ ತುಂಬ ಭೇದವಿರುವುದು. ಮೊದ ಲನೆಯವನು ಗೂನ, ಎರಡನೆಯವನು ಕಿವುಡ, ಮೂರನೆಯವನಾದರೊ, ಕುರುಡ, ನಾಲ್ಕನೆಯವನು ಒಕ್ಕಣ್ಣ, ಐದನೆಯವನು ಕಿವಿಮೂಳೆ, ಆರನೆ ಯವನು ಸಿರಿವಾಯುವನು, ಇವರ ಕಥೆಯನ್ನು ನೀವು ಕೇಳಿದರೆ, ಅವರ ಯೋಗ್ಯತೆಯು ನಿಮಗೆ ಚೆನ್ನಾಗಿ ತಿಳಿಯುವುದೆಂದು ಹೇಳಲು, ಕಲೀಫರು ಆಕಥೆಯನ್ನು ಕೇಳಲುದ್ಯುಕ್ತರಾಗಲು, ನಾನು ಹೇಳಲಾರಂಭಿಸಿದೆನು.

ಹೌರಕನ ಅಣ್ಣನ ಕಥೆ.

ನನ್ನ ಅಣ್ಣನ ಹೆಸರು ಬಾಕುಬೋಕೊ. ಆತನು ದರ್ಜಿಕೆಲಸವನ್ನು ಮಾಡುತ್ತಿದ್ದನು. ಅವನು ಕೆಲಸವನ್ನು ಕಲಿತುಕೊಂಡಕೂಡಲೆ, ತಾನು ಬಂದು ಅಂಗಡಿಯನ್ನು ಕೊಂಡುಕೊಂಡನು. ಆ ಅಂಗಡಿಯು ರವೆಯನ್ನು ಬೀಸುವ ಅಂಗಡಿಯ ಎದುರಿಗೆ ಇದ್ದಿತು. ಆತನಹೆಂಡತಿ ಬಹು ರೂಪವತಿಯಾದವಳು. ಆತನು ಐಶ್ವರವಂತನೂ ಹೌದು. ನನ್ನ ಅಣ್ಣನಿಗೆ ಹೆಚ್ಚಾದ ಕೆಲಸವೇನೂ ಇಲ್ಲದುದರಿಂದ, ಜೀವನ ನಡೆಯುವುದೇ ಕಷ್ಟವಾಗಿತ್ತು. ಒಂದಾನೊಂದುದಿನ ನನ್ನ ಅಣ್ಣನು ಅಂಗಡಿಯಲ್ಲಿ ಕೆಲಸಮಾಡುತ್ತ, ತಲೆಯೆತ್ತಿ ಆ ರವೆಯ ಅಂಗಡಿಯಜಮಾನನ ಹೆಂಡತಿಯನ್ನುನೋಡಿ, ವೋಹಿತನಾದನು. ಆಕೆ ಈತನನ್ನು ನೋಡಿ ಬಾಗಿಲು ಮುಚ್ಚಿಕೊಂಡು ಒಳಕ್ಕೆ ಹೊರಟುಹೋದಳು. ಆದಿನವೆಲ್ಲ ಬಾರಲೆಯಿಲ್ಲ. ನಮ್ಮ ಅಣ್ಣನಾದರೊ, ಅವಳವೀಲಣ ವೋಹದಿಂದ, ತನ್ನಕರ್ತವನ್ನೆಲ್ಲ ಹಾಳುಮಾಡಿಕೊಂಡು, ಬಾರಿಬಾರಿಗೂ ಅವಳನ್ನೆ ನೋಡುತಾ, ರಾತ್ರಿಯಾಗುತ್ತಲೆ ಅಂಗಡಿಯನ್ನು ಹಾಕಿಕೊಂಡು ಬೆಳಗಾದವೀಲಾದರೂ, ಅವಳನ್ನು ನೋಡಬಹುದೇನೊ ಎಂದು, ಬೇಗನೆ ಅಂಗಡಿಗೆ ಓಡಿಬಂದನು. ಆದಿನ ಆ ರವೆಯ ಅಂಗಡಿಯವಳು ಒಂದುನಿಮಿಷದವರಿಗೆ ಕಿಟಕಿಬಳಿ ನಿಂತುಕೊಂಡಿದ್ದುದರಿಂದ ನನ್ನ ಅಣ್ಣನು ಸಂತೋಷವನ್ನು ಹೊಂದಿದನು. ಮರುದಿನ ಆಕೆಯು ಇವನನ್ನು ನೋಡಿದಾಗ, ಈತನು ಅವಳವೀಲೆ ಕಣ್ಣುಹಾಕಿದಮಾತ್ರದಿಂದಲೆ, ಆಕೆ ಇವನಿಗಿರುವ ವೋಹವನ್ನು ತಿಳಿದುಕೊಂಡಳು ಎಂದು ಹೇಳಿ ಬೆಳಗಾದಕೂಡಲೆ, ಕಥೆಯನ್ನುನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೧೬೩ ನೆಯ ರಾತ್ರಿ ಕಥೆ.

ಷಹರಜಾದಿಯು ಸುಲಾತಾನರನ್ನು ಕುರಿತು, ಇಂತೆಂದಳು :—

ರವೆಯ ಅಂಗಡಿಯವಳು ನನ್ನ ಅಣ್ಣನ ಅಭಿಪ್ರಾಯವನ್ನು ತಿಳಿದುಕೊಂಡು, ಕೋಪಮಾಡಿಕೊಳ್ಳದೆ ಸಂತೋಷದಿಂದಲೆ, ಆತನನ್ನು ಎದುರುನೋಡುತಾ, ತನಗೆ ಬಹುವಾಗಿ ಬರುತ್ತಿರುವ ನಗೆಯನ್ನು ತೋರ್ಪಡಿಸಿದರೆ, ಆತನು ತನ್ನನ್ನು ಹಾಸ್ಯಮಾಡಿದಳೆಂದು ತಿಳಿದುಕೊಳ್ಳುವನೆಂದು

ತಾನು ನಗುವುದಕ್ಕಾಗಿ ಕಿಟಕಿಯನ್ನು ಮುಚ್ಚಿಕೊಂಡಳು. ಬಾಳು ಬೋಕನು ತನ್ನವೇಲೆ ಆಕೆ ಕೋಪಿಸಿಕೊಳ್ಳದೆ, ಹೋದುದರಿಂದ ಧೈರ್ಯವನ್ನು ತಂದುಕೊಂಡನು. ರವಿಯ ಅಂಗಡಿಯವಳು ನನ್ನ ಅಣ್ಣನನ್ನು ಪರಿಹಾಸ ಮಾಡಬೇಕೆಂದು ಯೋಚಿಸಿ, ಉತ್ತಮವಾದ ವಸ್ತ್ರಗಳನ್ನು ತರಿಸಿ ಅದನ್ನು ಉಡುಪಾಗಿ ಹೊಲಿದುಕೊಡಬೇಕೆಂದು, ದರ್ಜಿಯವನಿಗೆ ಹೇಳಿ ಹೊಲಸಿಕೊಂಡು ಬರುವಂತೆ, ತನ್ನ ದಾದಿಯಕೈಯ್ಯಲ್ಲಿ ಕಳುಹಿಸಿದಳು. ಆಕೆ ಆ ಬಟ್ಟೆಗಳನ್ನು ತೆಗೆದುಕೊಂಡುಬಂದು, ಅಯ್ಯಾ! ನಮ್ಮ ಧೊರೆಸಾನಿ ನಿಮಿಗೆ ಸಲಾಮುಹೇಳಿ, ಈ ಬಟ್ಟೆಗಳನ್ನು ಹೊಲಸಿಕೊಂಡು ಬರುವಂತೆ ಹೇಳಕಳುಹಿಸಿರುವಳು. ಆಕೆ ಹೊಸಹೊಸದಾಗಿ ಉಡುಪನ್ನು ಹಾಕಿಕೊಳ್ಳುವುದರಿಂದ, ನಿನಗೆ ಪ್ರಯೋಜನ ಉಂಟೆಂಬುದು, ನನಗೆ ತಿಳಿದಿರುವುದು ಎನಲು, ಬಾಳುಬೋಕನು, ಆ ರವಿಯ ಅಂಗಡಿಯ ಯಜಮಾನಿಯು, ತನ್ನವೇಲಣ ವೋಹವನ್ನು ತೋರ್ಪಡಿಸುವುದಕ್ಕಾಗಿ, ಇದನ್ನು ಕಳುಹಿಸಿರುವಳೆಂದು ತಿಳಿದು, ಅಮ್ಮಾ! ಎಲ್ಲ ಕೆಲಸಗಳನ್ನು ಬಿಟ್ಟು, ನಿಮ್ಮ ಕಾರ್ಯವನ್ನೆ ಮಾಡಿ ನಾಳೆ ಬೆಳಗ್ಗೆ ಈ ಉಡುಪುಗಳನ್ನು ಸಿದ್ಧ ಮಾಡಿಕೊಡುವೆನೆಂದು ಹೇಳಕಳುಹಿಸಿ ಆಗಲೆ ಕೆಲಸಮಾಡಲಾರಂಭಿಸಿದನು. ಆದಿನವೇ ಕೆಲಸವು ಪೂರೈಸಿತು.

ಮರುದಿನಬಂದ ದಾದಿಯಕೈಯ್ಯಲ್ಲಿ ಆ ಬಟ್ಟೆಗಳನ್ನುಕೊಟ್ಟು ನಾನು ನಿಮ್ಮ ಧೊರೆಸಾನಿಯ ಇಷ್ಟಾನುಸಾರವಾಗಿ, ಕೆಲಸ ಮಾಡಿ ಆಕೆಯನ್ನು ಸಂತೋಷಪಡಿಸಲು ಸಿದ್ಧನಾಗಿರುವೆನು, ಮತ್ತೊಬ್ಬರಲ್ಲಿ ತನ್ನ ಬಟ್ಟೆಗಳನ್ನು ಕಳುಹಿಸದೆ, ಪುನಹ ನನ್ನಬಳಿಗೆ ಕಳುಹಿಸುವಂತೆ ಹೇಳು ಎನಲು, ಅಕೆ ಸ್ವಲ್ಪದೂರ ಹೋಗಿ ಹಿಂದಿರುಗಿಬಂದು, ನನ್ನ ಅಣ್ಣನನ್ನು ನೋಡಿ ಅಯ್ಯಾ! ನಮ್ಮ ಧೊರೆಸಾನಿಯು ನಿನಗೆ ವಂದನೆಗಳನ್ನು ಮಾಡಿ, ಈದಿನ ರಾತ್ರಿ ಹೊತ್ತನ್ನು ಹೇಗೆ ಕಳೆಯುವೆ? ನಾನಾದರೋ ನಿನ್ನ ವೋಹದಿಂದ ನಿದ್ರೆಯಿಲ್ಲದೆ, ನರಳುತ್ತಿರುವೆನೆಂದು ಹೇಳೆಂದು ನನಗೆ ಹೇಳಿದ್ದಳು. ನಾನು ಮರೆತುಹೋಗಿ, ಈಗಬಂದು ಹೇಳಿದೆನೆಂದು ನುಡಿದಳು. ಬುದ್ಧಿಹೀನನಾದ ನನ್ನ ಅಣ್ಣನು, ನಿನ್ನಂತೆ ನನಗೂ ವೋಹ ಉಂಟಾಗಿರುವುದರಿಂದ ನಾಲ್ಕುರಾತ್ರಿಗಳಿಂದಲೂ ನಿದ್ರೆ ಇಲ್ಲದೆ ಕಾಲವನ್ನು

ಕಳೆಯುತ್ತಿರುವೆನೆಂದು ಹೇಳು ಎಂದು ನುಡಿದು, ತನ್ನ ಮನೋರಥವು ಸೀಘ್ರವಾಗಿ ಕೈಗೂಡುವುದೆಂದು, ತಿಳಿದುಕೊಂಡಿದ್ದನು. ಮರಳಿ ಸ್ವಲ್ಪ ಹೊತ್ತಿಗೆ ಆ ದಾದಿಯು ಬಂದು, ಅಯ್ಯಾ ! ನೀನು ಹೊಲಿದ ಬಟ್ಟೆಗಳು ಬಹು ಸಂತೋಷಕರವಾದವುಗಳೆಂದು, ನನ್ನ ಧೊರೆಸಾನಿಯು ಒಪ್ಪಿಕೊಂಡಳು. ಅವಳು ಯಾವ ಪದಾರ್ಥವನ್ನೂ ಎಂದಿಗೂ, ಒಪ್ಪಿದವಳಲ್ಲ. ಇಗೋ ಬಟ್ಟೆಯನ್ನು ತೆಗೆದುಕೊಂಡು, ಮತ್ತೊಂದು ಸಣ್ಣಕೋಟನ್ನು ಹೊಲಿಸಿಕೊಂಡುಬರುವಂತೆ ಹೇಳಿದಳೆನಲು, ಆತನು ಸಾಯಂಕಾಲಕ್ಕೆ ಬಂದು, ತೆಗೆದುಕೊಂಡು ಹೋಗೆಂದು ಹೇಳಿ, ಅದನ್ನು ಹೊಲಿಯುವುದಕ್ಕಾರಂಭಿಸಿದನು. ಆಗ ಆ ಧೊರೆಸಾನಿಯು ಪದೇಪದೇ ಕಿಟಕಿಯಬಳಿಗೆಬಂದು ನೋಡುತ್ತಿದ್ದುದರಿಂದ, ಅನ್ನ ಅಣ್ಣನು ಅತ್ಯಾನಂದಭರಿತನಾಗಿ ಕೂಡಲೆ ಕೆಲಸವನ್ನು ಮುಗಿಸಿದನು. ದಾದಿಯು ಬಂದು, ಅದನ್ನು ತೆಗೆದುಕೊಂಡು ಹೋದಳೆಹೊರತು, ಕೂಲಿಯೆನ್ನಾಗಲಿ ಅದಕ್ಕೆ ಪಾಕಿರುವ ಸಾಮಾನಿನ ಹಣವನ್ನಾಗಲಿ ಕೊಡದೆಹೋದುದರಿಂದ ಆತನು ರಾತ್ರಿ ತಿಂಡಿಗಿಲ್ಲದೆ ಸಾಮಾನುಗಳನ್ನು ಸಾಲಮಾಡಬೇಕೆಂದಿದ್ದನು.

ಆ ಧೊರೆಸಾನಿಯು ಅವಳ ದಾದಿಯು ಈ ದರ್ಜಿಯವನಮೇಲೆ, ನಿಜವಾದ ವ್ಯೋಹವನ್ನು ಹೊಂದಿದವರಾಗಿರಲಿಲ್ಲ. ಅದನ್ನು ಈ ದರ್ಜಿಯವನು ತಿಳಿದುಕೊಳ್ಳಲಾರದೆ ಹೋದನು. ಮರುದಿನ ಬೆಳಿಗ್ಗೆ ಆ ದಾದಿಯು ಈತನಬಳಿಗೆ ಬಂದು ಅಯ್ಯಾ ! ನಮ್ಮ ಯಜಮಾನನು ನಿನ್ನಸಂಗಡ ಮಾತನಾಡಬೇಕೆಂದಿರುವನು. ಪಾಪ್ರಯೆಶಃ ಯಜಮಾನಿಯು ನಿನ್ನನ್ನು ಸ್ತೋತ್ರಮಾಡಿದುದರಿಂದ, ಆತನು ನಿನ್ನನ್ನು ಬರಹೇಳಬಹುದು. ಆಕೆ ತನ್ನ ಇಷ್ಟಾರ್ಥವನ್ನು ನರವೇರಿಸಿಕೊಳ್ಳುವುದಕ್ಕಾಗಿ, ಹೀಗೆ ಮಾಡಿರಬಹುದೆಂದು ನನಗೆ ತೋರುವುದೆಂದು ಹೇಳಲು, ಆ ಮಾತನ್ನು ನಂಬಿ ಬಾಕು ಖೋಕನು ಅವರ ಮನೆಗೆ ತ್ವರೆಯಿಂದ ಹೋಗಲು, ಯಜಮಾನನು, ಒಂದು ಥಾನು ಬಟ್ಟೆಯನ್ನು ಕೊಟ್ಟು, ಇದರಲ್ಲಿ ಆಗುವಷ್ಟು ಅಂಗಿಗಳನ್ನು ಹೊಲಿದು, ಉಳಿದ ಬಟ್ಟೆಗಳನ್ನು ತಂದುಕೊಡು ಎಂದು ಹೇಳಿದನು. ಇಂತೆಂದು ಹೇಳಿ ಷಹರಜಾದಿ ಬೆಳಗಾದಕೂಡಲೆ, ಕಥೆಯನ್ನು ನಿಲ್ಲಿಸಿ, ಪುರುಧಿನ ಬೆಳಗಿನ ಜಾವದಲ್ಲಿ ಹೇಳಲಾರಂಭಿಸಿದಳು.

೧೬೮ ನೆಯ ರಾತ್ರಿ ಕಥೆ.

ಷಹರಜಾದಿಯು ಇಂತೆಂದಳು :— ಬಾಕುಬೋಕನು ಐದಾರು ದಿನಗಳು ಪ್ರಯೋಸಪಟ್ಟು, ಇಪ್ಪತ್ತಾರು ಅಂಗಿಗಳನ್ನು ಹೊಲಿದು, ತೆಗೆದುಕೊಂಡುಬಂದು ಆತನಿಗೆ ಕೊಡಲು, ಆ ರವೆಯ ಅಂಗಡಿ ಯಜಮಾನನು ಮತ್ತೊಂದು ಥಾನು ಬಟ್ಟೆಯನ್ನು ಕೊಟ್ಟು, ಇದರಲ್ಲಾಗುವಷ್ಟು ಷರಾಯಿಗಳನ್ನು ಹೊಲಿದುಕೊಂಡು ಬಾರೆಂದು ಹೇಳಲು, ಆತನು ತನ್ನ ಅಂಗಡಿಗೆ ಬಂದು ಐದಾರುದಿನಗಳು ಪ್ರಯಾಸ ಹೊಂದಿ, ಇಪ್ಪತ್ತಾರು ಷರಾಯಿಗಳನ್ನು ಹೊಲಿದು ಪುನಹ ತೆಗೆದುಕೊಂಡು ಆತನಬಳಗೆಹೋಗಲು ಯಜಮಾನನು, ನಿನಗೆಷ್ಟು ರೂಪಾಯಿಗಳನ್ನು ಕೊಡಬೇಕೆಂದನು. ನಾನು ಇಪ್ಪತ್ತು ರೂಪಾಯಿಗಳನ್ನು ತೆಗೆದುಕೊಳ್ಳುವೆನೆಂದು, ಆತನಿಗೆ ಹೇಳಿದೆನು. ಆಗ ಯಜಮಾನನು ತನ್ನ ದಾದಿಯನ್ನು ಕರೆದು ಹಣದ ಚೀಲವನ್ನು ತರುವಂತೆ ಹೇಳಿದನು. ಆಕೆ ಹಣವನ್ನು ತರುತ್ತ ನೀನು ಹಣವನ್ನು ತೆಗೆದುಕೊಳ್ಳಬೇಡವೆಂದು ಸನ್ನೆಮಾಡಿದುದರಿಂದ, ಈ ನಿರ್ಭಾಗ್ಯನು ಹಣವನ್ನು ತೆಗೆದುಕೊಳ್ಳದೆ ಹಿಂದಿರುಗಿಬಂದು, ನಾನಾಕಷ್ಟಗಳನ್ನು ಅನುಭವಿಸುತ್ತ, ಕೊನೆಗೆ ನನ್ನಬಳಗೆ ಕೆಲವು ಹಣವನ್ನು ಸಾಲ ತೆಗೆದುಕೊಂಡು ಅದರಿಂದ ಕೆಲವುದಿನಗಳು ಗಂಜಿಯೆನ್ನಾದರೂ, ಹೊಟ್ಟೆತುಂಬ ಕುಡಿವುದಕ್ಕಿಲ್ಲದಂತೆ, ಜೀವನ ಮಾಡುತ್ತಿದ್ದನು.

ಇನ್ನು ಕೆಲವುದಿನಗಳವೀಲೆ ಬಾಕುಬೋಕು ಆತನನ್ನು ನೋಡುವುದಕ್ಕೆ ಮನೆಗೆಹೋಗಲು, ಹಣಕ್ಕಾಗಿ ಬಂದಿರುವನೆಂದು, ಯಜಮಾನನು ಹಣವನ್ನು ತರಹೇಳಲು, ದಾದಿಯು ಮೊದಲಿನಂತೆ ಸನ್ನೆಮಾಡಿದುದರಿಂದ ನಾನು ಹಣಕ್ಕಾಗಿ ಬರಲಿಲ್ಲವಯ್ಯಾ ! ನಿಮ್ಮನ್ನು ನೋಡುವುದಕ್ಕಾಗಿ ಬಂದೆನೆಂದು ಹೇಳಲು, ಆತನು ತನ್ನ ಮೈಮೇಲಿರುವ ಹಳೆಯಂಗಿಯನ್ನು ತೆಗೆದುಕೊಟ್ಟು, ಸರಿಮಾಡಿಕೊಂಡುಬರುವಂತೆ ಹೇಳಲು, ಬಹುಪ್ರಯಾಸಪಟ್ಟು ಆ ಕೆಲಸವನ್ನು ಮಾಡಿಕೊಂಡುಬರಲು, ಆತನು ದುಡ್ಡು ಕೊಡುವಾಗ, ಮರಳಿ ದಾದಿಯು ಸನ್ನೆಮಾಡಿದುದರಿಂದ, ನಾನು ಅಯ್ಯಾ ! ಇರಲಿ ನಿಧಾನವಾಗಿ ಕೊಡುವಿರಂತೆ ! ಎಂದು ಹೇಳಿ, ಬಹು ಸಂಕಟದಿಂದ ಹಿಂದಿರುಗಿ ಅಂಗಡಿಗೆಹೋದನು. ಆ ಪರಮಲುಬ್ಧಳಾದ ಧೂರೆಸಾನಿಯು, ನನ್ನ

ಅಣ್ಣನಕೈಯ್ಯಲ್ಲಿ ಕೆಲಸವಮಾಡಿಸಿಕೊಂಡು, ಹಣವನ್ನುಕೊಡದೆ ಗೋಳು ಹೊಯ್ದುಕೊಂಡುದಲ್ಲದೆ, ಮತ್ತೊಂದುವಿಧವಾಗಿ ಆತನಿಗೆ ತನ್ನಮೇಲೆ ಇರುವ ಮೋಹವನ್ನು ಗಂಡನಿಗೆ ತಿಳಿಯಪಡಿಸಿ, ಶಿಕ್ಷೆಯನ್ನು ಪಡಿಸಿದಳು. ಹೇಗೆಂದರೆ : ಆ ಗಾಣದವನು ನನ್ನ ಅಣ್ಣನನ್ನು ಒಂದಾನೊಂದು ದಿನ ಊಟಕ್ಕೆ ಕರೆದು, ಅತ್ಯಸಹ್ಯವಾದ ಊಟವನ್ನಿಟ್ಟು, ಅಯ್ಯಾ ! ಈಗ ಬಹಳಹೊತ್ತಾದುದರಿಂದ ನೀನು ಮನೆಗೆ ಹೋಗಲಾರೆ, ಆದುದರಿಂದ ಇಲ್ಲೆ ಮಲಗಿಕೊಂಡಿರು, ಎಂದು ಹೇಳಿ ಒಂದುಕಡೆ ಹಾಸಿಗೆಯನ್ನು ಹಾಕಿಕೊಟ್ಟು, ತಾನು ತನ್ನಹೆಂಡತಿಯೂ ಸುಖವಾಗಿ ಮಲಗಿದ್ದು, ಅರ್ಧರಾತ್ರಿಯಲ್ಲೆದ್ದು, ಅಯ್ಯಾ ! ನೀನು ನಿದ್ರೆಹೋಗುತ್ತಿರುವೆಯಾ ! ಅಯ್ಯಾ ! ನನ್ನ ಗಾಣದಕುದುರೆಗೆ, ಕಾಲು ನೋವಾಗಿರುವುದು. ನೀನು ದಯೆಮಾಡಿ ಸ್ವಲ್ಪ ಗಾಣವನ್ನು ತಿರುಗಿಸಿದರೆ, ನನಗೆ ತುಂಬ ಉಪಕಾರವಾಗುವುದೆಂದು ಹೇಳಲು, ಆ ದರ್ಜಿಯವನು ತನ್ನಸುಗುಣವನ್ನು ತೋರ್ಪಡಿಸಬೇಕೆಂದು, ಅಯ್ಯಾ ! ಆ ಗಾಣವನ್ನು ತಿರುಗಿಸುವ ವಿಧಾನವನ್ನು ನನಗೆ ತೋರಿಸಿಕೊಡಿರೆಂದು ಹೇಳಿದನು.

ಆಗ ಆತನು ಆ ಮನುಷ್ಯನನ್ನು ಕರೆದುಕೊಂಡು ಹೋಗಿ, ಗಾಣಕ್ಕೆ ಕಟ್ಟುವ ಕುದುರೆಯಂತೆ ಅವನನ್ನು ಕಟ್ಟಿ, ಲಗಾಮುಗಳಿಂದ ಬಿಗಿದು, ಕೈಯ್ಯಲ್ಲಿ ಕೊರಡೆಯನ್ನು ಹಿಡಿದು, ಕುದುರೆಯನ್ನು ಹೊಡೆಯುವಂತೆ ಕೊರಡೆಯಿಂದ ಹೊಡೆಯಲು, ಅಯ್ಯಾ ! ಇದೇನು ಹೀಗೆ ಹೊಡೆಯುತ್ತೀಯೆಲ್ಲಾ ಎನಲು, ಓಹೋ ! ಅದು ನನ್ನ ಕುದುರೆಯನ್ನು ಎಚ್ಚರಗೊಳಿಸುತ್ತಿದ್ದಂತೆ, ನಿನ್ನನ್ನು ಎಚ್ಚರಗೊಳಿಸುವೆನು. ನೀನು ಬೇಗಬೇಗ ನಡೆ ಇಲ್ಲವಾದರೆ ನನ್ನಗಾಣವು ಕೆಟ್ಟುಹೋಗುವುದೆಂದುಹೇಳಿ, ಬಲವಾದ ಹನ್ನೆರಡು ದೆಬ್ಬೆಗಳನ್ನು ಹಾಕಿದನು. ಎಂದು ಹೇಳಿ ಷಹರ ಜಾದಿಯು ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೧೬೫ ನೆಯ ರಾತ್ರಿ ಕಥೆ.

ಬಳಿಕ ಷಹರಜೋಡಿಯು ಸುಲಾತ್ತನರಿಗೆ ಹೀಗೆಂದು ಹೇಳಿದಳು. ಆತನು ಬೆಳಗಾಗುವವರಿಗೂ ಬಾಕುಬೋಕನನ್ನು ಈವಿಧದಿಂದ ನೋಯಿಸಿ ನಂತರ ಹೊರಟುಹೋದನು. "ಷಾಡಲೆ ದಾದಿಯು ಬಂದು, ಅಯ್ಯೋ! ಯೆಜವಾನನು ನಿನ್ನನಿಷಯದಲ್ಲಿ ಮಾಡಿದ ಈ ದುರ್ಮಾರ್ಗಕ್ಕಾಗಿ ನಾನು ತುಂಬ ವ್ಯಸನಪಡುತ್ತೇನೆ. "ನಾನು ನಮ್ಮ ಧೊರೆಸಾನಿಯು ಈ ಕಾರ್ಯದಲ್ಲಿ ಎಷ್ಟುಮಾತ್ರವೂ ಪ್ರವರ್ತಿಸಿದವರಲ್ಲ. ಆದುದರಿಂದ ನಿನ್ನ ಸ್ಥಿತಿಯೆನ್ನು ನೋಡಿ, ತುಂಬ ವ್ಯಸನವಾಗುವುದೆಂದು ಹೇಳಲು, ಅತ್ಯಂತ ವ್ಯಸನವನ್ನು ಅನುಭವಿಸಿ ಅಲ್ಲಿಂದ ಹೊರಟುಬಂದು, ಮರಳಿ ಆ ಹೆಂಗಸನ್ನು ನೆನೆಯಲೇಬಾರದೆಂದು, ಸುಮ್ಮನಾದನೆನಲು, ಸುಲಾತ್ತನರು ಫಕಫಕನೆ ನಗುತ್ತ ಸಾಕು ನಿನ್ನ ಕಥೆಯೆನ್ನು ಇನ್ನು ಹೇಳಬೇಡ. ಉತ್ತಮವಾದ ಭೋಜನವನ್ನು ಹಾಕಿಸುವೆನು. ಅದನ್ನು ಭಕ್ಷಿಸಿ ಹೊರಟುಹೋಗೆನಲು ನಾನು ಕಲೀಫರನ್ನು ಕುರಿತು, ಸ್ವಾಮಿ! ನಾನು ನನ್ನ ಇತರ ಅಣ್ಣತಮ್ಮಂದಿರ ಕಥೆಯೆನ್ನು ಹೇಳದಹೊರತು, ತಮ್ಮ ಸನ್ನಿಧಾನದಿಂದ ಹೋಗತಕ್ಕವನಲ್ಲವೆಂದು ಹೇಳಲು, ಅವರು ಉತ್ಸಾಹದಿಂದಿದ್ದುದರಿಂದ, ನಾನು ಹೀಗೆಂದು ಹೇಳತೊಡಗಿದೆನು.

ಕ್ಷೌರಿಕನ ಎರಡನೆ ಅಣ್ಣನ ಕಥೆ.

ಬೊಕ್ಕಬಾಯಿಯೆ ಬೋಕಿಬಾರನೆಂಬವನು, ತನ್ನ ಎರಡನೆ ತಮ್ಮನು. ಈತನು ಒಂದಾನೊಂದುದಿನ ಮಾರ್ಗದಲ್ಲಿ ಹೋಗುತ್ತಿರುವಾಗ ಒಬ್ಬ ಮುದುಕಿಯೆನ್ನು ಕಂಡನು ಆ ಮುದುಕಿಯು ಆತನನ್ನು ತನ್ನ ಬಳಿಗೆ ಕರೆದು ನಿನ್ನಸಂಗಡ ಕೆಲವುಮಾತನ್ನು ಆಡಬೇಕೆಂದಿರುವೆನೆಂದಳು. ಬೋಕಿಬಾರನು, ಅದೇನು ಹೇಳು ಎನಲು, ಅಯ್ಯಾ! ನೀನು ನನ್ನ ಸಂಗಡ ಬರುವುದಾದರೆ, ನಾನು ನಿನ್ನನ್ನು ಒಂದು ಅರಮನೆಗೆ ಕರೆದುಕೊಂಡು ಹೋಗುವೆನು. ಅಲ್ಲಿರುವ ಒಬ್ಬಾಬ್ಬನೊಬ್ಬ ರಾಣಿಯು ನಿನಗೆ ಉತ್ತಮವಾದ ವಸ್ತ್ರಗಳನ್ನೂ, ರಸವತ್ತಾದ ತಿಂಡಿಯೆನ್ನೂ, ರುಚಿಕರನಾದ ಸಾರಾಯಿನ್ನೂಸಹ ಕೊಟ್ಟು ಸುಖದಿಂದ ನೋಡಿಕೊಳ್ಳುವಳು,

ನಂತರ ನಾನು ಹೇಳಬೇಕಾದುದೇನೂ ಇಲ್ಲವಲ್ಲ. ನಿನಗೆ ತಿಳಿದಿರಬಹುದೆಂದು ಹೇಳಲು, ಜೋಕಿಬಾರನು ಇದು ನಿಜವೊ ಎನಲು, ನಾನು ಜೊಗಳ ಮಾತುಗಳನ್ನಾಡಿ, ರಗಳೆಯನ್ನು ಮಾಡುವ ಹಗರಣದ ಹೊಗೆಯು ಮಾರಿ ಅಲ್ಲ. ನನ್ನಮಾತನ್ನು ನಂಬು. ಆದರೆ ನೀನುಮಾತ್ರ ಬಹು ಎಚ್ಚರಿಕೆ ಯಿಂದ, ನಡದುಕೊಳ್ಳಬೇಕು. ಅದರಲ್ಲೂ ಮರ್ಯಾದೆ ಇದ್ದಷ್ಟೂ ಸುಖವುಂಟೆನಲು, ಆತನು ಅದಕ್ಕೆ ಸಮ್ಮತಿಸಲು, ಇಬ್ಬರೂ ಅರಮನೆಯ ಬಾಗಿಲಿಗೆ ಹೋದರು. ಪಹರೆಯವರೂ, ಪರಿಜನರೂ, ನನ್ನ ಅಣ್ಣನನ್ನು ಒಳಗೆ ಬಿಡುವುದಿಲ್ಲವೆಂದು, ತಂಟೆಮಾಡಿದರೂ, ಮುದುಕ ಏನೋ ಹೇಳಿ ದುದರಿಂದ, ಅವರು ಬಿಡಲೊಪ್ಪಿದರು. ಬಳಿಕ ಆ ಮುದುಕ ಜೋಕಿಬಾರ ನನ್ನು ನೋಡಿ, ನಾನು ನಿನ್ನನ್ನು ಯಾರಬಳಿಗೆ ಕರೆದುಕೊಂಡುಹೋಗು ವೆನೋ ಆಕೆ ಸುಗುಣಶಾಲಿಯಾದ ಪುರುಷನನ್ನು, ವರಿಸುವಳೆಹೊರತು, ಅನ್ಯರನ್ನು ಕಣ್ಣೆತ್ತಿಯೂ, ನೋಡಳು ಆದುದರಿಂದ ನೀನು ನಿನ್ನ ಸುಗುಣವನ್ನು ತೋರ್ಪಡಿಸಿದರೆ, ನಿನ್ನಿಷ್ಟಾನುಸಾರವಾಗಿರಲು ಆಕೆಯು ಎಂದಿಗೂ ಒಪ್ಪದೆ ಇರಲಾರಳೆಂದು ನುಡಿಯಲು, ಜೋಕಿಬಾರನು ಹಾಗೆ ಆಗಲೆಂದು ಹೇಳಿದನು.

ಆಗ ಆ ಮುದುಕ ಆತನನ್ನು ಮನೋಹರವಾಗಿ ಅಲಂಕರಿಸಿದ್ದ ಒಂದು ಅರಮನೆಯೊಳಕ್ಕೆ ಕರೆದುಕೊಂಡುಹೋಗಿ, ಅಲ್ಲಿನ ಹಜಾರದಲ್ಲಿದ್ದ ಮಂಚದಮೇಲೆ, ನನ್ನನ್ನು ಕೂರಿಸಿ, ತಾನು ಬಂದಿರುವ ರಹಸ್ಯವನ್ನು ತಿಳಿಸಿಬರುವೆನೆಂದು ಹೇಳಿ, ನನ್ನನ್ನು ಅಲ್ಲೆ ಕುಳಿತುಕೊಂಡಿರುವಂತೆ ಕೇಳಿಕೊಂಡು, ಹೊರಟುಹೋದನು. ಅಂತಹ ಅರಮನೆಯನ್ನು ನಾನು ಯಾವಾಗಲೂ ನೋಡಿದವನಲ್ಲವಾದುದರಿಂದ ಅಲ್ಲಿನವಿಚಿತ್ರಗಳನ್ನು ನೋಡು ತ್ತಾ, ಸಂತೋಷಚಿತ್ತನಾಗಿದ್ದೆನು. ಆಗ ಅಲ್ಲಿನ ದಾದಿಯರೆಲ್ಲರೂ, ಹುಸಿ ನಗೆಯನ್ನು ನಗುತ್ತಾ, ಕೋಲಾಹಲದಿಂದ ಬರುತ್ತಿರಲು, ಅವರಮಧ್ಯದಲ್ಲಿ ಮಹಾ ಸೌಂದರ್ಯವತಿಯಾದ, ಒಬ್ಬಬ್ಬ ಪ್ರಮದಾಮಣಿಯು ನಡೆತರುತ್ತಿರುವುದನ್ನುನೋಡಿ, ಅಕೆಯೆ ರಾಣಿಯೊಗಿರಬಹುದೆಂದುಕೊಂ ಡೆನು. ಬಳಿಕ ಅವರೆಲ್ಲರೂ, ನನ್ನಬಳಿಗೆಬಂದು ಸುತ್ತಿಕೊಂಡರು. ನಾನು ಮಹದಾನಂದದಿಂದ ನೋಡುತ್ತಿರಲು, ರಾಣಿಯು ಅಧಿಕಾನಂದದಿಂದ ನನ್ನ ಬಳಿಗೆ ಬರಲು, ನಾನು ಬಹು ನಮ್ರನಾಗಿ ನಿಂತುಕೊಂಡು, ಬಹಳವಾಗಿ

ಮರಾ್ಯದೆ ಮಾಡಿದೆನು. ಆಗ ರಾಣಿಯು ನನ್ನನ್ನು ನೋಡಿ ಕುಳ್ಳಿರು ವಂತೆ ಆಜ್ಞಾಪಿಸಿ, ನೀನು ಬಹು ಸುಂದರನಾಗಿರುವಿಯಾದುದರಿಂದ, ನಿನ್ನ ಇಷಾ್ಟರ್ಥವೇನೆಂದು ಕೇಳಲು, ಬೋಕಿಬಾರನು ಪ್ರಿಯರಾಣಿಯರೇ ! ನಿಮ್ಮಲ್ಲಿ ಅನುಕೂಲನಾಗಿದ್ದು, ಸುಖವನ್ನು ಹೊಂದಬೇಕೆಂಬುದೇ ನನ್ನ ಕೋರಿಕೆಯೆಂದು ಹೇಳಿದನು. ಆಗ ರಾಣಿಯು, ನಿನ್ನನ್ನು ನೋಡಿ ದರೆ, ಉತ್ಸಾಹಯುಕ್ತನಾದ ಸಂತುಷ್ಟಮಾನಸನೆಂದು, ನನಗೆ ತೋರಿ ಬರುವುದರಿಂದ, ನಿನ್ನ ಆನಂದಕ್ಕೇನೂ ಕೊರತೆ ಇಲ್ಲವೆಂದು ಹೇಳಿದಳು. ಬಳಿಕ ರಾಣಿಯು ತನ್ನ ದಾಸಿಯರ ಮೂಲಕವಾಗಿ, ಫಲಹಾರದ ಪದಾರ್ಥ ಗಳನ್ನು ಅನ್ನಪಾನಾದಿಗಳನ್ನು ತರಿಸಿ, ಮಂಟಪಮಧ್ಯದಲ್ಲಿ ಕುಳಿತು, ಆನಂದದಿಂದ ಸರ್ವರೂ, ಭಕ್ಷಿಸತೊಡಗಿದರು. ಆಗ ಬೋಕಿಬಾರನು ತಿಂಡಿ ಯನ್ನು ತಿನ್ನುವುದಕ್ಕಾಗಿ, ಬಾಯಿಬಿಟ್ಟಕೂಡಲೆ ಹಲ್ಲುಗಳಿಲ್ಲದಿರುವು ದನ್ನು ಕಂಡು, ರಾಜ್ಞಿಯೂ ದಾಸಿಯರೂ ಬಲಳವಾಗಿ ನಗುವುದಕ್ಕೆ ಪ್ರಾರಂಭಿಸಲು, ಬೋಕಿಬಾರನು ತನ್ನನ್ನು ತನ್ನ ಸೌಂದರ್ಯವನ್ನು ನೋಡಿ, ನನ್ನಸಹವಾಸದಿಂದುಂಟಾದ ಆನಂದಕ್ಕಾಗಿ ಇವರಿಂತು ಸಂತೋಷ ದಿಂದ ನಗುತ್ತಿರುವರಲ್ಲದೆ ನನ್ನನ್ನೆಂದಿಗೂ ಹಾಸ್ಯಮಾತಲಾರರೆಂದು ತಿಳಿದು, ತಾನು ಸಂತೋಷದಿಂದಿರಲು, ರಾಣಿಯು ಅಲ್ಲಿರುವ ಉತ್ತಮಪದಾರ್ಥ ಗಳನ್ನು ತನ್ನ ಕೈಯ್ಯಿಂದ ಎತ್ತಿಕೊಡುತ್ತಿರಲು, ಸರ್ವರಂತೆ ತಾನು ಆನಂದದಿಂದ ಊಟವನ್ನು ಮಾಡಿದನು.

ಬಳಿಕ, ಊಟವಾದಕೂಡಲೆ ಎಲ್ಲರೂ, ಸೋಫಾದವೇಲೆ ಕುಳಿತು ಕೊಂಡಿರಲು, ದಾಸಿಯರು, ಸಾರಾಯಿಯನ್ನು ತೆಗೆದುಕೊಂಡುಬಂದು, ನಿಮ್ಮ ಆರೋಗ್ಯಕ್ಕಾಗಿ ಇದನ್ನು ಸೇವಿಸಬೇಕೆಂದು ಹೇಳಲು, ರಾಣಿಯು ಎದ್ದು ನಿಂತುಕೊಂಡು, ಸಾರಾಯಿಯನ್ನು ಕುಡಿಯುವವರಿಗೂ, ಬೋಕಿ ಬಾರನು ನಿಂತುಕೊಂಡಿರಲು, ರಾಣಿಯು ತಾನು ಕುಡಿದವೇಲೆ ಅದೇ ಬಟ್ಟ ಲಿಗೆ ಮತ್ತಷ್ಟು ಸಾರಾಯಿಯನ್ನು ಹಾಕಿ ಬೋಕಿಬಾರನಿಗೆ ಕೊಡಲು, ಆತನು ಅದನ್ನು ಕುಡಿದನು. ಬಳಿಕ ಕೆಲವರು ಗಾನಮಾಡುತ್ತಲೂ, ಇನ್ನು ಕೆಲವರು ವಾದ್ಯಗಳನ್ನು ಬಾರಿಸುತ್ತಲೂ, ಇತರರು ವಿನೋದ ವಾಗಿ ಮಾತನಾಡುತ್ತಲೂ ಇರಲು, ರಾಣಿಯು ಅವರುಗಳ ಜೊತೆಯಲ್ಲಿ ನರ್ತನ ಮಾಡುತಾ್ತ ಬಹಳಹೊತ್ತು ಕಾಲವನ್ನು ಕಳೆದಳು. ಬಳಿಕ

ಸ್ವಲ್ಪಹೊತ್ತಿನಮೇಲೆ ಪುನಹ ಸ್ವಲ್ಪ ಸ್ವಲ್ಪ ಸಾರಾಯಿಯನ್ನು ಕುಡಿದರು. ಇಂತೆಂದು ಶೇಳಿ ಷಹರಜಾದಿಯು ಬೆಳಗಾದಕೂಡಲೆ ಕಥೆಯನ್ನು ನಿಲ್ಲಿಸಿ, ಮರುದಿನ ಅರುಣೋದಯಕಾಲದಲ್ಲಿ ಹೇಳಲಾರಂಭಿಸಿದಳು.

೧೭೦ ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು, ಇಂತೆಂದಳು :— ಹೀಗೆ ಬೋಕಿಬಾರನು ಸಾರಾಯಿಯನ್ನು ರಾಣಿಯವರಿಂದ, ಮರ್ಯಾದಾ ಪೂರ್ವಕವಾಗಿ ತೆಗೆದುಕೊಂಡು, ಸಂತೋಷದಿಂದ ಪಾನ ಮಾಡಿ ನಿಂತುಕೊಂಡಿರಲು, ರಾಣಿಯು ಆತನನ್ನು ತನ್ನಪಕ್ಕಕ್ಕೆ ಎಳೆದು ಕೂಡಿಸಿಕೊಂಡು, ಮೃದುವಾಗಿ ಮಾತನಾಡುತ್ತ ಸರಸಸಲ್ಲಾಪಗಳನ್ನು ಆಡಿ, ನಂತರ ಆತನನ್ನು ಮೊಟುಕುತ್ತಿದ್ದಳು. ಬಹುಜನ ದಾದಿಯರಮಧ್ಯದಲ್ಲಿ ರಾಣಿಯು ಹೀಗೆ ಮಾಡುತ್ತಿರುವುದನ್ನು ನೋಡಿ, ಬೋಕಿಬಾರನು ತಾನು ಅವಳಂತೆ ಹುಡುಗಾಟದಲ್ಲಿ ಕಾಲವನ್ನು ಕಳೆಯುತ್ತ, ಸರಸಸಲ್ಲಾಪಗಳನ್ನು ತೋರಿದನೇಹೊರತು, ಮತ್ತೇನೂ ಮಾಡುವುದಕ್ಕೂ ಶಕ್ತನಾಗಲಿಲ್ಲ. ರಾಣಿಯು ಬಹಳಹೊತ್ತಿನವರಿಗೂ, ಹೀಗೆ ಸರಸವಾಡುತ್ತಿರಲು, ಸುಮ್ಮನೆ ಮುಗ್ಧನಂತೆ ಕುಳಿತಿರುವ ಬೋಕಿಬಾರನನ್ನು ನೋಡಿ, ಮೂರು ನಾಲ್ಕು ಒಳವಾದ ದೆಬ್ಬಿಗಳನ್ನು ಹಾಕಲು ಆತನು ಥಿದರಿ ದೂರಕ್ಕೆ ಹೊರಟುಬೋದನು. ಆಗ ಆತನನ್ನು ಕರೆದುಕೊಂಡುಬಂದ ಮುದುಕಿಯು, ಈ ಸ್ಥಲದಲ್ಲಿ ನೀನು ಬಹು ಮರ್ಯಾದೆಯಿಂದ ನಡೆದುಕೊಳ್ಳಬೇಕೆಂದು, ನಾನು ಬಹಳವಾಗಿ ಶೇಳಿದ್ದರೂ, ನೀನು ಅದರಂತೆ ನಡೆದುಕೊಳ್ಳುವುದಕ್ಕೆ ತಪ್ಪಿಬೋದೆಯಾ ? ಇದರಿಂದ ರಾಣಿಗೆ ಕೋಪಬರುವುದೆಂದು ಹೇಳಲು, ನಾನು ಆಕೆಯನ್ನು ಸಮಾಧಾನಪಡಿಸುವುದಕ್ಕಾಗಿ, ಮರಳಿ ಆಕೆಯಬಳಿಗೆಬಂದು ಕುಳಿತುಕೊಳ್ಳಲು, ರಾಣಿಯು ಮೊದಲಿಗಿಂತಲೂ, ಬಲವಾಗಿ ಮೊಟಗುತ್ತ ತನ್ನ ದಾದಿಯರನ್ನು ಕಣ್ಣೆತ್ತಿ ನೋಡಲು, ಅವರೆಲ್ಲರೂ, ಬಹು ಧೈರ್ಯವಾಗಿ ಬೋಕಿಬಾರನಮೇಲೆ ಬಿದ್ದು, ನಾನಾವಿಧವಾದ ಹಿಂಸೆಮಾಡತೊಡಗಿದರು. ಒಬ್ಬಳು ಮೂಗನ್ನು ರೇಗಿಸಿದಳು. ಮತೊಬ್ಬಳು ಕಿವಿಯನ್ನು ಮೂಳುಮಾಡತೊಡಗಿದಳು. ಇನ್ನೊಬ್ಬಳು ಗಡ್ಡವನ್ನು ಹಿಡಿದೆಳೆದಳು. ಮಗದೊಬ್ಬಳು ಕಾಲುಗಳನ್ನು ಬಲವಾಗಿ ಹಿಡಿದು ಅಮುಕುತಿದ್ದಳು.

ಈತರದಿಂದ ಆತನಿಗೆ ನಾನಾತೊಂದರೆಗಳುಂಟಾಗುತ್ತಿರುವುದನ್ನು ಸೈರಿಸ
ಲಾರದೆ, ಜೋಕಿಬಾರನು ಮುದುಕಿಯನ್ನು ನೋಡಲು, ನೀನು ಹೆದರ
ಬೇಡ. ಸುಮ್ಮನೆ ಕುಳಿತುಕೊ ಅವರುಮಾಡುವ ವಿನೋದಗಳನ್ನು ನೋಡು
ತ್ತಿರು. ಇದಕ್ಕಿಂತಲೂ ಅತಿಶಯವಾದ ವಿನೋದಗಳನ್ನು ನೋಡುವೆಯಂತೆ,
ಎಂದು ಹೇಳಲು, ರಾಣಿಯು ಬಹುಸಂತೋಷದಿಂದ ಜೋಕಿಬಾರನ್ನು
ನೋಡಿ, ನೀನು ಬಹು ಧೈರ್ಯಶಾಲಿ. ನಾವು ಮಾಡುತ್ತಿರುವ ಹುಡುಗಾಟದ
ವಿನೋದಗಳನ್ನೆಲ್ಲಾ ಸಹಿಸುತ್ತಿರುವೆಯಲ್ಲಾ! ಎನಲು, ಆತನು ಅಮ್ಮಾ!
ನಾನು ನಿಮ್ಮ ಸ್ವಾಧೀನದಲ್ಲಿರುವೆನು. ನೀವು ಹೇಳಿದಂತೆ ನಡೆದುಕೊಂಡು
ನಿಮ್ಮಗಳನ್ನು ಸಂತೋಷ ಪಡಿಸುವುದೇ ಮುಖ್ಯವಾದ ನನ್ನ ಕರ್ತವ್ಯ
ವೆಂದು ಹೇಳಿದನು. ಆಗ ರಾಣಿ ತನ್ನ ದಾದಿಯೆನ್ನು ಕುರಿತ್ತು, ಪನ್ನೀರು
ಮೊದಲಾದ ವಾಸನಾದ್ರವ್ಯಗಳನ್ನು ತರುವಂತೆ ಹೇಳಲು, ಅವರು ಆ ಪದಾ
ರ್ಥಗಳನ್ನು ತಂದು ವಿನೋದವಾಗಿ ಆತನಮೇಲೆ ಸುರಿದರು. ಆ ಕಾಲದಲ್ಲಿ
ನಿಂತುಹೋಗಿದ್ದ, ವೀಣಾವಾದ್ಯಗಳೆಲ್ಲ ಮರಳಿ ಮೊಳಗಲಾರಂಭಿಸಿದವು.

ರಾಣಿಯು ತನ್ನದಾದಿಯರೊಡನೆ ಕುಳಿತಿರುವ ಮುದುಕಿಯನ್ನು
ನೋಡಿ, ನನ್ನನ್ನು ಆಲಿಂಗಿಸಿ ಮುತ್ತಿಟ್ಟುಕೊಂಡು, ಈ ನನ್ನ ಪ್ರೀತಿ
ಪಾತ್ರನಾದ ಮಾನವನನ್ನು ನಾನು ನಿನಗೆ ಮೊದಲು ಹೇಳಿದಂತೆ ಮಾಡಿ,
ಕರೆದುಕೊಂಡು ಬನ್ನಿರೆಂದು ಹೇಳಲು, ಕೂಡಲೆ ನಾನು ಮುದುಕಿಯ
ಬಳಿಗೆ ಹೋಗಿ, ನನ್ನನ್ನು ಏನುಮಾಡಹೋಗುವರೆಂದು ನಾನು ಕೇಳಲು,
ಇಕೆ ಅಯ್ಯಾ! ಈ ನಮ್ಮ ರಾಣಿಯು, ಬಹು ವಿನೋದಪ್ರಿಯಾದುದ
ರಿಂದ, ನಿನಗೆ ಸ್ತ್ರೀವೇಷವನ್ನು ಹಾಕಿದರೆ ಬಹು ಸುಂದರವಾಗಿ ಇರುವು
ದೆಂದು, ನಿನಗೆ ಹಾಗೆ ಮಾಡುವಂತೆ ಆಜ್ಞಾಪಿಸಿರುವಳು. ನಿನ್ನ ಕೈಗಳಿಗೆ
ಬಳೆಗಳನ್ನು ಹಾಕಿ ವಿಾಸೆಗಳನ್ನು ಜೋಳಿಸಿ, ಹೆಣ್ಣುವೇಷವನ್ನು
ಹಾಕುವರೆನಲು, ಹಾ! ವಿಾಸೆಗಳನ್ನು ಜೋಳಿಸಿದರೆ, ನಾನು ಮರಳಿ
ಮಾರ್ಗದಲ್ಲಿ ಮುಖವೆತ್ತಿ ಸಂಚರಿಸಬಹುದೆ ಎನಲು, ಅಯ್ಯೋ! ಇದು
ನಿನಗೆ ಪರಮ ಸೌಭಾಗ್ಯರೂಪವಾದುದೆಂದು ತಿಳಿದುಕೊ, ಎಂದು ಹೇಳಿ
ದುದಕ್ಕೆ, ಆತನು ಸುಮ್ಮನಿರಲು, ದಾದಿಯರು ಆತನ ಕೈಗಳಿಗೆ ಕರಿಯ
ಬಣ್ಣವನ್ನು ಹಾಕಿ, ವಿಾಸೆಯೆನ್ನು ಜೋಳಿಸಿ, ನಂತರ ಗಡ್ಡವನ್ನು
ಜೋಳಿಸುವುದಕ್ಕೆ ಪ್ರಯತ್ನ ಮಾಡಲು, ಆಹಾ! ವಿಾಸೆಯಲ್ಲದೆ

ಗಡ್ಡವನ್ನು ಹಾಳುಮಾಡಿಕೊಳ್ಳಬೇಕೆ, ಬೇಡಬೇಡ ನಾನೊಲ್ಲೆನೆಂದು ಹೇಳಲು ದಾದಿಯರು ಅಯ್ಯೋ! ನೀನು ತ್ರಿಲೋಕಸುಂದರಿಯಾದ, ಸ್ತ್ರೀಯನ್ನು ಮದುವೆಯಾಗಿ ರಾಜಭೋಗವನ್ನು ಅನುಭವಿಸುವುದಕ್ಕೆ ಕಾದುಕೊಂಡಿರುವವನು ಈಹಾಳುಗಡ್ಡಕ್ಕೆ ಏಕೆ ಅಳುವೆ. ನಿನ್ನ ಗಡ್ಡವನ್ನು ಬೋಳಿಸದೆ ನಿನಗೆ ಪಿಣ್ಣಾವೇಷವನ್ನು ಹಾಕುವುದು ಹೇಗೆ ಎನಲು, ಆಗ ಮುದುಕಿಯು ಕೂಡ ಆತನಬಳಿಗೆ ಬಂದು, ನೀನು ಹೀಗೆ ಹಟವನ್ನು ಮಾಡಿದರೆ, ರಾಣಿಯ ದಯವು ನಿನಗೆಂದಿಗೂ ಉಂಟಾಗಲಾರದೆಂದು ನುಡಿಯಲಾತನು, ಹೇಗಾದರೂ ಆಗಲೆಂದು ಸುಮ್ಮನೆ ಕುಳಿತುಕೊಂಡನು. ನಂತರ ಆ ದಾದಿಯರು, ಆತನಿಗೆ ಸ್ತ್ರೀವೇಷವನ್ನು ಹಾಕಿ, ರಾಣಿಯ ಬಳಿಗೆ ಕರೆದುಕೊಂಡುಬರಲು, ರಾಣಿಯು ಶಾಲುನೀಡಿ ಮೆನ್ನುಕೆಳಗಾಗಿ ಮುಖವಿಕೊಂಡು, ಆತನನ್ನುನೋಡಿ ಹುಸಿನಗೆಯನ್ನುನಕ್ಕು ಕೈತಟ್ಟಲು, ದಾದಿಯರು ಫಕಫಕನೆ ನಗುತ್ತಿದ್ದರು.

ಆಗ ಜೋಕಿಬಾರನು ಏನೂತೋರದೆ ಸುಮ್ಮನೆ ದಿಗ್ಭ್ರಮೆಯಿಂದ ನಿಂತುಕೊಂಡಿರಲು, ರಾಣಿ ಆತನನ್ನುನೋಡಿ, ನಿನಗೆ ಇಷ್ಟೊಬ್ಬಂದು ವಿನೋದವಾದ ಆಟುಗಳನ್ನುಂಟುಮಾಡಿ, ನಿರರ್ಥಕವಾಗಿ ನಿನ್ನನ್ನ ತ್ರಾರೆವುದು ನ್ಯಾಯವಲ್ಲವಾದುದರಿಂದ, ನನ್ನ ಇಷ್ಟಾನುಸಾರವಾಗಿ ನೀನು ನಮ್ಮಗಳ ಜೊತೆಯಲ್ಲಿ ವಿನೋದವಾಗಿ ನಾಟ್ಯವಾಡಬೇಕೆಂದು ಬೇಡಿಕೊಳ್ಳುವೆನೆನಲು, ಆಶ್ಚರ್ಯಯುಕ್ತನಾದ ಜೋಕಿಬಾರನು, ಅವರಸಂಗಡ ಸ್ವಲ್ಪಕೊಳ್ತು ನಾಟ್ಯವಾಡಿದಬಳಿಕ, ದಾದಿಯರು ಅವನನ್ನು ಬಹಳವಾಗಿ ಹೊಡೆದು ಕೆಡವಿದರು. ಆಗ ಜೋಕಿಬಾರನು ಏಟುಗಳನ್ನುತಿಂದು ಅಯ್ಯೋ! ನನಗಿನ್ನಾವ ಸುಖವೂ ಬೇಡ. ನನ್ನನ್ನು ಸುಮ್ಮನೆ ಮನೆಗೆ ಹೋಗುವುದಕ್ಕೆ ಬಿಟ್ಟುಬಿಟ್ಟರೆ, ಸಾಕೆಂದು ಹೊರಡುತ್ತಿರಲು, ಅವರೆಲ್ಲರೂ ಆತನನ್ನುಹಿಡಿದು ಹೋಗಬೇಡ ನಿಲ್ಲು ನಿಲ್ಲು! ನೀನು ಅನುಭವಿಸಿದ ಕಷ್ಟಗಳಿಗಿಂತಲೂ, ಇನ್ನು ಮುಂದೆ ಯಾವ ತೊಂದರೆಯೂ ಉಂಟಾಗದು. ಆದರೆ ಸುಖವನ್ನು ಅನುಭವಿಸುವುದುಮಾತ್ರವೇ ಉಳಿದಿರುವುದೆಂದು ಹೇಳಿದರು. ಇಂತೆಂದು ಹೇಳಿ ಷಹರಜಾದಿಯು ಬೆಳಗಾದಕೂಡಲೆ ಕಥೆಯನ್ನುನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ನುಡಿಯಲಾರಂಭಿಸಿದಳು.

೧೩೧ ನೆಯ ರಾತ್ರಿ ಕಥೆ.

ನಂತರ ಷಹರಜಾದಿಯು ಸುಲ್ತಾನರನ್ನುದ್ದೇಶಿಸಿ ಇಂತೆಂದಳು. ಅಯ್ಯಾ! ಆದರೂ, ನೀನು ಮತ್ತೊಂದು ಕಾರ್ಯವನ್ನು ಮಾಡಬೇಕಾಗಿ ಇರುವುದು, ಅದು ನಿನಗೇನೂ ದೊಡ್ಡದಲ್ಲ, ಏನಂದರೆ :—ಈ ರಾಣಿಯು ತನಗೆಷ್ಟು ಪ್ರೀತಿಪಾತ್ರನಾದ ಪುರುಷನಾದರೂ, ಚೆಲ್ಲಣ ಬಂದನ್ನು ಹೊರತು ಉಳಿದ ಬಟ್ಟೆಗಳನ್ನು ತೆಗೆದುಹಾಕಿದಮೇಲೆ ಅತನನ್ನು ಬಳಿಗೆ ಬರಗೊಡಿಸಳು. ಪುರುಷನು ಹಾಗೆ ಚೆಲ್ಲಣವನ್ನು ತೆಗೆದುಹಾಕಿದಮೇಲೆ, ವಿನೋದಾರ್ಥವಾಗಿ ಸ್ವಲ್ಪಹೊತ್ತು ಅಂಗಳದಲ್ಲಿ ಓಡಾಡುತ್ತ ಕಣ್ಣು ಮುಚ್ಚಾಲೆಯನ್ನು ಆಡುವಂತೆ, ಅತನಸಂಗಡ ಆಡುತ್ತಿದ್ದು ನಂತರ ಒಂದು ಕೊಠಡಿಗೆ ಓಡಿಹೋಗುವಳು. ಆಗ ನೀನು ಆ ಕೊಠಡಿಯೊಳಕ್ಕೆ ಹೋದರೆ, ಆಕೆ ಸುಲಭವಾಗಿ ನಿನ್ನವಶಳಾಗುವಳು. ಇದು ನಿಜವಾದಮಾತು. ನೀನು ಆಲಸ್ಯಮಾಡದೆ ಜಾಗ್ರತೆಯಿಂದ, ನಾನು ಹೇಳಿದಂತೆ ಮಾಡೆಂದು ಮುದುಕಿಯು ಹೇಳಲು, ನಿರ್ಭಾಗ್ಯನಾದ ಬೋಕಿಬಾರನು ಚೆಲ್ಲಣವನ್ನು ಹೊರತು ಉಳಿದ ಬಟ್ಟೆಗಳನ್ನೆಲ್ಲಾ ತೆಗೆದುಹಾಕಿದನು.

ಕೊತಲೆ ರಾಣಿಯು ತನ್ನ ಕೋಟನ್ನು ಬಿಸುಟು ಲಂಗವನ್ನು ತಿರುಗಿಸುತ್ತ, ಅತನನ್ನು ಎರಡುಮೂರುಸಾರಿ ಅಂಗಳದಲ್ಲಿ ಓಡಾಡಿಸಿ, ನಂತರ ಹಿಂದಿರುಗಿ ಮುಳ ಅಂಗಳದ ಮಧ್ಯದಲ್ಲಿ ಬಂದುನಿಲ್ಲಲು, ದಾದಿಯರೂ ಅಲ್ಲಿ ನೆರೆದಿದ್ದ ಸ್ತ್ರೀಯೆರುಸಹ ಬಲವಾಗಿ ನಗಲಾರಂಭಿಸಿದರ . ನಂತರ ರಾಣಿಯು ಎದುರಿನ ಕೈಸಾಲೆಯಲ್ಲಿರುವ ಬಂದು ಕೊಠಡಿಗೆ ಓಡಿಹೋಗಲು, ಬೋಕಿಬಾರನು ಅಲ್ಲಿಗೆ ಹೋದನು. ರಾಣಿಯು ಆತನಿಗೆ ತಿಳಿಯದಂತೆ ಬೇರೊಂದುಮಾರ್ಗದಿಂದ ಹೊರಟುಹೋದಳು. ಬೋಕಿಬಾರನಾದರೋ ತನಗೆ ಹೊಸದಾಗಿರುವ ಆ ಕೊಠಡಿಯಲ್ಲಿ ಬಹಳವಾಗಿ ಕತ್ತಲೆಯಾಗಿದ್ದುದರಿಂದ ಬಹಳಹೊತ್ತಿನವರಿಗೂ, ಹೆಣಗಾಡಿ ಮೂಲೆ ಮೂಲೆಗಳನ್ನು ಹುಡುಕಿ ಬೇಸತ್ತು ಕೊನೆಗೆ ಮಾರ್ಗವನ್ನು ಕಾಣದೆ ಅಲಿಯುತ್ತಿರಲು ಆ ಕತ್ತಲೆಮನೆಯಬಾಗಿಲು ಮುಚ್ಚಿಕೊಂಡಿತು. ನಂತರ ಆ ಬೋಕಿಬಾರನ ಬಹುಹೊತ್ತಿನವರಿಗೂ, ವಿಸ್ಮಯಭರಿತನಾಗಿ ಹರ್ಷಗುಂದಿ ಅಲ್ಲಿಯೆ

ಒಂದುಕಡೆ ಬೆಳಕುಕಂಡುಬರಲು, ಅಲ್ಲಿಗೆಹೋಗಿ, ಅಲ್ಲಿದ್ದ ಬಾಗಿಲಿನಿಂದ ಹೊರಕ್ಕೆಬಂದು, ಆ ಅಂತಃಪುರಕ್ಕೆ ಬಂದು ತಮ್ಮ ಕೆಲಸಗಳನ್ನು ತೀರಿಸಿಕೊಂಡು ಹೋಗುವ ಮಾದಿಗರು, ನಿಂತುಕೊಂಡಿರುವಬೀದಿಯಲ್ಲಿ, ತಾನು ಇರುವದನ್ನುಕಂಡು, ಅತ್ಯಾಶ್ಚರ್ಯವನ್ನು ಹೊಂದಿದನು. ಆಗ ಆ ಮಾದಿಗರು, ಬಟ್ಟೆಯಿಲ್ಲದೆ ಚಲ್ಲಣವನ್ನು ಹಾಕಿಕೊಂಡು ಗಡ್ಡವಿಸಿಗಳನ್ನು ಬೋಳಿಸಿಕೊಂಡು, ತಮ್ಮಬಲಿಯಲ್ಲಿ ನಿಂತಿರುವ ಮನುಷ್ಯನನ್ನು ನೋಡಿ, ಹಾಸ್ಯಮಾಡುತ್ತ ಚರ್ಮದಕೋಲಿನಿಂದ ಪಿರ್ರಿಗಳಮೇಲೆ ಬಿರ್ರನೆಹೊಡೆದು, ಎಳೆದುಕೊಂಡು ಹೋಗುತ್ತಿರಲು, ಮಾರ್ಗದಲ್ಲಿ ಬಂದು ಕತ್ತೆಯು ನಿಂತಿರುವುದನ್ನುಕಂಡು, ಬಹಳವಾಗಿ ಹಾಸ್ಯಮಾಡುತ್ತ, ಆತನನ್ನು ಅದರಮೇಲೆ ಕುಳ್ಳಿರಿಸಿ, ಊರಿನವರೆಲ್ಲರೂ, ಆಶ್ಚರ್ಯಪಡುವಂತೆ ಆತನನ್ನು ವೀರವಣಿಗೆ ಮಾಡಿಕೊಂಡು, ಮುಂತ್ರಿಯ ಮನೆಯಬಳಿಗೆ ಬರಲು, ಆತನು ಗದ್ದಲವನ್ನು ನೋಡಿ ಇದೇನೆಂದು ಕೇಳಲು, ಆ ಮಾದಿಗರು, ಅಯ್ಯಾ! ಈತನು ಗಡ್ಡ ವಿಸಿಗಳನ್ನು ಬೋಳಿಸಿಕೊಂಡು, ಮೈಮೇಲೆ ಬಟ್ಟೆಯಿಲ್ಲದೆ ಚಲ್ಲಣ ಒಂದನ್ನುಮಾತ್ರ ಹಾಕಿಕೊಂಡು, ಪ್ರಧಾನಮಂತ್ರಿಯ ಅಂತಃಪುರದಿಂದ ನಾವುಬರುವ ಬಾಗಿಲಿನಿಂದ ಹೊರಕ್ಕೆ ಬಂದನು. ಅದನ್ನು ನೋಡಿ ನಾವು ಹೀಗೆ ಮಾಡಿದೆವೆಂದು ಹೇಳಲು, ಮಂತ್ರಿಯು ಆತನಿಗೆ ಕಾಲುಮೇಲೆ ಐದಾರು ಪೆಟ್ಟುಗಳನ್ನು ಹೊಡಿಸಿ, ಊರಿನಿಂದ ಹೊರಕ್ಕೆಕಳುಹಿಸಿದನು. ಕ್ಷೌರಿಕನು ಮನುಷ್ಯಾಬ್ಧಿಜಲಾ ಎಂಬ ಕಲೀಫರನ್ನುನೋಡಿ, ಅಯ್ಯಾ! ಇದೇ ನನ್ನ ಎರಡನೆ ತಮ್ಮನ ಚರಿತ್ರೆ. ನಮ್ಮ ಧೊರೆಸಾನಿಯವರು, ಬಡಬ್ರಾಹ್ಮಣರು ಬೊರಕಿದರೆ ಈತೆರನಾದ ವಿನೋದವನ್ನು ನಡೆಸುವುರೆಂದು, ಸಂಪೂರ್ಣವಾಗಿ ತಿಳಿಯಹೇಳಿದೆನೆಂದು, ನಾಯಿಂದನು ನುಡಿದದ್ಭಕಾರ ಹೇಳಿ, ಷಹರಜಾದಿಯು ಬೆಳಗಾದಕೂಡಲೆ, ಕಳೆಯೆನ್ನುನಿಲ್ಲಿಸಿ, ಮರಳಿ ಬೆಳಗಿನ ಜಾವದಲ್ಲಿ ಹೇಳಲಾರಂಭಿಸಿದಳು.

೧೭೨ ನೆಯ ರಾತ್ರಿ ಕಥೆ

ಷಹರಜಾದಿಯು ಸುಲ್ತಾನರನ್ನು ಕುರಿತು, ಪ್ರಭುವರೇ! ಆ ಕ್ಷೌರಿಕನು ತನ್ನ ಕಥೆಯನ್ನು ಅಷ್ಟಕ್ಕೆ ನಿಲ್ಲಿಸಿಬಿಟ್ಟು ಪುನಃ ತನ್ನ ಮೂರನೆಯ ತಮ್ಮನ ಕಥೆಯನ್ನು ಹೇಳತೊಡಗಿದನು. ಹೇಗೆಂದರೆ :—

ಹೌರಕನ ಮೂರನೆ ತಮ್ಮನ ಕಥೆ

ಎಲ್ಲಿ ಮಹಾರಾಜನೇ ! ನನ್ನ ಮೂರನೆಯ ತಮ್ಮನ ಹೆಸರು ಬಾಕಿಬಾಕು. ಅವನು ಕುರುಡ. ಮನೆಮನೆಗಳಲ್ಲಿ ಭಿಕ್ಷವೆತ್ತಿ ಜೀವಿಸುತ್ತಿದ್ದುದರಿಂದ, ಪಟ್ಟಣದ ಬೀದಿಗಳನ್ನು ಮನೆಗಳ ಗುರುತನ್ನು ತಿಳಿದು ಕೊಂಡು, ಇದ್ದುದರಿಂದ ಆತನನ್ನು ಯಾರೂ ಕರೆದುಕೊಂಡುಹೋಗ ಬೇಕಾದ ಅಗತ್ಯವೇ ಇರಲಿಲ್ಲ. ಆದರೆ, ಆತನು ಮನೆಮನೆಗೂ ಹೋದ ಕಾಲದಲ್ಲಿ ಬಾಗಿಲುತಟ್ಟಿ, ಒಳಗಿನಿಂದ ಯಾರಾದರೂ, ಬರುವವರಿಗೂ ಮಾತ ನಾಡದೆ, ಸುಮ್ಮನಿರುವೆ ವಾಡಿಕೆಯನ್ನಿಟ್ಟುಕೊಂಡಿದ್ದನು. ಒಂದಾನೊಂದು ದಿನ ಆತನು, ಒಂದುಮನೆಗೆ ಬಂದು ಬಾಗಿಲನ್ನು ತಟ್ಟಲು, ಮನೆಯೆಲ್ಲಿ ಒಂಟಿಯಾಗಿದ್ದ ಯಜಮಾನನು ಯಾರು, ಎಂದು ಕೇಳಿದರೂ, ಉತ್ತರ ಹೇಳದೆ, ಮರಳಿ ಬಾಗಿಲು ತಟ್ಟಿದನು. ಪುನಹ ಆತನು ಯಾರುಯಾರು ಬಾಗಿಲನ್ನುತಟ್ಟಿದವರು ಯಾರು ಎಂದು ಕೇಳಿದನು. ಆದರೂ ಮಾತನಾಡದೆ ಮರಳಿ ಅದೇಕೆಲಸ ಮಾಡಿದನು.

ಯಜಮಾನನು, ಹಾಗೆ ಮಾತನಾಡದೆ ಬಾಗಿಲನ್ನು ತಟ್ಟುತಕ್ಕವರಾರೂ, ನೋಡಬೇಕೆಂದು ಕದವನ್ನುತೆರೆದು, ಹೊರಕ್ಕೆಬಂದು ತನ್ನತಮ್ಮನನ್ನು ನೋಡಿ, ನೀನು ಯಾರು ? ಏತಕ್ಕೆ ಬಂದೆ ? ಎಂದು ಕೇಳಲು, ಅಯ್ಯಾ ! ನಾನೊಬ್ಬ ಕುರುಡ. ಭಿಕ್ಷಾರ್ಥವಾಗಿ ಬಂದಿರುವೆನು. ಭಗವತ್ಪ್ರೀತ್ಯರ್ಥವಾಗಿ ನನಗೇನಾದರೂ ಕೊಡಬೇಕೆಂದನು. ಆಗ ಯಜಮಾನನು, ಆತನಕೈಯ್ಯನ್ನು ಹಿಡಿದುಕೊಂಡು, ಮನೆಯೊಳಕ್ಕೆ ಕರೆದುಕೊಂಡುಹೋಗುತ್ತಿಗಲು, ಕುರುಡನು ನನಗೆ ಊಣಲಿಡುವುದಕ್ಕಾಗಿ ಕರೆದುಕೊಂಡು ಹೋಗುವರೆಂದು ತಿಳಿದು ಸಂತೋಷಿಸುತ್ತಿದ್ದನು. ಆದರೆ ಯಜಮಾನನು ಆತನನ್ನೊಂದು ಕೆರುಮನೆಗೆ ಕರೆದುಕೊಂಡುಹೋಗಿ, ಅಲ್ಲೊಂದುಕಡೆ ಕುಳ್ಳಿರಿಸಿ, ಮರಳಿ ನಿನಗೇನುಬೇಕೆಂದುಕೇಳಲು, ಆ ಕುರುಡನು ಅಯ್ಯಾ ! ಭಗವತ್ಪ್ರೀತ್ಯರ್ಥವಾಗಿ ಭಿಕ್ಷವನ್ನುಕೊಡಬೇಕೆಂದು ಮೊದಲೇ ಕೇಳಿಕೊಂಡೆನಲ್ಲಾ ! ಎನಲು, ಯಜಮಾನನನು, ಭಗವಂತನು ನಿನ್ನ ಕಣ್ಣುಗಳನ್ನು ಪುನಹ ಬರಮಾಡುವಂತೆ, ನಾನು ಬೇಡಿಕೊಳ್ಳುವೆನೆನಲು,

ಕುರುಡನು ಅಯ್ಯಾ! ನೀವು ಬಾಗಿಲಲ್ಲಿ ಈಮಾತನ್ನು ಹೇಳಿದ್ದರೆ, ನಾನು ಮೆಟ್ಟಿಲುಗಳನ್ನು ಹತ್ತಿ ಇಲ್ಲಿನವರೆಗೂ ನಡೆದುಬರುವ ಶ್ರಮವು ತಪ್ಪಿ ಹೋಗುತ್ತಿದ್ದಿತಲ್ಲಾ! ಎನಲು, ಎಲಾ ಕುರುಡಾ! ನಾನು ಯಾರೆಂದು ಕೇಳದಾಗಲೆ, ನೀನು ಪ್ರತ್ಯುತ್ತರವನ್ನು ಹೇಳಿದ್ದರೆ, ನಾನು ಎದ್ದುಬಂದು ಬಾಗಿಲನ್ನು ತೆಗೆಯುವ ತೊಂದರೆಯೆ ಇರುತ್ತಿರಲಿಲ್ಲವಲ್ಲಾ! ಎಂದು ಯಜಮಾನನು ಹೇಳಿದನು. ಆಗ ಕುರುಡನು ಆದರೆ ಈಗ ಏನುಹೇಳುವೆ ಎನಲು, ನನ್ನ ಬಳಿಯಲ್ಲೇನೂ ಇಲ್ಲವೆಂದು, ಮನೆಯವನು ನುಡಿದಬಳಿಕ ಅಂಧಕನು ಅಯ್ಯಾ! ದಯಮಾಡಿ ನನ್ನನ್ನು ಈ ಮೆಟ್ಟಿಲುಗಳಿಂದಲಾದರೂ, ಕೆಳಗೆ ಇಳಿಸಿಬಿಡು, ಎಂದು ಬೇಡಿಕೊಂಡರೂ, ಆತನು ನಿನಗಿಷ್ಟವಾಗಿದ್ದರೆ ಇಳಿದುಹೋಗು, ಕಷ್ಟವಾದರೆ ಬಿಡು, ಎಂದು ಹೇಳಲು, ಕುರುಡನು ಮೆತ್ತಗೆ ಎರಡುಮೂರು ಮೆಟ್ಟಿಲುಗಳನ್ನು ಇಳಿದು, ನಂತರ ಕಾಲುಜಾರಿ ಬಿದ್ದು ಹೊರಳುತ್ತಿರುವುದನ್ನು ನೋಡಿ, ಮನೆಯವನು ನಗುತ್ತಿರಲು, ಆತನನ್ನು ನಾನಾವಿಧವಾಗಿ ಹೀಯ್ಯಾಳಿಸುತ್ತ, ಅಲ್ಲಿಂದ ಎದ್ದು ಹೊರಟು ಹೋದನು. ಆಗ ದಾರಿಯಲ್ಲಿ ಬರುತ್ತಿದ್ದ ತನ್ನ ಸ್ನೇಹಿತರಾದ ಇಬ್ಬರು ಕುರುಡರ ಧ್ವನಿಯನ್ನುಕೇಳಿ, ನನ್ನ ತಮ್ಮನು ಕೂಗಿಕೊಂಡನು ಅವರು ಏನೆಂದುಕೇಳಲು, ಅಯ್ಯಾ! ನಾನು ಈದಿನ ಬೆಳಿಗ್ಗೆ ಊಟಮಾಡಲೇ ಇಲ್ಲ. ನೀವು ನಮ್ಮಮನೆಗೆ ಬಂದರೆ ನನ್ನಬಳಿ ಇರುವ ಹಣದಿಂದ ಪದಾರ್ಥಗಳನ್ನು ಕೊಂಡುತಂದು, ಊಟಮಾಡೋಣವೆಂದು ಹೇಳಲು, ಅವರು ಸಮ್ಮತಿಸಿ, ಆತನಮನೆಗೆ ಹೋದರು.

ನನ್ನ ಅಣ್ಣನಾದರೋ ಆ ಕುರುಡರನ್ನು ಕರೆದುಕೊಂಡು, ತನ್ನ ಮನೆಗೆಹೋಗಿ, ಆತನು ಕಳ್ಳ, ಮೋಸಗಾರ, ಪಾಪಿ ಎಂದು, ಹಿಂದಿನ ಮನೆಯ ಯಜಮಾನನನ್ನು ತಿರಸ್ಕರಿಸುತ್ತಿರುವುದನ್ನು ಕೇಳಿ, ಹಿಂದೆಯೇ ಬಂದ ಆ ಯಜಮಾನನು ಮನೆಯೊಳಕ್ಕೆ ಬಂದನು. ಬಳಿಕ ನನ್ನಣ್ಣನು ನಾವು ಯಾವ ತೊಂದರೆಗೂ ಸಿಕ್ಕದಂತೆ ಭದ್ರವಾಗಿ ಬಾಗಿಲನ್ನುಹಾಕಿ ಕುಳಿತುಕೊಳ್ಳಬೇಕೆಂದು ಹೇಳಿದುದನ್ನು ಕೇಳಿ, ಆ ಕಳ್ಳನು, ಮೇಲೆ ನೇತಾಡುತ್ತಿರುವ ಹಗ್ಗವನ್ನು ಹಿಡಿದು ಮೆತ್ತಗೆ ತೊಲೆಯಮೇಲೆ ಕುಳಿತುಕೊಂಡನು. ನಂತರ ಕುರುಡರು, ಗೋಡೆಗಳನ್ನೆಲ್ಲಾಸವರಿ ಮನೆಯನ್ನು ನಾಲ್ಕುಕಡೆಯೆಲ್ಲಿ

ಸುತ್ತಿನೋಡಿ, ತನ್ನ ಸ್ಥಾನದಲ್ಲಿ ಹೋಗಿ ಮಲಗುವುದಕ್ಕಾಗಿ, ಬಾಗಿಲನ್ನು ಭದ್ರವಾಗಿ ಹಾಕಿಕೊಂಡುಹೋಗಿ, ತನ್ನ ಜಾಗದಲ್ಲಿ ಕುಳಿತುಕೊಳ್ಳಲು, ಕಳ್ಳನು ಶಬ್ದಮಾಡದೆ ಕೆಳಗಿಳಿದುಬಂದು, ತನ್ನ ತಮ್ಮನಬಳಿಯಲ್ಲಿ ಕುಳಿತುಕೊಂಡನು. ಆಗ ನನ್ನ ಅಣ್ಣನು ತಮ್ಮ ಸ್ನೇಹಿತರುಮಾತ್ರ ಇರುವರೆಂದು ತಿಳಿದು, ಆ ಇಬ್ಬರು ಕುರುಡಸ್ನೇಹಿತರನ್ನು ಕುರಿತು. ಅಯ್ಯಾ! ನೀವುಗಳು ಬಹುದಿನಗಳಿಂದ ಸಂಪಾದಿಸಿದ ಹಣವನ್ನು ನಂಬಿಕೆಯಿಂದ ನನ್ನಕೈಯ್ಯಲ್ಲಿ ಕೊಟ್ಟಿರುವಂತೆ, ನಾನು ನಂಬಿಕೆಯನ್ನು ಉಳಿಸಿಕೊಂಡಿರುವನೇಹೊರತು, ಮತ್ತೇಬೇರೆ ಇಲ್ಲವೆಂಬುದು, ನಿಮಗೆ ಸ್ಪಷ್ಟವಾಗಿ ತಿಳಿದಿರುವುದಲ್ಲಾ! ನಾವು ಹಿಂದಿನಸಾರಿ, ಲಿಖ್ವ ಮಾಡಿದಾಗ ಹತ್ತುಸಾವಿರ ರೂಪಾಯಿಗಳನ್ನು ಹತ್ತು ಚೀಲಗಳಲ್ಲಿ ಕಟ್ಟಿಹಾಕಿದುದು, ಪ್ರಯುಕ್ತ ನಿಮಗೆ ಜ್ಞಾಪಕವಿರಬಹುದು. ಇಗೋ ಈ ಚೀಲಗಳನ್ನು ಎತ್ತಿನೋಡಿ, ಹಣವು ಸರಿಯಾಗಿರುವುದೊ ಇಲ್ಲವೊ ನೋಡಿಕೊಳ್ಳಿ ಎನಲು ಅವರಿಬ್ಬರೂ, ಅಯ್ಯಾ ನಿನ್ನಲ್ಲಿ ನಮ್ಮಗಳಿಗೆ ನಂಬಿಕೆ ಚೆನ್ನಾಗಿ ಇರುವುದರಿಂದ, ನಾವು ನೋಡಬೇಕಾದ ಅಗತ್ಯವೇನೂ ಇಲ್ಲವೆಂದು ಹೇಳಿ, ಆದಿನದ ಖರ್ಚಿಗಾಗಿ ಹತ್ತು ಹತ್ತು ನಾಣ್ಯಗಳನ್ನು ಎತ್ತಿಕೊಂಡರು.

ಬಳಿಕ ಆ ಹಣದ ಚೀಲಗಳನ್ನು ಮೊದಲಿದ್ದ ಸ್ಥಲದಲ್ಲಿಟ್ಟು, ತನ್ನಬಳಿಯಲ್ಲಿ ಆಹಾರವಿರುವುದು, ರಾತ್ರಿಗೆ ನಾವೇನೂ, ತರಬೇಕಾದುದು ಇಲ್ಲವೆಂದು ಹೇಳುತ್ತ, ತಾನು ತಂದಿದ್ದ ಆಹಾರ ಪದಾರ್ಥಗಳನ್ನು ಅಣಿಮಾಡಿ, ಒಬ್ಬ ಕುರುಡನು ಕಾಲುಮಣೆಯಮೇಲಿಡಲು ಮೂರುಜನಗಳು ಸಂತೋಷದಿಂದ ಅದನ್ನು ತಿನ್ನಲಾರಂಭಿಸಿದರು. ಆದರೆ ಯಾರು ಮಾತನಾಡದೆ ಸುಮ್ಮನೆ ಭಕ್ಷಿಸುತಿದ್ದುದರಿಂದ, ನನ್ನ ಅಣ್ಣನಬಳಿಯಲ್ಲಿ ಕುಳಿತುಕೊಂಡು, ಉತ್ತಮ ಪದಾರ್ಥಗಳನ್ನು ಆರಿಸಿ ತಿನ್ನುತ್ತಿರುವ, ಕಳ್ಳನು ಅಗಿಯುವ ಶಬ್ದವನ್ನುಕೇಳಿ, ನನ್ನಣ್ಣನಾದ ಬಾಕಬಾಕನು, ಅಯ್ಯೋ! ಮೋಸಹೋದೆವು. ಅಯ್ಯೋ! ಮೋಸಹೋದೆವು. ಯಾರೊ, ಕಳ್ಳನು ಬಂದಿರುವನೆಂದು ಜೋಳಿ, ತನ್ನಬಳಿಯಲ್ಲಿದ್ದ ಆ ಕಳ್ಳನನ್ನು ತಡವರಿಸಿ ಹಿಡಿದುಕೊಂಡು, ತನ್ನ ಕೈಲಾದಮಟ್ಟಿಗೂ ಗುದ್ದಿದನು. ಉಳಿವ ಕುರುಡರು ಹಾಗೆಯೆ ಮಾಡುತ್ತ, ಕಳ್ಳ! ಕಳ್ಳ! ದೊಡ್ಡ ಕಳ್ಳ! ಮೋಸಹೋದೆವಲ್ಲಾ!

ಎಂದು ಗಟ್ಟಿಯಾಗಿ ಕೂಗಿಕೊಂಡರು. ಆ ಕಳ್ಳರು ಯುವಕನಾಗಿ, ಕಣ್ಣಾ ಕಾಣತಕ್ಕವನಾಗಿದ್ದುಕೊಂಡು, ಅವರೆಲ್ಲರಿಗಿಂತಲೂ ಬಲಾಢ್ಯನಾಗಿದ್ದುದರಿಂದ, ಅವರಸಂಗಡ ಹೆಣಗಾಡಿ, ಅವರಿಗಿಂತಲೂ ಬಲವಾಗಿ ತಾನು ಕಳ್ಳ! ಕಳ್ಳ! ಕಳ್ಳಬಂದನೆಂದು ಗಟ್ಟಿಯಾಗಿ ಕೂಗಿಕೊಂಡನು. ನೆರೆಹೊರೆಯವರು ಓಡಿ ಬಂದು, ಬಾಗಿಲೆತ್ತಿ ಒಳಹೊಕ್ಕು, ಗದ್ದಲವಾಗಲು ಕಾರಣವೇನೆಂದು ಕೇಳಿದರು. ಆಗಲೂ ನನ್ನ ಅಣ್ಣನು ಕಳ್ಳನನ್ನು ಬಿಡದೆ ಗಟ್ಟಿಯಾಗಿ ಹಿಡಿದುಕೊಂಡು, ಅಯ್ಯಾ! ಘನವಂತರಿರಾ! ಈ ಮನುಷ್ಯನು ನಮ್ಮ ಗಳಸುಳಿಯೆಲ್ಲಿರುವ ಹಣವನ್ನು ಕದ್ದುಕೊಂಡು ಹೋಗುವುದಕ್ಕಾಗಿ ನಮ್ಮ ಮನೆಗೆ ನುಗ್ಗಿಬಂದಿರುವನೆಂದು ಹೇಳಿದನು.

ಆಗ ಕಳ್ಳನು ತಾನು ಕುರುಡನಂತೆ, ಕಣ್ಣಾ ಮುಚ್ಚಿಕೊಂಡು, ಅಯ್ಯಾ! ನಾನು ಇವರಸಂಗಡ ಸೇರಿದ ಪಾಲುಗಾರನು, ನನ್ನ ಭಾಗವನ್ನು ಕೊಡಬಾರದೆಂಬ ಅಸೂಯೆಯಿಂದ, ನನ್ನನ್ನು ಕಳ್ಳನೆಂದು ಹೇಳುವರು. ನಾನು ಖಂಡಿತವಾಗಿಯೂ ಇವರ ಪಾಲುಗಾರ. ಇದು ನಿಜ. ಖಂಡಿತ ಕಲೀಫರ ಆಣೆ, ಭಗವಂತನ ಸಾಕ್ಷಿ, ನಾನು ಹೇಳುವಮಾತು ಎಂದಿಗೂ ಸುಳ್ಳಲ್ಲ ಎನಲು, ಆ ಜನರು ಅವರೆಲ್ಲರನ್ನೂ ನ್ಯಾಯಾಧಿಪತಿಯಬಳಿಗೆ ಕರೆದುಕೊಂಡುಹೋದರು. ಬಳಿಕ ನ್ಯಾಯಾಧಿಪತಿಯಬಳಿಗೆ ಹೋದಾಗಲು ಕಳ್ಳನು ಕಣ್ಣಾಮುಚ್ಚಿಕೊಂಡು, ಅಯ್ಯಾ! ತಾವು ಭಗವದನುಗ್ರಹದಿಂದ, ಕಲೀಫರ ಮೂಲಕವಾಗಿ ನಿಯಮಿಸಲ್ಪಟ್ಟಿರುವ, ನ್ಯಾಯಾಧಿಪತಿಗಳಾಗಿರುವಿರಿ. ಆ ಮೂವರು ಸ್ನೇಹಿತರೂ, ನಾನೂಸಹ ಸಮವಾಗಿ ತಪ್ಪುಮಾಡಿದವರೇ ಹೌದು. ಆದರೆ ನಮ್ಮಗಳಿಗೆ ಬಹು ಕಠಿಣವಾದ ಶಿಕ್ಷೆ ಮಾಡಿದಹೊರತು, ನಿಜವನ್ನು ಹೇಳುವುದಿಲ್ಲವೆಂದು, ನಾವು ಪ್ರತಿಜ್ಞಾ ಮಾಡಿಕೊಂಡಿರುವೆವು. ಆದುದರಿಂದ ತಾವು ನಿಜವನ್ನು ತಿಳಿದುಕೊಂಡು, ನ್ಯಾಯವೆ ತೀರಿಸಬೇಕಾದರೆ, ನಮ್ಮಗಳಿಗೆ ವೊಗಕಟ್ಟನ್ನು ಕಟ್ಟಲೇಬೇಕು. ಆದುದರಿಂದ ವೊದಲು, ನನಗೆ ಆ ಶಿಕ್ಷೆಯನ್ನು ಕೊಡಿಸಬೇಕೆಂದು ಕೇಳಿದನು. ಆಗ ನನ್ನ ಅಣ್ಣನು ಮಾತನಾಡತೊಡಗಿದರೂ, ನ್ಯಾಯಾಧೀಶನು ಅವಕ್ಕೆ ಸಮ್ಮತಿಸದೆ, ಆ ಕಳ್ಳನಿಗೆ ವೊಗವಾಡವೆಂಬ ಚೀಲವನ್ನು ಕಟ್ಟಿಸಿದನು. ಎಂದು ಹೇಳಿ ಬಿಳಗಾದುದರಿಂದ ಕಥೆಯನುನಿಲ್ಲಿಸಿ, ಜೌಹರಿಯು ಸುರುವಿನ ಬಿಳಗಿನ ಜೌವನದಲ್ಲಿ ನಡೆಯಲಾರಂಭಿಸಿದಳ

೧೭೩ ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು, ಇಂತೆಂದು ಹೇಳ ತೊಡಗಿದಳು. ನಂತರ ನ್ಯಾಯಾಧಿಪತಿಯು, ಆ ಕಳ್ಳನಿಗೆ ಮೊಗವಾಡವನ್ನು ಕಟ್ಟಿಸಿ, ಬಲವಾಗಿ ಒತ್ತುವಂತೆ ತನ್ನ ಚಾರಕರಿಗೆ ಆಜ್ಞಾಪಿಸಲು ಅವರು ಹಾಗೆಯೇ ಒತ್ತುತ್ತಿದ್ದರು. ಆಗ ಕಳ್ಳನು ಧೈರ್ಯವಾಗಿರುವಂತೆ, ಸ್ವಲ್ಪ ಹೊತ್ತು ನಟಿಸಿ ನಂತರ, ನೋವನ್ನು ತಾಳಲಾರದೆ ಮೆಲ್ಲಗೆ ಬಂಡುಕ್ಕಣ್ಣ ತೆರೆದು, ಮರಳಿ ಮತ್ತೊಂದನ್ನು ತೆರೆದು ಜಡಿಜ್ಜಯನ್ನು ಕುರಿತು, ಸ್ವಾಮಿ! ಸ್ವಲ್ಪಹೊತ್ತು ನನ್ನ ಕಟ್ಟನ್ನು ಬಿಚ್ಚಿಸಬೇಕೆಂದು ಬೇಡಿಕೊಳ್ಳಲು ನ್ಯಾಯಾಧಿಪತಿಯು ಆತನು ಕಣ್ಣುಬಿಟ್ಟಿರುವುದನ್ನು ನೋಡಿ, ಎಲಾ ಕಳ್ಳ. ಇದೇನು ಆಶ್ಚರ್ಯ! ಕುರುಡರಿಗೆ ಕಣ್ಣು ಕಾಣುವುದೆ ಎಂದನು. ಬಳಿಕ ಕಳ್ಳನು ನ್ಯಾಯಾಧಿಪತಿಯನ್ನು ಕುರಿತು, ಅಯ್ಯಾ! ತಾವು ನನ್ನನ್ನು ಮಂತ್ರಿಯನಾಗಿ ಕ್ರಮಿಸುತ್ತೇನೆಂದು ಪ್ರಮಾಣಪೂರ್ವಕವಾಗಿ ಹೇಳಿದರೆ, ನಾನು ರಹಸ್ಯವನ್ನು ಬಿಚ್ಚಿಹೇಳುವೆನೆನಲು, ನ್ಯಾಯಾಧಿಪತಿಯು, ನಿನ್ನನ್ನು ನಿಜವಾಗಿಯೂ ಮನ್ನಿಸುವೆನು. ಇಗೋ ಮುದ್ರೆಯನ್ನು ಮೇಜದಮೇಲಿಟ್ಟಿರುವೆನು. ಹೇಳು ನಿಜವನ್ನು ಮರೆಮಾಜಬೇಡ ಎನಲಾ, ಆ ಕಳ್ಳನು ಅಯ್ಯಾ! ನಾನೂ ಈ ನನ್ನ ಸ್ನೇಹಿತರೂಸಹ, ಕುರುಡರಲ್ಲ. ನಮ್ಮ ಕಣ್ಣುಗಳಿಗೆ ಜೀವನ್ನಾಗಿ ಕಣ್ಣು ಕಾಣುವುದು. ಆದರೆ ಅಂತಃಪುರದ ಸ್ತ್ರೀಯರು ಬಲ್ಲಿಯೂ, ಇತರ ದೊಡ್ಡಮನುಷ್ಯರಲ್ಲಿಯೂ, ಸುಲಭವಾಗಿ ಭಿಕ್ಷವನ್ನು ಸಂಪಾದಿಸಬಹುದೆಂಬ ಉಪಾಯವನ್ನು ಹುಡುಕಿ, ನಾವು ಹತ್ತುಸಾವಿರ ರೂಪಾಯಿಗಳನ್ನು ಸಂಪಾದನೆ ಮಾಡಿದೆವು.

ಈದಿನ ನಾನು ಈ ಕುರುಡರೆಂಬವರನ್ನುಕುರಿತು, ನನ್ನಭಾಗಕ್ಕೆ ಬರಬೇಕಾಗಿರುವ ಎರಡುಸಾವಿರದ ಐನೂರುರೂಪಾಯಿಗಳನ್ನು ಕೊಟ್ಟರೆ ನಾನು ಹೊರಟುಹೋಗುತ್ತೇನೆಂದು ಹೇಳಿದೆನು. ಅವರು ತಮ್ಮನ್ನು ಮೋಸಮಾಡಿ ಜೀರೆಯಾಗಿ ಹೋಗಿ, ತಮ್ಮ ರಹಸ್ಯವನ್ನು ಹೊರಹಾಕುವನೆಂಬ ಭಯದಿಂದ, ನನ್ನಪಾಲನ್ನು ಕೊಡದೆ, ನನ್ನನ್ನು ಹಿಡಿದುಕೊಂಡು ಹೊಡೆಯಲಾರಂಭಿಸಿದ್ದರು. ನಾನು ತೆರೆಹೊರೆಯವರಲ್ಲಿ ಮೊರೆಯಿಟ್ಟುಕೊಂಡು,

ತಮ್ಮಬಳಿಗೆ ಕರೆದುತರುವಂತೆ ಮಾಡಿಕೊಂಡೆನು. ಆದುದರಿಂದ ತಾವು ದಯೆಮಾಡಿ, ನ್ಯಾಯವನ್ನು ಚೆನ್ನಾಗಿ ಪರಿಶೀಲಿಸಿ ನನಗೆ ಬರಬೇಕಾಗಿ ಇರುವ, ಎರಡುಸಾವಿರದ ಐನೂರು ರೂಪಾಯಿಗಳನ್ನು ಕೊಡಿಸಿಕೊಡ ಬೇಕೆಂದು ಬೇಡಿಕೊಳ್ಳುವೆನು. ಅಲ್ಲದೆ ಉಳಿದ ಕುರುಡರಿಂದಲೂ, ನಿಜವನ್ನು ಹೇಳಿಸಬೇಕಾಗಿದ್ದರೆ, ನಮಗೆ ಕೊಟ್ಟ ಶಿಕ್ಷೆಗಿಂತಲೂ ಮೂರು ಪಾಲು ಹೆಚ್ಚು ಶಿಕ್ಷೆಯನ್ನು ಮಾಡಿಸಿದರೆ, ಅವರೂ ಕಣ್ಣುತೆರೆದು ನಿಜವನ್ನು ಹೇಳುವರೆಂದು ನುಡಿದನು. ನನ್ನ ಅಣ್ಣನೂ ಆತನ ಸ್ನೇಹಿತರೂ ಸಹ ಅಯ್ಯೋ ! ಆತನು ಹೇಳಿದ ಮಾತುಗಳೆಲ್ಲವೂ ಸುಳ್ಳು. ತಾವು ದಯೆಮಾಡಿ ನ್ಯಾಯವನ್ನು ಚೆನ್ನಾಗಿ ಪರಿಶೀಲಿಸಬೇಕೆಂದು ಹೇಳಿದರು. ಆದರೂ ನ್ಯಾಯಾಧಿಪತಿಯು, ಓಹೋ ! ದುರ್ಮಾರ್ಗಶಿರೋಮಣಿಗಳಿರಾ ! ನೀವು ಕಳ್ಳವೇಷವನ್ನು ಹಾಕಿಕೊಂಡು, ಜನರನ್ನು ಮೋಸಪಡಿಸಿ, ಹಣವನ್ನು ಸೂರೆಮಾಡುವ ಮೋಸಗಾರರಾಗಿರುವಿರಾ ! ಎನಲು ಆಕುರುಡರು ಸ್ವಾಮಿ ನಾವು ಭಗವತ್ಸಾಕ್ಷಿಯಾಗಿಯೂ, ಕುರುಡರಲ್ಲದೆ ವೇಷಗಾರರಲ್ಲವೆಂದು ಖಂಡಿತವಾಗಿ ಹೇಳುವೆವೆಂದು ನುಡಿದರೂ, ನ್ಯಾಯಾಧೀಶನು ಒಪ್ಪದೆ ಅವರಿಗೆ ಮೊಗಷ್ಟಾಡವನ್ನು ಕಟ್ಟಿಸಿ, ಒಂದು ನೂರಿಪ್ಪತ್ತುಸಾರಿ ಬತ್ತುವಳಿತೆ, ತನ್ನ ಸೇವಕರಿಗೆ ಆಜ್ಞೆ ಮಾಡಿದನು. ಚಾರರು ಈತೆರದಿಂದ ಅವರನ್ನು ಹಿಂಸಿಸುತ್ತಿರುವಲ್ಲಿ, ಕಣ್ಣುತೆರೆದು ನೋಡುವುದು ಕುರುಡರಿಗೆ ಅಸಾಧ್ಯವಾಗಿದ್ದರೂ, ಹಟದಿಂದ ಹೀಗೆ ಮಾಡುತ್ತಿರುವರೆಂದು ತಿಳಿದು, ನ್ಯಾಯಾಧೀಶನು ಒಲವಾಗಿ ಬಿಟ್ಟುವಂತೆ ಹೇಳಿದನು.

ಆಗ ಕಳ್ಳನು ಸುಮ್ಮನಿರಲಾರದೆ ಅಯ್ಯೋ ! ನೀವು ಹಟದಿಂದ ನೋವನ್ನು ಸಹಿಸಿಕೊಂಡು ಏತಕ್ಕೆ ಪ್ರಾಣವನ್ನ ಬಿಡುತ್ತೀರಿ. ನಿಮ್ಮ ನಿಜಸ್ಥಿತಿಯನ್ನು ಸಾಯುವವರಿಗೂ ಹೇಳಬಾರದೆಂದಿರುವಿರೊ, ನಿಮ್ಮ ದುರವಸ್ಥೆಯನ್ನು ನೋಡುವುದಕ್ಕೆ ಯಾರಿಂದತಾನೇ ಆದೀತು, ಎಂದು ಹೇಳಿ, ನ್ಯಾಯಾಧಿಪತಿಯನ್ನುಕುರಿತು, ಸ್ವಾಮಿ ! ಇವರು ಹಿಡಿದ ಹಟವನ್ನು ಬಿಡತಕ್ಕವರಲ್ಲ, ಇವರ ಸ್ಥಿತಿಯನ್ನುನೋಡಿ, ನನಗೆ ತುಂಬ ಕನಿಕರ ಉಂಟಾಗುತ್ತಿರುವುದು. ಆದುದರಿಂದ ಇವರನ್ನು ಬಿಡಿಸಿ, ಹಣವನ್ನು ತರಿಸುವುದು ಉತ್ತಮವೆಂದು, ನನಗೆ ತೋರುವುದು. ಎಲ , ನ್ಯಾಯಾಧೀಶನು ಹಣವನ್ನು ತರಿಸಿ, ಎರಡುಸಾವಿರದ ಐನೂರು ರೂಪಾಯಿಗಳನ್ನು

ಕಳ್ಳನಿಗೆ ಕೊಡಿಸಿ, ಉಳಿದ ಹಣವನ್ನು ತನ್ನಬಳಿಯಲ್ಲಿ ಇಟ್ಟುಕೊಂಡನು. ಅವರನ್ನು ಹೊರಹೊರಡಿಸಿದನು. ನಾನು ಈ ವರ್ತಮಾನವನ್ನು ತಿಳಿದು, ನನ್ನ ಕಣ್ಣನನ್ನು ಕರೆದುಕೊಂಡುಬಂದು, ಆತನನ್ನು ಸಮಾಧಾನಪಡಿಸಿ, ಉಪಚರಿಸುತ್ತಿದ್ದೆನು. ಎಂದು ನಾನು ಹೇಳಿದ ಕಥೆಯನ್ನು ಕಲೀಫರುಕೇಳಿ ನಕ್ಕು, ನನಗೆ ಇನಾಮು ಕೊಡುವಂತೆ ಹೇಳಿದರೂ ನಾನು ಸುಮ್ಮನಿರದೆ ನನ್ನ ನಾಲ್ಕನೆಯ ಅಣ್ಣನ ಕಥೆಯನ್ನು ಹೇಳತೊಡಗಿದೆನು.

ಷೌರಿಕನ ನಾಲ್ಕನೆಯ ಅಣ್ಣನ ಕಥೆ.

ನನ್ನ ನಾಲ್ಕನೆಯ ಅಣ್ಣನ ಹೆಸರು, ಅಲ್ಕವುಜೌ. ಇವನಿಗೆ ಬಂದುಕಣ್ಣು ಕುರುಡಾಗಿರುವುದು. ಅದಕ್ಕೆ ಕಾರಣವೇನೆಂದರೆ :—ಆತನು ಕಟುಕರವನಾಗಿ ಮಾಂಸದ ವ್ಯಾಪಾರವನ್ನು ಮಾಡುತ್ತಿದ್ದನಲ್ಲದೆ, ಕೋಳಿ ಹುಂಜಗಳ ಕಾಳಗವನ್ನು ನಡೆಸುವುದರಲ್ಲಿ, ಬಹು ನಿಪುಣನಾಗಿದ್ದನು. ಆತನು ಈ ಉಪಾಯದಿಂದ ಧನವನ್ನು ಸಂಪಾದಿಸಿ ಬಳಿಕ ಬಂದು ಮಾಂಸದ ಅಂಗಡಿಯನ್ನು ಇಟ್ಟುಕೊಂಡನು. ಉತ್ತಮತರದ ಮಾಂಸದಿಂದ ಆತನ ಅಂಗಡಿಯು ಯಾವಾಗಲೂ ತುಂಬಿಹೋಗಿರುವುದು. ಆತನು ಬಂದಾನೊಂದುದಿನ, ತನ್ನ ಅಂಗಡಿಯಲ್ಲಿ ಕುಳಿತು ವ್ಯಾಪಾರಮಾಡುತ್ತಿರುವಾಗ, ಒಬ್ಬಾನೊಬ್ಬ ಬಿಳಿಯುಗಡ್ಡದ ಮುದುಕನು ಬಂದು, ಮಾಂಸವನ್ನು ತೆಗೆದುಕೊಂಡು, ಬಹು ಸುಂದರವಾಗಿ ಇರುವ ನಾಣ್ಯವನ್ನು ಕೊಟ್ಟನು. ಅದನ್ನು ನನ್ನ ಅಣ್ಣನು ಪ್ರತ್ಯೇಕವಾಗಿ ಇಟ್ಟನು. ಆ ಮುದುಕನು ಇದೇತೆರದಿಂದ ಐದುತಿಂಗಳವರೆಗೆ ಪ್ರತಿದಿನವೂ, ಮಾಂಸವನ್ನು ಕೊಂಡುಕೊಂಡು ಹೋಗುತ್ತಿದ್ದುದರಿಂದ, ಬಂದ ಹಣವನ್ನೆಲ್ಲ ಆತನು ಬೇರೆಯಾಗಿಯೇ ಇಡುತ್ತಿದ್ದನು. ಬಳಿಕ ಆತನು ಕೋಳಿಗಳನ್ನು ಕೊಂಡುತರುವುದಕ್ಕಾಗಿ, ಆ ಮುದುಕನು ಕೊಟ್ಟ ಹಣವನ್ನು ಕೂಡಿಹಾಕಿರುವ ಪೆಟ್ಟಿಗೆಯನ್ನು ತೆರೆದು ನೋಡಿದನು. ಅದರಲ್ಲಿ ಹಣವಿಲ್ಲದೆ ಸಣ್ಣಸಣ್ಣನಾಗಿ ಕತ್ತರಿಸಿಹಾಕಿರುವ ಎಲುಗಳ ತುಂಡನ್ನು ಕಂಡು, ಎದೆಯನ್ನು ಹೊಡೆದುಕೊಂಡು ಬೊಬ್ಬಿಡುತ್ತಾ, ಕೂಗಿಕೊಂಡನು. ಆಗ ನೆರೆಹೊರೆಯವರೆಲ್ಲರೂ, ಆತನಬಳಿಗೆ ಬಂದು, ನೀನು ಏಕೆ ಅಳುವುದಕ್ಕೆ

ಕಾರಣವೇನೆಂದು ಕೇಳಲು, ನಡೆದಸಂಗತಿಯನ್ನೆಲ್ಲ ಹೇಳಿ, ಕಣ್ಣೀರುಸುರಿಸುತ್ತಿರುವಾಗ ಆ ದೊಣ್ಣೆಹಿಯಾದ ಮುದುಕನು ವೇಷವನ್ನು ಹಾಕಿಕೊಂಡು, ಬರುತ್ತಿರುವುದನ್ನು ಕಂಡು, ಓಡಿಹೋಗಿ ಆತನನ್ನು ಹಿಡಿದುಕೊಂಡು, ಘನವಂತರೇ ! ಬನ್ನಿ ! ಈ ದೊಣ್ಣೆಹಿಯು ಮಾಡಿರುವ ಮೋಸವನ್ನು ಕೇಳಿರಿ ! ಎಂದು ಗಟ್ಟಿಯಾಗಿ ಕೂಗಿಕೊಂಡನು. ಆಗ ಆ ದೊಣ್ಣೆಹಿಯು ನನ್ನ ಅಣ್ಣನನ್ನು ಕುರಿತು, ಅಯ್ಯಾ ! ಇಷ್ಟುಜನರಮುಂದೆ, ನನ್ನನ್ನು ಅವಮಾನಪಡಿಸಬೇಡ, ಸುಮ್ಮನೆ ಬಿಡು. ಇಲ್ಲವಾದರೆ, ನಿನ್ನನ್ನು ಬಹಳವಾದ ತೊಂದರೆಗೆ ಗುರಿಮಾಡೇನು. ಆದರೆ ನನಗೆ ಅದು ಇಷ್ಟವಿಲ್ಲವೆನಲು, ಅಲ್ಲವುಜನು, ನಾನು ನನ್ನಕಾರ್ಯದಲ್ಲಿ, ನ್ಯಾಯವಾಗಿಯೂ, ಧರ್ಮನಿರತನಾಗಿಯೂ, ಇರುವುದರಿಂದ, ಯಾರಿಗೂ ಹೆದರತಕ್ಕ ಅಗತ್ಯವು ಇಲ್ಲವೆಂದು ಹೇಳಿದನು.

ಹಾಗಾದರೆ ನನ್ನನ್ನು ರೇಗಿಸುವೆಯೋ ! ಓ ದೊಡ್ಡಮನುಷ್ಯರುಗಳಿರಾ ! ಈ ನೀಚನು ಮನುಷ್ಯಮಾಂಸವನ್ನು ತಂದು, ಕೋಳಿಯ ಮಾಂಸವೆಂದು ಹೇಳಿ ಮೋಸಪಡಿಸುತ್ತಿರುವನು. ಈ ಮಾತು ಎಂದಿಗೂ ಸುಳ್ಳಲ್ಲ. ನೀವು ಬೇಕಾದರೆ ಈತನ ಅಂಗಡಿಗೆ ಹೋಗಿ, ಪರೀಕ್ಷಿಸಿದರೆ ಅಲ್ಲಿ ಕಡಿದು ನೇತುಹಾಕಿರುವ ಮನುಷ್ಯನನ್ನು ನೋಡಬಹುದು. ನನ್ನ ಮಾತನ್ನು ನಂಬಿ ಎಂದು ಹೇಳಿದನು. ನನ್ನ ಅಣ್ಣನು ಸ್ವಲ್ಪಹೊತ್ತಿನ ಮೊದಲು ಬಂದು ಕೋಳಿಯೆನ್ನು ಕತ್ತರಿಸಿ, ನೇತುಹಾಕಿ ಬಂದಿದ್ದನು. ಆಗ ಜನರು ನನ್ನ ಅಣ್ಣನು ಹೇಳಿದಮಾತನ್ನು ನಂಬಲಾರದೆ, ಅಂಗಡಿಗೆ ಬಂದು ಪರೀಕ್ಷಿಸಿ ನೋಡಬೇಕೆಂದು, ಆ ಮುದುಕನನ್ನು ಬಿಡಿಸಿ, ಆತನನ್ನು ಸಂಗಡ ಕರೆದುಕೊಂಡುಬಂದು ಅಂಗಡಿಯಲ್ಲಿ ಕೊಯ್ದು ಬಿದ್ದಿರುವ ಮನುಷ್ಯನನ್ನು ನೋಡಿ, ಬಹಳವಾಗಿ ಆತನನ್ನು ನಿಂದಿಸಿ ಹೊಡೆದರು. ಆ ಮುದುಕನು ನನ್ನ ಅಣ್ಣನ ಕಣ್ಣಿನಮೇಲೆ ಒಂದುದೆಬ್ಬೆಯನ್ನು ಹಾಕಿದನು. ನಂತರ ಜನರೆಲ್ಲರೂ, ಆತನನ್ನು ಬಹಳನಾಗಿ ನಿಂದಿಸುತ್ತಾ ಮತ್ತೆಮತ್ತೆ ಕ್ರೂರವಾಗಿ ಶಿಕ್ಷಿಸುತ್ತ, ಎಲಾ ! ದುರಾತ್ಮ ! ಕೋಳಿಯ ಮಾಂಸವೆಂದು ಹೇಳಿ, ನರಮಾಂಸವನ್ನು ತಂದು ನಮ್ಮಗಳಿಗೆ ಮಾರಿ, ನಮ್ಮವ್ರತವನ್ನು ಹಾಳುಮಾಡುತ್ತಿರುವೆಯೋ ಎಂದು ಹೇಳಿ, ಆತನನ್ನು ನ್ಯಾಯಾಧಿಪತಿಯು

ಬಳಿಗೆ ಕರೆದುಕೊಂಡುಬಂದರು. ಸುಲ್ತಾನರೇ ಇಷ್ಟೊಬ್ಬಂದು ವಿಚಿತ್ರವು ಆ ದೊಡ್ಡಹಿಯಾದ ಮುದುಕನು ಗಾರಡಿಗನಾಗಿದ್ದುದರಿಂದ, ಮಾಯೆಯಾ ವಿದ್ಯದ ಸಂಕಲ್ಪದಿಂದ ಉಂಟಾಯಿತು. ಆತನು ಹೊಸದಾಗಿ ನಿರ್ಮಿಸಿ, ಮಾಯೆಯಾದ್ರವ್ಯವನ್ನು ಕೊಟ್ಟುದರಿಂದಲೆ, ಆ ಹಣವು ಎಲೆಗಳಾದವು. ನಂತರ ಅಸೂಯೆಯಾಭರಿತನಾದ, ಆ ಮುದುಕನು ನ್ಯಾಯಾಧಿಪತಿಯಬಳಿಗೆ ಬಂದು ನಿಂತು, ಅಯ್ಯಾ ! ಈತನು ನರಮಾಂಸವನ್ನು ಮಾರುತ್ತ, ಜನರನ್ನು ಹಿಂಸಿಸುತ್ತ ಕ್ರೂರಾತ್ಮನಾಗಿರುವನು. ಇವನ ಅಂಗಡಿಯಲ್ಲಿ ನಾವು ಪರೀಕ್ಷಿಸಿನೋಡಿದಾಗ, ನಾವುಗಳೆಲ್ಲರೂ ನೋಡಿದಂತೆ, ತಾವು ನೋಡಬಹುದೆಂದು ನುಡಿಯೆಲು, ನನ್ನ ಅಣ್ಣನು ತನ್ನ ದುರವಸ್ಥೆಯನ್ನು ಸಹಜವಾಗಿ, ಹೇಳಿಕೊಂಡರೂ, ನ್ಯಾಯಾಧಿಪತಿಯು ಹಣವು ಎಲೆಯಾದುದೆಂಬುವದನ್ನು ನಂಬದೆ, ಆತನಿಗೆ ನೂರುದೆಬ್ಬೆಗಳನ್ನು ಹೊಡೆಸಿ, ಮೂರು ದಿನಗಳವರಿಗೆ ಪಟ್ಟಣಕ್ಕೆ ಬರಕೂಡದೆಂದು, ಕಟ್ಟುವಾಡಿ, ಹೊರಹೊರಡಿಸಿದನು. ಇಂತೆಂದು ಹೇಳಿ, ಷಹರಜಾದಿಯು ಕಥೆಯನ್ನುನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ, ಹೇಳಲಾರಂಭಿಸಿದಳು.

೧೩೪ ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು, ಇಂತೆಂದಳು. ನನ್ನ ಅಣ್ಣನಿಗೆ ಈ ದುರವಸ್ಥೆಯು ಬಂದಬಳಿಕ, ಬಾಗದಾದಿನಲ್ಲಿ ಯಾರಿಗೂ ತಿಳಿಯದಂತೆ, ಬಹುದೂರವಾಗಿ ಒಂದು ಮನೆಯನ್ನು ಮಾಡಿಕೊಂಡು, ದೇಹವು ಸ್ವಸ್ಥವಾಗುವವರಗೂ ಇದ್ದನು. ಬಹುದಿನಗಳು ಆತನು ಆ ಬಾಡಿಗೆ ಮನೆಯಲ್ಲಿ ವಾಸಮಾಡಿಕೊಂಡಿದ್ದು, ಕೆಲವುದಿನಗಳ ನಂತರ ಹೊರಗೆ ಸಂಚಾರ ಮಾಡಬೇಕೆಂದು, ತಿರುಗುತ್ತಿರುವಾಗ, ತನ್ನ ಹಿಂದೆ ಇಬ್ಬರು ಕುದುರೆಸವಾರರು ಅಟ್ಟಿಸಿಕೊಂಡು ಬರುತ್ತಿರುವುದನ್ನು ಕಂಡು, ಭಯೆಪಟ್ಟು ಓಡಿಬಂದು, ಬಂದಾನೊಂದು ದೊಡ್ಡಮನೆಯ ಬಾಗಿಲನ್ನು ತೆರೆದುಕೊಂಡು ಒಳಹೊಕ್ಕು ಅಂಗಳದಲ್ಲಿರುವ ಕೈಸಾಲೆಗೆಹೋಗಿ ನಿಂತುಕೊಳ್ಳಲು ಅಲ್ಲಗೆ ಭಂಟರುಬಂದು, ಆತನನ್ನು ಹಿಡಿದುಕೊಂಡು, ದೈವಾಧೀನದಿಂದ, ನೀನೆ ನಮ್ಮಕೈಗೆ ಸಿಕ್ಕಿದೆಯಾ ! ನಾವು ಮೂರು ರಾತ್ರಿಗಳಿಂದಲೂ,

ನಿನ್ನನ್ನು ನಿದ್ರೆಯಿಲ್ಲದೆ ಹುಡುಕುತ್ತಿದ್ದೆವಲ್ಲಾ! ನಾನು ನಿನ್ನನ್ನು ಎಚ್ಚರಿಕೆಯಿಂದ ನೋಡದಿದ್ದರೆ, ನಮ್ಮ ಪ್ರಾಣವನ್ನು ಕೂಡ ತೆಗೆದುಕೊಳ್ಳುತಿದ್ದೆಯಲ್ಲಾ! ಎಂದು ನುಡಿದಕೂಡಲೆ, ನಮ್ಮ ಅಣ್ಣನಿಗೆ ಎಷ್ಟು ಆಶ್ಚರ್ಯವುಂಟಾಗಿರಬಹುದೆಂಬುದನ್ನು ನೀವೆ ಯೋಚಿಸಿರಿ.

ನಂತರ ಆ ರಾವುತರನ್ನು ಕುರಿತು, ನನ್ನ ಅಣ್ಣನು ಅಯ್ಯಾ! ನೀವು ಮಾತನಾಡುವುದೇ ನಮಗೆ ತಿಳಿಯದಲ್ಲಾ! ಎನಲು, ಇಲ್ಲ! ಇಲ್ಲ! ನೀನೂ ನಿನ್ನ ಜೊತೆಯವರೂಸಹ ಮಹಾ ಕೊಲೆಪಾತಕರೆಂಬುದು, ನಮಗೆ ತಿಳಿಯುವುದು. ನಮ್ಮ ಯಜಮಾನನ ಸರ್ವಸ್ವವನ್ನೂ ಅಪಹರಿಸಿ, ಆತನ ಪ್ರಾಣವನ್ನು ತೆಗೆದುಹಾಕುವುದಕ್ಕೆದ್ಯುಕ್ತನಾದೆಯಲ್ಲಾ! ನಿನ್ನೆ ರಾತ್ರಿ ನಾವುಗಳು ನಿನ್ನನ್ನು ಹಿಂದಟ್ಟಿಕೊಂಡುಬಂದಾಗ್ಗೆ ನಿನ್ನಬಳಿಯಲ್ಲಿದ್ದ ಕತ್ತಿಯನ್ನು ತೋರಿಸು ಎಂದು ಕೋದಿಸುತ್ತಿರುವಾಗ, ಆತನಬಳಿಯಲ್ಲಿ ಬಂದು ಸಣ್ಣಕತ್ತಿಯು ದೊರಕಿತು. ಆಗ ಅವರು ನನ್ನ ಅಣ್ಣನನ್ನು ಕುರಿತು, ಓಹೋ! ನೀನು ಕಳ್ಳನಲ್ಲವೆನ್ನುವೆಯೋ? ಎನಲು, ಸ್ವಾಮಿ! ಕಳ್ಳನಲ್ಲದೆ ಮತ್ತಾರೂ ಕತ್ತಿಯನ್ನಿಟ್ಟುಕೊಂಡಿರುವುದಿಲ್ಲವೋ? ನೀವು ನನ್ನ ಕಥೆಯೆನ್ನು ಕೇಳಿದುದಾದರೆ, ನಿಮಗೂ, ನನ್ನಲ್ಲಿ ಮರುಕ ಹುಟ್ಟುವದೆಂದು ನಾನು ಹೇಳಲು, ಅವರು ನನ್ನವಾತನ್ನು ಲಕ್ಷ್ಯಮಾಡದೆ, ಮೇಲೆ ಬಿದ್ದು ಹೊಡೆಯುತ್ತಿರುವಾಗ, ನನ್ನ ಬೆನ್ನಿನಮೇಲಿದ್ದ ಗಾಯಗಳನ್ನು ನೋಡಿ, ಎಲಾ! ಪಾಪಾತ್ಮ! ನಿನ್ನನ್ನು ನೋಡಿದರೆ, ನಿಸ್ಸಂದೇಹವಾಗಿ ಕಳ್ಳನೆಂದು ನಮಗೆ ಧೈರ್ಯವಾಗಿ ಕಾಣಬರುವ, ಚಹ್ನೆಗಳಿರುವವಲ್ಲಾ! ಇಂಥಾದ್ದರಲ್ಲಿ ನಿನ್ನನ್ನು ಯೋಗ್ಯನೆಂದು ಹೇಳುವುದು, ಹೇಗೆ? ಎನಲು ನನ್ನ ಅಣ್ಣನು ಅಯ್ಯೋ! ಮೊದಲುಸಾರಿ, ಬಹು ಕಠಿಣವಾದ ದೆಬ್ಬಗಳನ್ನು ತಿಂದು, ಎರಡನೆಯಸಾರಿಯೂ ಇಂತಹ ದುರವಸ್ಥೆಯನ್ನು ಹೊಂದಬೇಕಾಗಿದ್ದರೆ, ನಿನ್ನತಪ್ಪು ಬಹು ದೊಡ್ಡದಾಗಿಯೇ ಇರಬೇಕು, ಎಂದುಕೊಂಡನು. ಆಗ ಆ ರಾವುತರು ದಯಾಶೂನ್ಯರಾಗಿ, ನಿಷ್ಕರುಣದಿಂದ ನನ್ನ ಅಣ್ಣನನ್ನು, ನ್ಯಾಯಾಧಿಪತಿಯಬಳಿಗೆ ಕರೆದುಕೊಂಡು ಹೋಗಲು, ಆತನು ಎಲಾ! ದುರಾತ್ಮ! ನೀನು ಬಹು ಧೈರ್ಯದಿಂದ ಇವರಮನೆಯೆನ್ನು ನುಗ್ಗಿ ಕತ್ತಿಯೆನ್ನು ತಿರುಗಿಸುತ್ತಾ, ಮೇಲೆ ಬಿದ್ದು

ಕೊಲ್ಲುವುದಕ್ಕೆ ಹೋಗಲು ಕಾರಣವೇನೆಂದು ಕೇಳಲು, ಅಲ್ಲವುಜು, ಅಯ್ಯಾ! ತಾವು ಖಂಡಿತವಾಗಿಯೂ ನನ್ನನ್ನು ಬಹುಸಂಕಟಭರಿತನಾದ ನಿರಪರಾಧಿಯೆಂದು ತಿಳಿದುಕೊಳ್ಳಬೇಕೆಂದೂ, ನನ್ನಂತಹ ನಿರ್ಭಾಗ್ಯನಾದವನು ಈ ಲೋಕದಲ್ಲಿಯೇ ಇಲ್ಲವೆಂದು, ನಾನು ಖಂಡಿತವಾಗಿ ಹೇಳುವೆನು ಎಂದನು.

ಬಳಿಕ ರಾವುತರಲ್ಲೊಬ್ಬನು, ಸ್ವಾಮಿ! ಮನೆಮಾರುಗಳನ್ನು ಸೂರೆಮಾಡಿ, ಜನರನ್ನು ಸೂರೆಮಾಡುವ ಈ ಪಾಪಾತ್ಮನ ಮಾತುಗಳನ್ನು ಕೇಳುವಿರಾ! ನನ್ನಮಾತಿನಲ್ಲಿ ನಂಬಿಕೆ ಇಲ್ಲವಾದರೆ ಈತನ ಬೆನ್ನನ್ನು ಪರೀಕ್ಷಿಸಿ ನೋಡಿರಿ, ಎಂದು ಬಟ್ಟೆಯನ್ನು ತೆಗೆದು ನ್ಯಾಯಾಧಿಪತಿಗೆ ತೋರಿಸಲು, ಆತನು ಯಾವಮಾತನ್ನು ಆಡದೆ ಕೊರಡೆಯಿಂದ ಒಂದು ನೂರು ಏಟುಗಳನ್ನು ಹಾಕಿ, ಬಂಟೆಯನ್ನೀಲೆ ಕುಳ್ಳಿರಿಸಿ, ಈತನು ಮನೆಯನ್ನು ಸೂರೆಮಾಡುವ ಮನುಷ್ಯನೆಂದು, ಒಬ್ಬ ಮನುಷ್ಯನು ಹೇಳುತ್ತಾ ಮುಂದೆ ಹೋಗುತ್ತಿರಲು, ಪಟ್ಟಣದಿಂದ ಹೊರಹೊರಡಿಸಿ ಪುನಹ ಎಂದಿಗೂ ಊರಿಗೆ ಬಾರದಂತೆ ಮಾಡಿಸಿದನು. ನಾನು ಈ ವರ್ತಮಾನವನ್ನು ಕೇಳಿ, ಆತನ ಎರಡನೆಸಾರಿ ದುರವಸ್ಥೆ ಹೊಂದಿದುಕ್ಕಾಗಿ, ವ್ಯಸನಪಟ್ಟು ಆತನನ್ನು ಅತಿರಹಸ್ಯವಾಗಿ, ನನ್ನಬಳಿಗೆ ಕರೆದುಕೊಂಡುಬಂದು, ನನ್ನ ಕೈಲಾದ ಸಹಾಯವನ್ನು ಮಾಡಿದೆನು ಎಂದುಹೇಳಲು, ಕಲೀಫರು ಮೊದಲಿನಂತೆ ಹುಸಿನಗೆಯೆನ್ನುಬೀರದೆ, ಖಿನ್ನರಾಗಿರುವುದನ್ನು ಕಂಡು, ನನ್ನ ಅಣ್ಣನಾದ ಅಲ್ಲವುಜನು ತೊಂದರೆಯನ್ನನುಭವಿಸಿದುದಕ್ಕಾಗಿ, ಹೀಗಿರುವರೆಂದು ತಿಳಿದು, ಅವರು ನನಗೆ ಬಹುಮಾನಮಾಡುವಂತೆ, ಆಜ್ಞಾಪಿಸುವುದಕ್ಕೆಮೊದಲೆ, ಸ್ವಾಮಿ! ತಾವು ದಯಮಾಡಿ ನನ್ನ ಉಳಿದ ತಮ್ಮಂದಿರ ಕಥೆಯನ್ನು ಕೇಳಿ, ಆ ಚರಿತ್ರೆಗಳನ್ನೆಲ್ಲಾ, ಬರೆಸಿ ಒಂದು ಪುಸ್ತಕಶಾಲೆಯಲ್ಲಿಡಬಹುದು. ಈಗ ನನ್ನ ಏದನೆಯ ಅಣ್ಣನಾದ ಅಲನಾಸ್ಕರನೆಂಬವನ ಕಥೆಯನ್ನು ಹೇಳುವೆನೆಂದು, ಪ್ರಾರಂಭಿಸಿದನೆಂದು, ಹೇಳಿ ಬೆಳಗಾದ ಕಾರಣದಿಂದ ಕಥೆಯನ್ನು ನಿಲ್ಲಿಸಿ, ಮರಳಿ ಮರುದಿನ ಬೆಳಗಿನ ಜಾವದಲ್ಲಿ, ನುಡಿಯಲು ಆರಂಭಿಸಿದಳು.

೧೭೫ನೆಯ ರಾತ್ರಿ ಕಥೆ.

ಹೌರಕನ ಐದನೆಯ ಅಣ್ಣನ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು, ಇಂತೆಂದಳು :— ನನ್ನ ಐದನೆಯ ಅಣ್ಣನಾದ ಅಲನಾಸ್ಕರನು, ತನ್ನ ತಂದೆ ಬದುಕಿರುವವರಿಗೂ ಯಾವ ಕೆಲಸವನ್ನೂ ಮಾಡದೆ, ಬಹು ಸೋಮಾರಿಯಾಗಿದ್ದುಕೊಂಡು, ತಾನು ಹಗಲು ಭಿಕ್ಷಮಾಡಿ ತಂದ, ಅನ್ನವನ್ನು ತಿಂದು ರಾತ್ರಿ ಕಾಲವನ್ನು ಕಳೆಯುತ್ತ ಇದ್ದನು. ನನ್ನ ತಂದೆಯು ಸಾಯುವಕಾಲದಲ್ಲಿ ವೃದ್ಧನಾದ ಆತನಿಗೆ ಏಳುನೂರು ರೂಪಾಯಿಗಳ ಆಸ್ತಿ ಇದ್ದಿತು. ನಾವು ಗಳು ಅದನ್ನು ಸಮವಾಗಿ ಹಂಚಿಕೊಳ್ಳಲು, ಪ್ರತಿಯೊಬ್ಬರಿಗೂ ಒಂದು ನೂರು ರೂಪಾಯಿಗಳು ಬಂದವು. ಆದರೆ ಅಲನಾಸ್ಕರನು ತನ್ನ ಜೀವ ಮಾನದಲ್ಲಿಂದಿಗೂ, ಅಷ್ಟೊಂದು ಹಣವನ್ನು ಕಾಣದುದರಿಂದ, ಅದನ್ನು ಯಾವರೀತಿಯಲ್ಲಿ ಅಭಿವೃದ್ಧಿಪಡಿಸಬೇಕೆಂಬ ಮಾರ್ಗವು ತಿಳಿಯದೆ, ಆ ಹಣವನ್ನು ಕೊಟ್ಟು ಪಿಂಗಾಣಿಸಾಮಾನುಗಳನ್ನು ಕೊಂಡುಕೊಂಡು, ಒಂದು ಅಂಗಡಿಯಲ್ಲಿ ಇಟ್ಟುಕೊಂಡು, ವ್ಯಾಪಾರ ಮಾಡುವುದಕ್ಕಾಗಿ ಕುಳಿತು, ಗಿರಾಕಿಗಳು ಬರುವವರಿಗೂ, ತನ್ನ ನೆರೆಯ ಅಂಗಡಿಯವನಾದ, ದರ್ಜಿಯವನು ಕೇಳುತ್ತಿರುವಂತೆ, ನಾನು ಒಂದುನೂರು ರೂಪಾಯಿಗಳಿಗೆ ತಂದಿರುವ ಇದನ್ನು ಮಾರಿದರೆ ಬಂಡವಾಳವು ದ್ವಿಗುಣವಾಗುವುದು, ನಂತರ ಅದನ್ನೆ ಮೂಲಧನವಾಗಿ ಮಾಡಿಕೊಂಡು ನಾಲ್ಕುನೂರು ರೂಪಾಯಿಗಳನ್ನು ಮಾಡುವೆನು.

ಹೀಗೆ ನಾಲ್ಕುಸಾವಿರ ರೂಪಾಯಿಗಳಾಗುವವರಿಗೂ, ವ್ಯಾಪಾರ ಮಾಡಿ, ನಂತರ ಅದನ್ನು ದ್ವಿಗುಣಿಸುವುದರಿಂದ, ನಿಜವಾಗಿ ಎಂಟುಸಾವಿರ ರೂಪಾಯಿಗಳಾಗುವುವು. ಬಳಿಕ ಪಿಂಗಾಣಿ ವ್ಯಾಪಾರವನ್ನು ಬಾಕುಮಾಡಿ, ರತ್ನಪಡಿ ವ್ಯಾಪಾರವನ್ನು ಮಾಡತೊಡಗಿ, ಬಹಳವಾದ ಆಸ್ತಿಯನ್ನು ಸಂಪಾದಿಸಿ, ವಿಸ್ತಾರವಾಗಿಯೂ, ವಿನೋದಕರವಾದ ಒಂದು ಮನೆಯನ್ನು ಕೊಂಡುಕೊಂಡು ನಂತರ ಬಹು ರೂಪವತಿಯಾಗಿರುವ ಗಾನವಿದ್ಯಾವಿಲೋಲಳಾದ ಒಬ್ಬಾಬ್ಬನೊಬ್ಬಬ್ಬ ಯುವತಿಯನ್ನು ಮದುವೆ ಮಾಡಿಕೊಂಡು, ದ್ರವ್ಯಾರ್ಜನೆಯನ್ನು ಬಿಡದೆ, ಇನ್ನೂ ಅಧಿಕವಾಗಿ ಮಾಡುತ್ತ ಲಕ್ಷಾಂತರ

ದ್ರವ್ಯವನ್ನು ಸಂಪಾಡಿಸಿ, ಬಳಿಕ ರೂಪರೇಖಾಲಾವಣ್ಯ ಚಾತುರ್ಯ ಗಾಂಭೀರ್ಯ ಗುಣಗಣ ಪರಂಪರಾಯುಕ್ತಳಾದ ನಿನ್ನ ಮಗಳನ್ನು ನನಗೆ ಕೊಟ್ಟು, ವಿವಾಹ ಮಾಡಿಕೊಡಬೇಕೆಂದು, ಪ್ರಧಾನಮಂತ್ರಿಗೆ ಕಾಗದವನ್ನು ಬರೆವೆನು. ಅದರಲ್ಲಿ ಬಹುಮಾತುಗಳನ್ನು ವಿವರಿಸಿಬರೆಯದೆ ಮದುವೆಯಾದರಾತ್ರಿಯೆ, ನಿನಗೆ ಒಂದುಸಾವಿರ ವೊಹರಿಗಳನ್ನು ಕೊಡುವೆನೆಂದು ಬರೆವೆನು. ಆತನೆಂದಿಗೂ, ಅದಕ್ಕೊಪ್ಪದಿರಲಾರನು. ಹಾಗೆ ಒಪ್ಪದೆಹೋದರೆ, ನಾನು ಬಲಾತ್ಕಾರದಿಂದ ಆತನಮಗಳನ್ನು ಮದುವೆ ಮಾಡಿಕೊಳ್ಳುವುದೇ ಸರಿ ! ಹೀಗೆ ಮಂತ್ರಿಯೆಮಗಳನ್ನು ಮದುವೆಮಾಡಿಕೊಂಡಮೇಲೆ, ಮಾನಕ್ಕೆ ತಕ್ಕಂತೆ ಉತ್ತಮವಾದ ಜರತಾರಿ ಬಟ್ಟೆಗಳನ್ನೂ, ಅಪರಂಜಿಯ ತಟ್ಟೆಗಳನ್ನು, ವಜ್ರಕೆಂಪುಗಳನ್ನು ಕಟ್ಟಿ ಬಿಗಿದಿರುವ ಪಾತ್ರೆಗಳನ್ನು ತರಿಸಿ, ನಾಲ್ಕು ಐದುಜನ ಕಾಫರರನ್ನು ತನ್ನಹೆಂಡತಿಯ ಚಾಕರಿಗಾಗಿ ಎಂದು ನಿಯಮಿಸಿಕೊಳ್ಳುವೆನು. ನಂತರ ನಾನು ಆ ಸೇವಕರಿಂದ ಪರಿವೃತನಾಗಿ ಉತ್ತಮವಾದ ಅಲಂಕಾರಭೂಷಿತನಾಗಿ, ಆಕೆಯಮೇಲೆ ಕುಳಿತು ಮಂತ್ರಿಯಮನೆಗೆ ಹೋಗುವೆನು. ಆತನು ನನಗೆ ಆಗ ತಾವು ಗೌರವವಾಗಿ ಮರ್ಯಾದೆಮಾಡಿ, ಪ್ರತ್ಯುತ್ತಾಥನವಂ ಕೊಟ್ಟು, ತನ್ನ ಬಳಯಲ್ಲಿ ಕುಳ್ಳಿರಿಸಿಕೊಳ್ಳುವನು.

ಬಳಿಕ ನನ್ನ ಚಾಕರರು ವೊಹರಿಗಳನ್ನು ತುಂಬಿದ ಚೀಲಗಳನ್ನು ತಂದು, ನನ್ನಬಳಯಲ್ಲಿರುವರು. ನಾನು ಅದನ್ನು ತೆಗೆದು ಪ್ರಧಾನ ಮಂತ್ರಿಯ ಕೈಗೆ ಕೊಟ್ಟು, ಇಗೋ ನಿನ್ನಮಗಳ ಮದುವೆಯದಿನ ಕೊಡುತ್ತೇನೆಂದು ಹೇಳಿದ, ಹಣಕ್ಕಿಂತಲೂ, ಒಂದುಸಾವಿರ ವೊಹರಿಗಳು ಹೆಚ್ಚಾಗಿರುವುದು. ಇದನ್ನು ಇತರ ಖರ್ಚಿಗೆ ಉಪಯೋಗಿಸಿಕೊಳ್ಳ ಬಹುದು ಎಂದು ಹೇಳುವೆನು. ಅದನ್ನು ಆತನು ಅಂಗೀಕರಿಸದೆ ಇರಲಾರು. ನಾನು ಮೊದಲಿನಂತೆ ವೈಭವದಿಂದ ಮನೆಯನ್ನುಸೇರಲು, ತಂದೆಯ ದರ್ಶನಕ್ಕಾಗಿ ಹೋಗಿದ್ದ, ನನಗೆ ನನ್ನಹೆಂಡತಿಯು ವಂದನಾಪತ್ರವನ್ನು ಕಳುಹಿಸುವಳು. ನಾನು ಅದನ್ನುತಂದ ಚಾರಕನಿಗೆ ಬಹುಮಾನಮಾಡಿ ಕಳುಹಿಸುವೆನು. ನನ್ನಹೆಂಡತಿಯು, ನನ್ನ ಆಜ್ಞಾನುಸಾರವಾಗಿ ನಡೆದುಕೊಳ್ಳುವಂತೆ ಎಚ್ಚರಿಕೆಯಿಂದ ನೋಡಿಕೊಳ್ಳುವೆನು. ರಾತ್ರಿಕಾಲದಲ್ಲಿ ನಾನು

ಅಂತಃಪುರವನ್ನು ಪ್ರವೇಶಿಸಿದಾಗ, ಆಕೆ ಬಹುಮರ್ಯಾದೆಯಿಂದ ನನ್ನನ್ನು ಬರಮಾಡಿಕೊಳ್ಳುವಂತೆ ಮಾಡುವನು. ಆಕೆ ನನ್ನ ದಾದಿಯರ ಮೂಲಕ ಉತ್ತಮಪದಾರ್ಥಗಳನ್ನು ಕಳುಹಿಸಿದರೆ, ನಾನು ಅದನ್ನು ಸ್ವೀಕರಿಸದೆ ಹಿಂದಕ್ಕೆ ಕಳುಹಿಸುವೆನು. ಚಂದ್ರಮುಖಿಯಾದ ನನ್ನಹೆಂಡತಿಯನ್ನು ದಾದಿಯರು, ಅಲಂಕಾರ ಮಾಡಿ, ನನ್ನಬಳಿಗೆ ಕರೆದುಕೊಂಡು ಬಂದಾಗ ನಾನು ಲಕ್ಷ್ಯಮಾಡದೆ, ಸ್ವಲ್ಪಹೊತ್ತು ಸುಮ್ಮನಿದ್ದುದೇ ಆದರೆ, ಅವರುಗಳು ಬಹುವಿಧದಿಂದ ನನ್ನನ್ನು ಬೇಡಿಕೊಳ್ಳುವರು. ನಾನು ನಂತರ ಕಣ್ಣಿತ್ತಿನೋಡಿ, ಅಲಕ್ಷ್ಯಮಾಡಿ ಹಿಂದಿರುಗಿ ಹೊರಟುಹೋಗಲು, ತಾವುಮಾಡಿದ ಅಲಂಕಾರವು ಚೆನ್ನಾಗಿಲ್ಲವೆಂದು, ನಾನು ಕೋಪಿಸಿಕೊಂಡೆನೆಂದು ಅವರು, ಮರಳಿ ಅಲಂಕರಿಸುವುದಕ್ಕಾಗಿ, ಆಕೆಯನ್ನು ಅಂತಃಪುರಕ್ಕೆ ಕರೆದುಕೊಂಡುಹೋಗುವರು. ನಾನು ಅಬಳಿಕ ಬೇರೆಬೇರೆಯಾದ ಇತರ ಉಡುಪುಗಳನ್ನು ಧರಿಸಿಕೊಂಡುಬಂದು, ಅಂತಃಪುರದಲ್ಲಿ ಕುಳಿತುಕೊಂಡಿರುವಾಗ ಅವರು ಮೊದಲಿನಂತೆ ನನ್ನನ್ನು ಬಹುವಿಧವಾಗಿ ಬೇಡಿಕೊಳ್ಳುವರು. ಆದರೂ ಬಹಳಹೊತ್ತಿನವರಿಗೂ, ಅಲಕ್ಷ್ಯಮಾಡುತ್ತಿದ್ದು, ನಂತರ ನನ್ನಹೆಂಡತಿಗೆ ನಾನು ತಿಳಿಯಹೇಳಬೇಕಾದ ಮಾತುಗಳನ್ನೆಲ್ಲ ಚೆನ್ನಾಗಿ ತಿಳಿಯುಹೇಳುವೆನು. ಎಂದು ನುಡಿದು ಬೆಳಗಾದುದರಿಂದ, ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಿಗಿನಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೧೩೬ ನೆಯ ರಾತ್ರಿಯ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು, ಇಂತೆಂದಳು:— ಬಳಿಕ ನಾನು ಇಷೊಟ್ಟಂದು ಸಂಭ್ರಮದಿಂದ, ನನ್ನಬಳಿಯಲ್ಲಿರುವ ಸೇವಕರಿಗೆಲ್ಲ ಐದುಸಾವಿರ ಮೊಹರಿಗಳನ್ನು ದಾನವಾಗಿ ಕೊಡಲು, ಅವರೆಲ್ಲರೂ ಹೊರಟುಹೋಗುವರು. ನಂತರ ನಾನು ರಾಣಿಯು, ಅಲಂಕಾರಮಾಡಿದ ಪರ್ಯಂಕದಲ್ಲಿ ಕಯನಿಸಿ, ನಾನೂ ನನ್ನಹೆಂಡತಿಯೂ ಸುಖದಿಂದಿರುವೆವು. ಆದರೂ, ನಾನು ಆಕೆಗೆ ಸಲಿಗೆಯನ್ನು ಕೊಡಲಾರೆನಾದುದರಿಂದ, ಮೌನದಿಂದಲೂ, ನಾಚಿಕೆಯಿಂದಲೂ, ಆಕೆ ಬಹಳವಾಗಿ ನರಳುತ್ತ, ರಾತ್ರಿಯನ್ನು ಕಳೆದು ಬೆಳಗಾದಕೂಡಲೆ, ತಾಯಿಯಬಳಿಗೆ ಹೋಗಿ, ನಾನು ಎಷೊಟ್ಟಂದು ವಿನಯದಿಂದಿದ್ದರೂ, ಗಂಡನು ತನ್ನನ್ನು ಲಕ್ಷ್ಯಮಾಡಲಿಲ್ಲವೆಂದೂ, ಅದರಿಂದ ನನಗೆ ವ್ಯಸ ಉಂಟಾಗಿರುವುದೆಂದೂ ದೂರಿಕೊಳ್ಳುವಳು.

ನಂತರ ನಮ್ಮ ಆತ್ತೆ ನನ್ನಬಳಿಗೆಬಂದು, ಬಹು ಮರ್ಯಾದೆಯಿಂದ ಮಾತ ನಾಡುತ್ತ, ಅಯ್ಯಾ ! ನೀವು ನನ್ನಮಗಳನ್ನು ಅಲಕ್ಷ್ಯಮಾಡಿ, ಅವಳಿಂದ ಸೇವೆಯನ್ನು ತೆಗೆದುಕೊಳ್ಳುವುದಕ್ಕೆ ಬಪ್ಪಲಿಲ್ಲವೆಂದು, ನನ್ನಮಗಳು ಬಹಳವಾಗಿ ವ್ಯಸನವಟ್ಟುಕೊಂಡಳು. ಸುಂದರೀಮಣಿಯಾಗಿಯೂ, ಸುಗುಣಗಳಿಗೆ ಗಣಿಯಾಗಿಯೂ, ನಯವಿನಯ ಸಂಪನ್ನಳಾಗಿಯೂ, ಇರುವ ನನ್ನಮಗಳು ತಮ್ಮಸೇವೆ ಮಾಡಿ, ತಮ್ಮನ್ನು ಸಂತೋಷಪಡಿ ಸುವುದೇ ಮುಖ್ಯವಾದ ಕರ್ತವ್ಯವೆಂದು ತಿಳಿದಿರುವಳು. ಆ ಬಾಲಕಿಯು ಹುಟ್ಟಿದಾಗಿನಿಂದಲೂ, ಅಂತಃಪುರದಲ್ಲಿ ಇದ್ದುಕೊಂಡು, ಮತ್ತಾವ ಪುರುಷನನ್ನುನೋಡದೆ ತಾವೇ ಪ್ರಾಣನಾಥರೆಂದು ಮದುವೆಮಾಡಿಕೊಂಡು ಮೋಹನಾಂಗನಾಗಿರುವ ನಿನ್ನಬಳಿಯಲ್ಲಿ ಬಂದು, ನಿಂತುಕೊಂಡರೆ, ನೀನು ಅಲಕ್ಷ್ಯಮಾಡಬಹುದೆ ? ಇನ್ನುಮೇಲೆ ದಯಮಾಡಿ, ಆಕೆಯನ್ನು ಕರುಣಾದೃಷ್ಟಿಯಿಂದ ನೋಡುತ್ತಿರಬೇಕೆಂದು, ಪ್ರಾರ್ಥಿಸುವೆನು.

ಸ್ವಾಧೀನವಿಲ್ಲದವರಾದ ಸುಂದರೀಮಣಿಯರನ್ನು, ಹೀಗೆ ನೀವೆಂ ದಿಗೂ ತೊಂದರೆಪಡಿಸಬಾರದು, ಎಂದುಹೇಳಿ, ಮನೆಗೆಹೋಗಿ ಉತ್ತಮ ವಾದ ಸುವರ್ಣದ ಗಿಂಡಿಯಲ್ಲಿ ಸಾರಾಯಿಯನ್ನು ಹಾಕಿ, ಇದನ್ನು ನಿಮ್ಮ ಯೆಜಮಾನರಿಗೆ ಕೊಟ್ಟುಬಾರೆಂದು ಕಳುಹಿಸಿದಳು. ಆ ಕನ್ಯಾಮಣಿಯು ಮನೋಹರವಾಗಿ ಅಲಂಕರಿಕೊಂಡು, ಆ ಕೋಮಲವಾದ ತನ್ನ ಕೈಗಳಲ್ಲಿ ಆ ಪಾತ್ರೆಯನ್ನು ಹಿಡಿದುಕೊಂಡುಬಂದು, ಅದನ್ನು ತೆಗೆದುಕೊಳ್ಳಬೇಕೆಂದು ಬೇಡಿಕೊಳ್ಳುವಳು. ಆಗ ನಾನು ಮೌನದಿಂದ ಸುಮ್ಮನಿರುವಂತೆ ನಟಿಸು ವೆನು. ಈತೆರದಿಂದ ಆಕೆ ಬಹು ಬೇಡಿಕೊಂಡಬಳಿಕ, ನನಗೆ ಕೋಪ ಉಂಟಾಗಿ ನಾನು ಅವಳನ್ನು ಕೆನ್ನೆಯಮೇಲೆ ಹೊಡೆದು, ಕೋಪದಿಂದ ಕಾಲಿನಿಂದ ಹೀಗೆ ಒದೆಯುವೆನೆಂದು, ನಿಜವಾಗಿಯೂ ತಾನು ತನ್ನಹೆಂಡತಿ ಯಬಳಿಯಲ್ಲಿದ್ದು ಮಾತನಾಡುತ್ತ ಕೋಪವನ್ನು ತೀರಿಸಿಕೊಳ್ಳುವಂತೆ, ಕಾಲಿನಿಂದ ಒದೆಯಲು ಆ ಪಿಂಗಾಣಿಯೆಸಾಮಾನುಗಳ ಗೂಡೆಗೆ ಕಾಲುತಗಲಿ, ಅದರಪೆಟ್ಟಿಗೆ ಸಾಮಾನುಗಳೆಲ್ಲವೂ, ಚೂರುಚೂರಾಗಿಹೋದವು. ಇದೆಲ್ಲ ವನ್ನೂನೋಡುತ್ತಿದ್ದ ನೆರೆಯವನಾದ ದರ್ಜಿಯವನು, ಫಕಫಕನೆನಗುತ್ತಾ ಎಲಾ ! ಕಠಿನಾತ್ಮನಾದ ನೀಚನೇ ! ಅಷ್ಟೊಂದು ಸೌಂದರ್ಯವತಿಯಾದ,

ಮಂತ್ರಿಯೆಮಗಳು ವಿನಯಪೂರ್ವಕವಾಗಿ, ನಿನ್ನನ್ನು ಬೇಡಿಕೊಂಡರೂ ನೀನು ಲಕ್ಷ್ಯವಾಡದೆ ಆಕೆಯನ್ನು ಹೊಡೆದು ಓಡಿಸಬಹುದೆ? ನಾನು ಮಾತ್ರ ನಿನ್ನ ಮಾವನಾದ ಮಂತ್ರಿಯಾಗಿದ್ದರೆ, ನಿನಗೆ ಒಂದುನೂರು ಕೊರಡೆಯೆಟ್ಟುಗಳನ್ನು ಹಾಕಿಸಿ, ನಿನ್ನ ದುರ್ಮಾರ್ಗವನ್ನು ಬಿಡಿಸುತ್ತಿದ್ದೆನೆಂದು ಹೇಳಲು, ನನ್ನ ಅಣ್ಣನು ಸ್ವಲ್ಪ ತಿಳುವಳಿಕೆಯುಳ್ಳವನಾಗಿ, ತನ್ನ ಸೇವಾನುಗಳು ಹಾಳಾದವೆಂದು ಗಟ್ಟಿಯಾಗಿ ಅಳತೊಡಗಿದನು. ಆದಿನ ಶುಕ್ರವಾರವಾದುದರಿಂದ, ಜಪಮಾಡಲು ಮಸೀದಿಗೆ ಹೋಗುತ್ತಿದ್ದ ಜನರೆಲ್ಲರೂ ಬಂದು, ಗುಂಪುಕೂಡಿ, ಏನೆಂದು ವಿಚಾರಿಸಿ, ದರ್ಜಿಯವನ ಮೂಲಕವಾಗಿ ನಡೆದ ಸಂಗತಿಯೆನ್ನು ತಿಳಿದು, ಕೆಲವುಕಾಲ ಸ್ತಬ್ಧರಾಗಿದ್ದು, ಆತನ ಅವಿವೇಕವನ್ನು ಕುರಿತು, ಹಾಸ್ಯಮಾಡಿ ನಗುತ್ತಾ ಹೊರಟುಹೋದರು. ಇನ್ನುಕೆಲವರು, ಆತನ ಮನೋವ್ಯಾಪಾರವನ್ನು ಕುರಿತು, ಹಿಯ್ಯಾಳಿಸುತ್ತ ಅಲ್ಲಿನಿಲ್ಲದೆ ತಂತಮ್ಮ ಕಾರ್ಯಗಳಿಗೆ ಹೊರಟು ಹೋದರು. ಹೀಗಿರುವಲ್ಲಿ ಒಬ್ಬಾಬ್ಬನೊಬ್ಬ ಧೊರೆಸಾನಿಯು ಕುದುರೆಯನ್ನುಹತ್ತಿ, ತನ್ನಹಿಂದೆ ಇಬ್ಬಬ್ಬರು, ನಪುಂಸಕರನ್ನು ಕರೆದುಕೊಂಡು ಬರುತ್ತಾ, ನನ್ನ ಅಣ್ಣನು ಅಳುತ್ತಿರುವ ಧ್ವನಿಯನ್ನು ಕೇಳಿ, ಆತನ ಬಳಿಗೆಬಂದು, ಅಯ್ಯಾ! ನೀನು ಯಾರು? ಎಲ್ಲಿಂದ ಬಂದೆ? ಏತಕ್ಕೋಸ್ಕರ ಅಳುತ್ತಿರುವೆ ಎಂದು ಕೇಳಲು, ಹತ್ತಿರದಲ್ಲಿದ್ದವರು, ಆತನಿಗುಂಟಾಗಿ ಇರುವ ವ್ಯಸನಕ್ಕೆ ಕಾರಣವನ್ನು ತಿಳಿಸಲು, ಆಕೆ ಬಹು ದಯಾವಂತಳು ಆದುದರಿಂದ, ಐದುನೂರು ವೊಹರಿಗಳುಳ್ಳ ಒಂದು ಚೀಲವನ್ನು ಆ ಬಡ ಹಿಂಗಾಣಿ ವರ್ತಕನಿಗೆ ಕೊಡಲು, ಆತನು ಬಹುಸಂತೋಷದಿಂದ ಆ ಧೊರೆಸಾನಿಗೆ ನಮಸ್ಕರಿಸಿ, ಅಹಳ ಕೈಗಳನ್ನು ಮುತ್ತಿಟ್ಟುಕೊಂಡನು.

ಆಕೆ ಹೊರಟುಹೋದಮೇಲೆ, ಬಹಳವಾದ ಧನವನ್ನು ಆಯಾಸವಿಲ್ಲದೆ ಹೊಂದಿದುದರಿಂದ, ಆತನು ಅತ್ಯಾನಂದಭರಿತನಾಗಿ ಅಂಗಡಿಯನ್ನು ಮುಚ್ಚಿಕೊಂಡು, ಮನೆಗೆ ಹೊರಟನು. ಬಳಿಕ ಆತನು ಮನೆಯನ್ನು ಸೇರಿ, ತನ್ನ ಅದೃಷ್ಟವನ್ನು ಕುರಿತು, ಚಿಂತಿಸುತ್ತಿರುವಾಗ, ಹೊರಗಡೆ ಬಾಗಿಲು ತಟ್ಟಿದಂತೆ, ಶಬ್ದವಾಯಿತು. ಆತನು ಬಾಗಿಲನ್ನು ತೆರೆಯಬೇಕೆ ಯಾರು ಎಂದು ಗಟ್ಟಿಯಾಗಿ ಕೂಗಿದನು. ಆಗ ಪ್ರತಿಧ್ವನಿಯುಂಟಾದುದು

ರಿಂದ ಸ್ತ್ರೀಯಾಗಿರಬೇಕೆಂದು ಯೋಚಿಸಿ, ಹೊರಗೆಬ್ಬಂದು ನೋಡಿ ನಿಂತು ಕೊಂಡಿರುವ ಸ್ತ್ರೀಯನ್ನು ಕುರಿತು, ಅಮ್ಮಾ ! ನೀನಾರೆಂದು ಕೇಳಲು, ಆಕೆ, ಅಯ್ಯಾ ! ಈದಿನ ಶುಕ್ರವಾರ ಜಪಕಾಲವಾಗಿರುವುದರಿಂದ ನಿನ್ನ ಮನೆಯಲ್ಲಿ ಕೈಕಾಲುಗಳನ್ನು ತೊಳೆದುಕೊಳ್ಳುವದಕ್ಕಾಗಿ, ಒಂದುತೊಟ್ಟು ನೀರು ಕೊಡಿಸಿದರೆ, ನಾನು ಜಪವನ್ನು ಪೂರೈಸಿಕೊಂಡು, ಮುಂದೆ ಪ್ರಯಾಣಮಾಡುವೆನೆಂದು, ಹೇಳಿದಳು. ಆ ಮಾತನ್ನು ಕೇಳಿ, ನನ್ನ ಅಣ್ಣನು ಈ ಋಜುಭಕ್ತಿವಂತಳಾದ, ಮುದುಕಿಯೆಂದಾಕೆಯನ್ನು ಮನೆಗೆ ಕರೆತಂದು, ನೀರನ್ನು ಕೊಟ್ಟನು. ಬಳಿಕ ಆಕೆ ಕೈಕಾಲುಗಳನ್ನು ತೊಳೆದು ಕೊಳ್ಳುವುದಕ್ಕೆ, ಹೋದಮೇಲೆ, ಹಣವನ್ನು ಒಂದು ಚೀಲದಲ್ಲಿ ಕಟ್ಟಹಾಕಿ ಯೋಚಿಸುತ್ತಾ ಕುಳಿತಿದ್ದನು. ಆ ಮುದುಕಿಯು, ಕೈಕಾಲುಗಳನ್ನು ತೊಳೆದುಕೊಂಡುಬಂದು, ಜಪವನ್ನು ಮಾಡುವಳಂತೆ ನಟಿಸಿ, ನನ್ನ ಅಣ್ಣನನ್ನುನೋಡಿ ನಿನ್ನೈಶ್ವರ್ಯವು ವೃದ್ಧಿಯಾಗಲೆಂದು ಹರಿಸಿದಳು. ಇಂತೆಂದು ಹೇಳಿ ಷಹರಜೌದಿಯು ಬಿಳಗಾದಕೂಡಲೆ, ಕಥೆಯನ್ನುನಿಲ್ಲಿಸಿ, ಮರುದಿನ ಬೆಳಗಿನಜಾವದಲ್ಲಿ, ಹೇಳಲಾರಂಭಿಸಿದಳು.

೧೭೭ ನೆಯ ರಾತ್ರಿ ಕಥೆ.

ಷಹರಜೌದಿಯು ಸುಲ್ತಾನರನ್ನು ಕುರಿತು, ಮುತ್ತಿಂತೆಂದಳು :— ಆ ಮುದುಕಿಯು ಉತ್ತಮಪುರುಷಹೀನಳಾಗಿ, ನನ್ನ ಅಣ್ಣನನ್ನುಕುರಿತು ನಿನ್ನ ಭಾಗ್ಯವು ವೃದ್ಧಿಯಾಗಲೆಂದು ಹೇಳಿದುದರಿಂದ, ಅಲುನಾಸ್ಕರು ಅವಳು ಬಿಕ್ಷಗಾರಳೆಂದು ತಿಳಿದು, ಎರಡು ಮೊಹರಿಗಳನ್ನು ಕೊಡುವುದಕ್ಕೆ ಅತುರಪಡಲು, ಆಕೆ ತನ್ನಮುಖವನ್ನು ತಿರುಗಿಸಿಕೊಂಡು, ಅಯ್ಯಾ ! ವೇವರೇ ! ನಾನು ಮನೆಮನೆಗಳನ್ನು ಸುತ್ತಿ ಭಿಕ್ಷವೆತ್ತತಕ್ಕವಳಲ್ಲ. ಸುಂದರೀಮಣಿಯಾಗಿ ಅವರಿಬಿತ ಭಾಗ್ಯಶಾಲಿನಿಯಾದ, ಮಹಾರಾಣಿಯೆ ಬಳಿಯ ದಾದಿಯೆಂದಾಗಿರುವುದರಿಂದ, ನಿನ್ನ ಹಣವೆಂದಿಗೂ ನನಗೆ ಬೇಡವೆಂದು ಹೇಳಿದಳು. ಆ ಮುದುಕಿ ನನ್ನ ಅಣ್ಣನಬಳಿಯಲ್ಲಿ ಹೆಚ್ಚಾಗಿ ಹಣವನ್ನು ತೆಗೆದುಕೊಳ್ಳಬೇಕೆಂದು, ಮೊದಲು ಬಲ್ಲೆನೆಂದು ಹೇಳಿದಳು. ಆಕೆಯ ಕಪಟವನ್ನು ತಿಳಿಯದವನಾದ, ನನ್ನ ಅಣ್ಣನು, ಅವಳನ್ನುನೋಡಿ, ನನ್ನನ್ನು ಆ ಧೂರೆಸಾನಿಯಬಳಿಗ್ಕೆ ಕರೆದುಕೊಂಡು ಹೋಗುವೆಯಾ !

ಎನಲು, ನಿನ್ನಬಳಿ ಇರುವ ಹಣವನ್ನು ತೆಗೆದುಕೊಂಡು, ನನ್ನಸಂಗಡ ಬರುವುದಾದರೆ, ನಾನು ಆ ಧೊರೆಸಾನಿಯು ನಿನ್ನನ್ನು ವರಿಸುವಂತೆ ಮಾಡುವೆನೆಂದು ಹೇಳಲು, ಅಲುನಾಸ್ಕರನು ಅತ್ಯಾನಂದಭರಿತನಾಗಿ, ಆ ಮುದುಕಿಯಹಿಂದೆ ಹೊರಟನು. ಆಕೆ ಈತನನ್ನು ಕರೆದುಕೊಂಡು, ಸಂದಿಗೊಂದಿಗಳಲ್ಲಿ ತಿರುಗುತಾ, ಒಂದಾನೊಂದು ದೊಡ್ಡ ಮನೆಯಬಳಿಗೆ ಬಂದು, ಬಾಗಿಲು ತಟ್ಟಲು, ಕೊಡಲೆ ಗ್ರೀಕ್‌ದೇಶದ ಗುಲಾಮನೊಬ್ಬನು ಒಂದು ಬಾಗಿಲನ್ನು ತೆರೆದನು. ನಂತರ ನನ್ನ ಅಣ್ಣನು ಆ ಮುದುಕಿಯಸಂಗಡ ಮನೆಯನ್ನು ಹೊಕ್ಕು, ಒಳಹಜ್ಜಾರದ ಅಂದವನ್ನು ನೋಡಿ, ತಾನು ಅತ್ಯಾನಂದಭರಿತನಾಗಿ, ಹುಟ್ಟಿದಾಗಿನಿಂದಲೂ, ನೋಡದಿರುವಂತಹ ಆಶ್ಚರ್ಯವಾದ ವಸ್ತುಗಳನ್ನು ನೋಡುತ್ತ, ಕಾಲವನ್ನುಕಳೆಯುತ್ತಿದ್ದು, ಮುಂದುಗಡೆಯಿರುವ ಮನೆಯಲ್ಲಿ ಹೋಗಿ ಕುಳಿತುಕೊಂಡು, ಇಂತಹ ಮನೆಯಲ್ಲಿ ವಾಸಮಾಡುವವರು ರಾಜಸ್ತ್ರೀಯರಾಗಿರಬೇಕೆಂದು ಯೋಚಿಸುತ್ತಿದ್ದನು.

ಅಷ್ಟರಲ್ಲಿ ಆ ಮನೆಯ ಧೊರೆಸಾನಿ ಬರುತ್ತಿರುವುದನ್ನು ಕಂಡು ತಾನು ಮರ್ಯಾದಾರ್ಥವಾಗಿ ಎದ್ದು ನಿಂತುಕೊಂಡು ಮುಜರೆ ಮಾಡಲು, ಆಕೆ ತನ್ನಪಕ್ಕದಲ್ಲಿರುವ ಮಂಚದಮೇಲೆ ಕೂತುಕೊಳ್ಳುವಂತೆಹೇಳಿ, ಆತನ ಪಕ್ಕದಲ್ಲಿ ತಾನು ಕುಳಿತುಕೊಂಡು, ನಿನ್ನನ್ನು ನೋಡುವುದಕ್ಕೆ ನನಗೆ ಬಹಳ ಸಂತೋಷವಾಗುವುದೆಂದುಹೇಳಿ, ಸ್ವಲ್ಪಹೊತ್ತು ವಿನೋದವಾಗಿ ಮಾತನಾಡುತ್ತಿದ್ದು, ಇಲ್ಲಿ ಬಾ! ಈ ಸ್ಥಲದಲ್ಲಿ ನಮಗೆ ಸುಖ ಉಂಟಾಗದೆಂದುಹೇಳುತಾ, ಕೈಹಿಡಿದು ಕೊತಡಿಗೆ ಕರೆದುಕೊಂಡುಹೋಗಿ, ಅಲ್ಲಿ ಸ್ವಲ್ಪಹೊತ್ತು ವಿನೋದವಾಗಿ ಮಾತನಾಡುತ್ತಿದ್ದು, ನಂತರ ಸ್ವಲ್ಪಹೊತ್ತಿಗೆ ಬರುವೆನೆಂದುಹೇಳಿ, ಹೊರಟುಹೋದವಳು ಬಾರಲೇಯಿಲ್ಲ. ಆಗ ಬಹು ಕ್ರೂರನಾದ ಒಬ್ಬಾಬ್ಬನೊಬ್ಬ ಕಾಫರನು ಕೈಯ್ಯಲ್ಲಿ ಕತ್ತಿಯನ್ನು ಹಿಡಿದುಕೊಂಡು, ನನ್ನ ಅಣ್ಣನಬಳಿಗೆ ಬಂದು, ನೀನು ಇಲ್ಲಿಗೆ ಹೇಗೆಬಂದೆ? ಏನುಮಾಡುತ್ತಿರುವೆ? ಎಂದು ಕೇಳಿದನು. ಅದಕ್ಕೆ ಆತನು ಯಾವ ಮಾತನ್ನು ಆಡದೆ ಸುಮ್ಮನಿದ್ದುದರಿಂದ, ಆತನಬಳಿಯಲ್ಲಿದ್ದ ಐದುನೂರು ನೊಹರಿಗಳನ್ನು ಕಿತ್ತುಕೊಂಡು ತನ್ನ ಕೈಗತ್ತಿಯಿಂದ ಬಲವಾದ ಗಾಯವನ್ನುಮಾಡಿದನು. ಆಗ ನನ್ನ ಅಣ್ಣನು ಪ್ರಜ್ಞೆತಪ್ಪಿ ಬಿದ್ದುಹೋಗಿ

ಪುನಹ ಮೂರ್ಛೆತಿಳಿದೆದ್ದು ಸತ್ಯವನಂತೆ ಬಿದ್ದಿರುವುದನ್ನುಕಂಡು, ಆಕಾಭರನು ಉಪ್ಪಿನಪುಡಿಯೆನ್ನು ತಂದು ಗಾಯೆಗಳಿಗೆ ಹಾಕಿದನು. ನಂತರ ನನ್ನ ಅಣ್ಣನನ್ನು ಮೊದಲು ಕರೆದುಕೊಂಡುಹೋದ ಮುದುಕಿ ಅಲ್ಲಿಗೆ ಬಂದು ಆತನನ್ನುನೋಡಿ, ಕಾಲುಹಿಡಿದು ಅದಕ್ಕಿಂತಲೂ ಮೊದಲು ತಾವು ಕೊಂದುಹಾಕಿದ್ದ, ಜನರನ್ನು ಹಾಕುವ ಒಂದು ಗುಹೆಯೆಲ್ಲಿಹಾಕಿ ಹೊರ ಟುಹೋದಳು. ನಂತರ ಆತನು ಆ ಗುಹೆಯಲ್ಲಿ ಉಪ್ಪಿನ ಆಧಾರದಿಂದ, ಎರಡುದಿನಗಳವರಿಗೂ, ವಾಸಮಾಡಿಕೊಂಡು, ಕೈಕಾಲುಗಳಿಗೆ ಸ್ವಲ್ಪ ಬಲ ಬರುವವರಿಗೂ ಸುಮ್ಮನಿದ್ದು, ಸ್ವಲ್ಪ ತಾಣವು ಕೂಡಿಕೊಂಡವೇಲೆ, ಬೆಳಗಿನ ಜಾವದಲ್ಲಿ ಆ ಗುಹೆಯ ಬಾಗಿಲನ್ನು ತೆರೆದುಕೊಂಡು, ನನ್ನನ್ನು ಕರೆದುತಂದ ಮುದುಕಿಯು ಮರಳಿ ಮತ್ತೊಬ್ಬನನ್ನು ಹುಡುಕುವುದಕ್ಕೆ ಹೋಗುವವೇಳೆಗೆ ಸರಿಯಾಗಿ ಹೊರಗೆ ಬಂದನು. ಬಳಿಕ ತನ್ನಬಳಿಗೆ ಬಂದು ತನ್ನ ವರ್ತಮಾನವನ್ನೆಲ್ಲ ಹೇಳಿದನು. ನಾನು ಆತನ ಗಾಯೆಗಳಿಗೆ ಔಷಧವನ್ನುಹಾಕಿ, ಉಪಚರಿಸಿ, ಆತನಿಗೆ ಗುಣವಾದಬಳಿಕ ವೋಸದಿಂದ ಪ್ರಾಣಹಾನಿಯೆನ್ನು ಮಾಡಲು, ಪ್ರಯತ್ನಮಾಡಿದ ಆ ದೊಹಿಯಾದ ಮುದುಕಿಗೆ, ತಕ್ಕ ಶಿಕ್ಷೆಯೆನ್ನು ಮಾಡಬೇಕೆಂದು ಐದುನೂರು ಮೊಹರಿ ಗಳನ್ನು ಹಿಡಿಯುವ ಚೀಲದತುಂಬ, ಪಿಂಗಾಣಿಯ ಚೂರುಗಳನ್ನು ತುಂಬಿ, ಇಟ್ಟುಕೊಂಡಿದ್ದೆನು. ಇಂತೆಂದುಹೇಳಿ, ಷಹರಜಾದಿಯು ಕಥೆಯೆನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಹೇಳಲಾರಂಭಿಸಿದಳು.

೧೩೪ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು, ಇಂತೆಂದಳು :—ಬಳಿಕ ನನ್ನಣ್ಣನುಹೇಳಿದ ಆಮುದುಕಿಯಂತೆ ವೇಷಹಾಕಿಕೊಂಡು, ನಡುವಿನಲ್ಲಿ ಆ ಬೋಕಿಗಳ ಚೀಲವನ್ನು ಸಿಕ್ಕಿಸಿ, ಮರೆಯಾಗಿ ಒಂದು ಕತ್ತಿಯೆನ್ನು ತೆಗೆದುಕೊಂಡು, ಆ ಮುದುಕಿಯನ್ನು ಹುಡುಕುತ್ತಾ ತಿರುಗುವಲ್ಲಿ, ಅಂಗಡಿ ಬೀದಿಯಲ್ಲಿ ಆಕೆ ನಿಂತಿರಲು ನೋಡಿ, ಹೆಂಗಸಿನ ಧ್ವನಿಯಲ್ಲಿ ಮಾತನಾಡುತ್ತಾ, ಅಮ್ಮಾ! ನನಗೆ ಸ್ವಲ್ಪಹೊತ್ತಿನವರಿಗೆ ತಾಸಿಂಬ ತಕ್ಕಡಿಯೆನ್ನು ಕೊಡುವೆಯಾ? ನಾನು ಪರ್ಷಿಯಾದೇಶದಿಂದ ಈಗತಾನೆ ಬಂದ ವರ್ತಕನಾಗಿರುವೆನು. ನನ್ನಬಳಿಯಲ್ಲಿ ಐದುಸಾವಿರ ಮೊಹರಿಗಳಿರುವುದು.

ಅದನ್ನು ತೂಕವಾಡಿಕೊಳ್ಳಬೇಕೆಂದಿರುವೆನೆಂದಳು. ಮುದುಕಿ ಆತನನ್ನು ನೋಡಿ, ಅಮ್ಮಾ ! ನೀನು ಮತ್ತೆಲ್ಲಿಯೂ, ಹೋಗಬೇಡ. ನನ್ನ ಮಗನು ಸರಾಫನಾಗಿರುವನು. ಆತನು ನಿನ್ನ ಹಣವನ್ನು ತೂಕವಾಡಿಕೊಡುವನು. ಹೊತ್ತಾದರೆ ಅಂಗಡಿಗೆ ಹೊರಟುಹೋದಾನೆಂದು ತಾನು ಮೊದಲು ಕರೆದು ಕೊಂಡುಹೋದ ಮನೆಯಬಾಗಿಲಿಗೆಹೋಗಿ, ಕದವನ್ನು ತಟ್ಟಲು, ಗ್ರೀಸು ಗುಲಾಮನುಬಂದು, ಕದವನ್ನು ತೆರೆದನು. ಬಳಿಕ ಆ ಮುದುಕಿಯು ನನ್ನ ಅಣ್ಣನನ್ನು ಮನೆಗೆ ಕರೆದುಕೊಂಡುಹೋಗಿ ಕುಳ್ಳಿರಿಸಿ, ಆ ಕಾಫರನನ್ನು ದುಗನೆಂದುಹೇಳಿ ಕರೆಯುತಂದಳು. ಅತನು ನನ್ನ ಅಣ್ಣನನ್ನು ಮೊದಲು ಕಡಿದುಹಾಕಿದಮನೆಗೆ ಕರೆಮುಕೊಂಡು ತಾನು ಮುಂದೆ ಹೋಗುತ್ತಿರುವಾಗ ನನ್ನ ಅಣ್ಣನು ತನ್ನ ಕತ್ತಿಯನ್ನು ಹಿರಿದು ಮೆಲ್ಲನೆ ಜೊಡೆ ತೋರಿದಂತೆ ಹಿಂದಿನಿಂದ ಅವನಕತ್ತನ್ನು ಕಡಿದುಹಾಕಿದನು.

ನಂತರ ತಲೆಯನ್ನು ಮುಂಡವನ್ನು ತೆಗೆದುಕೊಂಡುಹೋಗಿ, ಹೆಣವನ್ನುಹಾಕುವ ಗುಬಿಯಲ್ಲಿ ಹಾಕಿದನು. ಪದ್ಧತಿಯಮೇರೆಗೆ ಆ ಗುಲಾ ಮನು ತುಪ್ಪಿನತಟ್ಟೆಯನ್ನು ತೆಗೆದುಕೊಂಡುಬರುತ್ತಾ, ಕತ್ತಿಯನ್ನು ಹಿಡಿದುಕೊಂದು ನಿಂತಿರುವ ಹೆಂಗಸನ್ನು ನೋಡಿ, ಭಯದಿಂದ ಓಡಿಹೋಗು ತ್ತಿದ್ದನು. ಆದರೂ, ನನ್ನ ಅಣ್ಣನು ಆತನನ್ನುಬಿಡದೆ ಹಿಡಿದುಕೊಂಡು ಕಡಿದುಹಾಕಿದನು. ನಂತರ ಪದ್ಧತಿಯಮೇರೆ ಮುದುಕಿಯು ಬಂದಳು. ಆಗಲೂ ನನ್ನ ಅಣ್ಣನು ಅವಳನ್ನು ಬಲವಾಗಿ ಹಿಡಿದೆಳೆದು, ಎಲಾ ! ಪಾಪಾತ್ಮಳೇ ! ನೀನು ನನ್ನನ್ನು ಗುರುತುಬಲ್ಲೆಯಾ ! ಎನಲು, ಅಯ್ಯೋ ! ನಾನು ನಿನ್ನನ್ನುನೋಡಿದ ಜ್ಞಾಪಕವಿಲ್ಲವಲ್ಲಾ ! ಎನಲು, ಆಹಾ ! ನೀನು ಶುಕ್ರವಾರದದಿನ ಮಧ್ಯಾಹ್ನ ಯಾವಮನೆಗೆ ಬಂದು ನೀರನ್ನು ತೆಗೆದು ಕೊಂಡು, ಕೈಕಾಲು ತೊಳೆದು ಜಪಮಾಡಿದನಂತರ ನಿನ್ನ ಐಶ್ವರ್ಯವು ವೃದ್ಧಿಯಾಗಲೆಂದು ಹೇಳಿದೆಯೋ ! ಆ ಮನೆಯ ಯಜಮಾನನೆನಲು, ಆ ಹೆಂಗಸು ಹೆದರಿ ಭಯದಿಂದ ನಡುಗುತ್ತಾ, ತನ್ನನ್ನು ಕ್ಷಮಿಸಬೇಕೆಂದು ಬೇಡಿಕೊಂಡಳು. ಆದರೂ ಅಲನಾಸ್ಕರನು ಅವಳನ್ನು ತುಂಡುತುಂಡಾಗಿ ಕತ್ತರಿಸಿಹಾಕಿದನು. ನಂತರ ಆತನು ಆ ಮನೆಯಲ್ಲಿ ಧೂರೆಯಾನಿಹೊರತು, ಮತ್ತಾರು ಇಲ್ಲವೆಂಬುದನ್ನು ತಿಳಿದು, ಅವಳನ್ನು ಹುಡುಕಿಕೊಂಡುಹೋಗಿ

ಒಂದಾನೊಂದು ಕೊಠಡಿಯೆಲ್ಲಿ, ಆಕೆ ಕುಳುತಿರುವುದನ್ನು ನೋಡಿ, ಒಳ ಹೊಗಲು, ಆಕೆ ದಿಗ್ಗನೆ ಎದ್ದು ದಂಡಪ್ರಣಾಮವನಂಗೆಯ್ದ್ದಿ, ಅಯ್ಯಾ! ನನ್ನ ಪ್ರಾಣವನ್ನು ಉಳುಹೆಂದು ಬೇಡಿಕೊಳಲು, ಆಹಾ! ನನ್ನ ಮುದ್ದಿನ ಮುದ್ದೆಯೆ! ನೀನು ಈಗ ನಾನು ಹಗೆತೀರಿಸಿಕೊಂಡ, ದುರ್ಮಾರ್ಗರ, ಸಹವಾಸಕ್ಕೆ ಹೇಗೆ ಸಿಕ್ಕಿದೆ. ಇದು ನಿನಗೆ ಯೋಗ್ಯವೇ! ಎನಲು, ಆಹಾ! ಒಬ್ಬಾಬ್ಬನೊಬ್ಬ ಘನವಂತನಾದ ವರ್ತಕನಿಗೆ ಹೆಂಡತಿಯಾಗಿದ್ದ ನನ್ನನ್ನು ಈ ಪಾಪಾತ್ಮಳಾದ ಮುದುಕಿಯು ತನ್ನ ಮನೆಯಲ್ಲಿ ನಡೆಯುವ ಮದುವೆಗೆ ದಯವಾಡಬೇಕೆಂದು, ಬಹು ನಮ್ರತೆಯುಳ್ಳವಳಾಗಿ, ಬೇಡಿಕೊಳ್ಳಲು, ನಾನು ಅದರಂತೆ ಐದುಸಾವಿರ ವೊಹರಿಗಳನ್ನು ತೆಗೆದುಕೊಂಡು, ಉತ್ತಮವಾದ ವಸ್ತ್ರಗಳನ್ನು ಧರಿಸಿಕೊಂಡುಬರಲು, ನನ್ನನ್ನು ಇಲ್ಲಿ ಸೆರೆಹಾಕಿ ಗುಲಾಮನಿಗೆ ನನ್ನನ್ನು ಸ್ವಾಧೀನಪಡಿಸಿದ್ದಳು.

ನಾನು ಮೂರುಸಂವತ್ಸರಗಳಿಂದಲೂ ಮಹಾ ದುಃಖವನ್ನು ಅನುಭವಿಸುತ್ತ ಈ ನೀಚನಾದ ಗುಲಾಮನಿಗೆ ವಶಳಾಗಿದ್ದೆನು. ಈದಿನ ಆತನು ಅಡಗಿಹೋದುದರಿಂದ ನನಿಗೆ ಸಂತೋಷವಾಯಿತು. ಆತನು ಸಂಪಾದಿಸಿದ ಹಣವು ಅಧಿಕವಾಗಿರುವುದು. ಅದನ್ನು ನೀನು ತೆಗೆದುಕೊಂಡು ಹೋಗ ಬಹುದೆಂದು, ಧನಕೋಶವನ್ನು ತೋರಿಸಿದಳು. ನನ್ನ ಅಣ್ಣನು ಅದನ್ನು ನೋಡಿ, ಆಶ್ಚರ್ಯಪಡುತ್ತಿರುವಾಗ, ಆ ಧೊರೆಸಾನಿ ಈ ಧನವನ್ನು ನೀವು ತೆಗೆದುಕೊಂಡು ಹೋಗುವುದಕ್ಕಾಗಿ, ಆಳುಗಳನ್ನು ಕರೆದುಕೊಂಡು ಬನ್ನಿರೆಂದು ನುಡಿಯಲು, ನನ್ನ ಅಣ್ಣನು ಹೊರಗೆಬಂದು, ಆಳುಗಳನ್ನು ಕರೆದುಕೊಂಡುಹೋಗಿ ನೋಡುವಲ್ಲಿ, ಮನೆಯೆಲ್ಲಿ ಧನವಾಗಲಿ, ಆ ಧೊರೆಸಾನಿಯಾಗಲಿ, ಇರಲಿಲ್ಲ. ಅಷ್ಟುಜಾಗ್ರತೆಯಾಗಿ ಬಹು ಎಚ್ಚರಿಕೆಯಿಂದ, ಅವಳು ಮಾಯೆಯಾದಳು. ಆದರೂ ನನ್ನ ಅಣ್ಣನು ಅಲ್ಲಿರುವ ಐದು ಸಹಸ್ರ ವೊಹರಿಗಳ ಬಿಲೆ ಬಾಳುವ ಸಾಮಾನುಗಳನ್ನು ತೆಗೆದುಕೊಂಡು ಮನೆಗೆಬಂದು ಸುಖವಾಗಿ ನಿದ್ರಿಸಿದನು. ಆ ಮನೆಯ ನೆರೆಹೊರೆಯವರು, ಇದನ್ನೆಲ್ಲಾನೋಡಿ ನ್ಯಾಯಾಧೀಶನಲ್ಲಿ ದೂರಿಕೊಳಲು, ನ್ಯಾಯಾಧೀಶನು ನನ್ನ ಅಣ್ಣನನ್ನು ಹಿಡಿದುತರುವಂತೆ, ತನ್ನ ಬಂಟರನನ್ನು ಕಳುಹಿಸಿದನು. ಅವರು ಬೆಳಗ್ಗೆ ಆತನು ಏಳುವವೇಳೆಗೆ ಸರಿಯಾಗಿ ಬಂದು,

ಆತನನ್ನು ಬಿಡಿದುಕೊಂಡರು. ನನ್ನ ಅಣ್ಣನು ಹಣವನ್ನು ಕೊಡುತ್ತೇನೆ ನನ್ನನ್ನು ಬಿಟ್ಟುಬಿಡಿ ಎಂದು ಹೇಳಿದರೂ ಕೇಳದೆ ಆತನನ್ನು ಹಿಡಿದು ಕೊಂಡು ಹೋಗುತ್ತಿರುವಾಗ, ನನ್ನ ಅಣ್ಣನ ಸ್ನೇಹಿತರು, ಅವರನ್ನು ಬಹಳವಿಧವಾಗಿ ಬೇಡಿಕೊಂಡರೂ, ಸಾರ್ಥಕವಾಗಲಿಲ್ಲ. ಅವರು ನನ್ನ ಅಗ್ರಜನನ್ನು ನ್ಯಾಯಾಧಿಪತಿಯೆಬಳಿಗೆ ಕರೆದುಕೊಂಡುಹೋಗಿ ನಿಲ್ಲಿಸಿ ದರು. ಇಂತೆಂದು ಹೇಳಿ, ಷಹರಜಾದಿಯು ಬೆಳಗಾದಕೂಡಲೆ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನಜಾವದಲ್ಲಿ ಹೇಳಲಾರಂಭಿಸಿದಳು.

೧೭೯ ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನರನ್ನುಕುರಿತು, ಹೀಗೆಂದು ನುಡಿಯ ಲಾರಂಭಿಸಿದಳು. ನ್ಯಾಯಾಧಿಪತಿಯು ನನ್ನ ಅಣ್ಣನನ್ನು ನೋಡಿ, ಅಯ್ಯಾ! ನೀನು ನಿನ್ನೆರಾತ್ರಿ ಮನೆಗೆ ತೆಗೆದುಕೊಂಡುಹೋದ ಸಾವಮಾನು ಗಳೆಲ್ಲಿಯವು? ನಿನಗೆ ಹೇಗೆ ಬಂದವೆಂದು ಕೇಳಲು, ಅಲನಾಸ್ಕರನು ಸಾವಿಮಾ! ನಾನು ಖಂಡಿತವಾಗಿಯೂ, ನಡೆದ ಸಂಗತಿಯೆನ್ನು ನಿಜವಾಗಿ ತಮ್ಮ ಸನ್ನಿಧಿಯಲ್ಲಿ ಮರೆಮಾಜದೆ ಹೇಳುವೆನು. ತಾವು ನನ್ನನ್ನು ಮನ್ನಿಸು ವಂತೆ ಆಜ್ಞೆ ಮಾಡಬೇಕೆಂದು ಬೇಡಿಕೊಳಲು, ನ್ಯಾಯಾಧಿಪತಿಯು. ಅದಕ್ಕೆ ಸಮ್ಮತಿಸಿದುದರಿಂದ, ಅಲನಾಸ್ಕರನು ಆ ಮುದುಕಿ ತನ್ನ ಮನೆಗೆ ಬಂದು, ಜಪವನ್ನು ಮಾಡಿ ಹರಸಿದುದು ಮೊದಲೊಂಡು, ತಾನು ಗುಲಾಮು ರನ್ನು ಕೊಂದಬಳಿಕ ಧೊರೆಸಾನಿಯೂ ಧನರಾಶಿಯೂ, ಮಾಯವಾದುದನ್ನು ವಿಸ್ತಾರವಾಗಿ ತಪ್ಪದಂತೆ ನಿಜವಾಗಿ ಹೇಳಲು, ನ್ಯಾಯಾಧೀಶನು ಸ್ವಲ್ಪ ಹೊತ್ತು ಸುಮ್ಮನಿರುವುದನುನೋಡಿ, ಅಯ್ಯಾ! ನಾನು ಹಾಳುಮಾಡಿ ಕೊಂಡ ಐದುಸಾವಿರ ಮೊಹರಿಗಳನ್ನೂ, ನನಗೆ ಸಂದಾಯವಾಗಲಿಲ್ಲವಾದು ದರಿಂದ, ತಾವು ಅದನ್ನು ಬರಮಾಡಿಕೊಡಬೇಕೆಂದು ಬೇಡಿದನು. ನ್ಯಾಯಾಧಿ ಪತಿಯು ಆತನಿಗೆ ಉತ್ತರವನ್ನು ಹೇಳದೆ ತನ್ನ ಬಂಟರಿಂದ ಆ ಸಾವಮಾನು ಗಳನ್ನು ತರಿಸಿ, ರಾಜನ ಉಗ್ರಾಣದಲ್ಲಿ ಹಾಕಿಸಿದನಂತರ ನನ್ನಣ್ಣನನ್ನು ತನ್ನಪಟ್ಟಣದಿಂದ ಹೊರಹೊರಡಿಸಿದನು. ಅಲ್ಲದೆ ಪುನಹ ಇಲ್ಲಿಗೆ ಬರ ಕೂಡದೆಂದುಆಜ್ಞೆ ಮಾಡಿದನು. ಬಳಿಕ ಅಲನಾಸ್ಕರನು ಪ್ರತ್ಯುತ್ತರವನ್ನು

ಹೇಳದೆ ಅಲ್ಲಿಂದ ಹೊರಟುಹೋಗುತ್ತಿರುವಾಗ ಒಂದಾನೊಂದು ರಾತ್ರಿ ಕಳ್ಳರು ಆತನನ್ನು ಹೊಡೆದು ಬಟ್ಟೆಗಳನ್ನು ಕಿತ್ತುಕೊಂಡುಹೋದರೆಂಬ ವರ್ತಮಾನವನ್ನು ಕೇಳಿ, ನಾನುಹೋಗಿ ಗೋಪ್ಯವಾಗಿ ಆತನನ್ನು ಮನೆಗೆ ಕರೆದುಕೊಂಡು ಬಂದು, ಕೈಲಾದ ಸಹಾಯವನ್ನು ಮಾಡುತ್ತಿದ್ದೆನು.

ಕ್ಷೌರಿಕನ ಅರನೆಯ ತಮ್ಮನ ಕಥೆ.

ಷಹರಜಾದಿಯು ಸುಲ್ತಾನನ್ನು ಕುರಿತು, ಮರಳಿ ಆ ಕ್ಷೌರಿಕ ನಿಂತೆಂದನೆಂದು ನುಡಿಯತೊಡಗಿದಳು. ನನ್ನ ಅರನೆಯ ಅಣ್ಣನಾದ ಷಾಕುಬಾಕು, ಮೊದಲು ತನ್ನಪಾಲಿಗೆ ಬಂದ ಧನವನ್ನು ಜೋಕೆಯಿಂದ ವೃದ್ಧಿಪಡಿಸುತ್ತಿದ್ದರೂ, ಕೊನೆಗೆ ಅದೃಷ್ಟಹೀನನಾಗಿ ಅದನ್ನು ಹಾಳು ಮಾಡಿಕೊಂಡು, ದರಿದ್ರನಾಗಿ ಬಹು ಉಪಾಯದಿಂದ ದೊಡ್ಡ ಮನುಷ್ಯರ ಮನೆಯ ಆಳುಗಳಸಂಗಡಲೂ, ಪರಿಚಾರಕರ ಜೊತೆಯಲ್ಲಿಯೂ, ಸ್ನೇಹ ವನ್ನು ಬೆಳಸಿ, ಅವರಮೂಲಕ ಯಜಮಾನನನ್ನು ತೃಪ್ತಿಪಡಿಸಿ, ಆತನಿಂದ ಬಿಕ್ಷವನ್ನೆತ್ತಿಕೊಂಡುಬಂದು, ಜೀವನಮಾಡುತ್ತಾ ಇದ್ದನು. ಹೀಗಿರು ವಲ್ಲಿ ಷಾಕುಬಾಕನು ಒಂದಾನೊಂದುದಿನ, ಬೀದಿಯೆಲ್ಲಿ ಹೋಗುತ್ತಾ ಒಂದಾನೊಂದು ದೊಡ್ಡ ಮನೆಯ ಹಜಾರದಲ್ಲಿ, ಬಹುಮಂದಿಸೇರಿ, ಕೆಲಸ ಮಾಡುತ್ತಿರುವದನ್ನು ಕಂಡು, ಅಲ್ಲಿಗೆಹೋಗಿ ಒಬ್ಬ ಮನುಷ್ಯನನ್ನು ಕುರಿತು, ಅಯ್ಯಾ ! ಇದು ಯಾರಮನೆಯೆಂದು ಕೇಳಿದನು. ಅದಕ್ಕೆ ಆತನು, ಅಯ್ಯಾ ! ನೀನು ಈ ಊರಿಗೆ ಹೊಸಬನೋ ! ಈಗತಾನೆ, ಈ ಊರಿಗೆ ಬಂದಂತೆ ತೋರುವುದು. ಈ ಊರಿನಲ್ಲಿ ವಾಸಮಾಡುತ್ತಿರು ವರು ಯಾರುತಾನೆ ಈ ಮನೆಯನ್ನು ನೋಡಿದಕೂಡಲೆ, ಇದು ದೊಡ್ಡ ಸೈಯ್ಯದನ ಮನೆಯೆಂದು ತಿಳಿದುಕೊಳ್ಳಲಾರರು ! ಹೀಗಿರುವಲ್ಲಿ ನೀನು ನನ್ನನ್ನು ಕೇಳುತ್ತಿರುವೆಯಲಾ ! ಎನಲು, ದೊಡ್ಡ ಸೈಯ್ಯದನು, ಬಹು ಧರ್ಮಿಷ್ಟರೆಂದು ಕೇಳಿದ್ದುದರಿಂದ ಆತನನ್ನುಕುರಿತು, ಅಯ್ಯಾ ! ನನಗೇನಾದರೂ ಧರ್ಮವನ್ನುಕೊಡಿಸುವೆಯಾ ಎಂದು ಕೇಳಲು, ಅಯ್ಯಾ ! ನೀನು ಒಳಗೆಹೋಗಿ ಯಜಮಾನರನ್ನುಕಂಡು ಬೇಡಿಕೊಂಡುದೇ ಆದರೆ ಅವರು ನಿನ್ನನ್ನು ಸಂತೋಷಪಡಿಸುವರೆಂದು ಹೇಳಿದನು. ಆಗ ಷಾಕು ಬಾಕನು ತನಗೆ ಮರ್ಯಾದೆಯಿಂದ ಉತ್ತರವನ್ನುಹೇಳಿದ ಮನುಷ್ಯನನ್ನ

ವಂದಿಸಿ, ಅಲ್ಲಿಂದ ಸೈಯ್ಯದನ ಅಂತಃಪುರಕ್ಕೆ ಹೋಗಬೇಕೆಂದು ಹೊರಟು ಮುಂದಿನ ಹಜಾರಕ್ಕೆ ಹೋಗಲು ಆ ಚಕ್ಚೌಕ್ಯವಾದ ಹಜಾರವೂ, ನಾನಾ ವಿಧವಾದ ಪುಷ್ಪಗಂಧವನ್ನು ಬೀರುತ್ತಿರುವ ಹೂಗಿಡಗಳೂ, ಶೃಂಗಾರ ಮಯವಾಗಿ ಕೆಂಗಲ್ಲಿನಿಂದಲೂ, ಅಮೃತಶಿಲೆಯಿಂದಲೂ, ನಿರ್ಮಿಸಿರುವ ಬೊಂಬೆಗಳಿಂದಲೂ. ಆ ಸ್ಥಲದಲ್ಲಿ ಸಂಚರಿಸುವ ಗಾಳಿಯನ್ನು ಶೀತಲವಾಗಿ ಮಾಡುವಂತ ನೀರನ್ನು ಚೆಲ್ಲುತ್ತಿರುವ ಜಲಯಂತ್ರದಿಂದಲೂ, ಹೊಳೆಯುತ್ತಿರುವುದು. ಅಲ್ಲಿನ ಸೌಭಾಗ್ಯವನ್ನು ನೋಡಿ, ಬಹು ಆಶ್ಚರ್ಯಯುಕ್ತನಾಗಿ ಪಕ್ಕದಲ್ಲಿ ಮನೆಯೊಳಕ್ಕೆ ಹೋಗಿ ನೋಡಲು ತಂಪಾದ ಚಂದ್ರಕಾಂತ ಶಿಲೆಯಿಂದ ಕಟ್ಟಿಸಿರುವ ಆ ಗೃಹದಲ್ಲಿ ಬಿಸಿಲು ಬೀಳದಂತೆ ತೆರೆಯನ್ನು ಹಾಕಿ, ಶೈತ್ಯ ಸೌರಭ್ಯ ಮಾಂದ್ಯಯುಕ್ತವಾದ ತಂಗಾಳಿಯು ಬೀಸುವುದಕ್ಕೆ ಅನುಕೂಲವಾಗಿರುವಂತೆ ಕಿಟಿಕಿಗಳ ಬಾಗಿಲನ್ನು ತೆರೆದು, ಕುರ್ಚಿಗಳನ್ನು ಸೋಫಾಗಳನ್ನು ಹಾಕಿ ವಿಧವಿಧವಾದ ಸುವರ್ಣ ರತ್ನಶಿಲಾಮಯಗಳಾದ ಪುತ್ಥಳಿಗಳಿಂದ ಅಲಂಕರಿಸಿರುವ ಅಲ್ಲಿನ ಸೊಬಗನ್ನುನೋಡಿ ಸ್ಫುರಣಾನಂದವನ್ನು ಹೊಂದಿ, ಅಲ್ಲಿಂದ ಮುಂದೆ ಹೊರಟು, ಅಂತಃಪುರದ ಬಾಗಿಲಬಳಿ ಇರುವ ಸೋಫಾದಮೇಲೆ ಉದ್ದವಾದ ಬಿಳಿಯಗಡ್ಡವನ್ನು ಬಿಟ್ಟುಕೊಂಡು ಕುಳಿತಿರುವ ವೃದ್ಧನಾದ ಘನವಂತನನ್ನು ನೋಡಿ, ಆತನೆ ಮನೆಯ ಯೆಜಮಾನನೆಂದು ತಿಳಿದು ಆತನಬಳಿಗೆ ಹೋಗಲು ಆತನು ಸಂತೋಷದಿಂದ ನನ್ನ ಅಣ್ಣನನ್ನು ನೋಡಿ, ಬಾ! ಇಲ್ಲಿ ಬಾ! ನೀನು ಯಾರು? ಏನುಕೆಲಸವಾಗಿ ಬಂದಿರುವೆ? ನನ್ನಿಂದ ನಿನಗೇನಾಗಬೇಕೆಂದು ಕೇಳಲು, ನನ್ನ ಅಣ್ಣನಾದ ಷಾಕುಬಾಕನು ಮಹಾಸಾತ್ವಿಕಾ! ತಮ್ಮಂತಹ ಲೋಕಪೂಜ್ಯರಾದ ಉದಾರಗುಣಯುಕ್ತರಾದ ಘನವಂತರ ಕೃಪಾಕಟಾಕ್ಷದಿಂದ ಜೀವಿಸತಕ್ಕವನಾದ ಬಿಕ್ಷಗಾರನೆಂದು ನನ್ನನ್ನು ತಿಳಿದು ಕೊಳ್ಳಿ ಎಂದು ಬಹಳ ವಿನಯದಿಂದ ಬಿನ್ನೈಸಿದನು.

ನನ್ನ ಅಣ್ಣನು ತನ್ನ ಪುರುಷಾಯುಸ್ಸಿನಲ್ಲಿ ಇಂತಹ ಉದಾರಿಯೆನ್ನು ನೋಡಿರಲಿಲ್ಲ. ನಂತರ ದೊಡ್ಡ ಸೈಯ್ಯದನು ನನ್ನ ಅಣ್ಣನ ವೃತಾಂತಗಳನ್ನು ಕೇಳಿ, ಅತ್ಯಂತ ವ್ಯಸನಾಕ್ರಾಂತನಾಗಿ ಅಯ್ಯೋ! ನಿನ್ನಂತಹ ಪುರುಷನು ಈ ಬಾಗದಾದುನಗರದಲ್ಲಿ ದರಿದ್ರನಾಗಿರಬಹುದೆ?

ಹಾಗಿರಕೂಡದಲ್ಲಾ ! ಭಗವಂತನು ನಿನಗೆ ಸಕಲವಿಧವಾದ ಸಂಪತ್ತು, ಸೌಭಾಗ್ಯಗಳನ್ನು ಕೊಡಲೆಂದು ಪ್ರಾರ್ಥಿಸಿ, ಅಯ್ಯಾ ! ಇನ್ನುಮೇಲೆ ನೀನು ನನ್ನನ್ನು ಅಗಲಕೂಡದು. ನಾನೂ ನಿನ್ನನ್ನು ಬಿಡಲಾರನೆಂದು ಹೇಳಲು, ಸ್ವಾಮಿಾ ! ನಾನು ಬೆಳಗಿನಿಂದಲೂ, ಊಟವನ್ನೇ ಮಾಡಲಿಲ್ಲ ವಲ್ಲಾ ! ಎಂದನು. ಸೈಯ್ಯದನು ಆಹಾ ! ಬೆಳಗಿನಿಂದಲೂ, ಉಪವಾಸ ವಿರುವೆಯಾ ! ಅಯ್ಯೋ ! ಪಾಪ. ಎಲಾ ! ಕಾಫರೀ ಸೇವಕನೇ ! ಒಂದು ಚಂಬಿನಲ್ಲಿ ನೀರುತೆಗೆದುಕೊಂಡು ಬಾಯೆಂದು ಹೇಳಲು, ಯಾರೂ ಬರಲೂ ಇಲ್ಲ ! ನೀರನ್ನು ತರಲಿಲ್ಲ ! ಆದರೂ, ಸೈಯ್ಯದನುಮಾತ್ರ ಸೇವಕನು ಹೊಯ್ಯುತ್ತಿರುವ ನೀರಿನಲ್ಲಿ ಕೈಕಾಲು ತೊಳೆದುಕೊಳ್ಳುತ್ತಿರುವಂತೆ ತನಗೆ ಕಾಣಬರಲು, ನನ್ನ ಅಣ್ಣನು, ದೊಡ್ಡವನುಮನುಷ್ಯರು ವಿನೋದವಾಗಿ ಕಾಲವನ್ನು ಕೆಳೆಯುತ್ತಿರುವಾಗ ಅವರ ಆಶ್ರಿತರೂ, ಅವರಂತೆ ಮಾಡಬೇಕಾದುದು ನ್ಯಾಯವೆಂದು ತಿಳಿದು ತಾನುಕೈಕಾಲುಗಳನ್ನು ತೊಳೆದುಕೊಳ್ಳುವಂತೆ ಅಭಿನಯಿಸಿದನು. ಆಗ ಸೈಯ್ಯದನು ಆತನನ್ನುನೋಡಿ ನೀನು ಕೈಕಾಲುಗಳನ್ನು ತೊಳೆದುಕೋ, ಎಂದು ಹೇಳಿದನು.

ಕೂಡಲೆ ಸೈಯ್ಯದನು ಭೋಜನದಪದಾರ್ಥವನ್ನು ತರುವಂತೆ ಆಜ್ಞಾಪಿಸಿದರೂ, ಯಾರೂ ಬರಲೂ ಇಲ್ಲ. ಏನನ್ನೂ ತರಲೂ ಇಲ್ಲ. ಆದರೂ, ಸೈಯ್ಯದನು ತಾನು ಭೋಜನಮಾಡುತ್ತಿರುವಂತೆ ಬಾಯಿಯೆಲ್ಲಿ ಬೆರಳು ಇಟ್ಟು ಚೀಪುತ್ತ ಎಲೈ ಸ್ನೇಹಿತನೇ ! ಇಲ್ಲಿ ಬಾ ! ನಿನ್ನ ಮನೆಯಲ್ಲಿ ಸಂತೋಷದಿಂದ ಊಟಮಾಡುತ್ತಿದ್ದಂತೆ, ಸಂಕೋಚವಿಲ್ಲದೆ ಊಟಮಾಡು. ಹಸಿವಿನಿಂದ ಪ್ರಾಣ ಹೋಗುತ್ತಿದೆ ಎಂದು ಹೇಳಿದೆಯಲ್ಲಾ ಸ್ವಲ್ಪವೂ ಹಸಿವಾಗದಂತೆ ಹೊಟ್ಟತುಂಬ ಊಟಮಾಡು ಎನಲು ಷಾಕುಬಾಕನು, ಸ್ವಾಮಿಾ ! ಮನ್ನಿಸಬೇಕು, ನಾನುಕೂಡ ಕಾಲಹರಣ ಮಾಡದಹಾಗೆಂದು ನಿಮ್ಮಸಂಗಡ ಮಾತನಾಡುತ್ತಿರುವೆನೆನಲು ಸೈಯ್ಯದನು ಅಯ್ಯಾ ! ಈ ರೊಟ್ಟಿಯೂ, ಇತರ ತರಕಾರಿಗಳೂ, ಚೆನ್ನಾಗಿ ಇರುವುದೇ ಎಂದು ಕೇಳಲು, ನನ್ನ ಅಣ್ಣನು ರೊಟ್ಟಿಯಾನ್ನಾಗಲಿ, ಇತರ ಭೋಜನ ಪದಾರ್ಥವನ್ನಾಗಲಿ, ಕಾಣದವನಾದರೂ ಸ್ವಾಮಿಾ ! ಇಷ್ಟೊಂದು ಬಿಳುಪಾಗಿಯೂ, ರುಚಿಕರವಾಗಿಯೂ, ಇರುವ ಆಹಾರವನ್ನು ನಾನು ಇದುವರಿಗೂ ಎಲ್ಲಿಯೂ ತಿನ್ನಲಿಲ್ಲವೆಂದು ನುಡಿಯಲು, ಸೈಯ್ಯದನು ಈ

ರೊಟ್ಟಿಯನ್ನು ಮಾಡಿದ ದಾದಿಯನ್ನು ಎಂಟುನೂರು ವೊಹರಿಗಳಿಗೆ ಕೊಂಡುತಂದೆವೆಂದು ಹೇಳಿದನು ಎಂದು ಹೇಳಿದಕೂಡಲೆ ಬೆಳಗಾದುದರಿಂದ ಷಹರಜಾದಿಯು ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಹೇಳಲಾರಂಭಿಸಿದಳು.

೧೪೦ ನೆಯ ರಾತ್ರಿ ಕಥೆ.

ಒಳಿಕ ಷಹರಜಾದಿಯು ಸುಲ್ತಾನರನ್ನುಕುರಿತು, ಇಂತೆಂದಳು. ನನ್ನ ಅಣ್ಣನು ಬಹು ತೃಪ್ತಿಯಿಂದ ಮಾನಸಿಕವಾದ ಭೋಜನವನ್ನು ಮಾಡುತ್ತಿರುವುದನ್ನು ನೋಡಿ, ಸೈಯ್ಯದನು ತನ್ನ ಬಾರಕರನ್ನುಕರೆದು ಎಲಾ ! ಇನ್ನು ಸ್ವಲ್ಪ ರೊಟ್ಟಿಯನ್ನು ಇತರ ಭಕ್ಷ್ಯಗಳನ್ನು ತೆಗೆದು ಕೊಂಡುಬರುವಂತೆ ಬಾಣಸಿಗನಿಗೆ ಹೇಳೆಂದು ಕೂಗಿಕೊಂಡನು. ಯಾರೂ ಬಾರಲೇ ಇಲ್ಲ. ಆಗ ಸೈಯ್ಯದನು ಷಾಕುಬಾಕನನ್ನುನೋಡಿ, ಅಯ್ಯಾ ! ಸ್ನೇಹಿತನೇ ! ಹತ್ತಿರ ಬಾ ! ಈ ತಂದಿರುವ ಪದಾರ್ಥಗಳನ್ನು ರುಚಿ ನೋಡಿ ತಿನ್ನು ಎನ್ನಲು, ಷಾಕುಬಾಕನು, ಸಾ್ವಮಿ ! ರುಚಿಕರವಾಗಿ ಇರುವ ಈ ಪದಾರ್ಥಗಳನ್ನು ಬಹು ಸಂತೋಷದಿಂದ ಊಟಮಾಡುವೆ ನೆನಲು, ಹಾಗಾದರೆ ಎಲ್ಲವನ್ನೂ, ನೀನೆ ಭಕ್ಷಿಸೆಂದು ಹೇಳಿದನು. ಇನ್ನೂ ಸ್ವಲ್ಪಹೊತ್ತಿಗೆ ಸೈಯ್ಯದನು ತನ್ನದಾದಿಯರನ್ನು ಬರಮಾಡಿ, ಒಂದು ಬಾತನ್ನೂ, ಮಸಾಲೆಪುಡಿಯನ್ನೂ, ಖರ್ಜೂರವನ್ನೂ, ಬಟಾಣಿಯನ್ನೂ, ಅಂಜೂರದಹಣ್ಣುಗಳನ್ನೂ ತೆಗೆದುಕೊಂಡು ಬಾ ! ಎಂದು ಹೇಳಿದನು. ಮೊದಲು, ಎಷ್ಟು ನಿಜವಾಗಿ ಭೋಜನಪದಾರ್ಥವನ್ನು ತಂದಿಟ್ಟರೋ, ಹಾಗೆಯೆ ಈಗಲೂ ತಂದಿಟ್ಟರು.

ಸೈಯ್ಯದನು, ಷಾಕುಬಾಕನನ್ನು ನೋಡಿ, ಅಯ್ಯಾ ! ನಿನಗೆ ಇಷ್ಟವಾದ ಪದಾರ್ಥಗಳನ್ನು ಬೇಗಬೇಗ ತೆಗೆದುಕೊಂಡು ನಿಧಾನವಾಗಿ ತಿನ್ನು ಸ್ವಲ್ಪವಾದರೂ, ಸಂಕೋಚಪಡಬೇಡ. ಇಗೋ ಈ ರೊಟ್ಟಿಯನ್ನು ರುಚಿನೋಡು ಕೋಳಿಯ ಮಾಂಸವು ಚೆನ್ನಾಗಿರುವುದೋ, ಅಂಜೂರದ ಹಣ್ಣುಗಳನ್ನು ತಿಂದುನೋಡುವೆಯಾ ? ಇಗೋ ! ನಾನು ಕೊಡುವ ಈ ಬಟಾಣಿಯ ಕಾಳುಗಳನ್ನು ತಿಂದುನೋಡೆಂದು, ಗಾರಡಿಗನಂತೆ ನಾನಾ ವಿಧವಾಗಿ ಚತುರೋಪಾಯಗಳನ್ನು ಮಾಡುತ್ತ ಚಿತ್ರವಿಚಿತ್ರವಾದತೆರದಿಂದ

ಉಣಲಿಟ್ಟನು. ಸೈಯ್ಯದನು ಆಡಿಸಿದತೆರದಿಂದಲೆಲ್ಲಾ ಷಾಕುಬಾಕನು ಅಭಿನಯಿಸಿ, ತಿಂಡಿಯಿಲ್ಲದೆ ಬರಿಯಬಾಯನ್ನು ಚಪ್ಪರಿಸಿ ಅಗಿದು, ಹಲ್ಲೂ ದವಡೆಗಳೂ, ನೋವೆತ್ತಿದವು. ಇದರಮಧ್ಯೆ ಹಸಿವಾದರೊ ಬಹಳವಾಗಿ ಪೀಡಿಸುತ್ತಿದ್ದಿತು. ಅದನ್ನು ಸೈಯ್ಯದನು, ತಾನು ಮಾಡುವ ವಿಚಿತ್ರ ಕರವಾದ ಈ ಔತನವನ್ನು ಎಂದಿನಂತೆ ಆತನನ್ನುಕುರಿತು, ಪ್ರಶ್ನೆಮಾಡಲು ಈ ಭೋಜನಪದಾರ್ಥಗಳು ಸುವಾಸನೆಯಾಗಿಯೂ; ಸುಖಕರವಾಗಿಯೂ, ಇಲ್ಲಿಂದ ಮುಂದೆ ಇಂತಹ ಭೋಜನವು ನನಗೆ ದೊರೆಯದಂತೆ ಇದೆ ಎಂದು ಹೇಳಿದನು. ಬಳಿಕ ಸೈಯ್ಯದನು ತನ್ನ ಚಾಕರಿಯವರನ್ನು ಕರೆದು ಅಯ್ಯಾ! ಈ ತಟ್ಟೆಬಟ್ಟಲುಗಳನ್ನು ತೆಗೆದುಕೊಂಡುಹೋಗಿ, ಹಣ್ಣುಹಂಪಲುಗಳನ್ನು ತೆಗೆದುಕೊಂಡು ಬನ್ನಿರೆಂದು ಕೂಗಿ ಹೇಳಿದನು. ಅವರು ಮೊದಲಿನಂತೆಯೆ ಮಾಡಿದರು.

ಅಯ್ಯಾ! ಸ್ನೇಹಿತನೇ! ಇಗೋ! ಬಾದಾಮಿಯನ್ನು ತಿನ್ನು. ದಾಳಿಂಬವು ರುಚಿಕರವಾಗಿರುವುದು. ಖರ್ಜೂರವು ಹಸಿವನ್ನಣಗಿಸುವುದು. ಅಂಜೂರವು ಆರೋಗ್ಯಕರವಾಗಿರುವುದು. ನೇರಿಳೆಯಾದರೋ ಸೌರಭೂತವಾದ ಹಣ್ಣು. ಇವುಗಳೆಲ್ಲವನ್ನು ತಿಂದು ತೃಪ್ತಿಹೊಂದು ಎಂದು ತನ್ನ ಬರಿಗೈಯ್ಯನ್ನೆತ್ತಿ ಆತನ ಬಾಯಿಯಲ್ಲಿ ಇಡುತ್ತಿರಲು, ಷಾಕುಬಾಕನು ತಿನ್ನುವಂತೆ ನಟಿಸುತ್ತಾ ಕೊನೆಗೆ ಬೇಸರಿಕೆಯಿಂದ ಸ್ವಾಮಿ! ನಾನು ಹಣ್ಣುಗಳನ್ನು ತಿಂದು ತೃಪ್ತನಾದೆನು. ನಿಮ್ಮ ಔತನದಿಂದ ನನಗೆ ತೃಪ್ತಿ ಉಂಟಾಯಿತು. ಇನ್ನು ನಾನು ಹೆಚ್ಚಾಗಿ ತಿನ್ನಲಾರೆನು. ಹೊಟ್ಟೆ ಬೂ ತುಂಬಿತು. ಕ್ಷಮಿಸಿ! ಕ್ಷಮಿಸಿ! ಎಂದು ಬೇಡಿಕೊಂಡನು. ಸೈಯ್ಯದನು ಭೋಜನಪನ್ನು ಇಷ್ಟರಮಟ್ಟಿಗೆ ನಿಲ್ಲಿಸಿರುವೆನು. ಇನ್ನು ಆರೋಗ್ಯ ಪ್ರಯೋಜನಾರ್ಥವಾಗಿ ಸಾರಾಯಿಯನ್ನು ತರಿಸಿರುವೆನು. ಇಗೋ ಇದನ್ನು ಕುಡಿದು ತೃಪ್ತನಾಗು ಎನಲು, ಅಯ್ಯೋ! ನಾನೆಂದಿಗೂ ಸಾರಾಯಿಯೆನ್ನು ಕುಡಿದವನಲ್ಲ. ನೀವೆ ಕುಡಿದು ತೃಪ್ತರಾಗಿ. ನಾನು ಇದುವರಿಗೂ ಮಾಡಿದ ಊಟಲಿಂದಲೆ ತೃಪ್ತನಾದೆನೆಂದು, ಅಲ್ಲದೆ ತಮ್ಮ ದಾಕ್ಷಿಣ್ಯಕ್ಕಾಗಿ ಇದನ್ನು ಕುಡಿದು ನೀವು ಮಾಡುವ ಔತನವನ್ನು ಇಷ್ಟಕ್ಕೆ ಪೂರೈಸಬೇಕೆಂದು ಬೇಡಿಕೊಂಡೆನು. ನಂತರ ಅವರಿಬ್ಬರೂ ವಿವಿಧ

ವಿಷಯಗಳಲ್ಲಿ ವಾದವಾಡುತ್ತಾ ನಂತರ ಸಾರಾಯಿಯನ್ನು ಕುಡಿದಂತೆ ಅಭಿನಯಿಸಿ, ಅದರಿಂದುಂಟಾದ ಮದದಿಂದ ಜೋರಿಬೀಳುವಂತೆ ಅಭಿನಯಿಸಿ ಷಾಕುಬಾಕನು ನನ್ನನ್ನು ಹಿಡಿದುಕೊಂಡು ನಿಜವಾಗಿಯೂ ಬಲವಾದ ಒಂದು ಗುದ್ದನ್ನು ಹಾಕಿದನು. ಕೂಡಲೆ ನನ್ನ ಅಣ್ಣನು ನೆಲಕ್ಕೆ ಬಿದ್ದನು. ಆತನು ಬಿದ್ದು ಕಾಲುಕೈಗಳನ್ನಾಡಿಸದೆ ಮೂರ್ಛೆಹೋಗಿದ್ದರೂ, ಪುನಹ ಆತನನ್ನು ಹೊಡೆವುದಕ್ಕೆ ಪ್ರಯತ್ನಿಸಲು, ಷಾಕುಬಾಕನು ಸ್ವಾಮಿ ! ಕಿಂಕರರಮೇಲೆ ದಯವಾಡಬೇಕೇಹೊರತು, ಈ ತೆರದಿಂದ ಶಿಕ್ಷೆ ಮಾಡಬಾರದು. ನೀವು ಔತನವನ್ನು ಮಾಡಿದುದರಿಂದ ನಾನು ತೃಪ್ತನಾದೆನು. ಆದರೂ, ಸಾರಾಯಿಕುಡಿದಿರುವುದರಿಂದ ನಾನೇನು ಅಪರಾಧವನ್ನು ಮಾಡಿದೆನೋ ತಿಳಿಯದು. ನನ್ನನ್ನು ಮನ್ನಿಸಬೇಕೆಂದು ಬೇಡುವೆನೆನಲು, ಸೈಯ್ಯದನು ಕೋಪಿಸಿಕೊಂಡು, ಬಹಳವಾಗಿ ನಕ್ಕು ಅಯ್ಯಾ ! ನಿನ್ನಂತಹ ಮನುಷ್ಯನನ್ನು ಬಹುದಿನಗಳಿಂದ ನೋಡಬೇಕೆಂದು ಹುಡುಕುತ್ತಿದ್ದೆನೆಂದು ಹೇಳಿದನು. ಇಂತೆಂದು ಹೇಳಿ ಷಹರಜಾದಿಯು ಬೆಳಗಾದಕೂಡಲೆ ಕಥೆಯನ್ನುನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಮರಳಿ ಹೇಳಲಾರಂಭಿಸಿದನು.

೧೪೧ ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನರನ್ನುಕುರಿತು, ಇಂತೆಂದಳು. ಬಳಿಕ ಸೈಯ್ಯದನು ನನ್ನ ಅಣ್ಣನನ್ನುಕುರಿತು, ಅಯ್ಯಾ ! ನಾನು ಈಗ ನಿನ್ನನ್ನು ಮನ್ನಿಸಿರುವೆನಾದುದರಿಂದ ಇನ್ನುಮೇಲೆ ನಾವಿಬ್ಬರೂ ಪರಮ ಸ್ನೇಹಿತರಾಗಿ ಇರಬೇಕು ಎಂದು ಹೇಳಿ, ಜಿನ್ನುತಟ್ಟೆ ಕೈಹಿಡಿದು ಕರೆದುಕೊಂಡು ತಾನು ಊಟಮಾಡುವಮನೆಗೆ ಕರೆದುಕೊಂಡುಹೋಗಿ, ಚಾರಕರಿಂದ ಪ್ರತ್ಯಕ್ಷವಾಗಿ ಆಹಾರಪದಾರ್ಥಗಳನ್ನು ತರಿಸಿ, ಕಾಲುಮಣೆಯಮೇಲೆ ಬಡಿಸುವಂತೆಮಾಡಿ ನಂತರ ತಿಳುಹಿಸದೆಗಾರುಡಿವಿದ್ಯದಿಂದ ಭೋಜನ ಪದಾರ್ಥವನ್ನೆಲ್ಲ ಊಟಮಾಡುವಂತೆ ಹೇಳಿ ತಾನು ಊಟಮಾಡಿದನಂತರ ನೃತ್ತ ಗೀತ ವಾದ್ಯಾದಿಗಳಿಂದ ಸಂಗೀತವನ್ನು ಚದುರರಾದ ನಾರೀಮಣಿಗಳಿಂದ ಹಾಡಿಸುತ್ತ ಸ್ವಲ್ಪಹೊತ್ತು ವಿನೋದವಾಗಿ ಕಾಲವನ್ನುಕಳೆದು

ನಂತರ ನನ್ನ ಅಣ್ಣನ ಗುಣಗಳನ್ನು ಚೆನ್ನಾಗಿ ಪರೀಕ್ಷಿಸಿ ಆತನನ್ನು ತನ್ನ ಮನೆಯ ಯಜಮಾನನನ್ನಾಗಿ ನಿಯಮಿಸಿಕೊಂಡನು. ಷಾಕುಬಾಕನು ಈತರದಿಂದ ಇಪ್ಪತ್ತುವರ್ಷಗಳು, ಆತನಲ್ಲಿ ಚಾಕರಿ ನೂಡಿಕೊಂಡಿದ್ದನು. ಆದರೆ ಸೈದನು ಸತ್ತುಹೋದಮೇಲೆ ಆತನ ವಾರಸುದಾರರಾದ ಬಂಧುಗಳು ಬಂದು ಆತನ ಆಸ್ತಿಯನ್ನು ಅರಮನೆಯನ್ನುಸಹ ತೆಗೆದುಕೊಂಡು ಷಾಕುಬಾಕನು ಸಂಪಾದನೆಮಾಡಿದ್ದ ಹಣದಲ್ಲಿಕೂಡ ಅರ್ಧವನ್ನು ತೆಗೆದು ಕೊಂಡುಹೋದರು. ನಂತರ ನನ್ನ ಅಣ್ಣನು ದರಿದ್ರನಾಗಿ ಮುಕ್ಕಾ ಯಾತ್ರಿಕರಸಂಗಡ ಸೇರಿ ತಾನು ಯಾತ್ರೆಯನ್ನು ಪೂರೈಸಿಕೊಳ್ಳಬೇಕೆಂದು ಹೊರಟನು. ದಾರಿಯಲ್ಲಿ ಯಾತ್ರಿಕರನ್ನು ಹಿಂಸಿಸಿ ದೋಚಿಕೊಳ್ಳುವ ಕೊಲಿಪಾತಕರುಬಂದು ಇವನಗುಂಪಿನಮೇಲೆ ಬಿದ್ದು ದೋಚಿಕೊಂಡುಹೋ ದರು. ಅವರಲ್ಲಿಬ್ಬನು, ನನ್ನ ಅಣ್ಣನನ್ನು ತನ್ನ ಮನೆಗೆ ಕರೆದು ಕೊಂಡುಹೋಗಿ ಹತ್ತುದಿನಗಳವರಿಗೂ, ನೆರಹಾಕಿ ಬಹು ಕಠಿಣವಾಗಿ ಹಿಂಸಿ ಸುತ್ತಾನಿನ್ನ ಆಸ್ತಿ ಎಲ್ಲಿರುವುದು ತೋರಿಸೆಂದು ಪೀಡಿಸಿದನು. ಆ ಬಾಧೆ ಯನ್ನುತಾಳಲಾರದೆ ಷಾಕುಬಾಕನು ಆತನನ್ನುನೋಡಿ ಅಯ್ಯಾ! ನಾನು ಬಡವನಾದ ಬಿಕ್ಷುಗಾರನು. ನನ್ನಬಳಿಯಲ್ಲಿ ಧನವು ಸ್ವಪ್ನದಲ್ಲಿಯೂ ಕಾಣ ಬರದು. ನಾನು ನಿನ್ನ ಗುಲಾಮನಾಗಿರುವೆನು. ಮತ್ತೆಲ್ಲಿಯೂ, ಹೋಗುವು ದಿಲ್ಲ. ನನ್ನನ್ನು ಅನ್ಯಾಯವಾಗಿ ಏತಕ್ಕೆ ಹಿಂಸಿಸುವೆ. ಕ್ಷಮಿಸೆಂದು ಅಳುತಾ ಕಾಲುಮೇಲೆ ಬಿದ್ದು ಬೇಡಿಕೊಂಡನು.

ನಂತರ ಆ ದಾರಿಹೋಕನು ಈತನಿಂದ ಯಾವ ಪ್ರಯೋಜನವೂ ತನಗುಂಟಾಗಲಿಲ್ಲವೆಂದು, ತಿಳಿದು ಆತನನ್ನು ನೋಡಿ ಬಹು ಕೋಪದಿಂದ ಒಂದು ಚೂರಿಯನ್ನು ತೆಗೆದುಕೊಂಡು ಅವನ ತುಟಿಯನ್ನು ಕೊಯ್ದು ಹಾಕಿ ತನ್ನಮನೆ ಜಾಣಸಿಗನನ್ನಾಗಿ ಮಾಡಿಕೊಂಡನು. ಆದುದರಿಂದ ನನ್ನ ಅಣ್ಣನು ಸಿರವಾಯಿಯವನಾದನು. ಆ ಕೊಳ್ಳೆಕಾರನ ಹೆಂಡತಿಯು ಬಹು ರೂಪವತಿಯಾದವಳು. ಆದರೆ ಆತನು ತಾನು ಕೊಳ್ಳೆಹೊಡೆಯು ವುದಕ್ಕೆ ಹೋಗುವಾಗ, ಷಾಕುಬಾಕನನ್ನು ತನ್ನ ಹೆಂಡತಿಯನ್ನು ಒಂದು ಮನೆಯಲ್ಲಿಹಾಕಿ ಹೋಗುತ್ತಿದ್ದನು. ಒಂದಾನೊಂದುದಿನ ಆತನಹೆಂಡತಿಯು

ನನ್ನ ಅಣ್ಣನನ್ನು ಬಹಳವಾಗಿ ಉದಚರಿಸಿ ತನಗೆ ಮೋಹ ಉಂಟಾಗಿ ಇರುವುದೆಂದು, ತೋರ್ಪಡಿಸಿಕೊಂಡಳು. ಆದರೆ ಷಾಕುಬಾಕನು ಮುಂದೆ ಏನಾಗುವುದೊ, ಎಂಬ ಭಯದಿಂದ ಅವಳಷಾಟ್ಯನುಸಾರವಾಗಿ ನಡೆದುಕೊಳ್ಳ ಲಿಲ್ಲ. ಆದರೂ, ಆಕೆ ಬಹು ಹೆಚ್ಚಾದ ಮೋಹದಿಂದ ಆತನೊಡನೆ ಸರಸ ಸಲ್ಲಾಪಗಳನ್ನಾಡುತ್ತಾ ಇದ್ದಳು. ಹೀಗೆ ಬಹುದಿನಗಳು ಕಳೆದಬಳಿಕ ಆಕೆ ಒಂದಾನೊಂದುದಿನ ತನ್ನ ಗಂಡನು ಮನೆಯೆಲ್ಲಿ ಇರುವುದನ್ನು ಕಾಣದೆ ಷಾಕುಬಾಕನಸಂಗಡ ಸರಸವಾಡಲಾರಂಭಿಸಿದಳು. ಷಾಕುಬಾಕನು, ಕೆಲವು ಮಾತುಗಳನ್ನಾಡಿದನು. ಅದನ್ನು ನೋಡಿ ದಾರಿಹೋಕನು ಇವರಿಬ್ಬರೂ ಬಹುದಿನಗಳಿಂದ ಏಕೀಭೂತವಾಗಿದ್ದರೆಂದು ನೆನಸಿ, ಬಹು ಕೋಪದಿಂದ ಆತನನ್ನು ಹೊಡೆದು ಒಂಟೆಯೆಮೇಲೆ ಕುಳ್ಳಿರಿಸಿಕೊಂಡು ಅರಣ್ಯವಾರ್ಗ ದಲ್ಲಿ ಹೊರಟು ಒಂದಾನೊಂದು ಪರ್ವತದ ಶಿಖರದಮೇಲೆಬಿಟ್ಟು ಹೊರಟು ಹೋದನು. ಆ ಪರ್ವತವು ಬಾಗದಾದಿಗೆ ಸಮೀಪವಾಗಿದ್ದುದರಿಂದ ಮಾರ್ಗ ಸ್ಥರು ನನಗೆ ಈ ವರ್ತಮಾನವನ್ನು ತಿಳಿಸಲು ನಾನು ಆತನನ್ನು ನೋಡಿ ಮೂಡಬೀಕಾದವುವಚಾರಗಳನ್ನು ಮಾಡಿ ನಗರಕ್ಕೆ ಕರೆದುಕೊಂಡುಬಂದೆನು.

ಈತೆರದಿಂದ ನಾನು ಹೇಳಿದ ಕಥೆಯನ್ನು ಕಲೀಫರು ಕೇಳಿ, ಅಯ್ಯಾ ! ನೀನುಹೇಳಿದ ಕಥೆಗಳಿಂದ ನನಗೆ ಬಹಳ ಸಂತೋಷವಾಯಿತು. ನೀನು ವಿಚಕ್ಷಣನೇ ಸರಿ ! ನಿನ್ನನ್ನು ಯೋಗ್ಯನಲ್ಲವೆಂದು ಯಾರೂ ಹೇಳುವದಿಲ್ಲ. ಆದರೆ ನೀನು ಪ್ರತ್ಯುತ್ತರವನ್ನು ಹೇಳದೆ ನನ್ನ ಪಟ್ಟಣ ವನ್ನು ಬಿಟ್ಟು ಈಗಲೇ ಹೊರಟುಹೋಗಬೇಕೆಂದು ಆಜ್ಞಾಪಿಸುವುದರಿಂದ ನಾನು ನೇಪಾಂತರಗತನಾಗಿ ಅಲೆಯುತ್ತಿದ್ದು, ಕಲೀಫರು ಸತ್ತುಹೋದ ವರ್ತಮಾನವನ್ನುಕೇಳಿ, ಪುನಹ ಪ್ರಯಾಸದಿಂದ ಬಾಗದಾದುನಗರಕ್ಕೆ ಬಂದು ನೋಡುವಲ್ಲಿ, ನನ್ನ ಸಹೋದರರಲ್ಲಿಯಾರೂ ಜೀವಂತರಾಗಿರಲಿಲ್ಲ. ಬಳಿಕ ನಾನು ಈ ಕುಂಟಹುಡುಗನಿಗೆ ಮಹದುಪಕಾರವನ್ನು ಮಾಡಿದೆನು. ಆತನು ನನಗೆ ಪ್ರತ್ಯುಪಕಾರ ಮಾಡಲು ಶಕ್ತನಾಲದೆ, ನನ್ನನ್ನು ನಿಂದಿ ಸುತ್ತ ತನ್ನದೇಶವನ್ನೂ, ಬಂಧುಗಳನ್ನೂ, ತೊರೆದು, ಎಲ್ಲಿಯೋ ಹೊರಟು ಹೋದನೆಂಬ ವರ್ತಮಾನವನ್ನು ಕೇಳಿ, ಆತನನ್ನು ಹುಡುಕಿಕೊಂಡು ಮಾರ್ಗವಶಾತ್ತಾಗಿ ನಡೆದುಬಂದು, ಅಕಸ್ಮಾತ್ತಾಗಿ ಇಲ್ಲಿ ಇರುವುದನ್ನು

ಕಂಡನು. ಆದುದರಿಂದ ಆತನು ನನ್ನನ್ನು ನೋಡುವುದಕ್ಕೆ ಇಷ್ಟವಿಲ್ಲದವ
ನಾಗಿ ಹೊರಟುಹೋದನು. ಆದರೂ, ನನ್ನಮೇಲೆ ಆತನಿಗೆ ಎಂದಿಗೂ
ಕೋಪವಿಲ್ಲವೆಂದು ನುಡಿದನು. ಇಂತೆಂದು ಹೇಳಿ, ಷಹರಜಾದಿಯು
ಬೆಳಗಾದಕೂಡಲೆ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ
ಪುನಹ ಹೇಳತೊಡಗಿದಳು.

೧೪ನೆಯ ರಾತ್ರಿ ಕಥೆ.

ಸುಲ್ತಾನರೇ ! ನಾನು ಇದುವರಿಗೂ ಹೇಳಿದ ಕಥೆಯನ್ನು, ದರ್ಜಿಯವನು ಕಾಸುಗಾರು ರಾಜನಬಳಿಯಲ್ಲಿ ಹೇಳಿ ಮುಗಿಸಿ, ಸ್ವಾಮಿಾ ! ನಾಯಿಂದನು, ಈತರದಿಂದ ಕಥೆಯನ್ನು ಹೇಳಿದಬಳಿಕ ನಾವುಗಳು ಆಶ್ಚರ್ಯಯುಕ್ತರಾಗಿ, ಮಧ್ಯಾಹ್ನದ ಭೋಜನವನ್ನು ಆತನೊಡನೆ ಮುಗಿಸಿಕೊಂಡು, ನಂತರ ತಂತಮ್ಮ ಮನೆಗಳಿಗೆ ಪ್ರಯೋಗತಕ್ಕವರೆಲ್ಲರೂ ಹೊರಟುಹೋದಬಳಿಕ, ನಾನು ನನ್ನ ಅಂಗಡಿಗೆಬಂದು ಕುಳಿತುಕೊಂಡೆನು. ಆಗತಾನೆ ಈ ಗೂನನು ಸಾರಾಯಿಯನ್ನು ಕುಡಿದು, ಮತ್ತಿನಿಂದ ಗಾನಮಾಡುತ್ತ ಮುದ್ದಲಿಯನ್ನು ಬಾರಿಸಿಕೊಂಡು, ನನ್ನ ಅಂಗಡಿಯಮುಂದಕ್ಕೆ ಬಂದನು. ನಾನು ಈತನ ಸಂಗೀತವನ್ನು ನನ್ನ ಹೆಂಡತಿಯೂ ಕೇಳಿ, ಆನಂದಪಡಲೆಂದು ಮನೆಗೆ ಕರೆದುಕೊಂಡು ಹೋದೆನು. ಅಲ್ಲಿ ನನ್ನ ಹೆಂಡತಿಯು ಈತನಿಗೆ ತಿನ್ನುವುದಕ್ಕಾಗಿ ಕೆಲವು ವಿಾನುಸುಗಳನ್ನು ತಂದಿಟ್ಟಳು. ಆತನು ಮೂಳೆಯನ್ನು ಕಾಣದೆ ನುಂಗಲು, ಅದು ಎದೆಯಲ್ಲಿಸಿಕ್ಕಿಕೊಂಡು ಉಸುರಾಡಲು ಆಗದೆ ಸತ್ತುಹೋದನು.

ನಂತರ ನಾವಿಬ್ಬರೂ, ರಾಜಾಜ್ಞೆಗೆ ಹೆದರಿ, ಈಜೂವೈದ್ಯನ ಮನೆಯಬಳಿಗೆ ಹೆಣವನ್ನು ತಂದುಹಾಕಿದೆವು. ಆತನು ಕೊಬ್ಬಿನವ್ಯಾಪಾರದಾತನಮನೆಯ ಬಳಗದೆಯಲ್ಲಿ ಹಾಕಿದನು. ಕೊಬ್ಬಿನವ್ಯಾಪಾರಗಾರನು ಈ ಹೆಣವನ್ನು ತೆಗೆದುಕೊಂಡುಬಂದು ಅಂಗಡಿಯಸಾಲಿನಲ್ಲಿ ನಿಲ್ಲಿಸಿದನು. ಆಗ ಈತನನ್ನು ಕಂಡು ಕಳ್ಳನೆಂದುಹೊಡೆದ ಕ್ರಿಶ್ಚಿಯರ್ ವರ್ತಕನು, ಕೊನೆಗೆ ಸಿಕ್ಕಿಹೋದುದರಿಂದ ಆತನೇ ಕೊಲೆಪಾತಕನೆಂದು ತಿಳಿಯಬಂದಿತು. ಇದೇ ನಾನು ಹೇಳಬೇಕಾಗಿರುವ ಕಥೆ. ಸ್ವಾಮಿಾ ! ಚಿತ್ತಕ್ಕೆ ಬಂದಂತೆ ಆಜ್ಞೆಮಾಡಿ ಹೇಗಾದರೂ ನಮ್ಮಗಳ ಪ್ರಾಣವನ್ನು ಉಳಿಸಬೇಕೆಂದು

ಬೇಡಿಕೊಂಡನು. ಆಗ ಕಾಸುಗಾರರಾಜನು ಹಾಸ್ಯಮಾಡಿ ನಗುತಾ ಅಯ್ಯಾ! ನೀವುಗಳು ಹೇಳಿದ ಕಥೆಗಳೆಲ್ಲವೂ ಬಹು ವಿನೋದಕರವಾಗಿ ಇದೆ. ನಾನು ನಿಮ್ಮಗಳನ್ನು ಕ್ಷಮಿಸಿರುವೆನು. ಆದರೆ ಯಾರಿಗೋಸ್ಕರವಾಗಿ ನಾನು ನಿಮ್ಮನ್ನು ಕ್ಷಮಿಸಿರುವೆನೋ, ಅಂತಹ ನಾಯಿಂದನು ನಮ್ಮ ಪಟ್ಟಣದಲ್ಲಿ ಇರುವುದರಿಂದ, ಸುಲಭವಾಗಿ ಕಂಡುಹಿಡಿಯಬಹುದು. ಆ ಕ್ಷೌರಕನನ್ನು ನೋಡಬೇಕೆಂಬ ಕುತೂಹಲವು ನನಗೆ ತುಂಬ ಇರುವುದರಿಂದ, ನೀನು ನನ್ನ ಭಂಟರಜೊತೆಯಲ್ಲಿ ಕರೆದುಕೊಂಡು ಬರಬೇಕೆಂದು, ಹೇಳಿ ದರ್ಜಿಯವನಸಂಗಡ ತನ್ನ ಚಾರಕರನ್ನು ಕಳುಹಿಸಿದನು. ಬಳಿಕ ಅವರು ಊರೆಲ್ಲ ಹುಡುಕಿ ಕ್ಷೌರಕನನ್ನು ಕರೆದುಕೊಂಡು ರಾಜನ ಬಳಿಯಲ್ಲಿ ನಿಲ್ಲಿಸಿದರು. ಆತನು ಬಹು ಮುದುಕನಾಗಿ ಕಿವಿಗಳನ್ನು ಜೋಲಿಸುತ್ತ ತಲೆ ಕಾಲುಗಳನ್ನು ನಡುಗಿಸುತ್ತ, ತನ್ನ ನರೆತುಹೋದ ಕಣ್ಣುಹುಬ್ಬುಗಳನ್ನೆತ್ತಿ ರಾಜನನ್ನುನೋಡಿ, ಮರ್ಯಾದೆ ಮಾಡಲು ರಾಜನು ಅಯ್ಯಾ! ನೀನು ಬಹುವಿಚಿತ್ರತರವಾದ ಕಥೆಯೆನ್ನುಹೇಳುವೆ ಎಂದು ಜನರು ಹೇಳಿಕೊಳ್ಳುತ್ತಿರುವುದನ್ನು ನಾನು ಕೇಳಿರುವೆನು. ವಿನೋದಕರವಾದ ಯಾವುದಾದರೂ ಒಂದು ಕಥೆಯೆನ್ನು ಹೇಳೆಂದು ರಾಜನು ಕೇಳಲು, ಸ್ವಾಮಿ! ತಾವು ದಯವಮಾಡಿ, ಈಗ ಕಥೆಯೆನ್ನು ಸಾಕು ಮಾಡಿ, ಈ ದರ್ಜಿಯವನೂ, ವರ್ತಕನೂ, ವೈದ್ಯನೂ, ವ್ಯಾಪಾರಿಯೂ, ಸಹ ಇಲ್ಲಿಗೇಕೆಬಂದರು. ಈ ಮನುಷ್ಯರು ಏನುಮಾಡುತ್ತಿರುವರು. ಇದೆಲ್ಲವನ್ನು ವೊದಲು ನನಗೆ ಹೇಳಿದನೆ ನಾನು ಕಥೆಯೆನ್ನೇಳುತೆ್ತನೆಂದನು.

ರಾಜನು ಆ ಸಂಗತಿಗಳು ನಿನಗೇಕೆ. ನೀನು ಕಥೆಯೆನ್ನುಮಾತ್ರ ಹೇಳೆನಲು, ಅಯ್ಯಾ! ನಾನು ಇತರರಂತೆ ಬಹಳವಾಗಿ ಮಾತನಾಡತಕ್ಕವನಲ್ಲವೆಂಬುದನ್ನು ಮೌನಿಯೆಂಬ ಹೆಸರನ್ನು ಹೊಂದಿರುವುದನ್ನು ತಮಗೆ ತಿಳಿಯಪಡಿಸುವುದಕ್ಕಾಗಿ, ಈತರದಿಂದ ಇವರ ಚರಿತ್ರೆಯನ್ನು ಪ್ರಶ್ನೆ ಮಾಡಿ ಕೇಳುತ್ತಿರುವೆನೆಂದು ಹೇಳಿದನು, ಹೀಗೆಂದು ಷಹರಜಾದಿಯು ಹೇಳಿದಹೊತ್ತಿಗೆ ಸರಿಯಾಗಿ ಸೂರ್ಯೋದಯವಾದುದರಿಂದ, ಸುಲ್ತಾನನು ಸುಮ್ಮನಾಗಿರಲು, ಈದಿನ ಬೇಗನೆ ಬೆಳಕುಹರಿತು ಆದುದರಿಂದ ಮನ್ನಿಸಬೇಕೆಂದು ಬೇಡಿಕೊಂಡು, ಮರುದಿನ ಬೆಳಗಿನಜಾವದಲ್ಲಿ ಹೇಳತೊಡಗಿದಳು,

೧೪೩ ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು, ಇಂತೆಂದಳು :— ತಾಸುಗಾರುರಾಜನು ಕ್ಷೌರಿಕನು ಕೇಳಿದ ಪ್ರಶ್ನೆಗಳಿಗೆ ಪ್ರತ್ಯುತ್ತರವನ್ನು ಹೇಳಲಪೇಕ್ಷಿಸಿ, ತನ್ನಬಳಯಲ್ಲಿದ್ದ ಜನರನ್ನು ನೋಡಿ, ಗೂನನ ಕಥೆಯನ್ನು ಹೇಳರೆಂದು ಆಜ್ಞಾಪಿಸಿದನು. ಅವರು ಕಥೆಯನ್ನು ವಿವರಿಸಿ ಹೇಳುತ್ತಿರುವ ಸಮಯದಲ್ಲಿ ಕ್ಷೌರಿಕನು, ಸ್ವಲ್ಪಹೊತ್ತು ಕಥಾವಿಸ್ತರಣವನ್ನು ಕೇಳುತ್ತಿದ್ದು, ನಂತರ ಏನೋ ಅನುಮಾನ ಉಂಟಾದವನಂತೆ, ನಟಿಸುತ್ತ ನಿಜವಾಗಿಯೂ ಇದು ಆಶ್ಚರ್ಯವೇ ಸರಿ ! ನಾನು ಆ ಗೂನ ಮನುಷ್ಯನನ್ನು ನೋಡಬೇಕೆಂದು ಹೇಳಿ, ಆತನಬಳಿಗೆ ಹೋಗಿ ಚೆನ್ನಾಗಿ ತಿರುಗಿನೋಡಿ, ಭಕಭಕನೆನಗುತ್ತಾ ಅಯ್ಯಾ ! ಈ ಗೂನಮನುಷ್ಯನು ಸತ್ತುಹೋಗಿರುವನೆಂದು ನೀವೆಂದಿಗೂ ತಿಳಿಯಬೇಡಿ ಇದು ಒಂದು ವಿಚಿತ್ರವಾಗಿದೆ. ಆದರೆ ಈ ರಾಜಾಸ್ಥಾನದಲ್ಲಿ ಭಂಗಾರದ ಅಕ್ಷರಗಳಿಂದ ಬರೆಯಿಸಲ್ಪಟ್ಟಿರುವ ಈ ಚರಿತ್ರೆಯಾರಸಂಬಂಧವಾದುದು ಹೇಳರೆನಲು, ಸಭಿಕರು ಇದು ಗೂನನ ಚರಿತ್ರೆಯೇ ಹೌದೆಂದು ನಂಬು ಎಂದು ಹೇಳಲು, ಕ್ಷೌರಿಕನು ಆಡುವ ಮಾತುಗಳನ್ನು ಕೇಳಿ, ಈತನು ಹಾಸ್ಯಗಾರನು. ಅದರಲ್ಲಿ ಅರವತ್ತುವರ್ಷದವನಾದುದರಿಂದ, ಅರುಳುಮರುಳುಗಳೆಂಬ ಭ್ರಮಾಂಶವನ್ನು ಹೊಂದಿರುವನೆಂದು ಹೇಳಿಕೊಳ್ಳುತ್ತಿರಲು, ರಾಜನು ಅಯ್ಯಾ ! ನನ್ನಸಂಗಡ ಮಾತನಾಡುವುದನ್ನು ತೊರೆದು, ನೀನೇಕೆ ಹೀಗೆನಗುತ್ತೀಯೇ! ಎಂದು ಕೇಳಲು, ಕ್ಷೌರಿಕನು ಅಯ್ಯಾ ! ಈ ಗೂನನು ಸತ್ತು ಹೋದನು.

ಈತನಿಗೆ ಇನ್ನೂ ಪ್ರಾಣವಿರುವುದನ್ನು ನಾನುತೋರ್ಪಡಿಸದೆ ಹೋದರೆ, ನನ್ನನ್ನು ಹುಚ್ಚನೆನ್ನುವದಲ್ಲವೆ ? ಎಂದು ಹೇಳುತ್ತ ತಾನು ಯಾವಾಗಲು ಜೊತೆಯಲ್ಲಿ ತರುತ್ತಿರುವ ಔಷಧದ ಭರಣಿಯೆನ್ನು ತೆಗೆದು, ಅದರಲ್ಲಿನ ದ್ರಾವಕವನ್ನು ಆ ಗೂನಮನುಷ್ಯನ ಕುತ್ತಿಗೆಗೆ ಬಹಳ ಹೊತ್ತಿನವರಿಗೂ ಉಜ್ಜಿ, ನಂತರ ತನ್ನಚೀಲದಲ್ಲಿದ್ದ ಕಬ್ಬಿಣದ ಸಲಾಕೆಯನ್ನು ತೆಗೆದು ಹಲ್ಲುಗಳ ಸಂದಿನಲ್ಲಿ ಬಿಗಿಯಾಗಿ ದೂರಿಸಿ, ಬಾಯಿಯನ್ನು ತೆರೆದು ಸಣ್ಣ ಇಕ್ಕಳದಿಂದ ಗಂಟಲಿನಲ್ಲಿ ಸಿಕ್ಕಿಕೊಂಡಿದ್ದ ಮೂಳೆಯನ್ನು ತೆಗೆದು, ಎಲ್ಲರಿಗೂ ತೋರಿಸಿದನು. ಕೂಡಲೆ ಗೂನಮನುಷ್ಯನು ತನ್ನ

ಕೈಕಾಲುಗಳನ್ನು ಒರೆದುಕೊಂಡು, ಚೀರುತ್ತ ಉಸುರನ್ನು ಬಿಟ್ಟು, ಪ್ರಾಣಧಾರಕಚಿಹ್ನೆಯೆನ್ನು ತೋರ್ಪಡಿಸಿದನು. ಆಗ ರಾಜನೂ, ಆತನ ಆಸ್ಥಾನದವರೂ, ಈವಿಧವಾದ ಚಿಕಿತ್ಸೆಯೆನ್ನು ಕಂಡು, ಬಹಳವಾಗಿ ಆಶ್ಚರ್ಯಯುಕ್ತರಾದರು. ಒಂದೂವರೆ ದಿನದವರಿಗೂ ಪ್ರಾಣ ಹೋಗಿದ್ದವನಂತೆ ಸತ್ತು ಬಿದ್ದುಹೋಗಿದ್ದ ಮನುಷ್ಯನನ್ನು ಬದುಕಿಸಿದುದರಿಂದ ಸಂತುಷ್ಟನಾಗಿ ಆ ಕ್ಷೌರಕನಲ್ಲಿರುವ ತಪ್ಪುಗಳನ್ನೆಲ್ಲಾ ಕ್ಷಮಿಸಿ, ಆತನಿಗೆ ವರ್ಷಾಸನವನ್ನು ಕೊಟ್ಟು, ತನ್ನಬಳಿಯಲ್ಲೆ ಇಟ್ಟುಕೊಂಡನು. ನಂತರ ದರ್ಜಿಯವನಿಗೂ, ವ್ಯಾಪಾರಗಾರನಿಗೂ, ವೈದ್ಯನಿಗೂ, ಕೈಕಸ್ತವರ್ತಕನಿಗೂಸಹ, ಈ ಗೂನುಮನುಷ್ಯನ ಕಥೆಯು ಜ್ಞಾಪಕದಲ್ಲಿರುವುದಕ್ಕಾಗಿ ಅವರುಗಳಿಗೆ ಉಡುಗೆರೆಗಳನ್ನುಕೊಡಿಸಿ, ತಾನು ಸಂತೋಷಯುಕ್ತನಾಗಿ ಸರ್ವರನ್ನು ತಂತಮ್ಮ ಮನೆಗಳಿಗೆ ಕಳುಹಿಸಿ, ಕ್ಷೌರಕನನ್ನು ತನ್ನಬಳಿಯಲ್ಲೆ ಇಟ್ಟುಕೊಂಡನು. ಈತೆರದಿಂದ ಭಯಾಯುಕ್ತವಾದ ಮರಣದ ವಿಚಾರವನ್ನು ಸಂಪೂರ್ಣವಾಗಿ ತಿಳಿಯಹೇಳಿ, ಷಹರಜಾದಿಯು ಬೆಳಗಾದ ಕೂಡಲೆ ಕಥೆಯನ್ನು ನಿಲ್ಲಿಸಿದಳು. ದಿನರಜಾದಿ ತನ್ನ ಅಕ್ಕನನ್ನುಕುರಿತು ಪ್ರಿಯಸಹೋದರೀ! ನೀನು ಹೇಳುವ ಕಥೆಯು ಇಷ್ಟೊಂದು ಚಮತ್ಕಾರಯುಕ್ತವಾಗಿರುವುದೆಂದು, ನಾನೆಂದಿಗೂ ಭಾವಿಸಿರಲಿಲ್ಲವೆಂದಳು.

ಸುಲ್ತಾನನಾದರೂ, ಈಗಹೇಳಿದ ಕುಂಟಹುಡುಗ ಕ್ಷೌರಿಕ ಮತ್ತು ಗೂನರ ಕಥೆಗಳಿಂದ ನನಗೆ ಅತ್ಯಾನಂದ ಉಂಟಾಯಿತೆಂದು ನುಡಿಯಲು ಷಹರಜಾದಿಯು ತಂಗೀ! ನಮ್ಮ ಸುಲ್ತಾನರು ದಯೆಮಾಡಿ, ನನಗೆ ಪ್ರಾಣದಾನ ಮಾಡುವುದಾದರೆ, ನಾಳೆ ಬೆಳಿಗಿನ ಜಾವದಲ್ಲಿ ಮೊದಲಿನ ಕಥೆಗಳಿಗಿಂತಲೂ, ಅತ್ಯಂತ ವಿನೋದಕರವಾದ (ಕಲೀಫ್ ಹರೂನ್ ಅಲರಾಶ್ಚಿದು) ರವರ ಪ್ರಿಯನಾಯಕಿಯಾದ, (ಷೇಮುಸಲುಗೆಹರು) ಎಂಬವಳಿಗೂ, (ಅಬೌನು ಹಸೀನಲ್ಲಾ ಇಬ್ನಬ) ಎಂಬವನಿಗೂ, ನಡೆದ ಕಥೆಯೆನ್ನು ಹೇಳುವೆನೆನಲು ಸುಲ್ತಾನರು ಸಮ್ಮತಿಸಿ ಅಲ್ಲಿಂದತೆರಳಿ ಹೊರಟುಹೋದರು.

೧೪೪ನೆಯ ರಾತ್ರಿ ಕಥೆ.

ಮರುದಿನ ಬೆಳಗಿನ ಜಾವದಲ್ಲಿ ದಿನರಜೌದಿ ಸುಲಾತ್ತಾನಿಯೆನ್ನು ಎಚ್ಚರಗೊಳಿಸಿ ಅಕ್ಕಾ! ಬೆಳಗಾಗುವುದಕ್ಕೆ ಸ್ವಲ್ಪಹೊತ್ತು ಉಳಿದಿರುವುದು. ನೀನು ನಿನ್ನೆದಿನ ಹೇಳಿದಂತೆ ಕಲೀಫ್ ಹರೋನ್ ಅಲರಾಶ್ಚಿದರ ಪ್ರಿಯನಾಯಕಿಯಾದ ಷೇಮುಸೆಲುಸೆಹರಿಗೂ, ಅಬೌಲು ಹಸೇನು ಅಲ್ಲಿ ಇರ್ಬ್ಬಬಕಾರನಿಗೂ, ನಡೆದ ಕಥೆಯೆನ್ನು ವಿಸ್ತರಿಸಿ, ನಮ್ಮಗಳ ಮನಸ್ಸನ್ನು ತೃಪ್ತಿಪಡಿಸಬೇಕೆಂದು ಬೇಡಿಕೊಳಲು, ಷಹರಜೌದಿಯು ಅದರಂತೆ ನುಡಿಯಲಾರಂಭಿಸಿದಳು.

ಕಲೀಫ್ಹಹರೋನ್ ಅಲರಾಶ್ಚಿದರ ಪ್ರಿಯನಾಯಕಿಯಾದ ಷೆಮುಸೆಲುಸೆಹರಿಗೂ, ಅಬೌಲುಹಸೇನೆಲ್ಲಿಯಿರ್ಬ್ಬ

—(ಇ ಯವರಿಗೆ, ನಡೆದ ಕಥೆ.)—

ಕಲೀಫ್ಹಹರೋನ್ ಅಲರಾಶ್ಚಿದನೆಂಬವನು ಬಾಗದಾದು ನಗರವನ್ನು ಆಳುತ್ತಿರುವಾಗ, ಆ ಪಟ್ಟಣದಲ್ಲಿ ಅಬೌಲು ಹುಸೇನಲ್ಲಿಯಿರ್ಬ್ಬ, ತೆಹರಿ ಎಂಬೊಬ್ಬ ವರ್ತಕನಿದ್ದನು. ಆತನು ರೂಪಯೌವನ ಸಂಪನ್ನನಾಗಿಯೂ, ಸತ್ಯದಿಂದ ವ್ಯಾಪಾರಮಾಡತಕ್ಕವನಾಗಿಯೂ, ಇದ್ದುದರಿಂದ, ಆ ಕಾಲದಲ್ಲಿ ತನ್ನ ಸಮಾನರಾದ ಇತರ ವರ್ತಕರಿಗಿಂತಲೂ, ಅತಿಶಯವಾದ ಕೀರ್ತಿ ಗೌರವಗಳನ್ನು ಪಡೆದಿದ್ದನು. ಆ ಕಾರಣದಿಂದಲೇ ಪ್ರಜೆಗಳು ಆತನನ್ನು ಬಹು ಮರ್ಯಾದೆಯಿಂದ ನೋಡುತ್ತಾ, ರಾಜನಿಗಿಂತಲೂ ಅಧಿಕವಾಗಿ ಆದರಿಸುತ್ತಿದ್ದರು. ಆತನ ಯೋಗ್ಯತೆಯನ್ನೂ, ವ್ಯಾಪಾರಧರ್ಮವನ್ನೂ, ಜನರಲ್ಲಿ ಸಂಪಾದಿಸಿರುವ ನಂಬಿಕೆಯನ್ನೂ ನೋಡಿ, ಕಲೀಫರು ವಿಶೇಷವಾಗಿ ತಾವೂ ಆತನಲ್ಲಿ ನಂಬಿಕೆಯನ್ನು ಇಟ್ಟು, ತಮ್ಮ ಅಂತಃಪುರದ ಸ್ತ್ರೀಯರಿಗೆ ಬೇಕಾಗುವ ಉಡಿಗೆತೊಡಿಗೆಗಳನ್ನೂ, ಉತ್ತಮ ಆಭರಣಗಳನ್ನು ತಂದುಕೊಡುವಂತೆ ಆಜ್ಞಾಪಿಸಿದರು. ಆತನು ರಾಜಾಜ್ಞೆಯಂತೆ ದೇವಯೋಗ್ಯವಾದ ಉತ್ತಮವಸ್ತ್ರಗಳನ್ನು ಸಂಪಾದಿಸಿ ತೆಗದುಕೊಂಡುಹೋಗಿ, ಅಂತಃಪುರದೆ ಸ್ತ್ರೀಯೆರಿಗೆ ಕೊಡುತ್ತಿದ್ದನು. ಆತನ

ಸುಗುಣಸೌಭಾಗ್ಯವನ್ನೂ, ಕಲೀಫರ ಅನುಗ್ರಹವನ್ನೂ, ತಿಳಿದು ಆ ಪಟ್ಟಣದ ವಜೀರ ಮುತ್ತು ಘನವಂತರ ಮನೆಯವರೆಲ್ಲರೂ, ಆತನಮನೆಯೆನ್ನು ತಮ್ಮ ಆಸ್ಥಾನವನ್ನಾಗಿ ಮಾಡಿಕೊಂಡಿದ್ದರು. ಹೀಗೆ ಪ್ರತಿದಿನವೂ, ಆ ಪಟ್ಟಣದ ದೊಡ್ಡಮನುಷ್ಯರೆಲ್ಲರೂ, ಆತನಮನೆಗೆ ಹೋಗಿಬರುತ್ತಿರುವಲ್ಲಿ, ಆ ವರ್ತಕನು ಒಬ್ಬಬ್ಬನೊಬ್ಬ ಸುಂದರಪುರುಷನನ್ನು ನೋಡಿ, ಅವನ ಸೌಂದರ್ಯಕ್ಕೆ ಬೆರಗಾಗಿ, ಆತನಲ್ಲಿ ಸಂಪೂರ್ಣವಾದ ವಿಶ್ವಾಸವನ್ನು ತೋರ್ಪಡಿಸುತ್ತಿದ್ದನು. ಆತನಹೆಸರಾದರೋ ಅಜೀಜಾಹುಸೇನಯಿರ್ಬಬ. ಆತನು ಪೂರ್ವದಲ್ಲಿ ವರ್ಷಿಯೂ ರಾಜನ ಮನೆತನದವನು. ಆತನವಂಶೀಕರು, ಬಾಗದಾದು ನಗರಕ್ಕೆ ಬಂದು, ವಾಸಮಾಡುತ್ತ ಬಹುಕಾಲದಿಂದಲೂ ಪ್ರಸಿದ್ಧರಾಗಿದ್ದರು. ಆತನ ಸೌಂದರ್ಯವೂ, ಚಾತುರ್ಯವೂ, ಸಂಪತ್ಸೌಭಾಗ್ಯಗಳೂ ಸಹ, ಸೃಷ್ಟಿಕರ್ತನ ಸಾಮರ್ಥ್ಯವನ್ನು ಹೊರಪಡಿಸುತ್ತಿದ್ದವು.

ಆತನ ಮುಖದಲ್ಲಿ ನ್ಯಾಯರೀತಿಯಿಂದ ವಿಭಜಿಸಿ, ಸೃಷ್ಟಿಸಿ ಇರುವ ಲಾವಣ್ಯವನ್ನೂ, ತದ್ವಾರ ಅದರದರ ಯೋಗ್ಯತಾನುಸಾರವಾಗಿ ಸ್ವಭಾವಸಿದ್ಧವಾಗಿ ಹೊರಡುತ್ತಿರುವ ನಯವಿನಯ, ಭಕ್ತಿಶೃಂಗಾರಾದಿಗಳಿಂದ ಕೂಡಿ, ಮೃದುವಾಕ್ಯವೂಸಹ ಸರ್ವರಿಗೂ ಆಹ್ಲಾದಕರಗಳಾಗಿ ಇದ್ದುದರಿಂದ, ಆತನನ್ನು ನೋಡಿದವರೆಲ್ಲರೂ, ವ್ಯೋಹದಿಂದ ನಲುಗಿ ಹೋಗುತ್ತಿದ್ದರು. ಆತನು, ಕಂಠಸ್ವರದಿಂದ ಕೋಗಿಲೆಯನ್ನು ಹೋಲುತ್ತ, ಹೇಳಲಸದೃಶವಾದ ವಾಕ್ಚಾತುರ್ಯವನ್ನು ಹೊಂದಿ, ತನ್ನ ಮನೋಹರವಾದ ಮಾತುಗಳು ಕೇಳತಕ್ಕವರಿಗೆ, ಆನಂದಪ್ರದವಾಗಿಯೂ, ಸ್ಪಷ್ಟವಾಗಿ ತಿಳಿಯುವಂತೆಯೂ, ವಿವೇಕಾವಿವೇಕಗಳನ್ನು ಬೀರ್ಪಡಿಸುವಂತೆಯೂ ಇದ್ದರು. ಆತನು ತಾನಾಡುವ ಮಾತಿನಿಂದ ಯಾರಿಗಾದರೂ, ಅಸಮಾಧಾನ ಉಂಟಾಗುವದೆಂಬ ಭಯದಿಂದ ವಿನಯವಾಗಿಯೂ, ರಸಿಕರಂಜನೆಯಾಗಿಯೂ ಸರ್ವರ ಮನೋವೃತ್ತಿಗೆ ನಿಲುಕುವಾಗಿಯೂ, ಇರುವಂತೆ ಸರಸೋಕ್ತಿಗಳನ್ನೆ ಸೂಸುತ್ತಿದ್ದನು. ಇಂತಹ ಗುಣರೂಪಸುಂದರನಾಗಿ, ಇತರ ರಾಜಪುತ್ರರಿಗಿಂತಲೂ ವಿಶೇಷವಾದ ಸದ್ಗುಣಗಳನ್ನು ಹೊಂದಿರುವ ಆ ರಾಜಕುಮಾರನಾಯಿರ್ಬಬ, ಎಂಬವನಲ್ಲಿ, ಇರ್ಬಬ, ಕೆಹರಿ ಎಂಬ ಆವರ್ತಕನು

ಪ್ರೀತಿವಿಶ್ವಾಸಗಳಿಂದ ನಡೆದುಕೊಳ್ಳುವುದೇನೂ ಆಶ್ಚರ್ಯವಲ್ಲ ಒಂದಾನೊಂದುದಿನ ಆ ರಾಜಪುತ್ರನು, ವರ್ತಕನ ಅಂಗಡಿಯಲ್ಲಿ ಕುಳಿತುಕೊಂಡಿರುವಾಗ, ಪಂಚವರ್ಣದ ಕುದುರೆಯನ್ನು ಹತ್ತಿ ವಿಹವಾದ ಏಳೆಂಟು ಮಂದಿ ಪರಿಚಾರಕಿಯರಿಂದ ಕೂಡಿದವಳಾಗಿ, ಪೂರ್ಣಿಮಾಚಂದ್ರನಂತೆ ಹೊಳೆಯುತ್ತಿರುವ ತನ್ನ ಮುಖವು, ಹಗಲಿನಲ್ಲಿಯೂ, ಕಾಂತಿಯುಕ್ತವಾಗಿರಲು, ಕೃಷ್ಣಪಕ್ಷದ ಚಂದ್ರನಂತೆ ಮುಖವರ್ಚಸ್ಸಿನಿಂದ ಕೂಡಿರುವ ತನ್ನ ದಾದಿಯರಿಂದ ಪರಿವೇಷ್ಟಿತಳಾಗಿ, ಏನೋ ಸಾಮಾನುಗಳನ್ನು ತೆಗೆದುಕೊಳ್ಳಬೇಕೆಂದು, ಆ ವರ್ತಕನ ಅಂಗಡಿಗೆ ಬಂದು ಆತನಸಂಗಡ ಮಾತನಾಡಬೇಕೆಂದು, ವಿಶಾಲವಾಗಿಯೂ, ರಮಣೀಯವಾಗಿಯೂ, ಇರುವ ಸ್ಥಲದಲ್ಲಿ ನಿಂತುಕೊಳ್ಳಲು, ವರ್ತಕನನ್ನು ನೋಡಿ, ಬಹು ಮರ್ಯಾದೆಯಿಂದ ಮಾತನಾಡಿಸಿ, ಕುಳಿತುಕೊಳ್ಳುವಂತೆ ಪಾರ್ಥಿಸಿದನು. ಈ ಕಾಲದಲ್ಲಿ ಮರ್ಯಾದೆಯನ್ನು ತೋರ್ಪಡಿಸದೆ, ಸುಮ್ಮನಿರಬಾರದೆಂದು, ಪರ್ಷ್ಯದೇಶದ ರಾಜಕುಮಾರನು, ಶೃಂಗಾರದ ಜರಿಯವಸ್ತ್ರವನ್ನು ಹಾಸಿ, ಅವಳನ್ನು ಕುಳಿತುಕೊಳ್ಳುವಂತೆ ಬೇಡಿಕೊಂಡು, ನಂತರ ಮರ್ಯಾದಾರ್ಥವಾಗಿ ಹೊರಗೆಹೋಗಿ, ಪುನಃ ಅಳಗೆ ಬಂದು ಆಕೆಯ ಕೈಗಳನ್ನು ಮುತ್ತಿಟ್ಟುಕೊಂಡು, ಎದುರಿಗಿರುವ ಒಂದಾನೊಂದು ಸೋಫಾದಬಳಿಯಲ್ಲಿ ನಿಂತುಕೊಂಡನು. ಆಲಲನಾಮಣಿಯು ವರ್ತಕನ ಪರಿಚಯವನ್ನು ಚೆನ್ನಾಗಿ ತಿಳಿದಿದ್ದವಳಾದುದರಿಂದ, ಮುಸುಕು ತೆಗೆದು ಮಾತನಾಡುತ್ತಿರಲು ಲೋಕೋತ್ತರವಾದ ಆಕೆಯ ಸೌಂದರ್ಯವನ್ನು ನೋಡಿ, ವ್ಯಾಮೋಹದಿಂದ ತನ್ನ ದೃಷ್ಟಿಯನ್ನು ಅವಳ ಮುಖಕಮಲದಲ್ಲಿ ನೆಲೆಗೊಳಿಸಿ, ಹಿಂದೆಗೆಯದೆ ನೋಡುತ್ತಿದ್ದನು.

ಆ ಹೆಂಗಸೂಕೂಡ ಆ ರಾಜಕುಮಾರನ ಸೌಂದರ್ಯಕ್ಕೆ ಮೆಚ್ಚಿ ಆತನಿಗಿಂತಲೂ, ಅತಿಶಯವಾದ ವ್ಯಾಮೋಹವನ್ನು ಹೊಂದಿ, ದೃಷ್ಟಿಸಿನೋಡುತಾ, ಸ್ವಾಮಿ ! ದಯವಾಡಿ, ಕುಳಿತುಕೊಳ್ಳಬೇಕೆಂದು ಹೇಳಲು, ಆತನು ತನ್ನಪಕ್ಕದಲ್ಲಿದ್ದ ಸೋಫಾದಮೇಲೆ ಕುಳಿತು, ಆ ಲಲನಾಮಣಿಯ ಮುಖಬಿಂಬದಿಂದ ಹೊರಡುತ್ತಿರುವ, ಅಮೃತರಸವನ್ನು ಪಾನಮಾಡುತಾ ಇರಲು, ಆ ಲಲನೆಯು ಆತನ ಅಭಿಪ್ರಾಯವನ್ನು ತಿಳಿದು, ಆತನ ವ್ಯಾಮೋಹವನ್ನೂ ಮತ್ತಷ್ಟು ಹೆಚ್ಚುಮಾಡುವಂತಹ ಶೃಂಗಾರವಿಲಾಸವನ್ನು ಬೀರುತಾ, ವರ್ತಕನಬಳಿಗೆ ಹೋಗಿ, ತಾನು ಬಂದಿರುವ ಕಾರ್ಯವನ್ನು

ಸಿದ್ಧಪಡಿಸಿಕೊಂಡಿರುವಂತೆ, ನನಗೆ ಆಜ್ಞಾಪಿಸಿರುವುದರಿಂದ ನಾನು ಅದರಂತೆ ನಡೆದುಕೊಳ್ಳುತ್ತಿರುವೆನು ಎಂದು ಹೇಳಿ, ಪರ್ಷಿಯಾ ರಾಜಕುಮಾರನಿಗೆ ಅ ಲಲನಾಮಣಿಯಮೇಲೆ ಉಂಟಾಗಿರುವ ಮೋಹವನ್ನು ಕಳೆಯಬೇಕೆಂದು ಎಷ್ಟು ಪ್ರಯತ್ನ ಮಾಡಿದರೂ, ಸಾಧ್ಯವಾಗದೆ, ಆತನ ಮೋಹವು ಕ್ಷಣೆ ಕ್ಷಣೆ ಹೆಚ್ಚುತ್ತಾ ಹೋ! ಮೋಹನಾಂಗಿಯಾದ ಪೆಮುಸೆಲ್‌ನೆಹರೆಂಬ ನನ್ನ ಮುದ್ದಿನ ಮುಕುರವೇ! ಆಹಾ! ಲೋಕವಿಖ್ಯಾತವಾದ ಮಧ್ಯಾಹ್ನ ಕಾಲದ ಸೂರ್ಯನೆಂಬ ನಿನ್ನ ಹೆಸರಿಗಿಂತಲೂ, ಅಧಿಕವಾದ ಆನಂದಪ್ರಭೆಯನ್ನು ಬೀರುತ್ತಿರುವ, ನಿನ್ನ ಮುಖವನ್ನು ನನಗೆತೋರಿಸು ಪಂಚಬಾಣನೆ ಪರಮದಾರುಣವಾದ ಪೆಟ್ಟಿಗೆ ನನ್ನನ್ನು ಗುರಿಮಾಡಿದೆಯೊ! ಎಂದು ಹಂಬಲಿಸಿ, ಆಹಾ! ಸೌಂದರ್ಯಶಾಲಿನೀ! ಮೋಹಕರವಾದ ನಿನ್ನ ಮುದ್ದು ಮುಖವನ್ನು ನೋಡತಕ್ಕ ಸೇವಕನನ್ನಾಗಿ ನನ್ನನ್ನು ಎಂದಿಗೆ ಮಾಡಿಕೊಳ್ಳುವೆಯೋ ಅಂದಿಗೆ ನಾನು ಧನ್ಯನಾದೆನೆಂದು, ವಿಧವಿಧವಾಗಿ ಮೋಹಾತುರದಿಂದ ಕಾವುಕರ ನುಡಿಗಳನ್ನು ನುಡಿಯುತ್ತಿದ್ದನು.

ಈತೆರದಿಂದ ಪರ್ಷಿಯಾದೇಶದ ರಾಜಪುತ್ರನಿಗೆ ತನ್ನಮನವನ್ನು ಸೂರೆಗೊಟ್ಟು, ಆತನ ಹೃದಯವನ್ನು ತಾನವಹರಿಸಿಬಂದು, ಅಂತಃಪುರವನ್ನು ಸೇರಿದ ಪೆಮುಸೆಲ್‌ನೆಹರಳು ತನ್ನ ಪ್ರಾಣನಾಯಕನು ಏಕಾಏಕಿ ಬರುವನೋ. ಎಂದು ಹಂಬಲಿಸುತ್ತ ಆತನಸಂಗಡ ಸರಸಸಲಮಾಡಿ, ನಾನ್ನಡುತ್ತಿರುವಳಂತೆ ಅಭಿನಯಿಸಿ, ತಾನೊಬ್ಬಳೆ ಇರುವುದನ್ನೋಜ್ಞಾವಿಸ್ಮೃತಳಾಗಿ ತಾನು ವರ್ತಕನಿಗೆ ತೋರಿಸಿದ ದಾದಿಯನ್ನು ಕರೆದು, ತಿರುಗಿ ಬೇಗದಿಂದ ವರ್ತಕನಬಳಿಗೆ ಹೋಗಿ ಪರ್ಷಿಯಾ ರಾಜಕುಮಾರಲೂ, ಕರೆದುಕೊಂಡುಬರುವಂತೆ ಹೇಳು ಬೊಗಡು. ಎಲ್ಲಿಯೂ ನಿಲ್ಲಬೇಡ. ನು, ಬರುವವರಿಗೂ, ನನ್ನ ಪ್ರಾಣವು ತಲ್ಲಣಿಸುತ್ತಿರುವುದು ಎನಲು, ದಾದಿಯೆ ಅಲ್ಲಿಂದ ಹೊರಟು ಅಂಗಡಿಗೆ ಬರುವಷ್ಟರೊಳಗೆ ವರ್ತಕನು, ರಾಜಪುತ್ರನಿಗೆ ಮೋಹವು ತೆರೆತೆರೆಯಾಗಿ ಹೊದ್ದುವಂತೆ ಮಾಡಬೇಕೆಂದು ಬಯಸಿ, ಆತನನ್ನು ತರಿಯುತ್ತಿದ್ದನು. ಕೂಡಲೆ ದಾದಿಯು ಅಂಗಡಿಬಳಿಗೆ ಬಂದು, ಅಯ್ಯಾ! ಆರ್ಯಕುಲ ಶಿರೋಮಣಿಗಳಿರಾ! ಕಲೀಫನಾದ ಹರೊ ಅಲರಾಶ್ಚಿದರ ಪ್ರಿಯನಾಯಕಿಯರಾದ ನವೊಢತಿ ಪೆಮುಸೆಲ್

ನೆಹರೆಂಬವರು, ಪರ್ಷಿಯಾ ರಾಜಕುಮಾರನನ್ನು ಶೀಘ್ರವಾಗಿ ಕರೆದು ಕೊಂಡುಬರುವಂತೆ ಹೇಳಿ ತಾನು ಎಂದಿಗೆ ಆತನಮುಖವನ್ನು ನೋಡುವೆನೊ ಎಂದು ಹೇಳಿ, ಹಂಬಲಿಸುತ್ತಿರುವಳೆಂದು ನುಡಿದಳು. ಕೂಡಲೆ ವರ್ತಕನು ಸಾವಕಾಶ ಮಾಡದೆ ಅಲ್ಲಿಂದ ಹೊರಟನು. ರಾಜಕುಮಾರನು ತನ ಗಾಗಬೇಕಾಗಿರುವ ಉಪಾಯಗಳೊಂದನ್ನೂ ಚಿಂತಿಸದೆ ಆತನಸಂಗಡ ಹೊರ ಟನು. ಇಬ್ಬ ತ್ರೆಯರು ತಾನು ವಾಡಿಕೆಯೊಗಿ ಅಂತಃಪುರಕ್ಕೆ ಹೋಗಿಬರುವ ಪದ್ಧತಿ ಇದ್ದುದರಿಂದ ತನ್ನ ಸಂಗಡ ರಾಜಕುಮಾರನನ್ನೂ ಕರೆದುಕೊಂಡು ದಾದಿಯೊಡನೆ ಅಂತಃಪುರವನ್ನು ಹೊಕ್ಕುಬರಲು ಆಕೆ ಅವರಿಬ್ಬರನ್ನೂ ಒಂದಾನೊಂದು ದೊಡ್ಡ ಕೈಸಾಲೆಗೆ ಕರೆದುಕೊಂಡುಹೋಗಿ ಅಲ್ಲಿ ಕುಳಿತು ಕೊಳ್ಳುವಂತೆ ಹೇಳಿದಳು. ಪರ್ಷಿಯಾ ರಾಜಕುಮಾರನು ತಮ್ಮ ಪುತ ಗ್ರಂಥಗಳಲ್ಲಿ ಹೇಳಿರುವ ಚಿತ್ರವಿಚಿತ್ರವಾದ ಸ್ವರ್ಗಲೋಕದ ಸುಖವನ್ನು ಬೀರುತ್ತಿರುವ ಶೃಂಗಾರವಸ್ತುಗಳನ್ನೂ, ಅಲ್ಲಲ್ಲಿ ಅಣಿಮಾಡಿ, ನೋಟ ಕರಿಗೆ ಆನಂದವನ್ನುಂಟುಮಾಡುವಂತೆ ಅಲಂಕರಿಸಿರುವ ನಾನಾವಿಧವಾದ ರತ್ನನಿರ್ಮಿತವಾದ ಪುತ್ಥಳಿಪರಾಗಗಳನ್ನು ನೆಲಕ್ಕೆ ಹಾಸಿರುವ ಬಲುಸೊಗ ವಾದ ಹಲವುಬಣ್ಣಗಳಿಂದ ಮನೋಹರವಾದ ರತ್ನಕಂಬಗಳನ್ನು ನೋಡಿ, ಸದೂರದಲ್ಲಿ ಚಾರುತರವಾಗಲಂಕರಿಸಿ, ಸಾರಭೂತವಾದ ಸುಗಂಧದ್ರವ್ಯ ಬೆಳ್ಳಿರುವುದರಿಂದ ಮನೋರಂಜಿತವಾಗಿರುವ, ಆ ಸೆಜ್ಜೆಯನ್ನು ತ್ತ ಆನಂದಪರವಶರಾಗಿರುವಲ್ಲಿ ಬಾಣಸಿಗರಾದ ದಾದಿಯರುಬಂದ ರನ್ನೂ, ಉತ್ತಮಾಸನದಲ್ಲಿ ಕುಳ್ಳಿರಿಸಿ, ವಿಧವಿಧವಾದ ಭಕ್ಷ್ಯ ಗಳನ್ನುತಂದು ಊಟಮಾಡಿಸಿ ಅವರವರಿಗಿಷ್ಟವಾದ ಪದಾರ್ಥಗ ಗಾಗ್ಯೆ ತಂದುಕೊಡುತ್ತ, ಅತ್ಯಂತ ದೈನ್ಯದಿಂದಕೂಡಿ, ಸಕಲವಿಧ ಉಪಚಾರಗಳಿಂದಲೂ ಭೋಜನವನ್ನು ಆಗಮಾಡಿಸಿದರು.

ನಂತರ ಆರೋಗ್ಯಪ್ರದವಾದ ಸಾರಾಯಿಯನ್ನು ಅಮೃತಶಿಲೆಯ ಒಟ್ಟಲುಗಳಲ್ಲಿ ತುಂಬಿ, ಪಾನಮಾಡುವಂತೆ ಹೇಳಿಕೊಡಲು, ಅಮೃತ ರೂಪವಾದ ಆ ಮಧುವನ್ನು ಅವರು ಕುಡಿದು ಸಂತುಷ್ಟರಾಗಿರುವಲ್ಲಿ ಭಂಗಾರದ ಗಿಂಡಿಗಳಲ್ಲಿ ನೀರನ್ನುತಂದು, ಕೈಗಳನ್ನು ತೊಳೆದುಕೊಳ್ಳು ವಂತೆ ಹೇಳಿದರು. ನಂತರ ನಾನಾವಿಧವಾದ ಸುಗಂಧದದ್ರವ್ಯಗಳನ್ನು

ರತ್ನದ ತಟ್ಟೆಯಲ್ಲಿಟ್ಟುಕೊಂಡುಬಂದು, ಪನ್ನೀರಿನಿಂದ ಗಡ್ಡವನ್ನು ನೆನೆಸಿ ಸರ್ವಾಂಗಕ್ಕು ವ್ಯಾಪಿಸಿ, ನ್ಯಾವೋಹವನ್ನು ಹುಟ್ಟಿಸುತ್ತಿರುವಂತಹ ಪರಿಮಳದ್ರವ್ಯಗಳಿಂದ ಅವರಿಗೆ ಸ್ನಾನ ಮಾಡಿಸಿ, ತಾವು ಅವರ ಸೌಂದರ್ಯವನ್ನೂ, ವಿಲಾಸವನ್ನೂ, ವಿನಯವನ್ನೂ ನೋಡಿ, ಆನಂದಭರಿತರಾಗಿ ಇರುತಿದ್ದರು. ಹೀಗಿರುವಲ್ಲಿ ಹೊರಗಿನಿಂದೊಬ್ಬ ದಾದಿಯು ಓಡಿಬಂದು, ಅಯ್ಯಾ ! ಬನ್ನಿ ಬೇಗ ! ಬನ್ನಿ ! ನಿಮ್ಮನ್ನು ರಾಣಿಯವರು ನೋಡ ಬೇಕೆಂಬ ಕುತೂಹಲದಿಂದ ಕಾದುಕೊಂಡಿರುವರೆಂದು ಹೇಳಿ, ಅವರಿಬ್ಬರನ್ನೂ ಮತ್ತೊಂದು ಅಂತಃಪುರಕ್ಕೆ ಕರೆದುಕೊಂಡುಹೋದರು.

ಆ ಅಂತಃಪುರವು ಅತಿರವ್ಯವಾದ ಅವ್ಯುತಶಿಲಾಹುಯಗಳಾದ ಕಂಭಗಳಿಂದಲೂ, ಪಚ್ಚೆ ಮಣಿಯ ಬೋದಿಗೆಯಿಂದಲೂ, ಸುವರ್ಣದ ಬಾಗಿಲುವಾಡಗಳಿಂದಲೂ, ಚಿತ್ರವಿಚಿತ್ರವಾದ ಪುತ್ಥಳಿಗಳಿಂದಲೂ, ಅಲಂಕೃತವಾಗಿ ಶೀತಲವಾದ ಮಂದವಾರುತನನ್ನು ತಂದೊಡ್ಡುವ ಜೌತಿರತ್ನಗಳಿಂದ ನಿರ್ಮಿತವಾದ ಕಿಟಿಕಿಗಳಿಂದಲೂ, ಶೋಭಿತವಾಗಿ ಪಟ್ಟದುಕೂಲದಲ್ಲಿ ಸೃಷ್ಟಿಯೊಳಗಣ ವಿಚಿತ್ರವನ್ನೆಲ್ಲಾ ತೋರ್ಪಡಿಸುವಂತೆ ಬರೆದಿರುವ ಪರದೆಗಳನ್ನು ಬಾಗಿಲಾಗಿಹೊಂದಿ, ಮನೋಹರವಾದ ಜರತಾರಿಯ ವಸ್ತ್ರಗಳನ್ನು ಹಾಸಿ, ದೀಪಗಳಿಂದಲೂ, ರತ್ನಗಳಿಂದಲೂ, ಅಲಂಕೃತವಾಗಿರುವ, ದೀಪಿಕಾಸ್ಥಾನಗಳಿಂದಲೂ ಮನೋಹರವಾಗಿ, ಅಲ್ಲಲ್ಲಿಗೆ ತಕ್ಕಂತೆ ಅಲಂಕಾರಮಾಡಿ, ಸಿದ್ಧಪಡಿಸಿರುವ ಕುರ್ಚಿಗಳಿಂದಲೂ, ಸೋಪಾಗಳಿಂದಲೂ, ಮನೋಜ್ಞವಾಗಿರುವ, ಆ ಅಂತಃಪುರವನ್ನು ನೋಡಿ, ಒಳಕಿಟಿಕಿಯಕಡೆಗೆ ತಿರುಗಿ ನೋಡಲು, ನಾನಾವಿಧಗಳಾದ ಲತೆಗಳಿಂದಲೂ, ಫಲವೃಕ್ಷಗಳಿಂದಲೂ, ಚಂದ್ರಕಾಂತಶಿಲೆಯ ಸೋಪಾನವನ್ನುಳ್ಳ ಪುಷ್ಕರಿಣಿಯಿಂದಲೂ, ಹಸರು, ಕೆಂಪು, ಹಳದಿ, ನೀಲ, ಶ್ವೇತವೆಂಬ ವರ್ಣಗಳನ್ನು ತಂತಮ್ಮ ಕಾಂತಿಯಿಂದ ಸೂರ್ಯರಶ್ಮಿಗೆ ಉಂಟುಮಾಡುತ್ತಿರುವಂತೆ ಬಳೆದು ನಿಂತಿರುವ ಗಿಡುಮರಗಳುಳ್ಳ ಉದ್ಯಾನವನ್ನು ನೋಡಿ, ಆನಂದಭರಿತರಾಗಿ, ಅದರ ಮಧ್ಯದಲ್ಲಿ ಅಂದವಾಗಿಯೂ, ಬಂಧುರವಾಗಿ ನಿರ್ಮಿಸಿರುವ ಜಲಯಂತ್ರದಿಂದ ಶೋಭಾಯಮಾನವಾಗಿ, ಜಲಕಣಗಳು ಉದುರಿ ಬೀಳುವುದನ್ನು ನೋಡುತ್ತಾ, ಆ ಉದ್ಯಾನವನದಲ್ಲಿರುವ ನಾನಾಜಾತಿಯ ವೃಕ್ಷಲತೆಗಳ

ಬುಡದಲ್ಲಿ, ಜಲಸೇಚನೆಗಾಗಿ ಮಾಡಿರುವ ಪಾತ್ರೆಗಳಲ್ಲಿ ನಿಂತು ಹೂಗಳ ಪರಿಮಳಗಳನ್ನು ಬೀರುತ್ತ, ಹಾಲಿನಂತೆ ಹೊಳೆಯುತ್ತಿರುವ ಜಲವನ್ನು ಶೀತಲವಾಗಿಯೂ, ಶೋಭಾಯುಮಾನವಾಗಿಯೂ, ಫಲಪುಷ್ಪಸಮೃದ್ಧವಾಗಿಯೂ, ಇರುವ ಅಲ್ಲಿನ ವೃಕ್ಷಲತಾದಿಗಳಮೇಲೆ ಕುಳಿತು ಧ್ವನಿಮಾಡುತ್ತಿರುವ, ಸುಂದರವಾದ ಪಕ್ಷಿಗಳನ್ನೂ ನೋಡುತ್ತ, ಅತ್ಯಂತ ಉತ್ಸಾಹಭರಿತರಾಗಿದ್ದರು. ಈತೆರನಾದ ಅಲ್ಲಿನ ಸೌಂದರ್ಯಭಾಗ್ಯಗಳನ್ನು ಪರ್ಷ್ಯಾರಾಜಕುಮಾರನು ಎಂದೂ ಕಾಣದವನಾದುದರಿಂದ, ಮಹದಾನಂದಭರಿತನಾಗಿ ನೋಡುತ್ತಿದ್ದನು. ಆದರೆ ವರ್ತಕನಿಗೆ ಈ ಅಂತಃಪುರವು ಹೊಸ ನೋಟವನ್ನು ಕಲ್ಪಿಸದಿದ್ದರೂ ಆತನೂ ರಾಜಪುತ್ರನಸಂಗಡಲೆ ನೋಡುತ್ತ ಆನಂದಪರವಶನಾಗಿರುವಲ್ಲು, ರಾಜಪುತ್ರನನ್ನು ವರ್ತಕನನ್ನು ತಾನು ಕರೆದುಕೊಂಡು, ಆ ಉದ್ಯಾನವನವನ್ನು ಸಂಪೂರ್ಣವಾಗಿ ನೋಡಿಕೊಂಡು ಹಿಂದಿರುಗಿಬರುತ್ತಾ ಮೋಹಕ್ಕೆ ಆಲಯವಾಗಿ, ಮನೋಜ್ಞವಾದ ಅಲಂಕಾರವನ್ನು ಹೊಂದಿರುವ ಆ ಲಲನಾಮಣಿಯ ಅಂತಃಪುರವನ್ನು ನೋಡಿ, ಅಯ್ಯಾ! ಈ ಗೃಹವಾವುದೆಂದುಕೇಳಲು ವರ್ತಕನು ಅಯ್ಯಾ! ಈ ಅಂತಃಪುರವನ್ನು ಹೋಲುವ ಅರಮನೆಯೆನ್ನು ನಾನೆಂದಿಗೂ ನೋಡಿದವನಲ್ಲ.

ಭೂಲೋಕದಲಾಗಲೀ, ಸ್ವರ್ಗಲೋಕದಲಾಗಲೀ, ಇಂತಹ ಸೊಬಗಿನ ಸುಗ್ಗಿಯುತಿರುವ ಮೋಹಕ್ಕೆ ಮೂಲವಾಗಿರುವವಳನ್ನು ನಾನು ಕಾಣೆನೆಂದು ಹೇಳಿದೆಯೆಲಾ, ಆ ಮನೆಯೆ! ಕಲೀಫರ ಪ್ರೀತಿಪಾತ್ರಳಾದ ಜುಬೈದೆ, ನೇಹರಳು ವಾಸವಾಡುವ ಅಂತಃಪುರ ಇಗೋ! ನಾನು ಈಗ ನಿಂತುಕೊಂಡಿರುವ ಆಸ್ಥಾನ ಮಂಟಪವೇ! ಕಲೀಫರು ರಾಜಕಾರ್ಯವನ್ನು ನೆರವೇರಿಸುವ ಸ್ಥಲವೆಂದು ಹೇಳಲು, ಪರ್ಷ್ಯಾರಾಜಪುತ್ರನು ಅಯ್ಯಾ! ನಾನು ಇಂತಹ ರಾಜೋಪಾಸ್ಥನದಲ್ಲಿ ನಿಂತಿರುವುದಾದರೆ ಪ್ರಾಣದಿಂದ ಒದ್ದುಕುತ್ತೇನೆನ್ನುವ ಆಸೆಯೆ ಇಲ್ಲವೆಂದು, ಭಾವಿಸುವನೆಂದು ಹೇಳಿದನು. ಇಂತೆಂದು ನುಡಿದು, ಷಹರಜಾದಿಯು ಬೆಳಗಾದಕೂಡಲೆ ಕಥೆಯನ್ನುನಿಲ್ಲಿಸಿ, ಮರಳಿ ಬೆಳಗಿನಜಾವದಲ್ಲಿ ಹೇಳಲಾರಂಭಿಸಿದಳು.

೧೪೬ನೆಯ ರಾತ್ರಿಯ ಕಥೆ

ಬಳಿಕ ಷಹರಜಾದಿಯು ಸುಲ್ತಾನರನ್ನು ಕು
ನಾನು ಹಿಂದೆ ಹೇಳಿದಹಾಗೆ ಪರ್ಷಿಯಾ ರಾಜ್ಯ
ಹೇಳಿದ ಮಾತನ್ನು ಕೇಳಿ, ಇಬ್ರಹೀಮನು ಅಯ್ಯಾ!
ಸಂರಕ್ಷಣಾರ್ಥವಾಗಿ. ನಾನು ಹೇಗೆ ನಿಜವಾಗಿ ಹೇಳು
ಧೈರ್ಯದಿಂದ ನೀನು ನಿನ್ನ ಪ್ರಾಣವ್ಯಾಮೋಹವನ್ನು ತ್ಯಜಿಸಿ
ಬೇಕು. ಈ ರಮಣೀಯವಾದ ಅರಮನೆಯನ್ನು ಕಲೀಫರು ತ
ಪ್ರಿಯಳಾದ ಷೇಮುಸೆಲ್‌ನೆಹರಿಗೆ ಪ್ರತ್ಯೇಕವಾಗಿ ಇರುವಂ
ಅರಮನೆಯು ಪಕ್ಕದಲ್ಲಿ ಕಟ್ಟಿಸಿಕೊಟ್ಟಿರುವರು. ಇದರ
ನಿತ್ಯಾನಂದವುಂಟಿರ. ಇಂತಹ ಅರಮನೆಯನ್ನು ಕಲೀಫರು, ತಾನು
ಕಟ್ಟಿಸಿಕೊಟ್ಟಿದ್ದರೂ, ರಾಣಿಯು ಯಾವ ನಿರ್ಬಂಧವೂ ಇಲ್ಲದಂತೆ
ಸರ್ವಸ್ವಾತಂತ್ರ್ಯ ಉಳ್ಳವಳಾಗಿರುವಳು. ಆದುದರಿಂದ ಷೇಮುಸೆಲ್‌ನೇಹರು
ತನ್ನಿಷ್ಟಾನುಸಾರವಾಗಿರುವುದಕ್ಕೆ, ಯಾರ ಅಡ್ಡಿಯೂ ಇಲ್ಲ. ಕಲೀಫರು
ತಮಗೆ ಇಚ್ಛೆಯುಂಟಾದಾಗ ತಮ್ಮ ಪ್ರಧಾನಮಂತ್ರಿಯಾದ ಮನ್ಸೂ
ರನನ್ನು ತಾನು ಅಂತಃಪುರಕ್ಕೆ ಬರಬೇಕೆಂಬ ಅಭಿಲಾಷೆಯುಳ್ಳವನಾಗಿರು
ವುದರಿಂದ, ಕೂಡಲೆ ಸಿದ್ಧಳಾಗಿರಬೇಕೆಂದು ಷೇಮುಸೆಲ್‌ನೆಹರಿಗೆ ಆಜ್ಞೆ
ಪಿಸಿದೆನೆಂದು ಹೇಳಿ ಬಾ! ಎಂದು ಕಳುಹಿಸುವರು.

ನಂತರ ಅಲಂಕಾರವಿಶಿಷ್ಟಳಾದ ಆ ರಾಣಿಯು ಸುಲ್ತಾನರನ್ನು
ಎದುರುನೋಡುತ್ತಿದ್ದು, ಬಂದೊಡನೆಯೆ, ಸಂತೈಸಿ ಕಳುಹುವಳು.
ಆದರೆ ಉಳಿದಕಾಲಗಳಲ್ಲಿ ಆಕೆಯು ಸರ್ವಸ್ವತಂತ್ರಳಾಗಿರುವುದರಿಂದ,
ನೀನು ಧೈರ್ಯಗೆಡದೆ ಸ್ವಸ್ಥಚಿತ್ತನಾಗಿ ಷೇಮುಸೆಲ್‌ಹರುನಿನಗೋಸ್ಕರ
ವಾಗಿ, ಏರ್ಪಡಿಸಿರುವ ಏನೇನೋದಗಳನ್ನು ನೋಡಿ, ಆನಂದಭರಿತನಾಗೆಂದು,
ನುಡಿದನು. ಬಳಿಕ ಆ ಲಲನಾಮಣಿಗೆ ಪ್ರೀತಿಪಾತ್ರಳಾದ, ಒಬ್ಬಬ್ಬ ನೊಬ್ಬ
ದಾದಿಯು ಅಲ್ಲಿಗೆ ಬಂದು, ತನ್ನ ಸಖಿಯರನ್ನುಕುರಿತು, ವಿನೋದಕಾಲದಲ್ಲಿ
ಸ್ವರಯುಕ್ತವಾಗಿ ಗಾನ ಮಾಡುವಂತೆ ಸುಲ್ತಾನಿಯವರ ಆಜ್ಞೆಯಾ
ಗಿರುವುದೆಂದು ನುಡಿದಳು. ಕೂಡಲೆ ಒಬ್ಬ ಸುಂದರಿಯು ಸ್ವರವೆತ್ತಿ

ನ ಯೊವಿನೀ ವಿನೋದ ಎಂಬ,

ಳು. ಮತ್ತೊಬ್ಬ ಲಲನೆಯು ಮೃದಂಗವನ್ನು
ಬಾರಿಸತೊಡಗಿದಳು. ಇನ್ನೊಬ್ಬ ನಾರೀಶಿರೋ
ಮಣಿಯನ್ನು ತಿರುಗಿಸುತ್ತ ಶ್ರುತಿಮಾಡಿ, ತಾಳ
ತಾಳಿಕೆಯಾಗಿರುವಂತೆ ವಿಾಂಟುತ್ತಿದ್ದಳು. ಮಗ
ನಿಂದ ಮಾಡಿದ ಇಂಚರದ ಸಂಚಿಯಿಂಬಂತೆ ಹೊಳೆಯುವ
ತದು, ಲಯಬದ್ಧವಾಗಿ ಬಾರಿಸುತ್ತಿದ್ದಳು. ಜೀರೊ
ಯಾರಾಜ್ಯದ ರಾಜಕುಮಾರನ ಮುಖಭಾವದಿಂದ ಆತ
ತಿಳಿದು, ತದನುಸಾರವಾಗಿರುವ ಹಾಡನ್ನುಹಾಡಿದಳು. ಅದನ್ನು
ನು ಆಕೆಯನ್ನು ಕೊಂಡಾಡಿ, ಮರಳಿ ಮರಳಿ ಹಾಡುತ್ತಿರುವ
ಲ್ಲಿತನಗೆ ಕೆಲವು ಪದಗಳು ಅರ್ಥವಾದಂತೆಯೂ, ಕೆಲವು ಆಗದಂತೆ
ದ್ದರಿಂದ, ಸ್ವಲ್ಪಹೊತ್ತು ವ್ಯಸನಾಕ್ರಾಂತನಾಗಿದ್ದನು.

ನಂತರ ಆ ಸಖಿಯು, ಸರ್ವರೊಡನೆ ತಾನು ನರ್ತನ ಮಾಡಿ,
ಮನವನ್ನು ಪೂರೈಸಿ, ಬಳಿಕ ಕಟ್ಟಕಡೆಯಲ್ಲಿ, ಉತ್ಸಾಹಯುಕ್ತಳಾಗಿ
ಪರ್ಷಿಯಾರಾಜ್ಯದ ನೃಪತನಯನ ಮುಖವನ್ನುನೋಡುತ್ತ, ಪೂರ್ಣ
ಚಂದ್ರನು ಮಧ್ಯಾಕ್ನಕಾಲದ ಸೂರ್ಯನೊಡನೆ, ಸಂಪೂರ್ಣವಾದ ತನ್ನ
ಷೋಡಶ ಕಳೆಗಳಿಂದ ಸೇರಲೋಗುವನಾದುದರಿಂದ ಷೇಮುಸೆಲ್‌ನೆಹರು
ಈಗತಾನೆ ಬರುವಳೆಂಬ ಅರ್ಥವುಳ್ಳ, ಒಂದು ಪದ್ಯವನ್ನು ಹಾಡಿದಳು.
ಕೂಡಲೆ ಮತ್ತೊಬ್ಬ ದಾದಿಯು ಹತ್ತು ಕಾಫರ ಸ್ತ್ರೀಯರಿಂದ ವಿನೋದ
ಕರವಾದ ಚಿತ್ರಕೆಲಸವನ್ನು ಮಾಡಿರುವ ಚಿಳ್ಳೆಯ ಸಿಂಹಾಸನವನ್ನು
ತರಿಸಿ, ಆ ಸ್ತ್ರೀಯರು ಹಾಡುತ್ತಿದ್ದ ಸ್ಥಳಕ್ಕೆ ಸ್ವಲ್ಪದೂರದಲ್ಲಿ ಇಡಿಸಿ
ದಳು. ನಂತರ ಒಂದೇವಿಧವಾದ ವಸ್ತ್ರಾಭರಣಗಳನ್ನು ಧರಿಸಿ, ಸಮಾನ
ವಯಸ್ಕರಾಗಿರುವ ಇಪ್ಪತ್ತುಮಂದಿ ಪರಿಚಾರಕಿಯರು, ವೈಯ್ಯಾರ
ದಿಂದ ನಡೆದು, ಆ ಸಿಂಹಾಸನ ಇಕ್ಕೆಡೆಗಳಲ್ಲೂ ಸಾಲಾಗಿ ನಿಂತುಕೊಂ
ಡರು. ಇಂತು ನೆರೆದು ನಿಂತಿರುವ ಸ್ತ್ರೀಯರು ಮನೋಹರವಾಗಿ ಗಾನ
ಮಾಡುತ್ತಿರಲು, ಪರ್ಷಿಯಾ ರಾಜಕುಮಾರನೂ, ಇರ್ಬತೆಹರನೂ,
ಸಹ ಆನಂದಭರಿತರಾಗಿ, ಮುಂದಾಗುವ ಕಾರ್ಯವನ್ನು ನೋಡಬೇಕೆಂಬ
ಕುತೂಹಲದಿಂದಲ್ಲಿ ನಿಂತು ನೋಡುತ್ತಿರಲು, ಷಮುಸೆಲ್‌ನೆಹರಳು ತನ್ನ

ಪೂರ್ವ ಪರಿಚರ್ಯೆಯಂತೆ, ಉಡುಪು ಹಾಕಿಕೊಂಡಿರುವ, ಇಪ್ಪತ್ತುಜನ ದಾದಿಯರಿಂದೊಡಗೂಡಿ ಸಿಂಹಾಸನದಬಳಿಗೆಬಂದು ನಿಂತಳು. ಇಷ್ಟೆಂದು ಹೇಳಿ, ಬೆಳಗಾದುದರಿಂದ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಿಗಿನಜಾವದಲ್ಲಿ ಮರಳಿ ಹೇಳಲಾರಂಭಿಸಿದಳು.

೧೪೭ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು, ಇಂತೆಂದು ನುಡಿಯಲಾರಂಭಿಸಿದಳು. ರಾಣಿಯಾದ ಪೇಮುಸೆಲ್‌ನೆಹರು, ತನ್ನ ರೂಪವತಿಕೆಯಕ್ಕೆ ತಕ್ಕಂತೆ ಹೊಳೆಹೊಳೆವು ಥಳಥಳಿಸುವ ಉತ್ತಮವಸ್ತ್ರಗಳನ್ನೂ ಧರಿಸಿ, ವಸ್ತ್ರಾಭರಣಕ್ಕೆ ಯೋಗ್ಯವಾದತರದಿಂದ ಸುವರ್ಣಾಭರಣಗಳನ್ನು ಅಲಂಕಾರಗಳಿಗೆಲ್ಲಾ ಮುಖ್ಯಾಂಶವಾದ ರತ್ನ, ಕೆಂಪು, ವಜ್ರ, ಮುತ್ತು, ಮೊದಲಾದವುಗಳನ್ನು ಅಂದಕ್ಕೆ ತಕ್ಕಂತೆ ಆಯಾಸ್ಥಲದಲ್ಲಿ ಅಲಂಕರಿಸಿಕೊಂಡು, ಮುಖವರ್ಚಸ್ಸಿನಿಂದಲೂ, ಆಭರಣಂಗಳ ಕಾಂತಿಯಿಂದಲೂ, ನಡೆಗೆಯ ವೈಯ್ಯಾರದಿಂದಲೂ, ಕಡೆಕಣ್ಣಿನ ಬಿಡಗಿನಿಂದಲೂ, ಸ್ವಭಾವಯೋಗ್ಯವಾದ ವಿಲಾಸದಿಂದಲೂ, ತಾನೆ ರಾಣಿಯಾದ ಪೇಮುಸೆಲ್‌ನೆಹರೆಂಬ ಭಾವನೆಯನ್ನು ತೋರ್ಪಡಿಸುತ್ತ ಕಾರುಗಿಲ ಮಧ್ಯದಲ್ಲಿ ಮುಚ್ಚಿಕೊಂಡು ಇರುವ ಸೂರ್ಯಕಿರಣಗಳಂತೆ ಕಾಂತಿಹೀನಳಾಗದೆ ಸುಪ್ರಭಾಯುಕ್ತನಾದ ಸೂರ್ಯನ ತೇಜಸ್ಸಿಗಿಂತಲೂ, ನೂರ್ಮಡಿಯಧಿಕವಾದ ಕಾಂತಿಯನ್ನುಸುರಿಸುತ್ತ ಸಿಂಹಾಸನದಬಳಿಗೆ ನಡೆತಂದು ಸುತ್ತಲೂ ನಿಂತಿರುವ ಸ್ತ್ರೀಯರು ಮರ್ಯಾದೆಯಿಂದ ವಂದಿಸುತ್ತಿರಲು, ತಾನು ಸಿಂಹಾಸನದ ಮೇಲೆ ಕುಳಿತುಕೊಂಡು, ಅವರನ್ನು ಸನಾಮನಿಸಿದಳು.

ಆದರೆ ಪರ್ಷಿಯಾ ರಾಜಕುಮಾರನು ಸುಲ್ತಾನಿಯೆಮೇಲೆ ನೆಲೆಯಾಗಿ ನಟ್ಟಿಕೊಂಡಿರುವ, ತನ್ನ ದೃಷ್ಟಿಯನ್ನು ಹಿಂದಿರುಗಿಸಲಾರದೆ, ತನ್ನ ಸ್ನೇಹಿತನಾದ ವರ್ತಕನನ್ನುಕುರಿತು, ಅಯ್ಯಾ! ಹುಡುಕುತ್ತಿದ್ದ ವಸ್ತುವು ತಾನಾಗಿಸಿ ಮೊರಕಿವಸೋಲೆ, ಪುನಹ ಹುಡುಕಬೇಕೆ? ಒಂದಾನೊಂದುವಿಷಯ ಜ್ಞಾನವ ನಿಜಸ್ಥಿತಿಯು ತಿಳಿದಬಳಿಕ ಸಂದೇಹ ಉಂಟಾಗುವುದೆ? ಈ ಮನೋಜ್ಞ ರೂಪಲಾವಣ್ಯ ಸೌಂದರ್ಯಾದಿಗಳಿಂದ ಕೂಡಿದ

ಸುಂದರೀಮಣಿಯನ್ನು ನೋಡಿ, ನನ್ನನ್ನು ಇಂತಹ ದುಸ್ಸಹವಾದ ಅಸ
ಸ್ಥಿಗೆ ಗುರಿಮಾಡಿ, ಕ್ರೂರವಾದ ಕಷ್ಟಪರಂಪರೆಗಳಿಂದ ಪೀಡಿಸಿದರೂ,
ಈ ನನ್ನ ಚಿಂತಾರತ್ನವನ್ನು ನಾನೆಂದಿಗೂ ನಿಂದಿಸಲಾರೆನು. ಏತಕ್ಕಂದರೆ :-
ಈ ವ್ಯಕ್ತಿಸಂದರ್ಶನವು, ನನಗಾದಕೂಡಲೆ ನನ್ನ ದೇಹವು ಪರವಶವಾ
ಯಿತು. ನನ್ನ ಆತ್ಮವಾದರೋ, ನನ್ನನ್ನು ಎದುರಿಸಿ ಅಗಲಿಹೋಗುವುದಕ್ಕೆ
ಆರಂಭಿಸಿರುವದಲ್ಲಾ ! ಆಹಾ ! ಆತ್ಮನಾಥ ! ಹಾಗಾದರೆ ನೀನು ಹೊರಟು
ಹೋದರೂ ಚಿಂತೆಯಿಲ್ಲ. ಆದರೆ ದುರ್ಬಲವಾದ ಈ ಪ್ರಾಣಸಂರಕ್ಷಣಾರ್ಥ
ವಾಗಿ ನೀನುಮಾತ್ರ ಇಲ್ಲಿ ಇರಬೇಕಾಗಿರುವುದು. ಓ ಇರ್ಬ್ತೆಹರನೇ !
ನಾನಿಲ್ಲಿಗೆ ಬರುವುದಕ್ಕೂ, ಹೀಗೆ ಹುಚ್ಚುಕಾಮುತ್ಪನ್ನರಳುವುದಕ್ಕೂ, ಕಟ್ಟ
ಕಡೆಗೆ ಮುಳುಗಿಹೋಗುವುದಕ್ಕೂ, ನೀನೇ ಕಾರಣನು. ಅಯ್ಯಾ ! ತನ್ನ
ತಪ್ಪನ್ನು ತಾನು ತಿಳಿಯದೆ ಅನ್ಯರನ್ನು ನಿಂದಿಸುವನು ಮೂರ್ಖನಲ್ಲನೆ ?

ತಪ್ಪುಮಾಡಿದವನೇ ನಾನಾದುದರಿಂದ ನೀನು ನನ್ನನ್ನು ನಿಂದಿಸ
ಬೇಕೇಹೊರತು, ನಾನೆಂದಿಗೂ ನಿನ್ನನ್ನು ನಿಂದಿಸಬಾರದೆಂದು ಹೇಳಲು,
ಇರ್ಬ್ತೆಹರನು, ಅಯ್ಯಾ ! ನೀನು ನ್ಯಾಯೋಪಾಗಿ ಹೇಳಿದುದಕ್ಕಾಗಿ,
ನಾನು ತುಂಬ ಸಂತೋಷಿಸುತ್ತೇನೆ. ಪೆಮುಸೆಲ್‌ನೆಹರಳು, ಕಲೀಫರ
ರಾಣಿಯೆರಲ್ಲೆಲ್ಲಾ ಮುಖ್ಯಳಾದವಳೆಂದು ನಾನು ತಿಳಿಸಿದೆನಲ್ಲಾ ಈ ನನ್ನ
ವಾಕ್ಯದಲ್ಲಿ ಯಾಕೆಯೆಮೇಲಿನ ವ್ಯಾಮೋಹವನ್ನು ತೊರೆದರೆ, ನಿನಗೆ ಸುಖ
ವುಂಟಾಗುವುದೆಂಬ ಅರ್ಥವು ಸೂಚಿತವಾಗಿತ್ತು. ಅದನ್ನು ನಾನು ಪ್ರಕಾಶ
ವಾಗಿಯೂ ಹೇಳಿದೆನು. ಹೋಗಲಿ ! ಇಲ್ಲಿನ ನಡವಳಿಕೆಗಳನ್ನು ನೋಡಿ
ದರೆ, ಈಗಲಾದರೂ, ಇವಳಮೇಲಿನ ವ್ಯಾಮೋಹವನ್ನು ಬಿಟ್ಟುಬಿಟ್ಟರೆ
ಉತ್ತಮವೆಂದು ತೋರುವುದು. ರಾಣಿಯು ನಿನ್ನನ್ನು ನೋಡಬೇಕೆಂದು
ಹೇಳಿದುದರಿಂದ ನೀನು ಆಕೆಯನ್ನು ನೋಡಿ ವಂದನೆಗಳನ್ನು ಸಮರ್ಪಿಸಿ,
ಅವಳಿಂದ ಅಪ್ಪಣೆಯನ್ನು ತೆಗೆದುಕೊಂಡು ಹೊರಟುಹೋಗುವುದು ಉತ್ತ
ಮವಲ್ಲಿಯೂ, ಉತ್ತಮ. ಆಹಾ ! ನಿನ್ನ ಬುದ್ಧಿಯೂ, ವಿವೇಕವೂ,
ನಿನ್ನನ್ನು ತೊರೆದು ಎಲ್ಲಿಗೆಹೋಗಿರುವುವೋ ಅಲ್ಲಿಂದ ಅವುಗಳನ್ನು ಬಂದಿ
ರುಗಿ ಒರವಾಡಿಕೊಂಡು, ಚೆನ್ನಾಗಿ ಯೋಚಿಸು. ರಾಣಿಯೆನ್ನು ಕಂಡಾಗ
ಮಾತ್ರ ಕಾಲೋಚಿತವಾಗಿ ನಡೆದುಕೋ, ಆದರೆ ನೀವು ಸೂದಲಿನಿಂದ

ಪ್ರಾರಂಭಿಸಿದರೆ. ಬಳಿಕ ಸಕಲವನ್ನು ಸುಖವಾಗಿ ಸಾಧಿಸಬಹುದು. ಅಗೋ ರಾಣಿಯು ಬರುತ್ತಿರುವಳು ನೋಡು. ವಿುಂಚಿಹೋದಬಳಿಕ ದುಃಖವನ್ನು ತಂದೊಡ್ಡದಂತೆ ಕಾಪಾಡುವುದಕ್ಕಾಗಿ, ಭಗವಂತನನ್ನು ಪ್ರಾರ್ಥಿಸುತ್ತಿರು. ವೋಹಕರವಾದ ಈ ವೋಹವು ಎಂದೆಂದಿಗೂ, ಬಾರದಿರುವ ಅತಿ ಘೋರವಾದ ದುಃಖಸಾಗರದಲ್ಲಿ ಮುಳುಗಿಸದೆ ಬಿಡಲಾರದೆಂದು ನುಡಿದನು. ಷೆಮುಸೆಲ್‌ನೆಹರು ತಾನು ಸಿಂಹಾಸನದವೇಲೆ ಕುಳ್ಳಿತುಕೊಂಡಬಳಿಕ ಇಬ್ರಹಿಮರನನ್ನೂ, ಅವನ ಸ್ನೇಹಿತನಾದ ಪರ್ಷಿಯಾ ರಾಜಕುಮಾರನನ್ನೂ ನೋಡಿ, ಮರ್ಯಾದೆಯಿಂದ ತಲೆಬಾಗಿ ವಂದನೆಮಾಡಿದಳು. ಕೂಡಲೆ ಪರ್ಷಿಯ ರಾಜಪುತ್ರನು, ತನ್ನ ಸ್ನೇಹಿತನಸಂಗಡ ಯಾವಮಾತನ್ನೂ ಆಡಲಾರದೆ ಬೋದನು. ಮತ್ತೇನಂದರೆ :-ಆತನ ವುನಸ್ಸೂ, ನಯೆನಶ್ರೂಸಹ ಷೆಮು ಸೆಲ್‌ನೆಹರಳಲ್ಲಿ ಅಡಗಿ ವುರೆಯಾಗಿ, ತಂತವ್ಮ ವ್ಯಾಪಾರವನ್ನೇ ವುರೆದು ಹೋದುವು. ಆಹಾ ! ಏನು ವಿಚಿತ್ರ ? ರಾಣಿಯೂ, ರಾಜಕುವಾರನ ನ್ನೆಹೊಕ್ಕಳು. ಹೇಗೆನ್ನುವಿರೋ, ರಾಜಕುವಾರನ ದೃಷ್ಟಿಯೂ, ವುನಸ್ಸೂ, ಸಹಾ ವ್ಯಾವೋಹಕಳಾದ ಸುಲಾತ್ರನಿಯಲ್ಲಿ ಹೇಗೆ ನೆಲೆಗೊಂಡುವೋ ಹಾಗೆ, ನವವುನ್ಮಥರೂಪನಾದ ರಾಜಕುವಾರನನ್ನು ನೋಡಿ, ತನ್ನ ವುನೋನೇತ್ರಗಳನ್ನು ಸೂರೆಗೊಟ್ಟು ನಿಶ್ಚಲಳಾಗಿ, ಗದ್ಗದ ಕಂಠಗತವಾಗಿರುವುದೆಂಬುದನ್ನು ಸೂಚಿಸುವಂತೆ, ನಿಟ್ಟುಸುರನ್ನು ಬಿಡುತ್ತಾ ಕುಳಿತುಕೊಂಡಿದ್ದಳು.

ಕೂಡಲೆ ಆಕೆ ಸಿಂಹಾಸನದಿಂದೆದ್ದು, ಹೊರಗೆ ಹೋಗಿ ತನ್ನ ಕಾಫರೀ ಸೇವಕಿಯರನ್ನು ಕರಿತು, ಸಿಂಹಾಸನವನ್ನು ಉದ್ಯಾನದಲ್ಲಿನ ಗುವ್ಮಟಕ್ಕೆ ತರುವಂತೆ ಆಜ್ಞಾಪಿಸಲು, ಅವರೆಲ್ಲರೂ, ರಾಣಿಯಾಜ್ಞೆಯನ್ನು ನೆರವೇರಿಸಿದಬಳಿಕ, ಎಲ್ಲರೂ ಗುವ್ಮಟವನ್ನು ಸೇರಿದರು. ನಂತರ ಷೆಮುಸೆಲ್‌ನೆಹರಳೂ, ರಾಜಪುತ್ರನೂ ಸಹಾ ವಿನೋದವಾಗಿ ತಂತವ್ಮ ವುನೋಭಿಪ್ರಾಯಗಳನ್ನು ಸೂಚಿಸತಕ್ಕ ಅರ್ಥವುಳ್ಳ ಅಂದವಾದ ಪದ್ಯಗಳಿಂದ ಸಂಗೀತರೂಪವಾಗಿ ಹಾಕಿದರು. ಅವರಿಬ್ಬರೂ ಅನ್ಯೋನ್ಯವಾಗಿ ತಾವುತಾವು ಕೇಳಿದ ಗೀತಾರ್ಥಗಳನ್ನು ಗ್ರಹಿಸಿಕೊಂಡು, ಅಲಂಘನೀಯವಾದ ವೋಹಪಾಶಕ್ಕೆ ಸಿಲುಕಿದವರಾಗಿ, ಒಬ್ಬರನ್ನೊಬ್ಬರು ದೃಷ್ಟಿಸಿ

ನೋಡುತ್ತಿರಲು, ರಾಣಿಯು ಅಭಿಪ್ರಾಯವನ್ನು ತಿಳಿದವನಾದ ರಾಜಪುತ್ರನು, ಪೆವುಸೆಲ್‌ನೆಹರಳ ಬಳಗೆಬಂದು ಕುಳಿತುಕೊಂಡನು. ವಿನೋದದಿಂದುಂಟಾಗುವ ಫಲವು ಮನಸ್ಸಿನಿಂದ ಕೈಗೆಬಂದಂತೆ ಆನಂದಿಸುತ್ತಿರುವಂತೆ, ಒಬ್ಬರೊಬ್ಬರು ಕೈಗಳನ್ನು ಹಿಡಿದುಕೊಂಡರು. ಆದರೆ ವಿನೋದ ಕಾರ್ಯವನ್ನು ಯಾರುತಾನೆ ಹೊಂದಲಾರರು. ಸುಲ್ತಾನರೇ! ರಾಣಿಯೂ, ರಾಜಕುಮಾರನೂ, ನಿಶ್ಚಲರಾಗಿದ್ದರೂ, ಅವರಿಬ್ಬರಲ್ಲಿ ಉಂಟಾದ ವಿನೋದಗಳೆರಡೂ, ಅನೈಚ್ಯೋನ್ಯಭಾವದಿಂದ ಗಾಢಾಲಿಂಗವನ್ನು ಮಾಡಿಕೊಂಡು, ಮುಹದಾನಂದಾಶ್ರಿತಂಗಳಾಗಿ, ಮೂರ್ಛಿಹೋದವು. ಆದುದರಿಂದಲೆ, ಆಲಿಂಗನಕಾರ್ಯವು ನಡೆಯುವುದಕ್ಕಿಂತ ಮೊದಲು ನಿಶ್ಚಲರಾಗಿದ್ದ ಪೇವುಸೆಲ್‌ನೆಹರಳೂ, ಸ್ಫಳ್ಫಾನಿಯೂಸಹಾ, ತಾವು ಮೂರ್ಛಾಕ್ರಾಂತರಾದಂತೆ, ಮರಭಿಪ್ರಾಸದಿಂದ ನಟಿಸುತ್ತಾ ಇದ್ದರು.

ಆದರೆ ಆಹಾ! ಲೋಕದಲ್ಲಿ ರಾಜನೆಂದರೂ, ರಾಣಿಯೆಂದರೂ, ತದರ್ಥವುಳ್ಳ ಮಾತ್ರರೆಂದರೂ ಸರಿಯೇ, ಸಕಲ ವಸ್ತುಗಳು ಹೆದರುವುದು. ಸ್ವಲ್ಪಹೊತ್ತಿನಲ್ಲಿ ದಾದಿಯರು, ಶೃತೊಯ್ಯೇಪಚಾರವೆಂಬ, ರಾಜದಂಡದಿಂದ ವಿನೋದದ್ವಯಗಳನ್ನು ಬಲವಾಗಿ ಶಿಕ್ಷಿಸಿದಕಾರಣ, ಅವುಗಳೆರಡೂ ಮರಳಿ ತಂತಮ್ಮ ಅಧೀಶರನ್ನು ಸೇರಿಕೊಂಡವು. ಹೀಗೆ ಪೇವುಸೆಲ್‌ನೆಹರಳು ಮೂರ್ಛಿತಳಿದೆದ್ದ ಬಳಿಕ ಇರ್ಬ್ಬತೆಹರನನ್ನು ನೋಡಿ ಕಾಣದೆ ನಾಲ್ಕುದಿಕ್ಕುಗಳಲ್ಲೂ ಹುಡುಕಿದರು. ರಾಣಿಯು ತನ್ನ ಸಖಿಯರಿಂದ ಶೃತೊಯ್ಯೇಪಚಾರವನ್ನು ಹೊಂದುತ್ತಿರುವಾಗ, ತಾನಲ್ಲಿರುವುದು ಮರ್ಯಾದೆಯಲ್ಲವೆಂದು ಇರ್ಬ್ಬತೆಹರನು ಹೊರಬಾಗಿಲಬಳಿ ನಿಂತುಕೊಂಡಿದ್ದನು. ರಾಣಿಯು ಎಚ್ಚತ್ತು ಮಾತನಾಡುತ್ತಿರುವುದನ್ನು ಕೇಳಿ ಬೇಗನೆನೆ ಒಳಗೆ ಬಂದು ಸೇರಿಕೊಂಡನು. ಇಷ್ಟರಲ್ಲಿ ಬೆಳಗಾದುದರಿಂದ ಷಹರಜ್ಯಾದಿಯು ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನಜಾವದಲ್ಲಿ ಹೇಳಲಾರಂಭಿಸಿದಳು.

೧೪೪ನೆಯ ರಾತ್ರಿ ಕಥೆ.

ಪಹರಜಾದಿಯು ಸುಲ್ತಾನರನ್ನು ಕುರಿತು ಇಂತೆಂದಳು :— ನಂತರ ಪೆಮುಸೆಲ್‌ನೆಹರು ಎದುರಿಗೆ ನಿಂತಿರುವ ಇರ್ಬ್ಬತೆಹರನನ್ನುನೋಡಿ, ತನಗುಂಟಾದ ಪರಮಸಂತೋಷವನ್ನು ಆತನಿಗೆ ತಿಳಿಸಲುಪಕ್ರನಿಸಿ, ಓ ! ಇರ್ಬ್ಬತೆಹರನೆ ! ನೀನು ನನಗೆ ಮಾಡಿರುವ ಉಪಕಾರವನ್ನು ನಾನೆಂದಿಗೂ ಮರೆಯಲಾರೆನು. ಇದಕ್ಕೆ ಪ್ರತಿಯಾಗಿ ಮತ್ತಾವ ಪ್ರತ್ಯುಪಕಾರವನ್ನು ಮಾಡಿ ನಾನು ನಿನ್ನ ಮನಸ್ಸನ್ನು ತೃಪ್ತಿಪಡಿಸಬೇಕೋ ನನಗೆ ತಿಳಿಯದು. ಆಹಾ ! ಸರಸಿಯೂ, ದಯಾಳುವೂ, ಆದ ನೀನು ಇಂತಹ ಉಪಕರವನ್ನು ಮಾಡದೆಹೋಗಿದ್ದರೆ, ಸುಂದರಾಂಗನಾದ ಈ ಪರ್ಷಿಯಾ ರಾಜಕುಮಾರನು, ನನ್ನ ಪ್ರೀತಿ ವಿಶ್ವಾಸಗಳಿಗೆ ಹೇಗೆ ಗುರಿಯಾಗುತ್ತಿದ್ದನು. ಅಯ್ಯಾ ! ಬಹಳವಾಗಿ ಹೇಳಿದುದರಿಂದ ಪ್ರಯೋಜನವೇನು. ನನ್ನ ಜೀವವಾನದಲ್ಲಿ ಇದಕ್ಕೆ ತಕ್ಕ ಪ್ರತ್ಯುಪಕಾರವನ್ನು ಮಾಡದೆ ಇರಲಾರೆನು. ಇದನ್ನು ನಂಬಿ ಕೊಂಡಿರು ಎಂದು ನುಡಿಯಲು, ತೆಹರನು ಅತ್ಯಂತ ಭಯಭಕ್ತಿಯಿಂದ ವಂದನೆಗಳನ್ನುವರ್ಷಾಡಿ, ಆಕೆಯ ವಂದನಾದಿಗಳನ್ನು ಸ್ವೀಕರಿಸಿ, ಅಮ್ಮಾ ! ಭಗವಂತನು ನಿಮ್ಮ ಮನೋರಥವನ್ನು ನೆರವೇವಸುವಂತೆಯೂ ಸಂಪೂರ್ಣವಾಗಿ ಸುಖವನ್ನು ಅನುಭವಿಸುವಂತೆಯೂ ಮಾಡಲೆಂದು ಹರಿಸಿದನು.

ನಂತರ ಆ ಲಲನಾಮಣಿಯು, ಪರ್ಷಿಯಾ ರಾಜಕುಮಾರನ ಕಡೆಗೆ ತಿರುಗಿನೋಡಿ, ಪ್ರಮೆಯಿಂದ ಇಂತೆಂದಳು ;—ಪ್ರಾಣನಾಥಾ ! ನನ್ನಲ್ಲಿ ತಮಗೆ ವ್ಯೋಹ ಉಂಟಾಗಿರುವುದೆಂದು, ನಾನು ಮನಃಪೂರ್ವಕವಾಗಿಯೂ, ತಿಳಿದಿರುವೆನು. ನನ್ನಮೇಲೆ ನಿನಗುಂಟಾಗಿರುವ ವ್ಯೋಹಕ್ಕಿಂತಲೂ, ಅಧಿಕವಾದ ವಿಶ್ವಾಸವು ನಿನ್ನಗುಂಟಾಗಿರುವುದೆನ್ನುವುದಕ್ಕೆ ಯಾವ ಸಂದೇಹವೂ ಇಲ್ಲ. ನಾವು ಬಹುವಾಗಿ ಹೊಗಳಿಕೊಳ್ಳುವುದರಿಂದ ಪ್ರಯೋಜನವಿಲ್ಲ. ನಾವು ಹೇಗಿದ್ದರೂ, ದುಃಖವೇ ಹೊರತು, ಸುಖವೆಂದಿಗೂ ಇಲ್ಲ. ಆದುದರಿಂದ ಭಗವಂತನಮೇಲೆ ಭಾರವನ್ನುವಹಿಸಿ, ಆತನ ಸಂಕಲ್ಪದಂತೆಯೂ, ನಮ್ಮ ಅದೃಷ್ಟಾನುಸಾರದಂತೆಯೂ, ನಡೆವುದು ಎಂಬುದನ್ನು ದೃಢವಾಗಿ ತಿಳಿದು ಸ್ವಸ್ಥರಾಗಿರಬೇಕೆಂದು ನುಡಿಯಲು,

ರಾಜಕುಮಾರನು ಪ್ರಾಣಕಾಂತೇ! ನಿನ್ನಮೇಲೆ ಮೋಹ ಉಂಟಾಗಿರುವು ದೆಂದು ಹೇಳಿದೆಯಲ್ಲಾ ಅದು ತುಂಬ ಅನ್ಯಾಯಕರವಾದ ಕೆಲಸ. ಹೇಗೆಂ ದರೆ : — ನನ್ನ ಆತ್ಮವೇ ನಿನ್ನ ಮೋಹವೆಂಬ ರಜ್ಜುವಿನಿಂದ ಒಲವಾಗಿ ಬಿಗಿದು ಬಂಧಿಸಲ್ಪಟ್ಟಿರುವುದರಿಂದ, ನಿನ್ನ ಮೋಹವು ನನ್ನ ಆತ್ಮಕ್ಕೆ ಮುಖ್ಯಾಂಶವಾಗಿರುವುದಲ್ಲದೆ, ನಾನು ಸಾಯುವವರೆಗೂ, ನಿನ್ನ ಮೋಹ ವೆಂದಿಗೂ ನನ್ನನ್ನು ಅಗಲಲಾರದು. ಆದಕಾರಣ ಎಂತಹ ವಿಘ್ನವಾದರೂ ಇಲ್ಲವೆ. ಬಹು ಪ್ರಮಾದಗಳಾದರೂ, ಅತ್ಯಂತ ದುಃಖಪರಂಪರೆಗಳಾಗರೂ, ಬಂದೊದಗಿದರೆ, ನಾನೆಂದಿಗೂ ನಿನ್ನ ಮೋಹವನ್ನು ಬಿಡಲಾರೆನೆಂದು, ಕಣ್ಣೀರಿನಲ್ಲಿ ಸ್ನಾನಮಾಡುತ್ತಿದ್ದ ರಾಜಪುತ್ರನನ್ನು ಆ ಲಲನಾಮಣಿಯು ಸಮಾಧಾನ ಪಡಿಸಲಾರದೆ ಹೋದಳು.

ಆ ಕಾಲದಲ್ಲಿ ಇರ್ಬ್ಬರೆಹರನು, ಅಮ್ಮಾ! ನೀವಿಬ್ಬರೂ ಸೇರಿರು ವುದಕ್ಕಾಗಿ, ಭಗವಂತನನ್ನು ಪ್ರಾರ್ಥಿಸುತ್ತಾ ಉತ್ಸಾಹಕಾಲದಿಂದ ಕಾಲ ವನ್ನು ಕಳೆಯುತ್ತಿರುವುದನ್ನು ತೊರೆದು, ಏತಕ್ಕೆ ಹೀಗೆ ಉಭಯತ್ರರೂ ಕುಂದಿ ಕೊರಗುತ್ತಿರುವಿರಿ. ಪ್ರಾಣಪ್ರಿಯರಾದ ದಂಪತಿಗಳಿಬ್ಬರೂ, ಅನ್ಯೋನ್ಯವಾಗಿ ಕಲೆತಿದ್ದರೂ, ಹೀಗೆ ವ್ಯಸನಪಡುತ್ತಿರುವ ನೀವು ಭಗವಂತನ ದಯೆದಿಂದ ಅಗಲಿಕೆಯುಂಟಾದರೆ, ಮುಂದೆ ಹೇಗೆ ಮಾಡುತ್ತಿ ದ್ದಿರೋ, ನನಗೆ ತಿಳಿಯದು. ಬಹಳವಾಗಿ ಮಾತನಾಡಿ ಪ್ರಯೋಜನ ವೇನು ? ನಾವು ಬಂದು ಬಹಳ ಹೊತ್ತಾದುದರಿಂದ ಹೊರಡಬೇಕೆನಲು, ಅಯ್ಯೋ! ನೀನೆಂತಹ ಕಠಿಣಚಿತ್ತನು. ನನ್ನ ವ್ಯಸನಕ್ಕೆ ಕಾರಣವನ್ನು ತಿಳಿದಿರುವ ನಿನಗೂಕೂಡ ನನ್ನಮೇಲೆ ದಯವಿಲ್ಲವೆ? ನಾನು ಮೋಹಿಸಿದ ಮೋಹನಾಂಗನಲ್ಲಿ ಬಂದುಮಾತನ್ನಾದರೂ, ಆಡಿ ಸಂತೋಷಪಡಬೇಕೆಂ ದಿದ್ದರೆ, ಅದನ್ನುಕೂಡ ತಪ್ಪಿಸುವಂತಹ ಕಾರ್ಯವನ್ನು ಮಾಡುತ್ತಿ ರುವೆಯಲ್ಲಾ! ಆಹಾ ! ನಾನೇನುಮಾಡಿದುದಕ್ಕಾಗಿ, ನನಗಿಂತಹ ನಿರ್ಬಂಧ ವನ್ನು ತೋರುತ್ತಿರುವೆಯೋ ಕಾಣೆನೆಂದು ಪಮುಸೆಲ್‌ನೆಹರು, ವ್ಯಸನಾ ಕ್ರಾಂತಳಾಗಿ ನುಡಿಯಲು, ಇರ್ಬ್ಬತೆಹರನು ತನ್ನ ಸ್ನೇಹಿತನಾದುದರಿಂದ, ಹಾಸ್ಯಕ್ಕಾಗಿ ಹೇಳುತ್ತಿರುವನೆಂದು ತಿಳಿದು, ರಾಣಿಯು ಆತನಲ್ಲಿ ತಪ್ಪು ಗಳನ್ನೆಣಿಸದೆ, ತನ್ನ ದಾದಿಯರನ್ನುನೋಡಿ, ಫಲಾಹಾರಪದಾರ್ಥಗಳನ್ನು

ತರುವಂತೆ ಆಜ್ಞಾಪಿಸಲು, ಅವರು ಸುಂದರವಾದ ಭಂಗಾರದ ತಟ್ಟೆಗಳಲ್ಲಿ ಮಧುರವಾಗಿಯೂ, ರುಚಿಕರವಾಗಿಯೂ, ಸೊಗಸಾಗಿಯೂ, ಇರುವ ದೇವ ಯೋಗ್ಯವಾದ, ಆಹಾರಪದಾರ್ಥಗಳನ್ನು ತಂದು ಪರ್ಷಿಯಾ ರಾಜಕುಮಾರ ನಿಗೆದುರಾಗಿಯೂ, ಪೆವುಸೆಲ್‌ನೆಹರು ಮತ್ತು ಇರ್ಬತೆಹರು ಇವರುಗಳ ಮಧ್ಯಭಾಗವಾಗಿಯೂ, ಇರುವಂತೆ ತಮ್ಮೊದುಲಿಗಿರುವ ಕಾಲುಮಣೆಯ ಮೇಲಿರಿಸಿದರು. ಆಗ ಸುಲಾತ್ತಾನಿಯು, ಅಲ್ಲಿರುವ ಉತ್ತಮಪದಾರ್ಥ ಗಳನ್ನು ತೆಗೆದು, ತನ್ನ ಹಸ್ತದಿಂದ ರಾಜಪುತ್ರನಿಗೂ ವರ್ತಕನಿಗೂಸಹ ಕೊಡುತ್ತಿರಲು, ಅವರಿಬ್ಬರೂ, ಆಕೆ ಮುಟ್ಟಿದ ಭಾಗವನ್ನುಮಾತ್ರ ತಾವು ತಿಂದು, ಉಳಿದ ಭಾಗವನ್ನು ರಾಣಿಗೆ ಕೊಡುತ್ತಿದ್ದರು. ರಾಣಿ ಯಾದರೋ ಸಂತೋಷದಿಂದಲೂ, ಉಲ್ಲಾಸದಿಂದಲೂ, ಅವುಗಳನ್ನು ಭಕ್ಷಿಸುತಾ, ವಿನೋದವಾಗಿ ಮಾತನಾಡುತ್ತಿದ್ದಳು.

ಫಲಾಹಾರಕ್ರಮವು ಮುಗಿದನಂತರದಲ್ಲಿ, ದಾದಿಯರು ಮೂರು ಭಂಗಾರದ ಗಿಂಡಿಗಳಲ್ಲಿ ನೀರನ್ನು ತಂದಿಡಲು, ಆ ಮೂವರೂ ಕೈಗಳನ್ನು ತೊಳೆದುಕೊಂಡು, ತಂತಮ್ಮ ಸ್ಥಳಗಳಲ್ಲಿ ಕುಳಿತುಕೊಂಡಮೇಲೆ ಕಾಫರೀ ದಾದಿಯರು, ಸುಂದರವಾದ ಸ್ಫಟಿಕಪಾತ್ರೆಯಲ್ಲಿ ಉತ್ತಮವಾದ ದ್ರಾಕ್ಷಾ ರಸವನ್ನುತುಂಬಿ, ಭಂಗಾರದ ತಟ್ಟೆಗಳಲ್ಲಿಟ್ಟುಕೊಂಡುಬಂದು, ರಾಣಿಗೂ, ರಾಜಕುಮಾರನಿಗೂ, ಇರ್ಬತೆಹರನಿಗೂ, ಮಧ್ಯದಲ್ಲಿರಿಸಿದರು. ರಾಣಿ ಯಾದರೋ, ಕೆಲವುಕಾಲ ಏಕಾಂತದಲ್ಲಿರಲು, ಬಯಸಿ, ಹತ್ತುಮಂದಿ ದಾದಿಯರನ್ನು ಮಾತ್ರ, ತನ್ನಬಳಿಯೆಲ್ಲಿರುವಂತೆ, ಆಜ್ಞಾಪಿಸುತಾ, ದ್ರಾಕ್ಷಾರಸದ ಬಟ್ಟಲನ್ನು ಕೈಗೆ ತೆಗೆದುಕೊಂಡು, ಎದ್ದು ನಿಂತಳು. ಕೂಡಲೆ, ಕಾಫರಿಯ ನರ್ತನವೂ, ಸಖಿಯರ ಗಾನವೂ, ವೀಣಾನಾದವೂ ಸಹಾ ನೇತ್ರೇಂದ್ರಿಯೆಗಳಿಗೆ ಆನಂದವನ್ನುಂಟುಮಾಡುತ್ತಿರಲು, ತಾನೂ ನಾಟ್ಯವಾಡಿ, ರಾಜಕುಮಾರನಮೇಲಣ ಮೋಹವು ತನಗುಂಟಾದ ನೆನಪಿ ಗಾಗಿ ಈ ದ್ರಾಕ್ಷಾರಸವನ್ನು ಕುಡಿಯುವೆನೆಂದು ಹೇಳಿ, ತಾನು ಮೊದಲು ಕುಡಿದು ನಂತರ ಎರಡನೆಪಾತ್ರೆಯನ್ನು ತೆಗೆದು ರಾಜಕುಮಾರನೇ! ನಾನು ನಿನ್ನನ್ನು ಮೋಹಿಸಿದುದಕ್ಕಾಗಿ, ದ್ರಾಕ್ಷಾರಸವನ್ನು ಕುಡಿದಂತೆ, ನೀನು ಈಮಧುವನ್ನು ನನ್ನಮೇಲೆ ಬಲಿದಿರುವ ಸುರುತಿಗಾಗಿ ಕುಡಿಯಬೇಕೆಂದು

ಹೇಳಿ, ಆತನಕೈಗೆ ಬಟ್ಟಲನ್ನು ಕೊಡಲು, ದಾದಿಯರು ಮಧುರಸ್ವರದಿಂದ ಗಾನ ಮಾಡಿದರು. ರಾಣಿಯು ತನಗೆ ಮಾಡುತ್ತಿರುವ ಉಪಚಾರಕ್ಕಾಗಿಯೂ, ತನಗೆ ಆಕೆಯಮೇಲೆ ಉಂಟಾಗಿರುವ ಮೋಹಕ್ಕಾಗಿಯೂ, ಸಂಪೂರ್ಣವಾದ ಸುಖವು ದೊರೆಯದಿರುವುದಕ್ಕೆ ಕಾರಣವನ್ನು ಕುರಿತು, ಕಣ್ಣೀರನ್ನು ಸುರಿಸುತ್ತ, ಆ ರಾಣಿಯು ಮುಖಚಂದ್ರನಿಂದ ಸುರಿಯುತ್ತಿರುವ, ಅಮೃತವನ್ನು ಮೊಗೆಲು ಪಾನಮಾಡಿ, ನಂತರ ಮಧುರಸವನ್ನು ಸೇವಿಸಿದನು. ನಂತರ ರಾಣಿಯು ಷೆಮುಸೆಲ್‌ನೆಹರನಿಗೂಸಹ ದ್ರಾಕ್ಷಾರಸದ ಬಟ್ಟಲನ್ನು ಕೊಡಲು, ಆತನು ಬಹು ಮರ್ಯಾದೆಯಿಂದ ಅದನ್ನು ಸ್ವೀಕರಿಸಿ, ತಾನು ಕುಡಿದು ತೃಪ್ತನಾದನು. ಒಳಿಕ ಅವರೆಲ್ಲರೂ ಆನಂದಗೋಷ್ಠಿಯಲ್ಲಿರುತ್ತಿರುವಾಗ, ಮುಸೌರನೂ, ಇಬ್ಬರು ಖೋಜೌಸವಾರರೂ, ಬಾಗಿಲಲ್ಲಿ ಕಾದುಕೊಂಡಿರುವ ದಾದಿಯರನ್ನು ಕುರಿತು, ನಾವು ಕಲೀಫರ ಆಜ್ಞೆಯನ್ನು ರಾಣಿಯವರಿಗೆ ತಿಳಿಸುವುದಕ್ಕಾಗಿ ಕಾದುಕೊಂಡಿರುವೆವೆಂದು ಹೇಳಲು, ದಾದಿಯು ಬೆಗನೆ ಒಡಿಬಂದು ತನ್ನ ರಾಣಿಯೆ ಸಂಗಡ ಈ ವರ್ತಮಾನವನ್ನು ಹೇಳಲು, ವರ್ತಕರೂ ರಾಜಕುಮಾರನೂ ಸಹ ವಿವರ್ಣಮುಖರಾಗಿ ಭಯದಿಂದ ನಡುಗುತ್ತಿರಲು, ರಾಣಿಯು ಅವರನ್ನು ಸಮಾಧಾನಪಡಿಸಿದಳು. ಇಂತೆಂದು ಹೇಳಿ ಷಹರಜೌದಿಯು ಕಥೆಯನ್ನುನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಹೇಳಲಾರಂಭಿಸಿದಳು.

೧೪೯ ನೆಯ ರಾತ್ರಿ ಕಥೆ.

ಷಹರಜೌದಿಯು ಸುಲ್ತಾನರನ್ನುನೋಡಿ ಇಂತೆಂದಳು. ಷೆಮುಸೆಲ್‌ನೆಹರಳು, ರಾಜಕುಮಾರನಿಗೂ, ವರ್ತಕನಿಗೂಸಹ ಧೈರ್ಯವನ್ನು ಹೇಳಿ ತನಗೆನಂಬಿಕೆಯಾದ ಒಬ್ಬ ದಾದಿಯನ್ನುಕರೆದು ನಾನು ರಾಜಕುಮಾರನನ್ನೂ ಇಬ್ರಹೆಹರನನ್ನೂ ಮರೆಮಾಜಿ, ಮಾತನಾಡುವುದಕ್ಕೆ ಸಿದ್ಧಳಾಗುವವರೆಗೂ, ನೀನು ಮುಸೌರನ್ನು ಆತನಸಂಗಡ ಬಂದಿರುವ ನಪುಂಸಕಸರದಾರರನ್ನೂಸಹ ಒಳಕ್ಕೆ ಬಿಡಬೇಡವೆಂದು ಹೇಳಿ, ತಾನು ತನ್ನ ಅಂತಃಪುರದ ಕಿಟಕಿಗಳನ್ನೆಲ್ಲ ಮುಚ್ಚಿಸಿ, ಹಿಂಭಾಗದಲ್ಲಿ ತೆರೆಯನ್ನು ಹಾಕಿಸಿ, ಅದರ ಒಳಭಾಗದಲ್ಲಿ ನಿರ್ಜಯರಾಗಿರುವಂತೆ ಇಡಿಸಿ, ಅವರಿಬ್ಬರಿಗೂ

ಧೈರ್ಯವನ್ನು ಹೇಳಿ, ಉದ್ಯಾನದ ಬಾಗಿಲನ್ನು ತೆಗೆಸಿ, ತಾನೂ, ತನ್ನ ದಾದಿಯರೂಸಹ ಒಂದಾನೊಂದುಕಡೆಯಲ್ಲಿ ವಾದ್ಯಘೋಷಗಳಿಂದ ವಿನೋದವಾಗಿ ಕಾಲವನ್ನು ಕಳೆವುತ್ತಿರುವರಂತೆ ನಟಿಸಿ, ಮುಸೌರನನ್ನೂ ಆತನ ಭಂಟರನ್ನೂ ಸಹ ಕರೆದುಕೊಂಡುಬರುವಂತೆ ತನ್ನ ದಾದಿಯರಿಗೆ ಆಜ್ಞೆ ಮಾಡಿದಳು. ಕೂಡಲೆ, ದಾದಿಯರು ಮುಸೌರನನ್ನೂ ಆತನ ಸೇವಕರನ್ನೂ ಸಹ ಕರೆದುಕೊಂಡುಬರಲು, ನಪುಂಸಕಶ್ರೇಷ್ಠನೂ, ಆತನ ಸೇವಕರೂ ಸಹ ಬಹು ವಿನಯದಿಂದ ರಾಣಿಗೆ ವಂದನಾದಿಗಳನ್ನು ನಿರ್ವಿಸಿ, ತಾವು ದೂರವಾಗಿ ನಿಂತುಕೊಂಡು, ನಮಸ್ಕರಿಸಿದರು. ತರುವಾಯ ರಾಣಿಯು, ಕಲೀಫರಕಡೆಯವರ ಸಾಮಾನುಗಳೇನೆಂದು ಕೇಳಲು, ಮುಸೌರನು, ಅಮ್ಮಾ! ಕಲೀಫರು ತಮ್ಮ ದರ್ಶನವನ್ನು ತೆಗೆದುಕೊಳ್ಳಬೇಕೆಂಬ ಸಂತೋಷದಿಂದ, ನನ್ನನ್ನು ಇಲ್ಲಿಗೆ ಒರುವಂತೆ ಮಾಡಿದರು. ನಿಮ್ಮ ಕ್ಷೇಮಸಮಾಚಾರವನ್ನು ವಿಚಾರಿಸಿ ಬಹುದಿನಗಳಾದುದರಿಂದ, ತಮ್ಮನ್ನು ನೋಡಬೇಕೆಂಬ ಕುತೂಹಲವು ಸುಲ್ತಾನರನ್ನು ಹೇಗೆ ತತ್ತರಗೊಳಿಸುತ್ತಿರುವುದೋ, ಹಾಗೆ ತಾವುಕೂಡ ಈದಿನ ರಾತ್ರಿಗೆ ಕಲೀಫನನ್ನು ಅತ್ಯಾದರದಿಂದ ಬರಮಾಡಿಕೊಂಡು, ಅವರ ಮನಸ್ಸನ್ನು ತೃಪ್ತಿಪಡಿಸುವುದಕ್ಕೆ ಸಿದ್ಧರಾಗಿ ಇರಬೇಕೆಂದು ಬೇಡುವೆನು. ಇದೇ ನಿಮ್ಮ ಪ್ರಾಣಪ್ರಿಯರಾದ ಕಲೀಫರ ಮುಖ್ಯಾಜ್ಞೆ ಎಂದು ಹೇಳಿದನು.

ರಾಣಿಯು ಕಲೀಫರ ಆಜ್ಞೆಯನ್ನು ಬಹು ಮರ್ಯಾದೆಯಿಂದ ಸ್ವೀಕರಿಸಿದ ಗುರುತಿಗಾಗಿ, ಸೆಲಕ್ಕೆ ಬಾಗಿ ನಮಸ್ಕಾರ ಮಾಡಿ, ಮರಳಿ ಸರಿಯಾಗಿ ಕುಳಿತು, ನಮ್ಮ ಪ್ರಾಣೇಶರಾದ ಕಲೀಫರವರ ಆಜ್ಞಾನುಸಾರವಾಗಿ ನಡೆದು, ಮರ್ಯಾದೆಯಿಂದ ಅವರನ್ನು ಸತ್ಕರಿಸುವುದೇ ನನ್ನ ಮುಖ್ಯಾಂಶವಾದುದರಿಂದ, ನಾನು ಅತಿಶಯವಾದ ಮರ್ಯಾದೆಯಿಂದ ಅವರನ್ನು ಬರಮಾಡಿಕೊಳ್ಳಲು ಸಿದ್ಧಳಾಗಿರುವೆಂದು, ರಾಜಾಧಿರಾಜರವರ ಸನ್ನಿಧಾನದಲ್ಲಿ ಬಿನ್ನಪಿಸು ಎಂದು ಹೇಳಿ, ತನ್ನ ಪ್ರೀತಿಪಾತ್ರಳಾದ ದಾದಿಯನ್ನು ಕರೆದು, ನೀನು ಕಲೀಫರನ್ನು ಬರಮಾಡಿಕೊಳ್ಳುವುದಕ್ಕೆ, ತಕ್ಕ ಸನ್ನಾಹಗಳನ್ನು ಶೀಘ್ರವಾಗಿ ನೆರವೇರಿಸಿಕೊಂಡು ಸಿದ್ಧಳಾಗಿ, ಇತರ ದಾದಿಯರೊಡನೆ ಕಾದುಕೊಂಡಿರೆಂದು ಹೇಳಿ, ನಪುಂಸಕವರ್ಯನನ್ನು

ನೋಡಿ, ಅಯ್ಯಾ ! ಕಲೀಫರು ಬರುವಕಾಲದಲ್ಲಿ ಸಕಲವೂ, ಕ್ರಮವಾದ ಸ್ಥಿತಿಯಲ್ಲಿರಬೇಕೆಂಬುದನ್ನು ನೀನು ಚೆನ್ನಾಗಿ ತಿಳಿದಿರುವೆ. ಈಗ ಸಕಲ ಸಂರಂಭವೂ ಸಿದ್ಧವಾಗಬೇಕಾದರೆ, ಸ್ವಲ್ಪ ಕಾಲವು ಬೇಕಾಗುವುದು. ಆದುದರಿಂದ, ದಯೆಮಾಡಿ ತಮ್ಮ ಆತುರಭರಿತವಾದ ಕುತೂಹಲವನ್ನು ಕೊಂಚಕಾಲ ತಾಳಿಕೊಂಡಿರಬೇಕೆಂದು ಹೇಳಿ, ಸಮಾಧಾನಪಡಿಸಿರೆಂದು ಅವರಿಗಾಜ್ಞೆಯನ್ನಿತ್ತು ಕಳುಹಿಸಿದಳು. ನಂತರ ಪರ್ಷಿಯಾ ರಾಜ ಪುತ್ರನ ಮತ್ತು ಇರ್ಬ್ತೆಹರನಬಳಿಗೆ ಬಂದು ಸಾವಕಾಶವಾಗಿ ಮಾತನಾಡಿ ಸಂತೋಷಪಡುವುದಕ್ಕೆ ಅವಕಾಶ ದೊರೆಯದೆ ಹೋದುದರಿಂದ, ಕಣ್ಣೀರನ್ನು ಸುರಿಸುತ್ತ ಅವರ ಎದುರಿಗೆ ಬಂದು ನಿಂತುಕೊಂಡಳು. ಕೂಡಲೆ ರಾಜಪುತ್ರನು ತನಗೆ ಶುಭಸೂಚನೆ ಉಂಟಾಗಲಿಲ್ಲವೆಂದು ಹೆದರಿದಂತೆ, ಇರ್ಬ್ತೆಹರನೂ ವ್ಯಸನಾಕ್ರಾಂತನಾಗಿ ಭಯದಿಂದ ನಡುಗುತ್ತ ಅಮ್ಮಾ ! ನೀನು ನಮ್ಮಗಳನ್ನು ಹೊರಟುಹೋಗುವಂತೆ ಹೇಳುವುದಕ್ಕಾಗಿ ಬಂದಿರುವಂತೆ ತೋರುವುದು. ಆದರೆ ಈ ರಾಜಪುತ್ರನು, ನಿನ್ನನ್ನು ಅಗಲಿದ್ದು ಪುನಹ ಬಂದು ಕೊಡುವ ಸೌಭಾಗ್ಯವೆಂಬ ತಾಳ್ಮೆಯನ್ನು ಹೊಂದಿದ್ದರೆ, ಭಗವಂತನ ದಯೆದಿಂದ ಆತನು ಸುಖವಾಗಿರಬಹುದು. ಇಲ್ಲವಾದರೆ ನಿನ್ನನ್ನು ಆತನು ಅಗಲಿಹೋಗುವುದೇ ಪ್ರಯೋಸವೆಂದು ತೋರುವುದೆಂದು ನುಡಿಯಲು, ರಾಜಕುಮಾರನು ತನ್ನ ಮನೋರಥವನ್ನು ಸರಿಯಾಗಿ ಗುರುತಿಸಿದ ಇರ್ಬ್ತೆಹರನನ್ನು ವಂದಿಸಿ, ತಾನು ರಾಣಿಯೆನ್ನನೋಡಿ, ಕಣ್ಣೀರನ್ನು ಸುರಿಸಿದನು.

ರಾಣಿಯೆ, ಹಾ ! ಪ್ರಾಣನಾಥಾ ! ನಿನ್ನ ಅದೃಷ್ಟವನ್ನು ನನ್ನ ದೌರ್ಭಾಗ್ಯದೊಂದಿಗೆ ಕೂಡಿಸಿದ ಭಗವಂತನಿಂದ, ನೀನು ಧನ್ಯನಾದೆ. ನನ್ನನ್ನು ಅಗಲಿಹೋದಬಳಿಕ ನೀನು ಇತರವಾದ ಪರಮಾಶ್ಚರ್ಯಗಳನ್ನು ಅತ್ಯಾನಂದವನ್ನು ಸಹ ಹೊಂದಬಹುದು. ಆದರೂ, ಮತ್ತೊಂದುಸಾರಿ ನೋಡಬಹುದೆಂಬ ಕೋರಿಕೆಯೆನ್ನು ಸಹ ಹೊಂದಿ, ಕುತೂಹಲಿನಾಗಿಹುದು. ನಾನಾದರೋ, ದೌರ್ಭಾಗ್ಯಸಂಪನ್ನಳಾಗಿ, ವೋಹಿಸಿದ ಪುರುಷನನ್ನು ಕೂಡದವಳಾಗಿ ಅತ್ಯಂತವಾದ ವ್ಯಸನದಿಂದ ಕೊರಗುತ್ತ, ಪ್ರಾಣಪ್ರಿಯನಾದ ನಿನ್ನಂತಹ ಸುಂದರಾಂಗನನ್ನು ತೊರೆದು, ನಾನಾವಿಧವಾಗಿದ ಅಂತರಂಗ

ದುಃಖವನ್ನು ವಹಿಸಿರುವಕಾಲದಲ್ಲಿ, ನನ್ನ ಯಜಮಾನರಾದ ಕಲೀಫರು ಬಂದರೆ, ನನ್ನ ಅಂತರಂಗ ವ್ಯಸನವನ್ನು ಪರಿಹರಿಸಿ, ನಾನೆಂತು ಮೊದಲಿನಕ್ಕಾಗಿ ಸಂತೋಷಪಡುವಂತೆ ಉಪಕಾರವನ್ನು ಮಾಡಿಯಾರು! ಮೋಕ್ಷದಿಂದ ಅತನು ನನ್ನಲ್ಲಿ ಆಡುತ್ತಿದ್ದಂಥ ಮಾತ್ಸರ್ಯಗಳನ್ನು ಹೇಳಿಹೊಡೆ ನನ್ನಮನಸ್ಸು ಹೇಗೆ ಒಪ್ಪುವುದು. ಆತನು ಸಂತೋಷಾಶ್ರುಗಳಿಂದ ನನ್ನನ್ನು ಆಲಿಂಗಿಸಿಕೊಳ್ಳುವುವಕ್ಕೆ ಬಂದಾಗ್ಗೆ ನನ್ನ ಹೃದಯದಲ್ಲಿ ಕಾಮಾಗ್ನಿಯಿಂದ ಕುದಿಯುತ್ತಿರುವುದನ್ನು ಕಂಡಿರೆ, ಸಂಚಿಸುತ್ತಿರುವಾಗ ನಾನೆಂತು, ಆನಂದವನ್ನು ಹೊಂದಲಿ. ಎಲೈ ರಾಜಪುತ್ರನಾದ ಕಾಮಾನಭಕ್ಷೀ! ನನಗೆ ಪ್ರಾಪ್ತವಾಗುವ ಪುರುಷಭಿಕ್ಷೆಯನ್ನು ನೋಡಿ, ನೀನೇ ಯೋಚಿಸು. ನನಗೆ ಉಂಟಾದ ಮಹತ್ತಾದ ದುರ್ದಶೆಯು, ನಿನಗೆ ಸಂತೋಷಸೂಚಕವಾಗಿ ಇರುವುದೆ? ಎಂದು ಸ್ತ್ರೀಲಂಪಟತ್ವದ ಸ್ವಭಾವದಿಂದ ಹರಿಯುತ್ತಿರುವ ಕಣ್ಣೀರಿನಲ್ಲಿ ನನ್ನ ಮುಖವನ್ನು ಪ್ರಕ್ಷಾಳನಮಾಡುತ್ತಿರಲು, ಪನ್ನ ರಾಣಿಕಾಂತೆಯನ್ನು ಸಮಾಧಾನಪಡಿಸಬೇಕೆಂಬ ಇಚ್ಛೆಯುಳ್ಳವನಾದರೂ, ಅವಳ ಸ್ತೋತ್ರದ ಸೊಲ್ಲಿನಿಂದ ಪರಮಾಲ್ಪವಾದ ಧೈರ್ಯವನ್ನೂ ಪಡೆಯಲೂ, ಆಕೆಯು ದುರವಸ್ಥೆಯನ್ನು ನೋಡಿ, ಬೆಂಕಿಯ ವ್ಯಸನವಿಡಿಯಲೂ, ತಾನು ಆಕೆಯನ್ನು ಸಮಾಧಾನಪಡಿಸಬೇಕೆಂಬಿ ಇಚ್ಛೆಯುಳ್ಳವನಾಗಿದ್ದರೂ, ಎರಡುನಿಷ್ಠವಾದ ದುಃಖದಿಂದ ನರಳುತ್ತಿರುವ ತನ್ನ ಮನಸ್ಸನ್ನು ತಾನೇ ಸಮಾಧಾನಪಡಿಸಿಕೊಳ್ಳಲಾರದ ಸ್ಥಿತಿಯು ರಾಜಕುಮಾರನಲ್ಲಿ ಯಾವ ಮಾತನ್ನು ಆಡದೆ, ಸ್ತಬ್ಧನಾಗಿ ಹೊರಟುಹೋದನು.

ಹೀಗಾದನಂತರ ಮಾಲಿ ಇತರರುಗಳನ್ನು ಸಮಾಧಾನಪಡಿಸಿ ತಾನೂ ರಾಜಪುತ್ರನೊಂದಿಗೆ ಅವನ ಮನೆಗೆ ಬಂದನೆಂಬುದಾಗಿ ಹೇಳಿದೆನಲ್ಲವೆ, ಇಬ್ಬರೂ ತಿಂದನು ಮೊದಲಿನ ಶೃಂಗಾರಾಲಾಪಗಳಾದ ಮೇಲೆ ಸ್ವಲ್ಪಕಾಲದ ನಂತರ ಮಾಲಿಯು ಅವರಿಬ್ಬರಿಗೂ ಸಂತೋಷಕರವಾಗುವಂತೆ ಹಾಡಿದನು. ಸಂತೋಷಪಟ್ಟರು. ಮತ್ತೆ ಮಾಲಿಯು ಹೊತ್ತಾಗಿರಬಹುದೆಂದು ನಿನಗೆ ತಿಳಿಯುವುದೆನಲು, ಹಾ! ಜ್ಞಾನೀ! ಇಂತಹ ಕೂರರರೂಪನಾದ ಸಮಾಗನು! ಎಲೈ ಸಖನೇ! ಇವರಿಬ್ಬರನ್ನೂ, ನಮ್ಮ ಉದ್ಯಾನವನಕ್ಕೂ, ಟೈಗ್ರಿಸ್‌ನದಿಗೂ, ನಡುವ್ಯದಲ್ಲಿ ಇರುವ

ರವನೆಗೆ ಕರೆದುಕೊಂಡು ಹೋಗಿ ಕತ್ತಲಾದನಂತರ ಇವರನ್ನು ಹೊರಕ್ಕೆ ಳುಹಿಸಿದರೆ, ಕ್ಷೇಮವಾಗಿ ತಂತಮ್ಮ ಮನೆಗಳನ್ನು ಸೇರಿಕೊಳ್ಳುವರೆಂದು ರಾಜಪುತ್ರನನ್ನು ಬಿಗಿದಪ್ಪಿ ಆಲಿಂಗನಮಾಡಿಕೊಂಡು, ಮತ್ತಾವಮಾತನ್ನು ಕಡಪೆ ಸುಲ್ತಾನರನ್ನು ಎದುರುಗೊಳ್ಳುವುದಕ್ಕಾಗಿ ಹೊರಟುಹೋದಳು. ಕೂಡಲೆ ದಾದಿಯು ಪರ್ಷಿಯಾ ರಾಜಕುಮಾರನನ್ನು ಇಬ್ರಹೆಪರನನ್ನು ಸೇವಂಸೆಲೆನೆಪರು ಬೀಳಿಸಿ ಅರಮನೆಗೆ ಕರೆದುಕೊಂಡು ಹೋಗಿ, ನೀವು ಹೆದರತಕ್ಕ ಆವಶ್ಯಕತೆಯೇನೂ ಇಲ್ಲ. ನಾನು ಸಮಯೋಚಿತವನ್ನರಿತು, ನಿಮ್ಮನ್ನು ಯಾವ ಆಪತ್ತಿನಿಂದಲೂ ಸುಲಭದಲ್ಲಿ ಕಳುಹಿಸಿಕೊಡುವೆನೆಂದು ಹೇಳಿ, ಬಾಗಿಲು ಮುಚ್ಚಿಕೊಂಡು ಹೊರಟುಹೋದಳು ಇಂತೆಂದು ಹೇಳಿ, ಬೆಳಗಾದುದರಿಂದ ಷಹರಜಾದಿಯು ಕಥೆಯನ್ನು ನಿಲ್ಲಿಸಿ, ಮಗಳಿ ಬೆಳಗಿನ ಜಾವದಲ್ಲಿ ಕಥೆಯನ್ನು ಹೇಳತೊಡಗಿದಳು.

೧೯೦ನೆಯ ರಾತ್ರಿ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು, ಇಂತೆಂದು ದಾದಿಯು ರಾಜಕುಮಾರನನ್ನೂ, ವರ್ತಕನನ್ನೂ ಸಹಾ, ಆ ಅರಮನೆಯಲ್ಲಿ ಬಿಟ್ಟು ಹೋದಮೇಲೆ ಭಯಂಕರನೇಪವೆಂದು ಹೇಳಿದ ಮಾತನ್ನು ಮರೆತು, ಹೊರ ಹೊರಡುವುದಕ್ಕೆ ಮಾರ್ಗವಿಲ್ಲದಿರುವುದನ್ನು ಕಂಡು ತುಂಬ ಭಯಗ್ರಸ್ತರಾದರು. ಹಿಂಗಿರುವಲ್ಲಿ ಅಕಸ್ಮಾತ್ತಾಗಿ ಬಂದಾನೊಂದು ಮುಕ್ತ ಪ್ರಕಾಶವು ಕಿಟಿಕಿಯ ಮೂಲಕವಾಗಿ ಕೋಣೆಯೊಳಗಿಂದಿತು. ಅವರಿಬ್ಬರೂ ಕಿಟಿಕಿಯಲ್ಲಿ ಬೆಳಕು ಕಾಣುವುದಕ್ಕೆ ಕಾರಣವೇನೆಂದು ಇಣಿಕಿನೋಡಲಾಗಿ, ನೂರು ಮಂದಿ ನಪುಂಸಕಸರದಾರರಿಂದಲೂ, ಅಸದೃಶಸೌಂದರ್ಯವತಿಯಾದ ಮನಸೌರನಿಂದಲೂ ಆತನ ಸಹಾಯಕನಾದ ಮಾಫರೂಜಿಂದಲೂ ಕೂಡಿದವರಾಗಿ, ಮಧ್ಯದಲ್ಲಿ ಕಲೀಫರು ಭವ್ಯಮಿತ್ರಗುಪ್ತನನ್ನು ಅವರನ್ನು ಎದುರುಗೊಳ್ಳುವುದಕ್ಕಾಗಿ, ಹೊಳೆಗುತ್ತಿರುವ ಜೀನು ನೆಲಗಳೆಯರು ಉತ್ತಮಾಭರಣ ಶೋಭಿತವಸ್ತ್ರಗಳಿಂದ ಅಲಂಕೃತರಾದ ಸದ್ಭಾವ ಸೌಂದರ್ಯ ಲಾವಣ್ಯಯುಕ್ತರಾದ ಸ್ತ್ರೀಯೆರಿಂದ ಕೂಡಿ, ಎಂದಾನೊಂದು ಮಾರ್ಗದಲ್ಲಿ, ಉದ್ಯಾನವನದ ಮಧ್ಯ ಭಾಗದಲ್ಲಿ ನಿಂತುಕೊಂಡಿರುವುದನ್ನೂ, ಆ ಲಲನಾಮಣಿಯೆ ದಾಪಿಯೆರಲ್ಲನೇ ಈಗ ವೀಣಾನಾದವನ್ನು ಮಾಡುತ್ತ, ತಾಳ, ಲಯ, ನೃತ್ಯ, ಗೀತಗಳಿಂದ

ಸುಲ್ತಾನರಿಗೂ, ಸುಲ್ತಾನಿಗೂ, ಲಿನಂಡವು ಅಧಿಕವಾಗುವಂತೆ ನಡೆಸುತ್ತಿರುವುದನ್ನೂ ಸಹಾ, ಕಣ್ಣಾರೆ ನೋಡಿದರು. ಕಲೀಫರು ಹತ್ತಿರಕ್ಕೆ ಬಂದಕೂಡಲೆ, ಷೇಮುಸೆಲ್‌ನೆಹರರು, ಅವನ ಪಾದಗಳಿಗೆ ನಮಸ್ಕರಿಸಿ, ಪರ್ಷಿಯಾ ರಾಜಕುಮಾರನನ್ನು ನೆನೆವುತ್ತಾ ತನ್ನ ಮನಸ್ಸಿನಲ್ಲಿ ತಾನೇ ಇತೋಪ್ಯತಿಶಯವಾದ ಸುಖಾನುಭವಾಗಿ ಭಾವಿಸುತ್ತಿದ್ದಳು. ಇಷ್ಟರಲ್ಲಿ ಅತ್ಯಂತ ವಿನಯದಿಂದ ತನಗೆ ನಮಸ್ಕಾರ ಮಾಡಿದ ಷೇಮುಸೆಲ್‌ನೆಹರಳನ್ನು ಬಹು ಆದರದಿಂದ ಮಾತನಾಡಿಸಿ, ಎಲೈ ಬ್ರಾಹ್ಮಣದಕಳಾದ ನಾಯಿಂಕಾಮಣಿಯೇ! ಬಹುದಿನಗಳಿಂದ ನಿನ್ನನ್ನು ಅಗಲಿ ಇದ್ದುದಕ್ಕಾಗಿ, ನನ್ನನ್ನು ನಾನೆ ನಿಂದಿಸಿಕೊಳ್ಳುವೆನೆಂದು ಹೇಳಿ, ಅವಳ ಕೈಗಳನ್ನು ತಿಂದಿಕೊಂಡು, ಪ್ರೀತಿಪೂರ್ವಕವಾದ ಮಾತುಗಳನ್ನಾಡುತ್ತಾ, ಸಿಂಹಾಸನದ ಬಳಿಗೆ ಬಂದು ತಾನು ಅದರಮೇಲೆ ಕುಳಿತುಕೊಂಡನು. ಷೇಮುಸೆಲ್‌ನೆಹರಳು ಪಾದ್ಶಾರನ ಮತ್ತೊಂದು ಉಚಿತಾಸನದಲ್ಲಿ ಕುಳಿತುಕೊಂಡಿರಲು, ಸಂಗೀತಪೂರ್ಣರೂ ಸ್ವಲ್ಪಮೋಹಿತನ ವಿಗೆ ಸಂಗೀತವನ್ನು ಪಾಡಿ, ನರ್ತನ ಮಾಡುತ್ತಿದ್ದ ಹೆಂಪ್ರಿಗಳು ಬಹಳ ಹೊತ್ತು ಅಲ್ಲೇ ಇರುವುದರಿಂದ ರಾಣಿಸುಸೌಖ್ಯಕ್ಕೆ ಕೊರತೆಯುಂಟಾಗುವುದೆಂದು ತಿಳಿದು ದೂರವಾಗಿ ನಿಂತುಕೊಂಡರು.

ಹೀಗೆ ಕುಳಿತಿರುವ ಕಲೀಫರು, ಬಾಗ್ದಾದಪಟ್ಟಣದಾರನು, ಹಿಡಿದು ಕೊಂಡಿರುವ ದೀರ್ಘವಿಚಾರಣೆಯ ಚಳಿಕೆಯಿಂದ, ಬಾಯ್ಕಾಸಪಡಿದ ಮಧ್ಯಭಾಗದಲ್ಲಿ ಇರುವ ಅರಮನೆಯ ಬಾಗಿಲುಗಳು ಮುಚ್ಚಿರುವುದನ್ನು ನೋಡಿ, ಆಶ್ಚರ್ಯಯುಕ್ತರಾಗಿ, ಈ ಅರಮನೆಯ ಬಾಗಿಲುಗಳೇಕೆ ಮುಚ್ಚಲ್ಪಟ್ಟಿವೆ ಎಂದು ಕೇಳಿದಕೂಡಲೆ, ಕಿಟಕಿಗಳೆಲ್ಲವೂ ಸಂಪೂರ್ಣವಾಗಿ ತೆರೆದುಕೊಂಡಿವು. ಆ ರಾಜಮಂದಿರವು ಮೊದಲಿಗಿಂತಲೂ, ಅತಿಶಯವಾಗಿ ಹೊಳೆಯುತ್ತಿರುವುದನ್ನುಕಂಡು ಕಲೀಫರು, ಓ ಬ್ರಾಹ್ಮಣಿಪ್ರಿಯಳಾದ ಸುಂದರೀಮಣಿಯೇ! ನೀನು ಮಾಡಿರುವ ಉಪಾಯವು ನನಗೆ ತಿಳಿಯುತ್ತೆ. ನೀನು ಮಧ್ಯಾಹ್ನ ಕಾಲದಲ್ಲಿ ಹೇಗಿರುತ್ತಿದ್ದೆಯೋ ಹಾಗೆಯೆ ರಾತ್ರಿಕಾಲದಲ್ಲೂ ಇರಬೇಕೆಂದು ಹೀಗೆ ಮಾಡಿರಬಹುದು. ಇದನ್ನು ನೋಡದೆ ನಾನೆಂದಿಗೂ ಅಲ್ಲವೆಂದು ಹೇಳಲಾರೆನು ಎಂದರು. ರಾಜಮಂದಿರದಲ್ಲಿದ್ದ ಇಬ್ಬರೆತ್ತರನು, ಮತ್ತು ರಾಜಪುತ್ರನೂಸಹಾ, ತಮ್ಮ ಜೀವಮಾನದಲ್ಲಿ ನೋಡದೆ ಇದ್ದಂ

ತಹ, ವಿಚಿತ್ರವಾದ ಆಟಗಳನ್ನೂ, ವಿನೋದವಾದ ಮಾತುಗಳನ್ನೂ, ಇತರ ಆನಂದಕರಗಳಾದ ಉತ್ಸವಕಾರ್ಯಗಳನ್ನೂ ಕಂಡು, ಸಂತೋಷಯುಕ್ತರಾಗಿ ಆಶ್ಚರ್ಯಪಡುತ್ತಿದ್ದರು. ಆಗ ಪರ್ಷಿಯಾ ರಾಜಕುಮಾರನು, ಕಲೀಫರನ್ನೂ ಮೀಮುಸೆಲ್ನೆಹರಳನ್ನು ನೋಡಿ, ಮಹಾ ವ್ಯಾಕುಲಭರಿಗಿನಾಗಿ, ಅಯ್ಯೋ! ಇಂತಹ ವಿನೋದಗಳನ್ನು ನೋಡುವುದಕ್ಕೆ ನನ್ನ ಬುದ್ಧಿಯು ಸ್ವಾಧೀನವಿಲ್ಲದೆ ಹೋಯಿತಲ್ಲಾ! ಆಹಾ! ನನ್ನ ಅವಯವಗಳು ನನ್ನನ್ನೇ ತೊರೆದು ಅನ್ಯತ್ರ ಜೊರಜೊರವಾಗಿ ಪ್ರಯಾಣಮಾಡುವುದು ನನ್ನ ಮೋಹನಾಂಗಿಯಾದ ಆ ಸುಂದರೀಮಣಿಯ ಅಂಗಡಿ ಸರಸಲಲ್ಲಾಪಗಳನ್ನಾಡುತ್ತಿರುವುದನ್ನು ನೋಡಿ, ನಾನೆಂತು ಸೈರಿಸಲೀ! ಅಯ್ಯೋ! ನನ್ನ ಮೋಹವು ವಿಪರೀತವಾಗಿ ಹೋಗುತ್ತಿರುವುದಲ್ಲಾ! ನನಗಿಂತಲೂ ಹೆಚ್ಚಾದ ದುರವಸ್ಥೆಯನ್ನು ಹೊಂದಿದ ಮಾನವರು ಲೋಕದಲ್ಲಿರುವರೇ? ನಾನೇ ಧನ್ಯನೆಂದು ತಿಳಿದುಕೊಂಡಿದ್ದುದು ಒಂದೇ ಒಂದು ಕ್ಷಣಕಾಲವೇ ಹೊರತು, ಈಗ ನನಗೆ ಬಹು ಕಷ್ಟಕರವಾದ ಮರಣವ್ಯಥೆ ಉಂಟಾಗಿರುವುದಲ್ಲಾ! ಈ ಕಷ್ಟಗಳನ್ನು ನಾನು ತಾಳಲಾರೆ! ಹಾ! ಮನ್ನಣೆಯಿಲ್ಲದಿನಿಯೊಡ ಮೀಮುಸೆಲ್ನೆಹರಳೇ! ನಾನು ಈ ದುರವಸ್ಥೆಯನ್ನು ತಾಳಲಾರೆ. ನನ್ನ ಧೈರ್ಯವು ಕುಂದಿಹೋಯಿತು; ಮೋಹವು ಅಧಿಕವಾಯಿತು. ಸಹಸೆಯೇ ಕಾಣದಂತೆ ಎಲ್ಲಿಯೋ ಹೊರಟುಹೋಗಿಬಿಡುವೆನು ಎಂದು ಯೋಚಿಸುತ್ತಾ ಉದ್ಯಾನವನದಲ್ಲಿ ಏನೋ ಗದ್ದಲವಾಗುತ್ತಿರುವುದನ್ನು ಕೇಳಿ, ಬಾಯಿಯನ್ನು ಗಟ್ಟಿಯಾಗಿ ಮುಚ್ಚಿಕೊಂಡನು.

ಕಲೀಫರು ತಮ್ಮ ಪರಿವಾರಕ್ಕೆ ನಿಂತುಕೊಂಡಿರುವ ಗಾಯಕಿಯರಿಗೆ ಗಾನ ಮಾಡುವಂತೆ ಆಜ್ಞಾಪಿಸಲು, ಮೀಮುಸೆಲ್ನೆಹರು ತನ್ನ ಹಸ್ತಗತವಾದ ವೀಣೆಯನ್ನು ಬಾರಿಸುತ್ತಾ, ತನ್ನ ಮನೋಲ್ಲಂಘನಾಪಹಾರಿಯಾದ ರಾಜಕುಮಾರನಾದ ಪರ್ಷಿಬಾಲಕನನ್ನು ಕರೆದು, ಮೋಹಯುಕ್ತವಾದ ಗಾನವನ್ನು ಮಾಡಿ, ಆತನನ್ನು ನೆನೆಯುಕೊಂಡು, ಕಲೀಫರನ್ನು ನೋಡಿ, ಮೂರ್ಛಾಕ್ರಾಂತಳಾದಳು. ಇದನ್ನು ನೋಡಿದಕೂಡಲೆ, ಪರ್ಷಿಯಾ ರಾಜಕುಮಾರನು ಸಹಾ ಮೂರ್ಛಾಕ್ರಾಂತನಾಗಿ ಬಿದ್ದುಹೋದನು. ಕೂಡಲೆ ಕಲೀಫರನ್ನು ಬಳಸಿ ನಿಂತಿದ್ದ ದಾದಿಯರು ಬಂದು, ಆ ಲಲನಾಮಣಿಯನ್ನು

ತಕ್ಕಂತೆ ಉಪಚರಿಸುವುದಕ್ಕೆ ಅರಮನೆಯೊಳಕ್ಕೆ ಕರೆದುಕೊಂಡುಹೋದರು. ಉದ್ಯಾನವನದಲ್ಲಿ ಯಾರೂ ಇಲ್ಲದಂತೆ ಎಲ್ಲರೂ ಅರಮನೆಯನ್ನು ಸೇರಿದರು. ಇಬ್ರಹೀಮರನು ತನ್ನ ಮಿತ್ರನಾದ ಪರ್ಷಿಯಾ ರಾಜಕುಮಾರನು ಪ್ರಜ್ಞಾಹೀನನಾಗಿ ತನ್ನ ಕಾಲುಗಳಮೇಲೆ ಬಿದ್ದಿರುವುದನ್ನು ನೋಡಿ, ವ್ಯಸನಾಕ್ರಾಂತನಾಗಿ ಕೈಲುದಮುಟ್ಟಿಗೂ ಶೈತ್ಯೋಪಚಾರವನ್ನು ಮಾಡುತ್ತಿದ್ದನು. ಹೀಗಿರುವಾಗ ದಾದಿಯೊಬ್ಬಳು ಬಂದು ಬಾಗಿಲನ್ನು ತೆಗೆದು, ಬನ್ನಿ ! ಬನ್ನಿ ! ಹೊರಗೆ ಬನ್ನಿ ! ಇದೇ ನೀವು ಹೊರಟುಹೋಗುವುದಕ್ಕೆ ಒಳ್ಳೆಯ ಸಮಯವಾಗಿರುವುದು. ಈಗಿನ ಪ್ರಕೃತಸ್ಥಿತಿಯನ್ನು ನೋಡಿದರೆ ಮುಂದೆ ಸಮಸ್ಯೆಗಳಿಗತಿ ಏನಾಗುವುದೊ ಕಾಣೆನೆಂದು ಹೇಳಲು, ಇಬ್ರಹೀಮರನು, ಹಾ ! ದೈವವೇ ! ಅಯ್ಯೋ ! ದುರ್ದೈವವೇ ! ಇಂತಹ ಕಾಲದಲ್ಲಿ ನಾವು ಹೊರಟುಹೋಗುವುದು ಹೇಗೆ ? ಈ ರಾಜಕುಮಾರನ ದುರವಸ್ಥೆಯನ್ನು ನೋಡು ಎನಲು, ದಾದಿಯು ಮೂರ್ಛಾಕ್ರಾಂತನಾಗಿ ಇರುವ ರಾಜಕುಮಾರನನ್ನು ನೋಡಿ, ಹುಸಿನಗೆಯಿಂದ ಹಾಸ್ಯಮಾಡುತ್ತ ಹೊರಗೆಹೋಗಿ, ಸಿಮುಷಸಾತ್ರದಲ್ಲಿ ನೀರನ್ನು ತೆಗೆದುಕೊಂಡುಬಂದಳು.

ನಂತರ ರಾಜಕುಮಾರನು ಇಬ್ರಹೀಮರನ ಶೈತ್ಯೋಪಚಾರದಿಂದ ಪ್ರಜ್ಞೆಯುಕ್ತನಾದರೂ, ಬಲಹೀನನಾಗಿ ನಡೆಯಲಾರದಷ್ಟು ಶಕ್ತಿಹೀನನಾಗಿದ್ದು, ಕಣ್ಣುಗಳನ್ನು ತೇಲಿಸುತ್ತಿದ್ದನು. ಅದನ್ನು ಕಂಡು ಇಬ್ರಹೀಮರನೂ ದಾದಿಯೂ ಸೇರಿ ಆತನನ್ನು ಹಿಡಿದುಕೊಂಡು, ಉದ್ಯಾನವನದ ಬಾಗಿಲನ್ನು ದಾಟಿ ಬಿದ್ದಿಯೆಬಾಗಿಲ ಮೂಲಕವಾಗಿ ಟೈಗ್ರಿಸ್ ನದಿಯ ಕಾಲುವೆಯಬಳಿಗೆ ಸೇರಿ, ಅಲ್ಲಿ ನಿಂತು ಸುತ್ತಲೂ ನೋಡಿ, ಕೈತಟ್ಟಿದ ಕೂಡಲೆ ಒಬ್ಬ ಸೇವಕನು ಗಾಡಿಯನ್ನು ತೆಗೆದುಕೊಂಡುಬಂದನು. ಆತನ ಬಳಿಯಲ್ಲಿ ಒಂದು ತೆಪ್ಪವೂ ಇದ್ದಿತು. ರಾಜಕುಮಾರನು, ಇಬ್ರಹೀಮರನು ಗಾಡಿಯಲ್ಲಿ ಕುಳಿತು ಪಟ್ಟಣದ ಕಡೆಗೆ ಬಂದು ಕೈಯ್ಯನ್ನು ತೋರಿಸುತ್ತ ಮುತ್ತಿಕ್ಕಿದುದರಿಂದ ಪಡದಡಿಸುತ್ತಿರುವ ಹೃದಯವನ್ನು ಸಂತೈಸುವಂತೆ, ಎಲೆ ಅಬ್ಬೆ ಪಾರಿವಾಳವೆ ! ಹಾ ! ಹಾ ! ಆಹಾ ! ಎನ್ನ ಮೋಹನಾಂಗಿಯಾದ ಮಧುರಾಧರೇ ! ನನ್ನ ಅಗಲಿಕೆಯಿಂದ ನಿನಗೆ ಉಂಟಾಗಿರುವ ದುಸ್ಸಹವಾದ ವ್ಯಥೆಗಿಂತಲೂ, ಅಧಿಕವಾಗಿ. ನಾಲ್ಕುವಾಗಿ

ಸುಖ ಉಂಟಾಗುವಂತೆ ವಿರಹಸುಖವನ್ನು ಅನುಭವಿಸುತ್ತಿರುವ ನನ್ನನ್ನು ಮದನರಾಜನು ಸಂತೈಸುತ್ತಿರುವನೆಂದು ದೀನಸ್ವರದಿಂದ ನುಡಿದನು. ಇಂತೆಂದು ನುಡಿದು ಷಹರಜೌದಿಯು ಬಳಗಾದಕೂಡಲೆ ಕಥೆಯನ್ನು ನಿಲ್ಲಿಸಿ, ಮರುದಿನ ಬಿಳಗಿನ ಜಾವದಲ್ಲಿ ಮರಳಿ ಹೇಳಲಾರಂಭಿಸಿದಳು.

೧೯೧ ನೆಯ ರಾತ್ರಿ ಕಥೆ.

ಷಹರಜೌದಿಯು ಸುಲ್ತಾನರನ್ನು ಕುರಿತು, ಇಂತೆಂದಳು. ಬಳಿಕ ದಾದಿಯು, ರಾಜಕುಮಾರನನ್ನು ಇಬ್ಬತೆಹರನನ್ನೂ ಸಹಾ, ಟೈಗ್ರಿಸ್ ನದಿಯೆವರಿಗೂ ಕರೆದುಕೊಂಡುಹೋಗಿ ಬಿಟ್ಟು, ಅವರಿಂದ ವ್ಪಣೆಯನ್ನು ತೆಗೆದುಕೊಂಡು ಹಿಂದಿರುಗಿ ಹೊರಟುಹೋದಳು. ಪರ್ಷಿಯಾ ರಾಜಕುಮಾರನು, ನಡೆಯಲಾರದಷ್ಟು ದುರವಸ್ಥೆಯನ್ನು ಹೊಂದಿರುವುದನ್ನುಕಂಡು, ಆತನಿಗೆ ಧೈರ್ಯವನ್ನು ಹೇಳಿ, ಪ್ರಜ್ಞಾವಂತನನ್ನಾಗಿ ಮಾಡಿ, ಅಯ್ಯಾ! ನಾವಿಬ್ಬರೂ, ನಿನ್ನಮನೆಗೆ ಹೋಗಬೇಕಾದರೆ ನೀನು ಇಂತಹ ಸ್ಥಿತಿಯಲ್ಲಿರುವುದರಿಂದ ಅತ್ಯಂತ ಪ್ರಯಾಸವಾಗುವ್ದದು. ಏಕಂದರೆ: — ನನ್ನ ಮನೆಗಿಂತಲೂ ನಿನ್ನ ಮನೆಯು ಬಹುದೂರದಲ್ಲಿರುವುದು. ಆದುದರಿಂದ ನೀನಿಂತಹ ಸ್ಥಿತಿಯಲ್ಲಿ ನಡೆವುದು ಬಹು ತೊಂದರೆಯಾಗಿರುವುದು. ನನ್ನ ಮನೆಗೆ ಹೋಗೋಣ ಬಾ! ಎಂದು ಕರೆದುಕೊಂಡುಹೋಗುತಾ, ಆ ರಾಜಪುತ್ರನ ಬಹು ಹೀನವಾದ ದುರವಸ್ಥೆಯನ್ನು ಕಂಡು, ಬಹಳಹೊತ್ತು ಯೋಚಿಸಿ ಸ್ವಲ್ಪದೂರದಲ್ಲಿ ತನ್ನ ಸ್ನೇಹಿತನೊಬ್ಬನ ಮನೆ ಇರುವುದೆಂದು ತಿಳಿದು, ಅತ್ಯಂತ ಪ್ರಯಾಸದಿಂದಾತನನ್ನು ಕರೆದುಕೊಂಡು ತನ್ನ ಸ್ನೇಹಿತನ ಮನೆಗೆ ಬಂದನು.

ಆತನು ಇವರಿಬ್ಬರನ್ನೂ ಬಹು ಮರ್ಯಾದೆಯಿಂದ ಬರಮಾಡಿಕೊಂಡು, ಅಯ್ಯಾ! ನೀನು ಈಹೊತ್ತನ್ನಲ್ಲಿ ಬರಲು ಕಾರಣವೇನೆಂದು ಕೇಳಿದನು. ಇಬ್ಬತೆಹರನು, ನನ್ನ ಬಾಕೀದಾರನಾದ ವರ್ತಕನು ಪರಸ್ಥಲಕ್ಕೆ ಹೋಗುವನೆಂಬ ಸುದ್ದಿಯನ್ನು ಸಾಯಂಕಾಲದ ವೇಳೆಯಲ್ಲಿ ಕೇಳಿ, ಆತನನ್ನು ನೋಡುವುದಕ್ಕಾಗಿ ಹೊರಟುಬರುತಾ ದಾರಿಯಲ್ಲಿ ಈ ರಾಜಪುತ್ರನನ್ನು ಕಂಡು, ಅಯ್ಯಾ! ನನ್ನ ದೇಣಿದಾರನ ಮನೆಯೆನ್ನು ತೋರಿಸೆಂದು ಕೇಳಕೊಂಡೆನು. ಆತನು ಬಹು ಪ್ರಯಾಸದಿಂದ

ನನ್ನ ಜೊತೆಯಲ್ಲಿ ಬಂದನು. ಈತನೂ ಸಹ ವರ್ತಕನಬಳಿಯಲ್ಲಿ ಹಣವನ್ನು ತರುವುದಕ್ಕಾಗಿ ಹೋಗಿದ್ದುದರಿಂದ, ಇಷ್ಟು ಜೊತೆಗೆ ನಲ್ಲಿ ಇಲ್ಲಿಗೆ ಒರಬೇಕಾಯಿತೆಂದು, ನಾನು ದಾರಿಯಲ್ಲಿ ಒರುತ್ತಿರುವಾಗಲೂ ಕೂಡ ಈ ರಾಜಪುತ್ರನಿಗೆ ನನ್ನಿಂದಾದ ಸಹಾಯವನ್ನು ಮಾಡಿದರೂ ಈತನ ಅಸ್ವಸ್ಥತೆಯು ಕಡಿಮೆಯಾಗಲಿಲ್ಲ. ಆದುದರಿಂದ ನಿನ್ನ ಚಿಕಿತ್ಸೆಗೆ ಬಂದುದರಿಂದ, ನಿನ್ನ ಮನೆಗೆ ಬಂದು ಕದವನ್ನು ತಟ್ಟಿದೆವು. ಇಬ್ರಹೀಮನ ಸ್ನೇಹಿತನು ಆತನ ಮಾತುಗಳನ್ನು ನಂಬಿ ತನ್ನಿಂದಾದ ಉಪಚಾರಗಳಿಂದ ಸತ್ಕರಿಸಿ, ರಾಜಕುಮಾರನಿಗೆ ಬಹುವಾಗಿ ಉಪಚಾರವನ್ನು ಹೇಳಿ, ಆತನ ದೇಹಸ್ಥಿತಿಯನ್ನು ಗುಣಪಡಿಸುವುದಕ್ಕಾಗಿ, ತಕ್ಕ ಉಪಕರಣಗಳು ಸಿದ್ಧವಾಗಿರುವ ಒಂದು ಕೊಠಡಿಗೆ ಕರೆದುಕೊಂಡುಹೋಗಿಬಿಟ್ಟನು. ರಾಜಪುತ್ರನು ನಿದ್ರಾಭರದಿಂದ ಮೂಲಗಿಕೊಂಡಿದ್ದರೂ, ಸ್ನೇಹಮುಸಿಲ್‌ನೆಹರಳು ಕಲೀಫರಿಗೆ ಪ್ರಾಣಕಾಂತೆಳಾಗಿ ಬೀಡಿಕೊಳ್ಳುತ್ತಿರುವಂತೆ ಕನಸನ್ನು ಕಂಡು ಬಹುವಿಧವಾಗಿ ಹಂಬಲಿಸುತ್ತ ರಾತ್ರಿಯನ್ನು ಕಳೆದನು.

ಇಬ್ರಹೀಮನು ಯಾವಾಗಲೂ ಮನೆಯನ್ನು ಬಿಟ್ಟು ಹೊರಗೆ ಇದ್ದವನಲ್ಲವಾದುದರಿಂದ ಬಹು ಚಿಂತಾಕ್ರಾಂತನಾಗಿ, ರಾತ್ರಿಯೆಲ್ಲಾ ಹೊರಳಾಡುತ್ತ ಬೆಳಗಿನ ಜಾವದಲ್ಲಿ ಮಸೀತಿಗೆ ಧ್ಯಾನಕ್ಕಾಗಿ ಹೋಗುತ್ತಿರುವ ಜನರ ಶಬ್ದವನ್ನು ಕೇಳಿ, ತಾನು ತನ್ನ ಸ್ನೇಹಿತನಿಂದ ಅಪ್ಪಣೆಯನ್ನು ಪಡೆದು ರಾಜಕುಮಾರಸಹಿತನಾಗಿ ತನ್ನ ಮನೆಯನ್ನು ಸೇರಿ, ರಾಜಕುಮಾರನು ತನ್ನ ಸಂಗಡ ನಡೆದುಬರುವುದಕ್ಕಾಗಿ ತುಂಬ ಪ್ರಯಾಸ ಪಡುತ್ತಿರುವುದನ್ನು ಕಂಡು, ಬಹಳವಾಗಿ ಉಪಚಾರವನ್ನು ಮಾಡಿ, ತನ್ನ ಮನೆಯಲ್ಲಿಂದುಕೊಠಡಿಯನ್ನು ಬಿಡಿಸಿಕೊಟ್ಟು, ಅಯ್ಯಾ! ನೀನು ಈ ದುರವಸ್ಥೆಯಿಂದ ಬಹು ನಿತ್ರಾಣನಾಗಿ ಸಂಕಟಪಡುತ್ತಿರುವೆಯಾದುದರಿಂದ ನಿನ್ನನ್ನು ಒಂಟೆಯಾಗಿ ಕಳುಹಿಸುವುದಕ್ಕೆ ನನಗೆ ಇಷ್ಟವಿಲ್ಲ. ಅದಲ್ಲದೆ ನಿನ್ನ ಮನೆಯಲ್ಲಿ ಉಪಚರಿಸುವರಾರೂ ಇಲ್ಲ. ಆದುದರಿಂದ ಸುಖವಾಗಿ ಈ ಸೋಫಾಮಂಚದ ಮೇಲೆ ಮಲಗಿ, ನಿನ್ನ ಆಯಾಸವನ್ನು ಪರಿಹರಿಸಿಕೊಂಡು, ಸ್ವಸ್ಥನಾಗಿರಬೇಕೆಂದು ನುಡಿಯಲು, ರಾಜಪುತ್ರನು ಅಯ್ಯಾ! ನೀನು ನನಗೋಸ್ಕರವಾಗಿ ಶ್ರಮವನ್ನು ವಹಿಸುತ್ತಿರುವುದನ್ನು ನೋಡಿ, ನಿನ್ನನ್ನು ಬಹು ಆದರದಿಂದ ಬಂದಿಸುವೆನು. ಇದಕ್ಕಿಂತ ಇನ್ನುಮೇಲೆ

ಇದಕ್ಕಿಂತಲೂ ಹೆಚ್ಚಾಗಿ ನೀನು ಶಪಿಸುವನ್ನು ತೆಗೆದುಕೊಳ್ಳುವುದಾದರೆ ನಾನು ಒಂದುಕ್ಷಣವಾದರೂ ನಿನ್ನನುನೆಯೆಲ್ಲಿರದೆ ಹೊರಟುಹೋಗುವೆನೆಂದು, ಬಹು ವಿನಯದಿಂದ ಪಾರ್ಥಿಸುವೆನು ಎಂದು ಹೇಳಲು, ಇಬ್ರತೆಹರನು ರಾತ್ರಿ ಅರಮನೆಯೆಲ್ಲಿ ನಡೆದ ವ್ಯತಾಂತನನ್ನು ತನ್ನ ಮನೆಯವರಿಗೆಲ್ಲ ಹೇಳುತ್ತಿದ್ದನು. ರಾಜಕುಮಾರನ ಸ್ನೇಹಿತರು ತಂಡತಂಡವಾಗಿ ಆತನಬಳಿಗೆ ಹೋಗಿ ಮಾತನಾಡುತ್ತ ವಿನೋದವಾಗಿ ಕಾಲವನ್ನು ಕಳೆಯುತ್ತಿದ್ದುದರಿಂದ, ಪರ್ಷಿಯಾ ರಾಜಕುಮಾರನು ಸ್ವಲ್ಪ ಚೇತರಿಸಿಕೊಂಡನು. ಆದರೂ ಇಬ್ರತೆಹರನು ಆತನನ್ನು ತನ್ನ ಮನೆಯಲ್ಲಿ ಇಟ್ಟುಕೊಂಡು, ರಾತ್ರಿ ವಿನೋದವಾಗಿ ಕಾಲವನ್ನು ಕಳೆಯಲೆಳಸಿ, ನೃತ್ಯ, ಗೀತ, ವಾದ್ಯಾದಿಗಳಿಂದ ಬಹು ವಿದ್ಯಂಭಣೆಯೊಡಗಿ ಸಂಗೀತವನ್ನು ಮಾಡಿಸಿದನು. ಆ ಗೀತರಾಗವನ್ನೂ ಮೃದಂಗಧ್ವನಿಯೆನ್ನೂ ಕೇಳಿ, ರಾಜಕುಮಾರನು ಪೆಮುಸೆಲ್‌ನೆಹರಳನ್ನು ನೆನೆದುಕೊಂಡು, ಮೊಜಲಿಗಿಂತಲೂ ದುರ್ಬಲನಾಗಿ ಬಿದ್ದುಕೊಂಡನು. ನಂತರ ಆತನ ಸೇವಕರೂಕೂಡ ತಮ್ಮ ಯಾಜಮಾನನನ್ನು ಹುಡುಕಿಕೊಂಡುಬಂದು, ಉಪಚರಿಸುತ್ತಿದ್ದರು.

ಬೆಳಗಾದಕೂಡಲೆ ಇಬ್ರತೆಹರನು ದುರ್ಬಲನಾಗಿರುವ, ತನ್ನ ಸ್ನೇಹಿತನನ್ನು ಆತನ ಪರಿವಾರದವರಸಂಗಡ ಕರೆದುಕೊಂಡುಹೋಗಿ ಮನೆಯನ್ನುಸೇರಿಸಿ, ಆತನಬಳಿಯಲ್ಲಿ ತಾನುಮಾತ್ರ ಗೋಪ್ಯವಾಗಿ ಕುಳಿತುಕೊಂಡು, ಮಾತನಾಡುತ್ತ ಪೆಮುಸೆಲ್‌ನೆಹರಳನ್ನು ನೀನು ಮೋಹಿಸಿರುವುದರಿಂದ ಅತ್ಯಂತ ದುರವಸ್ಥೆಗಳು ಪ್ರಾಪ್ತವಾಗುವುದರಲ್ಲಿ ಯಾವಸಂಶಯವೂ ಇಲ್ಲ. ಆಕೆಯ ಸ್ಥಿತಿಯೂ, ಗುಣಾತಿಶಯಗಳೂ, ಅವಳಿಗಿರುವ ನಿರ್ಬಂಧವೂ ನನಗೆ ತಿಳಿದಿರುವುದು. ಆದುದರಿಂದ ನಿನ್ನಿರ್ವರ ಮೋಹದಿಂದ ನಿನಗೆ ಸುಖವೂ ಇಲ್ಲ. ಆಕೆಗೆ ಅದರಿಂದ ಕೇಡು ಸುಭವಿಸುವದೆಂದು ಹೇಳಲು, ಅಯ್ಯಾ! ಎಲ್ಲಮಾತನ್ನು ತಾಯಿಯಲ್ಲಿ ಆಡುವುದು ಸುಲಭ! ತಾನು ಆಚರಿಸುವುದುಮಾತ್ರ ಬಹು ಪ್ರಯಾಸವಾಗಿರುತ್ತೆಂದು, ನೀನು ತಿಳಿದಿರುವಂತೆ, ಆ ಸುಂದರಾಂಗಿಯಿಂದ ನಾನು, ಅರಣ್ಯವನ್ನು ಸೇರಹೋಗುವೆನೆಂದು, ನಿನ್ನಸಂಗಡ ನಾನು ಮೊದಲೆ ಹೇಳಿರುವೆನಲ್ಲಾ! ಎಂದು ನುಡಿದ ರಾಜಪುತ್ರನನ್ನುನೋಡಿ, ಅತನ ಮಾತುಗಳನ್ನು ಚಿಂತಿಸಿನೋಡಿ.

ಈತನಿಗೆ ಇನ್ನು ವಿವೇಕವನ್ನು ಹೇಳಿ ಪ್ರಯೋಜನವಿಲ್ಲವೆಂದು ತಿಳಿದು, ಹೊರಡಲುದ್ಯುಕ್ತನಾದನು. ಇಂತೆಂದು ಹೇಳಿ ಷಹರಜಾದಿಯು ಕಥೆಯನ್ನು ನಿಲ್ಲಿಸಿ ಮರುದಿನ ಬೆಳಗಿನಜಾವದಲ್ಲಿ ಮರಳಿ ಹೇಳಲಾರಂಭಿಸಿದಳು.

೧೯೩ ನೆಯ ರಾತ್ರಿಯ ಕಥೆ.

ಷಹರಜಾದಿಯು ಸುಲ್ತಾನರನ್ನು ಕುರಿತು, ಇಂತೆಂದಳು. ಬಳಿಕ ಪರ್ಷಿಯಾ ರಾಜಕುಮಾರನು ಇಬ್ರಹೆತೆಹರನನ್ನು ಕುರಿತು ಅಯ್ಯಾ! ನೀನು ಹೇಳಿದ ಬುದ್ಧಿವಾದಗಳಂತೆ ನಾನು ನಡೆದುಕೊಳ್ಳಲು ಅಸಾಧ್ಯವಾಗಿರುವುದೆಂದು ನಾನು ಹೇಳಿದುದಕ್ಕಾಗಿ ನೀನು ಕೋಪಿಸಿಕೊಳ್ಳಬೇಡ. ರಾಣಿಯ ವರ್ತಮಾನವು ನಿನಗೆ ತಿಳಿದಕೂಡಲೆ ನನಗೆ ಅದನ್ನು ತಿಳಿಯಪಡಿಸುವುದಕ್ಕಿಂತಲೂ ಅಧಿಕವಾದ ಮತ್ತಾವ ಉಪಕಾರವೂ ಇಲ್ಲ. ಆಕೆಯು ಮೂರ್ಛೆತಿಳಿದು ಸ್ವಸ್ಥವಾಗಿರುವಳೊ ಇಲ್ಲದೆ ಸತ್ತ್ರೀಹೋಗಿರುವಳೋ ನನಗೆ ತಿಳಿಯದು, ಆ ಲಲನಾಮಣಿಯು ಮೂರ್ಛಾಕ್ರಾಂತಳಾದ ಕಾಲದಲ್ಲಿ ನನಗೆ ಉಂಟಾದ ವ್ಯಸನವೂ, ನೀನು ನನ್ನ ದುರವಸ್ಥೆಯನ್ನು ನಿಂದಿಸಿ ಹೇಳಿದ ಬುದ್ಧಿವಾದದಿಂದಭಿವ್ಯಕ್ತಿಯನ್ನೈದಿದ ಮೋಹವೂ, ನನಗೆ ಈ ವಿಧವಾದ ಅನುಮಾನವನ್ನು ತಂದೊಡ್ಡುತ್ತಿರುವುದೆಂದು ನುಡಿಯುತ್ತಿರಲು, ಇಬ್ರಹೆತೆಹರನು ಸ್ವಾಮಿ! ಆ ಲಲನಾಮಣಿಯು ಮೂರ್ಛಿತಳಾದಬಳಿಕ ಮತ್ತಾವ ಅಪಾಯವೂ ಆಕೆಗೆ ಸಂಭವಿಸಿಲಾರದು.

ರಾಣಿಯ ಪ್ರೀತಿಗೆ ಪಾತ್ರಳಾದ ದಾದಿಯು ನನ್ನಬಳಿಗ್ಬಂದು, ನಡೆದ ಸಂಗತಿಗಳನ್ನೆಲ್ಲಾ ಹೇಳುವಳು. ನಾನು ಅದನ್ನು ತಮಗೆ ತಿಳಿಯಪಡಿಸದೆ ಇರಲಾರೆನು. ನೀವು ನಂಬಿಕೆಯಾಗಿರ್ಬಹುದೆಂದು ಹೇಳಿ, ಆತನಿಂದಪ್ಪಣೆಯೆನ್ನು ಪಡೆದುಕೊಂಡು ತನ್ನ ಮನೆಯನ್ನುನೇರಿ ಆದಿನವೆಲ್ಲ ಪೆವುಸೆಲ್‌ನೆಹರ್‌ಳಕಡೆಯಿಂದ ವರ್ತಮಾನವೇನಾದರೂ ಬಗುವುದೇನೋ ಎಂದೆಂದುಕೊಂಡು, ಮನೆಯೆಲ್ಲಿ ಕಾದುಕೊಂಡಿದ್ದನು. ಆದರೂ ಯಾರೂ ಬರಲಿಲ್ಲ ಹೋಗಲಿ. ಮರುದಿನವಾದರೂ ವರ್ತಮಾನದ ಸುದ್ದಿಯೇ ತಿಳಿಯಲಿಲ್ಲ. ಆದರೆ ಇಬ್ರಹೆತೆಹರನು ರಾಜಕುಮಾರನ ದೇಹಸ್ಥಿತಿಯನ್ನು ತಿಳಿದುಕೊಳ್ಳಬೇಕೆಂದು, ಆತನನ್ನುನೆಗೆ ಬಂದು, ಎಂದಿನಂತೆ ಅಸ್ವಸ್ಥನಾಗಿ

ತನ್ನ ಆಪ್ತಮಿತ್ರರಿಂದಲೂ, ರೋಗಕಾರಣವನ್ನು ತಿಳಿದುಕೊಳ್ಳಬೇಕೆಂದು ಸುತ್ತಲೂ ಮುತ್ತಿಕೊಂಡಿರುವ ವೈದ್ಯಶಿಖಾಮಣಿಗಳಿಂದಲೂ ಪರಿವೇಷ್ಟಿತನಾಗಿ, ಮಲಗಿರುವ ರಾಜಕುಮಾರನನ್ನು ಕಂಡನು. ರಾಜಪುತ್ರನು ಆತನನ್ನು ನೋಡಿದಕೂಡಲೆ, ತನ್ನ ಸ್ನೇಹಿತನನ್ನು ನೋಡಿದುದಕ್ಕಾಗಿ, ಈವೈದ್ಯರು ತನ್ನ ರೋಗಕಾರಣವನ್ನು ತಿಳಿಯುಕೊಳ್ಳಲಾರದೆ, ವ್ಯಯಾಸಪಡುತ್ತಿರುವುದಕ್ಕಾಗಿಯೂ, ಸಂತೋಷ ಪರಿಹಾಸಕರೂಪವಾದ ಹುಸಿನಗೆಯನ್ನು ಬೀರಿದನು. ಸ್ವಲ್ಪಹೊತ್ತಿಗೆ ಸ್ನೇಹಿತರೂ ವೈದ್ಯರೂಸಹ ಹೊರಟುಹೋದಬಳಿಕ, ಇರ್ಬತೆಹರನು ಒಂಟಿಯಾಗಿ ರಾಜಪುತ್ರನಬಳಿಗೆ ಬಂದು, ಅಯ್ಯಾ ! ನಿನ್ನ ದೇಹಸ್ಥಿತಿಯು ಹೇಗಿರುವುದೆಂದು ಕೇಳಿದನು. ರಾಜಕುಮಾರನು ಅಯ್ಯಾ ! ಕ್ಷಣಕ್ಷಣದಲ್ಲಿ ವೃದ್ಧಿಯಾಗುತ್ತಿರುವ, ನನ್ನ ಮೋಹಕ್ಕೆ ಪಾತ್ರಳಾದ ಪೆಮುಸೆಲ್‌ನೆಹರಳು ಬದುಕಿರುವಳೋ, ಇಲ್ಲವೋ, ಎಂಬ ಅನುಮಾನವು ನನ್ನ ವ್ಯಾಧಿಯನ್ನು ಹೆಚ್ಚಿಸಿ, ಬಂಧುಮಿತ್ರ ಕಳತ್ರಾದಿಗಳಿಗೆ, ದಾರುಣವಾದ ಹೆದರಿಕೆಯನ್ನು ಉಂಟುಮಾಡಿ, ರೋಗಕಾರಣವನ್ನು ತಿಳಿದುಕೊಳ್ಳಲಾರದೆ, ನಾನಾವಿಧವಾದ ಚಿಕಿತ್ಸೆಗಳನ್ನು ಮಾಡುತ್ತಿರುವ, ಈ ವೈದ್ಯರ ಸಾಮರ್ಥ್ಯವನ್ನು ವ್ಯರ್ಥಮಾಡುತ್ತಿರುವುದು ಎಂಬುದನ್ನು ನಿನ್ನಸಂಗಡ ಹೇಳದಿರಬಾರದಲ್ಲಾ ! ನೋಡು. ಈ ಜನರು ನನ್ನಸುತ್ತಲೂ ಮುತ್ತಿಕೊಂಡು ನಾನಾವಿಧವಾದ ತೊಂದರೆಯನ್ನು ಕೊಡುತ್ತಿದ್ದರೂ, ಅವರನ್ನು ತಿರಸ್ಕರಿಸುವುದು ಗೌರವವಲ್ಲವೆಂದು ತಿಳಿದು, ಎಲ್ಲಾ ತೊಂದರೆಗಳನ್ನು ಸಹಿಸಿಕೊಂಡಿರುವೆನು. ನೀನು ಮಾತ್ರ ನನ್ನಬಳಿಯಲ್ಲಿ ಬಂದು ಕುಳಿತುಕೊಂಡಿರುವುದರಿಂದಲೆ, ನನ್ನ ಮನಸ್ಸು ಸ್ವಲ್ಪ ಸಂತೋಷವಾಗಿರುವುದು. ಆದುದರಿಂದ ನೀನು ನನ್ನನ್ನು ಎಡೆಬಿಡದೆ ಇರಬೇಕೆಂದು ಬೇಡಿಕೊಳ್ಳುವೆನು.

ಇನ್ನು ರಾಣಿಯಕಡೆಯ ವರ್ತಮಾನವೇನುಂಟು. ದಾದಿಯು ಬಂದಿದ್ದಳೋ! ಏನುಹೇಳಿದಳೆ ದು ಕೇಳಿದನು. ಇರ್ಬತೆಹರನು ಅವಳ ವರ್ತಮಾನವನ್ನೇ ಕಾಣೆಂದು ಹೇಳಲು, ರಾಜಕುಮಾರನು ಕಣ್ಣೀರನ್ನು ಸುರಿಸುತ್ತಾ ಯಾವಮಾತನ್ನೂ ಅಡದೆ ಬಹಳಹೊತ್ತಿನವರೆಗೂ ಸುಮ್ಮನೆ ಕುಳಿತಿದ್ದನು. ಇರ್ಬತೆಹರನು, ಅಯ್ಯಾ ! ನಿನ್ನಧರ್ಮ ಸುಮ್ಮನಿರು.

ಕಣ್ಣೀರನ್ನು ತೊಡೆದುಕೊ ? ನಿನ್ನನ್ನು ನೀನೇ ನಿಂದಿಸಿಕೊಳ್ಳುತಾ, ನಿನ್ನಪ್ರಾಣವನ್ನು ನೀನೇ ಕಳೆದುಕೊಳ್ಳಬಹುದೆ? ಯಾರಾದರೂ ಬಂದರೆ ಏನೆಂದು ತಿಳಿದುಕೊಳ್ಳುವರು ; ನಿನ್ನ ಅಂತರಂಗವನ್ನು ಯಾರಿಗೂ ತಿಳಿಸ ಬಾರದೆಂದು ನೀನು ಬಹು ಜಾಗರೂಕನಾಗಿದ್ದರೂ, ಈವಿಧವಾಗಿ ಅಂಗ ಲಾಚುತ್ತಿರುವುದನ್ನು ನೋಡಿದರೆ, ನಿನ್ನ ಅಂತರಂಗವನ್ನು ನೀನೆ ಮರೆ ಮಾಡಿಕೊಳ್ಳಲಾರೆ ಎಂದು ಇರ್ಬತೆಹರನು ಎಷ್ಟುವಿಧವಾಗಿ ಬುದ್ಧಿ ಯನ್ನು ಹೇಳಿದರೂ, ದುಃಖವನ್ನು ಅತಗಿಸಿಕೊಳ್ಳಲಾರದೆ, ಸ್ವಲ್ಪಹೊತ್ತುಹೋದ ಬಳಿಕ ಸಹನೆಯನ್ನು ತಂದುಕೊಂಡು, ಬುದ್ಧಿಶಾಲಿಯಾದ ಇರ್ಬತೆಹ ರನು ನನ್ನ ಅಂತರಂಗವನ್ನು ಮರೆಮಾಜಿ ನಾಲಗೆಯನ್ನು ನಿರ್ಬಂಧಪಡಿಸ ಬಲ್ಲನೇಹೊರತು, ಷೆಮ್ಸುನ್ನೆಹರಳ ಪ್ರಾಣಾಪಹರ್ತನ ವಿಷಯೆದಲ್ಲಿ ನನ ಗುಂಟಾಗಿರುವ ದುಃಖವನ್ನು ಮಾತ್ರ ಕಡಿಮೆಮಾಡಲಾರದೇ ಹೋದನು. ಆಹಾ ! ನನ್ನ ಮೋಹಕ್ಕೆ ಪಾತ್ರಳಾದ ಆ ರಾಣಿಯು, ಬದುಕಿರುವಳೋ ಇಲ್ಲವೋ ತಿಳಿಯಲಿಲ್ಲ. ಆಕೆಯಿಲ್ಲದ ನಾನೊಂದುಕ್ಷಣವೂ ಬದುಕಲಾರೆನು. ಎನಲು, ಇರ್ಬತೆಹರನು ಅಯ್ಯಾ ! ಇಂತಹ ವ್ಯಸನಕರವಾದ ನಿನ್ನ ಯೋಚನೆಯನ್ನು ಮರೆತುಬಿಡು. ರಾಣಿಯು ಕ್ಷೇಮದಿಂದಲೆ ಇರುವಳು. ಇದಕ್ಕೆ ಸ್ವಲ್ಪವೂ ಸಂದೇಹ ಪಡಬೇಡ. ಆಕೆಯಕಡೆಯಿಂದ ವರ್ತಮಾನ ಬರದಿರುವುದಕ್ಕೆ ಕಾರಣವೇನೆನ್ನುವಿಯೋ? ಸಮಯವು ದೊರಕದಿರಬಹು ದು. ಈದಿನವೇನಾದರೂ ವರ್ತಮಾನವು ತಿಳಿದರೂ ತಿಳಿಯಬಹುದು ಎಂದು ಹೇಳಿ, ಆತನು ಬಹಳವಾಗಿ ಸಮಾಧಾನವನ್ನು ಹೇಳಿ, ಅವನ ಅನುಮತಿ ಯನ್ನು ಪಡೆದು ಹೊರಟುಹೋದನು.

ಆತನು ತನ್ನಮನೆಗೆ ಬಂದಕೂಡಲೆ, ಖಿನ್ನಳಾಗಿ ತನ್ನನ್ನುಕಾಣು ವುದಕ್ಕಾಗಿ ಬರುತ್ತಿರುವ, ದಾದಿಯೆನ್ನು ಕುರಿತು, ಇದೇನು ಇಂತಹ ದುರ ವಸ್ಥೆಯಲ್ಲಿ ಇವಳು ಇಲ್ಲಿಗೆಬರುವುದಕ್ಕೆ ಕಾರಣವೇನೆಂದು ಅನುಮಾನಿಸಿ, ರಾಣಿಯ ವರ್ತಮಾನವೇನೆಂದೂ ಮೊದಲು ನನಗೆ ರಾಜಪುತ್ರರ ವರ್ತ ಮಾನವನ್ನು ಹೇಳದಹೊರತು ನಾನು ಮಾತನಾಡಲಾರೆನೆಂದು ಹೇಳದಬಳಿಕ ರಾಜಕುಮಾರನ ಸ್ಥಿತಿಯನ್ನು ವಿವರಿಸಿ, ಇರ್ಬತೆಹರನು ನುಡಿದಕೂಡಲೆ ತಾನು ತಿಳಿದುಕೊಳ್ಳಬೇಕಾಗಿರುವ ವಿಷಯಗಳೆಲ್ಲವನ್ನೂ ತಿಳಿದುಕೊಂಡ

ದಾದಿಯೂ, ಅಯ್ಯಾ ! ಆ ರಾಣಿಯವರ ವಿಷಯದಲ್ಲಿ ರಾಜಕುಮಾರನು ಎಷೊಟ್ಟಂದು ಚಿಂತಾಕಾ್ರಂತನಾಗಿ, ನರಳುತಿ್ತರುವನೋ ಅದಕ್ಕಿಂತಲೂ ಅತಿಶಯವಾದ ವ್ಯಥೆಯನ್ನು ನಮ್ಮ ರಾಣಿಯೂ, ಅನುಭವಿಸುತಿ್ತರುವಳು. ನಾನು ಮನೋಹರವಮಂದಿರದಿಂದ ನಿರ್ಗ್ರಮನನ್ನು ಹೊರಡಿಸಿ, ಆಸಾ್ಥನವನ್ನು ಸೇರಿದರೂಕೂಡಲೆ, ರಾಣಿಗೆ ಮೂರ್ಛೆ ತಿಳಿದಿರಲಿಲ್ಲ. ಅಂತಹ ದುರವಸೆ್ಥಯನ್ನು ನೋಡಿ ಕಲೀಫರು, ಆಕೆಯು ಮೂರ್ಛಾವೇಶಕ್ಕೆ ಕಾರಣವೇನೆಂದು ಕೇಳಲು, ಅದರ ವಿಷಯವನ್ನು ನಾವು ಕಾಣೆವೆಂದು ಹೇಳಿ, ರಹಸ್ಯವನ್ನು ಹೊರಹಾಕುವುದಕ್ಕೆ ಹೆದರಿ, ಸುಮ್ಮನಿದ್ದೆವು. ಬಳಿಕ ರಾಣಿಯ ವಿರಹವ್ಯಥೆಯನ್ನು ನೋಡಿ, ನಾವುಗಳು ಸೈರಿಸಲಾರದೆ ಕೈಲಾದ ಶೈತೊ್ಯಪಚಾರಗಳನ್ನು ಕ್ರಮಕ್ರಮದಿಂದ ಮಾಡುತಾ್ತ, ಯಾವುದೂ ಸಾಧ್ಯವಾಗದೆ ಹೋದುದರಿಂದ ಗಟ್ಟಿಯಾಗಿ ಅಳತೊಡಗಿದೆವು. ಬಹಳವಾಗಿ ವಿವರಿಸಿ ಪ್ರಯೋಜನವೇನು ? ಆದಿನ ಅರ್ಧರಾತ್ರಿ ಕಳೆದಮೇಲೆ ಮೂರ್ಛೆ ತಿಳಿಯಿಸಲು ಕಲೀಫರು ಆಕೆಯ ರೋಗಕ್ಕೆ ಕಾರಣವೇನೆಂದು, ಪೇಮುಸೆಲ್‌ನೆಹರಳನ್ನೇ ಕೇಳಿದರು.

ನಂತರರಾಣಿಯು ಸರಿಯಾಗಿ ಕಳಿತುಕೊಂಡು, ಆತನ ಕಾಲುಗಳಮೇಲೆ ಬಿದ್ದು ಸ್ವಾಮಿಾ ! ದೇವರು ನನ್ನನ್ನು ಇಂತಹ ತೊಂದರೆಗೆ ಗುರಿಮಾಡಿದನೆ ? ನಿಮಗೆ ನನ್ನಲ್ಲಿ ಉಂಟಾಗಿರುವ ಪ್ರೇಮಕ್ಕೆ ಆಸ್ಪದವಾಗಿ ಬಹು ವಿನಯದಿಂದ ನಡೆಮುಕೊಳ್ಳುತಿರುವಳೆಂಬುವಕ್ಕೆ, ಸಾಕ್ಷಿಯಾಗಿ ತಮ್ಮ ಪಾದಗಳಮೇಲೆ ನನ್ನ ಪ್ರಾಣವನ್ನು ತೆಗೆದುಕೊಳ್ಳಲಾರದೆ ಹೋದೆನಲಾ್ಲ ! ಎಂದು ಮರೆಮಾಜಿದ ಮಾತನ್ನು ನುಡಿದಳು. ಕಲೀಫರು ನೀನು ನನ್ನನ್ನು ಮೋಹಿಸಿರುವೆ ಎಂಬುದೇನೋ ನನಗೆ ಚೆನಾ್ನಗಿ ತಿಳಿದಿರುವುದು. ನನಗೋಸ್ಕರವಾಗಿ ದಯೆ ವಿಟ್ಟು ನಿನ್ನ ಪ್ರಾಣಗಳನ್ನು ಕಾಪಾಡಿಕೋ ! ಈದಿನ ಏನೋ ವಿಶೇಷವು ನಡೆದಿರುವುದರಿಂದಲೆ, ನಿನಗಿಂತಹ ಅವಸೆ್ಥಯು ಉಂಟಾಯಿತು. ಇನ್ನುಮೇಲೆ ಹಾಗೆ ಮಾಡದಂತೆ ಎಚ್ಚರಿಕೆಯಿಂದಿರು. ನೀನು ಸ್ವಸ್ಥಳಾಗಿದ್ದರೆ ನನಗೆ ಸಂತೋಷ ಹೆಚ್ಚು. ಈ ರಾತ್ರಿ ಅಂತಃಪುರಕ್ಕೆ ಹೋಗಬೇಡ ಇಲ್ಲಿ ಇರುವವಳಾಗು. ಅಲಸಿಕೆ ಹೆಚ್ಚಾದರೆ ರೋಗವು ಅಧಿಕವಾಗುವುದೆಂದು ಹೇಳಿ ಸ್ವಲ್ಪ ದ್ರಾಕ್ಷಾರಸವನ್ನು ಕುಡಿಸಿ

ಅವಳ ಅನುಮತಿಯನ್ನು ಪಡೆದುಕೊಂಡು ಹೊರಟುಹೋದರು. ಕಲೀಫರು ಅರಮನೆಗೆ ಹೊರಟುಹೋದಬಳಿಕ ರಾಣಿಯು ಸನ್ನೆ ಮಾಡಿ, ನನ್ನನ್ನು ಹತ್ತಿರಕ್ಕೆ ಕರೆದು, ನಿಮ್ಮಗಳ ಸಮಾಚಾರವನ್ನು ಬಹು ಜಾಗ್ರತೆಯಿಂದ ಕೇಳಿದಳು. ನಾನು ಅವರು ಹೊರಟುಹೋಗಿ, ಬಹಳ ಹೊತ್ತಾಯಿತೆಂದು ಹೇಳಿದವೇಲೆ, ಸ್ವಸ್ಥಳಾದಳು. ರಾಜಕುಮಾರನು ಮೂರ್ಛೆಹೋದ ಸಂಗತಿಯೆನ್ನು, ನಾನು ಆಕೆಯಸಂಗಡ ಹೇಳಲಿಲ್ಲ. ಆ ವಾರ್ತೆಯನ್ನು ಹೇಳಿದರೆ ಆಕೆ ಪುನಹ ಮೂರ್ಛೆಹೋಗುವಳೆಂದು ಭಯವಿದಿದ್ದೆನು. ಆದರೆ ನನ್ನಭಿಲಾಷೆಯು ನೆರವೇರಲಿಲ್ಲ. ಸ್ವಲ್ಪಹೊತ್ತಿನಲ್ಲಿ ಆ ರಾಣಿಯು ಹಾ! ರಾಜಪುತ್ರಾ! ನಿಗ್ಹಗಲಿಕೆಯಿಂದ ನಾನು ಸರ್ವಸುಖಗಳನ್ನು ಪರಿತ್ಯಜಿಸಿ ಕೊರಗುತ್ತಿರುವೆನೆಂದು, ಏಳುಸಾರಿ ಹೇಳಿ ನಂತರ ಮೂರ್ಛಾಕಾಂತಳಾಗಿ ಮರಳಿ ಬಿದ್ದುಕೊಂಡಳು. ಇಂತೆಂದು ನುಡಿದು, ಷಹರ ಜಾದಿಯು ಬೆಳಗಾದಕೂಡಲೆ, ಕಥೆಯೆನ್ನುನಿಲ್ಲಿಸಿ, ಮರಳಿ ಬೆಳಗಿನ ಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೧೯೩ನೆಯ ರಾತ್ರಿಕಥೆ.

ನಂತರ ರಾಣಿಯು ದಾದಿಯು, ತನ್ನ ಯೆಜಮಾನಿಯು ಮೊದಲು ಹೊಂದಿದ ಮೂರ್ಛೆಯ ವಿಚಾರವನ್ನು, ಇರ್ಬತೆಹರನಿಗೆ ತಿಳಿಸಿ, ಒಳಿಕ ನಡೆದ ವರ್ತಮಾನವನ್ನು ವಿವರಿಸಲಾರಂಭಿಸಿದಳು. ಅಯ್ಯಾ! ಪುನಹ ಮೂರ್ಛೆಹೋದ ರಾಣಿಗೆ ನಾವುಗಳೆಲ್ಲರೂಸೇರಿ ಕೈಲಾದಮಟ್ಟಿಗೆ ಶೈತ್ಯೋಪಚಾರ ಮಾಡಿದವೇಲೆ ಆಕೆ ಸ್ವಸ್ಥಳಾಗಿ ಕುಳಿತಿರುವುದನ್ನು ಕಂಡು, ಅಮ್ಮಾ! ನಿನ್ನ ಪ್ರಾಣವನ್ನು ನೀನೇ ಕಳೆದುಕೊಳ್ಳಲುದ್ಯುಕ್ತಳಾಗಿ ಇರುವೆಯೋ? ನಿನ್ನವೇಲಣ ಮೋಸದಿಂದ ವ್ಯಸನಪಡುತ್ತಿರುವ ಪರ್ವಿಯೊ ರಾಜಕುಮಾರನ ಮತ್ತು ನಿನ್ನ ಸೇವಕರಾಗಿದ್ದುಕೊಂಡು ಸಿನ್ನಿದ ಸ್ಥಿತಿಯೆನ್ನು ನೋಡಿ, ಸಹಿಸಲಾರದೆ ವ್ಯಸನಪಡುತ್ತಿರುವ ನಮ್ಮಗಳಿಗಾಗಿಯೂ, ಪಯೆಮಾಡಿ ನಿನ್ನ ಪ್ರಾಣವನ್ನು ಕಾಪಾಡಿಕೋ ಎಂದು, ಪ್ರಾರ್ಥಿಸಿದೆವು. ಅದಕ್ಕಾಕ್ಕೆ ನಿಮ್ಮ ಭಕ್ತ ಶ್ರದ್ಧಾಭಿತನಾದ ಜೀವನ್ಮಗಾಗಿಯೂ, ನೀವು ನನಗೆ ಹೇಳಿದ ಬುದ್ಧಿವಾದಕ್ಕಾಗಿಯೂ, ನಾನು ಬಹಳವಾಗಿ ಸಂತೋಷಿಸುವೆನು. ಅಯ್ಯೋ! ನನ್ನ ಕೋರಿಕೆಗಳೆಲ್ಲ ವ್ಯರ್ಥವಾಗಿ ಪದೇ ಪದೇ

ನನಗೆ ದುಃಖಜಾಲವನ್ನು ತಂದೊಡ್ಡುತ್ತಿರುವುವಲ್ಲಾ ! ಎಂದು ಹೇಳಲು, ನನ್ನ ಸ್ನೇಹಿತರಲ್ಲಿ ಕೆಲವರು ವೀಣಾನಾದವನ್ನು ಮಾಡಿದುದರಿಂದ, ಆಕೆ ಸ್ವಸ್ಥಳಾಗಿ ಸ್ವಲ್ಪಹೊತ್ತು ಇದ್ದು ನಿಶ್ಶಬ್ದವಾಗಿರುವಂತೆ, ನಮ್ಮ ಗಳಿಗೆ ಆಜ್ಞಾಪಿಸಿ ಎಲ್ಲರನ್ನು ಹೊರಕ್ಕೆ ಕಳುಹಿಸಿ, ನನ್ನನ್ನುಮಾತ್ರ ತನ್ನ ಹಾಸಿಗೆಯ ಪಕ್ಕದಲ್ಲಿ ಕುಳ್ಳಿರಿಸಿಕೊಂಡು, ರಾತ್ರಿಯೆಲ್ಲ ವ್ಯಸನದಿಂದ ಕಣ್ಣೀರನ್ನು ಸುರಿಸುತ್ತ, ರಾಜಕುಮಾರನ ಹೆಸರನ್ನು ಉಚ್ಚರಿಸಿ, ಹಾ ! ದೈವವೇ ! ಪ್ರಾಣಪ್ರಿಯನೆಂದು ನಾನುವ್ಯೋಹಿಸಿದ ಪುರುಷನನ್ನು ತೊರೆದು, ಕಲೀಫರ ಕೈಯ್ಯಲ್ಲಿ ಸಿಕ್ಕಿ ನರಳುವಂತೆ ಮಾಡಿದೆಯಾ ! ಎಂದು ನಾನಾತೆರದಿಂದ ಪ್ರಲಾಪಿಸುತ್ತ ಹೊತ್ತು ಕಳೆಯುತ್ತಿದ್ದಳು. ಮರು ದಿನ ಬೆಳಗಾದಮೇಲೆ ಆಕೆ ಸ್ವಲ್ಪನುಟ್ಟಿಗೆ ಸ್ವಸ್ಥಳಾಗಿದ್ದುದರಿಂದ, ನಾವು ಆಕೆಯನ್ನು ಅಂತಃಪುರಕ್ಕೆ ಕರೆದುಕೊಂಡುಹೋದೆವು. ಕೂಡಲೆ ಕಲೀಫರಿಂದ ಆಜ್ಞಾಪ್ತರಾದ, ವೈದ್ಯರು ಬಂದು ಆಕೆಯ ರೋಗಕಾರಣವನ್ನು ತಿಳಿದುಕೊಳ್ಳಲಾರದೆ, ಚಿಕಿತ್ಸೆ ಮಾಡಿದುದರಿಂದ ರೋಗವು ಬಲವಾಗಿ ಹೆಚ್ಚಿತು. ಕಲೀಫರೂಸಹ ಬಂದು ನೋಡಿಕೊಂಡು ಹೋದರು.

ನಂತರ ಆಕೆಯು ಸ್ವಲ್ಪ ಸಮಾಧಾನವನ್ನು ಹೊಂದಿದವಳಾಗಿ, ರಾಜಕುಮಾರನ ವರ್ತಮಾನವನ್ನು ತಿಳಿದುಕೊಂಡುಬರುವಂತೆ ನನ್ನನ್ನು ಕಳುಹಿಸಿದಳು ಎನಲು, ಇಬ್ರಹೆತರನು, ರಾಜಪುತ್ರನ ವಿದ್ಯಮಾನವನ್ನು ಹೇಳಿದೆನಲ್ಲಾ ! ಆತನ ವರ್ತಮಾನವನ್ನು ತಿಳಿದುಕೊಳ್ಳಬೇಕೆಂದು ರಾಣಿಯು ಹೇಗೆ ಕುತೂಹಲದಿಂದ ಕೊರಗುತ್ತಿರುವಳೋ, ಹಾಗೆಯೇ ರಾಜಪುತ್ರನು ಬಹು ಕುತೂಹಲಯುಕ್ತನಾಗಿ ನರಳುತ್ತಿರುವನು. ಮುಖ್ಯವಾಗಿ ನೀನು ಮಾಡಬೇಕಾಗಿರುವ ಕಾರ್ಯ ಒಂದುಂಟು. ಆಕೆಯನ್ನು ಸಮಾಧಾನಪಡಿಸಿ ವ್ಯೋಹವನ್ನು ಅಣಗಿಸಿಕೊಳ್ಳುವಂತೆ ಮಾಡು. ಒಂದು ವೇಳೆ ಅಕಸ್ಮಾತ್ತಾಗಿ ಕಲೀಫರ ಎದುರಿಗೆ ತನ್ನ ವ್ಯೋಹದ ಮಾತುಗಳನ್ನು ಆಡಿದರೆ, ನಮ್ಮೆಲ್ಲರಿಗೂ ಪ್ರಮಾದವುಂಟಾಗದೆ ಇರದು ಎನಲು, ದಾದಿಯು ಅಯ್ಯೋ ! ಆಕೆಯ ವ್ಯೋಹದಿಂದ ಮಹಾ ಪ್ರಮಾದವುಂಟಾಗುವದೆಂಬ ಭಯದಿಂದ ನಾನು ಪದೇ ಪದೇ ಸಮಾಧಾನವನ್ನು ಹೇಳುತ್ತಿರುವೆನು. ಆದರೆ ನೀನು ಈ ಮಾತನ್ನು ಹೇಳಿರುವೆಯೆಂದು ತಿಳಿಸಿದರೆ ಆಕೆಗೆಂದಿಗೂ

ಕೊಪಬಾರದೆಂದು ಹೇಳಿ ಹೊರಟುಹೋದಳು. ಇಬ್ರಹೆಶರನು ಆಗ ತಾನೆ ಪರ್ಷಿಯಾ ರಾಜಪುತ್ರನ ಮನೆಯಿಂದ ಬಂದಿದ್ದನಾದುದರಿಂದ ಪುನಹ ಆತನಬಳಿಗೆ ಹೋಗಲಾರದೆ, ತನ್ನ ಕಾರ್ಯಗಳನ್ನೆಲ್ಲಾ ತೀರಿಸಿಕೊಂಡು ಸಾಯಂಕಾಲಕ್ಕೆ ಆತನಮನೆಗೆ ಹೋದನು. ರಾಜಕುಮಾರನು ಒಂಟಿಯಾಗಿಯೇ ಇದ್ದನು. ಆತನು ಇಬ್ರಹೆಶರನ್ನು ನೋಡಿ, ಸ್ನೇಹಿತನೇ! ನಿನಗೂ ಬಹುಮಂದಿ ಮಿತ್ರರಿರುವರು. ಆದರೆ ನಿನ್ನ ಗುಣಗಳು ಯಾರಿಗೂ ತಿಳಿಯದು. ನೀನು ಪಡುತ್ತಿರುವ ಶ್ರಮದಿಂದ ಕಾಣಬರುತ್ತಿರುವ ಭಕ್ತಿ ಶ್ರದ್ಧೆಗಳಿಂದ, ನಿನ್ನಗುಣವಿಶಾದ್ದಿಂಬುದನ್ನು ನಾನು ಚೆನ್ನಾಗಿ ತಿಳಿದಿರುವೆನು. ನೀನು ನನಗಾಗಿ ಮಾಡುತ್ತಿರುವ ಉಪಕಾರಕ್ಕೆ ತಕ್ಕಂತೆ ಪ್ರತಿ ಉಪಕಾರವನ್ನು ಮಾಡುವುದಕ್ಕೆ ನಾನೂಕೂಡ ಅಸಮರ್ಥನಾಗಿರುವೆನು ಎನಲು, ಇಬ್ರಹೆಶರನು ಅಯ್ಯಾ! ರಾಜಪುತ್ರಾ! ಇಂತಹ ಉಪಚಾರದ ಮಾತುಗಳನ್ನು ಆಡಬೆ ಡ. ನಿನಗೆ ಯಾವ ಅಂಗದಲ್ಲಿ ನೋವುವುಂಟಾದರೂ ಆ ಅಂಗವನ್ನು ನಾನು ಪ್ರತಿಯಾಗಿಕೊಡಲು ಸಿದ್ಧನಾಗಿರುವೆನು. ಬಹುಮಾತುಗಳಿಂದ ಪ್ರಯೋಜನವೇನು. ಪ್ರಾಣಕ್ಕೆ ಪ್ರಾಣವನ್ನಾದರೂ ಕೊಡುವೆನು. ಮಾತಿನಿಂದ ಕಾಲವನ್ನು ಕಳೆವುದಕ್ಕೆ ಇದು ಸಮಯವಲ್ಲ. ನಾನು ನಿನ್ನ ಒಳಗೆ ಬಹು ತ್ವರೆಯಿಂದ ಬಂದಿರುವುದಕ್ಕೆ ಕಾರಣವೇನೆನ್ನುವಿಯೋ?

ಷೇಮುಸೆಲ್‌ನೆಹರು ತನ್ನ ವಿಚಾರವನ್ನು ತಿಳಿಯಪಡಿಸಿ ನನ್ನ ಸಂಗತಿಗಳನ್ನು ವಿಚಾರಿಸಿಕೊಂಡುಬರುವಂತೆ ಕಳುಹಿಸಿದಾದಿಯಿಂದ ತಿಳಿದ ವರ್ತಮಾನವನ್ನು ನಿನಗೆ ಹೇಳುವುದಕ್ಕೋಸ್ಕರವಾಗಿ ಬಂದು ನಿಂತಿರುವೆನು. ಆಕೆಯು ಹೇಳಕಳುಹಿಸಿರುವ ಮಾತುಗಳಲ್ಲಿ ಉಭಯತ್ರರ ಮೋಹವನ್ನೂ ಬಲಪಡಿಸತಕ್ಕ ಮಾತುಗಳಿರುವವೇಹೊರತು ಮತ್ತೇನೂ ಇಲ್ಲವೆಂದು ದಾದಿಗೂ ತನಗೂ ನಡೆದ ಸಂಭಾಷಣಾವಾಕ್ಯಗಳನ್ನು ವಿಸ್ತರಿಸಿ ನುಡಿದನು. ಆಮಾತುಗಳನ್ನು ಕೇಳಿದಕೂಡಲೆ ರಾಜಪುತ್ರನಿಗೆ ಭಯವೂ, ಭ್ರಾಂತಿಯೂ, ಮೋಹವೂ, ಪಶ್ಚಾತ್ತಾಪವೂ ಕೂಡ ನಿಸ್ಸಂದೇಹವಾಗಿ ತೋರಿಬರುತ್ತಿರಲು, ಆತನು ಉಪದ್ರವಕರಗಳಾದ ನಾನಾಯೋಚನೆಗಳನ್ನು ಯೋಚಿಸಿದವನಾದನು. ಈತೆರದಿಂದ ಬಹಳಹೊತ್ತಿನವರೆಗೂ ಯೋಚಿಸುತ್ತಿದ್ದ ರಾಜಕುಮಾರನು, ಇಬ್ರಹೆಶರನನ್ನು ಮನೆಗೆಕಳುಹಿಸದೆ ತನ್ನ

ಬಳಯಲ್ಲಿಯೆ ಇಟ್ಟುಕೊಂಡನು. ಆತನು ಬೆಳಗಾದಕೂಡಲೆ, ತನ್ನ ಮನೆಗೆ ಬರಲು, ಪೇವುಷೆಲ್‌ನೆಹರಳ ದಾದಿಯೊಬ್ಬಳು ಬಾಗಿಲಲ್ಲಿ ಕಾದುಕೊಂಡಿದ್ದು, ಅಯ್ಯಾ! ನಮ್ಮ ರಾಣಿಯು ನಿನಗೆ ಸಲಾಂ ಹೇಳಿ, ಈ ಕಾಗದವನ್ನು ಪರ್ಷಿಯಾ ರಾಜಕುಮಾರನಿಗೆ ತಲಪಿಸುವಂತೆ, ಬೇಡಿಕೊಂಡಿರುವಳೆಂದು ನುಡಿಯಲು, ಪರೋಪಕಾರಿಯೂ, ಸ್ವಾಮಿಭಕ್ತಿಯುಳ್ಳವನೂ, ಆದ ಇರ್ಬತೆಹರನು ಆ ದಾದಿಯೆನ್ನು ತನ್ನ ಸಂಗಡ ಕರೆದುಕೊಂಡು, ಪರ್ಷಿಯಾ ರಾಜಕುಮಾರನಮನೆಗೆ ಬಂದನು. ಇಂತೆಂದುಹೇಳಿ, ಷಹರ ಜಾದಿಯು ಬೆಳಗಾದುದರಿಂದ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಮರಳಿ ನುಡಿಯೆಂಭಾರಂಭಿಸಿದಳು.

೧೯೪ ನೆಯ ರಾತ್ರಿ ಕಥೆ.

ಇರ್ಬತೆಹರನು ಆ ದಾದಿಯೆನ್ನು ಸಂಗಡ ಕರೆದುಕೊಂಡುಬಂದು ಪಡಸಾಲೆಯೆಬಳಿ ಒಳಗಣ ಅಂಗಳದಲ್ಲಿ ನಿಲ್ಲಿಸಿ, ತಾನುಮಾತ್ರ ಒಳಹೊಕ್ಕು ರಾಜಕುಮಾರನನ್ನು ಕಾಣಿಸಿಕೊಂಡನು. ಕೂಡಲೇ ಆತನು ಅತ್ಯುತ್ಸಾಹದಿಂದ ತನ್ನ ಸ್ನೇಹಿತನನ್ನು ಬರಮಾಡಿಕೊಂಡು, ಕುಳ್ಳಿರಿಸಿ ಹೊಸ ವರ್ತಮಾನವೇನಾದರೂ ಉಂಟೇ ಎನಲು, ಇರ್ಬತೆಹರನು ಮತ್ತೇನೂ ಇಲ್ಲ. ನೀನು ಕೋರುತ್ತಿದ್ದ ಸಂಗತಿಯನ್ನು ಈಗ ವಿವರವಾಗಿ ತಿಳಿದುಕೊಳ್ಳಬಹುದು. ರಾಣಿಯಕಡೆಯಿಂದ ಕಾಗದವನ್ನು ತೆಗೆದುಕೊಂಡು ಬಂದಿರುವ ದಾದಿಯು, ಅಂಗಳದಲ್ಲಿ ನಿಂತಿರುವಳು ಎನಲು, ರಾಜಕುಮಾರನು ಮರಳಿ ಮರಳಿ ಏನು ಏನು ದಾದಿ ಬಂದಿರುವಳೆ! ಬರಹೇಳೆಂದು ಸಂಪೂರ್ಣವಾದ ಅಂದವನ್ನು ಹೊಂದಿದವನಾಗಿ, ಶುಭಸೂಚಕವಾದ ವರ್ತಮಾನವನ್ನು ಹೇಳಿ ತನ್ನ ಸ್ನೇಹಿತನನ್ನು ಆಲಿಂಗಿಸಿಕೊಂಡನು. ಕೂಡಲೆ ಅಲ್ಲಿದ್ದ ಸೇವೆಕರೆಲ್ಲರೂ ಹೊರಟುಹೋದರು. ಇರ್ಬತೆಹರನು ದಾದಿಯೆನ್ನು ಕರೆದುಕೊಂಡುಬಂದನು. ಆಕೆ ಬಹು ಪ್ರೀತಿಯಿಂದ ವಂದನೆಗಳನ್ನು ಮಾಡಿ, ನಿಂತುಕೊಳಲು ರಾಜಪುತ್ರನೂಕೂಡ, ಅವಳನ್ನು ಬಹು ಮರ್ಯಾದೆಯಿಂದ ಬರಮಾಡಿಕೊಂಡನು. ಆಗ ದಾದಿಯು ಆತನನ್ನುಕುರಿತು, ಅಯ್ಯಾ! ನಿಮಗಾಗಿ ಸಿದ್ಧವಾಗಿ ನಿಂತಿದ್ದ ಗಾಡಿಯೆಮೇಲೆ ನಿಮ್ಮನ್ನು ಕಳುಹಿಸಿದ ಬಳಿಕ, ನೀವು ಅನುಭವಿಸಿದ ಸ್ಥಿತಿ ಇಂಥದ್ದೆಂದುನಾನು ತಿಳಿದುಕೊಳ್ಳಲಾರದೆ

ಹೋದರೂ, ಈಗ ನಾನು ತಂದಿರುವ ನಿರೂಪದಿಂದ ನಿನ್ನ ವ್ಯಸನವೆಲ್ಲವೂ ನಾಶವಾಗಬಹುದೆಂದು ಹೇಳಿ, ಕಾಗದವನ್ನು ಕೊಡಲು, ರಾಜಕುಮಾರನು ಬಹು ಪ್ರೀತಿಯಿಂದ ಅದನ್ನು ತೆಗೆದುಕೊಂಡು, ಮುತ್ತಿಟ್ಟು ಹೀಗೆಂದು ಓದಲಾರಂಭಿಸಿದನು. ಮನೋಹರನಾದ ನನ್ನ ಮೋಹನಾಂಗನಾದ ರಾಜ ಕುಮಾರನೇ ! ನಿನ್ನಗಲಿಕೆಯಿಂದ ನಾನು ಪ್ರಜ್ಞೆ ತಪ್ಪಿದವಳಾಗಿ, ಅನುಭವಿಸಿದ ತೊಂದರೆಗಳನ್ನು ನೀನು ಈ ಕಾಗದವನ್ನು ತಂದಿರುವ ವನಿತಾ ಮಣಿಯಿಂದ ತಿಳಿದುಕೊಳ್ಳಬಹುದು. ನಿನ್ನ ಸನ್ನಿಧಾನದಲ್ಲಿ ಕುಳಿತು ಮಾತ ನಾಡಿದುದರಿಂದ, ನನಗೆಷ್ಟೂ ಆನಂದ ಉಂಟಾಗುವುದೋ ಅಷ್ಟೊಂದು ಆನಂದವು ಕಾಗದವನ್ನು ಬರೆದುದರಿಂದ ಸಂಭವಿಸಿತೆಂದು ಭಾವಿಸು. ಸಹನೆಯು ದುಃಖವರಂಪರೆಯನ್ನು ನಾಶ ಮಾಡುವುದೆಂದು, ಹಿರಿಯರಾದ ಅನುಭವಿಗಳು ಖಂಡಿತವಾಗಿ ಹೇಳುತ್ತಿರುವರು.

ನಾನೆಷ್ಟೂ ಸಹನೆಯುಳ್ಳವಳಾಗಿದ್ದರೂ ನನ್ನ ಮನೋವ್ಯಾಧಿಯು ಅಣಗದೆ ಪೀಡಿಸುತ್ತಿರುವುದು ನಿನ್ನ ಪ್ರತಿಬಿಂಬವು ನನ್ನ ಹೃದಯದಲ್ಲಿ ಸ್ಥಿರವಾಗಿ ನೆಲೆಗೊಂಡಿದ್ದರೂ ತನ್ನಾತ್ಮಕೆಯಾದ ನಿನ್ನ ರೂಪವನ್ನು ನೋಡಬೇಕೆಂದು ನನ್ನ ಕಣ್ಣುಗಳು ಕುತೂಹಲ ಪಡುತ್ತಿರುವುವು. ದಿವಾರಾತ್ರಿಯೂ ನನಗೆ ಇದೇ ಯೋಚನೆಯಾಗಿರುವುದು. ಇನ್ನು ಸ್ವಲ್ಪ ಕಾಲದಲ್ಲಿ ತನ್ನ ಇಷ್ಟಾರ್ಥವು ನೆರವೇರದಿದ್ದರೆ, ತನಗೆ ಉಂಟಾಗಿ ಇರುವ ಪ್ರಕಾಶವು ಸಂಪೂರ್ಣವಾಗಿ ನಾಶಹೊಂದುವದೆಂದು ಕೊರಗಿ ನೀರನ್ನು ಸುರಿಸುತ್ತಿರುವುದು. ನಿನ್ನ ಕಣ್ಣುಗಳೂಸಹ ನನ್ನನ್ನು ನೋಡಬೇಕೆಂಬ ಅಪೇಕ್ಷೆಯುಳ್ಳವಳಾಗಿರಬಹುದೆ ? ಹೌದು. ಹಾಗೆ ಇರುವುವೆಂಬುದು ಅವುಗಳ ಕರುಣಾದ್ರತ್ವಿಕ್ಕಿಂದ ನನಗೆ ತಿಳಿದುಬರುವುದು. ನಾವುಗಳು ಪರಸ್ಪರ ಮೋಹಾವೇಶವುಳ್ಳವರಾಗಿದ್ದರೂ ನವ್ವಿಬ್ಬರ ಮನೋರಥಗಳಿಗೂ ಮಹತ್ತಾದ ಪ್ರತಿರೋಧವು ಒದಗಿಬಂದಿತು. ಅಂತಹ ಪ್ರತಿರೋಧವು ನಾಶವಾಗಿಹೋಗಿದ್ದರೆ, ನಿನ್ನ ಮನೋರಥವು ಪೂರ್ತಿಯಾಗುತ್ತಿದ್ದಿತಲ್ಲದೆ ಪ್ರೇಮುಲೆಲ್‌ನೆಹರಳೂ ಧನ್ಯಳಾಗುತ್ತಿದ್ದಳು. ನಾನು ಮಹಾನಂದದಿಂದ ಬರೆದಿರುವ ಭಾಪಗಳೆಲ್ಲವೂ ನನ್ನ ಚೆರಳುಗಳಿಗೆ ನೋವನ್ನೂ ಹೃದಯಕ್ಕೆ ತಗಲಿದ ಮದನ ಬಾಣಂಗಳ್ಳಿದೆಯೊದರೂ, ನಿನ್ನ ವಿರಹದಿಂದ

ಅವುಗಳು ಲಕ್ಷೋಪಲಕ್ಷವಾಗಿ ಒಡೆದು ನನ್ನನ್ನು ಬಹುವಾಗಿ ಪೀಡಿಸುತ್ತ ನನ್ನನ್ನು ಧನ್ಯಳನ್ನಾಗಿ ಮಾಡುತ್ತಿರುವುವು. ಒಂದುವೇಳೆ ನಿನ್ನ ಮುಖವನ್ನು ಯಾವಾಗಲಾದರೂ ನೋಡಬಹುದು. ನಿರ್ವಿಘ್ನವಾಗಿ ನಿನ್ನ ದರ್ಶನವನ್ನು ಹೊಂದಿ ಸರಸಸಲ್ಲಾಪಗಳನ್ನಾಡಿ, ಆನಂದಿಸುವುದಕ್ಕಿಂತಲೂ ಅನ್ಯವಾದ ಮನೋರಥವೇ ಇಲ್ಲವೆಂದು, ನಾನು ಭಾವಿಸುವೆನು. ನನ್ನ ಮನೋಭಿಪ್ರಾಯಕ್ಕೆ ಅಂಗಲೂ ಅತಿಶಯವಾಗಿ ಬರೆದಿರುವೆನೆಂದು ಭಾವಿಸಬೇಡ ! ಅಯ್ಯೋ ! ನಾನು ಬರೆದಿರುವ ಲೇಖನದಲ್ಲಿರುವ ಅಕ್ಷರ ಸಂಘವೆಲ್ಲವೂ ಸೇರಿ, ನನ್ನ ಅಭಿಪ್ರಾಯವನ್ನು ಪೂರ್ತಿಯಾಗಿ ತಿಳಿಸ ಬಲ್ಲುವೆ ? ನೀನು ಯಾವಾಗ ಬರುವೆಯೊ ? ನಿನ್ನನ್ನು ಯಾವಾಗ ನೋಡುವೆವೊ ? ಎಂಬ ಕುತೂಹಲದಿಂದ ನನ್ನ ಕಣ್ಣುಗಳು ಬಹಳವಾಗಿ ಕೊರಗುತ್ತಿರುವುವು. ಅತಿಯಾಗಿ ಹೇಳಿದುದರಿಂದ ಪ್ರಯೋಜನವೇನು. ನಿನ್ನ ದರ್ಶನವು ಎಂದಿಗುಂಟಾಗುವುದೊ ? ಎಂದು ನನ್ನ ಸರ್ವಾಂಗವೂ, ನಿನ್ನ ಮುಖಾರವಿಂದ ಶ್ರವಣವು ಎಂದಿಗಾಗುವುದೋ ಎಂದು ನನ್ನ ಕಿವಿಗಳೂ ಸಹ ಆತುರಪಡುತ್ತಿರುವುವು. ಬಹಳವಾಗಿ ಬರೆದುದರಿಂದ ಪ್ರಯೋಜನವಿಲ್ಲ. ನಿನ್ನ ಅಗಲಿಕೆಯುಂಟಾದಕಾಲದಿಂದಲೂ ನಾನು ಅನುಭವಿಸಿದ ದುಃಖಗಳಿಗೆಲ್ಲ ಈ ನನ್ನ ಪತ್ರರತ್ನವೇ ಸಾಕ್ಷಿಭೂತವಾಗಿರುವುದು. ವೋಹ ನಾಂಗಕ್ಕೆ ಹೊಂದದಿರುವ ವೋಹಿನಿಯು ಬಳು ಎಂಥದು.

ನೀನು ನನ್ನನ್ನು ವೋಹಿಸಲಿಲ್ಲವೆಂದು ತಿಳಿದುಕೊಂಡಿದ್ದರೆ, ನಾನು ನನ್ನ ನವೀನವಾದ ಆಯುಸ್ಸಿನಲ್ಲಿ ಮೂರುದಿನಗಳನ್ನು ಕಳೆದು, ನಾಲ್ಕನೆಯ ದಿನವನ್ನು ಎದುರುನೋಡುತ್ತಿದ್ದೆನು. ನೀನು ನನ್ನಲ್ಲಿ ವೋಹವನ್ನಿಟ್ಟುಕೊಂಡಿರುವುದರಿಂದ ನಾನಿನ್ನು ಬದುಕಿರುವೆನಲ್ಲಾ ! ನನ್ನಲ್ಲಿ ನಿನಗುಂಟಾದ ನಂಬಿಕೆಯಿಂದ ವೋಹವನ್ನು ಎಂದಿಗೂ ಬಿಡಲಾರೆನೆಂದು ವಾಗ್ದಾನ ಮಾಡಿ, ಇದರ ಪ್ರತ್ಯುತ್ತರವನ್ನು ಕಳುಹಿಸು. ಈ ಪತ್ರವನ್ನು ರಹಸ್ಯವಾಗಿಟ್ಟುಕೊಂಡು, ಪದೇ ಪದೇ ಆನಂದಿಸುತ್ತ ಓದಿಕೊ ? ಆದ್ದರಿಂದ ನನ್ನ ಆನಂದವು ಅಧಿಕವಾಗುವುದು. ನಮ್ಮಗಳ ವೋಹವನ್ನು ಪ್ರಕಾಶಪಡಿಸಿ, ನಿರ್ಭಯವಾಗಿ ಕುಂದುಕೊರತೆಗಳನ್ನು ಹೇಳಿಕೊಂಡು, ಪರಸ್ಪರಾತಿಶಯವಾದ ಸೌಖ್ಯವನ್ನು ಹೊಂದಿ ನಲಿಯುತ್ತಿರುವಕಾಲವನ್ನು

ಭಗವಂತನು ನಮ್ಮಗಳಿಗೆ ದಯೆಪಾಲಿಸಲೆಂದು ಪ್ರಾರ್ಥಿಸುವೆನು. ಇದೇ ನನ್ನ ಪ್ರಾರ್ಥನೆ ಎಂದು ಬರೆಯುವ ಕಾಗದವನ್ನು ಒಹು ಆನಂದದಿಂದ ಓದುತಾ ಕೆಲವುಕಡೆಗಳಲ್ಲಿ ಕಣ್ಣೀರನ್ನೂ, ಮತ್ತೆ ಕೆಲವುಕಡೆಗಳಲ್ಲಿ ನಿಟ್ಟುಸುರನ್ನೂ ಬಿಡುತಾ, ಮರಳಿ ಮರಳಿ ಆ ಕಾಗದವನ್ನು ಓದಿಕೊಳ್ಳುತಾ ಆನಂದವೂ, ವ್ಯಸನವೂ, ಅಲ್ಲದ ಮಧ್ಯಸ್ಥವಾದ ಭಾವವನ್ನು ಹೊಂದಿ, ಭ್ರಮಿಸಿದವನಾಗಿರುವ ರಾಜಕುಮಾರನನ್ನು ನೋಡಿ, ಇರ್ಬ ತೆಹರನು ಅಯ್ಯಾ! ದಾದಿಯು ಬಹಳಹೊತ್ತಿನಿಂದಲೂ ಕಾದುಕೊಂಡು ಇರುವಳು. ಅವಳಿಗೆ ತಕ್ಕ ಉತ್ತರವನ್ನು ಹೇಳಿ ಪ್ರತ್ಯುತ್ತರವನ್ನು ಹೇಳಿ ಕಳುಹಿಸು. ಇಲ್ಲವೇ ಕಾಗದವನ್ನು ಬರೆದು ಕಳುಹಿಸೆಂದು ನುಡಿಯಲು, ರಾಜಕುಮಾರನು, ತನ್ನ ಅವಸ್ಥೆಯಲ್ಲಿ ಕಾಗದವನ್ನು ಹೇಗೆ ಬರೆಯಲೆಂದು ಚಿಂತಿಸುತ್ತ, ಕಾಗದವನ್ನು, ಶಾಯಿಕುಡಿಕೆಯನ್ನು, ಬರೆಯುವ ಕಡ್ಡಿಯನ್ನು ಸಹ ತಂದು ಮುಂದಿಟ್ಟುಕೊಂಡನು. ಇಂತೆಂದು ಹೇಳಿ, ಷಹರಜಾದಿಯು ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಹೇಳಲಾರಂಭಿಸಿದಳು.

೧೯ನೆಯ ರಾತ್ರಿ ಕಥೆ.

ಪರ್ಷಿಯಾ ರಾಜಕುಮಾರನು ಕಾಗದವನ್ನು ಬರೆಯುವುದಕ್ಕೆ ಆರಂಭಿಸಿ, ಷೇಮುಸೆಲ್‌ನೆಹರು ತನಗೆ ಕಳುಹಿಸಿದ ಕಾಗದವನ್ನು ತೆರೆದು ಇಟ್ಟುಕೊಳ್ಳುವಂತೆ ಇರ್ಬತೆಹರನಿಗೆ ಹೇಳಿ, ಅದರಲ್ಲಿ ಬರೆದಿರುವ ಸಂಗತಿಗಳಿಗೆಲ್ಲಾ ಜವಾಬನ್ನು ಬರೆಯುತ್ತಿರುವಾಗ, ಕಣ್ಣೀರಿನಿಂದ ಕಾಗದವನ್ನು ಬರೆಯಲಾರದೆ, ಅತ್ಯಂತ ಪ್ರಯಾಸದಿಂದ ಬರೆದುದನ್ನು ಇರ್ಬತೆಹರನ ಕೈಗೆ ಕೊಟ್ಟು ಸರಿತಪ್ಪುಗಳನ್ನು ತಿದ್ದುವುದಕ್ಕಾಗಿ ಇಂತೆಂದನು. ಅಯ್ಯಾ! ಮಿತ್ರನೇ! ನೀನು ಈ ಕಾಗದವನ್ನು ಓದಿನೋಡು ಎನಲು ಆತನು ಕಾಗದವನ್ನು ಕೈಗೆ ತೆಗೆದುಕೊಂಡು, ಓದಲಾರಂಭಿಸಿದನು. ನನ್ನ ಪ್ರಾಣನಾಯಕಿಯಾದ ಷೇಮುಸೆಲ್‌ನೆಹರಳೇ! ನಾನು ಮಹಾ ಶೋಕಸಾಗರಗ್ರಸ್ತನಾಗಿ ತೇಲಾಡುತ್ತಿರುವಾಗ, ಅದರಿಂದ ನನಗೆ ಮಹತ್ತಾದ ವ್ಯಸನಗಳು ಪ್ರಾಪ್ತವಾದವು. ನೀನು ನನ್ನ ಶತ್ರುವಾದವನ ಕಾಲಿನ ಮೇಲೆ ಬಿದ್ದು, ನರಳುತ್ತಿರುವಾಗ ವಿಕಾಸವಾದ ನನ್ನ ನೇತ್ರಗಳೂ ಬರವಣಿಗೆಯನ್ನೊಪ್ಪುವಕಾಲಕ್ಕಿಂತಲೂ, ಅತಿಶಯವಾಗಿ ಕಾಲಾಗ್ನಿಯನ್ನು

ಕೆದರುತ್ತ ನಿನ್ನವೇಲಣ ವೋಹದಿಂದ ಶೀತಲವಾಗಿರುತ್ತಿದ್ದವು. ಈಮಾತು ಗಳು ನಿನ್ನ ಹಸ್ತಾಕ್ಷರ ಲಿಖಿತವಾದ ಪ್ರೇಮಲೇಖನದಲ್ಲಿರುವುವು. ಅವು ನನ್ನ ಹೃದಯೋಂಧಕಾರವನ್ನು ಹೋಗಲಾಡಿಸಿ, ಸಂತೋಷವನ್ನುಂಟು ಮಾಡುವ ಸೂರ್ಯಕಿರಣಗಳಂತಿರುವುವು. ಇವು ನೀನು ಅನುಭವಿಸಿದ ದುಃಖಗಳನ್ನು ಸಂಪೂರ್ಣವಾಗಿ ನನಗೆ ತಿಳಿಯೆಪಡಿಸಿ ನನ್ನ ವ್ಯಥೆಯನ್ನು ತಕ್ಕಮಟ್ಟಿಗೆ ಶಮನ ಮಾಡುತ್ತಿರುವುವು. ಇದರಿಂದ ನಿನ್ನ ವಿರಹವೂ, ಅಧಿಕವಾಗಿ ಅದರಿಂದ ಹುಟ್ಟಿದ ಕಣ್ಣೀರುಸಹ ನನ್ನ ಹೃದಯತವಾದ ಕಾವಾಗ್ನಿಯನ್ನು ಪ್ರಜ್ವಲಿಸುವಂತೆ ಮಾಡುತ್ತಿರುವುದು. ಆದುದರಿಂದ ನಾನು ಈ ವಿರಹವ್ಯಥೆಗೆ ಪಾತ್ರನಾದಾಗಿನಿಂದಲೂ, ಸ್ವಸ್ಥಹೀನನಾಗಿ ಮಾತನಾಡುವುದಕ್ಕೂ ಸಹ ಶಕ್ತಿಸಾಲದೆ ಹೂರಳಾಡುತ್ತಿದ್ದೆನು.

ಈ ನಿನ್ನ ಕಾಗದವು ನನ್ನ ಹಸ್ತಮುದ್ರಿಕೆಯಾದಬಳಿಕ ಕಿಂಚಿ ತ್ಸ್ವಸ್ಥಚಿತ್ತನಾದೆನು. ಈ ಕಾಗದವನ್ನು ನಾನು ನೋಡಿದಕೂಡಲೇ, ನನಗೆ ಆನಂದವೂ, ಶರೀರಸೌಖ್ಯವೂ, ಉಂಟಾಗಿರುವುದರಿಂದ ಅದಕ್ಕೆ ತಕ್ಕ ಪ್ರತ್ಯುಪಕಾರವನ್ನು ನಾನೆಂತು ಮಾಡಬೇಕಾಗಿರುವುದೋ ನನಗೆ ತಿಳಿಯದು. ಬಹುಮಾತುಗಳಿಂದ ಪ್ರಯೋಜನವೇನು ? ನೀನು ನನ್ನಲ್ಲಿ ವೋಹವನ್ನು ಹೊಂದಿರುವೆಯೊ ಇಲ್ಲವೋ ಬರೆಯಬೇಕೆಂದು ಕಾಗದದಲ್ಲಿ ನಿರೂಪಿಸಿರುವೆನು. ನಾನು ನಿನ್ನನ್ನು ವೋಹಿಸದಿದ್ದರೂ ನೀನಾಗಿಯೇ ನನ್ನಲ್ಲಿ ವೋಹದಿಂದ ಕರುಣಾಪಾಂಗವನ್ನು ಬೀರಿದುದಕ್ಕಾಗಿ, ನಾನು ನಿನ್ನನ್ನು ಪೂಜೆ ಮಾಡುವೆನು. ನಿನ್ನನ್ನು ಪ್ರತ್ಯಕ್ಷವಾಗಿ ನೋಡಿದಂತೆ ಈ ನಿನ್ನ ಕಾಗದವನ್ನು ಹಲವುಬಾರಿ ಓದಿನೋಡಿಕೊಂಡು, ಪ್ರೀತಿಯಿಂದ ಮುತ್ತಿಟ್ಟುಕೊಂಡೆನು. ನನ್ನ ಪ್ರಾಣಕಾಂತೆಯೇ ! ನಿಜವಾಗಿಯೂ, ನಾನು ನಿನ್ನವೇಲೆ ವೋಹವುಳ್ಳವನಾಗಿರುವೆನು. ಇದಕ್ಕೆ ನನ್ನ ಹೃದಯೋಂಬುಜದಲ್ಲಿ ಪ್ರಜ್ವಲಿಸುತ್ತಿರುವ ವಿರಹಾಗ್ನಿಯೇ ಸಾಕ್ಷಿಯೊಗಿರುವುದು. ಬಹು ಕ್ರೂರವಾದ ನನ್ನಸಂಬಂಧವಾದ ವಿರಹಾಗ್ನಿಯು ಪ್ರತಿದಿನವೂ ನನ್ನನ್ನು ಕೊಲ್ಲುತ್ತಿದ್ದರೂ, ನಾನು ನಿನ್ನ ಸಂದರ್ಶನವಾಗುವುದೆಂಬ ಸಂತೋಷದಿಂದ ಅವುಗಳೆಲ್ಲ ಕಷ್ಟಗಳೇ ಅಲ್ಲವೆಂದು ತಿಳಿದು ಸಹಿಸಿಕೊಂಡಿರುವೆನು. ಈದಿನವಾದರೂಸರಿಯೇ, ಅಥವ ಮತ್ತೊಂದಿನವಾದರೂ

ಂ
ಃ
ಅ
ದಿಂ
ನುಡಿ

ಬಳಿಕ
ತನ್ನ
ತಾನ
ತಾನ
ವುದ
ಬುದ

ನ

ನ

ಳಿಗೆ

ವ್ಯರ್ಥ

ನೋಲೆ

ನ ನುಳ

ನನ್ನ

ೋಹ

ಳುವ

ೀಗಾ

ನಲು

ು,

ಿಗ

ಬರುವುದು. ನೀನೆನಗೆ ಮುಖ್ಯ ಪ್ರಾಣಪ್ರಿಯನಾದ ಸ್ನೇಹಿತನಾದುದರಿಂದ, ನಾನಾಗಿಯೇ ಬಲವಂತದಿಂದ ನಿನ್ನ ಮೋಹವನ್ನು ತೊರೆದುಬಿಡುವಂತೆ ಬುದ್ಧಿವಾದವನ್ನು ಹೇಳುವೆನು. ಒಂದುವೇಳೆ ನನ್ನಮಾತನ್ನು ನೀನು ಲಾಲಿಸದೆಹೋದರೆ, ನಾನು ನಿನಗೆ ಹೇಳಿದ ಬುದ್ಧಿವಾದಗಳಿಗಾಗಿಯಾದ ನೀನು ನನ್ನನ್ನು ಒಂದಾನೊಂದುಕಾಲದಲ್ಲಿ ವಂದಿಸಬೇಕಾದೀತು ಎಂಬ್ಲದೆ ಹೇಳಿದನು. ರಾಜಕುಮಾರನು ಇರ್ಬ್ತಹರನ ಮಾತುಗಳನ್ನು ಕೇಳುತ್ತಿರುವುದಕ್ಕೆ ಸಮ್ಮತಿ ಪಡದಿದ್ದರೂ, ಆತನು ಎಲ್ಲವನ್ನು ಹೇಳುವವರೆಗಾದರು ಸುಮ್ಮನಿದ್ದು ನಂತರ ಪ್ರತ್ಯುತ್ತರವನ್ನು ಹೇಳಲಾರಂಭಿಸಿದನು. ನಾರನು ಮೇಲೆ ಇಷ್ಟೊಂದು ಮೋಹವನ್ನು ಹೊಂದಿರುವ ಸೇವುಸೆಲ್‌ನೆಹರಳನ್ನು ಮೇಲೆ, ಆಸೆಯನ್ನು ನಾನು ನಿಗ್ರಹಿಸಿಕೊಳ್ಳಬಲ್ಲೆನೆಂದು ಹೇಳುವೆಯಾ? ನನಗೋಸ್ಕರವಾಗಿ ಪ್ರಾಣವನ್ನು ಕೊಡುವುದಕ್ಕೆ ಆಕೆ ಹೇಗೆ ಭಯಪಡಲಿಲ್ಲವೋ ಹಾಗೆಯೇ ನಾನು ಆಕೆಗೋಸ್ಕರವಾಗಿ ನಿನ್ನ ಪ್ರಾಣವನ್ನು ಕೊಡುವುದಕ್ಕೆ ಎಂದಿಗೂ ಹಿಂದೆಗೆಯುವುದಿಲ್ಲ. ನನಗೆಂತಹ ಪ್ರಾಣಾಪದವು ಪ್ರಾಪ್ತವಾದರೂ, ಈ ದೇಹದಲ್ಲಿ ನನ್ನ ಪ್ರಾಣಗಳು ವಾಸವಾಗಿಕೊಂಡಿರುವವರೆಗೂ, ನಾನು ಅವಳಮೇಲಿನ ವ್ಯಾಮೋಹವನ್ನೆಂದಿಗೂ ಬಿಡತಕ್ಕವನಲ್ಲವೆಂದು ಹೇಳುವನು.

ರಾಜಕುಮಾರನ ಮೂರ್ಖತ್ವಕ್ಕಾಗಿ ಬಹಳವಾಗಿ ವ್ಯಸನಪಡುತ್ತ ಆತನಿಂದ ಅಪ್ಪಣೆಯನ್ನು ತೆಗೆದುಕೊಂಡು ಇರ್ಬ್ತಹರನು ತನ್ನಮನೆಗೆ ಹೋದನು. ನಂತರ ಪೂರ್ವದ ಚಿಂತೆಯಲ್ಲವನ್ನು ಹೊತ್ತುಪಕ್ಕಕ್ಕೆ ತಂದು ಕೊಂಡು, ಚಿಂತಿಸುತ್ತಿರುವಾಗ ರತ್ನಪಡಿ ವ್ಯಾಪಾರಸ್ಥನಾದ ಒಬ್ಬಾ ನೊಬ್ಬ ಸ್ನೇಹಿತನು ಆತನಬಳಿಗೆ ಬಂದು, ಇರ್ಬ್ತಹರನಬಳಿಗೆ ರಾಣಿಯು ದಾದಿಯು ಹಲವುಸಾರಿಬಂದು ಹೋಗುವುದಕ್ಕೆ ಕಾರಣವನ್ನು ರಾಜಕುಮಾರನ ದೇಹಾಲಸ್ಯಕ್ಕೆ ಮೂಲವನ್ನು ತಿಳಿಯದವನಾದರೂ ರಾಜಕುಮಾರನು ಪದೇ ಪದೇ ಇರ್ಬ್ತಹರನನ್ನು ಬರಮಾಡಿಕೊಳ್ಳುತ್ತಿರುವುದನ್ನು, ಇರ್ಬ್ತಹರನು ಚಿಂತಾಕ್ರಾಂತನಾಗಿರುವುದನ್ನು ತಿಳಿದು, ಏನೋ ಒಂದು ಮಹತ್ಕಾರ್ಯಕ್ಕಾಗಿ ಯೋಚಿಸುತ್ತಿರುವನು. ಇದರ ಕಾರಣವನ್ನು ನಾನು ತಿಳಿದುಕೊಳ್ಳಬೇಕೆಂದು, ಏನಯ್ಯಾ! ಬಹು ಚಿಂತಾಕ್ರಾಂತನಾಗಿರುವೆ?

ಷಿಮುಸೆಲ್‌ನೆಹರಿನ ದಾದಿಯು ಹಲವುಬಾರಿ ನಿನ್ನಬಳಿಗೆ ಬಂದು ಹೋಗು ವುದಕ್ಕೆ ಕಾರಣವೇನೆಂದು ಕೇಳಲು, ಇಬ್ರಹೆಹರನು ಭಯದಿಂದ ಏನಾದರೂ ಮಾಡಿ, ಇದನ್ನು ಮರೆಮಾಜಬೇಕೆಂದು, ಆಕೆಯು ಒಂದಾನೊಂದು ಕಾರ್ಯಕ್ಕಾಗಿ ತಪ್ಪದೆ ನನ್ನಬಳಿಗೆ ಬಂದು ಹೋಗುತ್ತಿರುವಳೆಂದು ಹೇಳಿನು. ನೀನು ನಿಜವನ್ನು ಹೇಳದೆ ಏನೋ ಒಂದು ಕಾರ್ಯಕ್ಕಾಗಿ ನನ್ನಬಳಿಗೆ ಬಂದು ಹೋಗುವಳೆಂದು ನೀನು ಹೇಳಿದುದನ್ನು, ನಾನು ನಂಬಿದೆದುಕೊಂಡಿರುವೆಯಾ ? ಎಂದಿಗೂ ಇಲ್ಲ. ಅದು ಹೇಳಬಾರದಂತಹ ವಿಷಯವಾಗಿರಬಹುದೆಂದು ನಾನು ತಿಳಿದುಕೊಂಡೆನೆಂದು, ರತ್ನಪಡಿ ವ್ಯಾಪಾರಿಯು ಹೇಳಿದನು. ಆ ಮಾತನ್ನು ಕೇಳಿ ಇಬ್ರಹೆಹರನು ತನ್ನ ಮನೋಗತವನ್ನು ಈ ತಿಳಿದುಕೊಂಡೆನೆಂದು ಅಯ್ಯೋ! ನಿಜ. ಅದು ಅಂತಹ ರಹಸ್ಯವಾದ ಕಾರ್ಯವಾದುದರಿಂದ, ನಂಬಿಕೆ ಇಲ್ಲದೆ ಯೊಾರಿಗೂ ತಿಳಿಯಬಾರದೆಂದು, ನಾನು ಹೇಳಿದ ವಾಕ್ಯವನ್ನು ನೀನು ತಪ್ಪಾಗಿ ತಿಳಿದುಕೊಂಡಿರುವೆ.

ಆದರೆ ಆಸಂಗತಿಯೆನ್ನು ವಿಸ್ತರಿಸಿಹೇಳಿದುದೇ ಆದರೆ ನೀನುಕೂಡ ಆ ರಹಸ್ಯವನ್ನು ಕಾಪಾಡಿಕೊಳ್ಳುವುದು ಬಹು ದುಸ್ತರವೆಂದು ತಿಳಿದುಕೊಳ್ಳುವೆಯೊಾದುದರಿಂದ, ನಾನು ಈತೆರದಿಂದ ಹೇಳಬೇಕಾಯಿತು ಎಂದು ಹೇಳುತ್ತ, ರಾಜಕುಮಾರನ ಮತ್ತು ರಾಣಿಯ ವೊಹಕಾರ್ಯಗಳೆಲ್ಲವನ್ನೂ ವಿಸ್ತರಿಸಿ ಹೇಳಿ, ನಾನು ಆಸ್ಥಾನದಲ್ಲಿಯೂ, ಪಟ್ಟಣದಲ್ಲಿಯೂ, ವರ್ತಕರಲ್ಲಿಯೂಸಹಾ ಎಷ್ಟು ಗೌರವವನ್ನು ಸಂಪಾದಿಸಿಕೊಂಡಿರುವೆನೆಂಬುದು ನಿನಗೆ ಚೆನ್ನಾಗಿ ತಿಳಿಯುವುದು. ಇಂತಹ ಕಾರ್ಯದಲ್ಲಿ ಪ್ರವರ್ತಿಸಿದಬಳಿಕ ನಾನು ಸಮೂಲವಾಗಿ ಮುಳುಗಿಹೋಗುವೆನಲ್ಲಾ ! ಆದುದರಿಂದೆನ್ನ ಕುಟುಂಬಸಂರಕ್ಷಣಾರ್ಥವಾಗಿ, ತತ್ಕಾರಿಸುತ್ತ ಲೀವಾದೇವಿಯೆನ್ನು ಸಂಪೂರ್ಣವಾಗಿ ಸಾಕುಮಾಡಿ, ಸಂಸಾರಸಹಿತವಾಗಿ ಬಾಲಸೂರಿಗೆಹೋಗಿ, ವಾಸಮಾಡುತ್ತ ಈ ಗಲಭೆಗಳೆಲ್ಲಪ್ರೂ, ಸೂರ್ಯಿಸುವವರೆಗೂ, ಇಲಿಗೆ ಬರಬಾರದೆಂದು ಗೊತ್ತುಮಾಡಿಕೊಂಡಿರುವೆನು. ರಾಣಿಗೂ, ರಾಜಕುಮಾರನಿಗೂ, ಅವರ ಸ್ನೇಹಿತರಿಗೂಸಹಾಮುಂದೆ ಬರಹೋಗುವ ವಿಪತ್ತು ನನಗೆ ಚೆನ್ನಾಗಿ ತಿಳಿದುಬಂದಿರುವುದು. ಆದರೂ, ಅವರಿಗದು ತಿಳಿಯದೆಹೋಯಿತಲಾ ! ಭಗವಂತನು ಅವರಿಗೆ ಶೀಘ್ರದಿಂದ ಪ್ರಜ್ಞಾಬಲವನ್ನು ಕೊಟ್ಟು

ಕಾಪಾಡಬೇಕೆಂದು ನಾನು ಪಾರ್ಥಿಸುತ್ತಿರುವೆನು. ಗ್ರಹಚಾರವಶಾತ್ತಾಗಿ ಕಲೀಫರಿಗೆ ಈ ವರ್ತಮಾನವು ತಿಳಿದರೆ, ಅವರ ಕೋಪವು ಪಟ್ಟಣವನ್ನೇ ನಾಶಮಾಡುವುದರಿಂದ, ನಾನು ದೂರವಾಗಿರುವುದು ಉತ್ತಮವೆಂದು ಯೋಚಿಸಿರುವೆನು. ರಾಣಿಯೂ, ರಾಜಕುಮಾರನೂ, ದುಷ್ಟರಲ್ಲವಾದುದರಿಂದ, ಅವರಿಗೆ ಕೇಡುಂಟಾದರೆ, ನನಗೆ ತುಂಬ ವ್ಯಸನವುಂಟಾಗುವದಲ್ಲದೆ ಅವರು ಮಾಡಿದ ಉಪಕಾರವನ್ನು ಮರೆತು, ಅಪಕಾರವಂಗೈದ ಮಿತ್ರದ್ರೋಹಿಯೆಂತೆ, ನಾನು ಪರಮಪಾಪಿಯೆಂದಾಗುವೆನು. ನನ್ನ ಕೈಲಾದ ಮಟ್ಟಿಗೂ, ಅವರಿಬ್ಬರಿಗೂ ಬುದ್ಧಿವಾದವನ್ನು ಹೇಳಿ ರಾಜಕುಮಾರನು ನನ್ನ ಮಿತ್ರವಾಕ್ಯವನ್ನು ಕೇಳುವುದಾದರೆ, ಯಾರಿಗೂ ಆ ವಿಷಯವು ತಿಳಿಯುವಂತಾಗಲಾರದು. ಆತನೂ, ಬಾಗದಾದು ನಗರವನ್ನು ಬಿಟ್ಟು, ಹೊರಡಬಹುದು ಹಾಗೆ ಅವನು ಹೊರಟುಹೋದರೆ ಆತನ ಮೋಹವು ನಶಿಸಿಹೊಗುವುದು. ಇಲ್ಲವಾದರೆ ಅಭಿವೃದ್ಧಿಯಾಗುವುದೆಂದು ಹೇಳಿದನು.

ಆ ಮಾತನ್ನು ಕೇಳಿ ರತ್ನಪಡಿವ್ಯಾಪಾರಿಯು ಅಯ್ಯಾ! ನೀನು ಹೇಳಿದ ಸಂಗತಿಯು ಬಹು ಆಶ್ಚರ್ಯಕರವಾದುದು. ರಾಜಕುಮಾರನಾಗಲಿ, ರಾಣಿಯಾದ ಷೇಮುಸೆಲ್‌ನೆಹರಳಾಗಲಿ, ಈವಿಧವಾದ ಮೋಹವನ್ನು ಹೊಂದಬಹುದೇ? ಅವರಿಗೆಂತಹ ಮೋಹವುಂಟಾಗಿದ್ದರೂ ಅದನ್ನು ಅಣಗಿಸಿಕೊಳ್ಳಬೇಕಲ್ಲಾ! ತಾವು ಮಾಡುವ ಕೃತ್ಯದಿಂದ ಮುಂದೆ ತನಗೆ ಇಂತಹ ತೊಂದರೆ ಸಂಭವಿಸುವುದೆಂದು ತಿಳಿದುಕೊಳ್ಳದಿರಬಹುದೇ? ಅದೆಂತಹ ವಿವೇಕವಿಲ್ಲದ ಕೆಲಸ! ಇದರಿಂದುಂಟಾಗುವ ಕಾರ್ಯವು ಇಂಥದೆಂದು ನಿನಗೆ ಹೇಗೆ ತಿಳಿದಿರುವುದೊ ಹಾಗೆಯೇ ನನಗೂ ತಿಳಿದಿರುವುದು. ನೀನು ಬುದ್ಧಿಯುಕ್ತಿಗಳನ್ನು ತಿಳಿದವನಾಗಿರುವುದರಿಂದ, ಈಗ ನೀನು ಯೋಚಿಸಿರುವ ಉಪಾಯವೇ ಈ ಅಪಾಯದಿಂದ ತಪ್ಪಿಸಿಕೊಳ್ಳುವುದಕ್ಕೆ ಉತ್ತಮವಾದ ಮಾರ್ಗವಾಗಿರುವುದೆಂದು ಹೇಳಿ, ರತ್ನಪಡಿವ್ಯಾಪಾರಿಯು, ಇರ್ಬೆತೆಹರನಿಂದಪ್ಪಣೆಯನ್ನು ಪಡೆದುಕೊಂಡು ಹೊರಟುಹೋದನು. ಇಂತೆಂದು ಷಹರಜಾದಿಯು ನುಡಿದು ಬೆಳಗಾದಕೂಡಲೆ, ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಮರಳಿ ನುಡಿಯಲಾರಂಭಿಸಿದಳು.

೧೯೬ ನೆಯ ರಾತ್ರಿ ಕಥೆ.

ಇರ್ಬತೆಹರನು ರತ್ನಪಡಿ ವ್ಯಾಪಾರಿಯು ಹೊರಟುಹೋಗು ವುದಕ್ಕೆ ಮೊದಲು ಆತನನ್ನು ನೋಡಿ ಅಯ್ಯಾ! ನಾನು ಹೇಳಿದ ಸಂಗತಿ ಯನ್ನು ನೀನು ಯಾರಸಂಗಡಲೂ ಹೇಳಬೇಡ. ಅದು ಬಹಳ ರಹಸ್ಯ ವಾದುದಾದರೂ, ನೀನು ಆಪ್ತಮಿತ್ರನಾದುದರಿಂದ, ನಿನ್ನಸಂಗಡ ಹೇಳಲು ಸಿದ್ಧನಾಗಿರುವೆನೆಸಲು, ಆತನು ಅಯ್ಯಾ! ನೀನು ಸ್ವಲ್ಪವೂ ಹೆದರಬೇಡ. ಧೈರ್ಯ ವಾಗಿರು. ನನ್ನಪ್ರಾಣ ಹೋದರೂ, ನಾನೀಸಂಗತಿಯನ್ನು ಹೊರಪಡಿಸ ಲಾರೆನೆಂದು ಹೇಳಿ ಹೊರಟುಹೋದನು. ನಂತರ ಮೂರುದಿನಗಳು ಕಳೆದ ಬಳಿಕ, ರತ್ನಪಡಿ ವ್ಯಾಪಾರಿಯು ಇರ್ಬತೆಹರನ ಅಂಗಡಿಯಬಳಿಗೆ ಬಂದು ನೋಡಿದಲು, ಮಳಿಗೆಯು ಮುಚ್ಚಿದ್ದಿತು. ಇರ್ಬತೆಹರನು ತಾನು ಹೇಳಿ ದಂತೆ ಹೊರಟುಹೋಗಿರಬೇಕೆಂದು ತಿಳಿದು, ಅನುಮಾನ ಪರಿಚ್ಛೇದಾರ್ಥ ವಾಗಿ ನೆರೆಯ ವರ್ತಕನನ್ನು ಕುರಿತು, ಈ ಅಂಗಡಿಯ ಯಜಮಾನನು ಎಲ್ಲಿ ಹೋದನೆಂದು ಕೇಳಲು, ಆತನು ಎಲ್ಲಿಯೋ ಪ್ರಯಾಣ ಹೊರಟಿರುವಂತೆ ತೋರುವುದು. ಅದಕ್ಕಾಗಿಯೇ ಅಂಗಡಿಯನ್ನು ಮುಚ್ಚಲ್ಪಟ್ಟಿರುವುದೆಂದು ಹೇಳಿದ ಮಾತುಗಳನ್ನು ಕೇಳಿ, ಇನ್ನು ವಿಚಾರ ಮಾಡಬೇಕಾದ ಅಗತ್ಯ ವೇನೂ ಇಲ್ಲ. ಆತನು ಹೊರಟುಹೋಗಿರುವುದೇ ನಿಜವೆಂದೆಂದುಕೊಂಡು, ರಾಜಕುಮಾರನನ್ನು ನೆನೆದುಕೊಂಡು ಹಾ! ನಿರ್ಭಾಗ್ಯನಾದ ಪರ್ಷಿಯಾ ರಾಜಕುಮಾರನೇ! ನೀನು ಈ ವರ್ತಮಾನವನ್ನು ಕೇಳಿದರೆ, ಎಷ್ಟು ವ್ಯಸನ ಪಡುವೆಯೋ? ರಾಣಿಗೂ ನಿನಗೂ ನಡೆಯಬೇಕಾಗಿರುವ ಉತ್ತರ ಪ್ರತ್ಯುತ್ತರಗಳು ಹೇಗೆ ಜರಗುವುವೋ? ಕಾಮಾಗ್ನಿಯಿಂದ ಬೆಂದು ಹೋಗುವೆಯೆಲ್ಲಾ! ಎಂದು ಭಯಪಡುತ್ತಿರುವೆನು.

ನನಗೆ ತುಂಬಾ ಕನಿಕರ ಉಂಟಾಗುತ್ತಿರುವುದರಿಂದ, ಅಂತಹ ನಂಬಿಕೆಯುಳ್ಳವನಾದ ಮಿತ್ರನು ಹೋದುದರಿಂದ, ನಿನಗೂ ಕಡಿಮೆಯಾದ ವ್ಯಸನವು ಉಂಟಾಗದಿರಬೆಂದು ನಾನುಯೋಚಿಸುವೆನೆಂದು ಹೇಳಿಕೊಂಡು ತಾನುಬಂದ ಕಾರ್ಯವನ್ನು ತೊರೆದು ಪರ್ಷಿಯಾ ರಾಜಪುತ್ರನಿಗೆ ತಾನು ಕೆಲವು ರತ್ನಗಳನ್ನು ಮಾರಿದಹೊರತು ತನಗೆ ಆತನ ಪರಿಚಯ ಉಂಟಾ ಗುವದಿಲ್ಲವೆಂದು ತಿಳಿದು, ಆತನಮನೆಗೆಬಂದು ಒಬ್ಬಾನೊಬ್ಬ ಚಾಕರನನ್ನು

ಕರೆದು, ಆತ್ಯವಶ್ಯಕವಾದ ಕೆಲವು ಮಾತುಗಳನ್ನು ಆಡಬೇಕಾಗಿರುವುದರಿಂದ ನಾನು ಬಂದಿರುವೆನೆಂದು ಹೇಳಿರೆನಲು, ಚಾರಕರು ಓಡಿಹೋಗಿ ಮತ್ತೆ ಹಿಂದಿರುಗಿಬಂದು ರತ್ನಪಡಿವ್ಯಾಪಾರಗಾರನನ್ನು ಕರೆದುಕೊಂಡು, ರಾಜಕುಮಾರನಬಳಿಗೆ ಹೋದರು. ಆಗ ಆತನು ಸೋಫಾದಮೇಲೆ ಮಲಗಿಕೊಂಡಿದ್ದನು. ಆತನು ವರ್ತಕನನ್ನು ಕಂಡಕೂಡಲೆ ಬಹು ಮರ್ಯಾದೆಯಿಂದ ಬರಮಾಡಿಕೊಂಡು, ತನಗೆ ಹಿತಕರವಾದ ವರ್ತಮಾನವೇನಾದರೂ ತಿಳಿಯಬರುವುದೋ ಏನೋ ಎಂದಂದುಕೊಂಡು ಸುಮ್ಮನಿರಲು, ವರ್ತಕನು ರಾಜಪುತ್ರನೇ ! ನಿನ್ನಸಂಗಡ ಬಹಳವಾಗಿ ಪರಿಚಯಮಾಡಿಕೊಳ್ಳುವ ಯೋಗ್ಯತೆಯು ನನಗಿಲ್ಲವಾದರೂ, ನಿಮಗೆ ಇಷ್ಟವಾದ ಒಂದಾನೊಂದು ವಾಕ್ಯವನ್ನು ಹೇಳಲು, ಮತ್ತು ನಿಮ್ಮ ಹಿತವನ್ನು ಕೋರಿ, ನಿಮಗೆ ಸುಖವನ್ನು ಉಂಟುಮಾಡಲು, ನಾನು ನಿಮ್ಮಬಳಿಗೆ ಬಂದು ಬಹು ಧೈರ್ಯದಿಂದ ಮಾತನಾಡುತ್ತಿರುವುದನ್ನು ತಾವು ಕ್ಷಮಿಸಬೇಕೆಂಬದಾಗಿ ಪ್ರಾರ್ಥಿಸುವೆನೆಂದನು. ಹೀಗೆ ರಾಜಕುಮಾರನ ಪರಿಚಯವನ್ನು ಹೊಂದಿ, ರತ್ನಪಡಿವ್ಯಾಪಾರಿಯು ರಾಜಕುಮಾರನೇ ! ಇರ್ಬ್ತೆಹರನ ಗುಣವೂ, ನನ್ನ ನಡತೆಯು ಸ್ವಲ್ಪವಾದರೂ ವ್ಯತ್ಯಾಸವನ್ನು ಹೊಂದದಿದ್ದುದರಿಂದ, ನಮ್ಮಿಬ್ಬರಿಗೂ ಪರಸ್ಪರ ವ್ಯಾಪಾರಮುಖದಿಂದ ಸ್ನೇಹ ಉಂಟಾಯಿತು. ಆ ಸ್ನೇಹವು ಬಹುಕಾಲದಿಂದಲೂ ನಡೆದುಕೊಂಡುಬಂದು, ಬಹು ಬಲವಾದುದರಿಂದ ನಾವು ಅನ್ಯೋನ್ಯವಾಗಿ ಯೋಚಿಸದೆ ಎಂತಹ ರಹಸ್ಯಕಾರ್ಯವನ್ನಾದರೂ, ಮಾಡುತ್ತಿರಲಿಲ್ಲ. ನಿನಗೂ ಆತನಿಗೂ ಉಂಟಾದ ಸ್ನೇಹವೂ, ಆತನು ನಿನಗೆ ಉಪಕರಿಸುವುದಕ್ಕಾಗಿ, ತನ್ನ ಶಕ್ತಿಯನ್ನೆಲ್ಲಾ ವೆಚ್ಚಮಾಡಿದುದೂ ನನಗೆ ಆತನಿಂದಲೇ ತಿಳಿಯಬಂದಿತು.

ಈದಿನ ನಾನು ಹೋಗಿ ನೋಡುವಲ್ಲಿ ಆತನ ಅಂಗಡಿಯು ಮುಚ್ಚಿತ್ತು. ನೆರೆಯ ಅಂಗಡಿಯವರನ್ನು ಕುರಿತು ಇದಕ್ಕೆ ಕಾರಣವೇನೆಂದು ಕೇಳಲು, ಅಯ್ಯಾ ! ಇರ್ಬ್ತೆಹರನು ಮೂರುದಿನಗಳ ಮುಂಚೆ, ತನಗೆ ಏನೋ ಕೆಲಸವಿರುವುದರಿಂದ, ಬಾಲಸೂರಿಗೆ ಹೋಗಿಬರುವೆನೆಂದು ಹೇಳಿ, ನಮ್ಮಿಂದ ಅಪ್ಪಣೆಯನ್ನು ತೆಗೆದುಕೊಂಡು ಹೊರಟುಹೋದನು ಎಂದು ಹೇಳಿದನು. ಆತನ ಕ್ಷೇಮವನ್ನು ಬಹು ವಿಶ್ವಾಸದಿಂದ ಕೋರಿಂತಿದ್ದ

ನಾನು ಇರ್ಬ್ತತೆಹರನುಹೊರತಾಗಿ ನಗರವನ್ನು ಬಿಟ್ಟು ಹೋಗುವುದಕ್ಕೆ ಕಾರಣವನ್ನು ತಿಳಿದುಕೊಳ್ಳಬೇಕೆಂದು, ನಿನ್ನಬಳಿಗೆ ಬಂದಿರುವೆನೆಂದು ಹೇಳಿದನು. ಆವಮಾತುಗಳನ್ನು ಕೇಳಿದಕೂಡಲೆ ರಾಜಕುಮಾರನು ವಿವರ್ಣ ಮುಖನಾಗಿ ಅಯ್ಯಾ ! ನೀನು ಹೇಳುವಸಂಗತಿಯು ನನಗೆ ತುಂಬ ವ್ಯಸನವನ್ನುಂಟುಮಾಡುತ್ತದೆಯಲ್ಲದೆ, ನನ್ನದೌರ್ಭಾಗ್ಯವು ಇನ್ನೂ ಅಧಿಕವಾಯಿತು. ಆಹಾ ! ನೀನು ಹೇಳುವ್ರದು ನಿಜವಾದರೆ, ನಾನು ಸಂಪೂರ್ಣವಾಗಿ ಮುಳುಗಿಹೋಗುವೆನು. ಸವಸ್ತ ಕಾರ್ಯಗಳಿಗೂ ಇರ್ಬ್ತತೆಹರನೇ ಮೂಲಕಾರಣನೆಂದು ನಂಬಿ, ಆತನಿಂದ ನನಗೆ ತೃಪ್ತಿಯುಂಟಾಗುವುದೆಂದು ತಿಳಿದುಕೊಂಡಿದ್ದೆನಲ್ಲಾ ! ಅಂತಹ ಮಿತ್ರನು ನನ್ನನ್ನು ಅಗಲಿ ಹೊರಟುಹೋದಬಳಿಕ, ನಾನಿನ್ನು ಪ್ರಾಣದಿಂದಿರಲಾರೆನೆಂದು, ಕಣ್ಣೀರನ್ನು ಸುರಿಸುತ್ತ ಅತ್ತನು. ಆತನ ಅವಸ್ಥೆಯನ್ನು ನೋಡಿ, ರತ್ನವಡಿ ವ್ಯಾಪಾರಗಾರನು ತನ್ನಮಿತ್ರನಾದ ಇರ್ಬ್ತತೆಶ್ವರನು ಹೇಳಿದವಮಾತು ನಿಜವೆಂದೂ, ವ್ಯೋಹವಿಲ್ಲದೆ ಬರಿಯ ಸ್ನೇಹದಿಂದ ಹೀಗೆ ವ್ಯಸನ ಉಂಟಾಗದೆಂದೂ ನಂಬಿಕೆಯಾಗಿ ತಿಳಿದುಕೊಂಡನು.

ಬಳಿಕ ರಾಜಕುಮಾರನು ತನ್ನಸೇವಕರನ್ನು ಕರೆದು ಇರ್ಬ್ತತೆಹರನಮನೆಗೆ ಹೋಗಿ, ಆತನ ಸೇವಕರನ್ನು ಕುರಿತು, ಇರ್ಬ್ತತೆಹರನು ಹೊರಟುಹೋಗಿರುವನೋ ಇಲ್ಲವೋ ತಿಳಿದುಕೊಂಡು ಬೇಗ ಬರುವಂತೆ ಹೇಳಿಕಳುಹಿಸಿದನು. ರತ್ನವ್ಯಾಪಾರಿಯು ರಾಜಕುಮಾರನ ವ್ಯಸನವನ್ನು ಕೆಡಿಸಿ, ಉಲ್ಲಾಸವನ್ನು ಹರಡಬೇಕೆಂದು ಇತರವಿಧವಾದ ಲೋಕವಾರ್ತೆಯನ್ನುಕುರಿತು ಮಾತನಾಡಲಾರಂಭಿಸಿದನು. ಆದರೆ ರಾಜಪುತ್ರನು ವ್ಯಸನಾಕ್ರಾಂತನಾಗಿದ್ದರಿಂದ, ಆತನ ಬುದ್ಧಿವಾದಗಳು ರಾಜತನಯನ ಮನಸ್ಸಿಗೆನಾಟದೆಹೋದವು. ರಾಜಪುತ್ರನಾದರೋ ಹಿಂದಿನದಿನ ಇರ್ಬ್ತತೆಹರನು ತನ್ನಬಳಿಗೆ ಬಂದಿದ್ದಾಗ್ಯೆ ಆಡಿದವಮಾತುಗಳಿಂದಲೂ, ಅವಸರವಸರವಾಗಿ ಹೊರಟುಹೋದ ಜೋರಿನಿಂದಲೂ, ಯಾವದೋ ಒಂದು ಕಾರಣದಿಂದ ಆತನು ಹಾಗೆ ಹೊರಟುಹೋಗಿರಬೇಕೆಂದು ಯೋಚಿಸಿಕೊಂಡನು. ಸ್ವಲ್ಪ ಹೊತ್ತಿನಲ್ಲಿ ಸೇವಕನು ಬಂದು ಅಯ್ಯಾ ! ನಾನು ಇರ್ಬ್ತತೆಹರನಮನೆಗೆ ಹೋಗಿ, ಆತನ ನೌಕರರಸಂಗಡ ವಮಾತನಾಡಿದೆನು. ಮೂರುದಿನಗಳಕೆಳಗೆ

ಇರ್ಬತೆಹರನು ಬಾಲಸೂರಿಗೆ ಹೊರಟುಹೋದನೆಂದು ಹೇಳಿದಬಳಿಕ ನಾನು ಹಿಂದಿರುಗಿಬರುತ್ತಿರುವಾಗ ಉತ್ತಮವಸ್ತ್ರಾಲಂಕೃತಳಾದ ಒಬ್ಬ ದಾದಿಯು ನನ್ನನ್ನುನೋಡಿ ಅಯ್ಯಾ! ನೀನು ಪರ್ಷಿಯಾ ರಾಜಕುಮಾರನ ಸೇವಕನೇ ಎನಲು, ನಾನು ಹೌದೆಂದು ಹೇಳಿದೆನು. ನಂತರ ಆಕೆ ತಮ್ಮ ಸಂಗಡ ಮಾತನಾಡಬೇಕೆಂದು, ನನ್ನ ಜೊತೆಯಲ್ಲೇ ಬಂದು ಅಂಗಳದಲ್ಲಿ ನಿಂತಿರುವಳು. ಯಾರೋ ದೊಡ್ಡ ಮನುಷ್ಯರಕಡೆಯಿಂದ ಕಾಗದವನ್ನು ತಂದಿರುವಂತೆ ತೋರುವುದೆಂದು ಹೇಳಲು, ರಾಜಕುಮಾರನು ಆಕೆ ಷೇಮುಸೆಲ್ ನೆಹರಳ ದಾದಿಯೆಹೊರತು ಮತ್ತಾರೂ ಅಲ್ಲವೆಂದು ತಿಳಿದು, ಆವಳನ್ನು ತನ್ನಬಳಿಗೆ ಕರೆದುಕೊಂಡುಬರುವಂತೆ ಹೇಳಿದನು. ಆ ದಾದಿಯು ಇರ್ಬತೆಹರನ ಮನೆಗೆ ಪದೇ ಪದೇ ಬರುತ್ತಿದ್ದುದರಿಂದ, ರತ್ನವ್ಯಾಪಾರಿಯು ಅವಳ ಗುರುತನ್ನು ಕಂಡಿದ್ದನು. ಇಂತಹಸಮಯದಲ್ಲಿ ದಾದಿಯುಬಂದುದು ರಾಜಪುತ್ರನಿಗೆ ಸಂತೋಷವೇ ಆದುದರಿಂದ, ಆಕೆ ಒಳಹೊಕ್ಕು ಬಂದ ಕೂಡಲೆ ರಾಜಪುತ್ರನಿಗೆ ನಮಸ್ಕಾರ ಮಾಡಿದಳು. ಇಂತೆಂದು ನುಡಿದು, ಷಹರಜಾದಿಯು ಬೆಳಗಾದಕೂಡಲೆ ಕಥೆಯೆಂನ್ನು ನಿಲ್ಲಿಸಿ, ಮರಳಿ ಬೆಳಗಿನ ಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೧೯೪ನೆಯ ರಾತ್ರಿಯ ಕಥೆ.

ನಂತರ ರಾಜಕುಮಾರನು ದಾದಿಗೆ ಪ್ರತಿ ವಂದನೆಗಳನ್ನು ಮಾಡಿದನು. ರತ್ನವ್ಯಾಪಾರಿಯು ದಾದಿಯನ್ನು ನೋಡಿದಕೂಡಲೆ, ಸ್ವಲ್ಪ ಹೊತ್ತು ಮರೆಯಾಗಿದ್ದನು. ದಾದಿಯು ತಾನು ಸ್ವಲ್ಪಹೊತ್ತು ಮಾತನಾಡುತ್ತಿದ್ದು, ನಂತರ ರಾಜಕುಮಾರನಿಂದಪ್ಪಣೆಯನ್ನತೆಗೆದುಕೊಂಡು, ಹೊರಹುಹೋದಳು. ನಂತರ ವ್ಯಾಪಾರಿಯು ಒಳಹೊಕ್ಕು ತನ್ನ ಸ್ಥಳದಲ್ಲಿ ಕುಳಿತುಕೊಂಡು, ಹಸನ್ಮುಖಿಯಾಗಿ ಸಂತೋಷದಿಂದಿರುವ ರಾಜಪುತ್ರನನ್ನು ನೋಡಿ, ಪ್ರಭುವೇ! ನಿನಗೆ ಕಲೀಫರಮನೆಯೆಲ್ಲಿ ಏನೋ ಮಹತ್ತಾದ ಕಾರ್ಯ ಸಂಘಟಿಸಿದಂತೆ ತೋರುವುದು. ಹೌದು! ಎನಲು ರಾಜಕುಮಾರನು ಅಯ್ಯಾ! ನೀನು ಹೀಗೆ ಹೇಳುವುದಕ್ಕೆ ಕಾರಣವೇನೆಂದು ಕೇಳಿದನು. ವ್ಯಾಪಾರಿಯು ಅಯ್ಯಾ! ಈಗತಾನೇ ನಿನ್ನಬಳಿಗೆ

ಬಂದುಹೋದ ದಾದಿಯು, ರಾಣಿಯಾದ ಷೇಮುಸೆಲ್‌ನೆಹರಳಕಡೆಯವಳು, ನಾನು ಇವಳನ್ನೂ ರಾಣಿಯನ್ನೂ ಚೆನ್ನಾಗಿ ಬಲ್ಲೆನು. ಅವರೂ ರತ್ನ ವ್ಯಾಪಾರಕ್ಕಾಗಿ, ನನ್ನನ್ನು ಆಗಾಗ್ಯೆ ಬರಮಾಡಿಕೊಳ್ಳುತ್ತಿದ್ದರು. ಅಲ್ಲದೆ ಈಕೆ ಹಲವುಸಾರಿ ಇರ್ಬ್ತೆಹರನಮನೆಗೆ ಬರುತಾ ಇದ್ದಳು. ಅಲ್ಲತೆ ರಾಣಿಯು ತಾನು ಮಾಡುವ ಎಂತಹ ರಹಸ್ಯವಾದ ಕಾರ್ಯಗಳನ್ನು ಮಾಡಬೇಕಾದರೂ, ಈ ದಾದಿಗೆ ತಿಳಿಸದೆ ಮಾಡಲಾರಳು. ಸ್ವಲ್ಪದಿನಗಳ ಕೆಳಗೆ ಈ ದಾದಿಯು ಬಹು ಚಿಂತಾಕ್ರಾಂತಳಾಗಿ ಇರುತ್ತಿರುವುದನ್ನು ಕಂಡು, ತಮ್ಮ ರಾಣಿಯನಿಮಿತ್ತವಾಗಿ ಯಾವುದೋ ಅಗತ್ಯವಾದ ಕಾರ್ಯ ಕ್ಕಾಗಿ ಹೀಗೆ ಹೋಗುತ್ತಿರುವಳೆಂದು ತಿಳಿದುಕೊಂಡೆನು. ಆದಕಾರಣ ದಿಂದ ನಾನು ನಿಷ್ಕರ್ಷೆಯಾಗಿ ನಿನ್ನ ಸಂಗಡ ಹೀಗೆ ಹೇಳಬೆನೆಂದು ನುಡಿ ಯೆಲು, ರಾಜಕುಮಾರನು ಅಹಾ! ನಮ್ಮ ರಹಸ್ಯವನ್ನು ನಿಜವಾಗಿಯೋ ಅಥವಾ ಅನುಮಾನದಿಂದಲೋ ಇವನು ತಿಳಿದುಕೊಂಡಿರುವನು. ಇಲ್ಲವಾ ದರೆ ಹೀಗೆಂದಿಗೂ ಹೇಳಲಾರನು. ಆದುದರಿಂದ ಈತನಿಗೆ ಯಾವತೆರದಿಂದ ಉತ್ತರವನ್ನು ಹೇಳಬೇಕೆಂದು ಚಿಂತಿಸುತ್ತ, ನಾನು ಇದುವರೆಗೂ ಹೇಳಿದ ಸಂಗತಿಗಳಿಗಿಂತಲೂ, ಹೆಚ್ಚಾಗಿ ನಿನಗೆ ತಿಳಿದಿರುವುದೆಂದು ನನಗೆ ತೋರು ವುದರಿಂದ, ಅದನ್ನು ಪೂರ್ಣವಾಗಿ ಹೇಳಿ ನನಗೆ ದುಃಖಕರವಾಗುವುದೋ ? ಇಲ್ಲವೊ ? ದಯವಾಡಿ ಹೇಳಬೇಕೆಂದು ಬೇಡಿಕೊಂಡನು.

ರತ್ನವ್ಯಾಪಾರಿಯು ತನಬೇಕಾದುದಿಷ್ಟೇ ಎಂದು ಮನಸ್ಸಿನಲ್ಲಿ ತೃಪ್ತಿ ಹೊಂದಿ, ತಾನು ಇರ್ಬ್ತೆಹರನ ಮುಖದಿಂದ ಕೇಳಿದ ವರ್ತಮಾನ ವೆಲ್ಲವನ್ನೂ, ಆತನು ರಾಜಕುಮಾರನನ್ನು ತೊರೆದು ಹೋಗುವುದಕ್ಕೆ ಭಯಪಟ್ಟು, ಯೋಚಿಸಿದ ಕಾರಣವನ್ನು ವಿಸ್ತಾರವಾಗಿ ತಿಳಿಯಹೇಳಿ, ಓ ರಾಜಪುತ್ರಾ! ಇಂತಹ ಕಾಲದಲ್ಲಿ ಇರ್ಬ್ತೆಹರನು, ನಿನ್ನನ್ನು ತೊರೆದು ಹೋದುದಕ್ಕಾಗಿ, ನಾನು ತುಂಬ ವ್ಯಸನ ಪಡುವೆನು. ಆದರೆ ನೀನು ಈಗ ಅಸಹಾಯನಾಗಿರುವುದರಿಂದ, ಇರ್ಬ್ತೆಹರನಿಗಿಂತಲೂ ಅಧಿಕವಾದ ನಂಬಿಕೆ ಯನ್ನು ತೋರ್ಪಡಿಸುತ್ತ, ನಿನಗೆ ಸಹಾಯ ಮಾಡಲು ಸಿದ್ಧನಾಗಿರು ವೆನು. ನೀನು ಅಂಗೀಕರಿಸುವುದಾದರೆ, ನಿನ್ನಕಾರ್ಯಕ್ಕಾಗಿ ನನ್ನ ಗೌರವ ವನ್ನೂ, ಧನವನ್ನೂ, ಪ್ರಾಣಗಳನ್ನೂ ಕೊಡಲು ಸಿದ್ಧನಾಗಿರುವೆನು.

ಈ ವಿಷಯದಲ್ಲಿ ನೀನು ಸ್ವಲ್ಪವೂ ಅನುಮಾನಿಸದೆ ಧೈರ್ಯವಾಗಿರು. ನಮ್ಮ ಮತದಲ್ಲಿ ಬಹಳ ಉತ್ತಮವಾದವುಗಳಿವೆಯೆಲ್ಲಾ ಆಣೆ ಇಟ್ಟು ಖಂಡಿತವಾಗಿ ಪ್ರಮಾಣ ಮಾಡಿ ಹೇಳುವೆನು. ಅಲ್ಲದೆ ನೀನು ಕಳೆದುಕೊಂಡ ಸ್ನೇಹಿತನು ನಿನ್ನಲ್ಲೇ ಇರುವನೆಂದು ತಿಳಿದುಕೋ, ಎಂದು ನುಡಿಯಲು, ರಾಜಕುಮಾರನು ಸ್ವಲ್ಪ ಧೈರ್ಯವುಳ್ಳವನಾಗಿ, ಇರ್ಬತೆಹರನು ಹೊರಟುಹೋದ ಪ್ರಸನವು ತನಗೆ ಕಡಿಮೆಯಾಗುವುದೆಂದು ತಿಳಿದು, ರತ್ನಪಡಿ ನ್ಯಾಪಾರಿಯನ್ನು ನೋಡಿ ಅಯ್ಯಾ! ನನಗೆ ಸಂಭವಿಸಿದ ನಷ್ಟವು ನಿನ್ನಿಂದ ಪೂರ್ತಿ ಮಾಡಲ್ಪಡುವುದು. ನಿನ್ನೀ ಉಪಕಾರಬುದ್ಧಿಗಾಗಿ, ನಾನು ನಿನ್ನನ್ನು ಬಹಳವಾಗಿ ಪಂದಿಸುವೆನು. ಮಾಡತಕ್ಕ ಕಾರ್ಯಗಳೆಲ್ಲ ವನ್ನು ನಾನು ಮನಃಪೂರ್ವಕವಾಗಿ ಅಂಗೀಕರಿಸುವೆನು. ಇದಕ್ಕೆ ತಕ್ಕ ಪ್ರತ್ಯುಪಕಾರವನ್ನು ಭಗವಂತನು ನಿನಗೆ ಮಾಡಲೆಂದು ಪ್ರಾರ್ಥಿಸುತ್ತಿರುವೆನು. ಅಲ್ಲದೆ ಆ ದಾದಿಯು ನಿನ್ನ ವಿಚಾರವಾಗಿ ಮಾತನಾಡುವುದಕ್ಕಾಗಿ ನನ್ನಹತ್ತಿರಕ್ಕೆ ಬಂದಿದ್ದಳು.

ಇರ್ಬತೆಹರನನ್ನು ನೀನು ಹೊರಟುಹೋಗುವಂತೆ ಹೇಳಿದೆಯೆಂತೆ. ಹಾಗೆ ಮಾಡಿದ್ದೇ ಆದರೆ ಅದು ಮಹಾ ಅಪರಾಧವೆಂದು ನಾನು ಭಾವಿಸುವೆನು. ಅದರಿಂದಲೇ ದಾದಿಯು ಆತನು ಹೊರಟುಹೋದ ಸಂಗತಿಯನ್ನು ನಂಬಿಕೆಯಾಗಿ ತಿಳಿದು, ನನ್ನಒಳಗೆ ಓಡಿಬಂದು ಹೇಳಿದನು. ಹೇಗೋ ಸಂಚು ನಡೆದಿರಬೇಕೆಂದು ತೋರುವುದೆನಲು, ಪರ್ತಕನು ರಾಜಪುತ್ರಾ! ನಾನು ಇರ್ಬತೆಹರನನ್ನು ಹೊರಟುಹೋಗುವಂತೆ ಹೇಳಲಿಲ್ಲ. ಸುಮ್ಮನೆ ಆ ದಾದಿಯ ಮಾತನ್ನು ಕೇಳಿ ನಂಬಿಕೆಯನ್ನು ಕೆಡಿಸಿಕೊಳ್ಳಬೇಡ. ನಾನು ಭಕ್ತಿಶ್ರದ್ಧಾವಂತನಾಗಿ ನಿನಗೆ ಉಪಕಾರ ಮಾಡಲು ಸಿದ್ಧನಾಗಿರುವೆನು. ನಿನಗೆ ನಾನು ಉಪಕಾರವನ್ನು ಮಾಡಿದರೂ, ಮೊದಲೇ ಪ್ರಮಾಣ ಮಾಡಿ ಇರುವುದರಿಂದ, ನಿನ್ನ ರಹಸ್ಯವನ್ನು ಎಂದಿಗೂ ಹೊರಹಾಕಲಾರೆನೆಂದು ಹೇಳಲು, ರಾಜಕುಮಾರನು ಆ ದಾದಿಯ ಮಾತನ್ನು ನಾನು ಮೊದಲೆ ನಂಬಲಿಲ್ಲವೆಂದು ಹೇಳಿರುವೆನಲ್ಲಾ! ಅವಳು ಮೂರ್ಖತನದಿಂದ ಸುಳ್ಳನ್ನು ನಿಜವಾಗಿರುವಂತೆ ಹೇಳಿರುವಳು. ನೀನು ನನ್ನ ಅಪರಾಧವನ್ನು ಕ್ಷಮಿಸೆಂದು ಬೇಡಿಕೊಂಡನು. ಈವಿಧದಿಂದ ಹಿಂದಳಿದುಹೋಗಿರುವವರಿಗೂ, ಚರ್ಚಿಸುತ್ತಿದ್ದು

ಬಳಿಕ ರಾಜಕುಮಾರನಿಗೂ, ಷೇಮುಸೆಲ್‌ನೆಹರಳಗೂ, ಉತ್ತರಪ್ರತ್ಯುತ್ತರಗಳು ನಡೆವುದಕ್ಕೆ ಸುಲಭೋಪಾಯವನ್ನು ಕಂಡುಹಿಡಿದರು. ರಾಜಕುಮಾರನು ಅನ್ಯಾಯವಾಗಿ ರತ್ನವ್ಯಾಪಾರಿಯಮೇಲೆ ಅನುಮಾನವನ್ನು ತಂದೊಡ್ಡಿದ ದಾದಿಯನ್ನು ಸಮಾಧಾನಪಡಿಸಬೇಕೆಂದು ಯೋಚಿಸಿ, ವರ್ತಕನಕಡೆಗೆ ತಿರುಗಿ, ಅಯ್ಯಾ! ಆ ದಾದಿಯು ಮತ್ತೊಂದುಸಾರಿ ಬಂದಾಗ್ಯೆ ನೀನು ರಾಣಿಯಕಡೆಯಿಂದ ತರುವ ಸಕಲವಿಧವಾದ ವರ್ತಮಾನವನ್ನೂ ರತ್ನವ್ಯಾಪಾರಿಗೆ ತಿಳಿಸಬೇಕೆಂದು ಹೇಳಿಬಿಡುವೆನು. ಆದುದರಿಂದ ಬಹು ಮರ್ಮವಾಗಿ ಇರಬೇಕಾದ ನಮ್ಮ ಸಂಗತಿಗಳು ಹೊರಬೀಳದಿರುವುವು. ದಾದಿಯು ನಮ್ಮಮನೆಗೆ ಆಗಾಗ್ಯೆ ಬರುತ್ತಿರುವುದುಕೂಡ ಅಪಾಯಕರವೆಂದು ಹೇಳದನು. ವರ್ತಕನು ಅಯ್ಯಾ! ಹೇಗಾದರೂಸರಿಯೇ ನನ್ನ ಮೇಲಿನ ನಂಬಿಕೆಮಾತ್ರ ಚೆನ್ನಾಗಿರಲಿ ಎಂದು ಹೇಳುತ್ತಾ ಆತನಿಂದಪ್ಪಣೆ ಪಡೆದು ಹೊರಟುಹೋದನು. ಇಂತೆಂದು ಹೇಳುವುದರೊಳಗಾಗಿ, ಬೆಳಗಾದುದರಿಂದ ಪಹರೆಜವಾದಿಯು ಕಛೇರಿಯನ್ನು ನಿಲ್ಲಿಸಿ, ಮರುದಿನ ಬೆಳಿಗಿನ ಜಾವದಲ್ಲಿ ಪುನಹಾ ಹೇಳಲಾರಂಭಿಸಿದಳು.

೧೯೯ ನೆಯ ರಾತ್ರಿಯ ಕಛೇರಿ.

ರತ್ನಪಡಿ ವರ್ತಕನು ತನ್ನಮನೆಗೆ ಹೋಗುತ್ತಾ ದಾರಿಯಲ್ಲಿ ಬೊಹರು ಮುದ್ರೆಗಳಿಲ್ಲದೇ ಕಳಚಿ ಬಿದ್ದುಹೋಗಿದ್ದ ಒಂದಾನೊಂದು ಕಾಗದವನ್ನು ನೋಡಿ, ಅದನ್ನು ಕೈಗೆ ತೆಗೆದುಕೊಂಡು ಓದಲು ಆರಂಭಿಸಿದನು. ಅದರಲ್ಲಿ ಈ ತೆರದ ಬರವಣಿಗೆಗಳು ಕಾಣಬಂದವು. ಪರ್ಷಿಯಾ ರಾಜಕುಮಾರನಿಗೆ ಷೇಮುಸೆಲ್‌ನೆಹರಳು ಬರೆದ ಕಾಗದ ಏನೆಂದರೆ:— ನನ್ನ ದಾದಿಯು ಹೇಳಿದ ವಾಕ್ಯಗಳನ್ನು ಕೇಳಿ, ನನಗೆಷ್ಟು ವ್ಯಸನವಾಯಿತೋ ಅಷ್ಟೊಂದು ವ್ಯಸನವು ನಿನಗೂ ಉಂಟಾಗಬಹುದು. ನಂಬಿಕೆಗೆ ಪಾತ್ರನಾಗಿದ್ದ ಇಬ್ರಹೆತೆಹರನು ಹೊರಟುಹೋದಬಳಿಕ ಅದರಿಂದ ನನಗೆ ಕೆಡುಕುಂಟಾದರೆ, ನಿನಗೂ ಕೇಡುಂಟೆಂದು ಯೋಚಿಸಬೇಕೆ? ನಮ್ಮ ಪ್ರೀತಿಪಾತ್ರನಾದ ಆಪ್ತಮಿತ್ರನು ಭಯದಿಂದ ಹೊರಟುಹೋದವೇಲೆ, ನಾವುಗಳೇನುಮಾಡಬಲ್ಲೆವು. ಆತನ ಸಹಾಯವು ನಮಗೆ ಅತ್ಯವಶ್ಯಕವಾಗಿ, ಬೇಕಾಗಿರುವಲ್ಲಿ ಕಾಲದಲ್ಲಿ ಹೊರಟು ಹೋದುದು ನಮ್ಮ

ದೌರ್ಭಾಗ್ಯವೇ ಸರಿ ! ಅಕಸ್ಮಾತ್ತಾಗಿ ನಮಗೆ ಸಂಭವಿಸಿದ ನಷ್ಟಕ್ಕಾಗಿ ನಾವು ಯೋಚಿಸದೆ, ಧೈರ್ಯದಿಂದ ಸಹನೆಯನ್ನು ಹೊಂದಬೇಕಲ್ಲವೆ ? ಯಾವಾಗಲೂ ನಾವೀರ್ವರೂ ಮರ್ಮವಾಗಿಯೇ ಇರುವೆವು. ಆದರೆ ನಮ್ಮ ದೌರ್ಭಾಗ್ಯವನ್ನು ಚಿಂತಿಸುತ್ತ, ವ್ಯಸನ ಪಡದೆ ಮನೋನಿಶ್ಚಯವನ್ನು ಕೈಕೊಳ್ಳುವವನಾಗು. ನಮ್ಮ ಇಷ್ಟಾರ್ಥಗಳು ನೆರವೇರಬೇಕಾದರೆ, ಎಂದಿಗೂ ಸುಲಭವಲ್ಲ. ಬಹು ಕಷ್ಟಸಾಧ್ಯವಾಗಿಯೆ ಇರುವುದು. ಆದುದರಿಂದ ನಾವು ಧೈರ್ಯವನ್ನು ಬಿಡಬಾರದು. ನಮ್ಮ ಕೋರಿಕೆಗಳು ಕೈಗೂಡುವಂತೆ ಭಗವಂತನು ಸಹಾಯ ಮಾಡುವನು. ಎಷ್ಟೇ ವಿಪತ್ತುಗಳು ಬಂದಾಗ್ಯೂ, ನಮ್ಮ ಅಭಿಪ್ರಾಯಗಳು ಸಫಲವಾಗಿ ನಾವು ಸುಖ ಸಂತೋಷಯುಕ್ತರಾಗುವೆವು. ಇದೇ ನನ್ನ ವಿಜ್ಞಾಪನೆ. ರಾಜಕುಮಾರನೂ, ರತ್ನಪಡಿವ್ಯಾಪಾರಿಯೂ, ಮಾತನಾಡುತ್ತಿರುವಾಗ ದಾದಿಯು ಅರಮನೆಗೆ ಹೋಗಿ, ರಾಣಿಗೆ ಇರ್ಬ್ರತಿಹರನು ಹೊರಟುಹೋದ ವರ್ತಮಾನವನ್ನು ಹೇಳಲು, ಆಕೆ ಈ ಕಾಗದವನ್ನು ಬರೆದು ರಾಜಪುತ್ರನ ಕೈಗೆ ಕೊಡುವಂತೆ ತನ್ನ ದಾದಿಯಕೈಗೆ ಕೊಟ್ಟಳು.

ಅವಳು ಅದನ್ನು ತೆಗೆದುಕೊಂಡುಬರುತ್ತಾ, ಆಲಸ್ಯದಿಂದ ದಾರಿಯಲ್ಲಿ ಅದನ್ನು ಕೆಡವಿದಳು. ರತ್ನಪಡಿವ್ಯಾಪಾರಿಯು ಅದನ್ನು ತೆಗೆದುಕೊಂಡು ಓದಿನೋಡಿ, ದಾದಿಯು ಕಾಗದವನ್ನು ಹುಡುಕಿಕೊಳ್ಳುತ್ತಿರುವುದನ್ನು ಕಂಡು, ಬೇಗನೆ ಮಡಿಸಿ ಜೇಬಿನಲ್ಲಿ ಹಾಕಿಕೊಂಡನು. ಅದನ್ನು ಕಂಡಕೂಡಲೆ, ದಾದಿಯು ಆತನಬಳಿಗೆ ಓಡಿಬಂದು, ಕಾಗದವನ್ನು ತನಗೆ ಕೊಟ್ಟುಬಿಡುವಂತೆ ಬೇಡಿಕೊಂಡಳು. ಆ ಮಾತುಗಳನ್ನು ಕೇಳದವನಂತೆ, ರತ್ನಪಡಿವ್ಯಾಪಾರಿಯು ತನ್ನ ಮನೆಯನ್ನು ಸೇರಿ ಹಿಂಬಾಲಿಸಿ ಬರುತ್ತಿರುವ ದಾದಿಯು ಬರಲಿಂಬಭಿಪ್ರಾಯದಿಂದ ಬಾಗಿಲನ್ನು ಮುಚ್ಚಿಕೊಳ್ಳದೆ ಹೊರಟನು. ನಂತರ ದಾದಿಯು ಒಳಹೊಕ್ಕು ಅತನ ಕೊಠಡಿಗೆ ಹೋಗಿ ಅಯ್ಯಾ ! ನಿನಗೆ ದೊರೆತಿರುವ ಕಾಗದವು ನಿನಗೇತಕ್ಕೆ ? ಇಂಥವರು ಇಂಥವರಿಗೆ ಬರೆದಿರುವರೆಂಬ ಸಂಗತಿ ನಿನಗೆ ತಿಳಿದಿರುವದಲ್ಲ ! ಅಡ್ಡಿ ಇಲ್ಲದೆ ಅದನ್ನು ನನ್ನಕೈಗೆ ಕೊಟ್ಟುಬಿಡು. ನೀನಿಟ್ಟುಕೊಳ್ಳುವುದಕ್ಕೆ ಯೋಗ್ಯವಾದುದಲ್ಲವೆಂದು ಪ್ರಾರ್ಥಿಸುವೆನೆಂದಳು.ಅದಕ್ಕಾತನು ದಾದಿಯನ್ನು

ಕುಳಿತುಕೊಳ್ಳುವಂತೆ ಹೇಳಿ ಆ ಕಾಗದವು ಪೇವು ಸೆಲ್'ನೆಹರು, ಪರ್ಷಿಯಾ ರಾಜಕುಮಾರನಿಗೆ ಬರೆದಿದ್ದುದೇ ಎನಲು, ದಾದಿಯು ಭಯದಿಂದ ಯಾವ ಮಾತನ್ನು ಆಡದೆ ಸುಮ್ಮನಿದ್ದಳು. ರತ್ನಪಡಿವ್ಯಾಪಾರಿಯು ಓಹೋ ! ನಾನು ಕೇಳಿದ ಪ್ರಶ್ನೆಯು ನಿನಗಿಷ್ಟವಿಲ್ಲವೋ, ಚಿಂತೆ ಇಲ್ಲ. ನಾನು ಈ ವಿಷಯವನ್ನು ಕುರಿತು, ನಿನ್ನ ಸಂಗಡ ಮಾತನಾಡಬೇಕೆಂದು ಪ್ರಶ್ನೆ ಮಾಡಿದವನಲ್ಲ. ಆದರೆ ನಿನ್ನ ಸಂಗಡ ಕೆಲವು ಮಾತನಾಡಬೇಕಾಗಿದ್ದುದರಿಂದ, ನಿನ್ನನ್ನು ಇಲ್ಲಿಗೆ ಕರೆದುಕೊಂಡು ಬಂದೆನು. ಯಾವ ವಿಷಯದಲ್ಲೂ ಪ್ರವರ್ತಿಸದಿರುವ ಮನುಷ್ಯನಮೇಲೆ, ಇಲ್ಲದ ಅಪವಾದವನ್ನು ಹೊರಿಸುವುದು ನ್ಯಾಯವೆಲ್ಲೋ? ಅತಿರದ ಕಾರ್ಯವನ್ನು ನೀನೇ ಮಾಡಿರುವೆ ಯುಲ್ಲಾ ! ಇರ್ಬ್ಕತೆಪರನನ್ನು ಹೊರಟುಹೋಗುವಂತೆ ನಾನು ಹೇಳಿದೆ ನೆಂದು, ನೀನು ಪರ್ಷಿಯಾ ರಾಜಕುಮಾರನಸಂಗಡ ಹೇಳಲಿಲ್ಲವೇ ?

ಕ

ಇ ಈ ವಿಷಯದಲ್ಲಿ ನಾನು ನಿನ್ನ ಬಳಿಯಲ್ಲಿ ಅನುಮಾನವನ್ನು ಸರಿಪಡಿಸುತ್ತೇನೆಂದು ನೀನು ತಿಳಿದುಕೊಳ್ಳಬೇಕಾದ, ರಾಜಪುತ್ರನಿಗೆ ನನ್ನ ಮೇಲೆವಾತ್ರ ಅನುಮಾನ ತಟ್ಟಿದಿದ್ದರೆ ಸಾಕು. ನಾನು ಇರ್ಬ್ಕತೆಪರನನ್ನು ಹೊರಟುಹೋಗುವಂತೆ ಮಾಡಲಿಲ್ಲವೆಂದೂ, ಆತನು ಹೊರಟುಹೋದುದಕ್ಕಾಗಿ ತುಂಬ ವ್ಯಸನಪಡುತ್ತಿರುವೆನೆಂದೂ, ಆತನಿಗೆ ತಿಳಿಯಹೇಳುವೆನು. ನಾನು ವ್ಯಸನಪಡುತ್ತಿರುವುದು ಆತನ ಸ್ನೇಹಕ್ಕಾಗಿಯೇ ಅಲ್ಲ. ರಾಣಿಯೂ ರಾಜಪುತ್ರನೂ ಅನ್ಯೋನ್ಯ ವ್ಯೋಹಯುಕ್ತರಾಗಿ ವರ್ತಿಸುತ್ತಿರುವಲ್ಲಿ ಅವರಿಗೆ ತಾನು ಮಧ್ಯಸ್ಥನಾಗಿ ನಿಂತುಕೊಂಡಿರುವೆನೆಂದು, ಇರ್ಬ್ಕತೆಪರನೆ ನನ್ನ ಸಂಗಡ ಹೇಳಿದ್ದನಾದುದರಿಂದ, ಇಂತಹ ಸಮಯದಲ್ಲಿ ರಾಜಪುತ್ರನನ್ನು ತೊರೆದು, ಬಾಗದಾದನ್ನು ಬಿಟ್ಟು ಹೊರಟುಹೋದ ವರ್ತಮಾನವನ್ನು ತಿಳಿದು, ನಾನು ರಾಜಪುತ್ರನ ಮನೆಗೆ ಹೋಗಿ, ಆತನಿಗೆ ಈ ವರ್ತಮಾನವನ್ನು ಹೇಳಿ, ಇರ್ಬ್ಕತೆಪರನಿಗೆ ಬದಲಾಗಿ ನಾನೇ ನಿನಗೆ ಬೇಕಾದ ಸಹಾಯವನ್ನು ಮಾಡಿಕೊಡಲು, ಸಿದ್ಧನಾಗಿ ಇರುವೆನೆಂದು ಹೇಳಿದೆನು. ನೀನು ಇರ್ಬ್ಕತೆಪರನಲ್ಲಿಷ್ಟು ನಂಬಿಕೆಯುಳ್ಳವಳಾಗಿದ್ದೆಯೋ, ಅಷ್ಟು ನಂಬಿಕೆಯನ್ನು ನನ್ನಲ್ಲಾ ಇಟ್ಟುಕೊಂಡಿರಬೇಕು. ಇಲ್ಲವಾದಪಕ್ಷ ಅದು ನಿನ್ನ ತಪ್ಪೆನ್ನಲಾಗುತ್ತದೆ ನನ್ನದಲ್ಲ ಈ ವಿಷಯವನ್ನು ನಿಮ್ಮ ರಾಣಿಯೆ.

ಸಂಗಡ ಹೇಳು. ಇಂತಹ ಸಮಯದಲ್ಲಿ ಬಾಣಾಪಾಯವನ್ನೂ ಕೂಡ, ಲಕ್ಷ್ಯಮಾಡದೆ ಸಹಾಯ ಮಾಡಿ, ಕಾಮುಕಿಗಳಾದ ಆ ವಧೂವರರನ್ನು ತೃಪ್ತಿಪಡಿಸುವುದರಲ್ಲಿ ನಾನು ಧೈರ್ಯಶಾಲಿ ಎಂದು ನಿಜವಾಗಿ ಹೇಳುವೆನೆಂದನು. ಆ ಮಾತುಗಳನ್ನು ಕೇಳಿ, ತೃಪ್ತಳಾದ ದಾದಿಯು ಆತನಿಂದ ಕ್ಷಮಾಪಣೆಯನ್ನು ಕೇಳಿಕೊಂಡು, ತನ್ನ ಅಪರಾಧವನ್ನು ಹೋಗಲಾಡಿಸಿಕೊಂಡಳು. ನಂತರ ಆತನನ್ನುಕುರಿತು ಅಯ್ಯಾ ! ಷೇಮುಸೆಲ್‌ನೆಹರಳಿಗೂ, ರಾಜಪುತ್ರನಿಗೂ, ಮಧ್ಯದಲ್ಲಿ ಕಾರ್ಯಸಂಧಾನಿಯಾಗಿ, ಇಬ್ಬ ತೆಹರನಿಗಿಂತಲೂ, ಅಧಿಕವಾದ ನಂಬಿಕೆಯುಳ್ಳ ನೀನುಸೇರಿರುವುದು ನನಗೆ ತುಂಬ ಸಂತೋಷವಾಯಿತು. ನೀನು ನಮ್ಮ ರಾಣಿಯಸುಖವನ್ನೇ ಬಯಸುತ್ತಿರುವೆಯಾದುದರಿಂದ ನಿನ್ನವಿಷಯವನ್ನು ಆ ತರಳೆಯೊಡನೆ ಹೇಳುವೆನೆಂದು ನುಡಿದಳು. ಇಂತೆಂದು ಹೇಳಿ ಬೆಳಗಾದಕೂಡಲೆ ಕಥೆಯೆನ್ನು ನಿಲ್ಲಿಸಿ, ಪಟರಜೊಹಾದಿಯು ಮರಳಿ ಹೇಳಲಾರಂಭಿಸಿ ಸುಲ್ತಾನನನ್ನುಕುರಿತು ಮತ್ತಿಂತೆಂದಳು.

೨೦೦ ನೆಯ ರಾತ್ರಿ ಕಥೆ.

ಷೇಮುಸೆಲ್‌ನೆಹರಿಗೂ, ರಾಜಕುಮಾರನಿಗೂ, ಉತ್ತಮವಾದ ಉಪಕಾರವನ್ನು ಮಾಡಬೇಕಾಗಿನೆವುದರಿಂದ, ನಾನು ಮುಖ್ಯಾಂಶವಾದ, ನನ್ನ ತಾತ್ಪರ್ಯವನ್ನು ನಿನಗೆ ತಿಳಿಯುಪಡಿಸಿದೆನೆಂದು ಹೇಳಿದ, ರತ್ನಪಡಿ ವ್ಯಾಪಾರಿಯನ್ನು ದಾದಿಯು ಬಹಳವಾಗಿ ಹೊಗಳಿದುದರಿಂದ, ವರ್ತಕನು ಕಾಗದವನ್ನು ಆ ದಾದಿಯಕೈಗೆ ಕೊಟ್ಟು, ಇಗೋ ! ಇದನ್ನು ತೆಗೆದು ಕೊಂಡುಹೋಗಿ, ರಾಜಪುತ್ರನಿಗೆ ಕೊಟ್ಟು, ಆತನು ಬರೆದುಕೊಡುವ ಪತ್ರವನ್ನು ನನ್ನಬಳಿಗೆ ತಂದುಕೊಡಬೇಕು. ನಾನು ಹೇಳಿದ ಮಾತುಗಳನ್ನು ರಾಜಪುತ್ರನಿಗೆ ಮರೆಯದೆ ಮತ್ತೊಂದುಸಾರಿ ಹೇಳು ಎನಲು, ದಾದಿಯು ಆ ಕಾಗದವನ್ನು ರಾಜಪುತ್ರನಿಗೆ ತಲಪಿಸಿ. ಆತನಿಂದ ಪ್ರತ್ಯುತ್ತರವನ್ನು ಬರೆಸಿಕೊಂಡು ರತ್ನಪಡಿ ವ್ಯಾಪಾರಿಯಮನೆಗೆ ಬಂದು, ಕಾಗದವನ್ನು ಕೊಡಲು, ಆತನು ಅದನ್ನು ತೆಗೆದುಕೊಂಡು ಇಂತೆಂದು ಓದಿದನು. ಓ ! ನನ್ನ ಹೃದಯೇಶ್ವರೀ ! ನಿನ್ನ ಪ್ರೀತಿಕರವಾದ ಕಾಗದವನ್ನು ಕೋಡಿ, ನನಗೆ ಮಹತ್ತಾದ ಆನಂದ ಉಂಟಾಗದಿದ್ದರೂ ಕಿಂಚಿತ್

ಸಂತೋಷವಾಯಿತು. ಇರ್ಜ್ತೆಹರನು ಹೊರಟುಹೋದುದರಿಂದ ನಿನಗೆ ಸ್ವಲ್ಪ ಶುಭ ಉಂಟಾಗಲೆಂದು, ಬರೆದಿರುವೆಯಲ್ಲಾ ! ಅದನ್ನು ಕುರಿತು ನಾನನುಭವಿಸುತ್ತಿರುವ ಕಷ್ಟಗಳಲ್ಲಿದೊಂದು ಮಹಾ ವ್ಯಸನಕರವೆಂದು, ನಾನು ತಿಳಿದುಕೊಂಡಿರಲಾರೆನು. ನಿನ್ನ ಸಾನ್ನಿಧ್ಯದಿಂದ ನನಗೆ ಸುಖ ಉಂಟಾಗಬೇಕೆಂದು ನಾನು ತಿಳಿದುಕೊಂಡಿರುವೆನು. ಅದು ಇನ್ನೆಂದಿಗೆ ಲಭ್ಯವಾಗುವುದೋ ನನಗೆ ತಿಳಿಯದು. ನನ್ನನ್ನು ಜಾಗರೂಕನಾಗಿ ಇರುವಂತೆ ಬರೆದಿರುವೆ. ನಾನು ಅತ್ಯವಶ್ಯಕವಾಗಿ ಅಂಗೀಕರಿಸಿರುವೆನು. ನನ್ನಬುದ್ಧಿಯು ನನಗೆ ಸ್ವಾಧೀನವಿಲ್ಲ. ಆದುದರಿಂದ ನಾನು ಹೇಳಿದತೆರದಿಂದ ನಾನು ನಡೆದುಕೊಳ್ಳಲು ಸಿದ್ಧನಾಗಿರುವೆನು. ಇಂತೀ ವಿಜ್ಞಾಪನಾ.

ಆಕಾಗದವನ್ನು ದಾದಿಯಕೈಗೆಕೊಟ್ಟು, ಇದನ್ನುತೆಗೆದುಕೊಂಡು ಹೋಗಿ ರಾಣಿಯಕೈಗೆ ಕೊಟ್ಟು, ಆಕೆಯ ವರ್ತಮಾನವನ್ನು ತಿಳಿದುಕೊಂಡುಬಂದು ನನ್ನಸಂಗಡ ಹೇಳಬೇಕೆಂದು, ರತ್ನಪಡಿವ್ಯಾಪಾರಿಯು ಹೇಳದಕೂಡಲೆ, ದಾದಿಯು ಅಲ್ಲಿಂದಹೊರಟು ತನ್ನ ರಾಣಿಯಬಳಿಗೆಹೋಗಿ ಮರಳ ಮಾತನಾಡಿಕೊಂಡು ಎರಡುದಿನಗಳವೇಲೆ ಬಹು ಸಂತೋಷದಿಂದ ರತ್ನಪಡಿವರ್ತಕನಬಳಿಗೆ ಬಂದು ನಿಲ್ಲಲು, ಆತನು ದಾದಿಯನ್ನುನೋಡಿ, ಏನು ನೀನು ಕಾರ್ಯಸಾಧನೆಯನ್ನು ಮಾಡಿಕೊಂಡು ಬಂದಿರುವೆಯಾ ! ಎನಲು ಆಕೆ ಬಹು ಸಂತೋಷದಿಂದ ಅಯ್ಯಾ ! ರಾಣಿಯುಮನಸ್ಸೊಪ್ಪುವಂತೆ ಬಹು ವಿವರವಾಗಿ ನಿನ್ನ ಗುಣಗಳನ್ನು, ನಿನ್ನ ಗೌರವವನ್ನೂ, ರಾಜಪುತ್ರನಿಗೂ, ನಿನಗೂ ಇರುವ ಸ್ನೇಹವನ್ನೂ, ಇರ್ಜ್ತೆಹರನಿಗಿಂತಲೂ ನಿನ್ನಲ್ಲಿರುವ ಅತಿಶಯವಾದ ಸುಗುಣಗಳನ್ನು ನಿರೂಪಿಸಲಾಗಿ ಆಕೆ ಅಂತಹ ಸದ್ಗುಣಶಾಲಿಯಾದ ಪುರುಷನನ್ನು ಪ್ರತ್ಯಕ್ಷವಾಗಿ ನೋಡದೆ, ಆತನು ಮಾಡುವ ಪ್ರತ್ಯುಪಕಾರವನ್ನು, ನಾವು ತಿಳಿದುಕೊಳ್ಳದೆ, ಹೇಗೆ ವಂದನೆಗಳನ್ನು ಸಮರ್ಪಿಸಲಾದೀತೇ ? ಆದುದರಿಂದ ನೀನು, ಅಗತ್ಯವಾಗಿ ನಾಳೆಯದಿನ ಆತನನ್ನು ಬಳಿಗೆ ಕರೆದುಕೊಂಡು ಬಾ ಎಂದು ಹೇಳಿರುವುದರಿಂದ, ನೀನು ದಯೆಮಾಡಿ, ನನ್ನಸಂಗಡ ಅರಮನೆಗೆ ಬರಬೇಕೆಂದು ಬೇಡಿಕೊಂಡಳು. ಬಳಿಕ ವರ್ತಕನು ದಾದಿಯನ್ನುಕುರಿತು, ನಿನ್ನರಾಣಿಯು ನನ್ನನ್ನುಅರಮನೆಗೆಬರುವಂತೆ ಹೇಳಿದಳೆಹೊರತು ಚೆನ್ನಾಗಿ ಯೋಚಿಸಲಿಲ್ಲ.

ಇರ್ಬ್ತತೆಹರನು ಕಲೀಫರಿಗೆ ಬೇಕಾದವನಾಗಿದ್ದುದರಿಂದ, ಎಲ್ಲಿ ಸಂಚಾರ ಮಾಡಿದರೂ ರಾಜಭಟರು ಕೇಳುತ್ತಿರಲಿಲ್ಲ. ನಾನು ಹಾಗೆಬಂದರೆ ಮಹ ತಾಪದ ಪ್ರಮಾದ ಉಂಟಾದೀತು. ಆದುದರಿಂದ ರಾಣಿಯು ಈ ಅಪಾಯ್ಗಳನ್ನೆಲ್ಲಾ ಬೆನ್ನಾಗಿ ಯೋಚಿಸಬೇಕೆಂದು, ನಾನು ಹೇಳಿದೆನೆಂದು ವಿವರಿಸಿ, ಇಲ್ಲವಾದರೆ ನಾವುಗಳು ಅತ್ಯಂತವಾದ ತೊಂದರೆಗೆ ಸಿಕ್ಕಿಕೊಳ್ಳುವುವೆಂದು ಹೇಳುವನು. ಬಳಿಕ ದಾದಿಯು ಆತನ ಭಯವನ್ನು ಹೋಗಲಾಡಿಸಿ ಧೈರ್ಯವನ್ನು ಹೆಚ್ಚಿಸಬೇಕೆಂದು, ಅಯ್ಯಾ! ಮಹದುಪಕಾರವನ್ನು ಹೊಂದಿ ನಿನ್ನ ಪ್ರೀತಿಯನ್ನು ಸಂಪಾದಿಸಿಕೊಳ್ಳಬೇಕೆಂದು, ನಿನ್ನನ್ನು ಅರಮನೆಗೆ ಕರೆಸಿಕೊಳ್ಳುವ ರಾಣಿಯು, ನಿನಗೆ ಮಹತ್ತಾದ ವಿಪತ್ತನ್ನು ತಂದುಬಿಡ್ಲವಳೆಂದು, ತಿಳಿದುಕೊಂಡು ಇರುವೆಯಾ ? ಹಾಗೆಂದಿಗೂ ಯೋಚಿಸಬೇಡ. ನಿನಗೆ ಯಾವ ತೊಂದರೆಯೂ ಇಲ್ಲದಂತೆ ನೋಡಿಕೊಳ್ಳುವುದಕ್ಕೆ ನಾಪೂ ನಮ್ಮ ರಾಣಿಯೂಸಹ ಬಹು ಎಚ್ಚರಿಕೆಯಿಂದ ನೋಡಿಕೊಳ್ಳುವೆವೆಂದು, ಹೇಳಲು, ಆತನು ಬಹು ಧೈರ್ಯದಿಂದ, ನನ್ನಬಳಿಗೆ ಬರುತಾತ್ತ ಗಡ ಗಡನೆ ನಡುಗಲು ಆರಂಭಿಸಿದನು.

ಆತನ ದುರವಸ್ಥೆಯನ್ನು ನೋಡಿ, ದಾದಿಯು ಅಯ್ಯಾ! ನೀನು ನನ್ನಸಂಗಡ ಬರುವುದಕ್ಕಿಂತಲೂ, ನಿನ್ನಮನೆಯಲ್ಲೇ ಇರುವುದು ಉತ್ತಮ. ಹೇಗಾಪರೂಪಮಾಡಿ ರಾಣಿಯೇ ನಿನ್ನಬಳಿಗೆ ಬರುವಂತೆ ಮಾಡುವೆನೆಂದು ಹೇಳಿ, ಆತನನ್ನು ಸಮಾಧಾನ ಮಾಡಿ, ರಾಣಿಯಒಳಿಗೆ ಬಂದು ನಡೆದ ವರ್ತಮಾನವನ್ನು ವಿನ್ನವಿಸಲು, ರಾಣಿಯು ಸೊರಹೊರಟು ರತ್ನಪಡಿವರ್ತಕನಮನೆಗೆ ಬಂದಳು. ಆಕೆಯನ್ನು ಬಹು ಮರ್ಯಾದೆಯಿಂದ ಬರಮಾಡಿಸಿಕೊಂಡು, ರತ್ನಪಡಿವ್ಯಾಪಾರಿಯು ಸತ್ಕರಿಸಿದನು. ರಾಣಿಯು ಬಹು ಆಯಾಸದಿಂದ ಸುದಾರಿಸಿಕೊಳ್ಳುವುದಕ್ಕಾಗಿ ಮುಸುಕನ್ನು ತೆಗೆದು, ತನ್ನ ಸೌಂದರ್ಯವನ್ನು ರತ್ನಪಡಿವ್ಯಾಪಾರಿಗೆ ತೋರಿಸಲು, ಆತನು ಆಹಾ! ಇಂತಹ ಸುಂದರಿಯನ್ನು ರಾಜಪುತ್ರನು ಮೋಹಿಸಿದುದು ನ್ಯಾಯವಾಗಿರಬಹುದು ಎಂದು ಯೋಚಿಸುತ್ತಿರುವಾಗ, ಷೇಮುಸೆಲ್‌ನೆಹರಳು, ರತ್ನಪಡಿವ್ಯಾಪಾರಿಯನ್ನು ಬಹು ಮರ್ಯಾದೆಯಿಂದನೋಡಿ, ಸಲಾಂಮಾಡಿದನಂತರ, ಅಯ್ಯಾ! ನೀನು ನನಗೂ ರಾಜಕುಮಾರನಿಗೂ ಉಪಕಾರ

ಮಾಡಬೇಕೆಂದಿರುವುದನ್ನು ಕೇಳಿ, ನಾನು ತುಂಬ ಸಂತೋಷಯುಕ್ತಳಾದೆನು, ಇದಕ್ಕೆ ತಕ್ಕಂತೆ ಯಾವ ಪ್ರತ್ಯುಪಕಾರವನ್ನೂ ಮಾಡಲಾರೆನು. ಇರ್ಷ್ಯತೆಹರನು ಹೊರಟುಹೋದ ನಮ್ಮವು ಭಗವಂತನ ದಯೆದಿಂದ ನಿನ್ನ ಮೂಲಕವಾಗಿ ಪೂರ್ತಿಯಾಗಬೇಕಾಗಿರುವುದೆಂದು ವಂದನೆಮಾಡಿದಳು. ಇ ತ್ರೆದು ಹೇಳಿ, ಪಹರಚೌಪಿಯು ಕಥೆಯನ್ನು ನಿಲ್ಲಿಸಿ, ಬೆಳಗಿನ ಜಾವದಲ್ಲಿ ಮುರಳಿ ಹೇಳಲಾರಂಭಿಸಿದಳು.

೨೦೧ನೆಯ ರಾತ್ರಿ ಕಥೆ.

ಬಳಿಕ ಪ್ರೇಮುಸೆಲ್‌ನೆಹರಳು ಬಹಳಹೊತ್ತಿನವರಿಗೂ, ನಾನಾ ವಿಷಯಗಳನ್ನು ಕುರಿತು ಮಾತನಾಡುತ್ತಿದ್ದು, ನಂತರ ಅರಮನೆಗೆ ಹೊರಟುಹೋದಳು. ಪರ್ಷಿಯಾ ರಾಜಕುಮಾರನನ್ನು ನೋಡಬೇಕೆಂದು, ವರ್ತಕನು ಆತನಬಳಿಗೆ ಬರಲು, ಅವನು ಬಹು ಮರ್ಯಾದೆಯಿಂದ ಆತನನ್ನು ಬರಮಾಡಿಕೊಂಡು, ಅಯ್ಯಾ! ನೀನು ಯಾವಾಗ ಬರುವೆಯೋ ಎಂದು, ನಾನು ಕಾದುಕೊಂಡಿದ್ದೆನು. ದಾದಿಯು ಕಾಗದವನ್ನು ತಂದಿದ್ದಳು. ಅದರಿಂದಲೂ, ನನಗೆ ತೃಪ್ತಿಯುಂಟಾಗಲಿಲ್ಲ, ರಾಣಿಯಕಡೆಯ ವರ್ತಮಾನವೂ ತಿಳಿಯಲಿಲ್ಲ. ಇರ್ಷ್ಯತೆಹರನು ಹೊರಟುಹೋದಬಳಿಕ, ನನಗೆ ಮಹತ್ತಾದ ವ್ಯಸನ ಉಂಟಾಯಿತು ರಾಣಿಯಕಡೆಯ ವರ್ತಮಾನವನ್ನು ತಂದು ಹೇಳುವುದಕ್ಕೆ ಆತನೇ ಮೂಲಕಾರಣನೆಂದು ನಂಬಿ, ಆತನಿಂದ ನನ್ನ ಮನೋರಥಗಳೆಲ್ಲವನ್ನು ಸಾಧಿಸಿಕೊಳ್ಳಬೇಕೆಂದು ಇದ್ದೆನಲ್ಲಾ! ಅಂತಹ ಮಿತ್ರನನ್ನು ಕಳೆದುಕೊಂಡಬಳಿಕ, ನನ್ನಗತಿ ಏನೆಂದು ಹಂಬಲಿಸುತ್ತಿರುವ ರಾಜಕುಮಾರನನ್ನು ಸಮಾಧಾನ ಮಾಡಿ, ತಾನು ತಂದಿರುವ ಶುಭಸೂಚಕವಾದ ವಾರ್ತೆಯನ್ನು ಆತನಿಗೆ ತಿಳಿಸಿ, ಪ್ರೇಮುಸೆಲ್‌ನೆಹರಳೊಡನೆ ತಾನು ಮಾತನಾಡಿದುದನ್ನು ಹೇಳಿ, ರಾಜಕುಮಾರನು ಸಂತೋಷವನ್ನು ಹೊಂದುವುದಕ್ಕಾಗಿ, ತಾನು ಹೇಳಬೇಕಾದ ಸಂಗತಿಗಳನ್ನೆಲ್ಲಾ ಸಂಪೂರ್ಣವಾಗಿ ಹೇಳಲು, ರಾಜಪುತ್ರನು ಆದರಪುರಸ್ಸರವಾಗಿ ಆತನ ಮಾತುಗಳನ್ನು ಕೇಳುತ್ತಿದ್ದು, ಆದರಿಸಿದಬಳಿಕ ರತ್ನಪಡಿವ್ಯಾಪ್ತಾರಿಯು ತನ್ನಮನೆಗೆ ಬರಲು, ರಾಣಿಯಕಡೆಯಿಂದ ತಾಪಿಯೊಬ್ಬಳು ಮನೆಗೆಬಂದು ಕಾದುಕೊಂಡಿದ್ದು, ರಾಜಕುಮಾರನನ್ನು ಸಂಧಿಸುವುದಕ್ಕೆ ನಿನ್ನ

ಮನೆಯಲ್ಲೀ ಅನುಕೂಲಪಡಿಸಬೇಕೆಂದು, ರಾಣಿಯವರು ಹೇಳಿರುವರೆಂದು ನುಡಿಯಲು, ರತ್ನಪಡಿವ್ಯಾಪಾರಿಯು, ನಾನು ಅವರವಾತಿಗೆ ಸಮ್ಮತಿಸಿದರೂ, ನನಗೆ ಪ್ರತ್ಯೇಕವಾಗಿ ಯಾರೂ ವಾಸವಾಡದಿರುವ ಒಂದು ಮನೆ ಉಂಟು. ರಾಣಿಯವರು ಅಲ್ಲಿಗೆ ಬರುವ್ರದಾದರೆ, ಸರ್ವರಿಗೂ ಅನುಕೂಲವಾಗಿರುವುದು. ಇದನ್ನು ನಿಮ್ಮ ರಾಣಿಗೆ ತಿಳಿಸಿ, ಅವರ ಅಭಿಪ್ರಾಯವನ್ನು ತಿಳಿದುಕೊಂಡು ಬಾರೆಂದು ಹೇಳಲು, ರಾಣಿಯು ಬಹು ಜಾಗ್ರತೆಯಿಂದ ಅರಮನೆಗಹೋಗಿ, ಹಿಂದಿರುಗಿಬಂದು ರತ್ನಪಡಿವ್ಯಾಪಾರಿಯನ್ನು ಕುರಿತು, ಅಯ್ಯಾ! ಈದಿನ ರಾಣಿಯವರು ಬಹು ಸಂತೋಷದಿಂದ ಅಲ್ಲಿಗೆ ಬರುತ್ತಾರೆಯಂತೆ. ಇದೋ ಬೇಕಾದ ಸಾಮಾನುಗಳನ್ನು ಸಿದ್ಧಪಡಿಸಿಕೊಳ್ಳುವುದಕ್ಕಾಗಿ, ಈ ಹಣದ ತೈಲಿಯನ್ನು ಕೊಟ್ಟಿರುವರೆಂದು ಹೇಳಿ, ಬೇಕಾದ ಫಲಾಹಾರದ ದಿನಸುಗಳನ್ನು ತರುವಂತೆ ಗೊತ್ತುಮಾಡಿ, ಮನೆಯನ್ನು ಅಲಂಕರಿಸಲು ತಾನು ನಿಂತುಕೊಂಡಳು.

ರತ್ನಪಡಿವ್ಯಾಪಾರಿಯು ಸಮಸ್ತ ಕಾರ್ಯಗಳನ್ನು ಸಿದ್ಧವಾಡಿ, ರಾಜಪುತ್ರನಬಳಿಗೆ ಬಂದು, ನಿನ್ನನ್ನು ರಾಣಿಯಬಳಿಗೆ ಕರೆದುಕೊಂಡು ಹೋಗುವುದಕ್ಕಾಗಿ ಒಂದಿರುವೆನೆಂದು ಹೇಳಿದನು. ಕೂಡಲೆ ರಾಜಪುತ್ರನು ಅತ್ಯಾನಂದಭರಿತನಾಗಿ, ಉತ್ತಮವಾದ ವಸ್ತ್ರಗಳನ್ನು ಧರಿಸಿಕೊಂಡು, ಸಂತೋಷಯುಕ್ತನಾಗಿ ನಲಿಯುತ್ತ, ಇಬ್ಬರು ಚಾಕರರನ್ನು ಸಂಗಡ ಕರೆದುಕೊಂಡು, ತನ್ನ ರತ್ನಪಡಿವ್ಯಾಪಾರಿಯ ಜೊತೆಯಲ್ಲಿ ಹೊರಟನು. ಆತನು ತಾಪ್ರ ಗೋಪ್ಯವಾಗಿ ಸಂಚರಿಸಬೇಕೆಂಬ ನೆವದಿಂದ ಸಂದುಗೊಂದುಗಳಲ್ಲಿ ಸುತ್ತಿಸಿ, ಒಳಿಕ ಸಂಕೇತಭವನಕ್ಕೆ ಕಾಬೆಕರವಾರನನ್ನುಕರೆದು, ಕೊಂಡು ಬಂದನು. ರಾಜಪುತ್ರನು ಒಹು ಸಂಭ್ರಮದಿಂದ ಅಲ್ಲಿನ ಆನಂದಗಳನ್ನು ನೋಡುತ್ತಾ, ಸೋಫಾದವಲೆ ಕುಳಿತುಕೊಂಡು, ರಾಣಿಯು ಬರುವವರಿಗೂ, ಏನೋದವಾಗಿ ಮಾತನಾಡುತ್ತಿದ್ದನು. ರಾಣಿಯು ಸಂಧ್ಯಾಕಾಲದ ಪಾರ್ಥನೆಯನ್ನು ಮುಗಿಸಿಕೊಂಡು, ವಸ್ತ್ರಾಲಂಕಾರಭೂಷಿತಳಾಗಿ, ಇಬ್ಬರು ದಾದಿಯರನ್ನೂ ತನ್ನ ನಂಬಿಕೆಗಪಾತ್ರಳಾದ ಸಖಿಯರನ್ನುಸಹ, ಕರೆದುಕೊಂಡು, ಗೂಢವಾಗಿ ಪ್ರಯಾಣಮಾಡಿ, ಸಂಕೇತಭವನಕ್ಕೆ ಬಂದಳು. ಕೂಡಲೆ ಕಾಮುಕರಾದ ಆ ರಾಜಕುಮಾರನ ಮತ್ತು

ರಾಣಿಯೆ ಆನಂದವನ್ನು ಇಂತೆಂದು ಹೇಳುವುದಕ್ಕಾಗದಂತೆ, ಅಲ್ಲಿದ್ದವರೆಲ್ಲರೂ ನೋಡಿ ಆಶ್ಚರ್ಯಯುಕ್ತರಾದರು. ಅವರಿಬ್ಬರೂ ಪರಸ್ಪರ ಆಲಿಂಗನಾದಿ ಕಾರ್ಯಗಳನ್ನು ಮಾಡಿಕೊಂಡು, ಬಂದು ಮಂಚದವೀಲೆ ಕುಳಿತು ವಿನೋದವಾಗಿ ಮಾತನಾಡಿದನಂತರ, ತಂತಮ್ಮ ಕಷ್ಟಗಳನ್ನು ಕುರಿತು ಮಾತನಾಡಿಕೊಂಡರು. ಅದನ್ನು ಕೇಳಿ ಅಲ್ಲಿದ್ದವರೆಲ್ಲರಿಗೂ ವ್ಯಸನ ಉಂಟಾಯಿತು. ನಂತರ ಷೇಮುಸೆಲ್‌ನೆಹರಳು ರತ್ನಪಡಿವ್ಯಾಪಾರಿಯನ್ನು ವೀಣೆ ಮೊದಲಾದ ವಾದ್ಯಗಳೇನಾದರೂ ಉಂಟೆ ಎಂದು ಪ್ರಶ್ನೆ ಮಾಡಲು, ಕೆಲವು ಸಖಿಯರು ವೀಣೆಯನ್ನು ಬಾಜಿಸುತ್ತಿದ್ದರು. ಇಂತೆಂದು ಹೇಳಿ, ಷಹರಜಾದಿಯು ಬೆಳಗಾದಕೂಡಲೆ, ಕಥೆಯನ್ನುನಿಲ್ಲಿಸಿ, ಮರಳಿ ಬೆಳಗಿನ ಜಾವದಲ್ಲಿ ಪುನಹ ಹೇಳಲಾರಂಭಿಸಿದಳು

೨೨೨ ನೆಯ ರಾತ್ರಿ ಕಥೆ.

ಷೇಮುಸೆಲ್‌ನೆಹರಳು ವೀಣಾವಾದ್ಯವನ್ನು ಕೇಳುತ್ತ ತನ್ನ ಪ್ರಾಣನಾಯಕನಾದ ರಾಜಕುಮಾರನೊಡನೆ, ಹಿಂದುಮುಂದನ್ನುಯೋಚಿಸದೆ ಸರಸಸಲ್ಲಾಪಗಳನ್ನಾಡುತ್ತಿರುವಾಗ, ತಲಬಾಗಿಲಲ್ಲಿ ಮಹತ್ತಾದ ಗಲಬಿಲಿ ಉಂಟಾಯಿತು. ರತ್ನಪಡಿವ್ಯಾಪಾರಿಯ ಸೇವಕನೊಬ್ಬನು ಓಡಿಬಂದು ಅಯ್ಯಾ! ಬಾಗಿಲಬಳಯಲ್ಲಿ ಯಾರೋ ಕತ್ತಿಗಳನ್ನು ಸನೀನುಗಳನ್ನು ಹಿಡಿದುಕೊಂಡಬಂದು, ಬಾಗಿಲು ತಟ್ಟಿ ಬಹಳವಾಗಿ ಗಲಾಟೆ ಮಾಡುತ್ತಿರುವರು. ಯಾರೆಂದು ಕೇಳಿದರೂ, ಪ್ರತ್ಯುತ್ತರವನ್ನು ಹೇಳದೆ ಬಾಗಿಲನ್ನು ಬಡಿಯುತ್ತಿರುವರೆಂದಾ ಹೇಳಲು, ವರ್ತಕನು ಭಯಗ್ರಸ್ತನಾಗಿ ಅದನ್ನು ವಿಚಾರಿಸಬೇಕೆಂದು ಬಾಗಿಲನ್ನು ತೆರೆದು ನೋಡಲು ಆಯುಧಪಾಣಿಗಳಾದ ಹತ್ತುಜನರು, ಅಟ್ಟಹಾಸದಿಂದ ನೂಕಿಕೊಂಡು, ಬರುತ್ತಿರುವುದನ್ನು ಕಂಡು, ಅವರು ಕಳ್ಳೀಫರಕಡೆಯ ಭಟರಾಗಿರಬೇಕು. ಇವರಕೈಗೆ ಸಿಕ್ಕಿದರೆ ತನ್ನ ಪ್ರಾಣವು ಉಳಿಯುವುದಿಲ್ಲವೆಂದು ತಿಳಿದು, ಒಂದು ಗೋಡೆಯಬಳಯಲ್ಲಿ ಮರೆಯಾಗಿದ್ದು, ಅಯ್ಯೋ! ರಾಣಿಗೂ, ರಾಜಪುತ್ರನಿಗೂ, ನಾನು ಸಹಾಯ ಮಾಡಲಾರದೆ ಹೋದೆನಲ್ಲಾ! ಅವರಿಬ್ಬರೂ, ಯಾವ ನಿಶ್ಚಿತಿಯನ್ನು ಹೊಂದುವರೋ ಕಾಣೆ. ಇವರುಖಂಡಿತವಾಗಿಯೂ ರಾಜಭಟರೇ ಹೌದು. ರಾಜರಿಗೆ ಈ ವಾರ್ತೆಯು ತಿಳಿದು

ಅವರು ಈ ಭಟರನ್ನು ಕಳುಹಿಸಿರಬಹುದು. ಹಾ! ರಾಜಪುತ್ರನ ಮತ್ತು ರಾಣಿಯ ದುರವಸ್ಥೆಯನ್ನು ಕುರಿತು, ನಾನೇನೂ ಸಹಾಯ ಮಾಡಲಾರದೆ ಹೋದೆನಲ್ಲಾ! ಅಕಟಾ! ಎಂದು ಹೊರಳುತಾ, ಅರ್ಧರಾತ್ರಿಯವರಿಗೂ ಸುಮ್ಮನಿದ್ದ, ನಂತರ ಗದ್ದಲವು ಅಣಗಿಹೋದಮೇಲೆ, ತನ್ನ ಚಾರಕನಿಂದ ಬಂದು ಕತ್ತಿಯನ್ನೀಸಿಕೊಂಡು, ಬಾಗಿಲಿಗೆಬಂದು, ಯಾರು, ಯಾರು, ಎಂದು ಕೂಗಲು, ಪ್ರತ್ಯುತ್ತರವು ಬಂದಕೂಡಲೆ, ತನ್ನ ಚಾಕರನೆಂದು ತಿಳಿದು ರತ್ನಪಡಿವ್ಯಾಪಾರಿಯು, ಆತನನ್ನು ಇಲ್ಲಿಗೆಬಂದು ಗದ್ದಲವನ್ನು ಮಾಡಿದವರು ಯಾರು? ಆಗ ನೀನು ಎಲ್ಲಿಹೋಗಿದ್ದೆ? ಎಂದನು. ಭಟರು ಅಯ್ಯಾ! ನಾನು ಈ ಕೈಸಾಲೆಯ ಸೋಡೆಯ ಮರೆಯಲ್ಲಿ ಅಡಗಿಕೊಂಡಿದ್ದೆನು. ಇಲ್ಲಿಗೆ ಬಂದು ಗದ್ದಲ ಮಾಡಿದವರು ರಾಜಭಟರಲ್ಲ. ಮತ್ತಾರೆನ್ನುವಿರೋ, ಮೂರುದಿನಗಳ ಮುಂಚೆ, ಇಲ್ಲಿನ ಭಾರಿ ಸಾಹುಕಾರನ ಮನೆಯನ್ನು ದೋಚಿಕೊಂಡುಹೋದ ದಾರಿಹೋಕರು ಈದಿನ ನೀನು ಉತ್ತಮವಾದ ಸಾಮಾನುಗಳನ್ನು ತೆಗೆದುಕೊಂಡುಬಂದ ವರ್ತಮಾನವನ್ನು ಕೇಳಿ, ಇಲ್ಲಿಗೆ ಬಂದು ದೋಚಿಕೊಂಡು ಹೋಗಿರಬೇಕೆಂದು, ನನಗೆ ತೋರುವುದೆಂದು ಹೇಳಿದನು.

ಅಲ್ಲಿಂದ ಹೊರಟು ರತ್ನಪಡಿ ವ್ಯಾಪಾರಿಯು ಒಳಹೊಕ್ಕು ನೋಡುವಲ್ಲಿ, ಹೇಮುಸೆಲ್‌ನೆಹರಳೂ, ಅವಳ ಆಭರಣಗಳೂ, ಮನೆಯಲ್ಲಿ ಇದ್ದ ಇತರ ಸಾಮಾನುಗಳೂ ಇಲ್ಲದಿರವುದನ್ನು ಕಂಡು, ಹಾ! ದೈವವೇ! ನಾನು ಸಂಪೂರ್ಣವಾಗಿ ಮುಳುಗಿಹೋದೆನಲ್ಲಾ! ನನ್ನ ಮಿತ್ರರ ಮನೆಯಿಂದ ಎರವಾಗಿ ತೆಗೆದುಕೊಂಡುಬಂದಿದ್ದ ಸಾಮಾನುಗಳನ್ನು ತೆಗೆದುಕೊಂಡುಹೋದರಲ್ಲಾ! ನಾನು ಅವರಿಗೇನು ಜವಾಬು ಹೇಳಲಿ! ಅವುಗಳ ಬೆಲೆಯು ಅತ್ಯಧಿಕವಾದವುಗಳಾದುದರಿಂದ, ನಾನು ಅದನ್ನು ಕೊಡುವುದಕ್ಕೆ ಕೂಡ ಶಕ್ತನಾಗಿಲ್ಲವಲ್ಲಾ! ಅಯ್ಯೋ! ನನ್ನ ಪರಮಮಿತ್ರರಾದ ರಾಣಿಯೂ, ರಾಜಪುತ್ರರೂ, ಏನಾದರೋ ತಿಳಿಯದಲ್ಲಾ! ಅವರೂಕೂಡ ನನ್ನ ವಿಷಯದಲ್ಲಿ ಏನು ಅನುಮಾನ ಪಟ್ಟುಕೊಂಡರೋ ತಿಳಿಯದು. ಸರ್ವ ಪ್ರಕಾರದಿಂದಲೂ, ನಾನು ಕೆಟ್ಟೆನೆಂದು ಪ್ರಲಾಪಿಸುತ್ತಿರಲು, ಆತನ ಮುಖ್ಯಸೇವಕರಲ್ಲೊಬ್ಬನು ಆತನನ್ನು ನೋಡಿ, ಅಯ್ಯಾ! ರಾಣಿಯು

ಕಳ್ಳರುಬಂದರೆಂದುತಿಳಿದು, ತನ್ನದಾದಿಯೆರೊಡನೆ ತಪ್ಪಿಸಿಕೊಂಡು ಹೋಗಿ, ಅರಮನೆಯನ್ನು ಸೇರಿರಬಹುದು. ರಾಜಪುತ್ರನೂ, ಅದೇರೀತಿಯಾಗಿ ಮಾಡಿರಬಹುದೆಂಬುವುದಕ್ಕೆ ಸಂದೇಹವೇ ಇಲ್ಲ. ಆದರೆ ನೀನು ತಂದಿದ್ದ ಸ್ನೇಹಿತರ ಪದಾರ್ಥಗಳು ಹೋದುದಕ್ಕಾಗಿ, ವ್ಯಸನ ಪಡಬೇಕಾಗಿದೆ. ಅಸಾಧ್ಯವಾದ ಕಾರ್ಯಕ್ಕಾರುತಾನೆ ಏನುಮಾಡಬಲ್ಲರು. ಅವರವರ ಸಾಮಾನುಗಳಿಗೆ ತಕ್ಕ ಜೆಲಿಯನ್ನು ನೀನು ಹಿಂದಿರುಗಿ ಕೊಡುವದಾದರೆ ನಿನಗಾವ ತೊಂದರೆಯೂ ಇಲ್ಲ. ದೇವರು ನಿನಗೆ ತಕ್ಕ ಅನುಕೂಲವನ್ನು ಕೊಟ್ಟೇ ಇರುವನು. ಆದುದರಿಂದ ಯೋಚಿಸಿ ಪ್ರಯೋಜನವಿಲ್ಲ. ಆಕಳ್ಳರು ಈ ಊರಲ್ಲಿ ಬಹುಮಂದಿಗಳ ಮನೆಯನ್ನುನುಗ್ಗಿ ಸರ್ವಸ್ವವನ್ನು ದೋಚಿ ಕೊಂಡುಹೋಗಿರುವ ವಾರ್ತೆಯು ಸರ್ವರಿಗೂ ತಿಳಿದೇ ಇರುವುದು. ಆದು ದರಿಂದ ನೀನು ಭಯಪಡಬೇಕಾದ ಅಗತ್ಯವಿಲ್ಲ.

ಆದರೆ ಆ ಕಳ್ಳರು ನಮ್ಮ ಪ್ರಾಣಗಳನ್ನು ತೆಗೆದುಕೊಂಡುಹೋಗ ಲಿಲ್ಲವಲ್ಲಾ ! ಎಂದು ಹೇಳಿದನು. ಬಿಳಗಾದಕೂಡಲೆ ವರ್ತಕನು ತನ್ನ ಮನೆಯ ಒಡೆದುಹೋದ ಬಾಗಿಲುಗಳನ್ನು ಸರಿಮಾಡಿಸಿ, ತಾನು ವಾಸ ಮಾಡುವ ಮನೆಗೆ ಬಂದು, ಆಹಾ ! ಇರ್ಬ್ಬತೆಹರನು ನನಗಿಂತಲೂ, ಬುದ್ಧಿ ವಂತನಾದುದರಿಂದ, ಇಂತಹ ಅಸಾಧ್ಯವಾದ ಕಾರ್ಯದಲ್ಲಿ ಪ್ರವರ್ತಿಸಿ, ಕಷ್ಟಗಳನ್ನು ಅನುಭವಿಸಲಾರದೆ, ತಪ್ಪಿಸಿಕೊಂಡನು. ಇಂತಹ ಕೃತ್ಯ ದಲ್ಲಿ ಬಳಹೊಕ್ಕಿರುವ, ನನ್ನ ಪ್ರಾಣವು ಹೋಗುವದೊಂದತಿಶಯವೇ ? ಎಂದು ಚಿಂತಿಸುತ್ತಿದ್ದನು. ಹೀಗೆ ರತ್ನಪಡಿವ್ಯಾಪಾರಿಯ ಮನೆಯಲ್ಲಿ ಕಳ್ಳರು ದೋಚಿಕೊಂಡರೆಂಬ ವರ್ತಮಾನವು ಆ ಊರಲ್ಲೆಲ್ಲ ಹರಡಿಕೊ ಳ್ಳಲು, ಸ್ನೇಹಿತರೆಲ್ಲರೂ ತಂಡತಂಡವಾಗಿ ಬಂದು, ಆತನಿಗೆ ಸಮಾಧಾನೋಕ್ತಿ ಗಳನ್ನುಹೇಳಿ ಹೋಗುತ್ತಾ ಇದ್ದರು. ರತ್ನಪಡಿವ್ಯಾಪಾರಿಯಾದರೋ ಅವರ ದಯಾರಸವನ್ನು ಕೊಂಡಾಡುತ್ತಾ, ವಂದನೆಗಳನ್ನು ಸಮರ್ಪಿಸಿ, ಅವರನ್ನು ಕಳುಹಿಸಿಕೊಟ್ಟನು. ಆದರೆ ಬಂದು ಮಾತನಾಡಿದ ತನ್ನ ಸ್ನೇಹಿತರಾರು. ರಾಣಿಯ ಅಥವಾ ರಾಜಪುತ್ರನ ವಾರ್ತೆಯನ್ನೇನೂ ಹೇಳ ದಿದ್ದುದರಿಂದ. ಅವರಿಬ್ಬರೂ ಸುಖವಾಗಿ ತಂತಮ್ಮ ಮನೆಗಳನ್ನು ಸೇರಿ ಕೊಂಡಿರಬೇಕೆಂದುತಿಳಿದು, ತಾನು ಸ್ವಸ್ಥಮಾನಸನಾಗಿದ್ದನು, ಸ್ನೇಹಿತರು

ಎಲ್ಲರೂ ಹೊರಟುಹೋದಬಳಿಕ, ರತ್ನಪಡಿವ್ಯಾಪಾರಿಯು ಊಟಮಾಡುವುದಕ್ಕೂ, ಮನಸ್ಸಿನಲ್ಲಿದೆ ಸುಮ್ಮನೆ ಕುಳಿತಿದ್ದನು. ಆಗ ಬಾಗಿಲಬಳಿ ಇದ್ದ ಚಾರಕನೊಬ್ಬನು, ಓಡಿಬಂದು ಅಯ್ಯಾ! ನಾನು ಯಾವಾಗಲೂ ಗುರುತುಕಂಡಿದ್ದ ಒಬ್ಬಾಬ್ಬನೊಬ್ಬ ಮನುಷ್ಯನು, ನಿನ್ನನ್ನು ನೋಡುವುದಕ್ಕಾಗಿ ಬಂದಿರುವೆನೆಂದು ನುಡಿಯಲು, ಆತನನ್ನು ಮನೆಯೊಳಕ್ಕೆ ಬರಮಾಡಿಕೊಳ್ಳುವುದಕ್ಕೆ, ರತ್ನಪಡಿವ್ಯಾಪಾರಿಗೆ ಮನಸ್ಸುಬಾರದೆ, ತಾನೇ ಬಾಗಿಲಿಗೆಬಂದು ಅಯ್ಯಾ! ನೀನು ಯಾರೆಂದು ಕೇಳಲು, ಆತನು ಮಿತ್ರನೇ! ನೀನು ನನ್ನ ಗುರುತನ್ನು ಮರೆತಿದ್ದರೂ, ನಾನು ನಿನ್ನನ್ನು ಪರಿಚಯಸ್ಥನಂತೆ ಭಾವಿಸುವೆನೆಂದನು. ಹಾಗಾದರೆ ಒಳಗೆ ಬರಬಹುದಲ್ಲಾ ಎಂದು ರತ್ನಪಡಿವ್ಯಾಪಾರಿಯು ಹೇಳಲು, ಆತನು ಅಯ್ಯಾ! ಇಲ್ಲಿಗಿಂತಲೂ, ನಿನ್ನ ಮತ್ತೊಂದುಮನೆಗೆ ಹೋದರೆ, ಬಹಳಚೆನ್ನಾಗಿರುವುದಲ್ಲಾ ಎಂದನು.

ರತ್ನಪಡಿವರ್ತಕನು ಅಯ್ಯಾ! ನನಗೆ ಮತ್ತೊಂದುಮನೆ ಇರುವುದು ನಿನಗೆ ಹೇಗೆ ತಿಳಿದಿರುವುದೆನಲು, ನನಗೆ ಚೆನ್ನಾಗಿ ತಿಳಿದಿರುವುದು. ಬಾ! ಹೆದರಬೇಡ. ಸಂತೋಷಕರವಾದ ವರ್ತಮಾನವನ್ನು ಹೇಳುವೆನೆಂದಕೂಡಲೆ, ರತ್ನಪಡಿವ್ಯಾಪಾರಿಯು ಬೇಗನೆದ್ದು ಆತನ ಜೊತೆಯಲ್ಲಿ ಹೋಗುತ್ತಾ, ಹೊಸಬನನ್ನು ಕುರಿತು, ಅಯ್ಯಾ! ಆ ಮನೆಯು ನಿನ್ನನ್ನು ಬರಮಾಡಿಕೊಳ್ಳುವುದಕ್ಕೆ ಯೋಗ್ಯವಾಗಿಲ್ಲವೆಂದು ಹೇಳಿದನು. ನಂತರ ಅವರಿಬ್ಬರೂ ಹೊರಟುಬರುತ್ತಾ ದಾರಿಯಲ್ಲಿ ಸಿಕ್ಕಿದ, ಆ ಮನೆಯನ್ನು ನೋಡಿ, ಅಲ್ಲಿಂದ ಯಾವುದೋ ಮಾರ್ಗದಲ್ಲಿ ನಡೆದು ಬಹುದೂರ ಬಂದುದರಿಂದ ರತ್ನಪಡಿವರ್ತಕನು ತುಂಬಆಲಸ್ಯವಂತನಾದನು. ಆದರೂ, ಆ ಮನುಷ್ಯನು ಆತನನ್ನು ಟೈಗ್ರಿದ್ ನದಿಯಿಂಬಳಿಗೆ ಕರೆದುತಂದು, ದೋಣಿಯಿಂದ ಅದನ್ನು ದಾಟಿ ನಂತರ ರತ್ನಪಡಿವರ್ತಕನು ತನ್ನ ಪುರುಷಾಯುಸ್ಸಿನಲ್ಲಿ ನೋಡದಿರುವಂತಹ ಒಂದುಮಾರ್ಗದಲ್ಲಿ ಕರೆದುಕೊಂಡು ಹೊರಟು ಒಂದಾನೊಂದುಮನೆಯನ್ನುಸೇರಿ, ಬಾಗಿಲನ್ನು ಹಾಕಿಕೊಂಡು, ಒಳಗಡೆ ಇರುವ ಅಂತರ್ಗೃಹಕ್ಕೆ ಕರೆದುಕೊಂಡುಹೋದನು. ಅಲ್ಲಿ ಇನ್ನು ಹತ್ತುಜನರಿದ್ದರು.ಅವರೆಲ್ಲರೂ, ಈತನಿಗೆ ಹೊಸಬರೇ ಆಗಿದ್ದರು. ಅವರೆಲ್ಲರೂ ಆತನಿಗೆ ವ್ಯರ್ಥವಾವ ಉಪಚಾರಗಳನ್ನು ಮಾಡದೆ ತಟಸ್ಥರಾಗಿ, ಬರಮಾಡಿಕೊಂ

ಡಗು. ನಂತರ ಆತನು ದಾರಿಯನ್ನು ನಡೆದುಬಂದ ಆಯಾಸದಿಂದಲೂ, ಹೊಸಬರ ಮಧ್ಯದಲ್ಲಿ ತಾನು ಒಂಟಿಯಾಗಿರುವ ಭಯದಿಂದಲೂ, ನಿಂತು ಕೊಳ್ಳಲಾರದೆ ಕುಳಿತುಕೊಂಡನು. ಆ ಜನರು ತಮ್ಮ ಯಜಮಾನನು ಬರುವವರೆಗೂ, ಕಾದುಕೊಂಡಿದ್ದು ಆತನು ಬಂದಮೇಲೆ ಕೈಕಾಲುಗಳನ್ನು ತೊಳೆದುಕೊಳ್ಳುವಂತೆ ಹೇಳಿ, ಎಲ್ಲರೂ ಕುಳಿತುಕೊಂಡು, ಒಟ್ಟಾಗಿ ಭೋಜನವಮಾಡಿದರು. ನಂತರ ಆತನು ಸುಮ್ಮನೆ ಸ್ವಸ್ಥವಾಗಿ ಕುಳಿತುಕೊಂಡಿರುವಾಗ, ಆ ಜನರ ಯಜಮಾನನು ಆತನನ್ನು ನೋಡಿ, ಅಯ್ಯಾ! ನಾವುಗಳು ಯಾರು ಬಲ್ಲೆಯಾ! ಎಂದು ಹೇಳಿದನು.

ಅದಕ್ಕಾತನು ಅಯ್ಯಾ! ನಾನು ನೀವಿರುವಸ್ಥಲವನ್ನಾಗಲಿ, ನಿಮ್ಮನ್ನಾಗಲಿ, ಎಂದೂ ನೋಡಿದವನಲ್ಲವೆಂದು, ರತ್ನಪಡಿ ವ್ಯಾಪಾರಿಯು, ಹೇಳಿದನು. ಓಹೋ! ಹಾಗಾದರೆ ಚಿಂತೆಯಿಲ್ಲ. ನಿನ್ನೆರಾತ್ರಿ ನಿನ್ನ ಮನೆಯಲ್ಲಿ ನಡೆದವರ್ತಮಾನವನ್ನು, ಮರೆಮಾಜದೆ ನನ್ನಸಂಗಡ ಹೇಳು. ನಿಜವಾದಸಂಗತಿಯನ್ನು ತಿಳಿದುಕೊಳ್ಳಬೇಕೆಂದು, ನಾವು ಕುತೂಹಲಿಸುತ್ತಿರುವೆನೆನಲು, ರತ್ನಪಡಿವ್ಯಾಪಾರಿಯು ಅಯ್ಯಾ! ಇದುವರಿಗೂ, ತಮಗೆ ತಿಳಿಯದಸಂಗತಿ ಯಾವುದೂ ಇಲ್ಲ. ಎಲ್ಲಪ್ರೂ ನಿಮಗೆ ಗೊತ್ತಾಗಿರುವುದಲ್ಲಾ! ಎಂದು ನುಡಿದಕೂಡಲೆ, ಕಳ್ಳರ ಯಜಮಾನನು ಅಯ್ಯಾ ನಿನ್ನೆ ರಾತ್ರಿ ನಿನ್ನ ಮನೆಯಲ್ಲಿದ್ದ ಯುವತಿಯೂ, ಯುವಕನೂಸಹ ಇಂಥವರೆಂದು, ನಾವು ತಿಳಿದಿದ್ದರೂ, ನಿನ್ನ ಬಾಯಿಯಿಂದ ನಿಜವಾದ ವರ್ತಮಾನವನ್ನು ಕೇಳಬೇಕೆಂದು, ಅಪೇಕ್ಷಿಸುತ್ತಿರುವೆನೆನಲು, ರತ್ನಪಡಿವ್ಯಾಪಾರಿಯು ಅವರು ಕಳ್ಳರ ಯಜಮಾನನೆಂದು ತಿಳಿದುಕೊಂಡು, ಅಯ್ಯಾ! ಆ ನಾಯಿಕಾನಾಯಕಿಯರ ವಿಷಯದಲ್ಲಿ ನಾನು ಬಹಳವಾಗಿ ದುಃಖಿಸುತ್ತಿರುವುದರಿಂದ ಅವರ ವಿಷಯವನ್ನು ಕುರಿತು, ನೀವು ಏನಾದರೂ ಹೇಳಬಲ್ಲಿರಾ ಎಂದು ಹೇಳಿದನೆಂದು, ಪಹರಜಾದಿಯು ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ, ಪುನಹ ಹೇಳಲಾರಂಭಿಸಿದಳು.



೨೦೪ ನೆಯ ರಾತ್ರಿ ಕಥೆ.

ರತ್ನಪಡಿವ್ಯಾಪಾರಿಯು ಷೇಮುಸೆಲ್‌ನೆಹರಿನ ಮತ್ತು ಪರ್ಷಿಯಾ ರಾಜಕುಮಾರನ ವಾರ್ತೆಯು ಕಳ್ಳರಿಗೆ ತಿಳಿದಿರಬಹುದೆಂದು, ಅವರನ್ನು ಕುರಿತು ವಿಚಾರಿಸಲು, ಕಳ್ಳರ ಯಜಮಾನನು ಆ ರತ್ನಪಡಿವ್ಯಾಪಾರಿಯನ್ನು ಕುರಿತು, ಅಯ್ಯಾ! ನೀನು ಕೇಳುತ್ತಿರುವ ಆ ಇಬ್ಬರುವ್ಯಕ್ತಿಗಳ ವಿಚಾರದಲ್ಲಿ, ಸ್ವಲ್ಪವೂ ಭಯಪಡಬೇಡ. ಅವರಿಬ್ಬರೂ ಸುರಕ್ಷಿತವಾಗಿ ಈ ಕೊಠಡಿಗಳಲ್ಲಿ ಇರುವರು. ಇವರ ವರ್ತಮಾನವು ನಿನಗಲ್ಲದೆ ಮತ್ತಾರಿಗೂ ತಿಳಿಯದೆಂದು, ನಾವು ಅವರ ಮುಖದಿಂದಲೇ ಕೇಳಿರುವೆವು. ಆದುದರಿಂದಲೇ ಇವರನ್ನು ಬಹು ಮರ್ಯಾದೆಯಿಂದ ನೋಡುತ್ತ, ಯಾವ ತೊಂದರೆಯನ್ನು ಮಾಡದೆ ಕ್ಷೇಮುಕೊಕ್ಕೇಸ್ಕರವಾಗಿ, ಸುಖದಿಂದ ಕಾಪಾಡಿಕೊಂಡು ಬರುತ್ತಿರುವೆವು. ಆದುದರಿಂದ ನೀನು ನಮ್ಮಗಳ ವಿಷಯದಲ್ಲಿ ಸಂಪೂರ್ಣವಾದ ನಂಬಿಕೆಯನ್ನು ಇಟ್ಟುಕೊಂಡಿರಬೇಕೆನಲು, ರತ್ನಪಡಿವ್ಯಾಪಾರಿಯು ರಾಜಪುತ್ರನ ಮತ್ತು ಷೇಮುಸೆಲ್‌ನೆಹರಳ ವರ್ತಮಾನವನ್ನು ಕೇಳಿದುದಕ್ಕಾಗಿ, ಬಹಳವಾಗಿ ಸಂತೋಷಿಸಿ, ಆ ಕಳ್ಳರನ್ನು ಬಹಳವಾಗಿ ಸೊತ್ತ ಮಾಡಿ, ಆಲಿಂಗಿಸಿಕೊಂಡು, ಅಯ್ಯಾ! ಘನವಂತರಿರಾ! ನಾನುನಿಮ್ಮಗಳಿಗೆ ಪರಿಚಯವಿಲ್ಲದವನಾದರೂ, ನೀವಾಗಿ ನನ್ನನ್ನು ಪರಿಚಯಸ್ಥನನ್ನಾಗಿ ಮಾಡಿಕೊಂಡುದರಿಂದ, ನಾನು ಧನ್ಯನಾದೆನು.

ನಿಮ್ಮಿಂದ ನನಗೆ ಮಹತ್ತಾದ ಉಪಕಾರ ಉಂಟಾದುದರಿಂದ, ನಾನು ಬಹಳವಾಗಿ ಕೃತಜ್ಞನಾಗಿರುವೆನು. ನಿಮ್ಮಲ್ಲಿ ದಯಾಪರತ್ವವು ಅಧಿಕವಾಗಿರುವುದಲ್ಲದೆ, ನಮ್ಮ ರಹಸ್ಯವನ್ನು ಗೋಪ್ಯವಾಗಿ ಕಾಪಾಡಬೇಕೆಂಬ ಕೋರಿಕೆಯು ಬಹಳವಾಗಿರುವುದು. ತಾವು ಇಂಥ ಘನವಂತರಾಗಿರುವುದರಿಂದ, ನಿರ್ಭಯವಾಗಿ ನಮ್ಮ ಕಾರ್ಯವನ್ನು ಸುಖದಿಂದ ನೆರವೇರಿಸಿಕೊಳ್ಳಬಹುದೆಂಬ ಯೋಚನೆಯಿಂದ, ನಿಮ್ಮಲ್ಲಿ ನಂಬಿಕೆಯನ್ನಿಟ್ಟು ನನ್ನ ಕಥೆಯನ್ನು ನನ್ನ ಮನೆಯಲ್ಲಿ ನೀವು ನೋಡಿದ ಆ ಇಬ್ಬರು ನಾಯಕ ನಾಯಕಿಯರ ಕಥೆಯನ್ನು ಹೇಳುವೆನೆಂದು ನುಡಿದು, ಷೇಮುಸೆಲ್‌ನೆಹರಳ ಮತ್ತು ಪರ್ಷಿಯಾ ರಾಜಕುಮಾರನ ಕಾಮುಕತ್ವವನ್ನು ಕುರಿತು,

ಬಹಳವಿನಾಗಿ ವಿಸ್ತರಿಸಿ, ಅವರನ್ನು ತನ್ನವುನೆಗೆ ಬರವುಾಡಿಕೊಂಡವರಿ ಯೆಂತವೂ, ಅನುವುಾನವಿಲ್ಲದಂತೆ ಹೇಳಿದನು, ಆ ಸಂಗತಿಯೆನ್ನು ಕೇಳಿ, ಕಳ್ಳರು ಆಹಾ! ಆತನು ಪರ್ಷಿಯಾ ರಾಜಕುವುಾರನೇ! ಆ ಸುಂದರಾಂಗಿ ಯಾದ ಲಲನಾವುಣಿಯು ರಾಣಿಯಾದ ಷೇವುುಸೆಲ್‌ನೆಹರಳೇ! ಅಯ್ಯೋ! ಇದನ್ನು ನಾವು ಹೇಗೆ ನಂಬುವುದಕ್ಕಾದೀತು ಎಂದು ಚಿಂತಿಸುತ್ತಿರಲು, ವರ್ತಕನು ಅಯ್ಯಾ! ನೀವುಗಳು ಪ್ರತ್ಯಕ್ಷವಾಗಿ ಅವರನ್ನು ಈಗ ಪರೀಕ್ಷಿಸಿನೋಡಿದರೆ, ಗೊತ್ತಾಗುತ್ತದೆಂದುನುಡಿದಕೂಡಲೆ, ಆ ಕಳ್ಳರು ವಿಸ್ಮಯಯುಕ್ತರಾಗಿ, ಪ್ರತಿ ಕೊಠಡಿಯ ಬಾಗಿಲನ್ನು ತೆರೆದು ಒಬ್ಬೊಬ್ಬರಾಗಿ ಒಳಹೊಕ್ಕು, ಅವುಾ! ತಾವು ಇಂಥವರೆಂದು ನವುಗೆ ವೊದಲೇ ತಿಳಿದಿದ್ದರೆ, ಈ ವರ್ತಕನ ವುನೆಯೆನ್ನು ನಾವೆಂದಿಗೂ ದೋಚಿಕೊಳ್ಳುತ್ತಿರಲಿಲ್ಲ. ಅಜ್ಞಾನವಶದಿಂದ ವುಾಡಿದ ವುಹಾಪರಾಧವನ್ನು ತಾವು ಸಂಪೂರ್ಣವಾಗಿ ವುನ್ನಿಸಬೇಕೆಂದು, ರಾಣಿಗೆ ನವುಸ್ಕರಿಸಿ ಬೇಡಿಕೊಂಡಂತೆಯೇ ರಾಜಪುತ್ರನನ್ನೂ ಬೇಡಿಕೊಂಡು, ಕ್ಷವುಾಪಣೆಯೆನ್ನು ಪಡೆದು, ರತ್ನಪಡಿವ್ಯಾಪಾರಿಯನ್ನು ಕುರಿತು, ಅಯ್ಯಾ! ನಿನ್ನವುನೆಯಲ್ಲಿ ದೋಚಿಕೊಂಡುಬಂದ ಪದಾರ್ಥಗಳನ್ನು ತಿರುಗಿ ಕೊಡುವುದಕ್ಕೆ ನಾವು ಶಕ್ತಹೀನರಾಗಿ ಇರುವುದಕ್ಕಾಗಿ, ಬಹಳವಾಗಿ ವ್ಯಸನಪಡುತ್ತಿರುವೆವು.

ಅವುಗಳಲ್ಲಿ ಬಹುಭಾಗವು ಖರ್ಚಾಗಿಹೋಯಿತು. ಇಗೋ! ಉಳಿದಿರುವ ಈ ಪದಾರ್ಥಗಳನ್ನು ತೆಗೆದುಕೊಂಡು ಹೋಗುವುದಕ್ಕೆ ನೀನು ಒಪ್ಪುವುದಾದರೆ, ಕೊಡುವುದಕ್ಕೆ ಸಿದ್ಧರಾಗಿರುವೆವೆಂದು ನುಡಿದನು. ಬಳಿಕ ರಾಜಕುವುಾರನ ವುತ್ತು ರಾಣಿಯ ವುುಖವನ್ನು ನೋಡಿ, ನವ್ಮ ವಾಸಸ್ಥಾನವನ್ನೂ, ನಾವು ವುಾಡುತ್ತಿರುವ ಜೀವನದತೆರವನ್ನೂ, ತಾವು ಹೊರಹಾಕದೆ ಗೋಪ್ಯವಾಗಿಟ್ಟುಕೊಂಡು, ನವ್ಮನ್ನು ರಕ್ಷಿಸುತ್ತೀವೆಂದು, ನೀವು ಖಂಡಿತವಾದ ಪ್ರವುಾಣವನ್ನು ವುಾಡುವುದಾದರೆ, ಸುರಕ್ಷಿತವಾಗಿ ನೀವು ವುನೆಯನ್ನು ಸೇರುವಂತೆ ವುಾಡುವೆನೆನಲು, ರಾಣಿಯು ರಾಜಕುವುಾರನು ಅದರಂತೆಯೇ ಪ್ರವುಾಣ ವುಾಡಿದುದರಿಂದ, ಕಳ್ಳರು ಅವರನ್ನು ಕರೆದುಕೊಂಡು ಹೊರಟರು. ರತ್ನಪಡಿವ್ಯಾಪಾರಿಯು ಉಳಿದಿದ್ದ ತಬ್ಬಿಗಳನ್ನು ತೆಗೆದುಕೊಂಡು, ಅವರನ್ನು ಹಿಂಬಾಲಿಸಿದನು. ದಾರಿಯೆಲ್ಲ ಬರುತ್ತಾ ಷೇವುುಸೆಲ್‌ನೆಹರಳು ರತ್ನಪಡಿವ್ಯಾಪಾರಿಯುಸಹ ತವ್ಮ

ಬ
ನ
ರ
ಗ

ದ
ಕ
ರ
ನ

ಕೊ
ಯ
ನ್ನ
ತ
ಆ
ಗ
ಒ
ಅ
ಚ
ರ
ಬ
ಿ
ಇ
ಗ

ಹೋಗುವುದಕ್ಕೆ ಅಪ್ಪಣೆಯನ್ನು ಬೇಡಲು, ಸನ್ನೆಮಾಡಿ ಅಪ್ಪಿಕೊಂಡು ಚಾರಕನನ್ನು ಬರಮಾಡಿ, ತಟ್ಟೆಗಳನ್ನು ಹೊತ್ತುಕೊಂಡುಹೋಗಿ, ರತ್ನಪಡಿವಾ ವ್ಯಾಪಾರಿಯ ಮನೆಗೆ ತಲಪಿಸುವಂತೆ, ಸಂಜ್ಞೆಮಾಡಿ ತೋರಿಸಿದನು. ರತ್ನಪಡಿವ್ಯಾಪಾರಿಯು ಹೊರಟುಹೋಗಿ ಮೂರುದಿನಗಳಾದರೂ, ಮನೆಗೆ ಬಾರಲಿಲ್ಲವಲ್ಲಾ! ಏನಾದನೋ ತಿಳಿಯದೆಂದು, ಆತನ ಸೇವಕರೂ, ಪತ್ನಿಪುತ್ರರೂಸಹ ಬಹಳವಾಗಿ ಚಿಂತಿಸುತ್ತಿದ್ದರು. ಆದರೆ ಆತನು ಮನೆಗೆ ಬಂದಕೂಡಲೆ ಅವರಿಗುಂಟಾದ ಆನಂದವನ್ನು ಇಷ್ಟೇ ಸರಿಯೆಂದು, ನಿರ್ಧರಿಸಿ ಹೇಳುವುದಕ್ಕೆ ಮಾತ್ರಾರಿಂದಲೂ, ಆಗದೆಹೋಯಿತು. ಬಹಳವಾಗಿ ಆನಂದಯುಕ್ತನಾಗಿದ್ದ ವರ್ತಕನು ಎರಡುದಿನಗಳವರಿಗೂ, ಸುದಾರಿಸಿಕೊಂಡು ಭಯದಿಂದ ನಡುಗುತ್ತಾ, ರಾತ್ರಿಕಾಲದಲ್ಲಿ ನಿದ್ರೆ ಇಲ್ಲದೆ ತುಂಬ ಭೀತನಾಗಿದ್ದರೂ, ಮೂರನೆಯ ದಿನದ ಹೊರಟು ಸ್ವಲ್ಪ ನಿರ್ಮಲವಾದ ಗಾಳಿಯಲ್ಲಿ ತಿರುಗಾಡಿಕೊಂಡು ನಗರಬೀಳೆಂದು, ಪೇಟೆಗೆ ಬಂದು, ತನ್ನ ಆಪ್ತಮಿತ್ರನಾದ ಒಬ್ಬ ವರ್ತಕನ ಅಂಗಡಿಯನ್ನು ಸೇರಿ, ಬಹಳಹೊತ್ತಿನವರಿಗೂ ಮಾತನಾಡುತ್ತ ಕಾಲವನ್ನು ಕಳೆಯುತ್ತಿದ್ದನು.

ಈ ಮಧ್ಯೆ ರಾಣಿಯ ದಾದಿಯೊಬ್ಬಳು ಬಂದು, ಆತನನ್ನು ಸನ್ನೆಮಾಡಿ ಕರೆಯಲು, ಆತನು ಕಾಣದವನಂತೆ ದಿಗ್ಗನೆ ಎದ್ದು ಸಮ್ಮನೆ ಹೊರಟುಹೋದನು. ಈ ಸ್ಥಲದಲ್ಲಿ ಮಾತನಾಡುವುದಕ್ಕೆ ಅವಕಾಶವಿಲ್ಲವೆಂದು ತಿಳಿದು, ದಾದಿಯು ಆತನನ್ನು ಹಿಂಬಾಲಿಸಿ ಹೊರಟುಬರುತ್ತಾ, ವೇಗವಾಗಿ ನಡೆದುಹೋಗುತ್ತಿರುವ, ರತ್ನಪಡಿವಾ ವ್ಯಾಪಾರಿಯನ್ನು ಹೊಂದಲಾರದೆ, ನಿಲ್ಲು, ನಿಲ್ಲು, ಸ್ವಲ್ಪ ನಿಲ್ಲು. ಒಂದೇವಂದು ಮಾತಿರುವುದೆಂದು ಬಹಳವಾಗಿ ಕೂಗಿಕೊಂಡಳು. ರತ್ನಪಡಿವಾ ವ್ಯಾಪಾರಿಯು ಬಹಿರಂಗವಾಗಿ ಈಕೆಯೊಡನೆ ತಾನು ಮಾತನಾಡಿದರೆ ತನಗೂ, ರಾಣಿಗೂ, ಏನೋ ಸಂಬಂಧವಿರುವುದೆಂದು ಜನ್ಮಾಗಿ ತೋರ್ಪಡಿಸಿದಂತೆ ಆಗುವುದೆಂದು ತಿಳಿದು, ಎಲ್ಲಿಯೂ, ಮಾತನಾಡದೆ ವೇಗವಾಗಿ ಹೋಗುತ್ತ ಕೊನೆಗೆ ಬಂದು ಮಸೀತಿಯಬಳಿಗೆ ಬಂದು, ಅಲ್ಲಿ ಯಾರೂ ಇಲ್ಲದಿದ್ದುದರಿಂದ ಬಹಳಹೊತ್ತು ಇಬ್ಬರೂ, ಏಕಾಂತದಲ್ಲಿ ಮಾತನಾಡುತ್ತಿದ್ದರು. ಕಳ್ಳರಕೈಗೆ ಸಿಕ್ಕಿದ ಬಳಿಕ ತಾನು ತಪ್ಪಿಸಿಕೊಂಡುಬಂದ ಉಪಾಯವನ್ನು ಆತನಿಗೆ ಸವಿಸ್ತಾರವಾಗಿ ನುಡಿದು, ಆತನಿಂದ ರಾಣಿಯು ಮತ್ತು ರಾಜಕುಮಾರನ ಸ್ಥಿತಿಯನ್ನು

ಅವರವರಿಗೆ ಉಂಟಾಗಿದ್ದ ತೊಂದರೆಯನ್ನು ವಿಶದವಾಗಿತಿಳಿಯುಕೊಂಡು ನಂತರ ತನ್ನ ವೃತ್ತಾಂತವನ್ನು ಕುರಿತು, ಮುರಳಿ ಇಂತೆಂದಳು. ಅಯ್ಯಾ! ನಾವು ಆದಿನ ಕಳ್ಳರನ್ನು ನೋಡ ತ್ತಲೆ ಅವರು ಕಲೀಫರ ಭಟರೆಂದು ರಾಣಿಯು ಹೊರಹೊರಟು ಬಂದಿರುವುದನ್ನು ತಿಳಿದು, ಆಕೆಯನ್ನು ಅಲ್ಲಿ ರುವ ಇತರರನ್ನು ಕಡಿದುಹಾಕುವಂತೆ ಆಜ್ಞೆಯಿಸಿ ಕಳುಹಿಸಿರುವರೆಂದು ತಿಳಿದು ನಾನು ಹಿತ್ತಲಬಾಗಿಲಿಂದ ಓಡಿಬಂದೆನು. ಆ ಕಳ್ಳರು ಷೇಮುಸೆಲ್ ನೆಹರಳ ಮತ್ತು ರಾಜಪುತ್ರನ ಸರಸಸಲ್ಲಾಪಗಳ ಕಾಲದಲ್ಲಿ ಬಳಿಹೊಕ್ಕು ಗನ್ನುಕೆಂಡು ಉಳಿದ ಇಬ್ಬರು ದಾದಿಯರೂ, ನನ್ನಜೊತೆಯಲ್ಲಿಯೇ ಓಡಿಬಂದರು. ನಂತರ ನಾವೆಲ್ಲರೂ, ಬಹು ಭಯದಿಂದ ನಡಗುತ್ತ ಸಂದು ಗೊಂದಿಗಳಲ್ಲಿ ಸಂಚರಿಸುತ್ತಿದ್ದು ಬಂದಾನೊಂದು ಮನೆಯನ್ನು ಸೇರಿದೆವು ಆ ಮನೆಯವರು ಬಹು ಮರ್ಯಾದೆಯುಳ್ಳವರಾದುದರಿಂದ ನಮ್ಮನ್ನು ಬಹು ಪ್ರೀತಿಯಿಂದ ಕಾಪಾಡಿದರು.

ಬೆಳಗಾಗುತಲೆ ಆ ಮನೆಯ ಯಜಮಾನನಿಗೆ ವಂದನೆಗಳನ್ನು ಮಾಡಿ, ಆತನಿಂದ ಅಪ್ಪಣೆಯನ್ನು ಪಡೆದು, ಅಲ್ಲಿಂದ ಹೊರಟು ಬಂಟಿ ಯಾಗಿ ಅರಮನೆಯನ್ನುಸೇರಿ, ಅಂತಃಪುರವನ್ನುಸೇರಿ, ವ್ಯಸನಾಕ್ರಾಂತ ರಾಗಿರಲು ನಮ್ಮ ಜೊತೆಯವರಾದ ಇತರ ದಾದಿಯರು ಬಂದು, ರಾಣಿಯವ ರನ್ನು ತೊರೆದು, ನೀವುಗಳೇ ಬರುವುದಕ್ಕೆ ಕಾರಣವೇನು? ನಮ್ಮ ಯಜಮಾನಿಯು ಎಲ್ಲಿಹೋದಳೆಂದು ಕೇಳಿದರು. ನಾನು ಅಮ್ಮಾ! ನಮ್ಮ ರಾಣಿಯು ತನ್ನ ಸ್ನೇಹಿತಳಾದ ಮತೊಬ್ಬ ಘನವಂತಳ ಮನೆಯಲ್ಲಿ ಸುಖವಾಗಿರುವಳು. ಬೇಕಾದಾಗ ನಿಮ್ಮನ್ನು ಕರೆಸಿಕೊಳ್ಳುವೆನು. ಈಗ ನೀವು ಅರಮನೆಗೆ ಹೋಗಿರಿಂದು ಆಜ್ಞಾಪಿಸಿದುದರಿಂದ ನಾವು ಇಲ್ಲಿಗೆ ಬಂದೆವೆಂದು ಹೇಳಲು, ಆತನು ಅದನ್ನು ನಿಜವೆಂದು ನಂಬಿಕೊಂಡರು. ಆದಿನ ವೆಲ್ಲ ಬಹು ಚಿಂತೆಯನ್ನು ಅನುಭವಿಸಿ, ರಾತ್ರಿ ಡಿಡ್ಡಿಯೆ ಬಾಗಿಲಬಳಿ ಕಾದುಕೊಂಡು ಇದ್ದ ನನ್ನ ಜೊತೆಯುಳ್ಳ ಇನ್ನಿಬ್ಬರು ಸೇವಕಿಯರನ್ನು ಕರೆದುಕೊಂಡುಹೋಗಿ ಅರ್ಧರಾತ್ರಿಯವರಿಗೂ, ಕಾದುಕೊಂಡಿದ್ದೆನು. ಆಗತಾನೆ, ಗಾಡಿಯೊಂದು ಬಂದು ನಿಂತ ಶಬ್ದವನ್ನು ಕೇಳಿ, ಕಾವಲುಗಾರ ನನ್ನು ಕರೆದು ಆ ಗಾಡಿಯಲ್ಲಿ ಯಾರಾದರೂ ಹೆಂಗಸರಿರುವರೇ ನೋಡಿ ಕೊಂಡಿಬಾ ಬಾರೆಂದು ಕಳುಹಿಸಿದೆನು. ಆತನು ಹೋಗುವದರ ಒಳಗಾಗಿ

ಗಾಡಿಯನ್ನು ನಿಲ್ಲಿಸಿ ಇಬ್ಬರು ಶಿಪಾಯಿಗಳನ್ನು ಒಳಗೆ ಮಲಗಿಸಿಕೊಂಡಿದ್ದ ಒಬ್ಬ ಹೆಂಗಸನ್ನು ಮೇಲಕ್ಕೆ ಎತ್ತಿದರು. ನಾವುಗಳು ಹತ್ತಿರ ಹೋಗಿ ನೋಡುವಲ್ಲಿ ಆಕೆಯೇ ಷೇಮುಸೆಲ್‌ನೆಹರಳೆಂದು ಗೊತ್ತುಮಾಡಿಕೊಂಡೆವು. ಆಗ ನಮಗುಂಟಾದ ಆನಂದವು ಹೇಳಲಸಾಧ್ಯವಾಗಿತ್ತೆಂದು ನುಡಿದಳು. ಇಂತೆಂದು ಹೇಳಿ ಷಹರ್‌ಜೌದಿಯು ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಮರಳಿ ಹೇಳಲಾರಂಭಿಸಿದಳು.

೨೦೬ ನೆಯ ರಾತ್ರಿಯ ಕಥೆ.

ಪ್ರಿಯರಾದ ಸುಲ್ತಾನರೇ! ಈತೆರದಿಂದ ನುಡಿದ ದಾದಿಯು ರತ್ನವ್ಯಾಪಾರಿಯನ್ನು ಕುರಿತು, ಮರಳಿ ಹೇಳಲಾರಂಭಿಸಿದಳು. ಅಯ್ಯಾ! ರಾಣಿಯು ಆ ಕಾಲದಲ್ಲಿ ನಡೆಯಲಾರದಷ್ಟು ದುರವಸ್ಥೆಯನ್ನು ವಹಿಸಿದ್ದುದರಿಂದ ನಾನು ಆಕೆಯನ್ನು ಬಹು ಪ್ರಯಾಸದಿಂದ ಉಪಚರಿಸುತ್ತ, ಗಾಡಿಯಿಂದ ಇಳಿಸಿದನಂತರ ಗೋಪ್ಯವಾಗಿ ಅಂತಃಪುರಕ್ಕೆ ಕರೆದುಕೊಂಡು ಬಂದು ಮಂಚದಮೇಲೆ ಮಲಗಿಸಿದೆನು. ಆಕೆ ನಿಟ್ಟುಸುರನ್ನುಬಿಡುತ್ತ ಸುತ್ತಲೂ ತಿರುಗಿನೋಡಿ ತನ್ನನ್ನು ಕರೆದುಕೊಂಡುಬಂದ ಗಾಡಿಯವನಿಗೆ ಒಂದು ಹಣದ ಥೈಲಿಯನ್ನು ಕೊಡುವಂತೆ ಬಿಕ್ಕಿಬಿಕ್ಕಿ ಅಳುತ್ತ ಗದ್ಗದ ಸ್ವರದಿಂದ ನುಡಿದಳು. ನಾನು ಆತನನ್ನು ಸ್ವಲ್ಪಹೊತ್ತು ತಾಳುವಂತೆ ಹೇಳಿ ರಾಣಿಗೆ ಸ್ವಲ್ಪ ಉಪಚಾರ ಮಾಡಿದನಂತರ ಆತನಿಗೆ ಹಣವನ್ನು ಕೊಡಲು ಬಹು ಸಂತೋಷದಿಂದ ಹೊರಟುಹೋದನು. ಆದರೆ ರಾಣಿಯು ದುರವಸ್ಥೆಯು ಆ ಕಾಲದಲ್ಲಿ ಪ್ರಾಣಾಪಾಯವನ್ನುಂಟುಮಾಡುವಷ್ಟು ಭಯಂಕರವಾಗಿತ್ತು. ರಾತ್ರಿಯೆಲ್ಲ ಈತೆರದಿಂದ ಕಳೆದುಹೋಗಲು ಬೆಳಗಾಗುತ್ತಲೇ ಉಳಿದ ದಾದಿಯರು ರಾಣಿಯನ್ನು ನೋಡುವುದಕ್ಕಾಗಿ ಬಂದರು. ಆಕೆಯ ದೇಹಸ್ಥಿತಿಯನ್ನು ಇನ್ನು ಸ್ವಲ್ಪಹೊತ್ತಾದರೆ ಕುದುರುಪಾಡಾಗುವುದೆಂದುಹೇಳಿ ಅವರನ್ನು ಸಮಾಧಾನಪಡಿಸಿ ನಾನು ಪತ್ಥರದಲ್ಲಿ ಇದ್ದು ಉಪಚರಿಸುತ್ತಿದ್ದೆನು. ಆದರೆ ದೈವವಶದಿಂದ ಆಕೆಗೆ ಮೂರ್ಛೆತಿಳಿದಕೂಡಲೆ ಪತ್ಥರದಲ್ಲಿದ್ದ ನಾನು ಸ್ವಲ್ಪ ಆಹಾರವನ್ನು ಕೊಡುವುದಕ್ಕೆ ಹೋದರೂ, ಬಹು ಮುಷ್ಕರ ಮಾಡುತ್ತಾ ನಾನು ಯಾವುದನ್ನು

ತೆಗೆದುಕೊಳ್ಳುವುದಿಲ್ಲವೆಂದು ಹಟ ಮಾಡಿದಳು ನಾನು ನನ್ನ ಬುದ್ಧಿ ಸಾಮರ್ಥ್ಯಗಳೆಲ್ಲವನ್ನೂ ಖರ್ಚುಮಾಡಿ ಆಗಾಗ್ಗೆ ಕುಡಿಸುತ್ತಿದ್ದ ದ್ರಾಕ್ಷಾರಸದ ಬಲದಿಂದ ಆಕೆ ಸ್ವಲ್ಪ ಅನುಕೂಲವಾಗಿ ಎದ್ದು ಕುಳಿತುಕೊಂಡಳು. ನಂತರ ನಾನು ಅಕೆಯನ್ನು ಕುರಿತು ಅಮ್ಮಾ! ನೀವು ಕಳ್ಳರ ಕಾಟದಿಂದ ಹೇಗೆ ತಪ್ಪಿಸಿಕೊಂಡು ಬಂದರೆಂದು ಕೇಳಲು, ರಾಣಿಯು ಅಸಾಧ್ಯವಾದ ನಿಟ್ಟುಸಿರನ್ನು ಬಿಡುತಾ ಅಯ್ಯೋ! ನನ್ನನ್ನು ಪುನಹ ಘೋರವಾದ ದುಃಖಸಮುದ್ರದಲ್ಲಿ ಮುಳುಗಿಸುತ್ತಿರುವೆಯೆಲ್ಲಾ! ನನ್ನ ಪ್ರೀತಿಪಾತ್ರನಾದ ರಾಜಕುಮಾರನ ಸುದರ್ಶನದಲ್ಲಿ ಮೃತ್ಯುರೂಪಂಥಾ ಆ ಕಳ್ಳರು, ನನ್ನನ್ನು ಬಲವಾಗಿ ತೊಂದರೆಪಡಿಸಿದರು. ಆಗಲೇ ಪ್ರಾಣವನ್ನಾದರೂ ತೆಗೆದುಕೊಂಡಿದ್ದರೆ ನನಗೆ ಸುಖ ಉಂಟಾಗುತ್ತಿತ್ತಲ್ಲಾ! ಅಯ್ಯೋ! ನಾನೀವ್ಯಥೆಯನ್ನು ಸೈರಿಸಲಾರೆನೆಂದೂ, ಈ ದುರವಸ್ಥೆಯನ್ನು ಹೊಂದಿ ಸಂಕಟಪಡುವುದಕ್ಕಿಂತಲೂ ಪ್ರಾಣವನ್ನು ತೊರೆದುಕೊಂಡಿದ್ದರೆ ಪರಮ ಸುಖವಾಗಿತ್ತೆಂದು ಜೋರಿ ಬಹಳವಾಗಿ ಪ್ರಲಾಪಿಸಿದಳು.

ಆಗ ನಾನು ಅಮ್ಮಾ! ದಯವಿಟ್ಟು ತಮ್ಮ ದುಃಖವನ್ನು ಕಡಿಮೆ ಮಾಡಿಕೊಂಡು ನನ್ನ ಸಂಗಡ ಆ ವೃತ್ತಾಂತವನ್ನು ಹೇಳಿ, ಆಪತ್ಸಾಗರದಲ್ಲಿ ಮುಳುಗಿದವರು ತಮ್ಮಾಪತ್ತುರಲ್ಲಿ ತಾವು ಅನುಭವಿಸಿದ ತೊಂದರೆಗಳನ್ನು ವಿವರಿಸಿ ಹೇಳಿಕೊಂಡರೆ ತಮ್ಮ ದುಃಖವು ಶಾಂತವಾಗುವುದೆಂಬುದೆ ತಮಗೆ ತಿಳಿದೇ ಇರುವಷಲ್ಲಾ! ಆದುದರಿಂದ ದಯಮಾಡಿ ನಿಮ್ಮ ವೃತ್ತಾಂತವನ್ನು ತಿಳಿಸಬೇಕೆಂದು ಬೇಡಿಕೊಂಡೆನು. ಆಗ ರಾಣಿಯು, ಅಮ್ಮಾ! ನಾನು ಕಾಷಾತುರಳಾಗಿ ಆಗತಾನೆ ನನ್ನಕೋರಿಕೆಯನ್ನು ನೆರವೇರಿಸಿಕೊಳ್ಳಬೇಕೆಂದಿದ್ದೆನು. ಆ ಕಾಲದಲ್ಲಿ ಆಯುಧಪಾಣಿಗಳಾಗಿ ಅಕಸ್ಮಾತ್ತಾಗಿ ನುಗ್ಗಿಬಂದ ಕಳ್ಳರನ್ನು ಕಂಡರೂ, ನಾನು ಪರ್ಷಿಯಾ ರಾಜಕುಮಾರನ ಜೊತೆಯಲ್ಲಿ ಮರಣವನ್ನು ಹೊಂದುವನಾದುದರಿಂದ ನನ್ನ ಸಾವು ಸಾರ್ಥಕವಾದುದೆಂದು ತಿಳಿದುಕೊಂಡಿದ್ದೆನು ಆ ಕಳ್ಳರು ನಮ್ಮನ್ನು ಕೊಲ್ಲುವುದಲ್ಲದೆಯೂ ಅಲ್ಲಿನ ಪದಾರ್ಥಗಳನ್ನೆಲ್ಲಾ ಮೂಟೆಕಟ್ಟಿ ಹೊತ್ತುಕೊಂಡುಹೋಗುವಷ್ಟು ನಮ್ಮಗಳನ್ನು ಪ್ರಾರಿಯಾಲ್ಲ ನಡೆಸಿಕೊಂಡು ಹೋಗುತ್ತಿರುವಾಗ ನೀವುಯಾರೆಂದು ಕೇಳಲು, ನಾನು ವ್ಯಾಪಾರಿಯೆಂದು, ನಾನು

ವರ್ತಕನೆಂದು, ರಾಜಪುತ್ರನೂ ನಾನೂಸಹ ಹೇಳಿದೆವು. ಅವರು ನಮ್ಮ ಬ್ಬರನ್ನು ತಮ್ಮ ವಾಸಸ್ಥಾನಕ್ಕೆ ಕರೆದುಕೊಂಡುಹೋದಮೇಲೆ ಎಲ್ಲರೂ ನನ್ನನ್ನು ಸುತ್ತಿಕೊಂಡು ವರ್ತಕೆಯು ಇಂತಹ ಬೆಲೆ ಬಾಳುವ ವಸ್ತ್ರಗಳನ್ನು ಎಂದಿಗೂ ಧರಿಸಲಾರಳೆಂದು ಅನುಮಾನಿಸಿ, ನಿಜವಾದ ಸಂಗತಿಯನ್ನು ಹೇಳೆಂದು ಕೇಳಿದರು. ಆದುದರಿಂದ ನನ್ನ ಭಯವು ಮೊದಲಿಗಿಂಲೂ ಅಧಿಕವಾಯಿತು. ಆದರೂ ನಾನೇನು ಹೇಳಿದ್ದುದರಿಂದ ಆ ಕಳ್ಳರು, ರಾಜಕುಮಾರನನ್ನು ನೋಡಿ, ಅಯ್ಯಾ! ನೀವು ಹೇಳಿದ ಮಾತುಗಳು ನಮಗೆ ನಿಜವಾಗಿ ತೋರುವುದಿಲ್ಲವಾದುದರಿಂದ ಖಂಡಿತವಾಗಿಯೂ ಹೇಳೆಂದು ಬಹು ಕ್ರೂರವಾದ ಭಾಷೆಗಳಿಂದ ಹೇಳಿದರು. ನಂತರ ನಾನೂ ರಾಜಕುಮಾರನೂಸಹ ಅವರ ದೃಷ್ಟಿಪಾತಕ್ಕೆ ಹೆದರಿ, ಅಯ್ಯಾ! ನಾವು ಆ ರತ್ನವ್ಯಾಪಾರಿಯನ್ನು ನೋಡುವುದಕ್ಕಾಗಿಬಂದಿದ್ದ ವರ್ತಕರೆಂದು ಹೇಳಲು ಆ ಕಳ್ಳರು, ಆಗಲಿ ನಾವು ಆತನ ಗುರುತು ಕಂಡಿರುವೆವು. ನಾಳೆ ಬೆಳಿಗ್ಗೆ ಆತನನ್ನೇ ಇಲ್ಲಿಗೆ ಕರೆದುಕೊಂಡು ಬರುವೆವು. ಬಂದನಂತರ ಆತನು ತನ್ನ ಮುಖದಿಂದ ನಿಮ್ಮ ವರ್ತಮಾನವನ್ನು ಹೇಳದಹೊರತು, ನಿಮ್ಮನ್ನು ಹೊರಗೆ ಬಿಡಲಾರೆವು. ಇದೇ ನಾವು ಆ ರತ್ನವ್ಯಾಪಾರಿಗೆ ಮಾಡಬೇಕೆಂದಿರುವ ಸಹಾಯ. ಆದರೆ ನಿಮಗೆ ಯಾವನಿಧವಾದ ತೊಂದರೆಯನ್ನೂ ಮಾಡುವುದಿಲ್ಲವೆಂದು ಖಂಡಿತವಾಗಿ ಹೇಳಿದರು.

ಮರುದಿನ ಬೆಳಿಗ್ಗೆ ರತ್ನವ್ಯಾಪಾರಿಯು ಅಲ್ಲಿಗೆಬಂದು ನಮ್ಮಗಳಿಗೆ ಉಪಕಾರ ಮಾಡಬೇಕೆಂದು ತಿಳಿದು ತನ್ನನ್ನು ಕರೆದುಕೊಂಡುಬಂದ ತಸ್ಕರಾಗ್ರಣಿಗಳಿಗೆ ನಿಜವಾದ ನಮ್ಮ ಸುದ್ದಿಯೆನ್ನು ಹೇಳಲು, ಅವರು ಬಹು ಭಯಗ್ರಸ್ತರಾಗಿ ನನ್ನ ಬಳಿಗೆ ಬಂದು ಅಮ್ಮಾ! ನಾವು ಮಾಡಿದ ಅಪರಾಧವನ್ನು ಕ್ಷಮಿಸಬೇಕು. ಆ ಮನೆಯು ರತ್ನವ್ಯಾಪಾರಿಯೆಂದು ತಿಳಿದಿದ್ದರೆ ನಾವು ಆವಿನ ಅಂತಹ ಕಾರ್ಯವನ್ನು ಮಾಡುತ್ತಿರಲಿಲ್ಲ. ಅಸಾಧ್ಯವಾದ ಈ ಕಾರ್ಯವು ಅಕಸ್ಮಾತ್ತಾಗಿ ನಡೆದುಹೋದುದಕ್ಕಾಗಿ ದಯೆಮಾಡಿ ಕ್ಷಮಿಸಬೇಕೆಂದು, ರಾಜಪುತ್ರನನ್ನೂಸಹಾ ಬೇಡಿಕೊಂಡು, ವರ್ತಕನನ್ನು ಉದ್ಧರಿಸಿ ಉಳಿದಿದ್ದ ಪದಾರ್ಥಗಳನ್ನು ಆತನ ಬಳಿಗೆ ಒಪ್ಪಿಸಿ ನಮ್ಮಗಳನ್ನು ಟೈಗ್ರಿಸ್ ನದಿಯಬಳಿಗೆ ಕರೆದುಕೊಂಡು

ಬಂದು ಧೋಣಿಯನ್ನು ಹತ್ತಿಸಿದನು. ನಾವು ದಡವನ್ನು ಸೇರಿದಕೂಡಲೆ ಪೈಗಸ್ತಿಯೆ ರಾವುತನೊಬ್ಬನು ನಮ್ಮಬಳಗೆಬಂದು ವಿಚಾರಿಸುತ್ತಿರುವಾಗ ನಾನು ಆತನನ್ನು ಒಂಟಿಯಾಗಿ ಕರೆದು, ನನ್ನ ವರ್ತಮಾನವನ್ನು ತಿಳಿಸಲು ಆತನು ಬಹು ಜಕ್ತಿಯಿಂದ ನಮಸ್ಕರಿಸಿ, ಮರ್ಯಾದೆ ಮಾಡಿ, ಅಮ್ಮಾ ! ನಿಮಗೆ ನಾನು ಉಪಕಾರ ಮಾಡುವ ಕಾಲವು ಸಂಭವಿಸಿದುದ ಕ್ಕಾಗಿ ನಾನು ಬಹು ಸಂತೋಷಪಡುತ್ತಿರುವೆನೆಂದು ಹೇಳಿ, ತನ್ನ ಸೇವಕರ ಮೂಲಕ ಎರಡು ಗಾಡಿಗಳನ್ನು ತರಿಸಿ ನನ್ನನ್ನು ಒಂದುಗಾಡಿಯಲ್ಲೂ, ರಾಜಪುತ್ರನನ್ನೂ ವರ್ತಕನನ್ನೂ ಮತ್ತೊಂದುಗಾಡಿಯಲ್ಲಿಯೂ ಕುಳ್ಳಿರಿಸಿಕೊಂಡು, ನಮ್ಮ ನಮ್ಮ ವಾಸಸ್ಥಾನಗಳಿಗೆ ಕಳುಹಿಸಿಬಿಡುವಂತೆ ಆಜ್ಞಾಪಿಸಿದನು. ಒಳಿಕ ಗಾಡಿಯವನು, ನನ್ನನ್ನು ಕರೆದುಕೊಂಡುಬಂದು ನಿನ್ನ ಒಳಿಯಲ್ಲಿ ಬಿಟ್ಟನು. ಅಲ್ಲಿಂದೀಚಿಗೆ ರಾಜಪುತ್ರನಿಗೂ ವರ್ತಕನಿಗೂ ಸಹ ಮತ್ತೇನು ತೊಂದರೆ ಯುಂಟಾಯಿತೋ ನಾನು ಕಾಣೆನು. ಆದರೆ ನಾನುಮಾತ್ರ ನಿನ್ನ ದಯೆಯಿಂದ ಸುರಕ್ಷಿತವಾಗಿ ಮನೆಯನ್ನು ಸೇರಿದೆನು. ನಾನೆಂತು ರಾಜಕುಮಾರನನ್ನ ಕುರಿತು, ವ್ಯಸನ ಪಡುತ್ತಿರುವೆನೋ ಹಾಗೆ ರಾಜಕುಮಾರನು ನನ್ನವಿಷಯದಲ್ಲಿ ಚಿಂತಿಸುತ್ತಿರುವನೆಂಬುದಕ್ಕೆ ಯಾವ ಸಂದೇಹವೂ ಇಲ್ಲ. ನಮ್ಮಗಳ ಸಂತೋಷಕ್ಕಾಗಿ ಸಹಾಯ ಮಾಡುತ್ತಿದ್ದ ರತ್ನಪಡಿವ್ಯಾಪಾರಿಯು ನಮ್ಮಮೂಲಕ ತುಂಬ ತೊಂದರೆಗೆ ಗುರಿಯಾದುದರಿಂದ ಈ ಎರಡುಸಾವಿರ ವೊಹರಿಗಳನ್ನು ಆತನಿಗೆ ಕೊಟ್ಟು ರಾಜಕುಮಾರನ ಕ್ಷೇಮವನ್ನು ತಿಳಿದುಕೊಂಡು ಬಾರೆಂದು ಬಾಷ್ಪಪೂರಿತಲೋಚನೆಯೊದ ನಮ್ಮ ರಾಣಿಯು ಆಜ್ಞಾಪಿಸಿದಳು.

ಒಳಿಕ ನಾನು ರಾಣಿಯನ್ನು ಕುರಿತು, ಅಮ್ಮಾ ! ಆ ರಾಜ ಪುತ್ರನಿಂದ ನಿನಗಿಂತಹ ತೊಂದರೆ ಯುಂಟಾಗಿ ದೈವವಶದಿಂದ ನೀನು ಬದುಕಿ ಬಂದೆಯೆಲ್ಲಾ ! ಇನ್ನಾದರೂ, ಆತನಮೋಲಣ ವೋಹವನ್ನು ತೊರೆಯಬಾರದೇ ಎಂದು ಹೇಳಿದ ಒಬ್ಬಿವಾದದಿಂದ ಆಕೆಗೆ ಕೋಪವುಂಟಾಗಿ ನಾನು ಹೇಳಿದ ಕಾರ್ಯವನ್ನು ಶೀಘ್ರವಾಗಿ ಮಾಡೆಂದು ನುಡಿದಬಳಿಕ ನಾನು ಹಣವನ್ನು ತೆಗೆದುಕೊಂಡು ನಿನ್ನಮನೆಗೆ ಬಂದು ನೀನು ಇಲ್ಲದಿರುವುದನ್ನು ಕಂಡು ರಾಜಪುತ್ರನಮನೆಗೆ ಹೋಗಲು ಧೈರ್ಯಸಾಲದೆ ಬೀದಿಯಲ್ಲಿ

ಹುಡುಕುತ್ತಾ ನಿನ್ನನ್ನು ಹಿಂದಟ್ಟಿಕೊಂಡುಬರುವಾಗ ಹಣದಚೀಲವನ್ನು ಹೊರಲಾರದೆ ಒಬ್ಬಾಬ್ಬನೊಬ್ಬ ಸ್ನೇಹಿತನ ಮನೆಯಲ್ಲಿ ಇಟ್ಟುಬಂದಿರುವೆನು. ನೀನು ಸ್ವಲ್ಪಹೊತ್ತು ಇಲ್ಲಿಯೇ ಕಾದುಕೊಂಡಿದ್ದರೆ ಈಗಲೇ ಹಣವನ್ನು ತಂದುಕೊಡುವೆನೆಂದು ಹೇಳಿದಳು. ಇಂತೆಂದು ನುಡಿದು ಪಹರೆ ಜಾವದಿ ಬೆಳಗಾದಕೂಡಲೆ ಕಥೆಯನ್ನುನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಪುನಹಾ ಹೇಳಲಾರಂಭಿಸಿದಳು.

೨೦೭ನೆಯ ರಾತ್ರಿ ಕಥೆ.

ನಂತರ ದಾದಿಯು ಸ್ವಲ್ಪಹೊತ್ತಿನಲ್ಲೇ ಹಣವನ್ನು ತೆಗೆದುಕೊಂಡುಬಂದು ರತ್ನಪಡಿವ್ಯಾಪಾರಿಯಕೈಗೆ ಕೊಟ್ಟಳು ಅಯ್ಯಾ! ಈ ಹಣವನ್ನು ತೆಗೆದುಕೊಂಡು ನಿನ್ನ ಸ್ನೇಹಿತನನ್ನು ಸಮಾಧಾನಪಡಿಸಿ ನಷ್ಟವನ್ನು ಸರಿಮಾಡಿಕೋ? ಎಂದು ಹೇಳಲು, ತನ್ನತೊಂದರೆಯನ್ನು ನಿವಾರಣೆಮಾಡಿಕೊಳ್ಳುವುದಕ್ಕೆ ಬೇಕಾಗಿರುವಷ್ಟು ದ್ರವ್ಯಕ್ಕಿಂತಲೂ ಅಧಿಕವಾಗಿ ತನಗೆ ಹಣ ದೊರೆತುದನ್ನು ನೋಡಿ, ರತ್ನಪಡಿವ್ಯಾಪಾರಿಯು ಬಹಳವಾಗಿ ಸಂತೋಷಿಸಿ ದಾದಿಯನ್ನುಕುರಿತು, ಅಮ್ಮಾ! ರಾಣಿಯವರು ನನಗೆಮಾಡಿದ ಉಪಕಾರಕ್ಕಾಗಿ ತಕ್ಕ ಪ್ರತ್ಯುಪಕಾರವನ್ನು ಮಾಡಲು, ಸಿದ್ಧನಾಗಿರುವೆನಲ್ಲದೆ ಅವರ ದಯಾಗುಣವನ್ನು ಕುರಿತು, ಸರ್ವದಾ ವಂದಿಸುತ್ತಿರುವೆನೆಂದು ತಿಳಿಸು. ಅಲ್ಲದೆ ನೀನು ರಾಣಿಯವರ ಮುಖ್ಯವಾದ ವರ್ತಮಾನಗಳನ್ನು ರಾಜಕುಮಾರನಿಗೆ ತರುವಾಗಲೆಲ್ಲ ನನ್ನಮನೆಗೆಬಂದು ನನಗೆ ತಿಳಿಸಿ ನಂತರ ನನ್ನಮೂಲಕವಾಗಿ ರಾಜಪುತ್ರನಬಳಿಗೆ ಹೋಗಬೇಕೆಂಬುದು ಚೆನ್ನಾಗಿ ನೆನಪಿನಲ್ಲಿ ಇಡು. ಇದರಿಂದ ನಮಗೂ ನಮ್ಮ ರಾಣಿಯವರಿಗೂ ಪರಮ ಸುಖವನ್ನು ಭಗವಂತನು ಕೊಡುವನೆಂದು ಹೇಳಿದನು. ನಂತರ ಅನ್ಯೋನ್ಯವಾಗಿ ಅವರಿಬ್ಬರೂ ಪರಸ್ಪರ ಅಪ್ಪಣೆಯನ್ನು ಪಡೆದು ಹೊರಟುಹೋದರು.

ರತ್ನಪಡಿವ್ಯಾಪಾರಿಯು ಮನೆಯನ್ನು ಸೇರಿ, ತನಗೆ ಅಧಿಕವಾಗಿ ಧನವು ದೊರೆತುದಕ್ಕೂ ರಾಣಿಯು ಮತ್ತು ರಾಜಕುಮಾರನು ಕಳ್ಳರು ಬಿದ್ದಕಾಲದಲ್ಲಿ ತನ್ನ ಮನೆಯಲ್ಲಿದ್ದರೆಂಬ ವರ್ತಮಾನವು ಊರಿನಜನರಿಗೆ ತಿಳಿಯದೆ ದೋಚಿಕೊಂಡು ಹೋದುದುಮಾತ್ರ ಗೊತ್ತಾದುದರಿಂದಲೂ,

ಕಳ್ಳರು ರಾಣಿಯ ಮತ್ತು ರಾಜಪುತ್ರನ ವರ್ತಮಾನವನ್ನು ಸಂಪೂರ್ಣವಾಗಿ ತಿಳಿದಿದ್ದರೂ ನಂಬಿಕೆಗೆ ಪಾತ್ರರಾಗಿರುವುದರಿಂದ ಅದನ್ನು ಹೊರ ಹಾಕಲಾರದೆಯೂ, ತಾನು ಮರಳಿ ಆ ತಸ್ಕರರೊಡನೆ ಸ್ನೇಹ ಬೆಳೆಯಿಸದಿರುವುರಿಂದ ತನಗಾವ ತೊಂದರೆಯೂ ಬಾರದೆಂದುನಿಶ್ಚಯಿಸಿ, ಉಪಾಯದಿಂದ ತನ್ನ ಸ್ನೇಹಿತರನ್ನು ಸಮಾಧಾನಮಾಡಿ ಬಹುಸಂತೋಷದಿಂದ ತನ್ನ ಮನೆಯನ್ನು ಮರಳಿ ಅಲಂಕಾರ ಮಾಡಿಸಿ, ಸಡಗರಯುಕ್ತನಾಗಿ ತನಗೆ ಸಂಭವಿಸಿದ್ದ ತೊಂದರೆಗಳೆಲ್ಲ ನಿವಾರಣೆಯಾದಬಳಿಕ ಪರ್ಷಿಯಾ ರಾಜಕುಮಾರನಬಳಿಗೆ ಬಂದನು. ಆ ರಾಜಪುತ್ರನ ಸೇವಕರು ರತ್ನಪಡಿವ್ಯಾಪಾರಿಯೆನ್ನು ನೋಡಿದಕೂಡಲೆ ಅಯ್ಯಾ! ನೀನು ಹೊರಟುಹೋದಬಳಿಕ ಅದೃಷ್ಟವಶದಿಂದ ನಮ್ಮ ರಾಜನು ಬಯಕೆಕೊಂಡಿರುವನೇ ಹೊರತು, ಮತ್ತೇನೂ ಇಲ್ಲ. ಮೂರ್ಛಾಕ್ರಾಂತನಾಗಿ ನಿಟ್ಟುಸುರನ್ನು ಬಿಡುತ್ತ ಮಲಗಿರುವನೆಂದು ತನ್ನ ಯಜಮಾನನು ಇರುವ ಅಂತಃಪುರಕ್ಕೆ ಕರದುಕೊಂಡು ಹೋದರು.

ರತ್ನಪಡಿ ವ್ಯಾಪಾರಿಯು ಬಹಳವಾದ ವ್ಯಸನಾಕ್ರಾಂತದಿಂದ ಆತನಬಳಿಯಲ್ಲಿ ನಿಂತು ಸ್ವಲ್ಪಹೊತ್ತು ತಾಳಿಕೊಂಡಿದ್ದ ನಂತರ ವಂದನೆಗಳನ್ನು ಮಾಡಲು ರಾಜಪುತ್ರನು ಬಹು ಪ್ರಯತ್ನದಿಂದ ತನ್ನ ಮೂರ್ಛೆಯನ್ನು ತಿಳಿದುಕೊಂಡು, ತಾನು ಮೊದಲು ಪೇಮುಸೆಲ್‌ನೆಹರಳನ್ನು ನೋಡಿದಾಗ ಯಾವ ನೋಟನನ್ನುಬೀರಿ ಕಾಮಾತುರದಿಂದ ವ್ಯಸನಪಡುತ್ತಿದ್ದನೋ ಅದಕ್ಕಿಂತಲೂ ಅಧಿಕತಾದ ತೊಂದರೆಯಿಂದ ನೋಡಿದರೂ, ತನ್ನ ಸ್ನೇಹಿತನನ್ನು ಮರ್ಯಾದೆಯಿಂದ ಸತ್ಕರಿಸಬೇಕೆಂಬ ಅಭಿಲಾಷೆಯುಳ್ಳವನಾಗಿ ಬಹುಪ್ರಯತ್ನದಿಂದಾತನ ಕೈ ಹಿಡಿದುಕೊಂಡು, ಅಯ್ಯಾ! ಮರಣಾವಸ್ಥೆಯನ್ನು ಹೊಂದಿ ನರಳುತ್ತಿರುವ ನನ್ನನ್ನು ನೋಡುವುದಕ್ಕಾಗಿ ಬಹುದೂರ ನೀನು ಬಂದುದಕ್ಕಾಗಿ ನಾನು ಸಂತೋಷಪೂರ್ವಕವಾಗಿ ನಿನ್ನನ್ನು ವಂದಿಸುವೆನೆಂದು ಗದ್ಗದಸ್ವರದಿಂದ ನುಡಿದನು. ಆಗ ರತ್ನಪಡಿವ್ಯಾಪಾರಿಯು ರಾಜಪುತ್ರನನ್ನು ಕುರಿತು, ಅಯ್ಯಾ! ನೀವು ನನಗೆ ಬಹಳವಾಗಿ ಉಪಚಾರ ಹೇಳಬೇಕಾದ ಅವಶ್ಯಕವೇನೂ ಇರುವುದಿಲ್ಲ. ಆದರೆ ನಿಮಗೆ ನಾನು ಮಾಡಬೇಕಾಗಿರುವ ಪ್ರತ್ಯುಪಕಾರವನ್ನು ಜರುಗಿಸಿ ನಿಮ್ಮ ಮನಸ್ಸನ್ನು ಸಂತೋಷಪಡಿಸುವುದಕ್ಕೆ ಎದುರುನೋಡುತ್ತ

ಸರ್ವವನ್ನು ಸಿದ್ಧಮಾಡಿಕೊಂಡಿದ್ದರೂ, ನೀವು ವ್ಯರ್ಥವಾಗಿ ಆಹಾರವನ್ನು ತೆಗೆದುಕೊಳ್ಳದೆ ರೋಗವನ್ನು ಬಲಪಡಿಸಿಕೊಂಡಿರುವಿರಲ್ಲಾ! ನಿಮ್ಮ ಇಷ್ಟಾರ್ಥವು ನೆರವೇರುವುದಕ್ಕೆ ನಿಮ್ಮ ಆರೋಗ್ಯವೇ ತಕ್ಷಣದಲ್ಲಿ ಬೇಕಾಗಿರುವುದೆಂದು ನುಡಿಯಲು ಚಾರಕರು ಆತನನ್ನು ನೋಡಿ, ಸಾಮಿ! ನಾವು ಎಷ್ಟುವಿಧವಾಗಿ ಉಪಚರಿಸಿದರೂ, ನಮ್ಮ ರಾಜನು ಆಹಾರವನ್ನು ತೆಗೆದುಕೊಳ್ಳಲಾರದೆ ಸಂಕಟಪಡುತ್ತಿರುವನಲ್ಲಾ! ನಾವು ಮಾಡತಕ್ಕದ್ದೇನೆಂದರು. ಆಗ ರತ್ನಪಡಿವ್ಯಾಪಾರಿಯು ಆಹಾರಪದಾರ್ಥಗಳನ್ನು ತರಿಸಿ ತಾನು ಹಸ್ತ್ರರದಲ್ಲಿ ಕುಳಿತು ಮಧುರವಾಕ್ಯಗಳನ್ನು ವಿನಯದಿಂದ ಹೇಳುತ್ತ ಆತನನ್ನು ಭೋಜನಮಾಡುವಂತೆ ಬೇಡಿಕೊಂಡನು. ರಾಜಪುತ್ರನು ರತ್ನಪಡಿವರ್ತಕನ ಉಪಚಾರದಿಂದ ಎಂದಿಗಿಂತಲೂ, ಅತಿಶಯವಾಗಿ ಭೋಜನ ಮಾಡಿದನಂತರ ತನ್ನ ಚಾರಕರನ್ನು ಕುರಿತು ನೀವುಗಳು ಸ್ವಲ್ಪಹೊತ್ತು ನಾವು ಏಕಾಂತ ಸಂಭಾಷಣೆಯನ್ನು ಮುಗಿಸುವವರೆಗೂ ಹೊರಗಿದ್ದು ಮಾತ್ರರನ್ನೂ ಬಿಡದಂತೆ ಎಚ್ಚರಿಕೆಯಾಗಿರಬೇಕೆಂದು ಆಜ್ಞಾಪಿಸಲು ಅವರೆಲ್ಲರೂ ಹಾಗೆಯೇ ಮಾಡುತ್ತೇವೆಂದು ಹೇಳಿ ಹೊರಟುಹೋದರು.

ಆಗ ರಾಜಕುಮಾರನು ರತ್ನಪಡಿವ್ಯಾಪಾರಿಯನ್ನು ಕುರಿತು, ನಾನಿಂತಹ ದುರವಸ್ಥೆಯನ್ನು ಹೊಂದಿರುವುದು ನನ್ನ ದೌರ್ಭಾಗ್ಯ ಒಂದರಿಂದಲೇ ಅಲ್ಲ. ನನ್ನ ಪ್ರೀತಿಪಾತ್ರನಾದ ನೀನು ನನಗೋಸ್ಕರವಾಗಿ ಅನುಭವಿಸಿದ ಹೊಂದರೆಗಳು ನನ್ನನ್ನು ಪೀಡಿಸುತ್ತಿರುವುವು. ಅದಕ್ಕೆ ತಕ್ಕ ಪ್ರತ್ಯುಪಕಾರವನ್ನು ಮಾಡಲು ನಾನು ಸಿದ್ಧನಾಗಿರುವೆನು. ಅದು ನ್ಯಾಯವೆಂಬ ಕಾರ್ಯವಾದರೂ, ಅದಕ್ಕಿಂತ ಮೊದಲು ನಿನ್ನನ್ನು ಬಹು ವಿನಯದಿಂದ ನಾನು ಪ್ರಾರ್ಥಿಸುವುದೇನೆಂದರೆ:—ನನ್ನನ್ನು ಅಗಲಿ ಹೊರಟುಹೋದ ಷೇಮುಸೆಲ್‌ನೆಹರಳ ವೃತ್ತಾಂತವು ನಿನಗೇನಾದರೂ ತಿಳಿದಿದ್ದರೆ ದಯಮಾಡಿ ಅದನ್ನು ನನಗೆ ತಿಳಿಸಬೇಕೆಂದು ನುಡಿದನು. ಆಗ ರತ್ನಪಡಿವರ್ತಕನು ಷೇಮುಸೆಲ್‌ನೆಹರಳ ದಾಖಿಯೆನ್ನು ತಾನು ಸಂಧಿಸಿ ಮಾತನಾಡಿದ ಸಂಗತಿಯನ್ನು ಆಕೆಯ ವಿರಹವೇದನೆಯೆನ್ನೂ, ರಾಜಕುಮಾರನ ಷೇಮುಸಮಾಚಾರವನ್ನೂ, ವಿಚಾರಿಸಿದ ಸಂಗತಿಯನ್ನು ತಿಳಿಸಲು, ರಾಜಕುಮಾರನು ಮೊದಲಿಗಿಂತಲೂ ಬಹಳವಾದ ಸಂತೋಷವನ್ನು

ಹೊಂದಿ, ನಿಟ್ಟುಸುರನ್ನುಬಿಡುತಾ್ತ ತನ್ನ ಅರಮನೆಯೆವಳಕ್ಕೆ ಹೋಗಿ ಉತ್ತಮವಾದ ವಸ್ತ್ರಾಭರಣಗಳನ್ನು ತಂದು, ರತ್ನಪಡಿವ್ಯಾಪಾರಿಗೆ ಬಹುಮತಿಯೆಂತಾಗಿ ಒಪ್ಪಿಸಿದನು: ರತ್ನಪಡಿವ್ಯಾಪಾರಿಯು ಅಯ್ಯಾ! ರಾಣಿಯು ನನಗೆ ಕಳುಹಿಸಿರುವ ಬಹುಮಾನದಿಂದ ನನ್ನ ನಷ್ಟವೆಲ್ಲವೂ ಪೂರ್ತಿಯಾಯಿತು. ಇನ್ನು ತಮ್ಮಿಂದ ನಾನು ತೆಗೆದುಕೊಳ್ಳಬೇಕಾದುದೇನೂ ಇಲ್ಲವೆಂದು ನುಡಿದು, ಅತನ ಬಲಾತ್ಕಾರದಿಂದ ಆ ಬಹುಮತಿಯನ್ನು ತೆಗೆದುಕೊಂಡು ರಾಜಪುತ್ರನ ದಾತೃತ್ವಕ್ಕಾಗಿ ಅತನನ್ನು ಹೊಗಳುತ್ತ ಅಪ್ರಗಳನ್ನೆಲ್ಲ ಗಂಟುಕಟ್ಟಿಕೊಂಡು, ಅತನಿಂದ ಅಪ್ಪಣೆಯೆನ್ನು ಪಡೆದು ತನ್ನವನೆಗೆ ಹೊರಟುಹೋದನು. ಮರುದಿನ ರತ್ನಪಡಿವ್ಯಾಪಾರಿಯು ಅತನಬಳಿಗೆ ಬರಲು ರಾಜಕುಮಾರನು ಅತನನ್ನು ಸತ್ಕರಿಸಿಕುಳ್ಳಿರುವಂತೆ ಹೇಳಿ, ಅಯ್ಯಾ! ಸಕಲಕಾರ್ಯಗಳನ್ನು ಸಾಧಿಸುವುದರಲ್ಲಿ ಮನುಷ್ಯನಿಗೆ ಎರಡುವಿಧವಾದ ಫಲಗಳು ಉಂಟೆಂಬುದನ್ನು ನೀನು ಚೆನ್ನಾಗಿ ತಿಳಿದಿರಬೇಕು. ಹೇಗೆನ್ನುವಿಯೋ!

ತಾನು ಮೋಹಿಸಿದ ಪದಾರ್ಥದಲ್ಲಿ ಉಂಟಾಗುವ ಸುಖವನ್ನು ಹೇಗಾದರೂ ಮಾಡಿ ಅನುಭವಿಸಿಯೇ ತೀರಬೇಕು. ಇಲ್ಲವಾದರೆ ಬದುಕಿರುವುದರಿಂದ ಪ್ರಯೋಜನವಿಲ್ಲವಾದುದರಿಂದ ಪ್ರಾಣವನ್ನು ಕಳೆದುಕೊಳ್ಳಬೇಕು. ನನ್ನ ದೌರ್ಭಾಗ್ಯದಿಂದ ಆ ಲಲನಾಮಣಿಯ ಅಂಗಸಂಗ ದುಃಖವು ನನಗೆ ದೊರೆಯದೆ ಹೋದುದರಿಂದ ನನಗೆ ಮರಣವೇ ಸುಖಸಾಧನವಾದ ಕಾರ್ಯವೆಂದು ತಿಳಿದು ನಂಬಿರುವೆನು. ಆದರೆ ನಮ್ಮ ಮತಾನುಸಾರವಾಗಿ ಆತ್ಮಹತ್ಯವು ತುಂಬ ಪಾಪಕರವಾದ ಕೆಲಸವಾದುದರಿಂದ ಅದಕ್ಕಾಗಿ ಸ್ವಲ್ಪ ಚಿಂತಿಸುತ್ತ ತಾಳಿಕೊಂಡಿರುವೆನು ಎಂದು ಗಟ್ಟಿಯಾಗಿ ಅತ್ತು ಕಣ್ಣೀರನ್ನು ಸುರಿಸಿ ಕಡೆಗೆ ಮೌನವನ್ನು ಅವಲಂಬಿಸಿದನು. ರತ್ನಪಡಿವರ್ತಕನು ಅತನನ್ನು ಹೇಗಾದರೂಮಾಡಿ ಪ್ರೇಮುಸೆಲ್‌ನೆಹರಳ ಪ್ರಾತಿನಿಂದ ಸಂತುಷ್ಟಪಡಿಸಬೇಕೆಂದು ನೆನೆದು ಅಯ್ಯಾ! ಇಷ್ಟುಹೊತ್ತಿಗೆ ರಾಣಿಯೆ ದಾದಿಯು ನಮ್ಮವನೆಗೆ ಎಂದಿರಬಹುದಲ್ಲ, ರಾಜಪುತ್ರನು ಅಯ್ಯಾ! ನೀನು ಇಲ್ಲಿಂದ ಹೋಗಬಹುದು. ದಾದಿಯು ನಿನ್ನವನೆಗೆ ಬಂದಿದ್ದುದೇ ಆಗಲಿ ಆಕೆಯಸಂಗಡ ನಾನು ಹೇಳಿದೆನೆಂದು ರಾಣಿಗೆ ಈ ವಾಕ್ಯವನ್ನು ತಿಳಿಸಲಾಗದೆ ಬೇಕಾಗಿಲ್ಲ. ಏನೆನ್ನುವಿಯೋ? ರಾಜಪುತ್ರನು ನಿನಗೋಸ್ಕರವಾಗಿ

ಪ್ರಾಣವನ್ನು ಒಪ್ಪಿಸುತ್ತಿರುವನು. ಆದರೆ ಆತನು ಸತ್ತಬಳಿಕ ಸಮಾಧಿಯಲ್ಲೂ ಕೂಡ ನಿನ್ನನ್ನೇ ಧ್ಯಾನಮಾಡುತ್ತಿರುವನೆಂದು ಹೇಳು. ಇದನ್ನು ನೀನು ಹೇಳದೆಹೋದರೆ ನಮ್ಮ ಸತ್ಯವೇದವಾದ ಖುರಾನಿನಮೇಲೆ ಆಣೆಯುಂಟು. ಇದು ಸತ್ಯನೆಂದುಹೇಳದನು. ನಂತರ ರತ್ನವಿಕ್ರಯವ್ಯಾಪಾರಿಯು ತನ್ನ ಮನೆಯೆನ್ನು ಸೇರಿ ದಾದಿಯು ಯಾವಾಗ ಬರುವಳೋ ಎಂದು ಕಾದುಕೊಂಡಿದ್ದನು. ಸ್ವಲ್ಪಹೊತ್ತಿಗೆ ಆ ದಾದಿಯು ಕಣ್ಣೀರನ್ನು ಸುರಿಸುತ್ತ ಭಯಗ್ರಸ್ತಳಾಗಿ ತನ್ನಮನೆಗೆ ಓಡಿಬರಲು, ರತ್ನವಿಕ್ರಯವ್ಯಾಪಾರಿಯು ಈತೆರದಿಂದ ನಡುಗುತ್ತಿರುವುದಕ್ಕೆ ಕಾರಣವೇನೆಂದು ಕೇಳಲು, ಆಕೆ ಅಯ್ಯಾ ! ರಾಣಿಯೂ, ರಾಜಕುಮಾರನೂ, ನೀನೂ ನಾನೂಸಹ ಮುಳುಗಿಹೋಗುವಕಾಲಬಂದಿತು. ನಾನು ಮೊದಲು ನಿನ್ನಬಳಿಗೆಬಂದಿದ್ದು ಅರಮನೆಗೆ ಹೋದಮೇಲೆ ಕೇಳಿದಸಂಗತಿಯೆನ್ನು ಹೇಳುತ್ತೇನೆ ಕೇಳು.

ಆದಿನ ನಿಮ್ಮಮನೆಗೆ ನನ್ನಸಂಗಡ ಬಂದಿದ್ದ ಇಬ್ಬರು ದಾದಿಯರಲ್ಲಿ ಒಬ್ಬಳು ಏನೋ ಅಪರಾಧ ಮಾಡಿದುದರಿಂದ ಷೇಮುಸೆಲ್‌ನೆಹರಳು ಕೋಪಿಸಿಕೊಂಡಳಂತೆ. ಆದುದರಿಂದ ಆಕೆ ಕೋಪಿಸಿಕೊಂಡು ಬಬ್ಬಾಬ್ಬನೊಬ್ಬ ಖೋಜೆಯ ಸರದಾರನಬಳಿಗೆ ಹೋಗಿ, ಆಕೆಯನ್ನು ಕುರಿತು ರಹಸ್ಯಗಳನ್ನು ಬಿಚ್ಚಿ ದೂರಿಕೊಂಡಳಂತೆ. ಇದನ್ನು ನೋಡಿ ಮತೊಬ್ಬ ದಾದಿಯೂಸಹ ಗೊಳಾಡುತ್ತ ಕಲೀಫರಬಳಿಗೆ ಹೋಗಿ, ಷೇಮುಸೆಲ್‌ನೆಹರಳು ರಾಜಪುತ್ರನನ್ನು ಮೋಹಿಸಿರುವ ಕಾರ್ಯವನ್ನು ವಿಸ್ತರಿಸಿ ಹೇಳಿದಳಂತೆ. ಆದುದರಿಂದ ಇಪ್ಪತ್ತುಮಂದಿ ಖೋಜೆಯ ಸವಾರರು ಬಂದು ರಾಣಿಯೆನ್ನು ಕಲೀಫರ ಸನ್ನಿಧಾನಕ್ಕೆ ಕರದುಕೊಂಡು ಹೋದರು. ಅಲ್ಲಿಂದ ಮುಂದೆ ಏನೇನು ವಿಪರೀತ ಉಂಟಾಗಿರುವುದೋ ? ನನಗೆ ತಿಳಿಯದು. ಆದರೆ ನಾನು ಸಮಯವನ್ನು ನೋಡಿಕೊಂಡಿದ್ದು ಹೊರಹೊರಟು ನಿನಗೀ ವರ್ತಮಾನವನ್ನು ತಿಳಿಯಹೇಳುವುದಕ್ಕಾಗಿ ಬಂದೆನು. ಆದರೆ ನಿನಗೇನುಂಟಾಗುವುದೋ ? ಎಂದು ಭಯಪಡುತ್ತಿರುವೆನು. ಈ ವಿಷಯವನ್ನು ಯಾರಸಂಗಡಲೂ ಹೇಳದೆ ರಹಸ್ಯವಾಗಿ ಇಟ್ಟುಕೊಂಡಿರು ಎಂದು ನುಡಿದಳೆ ದು ಹೇಳಿ ಷಹರಜಾದಿಯು ಬೆಳಗಾದಕೂಡಲೆ ಕಥೆಯನ್ನುನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೨೦೪ನೆಯ ರಾತ್ರಿ ಕಥೆ.

ನಂತರ ದಾದಿಯು ರತ್ನಪಡಿವ್ಯಾಪಾರಿಯನ್ನುಕುರಿತು ಅಯ್ಯಾ! ನೀನು ಈ ವರ್ತಮಾನವನ್ನು ರಾಜಪುತ್ರನಿಗೂ, ಜಾಗ್ರತೆಯಾಗಿ ತಿಳಿಸಿದರೆ ಆತನು ಜಾಗರೂಕನಾಗಿ ತನ್ನ ಪ್ರಾಣವನ್ನು ಳಿಸಿಕೊಳ್ಳಬಹುದು. ಇನ್ನು ಸಾವಕಾಶ ಮಾಡದಂತೆ ಹೊರಡು ಎಂದು ಹೇಳಲು, ರತ್ನಪಡಿವ್ಯಾಪಾರಿಯು ಬಹಳ ಭಯದಿಂದ ಕಂದಿಕುಂದಿದವನಾಗಿ ಓಡಿಬಂದು ಅಯ್ಯಾ! ರಾಜಪುತ್ರನೇ! ಎಂದು ಸಂಬೋಧಿಸಿ ಮುಂದೆ ಮಾತನಾಡುವುದಕ್ಕೆ ಧೈರ್ಯವಿಲ್ಲದೆ ಬಹು ಪ್ರಯಾಸದಿಂದ ಮರಣಸಂಕಟಪಟ್ಟಿರುವ ಮನುಷ್ಯನು ಮಾತನಾಡುವಪ್ರತೆರದಿಂದ ಗದ್ಗದಸ್ವರಯುಕ್ತನಾಗಿ ಇನ್ನು ನಿನ್ನ ಚಿತ್ತೈಶ್ವರ್ಯವನ್ನುಹೊಂದಿ ಕಲೀಫರ ಆಜ್ಞಾನುವರ್ತನೆ ಮೊರೆಕಿ, ಪ್ರಾಣವನ್ನುಬಿಡಲು ಸಿದ್ಧನಾಗಿರೆಂದು ನುಡಿಯಲು, ರಾಜಕುಮಾರನು ಚಿಂತಾಕ್ರಾಂತನಾಗಿ ಅಯ್ಯಾ! ನಿನಗೆಯೇಕೆ. ಈ ಅಪಕಾರ್ಯವೇನಾಗಿರುವದು ವಿಶದವಾಗಿ ನನಗದನ್ನು ತಿಳಿಯಿಸದಿನೆಂದು ಬೇಡಿಕೊಳ್ಳಲು, ರತ್ನಪಡಿವ್ಯಾಪಾರಿಯು ದಾದಿಯ ಮುಖದಿಂದ ತಾನು ಕೇಳಿದ ವರ್ತಮಾನವೆಲ್ಲವನ್ನುಹೇಳಿ, ನೋಡಿದೆಯಾ; ನಿನಗಿನ್ನು ಅಪಾಯ ಬಾರದಿರದು ಆದುದರಿಂದ ಹೇಗಾದರೂ ಮಾಡಿ ಪ್ರಾಣವನ್ನು ಕಾಪಾಡಿಕೋ? ಏ ನಮ್ಮ ಕಲೀಫರಕೈಗೆ ಸಿಕ್ಕಿ ನರಳುವುದಕ್ಕಿಂತಲೂ ನರಕವಾಸವೇ ಸುಖ.

ಆದುದರಿಂದ ನೀನು ಮುಖ್ಯವಾಗಿ ಸಾವಕಾಶ ಮಾಡದೆ ನಿನ್ನ ಪ್ರಾಣವನ್ನು ಉಳಿಸಿಕೊಳ್ಳುವ ಯೋಚನೆಯೆನ್ನು ಮಾಡು ಏಳು. ಇನ್ನು ಸುಮ್ಮನೆ ಕುಳಿತಿರಬೇಡ ಎನಲು, ಆಪಾತಶಿನಿಂದ ರಾಜಪುತ್ರನಿಗೆ ಪ್ರಾಣ ಭಯವುಂಟಾದರೂ, ಆತನು ತನ್ನ ಸ್ನೇಹಿತನನ್ನುಕುರಿತು ಧೈರ್ಯದಿಂದ ಇನ್ನುಮೇಲೆ ನಾವು ತಕ್ಕ ಉಪಾಯವನ್ನು ಯೋಚಿಸದೆ ಸುಮ್ಮನೆ ಇರಬಾರದಲ್ಲವೇ? ಹಾಗಾದರೆ ಈಗ ನಾವು ಮಾಡಬೇಕಾಗಿರುವ ಕಾರ್ಯವೇನು ಹೇಳೆನಲು ಆತನು ಅಯ್ಯಾ! ವೇಗವಾಗಿ ನಡೆಯುವ ಕುದುರೆಯೆನ್ನು ಹತ್ತಿ ಬೆಳಗಾಗುವುದಕ್ಕೆ ಮುಂಚೆ, ಆರ್ಬಾರುನಗರವನ್ನು ಸೇರುವುದಕ್ಕಿಂತ ಬೇರೆ ಯಾವ ಕೆಲಸವೂ ಇಲ್ಲ ಆದುದರಿಂದ ತ್ವರೆಯಾಗಿ ತುರಗವನ್ನುಯೇರಿ ನಿನಗೆ ಬೇಕಾದ ಪದಾರ್ಥಗಳನ್ನು ತೆಗೆದುಕೊಂಡು ಸಂಗಡ

ಇಬ್ಬರು ಪರಿಚಾರಕರನ್ನು ಕರೆದುಕೊಂಡು, ಹೊರಡು ಎಂದು ಹೇಳಲು ರಾಜಕುಮಾರನು ತಮ್ಮ ತಾಯಿಯಿಂದ ಅಪ್ಪಣೆಯನ್ನುಹೊಂದಿ, ಕೆಲವು ವಸ್ತ್ರಗಳನ್ನೂ, ಆಭರಣಗಳನ್ನೂ, ದ್ರವ್ಯವನ್ನೂಸಹ ತೆಗೆದುಕೊಂಡು ಸೇವಕರನ್ನೂ ಸಂಗಡ ಕರೆದುಕೊಂಡು, ರಾಜಕುಮಾರನು ತನ್ನ ಮಿತ್ರನಾದ ರತ್ನಪಡಿವ್ಯಾಪಾರಿಯನ್ನು ಕರೆದುಕೊಂಡು ಹೊರಟನು. ಹಗಲೂ ರಾತ್ರಿಯೂ ನಿಲ್ಲದೆ ಪ್ರಯಾಣ ಮಾಡಿ, ಕಡೆಗೆ ಬೆಳಗಾಗುವುದಕ್ಕೆ ಸ್ವಲ್ಪ ಹೊತ್ತಿರುವಕಾಲದಲ್ಲಿ, ತಾನು ತನ್ನ ಕುದುರೆಯು ಬಹಳವಾಗಿ ಆಯಾಸ ಹೊಂದಿರುವುದನ್ನು ನೋಡಿ, ಎಂದಾನೊಂದು ಸ್ಥಲದಲ್ಲಿ ನಿಂತು, ಕುದುರೆಯನ್ನು ಮೇಯುವುದಕ್ಕೆ ಬಿಟ್ಟು, ತಾವು ಸುದಾರಿಸಿಕೊಳ್ಳುವುದಕ್ಕಾಗಿ ಕುಳಿತುಕೊಂಡರು. ಕೂಡಲೆ ದಾರಿಹೋಕರಾದ ಕಳ್ಳರು ಅವರಮೇಲೆ ಬಿದ್ದು ದೋಚಿಕೊಳ್ಳುವುದಕ್ಕೆ ಬಗಲು, ತಮ್ಮ ತಾಣವು ಕಡಿವೆಯೊಗುವವರಿಗೂ ಹೊದ್ದಾಟ, ನಂತರ ಅವರನ್ನು ಉಪಾಯದಿಂದ ಕೆಲ್ಲಬೇಕೆಂದು ತಿಳಿದು ಅವರಪರಾದರು. ಕಳ್ಳರಾದರೋ ನಿಷ್ಕರುಣದಿಂದ ಅವರ ಮೈಮೇಲಿನ ಬಟ್ಟೆಗಳನ್ನೂ, ಹತ್ತಿದ್ದ ಆಭರಣಗಳನ್ನೂ, ಕುದುರೆಯನ್ನೂ ಸೂರೆಮಾಡಿಕೊಂಡು ಹೊರಟುಹೋದರು.

ಆಗ ನಿರ್ವಾಣರೂಪನಾಗಿ ನರಳುತ್ತಿರುವ ರಾಜಪುತ್ರನು, ತನ್ನ ಸ್ನೇಹಿತನನ್ನು ನೋಡಿ, ಅಯ್ಯಾ ! ಈ ಅರಣ್ಯದಲ್ಲಿ ಇಂತಹ ದುರವಸ್ಥೆಯನ್ನು ಹೊಂದಿ, ನರಳುವುದಕ್ಕಿಂತಲೂ, ನಮ್ಮ ಮನೆಯಲ್ಲಿ ಇದ್ದುಕೊಂಡು ಕಲೀಫರಕೈಗೆ ಸಿಕ್ಕಿ ಅವರ ಆಜ್ಞಾನುವರ್ತಿಗಳಾಗಿ ಸಾಯುವುದೇ ಸುಖವಾಗಿದ್ದಿತಲ್ಲಾ ! ಎನಲು, ರತ್ನಪಡಿವ್ಯಾಪಾರಿಯು, ಅಯ್ಯಾ ! ಯಾವ ಯಾವ ಕಾಲದಲ್ಲಿ ಭಗವಂತನು ನಮ್ಮಗಳಿಗೆ ಎಂಥೆಂಥಹ ತೊಂದರೆಯನ್ನು ಕೊಡಬೇಕೆಂದು, ಸಂಕಲ್ಪಿಸಿರುವನೋ ನಮಗೆ ತಿಳಿಯದು. ವಿಪತ್ಸಾಗರದಲ್ಲಿ ಕಷ್ಟಪರಂಪರೆಗಳೆಂಬ ತೆರೆಗಳನ್ನು ತಂದೊಡ್ಡಬೇಕೆಂಬುದು ಭಗವಂತನ ಮುಖ್ಯೋದ್ದೇಶವಾಗಿರುವಲ್ಲಿ ನಾನೊಲ್ಲೆನೆಂದರೆ ನಡೆದೀತೇ ! ಮುಖ್ಯವಾಗಿ ಅನುಭವಿಸಬೇಕಾದ ಕರ್ಮಗಳನ್ನು ಪೂರೈಸಿದ ಹೊರತು, ಸುಖವಿಲ್ಲ. ಆದುದರಿಂದ ನಾವು ಇಲ್ಲಿ ಕುಳಿತುಕೊಂಡಿರುವುದು ನ್ಯಾಯವಲ್ಲ ಬಾ ! ಮುಂದೆಲ್ಲಿಗಾದರೂ ಹೋದರೆ ಸುಖವುಂಟಾಗಬಹುದೆಂದು

ಸಾಹಸನು. ಬಳಿಕ ರಾಜಕುವಾರನು ರತ್ನಪಡಿ ವ್ಯಾಪಾರಿಯೆನ್ನು ಕುರಿತು, ಅಯ್ಯಾ! ನಾನು ಹೇಗಿದ್ದರೂ, ಸಾಯೆತಕ್ಕವನೇಹೊರತು, ಬದುಕತಕ್ಕವನೆಂದಿಗೂ ಅಲ್ಲ. ಇದುವರಿಗೆ ರಾಣಿಯಾದ ಷೇಮುಸೆಲ್‌ನೆಹ ರಳು ಸತ್ತುಹೋಗಿರಬೇಕು. ಆದುದರಿಂದ ನಾನಿನ್ನು ಪ್ರಾಣವನ್ನುಳಿಸಿ ಕೊಂಡಿರಲಾರೆನೆಂದು ನುಡಿಯಲು, ರತ್ನಪಡಿವ್ಯಾಪಾರಿಯು ಬಹಳವಾಗಿ ಬೇಡಿಕೊಂಡುದರಿಂದ, ಬಹುವ್ಯಯಾಸದಿಂದ ಸಮ್ಮತಿಸಿ, ಮುಂದೆ ನಡೆದು ಬಂದು, ಒಂದಾನೊಂದು ಮನೆಯಲ್ಲಿ ರಾತ್ರಿಯನ್ನು ಕಳೆದರು. ಅಂತರ, ಬೆಳಿಗಿನ ಜಾವದಲ್ಲಿ ಪ್ರಾರ್ಥನೆಗಾಗಿ ಬಂದ ಒಬ್ಬಾಬ್ಬನೊಬ್ಬ ದೊಡ್ಡಮನುಷ್ಯನನ್ನು ಕಂಡು, ರತ್ನಪಡಿವ್ಯಾಪಾರಿಯು ವಂದಿಸಿದನು. ಆಗ ಆತನು ರತ್ನಪಡಿವ್ಯಾಪಾರಿಯೆನ್ನು ನೋಡಿ, ನಿನ್ನನ್ನು ನೋಡಿದರೆ, ವಿನೋದಗಾರನಂತೆ ತೋರುವುದೆನಲು, ಅಯ್ಯೋ! ವಿನೋದವೇ! ನಿನ್ನೆರಾತ್ರಿ ನಾವು ದಂಗೇಕೋರರಕೈಗೆ ಸಿಕ್ಕಿ, ಬಲವಾದ ಪೆಟ್ಟುಗಳನ್ನು ತಿಂದು, ನಮ್ಮ ಪದಾರ್ಥವನ್ನೆಲ್ಲಾ ಸೂರೆಗೊಟ್ಟು, ಉಡುವುದಕ್ಕೆ ವಸ್ತ್ರಪ್ರೂಕೂಡ ಇಲ್ಲದೆ ಇಲ್ಲಿಗೆಬಂದು ಯಾರಬಳಿಗೆಹೋಗೋಣ! ಏನುವಾಡೋಣವೆಂದು ಚಿಂತಿಸುತ್ತಿದ್ದಕಾಲದಲ್ಲಿ, ಭಗವದಾಜ್ಞೆಪದಿಂದ ನೀನು ಕಾಣಿಸಿಕೊಂಡೆ ಎಂದು ನುಡಿಯಲು, ಆತನು ಅಯ್ಯಾ! ನೀವು ನಂಬಿಕೆಯಿಂದ ನನ್ನಮನೆಗೆ ಬರುವುದಾದರೆ, ನನ್ನಕ್ಕೆಲಾದ ಸಹಾಯವನ್ನು ಮಾಡುವೆನೆಂದು ಹೇಳಿದನು.

ರತ್ನಪಡಿವ್ಯಾಪಾರಿಯು ರಾಜಪುತ್ರನಕಡೆಗೆ ತಿರುಗಿ ಆತನ ಅಭಿಪ್ರಾಯವನ್ನು ಕೇಳಲು, ನಿನ್ನಿಷ್ಟಾನುಸಾರವಾಗಿ ನಡೆಸುವುದೇ ನನ್ನಭಿಮತವೆಂದುಲೆಆತನು ಹೇಳಲು, ಇವರಿಬ್ಬರ ವಾಗ್ವಾದವನ್ನು ನೋಡಿದವನಾದ, ಆ ಮನೆಯಲ್ಲಿದ್ದ ಮನುಷ್ಯನು, ಏನಯ್ಯಾ! ನನ್ನಗೃಹಕ್ಕೆ ಬರುವುದರಲ್ಲಿ ನಿಮ್ಮಭಿಪ್ರಾಯವೇನೆನಲು, ಅಯ್ಯಾ! ನಾವು ನಿಮ್ಮ ಮನೆಗೆ ಬರುವುದರಲ್ಲಿ ಸಂಶಯವೇನೂ ಇಲ್ಲ. ಆದರೆ ಬೀದಿಯಲ್ಲಿ ನಿರ್ವಾಣಯುಕ್ತರಾಗಿ ಬರಬೇಕಲ್ಲಾ! ಎಂದು ಚಿಂತಿಸುತ್ತಿರುವೆವು ಎಂದು ಹೇಳಿದನು. ನಂತರ ಅದೃಷ್ಟವಶದಿಂದ ಆತನಬಳಿಯಲ್ಲಿ ವಸ್ತ್ರಗಳನ್ನು ಧರಿಸಿಕೊಂಡು, ಅವನಸಂಗಡಲೇ ಮನೆಗೆ ಹೋಗಲು, ಆತನು ಇವರಿಬ್ಬರಿಗೂ

ಉತ್ತಮವಾದ ಭೋಜನವನ್ನು ತಂದಿಡಲು, ಭೋಜನ ಮಾಡಿದರು. ಆದರೆ ರಾಜಪುತ್ರನಿಗೆ ಭೋಜನಮಾಡಿದಕೂಡಲೆ ವಿರಹವು ಅತಿಯಾಗಿ ಹೆಚ್ಚಿ ಸಾಯುವ ಅವಸ್ಥೆಯಲ್ಲಿದ್ದನು ಮನೆಯ ಯಜಮಾನನು ನಾಲ್ಕೈದುಸಾರಿ ಬಂದು ನೋಡಿಕೊಂಡುಹೋದನು. ಅದರೆ ತಾತ್ಪರ್ಯವೆಲ್ಲ ಪ್ರಾಣಹೋಗುವಹಾಗಿದ್ದುದರಿಂದ, ರಾಜಪುತ್ರನನ್ನು ಸತ್ಕರಿಸುತ್ತಾ, ಆತನಬಳಿಯಲ್ಲಿ ಕುಳಿತುಕೊಂಡು ಅಯ್ಯಾ! ನೀನು ಏತಕ್ಕೆ ಇಷ್ಟೊಂದು ವ್ಯಸನದಿಂದ ಕೊರಗುತ್ತಿರುವೆ ಎಂದು ಕೇಳಲು, ಆತನು ಬಹಳವಾಗಿ ಕಣ್ಣೀರನ್ನು ಸುರಿಸುತ್ತಾ, ಅಯ್ಯಾ! ನನ್ನಲ್ಲಿ ಒಹಳವಾಗಿ ಪ್ರೀತಿ ವಿಶ್ವಾಸಗಳನ್ನಿಟ್ಟು ಸಾಕಿದ ತಾಯಿಯೊಬ್ಬಳಿರುವಳು. ನಾನುಕೂಡ ಆಕೆಯಮೇಲೆ ಬಹಳವಾಗಿ ವಿಶ್ವಾಸವನ್ನಿಟ್ಟುಕೊಂಡಿದ್ದೆನು. ಆಕೆಯ ಎದುರಿಗೆ ನನ್ನಪ್ರಾಣವನ್ನು ಬಿಡುವುದಕ್ಕೆಲ್ಲವಾಯಿತಲ್ಲಾ! ಎಂದು ನನಗೆ ತುಂಬ ವ್ಯಸನವಾಗುತ್ತಿರುವುದು.

ನಾನು ಸತ್ತಬಳಿಕ ತಾನು ಸ್ವಹಸ್ತದಿಂದ ಕಣ್ಣುಗಳನ್ನು ದುಚ್ಚಿಸಿ, ಕಣ್ಣೀರಿನಿಂದ ಕಲಸಿದ ಮಣ್ಣಿನಿಂದ ಗೋರಿಯೆನ್ನು ಕಟ್ಟಿಸಿಕೊಳ್ಳುವ ಪುಣ್ಯವು ನನಗುಂಟಾಗಲಿಲ್ಲವಲ್ಲ. ಆಯ್ಯೋ! ಹೇಗಾದರೂ ಮಾಡಿ ನನ್ನ ಶವವನ್ನು ಬಾಗದಾದಿಗೆ ತೆಗೆದುಕೊಂಡುಹೋಗಿ, ನಮ್ಮ ತಾಯಿಯೆಮುಂಲಕವಾಗಿಯೇ ಸಮಾಧಿ ಮಾಡಿಸಬೇಕೆಂದು ಹೇಳಿ, ಮನೆಯ ಯಜಮಾನನನ್ನು ಕುರಿತು, ಅಯ್ಯಾ! ನನ್ನ ಮರಣಕಾಲದಲ್ಲಿ ನೀನು ಮನೆಯೆನ್ನುಕೊಟ್ಟುದಕ್ಕಾಗಿ ನಾನು ಬಹಳವಾಗಿ ವಂದಿಸುವೆನು. ಆದುದರಿಂದ ನನ್ನ ಶವವನ್ನು ಬಾಗದಾದಿಗೆ ತೆಗೆದುಕೊಂಡು ಹೋಗುವವರೆಗೂ, ನಿನ್ನಮನೆಯಲ್ಲೇ ಇಡುವಂತೆ ಮಾಡಿಸಬೇಕೆಂದು ಹೇಳಿ ಬೇಡಿಕೊಂಡು, ತಾನು ಪ್ರಾಣವನ್ನು ಬಿಟ್ಟನು. ಸುಲ್ತಾನರೇ ಈತರದಿಂದ ಪರ್ಷಿಯಾ ರಾಜಪುತ್ರನು ಮರಣಹೊಂದಿದನೆಂದು ಹೇಳಿ, ಷಹರಜಾದಿಯು ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಿಗಿನ ಜಾವದಲ್ಲಿ ಪುನಹಹೇಳಲಾರಂಭಿಸಿದಳು.

೨೦೯ ನೆಯ ರಾತ್ರಿ ಕಥೆ.

ರಾಜಕುಮಾರನು ಸತ್ತುಹೋದ ಮಾರನೆಯದಿನ ಬೆಳಿಗ್ಗೆ ರತ್ನ ಪಡಿವ್ಯಾಪಾರಿಯು ವ್ಯಾಪಾರಸ್ಥರ ಜೊತೆಯಲ್ಲಿ ಹೊರಟು, ಸುಖವಾಗಿ ಬಾಗದಾದುನಗರವನ್ನು ಸೇರಿ, ತನ್ನಮನೆಗೆ ಹೋಗಿ ಬೇರೆ ಉಡುಪುಗಳನ್ನು ಹಾಕಿಕೊಂಡು, ಸ್ವಲ್ಪಹೊತ್ತು ವಿಶ್ರಮಿಸಿಕೊಂಡು, ರಾಜಕುಮಾರನಮನೆಗೆ ಬರುತ್ತಿರುವುದನ್ನು ಆತನಸೇವಕರು ಕಂಡು, ಅಯ್ಯೋ! ನಮ್ಮ ರಾಜನನ್ನು ಈತನು ಕರೆದುಕೊಂಡುಹೋಗಿ ಈಗ ತಾನೊಬ್ಬನೇ ಬರುತ್ತಿರುವುದರಿಂದ, ರಾಜಪುತ್ರನಿಗೇನೋ ಅಪಾಯ ಸಂಭವಿಸಿರಬಹುದೆಂದು, ಬಹಳವಾಗಿ ಚಿಂತಿಸಿದರು. ರತ್ನಪಡಿವರ್ತಕನು ಬಂದಿರುವ ವರ್ತಮಾನವನ್ನು ದಾದಿಯೆರು ತಮ್ಮ ಧೊರೆಸಾನಿಗೆ ತಿಳುಹಲು, ಆಕೆ ಸ್ವಲ್ಪ ಹೊತ್ತಿಗೆ ಇಪ್ಪತ್ತುಮಂದಿ ದಾದಿಯೆರಿಂದ ಕೂಡಿ, ಒಲಗಶಾಲೆಯಲ್ಲಿ ದರ್ಶನವನ್ನು ಕೊಟ್ಟಳು.

ನಂತರ ವರ್ತಕನು ಆಕೆಗೆ ವಂದನೆಗಳನ್ನು ಸಮರ್ಪಿಸಿ, ಅಮ್ಮಾ! ಭಗವಂತನು ನಿಮ್ಮ ಇಷ್ಟಾನುಸಾರವಾಗಿ ಸಕಲ ಸಂಪತ್ತುಗಳನ್ನು ದಯಪಾಲಿಸಿ ಕಾಪಾಡುತ್ತಿದ್ದರೂ, ತನ್ನ ಕೋರಿಕೆಯೆನ್ನು ಮಾತ್ರ ತಪ್ಪದೆ ನೆರವೇರಿಸಿಕೊಳ್ಳುವನೆಂಬುದೆ, ತಮಗೆ ತಿಳಿದ ವಿಷಯವೇ ಆಗಿರಬಹುದಲ್ಲಾ ಎನಲು, ರಾಜಕುಮಾರನ ತಾಯಿಯು, ಆತನ ಮಾತಿಗೆ ಪ್ರತ್ಯುತ್ತರವನ್ನು ಹೇಳದೆ, ಆಯ್ಯೋ! ನನ್ನ ಕುಮಾರನ ಮರಣವಾರ್ತೆಯನ್ನು ಹೇಳುವುದಕ್ಕಾಗಿ ಬಂದಿರುವೆಯಾ! ಎಂದು ಗಟ್ಟಿಯಾಗಿ ಅರಚುತ್ತಾ ನೆಲಕ್ಕೆ ಬಿದ್ದು, ಬಹಳಹೊತ್ತಿನವರಿಗೂ ಮೂರ್ಛೆ ಹೋಗಿ, ನಂತರ ಮೂರ್ಛೆ ತಿಳಿದಬಳಿಕ, ಬಹಳವಾಗಿ ರೋದಿಸಿ, ಅಯ್ಯಾ! ನನ್ನ ಮಗನು ಸಾಯುವ ಕಾಲದಲ್ಲಿ ನಿನ್ನೊಡನೆ ಏನುಮಾಲಿಪನೆಂದು ಕೇಳಲು, ರತ್ನಪಡಿವ್ಯಾಪಾರಿಯು ರಾಜಪುತ್ರನ ಅವಸಾನಕಾಲದ ಮಾತ್ರೆಗಳನ್ನೆಲ್ಲಾ ಹೇಳಿ, ತನ್ನ ಶವವನ್ನು ಬಾಗದಾದಿಗೆ ತರಿಸಿಕೊಂಡು, ತನ್ನ ತಾಯಿಯ ಮೂಲಕವಾಗಿಯೇ ಸಮಾಧಿ ಮಾಡಬೇಕೆಂದು ಬೇಡಿಕೊಂಡನೆಂದು ನುಡಿಯಲು, ರಾಜಪುತ್ರನ ತಾಯಿಯು ಬಹು ವ್ಯಸನಾಂತರ್ಗತಹೃದಯಳಾಗಿ

ತನ್ನ ದಾದಿಯರನ್ನೂ, ಸೇವಕರಲ್ಲಿ ಕೆಲವರನ್ನೂ, ಕರೆದುಕೊಂಡು, ತನ್ನ ಮಗನ ಹೆಣವನ್ನು ತಂದು ಸಂಸ್ಕರಿಸುವುದಕ್ಕಾಗಿ, ಬಾಗದಾದುನಗರವನ್ನು ಬಿಟ್ಟು ಹೊರಟಳು. ಒಳಿಕೆ ಆ ವರ್ತಕನು, ತನ್ನ ಸ್ನೇಹಿತನಾದ ರಾಜಪುತ್ರನು ಅಕಾಲಮರಣವನ್ನು ಹೊಂದಿದುದಕ್ಕಾಗಿ, ಚಿಂಚಿಸುತ್ತಾ ತನ್ನ ಮನೆಗೆ ಬರುತ್ತಿರಲು, ದಾರಿಯಲ್ಲಿ ಕಣ್ಣೀರನ್ನು ಸುರಿಸುತ್ತಾ ನಿಂತಿರುವ ಒಬ್ಬಾಬ್ಬಸೊಬ್ಬ ಸುಂದರೀಮಣಿಯೆನ್ನು ಕಂಡು, ಆಕೆ ಷೇಮುಸೆಲ್‌ನೆಹರಳ ನಂಬಿಕೆಗೆ ಪಾತ್ರಳಾದ ದಾದಿಯೆಂದರಿತು, ಯಾವ ಮಾತನ್ನೂ ಆಡದೆ ತನ್ನಮನೆಗೆ ಹೊರಟುಹೋದನು. ದಾದಿಯು ಆತನಸಂಗಡಲೇ ಹೊರಟಳು. ಅವರಿಬ್ಬರೂ ಕುಳಿತುಕೊಂಡಮೇಲೆ, ರತ್ನಪಡಿವ್ಯಾಪಾರಿಯು ಅಮ್ಮಾ! ನೀನು ರಾಜಕುಮಾರನ ಮರಣವಾರ್ತೆಯನ್ನು ಕೇಳಿ, ವ್ಯಸನಪಡುತ್ತಿರುವೆಯೊ ಏನಲು, ದಾದಿಯು ಮೊದಲಿಗಿಂತಲೂ, ಆಶ್ಚರ್ಯಯುಕ್ತಳಾಗಿ ಆಹಾ! ರಾಜಕುಮಾರನು ಸತ್ತುಹೋದನೇ? ಹಾಗಾದರೆ ಷೇಮುಸೆಲ್‌ನೆಹರಳು ಸತ್ತುಹೋದಬಳಿಕ, ತಾನು ಬದುಕಿರಲಾರದೆ ಪ್ರಾಣವನ್ನು ತೊರೆದುಕೊಂಡಿರಬಹುದು.

ಆಹಾ! ಸುಂದರಾಂಗರಾದ ಪ್ರಾಮುಕರಿರಾ! ನಿಮ್ಮ ನಿಮ್ಮ ಅನ್ಯೋನ್ಯವಾದ ಮೋಹವನ್ನು ಸ್ಫೂರ್ತಿಮಾಡಿಕೊಳ್ಳುವುದಕ್ಕೆ, ನಿಮ್ಮ ನಿಮ್ಮ ದೇಹವೇ ಅಡ್ಡಿಯಾಗಿದ್ದುದರಿಂದ, ಭಗವಂತನು ಆ ಅಡ್ಡಿಯನ್ನು ನೀಗಿದುದರಿಂದ ನೀವು ಎಲ್ಲಿದ್ದರೂ, ಪರಸ್ಪರ ಪ್ರೇಮಾತಿಶಯದಿಂದ ಕೂಡಿ ಸುಖವಿಂದಿರೆಂದು ನುಡಿಯಲು, ರತ್ನಪಡಿವ್ಯಾಪಾರಿಯು ಬಹು ಆಶ್ಚರ್ಯವನ್ನು ಹೊಂದಿ, ಹಾಗಾದರೆ ಷೇಮುಸೆಲ್‌ನೆಹರಳು ಸತ್ತುಹೋದಳೇ? ಎನಲು, ಅಯ್ಯಾ! ಆ ಮೋಹನಾಂಗಿಯ ಮರಣವು ಬಹು ಆಶ್ಚರ್ಯಕರವಾದುದು. ಅದನ್ನು ನಾನು ನಿನಗೆ ವಿಸ್ತರಿಸಿ ಹೇಳುವೆನು. ಆದರೆ ನೀನು ರಾಜಪುತ್ರನ ಮರಣವಾರ್ತೆಯನ್ನು ಹೇಳಿದರೆ, ಮೊದಲು ನನ್ನ ದುಃಖವನ್ನಿ ಬಹುಭಾಗವು ಪಡಿಮೆಯಾಗುವುದರಿಂದ, ಅದನ್ನು ನಿರೂಪಿಸುವನಾಗು. ನನ್ನ ಪ್ರಾಣಕ್ಕಿಂತಲೂ ರಾಣಿಯು ಮತ್ತು ರಾಜಪುತ್ರನ ಮರಣವನ್ನು ನೆನೆದು ಕೊರಗಿ ಸಾಯುವುದೇ ನನ್ನ ಧರ್ಮವಾಗಿರುವುದೆಂದು ಹೇಳಿದಳು. ರತ್ನಪಡಿವ್ಯಾಪಾರಿಯು ರಾಜಕುಮಾರನ ಮರಣ

ವಾರ್ತೆಯನ್ನು ಸಂಪೂರ್ಣವಾಗಿಹೇಳಿ ನಿಲ್ಲಿಸಿಬಲಿಕ, ದಾಸಿಯು ರಾಣಿಯ ಸಂಗತಿಯನ್ನು ಹೇಳಲಾರಂಭಿಸಿ, ಅಯ್ಯಾ ! ರಾಣಿಯನ್ನು ಕಲೀಫರು ಕರೆಸಿಕೊಂಡ ವಾರ್ತೆಯನ್ನು ಮೊದಲೇ ನಿನಗೆ ಹೇಳಿದ್ದೆನಷ್ಟೆ ? ಅವರು ರಾಣಿಯನ್ನು ಕರೆಸಿ, ಆಕೆಯು ಸೌಲಭ್ಯ ಸೌಂದರ್ಯದಿಂದ ಅವಳನ್ನು ಖಂಡಿಸಲಾರದೆ, ರಾಜಪುತ್ರನಮೇಲೆ ಕೋಪವನ್ನು ತಾಳಿದವರಾಗಿ ಬಹುಸಂತೋಷದಿಂದ ಮೋಸುಲ್‌ನೆಲಕ್ಕೆ ಬರಲಿಕ್ಕೆ ಬಂದು, ಪ್ರಿಯೇ ! ನಿನಗೆ ಬಹುಜನ ಶತ್ರುಗಳಿರುವರು. ಇವರು ನಿನ್ನಲ್ಲಿ ಕೆಲವು ಅಪವಾದಗಳನ್ನು ತೋರ್ಪಡಿಸಿರುವರು. ಅದು ನಿಜವೆನ್ನುವುದಕ್ಕೆ ಬಹಳವಾದ ನಿದರ್ಶನಗಳೂ ಉಂಟು. ಆದುದರಿಂದ ನಿನ್ನನ್ನು ನೋಡುವುದಕ್ಕೆ ನನಗೆ ಬಹಳವಾಗಿ ವ್ಯಸನ ಉಂಟಾಗುತ್ತಿದೆ. ನಿನ್ನಲ್ಲಿ ಪ್ರೇಮದಿಂದ ಬಹು ವಿಶ್ವಾಸದಿಂದ ಗೌರವನನ್ನಿತ್ತಿದ್ದೆನು.

ಇದುವರೆಗೂ ನೀನು ಅನುಜ್ಞನಿಸುತ್ತಿದ್ದ ಲು ದುರವಸ್ಥೆಯನ್ನು ತೊರೆದು, ಎಂದಿನಂತೆ ನನ್ನೊಡನೆ ಸರಸಸಲ್ಲಾಪಗಳನ್ನಾಡುತ್ತಿರು ಬಾ ! ಎಂದು ನುಡಿದು ಆಕೆಗೆ ತಕ್ಕ ಉಪಚಾರವನ್ನು ಮಾಡುತ್ತಾ, ವಿನೋದವಾಗಿ ಮಾತನಾಡತೊಡಗಿದನು. ಸ್ವಲ್ಪಹೊತ್ತು ಕಳೆದಬಳಿಕ ಬಹು ವಿನೋದಕರವಾಗಿ, ಅಲಂಕರಿಸಿರುವ ಅಂತಃಪುರಕ್ಕೆ ಕರೆದುಕೊಂಡುಹೋಗುವಂತೆ ಅಜ್ಞೆಮಾಡಿದನು. ಕಲೀಫರು ತನ್ನಲ್ಲಿಗೆ ಪ್ರೀತಿಯುಳ್ಳವನಾಗಿರುವುದನ್ನು ನೋಡಿ, ತಾನು ಅವರಿಗಿಂತಲೂ ಅಧಿಕವಾದ ಮೋಹವನ್ನು ತೋರ್ಪಡಿಸಬೇಕೆಂದು, ಮೋಸುಲ್‌ನೆಲಕ್ಕರಸು ಚಿಂತಿಸಿ, ಆಹಾ ! ರಾಜಕುಮಾರನನ್ನು ನೆನೆಸಿಕೊಂಡು, ಪುನಳಿ ಮೂರ್ಛೆ ಎಚ್ಚಿವುಂಟಾಗುವುದೋ ಎಂದು ಚಿಂತಿಸುತ್ತಿದ್ದಳು. ರಾಣಿಗೂ ಕಲೀಫರಿಗೂ ಈತೆರನಾದ ಸಂಭಾಷಣೆಯು ನಡೆಯುತ್ತಿರುವ ಕಾಲದಲ್ಲಿ, ನಾನು ನಿನ್ನ ಮನೆಯಲ್ಲಿ ಇದ್ದೆನು. ನಂತರ ಇದ್ದಿಂದ ಹೊರಟು ನಾನು ರಾಣಿಯ ಅಂತಃಪುರಕ್ಕೆ ಹೋಗಿ, ಆಕೆಯನ್ನು ಕಾಣಿಸಿಕೊಳ್ಳಲು, ಆಕೆ ನನ್ನ ಕೈಗಳನ್ನು ಹಿಡಿದುಕೊಂಡು, ತಂಗಿಯ್ಲ ಅಮಾ ! ಇದೇ ನನಗೆ ಅಂತ್ಯಕಾಲವೆಂದು ತಿಳಿಸುಕೋ ! ನೀನು ನನಗೆ ಸಹಾಯದ ಉಪಚಾರಕ್ಕಾಗಿ, ನಾನು ಒಡನೆಯಾಗಿ ನಿನ್ನನ್ನು ಕಂಪಿಸುವೆನು ಎಂದು ಹೇಳಿ, ಸಿಟ್ಟುಸುರನ್ನು ಬಿಡುತ್ತ, ಬಹಳವಾಗಿ

ಸಂಕಟ ಪಟ್ಟಳು. ಆ ಕಾಲದಲ್ಲಿ ನಾನು ಯಾವ ಶತ್ರುತ್ಯೋಪಚಾರವನ್ನೂ ಮಾಡಲಾರದ ಸ್ಥಳದಲ್ಲಿದ್ದುದರಿಂದ, ಸುಮ್ಮನಿದ್ದೆನು. ಸ್ವಲ್ಪಹೊತ್ತಿಗೆ ಕಲೀಫರಂ ಅಲ್ಲಿಗೆಬಂದು ಪೇಸುಸೆಲ್‌ನೆಯಳನ್ನು ಪಕ್ಕಡಲ್ಲಿ ಕೂಳ್ಳರಿಸಿಕೊಂಡು, ತಾಪು ಕುಳಿತುಕೊಂಡಲಿ. ಮಾಡಿಯೆರು ನರ್ತನವನ್ನೂ, ಸಖಿಯೆರು ವೀಣಾನಾದವನ್ನೂ, ವಾದ್ಯಗಾರರು ವಿವಿಧವಾದ್ಯವನ್ನು ಮಾಡುತ್ತಿರುವ ಕಾಲದಲ್ಲಿ, ಕಲೀಫರ ನಮನೆ ಕೂಳತುಕೊಂಡಿದ್ದ ರಾಣಿಯು, ಮೂರ್ಛಾಕ್ರಾಂತಳಾದಳೆಂದು, ನಾವು ತಿಳಿದುಕೊಂಡಿದ್ದೆವು. ಆದರೆ ಆಕೆ ಸತ್ತುಹೋಗಿದ್ದಳು. ಮುತ್ತೆಗೆಯಂದ ನಾವು ನಮ್ಮ ರಾಣಿಯನ್ನು ಹೋಗಲಾಡಿಸಿಕೊಂಡೆವು. ನಂತರ ಕಲೀಫರು ಬಹಳನಾಗಿ ವ್ಯಸನಾಕ್ರಾಂತರಾಗಿ, ಆಕೆಗಾಗಿ ಕಟ್ಟಿಸಿದ್ದ ಗೋರಿಯಲ್ಲಿ ಸಮಾಧಿಮಾಡಿಸಿ, ಅದನ್ನು ನನ್ನವಶದಲ್ಲಿ ಕೊಟ್ಟು, ನನಗೆ ಮರಣಕಾಲವಿನವಿಗೂ ಪರ್ಯಾಸನವನ್ನು ಗೊತ್ತುಮಾಡಿರುವರು. ನನ್ನಜೀವಿತವು ಪಾಪಿಗಳಿಗಾಗಿ ಬಿನಕಾಲದವರಿಗೂ ಜೀವಿಸಿವುದಕ್ಕೆ ಅನುಕೂಲಸುವಂತೆ ಸುಖಗಳನ್ನು ಸಿದ್ಧಪಡಿಸಿಟ್ಟಿರುವರು.

ಆದುದರಿಂದ ಪರಸ್ಪರ ಪ್ರೀತಿಯುಳ್ಳವರಾಗಿ ಪ್ರಾಣವನ್ನು ಕಳೆದುಕೊಂಡ ಆ ಕಾಮುಕರಿಬ್ಬರ ಶವಗಳನ್ನು ಮಂದೆ ಗೋರಿಯಲ್ಲಿಡಬೇಕೆಂದು, ನಾನು ಕೋರುವವನ್ನಿಟ್ಟೆ, ಆ ವಿಷಯದಲ್ಲಿ ನನ್ನಕೈಲಾಗುವ ಸಹಾಯವಿಲ್ಲವನ್ನು ಮಾಪುವೆನೆಂದು ಜೀಳವ ಜಾತಿಯವಾತನನ್ನು ಕೇಳಿ, ಗೋರಿಯೆಬಳಿಗೆ ಹೋಗಿ ನೋಡಿ, ಬಾಗಿಲಾಗಿ ಯಾರು ನಿಂತು ನೋಡುತ್ತಿರುವುದರಿಂದ, ಪತ್ತರ ಹೊಗಲಾಪ್ಪದಕ್ಕೆ ಆವಕಾಶವಿಲ್ಲವೆ, ದೂರದಲ್ಲೇ ನಿಂತು ಕಾಯ್ದಿರಿಸಿ, ಆ ಜಾತಿಯವು ವಾಸಮಾಡುವ ಆ ಊರಲ್ಲಿಲ್ಲಾ ಹರದಿಬಜೊರತು, ಇವರಿಬ್ಬರನ್ನು ಮಂದೇ ಸಮಾಧಿಯಲ್ಲಿಡಿಸಲಾಗುವುದಿಲ್ಲವೆಂದು ಚಿಂತಿಸುತ್ತಾ ಇದ್ದೆನು. ಅಷ್ಟರಲ್ಲೇ ರಾಜಪುತ್ರನ ಶವವು ಇಪ್ಪತ್ತುಮೈಲಿ ದೂರದಲ್ಲಿರುವುದೆಂದು ತಿಳಿದಕೂಡಲೇ, ಈ ಊರಿನ ಜನರೆಲ್ಲರೂ ಅಲ್ಲಿಗೆ ಹೋಗಿ, ಊರಿಗೆ ಶವವನ್ನು ತಾಗಿಸಿಕೊಂಡು ಬಂದರು. ಆಗ ದಾವಿಯು, ರಾಜಪುತ್ರನ ತಾಯಿಯನ್ನು ಕುರಿತು, ಅಮ್ಮಾ! ನಮ್ಮ ರಾಣಿಯೂ ನಿನ್ನ ಪುಗನೂ ಮೊದಲಿಸಿಂಪಲೂ ಪರಸ್ಪರ ಮೋಹಾತಿಶಯ ಮುಳ್ಳವರಾಗಿದ್ದು ಸತ್ತುಹೋದುದರಿಂದ, ಈ ಪಟ್ಟಣದಲ್ಲಿನ ಸಮಸ್ತ

ಜನರೂ ಒಪ್ಪುವಂತೆ ನಿನ್ನ ಮಗನ ಶವವನ್ನು ಷೇಮುಸೆಲ್‌ನೆಹರಳ ಗೋರಿಯಲ್ಲಿ ಇಡಿಸಬೇಕೆಂದು ಬೇಡಿಕೊಂಡಳು. ಆಕೆ ಅದೇಮೇರೆಗೆ ಸಮ್ಮತಿಸಿದುದರಿಂದ, ಅಲ್ಲಿ ನೆರೆದಿದ್ದ ಜನರೆಲ್ಲರೂ ರಾಜಪುತ್ರನ ಶವವನ್ನು ತಂದು, ಆ ಗೋರಿಯಲ್ಲಿ ಸಮಾಧಿ ಮಾಡಿದರು. ಆದುದರಿಂದಲೇ ನಮ್ಮ ಮಹನ್ಮ ದೀಯ ಮತಸ್ಥರೆಲ್ಲರೂ, ಆ ಪಟ್ಟಣವು ಪುಣ್ಯಸ್ಥಲವೆಂದು ತಿಳಿದು, ಇಗಲೂ ಯಾತ್ರೆ ಹೋಗುತ್ತಿರುವರೆಂದು ಹೇಳಿ, ಕಥೆಯನ್ನು ಮುಗಿಸಿದಳು. ದಿನರಜಾದಿಯು, ತನ್ನ ಸಹೋದರಿಯಾದ ಷಹರಜಾದಿಯನ್ನು ಕುರಿತು, ಅಕ್ಕಾ ! ನೀನು ಹೇಳಿದ ಕಥೆಯಿಂದ ನನಗೆ ಪರಮೋತ್ಸಹ ಉಂಟಾಯಿತೆಂದು ನುಡಿಯಲು, ಷಹರಜಾದಿಯು ತಂಗೀ ! ಸುಲ್ತಾನರು ದಯೆಮಾಡಿ ನನ್ನ ಪ್ರಾಣವನ್ನು ಉಳಿಸಿದುದೇ ಆದರೆ, ನಾಳಿನದಿನ ಇದಕ್ಕಿಂತಲೂ ಅತಿಚಮತ್ಕಾರವಾಗಿರುವ, ರಾಜಕುಮಾರನಾದ ಕಮರಲು ಜಮಾನನ ಕಥೆಯನ್ನು ಹೇಳುವೆನೆಂದು ನಿರೂಪಿಸಿದಳು.

೨೧೦ ನೆಯ ರಾತ್ರಿ ಕಥೆ.

ಮರುದಿನ ಬೆಳಗಿನ ಜಾವದಲ್ಲಿ ತನ್ನ ತಂಗಿಯಾದ ದಿನರಜಾದಿಯಿಂದ ಎಚ್ಚರಿಸಲ್ಪಟ್ಟ ಷಹರಜಾದಿಯು ತಾನು ಹಿಂದಿನದಿನದಲ್ಲಿ ವಾಗ್ದಾನ ಮಾಡಿದ್ದಂತೆ, ಕಮರಲು ಜಮಾನನ ಕಥೆಯನ್ನು ಹೇಳತೊಡಗಿದಳು.

(ಖಾಳಿದಾಸನ ಮಕ್ಕಳ ಹೆಸರಿನ ರಾಜ್ಯವನಾಳುತ್ತಿದ್ದ)
ಕಮರಲುಜಮಾನನಸಗೂ, ಚೀನಾದೇಶದ ರಾಜಕುಮಾರಿಯಾದ
ಬರ್ದೌದಾ ಎಂಬ ಸ್ತ್ರೀರತ್ನೋತ್ತಮೆಗೂ, ಉಂಟಾದ ವ್ಯಾಮೋಹದ ಕಥೆ.



ಸುಲ್ತಾನರೇ ! ಪರ್ಷಿಯಾದೇಶದಿಂದ ಹೊರಟರೆ, ಇಪ್ಪತ್ತು ದಿನಗಳ ಪ್ರಯಾಣದ ದೂರದಲ್ಲಿ, ಸಮುದ್ರಮಧ್ಯದಲ್ಲಿ ಖಾಳಿದಾಸನ ಮಕ್ಕಳ ದ್ವೀಪಂಗಳೆಂಬ, ನಡುಗಡ್ಡೆಗಳುಂಟು. ಆ ದ್ವೀಪಗಳು ನಾಲ್ಕು ದೊಡ್ಡ ರಾಜ್ಯಗಳಾಗಿ ವಿಭಾಗಿಸಲ್ಪಟ್ಟು, ಒಂದೊಂದು ದೇಶವಲ್ಲಿಯೂ ಮಹಾ ವಿಸ್ತಾರವಾಗಿಯೂ, ಅತ್ಯಂತ ಜನಭರಿತವಾಗಿಯೂ, ಇರುವ

ರಾಜಧಾನಿಗಳುಂಟು. ಅಂತಹ ನಾಲ್ಕು ಪಟ್ಟಣಗಳೂ ಸೇರಿ, ಬಂದಾನೊಂದು ದೊಡ್ಡ ರಾಜ್ಯವಾಗಿರುವುದು. ಅಂತಹ ರಾಜ್ಯವನ್ನು ಪೂರ್ವಕಾಲದಲ್ಲಿ ಷಹಜಮಾನನೆಂಬ ಹೆಸರುಳ್ಳ ರಾಜನು ಆಳುತ್ತಿದ್ದನು. ಆತನಿಗೆ ರಾಜಪುತ್ರಿಯರಾದ ನಾಲ್ಕುಮಂದಿ ಪಟ್ಟಮಹಿಷಿಯರೂ, ಅರವತ್ತು ಜನ ಜೋಗಿನೀ ಸ್ತ್ರೀಯರೂ, ಇರುವರು. ಷಹಜಮಾನನು ತನ್ನರಾಜ್ಯವನ್ನು ದಿನೇ ದಿನೇ ಅಭಿವೃದ್ಧಿಗೆ ತರುತಾ್ತ, ಬಹು ಸಾಮರ್ಥ್ಯದಿಂದ ಪಾಲಿಸುತ್ತಿದುದರಿಂದ, ಲೋಕದಲ್ಲಿ ಆತನಿಗಿಂತಲೂ ಅತಿಶಯರಾದ ರಾಜರೇ ಇಲ್ಲವೆಂಬ ಕೀರ್ತಿಯನ್ನು ಹೊಂದಿದ್ದನು. ಇಂತಹ ರಾಜನಿಗೆ ಸರ್ವಸಂಪದಗಳೂ, ಸಮಾನವಾಗಿ ಸೇವೆ ಮಾಡುತ್ತಿದ್ದವು. ರಾಜನು ತನಗೆ ಮಕ್ಕಳಿಲ್ಲವೆಂಬ ಚಿಂತಾಸಮುದ್ರದಲ್ಲಿ ಮುಳುಗಿಹೋಗುವ, ದೌರ್ಭಾಗ್ಯ ಒಂದುಮಾತ್ರ ಆತನ ಮನಸ್ಸಿನಲ್ಲಿ ನಾಟಿಕೊಂಡಿದ್ದಿತು. ಆದರೆ ನಾಲ್ಕು ಜನ ಹೆಂಡತಿಯೆರೂ, ಒಂದೇಸಮನಾದ ದುರವಸ್ಥೆಯನ್ನು ಹೊಂದಿ, ಅಪುತ್ರವತಿಯೆರಾದುದರಿಂದ ಕಟ್ಟಕಡೆಗೆ ಆತನ ವ್ಯಸನವು ತನ್ನಕಷ್ಟಕ್ಕೆತಾನೆ ಬಹಿರಂಗವಾಗಿ ನರ್ತಿಸಲಾರಂಭಿಸಿ, ಆತನನ್ನು ಬಹಳವಾಗಿ ನೋಯಿಸಿತು. ಆದುದರಿಂದ ಆತನು ತನ್ನ ಪ್ರಧಾನಮಂತ್ರಿಯೆಬಳಿಗೆ ಬಂದು, ತನ್ನ ದೌರ್ಭಾಗ್ಯವಿಚಾರವಾಗಿ ಚಿಂತಿಸಿ, ಅದಕ್ಕೆ ತಕ್ಕ ಉಪಾಯವೇನಾದರೂ ಉಂಟೆ? ಎಂದು ಕೇಳಿದನು.

ಆದಕಾ್ಕ ಬುದ್ಧಿಶಾಲಿಯಾದ ಮಂತ್ರಿಯು ರಾಜನನ್ನುಕುರಿತು ಅಯೊ್ಯ! ತಾವು ಕೇಳುವ ವಿಷಯವು ಮಾನುಷಪ್ರಯತ್ನ ಸಾಧ್ಯವಾಗಿ ಇದ್ದರೆ, ನಾನು ಕೂಡಲೇ ಪ್ರತ್ಯುತ್ತರವನ್ನು ಹೇಳುತ್ತಿದ್ದೆನು. ಆದರೆ ಈ ಪ್ರಶ್ನೆಗೆ ಬದಲು ಹೇಳಲು ನನಗುಂಟಾಗಿರುವ ಅನುಭವವೂ, ಪ್ರಜ್ಞಾಯೂಸಹ ಅತ್ಯಲ್ಪಗಳಾಗಿರುವುವು. ನಮಗೆ ಸುಖ ಉಂಟಾದಕಾಲದಲ್ಲಿ ನಾವು ಭಗವಂತನನ್ನು ಮರೆತುಹೋಗುವೆವು. ಆತನ ಸರ್ವಶಕ್ತ್ಯತ್ವವನ್ನು ನಾವು ತಿಳಿದುಕೊಳ್ಳಬೇಕೆಂದು ಪ್ರಯತ್ನಿಸಿ, ನಮಗೆ ಬೇಕಾದ ವರಗಳನ್ನು ಪಡೆಯುವುದಕಾ್ಕಗಿ, ಆರಾಧಿಸುವ ಕಾಲಬಲ್ಲಿ, ಆತನು ಅವರವರ ಅದೃಷ್ಟಾನುಸಾರವಾಗಿ ಕಷ್ಟಗಳನ್ನು ತಂದೊಡ್ಡುತ್ತಿದ್ದರೂ, ಸದಾ ಆ ಭಗವಂತನ ಪದಧ್ಯಾನವನ್ನು ಬಿಡದೆ ಮಾಡುತ್ತಿರುವ ಮಹಾತ್ಮರೂ, ನಿಮ್ಮ ಪ್ರಜೆಬಾಹುಳ್ಯದಲ್ಲಿರುವರು. ಅಂಥವರ ಸಂಗಡ

ಆಲೋಚಿಸಿ, ಅವರಿಗೆ ಸುವರ್ಣಪುಷ್ಪಗಳನ್ನು ಸಮರ್ಪಿಸಿ, ನಿಮ್ಮ ಕೋರಿಕೆಗಳನ್ನು ನೆರವೇರಿಸಿಕೊಳ್ಳುವುದಾಪತಿ, ಒಬ್ಬೊಬ್ಬರು, ಒಂದೊಂದು ವಿಧವಾದ ಅನುಗ್ರಹಶಕ್ತಿಯುಳ್ಳವರಾಗಿರುವುದರಿಂದ, ನಿನಗೆ ಭಗವನುಗ್ರಹ ಉಂಟಾಗಬಹುದೆಂದು ಪೇಳಿದನು. ತನ್ನ ಮಂತ್ರಿಪರ್ಯನು ಈತೆರದಿಂದ ನಿರೂಪಿಸಿದ ಬುದ್ಧಿವಾಕ್ಯಗಳನ್ನು ಒಕ್ಕು ಅದರಿಂದ ಮೆಚ್ಚಿಕೊಂಡವನಾದ ರಾಜನು, ಕೂಡಲೇ ತನ್ನ ರಾಜ್ಯವಲ್ಲಿರುವ ಭಗವದ್ಭಕ್ತರುಗಳನ್ನು ಕರೆಸಿ, ಅವರಿಗೆ ವಿಶೇಷವಾಗಿ ದಕ್ಷಿಣಾಪ್ರದಾನವನ್ನು ಕೊಟ್ಟು, ತನ್ನ ಮನೋಭೀಷ್ಟವನ್ನು ಅವರಿಗೆ ತಿಳಿಸಿ, ಬಹಳವಾಗಿ ಅವರುಗಳನ್ನು ಸತ್ಕರಿಸಿ, ಆನಂದದಿಂದ ಸೇವೆ ಮಾಡಿದನು. ಹೀಗಿರುವಲ್ಲಿ ದೈವಾನುಗ್ರದಿಂದ ಆತನ ಲಲನಾಮಣಿಯರಲ್ಲಿ ಒಬ್ಬಳು ಗರ್ಭವನ್ನು ಧರಿಸಿ, ನವಮಾಸವು ತುಂಬುತಲೇ, ಸರ್ವಾಂಗಸುಂದರನಾದ ಮಹಾತೇಜಸ್ವಿಯಾದ ಕುಮಾರನನ್ನು ಹೆತ್ತಳು. ರಾಜನು ತನಗೆ ಭಗವದನುಗ್ರಹವನ್ನುಂಟುಮಾಡಿದಂತಯೂ, ಸತ್ಪುರುಷರಲ್ಲಿ ಬಹಳವಾಗಿ ಮರ್ಯಾದೆಯಿಂದ ತ್ರೋಷ್ಣಿಸುತ್ತ, ಹೊದಲಿಗಿಂತಲೂ, ನೂರುಮಡಿ ಜೋರ್ತಿಗಿ ಉಪಚಾರಗಳನ್ನು ಮಾಡಿ, ತನ್ನಾಳ್ವಿಕೆಗೆ ಒಳಪಟ್ಟ ರಾಜ್ಯದಲ್ಲೆಲ್ಲಾ ಎಂಟುದಿಸೆಗಳವರಿಗೂ, ಪುತ್ರೋತ್ಸವವನ್ನು ಬಹು ವಿಜೃಂಭಣೆಯಿಂದ ನಡಿಸಿದನು.

ಮಗುವು ಹುಟ್ಟಿದಕೂಡಲೇ ದಾಯಿಯೆರು ರಾಜನಬಳಿಗೆ ಕರೆದು ತರಲು, ಆತನು ಬಹು ಸಂಭ್ರಮದಿಂದ ಪುತ್ರನನ್ನು ನೋಡಿ, ಆತನಿಗೆ ಕಮರಲುಜವಾನನೆಂದು ಹೆಸರಿಟ್ಟನು. ರಾಜನು ಇಂತಪ ತನ್ನ ಮಗನನ್ನು ಬಹು ಜಾಗರೂಕನಾಗಿ, ಸಂರಕ್ಷಿಸುತ್ತಾ, ವಯೋಧರ್ಮವನ್ನು ತಿಳಿದವನಾಗಿ, ಸಮರ್ಥರಾದ ಉಪಾಧ್ಯಾಯರನ್ನು ಕರೆಸಿದನು. ಅವರು ಸರ್ವಶಾಸ್ತ್ರಾರ್ಥವೇತ್ತರಾದುದರಿಂದ ತಾನುಳ್ಳಿದ ವಿಷಯವನ್ನು ಗ್ರಹಿಸುವುದಕ್ಕೂ, ರಾಜರಿಗೆ ಮುಖ್ಯವಾಗಿ ಬೇಕಾಗಿರುವ ರಾಜನೀತಿಯನ್ನು ಕಲಿಯಲು, ಉತ್ಸಾಹವುಳ್ಳವರಾಗಿರುವ ರಾಜಪುತ್ರನ ಬುದ್ಧಿಚಾತುರ್ಯಕ್ಕೂ, ಬಹಳವಾಗಿ ಸಂತೋಷಿಸಿ, ಆತನಿಗೆ ವಿದ್ಯಾಪ್ರದಾನ ಮಾಡಿದುದರಿಂದ, ರಾಜಕುಮಾರನು ಸರ್ವಶಕ್ತನಾಗಿ ತನ್ನ ಪ್ರಬಲವಾದ ವಿದ್ಯಾಕೀರ್ತಿಯೆಂಬ, ಓನ್ಯಾಭರಣವನ್ನು ಹೊಂದಿ, ಮೆರೆಯುತ್ತಿರುವು

ದನ್ನುಕಂಡು, ದೇಶದ ಜನರೆಲ್ಲರೂ, ಬಹಳವಾಗಿ ಸಂತೋಷಿಸುತ್ತಿದ್ದುದಲ್ಲದೆ, ರಾಜನು ತನ್ನ ಮಗನನ್ನು ನೋಡಿ ನೋಡಿ, ಆನಂದಸಾಗರದಲ್ಲಿ, ಅಬ್ಬರಿಸಿ ಬರುತ್ತಿರುವ ಅಲೆಗಳ ಮಧ್ಯದಲ್ಲಿ ಅಗಣ್ಯಸಂತಸದಿಂದ, ಅಲ್ಲಲ್ಲಿ ಅಲೆದಾಡುತ್ತಿದ್ದನು. ರಾಜಪುತ್ರನಿಗೆ ಹದಿನೇಳುವರ್ಷಗಳಾಗುತ್ತಲೇ ರಾಜನು ಆತನಿಗೆ ದಿನೇ ದಿನೇ ಅಗತ್ಯವಾದ ನವೀನವಸ್ತುಗಳಿಂದ ಉತ್ಸಾಹ ಉಂಟಾಗುವಂತೆ ಮಾಡುತ್ತಾ, ತನ್ನ ರಾಜ್ಯಭಾರದಲ್ಲಿ ಆತನನ್ನು ಇಡಬೇಕೆಂದು ಚಿಂತಿಸಿ, ಮಂತ್ರಿಯನ್ನು ಕುರಿತು, ಅಯ್ಯಾ! ನನ್ನಕುಮಾರನು ಸರ್ವಶಾಸ್ತ್ರಗಳನ್ನು ಅರಿತನಾಗಿ ರಾಜ್ಯಭಾರ ಮಾಡಲು, ಶಕ್ತನಾಗಿಯೂ, ಇರುವುದರಿಂದ ಈ ಬಾಲ್ಯಾವಸ್ಥೆಯಲ್ಲಿರುವ ಪುತ್ರಾಗ್ರಣಿಗೆ ರಾಜ್ಯವನ್ನು ಕೊಡಬೇಕೆಂದು, ಬಯಸಿರುವೆನು. ಆದರೆ ಬಹು ದಿನಗಳು ಪ್ರಯತ್ನದಿಂದ ಚೆನ್ನಾಗಿ ರೂಢಿಸಿರುವ ಈ ನನ್ನ ರಾಜ್ಯವನ್ನು ಆತನು ಯೌವನಮದದಿಂದ ಎಲ್ಲಿ ಹಾಳುಮಾಡುವನೋ, ಎಂದು ಚಿಂತೆ ಉಂಟಾಗಿದೆ. ನನಗೆ ವಯಸ್ಸಾಗಿ ಲೋಕವ್ಯವಹಾರದಲ್ಲಿ ಜಿಗುಪ್ಸೆವುಂಟಾಗಿರುವುದರಿಂದ, ನಾನು ಇನ್ನುಮೇಲೆ ನಿರಕ್ತನಾಗದೆ ರಾಜ್ಯವನ್ನು ವಹಿಸಿರುವುದು ನ್ಯಾಯವಲ್ಲ.

ಆದುದರಿಂದ ಈ ನನ್ನ ಪುತ್ರನಿಗೆ ರಾಜ್ಯವನ್ನೊಪ್ಪಿಸಿ, ಆತನ ವಿವೇಕಶಾಲಿಯಾಗಿದ್ದುಕೊಂಡು, ದರ್ಪದಿಂದ ರಾಜ್ಯಭಾರ ಮಾಡುವನೊ ಇಲ್ಲವೊ ಅದನ್ನು ನೋಡಬೇಕೆಂಬ ಕುತೂಹಲವು ನನಗೆ ಬಹಳವಾಗಿರುವುದೆಂದು ಹೇಳಿದನು. ಬಳಿಕ ಪ್ರಧಾನಮಂತ್ರಿಯು ರಾಜನನ್ನು ಕುರಿತು, ಅಯ್ಯಾ! ನೀವು ಹೇಳಿದ್ದು ನ್ಯಾಯವಾಗಿ ತೋರಿದರೂ, ಈಗಲೇ ರಾಜಪುತ್ರನು ನಮ್ಮ ಘನವಾದ ರಾಜ್ಯಭಾರವನ್ನು ಹೊಂದುವುದಕ್ಕೆ ಸಮರ್ಥನಾಗಿಲ್ಲವೆಂದು ಹೇಳುವುದಲ್ಲದೆ ಅದಕ್ಕೆ ತಕ್ಕ ನಿದರ್ಶನಗಳನ್ನು ತೋರ್ಪಡಿಸಿ, ಅಯ್ಯಾ! ನೀವು ಈತನಿಗೆ ಮದುವೆಯನ್ನು ಮಾಡದೆ, ಇರುವುದರಿಂದ ಕ್ರೂರನಾಗಿಯೂ, ವಿಷರೂಪವಾಗಿಯೂ, ಇರುವ ವಿಷಯವನ್ನಾಸನೆಯಲ್ಲಿ ಸಿಕ್ಕಿ, ನರಳುವುದು ತಪ್ಪಿಹೋಗುವುದು. ಆದುದರಿಂದ ಆತನು ಬುದ್ಧಿ ಕುಶಲತೆ ಉಳ್ಳವನಾಗುವನು. ಆದುದರಿಂದ ನೀವು ಆತನನ್ನು

ನಿಮ್ಮ ರಾಜ್ಯದ ಮಂತ್ರಾಲೋಚನಾಸಭೆಯಲ್ಲೊಬ್ಬ ಮುಖ್ಯಸ್ಥನಾಗಿ ನಿಯೆವಿಸಿಕೊಂಡು, ಆತನ ಸಕಲವಿಧವಾದ ಶಕ್ತಿ ಸಾಮರ್ಥ್ಯಗಳೂ ನಿಮಗೆ ತಿಳಿಯುಬಂಪವೀಲೆ, ರಾಜ್ಯಭಾರವನ್ನು ಕೊಡಬಹುದೆಂದು ಹೇಳಿದನು. ರಾಜನು ಯುಕ್ತಿಯುಕ್ತನಾದ ತನ್ನ ಮಂತ್ರಿವರ್ಯನ ಮಾತುಗಳನ್ನು ಕೇಳಿ, ಬಹಳವಾಗಿ ವಿಚಾರಿಸಿಕೊಂಡು, ತನ್ನ ಕುಮಾರನನ್ನು ಬರ ಮಾಡುವಂತೆ ಆಜ್ಞೆ ಮಾಡಿದನು. ಆದರೆ ರಾಜಕುಮಾರನು ತನಗಿಷ್ಟವಾದ ಕಾಲದಲ್ಲಿ ತಂದೆಯನ್ನು ನೋಡುತ್ತಿದ್ದನು. ಆದುದರಿಂದ ಸುಲಾತನನು ತನ್ನನ್ನು ಬರಮಾಡುವಂತೆ ಹೇಳಿದರೆಂದು, ನುಡಿದ ಮಂತ್ರಿಸೇವಕರ ವಾಕ್ಯಕ್ಕೆ ಆತನು ಬಹಳವಾಗಿ ಹೆದರಿ, ಶೀಘ್ರವಾಗಿ ಹೊರಟುಬಂದು, ಬಹು ನವ್ರನಾಗಿ ತಂದೆಗೆ ನವಸ್ಕರಿಸಿ ನಿಂತುಕೊಂಡನು. ರಾಜನು ತನ್ನ ಕುಮಾರನನ್ನು ನೋಡಿ, ಅಯ್ಯಾ! ನಾನು ನಿನ್ನನ್ನು ಇಲ್ಲಿಗೆ ಏತಕ್ಕಾಗಿ ಬರವಾಡಿದೆನೆಂಬುದನ್ನು ಹೇಳಬಲ್ಲೆಯಾ? ಎನಲು, ಸ್ವಾವಿಾ! ಅಂತರ್ಗತವಾದ ತಮ್ಮ ಹೃದಯವೆವಸ್ಸು ಅಂತರಾತ್ಮಸ್ವರೂಪನಾದ ನಾರಾಯಣನೇ ಬಲ್ಲನಲ್ಲದೆ ಅನ್ಯಥಾ ಇಲ್ಲವಾದುದರಿಂದ, ತಾವು ದಯೆವಾಡಿ ನಿರೂಪಿಸಬೇಕೆಂದು ಬೇಡಿಕೊಳ್ಳಲು, ರಾಜನು ಅಯ್ಯಾ! ನೀನು ವಯಸ್ಕನಾಗಿರುವುದರಿಂದ, ಯುಕ್ತವಾದ ರೀತಿಯಲ್ಲಿ ವಿವಾಹ ಮಾಡಬೇಕೆಂಬ ಇಚ್ಛೆಯುಳ್ಳವನಾಗಿರುವೆನು.

ಈ ವಿಷಯೆದಲ್ಲಿ ನಿನ್ನ ಅಭಿಪ್ರಾಯವೇನೆನಲು, ರಾಜಕುಮಾರನು ಸ್ವಾವಿಾ! ಎಂದು ನುಡಿದು ಮುಂದೆ ಮಾತನಾಡಲು, ಅವಕಾಶ ದೊರಿಯದೆ ತತ್ತರಿಸುತ್ತ, ಸ್ವಲ್ಪಹೊತ್ತು ಸುಮ್ಮನಿದ್ದು, ಬಾಲಕನಾದ ನನ್ನಲ್ಲಿ ನೀವು ಮಾಡಿದ ಪ್ರಶ್ನೆಯಿಂದ ನಾನು ವಿಸ್ಮಯವನ್ನು ಹೊಂದಿರುವೆನೆಂಬುದು, ತಮ್ಮ ದಿವ್ಯಚಿತ್ತಕ್ಕೆ ವೇದ್ಯವಾಗಿದ್ದರೆ, ನನ್ನನ್ನು ಕ್ಷಮಿಸಬೇಕೆಂದು ಬೇಡಿಕೊಳ್ಳುವೆನು. ಗೃಹಸ್ಥಾದವರ ಸುಖವೂ, ಸ್ತ್ರೀಜನರ ದುರ್ಹೃದಯವೂ, ಅವುಗಳಿಂದ ಉಂಟಾಗುವ ಫಲವನ್ನು ಸಹಾ ನಾನು ಚೆನ್ನಾಗಿ ಕೇಳಿರುವೆನು. ಎಂದಿಗೋ ಯಾವಾಗಲೋ ಮದುವೆಯಾಗಬೇಕೆಂಬ ಕೋರಿಕೆ ಹುಟ್ಟುವುದೋ ಇಲ್ಲವೋ ನನಗೆ ತಿಳಿಯದು. ಮನಸ್ಸಾದರೋ ಒಂದೇವಿಧವಾಗಿ ಇರಲಾರದೆಂಬುದೇ ನಮಗೆತಿಳಿದೇಯಿರುವುದು,

ತಾವು ಪ್ರಶ್ನೆ ಮಾಡಿದ ಸಂಗತಿಯನ್ನು ಪ್ರಕೃತದಲ್ಲಿ ನಿಷ್ಕರ್ಷಿಸತಕ್ಕ ಆವಶ್ಯಕತೆ ಏನೂ ತೋರಲಿಲ್ಲವೆಂದು, ಹೇಳಿದನು. ಎಂಬುದಾಗಿ ತಿಳಿಸಿ ಷಹರಜಾದಿಯು ಬೆಳಗಾದುದರಿಂದ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಮರಳಿ ಹೇಳಲಾರಂಭಿಸಿದಳು.

೨೧೧ ನೆಯ ರಾತ್ರಿಯ ಕಥೆ.

ರಾಜಕುಮಾರನು ಇಂತೆಂದು ನುಡಿದ ನುಡಿಗಳು ರಾಜನಿಗೆ ಕರ್ಣಕಠೋರವಾಗಿದ್ದರೂ, ಆತನು ಮಗನನ್ನು ನಿಂದಿಸದೆ ಪುತ್ರವಾತ್ಸಲ್ಯಯುಕ್ತನಾಗಿ ಮಗನು ತನ್ನ ಮಾತೆನ್ನು ಉಲ್ಲಂಘಿಸಿದನೆಂದು ತಿಳಿದು, ವಿನಯದಿಂದ ಆತನನ್ನು ಕುರಿತು, ಅಯ್ಯಾ! ನಿನಗಿಷ್ಟವಿಲ್ಲದ ಕಾರ್ಯವನ್ನು ನಾನೆಂದಿಗೂ ಮಾಡತಕ್ಕವನಲ್ಲ. ಆದರೆ ನಾನು ಹೇಳುವ ಮಾತುಗಳನ್ನು ಚೆನ್ನಾಗಿ ಪರ್ಯಾಲೋಚಿಸಿ ಹೇಳು. ಏನಂದರೆ:—ನಿನ್ನಂತೆ ರಾಜ್ಯಾಧಿಪತಿಯಾಗುವವನಾನವನು ವ್ಯರ್ಥವಾಗಿ ತನ್ನ ಜೀವವಾನವನ್ನು ಕಳೆಯಬಾರದು. ಮತ್ತೇನೆನ್ನುವಿಯೋ! ನಿನ್ನ ಒಳಿಕ ನಿನ್ನಂತೆಯೇ ರಾಜ್ಯವನ್ನಾಳುವ ಕುಮಾರನನ್ನು ಪಡೆವುದಕ್ಕೆ ಸರ್ವಪ್ರಯತ್ನವನ್ನು ಮಾಡಬೇಕು. ಆದುದರಿಂದ ಈ ವಿಷಯವನ್ನು ಚೆನ್ನಾಗಿ ಯೋಚಿಸಿ ನನ್ನನ್ನು ತೃಪ್ತಿಪಡಿಸುವುದೇ ಆದರೆ, ನಾನು ಕೃತಾರ್ಥನಾದೆನೆಂದು ಆನಂದಿಸುವೆನೆಂದನು. ಆ ಮಾತಿಗೆ ಯಾವ ಪ್ರತ್ಯುತ್ತರವನ್ನು ಹೇಳದಿರುವ ರಾಜಕುಮಾರನನ್ನು ಧೊರೆಯು ತನ್ನ ಮಂತ್ರಾಲೋಚನಾಸಭೆಯಲ್ಲಿರಿಸಿಕೊಂಡಿದ್ದು, ಒಂದು ಸಂವತ್ಸರವಾದಬಳಿಕ ಮರಳಿ ಆತನನ್ನು ತನ್ನೆಡೆಗೆ ಬರಮಾಡಿಕೊಂಡು, ಸುಕುಮಾರನೇ! ನಾನು ನಿನ್ನನ್ನಂಗಡ ಆಲೋಚಿಸಿದ, ಕಾರ್ಯವನ್ನುಕುರಿತು, ವಿಚಾರ ಮಾಡಿದೆಯೋ ?

ನಿನಗೆ ವಿವಾಹವನ್ನು ಸೆರವೇರಿಸಿ, ತತ್ಸೌಭಾಗ್ಯವನ್ನು ಕಣ್ಣಿನಿಂದ ನೋಡುವ ಪುಣ್ಯವನ್ನು ನನಗುಂಟುಮಾಡುವೆಯಾ? ಆತೆರದ ಆನಂದವನ್ನು ನಾನು ನೋಡದೆ ಸಾಯುವಂತೆ ಮಾಡುವೆಯೋ ? ಏನು ನಿನ್ನ ಮನೋಭಿಪ್ರಾಯವನ್ನು ಹೇಳೆಂದು ಕೇಳದಕೂಡಲೆ, ರಾಜಪುತ್ರನು ತಂದೆಯನ್ನುಕುರಿತು, ಜನಕರೇ ! ತಾವು ಕಲ್ಪಿಸಿದ ವಿಷಯವನ್ನು

ಕುರಿತು, ನಾನು ಸರ್ವದಾ ಆಲೋಚಿಸುತಲೇ ಇದ್ದೆನು. ಎಷ್ಟು ನಿಶ್ಚಯವಾಗಿ ಯೋಚಿಸಿದರೂ, ವಿವಾಹ ಮಾಡಿಕೊಳ್ಳುವುದಕ್ಕೆ ಮನಸ್ಸು ಬಾರದು. ಸ್ತ್ರೀಯರು ದುರ್ಮಾರ್ಗವುಳ್ಳವರೆಂದೂ, ಅನೃತಶೀಲೆಯರೆಂದೂ, ದುಃಖದಾಯಿನಿಯರೆಂದೂ, ನಾನು ಕಾವ್ಯಾದಿಗಳಲ್ಲಿ ಓದಿರುವುದರಿಂದ, ನನ್ನ ಮನವು ಅದಕ್ಕೊಪ್ಪದೆ ವಿವಾಹವನ್ನು ಮಾಡಿಕೊಳ್ಳದೆ, ಹೀಗಿರುವುದೇ ಉತ್ತಮವೆಂದು ಹೇಳುತ್ತಿರುವುದು. ಆದುದರಿಂದ ತಾವು ದಯೆಮಾಡಿ ನನ್ನನ್ನು ಮನ್ನಿಸುವುದಲ್ಲದೆ, ಇನ್ನುಮೇಲೆ ಈ ವಿಷಯವನ್ನು ಕುರಿತು, ಮರಳಿ ನನ್ನೊಡನೆ ಪ್ರಶ್ನೆ ಮಾಡದಿರಬೇಕೆಂದು ಬೇಡುವನೆಂದು ಹೇಳಿ, ತಾನು ತಂದೆಯಬಳಿಯಲ್ಲಿಯೇ ಇದ್ದರೆ, ಮತ್ತೇನಾದರೂ ಪ್ರಶ್ನೆಮಾಡುವುದಕ್ಕೆ ಅವಕಾಶ ಉಂಟಾಗುವುದೆಂದು ತಿಳಿದು, ಆ ಸ್ಥಳದಲ್ಲಿ ನಿಲ್ಲದೆ ಹೊರಟುಹೋದನು.

ಸುಲ್ತಾನರೇ! ಷಹಜಮಾನನಲ್ಲದೆ, ಮತ್ತಾವರಾಜನಾಗಿದ್ದರೂ, ತನ್ನ ವಾಕ್ಯವನ್ನುಲ್ಲಂಘಿಸಿ ನಡೆಯುತ್ತಿರುವ ಪುತ್ರನನ್ನು ಸುಮ್ಮನೇ ಬಿಡುತ್ತಿರಲಿಲ್ಲ. ಆದರೆ ಷಹಜಮಾನನು ವಿಶೇಷವಾದ ಪುತ್ರವಾತ್ಸಲ್ಯವನ್ನು ಹೊಂದಿದವನಾದುದರಿಂದ, ಆತನಮೇಲೆ ಕೋಪಿಸಿಕೊಳ್ಳದೆ ಉಪಾಯದಿಂದ ಆತನನ್ನು ಮಾರ್ಗಕ್ಕೆ ತರುವಂತೆ ಮಾಡಬೇಕೆಂದು, ತನ್ನ ಪ್ರಧಾನಮಂತ್ರಿಯನ್ನು ಒರಪಾಡಿ, ಅಯ್ಯಾ! ನೀನು ಹೇಳಿದಂತೆ ನಾನು ಮಾಡಿದರೂ, ರಾಜಕುಮಾರನು ನನ್ನ ವಾಕ್ಯಗಳಿಗೆ ಸಮ್ಮತಿಸದೆ ತನ್ನ ಮನಸ್ಸಿಗೆ ತೋರಿದಂತೆ, ಉತ್ತರವನ್ನು ಹೇಳಿದನು. ನಾನು ಯುಕ್ತಿಯಿಂದ ಆತನನ್ನು ತಿದ್ದಬೇಕೆಂದು ತಿಳಿದು ಸುಮ್ಮನಾದೆನು. ಇದಕ್ಕೆ ತಕ್ಕ ಉಪಾಯವನ್ನು ಕುರಿತು ನೀನೇನಾದರೂ ಹೇಳಬಲ್ಲೆಯಾ, ಎಂದು ನುಡಿದನು. ಆಗ ಪ್ರಧಾನಮಂತ್ರಿಯು ರಾಜನನ್ನು ಕುರಿತು ಸ್ವಾಮಿನಾ! ಶಾಂತಿಯೇ ಸರ್ವಾರ್ಥಸಾಧನವಾದುದರಿಂದ, ತಾವು ಅದನ್ನೇ ಮರಳಿ ಅವಲಂಬಿಸಿ ಪುತ್ರೊತ್ಸಂದು ವರುಷದವರೆಗೂ, ಯೋಚಿಸುವಂತೆ ತಮ್ಮ ಪುತ್ರನಿಗೆ ಕಾಲವನ್ನು ಕೊಡಬೇಕು. ನಂತರ ಆತನು ಒಪ್ಪಿಕೊಂಡು, ನಿಮ್ಮ ಸಂತೋಷಾನುರೂಪವಾಗಿ ಸಕಲ ಕಾರ್ಯಗಳನ್ನು ನೆರವೇರಿಸಬಹುದು. ಹಾದುನೇಳೆ ಹಾಗೆ ಒಪ್ಪದೆ, ಆತನು ತನ್ನ ಮುಷ್ಕರ

ಮಾರ್ಗದಲ್ಲಿ ಬಿದ್ದ ಹೊರಳುತ್ತಿದ್ದರೆ, ರಾಜ್ಯನಾಯಕರಾದ ನೀವು ಆಸ್ಥಾನದಲ್ಲಿ ಕುಳಿತು, ಸಭೆಗೆ ಆತನನ್ನು ಬರಮಾಡಿ, ಅಯ್ಯಾ! ನೀನು ನಮ್ಮದೇಶ ಸಂರಕ್ಷಣಾರ್ಥವಾಗಿ, ವಿವಾಹ ಮಾಡಿಕೊಳ್ಳಬೇಕು. ಇಲ್ಲವಾದರೆ ರಾಜ್ಯ ನಷ್ಟವಾಗುವುದೆಂದು ಸಭಿಕರ ಮೂಲಕ ಹೇಳಿಸಿದರೆ, ಆತನು ಸಭಿಕರ ಮಾತನ್ನೆಂದಿಗೂ ತೆಗೆದುಹಾಕಲಾರನೆಂದು ತೋರುವುದೆಂದನು. ಆ ಮಾತನ್ನುಕೇಳಿ ತನ್ನ ಕುಮಾರನಿಗೆ ಹೇಗಾದರೂಮಾಡಿ ವಿವಾಹವನ್ನು ನೆರವೇರಿಸಬೇಕೆಂದು ತಿಳಿದಿರುವ, ರಾಜನೂ ತನ್ನಮಂತ್ರಿಯೂ ಹೇಳಿದ ವಾಕ್ಯವನ್ನು ನಂಬಿ, ಅದರಂತೆ ಮಾಡುವುದಕ್ಕೆ ಸಮ್ಮತಿಸಿ, ಬಹುವ್ಯಯಾಸದಿಂದ ಇನ್ನೊಂದು ಸಂವತ್ಸರದವರಿಗೂ ಕಾಲವನ್ನಿತ್ತನು. ಇಂತೆಂದು ನುಡಿದು, ಷಹರಜೌದಿಯು ಬೆಳಗಾದಕೂಡಲೇ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೨೧ನೆಯ ರಾತ್ರಿ ಕಥೆ.

ಮಂತ್ರಿಯು ಹೊರಟುಹೋದಬಳಿಕ, ಷಹಜಮಾನನು ತನ್ನ ಮಗನಿಗೆ ಹೇಗಾದರೂಮಾಡಿ ವಿವಾಹವನ್ನು ಜರಗಿಸಬೇಕೆಂಬ ಅಭಿಲಾಷೆಯಿಂದ ನಾನಾಯೋಚನೆಗಳನ್ನುಮಾಡಿದವನಾಗಿ, ಕೊನೆಗೆ ಆತನತಾಯಿಯ ಅಂತಃಪುರವನ್ನು ಸೇರಿ, ತನ್ನ ಮೋಹದ ಮುದ್ದಿನ ಹೆಂಡತಿಯನ್ನು ಕುರಿತು, ಪ್ರಿಯಳೇ! ನಿನ್ನಮಗನು ನಾನುಹೇಳಿದ ಮಾತುಗಳನ್ನು ಕೇಳಿದೆ, ನನ್ನ ಮನಸ್ಸಿಗೆ ತುಂಬ ವ್ಯಸನವನ್ನುಂಟುಮಾಡುತ್ತಿರುವನಲ್ಲಾ! ಆತನಿಗೆ ಅನುರೂಪಳಾದ, ವಧೂಮಣಿಯನ್ನು ಹುಡುಕಿ ಮದುವೆ ಮಾಡಬೇಕೆಂದು, ನಾನು ಹಲವುವಿಧದಿಂದ ಕೇಳಿದರೂ, ಆತನು ಒಪ್ಪದಿರುವುದರಿಂದ, ನನ್ನಮನಸ್ಸಿಗೆ ತುಂಬಾ ವ್ಯಸನ ಉಂಟಾಗುವುದು. ಆತನನ್ನು ಉಪಾಯದಿಂದ ಮಾರ್ಗಕ್ಕೆ ತರಬೇಕೆಂಬಭಿಲಾಷೆಯು ನನಗೆ ತುಂಬಾ ಇರುವುದು. ನಿನ್ನಮಗನು ಅಧಿಕವಾದ ಮಾತೃವಾತ್ಸಲ್ಯವುಳ್ಳವನಾದುದರಿಂದ, ನನ್ನ ವಾಕ್ಯಕ್ಕಿಂತಲೂ, ನಿನ್ನ ಪ್ರಿಯವಚನಗಳನ್ನು ಅತಿಶಯವಾಗಿ ಅಂಗೀಕರಿಸುವನು. ಆದುದರಿಂದ ನೀನು ಸಮಯೋಚಿತವರಿತು ಆತನಸಂಗಡ ಮಾತನಾಡಿ, ನಿಮ್ಮ ತಂದೆಯ ಇಷ್ಟಾನುಸಾರವಾಗಿ ನೀನು ನಡೆಯೆಂದೆಹೋದರೆ, ಆತನಿಗೆ ಕೋಪ ಉಂಟಾಗದಿದ್ದರಲ್ಲಿ, ಸ್ವಲ್ಪವೂ

ಸಂಶಯವಿಲ್ಲ. ಅದರಿಂದ ನಿನಗೆ ಕೇಡು ತಪ್ಪದು. ನಿನಗೆ ಕೇಡುಂಟಾಗುವುದರಿಂದ ನನ್ನಮನಸ್ಸಿಗೆ ತುಂಬ ವ್ಯಥೆಯುಂಟಾಗುವುದು. ಇಷ್ಟೆಲ್ಲವೂ ನೀನು ಆತನ ಮಾತನ್ನು ತಿರಸ್ಕರಿಸುವುದರಿಂದ ಉಂಟಾಗಿ ಇದರಿಂದ ಸರ್ವರಿಗೂ ವ್ಯಸನಕ್ಕೆ ಕಾರಣವಾಗುವುದಲ್ಲಾ ? ಎಂದು ಸಮಯವನ್ನರಿತು ತಿಳಿಯಹೇಳಿದು ನುಡಿದನು. ಬಳಿಕ ಒಂದಾನೊಂದು ಸಮಯದಲ್ಲಿ, ಭಾತಿವಾ ಎಂಬ ಆ ರಾಜಪುತ್ರನ ತಾಯಿಯು, ತನ್ನಮಗನನ್ನು ನೋಡಿ, ಇದು ಮಾತನಾಡುವುದಕ್ಕೆ ತಕ್ಕ ಸಮಯವಾಗಿರುವುದೆಂದರಿತು, ಆಹಾ ! ಪ್ರಿಯನಾದ ಪುತ್ರಶ್ರೇಷ್ಠನೇ ! ನೀನು ವಿವಾಹ ಮಾಡಿಕೊಳ್ಳದಿರುವುದಕ್ಕೆ ಕಾರಣವೇನೋ ತಿಳಿಯದಲ್ಲಾ ! ಸ್ತ್ರೀಯ ದುರ್ಮಾರ್ಗ ಗುಣವನ್ನು ತಿಳಿದು, ಅದಕ್ಕಾಗಿ ನೀನು ಸ್ತ್ರೀಸಾಮಾನ್ಯವನ್ನೇ ದೂರಮಾಡಿ, ವಿವಾಹ ಮಾಡಿಕೊಳ್ಳಬಾರದೆಂದು, ವೈರಾಗ್ಯವನ್ನು ಹೊಂದಿರುವೆಯಾ ? ಈ ನಿನ್ನ ಕಾರಣಗಳು ನ್ಯಾಯವಾಗಿಯೂ, ಸರ್ವಸಮ್ಮತವಾಗಿಯೂ, ಇರಲಾರದು. ಏತಕ್ಕಂದರೆ : — ಸ್ತ್ರೀಯರಲ್ಲಿ ದುಷ್ಟರಾದವರು ಇಲ್ಲವೆಂದು, ನಾನು ಹೇಳುವುದಿಲ್ಲ. ಆದರೆ ಭೂಲೋಕದಲ್ಲಿ ಹುಟ್ಟಿದ ಸ್ತ್ರೀಯರೆಲ್ಲರೂ ದುಷ್ಟರೇ ಆಗಿಲ್ಲ. ಅನೇಕಜನ ಪ್ರಸಿದ್ಧರಾದ ಪತಿವ್ರತಾಶಿರೋಮಣಿಯರೂ ಬಂದೊಂದು ರಾಜ್ಯವನ್ನು ಪ್ರಸಿದ್ಧಿಗೊಳಿಸಿ, ಕೀರ್ತಿಯನ್ನು ಸಂಪಾದಿಸಿದವರಾಗಿರುವುದು ನಿನಗೆ ತಿಳಿದಿರಬಹುದು. ಆದರೂ ನೀನು ಕಾವ್ಯಾದಿಗಳಲ್ಲಿ ಓದಿ ಕೇಳಿರುವ, ದುಷ್ಟ ಸ್ತ್ರೀಯರ ನಡವಳಿಕೆಯನ್ನು ಕುರಿತು, ಸ್ತ್ರೀ ಸಮೂಹವನ್ನೇ ನಿಂದಿಸುತ್ತಿರುವುದು ನ್ಯಾಯವಲ್ಲ.

ಅಪ್ಪಾ ! ಸಕ್ಕರೆಗಿಂತಲೂ ಸವಿಯಾದ ನನ್ನಮಾತುಗಳು ನಿನಗೆ ಆನಂದವನ್ನುಂಟುಮಾಡದೆ ಇರಲಾರವು. ಲೋಕಾಭಿಪತಿಗಳಾಗಿ ಅಹಂಕಾರದಿಂದ ಬಹು ಕ್ರೂರರಾಗಿ ವರ್ತಿಸಿ, ನಾನಾತೊಂದರೆಗಳನ್ನು ಇತರರಿಗೆ ಉಂಟುಮಾಡುತ್ತಿದ್ದ, ನೀಚರಾದ ಪುರುಷರಿಗೆ ಮದುವೆಯಾಗಿ ತಮ್ಮ, ಸುಗುಣಗಳನ್ನು ತ್ಯಜಿಸಿ, ಬಹಳವಾದ ತೊಂದರೆಗಳನ್ನು ಅನುಭವಿಸಿದ, ಸ್ತ್ರೀಯರು ಅನೇಕರಾಗಿರುವರು. ಅವರ ಕಷ್ಟನಷ್ಟಗಳನ್ನು ವಿವರಿಸಲು ಯಾರಿಗೂ ಸಾಧ್ಯವಲ್ಲ. ಅಯ್ಯಾ ! ಪುರುಷರಲ್ಲಿಯೂ, ಅಧಮರಾದ ನೀಚರು, ಬಹುಮಂದಿ ಇರುತ್ತಿರುವರು ಎನಲು, ಕಮಲಲೋಚನನು

ತನ್ನ ತಾಯಿಯೆನ್ನುನೋಡಿ, ಅಮ್ಮಾ! ತಾವು ಹೇಳಿದಂತೆ, ಸದ್ಗುಣಯುತರಾಗಿಯೂ, ಕುಲಶೀಲಾದಿಗಳಲ್ಲಿ ಅನುರೂಪರಾಗಿಯೂ, ದಯೋಪರರಾಗಿಯೂ, ಸನ್ಮಾರ್ಗದಿಂದ ನಡೆದು ಕೀರ್ತಿಯೆನ್ನು ಸಂಪಾದಿಸತಕ್ಕವರಾಗಿಯೂ, ಇರುವ ತಮ್ಮಂತಹ ಸ್ತ್ರೀಯೆರು ಅನೇಕರಿರುವರು. ಆದರೆ ತಾನು ಮೋಹಿಸಿದ ಕನ್ಯಾಮಣಿಯು ಹೇಗಿರುವಳೋ ಎಂಬ, ಅನುಮಾನ ಒಂದೇ ಬಹಳವಾಗಿ ಬಾಧಿಸುತ್ತಿರುವುದು. ಈ ವಿಷಯದಲ್ಲಿ ಪುರುಷರು ಯಾವ ಕಾರ್ಯವನ್ನು ಸ್ವತಂತ್ರಿಸಿ ಮಾಡಲು, ಇಸಾಧ್ಯವಾಗಿರುವುದೆಂದು ನುಡಿದನು. ಬಳಿಕ ಆತನು ಅಮ್ಮಾ! ನಮ್ಮ ತಂದೆಯು ವಿವಾಹ ಮಾಡುವುದಕ್ಕೆ ಒಪ್ಪಿ ಯಾವ ಕನ್ಯಾಮಣಿಯೆನ್ನು ಗೊತ್ತುಮಾಡಿರುವರೋ, ಆ ಕನ್ಯೆಯು ಕುರೂಪಿಯೊಗಲೀ, ದುರ್ಮಾರ್ಗವುಳ್ಳವಳಾಗಲೀ, ಸನ್ಮಾರ್ಗವುಳ್ಳವಳಾಗಲೀ, ನಾನು ಹೇಗಾದರೂ ಪರಿಗ್ರಹಿಸಿಯೇ ತೀರಬೇಕು. ಹಾಗಲ್ಲದೆ ಬಾಹ್ಯಾಡಂಬರದಿಂದ ಯಾವ ಸುಗುಣಗಳು ನಮಗೆ ತೋರಿಬರದಿದ್ದರೂ ಆ ಕನ್ಯಾಮಣಿಯ ಸುಗುಣಗಳನ್ನೂ, ನಡತೆಗಳನ್ನೂ, ಚರ್ಯೆಗಳನ್ನೂ ತಿಳಿದು, ಇದು ಉತ್ತಮ, ಇದು ಅಧಮವೆಂದು ನಮಗೆ ತಿಳಿಯಹೇಳತಕ್ಕವರಾರು? ನಮ್ಮ ಗೌರವಕ್ಕೂ, ಯೋಗ್ಯತೆಗೂ, ಸಹ ತಕ್ಕ ತೆ ಒಡುಪುಗಳನ್ನುಮಾತ್ರ ಧರಿಸಿಕೊಂಡು ಗೈಯ್ಯಾಳಿಯಾಗಿ, ಮನೆಕಾಳುತನದಿಂದ ತಿಂದಿಸ್ತೋತಳಾಗಿ, ನಿಜಕಾರ್ಯದಲ್ಲಿ ಪ್ರವರ್ತಿಸಿ, ವ್ಯರ್ಥಕಾಲಹರಣ ಮಾಡುತ್ತ ತಾನು ಸಂಕಟಪಟ್ಟು, ತನ್ನನ್ನು ಸೇರಿದವರನ್ನು ಕೊರೆತೆಗೀಡಾಗಿಸಾಡುವ ಕನ್ಯಾಗುಣವನ್ನು ನೋಡಿ, ಗೌರವಶಾಲಿಗಳಾದ ಸತ್ಪುರುಷರು, ಹಾಸ್ಯನಾಡಿ ನಗುರಲ್ಲವೇ?

ಕನ್ಯಾರೂಪವನ್ನು ನೋಡಿದಮಾತ್ರದಿಂದ, ಗುಣರೂಪ ಸೌಶೀಲ್ಯಾದಿಗಳನ್ನು ಗೊತ್ತುಮಾಡಿ, ಹೇಳತಕ್ಕವರಾರುಟು? ಆದುದರಿಂದ ಅಮ್ಮಾ! ಮದುವೆಮಾಡಿಕೊಳ್ಳುವುದಕ್ಕೆ ನಿಷೇಧರೂಪವಾಗಿರುವ, ಈ ತೆರದ ಕಾರಣಗಳು ನ್ಯಾಯರೀತ್ಯಾ ಬಹಳವಾಗಿರುವುದು ಎನಲು, ಮಾತೆಯಾದ ಪಾತಿವ್ರಾಬೀಯು ಆಹಾ! ನೀನು ಈಗ ಹೇಳಿದುದಕ್ಕಿಂತಲೂ, ಅತಿಶಯವಾದ ಕಾರಣಗಳನ್ನು ಉಂಟು? ಅವುಗಳನ್ನೆಲ್ಲ ಕೇಳಿ, ನಾನು ಒಂದೇ ಒಂದು ಮಾತಿನಲ್ಲಿ ನಿನ್ನ ಬಾಯಿಯನ್ನು ಮುಚ್ಚಿಸಬಲ್ಲೆನೆಂದು

ಾಜಕುಮಾರನು ತನ್ನತಾಯಿಯನ್ನು ನೋಡಿ, ಮಾತಾ
ಗಾದರೆ ಏನು ಹೇಳುವೆಯೋ ಹೇಳು ನೋಡೋಣ. ಅದಕ್ಕೆ
ಪ್ರತ್ಯುತ್ತರವನ್ನು ಹೇಳಬಲ್ಲೆನೋ ಇಲ್ಲವೋ ತಿಳಿದುಕೊಳ್ಳುವೆ
, ತಾಯಿಯು ಪುತ್ರಾ ! ನೀನು ಹಿಂದೆ ವಿವರಿಸಿದಂತಹ, ಗೈಯ್ಯಾ
ಮೂ, ದುಷ್ಟಳೂ ಆದ ನಾರೀಮಣಿಯು, ನಿನ್ನಂತಹ ರಾಜನಿಗೆ ದೊರ
ಕೆದುದೇ ಆದರೆ, ಅಂಥವಳನ್ನು ಬಹು ಸುಲಭದಿಂದ ಸನ್ಮಾರ್ಗಕ್ಕೆ ತರುವು
ದಕ್ಕಾಗಿ, ತಟಸ್ಥಭಾವದಲ್ಲಿರಿಸಿಕೊಳ್ಳಬಹುದಲ್ಲವೆ ಎನಲು, ಕುಮಾರನು
ತಾಯೇ ! ನೀನು ಹೇಳಿದುದು ನ್ಯಾಯವೇ ? ಸರಿ. ಆದರೆ ಗೌರವಶಾಲಿ
ಯಾಗಿದ್ದು ನಂತರ ಬಲಾತ್ಕಾರದಿಂದ, ತನ್ನ ಗೌರವವನ್ನು ಉಳಿಸಿಕೊಳ್ಳ
ಬೇಕೆಂದು, ನೀಚ ಸ್ತ್ರೀಯೆನ್ನು ನಿರ್ಬಂಧಪಡಿಸುವುದರಿಂದ, ಮೊದಲಿದ್ದ
ಗೌರವಕ್ಕೆ ಹಾನಿಬರುವುದೆಂಬ ಸಂಗತಿಯನ್ನು, ನೀನು ಯೋಚಿಸಿಲ್ಲ
ವಲ್ಲಾ ! ಆಗಲಿ. ಹಾಗೆ ಪ್ರಯತ್ನಮಾಡಿಯೂಕೂಡ, ತಾನುಮಾಡಿದ
ಕಾರ್ಯವು ಸಫಲವಾಗದಿಹೋದರೆ, ಗೌರವವನ್ನು ಕಳೆದುಕೊಳ್ಳುವುದಲ್ಲದೆ
ಸಂತೋಷಕ್ಕೆ ಭಂಗವೂ ಉಂಟಾಗುವುದೆಂದು ನಿಸ್ಸಂದೇಹವಾಗಿ ಹೇಳಬಲ್ಲೆ
ನೆಂದು ನುಡಿದ ಮಗನನ್ನುನೋಡಿ, ಅಯ್ಯಾ ! ಹಾಗಾದರೆ ನೀನೆ ನಮ್ಮ
ಈ ಪವಿತ್ರವಾದ ವಂಶಕ್ಕೆ ಕೊನೆಯವನಾಗಿರಬೇಕೆಂಬ ಕೋರಿಕೆಯಿಂದ,
ನಡೆಯುತ್ತಿರುವಂತೆ ತೋರುವುದೆಂದು ನುಡಿದಳು.

ಆಗ ಬಾಲಕನು ತಾಯಿಯನ್ನುನೋಡಿ, ಅಮ್ಮಾ ! ನಾನು ತಂದೆ
ಯಾದ ಸುಲ್ತಾನರಿಗಿಂತಲೂ, ಬಹಳಕಾಲ ಬದುಕಬೇಕೆಂಬ ಅಭಿಲಾಷೆ
ಯುಳ್ಳವನೂ ಅಲ್ಲ. ಅಲ್ಲದೆ ಆತನಹಿಂದೆ ಬಾಳಿ ತನ್ನ ವಂಶೋದ್ಧರಣಕ್ಕಾಗಿ
ಪ್ರಯತ್ನಮಾಡಿದವರಂತೆ, ಇರಬೇಕೆಂಬ ಅಪೇಕ್ಷೆಯು ನನಗಿಲ್ಲ ನನ್ನ
ತಂದೆಯಮುಂದೆ ನಾನು ಸಾಯುವುದಕ್ಕೆ ಹೆದರತಕ್ಕವನೂ ಅಲ್ಲ. ಆದರೆ
ಸನ್ಮಾರ್ಗಪ್ರವರ್ತನೆಯಿಂದ ತಾಯಿತಂದೆಗಳಲ್ಲಿ ಕೀರ್ತಿಯುಳ್ಳವನಾಗಿ,
ಮರಣವನ್ನು ಹೊಂದಿದರೆ ವಂಶಕ್ಕೆ ಗೌರವ ಉಂಟಾಗುವುದೇಹೊರತು,
ಅನ್ಯಥ ಇಲ್ಲವೆಂದು ಹೇಳಿದನು. ನಂತರ ತಾಯಿಯು ನಾನಾವಿಧದಿಂದ
ಮಗನಿಗೆ ಸ್ತ್ರೀಯರಲ್ಲಿ ಉಂಟಾಗಿರುವ, ಅಪನಂಬಿಕೆಯನ್ನು ಹೋಗಲಾ
ಡಿಸಬೇಕೆಂದು ಬಹು ಪ್ರಯತ್ನಮಾಡಿ ಹೇಳಿದರೂ, ಆತನು ಒಪ್ಪದೆ ತಾಯಿ
ಯನ್ನು ಖಂಡಿಸಿ, ಆಕೆಯು ಹೇಳಿದ ಮಾತುಗಳಿಗೆಲ್ಲ, ಪ್ರತ್ಯುತ್ತರವನ್ನು

ಕಲ್ಪಿಸಿ ಹೇಳಿ, ತಾನು ದೃಢವಾದ ಮನಸ್ಸನ್ನು ಹೊಂದಿದ್ದನು. ಈತನ ಮನೋಧಾರ್ಢ್ಯವನ್ನು ನೋಡಿ, ತಾಯಿಯಾದವಳು ತುಂಬಾ ವ್ಯಸನಾಕ್ರಾಂತಳಾದಳು. ನಂತರ ಒಂದು ಸಂವತ್ಸರವು ಕಳೆದಬಳಿಕ ಸುಲ್ತಾನರು ತನ್ನ ಮಂತ್ರಿಸಾಮಂತ ಪುರೋಹಿತರಿಂದೊಡಗೂಡಿ, ಒಡ್ಡೋಲಗದಲ್ಲಿ ಕುಳಿತು, ಪ್ರಧಾನಮಂತ್ರಿಯು ಮೂಲಕವಾಗಿ, ತನ್ನ ಮಗನನ್ನು ಸಭೆಗೆ ಬರಮಾಡಿ, ಆತನನ್ನುಕುರಿತು, ಕುಮಾರನೇ! ನಿನಗೆ ನಾನು ಬಹುವಿಧದಿಂದ ವಿವಾಹ ಮಾಡಿಕೊಳ್ಳಬೇಕೆಂದು ಹೇಳಿ, ಅದಕ್ಕಾಗಿ ಯೋಚಿಸುವಂತೆ ಎರಡು ವರ್ಷಗಳ ಕಾಲವನ್ನು, ಅವಧಿಯಾಗಿ ಕೊಟ್ಟಿದ್ದರೂ, ನೀನು ಸರಿಯಾದ ಯೋಚನೆ ಮಾಡದೆ, ನನ್ನವಾಕ್ಯವನ್ನು ಉಲ್ಲಂಘಿಸಿ ವಿರೋಧ ಭಾವದಿಂದ ನಡೆದುಕೊಳ್ಳುತ್ತಿರುವೆ. ಈ ನಿನ್ನ ದುರ್ಮಾರ್ಗಕ್ಕಾಗಿ ನಾನು ನಿನಗೆ ಯಾವವಿಧವಾದ ಶಿಕ್ಷೆಯನ್ನೂ ಕೊಡಲಿಲ್ಲ. ಈಗ ನನ್ನೀಸಭಿಕರೊಡನೆ ಕಲೆತು ಮತ್ತೊಂದುಸಾರಿ, ನೀನು ಈ ವಿಷಯವನ್ನು ಪರ್ಯಾಲೋಚಿಸಿ, ಉತ್ತರವನ್ನು ಶೀಘ್ರವಾಗಿ ಹೇಳಬೇಕೆಂದು, ನಿನಗೆ ಅವಧಿಯೆನ್ನು ಕೊಟ್ಟಿರುವೆನು.

ಈ ವಿಷಯವನ್ನು ನೀನು ಸರಿಯಾಗಿ ನೆರವೇರಿಸುವುದರಿಂದ, ನಿನ್ನ ತಾಯಿತಂದೆಗಳಿಗಲ್ಲದೆ ಸಭಿಕರಿಗೂ, ನಿನ್ನದೇಶದ ಜನಗಳಿಗೂ, ಉತ್ಸಾಹವನ್ನೂ ಸಂತೋಷವನ್ನೂ ಸಹ ಉಂಟುಮಾಡಿದಂತೆ ಆಗುತ್ತದೆ. ನನ್ನ ಸಭಿಕರೂ, ನಿಮ್ಮ ತಾಯಿಯೂಕೂಡ ನನ್ನ ಅಭಿಪ್ರಾಯವನ್ನೇ ಅನುಮೋದಿಸುತ್ತಿರುವರಾದುದರಿಂದ, ನೀನು ಯಾವವಿಷಯವನ್ನು ಚೆನ್ನಾಗಿ ಪರ್ಯಾಲೋಚಿಸಿ, ನಿನ್ನ ತಾತ್ಪರ್ಯವನ್ನು ಧಾರಾಳವಾಗಿ ಹೇಳು. ನಂತರ ಅದಕ್ಕೆತಕ್ಕಂತೆ ನಾನು ನಡೆಸಲು ಸಿದ್ಧನಾಗಿರುವೆನೆಂದು ಹೇಳಲು ಆಮಾತುಗಳನ್ನು ಕೇಳಿದಕೂಡಲೇ, ರಾಜಪುತ್ರನು ಸ್ವಲ್ಪವೂ ಲಕ್ಷ್ಯಮಾಡದೆ ತನ್ನ ತಂದೆಯನ್ನು ನಿರಾಕರಿಸಿ ನುಡಿಯಲು, ಸಭಾಮಧ್ಯದಲ್ಲಿ ತನಗೆ ಉಂಟಾದ, ಅಪಮಾನವನ್ನುಕುರಿತು, ಸುಲ್ತಾನನು ಬಹಳನಾಗಿ ವಿಚಾರಯುಕ್ತನಾಗಿ, ಎಲಾ! ದುರ್ಮಾರ್ಗಿಯಾದ ನೀಚನೇ! ಸುಲ್ತಾನನಾದ ನಿನ್ನ ತಂದೆಯ ಮಾತನ್ನುಕೂಡ ನಿರಾಕರಿಸಿ, ಹೀಗೆ ಅವಮಾನ ಮಾಡಬಹುದೇ ಎಂದು ಆಗ್ರಹದಿಂದ ನುಡಿದು, ತನ್ನ ರಾಜಭಟರನ್ನು ಕರೆದು

ಈತನು ತುಂಬಾ ದುರ್ಮಾರ್ಗಿಯೊಗಿರುವನಾದುದರಿಂದ, ಈತನನ್ನು ಕರೆದು ಕೊಂಡುಹೋಗಿ ಬಹುದಿನಗಳಿಂದ ಹಾಳುಬಿದ್ದಿರುವ, ಒಂದಾನೊಂದು ಉಪ್ಪರಿಗೆಯಲ್ಲಿ ಸೆರೆಹಾಕೆಂದು ಆಜ್ಞಾಪಿಸಿದನು. ಕೂಡಲೇ ರಾಜಭಟರು ಒಂದು ಮಂಚವನ್ನೂ, ಕೆಲವು ವಸ್ತ್ರಗಳನ್ನೂ, ಸ್ವಲ್ಪ ಬುಕ್ಕುಗಳನ್ನೂ ತೆಗೆದುಕೊಂಡು, ಆತನನ್ನು ಸಂಗಡ ಕರೆದುಕೊಂಡು ಹೊರಟು, ಒಂದಾನೊಂದು ಹಾಳು ಉಪ್ಪರಿಗೆಯಲ್ಲಿ ಕುಳ್ಳಿರಿಸಿ, ಮಾರ್ಗವನ್ನು ತಡೆದು ಬಲವಾಗಿ ಮುಚ್ಚಿದರು. ಈತೆರದಿಂದ ಕಮರಲೂಜಮಾನನು ಕಾರಾಗೃಹವಾಸಿಯಾಗಿದ್ದರೂ, ತನ್ನ ಕಾಲವನ್ನು ಅವೋಘವಾದ ಕಾವ್ಯವ್ಯಾಸಂಗದಲ್ಲಿ ವಿನಿಯೋಗಿಸುತ್ತಿದ್ದುದರಿಂದ, ತನ್ನ ಕಷ್ಟಗಳನ್ನೆಲ್ಲಾ ಲಕ್ಷ್ಯಮಾಡದೆ ನಿರಾತುಂಕನಾಗಿ ವಿದ್ಯಾವ್ಯಾಸಂಗದಲ್ಲಿ ಕಾಲವನ್ನುಕಳೆಯುತ್ತ, ಸಂಧ್ಯಾಕಾಲದಲ್ಲಿ ಸ್ನಾನವನ್ನು ತಿರಿಸಿಕೊಂಡು, ಜಪಾದಿಗಳನ್ನು ನಿರ್ವಿಸಿ, ನಂತರ ಭಗವಂತನ ಧ್ಯಾನಗೆಯ್ದು, ಧೈರ್ಯದಿಂದ ಸ್ವಸ್ಥಚಿತ್ತನಾಗಿ ನಿದ್ರಿಸಿದನು. ಆ ಉಪ್ಪರಿಗೆಯ ಮೇಲುಭಾಗದಲ್ಲಿ ಒಂದಾನೊಂದು ಛಾವಣಿಯಿಂಟು. ಆ ಛಾವಣಿಯೆಲ್ಲಿ ಪ್ರಖ್ಯಾತಳಾದ ಒಬ್ಬ ಯಕ್ಷಿಣಿಯು ವಾಸಮಾಡುತ್ತಿರುವಳು. ಆಕೆಯು, ತನ್ನ ಪದ್ಧತಿಯನ್ನನುಸರಿಸಿ ಹಗಲೆಲ್ಲ ಅದರಲ್ಲಿ ಅಡಗಿಕೊಂಡಿದ್ದು, ರಾತ್ರಿಯ ಕಾಲದಲ್ಲಿ ಸಂಚಾರ ಹೊರಟು ಹೊರಗೆ ಬರುತ್ತಿರುವಳು.

ಎಂದಿನಂತೆ ಈದಿನವೂ ಛಾವಣಿಯಮೇಲಕ್ಕೆ ಹಾರಿಬಂದು, ರಾಜಕುಮಾರನು ವಾಸಮಾಡುವ ಕೊಠಡಿಯಲ್ಲಿ, ದೀಪ ಉರಿಯುತ್ತಿರುವುದನ್ನು ಕಂಡು, ಬಾಗಿಲಲ್ಲಿ ಕಾದುಕೊಂಡು ಮಲಗಿರುವ, ಚಾರಕರನ್ನು ಲಕ್ಷ್ಯಮಾಡದೆ ಒಳಹೊಕ್ಕು ರಾಜಪುತ್ರನ ರೂಪುರೇಖಾ ಲಾವಣ್ಯಾದಿಗಳನ್ನು ನೋಡಿ, ಆಶ್ಚರ್ಯಯುಕ್ತಳಾಗಿ ನೋಡುತ್ತಿದ್ದಳು. ಆಗ ರಾಜಪುತ್ರನಾದ ಕಮರಲೂಜಮಾನನ ಸೌಂದರ್ಯವನ್ನುನೋಡಿ, ಆಹಾ! ಇದೆಂತಹ ಸೌಂದರ್ಯ. ಓಹೋ! ಇದೇನು ಲಾವಣ್ಯ! ಹಾ! ಆಹಾ! ಇಂತಹ ಸುಂದರಪುರುಷನನ್ನು ನಾನು ಭೂಲೋಕದಲ್ಲಾಗಲೀ ಕಾಣಲಿಲ್ಲವಲ್ಲಾ! ಅಂದವಾದ ಸೌಂದರ್ಯದಿಂದ ನಿಬಿಡವಾದ ಈತನ ಈ ಕಣ್ಣುರೆಪ್ಪೆಗಳನ್ನು ತೆರೆದಿರುವಕಾಲದಲ್ಲಿ, ಈತನನ್ನು ನೋಡುವ ಆನಂದವೆಂಥಾದ್ದೋ

ಹೇಳಲಾಗದೆಂದು ಹೊಗಳಿ, ನಿದ್ರೆಯು ಏಚ್ಚರವಾಗದಂತೆ ಕೆನ್ನೆಗಳನ್ನೂ, ಗಲ್ಲವನ್ನು ಮುತ್ತಿಟ್ಟುಕೊಂಡು, ಯಕ್ಷಿಣಿಯಾದ ಆಮಿಯಿಮೌನಳು ಅಲ್ಲಿಂದ-ಆಕಾಶಮಾರ್ಗಕ್ಕೆ ಹಾರಿ, ಇತರವಿಧವಾದ ದುಷ್ಟ ದೈವಗಳನ್ನು ಖಂಡಿಸಿ, ಮಹಾ ಸೊಲೊಮೋವನರನ ಭೂತಗಣದಲ್ಲಿ, ಸೇರಿಹೋದಳು. ಭಗವಂತನನ್ನು ಇದಿರಿಸಿದ, ರಾಕ್ಷಸನಾದ ಸಾಹಾರಾಶ್ವನ ಮಗನು ಆಮಿಯಿಮೌನಳು ಭಗವದ್ಭಕ್ತಿಪರಾಯಣಳಾದುದರಿಂದ, ಆಕೆಯ ಗುಣಾತಿಶಯಗಳನ್ನು ಚೆನ್ನಾಗಿ ತಿಳಿದಿರುವನು. ಆದುದರಿಂದ ಭಯೋದ್ವಿಗ್ನನಾಗಿ ಬಹು ದೂರದಲ್ಲಿದ್ದು ಹೊರಟುಹೋಗುತ್ತಿದ್ದನಾದರೂ, ಆದಿನ ಆಕೆಯನ್ನು ನೋಡಿ ತಾನೇ ಮಾತನಾಡಲಾರಂಭಿಸಿ, ಭಗದದ್ಭಕ್ತಳಾದ, ಆಮಿಯಿಮೌನಳೇ ನನ್ನನ್ನು ಏನೂ ಮಾಡುವುದಿಲ್ಲವೆಂದು ಪರಮೇಶ್ವರನಮೇಲೆ ಆಣೆ ಇಟ್ಟು, ಅಭಯದಾನವನ್ನು ಪಡೆದು. ಇಗೋ! ನಾನೇನು ನಿನ್ನನ್ನು ತೊಂದರೆಪಡಿಸುವುದಿಲ್ಲವೆಂದು, ಭಗವಂತನಮೇಲೆ ಭಾಷೆ ಇಡುವೆನೆಂದು, ವಿನಮ್ರವಚನಗಳಿಂದ ನುಡಿದನು.

ಆ ಮಾತನ್ನು ಕೇಳಿ, ಆಮಿಯಿಮೌನಳು ಎಲೈ ನಿರ್ಭಾಗ್ಯನಾದ ರಾಕ್ಷಸನೇ! ನೀನು ನನಗೇನುಶಾನೇ ಮಾಡಬಲ್ಲೆ? ಆದರೆ ನೀನು ನನಗೆ ಸಮಾನನಲ್ಲವಾದುದರಿಂದ ನಾನೇನೂ ನಿನಗೆ ಕೇಡುಮಾಡಲಾರೆನೆಂದು ಖಂಡಿತವಾಗಿ ಹೇಳುವೆನು. ದೇಶದೇಶವನ್ನು ಸುತ್ತಿಸುತ್ತಿ ಹೊತ್ತುಕಳೆಯುವ ನೀನು ಎಲ್ಲಿಂದ ಬಂದೆ? ಯಾವ ದೇಶದ್ದು ನಿನು ಆಶ್ಚರ್ಯವನ್ನುಕಂಡೆ? ನಿನ್ನೇರಾತ್ರಿ ನಿನುಕಾರ್ಯವನ್ನು ಮಾಡಿದೆ? ಇದೆಲ್ಲವನ್ನು ನನಗೆ ವಿಶದವಾಗಿ ತಿಳಿಯುವಹಾಗೆಮಾಡಲೀಕೆನಲು, ರಾಕ್ಷಸನು ಎಲೈ ಸುಂದರೀಮಣೀ! ಮಹಾ ವಿಚಿತ್ರಕರವಾದ ಒಂದಾನೊಂದು ಸಂಗತಿಯನ್ನು ನೀನು ಕೇಳುವ ಸಮಯವು ದೊರೆತಿರುವುದೆಂದು, ನಡೆದ ಎಲ್ಲ ಹೇಳಿ, ಮುಕಾರಬಿ ಓದುವ ಬೆಳಗಾದಕೂಡಲೆ ಕಥೆಯನ್ನು ನಿಲ್ಲಿಸಿ, ಮರಳಿ ಬೆಳಗಿನ ಬೀಡಬಲ್ಲಿ ಮರಳಿ ಹೇಳಲಾರಂಭಿಸಿದಳು.

ಎಗಿಪ್ಸಿಯನ ರಾತ್ರಿ ಕಥೆ.

—* ಚೀನಾದೇಶದ ರಾಜಪುತ್ರಿಯ ಕಥೆ. *—

ಸಲಾಮನೇ! ಬಳಿಕ ಆ ರಾಕ್ಷಸನು, ಪೆಯಿಮೌನಳನ್ನು ಕುರಿತು ಅನುಮ್ಮ! ಈ ಭೂಲೋಕವನ್ನೆಲ್ಲಾ ದ್ವೀಪಗಳಲ್ಲಿ ಕಡೆಯೆಂದಾದ ದ್ವೀಪವಿಂದ ಕೂಡಿದ, ಚೀನಾದೇಶದ ಪೀಠಿಯನ್ನು ಈಗತಾನೆ ಬಿಟ್ಟು ಬಂದಿರುವೆನು. ನಿನ್ನ ಇಷ್ಟಪ್ರಕಾರನಾಗಿ ನಾನು ನೋಡಿದ ವಿನೋದಗಳನ್ನು ಹೇಳುವೆನಾದರೂ, ನೀನು ನನ್ನಿಂದೆ ಬಾರದಂತೆ ವಾಗ್ದಾನ ಮಾಡಬೇಕೆಂದು, ಭಯದಿಂದ ಗದ್ಗದ ಸ್ವರಯುಕ್ತವಾದ ಮಾತುಗಳನ್ನು ಆಡುತ್ತ, ಕಡೆಗೆ ವಿನಯಾವಲಂಬವರ್ತಿಯಾಗಿ ಇದಿರಿಗೆ ನಿಂತಿರುವ, ರಾಕ್ಷಸನನ್ನು ನೋಡಿ, ಪೆಯಿಮೌನಳು ಹೇಳು! ಹೇಳು! ದುಷ್ಟನಾದ ರಾಕ್ಷಸನೇ! ನಿರ್ಭಯನಾಗಿ, ನಿನಗೆ ತಿಳಿದಿರುವ ನಿಜವಾದ ಸಂಗತಿಯನ್ನು ಪುರೆ ಮಾಜದೆ ಹೇಳು. ನಾನು ನಿನ್ನಹಾಗೆ ಮಾತಿಗೆತಪ್ಪುವ ದುಷ್ಟಬಾಣಿಯನಾಗುವೆನೆಂದು ತಿಳಿದು, ಬೇಗ ನಿಜವನ್ನು ಹೇಳದೇಹೋದರೆ, ನಿನ್ನ ರೆಕ್ಕೆಗಳನ್ನು ಕತ್ತರಿಸಿ ತಕ್ಕ ಶಿರದಿಂದ, ಶಿಕ್ಷಿಸುವೆನೆನಲು, ಸ್ವಲ್ಪ ಕೊತ್ತಿ ಯೋಚಿಸಿ, ಅಮ್ಮಾ! ನೀನು ದಯ ಮಾಡಿ ಅಪ್ಪಣೆ ಕೊಡುವುದಾದರೆ ನಾನು ಖಂಡಿತನನ್ನೇ ನುಡಿಯುವೆನೆಂದು ಹೇಳಿ ಇಂತೆ ಪನು.

ನಾನು ಈಗತಾನೆ ಬಿಟ್ಟುಬಂದಿರುವ ಚೀನಾದೇಶವು ಭೂಲೋಕದ ರಾಜ್ಯಗಳಲ್ಲೆಲ್ಲಾ ಬಹು ವಿಸ್ತಾರವಾದುದು. ಅಲ್ಲಿಬೆ ನಾನಾವಿಧ ವಿಧವಾದ ಹಲವು ದ್ವೀಪಗಳನ್ನೊಳಗೊಂಡಿರುವುದು. ಪ್ರಕೃತಪಲ್ಲಿ ಆ ರಾಜ್ಯವನ್ನಾಳುತ್ತಿರುವ ರಾಜನ ಹೆಸರು ಗಯೌರು. ಆತನಿಗೆ ಬಹು ರೂಪವತಿಯಾದ ಒಬ್ಬ ಮಗಳಿರುವಳು. ಈ ಪ್ರಪಂಚದ ಸೃಷ್ಟಿಯಿಂದಿನಿಂದಲೂ ಅಂತಹ ಸುಂದರವಿಗ್ರಹಿಯೆಂದಾದ ಸ್ತ್ರೀರತ್ನವು ಹುಟ್ಟಲೇಯಿಲ್ಲ. ನಿನಗಾಗಲೀ, ನನಗಾಗಲೀ, ನಮ್ಮಗಳನ್ನು ವಿಚಾರಿಸಿರುವ ಮತ್ತಾವ ಪಂಡಿತರಿಗಾಗಲೀ, ಆ ಸುಂದರೀಮಣಿಯ ಸೌಂದರ್ಯವನ್ನು ವರ್ಣಿಸಲಸಾಧ್ಯವಾಗಿರುವುದು. ಲೋಕದಲ್ಲಿರುವ ಸಮಸ್ತರಾದ ಕವಿಜನರ ಕವಿತಾಶೈಲಿಯಲ್ಲಿ ಉತ್ತಮವಾದ ವರ್ಣನೆಗಳನ್ನು ತೆಗೆದುಕೊಂಡರೂ,

ಅವಳನ್ನು ವರ್ಣಿಸುವ ಕಾರ್ಯದಲ್ಲಿ ಬಂದಕ್ಷರವಾದರೂ ಪ್ರಯೋಜನಕ್ಕೆ ಬಾರದು. ಆ ಲಲನಾಮಣಿಯ ಕೇಶಪಾಶಗಳು, ನಿಬಿಡವಾಗಿಯೂ, ಕೊಂಕು ಗುರುಳನ್ನು ಹಿಯ್ಯಾಳಿಸುವ ಸೌಭಾಗ್ಯವನ್ನು ಹೊಂದಿ ಪಾದಮೂಲದಲ್ಲಿ ಜೋಲಾಡುತ್ತಿರುವುವು. ಅವುಗಳನ್ನು ಜೋಡಿಸಿ, ಬಿಂದುಗಂಟಾಗಿ ಹಾಕಿಕೊಂಡಿದ್ದರೆ, ಅವು ರಸಭರಿತವಾಗಿ ದೊಪ್ಪದಾಗಿ ಬೆಳೆದಿರುವ ದ್ರಾಕ್ಷಾ ಗೊಂಚಲಿನಂತೆ ಜೊಳೆಯುತ್ತಿರುಪ್ಪುದು. ಆಕೆಯು ಮುಖವಾದರೋ, ಪೂರ್ಣಚಂದ್ರನನ್ನು ಸೋಲಿಸುತ್ತಿರುವುದು. ಕದಪುಗಳು ಹದನಾದ ಪ್ರಕಾಶವನ್ನು ಬೀರುತ್ತಿರುವ ಕನ್ನಡಿಯ ಜೊಳಪನ್ನು ಹಂದುಗೆಯ್ಯುತ್ತಿರುವ್ವದು. ನಸುನೀಟಾದ ನಾಸಿಕವು ಸಂಪಿಗೆಯ ಮೊಗ್ಗನ್ನು ಅರಳುವಂತೆ ಮಾಡುತ್ತಿರುವ್ವದು. ಬಾಯಿಯು ಅಮೃತರಸವನ್ನು ತುಂಬಿರುವ ಸುವರ್ಣದ ಗಿಂಡಿಯ ಮುಖದಂತ್ರೆ ಪ್ರಸನ್ನಜ್ಞಾವಾಗಿರುವುದು. ದಂತಪಂಕ್ತಿಗಳಾದರೋ, ಮೋಹಕರವಾದ ಕಾಂತಿಯನ್ನು ಬೀರುತ್ತಿರುವ ಮುತ್ತಿನ ಸರಗಳನ್ನು ಮೇಲೂ ಕೆಳಗೂ ಜೋಡಿಸಿ ಕಟ್ಟಿದಂತೆ ಇರುವುದು. ಆಕೆಯ ಕಂಠಸ್ವರವು ಪ್ರಸನ್ನಜ್ಞಾವಾದ ಮಧುರಸ್ವರವನ್ನು ಬೀರುತ್ತಿರುಪ್ಪುದು.

ಆ ಸುಂದರಿಯ ಲಾವಣ್ಯವನ್ನು ನಾನು ಪ್ರತಿಯೊಂದಾಗಿ ಹೇಳಲಿಲ್ಲವಾದುದರಿಂದ ಮುಖ್ಯವಾಗಿ ಆ ಲಲನಾಮಣಿಯ ಸೌಂದರ್ಯವನ್ನು ಕುರಿತು, ನೋಡಿ ಕೃಪಿತ್ತಜಪಜೀಕೇಮೊರತು, ವರ್ಣಿಸಲಸಾಧ್ಯವಾಗಿರುವ್ವದೆಂದು ನುಡಿದು, ಇಂತಹ ಅಸಮಾನವಾದ ಸೌಂದರ್ಯವನ್ನು ತೊಂದಿರುವ ಆ ರಾಜಪುತ್ರಿಯನ್ನು ನೋಡಿರುವವರಿಲ್ಲರೂ, ಅವಳಿಗೆ ಮಾಡಬೇಕಾದ ಉಪಚಾರವನ್ನುಕಂಡು, ಯಾರೂ ಮೋಹಿಸದಿರುವುದರಿಂದಲೂ, ಪ್ರಮುಖಪಟ್ಟ ಲಕ್ಷಣವ್ಯಾಮೋಹಕ್ಕೆ ತಕ್ಕಂತೆ ಉಪಚರಿಸಿ, ಸುದಾರಿಸುವ ತಕ್ಕ ಶಕ್ತರಾರೂ ಇಲ್ಲವಾದುದರಿಂದಲೂ, ಆ ಕನ್ಯಾರತ್ನದ ತಂದೆ ವಿವಾಹ ಮಾಡಿಕೊಳ್ಳುವ ಪುರುಷನುಜೊರತು, ಮತ್ತಾರೂ ಅವಳನ್ನು ನೋಡಕೂಡದೆಂದು ಸಿದ್ಧಾಂತ ಮಾಡಿ ತಾನು ತನ್ನ ಮಗಳನ್ನು ನಿರ್ಬಂಧಪಡಿಸಲಾರದೆ ಲೋಕದಲ್ಲಿರುವ ಮಹಾ ವಿಚಿತ್ರಕರಗಳಾದ ವಸ್ತುಗಳುಳ್ಳದ್ದಾಗಿ, ಜಡ್ರಕಾಂತ, ಅಮೃತಶಿಲೆ, ಉಕ್ಕು, ಲೀಲಕಾಂತ, ಪಚ್ಚೆ, ರತ್ನ,

ಮತ್ತು ಇತರ ಉತ್ತಮ ಲೋಹಗಳಿಂದ ಏಳುಸುತ್ತಿನ ಅರಮನೆಯೊಂದನ್ನು ಕಟ್ಟಿಸಿ, ಆ ಅರಮನೆಗೆ ತಕ್ಕಂತೆ ಮನೋಹರವಾದ ನಾನಾವಿಚಿತ್ರವಸ್ತುಗಳನ್ನು ತರಿಸಿ ಅಲಂಕರಿಸಿ, ಮತ್ತೂ ಅದರ ಮಧ್ಯದಲ್ಲಿ ಮನೋಜ್ಞವಾದ ಪಚ್ಚೆವರ್ಣದಿಂದ ಕೂಡಿ, ಸೂರ್ಯರಶ್ಮಿಯನ್ನು ಶೀತಲವಾಗಿ ಮಾಡುತ್ತಿರುವ ಶೈತ್ಯ ಸೌರಭ್ಯ ಮಾಂದ್ಯಯುಕ್ತವಾದ ಸುಳಗಾಳಿಗೆ ಮಾತೃವಾದ ಪುಷ್ಪಫಲಭರಿತಗಳಾಗಿ ಸುಂದರವಾದ ಚಿಗುರುಗಳಿಂದಲೂ, ಹೂವುಗಳಿಂದಲೂ, ಕಾಯಿಗಳಿದಲೂ, ಹಣ್ಣುಗಳಿಂದ ಸುಗಂಧಯುಕ್ತವಾದ ಮಂದಮಾರುತನ ಬಲಪಿನಿಂದಲೂ, ಕೂಡಿರುವ ಉದ್ಯಾನವೃಕ್ಷಗಳಿಗೆ ಜೀವನಪ್ರಾಯವಾಗಿರುವ ಜೀವನವನ್ನು ಹಾಲಿರೆದು ಕಲ್ಪಿಸುವಂತೆ ಮಾತೃರೂಪದಿಂದ ಪಾದಪಗಳಿಗೆ ಕ್ಷೀರದಾನವನ್ನು ಮಾಡುತ್ತಿರುವ ಕಾಲುವೆಗಳಿಂದಲೂ ಮನೋಹರವಾಗಿರುವುದು. ಬಹಳವಾಗಿ ಹೇಳಿದುದರಿಂದ ಪ್ರಯೋಜನವೇನು. ತನ್ನ ಮಗಳಮೇಲೆ ಎಷ್ಟು ಅತಿಶಯವಾದ ಪುತ್ರವಾತ್ಸಲ್ಯವಿದ್ದಿತೋ, ಅದಕ್ಕಿಂತಲೂ ಅಧಿಕವಾದ ಧನವನ್ನು ವ್ಯಯ ಮಾಡಿ, ಆ ಅರಮನೆಯನ್ನು ಕಟ್ಟಿಸಿದನು.

ಇಂತು ಅಸಮಾನ ಸೌಂದರ್ಯ ಉಪಚಾರಶೀಲಳಾದ, ಕನ್ಯಾಮಣಿಯನ್ನು ಮದುವೆ ಮಾಡಿಕೊಳ್ಳಬೇಕೆಂಬ ಆಭಿಪ್ರಾಯದಿಂದ ಸುತ್ತಮುತ್ತಿನ ಅನೇಕಮಂದಿ ರಾಜಪುತ್ರರು ತಂತಮ್ಮ ಕಡೆಯ ರಾಯಬಾರಿಗಳನ್ನು ಕಳುಹಿಸಿದರು. ಚೀನಾ ರಾಜನು ಅವರನ್ನು ಬಹು ಮರ್ಯಾದೆಯಿಂದ ಬರಮಾಡಿಕೊಂಡು, ತನ್ನ ಮಗಳು ಒಪ್ಪದಿರುವ ರಾಯಬಾರಿಗಳನ್ನು ಹಿಂದಕ್ಕೆ ಕಳುಹುತ್ತ ಹೊಸದಾಗಿ ಬಂದ ರಾಯಬಾರಿಗಳನ್ನು ಮಗಳಿಗೆ ಬೀಟಿ ಮಾಡಿಸುತ್ತಿದ್ದನು. ಆದರೆ ರಾಜನ ಕಾರ್ಯವಾವುದೂ ಸಫಲವಾಗದೆ ಬಂದ ರಾಜಪುತ್ರರಕಡೆಯ ರಾಯಬಾರಿಗಳೆಲ್ಲರೂ, ರಾಜಪುತ್ರಿಯಿಂದ ತಿರಸ್ಕೃತರಾಗಿ ಹೊರಟುಹೋದರು. ಹೀಗಿರುವಲ್ಲಿ ಆ ಕನ್ಯಾಮಣಿಯು ಒಂದಾನೊಂದುದಿನ ತಂದೆಯನ್ನು ನೋಡಿ, ಅಯ್ಯಾ ! ನೀವು ನನಗೆ ವಿವಾಹವನ್ನುಮಾಡಿ ಕಣ್ಣಾರೆನೋಡಿ ಸಂತೋಷ ಹೊಂದಬೇಕೆಂದಿರುವಿರಲ್ಲವೇ ? ನಾನು ನಿಮ್ಮ ಮನೆಯಲ್ಲಿ ವಾಸಮಾಡುತ್ತಿರುವ ಕಾಲದಲ್ಲಿ ನನಗೆ ಉಂಟಾದ ಆನಂದವೂ, ಅರಮನೆಯೂ, ಉದ್ಯಾನವೂ. ಮತ್ತೆಲ್ಲಿಯಾದರೂ ನನಗೆ ದೊರೆವುದೇ? ಇಷ್ಟೊಂದು ಗೌರವವೂ, ಸುಖವೂ

ನನಗೆ ಉಂಟಾಗಲಾರದು. ನಾನು ಎಂತಹ ಗಂಡನನ್ನು ಮದುವೆಯಾದರೂ ಇಂತಹ ಸುಖವನ್ನು ಯಾರೂ ಉಂಟುಮಾಡಲಾರರು. ನೀನು ನನಗೆಷ್ಟು ಗೌರವದಿಂದ ನಡೆಸಬೇಕೋ, ಅದಕ್ಕಿಂತ ಅತಿಶಯವಾದ ಸುಖಸಂತೋಷಗಳನ್ನುಂಟುಮಾಡುತ್ತಿರುವೆಯೆಲ್ಲಾ! ಪುರುಷರೆಲ್ಲರೂ, ಸ್ವತಂತ್ರರಾಗಿರಲು ಅಪೇಕ್ಷಿಸುತ್ತಿರುವರೇಹೊರತು ಅನ್ಯಥಾ ವರ್ತಿಸಲಾರರು. ನಾನಾದರೋ ಪರತಂತ್ರಳಾಗಿ ಹೋಗುವೆನಾದುದರಿಂದ ವಿವಾಹವನ್ನು ಮಾಡಿಕೊಳ್ಳುವುದಕ್ಕೆ ನನಗೆ ಸರ್ವಥಾ ಇಷ್ಟವಿಲ್ಲ ಎಂದಳು. ಹೀಗಿರುವಲ್ಲಿ ತಿರಸ್ಕೃತರಾಗಿ ಹೊರಟುಹೋದ ರಾಜರೆಲ್ಲರಿಗಿಂತಲೂ, ಅತಿಶಯವಾದ ಗೌರವಶಾಲಿಯಾದೊಬ್ಬ ರಾಜಪುತ್ರನು ಚೀನಾದೇಶಕ್ಕೆ ಬರಲು ರಾಜನು ಆತನನ್ನು ತನ್ನ ಕುಮಾರಿಗೆ ತೋರಿಸಿ, ಅಮ್ಮಾ! ಈತನನ್ನು ನೀನು ಮದುವೆಮಾಡಿಕೊಳ್ಳಲೇಬೇಕೆಂದು ಹೇಳಲು ಮಗಳು ತಂದೆಯನ್ನುಕುರಿತು ಅಪ್ಪಾ! ನಾನು ಮೊದಲು ನಿನಗೆ ಹೇಳಿದಕಾರಣಗಳಿಂದ ಈಗ ಸರ್ವಥಾ ಮದುವೆಯಾಗಲೊಲ್ಲೆನು. ನೀನು ಈ ವಿಷಯವನ್ನು ಕುರಿತು ಮತ್ತೆ ನನ್ನೊಡನೆ ಮಾತನಾಡಬೇಕಾದ ಅಗತ್ಯವಿಲ್ಲವೆಂದು ನುಡಿದಳು.

ಆ ಮಾತನ್ನು ಕೇಳಿ ತಂದೆಯು ಕೋಪಿಸಿಕೊಂಡು, ಮಗಳನ್ನು ಕುರಿತು, ಅಮ್ಮಾ! ನಿನಗೆ ದುರ್ಬುದ್ಧಿಯು ಹುಟ್ಟಿರುವುದಕ್ಕೆ ಕಾರಣವೇನೋ ನನಗೆ ತಿಳಿಯದು. ಪಾಪಯೋಚನೆ ನಿನಗೆ ದೆವ್ವಹಿಡಿದಿರಬಹುದು. ಇದಕ್ಕೆ ತಕ್ಕ ಶಿಕ್ಷೆಯನ್ನು ಮಾಡುವೆನೆಂದು ಹೇಳಿ ತನ್ನಮನೆಯ ಒಂದಾನೊಂದು ಕೊಠಡಿಯಲ್ಲಿ ಹಾಕಿ, ಅದಳಿಗೆ ಹಾಲನ್ನುಹಾಕಿ ಸಾಕಿದ ದಾದಿಯನ್ನು ಅವಳ ಜೊತ್ತಿಗೆ ಹತ್ತುಜನ ಇತರ ಚಾಡಿಯೊರನ್ನು ನಿಯಮಿಸಿ ಬಲವಾಗಿ ಬೀಗಮುದ್ರೆಯನ್ನು ಹಾಕಿಸಿ, ರಾಜಪುತ್ರಿಯಾನ್ನು ನೋಡುವುದಕ್ಕೆ ಬರುವ ಜನರಿಗೆಲ್ಲರಿಗೂ, ಆಕೆ ವಿವಾಹವನ್ನು ದ್ವೇಷಿಸುತ್ತಿರುವಳೆಂದೂ, ಆದುದರಿಂದ ಆಕೆಯೆನ್ನು ನೋಡುವುದಕ್ಕೆ ಬರತಕ್ಕವರಲ್ಲಿಯಾರಾದರೂ, ಅವಳಿಗೆ ಹಿಡಿದಿರುವ ದೆವ್ವವನ್ನು ಬಿಡಿಸಿದರೆ ತಾನು ಅವರಿಗೆ ಆ ಮಗಳನ್ನು ಕೊಟ್ಟು ಮದುವೆಮಾಡುವುದಲ್ಲದೆ ಬಹಳವಾದ ಉಪಕಾರ ಮಾಡುವೆನೆಂದು ಎಲ್ಲಾದೇಶೆಗಳಲ್ಲಿಯೂ, ದಂಡೂರವನ್ನು ಪ್ರಚಾರಗೊಳಿಸಿದನು ಎಂದು ನುಡಿತು, ದಾನಹಾಶ್ಚರನು, ಅಮ್ಮಾ! ಇದುವರಿಗೂ

ನಾನು ಹೇಳಿದ ಮಾತುಗಳೆಲ್ಲವೂ ನಿಜವೇ ? ನಾನು ಸ್ವಭಾವತಹ್ಃಗಿ ಕಿಡುಕನಾದರೂ ಆ ಲಲನಾಮಣಿಯ ಸೌಂದರ್ಯವನ್ನು ನೋಡಿ, ಆಕೆಗೆ ಯಾವುದೊಂದು ಕೆಡುಕು ಮಾಡುವುದಕ್ಕೂ ಮನಸ್ಸುಬಾರದೆ ಪ್ರತಿದಿನವೂ ಆಕೆಯ ಬಳಿಗೆಹೋಗಿ ನೋದಿಕೊಂಡುಬರುತ್ತಾ ದಿನದಿನವೂ ಸಂತೋಷಿಸುತ್ತಿರುವೆನು. ಆದರೆ ನೀನು ಒಪ್ಪುವುದಾದರೆ ನನ್ನ ಸಂಗಡ ಅಲ್ಲಿಗೆ ಬಂದು ಪ್ರತ್ಯಕ್ಷವಾಗಿ ಆ ಕನ್ಯಾಮಣಿಯನ್ನು ನೋಡಬಾರದು. ನೀನು ಹೆಜ್ಜೆ ಮಾಡಿದುದೇ ಆದರೆ ನಾನು ನಿನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗುವೆನು. ನೀನು ಆ ಸುಂದರೀಮಣಿಯನ್ನು ನೋಡಿದುದೇ ಆದರೆ ನನಗೆ ತುಂಬ ಸಹಾಯವಾಡಿದಂತಾಗುವುದೆಂದು ನುಡಿದನು.

ಆ ಮಾತುಗಳನ್ನು ಕೇಳಿ, ಮೈಮರೆತಳಾಗಿ ರಾಕ್ಷಸನನ್ನು ನೋಡಿ ಸ್ವಲ್ಪಹೊತ್ತು ಯಾವಮಾತನ್ನೂ ಆಡದೆ ಚಿಂತೆಮಾಡಿದಳು. ಬಳಿಕ್ಕೆ ಅದು, ಬಳಿಕ್ಕೆತು. ಮತ್ತೂ ಕುಳಿತಳು. ನೀನಾಡಿದ ಮಾತುಗಳನ್ನು ನಾನು ನಿಜವೆಂದು ನಂಬುವುದೋ ಎಂದು ಧಡಧಡನೆ ನಡುಗುತ್ತಿದ್ದ ಕೊನೆಗೆ ಎಲಾ ದುಷ್ಟ ರಾಕ್ಷಸನೇ ! ನೀನಾದರೂ ಇಷ್ಟು ಚೆಲುವಳಾದ ಒಬ್ಬ ಹುಟ್ಟಿಳಾದ ರಾಜಪುತ್ರಿಯನ್ನುಕುರಿತು, ಮಾತನಾಡಿದೆ. ಆದರೆ ನಾನು ನೋಡಿದ ಆಸಮಾನ ಸೌಂದರ್ಯಶಾಲಿನಿಯಾದ ರಾಜಪುತ್ರನನ್ನು ನೋಡಿದುದೇ ಆದರೆ ಮತ್ತಾವಮಾತನ್ನು ಆಡದೆ ಮೌನವನ್ನು ಧರಿಸಿಕೊಂಡಿರುವೆ ಅಲ್ಲದೆ ನಿವಾಹವನ್ನು ಒಲ್ಲೆನೆಂದು ತಿರಸ್ಕರಿಸಿರುವೆನಿನ್ನ ಚೀನಾ ರಾಜಪುತ್ರಿಯು ಆತನನ್ನು ನೋಡಿದಕೂಡಲೇ ಪುಡಿಪುಡಿಯಾಗುತ್ತೇನೆಂದು ನಮಸ್ಕರಿಸುವಳೆನಲು, ದುರ್ಜಾತೆಯರನು ಅನಾಮ್ಯ ! ನೀನು ಇದುವರಿಗೂ ಹೇಳಿದ ರಾಜಪುತ್ರನುಕೂಡ ನನ್ನ ರಾಜಕುಮಾರಿಯು ಸ್ಥಿತಿಯಲ್ಲಿದ್ದು ಒಂದಾನೊಂದು ಹಾಳು ಉಪ್ಪರಿಗೆಯಲ್ಲಿ ವಾಸಮಾಡುತ್ತಿರುವನು. ನಾನು ಬರುವಾಗ ಬಹಳಹೊತ್ತು ಆ ಉಪ್ಪರಿಗೆಯಮೇಲೆ ವಾಸನಾಗಿದ್ದೆನು. ಆತನು ಈಗಲೂ ಅಲ್ಲೇ ಇರುವನು. ರಾಜಪುತ್ರನು ಖಿನ್ನತನಾಗಿಯೂ ತಾನು ಮದುವೆ ಮಾಡಿಕೊಳ್ಳನೆಂದು ಹೇಳಿದುದರಿಂದ ತಂದೆಗೆ ಕೋಪವುಂಟು, ಮಗನಿಗಿಂತ ಶಿಕ್ಷೆಯನ್ನು ಕೊಟ್ಟು ನೆರೆ ಹಾಕಿರುವನು. ಇದೇ ನನಗೆ ತೋರುತ್ತಿರುವ ಊಹೆಯಾಗಿರುವುದೆನಲು, ಮೆಯಿಮೌನಳು ನಾನು ಆತನನ್ನು

ನೋಡಿಕೊಂಡು ಈಗತಾನೆ ಇಲ್ಲಿಗೆ ಬಂದೆನೆಂದು ನುಡಿದಳು. ಅಮ್ಮಾ! ನೀನು ಹೇಳಿದುದನ್ನು ನಾನು ಒಪ್ಪಿಕೊಳ್ಳುವೆನು. ಆದರೆ ಆತನನ್ನು ಪ್ರತ್ಯಕ್ಷವಾಗಿ ನೋಡಿ ಆತನ ಸೌಂದರ್ಯಾದಿಗಳನ್ನು ನೋಡಬೇಕೆಂದು ಕುತೂಹಲ ಉಂಟಾಗಿರುವುದು ಎಂದಕೂಡಲೆ ಮೆಯಿಮೌನಳು, ಎಲಾ! ದುರ್ಜನವರೇಣ್ಯನಾದ ನೀಚ ಪಿಶಾಚವೇ! ಅಗಲಿ!! ಅಗಲಿ!!! ಇದನ್ನು ನಾನು ಬಲ್ಲೆನೆಂದು ನುಡಿದಕೂಡಲೆ ರಾಕ್ಷಸನು ಆಕೆಯನ್ನು ಕುರಿತು, ಅಮ್ಮಾ! ನಾನು ಇದುವರಿಗೂ ಹೇಳಿದ ವಿಷಯಗಳು ಸತ್ಯವೆಂದು ನಿನಗೆ ಖಂಡಿತವಾಗಿ ನಿರೂಪಿಸುವೆನು. ಆದರೆ ಮೊದಲು ಹೇಳಿದ ರಾಜಪುತ್ರಿಯನ್ನು ನೀವು ನೋಡಿದಬಳಿಕ ನಿಮ್ಮ ರಾಜಕುಮಾರನನ್ನು ನನಗೆ ತೋರಿಸುವುದಕ್ಕೆ ನೀವು ಒಪ್ಪಬೇಕೆಂದು ಬೇಡಿಕೊಳ್ಳುವೆನೆಂದು ನುಡಿದನು.

ಆಗ ಮೆಯಿಮೌನಳು ರಾಕ್ಷಸನನ್ನು ನೋಡಿ, ಆಹಾ! ನಮ್ಮ ನಮ್ಮ ಯೋಚನೆಗಳನ್ನು ಸರಿಪಡಿಸಿಕೊಂಡು ಸಂತೋಷಚಿತ್ತರಾಗುವುದಕ್ಕೆ ಹೆಚ್ಚಾದ ಶ್ರಮವನ್ನೇನೂ ನಾವು ಹೊಂದಬೇಕಾದುದಿಲ್ಲ. ಆದರೆ ನೀನು ಹೇಳಿದ ರಾಜಕನ್ನಿಕೆಯನ್ನು ಕರೆದು ತಂದು ನಮ್ಮ ರಾಜಪುತ್ರನ ಪಕ್ಕದಲ್ಲಿ ಮತ್ತೊಂದು ಮಂಚದಮೇಲೆ ಮಲಗಿಸಿದರೆ ಪ್ರತ್ಯಕ್ಷವಾಗಿ ಅವರಿಬ್ಬರ ಸೌಂದರ್ಯವನ್ನು ಹೋಲಿಸಿ ನೋಡಬಹುದೆಂದಳು. ಕೂಡಲೆ ಆ ರಾಕ್ಷಸನು ಮೂರನೆಯ ರಾಜ್ಯವನ್ನು ಕುರಿತು ತೆರಳಿ, ಆ ರಾಜಕುಮಾರಿಯನ್ನು ತೆಗೆದುಕೊಂಡುಬಂದು, ಮೆಯಿಮೌನಳಿಗೆ ತೋರಿಸಿ, ಆಕೆ ತೋರಿಸಿದ ಪ್ರಕಾರವನ್ನೇ ಹಿಡಿದು ಆ ಕನ್ಯಾಮಣಿಯನ್ನು ತೆಗೆದುಕೊಂಡುಬಂದು ರಾಜಪುತ್ರನಬಳಿಯಲ್ಲಿ ಮಲಗಿಸಿ, ಅಮ್ಮಾ! ನಿಮ್ಮ ರಾಜಪುತ್ರನಿಗಿಂತಲೂ, ನಮ್ಮ ರಾಜಕನ್ಯೆಯು ಸುಂದರಳಾಗಿರುವುದರಿಂದ ಬಹುಮಾನವನ್ನು ಕೊಡು ಎಂದನು. ಆಗ ಮೆಯಿಮೌನಳು, ಆಹಾ! ನಿನ್ನೀ ರಾಜಕುಮಾರಿಗಿಂತಲೂ, ರಾಜಪುತ್ರನೇ ಸುಂದರನಾಗಿರುವುದರಿಂದ ನಾನೇ ಬಹುಮಾನ ಕೊಡುವೆನೆಂದು ಹೇಳಿದಳು. ಇಂತೆಂದು ಹೇಳಿ ಷಹರಜಾದಿಯು ಬಿಳಗಾವಕೂಡಲೆ ಕಥೆಯನ್ನು ನಿಲ್ಲಿಸಿ, ಮರಳಿ ಬಿಳಿಗಿನ ಜಾವದಲ್ಲಿ ಹೇಳಲಾರಂಭಿಸಿದಳು.

ಎಂಭತ್ತೆರಡನೆಯ ರಾತ್ರಿಯ ಕಥೆ.

ಬಳಿಕ ಈತೆರದಿಂದ ಚೀನಾ ರಾಜಪುತ್ರಿಯೂ, ರಾಜಪುತ್ರನೂ, ಏಕಶಯ್ಯಾವಲಂಬನದಲ್ಲಿರುವಾಗ ಹೋಲಿಸಿ ನೋಡಿದರೆ ಅವರಿಬ್ಬರ ಸೌಂದರ್ಯವೂ ಹೆಚ್ಚುಕಡಿಮೆ ಇಲ್ಲದೆ ಏಕರೀತಿಯಾಗಿದ್ದುದರಿಂದ ರಾಕ್ಷಸನಿಗೂ ಯೆಕ್ಷಿಣಿಗೂ ಪರಸ್ಪರವಾದ ವಿವಾದವು ಬಹಳಕಾಲದವರಿಗೂ ಜರಗಿತು. ನಂತರ ರಾಕ್ಷಸನು ಯೆಕ್ಷಿಣಿಯೆನ್ನುಕುರಿತು ನೋಡಿದೆಯೋ, ನಾನು ಮೊದಲೆ ಹೇಳಿದಂತೆ, ನನ್ನ ರಾಜಕುಮಾರಿಯ ಸೌಂದರ್ಯವೂ, ರಾಜಪುತ್ರನ ಅಂದಕ್ಕಿಂತಲೂ ಅಧಿಕವಾಗಿರುವುದಲ್ಲಾ ! ಎಂದು ಗಟ್ಟಿಯಾಗಿ ಕೂಗಿಕೊಂಡನು. ನಂತರ ಯೆಕ್ಷಿಣಿಯು ರಾಕ್ಷಸನನ್ನುಕುರಿತು, ಆಹಾ ! ನೀನು ಹೇಳುವ ಭೇದವು ನನಗೆ ತೋರಿಬರುವುದಿಲ್ಲವಲ್ಲಾ ! ಇಷ್ಟುಹೊತ್ತಿನವರಿಗೆ ನೋಡಿದರೂ, ರಾಜಕುಮಾರನು ವಿಶೇಷ ಸೌಂದರ್ಯವುಳ್ಳವನೆಂದು ನೀನು ಹೇಳಲಾರದೆಹೋದರೆ, ನಿನ್ನನ್ನು ಕುರುಡನೆನ್ನಬೇಕಾಗುವುದು. ಆದರೆ ನಾನು ಈ ಲಲನಾಮಣಿಯನ್ನು ಸೌಂದರ್ಯಹೀನಳೆಂದು ಹೇಳಲಾರೆನು. ನಿಷ್ಪಕ್ಷಪಾತವಾಗಿ ನೋಡಿದರೆ, ಈ ಉಭಯತ್ರರಲ್ಲಿ ಯಾವುದೊಂದು ಭೇದವೂ ಕಾಣುವುದಿಲ್ಲವೆನಲು ರಾಕ್ಷಸನು ನಾನು ಮೊದಲಿನಿಂದ ಹಲವುಸಾರಿ ಚೆನ್ನಾಗಿ ಪರೀಕ್ಷಿಸಿದರೂ, ನನ್ನ ಅಭಿಪ್ರಾಯವನ್ನು ಬದಲಾಯಿಸುವುದಕ್ಕೆ ಮಾರ್ಗವಿಲ್ಲ.

ಅದರೆ ಕಾಲಭೇದದಿಂದ ದೃಷ್ಟಿಭೇದ ಉಂಟಾಗಲಾರದೆಂಬುದು, ನಿನಗೆ ತಿಳಿದಸಂಗತಿಯಾಗಿರುವುದಲ್ಲಾ ! ಈಗ ಮತ್ತೇನು ಹೇಳುವೆ ಎನಲು ಯೆಕ್ಷಿಣಿಯು ಇವರಿಬ್ಬರ ಸೌಂದರ್ಯವನ್ನು ಕುರಿತು ಯೋಚಿಸುವ ವಿಷಯದಲ್ಲಿ ನಮ್ಮಗಳಿಗಿಂತಲೂ, ಅನ್ಯನಾದ ಮತ್ತೊಬ್ಬನು ಇರಬೇಕು. ಇಲ್ಲವಾದರೆ ಹರಿಯೆತಕ್ಕುದಲ್ಲ. ಆದುದರಿಂದ ಮಧ್ಯಸ್ಥನಾದವನು ಯಾರನ್ನು ಒಪ್ಪುವನೋ, ಅವರೇ ಗೆದ್ದರೆಂದು ತಿಳಿಯಬೇಕೆಂದಳು. ಹೀಗೆ ಬಹುದಾಕ್ಷಿಣ್ಯದಿಂದ ಯೆಕ್ಷಿಣಿಯು ಹೇಳಿದಮಾತಿಗೆ, ರಾಕ್ಷಸನು ಒಪ್ಪಿಕೊಳ್ಳಲು, ಆಕೆ ಭೂವಿಯೆನ್ನು ಕಾಲಿನಿಂದ ಒದೆದಕೂಡಲೆ, ವಿಕಾರಮುಖವೂ, ಗೂನುಬೆನ್ನೂ, ಕೂರುಗುರುಗಳಿಂದ ಕೂಡಿದ ಕಾಲೂ, ಕೂರವಾದದೃಷ್ಟಿಯೂ, ತಲೇಮೇಲೆ ಉರುಕೊಂಬೂಕ್ಕಳುಂಟಾಗಿರುವ, ಬಂದಾನೊಂದು ಭೂತವು

ಭೂಮಿಯೆನ್ನು ಒಡೆದುಕೊಂಡು ಹೊರಗೆಬಂದು, ಕೂಡಲೇ ಮಹಾ ಆರ್ಭಟವನ್ನು ಮಾಡುತ್ತ, ಮೈಮುವ್ವಾನಳ ಕಾಲಿನಮೇಲೆ ಬಿದ್ದು, ಕಾಲೂರಿ ಕೊಳಿತುಕೊಂಡು, ಅಮ್ಮಾ ! ನನ್ನನ್ನು ಇಲ್ಲಿಗೆ ಬರಮಾಡಿದ ಕಾರಣವೇನೆಂದು ಬೇಡಿಕೊಂಡಿತು. ಆಗ ಮೈಮುವ್ವಾನಳು ಆ ಭೂತವನ್ನು ಕುರಿತು, ಇಗೋ ಈ ನೀಚರಾಕ್ಷಸನಿಗೂ ನನಗೂ ಉಂಟಾದ ವಿವಾದವನ್ನು ಪರ್ತಿ ಮಾಡುವುದಕ್ಕಾಗಿ, ನಿನ್ನನ್ನು ಬರಮಾಡಿದೆನು. ಇಗೋ ಇಲ್ಲಿ ನೋಡು. ಆ ಹಾಸಿಗೆಯಮೇಲೆ ಮಲಗಿರುವ ವಧೂವರರಲ್ಲಿ ಯಾರು ಸುಂದರರಾಗಿರುವರೋ ಹೇಳು. ವಧುವೋ ಅಥವಾ ವರನೋ ಈ ವಿಷಯದಲ್ಲಿ ನಿನ್ನ ನಿಷ್ಪಕ್ಷಪಾತವಾದ ಕೋರಿಕೆಯೆನ್ನು ಹೊರಪಡಿಸೆಂದು ನುಡಿದಳು. ನಂತರ ಕಾಸುಗಾಶ್ಚನು ಆಕೆಯಮಾತನ್ನು ಕೇಳಿ, ಆಶ್ಚರ್ಯಯುಕ್ತನಾಗಿ ಆ ವಧೂವರರನ್ನು ಬಹಳಹೊತ್ತಿನವರಿಗೂ ಚೆನ್ನಾಗಿ ದೃಷ್ಟಿಸಿ, ಹೆಚ್ಚು ಕಡಿಮೆಯೆನ್ನು ಹೇಳಲು ಸಾಧ್ಯವಾಗದೆ, ತನ್ನಷ್ಟಕ್ಕೆ ತಾನೆ ಸ್ವಲ್ಪ ಹೊತ್ತು ಯೋಚಿಸುತ್ತಿದ್ದನು, ಅಮ್ಮಾ ! ನಾನೆಷ್ಟುವಿಧವಾಗಿ ತಿರುತಿರುಗಿ ನೋಡಿದರೂ ಇವನಲ್ಲಿ ಭೇದವು ನನಗೆ ಕಾಣಬರುವುದಿಲ್ಲ. ಒಬ್ಬರಿಗಿಂತಲೂ ಮತ್ತೊಬ್ಬರು ಅಧಿಕವಾದ ಸೌಂದರ್ಯವನ್ನು ಹೊಂದಿರುವರು. ಇದು ನನ್ನ ಬುದ್ಧಿಯೆನ್ನು ಹಾಳುಮಾಡಿಬಿಟ್ಟಿತು.

ಆದರೆ ಇವರಲ್ಲಿ ಸೌಂದರ್ಯಶಾಲಿಗಳಿಂಥವರೇ ಎಂದು ಗೊತ್ತುಮಾಡುವುದಕ್ಕೊಂದು ಉಪಾಯವುಂಟು. ಏನಂದರೆ :-ಯಾರನ್ನಾದರೂ ಮೊದಲು ನಿದ್ರೆತಿಳಿಯುವುದಕ್ಕೆ ಅವಕಾಶಕೊಟ್ಟು, ಬಳಿಕ ಮತ್ತೊಬ್ಬರನ್ನು ಎಚ್ಚರಗೊಳಿಸಿದರೆ, ಯಾರು ಹೆಚ್ಚು ಮೋಹವನ್ನುಹೊಂದುವರೋ ಅವರೇ ಸೌಂದರ್ಯದಲ್ಲಿ ಕಡಮೆಯಾದವರೆಂದು, ತೋರುವುದೆಂದು ನುಡಿದನು. ಆವಾತಿಗೆ ರಾಕ್ಷಸನೂ, ಯಕ್ಷಿಣಿಯೂ, ಸಮ್ಮತಿಸಿದುದರಿಂದ ಕಾಸುಗಾಶ್ಚನು ಒಂದು ಸೊಳ್ಳೆಯ ರೂಪವನ್ನು ಕೊಂಡಿ ರಾಜಪುತ್ರನ ಕೆನ್ನೆಗೆಯಮೇಲೆ ಕಚ್ಚಿ ಆತನನ್ನು ಎಚ್ಚರಗೊಳಿಸಿ, ನಂತರ ತನ್ನ ಸ್ವಸ್ವರೂಪವನ್ನು ಹೊಂದಿ, ರಾಜಕುಮಾರನು ಮುಂದೇನು ಮಾಡುವನೋ ನೋಡಬೇಕೆಂಬ ಕುತೂಹಲದಿಂದ ಕಾಯುತಿರುತ್ತಿದ್ದನು. ರಾಜಪುತ್ರನು ಮರಳಿ ಎಚ್ಚತ್ತಕಾಲದಲ್ಲಿ, ಆತನಕ್ಕೆ ರಾಜಪುತ್ರಿಗೆಸೋಕ್ಕಲು

ಮಹದಾಶ್ಚರ್ಯಯುಕ್ತನಾಗಿ, ಕಣ್ಣುತೆರೆದು ನೋಡಿ, ಮಹಾ ಸೌಂದರ್ಯವತಿಯಾದ ಯುವತೀಮಣಿಯು ತನ್ನಪಕ್ಕದಲ್ಲಿ ಮಲಗಿರುವುದನ್ನು ಕಂಡು, ಸಂತೋಷಚಿತ್ತನಾಗಿ ಆಕೆಗು ಲಾವಣ್ಯಾತಿಶಯಕ್ಕೆ ಬೆರಗಾಗಿ, ಆ ಕನ್ಯಾಮಣಿಯ ಅಭಿನವಯೌವನವನ್ನು ಕುರಿತು ಚಿಂತಿಸುತ್ತಾ ಕನ್ನಡಿಯಂತಿರುವ ಕದಪುಗಳನ್ನೂ, ಪೂರ್ಣಚಂದ್ರನಂತಿರುವ ಮುಖವನ್ನೂ, ಮನಃಪೂರ್ವಕವಾಗಿ ಮುತ್ತಿಟ್ಟುಕೊಂಡು, ಇದುವರೆಗೂ ಜಿತೇಂದ್ರಿಯ ಭಾವವನ್ನೇ ಅವಲಂಬಿಸಿ, ಸ್ಥೈರ್ಯಚಿತ್ತನಾಗಿದ್ದರೂ ತನ್ನ ಇಂದ್ರಿಯಂಗಳ ಜಯವನ್ನು ಮದನರಾಜನೆಂಬ ಧೊರೆಗೆ ಕಂದಾಯವನಾಗಿ ಒಪ್ಪಿಸಿ, ತಾನು ಮಹಾ ಮೋಹಸಮುದ್ರದಲ್ಲಿ ಮುಳುಗಿಹೋಗಿದ್ದನು. ಆದರೆ ರಾಜಪುತ್ರಿಯು ರಾಕ್ಷಸನಾಯಿದಿಂದ, ತಾನು ಗಾಢನಾದ ನಿದ್ರಾಜ್ವರದಲ್ಲಿದ್ದರೂ ಕೂಡಲೇ ಎಚ್ಚತ್ತಳು.

ಆಗ ರಾಜಪುತ್ರನು ಒತ್ತಾಸಿ ಬರುತ್ತಿರುವ ಮೋಹವನ್ನು ಹಿಮೆಗೊಜಲಾರದೆ, ಆಹಾ ! ಇಷ್ಟೆಂತಹ ಸೌಂದರ್ಯ, ಏನುಲಾವಣ್ಯ, ದೇವರೇ ! ಹಾ ! ನನ್ನ ಮುದ್ದಿನ ಪ್ರಾಣವೇ ಎಂದು ಗಾಢಾಲಿಂಗನದಿಂದ ಅಪ್ಪಿಕೊಂಡು ತೃಪ್ತಿಯಾಗುವಂತೆ ಮುದ್ದಿಸಿದನು. ಬಳಿಕ ರಾಜಪುತ್ರನು, ಹಾ ! ಸುಂದರೀಮಣೀ ! ಆಹಾ ! ನನ್ನ ಪ್ರಾಣಸಂಜೀವಿನೀ ! ಓ ! ಪುನಿತಾಗ್ರಣಿಯಾದ ಯುವತೀರತ್ನವೇ ! ನೀನು ನನ್ನನ್ನು ಮೋಹಿಸಿ ಇಲ್ಲಿಗೆ ಬಂದಿರುವೆಯೋ ? ಯಾರಾದರೂಸರಿಯೇ ನಿನ್ನನ್ನು ನೋಡಿ ಮೋಹಿಸದಿರುವ ಪುರುಷನು ಲೋಕದಲ್ಲುಂಟೇ ? ಆಹಾ ! ಇಂಥ ಸೌಂದರ್ಯವತಿಯಾದ ನಿನ್ನನ್ನು ಬ್ರಹ್ಮನು ಹೇಗೆ ನಿರ್ಮಿಸಿದನೋ ಕಾಣೆನಲ್ಲಾ ಎಂದು ನುಡಿದು, ನನ್ನತಂದೆಯು ನನ್ನನ್ನು ಮದುವೆಮಾಡಿಕೊಳ್ಳಬೇಕೆಂದು ಬಲಾತ್ಕಾರಮಾಡಿದ ಸುಂದರೀಮಣಿಯೇ ಇವಳಾಗಿರಬಹುದು. ನಾನು ಅನ್ಯಾಯವಾಗಿ ಆತನಮಾತುಗಳನ್ನು ತಿರಸ್ಕರಿಸಿದೆನು. ಆದರೆ ಮೊದಲೇ ನನಗೆ ಈ ಕನ್ಯಾಮಣಿಯನ್ನು ತೋರಿಸದಿರೋದುದು, ನಮ್ಮ ತಂದೆಯಲ್ಲಿ ಅಪರಾಧನೇ ಸರಿ ! ಇ ತಹ ಕನ್ಯಾರತ್ನವನ್ನು ತೋರಿಸಿ, ಮದುವೆಮಾಡಿಕೊಳ್ಳಿಂದು ಹೇಳಿದ್ದರೆ, ನಾನೆಂದಿಗೂ ತಿರಸ್ಕರಿಸುತ್ತಿರಲಿಲ್ಲ ವೆಂದು ಚಿಂತಿಸಿದವನಾದನು. ಬಳಿಕ ಮಹತ್ತರವಾದ ಮೋಹಬಲದಿಂದ

ಆಕೆಯನ್ನು ಅಭಿವರ್ಣಿಸುತ್ತ, ಸ್ವಲ್ಪಹೊತ್ತು ಸುಮ್ಮನಿದ್ದು, ಆಹಾ! ನನ್ನ ತಂದೆಯು ನನಗೆ ಮದುವೆಮಾಡಿಕೊಳ್ಳುವ ಅಭಿಲಾಷೆ ಇರುವುದೋ ಇಲ್ಲವೋ ನೋಡಬೇಕೆಂದು ಪರೀಕ್ಷಾರ್ಥವಾಗಿ, ಈ ಕನ್ಯಾಮಣಿಯನ್ನು ಕರೆದುತಂದು ಈ ಸ್ಥಲದಲ್ಲಿ ಬಿಟ್ಟು, ತಾನು ಮರೆಯಾಗಿ, ಈ ತೆರೆಯ ಪಕ್ಕದಲ್ಲಿ ನಾನು ಮಾಡುತ್ತಿರುವ ವ್ಯಾಪಾರಗಳನ್ನು ನೋಡುವುದಕ್ಕಾಗಿ ಮರೆಯಾಗಿ ನಿಂತಿರಬಹುದು. ನಾನು ಈಗಲೂ ಈ ಕನ್ಯಾರತ್ನವನ್ನೊಪ್ಪದಿದ್ದರೆ, ನನ್ನ ಅಪರಾಧವು ದ್ವಿಗುಣವಾಗುವುದೆಂಬ ಭಯದಿಂದ ಆಕೆಯನ್ನು ತಾನೊಪ್ಪಿ ಮದುವೆಯಾಗುವೆನೆಂಬ ಭರವಸವನ್ನು ತೋರ್ಪಡಿಸುವ ಗುರುತಿಗಾಗಿ, ತನ್ನ ಕೈಬೆರಳಿನ ಉಂಗುರವನ್ನು ಆಕೆಯ ಕೈಬೆರಳಿಗಿಟ್ಟು, ಅವಳುಂಗುರವನ್ನು ತೆಗೆದುಕೊಂಡು ತಾನಿಟ್ಟುಕೊಂಡನು. ನಂತರ ರಾಕ್ಷಸನ ಮಾಯೆಯಿಂದ ಮೊದಲಿಗಿಂತಲೂ ಅತಿಶಯವಾದ ನಿದ್ರೆಯನ್ನುಹೊಂದಿ, ಮೈಮರೆದು ಮಲಗಿಕೊಂಡನು.

ಹೀಗಿರುವಲ್ಲಿ ರಾಕ್ಷಸನು ತಿರುಗಿ ಸೊಳ್ಳೆಯ ರೂಪವನ್ನುಹೊಂದಿ, ಚೀನಾ ರಾಜಪುತ್ರಿಯ ತುಟಿಯೆನ್ನುಕಚ್ಚಲು ಆಕೆ ನಿದ್ರೆಯಿಂದೆಚ್ಚತ್ತು, ತನ್ನ ಪಕ್ಕದಲೊಬ್ಬ ಸುಂದರಪುರುಷನು ಮಲಗಿರುವುದನ್ನು ಕಂಡು, ಆತನ ಸೌಂದರ್ಯಕ್ಕೆ ಮೆಚ್ಚಿಕೊಂಡಪಳಾಗಿ, ಬಹಳವಾಗಿ ಹೊಗಳಿ, ಅತ್ಯಂತವಾದ ಮೋಹದಿಂದ ಪರವಶಳಾಗಿ, ಆನಂದಸಮುದ್ರದಲ್ಲಿ ಮುಳುಗಿ ತೇಲಾಪಲಾರಂಭಿಸಿದಳು. ಬಳಿಕ ರಾಜಪುತ್ರಿಯು ಆಹಾ! ನಮ್ಮತಂದೆಯು ನನಗೆ ಮದುವೆಮಾಡಬೇಕೆಂದಿದ್ದ ಪುರುಷಶ್ರೇಷ್ಠನು, ಈತನೇ ಆಗಿರಬಹುದು. ನಾನು ಮೊದಲೇ ಇವನನ್ನು ನೋಡದೆಹೋದೆನಲ್ಲಾ! ನನ್ನ ದುರದೃಷ್ಟವನ್ನು ಏನೆಂದುಹೇಳಲಿ. ಇಂತಹ ಪ್ರಾಣಕಾಂತನು ನನಗೆ ದೊರೆತುದಕ್ಕಾಗಿ, ನಾನು ಭಗವಂತನನ್ನು ಬಹಳವಾಗಿ ವಂದಿಸುವೆನು. ಹಾ! ಜೀವತ್ರೇಶ್ವರನೇ! ನೀನು ನನ್ನನ್ನು ಪರಿಸಿ, ಮದುವೆಯಾದ ಮೊದಲಿನದಿನವೇ ಹೀಗೆ ಮೈಮರೆದು ಮಲಗಿ ಸಿದ್ಧಿಸುತ್ತಿರುವೆಯೆಲ್ಲಾ! ಇದಾ ಗಬ್ಬೂರದು ಏಳು ಏಳು. ಖಂಡಿತವಾಗಿಯೂ ನೀನು ಏಳದಿದ್ದರೆ, ನಾನು ಬಿಡೆನೆಂದು ಮೋಹದಿಂದ ನುಡಿದಳು. ಆದರೂ ಅಷ್ಟಕ್ಕೆ ಸುಮ್ಮನಿರದೆ ಆತನ ಕೈ ಹಿಡಿದು ಒಲವಾಗಿ ಎಳೆಯುತ್ತಾ, ಏಳು ಏಳು, ಪ್ರಾಣನಾಥಾ

ಏಳೆಂದು ನುಡಿದು, ಬಲವಾಗಿ ಹೊರಳಿಸಿದರೂ, ಯೆಕ್ಷಿಣಿಯ ಮಾಯೆಯಿಂದ ರಾಜಪುತ್ರನು ಗಾಢತಾರೂಢವಾದ ನಿದ್ರೆಯನ್ನು ಆಲಿಂಗಿಸಿಕೊಂಡು, ಮೈ ಮರೆದಿರುವುದನ್ನು ನೋಡಿ, ಆಹಾ! ನಾವಿಬ್ಬರೂ ವಿನೋದವಾಗಿರುವುದನ್ನುನೋಡಿ, ಸಹಿಸಲಾರದ ಪಾಪಿಗಳು ನಿನಗೇನನ್ನುಮಾಡಿರವರೋ ತಿಳಿಯದು. ಅಯ್ಯೋ! ಇಂಥಾ ವಿಚಿತ್ರಕರವಾದ ವಿರಹಾಗ್ನಿಯನ್ನು ತಾಳಲಾರೆನಲ್ಲಾ! ಎಂದು ಬಹಳವಾಗಿ ವ್ಯಥೆಯಿಂದ ನರಳುತ್ತಾ, ತನ್ನ ಕೈ ಬೆರಳನ್ನು ನೋಡಿಕೊಂಡು. ಬಳಿಕ ರಾಜಪುತ್ರನ ಕೈ ಬೆರಳನ್ನುನೋಡಿ ತನ್ನ ಉಂಗುರವು ಆತನ ಕೈಬೆರಳಲ್ಲೂ, ಆತನುಂಗುರವು ತನ್ನ ಹಸ್ತದಲ್ಲೂ, ಇರುವುದನ್ನುಕಂಡು, ವಿಸ್ಮಯಯುಕ್ತಳಾಗಿ ತಮ್ಮಿಬ್ಬರಿಗೂ ಮದುವೆಯಾದುದಕ್ಕಾಗಿ, ಇದೇ ಚಿಹ್ನೆಯು ಕಂಡುಬಂದಂತಾಯಿತೆಂದು ಯೋಚಿಸಿಕೊಂಡಳು.

ಸ್ವಲ್ಪಹೊತ್ತು ಕಳೆದಬಳಿಕ ರಾಜಪುತ್ರನನ್ನು ಎಚ್ಚರಗೊಳಿಸುವುದಕ್ಕಾಗಿ ಪ್ರಯತ್ನಮಾಡಿ, ಕಡೆಗೆ ರಾಜಪುತ್ರನು ಎಚ್ಚರಿಕೆಯಾದಿರುವುದನ್ನುಕಂಡು, ಅಯ್ಯೋ! ರಾಜಪುತ್ರನೇ! ನೀನು ಹೇಗಾದರೂ ಎದ್ದರೆ ಸಾಕೆಂದು, ನಾನು ಬಹಳವಾಗಿ ಪ್ರಯತ್ನಮಾಡಿ ಕಡೆಗೆ ನಿದ್ರಾಭಂಗವಾಗುವುದೆಂಬ ಭಯದಿಂದ ಸುಮ್ಮನಾದೆನು. ಆದರೂ ನಿನ್ನನ್ನು ಅಗಲಿಹೋಗುವುದಕ್ಕೆ ನನಗೆ ತುಂಬಾ ಅಸಾಧ್ಯವಾಗಿರುವುದರಿಂದ ನಾನು ನಿನ್ನಪಕ್ಕದಲ್ಲಿ ನಿದ್ರಿಸುವೆನೆಂದು ಹೇಳಿ, ಮಲಗಿಕೊಂಡು ನಿದ್ರೆಮಾಡಿದಳು. ರಾಜಪುತ್ರಿಗೆ ಇನ್ನೂ ಎಚ್ಚರವಾಗದಾಮುಮುದರಿಂದ ತಾನು ಮಾತನಾಡಬಹುದೆಂದು ತಿಳಿದು, ಮಾಯಿಮಾನಳು ರಾಕ್ಷಸನನ್ನು ಕೂರಿತು, ಎಲಾ! ನೀಚರಕ್ಕಸನೇ! ನೋಡಿದೆಯೋ! ಇಮುವರೆಗೂ ನಡೆದ ವಿಚಿತ್ರಸಂದರ್ಶನದಲ್ಲಿ ಯಾರು ಅಧಿಕವಾದ ಮೋಹನವನ್ನು ಹೊಂದಿದರೆಂಬುದನ್ನು ನೀನೇ ತಿಳಿದಿರುವೆಯೆಲ್ಲಾ! ಆವರೂ ನಿಮ್ಮ ರಾಜಪುತ್ರಿಯು ಅತಿಶಯವಾದ ಲಾವಣ್ಯವಂತನಾದ ರಾಜಕುಮಾರನನ್ನು ಮೋಹಿಸಿ, ಚಿಂತಾಕ್ರಾಂತಳಾಗಿ ನಿದ್ರಿಸಿದಳಲ್ಲಾ! ಆದುದರಿಂದ ಇನ್ನುಮೇಲೆ ನಾನುಹೇಳುವ ಮಾತುಗಳನ್ನು ನಂಬಿಕೊಂಡಿರು ಎಂದು ಹೇಳಿ, ಭೂತರಾಜನಾದ ಕಾಸುಗಾಶ್ಚನ ಕಡೆಗೆ ತಿರುಗಿ ಅಯ್ಯಾ! ನೀನು ನನಗೋಸ್ಕರವಾಗಿ ಪ್ರಯಾಸಪಡೆಂದಿದುದಕ್ಕಾಗಿ, ನಾನು ವಂದಿಸುವೆನು. ಈ ರಾಕ್ಷಸನು ರಾಜಪುತ್ರಿಯನ್ನು

ಅವಳ ಸ್ಥಾನಕ್ಕೆ ಸೇರಿದಲುದ್ಯುಕ್ತನಾಗುವುದರಿಂದ, ನೀನು ಆತನಸಂಗಡಲೇ ಹೋಗು ಎಂದು ಹೇಳಲು, ಅವರು ತಂತಮ್ಮ ಕಾರ್ಯವನ್ನು ನೆರವೇರಿಸಲುದ್ಯುಕ್ತರಾದರು. ಮೆಯಿಮೂನಳು ತನ್ನ ವಾಸಸ್ಥಾನವಾದ ಭಾವಿಯೆನ್ನು ಸೇರಿದಳು. ಇ ತೆುದು ಹೇಳಿ, ಷಹರಜಾದಿಯು ಬೆಳಗಾದ ಕೂಡಲೆ ಕಥೆಯೆನ್ನುನಿಲ್ಲಿಸಿ, ಬಳಿಕ ಮರುದಿನ ಬೆಳಗಿನ ಜಾವದಲ್ಲಿ ಮರಳಿ ಹೇಳಲಾರಂಭಿಸಿದಳು.

೨೧ನೇ ನೆಯ ರಾತ್ರಿ ಕಥೆ.

ಬಳಿಕ ಬೆಳಗಾದಕೂಡಲೆ, ರಾಜಕುವಾರನು ಎಚ್ಚ್ತು ತನ್ನ ಪಕ್ಕದಲ್ಲಿ ರಾತ್ರಿ ಮಲಗಿದ್ದ ರಾಜಪುತ್ರಿಯು ಇರುವಳೇನೋ ಎಂಬ ಕುತೂಹಲದಿಂದ, ಬರ್ರನೆದ್ದು ತಿರುಗಿನೋಡಲಾಗಿ, ಯಾರೂ ಇರಲಿಲ್ಲ. ನಂತರ ಆತನು ಇದೆಲ್ಲವು ನನ್ನತಂದೆಯು ಮಾಡಿದ ಕಪಟೋಪಾಯವೆಂದು ತಿಳಿದು, ತಾನು ಕೈಕಾಲುಗಳನ್ನು ತೊಳೆದುಕೊಂಡು, ಬಟ್ಟೆಯೆನ್ನು ಹಾಕತಕ್ಕ ಚಾರಕರನ್ನು ಕೂಗಲು, ಅವರು ಬಂದು ವಸ್ತ್ರವನ್ನುಡಿಸಿದರು. ನಂತರ ಸ್ವಲ್ಪಹೊತ್ತು ಹೋದಮೇಲೆ, ಒಂದಾನೊಂದು ಪುಸ್ತಕವನ್ನು ಓದುತ್ತಿದ್ದ, ಬಳಿಕ ಚಾರಕರನ್ನುಕುರಿತು, ನಿಜವಾಗಿ ಹೇಳಿ, ಭಯಪಡಬೇಡಿ. ನನ್ನೊಡನೆ ನಿಜವನ್ನು ಹೇಳುವುದರಿಂದ ನಿಮಗೆ ಸುಖವುಂಟು. ನಿನ್ನೆರಾತ್ರಿಯೆಲ್ಲಿ ನನ್ನ ಪಕ್ಕದಲ್ಲಿ ಮಲಗಿ ನಿದ್ರಿಸುತ್ತಿದ್ದ ತರುಣೀರತ್ನವು ಎಲ್ಲಿಂದ ಬಂದಿದ್ದಳು. ಹೇಗೆ ನಾನಿರುವ ಸ್ಥಾನವನ್ನು ಸೇರಿದಳೆಂದು ಕೇಳಿದನು.

ಆಗ ಚಾರಕನು ಹೆದರಿ, ಜಯದಿಂದ ನಡುಗುತ್ತಾ, ಸ್ವಾಮಿ! ನಾನು ಯಾವ ಸ್ತ್ರೀಯನ್ನೂ ಕಾಣಲಿಲ್ಲವಲ್ಲ! ಇದೇನು ಹೊಸ ವರ್ತಮಾನವನ್ನು ಹೇಳುವಿರಿ. ನಾನಿರುವ ಈ ನಿರ್ಬಂಧವಾದ ಸ್ಥಲಕ್ಕೆ ಸ್ತ್ರೀ ಪ್ರವೇಶವು ಯಾವತೆರದಿಂದುಂಟಾಗುವುದೆನಲು, ರಾಜಪುತ್ರನು ಎಲಾ! ನೀನು ಬಹು ವಂಚಕನು. ಸುಳ್ಳಾಡಿ ನನ್ನನ್ನು ವೋಸಮಾಡಬೇಕೆಂದಿರುವೆಯಾ! ಆಹಾ! ನಿನ್ನ ಯೋಗ್ಯತೆಯನ್ನು ನಾನು ಚೆನ್ನಾಗಿಬಲ್ಲೆನು, ಈಗಲಾದರೂ ನಿಜವಾದ ವಾಕ್ಯಗಳನ್ನು ಮರೆಮಾಜದೆಹೇಳೆಂದು ಗದರಿಸಲು

ಯೊವ್ವುದನ್ನು ಕಾಣದ ಚಾರಕನು ತಾನು ಏನೂ ಹೇಳಲಾರದೆ, ಸುಮ್ಮ ನಿರಲು ರಾಜಪುತ್ರನು ಬಹು ಕೋಪದಿಂದ ಆತನನ್ನು ನೆಲಕ್ಕೆ ಬೀಳು ವಂತೆ ಹೊಡೆದು, ಬಂದಾನೊಂದು ಹಗ್ಗಕ್ಕೆ ಕಟ್ಟಿ, ಭಾವಿಯಲ್ಲಿ ಬಿಟ್ಟು ಹಲವುಸಾರಿ ಮುಳುಗಿಸುತ್ತ, ಹೇಳು! ಹೇಳು!! ನಿಜವನ್ನುಹೇಳು!! ಈಗಲಾದರೂ ಹೇಳು. ಇಲ್ಲದಿದ್ದರೆ ನಾನೆಂದಿಗೂ ಬಿಡನೆಂದು, ಆತನನ್ನು ಬಹಳನಾಗಿ ನೊಯಿಸುತ್ತ, ಮತ್ತೆ ಮತ್ತೆ ಭಾವಿಯೆಲ್ಲಿ ಬಿಟ್ಟು, ನೀರಿ ನಲ್ಲಿ ಮುಳುಗಿಸುತ್ತಾ ಇದ್ದನು. ಆ ಚಾರಕನು ತಾನು ಸಾಯುವ ಕಾಲವು ಒದಗಿಬಂದುದನ್ನುಕಂಡು, ನಾನು ಇನ್ನು ಸುಳ್ಳು ಹೇಳದೆಹೋದರೆ ನನ್ನ ಪ್ರಾಣಂಗಳುಳಿಯುವುದಿಲ್ಲವೆಂದು ತಿಳಿದು, ಅಯ್ಯಾ! ನೀನು ದಯ ಮಾಡಿ ನನ್ನನ್ನು ಬಿಟ್ಟರೆ ನಾನು ನಿಜವನ್ನು ಹೇಳುವೆನು. ಆದರೆ ತನಗೆ ಅವಕಾಶಮಾತ್ರವೇ ಬೇಕಾಗಿರುವುದಾದುದರಿಂದ ಅಪ್ಪಣೆಮಾಡಿದರೆ, ಚೀರೆ ಬಟ್ಟೆಗಳನ್ನು ಹಾಕಿಕೊಂಡು, ವಿಜ್ಞಾಪಿಸುವೆನೆಂದು ಹೇಳಲು, ರಾಜಪುತ್ರನು ಹಾಗೆಯೇ ಆಗಲೆಂದು ಒಪ್ಪಿಕೊಂಡುದರಿಂದ, ಚಾರಕನು ತನ್ನ ಕೊಡ ತಡಿಗೆಯೋಗಿ, ಚೀರೆ ಬಟ್ಟೆಗಳನ್ನು ಹಾಕಿಕೊಂಡು, ರಾಜಪುತ್ರನಿಗೆ ಹೆದರಿ ಓಡಿಹೋಗಿ, ಅರಮನೆಯೆನ್ನು ಸೇರಿದನು.

ಆಗ ರಾಜನು ತನ್ನಮಗನು ತನ್ನನ್ನು ತಿರಸ್ಕರಿಸಿ, ಅವಿನೀತ ನಾಗಿರುವುದರಿಂದ, ತನಗುಂಟಾಗಿರುವ ದುಃಖವನ್ನು ಕುರಿತು, ಪ್ರಧಾನ ಮಂತ್ರಿಯೊಡನೆ ಹೇಳುತ್ತಿದ್ದನು. ಆಗ ಮಂತ್ರಿಯು ಅಯ್ಯಾ! ಆತ ನನ್ನು ಇನ್ನು ಕೆಲವುದಿನಗಳವರೆಗೆ, ಹಾಗೆಯೇ ಇಟ್ಟಿರುವುದರಿಂದ, ಅಹಂ ಕಾರವಣಗಿ ಕಲವುಕಾಲದಲ್ಲೀ ಪೂರ್ವಕ್ಕೆ ಬರುವನು. ಈ ಅರ್ಥದಲ್ಲಿ ಸಂದೇಹವೇ ಇಲ್ಲವಾದುದರಿಂದ, ನೀನು ಚಿಂತಿಸಬೇಡವೆಂದು ನುಡಿದನು. ಆ ಕಾಲಕ್ಕೆ ಸರಿಯಾಗಿ ಚಾರಕನು ಓಡಿಬಂದು ರಾಜನಿಗೆ ನಮಸ್ಕರಿಸಿ, ಎದ್ದುನಿಂತು, ಅಯ್ಯಾ! ಬಹು ಕ್ರೂರವಾದ ಸಮಾಚಾರವನ್ನು ತಂದಿ ರುವ, ನಿನ್ನಮಗನಕಡೆಯ ದೂತನಾದ ನನ್ನನ್ನು ನೀನು ಮನ್ನಿಸಬೇಕು. ಅದೇನೆನ್ನುವಿಯೋ! ನಿನ್ನಮಗನಿಗೆ ಪಿಶಾಚವು ಹಿಡಿದಿರುವಂತೆ ಕಾಣುತ್ತದೆ. ಹೇಗೆಂದರೆ:—ನಿನ್ನೆರಾತ್ರಿ ತನ್ನಒಳಿಯುಲ್ಲಿ ಯೊರೋ ಒಬ್ಬ ಸ್ತ್ರೀಯು ಸಲಗಿದ್ದಳೆಂದು ಹೇಳಿ, ಅವಳನ್ನು ಕರೆತಂದವರು ಯಾರು? ಅ

ಅವಳೆಲ್ಲಿಹೋದಳು ತೋರಿಸೆಂದು, ನನ್ನನ್ನು ಬಹಳವಾಗಿ ಪೀಡಿಸುತ್ತಾ, ಕೊರಡೆಯಿಂದ ಹೊಡೆದು ಭೂಮಿಯೆಲ್ಲಿ ನುಳುಗಿಸಿ, ನಾನಾವಿಧವಾಗಿ ತೊಂದರೆಪಡಿಸಿದನೆಂದು ನುಡಿದು, ನಂತರ ಆತನ ವಾರ್ತೆಯೆನ್ನು ಸಾಂಗವಾಗಿ ನಿರೂಪಿಸಿದನು. ಆ ಮಾತುಗಳನ್ನುಕೇಳಿ ಬಹು ಆಶ್ಚರ್ಯಕರವಾದ ಮನೋವ್ಯಾಪಾರವುಳ್ಳವನಾದ ರಾಜನು ಮಂತ್ರಿಯನ್ನುಕುರಿತು, ನಾನು ಇಂತಹ ವರ್ತಮಾನವನ್ನೆಂದಿಗೂ ಕೇಳುವೆನೆಂದು ತಿಳಿದಿರಲಿಲ್ಲ. ಈಗ ಈ ವರ್ತಮಾನವನ್ನು ಕೇಳಿ ಬಹಳವಾಗಿ ವ್ಯಸನ ಉಂಟಾಗುತ್ತಿರುವುದಾದುದರಿಂದ ನೀನು ಈಗಲೇ ಅಲ್ಲಿಗೆ ಹೋಗಿ ನಡೆದ ವಿಷಯಮಾನಗಳನ್ನು ತಿಳಿದು ಕೊಂಡುಬಾವೆಂದು ನುಡಿಯಲು, ಅಲ್ಲಿಂದ ಹೊರಟು ರಾಜಪುತ್ರನು ವಾಸ ಮಾಡುತ್ತಿರುವ ಸ್ಥಲಕ್ಕೆ ಬಂದು ಸ್ವಸ್ಥನಾಗಿ ಮಂಚದಮೇಲೆ ಕುಳಿತು, ಪುಸ್ತಕವನ್ನು ಓದುತ್ತಿರುವ ರಾಜಪುತ್ರನನ್ನು ನೋಡಿದನು.

ಬಳಿಕ ಉಭಯತ್ರರೂ, ಪರಸ್ಪರ ವಂದನಾದಿಗಳನ್ನು ಆಚರಿಸಿ, ಮಂತ್ರಿಯು ರಾಜಪುತ್ರನಬಳಿಯಲ್ಲಿ ಕುಳಿತುಕೊಂಡು, ಸ್ವಾಮಿಾ! ಈಗ ತಾನೇ ನಿಮ್ಮಬಳಿಯಿಂದೋಡಿಬಂದ ಚಾರಕನೊಬ್ಬನು ತಂದ ವರ್ತಮಾನದಿಂದ ನಿಮ್ಮ ತಂದೆಯವರಿಗೆ ಬಹಳವಾಗಿ ವ್ಯಸನವಾಗಿರುವುದು. ಆದುದರಿಂದ ಆ ಚಾರಕನಿಗೆ ತಕ್ಕ ಶಿಕ್ಷೆಯೆನ್ನು ಮಾಡಬೇಕೆಂದು ಹೇಳಿದನು. ಆ ಮಾತನ್ನು ಕೇಳಿ, ನಮ್ಮತಂದೆಯವರಿಗೆ ವ್ಯಸನ ಉಂಟಾಗುವಂತಹ ಕಾರಣವೇನಿರಬಹುದು? ಅಲ್ಲದೇ ಆ ಚಾರಕನು ಬಹಳವಾಗಿ ತಪ್ಪುಮಾಡಿದವನೂ ಆಗಿರುವನಲ್ಲಾ ಎನಲು, ಮಂತ್ರಿಯು ಆತನನ್ನು ಕುರಿತು, ಸ್ವಾಮಿಾ! ಚಾರಕನು ನಿಮ್ಮ ತಂದೆಯವರಬಳಿಯಲ್ಲಿ ಹೇಳಿದಂತೆ ಎಂದಿಗೂ ನಿಜವಾಗಿ ನಡೆದಿರಲಾರದೆಂದು ಭಗವತ್ಸಾಕ್ಷಿಯಾಗಿ ನಾನು ನಂಬಿರುವೆನು. ಏಕೆಂದರೆ :-ಆ ಚಾರಕನು ನಡೆದಸಂಗತಿಯನ್ನು ಚೆನ್ನಾಗಿ ತಿಳಿದುಕೊಳ್ಳತಕ್ಕ ಶಕ್ತಿಯುಳ್ಳವನಾಗಿರಲಿಲ್ಲವೆಂದು ಹೇಳಿದ ಮಂತ್ರಿಯನ್ನು ನೋಡಿ ರಾಜಪುತ್ರನು ಆಹಾ! ಚಾರಕನು ಆ ವಿಷಯವನ್ನು ಸ್ವಲ್ಪವೂ ತಿಳಿದವನಲ್ಲವೆಂದು ನಾನು ಹೇಳುವೆನು. ಈಗ ತಾನು ಸ್ವಯಮಾಗಿ ಸರ್ವವನ್ನೂ ಬಲ್ಲವರಾದುದರಿಂದ ನಿನ್ನೇರಾತ್ರಿ ನನ್ನಮಗ್ಗುಲಲ್ಲಿ ಮಲಗಿ ನಿದ್ರಿಸಿದ ಯುವತೀಮಣಿ ಯಾರೆಂಬುದನ್ನು ಹೇಳಬೇಕೆಂದು ಕೇಳಲು, ಮಂತ್ರಿಯು

ಆಶ್ಚರ್ಯಯುಕ್ತನಾಗಿ ರಾಜಪುತ್ರನನ್ನು ನೋಡಿ, ಸ್ವಾಮಿ ! ನಾನು ಹೇಳುವಮಾತಿಗೆ ನೀವು ಕೋಪಮಾಡಿಕೊಳ್ಳಬೇಡಿರಿ. ಲೋಕದಲ್ಲಿ ಪುರುಷನಾಗಲೀ, ಸ್ತ್ರೀಯಾಗಲೀ, ಬಾಗಿಲನ್ನು ತೆಗೆಯದೆ ಕಾದುಕೊಂಡಿರುವ ಈ ನಿಮ್ಮ ಚಾರಕರನ್ನು ತುಳಿಯದೆ ಅಥವಾ ಮತ್ತೊಂದು ಕುರುಹನ್ನೂ ತೋರದೆ ಒಳಹೋಗಲಾವರೇ ? ಆಹಾ ! ನೀವು ಕನಸನ್ನುಕಂಡು ಭ್ರಮಿಸಿರಬಹುದೆಂದ ನುಡಿಯಲು, ಮಂತ್ರಿಯನ್ನು ನೋಡಿ ರಾಜಪುತ್ರನು ಆಹಾ ! ನೀನು ಹೇಳುವ ಮಾತುಗಳನ್ನು ನಾನೆಂದಿಗೂ ಕೇಳೆನು. ಆದರೆ ನಿನ್ನಮೂಲಕವಾಗಿಯೇ ಆ ಕನ್ಯಾಮಣಿಯು ವಿಚಾರನನ್ನು ತಿಳಿದುಕೊಳ್ಳಬೇಕೆಂದಿರುವೆನು. ಇಲ್ಲವಾದರೆ ಅದಕ್ಕೆ ತಕ್ಕತೆರದಿಂದ ಬಲಾತ್ಕಾರಮಾಡಲು ನಾನು ಶಕ್ತನಾಗಿರುವೆನೆಂದು ನುಡಿದ ರಾಜಪುತ್ರನ ವಾಕ್ಯವನ್ನು ಕೇಳಿ, ಮಂತ್ರಿಯು ಆತನನ್ನು ಉಪಾಯದಿಂದ ಗೆಲ್ಲಬೇಕೆಂದು ಸ್ವಾಮಿ ! ನೀವು ಆ ಸುಂದರೀಮಣಿಯನ್ನು ನೋಡಿರುವಿರಾ ! ದಯವಮಾಡಿ ಹೇಳಬೇಕೆಂದು ದೈನ್ಯದಿಂದ ಹೇಳಿದನು.

ಆಗ ರಾಜಪುತ್ರನು ಅಯ್ಯಾ ! ನೀನುಮಾಡಿರುವ ತಂತ್ರವನ್ನು ನಾನು ಚೆನ್ನಾಗಿ ತಿಳಿದಿರುವೆನು. ಆಹಾ ! ಆ ರಾಜಪುತ್ರಿಯನ್ನು ವೋಹಿಸುವಂತೆ ಮಾಡುವುದಕ್ಕಾಗಿ ನೀನೇ ನನ್ನ ಬಳಿಗೆ ಕರೆದುಕೊಂಡುಬಂದವನು. ಇದೆಲ್ಲವನ್ನು ನಾನು ಚೆನ್ನಾಗಿ ತಿಳಿದಿರುವೆನು. ಆದರೆ ಆ ಸುಂದರೀಮಣಿಯು ನನ್ನಸಂಗಡ ಬಂದುಮಾತನ್ನು ಆಡದೆ ಬಹಳವಾಗಿ ವೋಹವನ್ನುಂಟು ಮಾಡಿ ಹೊರಟುಹೋದಳಲ್ಲಾ ಎಂದು ಚಿಂತಿಸುವೆನೆನಲು, ಮಂತ್ರಿಯು ಸ್ವಾಮಿ ! ಖಂಡಿತವಾಗಿಯೂ, ನಾನಾಗಲೀ, ನಿಮ್ಮ ತಂದೆಯಾಗಲೀ, ನೀವು ನೋಡಿದ ಲಲನಾಮಣಿಯ ವಿಚಾರವನ್ನು ಅರಿತವರೇ ಅಲ್ಲವೆಂದು ಮತ್ತೊಂದುಸಾರಿ ಹೇಳವೆನು. ಆದರೆ ನೀವು ಆಕೆಯನ್ನು ಕನಸಿನಲ್ಲಿ ನೋಡಿರಬಹುದೆಂದು ನಾನು ನಂಬಿರುವುದರಲ್ಲಿ ಯಾವ ಸಂಶಯವೂ ಇಲ್ಲವೆಂದು ನುಡಿಯಲು ರಾಜಪುತ್ರನು ಆಹಾ ! ನಾನು ಪ್ರತ್ಯಕ್ಷವಾಗಿ ನೋಡಿದ ವಧೂರತ್ನವನ್ನು ನೀನು ಕಾಣೆನೆಂದು ಸುಳ್ಳು ಹೇಳುವೆಯಾ ? ಇದೆಲ್ಲ ನಿನ್ನತಂತ್ರವಲ್ಲದೆ ಮತ್ತಾರದೆಂದು ಹೇಳಿ, ಆತನ ಗಡ್ಡವನ್ನು ಹಿಡಿದು ಕೊಂಡು ನೆಲಕ್ಕೆ ಬೀಳುವಂತೆ ಬಲವಾಗಿ ಗುದ್ದಿದನು. ಬಳಿಕ ಮಂತ್ರಿಯು ರಾಜಪುತ್ರನಿಗೆ ಕೋಪಬಂದಿರುವುದರಿಂದ ಚಾರಕನಿಗಾದಗತಿಯು ತನಗೂ

ಉಂಟಾಗುವುದಾದುದರಿಂದ ಉಪಾಯದಿಂದ ತಪ್ಪಿಸಿಕೊಂಡಹೊರತು ನನಗೆ ಕ್ಷೇಮವು ಉಂಟಾಗದೆಂದು ತಿಳಿದು, ರಾಜಕುಮಾರನನ್ನುಕುರಿತು, ಅಯ್ಯಾ! ಸ್ವಲ್ಪ ತಾಳ, ದುಷ್ಟಕುಮಾರಜೀವನೆನಲು ಅಲಿದುಹೋಗಿದ್ದುದರಿಂದ ಆ ಸಿಪ್ರೀಯನ್ನು ಬಿಟ್ಟುಬಿಟ್ಟನು. ಆಗ ಸಚಿವಾಗ್ರಣಿಯು ಸ್ವಾಮಿ! ತಾವು ಹೇಳಿದಸಂಗತಿಯು ನಿಜವಾದುದೇ ಸರಿ! ಆದರೆ ನಾನು ಮಂತ್ರಿಯಾದುದರಿಂದ ರಾಜ್ಞಿಯಿಂದ್ಲಾಗೆ ಒಳಪಟ್ಟವನಾಗಿ ಮರ್ಮವನ್ನುಳಿಸಿಕೊಂಡಿರುವೆನು. ಈಗ ನಿಮ್ಮ ಮನೋಭಿಪ್ರಾಯವನ್ನು ಹೇಳಿದರೆ ಅದರಂತೆ ನಿಮ್ಮತಾಯಿಗೆ ತಿಳಿಸಿ ನಡೆದುಕೊಳ್ಳಲು ಸಿದ್ಧನಾಗಿರುವೆನೆಂದು ಹೇಳಲು, ರಾಜಪುತ್ರನು ಹಾಗಾದರೆ ಶೀಘ್ರವಾಗಿ ಹೊರಡು ನಿಲ್ಲಬೇಡ ಹೊರಡು.

ನಿನ್ನೆಯದಿನರಾತ್ರಿ ನನ್ನಬಳಿಯಲ್ಲಿ ಮಲಗಿದ್ದ ಕನ್ಯಾಮಣಿಯನ್ನು ನನಗೆ ವಿವಾಹ ಮಾಡಲು ನೀವು ಸಮ್ಮತಿಸುವುದಾದರೆ ನಾನು ಮದುವೆ ಮಾಡಿಕೊಳ್ಳಲು ಸಿದ್ಧನಾಗಿರುವೆನೆಂದು ನುಡಿಯಲು, ಮಂತ್ರಿಯು ವಿನಯದಿಂದ ಆತನಿಗೆ ವಂದನೆಗಳನ್ನು ಸಮರ್ಪಿಸಿ, ಅಲ್ಲಿಂದ ತೆರಳಿ, ಹೊರಗೆಬಂದು ಗಾಗಿಲನ್ನು ಪುಚ್ಛಿಕೊಂಡು ನಂತರ ರಾಜನಒಳಿಗೆ ಬರಲು, ರಾಜನು ಖಿನ್ನನಾಗಿ ಬರುತ್ತಿರುವ ಮಂತ್ರಿಯನ್ನುನೋಡಿ ಚಿಂತಾಯುಕ್ತನಾಗಿ ಅಯ್ಯಾ!! ನನ್ನಪುತ್ರನು ಸುಖನಾಗಿರುವನೇ! ನೀನು ಬಹಳವಾಗಿ ಅಲಸಿಹೋದಂತೆ ತೋರುವುದು ಕಾರಣವೇನೆಂದು ಪ್ರಶ್ನೆ ಮಾಡಲು ಮಂತ್ರಿಯು ರಾಜನನ್ನು ಕುರಿತು, ಚಾರಕನು ಹೇಳಿದಮಾತು ನಿಜವಾಗಿಯೇ ಕಾಣುವುದು. ನಿನ್ನೆ ರಾತ್ರಿ ಆತನ ಪಕ್ಕದಲ್ಲಿ ಮಲಗಿದ್ದ ಕನ್ಯಾರತ್ನವನ್ನು ಕಾಣದೆ ಆತನು ಬಹಳವಾಗಿ ಕೋಪಿಸಿಕೊಂಡಿರುವನೆಂದು ಹೇಳಿ ತನಗೆ ಸಂಭವಿಸಿದ ಗತಿಯನ್ನೂ, ಅಲ್ಲಿನ ವಿದ್ಯಮಾನಗಳನ್ನೂ, ವಿಶದವಾಗಿ ಹೇಳಿದಬಳಿಕ ರಾಜನು ತನ್ನಪುತ್ರನ ನಿಷಯದಲ್ಲಿ ಮೊದಲು ಇಟ್ಟುಕೊಂಡಿದ್ದ ಸಂತೋಷಕ್ಕಿಂತಲೂ ಅತಿಶಯವಾದ ವ್ಯಸನವನ್ನು ಹೊಂದಿ ಆತನನ್ನು ತಾನೇಹೋಗಿ ಪ್ರತ್ಯಕ್ಷನಾಗಿ ನೋಡಿಕೊಂಡು ಬರಬೇಕೆಂದು ತಿಳಿದು, ಚಿಂತಿಸುತ್ತಾ ಮಂತ್ರಿ ಪರಿವಾರಯುಕ್ತನಾಗಿ ತನ್ನ ಕುಮಾರನು ವಾಸ ಮಾಡುತ್ತಿರುವ ಉಪ್ಪರಿಗೆಯನ್ನುಕುರಿತು, ಪ್ರಯಾಣ ಮಾಡಿದನೆಂದು ನುಡಿದು, ಷಹರಜಾತಿಯು ಬೆಳಗಾದಕೂಡಲೆ ಕಥೆಯನ್ನುನಿಲ್ಲಿಸಿ, ಮರಳಿ ಮುರುದಿನ ಬೆಳಗಿನ ಹೊತ್ತಿನಲ್ಲಿ ಹೇಳಲಾರಂಭಿಸಿದಳು.

೨೧ನೆಯ ರಾತ್ರಿಯ ಕಥೆ.

ಬಳಿಕ ಷಹರಜಾದಿಯು ಸುಲ್ತಾನರನ್ನು ಕುರಿತು, ಪ್ರಿಯರೇ! ತಂದೆಯಿಂದ ಸೆರೆಯಲ್ಲಿ ಇಡಲ್ಪಟ್ಟು ನರಳುತ್ತಿರುವ ಆ ರಾಜಪುತ್ರನಾದ ಕಮರಲುಜಮಾನನಬಳಿಗೆ ತಂದೆಯಾದ ಷಹಜಮಾನನು ಬಂದಕೂಡಲೇ ಆತನು ತಂದೆಯನ್ನು ಬಹು ಮರ್ಯಾದೆಯಿಂದ ಬರಮಾಡಿಕೊಂಡು, ಆತನು ಕೇಳಿದ ಪ್ರಶ್ನೆಗಳಿಗೆಲ್ಲಾ ಸದುತ್ತರವನ್ನು ಹೇಳಿದನಾದುದರಿಂದ ರಾಜನು ತನ್ನ ಮಗನಿಗೆ ಬುದ್ಧಿಭ್ರಂಶವೆಂದಿಗೂ ಉಂಟಾಗಿಲ್ಲವೆಂದೂ, ಆತೆರದಿಂದ ಹೇಳಿದ ಮಂತ್ರಿಗೆ ಹುಚ್ಚು ಹಿಡಿದಿರಬೇಕೆಂದು ತಿಳಿಸುವವನಾಗಿ ತನ್ನ ಮಗನನ್ನು ಹತ್ತಿರದಲ್ಲಿ ಕುಳ್ಳಿರಿಸಿಕೊಂಡು, ಮುತ್ರಿವರ್ಯನಿಗೆ ತಿಳಿಯದಂತೆ ಕೆಲವು ಮಾತುಗಳನ್ನಾಡಬೇಕೆಂದು ಬಯಸಿ, ಪ್ರಿಯಕುಮಾರಕಾ! ನಿನ್ನೀ ರಾತ್ರಿ ನಿನ್ನ ಬಳಿಯಲ್ಲಿ ಯಾರೋ ಒಬ್ಬ ಲಲನಾಮಣಿಯು ಮಲಗಿ ನಿದ್ರಿಸಿದಂತೆ ಪತ್ರಮಾನವನ್ನು ಕೇಳಿರುವೆನಾದಾದರಿಂದ ಆ ಯುವತೀಮಣಿಯ ವಿಚಾರವನ್ನು ಕುರಿತು ನನ್ನ ಸಂಗಡ ವಿಶದವಾಗಿ ಹೇಳಬೇಕೆಂದು ಕೇಳಲು, ರಾಜಪುತ್ರನು ಷಹಜಮಾನನನ್ನು ಕುರಿತು, ತಂದೆಯೇ! ಈ ವಿಷಯದಲ್ಲಿ ನನ್ನನ್ನು ಬಹಳವಾಗಿ ಕೊಂದರೆಪಡಿಸದಿರುವಂತೆ ನಾನು ನಿನ್ನನ್ನು ಬೇಡಿಕೊಳ್ಳುವೆನು. ನಿನಗೆ ನನ್ನನ್ನೇಲೆ ದಯೆ ಉಂಟಾದರೆ ಆ ಕನ್ಯಾರತ್ನಮಣಿಯನ್ನು ನನಗೆ ಪುಗುವೆಯಾಡಿಕೊಡುವಂತೆ ಏರ್ಪಡಿಸು.

ನಾನು ಮೊದಲು ಸ್ತ್ರೀ ವಿಷಯದಲ್ಲಿ ಎಷ್ಟು ವೈರಾಗ್ಯವುಳ್ಳವನಾಗಿದ್ದೆನೋ ಈಗ ಅವಕ್ಕಿಂತಲೂ ನೂರುಪಾಲು ಅತಿಶಯವಾದ ಮೋಹವನ್ನು ಹೊಂದಿರುವೆನು. ಆದುದರಿಂದ ನನ್ನ ಇಷ್ಟಾನುಸಾರವಾಗಿ ಆ ವರವರ್ಣಿನಿಯನ್ನು ನಿವು ವಿವಾಹವಾಡಿಕೊಡುವುದಾದರೆ ನಾನು ತುಂಬ ಕೃತಜ್ಞತೆಯುಳ್ಳವನಾಗಿರುವೆನೆಂದು ನುಡಿಯಲು, ರಾಜನು ತನ್ನ ಪುತ್ರನು ಇದುವರೆಗೂ ಹೇಳಿದ ಮಾತುಗಳನ್ನು ಕೇಳಿ ತುಂಬ ಆಶ್ಚರ್ಯಯುಕ್ತನಾಗಿ ಈತನು ಹೇಳುವ ಮಾತುಗಳಿಗೂ, ಮಂತ್ರಿಯು ನುಡಿದ ವಾಕ್ಯಸರಣಿಗೂ, ಬಹಳವಾಗಿ ಭೇದವಿರುವುದಾದುದರಿಂದ ಸಂಗತಿಯು ನಿಜವಾಗಿರಬಹುದೆಂದು ಊಹಿಸಿ, ಕುಮಾರಕಾ! ನೀನು ಮುಂದೆ ಅನುಭವಿಸಹೋಗುವ ಈ ರಾಜ್ಯದಾಣೆಗೂ ನೀನು ಹೇಳುವ ಪ್ರಮದಾರತ್ನವನ್ನು ನಾನು

ಕಾಣೆನಲಾಲ್ಲಾ ! ನಿನ್ನಬಳಿಗೆ ಬರಬೇಕಾಗಿದ್ದರೆ ನನ್ನಾಳಿಕೆಗೊಳಪಡದಿರುವ ರಾಜ್ಯದ ಸ್ತ್ರೀರತ್ನವೇ ಬಂದಿರಬಹುದು ! ಆಹಾಳ ನನ್ನಾಳಿಕೆ ಸಿಕ್ಕದಿರುವ ಕನ್ಯಾರತ್ನವು ನಿನ್ನಬಳಿಗೆ ಜೀವಿತಾನೆ ಬರುವುದು ಬರಲಾರದಲ್ಲಾ ! ಆಹಾ ! ನೀನು ನೋಡಿದ ಸಂಗತಿ ನಿಜವಾಗಿದ್ದರೂ ಇರಬಹುದು, ಆದರೆ ನನ್ನ ಪ್ರಧಾನಮಂತ್ರಿಯು ನಿನ್ನ ವಿಷಯವಾಗಿ ಜೀಳಿದ ಮಾತುಗಳು ನಿನ್ನನ್ನು ಸಮಾಧಾನಪಡಿಸುವುದಕ್ಕಾಗಿಯೇಹೊರತು, ಅನ್ಯಥಾ ಇಲ್ಲ. ಆದಕಾರಣ ನೀನು ದಯೆನಮಾಡಿ ಸಮಾಧಾನಸಿದ್ಧಿಯೆನ್ನು ಹೊಂದಬೇಕೆಂದು ಬೇಡಿಕೊಳ್ಳುವೆನೆನಲು ರಾಜಪುತ್ರನು ಸ್ವಾಮಿ ! ತಮ್ಮ ಆಜ್ಞೆನು ಸಾರವಾಗಿ ನಡೆದುಕೊಳ್ಳದಿಹೋದರೆ ಕಠೋರವಾದ ನಿಮ್ಮ ಕೋಪಕ್ಕೆ ಪಾತ್ರನಾಗುವೆನಲ್ಲಾ ! ಆಹಾ ! ನಾನು ಬಹು ವಿನಯದಿಂದ ನಿಮ್ಮಲ್ಲಿ ನಡೆದುಕೊಳ್ಳತಕ್ಕವನೇಹೊರತು ಮತ್ತುಜೀರೆ ಇಲ್ಲವೆಂದು ಜೀಳಿ ತನ್ನ ತಂದೆಯವಮಾತುಗಳನ್ನು ಸಾವಧಾನದಿಂದ ಚಿಂತಿಸುತ್ತಾ ತಾನು ನೋಡಿದ ಕನ್ಯಾಮಣಿಯು ಸ್ವಪ್ನದಲ್ಲಿ ಕಂಡುಬಂದಳೋ, ಅಥವಾ ನಿಜವಾಗಿ ಕಾಣಿಸಿಕೊಂಡಳೋ, ತಿಳಿಯದಲಾಲ್ಲಾ ಎಂದು ಚಿಂತಿಸುತ್ತಿದ್ದನು.

ನಂತರ ರಾಜಪುತ್ರನು ತಾನು ನಿದ್ರಿಸುತ್ತಿದ್ದು ಲಲನಾಮಣಿಯೆನ್ನುಕಂಡು, ವ್ಯೋಹಭ್ರಾಂತನಾಗಿ ಮರಳಿ ನಿದ್ರಿಕೋದಸಂಗತಿಯೆನ್ನು ವ್ಯೋಹದಿಂದ ಆಕೆಯುಂಗುರವನ್ನು ತಾನು ತೆಗೆದುಕೊಂಡು ತನ್ನುಂಗುರ ಆಕೆಯ ಹಸ್ತದಲ್ಲಿ ಹಾಕಿದುದನ್ನುಜೀಳಿ, ಅಪ್ಪಾ ! ನೀವು ನನ್ನ ಉಂಗುರವನ್ನು ಚೆನ್ನಾಗಿ ನೋಡಿರುವರಲಾಲ್ಲಾ ! ಇಗೋ ! ಈ ಉಂಗುರವನ್ನು ನೋಡಿ, ಇದು ಆ ಲನಾಮಣಿಯ ಹಸ್ತಮುದ್ರಿಕೆಯಾಗಿರುವುದು. ಇದನ್ನುನೋಡಿದುದರಿಂದ ನಾನುನೋಡಿದ ಲಲನಾಮಣಿಯು ಸ್ವಪ್ನದಲ್ಲಿ ಅಲ್ಲದೆ ನಿಜವಾಗಿ ಕಂಡುಬಂದಳೆಂಬುದು ತಮಗೆ ಚೆನ್ನಾಗಿ ಗೊತ್ತಾಯಿತೇ ? ಎಂದು ಕೇಳಿದನು. ಆ ಮಾತುಗಳನ್ನುಕೇಳಿ ರಾಜನು ತನ್ನ ಪುತ್ರನು ಜೀಳಿದ ಮಾತುಗಳು ನಿಜವೆಂದು ತಿಳಿದು ಆತನಿಗೆ ಪ್ರತ್ಯುತ್ತರವನ್ನುಜೀಳಲಾರದೆ ಸುಮ್ಮನಾದನು. ಆಗ ರಾಜಪುತ್ರನು ತಂದೆಯೇ ! ನನ್ನ ಹೃದಯಾಂಗಣದಲ್ಲಿ ಸದಾ ವಾಸಮಾಡುತ್ತಿರುವ ಆ ಸುಂದರತರ ರೂಪಳಾದ ಲಲನಾಮಣಿಯೆನ್ನುತಂದು ನನಗೆ ವಿವಾಹ ಮಾಡಿದಹೊರತು,

ನಾನು ಸ್ವಸ್ಥಚಿತ್ತನಾಗಲಾರೆನು. ಅಯ್ಯೋ! ಇದೆಂತಹ ಬಲವಾದ ಮೋಹವೋ ನನಗೆ ತಿಳಿಯದಲ್ಲಾ! ನಾನೇನುಮಾಡಲಿ. ಸರ್ವಥಾ ಆ ನನ್ನ ಪ್ರಾಣಪ್ರೇಯಸಿಯನ್ನು ತೊರೆದು ಬದುಕುವಹಾಗೆ ತೋರದೆನಲು ರಾಜನು ಪ್ರಯೋಕ್ತುವಾರಕನೇ! ನಿನ್ನ ಇಷ್ಟಾನುಸಾರವಾಗಿ ನಾನು ನಡೆಯುವುದಕ್ಕೆಂದಿಗೂ ಸಂದೇಹಿಸತಕ್ಕವನಲ್ಲ. ಆದರೆ ಆ ಕನ್ಯಾಮಣಿಯು ಇಂಥವಳೆಂದು ನನಗೆ ತಿಳಿಯದಲ್ಲಾ! ನಾನೇನುಮಾಡಲಿ? ಭಗವಂತನ ದಯೆದಿಂದ ಆ ಕನ್ಯಾರತ್ನದ ವಿಚಾರವು ನನಗೆ ತಿಳಿಯಬಂದುದೇ ಆದರೆ ನೀನು ಶೀಘ್ರವಾಗಿ ಸುಖವನ್ನು ಹೊಂದುವೆಯೊಲ್ಲಾ! ಆ ಹುಡುಗಿಯನ್ನು ನಾನೆಲ್ಲಿ ಹುಡುಕಲೀ! ಯಾರೆಂದುತಿಳಿಯಲೀ! ಎಲ್ಲಿಗೆಹೋಗಲೀ! ಅನ್ಯ ಸ್ತ್ರೀಸ್ವಾಸ್ಥ್ಯದ ಲಲನೆಯು ಇಲ್ಲಿಗೆಂತು ಬಂದಳು? ಕರೆದುತಂದವರಾರು? ಆ ಲಲನಾಮಣಿಯು ಇಲ್ಲಿಗೆ ಬರಲು ಕಾರಣವೇನು? ಬಂದರೂ ಸುಮ್ಮನಿರದೆ ಈತೆರದ ಮೋಹಪಾಶವನ್ನು ಬಲವಾಗಿ ಬಿಗಿದು, ತಾನೊಪ್ಪಿಕೊಂಡು ನಿದ್ರಿಸುತ್ತಿದ್ದವಳು ಏತಕ್ಕೆ ಹೊರಟುಹೋದಳು.

ಆಹಾ! ಇವೆಲ್ಲಕ್ಕೂ ಕಾರಣವನ್ನು ನಾನು ನಿಜವಾಗಿಯೂ, ಕಂಡುಕೊಳ್ಳಬೇಕು. ಇಲ್ಲವಾದರೆ ನಮ್ಮಕಾರ್ಯವೆಂದಿಗೂ ನೆರವೇರದು. ಭಗವಂತನು ನಮಗೆ ಸಹಾಯವಾಡಿ ಇದರ ಕಾರಣಗಳನ್ನು ತಿಳಿಯಪಡಿಸಿದರೇಹೊರತು, ಇಲ್ಲವಾದರೆ ನಾವಿಬ್ಬರೂ ಸಮಾಧಿಯೋಗದಲ್ಲಿ ದೀರ್ಘನಿದ್ರೆಯನ್ನು ಹೊಂದಬೇಕಾಗಿರುವುದು. ಪ್ರಿಯಪುತ್ರನೇ! ಬಾ! ನಾವಿಬ್ಬರೂ ಇದಕ್ಕೆ ಕಾರಣವನ್ನು ತಿಳಿದುಕೊಳ್ಳಲಾರೆವಾದುದರಿಂದ, ಮೋಹದಿಂದ ನೀನೂ, ನಿನ್ನನ್ನು ನೋಡಿ ನಾನೂ, ದುಃಖಪಡುತ್ತಾ, ಪ್ರಾಣವನ್ನು ಬಿಡುವುದೊಂದೇ ನಮಗೆ ಸುಖವಲ್ಲದೆ ಮತ್ತೇನೂ ಇಲ್ಲವೆಂದು ಹೇಳಿ, ತನ್ನಮಗನನ್ನು ಅರಮನೆಗೆ ಕರೆದುಕೊಂಡುಹೋಗಿ ಬಂದಾನೊಂದು ಶಯ್ಯಾಗೃಹದಲ್ಲಿ ಮಲಗಿಸಿ ತಾನು ಆತನಬಳಿಯಲ್ಲಿ ಕುಳಿತುಕೊಂಡು ಚಿಂತಿಸುತ್ತಿದ್ದನು. ಇದರಿಂದ ರಾಜಕಾರ್ಯಗಳೆಲ್ಲವೂ ನಿಂತುಹೋದುವು. ಆದರೆ ರಾಜಪುತ್ರನು ತನ್ನ ಮುದ್ದುಭಾವೆಯನ್ನು ನೆನೆನೆನೆದು ಚಿಂತಿಸುತ್ತಾ, ಹಾಸಿಗೆಯಲ್ಲಿ ಮಲಗಿ ವಿರಹಾಗ್ನಿಯನ್ನುಹೊಂದಿ, ನರಳುತ್ತಿದ್ದನು. ರಾಜನಬಳಿಗೆ ಪ್ರಧಾನಮಂತ್ರಿಯು ಆಗಾಗ್ಗೆ ಹೋಗುತ್ತಿವದ್ದನು ಒಂದಾನೊಂದುದಿನ ರಾಜನಬಳಿಗೆ ಬಂದು ಸ್ವಾಮಿ! ತಾವು ರಾಜಕಾರ್ಯವನ್ನು

ತೊರೆದು, ಹೀಗೆ ಚಿಂತಾಕ್ರಾಂತರಾಗಿರುವುದರಿಂದ ಜನರು ನಾನಾವಿಧವಾಗಿ ಗೊಣಗುಟ್ಟುಕೊಳ್ಳುವುದಕ್ಕೆ ಅವಕಾಶ ಉಂಟಾಗಿರುವುದು. ಆದುದರಿಂದ ತಾವು ರಾಜಕಾರ್ಯವನ್ನು ಕುರಿತು, ನಿಮ್ಮ ಪುತ್ರನಸಂಗಡ ಯೋಚಿಸುತ್ತಿರುವುದಾದರೆ ಉಭಯತ್ರಿಗೂ ಸುಖ ಉಂಟು. ಆದುದರಿಂದ ನೀವಿಬ್ಬರೂ ಸಮುದ್ರತೀರದಲ್ಲಿರುವ ದ್ವೀಪದಲ್ಲಿ ವಾಸಮಾಡುತ್ತಾ, ದಿನಕ್ಕೆ ಎರಡುಸಾರಿ ಪ್ರಜೆಗಳಿಗೆ ದರ್ಶನವನ್ನು ಕೊಡುತ್ತಿದ್ದರೆ ರಾಜಪುತ್ರನು ಅಲ್ಲಿನ ವಿನೋದಗಳನ್ನು ನೋಡುತ್ತಾ, ಬಹಳಹೊತ್ತು ತನ್ನಕಾಲನನ್ನು ಸಂತೋಷವಾಗಿ ಕಳೆಯಬಹುದು. ಅಲ್ಲದೆ ಆರೋಗ್ಯಸ್ಥಲವಾದ ಆದ್ವೀಪದಲ್ಲಿ ನೀವು ವಾಸಮಾಡುವುದರಿಂದ ನಿಮ್ಮಿಬ್ಬರಿಗೂ ಆರೋಗ್ಯ ಉಂಟಾಗುವುದೆಂದು ಹೇಳಿದನು. ರಾಜನು ಅದಕ್ಕೊಪ್ಪಿ ಪುತ್ರಸಹಿತನಾಗಿ ಆಸ್ಥಲಕ್ಕೆ ಹೋಗಿ, ಅಲ್ಲಿ ವಾಸಮಾಡುತ್ತ ರಾಜಕಾರ್ಯವನ್ನು ನೆರವೇರಿಸುತ್ತಿದ್ದನು.

ಇತ್ತ ಷಹಜಮಾನನಗರದಲ್ಲಿ ಈತೆರದಿಂದ ನಡೆಯುತ್ತಿರಲು ರಾನಗಾಶ್ಚರನು ಕಾಸುಗಾಶ್ಚನೂಸಹ ಚೀನಾ ರಾಜಪುತ್ರಿಯೆನ್ನು ಕರೆದುಕೊಂಡು ಆಕೆಯುಂತಃಪುರದಲ್ಲಿ ಮಲಗಿಸಿದರು. ಬೆಳಗಾದಕೂಡಲೇ ರಾಜಪುತ್ರಿಯು ಎಚ್ಚತ್ತು ನಾಲ್ಕುದಿಕ್ಕುಗಳನ್ನು ಚೆನ್ನಾಗಿ ನೋಡಿ ರಾಜಪುತ್ರನನ್ನು ಕಾಣದೆ ಭಯದಿಂದ ನಡಗುತಾ, ಆಹಾ ! ಇದೇನು ಆಶ್ಚರ್ಯ! ಎಂತಹ ಸೌಂದರ್ಯಶಾಲಿ ಎಷ್ಟು ಸುಗುಣಗಳುಳ್ಳವನು. ಅಪಾರವಾದ ಮೋಹರಸವನ್ನು ಬೀರುತ್ತಿದ್ದನಲ್ಲಾ ! ಈಗ ಆತನನ್ನುಕಾಣದೆ ನಾನೆಂತು ಬಾಳಲಿ. ಹಾ ! ದೈವವೇ ! ಎಂದು ಏರಹಾಗ್ನಿಯಿಂದ ಕುದಿಯುತ್ತ ಘಟ್ಟಯೊಗಿ ಕೂಗಿಕೊಂಡಳು. ಕೂಡಲೆ ದಾದಿಯು ಆಕೆಯ ಹತ್ತಿರಕ್ಕೆ ಬಂದು, ಅಮ್ಮಾ ! ಇದೇನು ! ನಿದ್ರೆಯಿಂದೆಚ್ಚತ್ತು ಹೀಗೆ ಕೂಗಿಕೊಳ್ಳುವುದಕ್ಕೆ ಕಾರಣವೇನು ಮರೆಮಾಜದೆ ನುಡಿಯುವಳಾಗು. ಎಂದು ಬೇಡಿಕೊಳಲು, ರಾಜಪುತ್ರಿಯು ಆಹಾ ! ನಿನ್ನೆರಾತ್ರಿಯೆಲ್ಲಿ ನನ್ನ ಪಕ್ಕದಲ್ಲಿ ಮಲಗಿ ನಿದ್ರಿಸುತ್ತಿದ್ದ ಮೋಹನಾಂಗನನ್ನು ಕಾಣದೆ ಈತೆರದಿಂದ ಕಳವಳಿಸುತ್ತಿರುವೆನು ಆತನು ಎಲ್ಲಿಹೋದನು. ಈ ವಿಷಯವನ್ನು ಹೇಳೆಂದು ಕೇಳಿದಳು. ಅಮ್ಮಾ ! ಈ ಸಂಗತಿಯನ್ನೇ ನಾನು ಕಾಣೆನು. ನಿನ್ನೆರಾತ್ರಿ ನೀನು ಮಲಗಿಕೊಳ್ಳುವಾಗ ಒಂಟಿಯಾಗಿ ಶಯ್ಯಾಗೃಹವನ್ನು

ಹೊಕ್ಕು ಬಾಗಿಲನ್ನು ಬಲವಾಗಿ ಹಾಕಿಕೊಂಡೆಯಲ್ಲಾ ಇದೇನು ಕನಸೋ ಇಲ್ಲವಾದರೆ ಭ್ರವೆಯೋ ತಿಳಿಯದಲ್ಲಾ ಎನಲು ರಾಜಪುತ್ರಿಯು ಕೋಪದಿಂದ ಆಕೆಯನ್ನು ಹಿಡಿದುಕೊಂಡು ಬಲವಾಗಿ ಹೊಡೆಯುತ್ತಿರಲು, ದಾದಿಯು ಮೆಲ್ಲಗೆ ಅವಳಕೈಯಿಂದ ತಪ್ಪಿಸಿಕೊಂಡು ಭಯದಿಂದೋಡಿಬಂದು ರಾಣಿಯ ಅಂತಃಪುರವನ್ನು ಹೊಕ್ಕಳು. ರಾಣಿಯು ದಾದಿಯರೂಪವನ್ನೂ ವಿಕಾರವನ್ನೂ ನೋಡಿ, ಆಹಾ ! ನಿನ್ನನ್ನು ಇಷ್ಟು ಕ್ರೂರವಾಗಿ ದಂಡಿಸಿದವರಾರೆಂದು ಬೆಸಗೊಳಲು ದಾದಿಯು ಅಮ್ಮಾ ! ನಿನ್ನ ಕುಮಾರಿಯು ಮಾಡಿದ ವಿಚಿತ್ರವನ್ನು ನೋಡಿದೆಯಾ ! ನಾನು ತಪ್ಪಿಸಿಕೊಂಡು ಬರದಿದ್ದರೆ ನನ್ನ ಪ್ರಾಣವನ್ನೇ ತೆಗೆದುಹಾಕುತ್ತಿದ್ದಳೆಂದು ಹೇಳಿ ರಾಜಪುತ್ರಿಯ ಸಂಗತಿಯನ್ನೂ, ಅವಳು ಆಡಿದ ಮಾತುಗಳನ್ನೂ, ತನಗೆ ಮಾಡಿದ ಶಿಕ್ಷೆಯನ್ನೂ ವಿವರವಾಗಿ ನುಡಿದು ತಾಯೇ ! ನಿನ್ನಮಗಳು ಈತೆರನಾಗಿರುವುದಕ್ಕೆ ಕಾರಣವೇನೋ ವಿಚಾರಿಸಿ, ತಕ್ಕ ಏರ್ಪಾಡುಗಳನ್ನು ಮಾಡುವವಳಾಗೆಂದು ಹೇಳಿದ ವಾಕ್ಯವನ್ನು ಕೇಳಿ, ತಾಯಿಯು ಬಹಳವಾಗಿ ಯೋಚಿಸಿಕೊಂಡು, ಅಯ್ಯೋ ! ಇದೇನು ಕನಸೋ ? ಭ್ರವೆಯೋ ? ಇವರ ಕಾರಣವನ್ನು ತಿಳಿದುಕೊಳ್ಳಬೇಕೆಂದು ಯೋಚಿಸಿ, ಪುತ್ರಿಕಾವಾತ್ಸಲ್ಯವುಳ್ಳವಳಾದ ಆ ಚೀನಾ ರಾಜಪುತ್ರಿಯ ತಾಯಿಯು ವಿಶ್ವಾಸವಾದ ತನ್ನ ಪರಿವಾರದವರಿಂದ ಕೂಡಿ ತನ್ನಮಗಳ ಅಂತಃಪುರವನ್ನು ಸೇರಿದಳು ಎಂದು ನುಡಿದು, ಷಹರಜಾದಿಯು ಬೆಳಗಾದಕೂಡಲೆ ಕಥೆಯನ್ನುನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಮರಳಿ ನುಡಿಯಲಾರಂಭಿಸಿದಳು.

೨೧೭ ನೆಯ ರಾತ್ರಿ ಕಥೆ.

ಬಳಿಕ ಚೀನಾ ರಾಜಪುತ್ರಿಯು ತನ್ನನ್ನು ನೋಡುವುದಕ್ಕಾಗಿ ಬಂದ ತಾಯಿಯನ್ನು ಬಹು ಮರ್ಯಾದೆಯಿಂದ ಬರಮಾಡಿಕೊಳಲು, ರಾಣಿಯು ಅವಳಬಳಿಯಲ್ಲಿ ಕುಳಿತುಕೊಂಡು ಯೋಗಕ್ಷೇಮವನ್ನು ವಿಚಾರಿಸಿದಬಳಿಕ ಅಮ್ಮಾ ! ದಾದಿಯನ್ನು ಇಷ್ಟೊಂದು ಕಠಿಣವಾಗಿ ಶಿಕ್ಷಿಸಲು ಕಾರಣವೇನು ? ನಿನ್ನಂತಹ ಗೌರವಶಾಲಿನಿಯಾದ ರಾಜಪುತ್ರಿಯು ಈತೆರದಿಂದ ಕೋಪವಮಾಡಿಕೊಂಡು ಹೊಡೆಯಬಹುದೇ ಎನಲು, ರಾಜಪುತ್ರಿಯು

ತಾಯಿಯೆನ್ನುಕುರಿತು, ಅಮ್ಮಾ ! ನೀನು ನನ್ನನ್ನು ಪರಿಹಾಸಮಾಡು ವುದಕ್ಕೆ ಬಂದಿರುವಂತೆ ತೋರುವುದು. ನಿನ್ನೆರಾತ್ರಿಯೆಲ್ಲಿ ನನ್ನ ಬಳಿಯಲ್ಲಿ ಮಲಗಿದ್ದ ಸುಂದರಾಂಗನ ವಿಷಯವನ್ನುಕುರಿತು, ನಿಜವಾದಸಂಗತಿಯೆನ್ನು ಹೇಳು. ಆತನ ವಿಚಾರವಾಗಿ ನಾನು ಇಂತಹ ದುರವಸ್ಥೆಯನ್ನುಹೊಂದಿ ನರಳುತ್ತಿರುವೆನು. ಈ ದಾದಿಯು ಬಳಗುಟ್ಟನ್ನು ಹೇಳದೆ ಮರಮಾಜಿ ಕೊಂಡಿರುವಳು. ನೀನು ಖಂಡಿತವಾಗಿಯೂ ಆ ರಾಜನಂದನ ವಿಷಯ ವನ್ನುಕುರಿತು, ವಿವರಿಸಿಹೇಳಬೇಕೆನಲು, ರಾಣಿಯು ಅಯ್ಯೋ ! ದೈವವೇ ! ನಾನೇನುಮಾಡಲಿ. ನಾನು ಆತನ ವಿಚಾರವಾದ ಸಂಗತಿಯೆನ್ನು ಈನಸಿನಲ್ಲೂ ಕೇಳಿಲವಳಲ್ಲಾ ! ಎಂದಳು. ಬಳಿಕ ನೃಸನಂದನೆಯು ಅಮ್ಮಾ ! ನೀನೂ ನಿನ್ನಪತ್ನಿಯೂ ಸಹ ನನಗೆ ಇಷ್ಟವಿಲ್ಲದಕಾಲದಲ್ಲಿ ವಿವಾಹವನ್ನು ಮಾಡಿ ಕೊಳ್ಳಂದು ಬಲವಂತ ಮಾಡುತ್ತಿದ್ದು ಈಗ ಹೀಗೆಹೇಳುವುದು ಸರಿಯೆಲ್ಲ. ಆ ರಾಜಪುತ್ರನನ್ನುಕೊಟ್ಟು ವಿವಾಹ ಮಾಡಿದಹೊರತು ನಾನು ಬದುಕುವ ಹಾಗಿಲ್ಲ. ಇದು ನಿಜವೆಂದು ತಿಳಿದುಕೋ ಎಂದು ನುಡಿದಳು.

ರಾಣಿಯು ತನ್ನ ಮಗಳಸಂಗಡ ಬಹಳಹೊತ್ತಿನವರೆಗೂ ಮಾತ ನಾಡುತ್ತಿದ್ದು, ನಂತರ ವಿವರವನ್ನು ರಾಜನಬಳಿಗೆ ಹೋಗಿ ತಿಳಸಬೇ ಕೆಂದು ನುಡಿದು ಕೂಡಲೇ ಬಂದು ಆತನಿಗೆ ವಿಷಯವನ್ನು ಚೆನ್ನಾಗಿ ತಿಳಿಯ ಹೇಳಲು, ರಾಜನು ತನ್ನ ಹೆಂಡತಿಯು ಹೇಳಿದಮಾತುಗಳನ್ನು ಕೇಳಿ, ಮಗ ಳನ್ನು ಪ್ರತ್ಯಕ್ಷವಾಗಿ ಮಾತನಾಡಬೇಕೆಂದು ಹೊರಟು ತನ್ನಮಗಳ ಅಂತಃ ಪುರವನ್ನುಸೇರಿ, ಸುಂದರನ ಮಗಳನ್ನುನೋಡಿ, ಎಲೈ ಪುತ್ರಿಕಾರತ್ನವೇ ! ನಿನ್ನ ತಾಯಿಯು ನನ್ನಸಗಡ ನಿನ್ನ ವಿಷಯವಾಗಿ ಕೆಲವು ಮಾತುಗ ಳನ್ನು ಹೇಳಿರುವಳು. ಅದರ ಸಂಗತಿಯನ್ನು ನಿನ್ನಿಂದಲೇ ತಿಳಿದುಕೊಳ್ಳ ಬೇಕೆಂದು ನಾನು ಬಂದಿರುವೆನೆನಲು, ರಾಜಪುತ್ರಿಯು ತಂದೇ ! ನಾನು ಅತಿಶಯವಾಗಿ ಹೇಳಬೇಕಾದುದಿಲ್ಲ. ನಿನ್ನೇರಾತ್ರಿಯೆಲ್ಲಿ ನನ್ನೊಡನೆ ಮಲಗಿಕೊಂಡಿದ್ದ ರಾಜಪುತ್ರನನ್ನು ನಾನು ಮದುವೆಯಾಗಬೇಕೆಂಬ ಕುತೂ ಹಲ ಉಳ್ಳವಳಾಗಿರುವೆನು. ಆದುದರಿಂದ ತಾವು ದಯಮಾಡಿ ಅದರಂತೆ ನಡೆಸಿಕೊಡಬೇಕು. ಈ ವಿಷಯವು ಸುಳ್ಳಂದು ನೀವು ಆಶ್ಚರ್ಯವನ್ನು ಹೊಂದಬೇಕಾದ ಅಗತ್ಯವೇನೂ ಇಲ್ಲ. ನಾನು ಆತನನ್ನು ಪ್ರತ್ಯಕ್ಷವಾಗಿ ನೋಡಿರುವೆನು. ಲೋಕದಲ್ಲಿರುವ ಪುರುಷರಲ್ಲೆಲ್ಲಾ ಆತನೇ ಸುಂದರನಾಗಿ

ಇರತಕ್ಕವನು. ಅದುದರಿಂದ ನಾನು ಆತನನ್ನು ವ್ಯೋಹಿತಳಾಗಿ ವಿವಾಹ ವನ್ನು ಮಾಡಿಕೊಂಡು ನನ್ನುಂಗುರವನ್ನು ಅವನಿಗೆ ಕೊಟ್ಟು, ಆತನುಂ ಗುರವನ್ನು ನಾನು ತೆಗೆದುಕೊಂಡೆನು. ಇಗೋ ನೋಡಿ ಎಂದು ಉಂಗುರ ವನ್ನು ತೋರಿಸಲು, ರಾಜನು ಭ್ರಮಾಯುಕ್ತನಾಗಿ ಆಶ್ಚರ್ಯವನ್ನು ಹೊಂದಿ ಹಿಂದೆಮುಂದೆ ತೋಚದವನಾಗಿ ನಾಳೆಯಿಂದ ಬಲವಾದ ಪಹರೆಯವರನ್ನು ನಿಯೆವಿಸಬೇಕೆಂದು ಯೋಚಿಸಿಕೊಂಡವನಾದನು. ರಾಜನಾದರೋ ಈ ಪ್ರಕಾರದಿಂದಿರುವ ತನ್ನ ವೈರಮುಪಾತ್ರಳಾದ ಪುತ್ರಿಯ ದುಃಖವನ್ನು ಹೋಗ ಲಾಡಿಸಬೇಕೆಂದು ಚಿಂತಿಸಿ, ತನ್ನ ಸಭಿಕರನ್ನು ಬರಮಾಡಿ ಅಯ್ಯಾ! ನನ್ನಮಗಳಿಗುಂಟಾಗಿರುವ ಮನೋಭ್ರಮೆಯನ್ನು ಹೋಗಲಾಡಿಸಿದವ ರಿಗೆ ಆಕೆಯನ್ನು ಕೊಟ್ಟು ವಿವಾಹಮಾಡುವುದಲ್ಲದೆ ನನ್ನ ರಾಜ್ಯವನ್ನು ಸಹ ಕೊಡುವೆನೆಂದು ನುಡಿಯಲು ಸಭಿಕರಲೊಬ್ಬನಾದ ವೃದ್ಧ ಅವಿವಾ ರನು ಆತನನ್ನು ಕುರಿತು ಹೀಗೆಂದು ನುಡಿಯಲಾರಂಭಿಸಿ, ತನ್ನ ಮನದಲ್ಲಿ ಆಹಾ! ಹೇಗಾದರೂಮಾಡಿ ಈ ರಾಜ್ಯವನ್ನು ಅನುಭವಿಸಿ ರಾಜಪುತ್ರಿ ಯನ್ನು ವಿವಾಹಮಾಡಿಕೊಳ್ಳಬೇಕೆಂದು ಊಹಿಸಿಕೊಂಡು, ರಾಜನಕಡೆಗೆ ತಿರುಗಿ ಅಯ್ಯಾ! ನಾನು ನಿನ್ನಮಗಳಿಗೆ ಹಿಡಿದಿರುವ ಹುಚ್ಚನ್ನು ಕ್ಷಣ ಮಾತ್ರದಲ್ಲಿ ಹೋಗಲಾಡಿಸುವೆನೆಂದು ನುಡಿಯಲು, ರಾಜನು ಅಯ್ಯಾ! ಆದರೆ ನೀನು ಹೇಳುವವಮಾತಿಗೆ ನಾನು ಸಮ್ಮತಿಸುವೆನಾದರೂ ಮತ್ತೊಂದು ನಿಷ್ಕರ್ಷೆಯುಂಟು ಅದೇನೆನ್ನುವಿಯೋ?

ಕಷ್ಟವಡದೆ ಸುಖವೆಂದಿಗೂ ಉಂಟಾಗದು. ಉಪಾಯದಿಂದ ನನ್ನ ರಾಜ್ಯವನ್ನು ನೀನು ಅನುಭವಿಸಬೇಕೆಂದು ಯೋಚಿಸುವುದು ಅನ್ಯಾಯ. ನೀನು ನನ್ನಪುತ್ರಿಯ ಮನೋವ್ಯಥೆಯನ್ನು ಹೋಗಲಾಡಿಸದಿದ್ದಲ್ಲಿ ನಿನಗೆ ಮರಣದಂಡನೆಯನ್ನು ವಿಧಿಸುವೆನೆಂಬುದನ್ನು ತಿಳಿದುಕೋ. ಆದುದರಿಂದ ಈ ವಿಷಯವನ್ನು ಕುರಿತು, ಸಭಿಕರೆಲ್ಲರೂ ಚೆನ್ನಾಗಿ ಯೋಚಿಸಬೇಕೆಂದು ಹೇಳಿದನು. ಆದರು ಅವಿವಾರನು ಒಪ್ಪಿಕೊಂಡನಾದುದರಿಂದ ರಾಜನು ಆತ ನನ್ನು ತನ್ನಕುಮಾರಿಯ ಅಂತಃಪುರಕ್ಕೆ ಕರೆದುಕೊಂಡುಹೋಗಲು ರಾಜ ಪುತ್ರಿಯು ಮುಖವನ್ನು ಮುಚ್ಚಿಕೊಂಡು ತಂದೆಯನ್ನು ಕುರಿತು ತಾತಾ! ಇದೇನು? ನೋಡಬಾರದವನಾಗಿಯೂ, ಅನ್ಯನಾಗಿಯೂ, ಹೊಸಬನಾ ಗಿಯೂ, ಇರುವ ಈ ಪುರುಷನನ್ನು ನನ್ನಬಳಿಗೆ ನೀನು ಕರೆದುಕೊಂಡು

ಬರಬಹುದೇ ? ಇದನ್ನುನೋಡಿ ನಾನು ಬಹಳವಾಗಿ ಆಶ್ಚರ್ಯಪಟ್ಟಿ ಳಾಗಿರುವೆನೆನಲು, ರಾಜನು ಅಮ್ಮಾ ! ಈತನು ಅನ್ಯನಲ್ಲ. ನಮ್ಮ ಅಸ್ಥಾನದಲ್ಲಿರುವವರಾದ ಅವಿಚಾರರಲ್ಲೊಬ್ಬನು ನಿನ್ನನ್ನುನೋಡಿ ಮದುವೆಮಾಡಿಕೊಳ್ಳುವುದಕ್ಕಾಗಿ ಇಲ್ಲಿಗೆ ಬಂದಿರುವನೆಂದು ನುಡಿದಕೂಡಲೆ ರಾಜ್ಞಿ ತ್ಮಜೆಯು, ತಂದೆಯೆನ್ನುಕುರಿತು, ಅಪ್ಪಾ ! ನಾನು ಮೊದಲೇ ಸುಂದ ರಾಂಗನಾಗಿರುವ ವೀಕ್ಷಣಾಂಗನನ್ನು ನೋಡಿ ಮದುವೆಮಾಡಿಕೊಂಡಿರುವೆ ನಲ್ಲಾ ! ಈಗ ಈತನನ್ನು ಹೇಗೆ ಮದುವೆಮಾಡಿಕೊಳಲಿ ! ಈ ಲುಂಗು ರವನ್ನು ನಾನಾರಿಂದ ಧರಿಸಿಕೊಂಡೆನೋ ಆತನನ್ನಲ್ಲದೆ ಮತ್ತೊಬ್ಬನನ್ನು ಮದುವೆಯಾಗಲಾರೆನೆಂದು ನುಡಿದಳು.

ಇಂತು ವಿನಯೋನ್ವಿತಳಾಗಿ ತಾಳ್ಮೆಯಿಂದ ಮಾತನಾಡುತ್ತಿರುವ ರಾಜಪುತ್ರಿಯೆ ಮಾತುಗಳನ್ನುಕೇಳಿ, ಅವಿಚಾರನು ಈಕೆಗೆ ಹುಚ್ಚು ಹಿಡಿ ದಿರುವುದು ಸುಳ್ಳು. ಯಾವನೋ ಒಬ್ಬ ಸುಂದರಾಂಗನನ್ನು ನೋಡಿ, ಮೋಹಿಸಿರುವಳಾದುದರಿಂದ ಇಂತು ನುಡಿವುತ್ತಿರುವಳಾದುದರಿಂದ ಇದನ್ನು ನಿವಾರಣೆ ಮಾಡುವುದಕ್ಕಾಗಿ ಔಷಧವೂ ಇಲ್ಲವೆಂದರಿತು, ರಾಜನನ್ನು ಕುರಿತು, ಸ್ವಾಮಿ ! ನನ್ನ ಪ್ರಾಣವೇನೋ ನಿಮ್ಮಧೀನವಾಗಿರುವ್ದು. ಆದರೆ ಈ ರಾಜಪುತ್ರಿಯ ರೋಗವನ್ನು ನಿವಾರಣೆಮಾಡುವ ಔಷಧವಾಗಲಿ ಮಂತ್ರಗಳಾಗಲಿ ನನ್ನಲ್ಲಿಲ್ಲವಾದುದರಿಂದ ನಿಮ್ಮ ಇಷ್ಟಾನುಸಾರವಾಗಿ ನಡಸಬಹುದೆಂದು ಬೇಡಿಕೊಳಲು, ರಾಜನು ಅವಿಚಾರನನ್ನುನೋಡಿ ಆತನ ಯೋಗ್ಯತೆಯನ್ನುಕುರಿತು, ನಗುತ್ತ ನಿಷ್ಕಾರಣವಾಗಿ ತನಗೆ ತೊಂದರೆ ಯೆನ್ನಿತ್ತುದರಿಂದ ಬಹಳವಾಗಿ ಕೋಪಿಸಿಕೊಂಡು ಆತನನ್ನು ಖಂಡಿಸಿ ತುಂಡು ತುಂಡು ಮಾಡಿಸಿವನು. ಕೆಲವುದಿನಗಳಾದಮೇಲೆ ರಾಜನು ತನ್ನ ಮಗಳಿಗೆ ಹಿಡಿದಿರುವ ಪಿಶಾಚಿಯೆನ್ನು ತೊಲಗಿಸುವುದರಲ್ಲಿ ತುಂಬ ಆಸಕ್ತ ನಾಗಿರುವುದರಿಂದ ಔಷಧ ಮಂತ್ರ ತಂತ್ರಗಳನ್ನು ತಿಳಿದವರಾರು ಬೇಕಾದ ದರೂ ಬರಬಹುವೆಂದು ತನ್ನ ಪಟ್ಟಣದಲ್ಲಿಯೂ, ದೇಶದಲ್ಲಿರುವ ಮುಖ್ಯ ನಗರಗಳಲ್ಲಿಯೂ, ದಂಡೂರದಮೂಲಕವಾಗಿ ಪ್ರಚಾರ ಪಡಿಸಿದನು. ಆ ವಾರ್ತೆಯನ್ನು ಕೇಳಿವವನಾಗಿ ಮಟ್ಟವೊದಲು ರಾಜನಬಳಿಗೆ ಬಂದವನು ಪ್ಯನು ಗಟ್ಟಿಗನಾದ ಜೋತಿಷ್ಕನೂ, ಮಂತ್ರವಾದಿಯೂ, ಅಗಿದ್ದನು,

ರಾಜನು ಆತನಿಂದ ಅಭಯವನ್ನು ಪಡೆದುಕೊಂಡು, ತನ್ನ ಪ್ರತಿಜ್ಞೆಯನ್ನು ತಿಳಿಸಿ, ಒಬ್ಬಾಬ್ಬನೊಬ್ಬ ಸೇವಕನನ್ನು ಕರೆದು ಈತನನ್ನು ನನ್ನ ಮಗಳ ಅಂತಃಪುರಕ್ಕೆ ಕರೆದುಕೊಂಡುಹೋಗು ಎಂದಾಜ್ಞಾಪಿಸಲು, ಮಂತ್ರವಾದಿಯು ಚಾರಕರೊಡನೆ ಅಂತಃಪುರವನ್ನು ಸೇರಿ, ನಾನಾವಿಧಾರ್ಥಗಳನ್ನು ಹರಡಿ ವಿವಿಧವಾದ ತಟ್ಟೆಗಳಿಂದ ಅಗ್ನಿಪ್ರತಿಷ್ಟೆಯಲ್ಲಿ ಹೋಮೆಯನ್ನುಹಾಕುತ್ತ ಘೂರ್ತ್ರವನ್ನು ಜಪಿಸುತ್ತಿರಲು ರಾಜಪುತ್ರಿಯು, ಚಾರಕನನ್ನು ಕುರಿತು ಇದೇನುಕಾರಣವೆಂದು ಕೇಳಲು, ಸೇವಕನು ಅಮ್ಮಾ! ನಿನ್ನನ್ನು ಹಿಡಿದು ಪೀಡಿಸುತ್ತಿರುವ ಪಿಶಾಚವನ್ನು ಮಂತ್ರಬಲದಿಂದ ಗ್ರಹಿಸಿ ಸಮುದ್ರದಲ್ಲಿ ಹಾಕಲುವುದಕ್ಕಾಗಿ ಈತನು ಪ್ರಯತ್ನಪಡುತ್ತಿರುವನೆಂದುದನ್ನು ಕೇಳಿ ರಾಜಪುತ್ರಿಯು ಆಹಾ! ನನ್ನ ಮಂತ್ರತಂತ್ರಗಳಿಂದ ಫಲವೇನೂ ಇಲ್ಲ ನಾನು ಹುಚ್ಚಿಳ್ಳ ಸ್ವಸ್ಥಳಾಗಿಯೇ ಇರುವೆನು. ಆದರೆ ನನ್ನ ಮೋಹನಾಂಗನಾದ ಪ್ರಾಣಕಾಂತನನ್ನು ಬರಮಾಡಿಕೊಡುವುದಾದರೆ ನಿನ್ನ ಕರಾಟವನ್ನು ಬಿಚ್ಚಿ ಶಕ್ತಿಯನ್ನು ಪ್ರಯೋಗ ಮಾಡು. ಇಲ್ಲವಾದರೆ ಬಂದ ಹಾದಿಯನ್ನು ಹಿಡಿದು ಗಮ್ಮನೆ ಹೊರಟುಹೋಗೆನಲು, ಆತನು ಹಾಗಾದರೆ ನಿನ್ನೀವುನೋರೋಗಕ್ಕೆ ನಿಮ್ಮ ತಂದೆಯೇ ವೈದ್ಯನೆಂದು ಹೇಳಿ ತನ್ನ ಸಾಮಾನುಗಳನ್ನು ಕಟ್ಟಿಕೊಂಡು ಹಿಂದಿರುಗಿಬರುತ್ತಾ, ಆಹಾ! ನಾನು ಈಕೆಯ ಮನೋವ್ಯಾಧಿಯೆನ್ನರಿಯದೆ ವಾಸಿಮಾಡುವೆನೆಂದು ಪ್ರಪಾಣಮಾಡಿ ದುಃಖಸಮುದ್ರದಲ್ಲಿ ಮುಳುಗಿಹೊಸ್ವಿಕೊಂಡೆನಲ್ಲಾ ಎಂದು ಚಿಂತಿಸುತ್ತ ಅಲ್ಲಿಂದ ಹೊರಟನು.

ಒಳಿಕ ಆತನು ರಾಜನಬಳಿಗೆಬಂದು ಚಾರಕನು ನಡೆದ ಸಂಗತಿಯೆನ್ನು ಹೇಳುವುದಕ್ಕೆ ಹೊವಲೀ ಧೈರ್ಯದಿಂದ ರಾಜನನ್ನು ಕುರಿತು, ಸ್ವಾಮಿ! ನಾನು ತಮ್ಮೆದುರಿಗೆ ಬೀಳಿವಂತೆ ನಿಮ್ಮ ಕುಮಾರಿಯಬಳಿಗೆ ಹೋಗಿ ನೋಡುವಲ್ಲಿ ಆಕೆಗೆ ಪಿಶಾಚವಾಗಲೀ, ಹುಚ್ಚಾಗಲೀ, ಹಿಡಿದಿರುವುದು ಸುಳ್ಳಾಗಿ ಕಂಡುಬಂದಿತು. ಅದರೂ ನಾನು ಕೆಲವ ಮಂತ್ರತಂತ್ರಗಳಿಂದ ಯಾವ ಪ್ರಯೋಜನವೂ ಇಲ್ಲವಾಯಿತು. ಪುತ್ರೀನೆಂದರೆ:— ಆಕೆಗುಂಟಾಗಿರುವ ಕಾವೋದ್ರೇಕದಿಂದ ಬಹಳವಾಗಿ ನೊಂದು ಬೆಂದು ಬೆಂಡಾಗಿ, ಸೀದುಹೋಗುತ್ತಿರುವಳು. ಆದುದರಿಂದ ಆ ಭಾವಾವೇಷವನ್ನು

ಮನೋರೋಗವನ್ನು ಹೋಗಲಾಡಿಸಬೇಕಾದರೆ ಆಕೆ ಮೋಹಿಸಿರುವ ಪುರು
ಷನನ್ನು ಕರೆದುತಂದು ಮದುವೆಮಾಡಿ ರೋಗವನ್ನು ನಿವಾರಣೆ ಮಾಡುವ
ವೈದ್ಯರು ನೀನಲ್ಲದೆ ಮತ್ತಾರೂ ಇಲ್ಲವೆಂದು ನುಡಿದ ಮಾತನ್ನು ಕೇಳಿ,
ರಾಜನು ಕೋಪಗೊಂಡು ಆತನ ಪ್ರತ್ಯಕ್ಷವಾಗಿ ಕಡಿದುಹಾಕುವಂತೆ ಆಜ್ಞಾ
ಪಿಸಲು, ಭಟರುಗಳೂ ಕೂಡಲೇ ರಾಜಾಜ್ಞೆಯನ್ನು ನೆರವೇರಿಸಿದರು.
ಸುಲ್ತಾನರೇ ಹೇಳದುದನ್ನೇ ಹೇಳಿ ತಮಗೆ ತೊಂದರೆಕೊಡಲು ನನಗಿಷ್ಟ
ವಾದುದರಿಂದ ಸಂಕ್ಷೇಪವಾಗಿ ಹೇಳುವೆನು. ಈತೆರದಿಂದಲೇ ನೂರೆಂಟು
ಮಂದಿ ವೈದ್ಯರೂ, ಮಂತ್ರವಾದಿಗಳೂ, ರಾಜಪುತ್ರಿಯ ದುಃಖವನ್ನು ನಿವಾ
ರಣೆ ಮಾಡುವುದಕ್ಕಾಗಿ ಬಂದು ಸಾಧ್ಯವಾಗದೆ ಸತ್ತುಹೋಗಲಾಗಿ ಅವರ
ತಲೆಬುರುಡೆಗಳಾ ನಗರದ ದ್ವಾರದಲ್ಲಿ ಸಾಲಾಗಿ ಕಟ್ಟಿರುವುದೆಂದು ನುಡಿದು
ಮುಗಳಿ ಇಂತೆಂದಳು.

ಮರಜವಾನನ ಕಥೆ, ಮತ್ತು ಕಮರಲುಜಮಾನ ಕಥೆಯ

—(ಉಪಸಂಹಾರ)—



ಚೀನಾ ರಾಜಪುತ್ರಿಗೊಬ್ಬಳು ದಾದಿಯುಂಟು. ಆಕೆಗೆ ಮರಜ
ವಾನನೆಂಬೊಬ್ಬ ಮಗನುಂಟು. ಆತನೂ ರಾಜಪುತ್ರಿಯೂಸಹ ಏಕ
ಸ್ತನ್ಯಪಾನದಿಂದ ಬೆಳೆದವರಾಗಿ ತುಂಬಾ ಸ್ನೇಹದಿಂದ ಅನ್ಯೋನ್ಯವಾಗಿ
ಬಾಳುಕೊಂಡಿದ್ದು ನಂತರ ವಯಸ್ಸಾದಮೇಲೆ ಸ್ವಲ್ಪದಿನಗಳು ಆಗಲಿದ್ದು
ಪುನಃ ಮೊದಲಿನಂತೆ ಸ್ನೇಹಯುಕ್ತರಾಗಿ ಅಧಿಕವಾದ ಪ್ರೀತಿ ವಿಶ್ವಾಸಗ
ಳಿಂದ ವರ್ತಿಸುತ್ತಿದ್ದರು. ಆ ಮರಜವಾನನು ತನ್ನ ಬಾಲ್ಯದಿಂದಲೂ
ವಿದ್ಯಾವಂತರನ್ನು ಹುಡುಕಿ ಬಹು ಆಸಕ್ತಿಯಿಂದ ಸದ್ವಿದ್ಯೆಯನ್ನು
ಸಂಪಾದಿಸಲೆಳಸುತ್ತಿದ್ದನಾದುದರಿಂದ ಒಬ್ಬಾಬ್ಬನೊಬ್ಬ ಉತ್ತಮನಾದ
ಗುರುವನ್ನು ಹುಡುಕಿ ನಾನಾದೇಶಗಳನ್ನು ಸಂಚರಿಸಿ, ಆತನ ಶುಶ್ರೂಷೆ
ಯನ್ನು ಮಾಡಿಕೊಂಡು ಸಕಲವಾದ ವಿದ್ಯೆಗಳನ್ನು ಕಲಿತುಕೊಂಡಿದ್ದರೂ
ಲೋಕದಲ್ಲಿ ತನಗಾರೂ ಸಮಾನರಾದವರಿಲ್ಲವೆಂಬ ತ ಚ್ಛೋತಿಷವನ್ನು
ಪ್ರಶ್ನಭಾಗವನ್ನು ಚೆನ್ನಾಗಿ ಕಲಿತುಕೊಂಡು, ವಿದ್ಯಾವಂತರಲ್ಲಿ ಅಗ್ರಣಿ

ಯೊಗಿ ಆನಂದಿಸುತ್ತ ಉತ್ತಮವಾದ ಕೀರ್ತಿಯೆನ್ನು ಸಂಪಾದಿಸಿಕೊಂಡಿದ್ದನು, ಆತನು ಈತೆರದಿಂದ ನಾನಾದೇಶಗಳನ್ನು ಸುತ್ತಿಕೊಂಡು ಆಯಾಸಹೊಂದಿ ಸ್ವದೇಶಕ್ಕೆ ಬರಬೇಕೆಂದು ಹೊರಟು ಚೀನಾರಾಜ್ಯಕ್ಕೆ ಬಂದು ಊರಬಾಗಿಲಲ್ಲಿ ನೇತಾಡುತ್ತಿರುವ ನೂರೆಂಟು ತಲೆಗಳನ್ನು ನೋಡಿ, ಅವುಗಳು ಆತರದಿಂದ ನೇತಾಡುವುದಕ್ಕೆ ಕಾರಣವೇನೆಂದು ವಿಚಾರಿಸಿ, ಮುಖ್ಯವಾಗಿ ತನ್ನ ತಾಯಿಯೆಲ್ಲಿ ಹಾಲುಕುಡಿದು ತನ್ನಸಂಗಡ ಬೆಳೆದವಳಾದ ರಾಜಪುತ್ರಿಯ ಕ್ಷೇಮವನ್ನು ಬಯಸಿ, ಅದನ್ನು ವಿಚಾರಿಸಬೇಕೆಂದು ಬಹಳವಾಗಿ ಕುತೂಹಲಯುಕ್ತನಾಗಿ ತನ್ನ ತಾಯಿಯೆನ್ನುಕುರಿತು, ಕೇಳಿದರೆ ಸರ್ವಪೂ ವಿಶದವಾಗಿ ತಿಳಿಯಲಾಗುವುದೆಂದು ತಿಳಿದು, ತನ್ನವನೆಗೆ ಬಂದು ತಾಯಿಯು ಮನೆಗೆಬರುವವರೆಗೂ ಕಾದುಕೊಂಡಿದ್ದನೆಂದು ಹೇಳಿ, ಬೆಳಗಾದುದನ್ನು ಕಂಡು, ಷಹರಜಾದಿಯು ಕಥೆಯೆನ್ನುನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಮರಳಿ ನುಡಿಯಲಾರಂಭಿಸಿದಳು.

೩೧ನೆಯ ರಾತ್ರಿ ಕಥೆ.

ಸುಲಾತನರೇ ! ರಾಜಪುತ್ರಿಯು ದಾದಿಗೆ ಆರಮನೆಯುಲ್ಲಿ ಬಹಳವಾದ ಕೆಲಸಕಾರ್ಯಗಳಿದ್ದರೂ ಅದನ್ನು ತೊರೆದು ಬಹುಕಾಲದಿಂದಲೂ ಅಗಲಿಹೋಗಿದ್ದ ತನ್ನಕುಮಾರನು, ಈಗತಾನೆ ಬಂದಿರುವನೆಂಬ ವರ್ತಮಾನವನ್ನುಕೇಳಿ, ಬೇಗ ಬಂದು ಆತನನ್ನು ಆಲಿಂಗಿಸಿಕೊಂಡು, ರಾಜಪುತ್ರಿಯ ಸ್ಥಿತಿಯೆನ್ನೂ, ಅವಳ ತಂದೆಯು ಮಾಡಿದ ಕಾರ್ಯವನ್ನೂ, ಆತನು ತನ್ನವುಗಳನ್ನು ಸ್ವಸ್ಥಪಡಿಸುವುದಕ್ಕಾಗಿ ಮಾಡಿದ ಹಲವುಪ್ರಯತ್ನಗಳನ್ನು ವಿವರಿಸಿ ಹೇಳಿದುದನ್ನು ಕೇಳಿ, ಅಮ್ಮಾ ! ಹೇಗಾದರೂಮಾಡಿ ರಾಜನಿಗರಿಯದಂತೆ ನನ್ನನ್ನು ರಾಜಪುತ್ರಿಯಬಳಿಗೆ ಕರೆದುಕೊಂಡು ಹೋಗಲಾಪೆಯಾ? ಎನಲು, ದಾದಿಯು ತನ್ನವುಗನನ್ನು ನೋಡಿ ಅಪ್ಪಾ ! ಈಗ ಈ ವಿಷಯದಲ್ಲಿ ಬಹಳ ತೊಂದರೆ ಇರುವುದರಿಂದ ನಾನು ಖಂಡಿತವಾದ ಉತ್ತರವನ್ನು ಹೇಳಲಾರೆನು. ನಾನು ಇಷ್ಟುಹೊತ್ತಿಗೆ ಬಂದು, ನಿನ್ನ ಪ್ರಶ್ನೆಗೆ ತಕ್ಕ ಉತ್ತರವನ್ನು ಹೇಳುವೆನೆಂದು ನುಡಿದಳು. ನಂತರ ಆಕೆಯು ರಾಜಪುತ್ರಿಯ ಮೈಗಾವಲಿಗಾಗಿ ನಿಂತಿರುವ ಖೋಜಾ ಸರದಾರನನ್ನುಕುರಿತು, ಅವರು ಹೊಸಬರಾಗಿಯೂ, ಚೀನಾದೇಶದ ಸಂಗತಿಯೆನ್ನು

ತಿಳಿದವರಾಗಿಯೂ, ಇರುವುದರಿಂದ ಉಪಾಯವಾಗಿ ತನ್ನ ಕಾರ್ಯವನ್ನು ಸಾಧಿಸಬಹುದೆಂದೂಹಿಸಿ, ಆ ಕಾವಲುಗಾರರಲ್ಲಿ ಮುಖ್ಯನಾದವನನ್ನು ಕುರಿತು ಅಯ್ಯಾ ! ನಾನು ಈ ಕುಮಾರಿಗೆ ಹಾಲನ್ನು ಕೊಟ್ಟು ಸಾಕಿದವಳು. ಇವಳಂತೆ ನನಗೆ ಮತ್ತೊಬ್ಬ ಮಗಳೂ ಉಂಟು. ಆಕೆಗೂ ಈ ರಾಜಪುತ್ರಿಗೂ ತುಂಬಾ ಪ್ರೇಮ ಉಂಟಾಗಿತ್ತು. ಆದರೆ ನನ್ನಮಗಳು ಮದುವೆಯಾಗಿ ಗಂಡನ ಮನೆಯಲ್ಲಿ ಬಾಳುತ್ತಿರುವುದರಿಂದ ಈಗ ರಾಜಪುತ್ರಿಯನ್ನು ನೋಡುವ ಉದ್ದೇಶದಿಂದಲೇ ಈ ಊರಿಗೆ ಬಂದಿರುವಳು. ನೀನು ದಯವಾಡಿ ಯಾರಿಗೂ ತಿಳಿಯದಂತೆ ಆಕೆಯನ್ನು ಒಳಗೆ ಬಿಡಬೇಕೆಂದು ಕೇಳಲು, ಆತನು ಅಮ್ಮಾ ! ನೀನು ಬಹಳವಾಗಿ ಹೇಳತಕ್ಕ ಆಗತ್ಯವೇನೂ ಇಲ್ಲ. ಮುಖ್ಯವಾಗಿ ರಾಜಪುತ್ರನಿಗೆ ಸಂತೋಷವನ್ನುಂಟುಮಾಡುವ ಕೆಲಸವೆಂದು ನನಗೆ ತಿಳಿದುಬಂದರೆ ನಾನು ನಿಸ್ಸಂದೇಹನಾಗಿ ನಾಳೆ ಅರ್ಧರಾತ್ರಿಯಲ್ಲಿ ಬಾಗಿಲು ತೆರೆಯುವೆನೆಂದು ಹೇಳಿದನು.

ಬಳಿಕ ದಾದಿಯು ರಾತ್ರಿಯಾಗುತ್ತಲೇ ತನ್ನಮನೆಗೆ ಹೋಗಿ, ಮಗನಿಗೆ ಬಹು ಚಮತ್ಕಾರವಾಗಿ ಹೆಣ್ಣುವೇಷವನ್ನುಹಾಕಿ ಸಂಗಡ ಕರೆದುಕೊಂಡುಬರಲು ಬಾಗಿಲಲ್ಲಿರುವ ಓಲೀಕಾರನು ಆಕೆಯ ಮಗಳೆಂದು ನಂಬಿ ಅಂತಃಪುರಕ್ಕೆ ಹೋಗಲೀಸಿದನು. ನಂತರ ದಾದಿಯು ಮುಂದಾಗಿ ಹೋಗಿ ರಾಜಪುತ್ರಿಯನ್ನುಕುರಿತು, ಅಮ್ಮಾ ! ಈಗ ನನ್ನೊಡನೆ ಹೆಣ್ಣುವೇಷದಿಂದ ನಿನ್ನಂತಃಪುರವನ್ನು ಸೇರಿದವ್ಯಕ್ತಿಯು ನಿಜವಾಗಿಯೂ ಹೆಂಗಸಲ್ಲ. ಮತ್ತೇನೆಂದರೆ :— ನಿನ್ನೊಡನೆ ಬಾಲ್ಯದಿಂದ ಬೆಳೆದವನಾ ನನ್ನಮಗನು ಬಹುದಿನಗಳಿಂದಲೂ ನಿನ್ನನ್ನು ಅಗಲಿದ್ದುದರಿಂದ ಪ್ರಳಯವಾಗಿ ನಿನ್ನನ್ನುನೋಡಿ ನಿನ್ನ ಕೈಗಳನ್ನು ಮುತ್ತಿಟ್ಟುಕೊಳ್ಳಬೇಕೆಂಬಂದಿರುವನಾದುದರಿಂದ ನೀನು ಅದಕ್ಕೆ ತಕ್ಕಹಾಗೆ ಗೌರವದಿಂದ ಆ ಪುರಸ್ಕರಿಸುವೆಯೆಂದು ನಾನು ನಂಬಿರುವೆನೆಂದು ಹೇಳಲು ರಾಜಪುತ್ರಿ ದಾದಿಯನ್ನುಕುರಿತು, ಏನು ನನ್ನ ಅಣ್ಣನಾದ ಮಂರಜವಾನನ ಆಹಾ ! ಇಷ್ಟುದಿನಗಳೂ ನನ್ನನ್ನು ಬಿಟ್ಟು ಎಲ್ಲಿಹೋಗಿದ್ದ ಅಣ್ಣನನ್ನು ತಂಗಿಯು ಮುಸುಕಿಲ್ಲದೆ ನೋಡುವುದು ನಾವುದರಿಂದ ಈ ಮುಸುಕನ್ನು ತೆಗೆಯೆಂದುಹೇಳಿ, ಆತನನ

ನೀನು ನನ್ನನ್ನೂ ನಿನ್ನ ತಾಯಿಯನ್ನೂ ತೊರೆದು ಬಹಳದಿನಗಳು ತೊಂದರೆಪಡಿಸಿದರೂ ಈಗ ಮರಳಿ ಬಂದುದರಿಂದ ನಾನು ತುಂಬಾ ಸಂತೋಷಿಯೆಂಬ ಕ್ಷಳಾದೆನೆಂದು ನುಡಿದಳು. ಬಳಿಕ ಮರಜವಾನನು ಅಮ್ಮಾ! ತಾವು ತನ್ನ ಸುಖಾಗಮನವನ್ನು ಕುರಿತು, ಬಹಳವಾಗಿ ಸಂತೋಷಿಸಿದುದರಿಂದ ನಾನು ನಿಮ್ಮಲ್ಲಿ ತುಂಬಾ ಕೃತಜ್ಞನಾಗಿರಗವೆನು. ಆದರೆ ನಿಮ್ಮನ್ನು ಈ ದುರವಸ್ಥೆಯನ್ನು ತೊರೆದು ಸಂತೋಷಭಾವದಿಂದಿರುವಾಗ್ಗೆ ನೋಡಿ ಆನಂದಪಡುವ ಸೌಭಾಗ್ಯವು ನನಗುಂಟಾಗಲಿಲ್ಲವಲ್ಲಾ ಎಂದು ವ್ಯಸನ ಪಟ್ಟರೂ, ತಮ್ಮ ದೇಹಸ್ಥಿತಿಯನ್ನು ಕುರಿತು, ಅನುಕೂಲ ಪಡಿಸಿಕೊಡುವಕಾಲವು ಒದಗಿಬಂದುದಕ್ಕಾಗಿ ಸಂತೋಷಿಸುವೆನು. ನಾನಾದರೋ ಬಹು ಪ್ರಯತ್ನದಿಂದ ಲೋಕಯಾತ್ರೆಯನ್ನು ಮಾಡಿ, ನಾನಾವಿಧವಾದ ಮಂತ್ರತಂತ್ರಗಳನ್ನೂ, ಜ್ಯೋತಿಷ ಮತ್ತು ಪ್ರಶ್ನಭಾಗಗಳನ್ನೂ, ಚೆನ್ನಾಗಿ ತಿಳಿದಿರುವೆನೆಂದುಹೇಳಿ, ಅತನು ತನ್ನತಾಯಿಯು ಮೂಲಕವಾಗಿ ರಾಜಕುಮಾರಿಯ ದೇಹಸ್ಥಿತಿಯನ್ನು ಚೆನ್ನಾಗಿ ತಿಳದುಕೊಂಡಿದ್ದನಾದುದರಿಂದ ಅದಕ್ಕೆ ತಕ್ಕ ಸಾಮಾನುಗಳನ್ನೂ ಬಂದು ಪುಸ್ತಕವನ್ನೂ ತೆಗೆದು ಹೊರಗಿಡಲು, ರಾಜಕುಮಾರಿಯು, ಆ ಸೇವಕೇ ಪುತ್ರನನ್ನು ನೋಡಿ, ಅಣ್ಣಾ! ನನ್ನನ್ನು ಹುಚ್ಚಳೆಂದು ತಿಳಿದು ವ್ಯರ್ಥವಾದ ಚಿಕಿತ್ಸೆಗಳನ್ನು ಮಾಡಿದಂಥವರಲ್ಲಿ ನೀನು ಒಬ್ಬನಾದೆಯಾ? ಸ್ವಲ್ಪ ತಾಳು. ನಾನು ಹೇಳುವ ವರ್ತಮಾನವನ್ನು ಕೇಳಿಂದು ತಾನು ಈ ದುರವಸ್ಥೆಯನ್ನು ಕೊಂದುವುದಕ್ಕೆ ಕಾರಣವನ್ನು ತನ್ನ ಉಂಗುರವು ಬದಲಾಗಿರುವ ಸಂಗತಿಯನ್ನು ತಿಳಿಸಿ, ನಡೆದ ವೃತ್ತಾಂತವನ್ನು ಮರೆಮಾಜದೆ ಸ್ಪಷ್ಟವಾಗಿ ಸುಪಡಿಸಿ, ಅಣ್ಣಾ! ಇದಕ್ಕಿಂತ ನನ್ನ ಈ ದುರವಸ್ಥೆಗೆ ಅನ್ಯವಾದ ಗಳಿಲ್ಲವೆಂದು ನುಡಿದಳು.

ಆ ಮಾತುಗಳನ್ನು ಕೇಳಿ, ಅತನು ಆಶ್ಚರ್ಯಯುಕ್ತನಾಗಿ ನಿನವರಿಗೂ ಯಾವಮಾತನ್ನೂ ಆಡದೆ ಸುಮ್ಮನಿದ್ದು ಅಮ್ಮಾ! ರೆಯನ್ನು ನಾನು ನಿವಾರಣೆ ಮಾಡಬಲ್ಲೆನು. ಆದರೆ ನಾನು ಳ ಕೇಳಿದರೆ ನಿಮಗೆ ಸುಖವುಂಟಾಗುವುದರಲ್ಲಿ ಯಾವಸಂ ಇದುವರಿಗೂ ನಾನು ಸಂಚರಿಸಿರುವ ರಾಜ್ಯದಲ್ಲೆಲ್ಲಾ ಾಡಿ ನಿಜವಾದ ಸಂಗತಿಯನ್ನು ತಿಳದುಕೊಂಡುಬಂದ

ಕೂಡಲೀ ನಿನ್ನ ಕೋರಿಕೆಯು ಕೈಗೂಡುವುದು. ಅದುವರಿಗೂ ತಾಳ್ಮೆಯಿಂದಿರಬೇಕೆಂದು ಸಮಾಧಾನಪಡಿಸಿ ಮಾರಜವಾನನು ರಾಜಪುತ್ರಿಯಿಂದ ಅಪ್ಪಣೆಯನ್ನು ಪಡೆದು ಮಾರುದಿನ ಬೆಳಗಿನ ಜಾವದಲ್ಲಿ ಪ್ರಯಾಣೋನ್ಮುಖನಾಗಿ ಹೊರಟನು. ಬಳಿಕ ಆತನು ನಾನಾದೇಶಗಳಲ್ಲಿಯೂ ಸಂಚರಿಸುತ್ತ ಅನೇಕಾನೇಕ ದ್ವೀಪಗಳಲ್ಲಿಯೂ ಚೀನಾ ರಾಜಪುತ್ರಿಯ ಸಂಗತಿಯನ್ನು ಹೊರತು, ಮುತ್ತಾಪ ಪರ್ವಮಾನಪನ್ನು ಕೇಳಿದಿದ್ದರಿಂದ ಆತನು ಆ ರಾಜ್ಯಗಳನ್ನೆಲ್ಲ ಕಳೆದು, ನಾಲ್ಕುತಿಂಗಳಾದಬಳಿಕ ನಾನಾಪ್ರಜೆಗಳಿಂದಯುಕ್ತವಾಗಿಯೂ, ಸಂಪತ್ಸಮೃದ್ಧವಾಗಿಯೂ ಬಹು ಸುಂದರವಾಗಿಯೂ, ಇರುವ ಮಟಾರ್ವಿಂಬ ನಗರವನ್ನು ಸೇರಿ ಅಲ್ಲಿನ ರಾಜಪುತ್ರನು ಚೀನಾ ರಾಜಪುತ್ರಿಯಂತೆ ವಿರಹವ್ಯಥೆಯನ್ನನುಭವಿಸುತ್ತಿರುವ ವಾರ್ತೆಯನ್ನು ಕೇಳಿ, ಸಂತೋಷಯುಕ್ತನಾಗಿ ಆ ರಾಜಪುತ್ರನಿರುವ ಸ್ಥಲವನ್ನು ವಿಚಾರಿಸಿಕೊಂಡು ಆತನಸ್ಸು ಪ್ರತ್ಯಕ್ಷನಾಗಿನೋಡಿ, ಮಾತನಾಡಬೇಕೆಂದು ಊಹಿಸಿ, ಆ ಸ್ಥಲಕ್ಕೆ ಹೋಗುವ ಭೂಮಾರ್ಗವನ್ನು ಕೊರೆದು ಸಮುದ್ರಮಾರ್ಗದಿಂದ ಪ್ರಯಾಣ ಮಾಡುತ್ತಾ, ಚೀನಾ ರಾಜಪುತ್ರಿಯು ವಾಸಮಾಡುವ ಪಟ್ಟಣದ ಕೆಲ್ಲಿಗೆ ಕಾಣಿಸಿರುವವರಿಗೂ ಪ್ರಯಾಣ ಮಾಡಿದನಂತರದಲ್ಲಿ ಹಡಗು ನಡೆಸತಕ್ಕವನ ಅಚಾತುರ್ಯದಿಂದ ಬಂಡೆಗೆ ತಗಲಿ ಹಡಗು ಒಡೆದುಹೋಗಲು, ಆತನು ಕಷ್ಟಪರಂಪರೆಯಾನನಿರುವ ಅದಮಾನೆಯಬಳಿಗೆ ಬಂದಪನಾಗಲು, ಆ ಕಾಲದಲ್ಲಿ ರಾಜನೂ, ಪ್ರಧಾನಮಂತ್ರಿಯೂ, ಅಸ್ಥಾನದಲ್ಲಿರುತ್ತಿದ್ದರು.

ಹೀಗೆ ತನ್ನಬಳಿಗೆಬಂದ ಮಾರಜವಾನನ ಸೌಂದರ್ಯವನ್ನು ನೋಡಿ, ಪ್ರಧಾನಮಂತ್ರಿಯು ತನ್ನ ಚಾರಕರನ್ನು ಬರಹೇಳಿ ಆತನಿಗೆ ತಕ್ಕ ಉಪಚಾರಗಳನ್ನು ಮಾಡುವಂತೆ ಹೇಳಲು, ಆತನು ಬಹು ಸಂತೋಷಯುಕ್ತನಾಗಿ ಅವರು ಮಾಡಿದುಪಚಾರವನ್ನು ಕೈಕೊಂಡು ಜೀರಿಬಟ್ಟೆಗಳನ್ನು ಹಾಕಿಕೊಂಡು ಪ್ರಧಾನಮಂತ್ರಿಯಿಂದ ಆಹೂತನಾಗಿ ಆತನ ಬಳಿಗೆ ಬಂದುಸೇರಲು, ಮಂತ್ರಿವರ್ಯನು ಆತನನ್ನು ಮರ್ಯಾದೆಯಿಂದ ಬರಮಾಡಿಕೊಂಡು ತಾನು ಮಾಡಿದ ಪ್ರಶ್ನೆಗಳಿಗೆಲ್ಲ ಸದುತ್ತರವನ್ನು ಕೊಟ್ಟು ತೃಪ್ತಿಪಡಿಸುತ್ತಿರುವ ಮಾರಜವಾನನಲ್ಲಿ ಬಹಳವಾದ ನಂಬಿಕೆಯನ್ನು ತೋರ್ಪಡಿಸಿ, ಅಯ್ಯಾ! ನೀನು ಸಾಮಾನ್ಯಪುರುಷನಂತೆ

ಕಾಣಬರುವುದಿಲ್ಲ. ನಾನಾದೇಶಗಳನ್ನು ಸುತ್ತಿ, ಅಲ್ಲಲ್ಲಿನ ವರ್ತಮಾನ ವಿಶೇಷಗಳನ್ನು ತಿಳಿದು ಉತ್ತಮವಾದ ವಿದ್ಯೆಯನ್ನು ಸಂಪಾದಿಸಿಕೊಂಡಿರುವೆಯಾದುದರಿಂದ ಬಹುಕಾಲದಿಂದಲೂ ನಮ್ಮದೇಶದ ಜನರನ್ನು ಬಹಳವಾದ ದುಃಖದಿಂದ ನರಳಿಸುತ್ತಿರುವ ಬಬ್ಬಾ ಬ್ಬನೊಬ್ಬ ರೋಗಿಯ ವ್ಯಾಧಿಯನ್ನು ನೀನು ಗುಣಪಡಿಸಬಲ್ಲೆಯಾ ? ಹಾಗೆ ಗುಣಪಡಿಸುವ ಉಪಾಯವನ್ನು ತಿಳಿದಿದ್ದರೆ ನನಗೆ ಹೇಳಿನಲು ಮಾರಜವಾನನು ಅಯ್ಯಾ ! ವ್ಯಾಧಿಯೆರೀತಿಯನ್ನು ತಿಳಿಯಹೇಳದರೆ ನನ್ನಕೈಲಾದತೆರದಿಂದದನ್ನು ನಿವಾರಣೆ ಮಾಡಲಾಪೆನೆಂದು ನುಡಿದು, ಸುಮ್ಮನಿರಲು ಪ್ರಧಾನಮಂತ್ರಿಯು ಕವಿರಲುಜವಾನನ ಸಂಗತಿಯನ್ನೂ, ಆತನ ತಂದೆಯು ಮಕ್ಕಳಿಲ್ಲವೆಂದು ಬಹು ಪ್ರಯತ್ನದಿಂದ ಮಗನನ್ನು ಪಡೆದುದನ್ನು, ಆತನ ವಿದ್ಯಾಸಾಮರ್ಥ್ಯವನ್ನು ಮೊದಲು ವೈರಾಗ್ಯವನು ಹೊಂದಿ, ವಿವಾಹಮಾಡಿಕೊಳ್ಳಲೊಪ್ಪದೆಹೋದುದರಿಂದ ತಂದೆಯು ಆತನನ್ನು ಸೆರೆಹಾಕಿದುದನ್ನು ಸೆರೆಮನೆಯಿಲ್ಲಿ ಆತನು ತ್ರಿಲೋಕಸುಂದರಿಯಾದ ಕನ್ನೆಯನ್ನು ವರಿಸಿ ವಿರಹಪಡುತ್ತಿರುವುದನ್ನು ಸಹ ಮಾರವಾಜದೆ ನಿರೂಪಿಸಿದನು.

ಬಣಿಕ ಮಾರಜವಾನನು ಪ್ರಧಾನಮಂತ್ರಿಯೆ ಮಾತುಗಳನ್ನು ಸಾವಧಾನದಿಂದ ಕೇಳಿ, ತಾನು ಬಹುಪ್ರಯಾಸದಿಂದ ಹುಡುಕಿಕೊಂಡು ಬಂದ ಕಾರ್ಯವು ನೆರವೇರಿತೆಂದು ಬಹಳವಾಗಿ ಸಂತೋಷಿಸಿ, ಚೀನಾ ರಾಜಪುತ್ರಿಯ ತೆರದಿಂದೀತನು ವಿರಹವ್ಯಥೆಯನ್ನನುಭವಿಸುತ್ತಿರುವುದರಿಂದ ಆಕೆಯು ಮೋಹದಿಂದ ನರಳುತ್ತಿರುವುದಕ್ಕೀರಾಜಪುತ್ರನೇ ಕಾರಣನೆಂದು ನಿಸ್ಸಂದೇಹವಾಗಿ ತಿಳಿದುಕೊಂಡು, ಅಯ್ಯಾ ! ರಾಜಪುತ್ರನನ್ನು ನಾನು ಪ್ರತ್ಯಕ್ಷನಾಗಿ ನೋಡಿ, ಮುಂದಿನ ಕಾರ್ಯವನ್ನು ಮಾಡಬೇಕೆಂದಿರುವೆನೆನಲು, ಪ್ರಧಾನಮಂತ್ರಿಯು ಆತನನ್ನು ತನ್ನಹಿಂದೆ ಕರೆದುಕೊಂಡು ರಾಜಪುತ್ರನು ಮಲಗಿಕೊಂಡಿರುವ ಕಿರುಮನೆಯನ್ನು ಸೇರಿದವನಾದನು. ನಿಶ್ಚೇಷ್ಟಿತನಾಗಿ ಕಣ್ಣುಗಳನ್ನು ಮುಚ್ಚಿ ಮಾತನಾಡದೆ ನಿಟ್ಟುಸಿರನ್ನು ಬಿಡುತ್ತಿರುವ ಬಾಲಕನನ್ನು ಆತನಬಳಿಯಲ್ಲಿ ಕುಳಿತು ಮಗನ ದುರವಸ್ಥೆಯನ್ನುಕುರಿತು, ವ್ಯಸನಪಡುತ್ತಿರುವ ಅತನ ತಂದೆಯನ್ನು ನೋಡಿ, ಬಹಳವಾಗಿ ವ್ಯಸನಾಕ್ರಾಂತನಾಗಿ ಆತನ ಸೌಂದರ್ಯಕ್ಕೆ ವೆಚ್ಚಿ

ಇಂತಹ ಸುಂದರಪುರುಷನನ್ನು ಚೀನಾ ರಾಜಪುತ್ರಿಯು ಮೋಹಿಸುವ ದೊಂದು ಆಶ್ಚರ್ಯವಲ್ಲವೆಂದು ತಿಳಿದುಕೊಂಡು ಸಮಯೋಚಿತವಾದ ಬುದ್ಧಿ ಕುಶಲತೆಯುಳ್ಳವನಾದ ಆತನು ರಾಜನನ್ನೂ ರಾಜಪುತ್ರನನ್ನೂ ಮಾತನಾಡಿಸುವ ಉಪಾಯವನ್ನು ಬಗೆದು, ಬಂದಾನೊಂದು ರಸವಾದ ಪದ್ಯವನ್ನು ಹಾಡತೊಡಗಿ, ಆಹಾ ! ಇಂತಹ ಸೌಂದರ್ಯವು ಲೋಕದಲ್ಲೆಲ್ಲಿಯಾದರೂ ಉಂಟೇ ? ಎಂದು ಗಟ್ಟಿಯಾಗಿ ಕೂಗಲು ರಾಜಪುತ್ರನು ಇದೇನು ನನ್ನಬಳಿಯಲ್ಲಿ ಬಂದು ಹೀಗೆ ಭೋರವಾದ ಧ್ವನಿಯಿಂದ ಕೂಗಿದವನಾರು? ಇದಕ್ಕೆ ಕಾರಣವೇನೆಂದು ಕೋಪದಿಂದ ಕಣ್ಣನ್ನು ತೆರೆದು ನೋಡುತ್ತಿರಲು, ಮಾರಜವಾನನು ಮಂತ್ರಿಗೂ ರಾಜಸಿಗೂ ಅರ್ಥವಾಗದಿದ್ದರೂ, ರಾಜಪುತ್ರನಿಗೆ ಚೀನಾ ರಾಜಪುತ್ರಿಯು ವಿರಹವ್ಯಥೆಯನ್ನು ಸಂಪೂರ್ಣವಾಗಿ ತಿಳಿಯಪಡಿಸುವ ಬಂದಾನೊಂದು ಪದ್ಯವನ್ನು ಹಾಡಿದರೆ, ರಾಜಕುಮಾರನು ಅದರ ಅರ್ಥವನ್ನು ಗ್ರಹಿಸಿಕೊಂಡು, ಈತನನ್ನು ಕೇಳಿದರೆ ನನ್ನ ಮೋಹನಾಂಗಿಯಾದ ಕನ್ಯಾಮಣಿಯ ವಿಚಾರವು ತಿಳಿಯಬರುವುದೆಂದು ತಿಳಿದು ಬಹು ಸಂತೋಷದಿಂದ ಭಾವಸೂಚಕವಾದ ಆತನ ದೃಷ್ಟಿಗಳ ಹೊಳಪನ್ನು ನೋಡುತ್ತಿದ್ದನು. ಅಲ್ಲದೆ ಚೀನಾ ರಾಜಪುತ್ರಿಯು ಸಂಗತಿಯೆನ್ನುಕೇಳಿ ತಿಳಿದುಕೊಳ್ಳಬೇಕೆಂಬಭಿಲಾಷೆಯುಳ್ಳವನಾಗಿದ್ದನು ಎಂದು ನುಡಿದ, ಷಹರಜೌದಿಯು ಬೆಳಗಾಗುವವರೆಗೂ ಕಥೆಯನ್ನು ಹೇಳಿ, ನಂತರ ಸುಮ್ಮನಾದಳು. ಮರುದಿನ ಬೆಳಗಿನಜಾವದಲ್ಲಿ ದುರಳಿ ಹೇಳಲಾರಂಭಿಸಿದಳು.

೨೧ನೆಯ ರಾತ್ರಿ ಕಥೆ.

ಸುಲ್ತಾನರೇ ! ಮಾರಜವಾನನು ಈತೆರದಿಂದ ಪದ್ಯವನ್ನೋದಿದಕೂಡಲೇ ರಾಜಪುತ್ರನು ತಂದೆಯನ್ನು ನೋಡಿ, ಅಯ್ಯಾ ! ನೀವು ಸ್ವಲ್ಪಸೊತ್ತು ಹೊರಗಿದ್ದು ಈಗ ಬಂದಿರುವ ಪುರುಷನಸಂಗಡ ನಾನು ಮಾತನಾಡುವುದಕ್ಕೆ ಅವಕಾಶವನ್ನೀಯಬೇಕಂದು ಬೇಡಿಕೊಳ್ಳುವೆನೆಂದು, ಉತ್ಸಾಹದಿಂದಲೂ ಸಂತೋಷದಿಂದಲೂ ನುಡಿಯಲು, ತನ್ನಮಗನು ಈತೆರದಿಂದ ಕ್ಷಣಮಾತ್ರದಲ್ಲಿ ತನ್ನ ಸ್ಥಿತಿಯನ್ನು ಬದಲಾಯಿಸಿಕೊಂಡು ಸಂತೋಷಚಿತ್ತನಾಗಿರುವುದನ್ನು ಕಂಡು ರಾಜನು ಪರಮಾನಂದಭರಿತನಾಗಿ ಮಾರಜವಾನನ ಪ್ರಭಾವದಿಂದ ತನ್ನಮಗನಿಗೆ ಈತೆರದಿಂದ ಸುಖವಾದುದೆಂದರಿತು

ಆತನನ್ನು ಬಹು ಮರ್ಯಾದೆಯಿಂದ ಬರಮಾಡಿ, ತನ್ನ ಪಕ್ಕದಲ್ಲಿ ಕುಳ್ಳ ರಿಸಿಕೊಂಡು, ಅಯ್ಯಾ ! ನೀನು ಯಾರು ? ಎಲ್ಲಿಂದ ಬಂದೆ ? ಎಂದು ನಾನಾವಿಧವಾದ ತೆರದಿಂದ ಉಪಚಾರೋಕ್ತಿಗಳಿಂದ ಕುಶಲಪ್ರಶ್ನೆಗಳನ್ನು ಮಾಡಲು, ಆತನು ಅಯ್ಯಾ ! ನಾನು ಚೀನಾದೇಶದ ವಾಸಸ್ಥನು. ಅಲ್ಲಿಂದ ಬಂದಿರುವೆನೆಂದು ನುಡಿಯಲು ಭಗವಂತನ ದಯೆದಿಂದ ನನ್ನ ಮಗನ ರೋಗ ವನ್ನು ಗುಣಪಡಿಸುವ ಔಷಧಗಳು ನನ್ನಬಳಿಯಲ್ಲಿರುವುದೆಂದು ಸನಗೆ ತಿಳಿ ದುಬಂದಿರುವುದರಿಂದ ನೀನು ಮಾಡಹೋಗುವ ಉಪಕಾರಕ್ಕೆ ತಕ್ಕ ಪ್ರತ್ಯು ಪಕಾರವನ್ನು ಯಾವಜ್ಜೀವವೂ ನಡೆಸುತ್ತಾ, ಕೃತಜ್ಞನಾಗಿರುವೆನೆಂದು ಹೇಳಿ, ಮಾರಜವಾನನು ತನ್ನ ಮಗನೂ, ಧಾರಾಳವಾಗಿ ಮಾತನಾಡುವು ದಕ್ಕೆ ಅವಕಾಶವಾಗುವಂತೆ ತಾನು ಹೊರಗೆಬಂದು, ಮಂತ್ರಿಯೆಸಂಗಡ ಸಂತೋಷದಿಂದ ಮಾತನಾಡುತ್ತಿರಲು, ಮಾರಜವಾನನು ರಾಜಪುತ್ರನ ಬಳಿಗೆಬಂದು ಆತನ ಕಿವಿಯೊಳಿಯಲ್ಲಿ ತನ್ನ ಮುಖವನ್ನಿಟ್ಟು ಗುಟ್ಟಾಗಿ ಓ ! ರಾಜಪುತ್ರಾ ! ನಿನಗಿಂತಹ ವಿರಹವ್ಯಥೆಯನ್ನು ಉಂಟುಮಾಡಿರುವ ಕಲ್ಯಾಣಿಯು ಚೀನಾದೇಶದ ರಾಜಶ್ರೇಷ್ಠನಾದ ಗಯೌರನ ಪ್ರೇಷ್ಠ ಪುತ್ರಿಯಾದ ಬದೌರಳೇಹೊರತು ಮತ್ತಾರೂ ಅಲ್ಲಾ !

ಆಕೆಯು ತನ್ನ ವರ್ತಮಾನವನ್ನು ನನ್ನಸಂಗಡ ಸಂಪೂರ್ಣವಾಗಿ ಹೇಳಿ ದಳು. ನಾನು ನಿನ್ನ ಚರಿತ್ರೆಯನ್ನು ಚೆನ್ನಾಗಿ ಕೇಳಿರುವೆನು. ಆ ಕನ್ಯಾ ಮಣಿಗಾಗಿ ನೀನೆಷ್ಟು ವಿರಹದಿಂದ ವ್ಯಥಿಸುತ್ತಿರುವೆಯೋ ಅದಕ್ಕಿಂತಲೂ ನೂರುಪಾಲು ಅಧಿಕವಾದ ಸಂಕಟವನ್ನು ಆ ರಾಜಪುತ್ರಿಯು ನಿನ್ನಿಬ್ಬ ರಿಗೂ ಸಮಾಗವು ಉಂಟಾದರಾತ್ರಿಯಿಂದಲೂ, ಅನುಭವಿಸುತ್ತಿರುವಳು. ನನಗೆ ತಿಳಿದ ಸರ್ವಸಂಗತಿಯನ್ನು ನಿನ್ನಕೂಡ ಹೇಳಿರುವೆನು. ಅಲ್ಲದೆ ಆ ರಾಜಪುತ್ರಿಯ ವ್ಯಾಧಿಯನ್ನು ಗುಣಪಡಿಸುವುದಕ್ಕಾಗಿಬಂದು ಸೋತು ಹೋದ ಜನರಿಗೆ ಆತನ ತಂದೆಯು ಶಿಕ್ಷೆಯನ್ನು ವಿಧಿಸಿರುವುದರಿಂದವರ ತಲೆಬುರುಡೆಗಳು ಊರಬಾಗಿಲಲ್ಲಿ ನೇತಾಡುತ್ತಿರುವವು. ಪ್ರಯತ್ನಿಸಿದರೂ ಬಂದು ನನ್ನಮಗಳ ಮನೋವ್ಯಾಧಿಯನ್ನು ಪರಿಹರಿಸಬಹುದೆಂದು ಹೇಳಿ ರುವುದರಿಂದ ನಾವು ಸುಲಭವಾಗಿ ಆ ಸ್ಥಲಕ್ಕೆ ಹೋಗಬಹುದು. ಆದುದ ರಿಂದ ನಿನ್ನ ಆರೋಗ್ಯವನ್ನುಕುರಿತು, ಈಗಲೇ ನ್ಯಾಸ್ಥಪಡಿಸುವೆನೆಂದು

ಪಡಿಸುವೆನೆಂದು ಹೇಳಿದಕೂಡಲೆ ರಾಜಕುಮಾರನು ತನ್ನ ಇಷ್ಟಾರ್ಥವು ಬೇಗ ಕೈಗೂಡುವುದೆಂಬ ಭರವಸದಿಂದ, ಉತ್ಸಾಹಯುಕ್ತನಾದನು. ಮೊದಲಿನ ನಿಶ್ಯಕ್ತಿಯೂ, ತೊಂದರೆಗಳೂ, ಹಾಳಾದವು. ರಾಜಪುತ್ರನು ತನ್ನ ತಂದೆಯನ್ನುನೋಡಿ, ಬಟ್ಟೆಗಳನ್ನು ಹಾಕಿಕೊಳ್ಳಬೇಕೆಂದು ನುಡಿದು ಉತ್ತಮವಾದ ವಸ್ತ್ರಗಳನ್ನು ಧರಿಸಿಕೊಂಡು ಕುಳಿತನು. ಆ ಕಾಲದಲ್ಲಿ ತನ್ನ ಮಗನ ಆರೋಗ್ಯಸ್ಥಿತಿಯನ್ನು ಸಂಪೂರ್ಣವಾಗಿ ನೋಡಿದವನಾದ ರಾಜನು ಆತನನ್ನು ಪ್ರೀತಿಯಿಂದಾಲಿಂಗಿಸಿಕೊಂಡು, ಅಯ್ಯಾ! ನೀನು ನನ್ನಪುತ್ರನನ್ನು ಸ್ವಸ್ಥಪಡಿಸುವುದಕ್ಕಾಗಿ ಬಂದ ಸಂಜೀವನವೆಂದು ತಿಳಿದಿರುವೆನು. ಇದರ ಸಂತೋಷವನ್ನು ನನ್ನ ರಾಜ್ಯದಲ್ಲಿ ಪ್ರಸಿದ್ಧಿಪಡಿಸುವುದಕ್ಕಾಗಿ ನಾನು ಮಾಡುವ ಉಪಚಾರಗಳನ್ನು ನೀನು ಸ್ವೀಕರಿಸಬೇಕೆಂದು ನುಡಿದು ತಾನೂ, ತನ್ನ ಸಖಿಕರೂ, ದೇಶದಜನರೂ, ಬಹುದಿನಗಳವರೆಗೂ ಔತನಾದಿಗಳನ್ನು ಮಾಡಿ ಸಂತೋಷಪಡಿಸಿದುದರಿಂದ ಮಾರಜವಾನನ ಕೀರ್ತಿಯು ರಾಜ್ಯದಲ್ಲೆಲ್ಲಾ ವ್ಯಾಪಿಸಿತು.

ಅದುವರಿಗೆ ನಿದ್ರಾಹಾರಗಳನ್ನು ತೊರೆದು ಪ್ರಯಾಸಪಡುತ್ತಿದ್ದ ರಾಜಪುತ್ರನು ತನ್ನ ಮನೋವ್ಯಥೆಯು ನಿವಾರಣೆಯಾದುದರಿಂದ ಸಂಪೂರ್ಣವಾಗಿ ನಿದ್ರಾಹಾರಾದಿಗಳನ್ನು ಗ್ರಹಿಸಿ, ಸಂಪೂರ್ಣಶಕ್ತಿ ಸಾಮರ್ಥ್ಯಗಳುಳ್ಳವನಾಗಿ ಮಾರಜವಾನನಬಳಿಗೆ ಬಂದು ಅಯ್ಯಾ! ನೀನು ಹೇಳಿದ ವಾಗ್ದಾನವನ್ನು ನೆರವೇರಿಸುವುದಕೆ ಂದು ಉತ್ತಮವಾದ ಸಮಯವಾಗಿರುವುದು. ಆದುದರಿಂದ ಶೀಘ್ರವಾಗಿ ಹೊರಟು ನನ್ನ ಮನೋಹರಿಯನ್ನು ತೋರಿಸಿ, ನನ್ನನ್ನು ಸಂತೋಷಪಡಿಸುವನಾಗು. ಆದರೆ ನಾವಿಬ್ಬರೂ ಹೊರಡುವುದಕ್ಕೆ ಒಂದಾನೊಂದು ನಿರ್ಬಂಧ ಉಂಟು. ಅದೇನೆಂದರೆ:— ವೃದ್ಧನಾದ ನನ್ನತಂದೆಯು ನನ್ನನ್ನು ಅಗಲಿರಲು ಒಪ್ಪದಿರುವುದರಿಂದ ಇದಕ್ಕೇನು ಉಪಾಯವನ್ನು ಮಾಡಬೇಕೋ ತಿಳಿಯದಲ್ಲಾ ಎಂದು ಗಟ್ಟಿಯಾಗಿ ಅಳಲಾರಂಭಿಸಿದನು. ಅದನ್ನು ನೋಡಿ ಮಾರಜವಾನನು, ಅಯ್ಯಾ! ಈ ವಿಷಯದಲ್ಲಿ ತೊಂದರೆ ಬರುವುದೆಂದು ನನಗೆ ಮೊದಲೇ ತಿಳಿದಿದ್ದಿತು. ಆದರೆ ಚೀನಾ ರಾಜಪುತ್ರಿಯು ನಾನು ಅಣ್ಣತಂಗಿಯರಂತೆ ಚಿಕ್ಕಂದಿನಿಂದಲೂ ಬಹಳವಾದ ಪ್ರೀತಿವಾತ್ಸಲ್ಯಗಳನ್ನು ಹೊಂದಿ, ಬಿಳಿದಪರ ದುದರಿಂದ ನನ್ನಲ್ಲಿ ವೈರಾಗ್ಯವನ್ನು ತೊರೆದು ಮನಃಪೂರ್ವಕವಾಗಿ

ನಿಮ್ಮಬ್ಬರಿಗೂ ಆನಂದವನ್ನುಂಟುಮಾಡಬೇಕೆಂಬ ಕುತೂಹಲದಿಂದಲೇ ಬಹು ಪ್ರಯತ್ನವನ್ನುಹೊಂದಿದರೂ, ಹಿಡಿದ ಕಾರ್ಯವನ್ನು ಕೈಗೂಡಿಸದೆ ಇರುವುದರಿಂದ ರಾಜಪುತ್ರಿಗೆ ದ್ರೋಹ ಮಾಡಿದಂತಾಗುವುದು. ಆದರೆ ನಾನು ಹೇಳುವ ಉಪಾಯವನ್ನು ಕೇಳಿ, ಅದರಂತೆ ನಡೆದುಕೊಂಡರೆ ನಿನ್ನ ಕಾರ್ಯವು ಕೈಗೂಡುವದರಲ್ಲಾವಸಂದೇಹವೂ ಇಲ್ಲ. ನೀನು ಬಹುದಿನಗಳಿಂದಲೂ ಹೊರಗೆ ಸಂಚಾರ ಮಾಡಿದವನಲ್ಲವಾದುದರಿಂದ ಎರಡು ಮೂರು ದಿನಗಳವರಿಗೆ ನನ್ನೊಡನೆ ಸವಾರಿಹೋಗಿ ಬರುವೆನೆಂದು ನೀನು ಕೇಳಿಕೊಂಡರೆ ನಿಮ್ಮ ತಂದೆಯು ಎಂದಿಗೂ ಸಮ್ಮತಿಪಡದಿರಲಾರನು.

ಬಳಿಕ ಬಹುವೇಗವಾಗಿ ನಡೆಯುವ ಎರಡು ಕುದುರೆಗಳನ್ನು ನೀನು ಸಿದ್ಧಮಾಡಿಕೊಂಡರೆ ನಾನು ಮುಂದಿನ ಕೆಲಸವನ್ನು ನೆರವೇರಿಸುವನೆಂದು ಹೇಳಲು, ಕಮರಲುಜವಾನನು ತನ್ನತಂದೆಯಬಳಿಗೆ ಹೋಗಿ ತಾನು ಬೇಟೆಗಾಗಿ ಹೊರಡಬೇಕೆಂದು ಕೇಳಿಕೊಳ್ಳಲು ಅತನು ಮಗುವೇ! ನೀನು ಬಹಳವಾಗಿ ಅಸ್ವಸ್ಥನಾಗಿದ್ದಿಯಾದುದರಿಂದ ಒಂದು ರಾತ್ರಿಗಿಂತಲೂ ಹೆಚ್ಚಾಗಿ ಹೊರಗೆಸಂಚಾರ ಮಾಡಬೇಡ. ನನ್ನ ಲಾಯದಲ್ಲಿರುವ ಉತ್ತಮವಾದ ಕುದುರೆಗಳನ್ನು ತೆಗೆದುಕೊಂಡು, ಮರಜವಾನನನ್ನು ಸಂಗಡ ಕರೆದುಕೊಂಡುಹೋಗಿಬಾರೆಂದು ಹೇಳಲು, ರಾಜಪುತ್ರನೂ ಮರಜವಾನನೂಸಹ ಕುದುರೆಗಳನ್ನುಹತ್ತಿ, ಸಾಯಂಕಾಲವಾಗುವವರೆಗೂ ತಮ್ಮ ಸಂಗಡ ಬರುತ್ತಿರುವ ಕಾವಲುಗಾರರಿಗೆ ತಮ್ಮಭಿಪ್ರಾಯವು ತಿಳಿಯದಂತೆ ಗೂಢವಾಗಿದ್ದು ಸಂಜೆಯಾಗುತ್ತಲೇ ಒಂದಾನೊಂದು ಛತ್ರದಲ್ಲಿ ಮಲಗಿನಿದ್ರಿಸಿ, ನಂತರ ಎಚ್ಚರಗೊಂಡು ಆಹಾರವನ್ನು ತೆಗೆದುಕೊಂಡು ಕುದುರೆಯೊಳುಗಳನ್ನು ಏಳಿಸದೆ ತಾನು ಮರಜವಾನನು ಒಂದೊಂದು ಕುದುರೆಗಳ ಮೇಲೆ ಕುಳಿತು, ಮತ್ತೊಂದು ಪ್ರಯಾಣೋಪಯೋಗಿಯಾವ ಕುದುರೆಯನ್ನು ಸಂಗಡ ತೆಗೆದುಕೊಂಡು ಜೊಳಗಾಗುವವರೆಗೂ ಪ್ರಯಾಣ ಮಾಡಿ ಒಂದಾನೊಂದು ಅಡವಿಯಲ್ಲಿ ದೂರಿ, ನಾಲ್ಕು ದಾರಿಗಳು ಸೇರಿರುವ ಸ್ಥಳವನ್ನು ನೋಡಿ, ಮರಜವಾನನು ಸ್ವಲ್ಪಹೊತ್ತು ನಿಲ್ಲುವಂತೆ ರಾಜಕುಮಾರನಿಗೆ ಹೇಳಿ ತಾನು ತೆಗೆದುಕೊಂಡುಬಂದಿದ್ದ ಕುದುರೆಯ ಕತ್ತಿಗೆಯನ್ನು ಕೊಯ್ದು ಮರಜವಾನನು ರಾಜಪುತ್ರನ ಬಟ್ಟೆಗಳಿಗೆಲ್ಲ

ರಕ್ತವನ್ನು ಅದ್ದಿ ಅದನ್ನು ಆ ಸ್ಥಲದಲ್ಲಿ ಬಿಸಾಡಿದನು. ಅದನ್ನುನೋಡಿ ರಾಜಪುತ್ರನು ಮಿತ್ರನೇ ! ಇದೇನು ? ಹೀಗೆ ಮಾಡುವುದಕ್ಕೆ ಕಾರಣ ವೇನೆಂದು ಕೇಳಲು, ಅಯ್ಯಾ ! ನಿಮ್ಮ ತಂದೆಯವರು ನಿಮ್ಮನ್ನು ಕಾಣದೆ ಹುಡುಕಿಸಿದಾಗ ಈ ರಕ್ತವನ್ನೂ, ವಸ್ತ್ರಗಳನ್ನೂ, ಸತ್ತಿರುವ ಕುದುರೆಯನ್ನು, ನೋಡಿ ನಿನ್ನನ್ನು ಕಾಡುಮೃಗವು ತಿಂದುಹಾಕಿತೆಂದು ಹುಡುಕುವುದನ್ನು ಬಿಡುವನು. ನಂತರ ನಮ್ಮ ಕಾರ್ಯವು ಸಿದ್ಧಿಸು ವುದು. ಪ್ರಕೃತದಲ್ಲಿ ವೃದ್ಧನಾದ ನಿಮ್ಮತಂದೆಗೆ ಮಗನನ್ನು ಕಳೆದು ಕೊಂಡೆನೆಂಬ ದುಃಖವು ಪ್ರಾಪ್ತನಾದರೂ, ನೀವು ಬಯಸಿರುವ ವರ್ತಮಾನವನ್ನು ಕೇಳಿದಕೂಡಲೇ ಮಹದಾನಂದ ಉಂಟಾಗುವುದರಲ್ಲಿ ಸಂದೇಹ ಉಂಟೇ ಎಂದು ನುಡಿಯಲು, ರಾಜಪುತ್ರನು ಅಯ್ಯಾ ! ಬುದ್ಧಿಶಾಲಿ ಯಾದ ನಿನ್ನ ಕಾರ್ಯಗಳನ್ನುನೋಡಿ ನಾನು ಬಹಳವಾಗಿ ಆಶ್ಚರ್ಯ ಯುಕ್ತನಾದರೂ, ಈಗ ನೀನುಮಾಡಿದ ಉಪಾಯವೂಸಹ ನನಗೊಂದು ದೊಡ್ಡ ಉಪಕಾರವಾಯಿತೆ ದು ನೆನಸುವೆನೆಂದನು.

ಬಳಿಕ ಅವರಿಬ್ಬರೂ, ಬಹುದಿನಗಳು ನೆಲದಮೇಲೂ, ಸಮುದ್ರದಮೇಲೂ, ಪ್ರಯಾಣಮಾಡಿ ನಾನಾದೇಶಗಳನ್ನು ಸುತ್ತಿ ನಿರಾತಂಕವಾಗಿ ಚೀನಾ ರಾಜ್ಯವನ್ನು ಸೇರಿದರು. ಮರಜವಾನನು ತಾನು ಬೇರೆ ಛತ್ರದಲ್ಲಿ ತನ್ನ ಮಿತ್ರನೊಡನೆ ಮೂರುದಿನಗಳು ವಾಸಮಾಡಿಕೊಂಡಿದ್ದು ನಂತರ ಕಮರಲುಜಮಾನನಿಗೆ ಜೋಯಿಸರು ಹಾಕಿಕೊಳ್ಳುವ ಉಪಾಯವನ್ನು ಹೊಲಿಸಿ, ನಾಲ್ಕನೆಯದಿನದಲ್ಲಿ ಉಭಯತ್ರರೂ ಸ್ನಾನಾದಿಗಳನ್ನು ತೀರಿಸಿ ಕೊಂಡಬಳಿಕ ರಾಜಪುತ್ರನಿಗೆ ಜೋಯಿಸರ ಉಡುಪನ್ನುಹಾಗಿ ಚೀನಾ ರಾಜನ ಅರಮನೆಯವರೆಗೂ ತಂದುಬಿಟ್ಟು ತಾನುಬಂದಿರುವ ವರ್ತಮಾನವನ್ನು ತನ್ನತಾಯಿಗೆ ತಿಳಿಸಿ, ನಂತರ ಆಕೆಯಕೂಡ ತಾನು ನಡೆಸಿಕೊಂಡುಬಂದಿರುವ ರಾಜಪುತ್ರನ ವಾರ್ತೆಯನ್ನು ಹೇಳುವುದಕ್ಕಾಗಿ ರಾಜಪುತ್ರಿಯಬಳಿಗೆ ಹೊರಟನು. ಇಂತೆಂದು ನುಡಿದು ಪಹರಜಾದಿಯು ಬೆಳಗಾದಕೂಡಲೆ ಕಥೆಯನ್ನುನಿಲ್ಲಿಸಿ, ಮರಳಿ ಮರುದಿನ ಬೆಳಗಿನ ಜಾವದಲ್ಲಿ ಹೇಳಲಾರಂಭಿಸಿದಳು.

೨೨೨ ನೆಯ ರಾತ್ರಿ ಕಥೆ.

ಕಮರಲುಜಮಾನನು ಮೊದಲೇ ತನ್ನ ಮಿತ್ರನಾದ ಮರಜವಾನನಿಂದ ಬೋಧಿತನಾಗಿದ್ದುದರಿಂದ ಧೈರ್ಯವಾಗಿ ಬಂದು ಮರುದಿನಬೆಳಿಗ್ಗೆ ರಾಜನ ಅರಮನೆಯಮುಂದೆ ನಿಂತು, ಜ್ಯೋತಿಷ್ಕನು ಮಾತನಾಡುವಂತೆ ಮಾತನಾಡುತ್ತ ಅಲ್ಲಿರುವ ದ್ವಾರಪಾಲಕರಿಗೆ ತಿಳಿಯಬರುವಂತೆ ಅಯ್ಯಾ! ನಾನೊಬ್ಬ ಜ್ಯೋತಿಷ್ಕನು. ಚೀನಾ ರಾಜನಾದ ಗಯೊರನ ಮಗಳಾದ ಬದೌರ ಎಂಬ ರಾಜಕುಮಾರಿಯ ದೇಹಸ್ಥಿತಿಯನ್ನು ಗುಣಪಡಿಸುವುದಕ್ಕಾಗಿ ಬಂದಿರುವೆನೆಂದು ಗಟ್ಟಿಯಾಗಿ ಕೂಗಿಕೊಂಡನು. ಕೂಡಲೇ ರಾಜಭಟರು ಸುತ್ತಿಕೊಂಡು ಆತನನ್ನು ಹಿಡಿದುಕೊಂಡರು. ಏಕೆಂದರೆ:— ಇದುವರೆಗೂ ನೂರಾರುಮಂದಿ ಜ್ಯೋತಿಷ್ಕರು ಬಂದು ತಮ್ಮ ಪ್ರಯತ್ನಗಳೆಲ್ಲವೂ ನಿಷ್ಫಲವಾದುದರಿಂದ ಪ್ರಾಣಗಳನ್ನು ಒಪ್ಪಿಸಿ ಹೊರಟು ಹೋದರಾದುದರಿಂದ ಈಗ ಬಂದಿರುವ ಜ್ಯೋತಿಷ್ಕನನ್ನು ಬಿಟ್ಟಬಿಟ್ಟರೆ ರಾಜನಿಗೆ ಕೋಪಬರುವುದೆಂದು ತಿಳಿದು ಬಹು ಜಾಗರೂಕರಾಗಿ ಆತನನ್ನು ಹಿಡಿದುಕೊಂಡು ಸೌಂದರ್ಯವನ್ನೂ ಯೌವನವನ್ನೂ ನೋಡಿ, ಅಯ್ಯೋ! ಇಂತಹ ಸುಂದರನಾದ ನೀನು ಅಸಾಧ್ಯವಾದ ಕಾರ್ಯವನ್ನು ಕುರಿತು, ಪ್ರಾಣವನ್ನು ನೀಗಿಕೊಳ್ಳುವುದಕ್ಕಾಗಿ ಬಂದಿರುವೆಯಲ್ಲಾ! ನಿನ್ನನ್ನು ನೋಡಿದರೆ ನಮ್ಮಗಳಿಗೆ ಬಹಳವಾಗಿ ವ್ಯಸನ ಉಂಟಾಗುವುದು.

ಆದುದರಿಂದ ಈ ಪ್ರಯತ್ನವನ್ನು ಬಿಡಬೇಕೆಂದು ಬಹಳವಾಗಿ ಹೇಳಿದರೂ, ಕಮರಲುಜಮಾನನು ಅವರ ಮಾತುಗಳನ್ನು ಕೇಳದೆ, ಅಯ್ಯಾ! ನಾನು ಜ್ಯೋತಿಷ್ಕನು. ರಾಜಪುತ್ರಿಯ ರೋಗವನ್ನು ವಾಸಿಮಾಡಿ ಆಕೆಯನ್ನು ಮದುವೆಯಾಗುವೆನು. ಇಲ್ಲವಾದರೆ ಆಕೆಯ ತಂದೆಯ ಆಜ್ಞೆಯಂತೆ ಸಾರವಾಗಿ ನನ್ನ ಪ್ರಾಣವನ್ನೊಪ್ಪಿಸುವೆನೆಂದು ಗಟ್ಟಿಯಾಗಿ ಕೂಗಿದರೂ, ಅಲ್ಲಿದ್ದ ಕಾವಲುಗಾರರು ಬಹುಪ್ರಯತ್ನದಿಂದ ಆತನ ಪ್ರಾಣಗಳನ್ನುಳಿಸಬೇಕೆಂದು ಒಗೆದು ತಾವು ಗಟ್ಟಿಯಾಗಿ ಕೂಗಿಕೊಂಡರೂ, ಆಗದೆ ರಾಜಪುತ್ರನು ಮೂರನೆಸಾರಿ ಹೇಳಲಿನಂತೆ ಕೂಗಿದುದರಿಂದ ರಾಜಭಟರು ಅಯ್ಯೋ! ಆತನ ಅದೃಷ್ಟಕ್ಕೆ ನಾವೇನುಮಾಡೋಣ! ದೈವಯತ್ನ ಇದ್ದಹಾಗೆ ಆಗುವುದೆಂದು ಸುಮ್ಮನಾದರು. ಇದೆಲ್ಲವನ್ನು ನೋಡುತ್ತಿದ್ದ

ಪ್ರಧಾನಮಂತ್ರಿಯು ಥಟ್ಟನೆ ಆತನಬಳಿಗೆಬಂದು, ಕಮರಲುಜಮಾನ ನನ್ನು ಕರೆದುಕೊಂಡುಹೋಗಿ ರಾಜನಬಳಿಯಲ್ಲಿ ಬಿಟ್ಟನು. ರಾಜನನ್ನು ನೋಡಿದಕೂಡಲೇ ಆತನು ಬಹು ನಮ್ರನಾಗಿ ವಿನಯದಿಂದ ನಮಸ್ಕರಿಸಲು, ರಾಜನು ಕಮರಲುಜಮಾನನ ರೂಪಯೌವನ ಲಾವಣ್ಯಗಳನ್ನು ನೋಡಿ, ಇಂತಹ ಪುರುಷನು ಅಸಾಧ್ಯವಾದ ಈ ಕಾರ್ಯದಲ್ಲಿ ಪ್ರವರ್ತಿಸಿ ಪನಲ್ಲ ಎಂದು ಚಿಂತಿಸಿ, ಆದರೂ ಮೊದಲುಬಂದವರೆಲ್ಲರಿಗಿಂತಲೂ, ಈತನು ಬಹು ದೊಡ್ಡವನಾಗಿ ಕಾಣಬಂದುದರಿಂದ ಆತನನ್ನು ಬಹು ಪರ್ಯಾದೆಯಿಂದ ತನ್ನ ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಕುಮಾರಕಾ ; ನೀನು ಅಸಾಧ್ಯವಾದ ಕಾರ್ಯವನ್ನುಕುರಿತು, ಪ್ರಯತ್ನಮಾಡಿಸುವುದರಿಂದ ನನಗೆ ಭಯ ಉಂಟಾಗುವುದು. ಆದರೆ ನಿನ್ನ ವ್ಯಾಪಾರವನ್ನು ನೋಡಿದರೆ ಭಗವಂತನ ದಯೆದಿಂದ ನೀನು ಅದನ್ನು ಸಾಧಿಸಬಹುದೆಂದು ತೋರುವುದು. ಹಾಗಾದರೆ ನನ್ನಮಗಳನ್ನು ನಿನಿಗೆಕೊಟ್ಟು ಮದುವೆಮಾಡುವೆನು. ನಿನ್ನಂತಹ ಸುಂದರಾಂಗನಿಗೆ ಆಕೆಯನ್ನು ಕೊಡುವುದೊಂದತಿಶಯವಲ್ಲ.

ಆದರೆ ಇಂತಹ ಕಾರ್ಯವನ್ನು ನೀನು ಮಾಡಲಾರದೆಹೋದರೆ, ನಿಷ್ಕಾರಣದಿಂದ ನಿನ್ನ ಯೌವನವನ್ನಾಗಲೀ, ರೂಪವನ್ನಾಗಲೀ, ಗುಣವನ್ನಾಗಲೀ, ನೋಡದೆ ಶಿರಚ್ಛೇದನವನ್ನು ಮಾಡಿಬಿಡುವೆನೆಂದು ನುಡಿಯಲು, ರಾಜಪುತ್ರನು ಬಹು ನಮ್ರನಾಗಿ ರಾಜನನ್ನುನೋಡಿ, ಅಯ್ಯಾ! ನೀನು ನನ್ನಲ್ಲಿ ಇಷ್ಟೊಂದು ಕರುಣದಿಂದ ಮಾತನಾಡಿದುದಕ್ಕಾಗಿ ಬಹಳವಾಗಿ ಸಂತೋಷಿಸುತ್ತಿರುವೆನು. ಅಲ್ಲದೆ ನಿಮಗೆ ಮನಃಪೂರ್ವಕವಾಗಿ ಮುದನೆಗಳನ್ನು ಆಚರಿಸುವೆನು. ನನ್ನದೇಶವು ಇಲ್ಲಿಗೆ ಬಹು ದೂರದಲ್ಲಿರುವುದು. ಅದರ ಹೆಸರನ್ನುಕೂಡ ತಾವು ಕೇಳರಲಾರಿರಿ. ಅಷ್ಟುದೂರದಲ್ಲಿರುವ ನನ್ನದೇಶದಿಂದ ಹೊರಟು, ನಾನಾದೇಶಗಳನ್ನು ಸುತ್ತಿ ಅನೇಕವಾದ ಕಷ್ಟನಷ್ಟಗಳನ್ನು ಅನುಭವಿಸಿ ಬಂದಿರುವೆನಾದುದರಿಂದ ನಾನು ನಿಮ್ಮಗಳ ಆರೋಗ್ಯಭಾಗ್ಯವನ್ನು ಕಾಪಾಡಿ ಆ ಭಾಗ್ಯಲಕ್ಷ್ಮಿಯನ್ನು ಮದುವೆಯಾಗಬೇಕೆಂದು ಬಯಸಿ, ಅಂತಹ ನೂತನವಾದ ಒಂದು ಶಕ್ತಿಯನ್ನು ಸಂಪಾದಿಸಿಕೊಂಡು ಬಂದಿರುವೆನು. ಆದರೆ ನಮ್ಮನ್ನುವೇಲೆ ತಮಗಿಷ್ಟೊಂದು ಕರುಣ ಉಂಟಾಗಿರುವುದರಿಂದ ಪ್ರತ್ಯಕ್ಷವಾಗಿ ನನ್ನ ವಿಷಯ

ಚಾತುರ್ಯವನ್ನು ನೋಡಿ ಸಂತೋಷಪಡುವಂತೆ ಮಾತಬೇಕಲ್ಲದೆ ಸುಮ್ಮನೆ ಕಾಲಹರಣ ಮಾಡಬೇಡಿರೆಂದು ಬೇಡಿಕೊಂಡನು. ನಂತರ ರಾಜನು ತನ್ನ ಪುಗಳ ಅಂತಃಪುರದ ಕಾಂಚುಲುಗಾರನನ್ನು ಕರೆದು ಈತನನ್ನು ರಾಜಕುಮಾರಿಯ ಅಂತಃಪುರಕ್ಕೆ ಕರೆದುಕೊಂಡು ಹೋಗೆಂದು ನುಡಿದು, ರಾಜಪುತ್ರನನ್ನು ನೋಡಿ ಅಯ್ಯಾ ! ಈಗಲಾದರೂ ಚೆನ್ನಾಗಿ ಯೋಚಿಸು. ಇನ್ನು ವಿಂಚಿ ಹೋಗಲಿಲ್ಲ. ನಿನಗನುವಾನವಾಗಿದ್ದರೆ ಈಗಲೂ ನೀನು ಸ್ವಸ್ಥವಾಗಿ ಹಿಂದಿರುಗಿ ಹೊರಟುಹೋಗಬಹುದೆನಲು, ಕಮರಲುಜಮಾನನು ಆತನ ಮಾತುಗಳನ್ನು ಲಕ್ಷ್ಯನಾಡದೆ ಬಹುಸಂತೋಷದಿಂದ ನಲಿಯುತ್ತ ಧೈರ್ಯಶಾಲಿಯಾಗಿ ಆ ಚಾರಕನಹಿಂದೆಯೇ ಹೋದನು.

ಅವರಿಬ್ಬರೂ ಸ್ವಲ್ಪದೂರದ ವರೆಗೂ ನಡೆದುಹೋದಕೂಡಲೇ ರಾಜಪುತ್ರಿಯ ಅಂತಃಪುರವು ಕಾಣಬಂದುದರಿಂದ ತನಗೆ ಅತ್ಯಂತವಾದ ಮೋಹವನ್ನುಂಟುಮಾಡಿ ನಾನಾದುರವಸ್ಥೆಗಳನ್ನುಂಟುಮಾಡುವುದಕ್ಕೆ ಕಾರಣಭೂತಳಾದ ಸ್ತ್ರೀರತ್ನವಿರುವ ಅಂತಃಪುರವನ್ನು ನೋಡಿ, ಚಾರಕನನ್ನು ಲಕ್ಷ್ಯವಾಡದೆ ಮುಂದರಿದು ಹೋಗುತ್ತಿರಲು, ಚಾರಕನು ತಾನು ಮುಂದೆ ಓಡಿಹೋಗಿ ಆತನನ್ನು ಹಿಂದು, ಅಯ್ಯಾ ! ನಿಲ್ಲು ? ಸ್ವಲ್ಪ ತಾಳು ? ಏನು ನಾನಿಲ್ಲದೆ ನೀನು ಇಷ್ಟೊಂದು ಜಾಗ್ರತೆಯಿಂದ ಹೋಗುತ್ತಿರುವೆಯಲ್ಲಾ ! ಆಹಾ ! ನಿನಗಿಂತಲೂ ಮೊದಲುಬಂದ ನಾನೂರುಜನ ಜ್ಯೋತಿಷ್ಕರು ನಿನ್ನಂತೆ ವೇಗವಾಗಿ ಓಡಿಹೋಗಲಿಲ್ಲವಲ್ಲಾ ಎನಲು, ಕಮರಲುಜಮಾನನು, ಆತನನ್ನು ನೋಡಿ ಅಯ್ಯಾ ! ನಾನು ಮೊದಲು ಬಂದವರಂತೆ ಪ್ರಜ್ಞಾಶೂನ್ಯನಲ್ಲಾ ! ರೋಗವನ್ನು ವಾಸಿಮಾಡದಿದ್ದರೆ ತವುಗೆ ಮರಣ ಉಂಟಾಗುವುದಲ್ಲಾ ಎಂಬ ಭಯದಿಂದ ಅವರೆಲ್ಲರೂ, ಮೆಲ್ಲಗೆ ನಡೆಯುತ್ತಿದ್ದರು. ನಾನಾದರೋ ಭಗವಂತನ ದಯದಿಂದ ಖಂಡಿತವಾಗಿಯೂ ನಿಮ್ಮ ರಾಜಪುತ್ರಿಯ ರೋಗವನ್ನು ಗುಣಪಡಿಸಿ, ಆಕೆಯನ್ನು ಮದುವೆಯಾಗುವೆನು ನೋಡು ? ಹಾಗಾದರೆ ನನ್ನ ಪರಾಕ್ರಮವು ನಿನಗೆ ತಿಳಿಯುವುದು. ನಾನು ಗರ್ವದಿಂದಲಾಗಲೀ, ಮೊಚ್ಚಿಗೆಗಾಗಲೀ, ಬಾಲ್ಯವಸ್ಥೆಯಮರುಳಿನಿಂದಾಗಲೀ, ಯೌವನದಿಂದುಂಟಾದ ಮದದಿಂದಲಾಗಲೀ, ಹೀಗೆ ಡಂಭವನ್ನು ಹೇಳಕೊಳ್ಳಲಿಲ್ಲ. ಖಂಡಿತವಾಗಿ ನಿಮ್ಮ ರಾಜಪುತ್ರಿಯ

ರೋಗವನ್ನು ಗುಣಪಡಿಸಿ ನಾನು ಅಕೆಯನ್ನು ಮದುವೆಯಾಗುವುದೇ ನಿಜ. ಈ ಮಾತುಗಳನ್ನು ನೀನು ನಂಬಿಕೊಂಡಿರೆನಲು, ಅಯ್ಯಾ! ಹಾಗಾದರೆ ನನಗೆ ತುಂಬಾ ಸಂತೋಷವಾಗುವುದು. ನಮ್ಮ ರಾಜಾತ್ಮಜೆಯ ರೋಗವು ನಿವಾರಣೆಯಾಗುವುದರಿಂಬ ನಿನಗೆ ಸುಖವೂ, ರಾಜ್ಯ ಲಾಭವೂ, ಉಂಟಾಗುವುದಲ್ಲದೆ ರಾಜನೂ, ಆತನ ಪ್ರಜೆಗಳೂ, ನಿನ್ನನ್ನು ಬಹು ಗೌರವದಿಂದ ಕಾಣುವರು. ನಿನ್ನ ಕೀರ್ತಿಯು ನಮ್ಮ ದೇಶದಲ್ಲೆಲ್ಲಾ ವ್ಯಾಪಿಸುವುದಲ್ಲದೆ ಈ ಪ್ರಪಂಚದಲ್ಲೆಲ್ಲಾ ಹರಡಿಕೊಳ್ಳುವುದೆಂದು ನುಡಿದಕೂಡಲೇ ಕಮರಲುಜಮಾನನು ಮುಂದರಿದು ಅಂತಃಪುರದ ಬಾಗಿಲಬಳಿಗೆ ಬಂದುನಿಂತು ಬಾಗಿಲನ್ನು ತೆರೆಹಾಗಿರುವುದನ್ನು ನೋಡಿ, ಒಳ ಹೋಗಲಾಗದೆ ಘಾಬರ್ಟಿಯಾಗಿ ಮಾತನಾಡಿದರೆ ರಾಜಪುತ್ರಿಗೆ ತಿಳಿಯುಬರುವುದೆಂದು ಚಾರಕನನ್ನು ತನ್ನಬಳಿಗೆ ಕರೆದು ಮೆಲ್ಲಗೆ ಮಾತನಾಡುತ್ತಾ, ಅಯ್ಯಾ! ಈಗಲೇ ನನ್ನನ್ನು ನೋಡಿದಕೂಡಲೇ ನಿಮ್ಮ ರಾಜಪುತ್ರಿಯು ಸ್ವಸ್ಥಳಿಗಾಗುವಂತೆ ಮಾಡುವೆನೆಂದು ಮೊದಲೇ ತಾನು ಸಿದ್ಧಮಾಡಿಕೊಂಡಿದ್ದ ಜೇಬಿನಿಂದ ಕಾಗದವನ್ನೂ, ಲೇಖಣಿಯನ್ನೂ, ತೆಗೆದುಕೊಂಡು ತನ್ನ ಜೋಹನಾಂಗಿಯಾದ ಚೀನಾ ರಾಜಕುಮಾರ್ತೆಗೊಂದು ಸಣ್ಣದಾದ ಪ್ರೇಮ ಪತ್ರವನ್ನು ಇಂತೆಂದು ಬರೆದನು.

ಪೂಜ್ಯಳಾದ ರಾಜಪುತ್ರಿಯೇ! ಕಾಮಜ್ವರಸಂಪೀಡಿತನಾದ ಕಮರಲುಜಮಾನನೆಂಬ ರಾಜಪುತ್ರನು ತನ್ನ ಲಾವಣ್ಯ ಸೌಂದರ್ಯ ಸುಗುಣಾದಿಗಳನ್ನು ನಿನ್ನ ದಿವ್ಯ ಮಂಗಳವಿಗ್ರಹಕ್ಕೆ ಸಮರ್ಪಿಸಿದರಾತ್ರಿ ಮೊದಲು ಇದುವರಿಗೂ ಅನುಭವಿಸಿದ ತೊಂದರೆಗಳನ್ನು ಕುರಿತು, ಆವಾ ಜಾತ್ಮನಸಗೋಚರಗಳೆಂದು ತಿಳಿಯಪಡಿಸಿದರೆ ಅದರಿಂದಾವ ಭಾಧೆಯೂ ಉಂಟಾಗದೆಂದು ನಂಬಿರುವೆನು. ಆತನ ನೇತ್ರಗಳ ಸೌಭಾಗ್ಯದೇವತೆಯಂತೆ ನೀನು ನಿಲ್ಲಿಸುತ್ತಿದ್ದ ಕಾಲದಲ್ಲಿ ಅವನು ತನ್ನ ಸರ್ವಸ್ವವನ್ನು ನಿನ್ನಧೀನ ಮಾಡಿದನೆಂದು ನಾನು ಖಂಡಿತನಾಗಿ ಹೇಳುವೆನು. ಆ ಕಾಲದಲ್ಲಿ ನಿನ್ನನ್ನು ಎಚ್ಚರಗೊಳಿಸಿ, ಹೃದಯಾನಂದಕರವಾದ ಅಮೃತಧಾರೆಗಳನ್ನು ಸೂಸುತ್ತಿರುವ ನಿನ್ನ ಮುಖಚಂದ್ರನನ್ನು ನೋಡಜೀಕೆಂದು, ನಾನು ಬಹಳವಾಗಿ ಪ್ರಯತ್ನ ಮಾಡಿದರೂ, ನನ್ನ ದೌರ್ಭಾಗ್ಯರೂಪದಿಂದ ನಿನ್ನಲ್ಲಿ ಪ್ರವೇಶಮಾಡಿದ್ದ ನಿದ್ರೆಯು ಅವಕಾಶವನ್ನೀಯದುದಕ್ಕಾಗಿ

ನಾನು ಬಹಳವಾಗಿ ವ್ಯಸನವಡುವೆನು. ನಿನ್ನಲ್ಲಿ ನನಗುಂಟಾದ ಮೋಹ ವಶದಿಂದ ನನ್ನ ಹಸ್ತಾಂಗುಳಿಯೆಲ್ಲಿ ಮುದ್ರಿತವಾಗಿದ್ದ ಮುದ್ರಿಕೆಯನ್ನು ನಿನಗೆ ಕೊಟ್ಟು ನಿನ್ನ ಹಸ್ತಮುದ್ರಿಕೆಯನ್ನು ನಾನು ಪರಿಗ್ರಹಿಸಿದುದು ನಿನಗೆ ಚೆನ್ನಾಗಿ ಜ್ಞಾಪಕವಿರಬಹುದು. ಆ ಉಂಗುರವನ್ನು ಈಗ ಕಾಗದದ ಜೊತೆಯಲ್ಲಿ ಕಳುಹುತ್ತಿರುವೆನು. ನಿನಗೆ ನನ್ನವೋಲೆ ಉಂಟಾಗಿರುವ ಮೋಹವನ್ನು ಸೂಚಿಸುವುದಕ್ಕಾಗಿ, ಅದನ್ನು ಮರಳಿ ನನ್ನಬಳಿಗೆ ಕಳುಹಿಸಿಕೊಟ್ಟುದೇ ಆದರೆ ಆತನು ಭೂಲೋಕದಲ್ಲಿ ವಾಸಮಾಡಿಕೊಂಡಿರುವನು. ಅದು ಆತನಿಗೆ ಸಂತೋಷಕರವಾದುದೇ ಹೌದು. ಇಲ್ಲವಾದರೆ ನಿನ್ನನ್ನು ಅಗಲಿರಲಾರದ ವಿರಹದಿಂದ ಮರಣವನ್ನು ಹೊಂದುವುದರಲ್ಲಿ ಯಾವ ಸಂದೇಹವೂ ಇಲ್ಲ. ಅಂತಹ ಮರಣವನ್ನು ನಾನು ಬಹು ಸಂತೋಷದಿಂದ ಒರವಾಡಿಕೊಳ್ಳುವುದಕ್ಕೆ ನಾನು ಸಿದ್ಧನಾಗಿರುವೆನು.

ಸಿನ್ನಿಂದ ಒರುವಪ್ರತ್ಯುತ್ತರವನ್ನು ಎದುರುನೋಡುತ್ತಾ, ಆತನು ನಿನ್ನ ಅಂತಃಪುರದಬಾಗಿಲಲ್ಲಿ ನಿಂತುಕೊಂಡಿರುವನೆಂದು ಬರೆದು, ಆ ಉಂಗುರವನ್ನು ನಪುಂಸಕಸವಾರನು ಕಾಣದಂತೆ ಲಕೋಟೆಯೆಲ್ಲಿಹಾಕಿ ಕಾಗದವನ್ನುಮಡಿಸಿ ಮುದ್ರೆಹಾಕಿ, ಕಾಗದವನ್ನುಮಡಿಸಿ ಮುದ್ರೆ ಹಾಕಿ, ಚಾರಕನಕೈಗೆ ಕೊಟ್ಟುಇಗೋ ಈ ಕಾಗದವನ್ನು ರಾಜಪುತ್ರಿಯು ನೋಡಿದಕೂಡಲೇ ತನ್ನವ್ಯಾಧಿಯನ್ನು ಹೋಗಲಾಡಿಸಿಕೊಂಡು ಸ್ವಸ್ಥಳಾಗುವಳು. ಆವುವರಿಂದ ಭೂತಭವಿಷ್ಯದ್ವರ್ತಮಾನದ ಕಾಲದಲ್ಲಿನ ವೈದ್ಯರುಗಳಲ್ಲಿ ನಾನೇ ವಿವೇಕಶಾಲಿಯೆಂದು ನೀನು ಸರ್ವರೊಡನೆಯೂ ಹೇಳತಕ್ಕವನಾಗೆಂದು ನುಡಿದು ಇಂತೆಂದು ಹೇಳಿ, ಪಟ್ಟಣದಜಾಡಿಯು ಬೆಳಗಾದಕೂಡಲೇ ಕಥೆಯೆನ್ನು ಮರಳಿ ಮರುದಿನ ಬೆಳಗಿನ ಜಾವದಲ್ಲಿ ತನ್ನ ಪ್ರೀತಿ ವಾತ್ಸಲ್ಯಗಳನ್ನು ಸಂಪಾದಿಸಿಕೊಂಡಿರುವ ಸುಲಾತ್ತಾನರನ್ನು ಕುರಿತು, ಇಂತೆಂದು ವಚಿಸಲಾರಂಭಿಸಿದಳು.

೨೨೧ನೆಯ ರಾತ್ರಿ ಕಥೆ.

ಬಳಿಕ ಆ ಚಾರಕನು ಕಾಗದವನ್ನು ತೆಗೆದುಕೊಂಡುಹೋಗಿ, ರಾಜಪುತ್ರಿಯ ಕೈಗೆಕೊಟ್ಟ, ಅಮ್ಮಾ! ಈಗ ಬಂದಿರುವ ವೈದ್ಯನು ಮೊದಲುಬಂದ ಜ್ಯೋತಿಷ್ಕರುಗಳಿಗಿ ತೆಲೂ ಪುನೋಜ್ಞನಾಗಿಯೂ, ತೇಜೋವಂತನಾಗಿಯೂ, ಇರುವನು. ಈ ಕಾಗದವನ್ನು ನಿಮ್ಮ ರಾಜ ಪುತ್ರಿಯು ನೋಡಿದಕೂಡಲೇ ಗುಣಮೊಂದುವಳೆಂದು ಹೇಳಿರುವನು. ಭಗ ವಂತನ ದಯೆದಿಂದಾತನಾಡಿದ ಮಾತುಗಳು ಸತ್ಯವಾಕ್ಯಗಳಾಗಲೆಂದು ಪ್ರಾರ್ಥಿಸುವೆನೆಂದನು. ಆತನು ತಂದಿರುವ ಕಾಗದವನ್ನು ತೆಗೆದುಕೊಂಡು ರಾಜಪುತ್ರಿಯು ಚೆನ್ನಾಗಿ ಓದಿಕೊಂಡು ತನ್ನ ಉಂಗುರದ ಗುರುತನ್ನು ತಿಳಿದು, ತನ್ನವೋಹನಾಂಗನಾದ ಪ್ರಾಣಕಾಂತನು ಬಂದುದಕ್ಕಾಗಿ ಸಂತೋಷಿಸಿ ಕಾಲಿನ ಸಂಕೋಲೆಯನ್ನು ಚೂರುಚೂರು ಮಾಡಿ, ಅಲ್ಲಿಂದ ದಿಗ್ಗನೆದ್ದು ಅಂತಃಪುರದ ಬಾಗಿಲಿಗೆ ಬಂದು ತೆರೆಯನ್ನು ಹಾರಿಸಿ, ಬಾಗಿಲಲ್ಲಿ ಕಾದುಕೊಂಡು ನಿಂತಿರುವ ರಾಜಪುತ್ರನನ್ನುನೋಡಿ, ತನ್ನ ವೋಹನಾಂಗನೇ! ಆತನೆಂದರಿತು ಯಾವಮಾತನ್ನು ಆಡದೆ ಪರಸ್ಪರ ಕರುಣಾವೀಕ್ಷಣದಿಂದಾಲಿಂಗಿಸಿಕೊಂಡು, ಆನಂದಭರಿತಳಾಗಿ ಅಸಾಧ್ಯರೂಪದಿಂದ, ಬಹು ಕಾಲಕ್ಕೆ ಸಂದರ್ಶನವನ್ನಿತ್ತ ರಾಜಪುತ್ರನ ಆಗಮನಕ್ಕಾಗಿ ಬಹಳವಾಗಿ ಸಂತೋಷಿಸಿದವಳಾಗಿ, ತನ್ನ ಉಂಗುರವನ್ನು ಆತನಿಗೆಕೊಟ್ಟ ಪ್ರಿಯರೇ! ನಿಮ್ಮ ಉಂಗುರವನ್ನು ನನ್ನಬಳಿಯುಳ್ಳಿಟ್ಟುಕೊಂಡು ನನ್ನದನ್ನು ವಾಪಸು ತೆಗೆದುಕೊಳ್ಳುವುದು ನ್ಯಾಯವಲ್ಲ.

ನಿಮ್ಮ ಹಸ್ತಮುದ್ರಿಕೆಯನ್ನು ತೊರೆವುದಕ್ಕೆ ನನಗೆ ಮನಸ್ಸು ಬಾರದು. ಆದುದರಿಂದ ನನ್ನೀವುಂಗುರವನ್ನು ಪರಿಗ್ರಹಿಸುವುದಕ್ಕೆ ನಿಮಗಿಂತಲೂ ಅನ್ಯರಾದ ಬಂಧುಗಳು ನನಗಾರಿರುವರೆಂದು ನುಡಿದಳು. ನಂತರ ಈ ವಾರ್ತೆಯನ್ನು ರಾಜನಿಗೆ ತಿಳಿಸುವುದಕ್ಕಾಗಿ ಚಾರಕನು ತ್ವರೆಯಿಂದೋಡಿಬಂದು ಸ್ವಾಮಿ! ಇದುವರಿಗೂ ಬಂದ ವೈದ್ಯರೂ ಜ್ಯೋತಿಷ್ಕರೂಸಹಾ ತಂತಮ್ಮ ಶಕ್ತಿ ಸಾಮರ್ಥ್ಯಗಳನ್ನು ಖರ್ಚುಮಾಡಿದರೂ ಯಾವ ಫಲವನ್ನೂ ಹೊಂದದೆ ಮರಣಾವಲಂಬಿಗಳಾಗಿಹೋದರು. ಆದರೆ

ಈಗ ಬಂದಿರುವ ವೈದ್ಯನು ಮಂತ್ರತಂತ್ರಗಳಿನ್ನಾಗಲೀ, ಧೂಪದೀಪ ಗಳಿನ್ನಾಗಲೀ, ಅಥವಾ ಮತಾತ್ಮವಿಧವಾದ ತೊಂದರೆಗಳನ್ನೇ ಆಗಲೀ, ತೆಗೆದುಕೊಳ್ಳದೆ ರಾಜಪುತ್ರಗೆ ತನ್ನ ದರ್ಶನವನ್ನು ಕೊಟ್ಟನಂತರದಿಂ ದಲೀ, ಆಕೆ ಸ್ವಸ್ಥಚಿತ್ತಳಾದಳೆಂದು ನುಡಿಯೆಲು ರಾಜನು ಬಹಳವಾಗಿ ಆನಂದಿಸಿ ಕೊನೆಗಾಣದ ಸಂತೋಷಸಾಗರದಲ್ಲಿ ಮುಳುಗಿ ತೇಲುತಾತ್ಮ, ಅಲ್ಲಿಂದ ಹೊರಟು ಕೂಡಲೇ ತನ್ನಮಗಳ ಅಂತಃಪುರವನ್ನುಸೇರಿ ಮೊದಲು ತನ್ನ ಮಗಳನ್ನೂ, ನಂತರ ರಾಜಪುತ್ರನನ್ನೂ, ಆಲಿಂಗಿಸಿಕೊಂಡು ಆತ ನನ್ನುಕುರಿತು, ಅಯ್ಯಾ ! ನೀನಾರು ? ಎಲ್ಲಿಂದ ಬಂದೆ ? ನಿನ್ನದೇಶವಾ ವುದು ? ನನ್ನಮಗಳ ರೋಗವನ್ನು ನಿವಾರಣೆ ಮಾಡಿದವನಿಗೆ ಆಕೆಯನ್ನು ಖಂಡಿತವಾಗಿಯೂ ವಿವಾಹ ಮಾಡಿಕೊಡುವೆನು. ಅಲ್ಲದೆ ಅವಳುಕೂಡ ಬಹುಕಾಲದಿಂದ ನಿನ್ನ ಸಮಾಗಮವನ್ನು ಬಯಸಿ, ವಿವಾಹ ಮಾಡಿಕೊಳ್ಳ ಬೇಕೆಂಬಷ್ಟಳಾಗಿಯೇ ಈ ತೊಂದರೆಗಳನ್ನು ಅನುಭವಿಸಿದಳೆಂದು ನುಡಿದನು.

ಒಳಿಕ ರಾಜಪುತ್ರನು ಬಹುವಿನಯದಿಂದಾತನನ್ನು ನೋಡಿ ತನ್ನ ಸಮಾಚಾರವನ್ನು ಹೇಳತೊಡಗಿ, ಅಯ್ಯಾ ! ನಾನು ನಿಜವಾಗಿ ಮೊದಲು ಬಂದಂತಹ ವೈದ್ಯರು ಜ್ಯೋತಿಷ್ಕರುಗಳಂತೆ ಇರುವ ಮಾನವನಲ್ಲ. ಆದರೆ ಲೋಕೆಪ್ರಖ್ಯಾತಿಯಾದ ರಾಜ್ಯವನ್ನಗಲಿ ನಿನ್ನೊಡನೆ ಸಂಬಂಧ ವನ್ನುಬೆಳಸಬೇಕೆಂದು ಬಂದಿರುವ ರಾಜಪುತ್ರನೇ ನಾನು. ನನ್ನತಂದೆಯೂ, ತಾಯಿಯೂ, ಖಾಳದಾಸ್ ಹೆಸರಿನ ದ್ವೀಪಗಳಿಗೆ ರಾಜರಾಣಿಯರಾಗಿ ವಾಸ ಮಾಡುತ್ತಿರುವರು. ನನ್ನಹೆಸರು ಕಮರಲುಜಮಾನನು. ನನ್ನತಂದೆಯ ಹೆಸರು ಪಹಜಜಫಾನ ಎಂದು ಹೇಳಿ, ರಾಜಪುತ್ರಗೂ ತನಗೂ ಉಂಟಾದ ಸಮಾಗಮವನ್ನು ತಾವು ತಾವು ಮೋಹದಿಂದುಂಗುರಗಳನ್ನು ಬದಲಾಯಿ ಸಿಕೊಂಡ ಸಂಗತಿಯನ್ನು ವಿವರವಾಗಿ ಹೇಳಿದನು. ಆ ಮಾತುಗಳನ್ನು ಕೇಳಿ ಬಹಳವಾಗಿ ಸಂತೋಷಚಿತ್ತನಾದ ಧೂರೆಯು ಆಶ್ಚರ್ಯಕರವಾದ ಈ ಸಂಗತಿಯನ್ನು ಉತ್ತಮಾಕ್ಷರಗಳಿಂದ ಬರೆಸಿ, ತನ್ನ ಪುಸ್ತಕಶಾಲೆ ಯೆಲ್ಲಿರಿಸಿ, ಆದಿನವೇ ವಿವಾಹಕ್ರಮವನ್ನು ಬಹು ವಿಜೃಂಭಣೆಯಿಂದ ಜರ ಗಿಸಿ, ನಾನಾವಿಧವಾದ ಸಂತೋಷಕಾರ್ಯಗಳನ್ನು ನೆರವೇರಿಸಿ, ದೇಶಾಧಿ ಪತಿಗಳಿಗೆಲ್ಲ ಕಾಗದವನ್ನುಬರೆಸಿ, ಅವರಿಗೆ ಔತನವನ್ನು ಮಾಡಿಸುವುದಕ್ಕೆ

ಒಂದುದಿನವನ್ನು ಗೊತ್ತುಮಾಡಿದನು. ಕಮರಲುಜಮಾನನು ರಾಜ ಪುತ್ರಿಯು ಸುಖದಿಂದಿದ್ದರು. ಮರಜವಾನನಿಗೆ ರಾಜನು ತನ್ನಸಭೆಯ ಲೊಳ್ಳಂದು ಉದ್ಯೋಗವನ್ನು ಕೊಟ್ಟ ಕ್ರಮೇಣ ಅದನ್ನು ವೃದ್ಧಿ ಮಾಡುವೆನೆಂದು ಹೇಳಿದನು. ಕಮರಲುಜಮಾನನೂ, ರಾಜಪುತ್ರಿಯೂ, ಸಹಾ ಸ್ವಲ್ಪವೂ ಕೊರತೆಯಿಲ್ಲದೆ ತಮ್ಮ ಮನೋಭೀಷ್ಟಗಳನ್ನು ನೆರ ವೇರಿಸುತ್ತಾ ಸುಖದಿಂದಿದ್ದರು. ರಾಜನಾದ ಗಯೆರಾರನು ಅವರುಗಳ ಆನಂದಕ್ಕಾಗಿ ತಕ್ಕಂತೆ ಆಗಾಗ್ಗೆ ಔತನಾದಿಗಳನ್ನು ಮಾಡಿಸತೊಡಗಿದನು. ಈತೆರದಿಂದ ಮೂರು ನಾಲ್ಕು ತಿಂಗಳು ಕಳೆದಬಳಿಕ ಕಮರಲುಜಮಾನನು ಒಂದಾನೊಂದುದಿನ ನಿದ್ರಿಸುತ್ತಿರುವ ಕಾಲದಲ್ಲಿ ವೃದ್ಧಾಪ್ಯದಲ್ಲಿ ತನ್ನ ತಂದೆಯು, ಪ್ರೀತಿಪಾತ್ರನಾದ ಮಗನನ್ನು ಕಳೆದುಕೊಂಡುದಕ್ಕಾಗಿ ಬಹಳವಾಗಿ ವ್ಯಸನಪಟ್ಟು ಮರಣವನ್ನು ಹೊಂದಿದಂತೆ ಕನಸನ್ನು ಕಂಡು, ಹಾ! ಹಾ!! ಹಾ!!! ತಾತಾ!!!! ಹಾ! ಹಾ!! ನನ್ನ ತಂದೆಯೇ ಎಂದು ಘಟ್ಟಯಾಗಿ ಕೂಗಿಕೊಂತು ಎದ್ದು ಕುಳಿತನು. ಕೂಡಲೇ ರಾಜಪುತ್ರಿಯು ಎಚ್ಚತ್ತು ಪ್ರಿಯನಾದ ಪ್ರಾಣನಾಥನೇ! ಇದೇನು ಹೀಗೆ ಸ್ವಪ್ನದಲ್ಲಿ ಕನವರಿಸಿಕೊಂಡೇಳಲು ಕಾರಣವೇನುಂಟೆಂದು ಕೇಳಲು, ರಾಜ ಪುತ್ರನು ತನ್ನ ಸ್ವಪ್ನದ ವಿಚಾರವನ್ನು ಚೆನ್ನಾಗಿ ತಿಳಿಯಹೇಳಿದನು.

ಆಗ ರಾಜಪುತ್ರಿಯು ಬಹುದೂರವಲ್ಲಿರುವ ರಾಜ್ಯಕ್ಕೆ ಹೊರ ಟುಹೋದಬಳಿಕ ಮರಳಿ ಈತನು ನನ್ನಬಳಿಗೆ ಬರುವನೋ ಇಲ್ಲವೋ ತಿಳಿ ಯದೆಂದು, ಅನುಪಮಾನದಿ ದ ಒಂದಾನೊಂದು ಉಪಾಯವನ್ನು ಚಿಂತಿಸಿ, ತನ್ನ ತಂದೆಯಬಳಿಗೆ ಬಂದು, ಆತನು ಒಂಟಿಯಾಗಿರುವ ಕಾಲದಲ್ಲಿ ತಂದೆಯೇ ನಾನು ಹೇಳುವ ಮಾತುಗಳನ್ನು ಚೆನ್ನಾಗಿ ಲಾಲಿಸಿ, ಅದರಂತೆ ನಡೆಸಬೇಕೇಹೊರತು, ಒಲ್ಲೆನೆಂದು ಹೇಳಬಾರದು. ನಾನು ನನ್ನಗಂಡನ ಮಾತು ಗಳನ್ನು ಕೇಳಿ, ನಿನ್ನೊಡನೆ ಹೀಗೆ ಮಾತನಾಡುವೆನೆಂದು ತಿಳಿಯಬೇಡ. ಬಹು ದೂರದೇಶದಲ್ಲಿ ವಾಸಮಾಡುತ್ತಿರುವ ನನ್ನ ಅತ್ತೆಮಾವಂದಿರನ್ನು ನೋಡಬೇಕೆಂಬ ಕುತೂಹಲವು ನನಗೆ ಬಹಳವಾಗಿರುವುದು. ಆದುದರಿಂದ ನನ್ನೆನ್ನನ್ನು ನನ್ನ ಗಂಡನಸಂಗಡ ಕಳುಹಿಸಿಕೊಡಲು ನೀನು ಸಮ್ಮತಿಸಬೇ ಕೆಂದಳು. ಆ ಮಾತುಗಳನ್ನು ಕೇಳಿ, ರಾಜನು ಅಮ್ಮಾ! ಆ ದೇಶವು

ಬಹುದಿನಗಳ ಪ್ರಯೋಣ ವಿರುವುದು. ಅದುವರೆಗೂ ನಾನು ನಿನ್ನನ್ನು ಅಗಲಿರಲಾರೆನು. ಆದರೂ, ಒಂದಾನೊಂದು ಕಾರಣದಿಂದ ನನ್ನಮನಸ್ಸಿಗೆ ಕ್ಷೋಭವಾಗಿರುವುದಕ್ಕಾಗಿ ನಾನು ಒಪ್ಪಿ ನಿನ್ನನ್ನು ಕಳುಹಿಸಿಕೊಡುವೆನು. ನೀನು ಒಂದು ಸಂವತ್ಸರಕ್ಕಿಂತಲೂ ಅಧಿಕವಾಗಿ ನಿಮ್ಮ ದೂವನವರಮನೆಯೆಲ್ಲಿರಬೇಡವೆಂದು ನುಡಿಯುತಾ ಮಗಳನ್ನೂ ಅಳಿಯನನ್ನೂ ಅಗಲಾರದ ದುಃಖದಿಂದ ಬಹಳವಾಗಿ ಗೋಳಾಡಿ ಕೊನೆಗೆ ಸಮಾಧಾನ ಮಾಡಿಕೊಂಡು, ಹಾಗೇ ಅಗಲೆಂದು ನುಡಿದು ರಾಜಪುತ್ರಿಯು ಕೂಡಲೇ ತನ್ನ ಗಂಡನಿಗೆ ಈ ವರ್ತಮಾನವನ್ನು ತಿಳಿಯಹೇಳಲು, ಆತನು ಬಹುಸಂತೋಷವುಳ್ಳವನಾಗಿ ರಾಜನನ್ನು ವಂದಿಸಿದನು.

ನಂತರ ಚೀನಾದೇಶದ ರಾಜನು ತನ್ನ ಮಗಳನ್ನೂ, ಅಳಿಯನನ್ನೂ, ಕಳುಹಿಸಿಕೊಡುವುದಕ್ಕೆ ಸರ್ವಸನ್ನಾಹಗಳನ್ನು ಮಾಡಿಕೊಂಡು ಅವರಿಬ್ಬರಿಗೂ, ಸಾಕಾಷ್ಟು ದ್ರವ್ಯವನ್ನೂ, ಪರಿವಾರದವರನ್ನೂ, ಕೊಟ್ಟು ತಾನು ಬಹಳದೂರದವರಿಗೂ ಅವರಸಂಗಡಲೇ ಹೋಗಿ ಸಾಗು ಕಳುಹಿಸಿ, ನಂತರ ಅಳಿಯನಿಂದಲೂ, ಮಗಳಿಂದಲೂ, ಅಪ್ಪಣೆಯನ್ನು ಪಡೆದು, ಅನ್ಯೋನ್ಯವಾಗಿ ಒಬ್ಬರನ್ನೊಬ್ಬರು ಆಲಿಂಗಿಸಿಕೊಂಡಬಳಿಕ ಅಯ್ಯಾ ! ನೀನು ನನ್ನ ಮಗಳನ್ನು ಈಗಿನ ವಿಶ್ವಾಸಕ್ಕಿಂತಲೂ ಅತಿಶಯವಾದ ಪ್ರೀತಿಯಿಂದ ನೋಡಿಕೊಂಡು ಸಲಹುತ್ತಿರಬೇಕು. ನಿನ್ನನ್ನು ನನ್ನಮಗಳಾದ ರಾಜಪುತ್ರಿಯನ್ನು ನೋಡಿದರೆ ನಿಮ್ಮತಂದೆಯಾದ ಷಹಜಮಾನನು ಬಹಳ ಸಂತೋಷಿಸದಿರಲಾರನೆಂದು ತಿಳಿದು ನನ್ನಮನಸ್ಸಿಗೆ ಆನಂದವನ್ನು ಹೊಂದಿದೆನೆಂದು ಹೇಳಿದಬಳಿಕ ಎಲ್ಲರೂ, ಸಂತೋಷಚಿತ್ತರಾದರು. ಚೀನಾರಾಜನು ಹಿಂದಿರುಗಿದನು. ಬಳಿಕ ದಂಪತಿಗಳಿಬ್ಬರೂ ಒಂದು ತಿಂಗಳವರಿಗೆ ಪ್ರಯಾಣ ಮಾಡಿ ಒಂದಾನೊಂದ ದಾರಿಯಲ್ಲಿ ಬಹು ಬಿಸಿಲಿನಿಂದ ಬಳಲಿ ನೆಳೆಲಾಗಿಯೂ, ಹಸುರಾಗಿಯೂ, ಇರುವ ಒಂದು ಸ್ಥಲವನ್ನುನೋಡಿ ಈದಿನ ಆ ಸ್ಥಲದಲ್ಲಿ ತಂಗಬೇಕೆಂದು ಇಬ್ಬರೂ ಸಮ್ಮತಿಸಿ ಡೇರೆಗಳನ್ನು ಹೊಡಿಸಿ, ತಂತಮ್ಮ ಚಾಕರರಿಗೂಸಹಾಗುಡಾರಗಳನ್ನು ಹೊಡೆದುಕೊಳ್ಳುವಂತೆ ಆಜ್ಞಾಪಿಸಿ, ತಾವು ತಂದಿದ್ದ ತಿಂಡಿತಿನಿಸುಗಳನ್ನು ತಿಂದು ಸ್ವಲ್ಪ ವಿಶ್ರಮಿಸಿಕೊಂಡನಂತರದಲ್ಲಿ ರಾಣಿಯು

ಆಯಾಸ ಪರಿಹಾರಾರ್ಥವಾಗಿ ತನ್ನ ಡೇರೆಯಲ್ಲೇ ಮಲಗಿಕೊಳ್ಳುವಂತೆ ದಾದಿಯರು ಸರ್ವವನ್ನು ಸಿದ್ಧಮಾಡಿದರು. ನಂತರ ಚಾರಕರೂ, ದಾದಿಯರೂ, ಮೌನವಾಗಿದ್ದುದರಿಂದ ರಾಜಪುತ್ರಿಯು ತನ್ನ ಡಾಬನ್ನು ತೆಗೆದು ಹಾಸಿಗೆಯಮೇಲಿಟ್ಟ ಮಲಗಿ ನಿದ್ರಿಸಿದಳು. ಸ್ವಲ್ಪಹೊತ್ತಿಗೆ ಕಮರಲುಜಮಾನನು ರಾಜಪುತ್ರಿಯಬಳಿಗೆ ಬಂದು ಶಬ್ದ ಮಾಡದೆ ಸ್ವಲ್ಪ ಹೊತ್ತು ನಿಂತಿದ್ದ ಆಕೆಯ ಒಡ್ಯಾಣವು ಮಂಚದಮೇಲಿರುವುದನ್ನು ಕಂಡು ಅದನ್ನೆತ್ತಿಕೊಂಡು ತಿರುಗಿಸಿನೋಡುತ್ತಾ, ಅದರಲ್ಲಿ ಕೆತ್ತಿರುವ ಕೆಂಪುಗಳ ಸೊಬಗನ್ನು ನೋಡುವುದಕ್ಕಾಗಿ ತಿರುಗಿಸಿನೋಡುತ್ತಾ, ಬಹು ಲಕ್ಷಣವಾಗಿ ಹೊಂದಿರುವ ಒಂದಾನೊಂದು ಸಣ್ಣ ಚೀಲವನ್ನುಕಂಡು ಅದನ್ನು ಮುಟ್ಟನೋಡಿ ಮೊತ್ತಗಿರದೆ ಘಟ್ಟಯಾಗಿದ್ದರಿಂದ ಇದೊಂದು ಅಪೂರ್ವವಸ್ತುವಾದುದರಿಂದಲೇ ರಾಜಪುತ್ರಿಯು ಭದ್ರವಾಗಿ ತನ್ನ ಬಳಿಯಲ್ಲಿ ಇಟ್ಟುಕೊಂಡಿರುವಳೆಂದು ತಿಳಿದು ಅವನ್ನು ಬಿಚ್ಚಿನೋಡಲು ಸಣ್ಣದಾಗಿಯೂ, ಸುಂದರವಾದ ಅಕ್ಷರಗಳನ್ನು ಕೆತ್ತಿರುವುದಾಗಿಯೂ, ಮನೋಜ್ಞವಾಗಿಯೂ, ಇರುವ ಒಂದು ಯಂತ್ರವನ್ನು ಕಂಡು, ಅದನ್ನು ತಾನು ಪರೀಕ್ಷಿಸಿ ನೋಡಬೇಕೆಂದು ಹೊರಗೆ ಬಂದು ಕೈಯಲ್ಲಿ ಹಿಡಿದುಕೊಂಡು ನೋಡುತ್ತಿರುವಲ್ಲಿ ಆಕಾಶಮಾರ್ಗದಲ್ಲಿ ಸಂಚರಿಸುತ್ತಿದ್ದ ಒಂದು ಪಕ್ಷಿ ಆ ಯಂತ್ರವನ್ನು ಕೆಳಗೆ ಬೀಳುವಂತೆ ಮಾಡಿ ಹಾರಿಹೋಯಿತು.

ಚೀನಾ ರಾಜಪುತ್ರಿಯು ರಾತ್ರಿಯು ತನ್ನ ಮಗಳಿಗೆ ಅಮ್ಮಾ! ಈ ಯಂತ್ರವು ನಿನ್ನಬಳಿಯಲ್ಲಿರುವವರಿಗೂ ನಿನಗಾವತೊಂದರೆಗಳೂ ಬಾರದಾದುದರಿಂದ ಇದನ್ನು ಭದ್ರವಾಗಿಟ್ಟುಕೊಂಡಿದೆಂದು ಹೇಳಿಕೊಟ್ಟಿದ್ದ ಆ ಯಂತ್ರವು ಕಮರಲುಜಮಾನನಕೈಗೆ ಸಿಕ್ಕ ಈತೆರದಿಂದ ಹಾಳಾಯಿತು. ಇಂತೆಂದು ನುಡಿದ ಷಹರಜಾದಿಯು ಬೆಳಗಾದಕೂಡಲೇ ಕಥೆಯನ್ನುನಿಲ್ಲಿಸಿ, ಮರಳಿ ಬೆಳಗಿನ ಜಾವದಲ್ಲಿ ಹೇಳಲಾರಂಭಿಸಿದಳು.

೨೨ನೆಯ ರಾತ್ರಿ ಕಥೆ.

ಕಮರಲುಜಮಾನನು ಈತೆರದಿಂದ ತನ್ನ ಪ್ರಾಣಕಾಂತೆಯೆಯಂತ್ರವನ್ನು ಹೋಗಲಾಡಿಸಿಕೊಂಡುದರಿಂದ ಆತನಿಗುಂಟಾದ ತೊಂದರೆಯನ್ನು ಅಷ್ಟಿಷ್ಟೆಂದು ಹೇಳತೀರದು. ಆಹಾ! ನನ್ನ ಮೋಹನಾಂಗಿಯು ಭದ್ರವಾಗಿ ಕಾಪಾಡಿಕೊಂಡಿದ್ದು ಈ ಯಂತ್ರವನ್ನು ನಾನೇತಕ್ಕೆ ತೆಗೆದುಕೊಂಡೆನು.

ಇದನ್ನು ಅನ್ಯಾಯವೆಂದು ಹಾಳುಮಾಡಿದಬಳಿಕ ಆಕೆಯು ಪ್ರಾಣದಿಂದ ಜೀವಿಸಲಾರಳೆಂದು ಆ ಪಕ್ಷಿಯನ್ನು ಎದುರುನೋಡುತ್ತಿರಲು ಅದು ಸ್ವಲ್ಪ ದೂರದಲ್ಲಿ ಕುಳಿತು ಕಂಡಿದು, ತಿನ್ನುತ್ತಿರುವುದನ್ನು ತನ್ನ ಗುರಿಯಿಂದ ಬಾಣವನ್ನು ಹೂಡಿದವನಾಗಿ ಕಲ್ಲಿನಿಂದಾಪಕ್ಷಿಯನ್ನು ಹೊಡೆಯಲು ಅದು ಮತ್ತಷ್ಟುದೂರಕ್ಕೆ ಓಡಿಹೋಗಿ ಕುಳಿತುಕೊಂಡು ಯೆಂತ್ರವನ್ನು ನುಂಗಿಬಿಟ್ಟಿತು. ಆಹಾ! ಇನ್ನು ಕೆಲಸ ಕೆಟ್ಟಿತು. ಹೇಗಾದರೂಮಾಡಿ ಆ ಪಕ್ಷಿಯನ್ನು ಹಿಡಿದು ಯೆಂತ್ರವನ್ನು ಸಂಪಾದಿಸಬೇಕೆಂದು ತಿಳಿದು, ಅದರಸಂಗಡಲೇ ಹೋಗುತ್ತಿರಲು ಪಕ್ಷಿಯು ಬಲು ವೇಗವಾಗಿ ಹಾರಿಹೋದುದರಿಂದ ರಾಜಪುತ್ರನು ತಾನೂ ಅತ್ಯಂತ ವೇಗವಾಗಿ ಓಡುತ್ತಾ, ಅದು ಹೋದ ದಾರಿಯೆನ್ನು ಬಿಡದೆ ಭೂಮಾರ್ಗದಲ್ಲಿ ಸಂಚರಿಸುತ್ತಾ, ನಾನಾ ಗುಟ್ಟ ಜಿಟ್ಟಗಳನ್ನು ಸುತ್ತಿ ಪಕ್ಷಿಯು ನಿಂತಕಡೆಯಲ್ಲಿ ತಾನೂ ನಿಲ್ಲುತ್ತ ಬಿಡುವ ಪ್ರಯಾಸದಿಂದ ಹೋಗುತ್ತಿರುವಷ್ಟರಲ್ಲಿಯೇ ಸಾಯಂಕಾಲವಾದುದರಿಂದ ಪಕ್ಷಿಯು ಬಂದಾನೊಂದು ಅತ್ಯುನ್ನತವಾದ ಮರದಮೇಲೆ ಹಾರಿ ಕುಳಿತುಕೊಂಡುದನ್ನು ಕಂಡು, ಹೇಗಾದರೂಮಾಡಿ ಯೆಂತ್ರವನ್ನು ತೆಗೆದುಕೊಂಡೇ ಹೋಗಬೇಕೆಂದು ಬಯಸಿ, ಮರವನ್ನು ಹತ್ತಲಾರದೆ ಸಂಜೆಯಾಗಿ ಅಂಧಕಾರವು ಕವಿದುಕೊಂಡುದರಿಂದಲೂ ತಾನು ಹಗಲೆಲ್ಲಾ ಓಡಿಯೋಡಿ ನಾನಾ ಗುಟ್ಟಜಿಟ್ಟಗಳನ್ನುಸೇರಿ, ಆಯಾಸಪಟ್ಟುದರಿಂದಲೂ, ಹಿಂದಿರುಗಿ ಬರಲಾರದೆ ಆಹಾ ನಾನೆಂತು ಸಿಖರವನ್ನು ಸೇರುವೆನು.

ಈಗ ನನಗುಂಟಾಗಿರುವ ಆಯಾಸದಿಂದ ಹೇಗೆತಾನೆ ನಡೆದುಹೋಗಲಿ. ಬಹುದೂರ ಬಂದಿರುವ್ರದರಿಂದಲೂ ಕಾಡುಮಾರ್ಗವಾಗಿರುವ್ರದರಿಂದ ದಾರಿಯೇ ತಿಳಿಯದಲ್ಲಾ ಎಂದು ಚಿಂತಿಸಿ, ಆ ಮರದ ಬುಡದಲ್ಲಿ ಮಲಗಿ ರಾತ್ರಿಯನ್ನು ಬಹು ಪ್ರಯಾಸದಿಂದಲೂ, ನಿಟ್ಟುಸುರಿನ ನಿಡುಸರದಿಂದಲೂ ಕಳೆದು, ಬೆಳಗಿನ ಜಾವದಲ್ಲಿ ಪಕ್ಷಿಯು ಹಾರಿಹೋಗುವುದಕ್ಕೆಮುಂಚೆಯೇ ಅದನ್ನು ಹುಡುಕುತ್ತಿದ್ದು ಅದು ಹಾರಿಹೋದಮೇಲೆ ಅದರಹಿಂದೆಯೇ ಹೋಗುತ್ತಾ, ಕೊನೆಗೆ ಹತ್ತುದಿನಗಳವರೆಗೂ ಇದೇತರದಿಂದ ಬಹಳವಾದ ಆಯಾಸವನ್ನು ಹೊಂದಿ, ಹನ್ನೊಂದನೆಯದಿನದಲ್ಲಿ ಹೇಗಾಧರೂ ಸರಿಯೇ ಆ ಪಕ್ಷಿಯ ಗೂಡನ್ನು ಕಿತ್ತುಕೊಂಡು ಹೊರಡಬೇಕೆಂದು

ಪ್ರಯತ್ನಮಾಡಿ ತನ್ನಕಾರ್ಯವು ಸಾಧ್ಯವಾಗದೇ ಹೋದುದಕಾಗಿ ಬಹಳವಾಗಿ ವ್ಯಸನಪೊಂದಿ ಹತ್ತುರಾತ್ರಿಗಳ ವ್ಯಸನವನ್ನು ಒಟ್ಟುಗೂಡಿಸಿ, ಪ್ರತಿದಿನವೂ ಬಂದೊಂದು ವೃಕ್ಷಮೂಲದಲ್ಲಿ ನಿದ್ರಿಸುತ್ತಿದ್ದಂತೆ ಈದಿನವೂ ಆ ಪಕ್ಷಿಯು ಕುಳಿತುಕೊಂಡಿರುವ ಮರದಬುಡದಲ್ಲಿ ಮಲಗಿದ್ದು ಬೆಳಗಾದ ಕೂಡಲೇ ಹಾರಿಹೋಗುತ್ತಿರುವ ಪಕ್ಷಿಯನ್ನು ಅನುಸರಿಸಿ ಹೋಗುತ್ತಾ ಬುದಾನೊಂದು ಪಟ್ಟಣವನ್ನು ಸೇರಿದಬಳಿಕ ತಾನು ಮನೆಯಿಂದ ಮನೆಗೆ ಹಾರಿಹೋಗುತ್ತಿರುವ ಪಕ್ಷಿಯನ್ನು ಹಿಡಿಯಲಾರೆನೆಂದು ತಿಳಿದು ಇನ್ನು ಮೇಲೆ ಯಂತ್ರದ ಆಸೆಯನ್ನೇ ಬಿಡಬೇಕೆಂದು ಗೊತ್ತುಮಾಡಿಕೊಂಡು ತುಂಬಾ ವ್ಯಸನ ಕ್ರಾಂತನಾಗಿ ಚಿಂತಿಸುತ್ತಿದ್ದನು.

ಬಳಿಕ ಆ ಪಟ್ಟಣವನ್ನುಹೊಕ್ಕು ಬೀದಿಬೀದಿಗಳಲ್ಲೂ ಅಲೆದಾಡುತ್ತಾ ಬಂದಾನೊಂದು ತೋಟದ ಬಾಗಿಲ ತೆರೆದು ಆಲ್ಲಿ ಬ್ಬ ಮುದುಕನು ಕನು ಕೆಲಸಮಾಡುತ್ತಿರುವುದನ್ನು ಕಂಡನು. ಆ ಮುದುಕನು ಬಹು ಯೋಗ್ಯನಾದುದರಿಂದ ರಾಜಕುಮಾರನನ್ನು ಬಹು ಮರ್ಯಾದೆಯಿಂದ ಬರಮಾಡಿಕೊಂಡು ಬಾಗಿಲನ್ನು ಮುಚ್ಚಿಕೊಂಡನು. ಅದನ್ನು ನೋಡಿ ರಾಜಪುತ್ರನು ಅಯ್ಯಾ! ಇದೇನು ನಾನು ಬಂದಬಳಿಕ ಬಾಗಿಲನ್ನೇಕೆ ಮುಚ್ಚಿಕೊಂಡೆ ಎಂದು ಕೇಳಲು, ಅಯ್ಯಾ! ನೀನು ಈ ಊರಿಗೆ ಹೊಸಬನು. ಅಲ್ಲದೆ ಮುಸಲ್ಮಾನನು. ಈ ಊರಿನಲ್ಲಿರುವವರೆಲ್ಲರೂ ಅಗ್ನಿಯನ್ನು ಪೂಜಿಸುತಕ್ಕವರು. ನಿನ್ನನ್ನು ನೋಡಿದರೆ ಬಹಳವಾಗಿ ಪೀಡಿಸುವರು. ನೀನು ಕ್ಷೇಮವಾಗಿರುವುದಕಾಗಿ ಬಾಗಿಲನ್ನು ಮುಚ್ಚಿರುವೆನು. ಇಲ್ಲಿನ ಜನರ ಚರ್ಯೆವು ಬಹಳ ಕ್ರೂರವಾದುದು. ಆದುದರಿಂದ ನಿನಗೆ ಈ ಊರಿನಲ್ಲಿ ಕ್ಷೇಮ ಉಂಟಾಗುವ್ರದು ಕಷ್ಟ. ಇಲ್ಲಿಗೆ ಹೊಸದಾಗಿ ಬಂದವರು ಬುದ್ಧಿಶಾಲಿಗಳಾಗಿ ಬರುವ ಅಪಾಯಗಳನ್ನು ತಪ್ಪಿಸಿಕೊಳ್ಳಲಾರದೆಹೋದರೆ ಅವರು ಪ್ರಾಣಗಳಿಳಿಯುವುದೇ ಸ್ವಯಾಸ. ನೀನಾದರೋ ಅದೃಷ್ಟವಶಾತ್ತಾಗಿ ಇಲ್ಲಿಗೆ ಬಂದಿರುವೆ ಎಂದು ತೋಳಿದನು. ಆ ವೃದ್ಧನು ಹೇಳಿದ ಬುದ್ಧಿವಾಪಗಳಿಗಾತನು ಬಹಳವಾಗಿ ಸಂತೊಷಿಸಿ ವಂದನೆಗಳನ್ನು ಆಚರಿಸಿದಬಳಿಕ ಮುದುಕನು ರಾಜಕುಮಾರನಿಗೆ ಅಡ್ಡಬಿದ್ದು ಅಯ್ಯಾ! ನಾವಿಬ್ಬರೂ ಅನ್ಯೋನ್ಯಭಾವದಿಂದ ಸ್ನೇಹಿತರಾಗಿರಬೇಕೆಂದು ಕೋರುವೆನು. ಆದರೆ ಈತನಿಗೆ ತುಂಬಾ ಬಳಲಿಕೆಯುಂಟಾಗಿರುವುದರಿಂದ ಅದನ್ನು

ಪರಿಹರಿಸಿಕೊಳ್ಳಿಂದು ಹೇಳಿ, ತನ್ನಮನೆಗೆ ಕರೆದುಕೊಂಡುಹೋಗಿ ಬಹಳವಾಗಿ ಉಪಚಾರಾದಿಗಳನ್ನು ಮಾಡಿ, ಮಲಗಿಕೊಳ್ಳುವಂತೆ ಹೇಳಿದಬಳಿಕ ಅಯ್ಯಾ! ನೀನು ಇಲ್ಲಿಗೆ ಹೇಗೆಬಂದೆಯೋ ಅದನ್ನು ಹೇಳೆಂದು ಕೇಳಿದನು. ಬಳಿಕ ಕಮರಲುಜವಾನನು ತಾನು ರಾಜಪುತ್ರಿಯನ್ನುತೊರೆದು ಯಂತ್ರಕೊಕ್ಕೆಸುಗವಾಗಿ ಪಕ್ಷಿಯನ್ನು ಹಿಂದಟ್ಟಿಕೊಂಡು ಬಂದುದನ್ನು ವಿವರಿಸಿಹೇಳಿ ಇನ್ನು ರಾಜಪುತ್ರಿಯನ್ನು ನೆನೆದುದರಿಂದ ಫಲವೇನು. ಅವಳು ಹೇಗಿರುವಳೋ ತಿಳಿಯದಲ್ಲಾ! ನಾನೇನುಮಾಡಲಿ. ದುರ್ದೈವದಿಂದ ಈತೆರನಾದ ಸಂಕಟಕ್ಕೆ ಪಾತ್ರನಾದೆನಲ್ಲಾ! ಅಯ್ಯಾ! ನಮ್ಮ ತಂದೆಯಾದ ಷಹಜಮಾನನ ರಾಜ್ಯಕ್ಕೆ ಹೋಗುವುದಕ್ಕಿಲ್ಲಿಂದ ಹತ್ತಿರವಾದ ದಾರಿಯುಂಟೆ? ಎಂದು ಕೇಳಲು, ಆತನು ಅಯ್ಯಾ! ಆ ರಾಜ್ಯಕ್ಕೆ ಇಲ್ಲಿಂದ ಹೋಗುವ ಭೂಮಾರ್ಗವು ನಾನಾವಿಧವಾದ ಗುಟ್ಟಬೆಟ್ಟಗಳ ಮೇಲೆ ಹಾದುಹೋಗುವುದರಿಂದಲೂ, ಅಲ್ಲಲ್ಲಿ ಕಾಡುಜನರು ಪ್ರಯಾಣಿಕರನ್ನು ಪೀಡಿಸುತ್ತಿರುವುದರಿಂದ, ಒಂದು ಸಂವತ್ಸರದ ದಾರಿಯೆನ್ನರಿಗೂ ಮುಸಲ್ಮನರೇ ಇಲ್ಲದುದರಿಂದಲೂ, ಆಹಾರ ಪದಾರ್ಥಗಳು ಸರಿಯಾಗಿ ದೊರಕುದರಿಂದಲೂ, ಅದು ದುರ್ಗಮವಾದ ಮಾರ್ಗವಾಗಿರುವುದು.

ಆದರೆ ಇಲ್ಲಿಂದ ಹಡಗನ್ನುಹತ್ತಿ ನೀಲದ್ವೀಪದ ಮೂಲವಾಗಿ ನಿಮ್ಮ ತಂದೆಯ ರಾಜ್ಯವನ್ನು ಸೇರಬಹುದು. ಅದೇ ಸುಲಭವಾದ ಮಾರ್ಗ. ಇದಕ್ಕಿಂತಲೂ ಉಪಾಯಕರವಾದ ದಾರಿಯೇ ಇಲ್ಲ. ಪ್ರತಿ ಸಂವತ್ಸರವೂ ಈ ಸ್ಥಲದಿಂದ ನೀಲದ್ವೀಪಕ್ಕೂ, ಇಜಿನಿನ ನಡುಗುಡ್ಡಗಳಿಗೂ, ಹಡಗುಗಳು ಹೋಗುತ್ತಲೇ ಇರುವುವು. ನಿನ್ನೆತಾನೆ ಒಂದು ಹಡಗು ಇಲ್ಲಿಂದ ಇಜಿನಿ ದ್ವೀಪಕ್ಕೆ ಪ್ರಯಾಣ ಮಾಡಿತು. ನೀನು ಇನ್ನು ಕೆಲವುದಿನಗಳ ಮುಂಚಿತವಾಗಿ ಇಲ್ಲಿಗೆ ಬಂದು ಇದ್ದರೆ ಹೊರಡಬಹುದಾಗಿತ್ತು. ಈ ಕಾಲವು ಮುಂಚಿಹೋದುದರಿಂದ ಕೆಲವುದಿನಗಳವರಿಗೂ ನೀನಿಲ್ಲಿಯೇ ಇದ್ದನಂತರ ಬಂದು ಹೋಗುವಹಡಗುಗಳನ್ನುನೋಡಿಕೊಂಡು ನೀನು ಪ್ರಯಾಣ ಮಾಡಬಹುದೆಂದು ಹೇಳಲು ರಾಜಪುತ್ರನು ತಾನು ಆ ಸ್ಥಲಕ್ಕೆ ಹೊಸಬನಾಗಿ ತನಗೆ ಪುಶ್ತಾನ ಸ್ನೇಹಿತರೂ ಇಲ್ಲದುದರಿಂದ ಪ್ರಕೃತದಲ್ಲಿ ಆ ತೋಟಗಾರನ ಆದರಣೆಗೆಸಿಕ್ಕಿ ಅನುವೋದಿತನಾಗಿ ನಂತರ ಡೇರೆಯೆಲ್ಲಿ ಮಲಗಿ ನಿದ್ರಿಸಿದ ಚೀನಾ ರಾಜಪುತ್ರಿಯು ಕಥೆಯನ್ನು ಕುರಿತು, ಹೇಳಲಾರಂಭಿಸಿ, ಷಹರಜೆಂದಿಯು ಸುಲ್ತಾನರನ್ನು ಕುರಿತು, ಇಂತೆಂದಳು.

ರಾಜಪುತ್ರನನ್ನಗಲಿದ ಚೀನಾ ರಾಜಕುಮಾರಿಯ ಕಥೆ.

ಸುಲಾತ್ತನರೇ! ಚೀನಾ ರಾಜಪುತ್ರಿಯು ಬಹಳಹೊತ್ತಿನವರಿಗೂ ನಿದ್ರಿಸುತ್ತಿದ್ದು ಬಳಿಕ ಎಚ್ಚತ್ತು ಕುಳಿತು ರಾಜಪುತ್ರನನ್ನು ಕಾಣದೆ, ಚಿಂತಿಸುತ್ತಾ ತನ್ನನ್ನು ತೊರೆದುಹೋಗಲು, ಕಾರಣವೇನೆಂದು ತಿಳಿದು, ತನ್ನ ಒಡ್ಯಾಣವು ಕೆಳಗೆ ಬಿದ್ದಿರುವುದನ್ನುಕಂಡು, ಅದರಲ್ಲಿರುವ ಚೀಲವು ಬರಿದಾಗಿರುವುದನ್ನುನೆನೆದು, ತನ್ನಯಂತ್ರವನ್ನು ತೆಗೆದುಕೊಂಡು ಅದನ್ನು ಪರೀಕ್ಷಿಸಿ ನೋಡುವುದಕ್ಕಾಗಿ ಹೋಗಿರುವನು. ಪಾಪ್ರಯೆಶಃ ಸ್ವಲ್ಪಹೊತ್ತಿಗೆ ಬಂದುಬಿಡುವನೆಂದು ತಿಳಿದು, ತಾಳ್ಮೆಯಿಂದ ಸಾಯಂಕಾಲದವರೆಗೂ, ಕಾದಿದ್ದು ನಂತರ ಆತನು ಬಾರದಿರುವುದರಿಂದ ಅಧಿಕವಾಗಿ ದುಃಖಿಸುತಾ, ದಾದಿಯರನ್ನುಕರೆದು, ಕಮರಲುಜಮಾನನು ಎಲ್ಲಿಹೋದನೆಂದು ಕೇಳಲು, ಆಕೆಯು ಅಮ್ಮಾ! ನಾನು ಆತನು ಬಳಿಹೊಕ್ಕು ನಿನ್ನಸಿಬಿರಕ್ಕೆ ಬಂದುದನ್ನುಮಾತ್ರ ನಾನು ಕಂಡೆನೇಹೊರತು ಮತ್ತೇನನ್ನೂ ಅರಿಯೆನೆಂದು ವಿನ್ನವಿಸಿದಬಳಿಕ ಮಹತ್ತರವಾಗಿ ಚಿತ್ತರಿಸಿ ಬರುತ್ತಿರುವ ಚಿಂತೆಯನ್ನು ತಾಳಿದು ಈ ಸಂಗತಿಯನ್ನು ಗೋಪ್ಯದಲ್ಲಿ ಇಟ್ಟುಕೊಂಡಿರುವಂತೆ ತನ್ನ ದಾದಿಯರಿಗೆಹೇಳಿ ತಾನು ಕಮರಲುಜಮಾನನ ವಸ್ತ್ರಗಳನ್ನು ಧರಿಸಿಕೊಂಡು, ತನ್ನುಡುಪುಗಳನ್ನು ತನ್ನದಾದಿಯರಲ್ಲೊಬ್ಬಳಿಗೆ ಹಾಕಿ ಅಕೆಯನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ಕುದುರೆಯನ್ನೇರಿ ತನ್ನ ಪರಿವಾರದವರನ್ನು ಬಹು ಎಚ್ಚರಿಕೆಯಿಂದ ನಡೆಸುತಾ, ಸಿಬಿರವನ್ನು ಹೊರಡಿಸಿ, ಭೂಮಾರ್ಗದಿಂದಲೂ, ಸಮುದ್ರದ ಮಾರ್ಗದಿಂದಲೂ, ಪ್ರಯಾಣ ಮಾಡಿ, ಕಮರಲುಜಮಾನನ ತಂದೆಯ ಸ್ನೇಹಿತನಾದ ಇಜಿನಿ ದ್ವೀಪದ ರಾಜನಾದ ಅರ್ಮಿದಾಸ್ ಎಂಬ ರಾಜನ ರಾಜಧಾನಿಯೆನ್ನುಸೇರಿ, ಕಮರಲುಜಮಾನನು ಬಹುದೂರ ಪ್ರಯಾಣ ಮಾಡಿ, ಬಂದಿರುವನೆಂಬ ವರ್ತಮಾನವನ್ನು ಆ ರಾಜನಿಗೆ ತಿಳಿಯಪಡಿಸಲು ಆ ರಾಜನು ತನ್ನ ಆಸ್ಥಾನದ ಸಭಿಕರನ್ನೂ, ಪರಿವಾರವನ್ನೂ, ಕೂಡಿಕೊಂಡು ಅಟ್ಟಹಾಸದಿಂದ ತನ್ನ ಮಿತ್ರನಾದ ರಾಜಪುತ್ರನು ಹಡಗನ್ನಿಳಿಯುವ ಸ್ಥಳಕ್ಕೆಬಂದು, ಬಹು ಮರ್ಯಾದೆಯಿಂದ ಇದಿರ್ಗೊಂಡು ತನ್ನ ಅರಮನೆಗೆ ಕರೆದುತಂದು, ಮೂರುದಿನಗಳವರಿಗೂ, ಬಹುತ್ತರನಾದ ಮರ್ಯಾ

ದೆಗಳಿಂದ ೌತನಾದಿಗಣನ್ನು ಮಾಡಿ, ಸಂತೈಸಿ ತೃಪಿ೦ಪಡಿಸಲು, ಆಕೆಯು ತನ್ನ ಮಾವಿಗಳಿಂದೊಡಗೂಡಿ ಮುಂದೆ ಪ್ರಯಾಣಮಾಡಲುದ್ಯುಕ್ತಳಾಗಲು ಆ ರಾಜನು ಕಮರಲುಜ ನಾನನೆಂದು ಹೆಸರಿಟ್ಟುಕೊಂಡಿರುವ ರಾಜಪುತ್ರಿಯನ್ನಿದಿರುಗೊಂಡು ಸಾಗು ಕಳುಹಿಸುವುದಕ್ಕಾಗಿ ಬಂದು ಆತನ ಸಂಗಡ ಮಾತನಾಡುತಾ೦ ಅಯ್ಯಾ! ರಾಜಪುತ್ರನೇ! ನಾನು ಬಹಳ ಮುದುಕನಾಗಿಹೋದೆನು. ಇನ್ನುಮೇಲೆ ನಾನು ಬಹುದಿನಗಳು ಬದುಕಲಾರೆನು. ಯಾವವಿಧವಾದ ಬಾಧೆಯಿಂದಲೋ ನಾನು ಪುತ್ರಸಂತಾನವನ್ನು ಹೊಂದಿ ಬಾಳುವ ಸುಖವನ್ನು ಕಾಣದೆಹೋದೆನು.

ಆದರೆ ಭಗವತ್ಕಟಾಕ್ಷದಿಂದ ನನಗೊಬ್ಬ ಕುಮಾರಿ ಇರುವಳು. ಅವಳು ಸುಂದರಿಯಾಗಿಯೂ, ಸುಗುಣಭೂಷಿತೆಯಾಗಿಯೂ, ಇರುವಳು. ಅಂತಹ ನನ್ನ ರಾಜಪುತ್ರಿಯನ್ನು ನೀನು ಮದುವೆಯಾಗಿ ಈ ಜನಪದದ ಪಾಲನಾಭಾರವನ್ನು ವಹಿಸಿ, ಸುಖದಿಂದ ರಾಜ್ಯಭಾರವನ್ನು ವಹಿಸಿ, ನಂತರ ನಿನ್ನ ಸ್ವದೇಶಕ್ಕೆ ಹೊರಡಬಹುದು. ಇದಕ್ಕಿಂತಲೂ ಅಧಿಕವಾದ ಸಂತೋಷಕಾಲವು ನಮಗೆಂದಿಗೂ ದೊರೆಯಲಾರದು. ನಾನಾದರೋ ಬಹುದಿನಗಳಿಂದ ಅನುಭವಿಸಿ ಈ ಕಷ್ಟಗಳನ್ನು ತೊರೆದು, ಪರಕಿ೦ಸುಖವನ್ನು ಹೊಂದುವೆನು. ನಿನ್ನಂತಹ ಯೋಗ್ಯನಾವ ರಾಜಪುತ್ರನು ನನ್ನ ಮಗಳನ್ನು ಮದುವೆಯಾಗಿ ನನ್ನ ಸಿಂಹಾಸನವನ್ನು ಗತಿ೦ ರಾಜ್ಯವರಿ ಪಾಲನೆಮುಂಗೆ ಯುಕ್ತಿ೦ರುವುದನ್ನುಕಂತು ನಾನೂ, ನನ್ನಪ್ರಜೆಗಳೂ, ಸಂತೋಷಪಡುವೆವೆಂದು ನುಡಿದನು. ಇಂತೆಂದು ಹೇಳಿ ಕಹರಜೆಾದಿಯು ಬಿಳಗಾದಕೂಡಲೇ ಕಫೆಯನ್ನುನಿಲ್ಲಿಸಿ, ಮರಳಿ ಬೆಳಗಿನ ಜಾವದಲ್ಲಿ ಪುನಹ ಹೇಳಲಾರಂಭಿಸಿದಳು.

೨೨೩ನೆಯ ರಾತ್ರಿಯ ಕಥೆ.

ಮೇಲೆ ಹೇಳಿದ ತೆರದಿಂದ ಇಬೆನಿದ್ವೀಪದ ರಾಜನು ಚೀನಾ ರಾಜಪುತ್ರಿಯನ್ನುಕುರಿತು ನುಡಿದುದನ್ನುಕೇಳಿ, ತಾನು ಸ್ತ್ರೀಯೆಯಾದುದರಿಂದ ಆತನ ಮಗಳನ್ನು ಮದುವೆಮಾಡಿಕೊಳ್ಳುವುದಕ್ಕೆ ಸಮ್ಮತಿಸದಿದ್ದರೂ ರಾಜನು ಬಹು ವಿಶ್ವಾಸದಿಂದ ವಿವಾಹ ಸಾಮಗ್ರಿಗಳನ್ನು ಸಿದ್ಧಪಡಿಸುತ್ತಿರುವುದರಿಂದ ಆತನಪ್ರೇಮವೇ ನನ್ನಭಾಗಕ್ಕೆ ಕೋಪವಾಗಿ ಪರಿಣಮಿಸಿ,

ನನ್ನ ಪ್ರಾಣವೇ ಹೋಗುವುದಲ್ಲದೆ ನನ್ನ ರಹಸ್ಯವು ಹೊರಬೀಳುವುದು. ನಾನು ಹೆಂಗಸೆಂದು ಇಂತಹ ರಾಜಪುತ್ರನ ಹೆಂಡತಿಯೆಂದೂ, ಹೇಳಿಕೊಳ್ಳುವುದು ಯೋಗ್ಯವಲ್ಲವೆಂದು ಬಹಳಹೊತ್ತು ಯೋಚಿಸಿ, ನಂತರ ತನ್ನ ಮನದಲ್ಲಿ ಹೀಗೆಂದು ಯೋಚಿಸಿಕೊಂಡಳು. ನಾನು ಈತನ ಮಗಳನ್ನು ಮದುವೆಮಾಡಿಕೊಂಡರೆ ನನ್ನಗಂತನು ಪುನಃ ಬರುವುದಾದರೆ ಆತನಿಗೆ ಮತ್ತೊಂದು ರಾಜ್ಯವನ್ನು ಸಂಪಾದಿಸಿಕೊಟ್ಟಂತಾಗುವುದು. ಅಲ್ಲದೆ ನರ್ಮವಾಸನ ಅಭಿಪ್ರಾಯಾನುಸಾರವಾಗಿ ನಡೆದುದರಿಂದ ಆತನಿಗೆ ಸಂತೋಷವುಂಟಾಗಿ ತನ್ನಕಾರ್ಯವೂ ಕೈಗೂಡುವುದೆಂದು ತಿಳಿದು ಆತನನ್ನು ನೋಡಿ ಸ್ವಾಮಿ ! ತಾವು ನನ್ನವಿಷಯದಲ್ಲಿ ಇಷ್ಟೊಂದು ಮರ್ಯಾದೆಯನ್ನು ತೋರಿಸಿ ಉಪಚಾರ ಮಾಡುತ್ತಿರುವುದರಿಂದ ನಾನು ಬಹಳವಾಗಿ ಸಂತೋಷಿಸುವೆನು. ಆದರೆ ನಿಮ್ಮ ಮಗಳನ್ನು ನಾನು ಮದುವೆಮಾಡಿಕೊಳ್ಳುವವನಂತೆ ಅಭಿನಯಿಸಿ ತೋರ್ಪಡಿಸಲಾರೆನು. ಆದರೆ ನಿಮ್ಮಪ್ರಾಜ್ಞನುಸಾರವಾಗಿ ನಡೆಯಲು ಯಾವ ಅಭ್ಯಂತರವೂ ಇಲ್ಲವೆಂದು ಹೇಳಿದಳು.

ಈತೆರದಿಂದ ವಿವಾಹಕಾರ್ಯವೆಲ್ಲವೂ ಸಿದ್ಧವಾಗುತ್ತಿರುವಲ್ಲಿ ಕಮರಲುಜಮಾನಂತೆ ವೇಷವನ್ನು ಹಾಕಿಕೊಂಡಿರುವ ಚೀನಾ ರಾಜಪುತ್ರಿಯು ತನ್ನ ವಿವಾಹದವರನ್ನು ಕರೆದು ಇರ್ಜ್ ರಾಜ್ಯದ ಅಧಿಕಾರವನ್ನು ಪಡೆವುದಕ್ಕಾಗಿ ನಾನು ಆ ರಾಜಪುತ್ರಿಯನ್ನು ಮದುವೆಮಾಡಿಕೊಳ್ಳುವೆನೆಂದು ಹೇಳಿ ತನ್ನ ದಾಸಿಯೊರಿಗೆ ರಹಸ್ಯವನ್ನು ಕಾಪಾಡಿಕೊಂಡಿರುವಂತೆ ಎಚ್ಚರಿಸಿದಳು. ನಂತರ ಮರುದಿನ ಪ್ರಾತಃಕಾಲದಲ್ಲಿ ರಾಜನು ತನ್ನ ಸಭಿಕರನ್ನೆಲ್ಲಾ ಬರಮಾಡಿ ಸಭೆಯನ್ನುಕೂಡಿ, ಕಮರಲುಜಮಾನನ ಹೆಂಡತಿಯನ್ನು ಬರಮಾಡಿ ಇಲ್ಲಿಂದ ಮುಂದೆ ನನ್ನ ರಾಜ್ಯಾಧಿಕಾರವನ್ನು ಈತನಿಗೆ ಕೊಡುವೆನಾದುದರಿಂದ ನೀವೆಲ್ಲರೂ ರಾಜಭಕ್ತಿಯುಕ್ತರಾಗಿ ಬಹು ವಿನಯದಿಂದ ನಡೆದುಕೊಳ್ಳಬೇಕೆಂದು ಬಿನ್ನವಿಸಿ, ತಾನು ಸಿಂಹಾಸನದಿಂದ ಕೆಳಕ್ಕಿಳಿದು, ಕಮರಲುಜಮಾನನಂತೆ ವೇಷಧಾರಿಯಾಗಿರುವ ಬದೌರಳನ್ನು ಸಿಂಹಾಸನದಲ್ಲಿ ಕೂಳ್ಳಿರಿಸಿ, ರಾಜ್ಯಭಾರವನ್ನೊಪ್ಪಿಸಿ ತಾನು ಸುಖಸಂತೋಷಗಳನ್ನು ಹೊಂದಿ, ನಾನಾವಿಧವಾದ ಔತನ ಮಾಡಿ ಬಹುಕಾಲದವರಿಗೂ, ತನ್ನದೇಶದಲ್ಲಿ ಸಂತೋಷ ಕಾರ್ಯಗಳು

ನಡೆಯುವಂತೆ ಮಾಡಿದನು. ಆ ರಾತ್ರಿಯಲ್ಲಿ ಅರಮನೆಯಲ್ಲಿ ಬಯ ವಿನೋದವಾದ ಒಂದಾನೊಂದು ಔತನವು ನಡೆಯುತ್ತಿರುವಕಾಲದಲ್ಲಿ ಇಬಿನಿರಾಜನ ಹೆಂಡತಿಯಿಂದ ಅಲಂಕೃತಳಾಗಿ ಸರ್ವಾಂಗಸುಂದರಿಯಾದ ನಫೌಸಳೆಂಬ ರಾಜಪುತ್ರಿಯನ್ನು ಕ್ರಮಪೂರ್ವಕವಾದ ವಿವಾಹದಿಂದ ನಿಷೇಕಕಾರ್ಯವನ್ನು ನೆರವೇರಿಸುವುದಕ್ಕಾಗಿ ಏಕಾಂತದಲ್ಲಿ ಶಯ್ಯಾಗೃಹವನ್ನಲಂಕರಿಸುವಂತೆ ಕವುರಲುಜನಾನನ ವೇಷವನ್ನು ಹಾಕಿಕೊಂಡಿರುವ ಚೀನಾ ರಾಜಪುತ್ರಿಯೆ ಬಳಯಲ್ಲಿ ಬಿಟ್ಟರು. ಬೆಳಗಾಗುತ್ತಲೇ ವೇಷಧಾರಕನಾದ ಕೃತ್ರಿಮರೂಪದ ಕವುರಲುಜವಾನನು ಸಿಂಹಾಸನಾಸೀನನಾಗಿ ರಾಜ್ಯಭಾರವನ್ನು ನಡೆಸುತ್ತಿರಲು, ರಾಜನೂ, ರಾಣಿಯೂ, ತಮ್ಮ ಪುತ್ರಿಯೆ ಬಂದುರಾತ್ರಿ ನಡೆದ ವರ್ತಮಾನವನ್ನು ಕೇಳಲು ಆಕೆಯು ಯಾವ ಮಾತನ್ನೂ ಆಡದೆ ಬಹು ನಾಚಿಕೆಯುಕ್ತಳಾಗಿ ತಲೆಬಾಗಿರುವುದನ್ನುಕಂಡು, ಅವಳಿಗೆ ನಿನ್ನೇರಾತ್ರಿ ಯಾವವಿಧನಾದ ತೃಪ್ತಿಯೂ ಉಂಟಾಗಲಿಲ್ಲವೆಂದು ಖಂಡಿತವಾಗಿ ತಿಳಿದುಕೊಂಡರು.

ನಂತರ ರಾಜನು ತನ್ನಮಗಳನ್ನು ಕುರಿತು, ಅಮ್ಮಾ! ನೀನು ಚಿಂತಿಸಬೇಡ. ಕವುರಲುಜವಾನನು ಹಡಗನ್ನುಹತ್ತಿ ಮುಂದೆ ಪ್ರಯಾಣ ಮಾಡಬೇಕೆಂಬ ಇರಾದೆಯುಳ್ಳವನಾಗಿದ್ದರೂ, ಪ್ರತ್ಯುತ್ತರವನ್ನು ಹೇಳಲವಕಾಶವಿಲ್ಲದಂತೆ ನಾನು ಮಾತನಾಡಿದುದರಿಂದ ಆತನು ಒಪ್ಪಿಕೊಂಡು, ನಿನ್ನನ್ನು ಮದುವೆಮಾಡಿಕೊಂಡನು. ಆದರೆ ತಂದೆತಾಯಿಗಳನ್ನು ಪಿತೃವಾತ್ಸಲ್ಯಾನುಸಾರವಾಗಿ ನೋಡಿ, ಅವರನ್ನು ವಂದಿಸಬೇಕೆಂಬ ಕುತೂಹಲ ಆತನಿಗೊಂದು ವ್ರತರೂಪದಿಂದಿರಬಹುದು. ಆದುದರಿಂದ ನೀನು ಅದುವರಿಗೂ ಸ್ವಸ್ಥಮಾನಸಳಾಗಿರೆಂದು ನುಡಿದನು. ನಂತರ ಆತನು ತನ್ನ ಅಳಿಯನಸಂಗಡ ಸ್ವಲ್ಪಹೊತ್ತು ಕುಶಲಪ್ರಶ್ನೆಯನ್ನು ಮಾಡುತ್ತಿದ್ದು ಸೈನ್ಯಪರೀಕ್ಷಾಕಾರ್ಯಗಳನ್ನು ನೆರವೇರಿಸಿದಬಳಿಕ ಕವುರಲುಜವಾನೆಂದು ಹೆಸರಿಟ್ಟುಕೊಂಡಿರುವ ಚೀನಾ ರಾಜಪುತ್ರಿಯು ಬಹು ಚತುರತೆಯಿಂದ ರಾಜಕಾರ್ಯಗಳನ್ನು ನೆರವೇರಿಸುತ್ತಿರುವುದನ್ನುಕಂಡು, ಸಭಿಕರೆಲ್ಲರೂ ಆನಂದಪರವಶರಾದರು. ರಾತ್ರಿಯಾದಕೂಡಲೇ ತಾನು ಹಯಾತ್ತಾಲುನಿಫೌಸ ಅರಮನೆಯನ್ನು ಕುರಿತು ಬರಲು, ಆಕೆ ತನ್ನನ್ನು

ಬರಮಾಡಿಕೊಂಡ ರೀತಿಯಿಂದ ಆಕೆಗೆ ತನ್ನಲ್ಲಿ ಅಸಮಾಧಾನ ಉಂಟಾಗಿರು ವುದೆಂಬ ಸಂಗತಿಯನ್ನು ತಿಳಿದು ನಾನಾವಿಧವಾದ ಯುಕ್ತಿ ಚಮತ್ಕಾರಗ ಳಿಂದವಳನ್ನು ಸಂತೋಷಪಡಿಸಿ ನಂತರ ನೇವರ ಪಾರ್ಥನೆಗಾಗಿ ತಾನು ಹೊರಹೊರಟು ಧ್ಯಾನ ಮಾಡುತ್ತಾ, ಬಹುಕಾಲವನ್ನು ಕಳೆದುದರಿಂದ ಹಯಾತಾಲುನಿಶ್ಚೈಸಳು ನಿದ್ರಿಸಿದಳು. ನಂತರ ತಾನು ನಿದ್ರೆಮಾಡಿ ಮುಂಬೆಳಗಿನೊಳಿದ್ದು ರಾಜ್ಯಕಾರ್ಯಾಸಕ್ತಳಾಗಿ ಹೊರಟುಹೋದಳು. ಬೆಳಗಿನ ದಿನದಲ್ಲಿ ಇಬೆನಿ ದ್ವೀಪದ ರಾಜನು ವಿವಾಹದಿಂದ ಅಸಂತುಷ್ಟ ಳಾಗಿ ಕಣ್ಣೀರನ್ನು ಸುರಿಸುತ್ತ ತಂದೆತಾಯಿಗಳನ್ನುಕುರಿತು, ಬಹಳ ವಾಗಿ ದೂರಿಕೊಂಡಳು. ಅದನ್ನುಕೇಳಿ ಇಬೆನಿರಾಜನು ತನ್ನಳಿಯನ ಮೇಲೆ ಬಹಳವಾಗಿ ಕೋಪಿಸಿಕೊಂಡು ತನ್ನ ಮಗಳನ್ನು ಅನಾದಾರಣೆಮಾಡಿ ನೋಡಿದುದಕ್ಕೆ ಕಾರಣವೇನೋ ತಿಳಿಯಬೇಕೆಂದುನುಡಿದು, ಅಮ್ಮಾ! ಇನ್ನೊಂದುರಾತ್ರಿ ನೀನು ಸ್ವಸ್ಥಳಾಗಿದ್ದು ಪರೀಕ್ಷಿಸಿ ನೋಡು. ನಿನ್ನ ಗಂಡನು ನಿನ್ನಲ್ಲಿ ಬಳಕೆಯಾಗಿಲ್ಲದೆಹೋದರೆ ನಂತರ ನಾನು ಮಾಡತಕ್ಕ ಶಿಕ್ಷೆಯೆನ್ನು ಮಾಡಿ ಆತನ ಪ್ರಾಣವನ್ನೇ ತೆಗೆದುಕೊಳ್ಳುವೆನೆಂದು ನುಡಿದು ಬಹಳವಾಗಿ ತನಗೆ ಬಂದ ಕೋಪವನ್ನು ಅಣಗಿಸಿಕೊಂಡನು.

ಸಾಯಂಕಾಲವಾಗುತ್ತಲೇ ಕಮರಲುಜಮಾನನಂತೆ ವೇಷವನ್ನು ಹಾಕಿಕೊಂಡಿರುವ ಆತನ ಪಿಂಡತಿಯು ಇಬೆನಿರಾಜಕುಮಾರಿಯ ಅಂತಃಪು ರವನ್ನುಕುರಿತು ತೆರಳಿ ಬಂದು, ನಿನ್ನೇವಮಾಡಿದಂತೆ ಉಪಚಾರೋಕ್ತಿಗಳಿಂದ ಸಮಾಧಾನಮಾಡಿ ತಾನು ಜಪವ್ಯಾಜದಿಂದ ಹೊರಟುಹೋಗುತ್ತಿರುವು ದನ್ನುಕಂಡು ಸೈರಿಸಲಾರದೆ ಆತನನ್ನು ನಿಲ್ಲಿಸಿ, ಆಹಾ! ಕಳೆದೆರಡುರಾತ್ರಿ ಗಳಿಂದಲೂ ಮಾಡಿದಂತೆ ಮಹಾ ಚಮತ್ಕಾರದಿಂದ ನೀವು ತಪ್ಪಿಸಿಕೊಂಡು ಹೋಗಬೇಕೆಂದಿರುವಿರೋ, ಆಗಲಿ. ನಿಮ್ಮನ್ನು ಮೋಹಿಸಿ ಬಹು ನಮ್ಮ ಳಾಗಿ ಕಾದುಕೊಂಡಿರುವ ಸರ್ವಾಂಗಸುಂದರಿಯಾದ ರಾಜಪುತ್ರಿಯಮೇಲೆ ಬಹಳವಾಗಿ ಪ್ರೀತಿ ಉಂಟಾಗದಿರಲು ಕಾರಣವೇನು? ಇವನ್ನು ದಯ ಮಾಡಿ ತಿಳಿಯಹೇಳಿರಿ. ಅನ್ಯರಾಗಿದ್ದರೆ ಬಹಳವಾಗಿ ಕೋಪಿಸಿಕೊಂಡು ನಿಮ್ಮ ಚರ್ಯೆಕ್ಕೆ ತಕ್ಕ ಶಿಕ್ಷೆಯೆನ್ನು ಮಾಡಹೋಗುತ್ತಿದ್ದರು. ತಾವು ನನ್ನಲ್ಲಿ ಅನಾದರಣೆಯೆನ್ನು ತೋರುತ್ತಿದ್ದರೂ, ನಾನು ಉತ್ತಮಗುಣಿ ಯಾದುದರಿಂದ ನಿಮಗೆ ಯಾವ ಕೇಡನ್ನೂ ಮಾಡಲಾರೆನು. ಆದರೆ ನೀವು

ಕಳೆದದಿನಗಳಲ್ಲಿ ಮಾಡಿದಂತೆ ನನಗೆ ಅಪಮಾನ ಮಾಡುವುದರಿಂದ ನನ್ನ ತಂದೆಗೆ ನಿಮ್ಮಮೇಲೆ ಬಹಳವಾಗಿ ಕೋಪ ಉಂಟಾಗುವುದು. ಆದುದರಿಂದ ನಿಮಗೆಂದಿಗೂ ಕೇಡು ತಪ್ಪದು. ಇದರ ಫಲಿತಾಂಶವನ್ನು ಬೇಕಾದರೆ ನಾಳೆ ಪರೀಕ್ಷಿಸಬಹುದೆಂದು ನುಡಿದು ಸುಮ್ಮನಾದಳು. ಆ ಮಾತುಗಳನ್ನು ಕೇಳಿ ಬದೌರಳು ತನ್ನ ಪ್ರಾಣಹಾನಿಕಾರಣವು ಈಗತಾನೆ ಕಾಣಬರುವುದು. ಆಹಾ ! ಹೇಗಾದರೂ ಮಾಡಿ ಪ್ರಾಣವನ್ನುಳಿಕೊಳ್ಳಬೇಕು.

ಅಯ್ಯೋ ! ನನ್ನ ಗಂಡನನ್ನು ತೊರೆದು ನಾನು ಈತೆರದಿಂದ ಸಾಯುವಕಾಲ ಬಂದಿತಲ್ಲಾ ! ಅದೃಷ್ಟವಶದಿಂದ ನನ್ನಗಂಡನು ಬರುವು ದಾದರೆ ಈ ಮಾರ್ಗವಾಗಿಯೇ ಬರಬೇಕು. ಆದುದರಿಂದ ನಾನು ಹೇಗಾ ದರೂಮಾಡಿ ಪ್ರಾಣವನ್ನುಳಿಸಿಕೊಂಡಿರುವುದೇ ನನ್ನ ಮುಖ್ಯವಾದ ಕರ್ತ ವ್ಯವಾಗಿರುವುದು, ಇನ್ನುಮೇಲೆ ನನ್ನ ರಹಸ್ಯವನ್ನು ಈ ಸುಂದರೀ ಮಣಿಯೆಸಂಗಡ ಹೇಳಿಕೊಳ್ಳದಿದ್ದರೆ ನನ್ನ ಕಾರ್ಯವು ವಿಫಲವಾಗುವು ದಲ್ಲದೆ ಮಹತ್ತಾದ ವ್ಯಸನ ಉಂಟಾಗುವುದೆಂದು ಬಗೆದು ಪೂಜ್ಯಳಾದ ರಾಜಪುತ್ರಿಯೇ ! ನನ್ನರಹಸ್ಯವನ್ನು ನಿನ್ನಸಂಗಡ ಹೇಳದರೂ ನೀನು ನನ್ನನ್ನು ಬಹು ಮರ್ಯಾದೆಯಿಂದ ಕಾಪಾಡುತ್ತೀ ಎಂದು ನಂಬಿ ನಾನು ನಿಜವಾದ ಗಂಡುಸಲ್ಲವೆಂದು ಪ್ರಾರ್ಥಿಸಿ, ಅಮ್ಮಾ ! ನನ್ನ ದುರದೃಷ್ಟ ಕರವಾದ ಚರಿತ್ರೆಯನ್ನು ಕೇಳಿದರೆ ನೀವುಕೂಡ ಬಹಳವಾಗಿ ವ್ಯಸನ ಯುಕ್ತಳಾಗಿ ಆದರವನ್ನು ತೋರ್ದಡಿಸುವೆ ಎಂದು ಬೇಡಿಕೊಳಲು ಆಕೆಯು ಇಷ್ಟಾನುಸಾರವಾಗಿ ನಿನ್ನಚರಿತ್ರೆಯನ್ನು ಹೇಳಬೇಕೆಂದು ಇಚಿನಿ ರಾಜ ಪುತ್ರಿಯು ಕೇಳದಕೂಲೇ ತನ್ನ ಚರಿತ್ರೆಯನ್ನು ಸವಿಸ್ತಾರವಾಗಿ ಆಕೆಯ ಕರ್ಣಮೂಲದಲ್ಲಿನಿಯೋಗಿಸಿದ ತರುವಾಯ ದುಃಖಾಕ್ರಾಂತಳಾಗಿ ನಿಂತಿ ರುವ ಕಪುರಲುಜವಾನನ ಹೆಂಡತಿಯನ್ನುಕುರಿತು ಇಚ್ಚಿನಿ ರಾಜಪುತ್ರಿಯು ಅಮ್ಮಾ ! ನೀನು ನಿಷ್ಕೇವಾದ ಸ್ವಲ್ಪದಿನಗಳನ್ನೇ ಬಹಳವಾದ ದುರವಸ್ಥೆ ಯೆನ್ನುಹೊಂದಿರುವೆಯಾದರೂ, ನಿನ್ನಚರಿತ್ರೆಯು ಬಹು ವಿನೋದವಾ ಗಿರುವುದು. ಆದುದರಿಂದ ದಯೆಮಾಡಿ, ನಾವಿಬ್ಬರೂ ಪರಮ ಸ್ನೇಹ ದಿಂದ ನಡೆದುಕೊಳ್ಳುವರೆಗೆ ರಹಸ್ಯವನ್ನುಹೊರಹಾಕದಿರಬೇಕೆಂದು ಪ್ರಾರ್ಥಿ ಸುವೆನೆಂದು ಹೇಳಿದಬಳಿಕ ಇಬ್ಬರೂ ಪರಸ್ಪರ ಅನ್ಯೋನ್ಯವಾದ ಆನಂ ದದಿಂದ ಮಲಗಿ ನಿದ್ರಿಸಿದರು. ಬಳಿಕ ಆ ದೇಶದ ಪದ್ಧತಿಗನುಸಾರವಾಗಿ

ನಿಷೇಕವ್ರಸುತ್ತದ ಚಿಪ್ಪಿಗಳನ್ನು ತೋರ್ಪಡಿಸುತ್ತಾ ಇರುತಿದ್ದುದರಿಂದ ರಾಜನೂ, ರಾಣಿಯೂ, ದಾದಿಯೆರೂ, ಸಹಾ ಮೋಸಹೋದರು. ಆದುದರಿಂದ ಪರಮಸಂತುಷ್ಟಳಾದ ಕಮರಲುಜಮಾನನ ಹೆಂಡತಿಯು ತಾನು ಪುರುಷವೇಷವನ್ನು ತಾಳಿ, ದೇಶವಪ್ರಜೆಗಳೆಲ್ಲರೂ ಸಂತೋಷ ಪಡುವಂತೆ ರಾಜ್ಯವನಾಳುತ್ತಿದ್ದಳು. ಇಂತು ನುಡಿದು ಚಿಳಗಾದಕೂಡಲೇ ಷಹರ ಜಾದಿಯು ಕಥೆಯನ್ನು ನಿಲ್ಲಿಸಿ, ಮರುದಿನ ಚಿಳಗಿನ ಜಾವದಲ್ಲಿ ಮರಳಿ ಹೇಳಲಾರಂಭಿಸಿದಳು.

೨೨ನೆಯ ರಾತ್ರಿಯ ಕಥೆ.

ಸುಲ್ತಾನರೇ ! ಇಜಿನಿ ದ್ವೀಪದಲ್ಲಿಂತು ನಡೆಯುತ್ತಿರಲು ಕಮರಲುಜಮಾನನು ವಿಗ್ರಹಾರಾಧಕರ ಪುರವಲ್ಲಿರುವ ತೋಟಗಾದನಬಳಿಯಲ್ಲಿ ವಾಸವಾಡಿಕೊಂಡಿದ್ದನು. ಒಂದಾನೊಂದುದಿನ ಆ ಊರಿನವರೆಲ್ಲರೂ ಹಬ್ಬವನ್ನು ಮಾಡುತ್ತಿದ್ದುದರಿಂದ ಯಾರೂ ಕೆಲಸ ಮಾಡಕೂಡದೆಂಬ ನಿಯಮವನ್ನನುಸರಿಸಿ ತೋಟಗಾರನು ಕಮರಲುಜಮಾನನನ್ನು ಕುರಿತು, ಅಯ್ಯಾ! ನೀನು ಈದಿನ ಈ ಊರಲ್ಲಿ ಹಬ್ಬವಾದುದರಿಂದ ನೂಧವಾಗಿ ಇದ್ದುಕೊಂಡು ವಿರಾಮ ಸುಖವನ್ನು ಹೊಂದಬಹುದೆಂದು ಹೇಳಿದನು. ಕಮರಲುಜಮಾನನು ನಿನೋದವಾಗಿ ಕಾಲವನ್ನು ಕಳೆಯಬೇಕೆಂದುಯೋಚಿಸಿ, ತನ್ನ ತೋಟದಲ್ಲಿರುವ ಒಂದಾನೊಂದು ವೃಕ್ಷಮೂಲದಲ್ಲಿ ನಿಂತು ನೋಡುತ್ತಿರುವಾಗ ಮೇಲಿನಿಂದ ಒಂದು ಹೆಣ್ಣುಪಕ್ಷಿಯೂ, ಒಂದು ಗಂಡುಪಕ್ಷಿಯೂ, ಕೊಕ್ಕಾಟೋಪದಿಂದ ಜಗಳವಾಡುತಾ, ಕೆಳಗಿಳಿದುಬಂದು, ಜಗಳವಾಡಿ ಬಂದನೆನ್ನೊಂದು ಕೊಂದುಹಾಕಿತು. ಕೂಡಲೇ ಮತ್ತೆರಡು ಪಕ್ಷಿಗಳು ಅವರಬಳಿಗೆ ಬಂದು ಕುಳಿತು ಸ್ವಲ್ಪಹೊತ್ತು ವ್ಯಸನಪಡುತ್ತಿದ್ದು ನಂತರ ಕಾಳುಗಳಿಂದ ಹೆಣ್ಣಿನನ್ನು ತೆಗೆದು ಆ ಪಕ್ಷಿಯನ್ನು ಸಮಾಧಿಮಾಡಿದಮೇಲೆ ತಾವುಗಳೂ ಜಗಳವಾಡಲಾರಂಭಿಸಿದವು. ಗಂಡುಪಕ್ಷಿಯು ಹೆಣ್ಣುಹಕ್ಕಿಯ ಹೊಟ್ಟೆಯನ್ನು ಸೀಳಿ ತಾನು ಹಾರಿಹೋಯಿತು. ಈ ವಿಚಿತ್ರವನ್ನು ನೋಡುತ್ತಿದ್ದ ಕಮರಲುಜಮಾನನು ಹೆಣ್ಣುಹಕ್ಕಿಯ ಕರುಳಿನಲ್ಲಿ ಏನೋ ಒಂದು ಪದಾರ್ಥವು ನೇದಾಡುತ್ತಿರುವುದನ್ನು ಕಂಡು, ಹತ್ತಿರಹೋಗಿ ನೋಡುವಲ್ಲಿ, ಅದು ಬದೌರ ಎಂಬ ತನ್ನರಾಣಿಯ ರಕ್ಷಾಯಂತ್ರವಾಗಿದ್ದುದರಿಂದ ಬಹಳವಾಗಿ ಸಂತೋಷಿಸಿ, ಆ ನೀಚಪಕ್ಷಿಗೆ

ತಾನು ಮಾಡಬೇಕಾಗಿರುವ ಶಿಕ್ಷೆಯನ್ನು ದೇವರೇ ಉಂಟುಮಾಡಿದನೆಂದು ಹೊಗಳುತಾ್ಂ, ಬಹು ಸಂತೋಷದಿಂದ ಅದನ್ನು ತೆಗೆದುಕೊಂಡು ರಾತಿ್ರಯಲ್ಲಿ ಚೆನಾ್ನಗಿ ನಿದೆ್ರಮಾಡಿ ಬೆಳಗಾದಕೂಡಲೇ ತೋಟಗಾರನನ್ನು ಕುರಿತು, ತಾನೇನುಮಾಡಬೇಕೆಂದು ಕೇಳಲು, ಆತನು ತನ್ನ ತೋಟದನ ರುವ ಒಂದಾನೊಂದು ಭಣಮುರವನ್ನು ಕಡಿಯುವಂತೆ ಹೇಳಿದನು. ಕಮರಲುಜಮಾನನು ಆ ಮುರವನ್ನು ಕಡಿಯುತಿ್ತರುವಾಗ ಅಕಸಾ್ಮತಾ್ಂಗಿ ಕೊಡಲಿಯು ನೆಲಕ್ಕೆ ಜಗಲಿ ಒಡೆದುಹೋಯಿತು. ಆದುದರಿಂದ ಆ ಸ್ಥಲವನ್ನು ಅಗಿದು ನೋಡಲಾಗಿ ಎಂಭತ್ತು ಬಿಂದಿಗೆಗಳಲ್ಲಿ ಭಂಗಾರದ ನಾಣ್ಯಗಳು ತುಂಬಿರುವುದನ್ನುಕಂಡು, ಸಂತೋಷಯುಕ್ತನಾಗಿ ತೋಟಗಾರನ ಬಳಿಗೆ ಹೋಗಿ ಈ ವರ್ತಮಾನವನ್ನು ತಿಳಿಸಲಾಗಿ ಆತನು ಬಹಳವಾಗಿ ಕೊಂಡಾಡ ತಾ್ಂ, ಅಯ್ಯಾ ! ಸಂತೋಷದಿಂದಿರು. ಹಣಗನ್ನು ಹತು್ತವುದಕ್ಕೆ ಸಿದ್ಧನಾಗಿರು. ಇನ್ನು ಮೂರುದಿನಗಳು ಹಡಗಿನ ಪ್ರಯಾಣ ಮಾಡಬೇಕಾಗಿರುವುದು. ನೀನು ಹಡಗು ಹತು್ತವುದಕ್ಕೆ ಅನುಕೂಲ ಪಡಿಸಿಕೊಂಡು ಬಂದಿರುವೆನೆಂದು ಬೇಳದನು.

ಆ ಮಾತುಗಳನ್ನುಕೇಳಿ, ಕಮರಲುಜಮಾನನು ಅಯ್ಯಾ ! ತಮ್ಮ ಸಂತೋಷವು ಸ್ಥಿರವಾಗಿರಲೆಂದು ನಾನು ಭಗವಂತನನ್ನು ಪಾ್ರರ್ಥಿಸುವೆನು. ಆದರೆ ಇಲ್ಲಿ ದೊರೆತಿರುವ ನಿಧಿಯನ್ನು ನೀವು ತೆಗೆದುಕೊಳ್ಳಿ ! ಎಂದು ಹೇಳಿ ಆ ನಿಧಿಯನ್ನು ತೋರಿಸಲು ತೋಟಗಾರನು ಆತನನ್ನು ಅಯ್ಯಾ ! ನಾನು ಎಂಭತ್ತುವರ್ಷಗಳಿಂದಲೂ ಈ ತೋಟದಲ್ಲಿ ಕೆಲಸ ಮಾಡುತಿ್ತದ್ದರೂ, ಈ ಧನವು ನಿನಗೆ ದೊರೆದಿರುವುದರಿಂದ ಇದು ನಿನ್ನ ದೇಹೊರತು ನನ್ನದಲ್ಲ. ಆದುದರಿಂದ ನೀನೇ ಇದನ್ನು ಸ್ವೀಕರಿಸಬೇಕೆಂದು ನುಡಿಯಲು, ರಾಜಕುಮಾರನು ಅದಕೊ್ಕಪ್ಪದೆ ಬಹಳಹೊತು್ತ ವಿವಾದ ಮಾಡಿ, ಕೊನೆಗೆ ತಾನೂ, ಆತನೂ, ಸಮವಾಗಿ ಹಂಚಿಕೊಳ್ಳುವಂತೆ ಯೋಚಿಸಿಕೊಂಡರು. ನಂತರ ತೋಟಗಾರನು ರಾಜಪುತ್ರನನ್ನು ಕುರಿತು, ಅಯ್ಯಾ ! ಈ ದ್ರವ್ಯವನ್ನು ನೀನು ತೆಗೆದುಕೊಂಡುಹೋಗುವುದು ಬಹುಪ್ರಯಾಸ. ಆದರೂ ಇದರಿಂದ ನಿನಗೆ ಅಪಾಯ ಸಂಭವಿಸಬಹುದು. ಆದುದರಿಂದ ನೀನು ಈ ದ್ವೀಪದಲ್ಲಿ ಉತ್ತಮನಾಗಿರುವ ಹಣ್ಣುಗಳನ್ನು ಕೊಂಡು, ಎಂಭತ್ತು ಮಡಿಕೆಗಳನ್ನುತಂದು ಅವುಗಳಲ್ಲಿ ಅರ್ಧಕ್ಕೆ

ಹಣವನ್ನೂ, ಉಳಿದ ಅರ್ಧಕ್ಕೆ ಹಣ್ಣನ್ನೂ, ತುಂಬಿ ಸಾಗಿಸಿಕೊಂಡು ಹೋಗುವುದು ತುಂಬಾ ಸುಖಕರವಾದುದೆಂದು ನುಡಿಯಲು, ರಾಜಕುಮಾರನು ಅದಕೊಪ್ಪಿ ಹಾಗೆಯೇ ಮಾಡಿ ತಾನೂ ಮುದುಕನೂ ಊಟಮಾಡಿ ರಾತ್ರಿ ಮಲಗಿಕೊಂಡಾಗ್ಯೆ ಅನ್ಯೋನ್ಯವಾಗಿ ಮಾತನಾಡುತ್ತಾ ತಂತಮ್ಮ ವೃತ್ತಾಂತಗಳನ್ನು ಹೇಳಿಕೊಂಡರು. ನಂತರ ಮುದುಕನಾದುದರಿಂದಲೂ, ಬಹಳವಾಗಿ ಕೆಲಸಮಾಡಿ ದಣಿದುದರಿಂದಲೂ, ಶ್ರೋಟಗಾರನಿಗೆ ದೇಹಾಲಸ್ಯ ಉಂಟಾಗಿ ದಿನೇ ದಿನೇ ಅಧಿಕವಾಗುತ್ತಿರಲು ತೋಟಗಾರನಬಳಿಗೆ ಹಡಗಿನ ಸರದಾರನು ತನ್ನ ಚಾರಕರೊಡನೆಬಂದು, ಮಾತನಾಡಬೇಕೆಂದು ತೋಟದ ಬಾಗಿಲನ್ನು ತಟ್ಟಿದನು. ಆಗ ಕಮರಲುಜಮಾನನು ಬಾಗಿಲನ್ನು ತೆರೆದು ತಾನೇ ಪ್ರಯೋಜನ ಹೊರಡತಕ್ಕನೆಂಬುದನ್ನು ಹೇಳಿ, ಆತನ ಹಡಗಿನಲ್ಲಿ ತುಂಬುವುದಕ್ಕಾಗಿ ಆ ಹಣ್ಣಿನ ಮಡಿಕೆಗಳನ್ನು ಕೊಟ್ಟು, ಹಡಗಿನ ಯಜಮಾನನಿಗೆ ಮುದುಕನ ಸ್ಥಿತಿಯನ್ನು ತಿಳಿಯಹೇಳಿ ಕಳುಹಿಸಲು, ಆತನು ಸ್ವಲ್ಪಹೊತ್ತು ಕಳೆದಮೇಲೆ ಅಯ್ಯಾ! ನಿನಗೋಸ್ಕರವಾಗಿ ಕಾದುಕೊಂಡಿರುವೆನು ಮತ್ತೇನು ಕಾರ್ಯವಿಲ್ಲ. ಹಡಗು ಹೊರಡುತ್ತಿರುವುದು ಬೇಗ ಹೊರಟುಬಾ ಎಂದು ಹೇಳಿ ಹೊರಟುಹೋದನು.

ಹೀಗೆ ಹಡಗಿನ ಯಜಮಾನನು ಹೇಳಿ ಹೊರಟುಹೋದ ಬಳಿಕ ರಾಜಪುತ್ರನು ಮುದುಕನಬಳಿಗೆ ಹೋಗಿ ಆತನಿಂದಪ್ಪಣೆಯನ್ನು ಪಡೆದು, ಬರಬೇಕೆಂದಿರುವಲ್ಲಿ ಆತನು ದೈವಯೋಗದಿಂದ ಮರಣವನ್ನು ಹೊಂದಿದ್ದನು. ನಂತರ ಆತನ ಉತ್ತರಕ್ರಿಯಾದಿಗಳನ್ನು ತೀರಿಸಿ, ಭಕ್ತಿಯುಕ್ತನಾಗಿ ಆತನು ಮಾಡಿದುಪಕಾರಕ್ಕಾಗಿ ಭಗವಂತನು ಆತನಿಗೆ ಸ್ವರ್ಗಸೌಖ್ಯವನ್ನು ಕೊಡಲೆಂದು ಪ್ರಾರ್ಥಿಸಿ, ತಾನು ಹಡಗನ್ನು ಹತ್ತಬೇಕೆಂದು ಓಡಿಬರುತ್ತಿರುವಲ್ಲಿ ಹಡಗು ಹೊರಟುಹೋಗಿರುವುದನ್ನು ಕಂಡು ಬಹಳ ವಿಚಾರಯುಕ್ತನಾದನು. ಹಡಗಿನ ಯಜಮಾನನು ಮೂರುಘಳಿಗೆಯೆ ಹೊತ್ತು ಕಮರಲುಜಮಾನನಿಗಾಗಿ ಕಾದುಕೊಂಡಿದ್ದು ಬಳ್ಳೀ ಘಾಳಿ ಬಂದಕೂಡಲೇ ಹಡಗನ್ನು ನಡೆಸಿಕೊಂಡು ಹೊರಟುಹೋದನು. ಇಂತೆಂದು ಹೇಳಿ ಕಮರಲುಜಮಾನನು, ಬಹಳವಾದ ವ್ಯಸನಕ್ಕೆ ಸಿಕ್ಕಿದ ಸಮಾಚಾರವನ್ನು ತಿಳಿಸಿ ಬೆಳಗಾದುದರಿಂದ ಕಥೆಯನ್ನು ನಿಲ್ಲಿಸಿ, ಮರಳಿ ಮರುದಿನ ಬೆಳಗಿನ ಜಾವದಲ್ಲಿ ಹೇಳಲಾರಂಭಿಸಿದಳು.

೨೨ನೆಯ ರಾತ್ರಿಯ ಕಥೆ.

ರಾಜಕುಮಾರನಾದ ಕಮರಲುಜಮಾನನು ತನ್ನ ಪ್ರಯಾಣವು ನಿಂತುಹೋದುದರಿಂದ ಬಹಳವಾದ ವ್ಯಸನವನ್ನು ಹೊಂದಿ, ವರ್ತಕ್ಕೊಂದು ಸಾರಿ ಹಡಗು ಬರುವವರಿಗೂ ಈ ತೋಟವನ್ನು ಗುತ್ತಿಗೆಮಾಡಿಕೊಂಡು ಜೀವಿಸುತ್ತಿರಬೇಕೆಂದು ಗೊತ್ತುಮಾಡಿ, ಯೆಜಮಾನನಬಳಿಗೆ ಹೋಗಿ, ಹಾಗೆಯೇ ಆತನ ದಯೆಯನ್ನು ಸಂಪಾದಿಸಿಕೊಂಡು ವ್ಯಸನವನ್ನು ಅನುಭವಿಸುತ್ತಾ, ಇರುತ್ತಿದ್ದನು. ಆದರೆ ಆ ಹಡಗು ದೈವಾನುಗ್ರಹದಿಂದ ಅನುಕೂಲವಾದ ಫಲವನ್ನು ಬೀಸುತ್ತಿದ್ದುದರಿಂದ ಸುಖವಾಗಿ ಇಬ್ಬಿನಿದ್ವೀಪವನ್ನು ಸೇರಿತು. ಅಲ್ಲಿನ ಹೊಸ ರಾಜನೂ, ರಾಣಿಯೂ, ಕಮರಲುಜಮಾನನನ್ನು ಪತ್ತೇ ಮಾಡಬೇಕೆಂಬ ಅಭಿಲಾಷೆಯುಳ್ಳವರಾಗಿ ಸಮುದ್ರತೀರದಲ್ಲಿ ಓರುತ್ತಿರುವ ಹಡಗನ್ನುನೋಡಿ, ಆ ಹಡಗಿನ ಯೆಜಮಾನನನ್ನು ಕರೆಸಿ ಮಾತನಾಡಲು ಪ್ರಯತ್ನಮಾಡಿ ತನ್ನ ಸನ್ನಾಹಗಳೆಲ್ಲವನ್ನೂ ನೆರವೇರಿಸಿಕೊಂಡವರಾದರು. ಸ್ವಲ್ಪಹೊತ್ತಿಗೆ ಹಡಗು ರೇವಿನಲ್ಲಿ ಬಂದು ನಿಂತಕೂಡಲೇ ರಾಜನು ತನ್ನಾಪ್ತಮಂತ್ರಿಗಳ ಮುಖದಿಂದ ಹಡಗಿನ ಸರದಾರನನ್ನು ಬರಮಾಡಿ, ಅಯ್ಯಾ! ಈ ಹಡಗು ಎಲ್ಲಿಂದ ಬಂದಿತು? ಆ ದೇಶದಲ್ಲಿ ವಿಶೇಷಸಂಗತಿಗಳೇನು? ವ್ಯಾಪಾರಸ್ಥರು ಯಾವ ಯಾವ ಸರಕುಗಳನ್ನು ಮಾರುವುದಕ್ಕೆ ತಂದಿರುವರು? ನಿನ್ನ ಹಡಗಿನ ಪ್ರಯಾಣಿಕರಲ್ಲಿ ಉತ್ತಮಗುಣಿಗಳಾದ ಯಾವ ಮಾನವಶಿಖಾಮಣಿಗಳಾದರೂ ಇರುವರೇ ಎಂದು ಪ್ರಶ್ನೆ ಮಾಡಲು ಹಡದಿನ ಸರದಾರನು ರಾಜನು ಕೇಳಿದ ಪ್ರಶ್ನೆಗಳಿಗೆ ಪ್ರತ್ಯುತ್ತರವನ್ನು ಸರಿಯಾಗಿ ಹೇಳಿ ನಂತರ ತನ್ನಹಡಗು ವಿಗ್ರಹಾರಾಧಕರ ಪುರದಿಂದ ಬಂದಿತೆಂದೂ ಅಲ್ಲಿನ ಉತ್ತಮಸರಕುಗಳಾದ ಬಣ್ಣದ ಬಟ್ಟೆಗಳೂ, ಸಾದಾ ವಸ್ತ್ರಗಳೂ, ಹಣ್ಣುಗಳೂ, ಮೊದಲಾದ ವುಗಳನು ನನ್ನ ಹಡಗಿನಲ್ಲಿ ಇರುವುವೆಂದೂ ನುಡಿದನು.

ನಂತರ ನಾನು ಕುದುರೆಯನ್ನು ಹತ್ತಿ ಪ್ರತ್ಯಕ್ಷವಾಗಿ ಹಡಗನ್ನು ನೋಡಬೇಕೆಂದು ತಿಳಿದು, ರೇವನ್ನು ಸೇರಿಬಂದು, ಹಡಗನ್ನು ಪರೀಕ್ಷಿಸಿ ಕಮರಲುಜಮಾನನು ಬಾರದಿರುವುದನ್ನುಕಂಡು, ಬಹಳವಾಗಿ ವ್ಯಸನಾಕ್ರಾಂತರಾಗಿ ಅಲ್ಲಿರುವ ಉತ್ತಮವಾದ ಹಣ್ಣುಗಳನ್ನು ಕೊಂಡುಕೊಳ್ಳಬೇಕೆಂದು ಹಡಗಿನ ಯೆಜಮಾನನನ್ನುಕುರಿತು, ಅಯ್ಯಾ! ಈ ಹಣ್ಣು

ಗಳನ್ನು ನಮಗೆ ಕೊಟ್ಟುಬಿಡೆಂದು ಹೇಳಲು ಆತನು ಬಹಳ ವಿನಯದಿಂದ ರಾಜನನನು "ಬದೌರಾ" ಸ್ವಾಮಿ ! ಈ ಹಣ್ಣುಗಳು ನನ್ನದಲ್ಲ ! ವಿಗ್ರಹಾರಾಧಕರ ಪುರದಲ್ಲಿರುವ ಒಬ್ಬ ಬಡ ವ್ಯಾಪಾರಿಯದು. ಆತನನ್ನು ನಾವು ಬಹಳವಾಗಿ ಎಚ್ಚರಿಸಿ ಮೂರು ಘಂಟೆಗಳಕಾಲ ಆತನಿಗಾಗಿ ಕಾದುಕೊಂಡಿದ್ದರೂ, ಬಾರದೆ ಹೋದುದರಿಂದ ನಾವು ಅನುಕೂಲವಾದ ಘಾಳಿಯನ್ನು ತೊರೆಯಲಾರದೆ ಹಡಗನ್ನು ನಡೆಸಿಕೊಂಡು ಬಂದು ಬಿಟ್ಟೆವು. ಅದುದರಿಂದ ಆ ಬಡ ವ್ಯಾಪಾರಿಯು ಕ್ಷೇಮಕ್ಕಾಗಿ ಬಂದು ಸಾವಿರ ವರಹಗಳನ್ನು ತಾವು ಕೊಡುವುದಾದರೆ ಈ ಹಣ್ಣುಗಳನ್ನು ಕೊಡುವೆನೆಂದು ಹೇಳಲು ರಾಣಿಯು ಅದರಂತೆ ಸಾವಿರ ರೂಪಾಯಿಗಳನ್ನು ಕೊಟ್ಟು ಹಣ್ಣುಗಳಿಲ್ಲವನ್ನು ತನ್ನ ಅರಮನೆಗೆ ತರಿಸಿಕೊಂಡಳು. ರಾತ್ರಿಯಾಗುತ್ತಲೇ ಕಮರಲುಜಮಾನನಂತೆ ವೇಷವನ್ನು ಹಾಕಿಕೊಂಡಿರುವ ಬದೌರಳು ಹಯಾತಾನಿಫೌಸಳ ಅಂತಃಪುರವನ್ನು ಹೊಕ್ಕು ಹತ್ತು ಹಣ್ಣಿನ ಮಡಿಕೆಗಳನ್ನು ತಲುಪಂತೆ ಕೆಳಗೆ ಬಂದು ಮಡಿಕೆಯ ಹಣ್ಣನ್ನು ಸುರಿದು ಭಂಗಾರವಾಗಿರುವುದನ್ನು ಕಂಡು ಆಶ್ಚರ್ಯಯುಕ್ತಳಾಗಿ ನಾನೇ ಎಲ್ಲವನ್ನೂ ಪರೀಕ್ಷಿಸಿ ನೋಡಬೇಕೆಂದು ಮಡಿಕೆಗಳನ್ನು ತರಿಸಿ ನೋಡುವಲ್ಲಿ ಎಲ್ಲಾಮಡಿಕೆಗಳಲ್ಲಿಯೂ ಒಂದೇಸಮನಾಗಿ ಹಣ್ಣೂ ಚಿನ್ನವೂ ಇದ್ದುದಕ್ಕಾಗಿ ಸಂತೋಷಿಸಿ ಕಟ್ಟಕಡೆಗೆ ತನ್ನ ರಕ್ಷಾಯಂತ್ರವು ಜೊರಕೆದುದನ್ನುನೋಡಿ ಮೂರ್ಛಾರ್ಕಾಂತಳಾದಳು.

ಆಗ ಹಯಾತಾನಿಫೌಸಳು ತನ್ನಪಾದಿಯೆರೊಡನೆ ಶೈತ್ಯೋಪಚಾರ ಮಾಡಿದಬಳಿಕ ಮೂರ್ಛೆ ತಿಳಿದೆದ್ದು ಹಾ ! ದುರಾವೃಷ್ಟವಶಾದವಾದಯಂತ್ರವೇ ! ಎಂದು ಹಂಬಲಿಸಿ, ತನ್ನ ವಾರ್ತೆಯು ದಾದಿಯರಿಗೆ ತಿಳಿಯದಿರುವುದಕ್ಕಾಗಿ ಅವರನ್ನು ತಂತಮ್ಮ ಮನೆಗಳಿಗೆ ಹೋಗುವಂತೆ ಕಳುಹಿಸಿಕೊಟ್ಟ ನಂತರ ಇಬೆನಿ ರಾಜಪುತ್ರಿಯನ್ನುಕುರಿತು, ಅಮ್ಮಾ ! ನೀನು ನನ್ನ ಚರಿತ್ರೆಯನ್ನು ಸಂಪೂರ್ಣವಾಗಿ ಕೇಳಿರುವೆಯೆಷ್ಟ ? ಈ ದುಷ್ಟಯಂತ್ರದಿಂದಲೇ ನನ್ನ ಗಂಡನಾದ ಕಮರಲುಜಮಾನನಿಗೂ ವಿಯೋಗವುಂಟಾಗಿ ನಾನಾ ದುಃಖಗಳನ್ನು ಅನುಭವಿಸಿದೆನು. ಆದುದರಿಂದ ಪುನಹ ಇದು ನನ್ನಬಳಿಗೆ ಬಂದು ಸೇರಿದುದರಿಂದ ಸರ್ವಾಂಗಸುಂದರನಾಗಿ ಪ್ರಾಣ

ಪ್ರಯೆನಾಇ ಕಮರಲುಜವಯನನು ಮರಳಿ ತನ್ನಬಳಿಗೆ ಬರುವುದರಲ್ಲಿ ಸಂದೇಹವಿಲ್ಲವೆಂದು ನುಡಿದರು. ಮರುದಿನ ಬೆಳಿಗ್ಗೆ ರಾಜನು ಹಡಗಿನ ಸರನಾರನನ್ನುಕುರಿತು, ಅಯ್ಯಾ! ಆ ವಿಗ್ರಹಾರಾಧಕರ ಪುರದಲ್ಲಿರುವ ಆ ಬಡವರ್ತಕನು ಏನುಮಾಡುತ್ತಿರುವನು. ಆತನ ವರ್ತಮಾನವೇನಾದರೂ ನಿನಿಗೆ ತಿಳಿಯುವುದೇ? ಆತನು ನನಗೆ ಸಾಲವನ್ನು ಕೊಡಬೇಕಾಗಿರುವುದೆಂದು ಪ್ರಶ್ನೆಮಾಡಲು, ಹಡಗಿನ ಸರದಾರನು ಸ್ವಾಮಿಾ! ಆತನು ಒಬ್ಬಾಬ್ಬನೊಬ್ಬ ತೋಟಗಾರನ ಕೈಕೆಳಗೆ ಕೂಲಯಾಳಾಗಿ ಜೀವಿಸುತ್ತಿರುವನು. ಆತನು ವಾಸಮಾಡುವ ಸ್ಥಲವನ್ನೂ, ಆತನ ಗುರುತನ್ನೂ, ನಾನೇ ತಿಳಿದಿರುವೆನು. ನಮ್ಮ ಸಮಯಕ್ಕೆ ಸರಿಯಾಗಿ ಆತನು ಬಾರದಿಹೋದುದರಿಂದ ನಾವು ಹಡಗನ್ನು ನಡೆಸಿಕೊಂಡು ಹೊರಟುಬರಬೇಕಾಯಿತು ಎಂದು ವಿನ್ನೈಸಲು, ರಾಜಪುತ್ರನು ಆತನನ್ನುನೋಡಿ ಅಯ್ಯಾ! ಈಕ್ಷಣವೇ ನೀನು ಹೋಗಿ ಆತನನ್ನು ಇಲ್ಲಿಗೆ ಕರೆದುಕೊಂಡು ಬಾರದೆ ಇದ್ದರೆ ನಿನ್ನ ಸಾಮಾನುಗಳ ಸಹಿತವಾಗಿ ನಿನ್ನ ಪ್ರಾಣವನ್ನು ನಿನ್ನ ಹಡಗಿನ ಶ್ರೀಮಂತರ ಪ್ರಾಣಧನಗಳನ್ನು ಕಸಿದುಕೊಳ್ಳುವೆನೆಂದುಹೇಳಿ, ಪಕ್ಕದಲ್ಲಿ ನಾದು ನಿಂತಿರುವ ತನ್ನ ಚಾರಭಟರಿಗೆ ಆಜ್ಞಾಪಿಸಲು ಅವರು ಬಹು ತ್ವರೆಯಿಂದ ಹಡಗಿನ ಸಾಮಾನುಗಳೆಲ್ಲವನ್ನೂ ತಂದು ಖಜಾನೆಯಲ್ಲಿ ಸೇರಿಸಿದರು.

ನಂತರ ಹಡಗಿನ ಸರದಾರನು ತನ್ನ ಆಪ್ತಮಿತ್ರರೊಡನೆ ಮಾತನಾಡಿಕೊಂಡು, ಅನ್ನಪಾನಾದಿಗಳಿಗೆ ಸರಿಯಾದ ಏರ್ಪಾಡನ್ನು ಮಾಡಿಕೊಂಡು ಹಿಂದಿರುಗಿ ಪ್ರಯಾಣಮಾಡಿ ವಿಗ್ರಹಾರಾಧಕರ ದ್ವೀಪವನ್ನು ಸೇರಿ ಅರ್ಧರಾತ್ರಿಯಲ್ಲಿ ಹಡಗನ್ನುನಿಲ್ಲಿಸಿ, ತಾನೂ ತನ್ನ ಜೊತೆಯಲ್ಲಿ ಬಂದಿದ್ದ ಎಂಟುಮಂದಿಯೂ ತೋಂಟವನ್ನುಕುರಿತು ಪ್ರಯಾಣಮಾಡಲು ಕಮರಲುಜಮಾನನು ನಿದ್ರಾಭಾರದುದರಿಂದ ಚೀನಾರಾಜಪುತ್ರಿಯಾದ ಬದೌರಳನ್ನು ಚಿಂತಿಸುತ್ತ ಕುಳಿತಿರುವುದನ್ನುಕಂಡು ಯಾವಮಾತನ್ನೂ ಆಡದೆ ಕೈಕಾಲುಗಳನ್ನುಕಟ್ಟಿ ಗಾಡಿಯಲ್ಲಿಹಾಕಿಕೊಂಡು ಹಡಗನ್ನುಸೇರಿ ಒಂದಾನೊಂದು ಸ್ಥಲದಲ್ಲಿ ಆತನನ್ನು ಕ್ಷೇಮದಿಂದಿರಿಸಿ ಯಾರೂ ಆತನಸಂಗಡ ಮಾತನಾಡದೆ ಬಹು ಪ್ರಯಾಸದಿಂದ ಹಡಗನ್ನು ಹಿಂದಿರುಗಿಸಿ ನಡೆಸುತ್ತಿರುವಾಗ ಕಮರಲುಜಮಾನನು ಹಡಗಿನ ಸರದಾರನನ್ನು ಅಕಸ್ಮಾತ್ತಾಗಿ

ಕೊಂಡುದರಿಂದ ಅಯ್ಯಾ! ಹೀಗೇಕೆ ನಿರ್ಬಂಧಮಾಡಿ ನನ್ನನ್ನು ಕರೆದುಕೊಂಡು ಹೋಗುತ್ತಿರುವಿರೆಂದು ಬೇಡಿಕೊಳಲು, ಆತನು ಅಯ್ಯಾ! ನೀನು ಇಬೆನಿ ರಾಜಪುತ್ರನಿಗೆ ಸಾಲವನ್ನು ಕೊಡಬೇಕಾದುದರಿಂದ ತಪ್ಪಿಸಿಕೊಂಡು ತಿರುಗುತ್ತಿದ್ದೆಯೆಂತಲ್ಲಾ! ಎನಲು ಕಮರಲುಜಮಾನನು ಅಯ್ಯೋ! ನಾನು ಇಬೆನಿ ರಾಜನನ್ನು ಬಲ್ಲೆ. ಆತನೊಡನೆ ಯಾವವಿಧವಾದ ಸಂಬಂಧವನ್ನೂ ಬೆಳಸಲಿಲ್ಲವಲ್ಲಾ. ಇದೇನು ಅನ್ಯಾಯವೆನಲು, ಹಡಗಿನ ಸರದಾರನು ಅಯ್ಯಾ; ಸ್ವಲ್ಪ ಸುದಾರಿಸು. ಸ್ಥಲವು ಹತ್ತಿರವಾಯಿತು. ಅಲ್ಲಿಗೆ ಹೋದಬಳಿಕ ಎಲ್ಲವೂ ನಿನಗೆ ತಿಳಿಯೆಬರುವುದೆಂದು ಹೇಳಿದನು. ಇಂತೆಂದು ನುಡಿದು ಷಹರಜಾದಿಯು ಬೆಳಗಾದಕೂಡಲೇ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಿಗಿನ ಜಾವದಲ್ಲಿ ಹೇಳಲಾರಂಭಿಸಿದಳು.

೨೨೬ ನೆಯ ರಾತ್ರಿ ಕಥೆ.

ಸುಲಾತ್ರನೇ! ಈತೆರದಿಂದ ಕಮರಲುಜಮಾನನನ್ನು ಹಡಗಿನಲ್ಲಿ ಬಲಾತ್ಕಾರದಿಂದ ತರುತ್ತಿರುವ ಹಡಗಿನ ಯೆಜಮಾನನು ತರಣಿಯೆನ್ನು ಬಹು ತ್ವರೆಯೆಯಾಗಿ ನಡೆಸಿಕೊಂಡು ಇಬೆನಿ ದ್ವೀಪವನ್ನು ಸೇರಿ, ಅರ್ಧರಾತ್ರಿಯಾದರೂ ಸುಮ್ಮನಿರದೆ ಆತನನ್ನು ಸಂಗಡ ಕರೆದುಕೊಂಡು, ರಾಜನ ಅರಮನೆಯಬಳಿಗೆ ಬರಲು, ಬದ್ಧೌರಳು ನಿದ್ರೆಯಿಲ್ಲದೆ ಚಿಂತಿಸುತ್ತಿದ್ದು, ಕಮರಲುಜಮಾನನ ಹಡಗಿನ ವರ್ತಕನು ಬಂದಿರುವನೆಂಬುದನ್ನು ಕೇಳಿ ಹೊರಗೆಬಂದು ತೋಟಗಾರನಂತೆ ವೇಷವನ್ನು ಹಾಕಿಕೊಂಡು ನಿಂತಿರುವ ಇದುವರಿಗೂ ತನ್ನ ಮನಸ್ಸಿಗೆ ಬಹಳವಾಗಿ ಹಿಂಸೆಯನ್ನುಂಟು ಮಾಡಿದವನಾದ ರಾಜಪುತ್ರನನ್ನು ನೋಡಿ ತಾನಿಂಥವನೆಂದು ತಿಳಿದು, ಆಲಿಂಗನಾದಿ ಕಾರ್ಯಗಳನ್ನು ಮಾಡಿಕೊಳ್ಳದಿರುವುದು ನನಗೂ, ಆತನಿಗೂ, ಕ್ಷೇಮಕರವೆಂದು ತಿಳಿದು, ಹಡಗಿನ ಯೆಜಮಾನನನ್ನು ಕುರಿತು, ಅಯ್ಯಾ! ಬೆಳಗಾಗುವವರಿಗೂ ನೀನು ಈತನನ್ನು ನಿನ್ನಬಳಿಯಲ್ಲೇ ಇಟ್ಟುಕೊಂಡಿರೆಂದು ನುಡಿದು, ಅಂತಃಪುರವನ್ನು ಸೇರಿ, ಆತನಿಗೆ ತನ್ನ ವರ್ತಮಾನವನ್ನು ತಿಳಿಸಿ, ಮೊದಲಿನಂತೆ ಮಾಡಿಕೊಳ್ಳುವುದಕ್ಕೆ ತಕ್ಕ ಉಪಾಯವನ್ನು ಯೋಚಿಸಿ, ಬೆಳಗಾದಮೇಲೆ ಹಡಗಿನ ಸರದಾರನಸಂಗಡ ಬಂದ ಆತನಿಗೆ ತನ್ನ ಆಸ್ಥಾನದಲೊಂದು ವಜೀರನ ಕೆಲಸವನ್ನಿತ್ತು ತಾನಿಂಥವನೆಂದು ಹೇಳದೆ ಹಡಗಿನ ಯೆಜಮಾನನನ್ನು ಕುರಿತು, ಆತನು ಮಾಡಿದ್ದ

ಉಪಕಾರಕ್ಕಾಗಿ ಬಹಳವಾಗಿ ವಂದನೆಗಳನ್ನುಮಾಡಿ, ಆತನ ಮತ್ತು ಅವ
ನಂತಹ ಇತರ ವ್ಯಾಪಾರಿಗಳ ಸರಕನ್ನು ಆತನಿಗೆ ಕೊಡಿಸಿ, ಅಯ್ಯಾ!
ನಿನಗೆ ನಾನು ಕೊಟ್ಟಿರುವ ಹಣ್ಣುಗಳ ಕ್ರಯವಾದ ಒಂದುಸಾವಿರರೂಪಾ
ಯಿಗಳನ್ನು ನೀನೇ ತೆಗೆದುಕೋ, ನನಗೆ ಈ ತೋಟದವನು ಕೊಡಬೇ
ಕಾಗಿರುವ ಸಾಲದಲ್ಲಿ ನಾನು ಅದನ್ನು ವಜಾ ಮಾಡಿಕೊಳ್ಳುವೆನೆಂದು ನುಡಿ
ಯಲು, ಆತನು ಬಹುಸಂತೋಷದಿಂದ ತನ್ನ ಸಾಮಾನುಗಳನ್ನು ತೆಗೆದು
ಕೊಂಡು ಇತರ ವರ್ತಕರೊಡನೆ ಮುಂದಕ್ಕೆ ಪ್ರಯಾಣ ಮಾಡಿದನು.
ನಂತರ ಚೀನಾ ರಾಜಪುತ್ರಿಯಾದ ಬದೌರಳು ಸಕಲವಿಧವಾದ ರಾಜಪು
ತ್ರನ ವರ್ತಮಾನವನ್ನು ಹಯೋತಾಲುನಿಫೌಸಳಿಗೆ ತಿಳಿಸಲು ಆಕೆ ಬಹು
ಸಂತೋಷದಿಂದ ರಾಜಪುತ್ರನನ್ನು ನೋಡಿ ಹಿಗ್ಗುತ್ತಿದ್ದಳು.

ಒಂದಾನೊಂದುದಿನ ಅವರಿಬ್ಬರೂ ಕಮರಲುಜಮಾನನನ್ನು
ವಿನಘಟ್ಟಕ್ಕೆ ಕರೆದುಕೊಂಡುಹೋಗಿ ಸ್ನಾನಮಾಡಿಸಿ, ರಾಜಾಧಿರಾಜರು
ಹಾಕಿಕೊಳ್ಳುವಂತಹ ಉಡುಪುಗಳನ್ನು ಹಾಕಿ ಅಲಂಕಾರ ಮಾಡಿ ಸಭೆಯ
ಲ್ಲಿರುವ ಸಿಂಹಾಸನದಲ್ಲಿ ಕುಳ್ಳಿರಿಸಲು, ಸಭಿಕರೆಲ್ಲರೂ ಆತನ ತೇಜೋವಿಶೇ
ಷವನ್ನು ನೋಡಿ ಬಹಳವಾಗಿ ಆನಂದಿಸಲು, ಇಬೆನಿ ರಾಜಪುತ್ರಿಯಾದ
ಹಯೋತಾತಾನಿಫೌರಳು, ಓ! ಸಭಿಕರಿರಾ! ಈ ರಾಜಪುತ್ರನು ಇಮ್ಮು
ಖರಿಗೂ ಗೂಢನಾಗಿದ್ದರೂ ಇನ್ನು ಮೇಲೆ ಭಗವಂತನ ದಯೆಯಿಂದೀತನ ಸುಗು
ಣಗಳೆಲ್ಲವೂ ನಿಮಗೆ ತಿಳಿಯಬರುವುದೆಂದು ಕೊಂಡಾಡಿದಳು. ಅದನ್ನು
ಕೇಳಿ ರಾಜಪುತ್ರನಾದ ಕಮರಲುಜಮಾನನು ಬಹಳವಾಗಿ ಆಶ್ಚರ್ಯಯು
ಕ್ತನಾಗಿದ್ದರೂ, ಕೂಡಲೇ ಇಬೆನಿರಾಜನುಸಹಾ ಬಹು ಮರ್ಯಾದೆಯಿಂದ
ತನ್ನನ್ನು ಗುರುತುಕಂಡವನಂತೆ ಮಾತನಾಡಿಸಿ, ಸೊತ್ರವಾಮಾಡಿದುದರಿಂದ
ಮತ್ತಷ್ಟು ಅಧಿಕವಾದಆನಂದವನ್ನುಹೊಂದಿ, ವಿನಯದಿಂದ ಸ್ವಾಮಿ!
ತಾವು ನನಗೋಸ್ಕರವಾಗಿ ಮಾಡಿದ ಮರ್ಯಾದೆಗಳಿಗಾಗಿ ನಾನು ತಮ್ಮನ್ನು
ಬಹಳವಾಗಿ ವಂದಿಸುತ್ತಿರುವೆನೆಂದು ನುಡಿದು ತಮ್ಮಂತಹ ಹಿರಿಯರಾದ
ರಾಜಶ್ರೇಷ್ಠರ ಕರುಣಾಪಾತ್ರರಾಗಿರುವುದರಿಂದ ನನ್ನ ಶಕ್ತ್ಯನುಸಾರ
ವಾಗಿ ರಾಜ್ಯಭಾರವನ್ನು ಮಾಡುವೆನೆಂದು ನುಡಿದಬಳಿಕ ರಾಣಿಯಾದ
ಬದೌರಾ ಎಂಬವಳು ಆತನಿಗಾಗಿ ಸಿದ್ಧಮಾಡಿರುವ ಅರಮನೆಗೆ ಆತನನ್ನು

ಕರೆದುಕೊಂಡುಹೋಗಿ ಬಿಟ್ಟು ಖರ್ಚಿಗೆ ಸಾಮಾನ್ಯವನ್ನೂ, ಉತ್ತಮರಾದ ಪರಿಚಾರಕರನ್ನೂ, ಇತರ ಸಕಲ ಪದಾರ್ಥಗಳನ್ನೂ, ಶ್ರೇಷ್ಠತರವಾದ ಕುದುರೆಗಳನ್ನೂ, ರಾಜಪುತ್ರರಿಗೆ ಬೇಕಾಗಿರುವ ಮುಖ್ಯವಾದ ಇತರ ವಸ್ತುಗಳೆಲ್ಲವನ್ನೂ ಸಿದ್ಧಮಾಡಿಕೊಂಡಳು. ರಾಣಿಯಾದ ಬದೌರಳಿಂದ ತಾನು ಇಂತಹ ಉತ್ತಮಸ್ಥಿತಿಯನ್ನು ಹೊಂದಿದರೂ, ಅವಳಿಂಥವಳೆಂದು ತಿಳಿದುಕೊಳ್ಳಲಾರದೆ ಮಹತ್ತಾದ ವಿಸ್ಮಯವನ್ನು ಹೊಂದಿ, ಚೀನಾ ರಾಜಪುತ್ರಿಯಿಂದ ತನಗಿಂತಹ ಸೌಭಾಗ್ಯ ಉಂಟಾಯಿತ್ತೆಂದು ತಿಳಿದುಕೊಳ್ಳಲಾರದೆಹೋದನು. ಮತ್ತೊಡನು ಮೂರುದಿನಗಳಾದಬಳಿಕ ಬದೌರಳು ಹೇಗಾದರೂಮಾಡಿ ಆತನ ರಹಸ್ಯವನ್ನು ಹೊರಹಾಕಿ ತಾನು ಮೊದಲಿನಂತೆ ಮಾಡಿಕೊಳ್ಳಬೇಕೆಂದು ನೆನೆದು, ಆತನ ಚರಿತ್ರೆಯನ್ನು ಸಂಪೂರ್ಣವಾಗಿ ತನ್ನ ದಾದಿಯ ಮೂಲಕವಾಗಿ ಹೇಳಿಕಳುಹಿಸಬೇಕೆಂದು ತಿಳಿದು, ಹಾಗೆ ಮಾಡುತ್ತಿದ್ದಳು. ಆದರೆ ಕಮರಲುಜಮಾನನು ಯಾವ ಯೋಚನೆಯನ್ನೂ ಖಂಡಿತವಾಗಿ ನಿಶ್ಚಯಿಸಿಕೊಳ್ಳಲಾರದೆ, ಹೇಗಾದರೂ ಇಜಿನಿ ದಿವ್ಯಾಪದ ರಾಜಪುತ್ರಿಯನ್ನು ತಾನು ಮದುವೆಮಾಡಿಕೊಂಡುದೇ ಆದರೆ ಧನ್ಯನಾಗುವನೆಂದು ತಿಳಿದು, ಹಲವಂಗಗಳಿಂದ ಚಿಂತಿಸುತ್ತಿರಲು, ಬಹಳವಾಗಿ ನಿಟ್ಟುಸುರನ್ನು ಬಿಡುತ್ತಾ ವಿರಹವ್ಯಥೆಯಿಂದ ನೊಂದು ಬೆಂಡಾಗಿ ಹೋಗುತ್ತಿದ್ದರೂ, ಆತನು ಸರ್ವಜನರಲ್ಲೂ, ಪ್ರಜೆಗಳಲ್ಲೂ, ಸಮಾನವಾದ ಗೌರವವನ್ನುಹೊಂದಿರುವುದನ್ನುಕಂಡು ಬದೌರಳು ಒಂದಾನೊಂದು ದಿನ ಆತನನ್ನುನೋಡಿ ನಿನ್ನಸಂಗಡ ಮಹತ್ತಾದ ರಾಜಕಾರ್ಯವನ್ನು ಕುರಿತು ಒಂದಾನೊಂದು ಯೋಚನೆಯೆನ್ನು ಮಾಡಬೇಕಾಗಿರುವುದರಿಂದ ನಾನು ಈದಿನ ರಾತ್ರಿಗೆ ನಿನ್ನಮನೆಗೆ ಬರುವುದೇ ಸಂದೇಹವಾಗಿರುವುದೆಂದು ಹೇಳಿ ಸಂಜೆಗೆ ಸರಿಯಾಗಿ ನನ್ನ ಅಂತಃಪುರಕ್ಕೆ ಬಂದುಬಿಡೆಂದು ನುಡಿದಳು.

ಕಮರಲುಜಮಾನನು ಅದರಂತೆ ಬಂದಬಳಿಕ ಆತನನ್ನು ಒಳಗೆ ಬರಮಾಡಿಕೊಂಡು, ಬಾಗಿಲು ಕಾವಲುಗಾರನಾದ ಖೋಜೆಯೆ ಸರದಾರನಿಗೆ ಎಚ್ಚರಿಕೆಯಾಗಿರುವಂತೆ ಹೇಳಿ, ಪಯಾತಾಲಿಫೌಸಳು ಮಲಗಿಕೊಂಡಿರುವಮನೆಯ ಪಕ್ಕದಲ್ಲಿರುವ ತನ್ನಮನೆಗೆ ಕರೆದುಕೊಂಡುಹೋಗಿ ಬಾಗಿಲನ್ನು ಭದ್ರವಾಗಿ ಮುಚ್ಚಿಕೊಂಡು, ನಿನ್ನಿಂದ ಯಾವ ಯೋಚನೆಯೂ

ಆಗಬೇಕಾದುದಿಲ್ಲ. ಆದರೆ ಇಗೋ ನೋಡು ಈ ಯಂತ್ರವನ್ನು ಒಬ್ಬಾ ನೊಬ್ಬ ಜ್ಯೋತಿಷ್ಕನು ತಂದು ನನ್ನಬಳಿಗೆ ಕೊಟ್ಟು ಹೋಗಿರುವನು, ನೀನು ಸಕಲವನ್ನೂ ತಿಳಿದವನಾಗಿರುವುದರಿಂದಿದೇತಕ್ಕೆ ಕೆಲಸಕ್ಕೆ ಬರುವುದೋ ಹೇಳಿಂದು ತನ್ನ ರಕ್ಷಾಯಂತ್ರವನ್ನು ಆತನಿಗೆ ಕೊಟ್ಟಳು. ಆತನು ಆ ತನ್ನ ಪ್ರಾಣನಾಯಕಿಯ ಯಂತ್ರವನ್ನು ನೋಡುತ್ತಲೇ ಮಹತ್ತಾದ ವ್ಯಸನವನ್ನುಹೊಂದಿ, ನಾನಾಬಗೆಯಿಂದ ಹಂಬಲಿಸುತ್ತಾ ಸಕಲ ವಿಧವಾದ ತನ್ನ ಕಥೆಯನ್ನು ವಿವರಿಸಿ ಹೇಳಿದಬಳಿಕ ರಾಜನು ಆತನನ್ನು ಸಮಾಧಾನ ಮಾಡಿ, ಹೊರಗೆಬಂದು ರಾಜವೇಷವನ್ನು ತೊರೆದು ತಾನು ಮೊದಲು ಧಾಬನ್ನುಬಿಟ್ಟು, ಸಿಬಿರದಲ್ಲಿ ನಿದ್ರಿಸಿದಕಾಲದಲ್ಲಿ ಹಾಕಿಕೊಂಡಿದ್ದ ಉಡುಪನ್ನು ಹಾಕಿಕೊಂಡು ಆತನೆದುರಿಗೆ ಬಂದು ನಿಂತುಕೊಳಲು ಕೂಡಲೆ ತನ್ನ ಹೆಂಡತಿಯೆಂದು ತಿಳಿದು ಪರಸ್ಪರವಾಗಿ ಪ್ರೇಮದಿಂದಾಲಿಂಗಿಸಿಕೊಂಡು ಸಂತೋಷಚಿತ್ತರಾಗಿ ಸ್ವಲ್ಪಹೊತ್ತು ಮನ್ಮಥೋದ್ರೇಕದಿಂದ ನಡುಗುವ ತಮ್ಮ ದೇಹಗಳನ್ನು ಅನ್ಯೋನ್ಯಾವಲಂಬನೆಯಿಂದ ಸರಿಪಡಿಸಿಕೊಂಡು ಸ್ವಸ್ಥಮಾನಸರಾದರು.

ಬಳಿಕ ಸ್ವಸ್ಥಮಾನಸಳಾಗಿ ಕುಳಿತುಕೊಂಡ ಚೀನಾ ರಾಜಪುತ್ರಿಯೂ, ರಾಜನೂ, ರಾಜನನ್ನು ಅಗಲಿದ ಮೊದಲೊಂಡು ಇದುವರೆಗೂ ನಡೆದ ಸಂಗತಿಯನ್ನು ಇಬ್ಬಿನಿ ರಾಜಪುತ್ರಿಯನ್ನು ಮದುವೆಯಾಗಿ ರಾಜ್ಯವನ್ನು ನಿರ್ವಹಿಸುತ್ತಿದ್ದು ಆತನನ್ನ ಬರಮಾಡಿಕೊಂಡ ವಿಚಾರವನ್ನು ಸವಿಸ್ತಾರವಾಗಿ ನುಡಿದಬಳಿಕ ಕಮರಲುಜಮಾನನು ತಾನು ಅನುಭವಿಸಿದ ಕಷ್ಟಸುಖಗಳನ್ನು ಹೇಳಿಕೊಂಡನು. ನಂತರ ರಾತ್ರಿಯಲ್ಲಿ ಬಹುಕಾಲವು ಕಳೆದುಹೋದುದರಿಂದಿಬ್ಬರೂ ಮಲಗಿ ನಿದ್ರಿಸಿದರು. ಇಂತೆಂದುಹೇಳಿ ಷಹರಜಾದಿಯು ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಮರಳಿ ಹೇಳಲಾರಂಭಿಸಿದಳು.



೨೨ನೆಯ ರಾತ್ರಿ ಕಥೆ.

ಸುಲ್ತಾನರೇ ! ಹಿಂದೆ ಹೇಳಿದ ತೆರದಿಂದ ಬದೌರಳು ತನ್ನ ಸಹ ಜವಾದ ಸ್ತ್ರೀ ವೇಷವನ್ನು ಹಾಕಿಕೊಂಡನಂತರ ಅದನ್ನು ಮರಳಿ ಬದ ಲಾಯಿಸಲಿಲ್ಲ. ಮತ್ತೇನೆಂದರೆ :—ಬೆಳಗಾದಕೂಡಲೇ ಇಬಿನಿ ರಾಜನನ್ನೂ, ತನ್ನ ಸಖಿಕರನ್ನೂ, ಬರಮಾಡಲು ಅವರೆಲ್ಲರೂ ಅಂತಃಪುರವನ್ನು ಸೇರಿ ಬಂದು, ಆಹಾ ! ಇದೇನು ಆಶ್ಚರ್ಯ ! ಇಷ್ಟುವರಿವಿಗೂ ನಮ್ಮಕಣ್ಣಿಗೆ ಕಾಣಿಸದಿರುವ ಬಬ್ಬಾಬ್ಬನೊಬ್ಬ ಹೊಸ ಹೆಂಗಸು ಈ ಅಂತಃಪುರದಲ್ಲಿರಲು ಕಾರಣವೇನೋ ತಿಳಿಯೆಜೆಂದು ಬಹಳವಾಗಿ ಕೋಪಿಸಿಕೊಂಡರು. ಆಗ ಬದೌರಳು ಅವರನ್ನುಕುರಿತು, ಸಾ್ವಮಿ ! ನಿಜವಾಗಿಯೂ, ಮೊದಲಿ ನಿಂದ ಪುರುಷನಾಗಿರಲಿಲ್ಲ. ನನ್ನ ಚರಿತೆ್ರಯನ್ನು ನೀವು ಕೇಳಿದರೆ ನಾನು ಮಾಡಿದ ಯುಕ್ತಿ ಚಮತಾ್ಕರಗಳಿಗಾಗಿ ನನ್ನನ್ನು ದಂಡಿಸದೆ ಮನ್ನಿಸ ಬೇಕೆಂದು ಪಾ್ರರ್ಥಿಸಿ, ಇಬಿನಿ ರಾಜನನ್ನುಕುರಿತು, ಅಯ್ಯಾ ! ನನ್ನ ಗಂಡನಾದ ಕಮರಲುಜಮಾನನೆಂಬ ಈ ರಾಜಪುತ್ರನಿಗೆ ನಿನ್ನಮಗಳನ್ನು ವಿವಾಹಪೂರ್ವಕವಾಗಿ ಕನ್ಯಾದಾನವನ್ನು ಮಾಡಿಕೊಟ್ಟರೆ ನಿನ್ನಮಗಳು ರಾಣಿಯಾಗಿ ಸಮಸ್ತ ಸುಖಗಳನ್ನು ಅನುಭವಿಸುವಳು.

ನಂತರ ನಾನು ಆತನಿಗೆ ಎರಡನೆಯ ಹೆಂಡತಿಯಾಗಿರುವೆನು. ಇದಕ್ಕೆ ಸಂದೇಹವಿಲ್ಲವೆಂದು ನುಡಿದುದರಿಂದ ಇಬಿನಿರಾಜನು ಕಮರಲುಜಮಾನನ ಕಡೆಗೆ ತಿರುಗಿ ಅಯ್ಯಾ ! ಇದುವರಿಗೆ ನನ್ನ ಅಳಿಯನೆಂದು ಹೆಸರನ್ನು ಹೊಂದಿದ್ದ ಬದೌರಳು ತಾನು ಎರಡನೆ ಹೆಂಡತಿಯಾಗಿರುವೆನೆಂದು ಒಪ್ಪಿ ಕೊಂಡಿರುವುದರಿಂದ ನೀನು ಅವಶ್ಯಕವಾಗಿ ಈ ನನ್ನ ಮಗಳನ್ನು ಮದುವೆ ಯಾಗಿ ನಿನ್ನ ಆಯುಃಕಾಲವನ್ನು ನನ್ನ ರಾಜ್ಯದ ಸಾರಾ್ವಜ್ಯಪದವಿ ಯನ್ನನುಭವಿಸುತ್ತ ಕಳೆಯಬೇಕೆಂದು ಬೇಡಿ ತನ್ನಮಗಳಾದ ಹಯಾತ್ತುನಿಫೌಸಳನ್ನು ಆತನಿಗೆಕೊಟ್ಟು ಮದುವೆಯನ್ನು ಮಾಡಿದನು. ರಾಣಿ ಯರಿಬ್ಬರೂ ಪೂರ್ವಕ್ಕಿಂತಲೂ ಅಧಿಕವಾದ ಸ್ನೇಹವನ್ನು ಹೊಂದಿ, ರಾಜನಾದ ಕಮರಲುಜಮಾನನನ್ನುಕೂಡಿ ಸಮಾನವಾದ ದಾಂಪತ್ಯಸುಖ ವನ್ನು ಅನುಭವಿಸುತ್ತ ಮಹದಾನಂದಭರಿತರಾಗಿರುತ್ತಿರುವಲ್ಲಿ, ರಾಜ

ಪುತ್ರನು ಅವರುಗಳ ಯುಕ್ತ ಚಮತ್ಕಾರಯುಕ್ತವಾದ ಸರಸವಾಕ್ಯ ಗಳಿಂದ ಸಂತುಷ್ಟನಾಗಿ ಸುಖಗಳನ್ನು ಅನುಭವಿಸುತ್ತಿದ್ದು ಆ ರಾಣಿಯ ರಲ್ಲಿ ಇಬ್ಬರು ಮಕ್ಕಳನ್ನು ಪಡೆದು, ಸಂತೋಷದಿಂದಿರುತ್ತಿದ್ದನು. ಬದೌ ರಳು ತಾನು ಹೆತ್ತ ಮಗನಿಗೆ ಅಂಜಿಯೌವನೆಂದರೆ ಮಹಾ ಬಲವಂತನೆಂದೂ ಹಯೋತ್ತಾನಿಫೌಸಳು ತಾನು ಹೆತ್ತ ಮಗನಿಗೆ ಅಸ್ವಾದುಯೆಂದರೆ ಮಹಾ ಸುಖವಂತನೆಂದು ಹೆಸರಿಟ್ಟು ತಾಯಿಗಳು ಸಂತೋಷದಿಂದಿದ್ದರು.

ಅಂಜಿಯಾನು ಮತ್ತು ಅಸ್ವಾದು ಎಂಬ ರಾಜಪುತ್ರರ ಕಥೆ.

ಕನೂರಲುಜವಾನನು ತನ್ನ ಇಬ್ಬರು ಮಕ್ಕಳನ್ನು ಬಹು ಪ್ರೀತಿಯಿಂದ ಸಾಕಿ ಶಾಸ್ತ್ರ, ಕಾವ್ಯ, ಮೊದಲಾದ ಅಕ್ಷರವಿದ್ಯೆಗಳಲ್ಲಿಯೂ, ಈಜು, ದಂಡೆ, ಮೊದಲಾದ ವ್ಯಾಯಾಮಕಾರ್ಯಗಳಲ್ಲಿಯೂ, ಶಸ್ತ್ರವಿದ್ಯೆ ಗಳಲ್ಲಿಯೂ, ತನ್ನ ಮಕ್ಕಳು ಸಮರ್ಥರಾಗುವಂತೆ ಉತ್ತಮರಾದ ಉಪಾ ಧ್ಯಾಯರನ್ನು ನಿಯಮಿಸಿ, ಅವರನ್ನು ವಿದ್ಯಾವಂತರನ್ನಾಗಿ ಮಾಡಿದನು. ಆದರೆ ಆ ರಾಜಪುತ್ರರಿಬ್ಬರೂ, ಬಹುಕಾಲದಿಂದಲೂ ಸದಾ ಅನ್ಯೋನ್ಯ ವಾಗಿ ನಡೆದುಕೊಳ್ಳುತ್ತಾ ಒಬ್ಬರನೊಬ್ಬರು ಅಗಲದೆ ಸಂತೋಷದಿಂದ ನಡೆದುಕೊಳ್ಳುತ್ತ ತಮ್ಮ ತಂದೆಯನ್ನೂ, ಇತರಜನಗಳನ್ನೂ, ತಾಯಿ ಯೆಗನನ್ನೂಸಹಾ ಅನ್ಯೋನ್ಯವಾದ ತಮ್ಮ ಮೈತ್ರಿಯಿಂದಲೂ, ಸುಗುಣ ಗಳಿಂದಲೂ, ತೃಪ್ತಿಪಡಿಸುತ್ತಿದ್ದರು.

ಕನೂರಲುಜವಾನನು ತನ್ನ ಮಕ್ಕಳ ಯೋಗ್ಯತೆಯನ್ನು ನೋಡಿ ಮಹದಾನಂದಭರಿತನಾಗಿ ಆನಂದಾಬ್ಧಿಯಲ್ಲಿ ಮುಳುಗಿ ತೇಲಾಡುತ್ತಿದ್ದನು. ಆದರೆ ಬದೌರಳೆಂಬ ರಾಣಿಯೂ, ಹಯೋತ್ತಾನಿಫೌಸಳೆಂಬ ರಾಜಪತ್ನಿ ಯೂಸಹಾ ಬಾಲ್ಯದಿಂದಲೂ, ಬಹುಪ್ರೀತಿ ವಾತ್ಸಲ್ಯಗಳುಳ್ಳವರಾದುದ ರಿಂದ ಅವರವರ ಮಕ್ಕಳನ್ನು ಅನ್ಯೋನ್ಯಭಾವದಿಂದ ನೋಡಿಕೊಳ್ಳುತ್ತಿ ದ್ದರು. ಹೇಗೆಂದರೆ:— ಒಬದೌರಳು ಹಯೋತ್ತಾನಿಫೌಸಳ ಮನಗಲ್ಲಿ ತನ್ನ ಮಗನಿಗಿಂತಲೂ ಅಧಿಕವಾದ ಪ್ರೀತಿಯನ್ನೂ, ಹಯೋತ್ತಾನಿಫೌ ಸಳು ಬದೌರಳ ಮಗನಲ್ಲಿ ಅಧಿಕವಾದ ವಿಶ್ವಾಸವನ್ನು ಇಟ್ಟುಕೊಂಡು ಪ್ರೀತಿಯಿಂದ ನಡೆದುಕೊಳ್ಳುತ್ತಿದ್ದರೂ, ಆ ಇಬ್ಬರು ರಾಜಪುತ್ರರೂ, ಬಾಲ್ಯವಯಸ್ಕರಾಗಿ ತೇಜೋವಿಶೇಷದಿಂದ ಹೊಳೆದು ಅನ್ಯೋನ್ಯವಾಗಿ

ತಮ್ಮನ್ನು ಪ್ರೀಸುತ್ತ ರಾಣಿಯೆರಿಗೆ ವೋಹವನ್ನುಂಟುಮಾಡುತ್ತಿದ್ದರು. ರಾಣಿಯೆರಾದರೋ, ಪರಸ್ಪರ ವೋಹದಿಂದ ಅವರಿಗೆ ಮಾಡುತ್ತಿರುವ ಉಪಚಾರಗಳನ್ನು ರಾಜಪುತ್ರರು ಅವರಿಗೆ ಮಹತ್ತರವಾದ ವೋಹವು ಆವರಿಸಿಕೊಂಡಿರುವುದೆಂಬುವುದನ್ನು ತಿಳದುಕೊಳ್ಳದೆಹೋಗಿವ್ದರೆ ರಾಣಿಯೆರಿಗೂ, ರಾಜಪುತ್ರರಿಗೂ, ವಿನಾಶಕಾಲ ಉಂಟಾಗುತಲಿತ್ತು. ಆದರೆ ಬದೌರಳೂ, ಇಚಿನಿರಾಜಪುತ್ರಿಯೂ, ತಂತವುಗುಂಟಾಗಿರುವ ವೋಹವನ್ನು ಒಬ್ಬರಲೊಬ್ಬರು ತೋರ್ಪಡಿಸಿಕೊಳ್ಳದೆ ಗೂಢವಾಗಿಟ್ಟುಕೊಂಡು ತಂತವುಕೆ ಕೋರಿಕೆಗಳನ್ನು ನೆರವೇರಿಸಿಕೊಳ್ಳಬೇಕೆಂದು ಇರುತ್ತಿದ್ದರು. ಬಂದಾನೊಂದುದಿನ ಕವುರಲುಜವಾನನು, ಊರನ್ನು ಬಿಟ್ಟು ಬೇಟೆಯೆಾಡುವುದಕ್ಕೆ ಅರಣ್ಯಕ್ಕೆ ಹೋಗಿರುವ ವರ್ತವಾನವನ್ನು ಕೇಳಿ ರಾಣಿಯೆರಿಬ್ಬರೂ ತಮ್ಮ ಕಾವುಣ್ಯಾಪಾರವನ್ನು ವುಗಿಸಿಕೊಳ್ಳಬೇಕೆಂದು ಬಗೆದವರಾದರು.

ಆದರೆ ಹಯಾತುನಿಫೌಸಳು ತನ್ನ ಚಾರಕನಾದ ನಪುಂಸಕನ ಕೈಗೊಂದು ಕಾಗದವನ್ನು ಬರೆದುಕೊಟ್ಟು ಇದನ್ನು ತೆಗೆದುಕೊಂಡು ಹೋಗಿ ಬದೌರಳವುಗನಾದ ಅಂಜಿಯಾದನಿಗೆ ಕೊಟ್ಟುಬಾರೆಂದು ಹೇಳಲು ಆತನು ಆ ಕಾಗದವನ್ನು ತೆಗೆದುಕೊಂಡು ಸಭಾವುಂಟಪದಲ್ಲಿ ರಾಜಕಾರ್ಯವನ್ನು ಮಾಡುತ್ತಿದ್ದ ಅಂಜಿಯಾದನಬಳಿಗೆ ಬಂದು ರಹಸ್ಯವಾಗಿ ಆತನನ್ನುಕರೆದು, ಕಾಗದವನ್ನು ಕೊಡಲು ಆತನು ಅದನ್ನೊೀದಿ ನೋಡಿಕೊಂಡು ಉಗ್ರವಾದ ಕೋಪದಿಂದ ಎಲಾ! ನಪುಂಸಕಾ! ನೀನು ನಿನ್ನರಾಜನಾದ ಕವುರಲುಜವಾನನಲ್ಲಿ ತೋರಿಸತಕ್ಕ ಭಕ್ತವಿಶ್ವಾಸಗಳಿವೆಯೋ ? ಹಾ! ನೀಚನೇ! ನೀನು ನಾಡಿದ ಕಾರ್ಯಕ್ಕಾಗಿ ಇದನ್ನು ಬಹುವುನವಾಗಿ ತೆಗೆದುಕೊಳ್ಳೆಂದು ನುಡಿದು, ತಾನು ಹಿಡಿದುಕೊಂಡಿರುವ ಕತ್ತಿಯಿಂದಾ ತನ ತಲೆಯೆನ್ನು ಖಂಡಿಸಿ, ಬಳಿಕ ತನ್ನ ತಾಯಿಯಾದ ಬದೌರಳ ಬಳಿಗೆ ಬಂದು, ಕಾಗದವನ್ನುತೋರಿಸಿ, ಅವರಲ್ಲಿರುವ ಸಂಗತಿಗಳನ್ನು ಹೇಳಲು, ಆಕೆ ಸ್ವಲ್ಪಹೊತ್ತು ಯೋಚಿಸಿ ವುಗನೇ! ಇದು ಶುದ್ಧ ಅನ್ಯಾಯವಾದ ಸುದ್ದಿ. ನಾನು ಬಾಲ್ಯದಿಂದಲೂ ಹಯಾತುನಿಫೌಸಳನ್ನು ಗುರುತು ಬಲ್ಲೆನು. ಆದರೆ ಆಕೆಯು ಯಾವವಿಧವಾದ ತನ್ನದುರ್ಗುಣಗಳನ್ನು ಸಂಪಾದಿಸಿಕೊಂಡಿರತಕ್ಕವಳಲ್ಲ. ನೀನು ಅನ್ಯಾಯವಾಗಿ ಆಕೆಯನ್ನು

ದೂಷಣೆ ಮಾಡಜೀಡವೆಂದು ಕೋಪಮಾಡಿಕೊಂಡು ನುಡಿಯಲು ರಾಜ ಪುತ್ರನೂ, ನೀವಿಬ್ಬರೂ ಸವಾನನಾವಪ ದುರ್ಗುಣವುಳ್ಳ ಹೆಂಗಸರಾಗಿರುವಿರಿ. ಇದರಲ್ಲಿ ಯಾವಸಂದೇಹವೂ ಇಲ್ಲ ಆದರೆ ನನ್ನತಂದೆಯಾದ ಕವು ರಾಜಮಾನನಮೇಲೆ ದಾಕ್ಷಿಣ್ಯವಾಗಿತೋರಿ ಬಾರದೆಹೋಗಿದ್ದರೆ ಈದಿನವೇ ಹಯಾತಾ್ಯನಿಷ್ಠಾಸಳಿಗೆ ಅಂತ್ಯಕಾಲವಾಗಿದ್ದಿತೆಂದು ಕಠಿಣೋಕ್ತಿಗಳನ್ನು ಪ್ರಸರಿಸಿದನು. ಈತೆರನಾದ ತನ್ನ ಮಗನ ಕಾರ್ಯ್ಯಗಳನ್ನು ನೋಡಿ, ಆತನ ಸದ್ಗುಣಗಳಿಗೆ ಅಭಿರಾಮಯುಕ್ತವಾದ ಚಿತ್ತಶಾಂತಿಯನ್ನು ಹೊಂದಿ, ಈತನಿಗೆ ತಮ್ಮನಾಗಿ ಸದಾ ಈತನಂತೆ ಸುಗುಣಶಾಲಿಯಾಗಿ ವರ್ತಿಸುತ್ತಿರುವ ಅಸಾ್ಯದನುಕೂಡ ತನ್ನನ್ನು ನಿರಾಕರಿಸಬಹುದೆಂದು ತಿಳಿದು ಸುಖಾ್ಯನಾಗಿರಬಹುದಾಗಿದ್ದಿತು.

ಆದರೆ ಅನಿವಾರಕವಾದ ಸ್ನೇಹದಿಂದ ಮರುದಿನ ಬೆಳಿಗ್ಗೆ ಒಂದಾನೊಂದು ಚೀಟಿಯನ್ನು ಬರೆದು ತನ್ನ ಅಂತಃಪುರದಿಂದ ಅಸಾ್ಯದಬಳಿಗೆ ಹೋಗಿಬರುತ್ತಿರುವ ಒಬಾ್ಬನೊಬ್ಬ ದಾದಿಯಕೈಯಲ್ಲಿ ಕೊಟ್ಟುಕಳುಹಿಸಲು, ಅವಳು ಅದನ್ನು ತೆಗೆದುಕೊಂಡುಹೋಗಿ ಅಸಾ್ಯದನು ಹೊರಗೆ ಬರುತ್ತಿರುವ ಕಾಲವನ್ನು ಕಂಡುಹಿಡಿದು ಆತನಕೈಗಾಚೀಟಿಯನ್ನುಕೊಡಲು, ಆತನು ಅದನ್ನು ಬಿಚ್ಚಿನೋಡಿ ಓದಿಕೊಂಡು ಮಹತ್ತಾದ ಕೋಪದಿಂದ ಚೀಟಿಯನ್ನುತಂದ ಮುದುಕಿಗೆ ತಕ್ಕತೆರದಿಂದ ಶಿಕ್ಷೆಯನ್ನು ಮಾಡಿ ಅದನ್ನು ತೆಗೆದುಕೊಂಡು ತನ್ನತಾಯಿಯಾದ ಹಯಾತಾ್ಯನಿಷ್ಠಾಸಳಬಳಿಗೆ ಬಂದು ಅದನ್ನು ತೋರಿಸಿ ವರ್ತಮಾನವನ್ನು ಹೇಳಲು ಆಕೆ ಮಗನನ್ನು ಕುರಿತು, ಎಲಾ ! ನೀಚನೇ ! ನೀನು ನಿನ್ನ ಅಣ್ಣನಾದ ಅಂಜಿಯಾದನಂತೆ ದುರ್ಮಾರ್ಗಿಯಾಗಿಹೋಗಬೇಡ. ಇನ್ನುಮೇಲೆ ನನ್ನಬಳಿಗೆಬಂದು ಮುಖವನ್ನುತೋರಿಸಬೇಡ ಹೊರಟುಹೋಗು. ನೀಚ, ನಿಂದಕ, ಭ್ರಷ್ಟ, ದುಷ್ಟರೊಡನೆ ಸೇರಿ ದುರ್ಮಾರ್ಗಚಾರಿಯಾಗಿ ಕೆಟ್ಟುಹೋಗುತ್ತಿರುವೆಯೆಲಾ್ಲ ಎಂದು ನುಡಿದ ತನ್ನತಾಯಿಯ ಮಾತನ್ನುಕೇಳಿ, ಅಂಜಿಯಾನ ಚರಿತೆ್ರಯನ್ನು ಹೇಳದುದರಿಂದ ಇಬ್ಬರು ರಾಣಿಯರೂ, ಮೋಸಗತವಾದ ದುನೋವಾ್ಯಪಾರವುಳ್ಳವರೆಂದು ತಿಳಿದು ಇದರ ನಿಜವಾದಸಂಗತಿಯನ್ನು ವಿಚಾರಿಸಿ ತಿಳಿದುಕೊಂಡು ಮಾತನಾಡಬೇಕು. ಇಲ್ಲವಾದರೇನಾದರೂ

ಅಪಾಯ ಉಂಟಾಗುವುದೆಂದು ಭಾವಿಸಿ, ತನ್ನ ಅಣ್ಣನಾದ ಅಂಜೆಯಾದನು ಏತಕೊಕ್ಕೀಸ್ಕರ ನಡೆದಸಂಗತಿಯೆನ್ನು ತನಗೆ ತಿಳಿಸಲಿಲ್ಲವೋ ಅದನ್ನು ವಿಚಾರಿಸಬೇಕೆಂದು ಆತನಬಳಿಗೆ ಬರಲು ಇತ್ತ ಇಬ್ಬರು ರಾಜಪುತ್ರಿಯರೂ ತಂತಮ್ಮ ಮಕ್ಕಳ ದುರ್ಮಾರ್ಗವನ್ನು ನೋಡಿ ನಿರಾಶರಾಗಿ, ಹೇಗಾದರೂಮಾಡಿ ಅವರನ್ನು ಕೊಲ್ಲಿಸಬೇಕೆಂದು ಪ್ರಯತ್ನ ಮಾಡಿಕೊಂಡು, ಮಕ್ಕಳನ್ನು ಕುರಿತು ಬಹಳವಾಗಿ ರೋದಿಸುತ್ತಾ ತಂತಮ್ಮ ಆಲಂಕಾರಾದಿಗಳನ್ನು ವಿಕಾರವಾದ ಚಿತ್ತದಂತೆ ದೇಹಭಾವವನ್ನು ಹೊಂದಿ ಹಾಸಿಗೆಯಲ್ಲಿ ಮಲಗಿ ಅಲ್ಲಿಂದೇಳಲಾರದೆ ರಾಜಪುತ್ರರು ಮಾಡಿದ ತೊಂದರೆಗಳಿಂದ ತಮಗೆ ಪ್ರಾಣವೇ ಹೋಗುವುದೆಂಬಂತೆ ಮಾಯೆಯಾಬಲದಿಂದ ಇಲ್ಲದ ರೋಷವನ್ನು ಹೆಬ್ಬಿಸಿ ನರಳುತ್ತಿದ್ದರು. ಇಂತೆಂದು ನುಡಿದು ಷಹರಜಾದಿ ಬೆಳಗಾದಕೂಡಲೇ ಕಥೆಯಾಗೆನ್ನುನಿಲ್ಲಿಸಿ, ಮರಳಿ ಮರುದಿನ ಬೆಳಗಿನ ಜಾವದಲ್ಲಿ ಹೇಳಲಾರಂಭಿಸಿದಳು.

೨೨೪ ನೆಯ ರಾತ್ರಿ ಕಥೆ.

ಭೂಪಾಲಕಾ ! ಈತೆರದಿಂದ ರಾಣಿಯೆರಿಬ್ಬರೂ ಕಪಟೋಪಾಯವನ್ನು ಹುಡುಕಿ ರಾಜಪುತ್ರರನ್ನು ಕೊಲ್ಲಿಸಬೇಕೆಂದು ಹಟವನ್ನು ಹಿಡಿದು ಅನುಭವಿಸುತ್ತಿರುವಕಾಲದಲ್ಲಿ ಕಮರಲುಜಮಾನನು ಚೀಟೆಯನ್ನು ತೀರಿಸಿಕೊಂಡು ಪಟ್ಟಣಕ್ಕೆ ಬಂದು ವಿಕೃತವಾದ ರೂಪದಿಂದ ಮಲಗಿ ಮನೋವಿಕಾರವನ್ನು ಹೊಂದಿ ನರಳುತ್ತಿರುವ ತನ್ನ ಹೆಂಡತಿಯರನ್ನು ನೋಡಿ ಬಹಳವಾಗಿ ವ್ಯಸನಾಕ್ರಾಂತನಾಗಿ ನಿಮ್ಮ ಸಂಕಟಕ್ಕೆ ಕಾರಣವೇನೆಂದುಕೇಳಲು, ಅವರು ಒಹಳಹೊತ್ತಿನವರಿಗೂ ಗೋಳಾಡಿ ನಾನಾವಿಧವಾದ ದುಃಖಸೂಚನೆಗಳನ್ನು ತೋರ್ಪಡಿಸಿ, ಪ್ರಾಣಕಾಂತಾ ! ನಾವುಗಳಿಬ್ಬರೂ ಈತೆರದಿಂದ ಗೋಳಿಡುತ್ತಿರುವುದಕ್ಕೆ ಬಲವತ್ತರವಾದ ಬಂದಾಸೊಂದು ಕಾರಣವುಂಟು. ಅದೇನೆನ್ನುವಿಯೋ ! ನೀನು ರಾಜಧಾನಿಯಲ್ಲಿಲ್ಲದಿರುವಾಗ ನಿನ್ನಮಕ್ಕಳು ನಮ್ಮನ್ನು ಬಲಾತ್ಕಾರಪಡಿಸಿ ಮಾನಭಂಗ ಮಾಡಿರುವುದರಿಂದ ನಾವುಗಳನ್ನು ಬದುಕಿರಬಾರದೆಂದು ಈತೆರದಿಂದ ಸಂಕಟಪಡುತ್ತಿರುವೆವೆಂದು ನುಡಿದಮಾತುಗಳನ್ನು ಕೇಳಿ ಕೂಡಲೆ ಚಾರಕರಮುಖದಿಂದ ತನ್ನ ಬಾಲಕರನ್ನು ಬರಮಾಡಿ ಅಯ್ಯೋ ! ನಿಮ್ಮ

ನೋಹವನ್ನು ಇಂದಿಗೆ ತೀರಿಸುವೆನೆಂದು ನುಡಿದು ತನ್ನ ಕೈಯ್ಯಲ್ಲಿದ್ದ ಕತ್ತಿಯಿಂದವರನ್ನು ಕಡಿಯೆಯುವುದಕ್ಕೆ ಉದ್ಯುಕ್ತನಾಗಲು ಆತನ ಮಾವನಾದ ಅರ್ಮನಾಸನು ಆತನನ್ನು ಬಹಳವಾಗಿ ಸಮಾಧಾನಮಾಡಿ ಅಯ್ಯಾ! ನಿನ್ನಮಕ್ಕಳನ್ನು ನೀನೇ ಕೊಲ್ಲುತ್ತಿರುವೆಯಲ್ಲಾ! ಇದೇನಾಶ್ಚರ್ಯ? ನಾನು ಹೇಳುವ ಮಾತುಗಳನ್ನು ಕೇಳು. ಅವರು ಅಂತಹ ತಪ್ಪುಕೆಲಸವನ್ನು ಮಾಡಿರುವರೋ ಇಲ್ಲವೋ ಅದನ್ನು ವಿಚಾರಿಸಿ ತಿಳಿದು ನಂತರ ಅವರಿಗೆ ತಕ್ಕ ಶಿಕ್ಷೆಯನ್ನು ಮಾಡಬಹುದೆಂದು ಹೇಳಿದುದರಿಂದ ಆತನು ಸಮಾಧಾನಮಾಡಿಕೊಂಡು ತನ್ನ ಸಭಿಕರಲ್ಲಿ ಒಬ್ಬನಾದ ಪಜೀರನನ್ನು ಕರೆದು ಈ ಮಕ್ಕಳನ್ನು ಅರಣ್ಯಕ್ಕೆ ಕರೆದುಕೊಂಡುಹೋಗಿ ನಿನಗಿಷ್ಟವಾದ ಸ್ಥಳದಲ್ಲಿ ಇವರ ಕುತ್ತಿಗೆಯನ್ನುಕೊಯ್ದು ಗುರುತಿಗಾಗಿ ಇವರ ಬಟ್ಟೆಗಳನ್ನು ತೆಗೆದುಕೊಂಡುಬಂದರೆಹೊರತು ಇಲ್ಲವಾದರೆ ನನ್ನ ಆಸ್ಥಾನಕ್ಕೆ ನೀನು ಬರಬೇಡವೆಂದು ಖಂಡಿತವಾಗಿ ನುಡಿಯಲು, ಆತನು ಆ ಬಾಲಕರನ್ನು ಕರೆದುಕೊಂಡು ಅರಣ್ಯವನುಹೊಕ್ಕು ರಾಜಾಜ್ಞೆಯನ್ನು ಅವರಿಗೆ ತಿಳಿಸಲು, ರಾಜಕುಮಾರರು ಸ್ವಲ್ಪವೂ ಹೆದರದೆ ಅಯ್ಯಾ! ದೈವಸಂಕಲ್ಪವಿದ್ದಂತೆ ಆಗಲಿ. ನಮ್ಮಗಳ ಕೊಲೆಗೆ ನೀನು ಕಾರಣನಲ್ಲವೆಂಬುದು ನಮಗೆ ತಿಳಿವುದು. ಆದದರಿಂದ ನೀನು ಧೈರ್ಯವಾಗಿ ರಾಜಾಜ್ಞೆಯಂತೆ ನಡಿಸಬಹುದೆಂದು ಹೇಳಿದರು.

ಬಳಿಕ ಆತನು ತನ್ನಕಾರ್ಯವನ್ನು ಜರಗಿಸಲುದ್ಯುಕ್ತನಾಗುವ ಸಮಯವನ್ನುನೋಡಿ ಅಯ್ಯಾ! ನನ್ನನ್ನು ಮೊದಲು ಕಡಿದುಹಾಕು. ಅಯ್ಯೋ! ನನ್ನನ್ನೇ ಮೊದಲು ಕಡಿದುಬಿಡು. ಹಾಗಾದರೆ ಬಾಲ್ಯದಿಂದಲೂ ಭ್ರಾತೃವಾತ್ಸಲ್ಯದಿಂದ ಜೆಳೆದಿರುವ ನಮ್ಮಗಳಿಗೆ ವ್ಯಸನವುಂಟಾಗಲೆಂದು ಪ್ರಾರ್ಥಿಸಿ, ಪುಣ್ಯಾತ್ಮನಾದ ಪಜೀರನೆ ನಿನಗೆ ನಮ್ಮಗಳಮೇಲೆ ದಯೆವುಂಟಾಗಿದ್ದರೆ ನಮ್ಮಿಬ್ಬರನ್ನು ಬಂದಾಗಿಕಟ್ಟಿ ಒಂದೇ ಪೆಟ್ಟಿನಲ್ಲಿ ನಮ್ಮಗಳ ತಲೆಯನ್ನು ಕಡಿದುಹಾಕಿದರೆ ಯಾರಿಗೂ ತೊಂದರೆಯುಂಟಾಗದೆಂದು ನುಡಿಯಲು, ಆತನು ಅವರನ್ನು ಬಂಧಿಸಿ ಕೈಗತ್ತಿಯಿಂದ ಅವರನ್ನು ಕತ್ತರಿಸಲುದ್ಯುಕ್ತನಾಗುವ ಕಾಲಕ್ಕೆ ಸರಿಯಾಗಿ, ಕುದುರೆಯನು ಕಿತ್ತುಕೊಂಡು ಉತ್ತಮವಾದ ಜೆಲಿ ಬಾಳುವ ಸಾಮಾನುಗಳಸಹಿತವಾಗಿ ಅರಣ್ಯಮಾರ್ಗವನ್ನುಕುರಿತು ತೆರಳಿತು. ಅದನ್ನು ನೋಡಿ

ವಜೀರನು ಕತ್ತಿಯನ್ನು ಬಿಸಾಡಿ ತನ್ನ ಕುದುರೆಯನ್ನು ಹಿಂದಟ್ಟಿಕೊಂಡು ಹೊರಟು ಅರಣ್ಯವಾರ್ಗದಲ್ಲಿ ಧಾವಂತದಿಂದೋಡುತ್ತ ತನ್ನ ಕುದುರೆಯನ್ನು ಹುಡುಕುತ್ತಿರುವ ಹಸಿವಿನಿಂದಗ್ಗರಿಹೋಗಿ ಬಂದು ಸಿಂಹವು ತನ್ನನ್ನು ಅಟ್ಟಿಕೊಂಡು ಬರುತ್ತಿರುವುದನ್ನು ಕಂಡು ಹೇಗಾದರೂ ಮಾಡಿ ಪ್ರಾಣವನ್ನು ಕಾಪಾಡಿಕೊಂಡರೆ ಸಾಕೆಂದು ಓಡುತ್ತಾ ಬಂದಾನೊಂದು ವೃಕ್ಷಮೂಲದಲ್ಲಿ ನಿಂತು ಆಹಾ ! ನಿರಪರಾಧಿಗಳಾದ ರಾಜಪುತ್ರರನ್ನು ನಾನು ಸಂಹರಿಸುವುದಕ್ಕೆ ಒಪ್ಪಿ ಬಂದುದರಿಂದ ಭಗವಂತನು ನನಗಿಂತಹ ಮರಣಾವಸ್ಥೆಯನ್ನು ತಂದಿಟ್ಟನೆಂದು ಬಗೆದು ಪ್ರಾಣಭಯದಿಂದ ಭಯಂಕರವಾದ ದಾಳವನ್ನು ಹೊಂದಿಸಿದನು. ಇತ್ತ ರಾಜಕುಮಾರರು ಬಹಳ ಹೊತ್ತಿನವರಿಗೂ ತಂತಮ್ಮ ಕಟ್ಟುಗಳನ್ನು ಬಿಡದೆ ನಿಂತುಕೊಂಡಿದ್ದು ನಂತರ ಅದನ್ನು ಲಕ್ಷ್ಯಮಾಡದೆ ಬಿಚ್ಚಿಕೊಂಡು ಕುಳಿತಿರುವಾಗ ಸ್ವಲ್ಪ ಹೊತ್ತು ಸಿಂಹದ ಘರ್ಜನೆಯು ನಂತರ ತಮ್ಮ ವಜೀರನ ಧ್ವನಿಯು ಕೇಳಬಂದುದರಿಂದ ಅವರಿಬ್ಬರೂ ಕನಿಕರಯುಕ್ತರಾಗಿ ತಮ್ಮ ವಜೀರನ ಪ್ರಾಣವನ್ನುಳಿಸಬೇಕೆಂದು ಕೋರಿ ಆ ಸ್ಥಲಕ್ಕೆ ಹೋಗಿ ನೋಡಲು ಸಿಂಹವು ಆತನನ್ನು ಹಿಡಿಯುವುದಕ್ಕೆ ಸಿದ್ಧವಾದ ಸ್ಥಿತಿಯಲ್ಲಿದ್ದಿತು.

ನಂತರ ರಾಜಪುತ್ರನು ತನ್ನ ಕೈಖಡ್ಗದಿದ ಅದನ್ನು ಹೊಡೆಯಲು ಸಿಂಹವು ವಜೀರನನ್ನು ಬಿಟ್ಟು ರಾಜಪುತ್ರನಮೇಲೆ ಬಿದ್ದರೂ, ಅವರಿಬ್ಬರೂ ಬಹು ಪರಾಕ್ರಮಶಾಲಿಗಳಾದುದರಿಂದ ಚಮತ್ಕಾರದಿಂದ ಸಿಂಹವನ್ನು ಕೊಂದುಹಾಕಿದರು. ನಂತರ ತನ್ನ ಪ್ರಾಣವನ್ನುಳಿಸಿದವರಾದ ರಾಜಪುತ್ರರಿಗೆ ವಜೀರನು ನಮಸ್ಕಾರಮಾಡಿ ಅವರನ್ನು ಬಹಳವಾಗಿ ಕೊಂಡಾಡಿ ಅಯ್ಯಾ ! ನೀವುಗಳು ನನಗೆ ಮಾಡಿರುವ ಉಪಕಾರಕ್ಕಾಗಿ ನಾನು ಬಹಳವಾಗಿ ನಿಮ್ಮಗಳಲ್ಲಿ ಕೃತಜ್ಞತೆಯನ್ನು ತೋರ್ಪಡಿಸುವೆನೆಂದು ಹೇಳಿ ಸಂತೋಷದಿಂದ ಮರಳಿ ನಮಸ್ಕಾರ ಮಾಡಿದನಲ್ಲದೆ ತಾನು ಇಂದು ಮೊದಲಿಕೊಂಡು ಮತ್ತಾವಕಾಲದಲ್ಲಿಯೂ ತನ್ನ ವಿಷಯದಲ್ಲಿ ಕೃತಘ್ನತೆಯನ್ನು ತೋರುವುದಿಲ್ಲವೆಂದು ಹೇಳಿಬಿಟ್ಟನು ಆಗ ರಾಜಕುಮಾರರು ಅಯ್ಯಾ ! ನೀನು ನಮ್ಮ ವಿಷಯದಲ್ಲಿಂತು ಸಹಸೆಯನ್ನು ತೋರ್ಪಡಿಸಿದರೂ, ರಾಜಾಜ್ಞೆಯನ್ನುಮೀರಿ ಖಂಡಿತವಾಗಿಯೇ ನೆರವೇರಿಸಬೇಕು ಅದಕ್ಕೆಂದಿಗೂ ತಪ್ಪಿಕೂಡದು. ಆದ ದರಿಂದ ನಿನ್ನ ಕುದುರೆಯನ್ನು

ಹಿಡಿದುಬರುತ್ತೇವೆ. ಸ್ವಲ್ಪ ತಾಳೆಂದು ನುಡಿದು ಅಲ್ಲಿಂದ ಬಹು ವೇಗವಾಗಿ ಓಡಿಹೋಗಿ ಅವನ್ನು ಹಿಡಿಮತರಲು, ವಜೀರನು ಅವರನ್ನು ಪ್ರಾಣದಿಂದ ಳಿಕ ಜೀಕೆಂದು ಬಗೆದು, ಬಹಳವಿಧವಾದ ಸಮಾಧಾನೋಕ್ತಿಗಳಿಂದ ಸಮ್ಮತಿಸಿ ತನ್ನ ಬಟ್ಟೆಯೆನ್ನವರಿಬ್ಬರಿಗೂ ಹಾಕಿಕೊಳ್ಳುವಂತೆ ಕೊಟ್ಟು, ಅವರ ಬಟ್ಟೆಗಳನ್ನು ತೆಗೆದುಕೊಂಡು ಸಿಂಹವು ಸತ್ತುಬಿದ್ದು ಹೋದ ಸ್ಥಲಕ್ಕೆ ಹೋಗಿ ಆ ರಕ್ತದಿಂದ ವಸ್ತ್ರಗಳನು ನೆನಸಿಕೊಂಡು ಅದನ್ನು ತೆಗೆದು ಕೊಂಡು, ಇಬಿಸಿದ್ವೀಪವನ್ನು ಸೇರಿ ಕಮರಲುಜಮಾನನಿಗೆ ತೋರಿಸಲು, ಆತನು ತನ್ನಾಜ್ಞೆಯು ನಡೆದುವಕಾಲಕ್ಕಾಗಿ ಬಹಳವಾಗಿ ಸಂತೋಷಿಸಿ ನನ್ನ ಪುತ್ರರು ಮರಣವನ್ನು ಹೊಂದುವುದಕ್ಕೆ ಹೇಗೆಸಮ್ಮತಿಸಿದರೆಂದು ವಜೀರನನ್ನುಕೇಳಲು, ಆತನು ಆಹಾ ! ಆ ರಾಜಪುತ್ರರು ಸ್ವಭಾವಸಹಜವಾದ ತಾಳ್ಮೆಯನ್ನು ಹೊಂದಿ ತಮ್ಮ ಪ್ರಾಣಗಳನ್ನು ನನ್ನಕತ್ತಿಗೆ ಆಹುತಿಯಾಗಿ ಕೊಡುವಕಾಲದಲ್ಲಿ, ಅಯ್ಯಾ ! ನಿರಪರಾಧಿಗಳಾದ ನಮ್ಮತಪ್ಪನ್ನು ವಿಚಾರಿಸದೆ ನಮ್ಮತಂದೆಯು ನಿಷ್ಕಾರಣನಾಗಿ ನಮ್ಮನ್ನು ಕಡಿದುಹಾಕುವಂತೆ ಆಜ್ಞಾಪಿಸಿದ್ದರೂ ನಾವೆಂದಿಗೂ ಆತನಲ್ಲಿ ಅಪರಾಧವಿರುವುದೆಂದು ಒಪ್ಪಲಾರೆವೆಂದು ನುಡಿದು ತಮ್ಮ ಪ್ರಾಣವನ್ನು ಕೊಟ್ಟರೆಂದು ನುಡಿದ ವಾರ್ತೆಯನ್ನುಕೇಳಿ, ರಾಜನು ಬಹಳವಾಗಿ ವಿಚಾರಯುಕ್ತನಾಗಿ ಅವರುಗಳ ಬಟ್ಟೆಯನ್ನು ಶೋಧಿಸಿ, ಅದರಲ್ಲಿದ್ದ ಬಏೌರ ಮತ್ತು ಹಯೂತ್ತ ನಿಘಂಸಿಳ ಹಸಾಕ್ಷರಯುಕ್ತವಾದ ಪ್ರೇಮಪತ್ರಗಳನ್ನು ಕಂಡು ಬಹು ಅನ್ಯಾಯದಿಂದ ತಾನು ಕೂಡಲೇ ಮೂರ್ಖಾಕ್ರಾಂತನಾದನು. ಇಂತೆಂದು ನುಡಿದು ಷಹರಜೊವಿಯೆಯು ಬಿಳಗಾದಕೂಡಲೇ ಕಥೆಯೆನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಮಗಳಿ ಹೇಳಲಾರಂಭಿಸಿದಳು.

೨೨ನೆಯ ರಾತ್ರಿ ಕಥೆ.

ಈತೆರವಿಂದ ಕಮರುಲಜಮಾನನು ತನ್ನಪುತ್ರರನ್ನು ನಿಷ್ಕಾರಣನಾಗಿ ಅರಣ್ಯಕ್ಕೆ ಕಳುಹಿಸಿದ ಕ್ರೂರಕೃತ್ಯಕ್ಕಾಗಿ ತನ್ನನ್ನು ತಾನೇ ನಿಂದಿಸಿಕೊಂಡು ಆಹಾ ! ನೀಚನಾದ ಕಮರಲಿಜಮಾನನೇ! ಗುಣಾನ್ವಿತರಾಗಿ ನವಿಾಭಾವದಿಂದ ಪಿತೃನತ್ಸಲರಾಗಿ ನಡೆದುಕೊಳ್ಳುತ್ತಿದ್ದ ಪ್ರೀತಿಪಾತ್ರರಾದ ಮಕ್ಕಳನ್ನು ತೊರೆದುಕೊಂಡು ದುಃಖಿಸುತ್ತಿರುವ

ನನಗಿಂತಲೂ ದುರ್ಭಾಗ್ಯರಾದ ಮಾನವರು ಲೋಕದಲ್ಲುಂಟೇ? ಎಂದು ಚಿಂತಿಸುತ್ತ ತನ್ನ ಭಾರ್ಯೆಯರಿಂದ ಮಾಡಲ್ಪಟ್ಟ ನೀಚಕಾರ್ಯಗಳನ್ನು ಚಿಂತಿಸುತ್ತಾ ಇಂತಹ ಹೆಮ್ಮಾರಿಯೆರಡನ್ನು ಮರಳಿ ನಾನೆಂದಿಗೂ ಮುಖದರ್ಶನ ಮಾಡತಕ್ಕವನಲ್ಲವೆಂದು ಖಂಡಿತಪಡಿಸಿಕೊಂಡು ತನ್ನ ಮಕ್ಕಳನ್ನು ನೆನೆದು ಬಹಳವಾಗಿ ವ್ಯಥಿಸಿ, ತನ್ನ ಅವಿವೇಕಕ್ಕಾಗಿ ತನ್ನನ್ನು ತಾನೇ ನಿಂದಿಸಿಕೊಂಡು, ಕಟ್ಟಕಡೆಗೆ ಸಮಾಧಾನಸ್ಥಿತಿಯನ್ನು ತಂದುಕೊಂಡು, ತನ್ನ ಹೆಂಡತಿಯೆರಿಬ್ಬರನ್ನು ಪ್ರತ್ಯೇಕವಾಗಿಯೂ, ದೂರವಾಗಿಯೂ, ಬಲವಾದ ಕಾವಲಿನಿಂದಲೂ ಕೂಡಿದ ಕಾರಾಗಾರದಲ್ಲಿರಿಸಿ, ಅಂದಿನಿಂದಲೂ ಅವರ ಮುಖಾವಲೋಕವನ್ನು ಕೂಡ ಬಯಸದವನಾಗಿ ಸುಮ್ಮನೆ ಕೊರಗುತ್ತಿದ್ದನು.

ಇತ್ತ ಅರಣ್ಯದಲ್ಲಿದ್ದ ರಾಜಪುತ್ರರು ಜನಸಂಚಾರ ಮಾಡುವ ಸ್ಥಲದಲ್ಲಿ ತಾವಿದ್ದರೆ ಜನಗಳು ತಮ್ಮನ್ನುಕಂಡು ರಾಜನಿಗೆ ಪೇಳುವರು. ಅದರಿಂದ ತಮಗೆ ಅಪಾಯ ಉಂಟಾಗುವುದೆಂದು ತಿಳಿದು ದಟ್ಟವಾದ ಅರಣ್ಯದಲ್ಲಿ ಸಂಚರಿಸುತ್ತಾ ರಾತ್ರಿಯೆಕಾಲವನ್ನು ವೃಕ್ಷಮೂಲಾಶ್ರಯದಿಂದ ಕಳೆದು ಘೋರವಾಗಿ ಧ್ವನಿಗೆಯ್ಯುತಿರುವ ಕ್ರೂರಮೃಗಗಳ ಶಬ್ದಕ್ಕೆ ಬೆದರಿ ಆಗಾಗ್ಗೆ ನಿದ್ರೆಯಿಂದೆಬ್ಬಿತ್ತು ಭಯದಿಂದ ಕಾಲವನ್ನು ಕಳೆಯುತ್ತಿದ್ದರು. ಈತೆರದಿಂದ ಬಂದುಮಾಸದವರಿಗೂ, ಕಂಡಕಂಡ ಕಡೆಗಳೆಲ್ಲ ಸುತ್ತುತ್ತಿದ್ದು ನಂತರ ಬಂದಾನೊಂದು ಕರಿಯೆಕಲ್ಲಿನ ಪರ್ವತವನ್ನುಕಂಡು, ಅದರಮೇಲಕ್ಕೆಹತ್ತಿ ಹೋಗಬೇಕೆಂದು ಸುತ್ತಲೂ ಮಾರ್ಗವನ್ನು ಕಂಡುಹಿಡಿವುದಕ್ಕಾಗಿ ಬೊರಡುತ್ತಾ ಪ್ರದಕ್ಷಿಣೆ ಮಾಡಿ ತಿರುಗಿಕೊಂಡು ಕೊನೆಗೆ ದಾರಿಯೆನ್ನು ಕಾಣದೆ ತಾವು ಮೊದಲು ಹೊರಟ ಸ್ಥಲಕ್ಕೆ ಬಂದು ಧೈರ್ಯದಿಂದಾಪರ್ವತವನ್ನು ಅತಿಪ್ರಯಾಸದಿಂದ ಹತ್ತಲಾರಂಭಿಸಿದರು. ಅವರಿಬ್ಬರೂ ಎಷ್ಟೆಷ್ಟು ದೂರದವರಿಗೆ ಹತ್ತಿಹೋದರೂ ಆ ಪರ್ವತವು ಅಷ್ಟಷ್ಟು ಎತ್ತರವಾಗಿ ಹೋಗುತ್ತಿರುವುದನ್ನು ಕಂಡು ಆ ರಾಜಪುತ್ರರು ಈ ಪರ್ವತವನ್ನು ಹತ್ತುವ ಕಾರ್ಯದಲ್ಲಿ ನಮ್ಮ ಪ್ರಾಣಗಳು ಹೋದರೂಆಗಲಿಯೇ ಹೇಗಾದರೂಮಾಡಿ ಶಿಖರಕ್ಕೆ ಹತ್ತಿಹೋಗಿ ಅಲ್ಲಿರುವ ಚಂದ್ರಕಿರಣಗಳಿಂದ ತಮ್ಮ ಆಯಾಸವನ್ನು

ಪರಿಹರಿಸಿಕೊಳ್ಳಬೇಕೆಂದು ಯೋಚಿಸಿ ಒಬ್ಬರುಬಳಲಿಕಾಲದಲ್ಲೊಬ್ಬರು ಸಹಾಯಮಾಡುತ್ತ ಇಬ್ಬರೂ ಆಯಾಸ ಹೊಂದಿದಾಗ ಮೈಮರೆದು ಮೂರ್ಛೆಹೋಗಿ ದೈವಾಧೀನದಿಂದೆಚ್ಚತ್ತು ಮುಂದೆಹೋಗುತ್ತ ಅನ್ಯೋನ್ಯವಾದ ಪ್ರೀತಿವಾತ್ಸಲ್ಯಗಳಿಂದ ಪರಸ್ಪರ ಅಗಲಿಕೆಯು ಉಂಟಾಗದಂತೆ ಹಸಾ್ತವಲಂಬನ ಕ್ರಮದಿಂದ ನಡೆತರುತ್ತ ಮಾತನಾಡಿಕೊಂಡು ತಮ್ಮ ಕಷ್ಟಗಳನ್ನು ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಿದ್ದರು. ಈತೆರದಿಂದ ಅವರು ಆ ಪರ್ವತಾಗ್ರಕ್ಕೆರಗಿ ಅಲ್ಲಿ ಕೆಲವುಕಾಲ ವಿಶ್ರಮಿಸಿಕೊಳ್ಳುವುದ ಕಾ್ಕಗಿ ಮಲಗಿ ನಿದ್ರಿಸಿದರು. ಬಳಿಕ ಅಂಜಿಯಾದನು ಮೊದಲೆದ್ದು ಅದರಮು ತ್ತಲೂ ಸಂಚರಿಸುತಾ್ತ ಬಂದಾನೊಂದು ದಾಡಿವಿಾವೃಕ್ಷವನ್ನು ಅದರ ಮೂಲವನ್ನು ಆಶ್ರಯಿಸಿ, ಮರದಮೇಲಿರುವ ಘನರೂಪವಾದ ಸುಂದರ ಫಲಗಳನ್ನುಕಂಡು ಅದರ ಕೆಳಭಾಗದಲ್ಲಿ ಪ್ರವಹಿಸುತ್ತಿರುವ ರಸವನ್ನು ಕಂಡು ಸಂತುಷ್ಟನಾಗಿ ತನ್ನ ಅಣ್ಣನಬಳಿಗೆ ಓಡಿಬಂದು ಆತನನ್ನು ಕರೆದುಕೊಂಡುಹೋಗಿ ಆತನಿಗೆ ತೋರಿಸಲು ಅವನು ಅದನ್ನುನೋಸಿ ಸಂತುಷ್ಟನಾದಬಳಿಕ ಇಬ್ಬರೂ ಆ ವೃಕ್ಷದಲ್ಲೊಂದು ಹಣ್ಣನ್ನು ಕೊಯ್ದು ತಿಂದನಂತರ ಶ್ರಮಪರಿಹಾರಾರ್ಥವಾಗಿ ಅಲ್ಲೇ ಮಲಗಿ ನಿದ್ರಿಸಿದರು.

ಮರುದಿನ ಬೆಳಗಿನ ಜಾವದಲ್ಲಿಎಚ್ಚತ್ತು ಆ ಪರ್ವತಾಗ್ರವನ್ನು ಸುತ್ತಿ ನೋಡಿಕೊಂಡು ಬರಬೇಕೆಂದು ಚಿಂತಿಸುತ್ತಿರುವಲ್ಲಿ ಅಂಜಿಯಾದನು ಅಸೌ್ಸದನನ್ನುನೋಡಿ ತಮಾ್ಮ ! ಬಾ ! ಈ ಪರ್ವತಾಗ್ರದಲ್ಲಿ ನಾವುಗಳು ಸಂಚರಿಸುತ್ತ ಇಲ್ಲಿನ ವಿನೋದಕರವಾದ ವರ್ತಮಾನವನ್ನು ತಿಳಿದುಕೊಂಡುಬರುವಣ ಬಾರೆಂದು ನುಡಿದಕೂಡಲೇ ಅಸೌ್ಸದನು ಅಣಾ್ಣ ! ನಾನು ಮೂರು ದಿನಗಳಿಂದಲೆರೆಗೆ ಈಗ ಉಂಟಾಗಿರುವ ಬಳಲಿಕೆಯನ್ನು ಹೋಗಲಾಡಿಸಿಕೊಂಡಮೇಲೆರತು ನಾನು ಮುಂದಕ್ಕೆ ಅಡಿಯಿಡಲಾರೆನೆಂದು ಹೇಳಿದುದರಿಂದ ಅವರಿಬ್ಬರೂ ವಿನೋದವಾಗಿ ಮಾತನಾಡುತ್ತ ಮೂರು ದಿನಗಳವರೆಗೆ ಸುಖದಿಂದಿದ್ದು ನಂತರ ಬಂದಾನೊಂದುದಿನ ಅವರಿಬ್ಬರೂ ಆ ಪರ್ವತದ ಎತ್ತರವಾದ ಶಿಖರದಲ್ಲಿ ಸಂಚರಿಸಿ ಬಂದಾನೊಂದು ಪಟ್ಟಣ ವಿರುವುದನ್ನುಕಂಡು ಸಂತೋಷಯುಕ್ತರಾಗಿ ಮಾತನಾಡುತ್ತಿದ್ದು ಓಹೋ ಇಲ್ಲಿ ಯೌವುದೋ ಬಂದು ಪಟ್ಟಣ ಉಂಟು. ಇದನ್ನು ನೋಡಿದುದರಿಂದ ನನಗೆ ತುಂಬಾ ಸಂತೋಷ ಉಂಟಾಗುತ್ತದೆ. ಆದರೆ ನಾವಿಬ್ಬರೂ ಇದನ್ನು

ಪ್ರವೇಶಿಸುವುದು ಯೋಗ್ಯವಲ್ಲ. ಆದುದರಿಂದ ನೀನು ಇಲ್ಲಿಯೇ ಇದ್ದರೆ ನಮ್ಮ ಈ ಪಟ್ಟಣಕ್ಕೆ ಹೋಗಿ ಅಲ್ಲಿನ ವಿಶೇಷ ವರ್ತಮಾನಗಳನ್ನು ತಿಳಿದುಕೊಂಡು ಬಿಕ್ಷವನ್ನು ತೆಗೆದುಕೊಂಡು ನಿನ್ನ ಬಳಿಗೆ ಬರುವೆನು. ಅಥವಾ ಒಂದುವೇಳೆ ನನಗೇನಾದರೂ ಅಪಾಯ ಉಂಟಾದರೂ, ನೀನು ಸುಖದಿಂದಿರುವೆಯೆಂಬ ಸಂಗತಿಯನ್ನು ಕೇಳಿ, ನಾನು ಸಂತೋಷದಿಂದಿರುವೆನೆಂದು, ಅಣ್ಣನಾದ ಅಂಜಿಯಾದನು ತನ್ನ ತಮ್ಮನಾದ ಅಸ್ಸಾದನನ್ನು ಕುರಿತು ಹೇಳಲು, ಅಸ್ಸಾದನು ತನ್ನ ಅಣ್ಣನು ಹೇಳಿದ ಮಾತುಗಳನ್ನು ಕೇಳಿ ಸಮ್ಮತಿಸಿದವನಾಗಿ ಅಣ್ಣಾ! ನೀನು ಹೇಳಿದ ವಾಕ್ಯವು ನನಗೆ ಸಮ್ಮತವಾಗಿದ್ದರೂ, ನಾವಿಬ್ಬರೂ ತಾಳ್ಮೆಯಿಂದ ಕಾರ್ಯಸಾಧನೆಯನ್ನು ಮಾಡಬೇಕಾದುದರಿಂದ ಭಗವಂತನು ನಿನಗೆ ಯಾವುದೊಂದು ಅಪಾಯವೂ ಬರದಂತೆ ಕಾಪಾಡಲೆಂದು ಪ್ರಾರ್ಥಿಸುವೆನು. ನಾನಾದರೋ ನಿನ್ನ ಆಜ್ಞಾನುಸಾರವಾಗಿ ಇಲ್ಲೇ ಕುಳಿತಿರುವೆನೆಂದು ನುಡಿದನು.

ಕೂಡಲೇ ಅಂಜಿಯಾದನು ಪಟ್ಟಣಕ್ಕೆ ಹೊರಟುಹೋದುದರಿಂದ ಅಸ್ಸಾದನು ಒಂದಾನೊಂದು ಮರದ ಬುಡದಲ್ಲಿ ಕುಳಿತುಕೊಂಡಿದ್ದನು. ಕೂಡಲೇ ರಾಜಕುಮಾರನಾದ ಅಂಜಿಯಾದನು ನಗರವನ್ನು ಹೊಕ್ಕುಬರುತ್ತಾ ಒಂದಾನೊಂದು ಬೀದಿಯಲ್ಲಿ ಉತ್ತಮವಸ್ತ್ರಗಳನ್ನು ಧರಿಸಿಕೊಂಡು ಕೈಯಲ್ಲಿ ಚಿತ್ರವನ್ನು ಹಿಡಿದುಕೊಂಡು ಹೋಗುತ್ತಿರುವ ಒಬ್ಬ ದೊಡ್ಡ ಮನುಷ್ಯನನ್ನು ಕಂಡು, ಅಯ್ಯಾ! ಈ ಊರಿನಲ್ಲಿ ಅಂಗಡಿ ಬೀದಿಗೆ ಹೋಗುವ ಮಾರ್ಗವಾವುದೆಂದು ಪ್ರಶ್ನೆಮಾಡಲು ಆ ಮುದುಕನು ಹಸನ್ಮುಖಿಯಾಗಿ ರಾಜಪುತ್ರನಾದ ಅಂಜಿಯಾದನನ್ನು ನೋಡಿ ಅಯ್ಯಾ! ನೀನುಮಾಡಿದ ಪ್ರಶ್ನೆಯಿಂದೀಪೂರಿಗೆ ನೀನು ಹೊಸಬನೆಂದು ತೋರುತ್ತದೆ. ಓಹೋ! ಹೌದು? ನೀನು ಹೊಸಬನಾಗಿ, ತೇಜೋವಂತನಾದ ರಾಜಪುತ್ರನಾಗಿ ಬಂದಿರುವುದರಿಂದ ನಮ್ಮದೇಶಕ್ಕೆ ಯಾವ ಫಲವುತಾನೇ ಉಂಟೆಂದು ಕೇಳಲು, ಆತನು ಮುದುಕನನ್ನು ನೋಡಿ ಅಯ್ಯಾ! ನಾನೂ, ನನ್ನತಮ್ಮನೂ, ಕಾರಣಾಂತರದಿಂದ ನಮ್ಮ ಊರನ್ನು ಬಿಟ್ಟು ಎರಡು ತಿಂಗಳವರಿಗೂ ಈ ಕಾಪುಹಾದಿಯಲ್ಲಿ ನುತ್ತಾ ಬಹುದೂರ ಪ್ರಯಾಣಮಾಡಿ ಈ ಊರನ್ನು ಸೇರಿದೆವು. ನನ್ನತಮ್ಮನು ಬಳಲಿಕೆಯನ್ನು

ತಾಳಲಾರದೆ ಹೊರಭಾಗದಲ್ಲಿರುವ ಬೆಟ್ಟದ ಶಿಖರದಮೇಲೆ ಕುಳಿತಿರುವನು. ಆತನಿಗೂ ನನಗೂ ಬೇಕಾಗುವ ಆಹಾರವಸ್ತುಗಳನ್ನು ಕೊಂಡುಕೊಳ್ಳುವುದಕ್ಕಾಗಿ ಇಲ್ಲಿಗೆ ಬಂದಿರುವೆನೆಂದು ನುಡಿಯಲು, ವೃದ್ಧನು ಆ ವಾಕ್ಯವನ್ನುಕೇಳಿ, ಅಯ್ಯಾ ! ನೀನು ಉತ್ತಮವಾದ ಸಮಯಕ್ಕಿಲ್ಲಿಗೆ ಬಂದುದಕ್ಕಾಗಿ ನಾನು ಬಹಳವಾಗಿ ಸಂತೋಷಿಸುವೆನು. ನಾನು ಈ ಊರಿಗೆ ಬಂದ ಹೊಸಬರನ್ನು ಸತ್ಕರಿಸತಕ್ಕ ದಯಾಗುಣವುಳ್ಳವನು. ನೀನು ಅನ್ಯರಕೈಗೆ ಸಿಕ್ಕದೆ ಅದೃಷ್ಟಮೂಲಕವಾಗಿ ನನ್ನ ಸ್ವಾಧೀನನಾದುದಕ್ಕಾಗಿ ನಾನು ಭಗವಂತನನ್ನು ವಂದಿಸುತ್ತೇನೆ. ನನ್ನಮನೆಗೆ ಬಂದ ನಂತರದಲ್ಲಿ ನಾನು ಹೇಳಿವ ವಾಕ್ಯಗಳು ನಿನಗೆ ನಿಷ್ಕರ್ಷವಾಗಿ ತೋರುವುದು. ನಾನು ಈವಿನ ನನ್ನ ಸ್ನೇಹಿತರಾದ ಕೆಲವುಜನ ದೊಡ್ಡಮನುಷ್ಯರಿಗೆ ಔತನವನ್ನು ಮಾಡಿಸಿಜಿನು. ಆಹಾರವಸ್ತುಗಳು ಬಹಳವಾಗಿ ಮಿಕ್ಕಿರುವುದು. ನೀನು ಸಂತೋಷವಾಗುವಂತೆ ಭುಜಿಸಿ ನಂತರ ನಿನ್ನತಮ್ಮನಿಗೂ ಬೇಕಾಗುವಷ್ಟನ್ನು ತೆಗೆದುಕೊಂಡು ಯೋಗಬಹುದು.

ಅನ್ಯಾಯವಾಗಿ ಅರ್ಥವ್ಯಯವನ್ನು ಮಾಡಿಕೊಳ್ಳಬೇಡ. ನನ್ನ ಸಂಗಡಬರಿದು ನುಡಿಯಲು ಆತನ ಮಾತುಗಳನ್ನುಕೇಳಿ ರಾಜಕುಮಾರನಾದ ಅಂಜಿಯೂವನುಆತನ ದಯಾಪರತ್ವಕ್ಕೆ ಮೆಚ್ಚಿ ತಾನು ಆತನನ್ನು ಕುರಿತು ಸ್ವಾಮಿ ! ನಾನು ಸಂಪೂರ್ಣವಾಗಿ ನಿಮ್ಮ ಸ್ವಾಧೀನನಾಗಿರುವುದರಿಂದ ನೀವು ನನ್ನನ್ನು ಎಲ್ಲಿಗಾದರೂ ಕರೆದುಕೊಂಡು ಹೋಗಬಹುದೆಂದು ನುಡಿಯಲು, ಮುದುಕನು ಪುರಿಯೊಳಗೆ ನಗುತ್ತಾ ರಾಜಪುತ್ರನು ತನ್ನ ಸ್ವಾಧೀನನಾವನೆಂದು ಸಂತೋಷಿಸುತ್ತ ಇರಲು ಆತನನ್ನು ನೋಡಿ ಅಂಜಿಯೂವನು ವಿನಯದಿಂದಾತನನ್ನು ಕೊಂಡಾಡುತ್ತ ಆತನಮನೆಯನ್ನುಸೇರಿದ ಕೂಡಲೇ ಆತನಮನೆಯ ಬಂದಾನೊಂದುಭಾಗದಲ್ಲಿ ಪ್ರಜ್ವಲಿಸುತ್ತಿರುವ ಅಗ್ನಿಕುಂಡದ ಮುಂಭಾಗದಲ್ಲಿ ನಲವತ್ತುಮಂದಿ ಮುದುಕರು ಕುಳಿತು ಸೃಷ್ಟಿಕರ್ತನಿಂದ ನಿರ್ಮಿಸಲ್ಪಟ್ಟವಸ್ತುಗಳನ್ನು ಪೂಜಿಸುತ್ತಿರುವ ಅವರ ಅವಿವೇಕವನ್ನುನೋಡಿ ಇಂತಹವನರ ಮಧ್ಯದಲ್ಲಿ ತಾನುಬಂದು ಸಿಕ್ಕಿಕೊಂಡೆನಲ್ಲಾ ಎಂದು ಬಹಳವಾಗಿಚಿಂತಿಸುತ್ತ ಆವರನ್ನುನೋಡಿ ರಾಜಪುತ್ರನು ಘನವಂತರಾದ ಅಗ್ನಿಪೂಜಕರೇ ! ತಮ್ಮ ದರ್ಶನವಾದ ಈ ದಿನವೇ ಸುದಿನವೆಂದು

ನಾನು ಭಾವಿಸುವೆನು. ಗಾಜಿಬಾಜನನೆಂಬ ಪುಣ್ಯಾತ್ಮನೆಲ್ಲಿರುವನೋ ಆತನನ್ನು ಬರಹೇಳಿರೆಂದು ಬೇಡಿಕೊಂಡನು. ಕೂಡಲೇ ಒಳಗಿನಿಂದೊಬ್ಬ ಕಾಫರನು ಒಡಿಬಂದು ರಾಜಪುತ್ರನನ್ನು ಹಿಡಿದು ನೆಲದಲ್ಲಿ ಕೆಡಹಿ ಕೈಕಾಲುಗಳನ್ನು ಕಟ್ಟಿಹಾಕಲು, ಮುದುಕನು ಆ ಕಾಫರನನ್ನು ಕುರಿತು, ಎಲಾ! ಈತನನ್ನು ಕರೆದುಕೊಂಡುಹೋಗಿ, ನನ್ನ ಕುಮಾರ್ತೆಯರಾದ ಜೋಸಾಫಮಾ, ಕೋಪಾಮಾ, ಇವರುಗಳ ಬಳಿಯಲ್ಲಿಬಿಟ್ಟು ಹಗಲೂ, ಸಾಯಂಕಾಲವೂ, ಎರಡುಸಾರಿ ಬಲವಾಗಿ ಹೊಡೆದು, ಎರಡು ರೊಟ್ಟಿಗಳನ್ನು ಕೊಟ್ಟು, ಪ್ರಾಣದಿಂದ ಕಾಪಾಡಿಕೊಂಡಿರುವಂತೆ ಹೇಳು. ಈತನು ನಮ್ಮ ದೇವತೆಗೆ ಪ್ರೀತಿಕರವಾದ ಆಹಾರವಾಗಿರುವನೆಂದು ಹೇಳಿದನು. ಇಂತೆಂದು ನುಡಿದು ಷಹರಜೆಂದಿಯು ಬೆಳಗಾಜಕೂಡಲೇ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಗಿನ ಜಾವದಲ್ಲಿ ಮರಳಿ ಬೇಳಲಾರಂಭಿಸಿದಳು.

೨೩೦ ನೆಯ ರಾತ್ರಿ ಕಥೆ.

ಸುಲ್ತಾನರೇ! ಗಾಜಿಬಾಜಿನು ತನ್ನ ಯೆಜಮಾನನು ಹೇಳಿದ ತೆರದಿಂದ ಆತನನ್ನು ಬಂಧಿಸಿ ಅವನ ತೆಗೆದುಕೊಂಡುಬಂದು, ಆ ಮುದುಕನ ಕುಮಾರ್ತೆಯರಾದ ಜೋಸಾಫತ್ತಮಾ, ಕೋಪಾಮಾ, ಇವರುಗಳು ವಾಸವಮಾಡುತ್ತಿರುವ ಅಂತಃಪುರವ ಪಕ್ಕದಲ್ಲಿರುವ ಒಂದಾನೊಂದು ಕಾರಾಗೃಹದಲ್ಲಿಟ್ಟು ಅಲ್ಲಿಂದ ಅಂತಃಪುರವನ್ನು ಸೇರಿ ಆ ವಾರ್ತೆಯನ್ನು ತಂದು ಮುದುಕನ ಮಕ್ಕಳುಗಳಿಗೆ ಹೇಳಿ ಅವಮ್ಮ! ಈಗ ನಾನು ಕರೆದುತಂದಿರುವ ಮುಸಲ್ಮಾನಯುವಕನನ್ನು ಕಠಿಣವಾದತೆರದಿಂದ ದಂಡಿಸಿದರೆ ನಿಮಗೆ ಅಗ್ನಿಪೂಜೆಯಲ್ಲಿ ಮುಯೋಬಿ ಇರುವಂತೆ ತೋರಿಬರುವುದು. ಇಲ್ಲವಾದರೆ ನೀವು ನಾಸ್ತಿಕರೇ ಹೌದೆಂದು, ನಿಮ್ಮ ತಂದೆಯು ಭಾವಿಸುವನೆಂದು ನುಡಿಯಲು, ನಿಷ್ಕರುಣಿಗಳಾದ ಆ ಮುಸಲ್ಮಾನಯುವಕಿಯರು ಕೂಡಲೇ ಸಂತೋಷಭರಿತರಾಗಿ ಆ ಕಾರಾಗೃಹವನ್ನು ಸೇರಿಬಂದು, ಆಸೌನ್ದನ ತಮ್ಮನಾದ ಅಂಜಿಯೋದನನ್ನು ಬಲವಾಗಿಯೊಡೆದು ಭೂಮಿಗೆಕೆಡಹಿ ಆತನ ಬಳಯೆಲ್ಲಿ ಬಂದುಬೆಂಬು ನೀರನ್ನೂ, ಒಂದು ರೊಟ್ಟಿಯನ್ನೂ, ಇಟ್ಟು ಥೂರಟ್ಟುಹೋದರು. ಅಂಜಿಯೋದನು ಬಲವಾದ ಪೆಟ್ಟುಗಳನ್ನು ತಿಂದು

ತನ್ನ ಶರೀರದಲ್ಲಿ ಘಾಯಗಳು ತುಂಬಿಹೋಗಿ ರಕ್ತವು ಸೋರುತ್ತಿರುವುದರಿಂದ ಮೂರ್ಛಾಕ್ರಾಂತನಾಗಿ ಬಿದ್ದುಹೋಗಿದ್ದು ನಂತರ ಎಚ್ಚ್ತು ತನಗೆ ಸಂಭವಿಸಿದ ಮರಣಕರವಾದ ದುರವಸ್ಥೆಯನ್ನು ನೆನೆನೆನೆದು ಬಹಳವಾಗಿ ಹೊಟ್ಟೆಯನ್ನು ಹಿಸಿಕಿಕೊಂಡು ಗೋಳಾಡಿ ಕೊನೆಗೆ ತನ್ನ ಮನಸ್ಸನ್ನು ಸ್ಥೈರ್ಯಮಾಡಿಕೊಂಡು ತನ್ನತಮ್ಮನಾವ ಆಸೌ್ನದನು ಸುಖವಾಗಿರುವೆನೆಂಬ ಅಭಯದಿಂದ ತಾನು ಸ್ವಸ್ಥಚಿತ್ತನಲ್ಲದಿದ್ದರೂ, ಸಮಾಧಾನಸ್ಥಿತಿಯನ್ನು ಹೊಂದಿದವನಾದನು. ಆದರೆ ಆಸೌ್ನದನು ಬಹಳ ಹೊತ್ತಿನವರಿಗೂ ಆ ಪರ್ವತಾಗ್ರದಲ್ಲಿ ಕುಳಿತಿದ್ದು ಕೊನೆಗೆ ತನ್ನಣ್ಣನು ಬಾರದಿರುವುದನ್ನು ಕಂಡು, ಆತನಿಗೇನೋ ಅಪಾಯವು ಸಂಭವಿಸಿತೆಂದು ತಿಳಿದುಕೊಂಡು ಬಹಳವಾಗಿ ಮರುಗಿ, ತಾನು ಪುರಪ್ರವೇಶಮಾಡಿ ಆತನ ವರ್ತಮಾನವನ್ನು ತಿಳಿದುಕೊಳ್ಳಬೇಕೆಂಬ ಅಭಿಲಾಷೆಯಿಂದ ಹೊರಟು ಪಟ್ಟಣದಲ್ಲಿ ಬರುತ್ತಿರುವಲ್ಲಿ ಒಬಾ್ಬನೊಬ್ಬ ದಾರಿಕಾರನಿಂದ ಈ ಪಟ್ಟಣವು ಮಾಂತ್ರಿಕರ ಪುರವೆಂಬುದನ್ನು ತಿಳಿದು ಭಯಗ್ರಸ್ತನಾಗಿ ಮುಂದೆ ಹೊರಟುಬಂದು ಒಬಾ್ಬನೊಬ್ಬ ದರ್ಜಿಯವನ ಅಂಗಡಿಯಮುಂದೆ ನಿಂತುಕೊಂಡಿರಲು, ಆತನುಮಾಡಿದ ಪ್ರಶ್ನೆಗಳಿಗನುಗುಣವಾಗಿ, ತನ್ನ ಚರಿತ್ರೆಯನ್ನೆಲಾ್ಲ ಹೇಳಲು ಆ ದರ್ಜಿಯವನು ಬಹಳವಾಗಿ ವ್ಯಸನ ಉಂಟಾಗಿ ಕನಿಕರದಿಂದ ಆತನನನ್ನುಕುರಿತು, ಅಯ್ಯಾ! ನಿನ್ನ ಅಣ್ಣನು ಊರೊಳಗಿರುವ ಮಾಂತ್ರಿಕರಕೈಗೆ ದೊರಕಿದ್ದರೆ ಪುನಃ ಆತನುಬಂದು ನಿನ್ನನ್ನು ಸೇರುವನೆಂಬ ಆಸೆಯನ್ನು ಬಿಡು.

ಬಹಜನರು ಈತೆರದಿಂದ ತಮ್ಮ ಪಾ್ರಣಗಳನ್ನು ಹಾಳುಮಾಡಿಕೊಂಡರು. ನೀನು ಎಚ್ಚ್ತರಿಕೆಯಾಗಿ ಕ್ರೂರರಾದ ಮಾಂತ್ರಿಕ್ಕರಕೈಗೆ ದೊರಕದಂತೆ ಬಹು ಜಾಗರೂಕರಾಗಿರಬೇಕೆಂದು ಹೇಳಿ, ಅಯ್ಯಾ! ನಾನು ಹೇಳುವಂತೆ ನೀನು ಕೇಳುವುದಾದರೆ ನನ್ನಮನೆಯಲ್ಲೇ ಸುಖವಾಗಿ ವಾಸಮಾಡಿಕೊಂಡಿದ್ದುದೇ ಅದರೆ ನಂತರ ನಿನಗೀಮಾಂತ್ರಿಕರಿಂದ ಯಾವವಿಧವಾದ ತೊಂದರೆಯೂ ಉಂಟಾಗದೆಂದುಹೇಳಿ, ದರ್ಜಿಯನ್ನುಬೇಡಿಸಿ, ಆತನ ದಯಾಗುಣಕ್ಕಾಗಿ ಬಹಳವಾಗಿ ಕೊಂಡಾಡಿ ಆಸೌ್ನದನು ಆ ದರ್ಜಿಯವನ ಮನೆಯಲ್ಲಿಯೇ ವಾಸಮಾಡಿಕೊಂಡಿರಲು ಒಪ್ಪಿಕೊಂಡನು.

ರಾಜಪುತ್ರನಾದ ಅಸೌದನಿಗೂ, ಮಾಂತ್ರಿಕನಗರದ ನಾಯಿಕಾಮಣಿಗೂ ಜರಗಿದ ಕಥಾಭಾಗವು.

ಈತೆರದಿಂದ ಅಸೌದನು ದರ್ಜಿಯೆವನ ಮನೆಯಲ್ಲಿ ಗೋಪ್ಯವಾಗಿ ವಾಸವಮಾಡುತ್ತಿದ್ದು ಬಹಳದಿನಗಳು ಕಳೆದಬಳಿಕ ತಾನು ಒಂದಾನೊಂದುದಿನ ಸ್ನಾನಮಾಡಬೇಕೆಂದು ಯೋಚಿಸಿ, ಒಂಟಿಯಾಗಿ ಗದ್ದಲವಿಲ್ಲದ ಮಾರ್ಗವನ್ನು ಹುಡುಕಿ ಕೊಳದಬಳಿಗೆ ಹೋಗಿ ಸ್ನಾನವನ್ನು ತೀರಿಸಿಕೊಂಡು ಹಿಂದಿರುಗಿ ಬರುತ್ತಿರುವ ಕಾಲದಲ್ಲಿ ಆತನು ತನ್ನೆದುರಿಗೆ ಬರುತ್ತಿರುವ ಸರ್ವಾಂಗಸುಂದರಿಯಾದ ಒಬ್ಬಾನೊಬ್ಬ ನಾಯಿಕಾಮಣಿಯೆನ್ನು ಕಂಡನು. ಆಕೆಯು ಸುಂದರಾಂಗನಾದ ಈ ರಾಜಕುಮಾರನೆನ್ನು ನೋಡಿ, ಮೋಹಿಸಿದವಳಾಗಿ ಮಂದಹಾಸವನ್ನುಬೀರುತ್ತ ತನ್ನ ಮೋಹವೆಂಬ ಬಿಳಿದಿಂಗಳಿಂದ ಹೊಳೆಯುತ್ತಿರುವ ಕಟಾಕ್ಷಕಿರಣಗಳನ್ನು ಆತನ ಮೇಲೆ ಚೆಲ್ಲಿ, ಎಲ್ಮೆ ರಸಿಕಾಗ್ರಗಣ್ಯನಾಯಕಶ್ರೇಷ್ಠನೇ ! ನೀನೆಲ್ಲಿಗೆ ಹೋಗುತ್ತಿರುವೆ ಎಂದು ಪ್ರಶ್ನೆ ಮಾಡಲು, ಅಸೌದನು ಆ ನಾಯಿಕಾಮಣಿಯ ಪೌಢವಾದಕ್ಕೆ ಮೆಚ್ಚಿದವನಾಗಿ ನನ್ನ ಮನೆಗೆ ಅಥವಾ ನಿನಗಿಷ್ಟವಾದ ಮತ್ತಾವಮನೆಗಾದರೂ ಸರಿಯೇ ನಾನು ಹೋಗುತ್ತಿರುವೆನೆಂದು ಹೇಳಿದ ರಾಜಕುಮಾರನ ಮಾತುಗಳನ್ನು ಕೇಳಿ, ಆಕೆಯು ಬಹುವಿನಯದಿಂದ ಎಲ್ಮೆ ಪ್ರಾಣನಾಥಾ ! ನನ್ನಂತಹ ಗೌರವಶಾಲಿಗಳಾದ ನಾಯಕಿಯೆಯರು ನಿನ್ನಂತಹ ಪುರುಷರನ್ನು ತಮ್ಮಮನೆಗೆ ಕರೆದುಕೊಂಡು ಹೋಗುವ ಪಾಡಿಕೆಯೇ ಇಲ್ಲ. ನಾಯಕಿಯೆಯರೇ ವಿಟಪುರುಷರ ಸಂಕೇತ ಸ್ಥಾನವನ್ನುಕುರಿತು ಹೊರಡುವರೆಂದು ಹೇಳಿದಳು.

ಬಳಿಕ ರಾಜಪುತ್ರನು ಆಕೆಹೇಳಿದ ಮಾತುಗಳನ್ನುಕೇಳಿ, ತಾನು ವಾಸವಮಾಡುವ ದರ್ಜಿಯೆಮನೆಗೆ ಅವಳನ್ನುಕರೆದುಕೊಂಡು ಹೋಗಲಾರದೆ ಭಯಪಟ್ಟು ಆ ನಾರೀಮಣಿಯನ್ನು ಬಿಡಲಾರದೆ ದ್ವೈಧಯತ್ನವಿದ್ದಂತಾಗುವುದು. ಹೇಗಾದರೂಮಾಡಿ ಈ ನಾಯಿಕಾಮಣಿಯ ಸಂಗದಿಂದ ಸುಖಿಸಬೇಕೆಂದು ಯೋಚಿಸಿದವನಾಗಿ ಆಕೆ ಯಾವ ಉತ್ತರವನ್ನು ಹೇಳದೆ ತಾನು ಮುಂದೆ ಮುಂದೆ ಹೋಗುತ್ತಿರುವುದನ್ನುಕಂಡು ಆ ನಾಯಕಾಮಣಿಯು

ಆತನ ಹಿಂದೆಯೇ ಹೊರಟುಬರುತ್ತಿದ್ದಳು. ಆಗ ರಾಜಕುಮಾರನು, ತನ್ನ ಯುಕ್ತಿ ಚಾತುರ್ಯದಿಂದ ಮಾರ್ಗವನ್ನು ತಪ್ಪಿಸಿ ಸಂದುಗೊಂದುಗಳನ್ನು ತಿರುಗುತ್ತ ಕಡೆಗೆ ಬಂದಾನೊಂದು ಬೀದಿಗೆ ಬಂದು, ಅಲ್ಲಿ ಒಂಟಾನೊಂದು ಮನೆಯು ಬೀಗವನ್ನು ಹಾಕಿಕೊಂಡಿರುವುದನ್ನು ಕಂಡು ಅದರ ಮುಂದೆ ಕುಳಿತುಕೊಳ್ಳುವುದಕ್ಕೆ ಅನುಕೂಲವಾಗಿರುವ ಜಗಲಿಯೆಮೇಲೆ ಕುಳಿತುಕೊಂಡು ತನ್ನ ಬಳಿಕೆಯನ್ನು ಪರಿಹರಿಸಿಕೊಳ್ಳುತ್ತಿರುವಲ್ಲಿ ಆ ಸುಂದರಿಯು ರಾಜಪುತ್ರನನ್ನು ನೋಡಿ ಎಲೈ ಪ್ರಾಣನಾಥಾ ! ಇದು ನಿನ್ನ ಮನೆಯೇ ! ಎಂದು ಕೇಳಲು, ಅಂಜಿಯೊದನ ತಮ್ಮನಾದ ಅಸೌಂದನು ಇದು ನನ್ನ ಮನೆಯೇ ಹೌದೆಂದು ಹೇಳಲು, ಆಕೆ ಹಾಗಾದರೆ ಬಾಗಿಲುತೆರೆದು ಒಳಗೆಹೋಗಿ ಸಂತೋಷದಿಂದಿರುವುದನ್ನು ತೊರೆದು, ಏತಕ್ಕಾಗಿ ಸುಮ್ಮನಿರುವೆ ಎಂದು ಕೇಳಿದುದರಿಂದ, ತನ್ನ ಚಾರಕನು ಆಹಾರದ ದಿನಸುಗಳನ್ನು ತರುವುದಕ್ಕಾಗಿ ಪೇಟೆಗೆಹೋಗಿರುವುದರಿಂದ ಈ ಮನೆಯು ಮುದಾಯಂತ್ರವು ಆತನಕೈಯಲ್ಲಿ ಸೇರಿಹೋಗಿರುವುದರಿಂದ ನಾವು ಸ್ವಲ್ಪಹೊತ್ತು ಕಾದಿರಬೇಕೆಂದು ನುಡಿದುದರಿಂದ ಬಹಳಹೊತ್ತಿನವರಿಗೂ ಕಾದುಕೊಂಡು ಕುಳಿತಿದ್ದು ಚಾರಕನು ಬಾರದುದರಿಂದ ಕುಪಿತಳಾದ ನಾಯಕಿಯು ಆದೇಶದ ಮರ್ಯಾದೆಯನ್ನನುಸರಿಸಿ, ಒಂದು ಕಲ್ಲನ್ನು ತೆಗೆದುಕೊಂಡು ಬೀಲಕವನ್ನು ಬೀಗವನ್ನು ಒಡೆದು ಬಾಗಿಲನ್ನು ತೆರೆದಳು.

ಅದನ್ನು ನೋಡಿ ರಾಜಪುತ್ರನು ಬೇಡಬೇಡವೆಂದು ಬಹಳವಾಗಿ ಬೇಡಿಕೊಂಡರೂ ಆಕೆಯು ಕೇಳದೆ ತಾನೇ ಮುದಾಳಾಗಿ ಹೊರಟಳು. ಅದನ್ನುನೋಡಿ ರಾಜಪುತ್ರನು ಭಯಗ್ರಸ್ತನಾಗಿ, ಓಡಿಹೋಗಬೇಕೆಂದು ಯೋಚಿಸಿ, ಮಧ್ಯಮಾರ್ಗದಲ್ಲಿ ನಿಂತು ಓಡಲಾರಂಭಿಸಿದನು. ಆ ನಾಯಿಕಾಮಣಿಯು, ತನ್ನಹಿಂದೆ ರಾಜಪುತ್ರನು ಬಂದಿರುವುದನ್ನು ಕಂಡು ಹಿಂದಿರುಗಿ ಒಂದು, ಆರ್ಯಪುತ್ರನೇ ! ಏತಕ್ಕೆ ಮನೆಯೊಳಗೆಬಾರದೆ ದಾರಿಯಲ್ಲಿ ನಿಂತಿರುವೆ ಎನಲು, ಆಹಾರವಸ್ತುಗಳನ್ನು ತರುವುದಕ್ಕೆಹೋದ ನನ್ನ ಚಾರಕನು ಇನ್ನೂ ಬಾರದಿರುವುದರಿಂದ ನಾನು ಅವನನ್ನು ನೋಡುತ್ತಿರುವೆನೆಂದು ಹೇಳಲು, ವಿಟವಿಚಕ್ಷಣಾ ! ನೀನು ದಾರಿಯನ್ನು ತೊರೆದು, ಬೇಗ ಬಾ ! ಇಲ್ಲಿಗೆ ಬಂದಬಳಿಕ ಬಾಗಿಲನ್ನು ಮುಚ್ಚಿಕೊಂಡು ಹೊರಟು

ಬಾರೆಂದು ನುಡಿಯಲು ಕೂಡಲೇ ರಾಜಪುತ್ರನು ಆ ಗೃಹವನ್ನು ಹೊಕ್ಕು ಅಂಗಳವನ್ನು ದಾಟಿ, ಅಂತಸ್ತುಗಳನ್ನು ಹತ್ತಿ ಸೆಜ್ಜೆಯಮೇಲೆ ಇರುವ ಒಂದಾನೊಂದು ಶಿಲಾತಲದಲ್ಲಿ ಕುಳಿತುಕೊಂಡು ಭೋಜನಪದಾರ್ಥಗಳನ್ನೂ ಪಾನೀಯವಸ್ತುಗಳನ್ನೂ ಸಿದ್ಧಪಡಿಸಿ, ಇಟ್ಟಿರುವುದನ್ನು ಕಂಡರು. ಅದನ್ನು ನೋಡುತ್ತಲೇ ಅಸೌದನು ಆಹಾ! ಯಾರೋ ಇತರ ನಾಯಿಕಾ ನಾಯಕಿಯರು ಸಿದ್ಧಮಾಡಿಕೊಂಡು ಆಹಾರವನ್ನು ಇಟ್ಟು ಹೋಗಿರುವರು. ಇಂಥಾದ್ದನ್ನು ನಾನು ತಿನ್ನುವುದು ಹೇಗೆಂದು ಭಯದಿಂದ ಆಲೋಚನೆಯೆನ್ನು ಮಾಡುತಾ ತಾನೊಂದು ಕುರ್ಜಿಯಮೇಲೆ ಕುಳಿತು ವಿಶ್ರಮಿಸಿಕೊಳ್ಳುವುದಕ್ಕೆ ಹೋಡುದನ್ನುಕಂಡು ನಾಯಕಿಯು ಆತನನ್ನು ಬಲಾತ್ಕಾರದಿಂದ ತನ್ನಬಳಿಗೆ ಕರದುಕೊಂಡುಬಂದು ಕುಳ್ಳಿರಿಸಿಕೊಳಲು ಆತನು ಮೋಹವನ್ನು ತಾಳಲಾರದೆ ಮಾತನಾಡುತಾ ತನ್ನತಮ್ಮನಾದ ಅಂಜಿಯೋದನಿಗುಂಟಾದಗತಿಯು ನನಗುಂಟಾಗುವುದರಲ್ಲಿ ಯಾವಸಂದೇಹವೂ ಇಲ್ಲವೆಂದು ಚಿಂತಿಸುತ್ತಿರುವಲ್ಲಿ ಆ ಮನೆಯ ಯಜಮಾನನಾದ ಮುಂತ್ರಿಕಪುರಿಯೆ ರಾಜಕುಮಾರೆಗಳಿಗೆ ಸರದಾರನಾದ ಬಾಹದರನು ತಾನೂ ತನ್ನ ಸ್ನೇಹಿತರನ್ನು ಕರೆದುಕೊಂಡು, ವಿನೋದಾರ್ಥವಾಗಿ ತನ್ನ ಮನೆಗೆ ಬಂದನು. ಆತನು ಬೇರೆಮನೆಯೆಲ್ಲಿ ವಾಸಮಾಡುತ್ತಿದ್ದುದರಿಂದ ವಿನೋದಾರ್ಥನಾಗಿ ಬಂದ ಕಾಲದಲ್ಲಿ ಮಾತ್ರ ವಿಹರಿಸುವುದಕ್ಕೆಂದು ಈ ಮನೆಗೆ ಬಂದು ಬಳಗಡೆಯಲಿರ್ಪ್ಪಬ್ಬ ಹೆಂಗಸೂ, ಬಬ್ಬಾಬ್ಬನೊಬ್ಬ ಯುವಕನೊಡನೆ ಮಾತನಾಡುತ್ತ ಅಲ್ಲಿಟ್ಟಿದ್ದ ಭಕ್ಷ್ಯಗಳನ್ನು ತಿನ್ನುತ್ತಿರುವುದನ್ನು ಮರೆಯಾಗಿನಿಂತು ನೋಡುತಾ ಅವರನ್ನು ಅಗಲಿಸಿ ತಾವು ವಿನೋದವಾಗಿ ಕಾಲಕಳೆಯಬೇಕೆಂದು ಯೋಚಿಸುತ್ತಿರುವಲ್ಲಿ ನಾಯಿಕಾಮಣಿಯು ರಾಜಪುತ್ರನಾದ ಅಸೌದನ ಕೈಗೆ ಸಾರಾಯಿಯ ಬಟ್ಟಲನ್ನು ಕೊಟ್ಟಳು.

ಅದನ್ನುನೋಡಿ ಬಾಹದರನು, ರಾಜಪುತ್ರನು ನೋಡುತ್ತಿರುವಂತೆ ನೀನು ಆ ಬಟ್ಟಲು ಸಾರಾಯಿಯನ್ನುಕುಡಿದು, ನಂತರ ತನ್ನಬಳಿಗೆ ಬಾರೆಂದು ನುಡಿದನು. ಆತನು ಅದರಂತೆ ಹೊರಟುಬಂದಬಳಿಕ ನಾಯಿಕಾಮಣಿಗೆ ತಿಳಿಯೆದಂತೆ ಮಾತನಾಡುವುದಕ್ಕಾಗಿ ಆತನನ್ನು ಹಜಾರಕ್ಕೆ ಕರೆದುಕೊಂಡುಹೋದನು. ಇಂತೆಂದುಹೇಳಿ ಷಹರಜಾದಿಯು ಕಥೆಯನ್ನುನಿಲ್ಲಿಸಿ, ಬೆಳಗಾದಕೂಡಲೇ ಮರಳಿ ಹೇಳಲಾರಂಭಿಸಿದಳು.

ತಿಳಿಗನೆಯ ರಾತ್ರಿಯ ಕಥೆ.

ಸುಲಾತ್ರನೇ ! ಬಾಹುದರನು ರಾಜಪುತ್ರನನ್ನು ಹಜಾರಕ್ಕೆ ಕರೆದುಕೊಂಡುಹೋಗಿ ಅಯ್ಯಾ ! ನೀನು ನನ್ನ ಮನೆಯ ಬೀಗವನ್ನೊಡೆದು ಅತಿಕ್ರಮರೀತಿಯಿಂದ ಹೇಗೆ ಪ್ರವೇಶಮಾಡಿದೆ. ಇಂತಹ ತಪ್ಪನ್ನು ನೀನು ಮಾಡಬಹುದೆ ? ಎಂದು ಹೇಳಲು ರಾಜಪುತ್ರನು ವಿನಯವಂತನಾಗಿ ಆ ಸರದಾರನನ್ನು ಕುರಿತು ತನ್ನ ವೃತ್ತಾಂತವನ್ನು ಪರದೇಶಸ್ಥರಲ್ಲಿ ಭಕ್ತಿ ವಿಶ್ವಾಸವುಳ್ಳ ನಿನ್ನಲ್ಲಿ ನಿವೇದಿಸಬೇಕೆಂದಿರುವೆನು. ಅದನ್ನು ದಯ ಮಾಡಿ ನೀನು ಕೇಳಬೇಕೆಂದು ಹೇಳಿ ಸ್ವಲ್ಪವೂ ಮರೆಮಾಜದೆ ತನ್ನ ಸರ್ವ ಚಾರಿತ್ರವನ್ನು ಹೇಳಿ ತಾನು ಬೀಗವನ್ನು ನೋಡಿ ಸುಮ್ಮನಿದ್ದರೂ ಈ ನಾಯಿಕಾಮಣಿಯು ಧೈರ್ಯದಿಂದದನ್ನು ಒಡೆದು ತನ್ನನ್ನು ಒಳಕ್ಕೆ ಕರೆದುತಂದುದರಿಂದ ಬಲಾತ್ಕಾರವಾದ ಮೋಹದಿಂದ ತಾನಿಂತು ವರ್ತಿಸುತ್ತಿದ್ದೆನೆಂದು ಹೇಳಲು, ಪರದೇಶಸ್ಥರಾಗಿದ್ದು ಸ್ಥಾನಭ್ರಷ್ಟರಾಗಿ ಬಂದ ಬಡಪಾಯಿಗಳಲ್ಲಿ ಬಹು ಧಾರಾಳವನ್ನು ತೋರಿಸತಕ್ಕವನಾದ ಬಹದರನು ಆ ರಾಜಪುತ್ರನನ್ನು ಕುರಿತು ಅಯ್ಯಾ ! ನೀನೂ, ನಿನ್ನ ನಾಯಕಿಯೂ, ಸುಖಕರವಾದ ಸಂತೋಷಕಾಲದಲ್ಲಿರುವಾಗ ನಾನು ನಿರ್ವಿಘ್ನತೆಯನ್ನುಮಾಡಬೇಕೆಂಬ ಅಭಿಲಾಷೆಯನ್ನು ಹೊಂದಿದವನಲ್ಲ.

ಆದರೆ ನಾನು ಮತೊಂದು ಮನೆಯಲ್ಲಿ ವಾಸ ಮಾಡುತ್ತಿರುವ ಈ ಮನೆಗೆ ಸ್ವಂತಗಾರನಾಗಿರುವೆನು. ಆದುದರಿಂದ ನೀನು ಎಂದಿನಂತೆ ಈ ನಾಯಿಕಾಮಣಿಯಲ್ಲಿ ಲೋಲನಾಗಿದ್ದು ಕಾಲವನ್ನು ಕಳೆಯುತ್ತಿರು. ನಾನು ನಿನ್ನ ಚಾರಕನ ವೇಷವನ್ನು ಹಾಕಿಕೊಂಡು ಬರುವೆನು. ನಂತರ ಬರುವುದಕ್ಕೆ ಇತಕ್ಕೆ ಹೊತ್ತಾಯಿತೆಂದು ನೀನು ನನ್ನನ್ನು ದಂಡಿಸು. ಇದಕ್ಕಾಗಿ ನೀನು ಸ್ವಲ್ಪವೂ ಹಿಂದೆಗೆಯಬೇಡವೆಂದು ಹೇಳಲು, ರಾಜಪುತ್ರನಾದ ಅಸೌನ್ದನು ಆತನುಹೇಳಿದ ಪ್ರಾತಿನಂತೆ ನಡೆಯಲು, ಮನಸ್ಸಿಲ್ಲದವನಾದರೂ, ಬಲಾತ್ಕಾರದಿಂದ ಆಕೆಯೆಬಳಿಗೆಹೋಗಿ ಸರಸವಾಗಿ ಮಾತನಾಡುತ್ತ ವಿನೋದವಾಗಿ ಭಕ್ಷಿಸಿ, ಮಧುಪಾನವಾದನಂತರ ಉಭಯತ್ರರೂ ಏಕೀಭಾವದಿಂದ ಅಂಗಗಳಲ್ಲಿ ಪ್ರತ್ಯಂಗಗಳನ್ನು ಅನುಗೊಳಿಸಿ ಸಂತೋಷದಿಂದ ಸುಖವನ್ನು ಅನುಭವಿಸಿದರು. ಇಂತು ಆ ನಾಯಿಕಾನಾಯಕಿಯರ್ಯ

ಸಂತೋಷದಿಂದ ಸಾಯಂಕಾಲದವರೆಗೂ ವಿನೋದವಾಗಿ ಕಾಲವನ್ನು ಕಳೆದು ಸಂಧ್ಯಾಕಾಲವಾಗುತ್ತಲೇ ಘಾಳಿಯನ್ನು ಸೇವಿಸುವುದಕ್ಕಾಗಿ ಕರುಮಾಡದಲ್ಲಿ ತಿರುಗಾಡಿ ನಂತರ ತಂತಮ್ಮ ಸ್ವಸ್ಥಾನವನ್ನು ಸೇರಿ, ಆಹಾರಪದಾರ್ಥಗಳನ್ನು ಸಜ್ಜುಮಾಡಿಕೊಂಡು ಭೋಜನ ಮಾಡುತ್ತಿರುವಕಾಲಕ್ಕೆ ಸರಿಯಾಗಿ ಬಾಹದರನು ತಾನು ಚಾರಕನಂತೆ ವೇಷವನ್ನು ಹಾಕಿಕೊಂಡುಬಂದು ರಾಜಪುತ್ರನಾದ ಅಸೌನದನ ಕಾಲುಗಳಿಗೆರಗಿ ಭಕ್ತಿಯಿಂದ ನೆಲವನ್ನು ಮುತ್ತಿಟ್ಟುಕೊಂಡು, ಎದುರಿಗೆ ನಿಂತು ಸ್ವಾಮಿ! ಅನಿವಾರ್ಯದಿಂದ ಅಚಾತುರ್ಯವನ್ನುಹೊಂದಿ, ಹೊತ್ತುಮಾಡಿ ಬಂದ ನನ್ನನ್ನು ಕ್ಷಮಿಸಬೇಕೆಂದು ಬೇಡಿಕೊಂಡನು. ಆದರೆ ಬಹದರನು ತಾನು ಚಾರಕನ ವೇಷವನ್ನು ಹಾಕಿಕೊಂಡು ಬರುವುದಕ್ಕೆ ಸ್ವಲ್ಪಹೊತ್ತಿನ ಮುಂಚೆ ಔತನಕಾಕ್ಕಾಗಿ ಬಂದಿದ್ದ ತನ್ನ ಸ್ನೇಹಿತರನ್ನುಕುರಿತು ಅಯ್ಯಾ! ಈದಿನ ನಾನು ಮಾಡಿದ ಪ್ರಯತ್ನವು ಸಿದ್ಧವಾಗಿದೆ ಹೋಗುವುದಕ್ಕಾಗಿ ನಾನು ಬಹಳವಾಗಿ ವ್ಯಸನವನ್ನು ಹೊಂದಿರುವೆನು.

ಆದುದರಿಂದ ನೀವು ಕ್ಷಮಿಸಿದರೆ ಇದರ ಕಾರಣವನ್ನು ಮುಂದೆ ತಿಳಿಸುತ್ತೇನೆಂದು ಹೇಳಿಕಳುಹಿದ್ದರಿಂದ ಯಾವ ತೊಂದರೆಯೂ ಇಲ್ಲದೆ ನಿರ್ಭಯನಾಗಿ ವೇಷವನ್ನು ಹಾಕಿಕೊಂಡು ಬಂದಿರುವನೆಂಬುದನ್ನುತಿಳಿದು, ರಾಜಪುತ್ರನು ಆ ಚಾರಕನನ್ನು ನೋಡಿ ಮೊದಲು ತನ್ನ ನಾಯಕಿಯು ತನ್ನಸಂಗಡ ಕೋಪಿಸಿಕೊಂಡತ್ತರದಿಂದ ತಾನೂ ಕೋಪಿಸಿಕೊಂಡು ಎಲಾ! ನೀನು ಇಷ್ಟು ಹೊತ್ತುಮಾಡಿ ಬರುವುದಕ್ಕೆ ಕಾರಣವೇನು? ಎಲ್ಲಿಹೋಗಿದ್ದೆ? ಸ್ವಾಮಿಕಾರ್ಯದಲ್ಲಿ ಭಕ್ತಿಕುಂದಿತೋ? ಎಂದು ಕೇಳಲು, ಆತನು ಸ್ವಾಮಿ! ತಾವು ಹೇಳಿದಂತೆ ನಾನು ನಡೆದುಕೊಳ್ಳಲು ಸಿದ್ಧವಾಗಿದ್ದೆನು. ಆದರೆ ತಾವು ಇಷ್ಟುಜೋಗ್ರತೆಯಾಗಿ ಮನೆಗೆ ಬರುವಿರೆಂದು ನಾನು ತಿಳಿದಿರದಿಲ್ಲವೆಂದು ಹೇಳಿದುದರಿಂದ ಆತನು ಕೋಪಿಸಿಕೊಂಡು ಬಂದು ಬೆತ್ತವನ್ನು ತೆಗೆದುಕೊಂಡು ಮೆತ್ತಗೆ ಮೂರು ನಾಲ್ಕು ಪೆಟ್ಟುಗಳನ್ನು ಹಾಕಿ ಸುಮ್ಮನೆ ಕೂತುಕೊಂಡನು. ಆದರೆ ನಾಯಿಕಾಮಣಿಯು ಅಷ್ಟಕ್ಕೆ ಸುಮ್ಮನಿರಲಾರದೆ ತಾನು ಆ ಬೆತ್ತವನ್ನು ತೆಗೆದುಕೊಂಡು ಬಲವಾಗಿ ಸರದಾರನಾದ ಬಹದರನನ್ನು ಹೊಡೆದುದರಿಂದ ಆತನು ಕಣ್ಣೀರನ್ನು ಸುರಿಸುತ್ತಾ ಅಳುವುದಕ್ಕೆ ಮೊದಲುಮಾಡಿದನು. ರಾಜಪುತ್ರನು ಅದನ್ನು

ನೋಡಿ ಸಹಿಸಲಾರದೆ ಆಕೆಯೆನ್ನು ಲಕ್ಷ್ಯವಾಡದೆ ಅವಳ ಕೈಬೆತ್ತವನ್ನು ತೆಗೆದುಕೊಂಡು ಅವಳನ್ನು ನಾನಾವಿಧವಾಗಿ ಹಿಯ್ಯಾಳಿಸುತ್ತಾ ತಾನು ರಾಜಧಾನಿಯ ದೊಡ್ಡ ಉದ್ಯೋಗಸ್ಥನನ್ನು ಹೀಗೆ ನಿಂದಿಸಿದನಲ್ಲಾ ! ಇದರಿಂದ ತನಗೇನು ತೊಂದರೆ ಬರುವುದೋ ಏಳಿಯೆಂದು ಯೋಚನೆಯನ್ನು ಹೊಂದಿ ಒಂದಾನೊಂದು ಕುರ್ಚಿಯಮೇಲೆ ಕುಳಿತುಕೊಂಡನು. ಬಳಿಕ ಚಾರಕನು ಅವರನ್ನು ಸಮಾಧಾನಮಾಡಿ, ಅವರಿಬ್ಬರಿಗೂ ಅನ್ನಪಾನಾದಿಗಳನ್ನು ಸಿದ್ಧಪಡಿಸಿ ತಾನು ತನ್ನ ಕೆಲಸವನ್ನು ಸರಿಯಾಗಿ ಮಾಡುವನಂತೆ ಚೆನ್ನಾಗಿ ನೆರವೇರಿಸಿ, ತಾನು ಅವರುಗಳಿಗೆ ಹಾಸಿಗೆಯನ್ನು ಹಾಕಿ, ಪ್ರತ್ಯೇಕವಾದ ಸ್ಥಲದಲ್ಲಿ ತಾನು ಬಲವಾಗಿ ಏಟು ತಿಂದು ನೊಂದಿರುವ ಆಯಾಸವನ್ನು ಕಳೆಯುವುದಕ್ಕಾಗಿ ಮಲಗಿಕೊಂಡನು.

ನಂತರ ರಾಜಪುತ್ರನೂ, ನಾಯಕಿಯೂ, ಬಹಳಹೊತ್ತಿನವರಿಗೂ ವಿನೋದನಾಗಿ ಮಾತನಾಡುತ್ತಿದ್ದು ನಂತರ ಮಲಗಿಕೊಂಡರು. ಆದರೆ ಆ ನಾಯಕಿಯು ಹೊರಗೆಬರುವಾಗ ಚಾರಕನನ್ನು ಗುರುಗುರಿಸಿ ನಿದ್ರಮಾಡುತ್ತಿರುವುದನ್ನು ಕಂಡು, ನಡುಮನೆಗೆಬಂದು ಕತ್ತಿಯೊಂದು ನೇತಾಡುತ್ತಿರುವುದನ್ನು ನೋಡಿ ತನ್ನ ಕಾಂತನಬಳಿಗೆ ಹಿಂದಿರುಗಿ ಪ್ರೀತಿಪಾತ್ರನಾದ ಪ್ರಾಣನಾಥಾ ! ನಿನಗೆ ನನ್ನಲ್ಲಿ ವಿಶ್ವಾಸವಿರುವುದಾದರೆ ಈ ಮನೆಯಲ್ಲಿ ಎಂದೂನೊಂದು ಕತ್ತಿ ಇರುವುದು. ಅದನ್ನು ತೆಗೆದುಕೊಂಡು, ಈ ನಿನ್ನ ಚಾರಕನನ್ನು ಕಡಿದುಹಾಕೆಂದು ಹೇಳಲು, ಆತನು ಪ್ರಿಯೇ ! ಆತನನ್ನುನಾವಿಬ್ಬರೂ ಬಹಳವಾಗಿಹೊಡೆದು ನೋಯಿಸಿರುವೆವು. ಅವನು ಅಂತಹ ಕ್ರೂರವಾದ ಶಿಕ್ಷೆಗೆ ಗುರಿಯಾಗುವಂತಹ ತಪ್ಪನ್ನೇನೂ ಮಾಡಿಲ್ಲ. ಇದಲ್ಲದೆ ನನಗೆ ಆತನಮೇಲೆ ಬಹಳವಾದ ಪ್ರೀತಿ ಇರುವುದು. ಆದುದರಿಂದ ನಾನು ಆತನನ್ನು ಕೊಲ್ಲಲಾರೆನೆಂದು ಹೇಳಿದನು. ಆಗ ಆ ನಾಯಕಿಯು ಹಜಾರಕ್ಕೆಬಂದು ಕತ್ತಿಯನ್ನು ತೆಗೆದುಕೊಂಡು, ಪ್ರಾಣನಾಥಾ ! ಇನ್ನು ಈ ಚಾರಕನ ಆಸೆಯನ್ನು ಬಿಡು. ನಾನು ಈತನನ್ನು ಖಂಡಿತವಾಗಿಯೂ ಕೊಲ್ಲದೆ ಬಿಡೆನೆಂದು ಕತ್ತಿಯನ್ನೆತ್ತಲು ರಾಜಪುತ್ರನು ಅವಳ ದುರ್ಮಾರ್ಗವನ್ನುನೋಡಿ ಸಹಿಸಲಾರದೆ, ಪ್ರಿಯೇ ! ಸೈರಿಸು !! ಸೈರಿಸು !!! ನನ್ನ ಚಾರಕನನ್ನು ನಾನೇ ಕೊಲ್ಲಬೇಕೇಹೊರತು ಅನ್ಯರಿಂದ ಕೊಲ್ಲಿಸಲಾರೆ. ಕತ್ತಿಯನ್ನು ತಾರೆಂದು ತೆಗೆದುಕೊಂಡು, ಅವಳನ್ನು ಬಹದರನು

ನಿದ್ರಿಸುತ್ತಿರುವ ಮನೆಗೆ ಕರೆದುಕೊಂಡುಹೋಗಿ, ಬಹದರನಿಗೆ ಬಲವಾಗಿ ಆ ನಾಯಿಕಾಮಣಿಯು ಕುತ್ತಿಗೆಯನ್ನು ಕತ್ತರಿಸಿದನು. ಇಂತೆಂದು ಬೆಳಗಾದಕೂಡಲೇ ಕಥೆಯನ್ನು ನಿಲ್ಲಿಸಿ, ಷಹರಜಾದಿಯು ಮರಳಿ ಬೆಳಗಿನ ಜಾವದಲ್ಲಿ ಹೇಳಲಾರಂಭಿಸಿದಳು.

೩೩೨ ನೆಯ ರಾತ್ರಿ ಕಥೆ.

ಅಸೌನದನು ತಲೆಯನ್ನು ಕಡಿದ ಶಬ್ದದಿಂದ ಬಹದರನು ಎಚ್ಚತ್ತು ಮುಂಡವನ್ನು ತಲೆಯನ್ನು ಕಾಣದುಹಾಕಿ ಕೈಯಲ್ಲಿ ಕತ್ತಿಯನ್ನು ಹಿಡಿದುಕೊಂಡುನಿಂತಿರುವ ರಾಜಕುಮಾರನನ್ನು ನೋಡಿ ಪ್ರಶ್ನವಿಸಿದವನಾಗಿ ತಾನು ಆತನನ್ನುಕುರಿತು, ಈ ಸ್ತ್ರೀಯನ್ನು ಏತಕ್ಕಾಗಿ ನೀನು ಕಡಿದು ಹಾಕಿದೆ ಎಂದು ಪ್ರಶ್ನೆಮಾಡಲು ರಾಜಪುತ್ರನು ವಿನಯಾನ್ವಿತನಾಗಿ ಆಕೆಯು ಚರ್ಯೆವನ್ನೆಲ್ಲ ಹೇಳಿ, ದಯಾಳುವಾದ ವರಮಿತ್ರೋಹಿತನಾದ ನಿನ್ನಲ್ಲಿ ಆಕೆ ತೋರಿದುವರಿಂದ ನಾನು ಅದನ್ನು ಸಹಿಸಲಾರದೆ ಈಕೆಯನ್ನು ಖಂಡಿಸಿಹಾಕಿದೆನೆಂದು, ಅದನ್ನು ನೀನು ಸೈರಿಸಿ ನನ್ನನ್ನು ಕಾಪಾಡಬೇಕೆಂದು ಬೇಡಿಕೊಂಡ ರಾಜಕುಮಾರನನ್ನುನೋಡಿ ಸಂತೋಷದಿಂದ ಅಯ್ಯಾ! ನೀನು ಈ ಊರಿಗೆ ಹೊಸಬನು. ನನ್ನ ಪ್ರಾಣರಕ್ಷಣೆಗಾಗಿ ಈ ನಾಯಿಕಾಮಣಿಯ ತಲೆಯನ್ನು ಕಡಿದುಹಾಕಿರುವೆ. ಈ ಶವವನ್ನು ಹೇಗೆ ಸಂಸ್ಕರಿಸಿ ನೀನು ನಿರಪರಾಧಿಯಾಗಿ ಯಾವ ತೊಂದರೆಯೂ ಇಲ್ಲದಂತೆ ಇರಲಾಪೆಯೊ ನಾನು ಕಾಣೆ. ಆದುದರಿಂದ ನೀನೇ ಇವನ್ನು ಸಂಸ್ಕರಿಸುವೆನೆಂದು ಹೇಳಿದವಾತನ್ನು ನಾನು ಒಪ್ಪಲಾರೆನು.

ಈ ಶವವನ್ನು ನಾನು ಸಮುದ್ರಮಧ್ಯಕ್ಕೆ ತೆಗೆದುಕೊಂಡು ಹಾಕಿಬರುವೆನು ಅದುವರಿಗೂ ನೀನು ಇಲ್ಲಿಯೇ ಇರು. ಒಂದುವೇಳೆ ನಾನು ಬರದೇಹೋದರೆ ನೀನು ಬಾಗಿಲನ್ನು ಭದ್ರವಾಗಿ ಮುಚ್ಚಿಕೊಂಡು ಸುಖವಾಗಿ ವಾಸಮಾಡುತ್ತಿರು. ನೀನು ಈ ಮನೆಯಲ್ಲಿ ವಾಸಮಾಡಿಕೊಂಡಿರಲು ಯಾವ ಅಭ್ಯಂತರವೂ ಇಲ್ಲ. ಆದರೆ ಇದನ್ನು ಮತ್ತಾವ ವಿಧವಾದ ಇತರ ವ್ಯಾಪಾರಗಳಿಗೂ ಸಿಕ್ಕಿಸದ ತೆ ಎಚ್ಚರಿಕೆಯಾಗಿರಬೇಕೆಂದು ಹೇಳಿಬಂದು ಸಮ್ಮತಿಪತ್ರವನ್ನು ಬರೆದು ಆತನಕೈಗೆ ಕೊಟ್ಟ ಆ ಶವವನ್ನು ಮೂಟೆಕಟ್ಟಿ ತಲೆಯಮೇಲೆ ಹೊತ್ತುಕೊಂಡು, ದಾರಿಯಲ್ಲಿ ಬರುತ್ತಿರುವಾಗ ಊರಿನ ಮಧ್ಯದಲ್ಲಿರುವ ಬಂದಾನೊಂದು ಸಂದಿಯಲ್ಲಿ ಬರುತ್ತಿರಲು, ನಗರ

ಕೋಧಕನು ಆತನನ್ನುನೋಡಿ ಸ್ತ್ರೀಹತ್ಯವನ್ನು ಮಾಡಿ ಶವವನ್ನು ಹೊತ್ತು ಕೊಂಡು ಹೋಗುತ್ತಿರುವ ಚಾರಕವೇಷಧಾರಿಯೊಪ ಸರದಾರನನ್ನು ಹಿಡಿದುಕೊಂಡು ಆತನಸಂಗಡ ಬಹಳಹೊತ್ತು ಮಾತನಾಡುತ್ತಿದ್ದು ಬಳಿಕ ತಾನು ಈತನನ್ನು ರಾಜನಬಳಿಗೆ ಕರೆದುಕೊಂಡು ಹೋಗದಿದ್ದರೆ ರಾಜದೊ್ರಹಿಯೊಗುವೆನೆಂದು ಆತನನ್ನುಬಿಡದೆ ರಾಜಸನ್ನಿಧಿಯಲ್ಲಿ ನಿಲ್ಲಿ ಸಲು ಆತನು ತನ್ನಕುದುರೆಗಳ ಸವಾರನನ್ನುಕಂಡು, ಎಲಾ ದುರಾತ್ಮನೇ! ನೀನು ನನ್ನ ಪ್ರಜೆಗಳನ್ನುಕೊಂದು ಅವರ ಸರ್ವಸ್ವವನ್ನು ದೋಚಿ ಕೊಳ್ಳುವಂತಹ ನೀಚನಾಗಿರುವುದರಿಂದ ನಿನ್ನಪುಂಡನ್ನು ಅಡಗಿಸುವೆನೆಂದು ನುಡಿದು ತನ್ನ ಮಂತ್ರಿಯನ್ನುಕರೆದು ಈ ಸರದಾರನನ್ನು ಗಲ್ಲಿಗೆ ಹಾಕಿ ಕೊಲ್ಲಿಸಿಬಿಡೆಂದು ನುಡಿದಕೂಡಲೇ ಮಂತ್ರಿಯು ಆತನನ್ನು ತನ್ನಮನೆಗೆ ಕರೆದುಕೊಂಡುಹೋಗಿ ಗಲ್ಲಿಗೆ ಹಾಕುವುದಕ್ಕೆ ಸಿದ್ಧ ಮಾಡುವಂತೆ ತನ್ನ ಚಾರಕನಿಗೆ ಹೇಳಿ, ಕುದುರೆಗಳ ಲಾಯದ ಸರದಾರನನ್ನು ಆತನುಮಾಡಿದ ತಪ್ಪಿತಕಾಕ್ಕಾಗಿ ಗಲ್ಲಿಗೆಹಾಕಿಸುತ್ತೇವೆಂದು ಊರೆಲ್ಲಾ ಸಾರಿಸಿದನು.

ಆ ವಾರ್ತೆಯನ್ನುಕೇಳಿ, ಬಾಹದರನು ಇನ್ನು ಬರಲಿಲ್ಲವೆಂದು ತತ್ತರಪಡುತ್ತಿದ್ದ ಅಸ್ಸೌನದನು ಈ ಪಾಪಕರವಾದ ಕೊಲೆಯನ್ನು ಮಾಡಿದುದರಿಂದ ನಿರಪರಾಧಿಯಾದ ಬಾಹದರನು ತನ್ನಪ್ರಾಣವನ್ನುಕೊಡು ವುದು ಎಂದಿಗೂ ನ್ಯಾಯವಲ್ಲ. ಆದರೆ ಅಂತಹ ಅಪರಾಧಕ್ಕಾಗಿ ನಾನೇ ಪ್ರಾಣವನ್ನು ಕೊಡಬೇಕಾಗಿರುವುದೇ ನ್ಯಾಯವಾಗಿ ಇರುವುದು ಎಂದು ತಿಳಿದು ಅಲ್ಲಿಂದ ಹೊರಟು ಬಿರಬಿರನೆ ಓಡಿಬಂದು ಮಂತ್ರಿಯನ್ನು ನೋಡಿ ಅಯ್ಯಾ! ನೀನು ಅನ್ಯಾಯವಾಗಿ ಈ ನಿರಪರಾಧಿಯಾದ ಬಾಹದರನನ್ನು ಗಲ್ಲಿಗೆ ಹಾಕಬೇಡ. ಮತ್ತೇನೆಂದರೆ:—ಸ್ತ್ರೀಹತ್ಯದೋಷವನ್ನು ಹೊಂದಿ ಪ್ರಾಣವನ್ನು ಒಪ್ಪಿಸುವುದಕ್ಕೆ ಸಿದ್ಧನಾಗಿರುವನುತಾನೆ ಎಂದು ಹೇಳಿ, ತಾನು ಆ ನಾಯಿಕಾವುಣಿಯೆನ್ನು ನೋಡಿದುದು ಮೊದಲುಗೊಂಡು ಮಾರ ಣಕೃತ್ಯವು ನಡೆಯುವವರೆಗೆ ತಪ್ಪಿಬ್ಬರ ಕಥೆಯನ್ನು ಸಂಪೂರ್ಣವಾಗಿ ಮಂತ್ರಿಗೆ ನಿರೂಪಿಸಿದತರುವಾಯ ಆತನು ಈ ವಿಚಿತ್ರಕರವಾದ ವರ್ತ ಮಾನವನ್ನು ರಾಜನಿಗೆ ತಿಳಿಯಪಡಿಸಬೇಕೆಂದು ರಾಜಪುತ್ರನಾದ ಅಸ್ಸೌನ ದನನ್ನು ಸಂಗಡ ಕರೆದುಕೊಂಡುಬಂದು ಮಾಂತ್ರಿಕಪುರಿ ರಾಜಸನ್ನಿಧಿಯಲ್ಲಿ ನಿಲ್ಲಿಸಿ ಆತನು ಅಸ್ಸೌನದನ ಮೂಲಕವಾಗಿ ತನ್ನನಗರಿಯೆಲ್ಲಿ ಆತನು

ಮಾಡಿ ಕಾರ್ಯ
ವನ್ನು ತಾನೂ ತ
ಳನ್ನು ವಿವರಿಸಿ ತ
ಹೇಳಿಕೊಂಡುದರಿ
ನದಲ್ಲಿ ಪ್ರಧಾನವು
ಆತನನ್ನು ರಕ್ಷಿಸು
ಅಂಜಿಯೊವನನ
ಆತನನ್ನು ಕರೆದ
ಅತಿಶಯವಾದ ಬಹುಮಾನ . ಮಂತ
ಪ್ರಚಾರ ಪಡಿಸಿದನು.

ರಾಜಕುಮಾರನಾದ ಅಂಜಿಯೊವನ ಕಥೆ

ಆದರೆ! ಅಂಜಿಯೊದನು ಆ ಮುದುಕನ ಮಕ್ಕ ಬಲೀಸಿತ್ತಿ
ಮಾ, ಕೊಲವಾವಾ, ಎಂಬವರಿಂದ ಪೂರೊಕ್ಷೀಕ್ತರಿಂದ ಹಿಂಸಿಸಲ್ಪಡು
ತ್ತಿದ್ದನು. ಆದರೆ ಅಗ್ನಿಪೂಜಕರ ಹಬ್ಬವೊಂದು ಬಂದುದರಿಂದ ಅವ
ರೆಲ್ಲರೂ ಅಗ್ನಿಪರ್ವತಕ್ಕೆ ಹೋಗಿ ಪ್ರತಿಸಂವತ್ಸರವೂ ಒಬ್ಬಾಬ್ಬನೊಬ್ಬ
ಮುಸಲ್ಮಾನನನ್ನು ಬಲಿಕೊಡುವರೆಂಬ ವರ್ತಮಾನವನ್ನು ಕೇಳಿ, ಅಂಜಿ
ಯೊದನನ್ನು ಮೂಟೆಕಟ್ಟಿ ಭದ್ರವಾದೊಂದು ಪೆಟ್ಟಿಗೆಯಲ್ಲಿ ಮುಚ್ಚಿ
ಹಡಗಿನಲ್ಲಿ ಇರಿಸಿಕೊಂಡು ಅಗ್ನಿಪರ್ವತಕ್ಕೆ ತೆಗೆದುಕೊಂಡು ಹೋಗುತ್ತಿ
ರುವ ಹಡಗನ್ನು ಮಂತ್ರಿಯಾದ ಅಸೌದನು ಚೆನ್ನಾಗಿ ಹುಡಿಕಿಸ
ಬೇಕೆಂದು ತಾನೂ ತನ್ನ ಚಾರಕರೂ ಬಹಳವಾಗಿ ಹುಡುಕಿದರೂ, ಅಂಜಿ
ಯೊದನು ದೊರಕದಷ್ಟು ಭದ್ರವಾಗಿ ಗೋಪ್ಯವಾಡಲ್ಪಟ್ಟು ಇದ್ದನು.
ಆದರೆ ಸಮುದ್ರದಮೇಲೆ ಪ್ರಯಾಣಮಾಡುತ್ತ ಹಡಗು ನಾಲ್ಕು ದಿನಗಳು
ಹೊರಟುಹೋದಮೇಲೆ ಅಂಜಿಯೊದನು ನಾನಿನ್ನು ಬದುಕಿರುವುದರಿಂದ
ಪ್ರಯೋಜನವಿಲ್ಲನೆಂದು ತಿಳಿದು, ಹೇಗಾದರೂಮಾಡಿ ಸಮುದ್ರದಲ್ಲಿ ಬಿದ್ದು
ಪ್ರಾಣಹಾನಿಯನ್ನು ಹೊಂದುವುದೇ ಸುಖಕರವೆಂದು ಯೋಚಿಸುತ್ತಿರು
ವಲ್ಲಿ ಆ ಹಡಗು ದೈವವಶದಿಂದ ಬಲವಾದ ಘಾಳಿಯಿಂದ ನೂಕಿಕೊಂಡು
ಹೋಗಿ, ಒಂದಾನೊಂದು ಮಾರ್ಗದಲ್ಲಿ ತೆಗೆದುಕೊಂಡು ಬಂಡೆಗೆ ಹೊಡೆದು

ಲ್ಪದಷ್ಟ ಗಲ್ಲೀ
ಸ್ಯರಿಲ್ಲಾಂ ಗಲ್ಲಿ
ಣಿಯು ದ್ವೀಪಕ್ಕೆ
ಸಾರನು ತನ್ನ ಸೇವ
ದುರವಸ್ಥೆಯನ್ನು
ಸದಲ್ಲಿ ಮುರಜಿಯಾ
ಪ್ರಾಣವನ್ನು
ಲೆ ನಿಲ್ಲುವಹಾಗೆ
-- ುರಜಿಯಾನಳ ಬಳಿಗೆ
ಘನಾನ ಉಳ್ಳವಳಾದ ಆಕೆಯು ನಮ್ಮನ್ನು
ನುವುದಿಲ್ಲ. ಆದಕಾರಣ ನಾವು ಈಗ ಮಾಡ
ಲೋಚನೆಯು ಏನಂದರೆ :—

ನಿನ್ನ ಪರ್ವತಕ್ಕೆ ಬಲಿಕೊಡಬೇಕೆಂದು ಕರೆದುತಂದಿರುವ ರಾಜಪುತ್ರನು, ಮುಸಲ್ಮಾನನಾಗಿರುವುದರಿಂದ ಆತನನ್ನು ಮುಂದುಮಾಡಿಕೊಂಡು ನಾವುಗಳೆಲ್ಲರೂ ಆತನ ಸೇವಕರಂತೆ ವೇಷವನ್ನು ಹಾಕಿಕೊಂಡು ಹೋದರೆ ನಮ್ಮಗಳೆಲ್ಲರಿಗೂ ಅನುಕೂಲವಾಗುವುದೆಂದು ಯೋಚಿಸಿ, ಗೊತ್ತುಪಡಿಸಿಕೊಂಡುದರಿಂದ ಅಲ್ಲಿದ್ದವರೆಲ್ಲರೂ, ತಮ್ಮ ಯೋಗ್ಯತೆಗೆ ಇದು ತಕ್ಕದುದೆಂದು ಯೋಚಿಸಿ ಒಪ್ಪಿಕೊಂಡರು. ಇಂತೆಂದು ಹೇಳಿ ಷಹರಜಾದಿಯು ಬೆಳಗಾದಕೂಡಲೇ ಕಥೆಯನ್ನು ನಿಲ್ಲಿಸಿ, ಮರುದಿನ ಬೆಳಿಗಿನ ಜಾವದಲ್ಲಿ ಮರಳಿ ಹೇಳಲಾರಂಭಿಸಿದಳು.

ಅಷ್ಟಮಿಯ ರಾತ್ರಿಯ ಕಥೆ.

ಸುಲ್ತಾನರೇ ! ಬಾಹರಾಮನೆಂಬ ಹಡಗಿನ ಸರದಾರನು ರಾಜಕುಮಾರನಾದ ಅ ಜಿಯಾದನನ್ನು ಹೊರಕ್ಕೆ ತೆಗೆದು ಆತನಿಗೆ ಬಾಣಸಿಗನ ವೇಷವನ್ನುಹಾಕಿ, ಆತನನ್ನು ಬಹಳವಾಗಿ ಎಚ್ಚರಗೊಳಿಸಿ, ಹಡಗನ್ನು ನಡೆಸಿಕೊಂಡು, ಮುಂದೆ ಬರುತ್ತಿರುವಲ್ಲಿ ರಾಣಿಯಾದ ಮುರಜಿಯಾನಳು ಹಡಗು ಬರುತ್ತಿರುವ ಜೊಡೆಯನ್ನುತಿಳಿದು, ಆ ಹಡಗಿನ ಸರದಾರನನ್ನು ಕರೆದುತರುವಂತೆ ಹೇಳಿ, ತಾನು ಸರ್ವಸನ್ನಾಹಯುಕ್ತಳಾಗಿ ರೇವಿಗೆಬಂದು ನಿಂತುಕೊಳಲು, ಅಷ್ಟರಲ್ಲೇ ಹಡಗು ದಡವನ್ನುಸೇರಿತು. ಆಗ ಹಡಗಿನ

ಯೆಜವಾನನು ಆಕೆಯೆನ್ನು ಕಾಣಿಸಿಕೊಂಡು ನಮ್ಮನಾಗಿ ವರ್ತಮಾನವನ್ನು ಹೇಳಿಬಂದ ಮಾರ್ಗವನ್ನು ತಿಳಿಸಿ, ರಾಜಕುಮಾರನಾದ ಅಂಜಿಯೋದನು ಬಹು ಸಮರ್ಥನಾದ ಬಾಣಸಿಗನೆಂದು ಹೇಳಿ, ಈತನು ಚತುರನಾದ ಮುಸಲ್ಮಾನನಾದುದರಿಂದ ಈತನು ನಿನ್ನೊಳಗದಲ್ಲಿರುವುದಕ್ಕೆ ಯೋಗ್ಯನೆಂದು ತಿಳಿದು ನಿನ್ನ ಕಾಣಿಕೆಗಾಗಿ ಈತನನ್ನು ಕರೆದುಕೊಂಡು ಬಂದಿರುವೆನೆಂದು ನುಡಿದು ಆತನನ್ನು ತೋರಿಸಲು ಆತನು ರಾಣಿಗೆ ನಮಸ್ಕಾರವನ್ನುಮಾಡಿ ರಾಣಿಯೆಮುಂದೆ ನಿಲಲು ರಾಣಿಯು ಆತನರೂಪವನ್ನುನೋಡಿ ಮೋಹಿಸಿದವಳಾಗಿ, ತುಂಬಾ ಕನಿಕರದಿಂದಾತನನ್ನು ಕುರಿತು, ಅಯ್ಯಾ ! ನಿನ್ನ ಹೆಸರೇನೆಂದುಕೇಳಲು ರಾಜಪುತ್ರನು ಅಮ್ಮಾ ! ನನ್ನ ಮೊದಲಿನ ಹೆಸರನ್ನು ಹೇಳಲೋ ? ಅಥವಾ ಎರದನೆಸಾರಿ ಇಟ್ಟಿರುವ ಹೆಸರನ್ನು ಹೇಳಲೋ ? ಎಂದು ಕೇಳಲು ರಾಣಿಯು ಆಶ್ಚರ್ಯಯುಕ್ತಳಾಗಿ ನಿನಗೆ ಎರಡುಹೆಸರುಗಳುಂಟೇ ? ಎನಲು ಆಹಾ ! ಹೌದಮ್ಮ ! ನನ್ನ ಮೊದಲಿನಹೆಸರು ಅಂಜಿಯೋದು, ಎರಡನೆಸಾರಿಯಹೆಸರು ಮೋತಾರು ಅಂದರೆ (ಬಲಿಕೊಡುವುದಕ್ಕಾಗಿ ಗೊತ್ತುಮಾಡಿದವನೆಂಬ) ಅರ್ಥವುಳ್ಳ ಹೆಸರನ್ನು ಹೇಳಿದುದರಿಂದ ಅದರರ್ಥವು ರಾಣಿಯು ತಿಳಿದುಕೊಳ್ಳಲಾರದೆ ಈತನು ಬಾಣಸಿಗನೆಂದು ಹೇಳುವರಾದುದರಿಂದ ಬಾಣಸಿಗನೇ ಆಗಿರಬಹುದೆಂದು ಊಹಿಸಿ ನಿನ್ನ ಕೈಬರಹವನ್ನು ನೋಡಬೇಕೆಂದು ರಾಣಿಯು ಪ್ರಶ್ನೆಮಾಡಿದುದರಿಂದ ಉತ್ತಮತರದ ಆತನ ಕೈಬರಹವನ್ನು ತೋರಿಸುವುದಕ್ಕಾಗಿ ಹಡಗಿನ ಸರದಾರನಾದ ಬಾಹರಾಮನು ಕಾಗದ, ಲೇಖಣಿ, ಶಾಯಿ, ಮೊದಲಾದ ಪತ್ರಗಳನ್ನು ಸಿದ್ಧಪಡಿಸಿದನು.

ಕೂಡಲೇ ಅಂಜಿಯೋದನು ಹೊರಗೆಬಂದು ಕಾಗದವನ್ನು ತೆಗೆದುಕೊಂಡು, ಅಮ್ಮಾ ! ಪ್ರಪಂಚದಲ್ಲಿ ನೇತ್ರಪಾಟವನ್ನು ಹೊಂದಿದ ಪುರುಷನು ಬೀಳುವ ಹಳ್ಳದಲ್ಲಿ ಕುರುಡನೆಂದಿಗೂ ಬೀಳುವುದಿಲ್ಲ. ಹೇಗೆಂದರೆ :— ಪೂರ್ಣಪಾಂಡಿತ್ಯವುಳ್ಳ ವಿದ್ವಾಂಸರು ಬಡವರಾಗಿಯೂ, ವಾಗಾಡಂಬರದಿಂದ ನುಡಿದು ಡಂಬರಕಾರ್ಯದಿಂದ ಗಂಭೀರವನ್ನುಹೊಂದಿ, ಸುಖಿಸುವ ಪಾಮರರಂತೆ ದೇವರಲ್ಲಿ ಭಕ್ತಿಯುಳ್ಳವನಾಗಿ ಉತ್ತಮನಾದ ಮುಸಲ್ಮಾನನಾದ ನಾನು ದುರವಸ್ಥೆಯನ್ನುಹೊಂದಿ, ನಾನಾದುಃಖಗಳನ್ನು ಅನುಭವಿಸುತ್ತಿರುವೆನು. ಈಗ್ಗೆ ಪ್ರಾಜಕರಾಗಿ ದೈವಭಕ್ತಿ ಇಲ್ಲದ ಈ ಜನರು ಪುಣ್ಯ

ವಂತರಾಗಿ ಸಮಸ್ತವಾದ ಸುಖವನ್ನು ಹೊಂದುತ್ತಿರುವುದನ್ನು ನೋಡಿದರೆ ಒಬ್ಬ ಮನುಷ್ಯನು ಒಂದುವಿಧವಾಗಿ ಸುಖಿಸುತ್ತಿರುವಲ್ಲಿ ಮತ್ತೊಬ್ಬನು ಆತನಂತೆ ಇರಬೇಕೆಂದು ಬಯಸಿ, ಅದರಂತೆ ನಡೆದುಕೊಳ್ಳಲು ಸಾಧ್ಯವಲ್ಲವೆಂಬ ಅಭಿಪ್ರಾಯವುಳ್ಳ ಬರವಣಿಗೆಯನ್ನು ಬರೆದು ಆತನ ಕೈಗೆ ಕೊಡಲು, ರಾಣಿಯು ಆದರ ತಾತ್ಪರ್ಯವನ್ನು ಗ್ರಹಿಸಿಕೊಂಡು ತನ್ನವುತದವನಾದ ಈತನಿಗುಂಟಾಗಿರುವ ದೌರ್ಭಾಗ್ಯವನ್ನು ಹೋಗಲಾಡಿಸಬೇಕೆಂದು ತಿಳಿದು ಹಡಗಿನ ಸರದಾರನಾದ ಬಹರಾಮನನ್ನು ಕರದು ನೀನು ಈ ಬಾಣಸಿಗನನ್ನು ಕ್ರಯಕ್ಕೆ ಕೊಟ್ಟುಬಿಡುವೆಯೋ ? ಇಲ್ಲವೇ ನನಗೆ ಬಹುಮಾನವಾಗಿ ಕೊಡುವೆಯೋ ? ಹೇಗಾದರೂಮಾಡಿ ನಿನಗೆ ಈತನನ್ನು ಕೊಟ್ಟುಬಿಡುವುದರಲ್ಲಿ ಅಭಿಮಾನ ಉಂಟೆಂದು ನಾನು ಚೆನ್ನಾಗಿ ತಿಳಿದಿರುವೆನೆಂದು ನುಡಿದಳು.

ಆಗ ಹಡಗಿನ ಸರದಾರನು ನಾನು ಈತನನ್ನು ಕ್ರಯಕ್ಕೂ ಕೊಡುವುದಿಲ್ಲ ಅಲ್ಲದೆ ನಿನಗೆ ಬಹುಮಾನವಾಗಿಯೂ ಕೊಡುವುದಿಲ್ಲ ಎಂದು ಅಹಂಕಾರದಿಂದ ನುಡಿದನು, ರಾಣಿಯು ಆತನನ್ನು ಲಕ್ಷ್ಯಮಾಡದೆ ರಾಜಕುಮಾರನನ್ನು ಕರೆದುಕೊಂಡು ತನ್ನರಮನೆಗೆ ಹೋಗಿ ಚಾರಕರನ್ನು ಕರೆದು ಅಯ್ಯಾ ! ನೀವುಗಳು ಇಲ್ಲಿಂದ ಹೊರಟು ಹಡಗಿನಬಳಿಯನ್ನು ಸೇರಿ, ಅದರಲ್ಲಿರುವ ಸಾಮಾನುಗಳನ್ನು ಕಿತ್ತುಕೊಂಡು ಆತನನ್ನು ಓಡಿಸಿಬಿಡಿರೆಂದು ನುಡಿಯಲು, ಅವರು ಹಾಗೆಯೇ ಮಾಡಿದರು. ನಂತರ ರಾಣಿಯು ಭೋಜನಾದಿಗಳನ್ನು ರಾಜಪುತ್ರನಾದ ಅಂಜಿಯೊದನೊಡನೆ ತೀರಿಸಿ ನಂತರ ಆತನನ್ನು ಬಹು ವಿಶ್ವಾಸದಿಂದ ತನ್ನ ರಾಣಿವಾಸಕ್ಕೆ ಕರೆದುಕೊಂಡು ಹೋಗಿ ಅಯ್ಯಾ ! ಇದುವರಿಗೂ ನಿನ್ನನ್ನು ನಾನು ಬಾಣಸಿಗನೆಂದು ತಿಳಿದಿದ್ದೆನು. ಆದರೆ ಇನ್ನುಮೇಲೆ ನಾನು ಹಾಗೆಂದು ಭಾವಿಸೆನು ಆದುದರಿಂದ ನೀನು ನನ್ನ ಬಳಿಯಲ್ಲಿ ಕುಳಿತುಕೊಂಡು ಸಂತೋಷದಿಂದ ಮಾತನಾಡುತ್ತ ನಿನ್ನವಿಚಾರವನ್ನು ನನಗೆ ತಿಳಿಸಬೇಕು. ಹಡಗಿನ ಯಜಮಾನನಾದ ಬಾದರಾಮನು ಹೇಳಿದಮಾತನ್ನು ಕೇಳಿದುದರಿಂದ ನಿನ್ನಲ್ಲಿ ಆತನು ಏನೋ ದೊಡ್ಡಚಿಂತೆಯನ್ನು ಎಣಿಸಿರಬೇಕೆಂದು ತೋರುವುದೆಂದು ನುಡಿಯಲು, ರಾಜಪುತ್ರನು ತನ್ನನ್ನು ಬಹು ಮರ್ಯಾದೆಯಿಂದ ಸತ್ಕರಿಸುತ್ತಿರುವ ರಾಣಿಯನ್ನು ಕುರಿತು ಬಹಳವಾಗಿ ವಂದನೆಗಳನ್ನು ಮಾಡಿ, ತನ್ನ ಕಥೆಯನ್ನು ಹೇಳಲಾರಂಭಿಸಿದನು. ರಾಜಕುಮಾರನು ತನ್ನ ಕಥೆಯನ್ನು

ಮೊದಲಿನಿಂದ ಕೊನೆಯವರಿಗೂ ಹೇಳಿದನಂತರದಲ್ಲಿ ರಾಣಿಯು ತನ್ನನೋಹ
ನಾಂಗನಾದ ಆತನಿಗೆ ಸಂಭವಿಸಿದ ತೊಂದರೆಗಳನ್ನು ಕೇಳಿ, ಬಹಳವಾಗಿ
ಚಿಂತಿಸುತ್ತ ಆತನನ್ನು ಕುರಿತು ರಾಜಪುತ್ರನೇ ! ನೀನು ಇಷ್ಟು ದಿನಗಳ
ಪರಿಗೂ, ಅಗ್ನಿಪೂಜಕರ ಮಂಡಲಿಯಲ್ಲಿಸಿಕ್ಕ ಬಹಳವಾದ ತೊಂದರೆಗಳ
ನ್ನನುಭವಿಸಿದೆಯಾದುದರಿಂದ ಈಗ ಸಂತೋಷದಿಂದ ಭುಜಿಸೆಂದು ಆತನಿಗೆ
ಬಹಳವಾದ ಉಪಚಾರದಿಂದ ಭೋಜನವನ್ನು ಮಾಡಿಸಿ, ಆರೋಗ್ಯರಕ್ಷಣೆ
ಗಾಗಿ ಸ್ವಲ್ಪ ಸಾರಾಯಿನ್ನುಸಹಾ ಪಾನ ಮಾಡಿಸಿದಳು.

ನಂತರ ಆತನು ಸ್ವಲ್ಪಹೊತ್ತು ಸುದಾರಿಸಿಕೊಂದು ಮಲಗಿದ್ದು
ನಂತರ ಎಚ್ಚರಿಕೆಯಾದುದರಿಂದ ಅಂತಃಪುರದಿಂದ ಹೊರಟು, ಅರಮನೆಗೆ
ಸೇರಿ, ಉದ್ಯಾನವನದಬಳಿಗೆ ಬಂದು ಅದರಲ್ಲಿರುವ ಒಂದಾನೊಂದು ಸರೋ
ವರದಬಳಿಯೆಲ್ಲಿ ಕುಳಿತುಕೊಂಡು ನಿದ್ರಿಸಿದನು. ಆದರೆ ಹಡಗಿನ ಯೆಜ
ಮಾನನಾದ ಬಹರಾಮನು ತನ್ನಹಡಗಿಗೆ ತಕ್ಕಂತೆ ಉತ್ತಮವಾದ ಸೀನೀ
ರನ್ನು ತೆಗೆಸಿಕೊಂಡು ಬರುವಂತೆ ತನ್ನ ಚಾರಕರಿಗೆ ಹೇಳಿ, ದೇವರ ಪ್ರೀತಿ
ಗಾಗಿ ಬಲಿಕೊಡಬೇಕೆಂದಿದ್ದ ಆ ಮುಸಲ್ಮಾನ ರಾಜಪುತ್ರನನ್ನು ಹೇಗಾ
ದರೂಮಾಡಿ ಕರೆದುತರಬೇಕೆಂದು ತನ್ನಮುಖ್ಯಸ್ಥನಿಗೆ ಹೇಳಲು, ಆತನು
ಹಾಗೆ ಆಗಲೆಂದು ನುಡಿದು ಉತ್ತಮಜಲವನ್ನು ಹೊಂದಿರುವ ರಾಣಿಯ
ಉದ್ಯಾನವನದಬಳಿಯಲ್ಲಿರುವ ಒಂದಾನೊಂದು ಸರೋವರದಬಳಿಗೆ ಬಂದು,
ಅಲ್ಲಿ ನಿದ್ರಿಸುತ್ತ ಮಲಗಿರುವ ರಾಜಪುತ್ರನಾದ ಅಂಜಿಯಾದನನ್ನು
ನೋಡಿ ಆತನು ನಿದ್ರಿಸುವಾಡಿ ಎದ್ದಕೂಡಲೇ ಕರೆದುಕೊಂಡು ಹೋಗಬೇ
ಕೆಂದು ಕಾದುಕೊಂಡು ಕುಳಿತಿದ್ದ ನೀರನ್ನು ತುಂಬಿಕೊಂಡು ನಂತರ
ಎಚ್ಚತ್ತ ಅಂಜಿಯಾದನನ್ನು ಹಡಗಿನಬಳಿಗೆ ಕರೆದುಕೊಂಡು ಹೋಗು
ವುದಕ್ಕಾಗಿ ಗಾಡಿಯಮೇಲೆ ಕುಳ್ಳಿರಿಸಿಕೊಂಡು ಹೋಗಿ, ತಮ್ಮ ಯೆಜ
ಮಾನನಿಗೆ ಆ ವರ್ತಮಾನವನ್ನು ಹೇಳಲು, ಆತನು ಬಹುಸಂತೋಷದಿಂದ
ಅವರುಗಳನ್ನು ಕೊಂಡಾಡಿ ತನ್ನ ಇಷ್ಟಾರ್ಥವು ನೆರವೇರಿದುದಕ್ಕಾಗಿ
ತಾನನ್ನಸಂತೋಷಚಿತ್ತನಾಗಿ ಆತನನ್ನು ಹಡಗಿನಲ್ಲಿ ಕುಳ್ಳಿರಿಸಿಕೊಂಡು
ಪ್ರಯಾಣ ಹೊರಟನು. ಇಂತೆಂದು ನುಡಿದು ಷಹರಜಾದಿಯು ಬೆಳಗಾ
ದುದನ್ನುಕಂಡು ಕಥೆಯನ್ನುನಿಲ್ಲಿಸಿ, ದುರಳ ಮಾರುದಿನ ಬೆಳಿಗಿನ ಜಾವ
ದಲ್ಲಿ ಹೇಳಲಾರಂಭಿಸಿದಳು.

೨೩೪ ನೆಯ ರಾತ್ರಿ ಕಥೆ.

ಈತರದಿಂದ ಅಂಜಿಯೋದನು ಮರಳಿ ತಾನು ಅಗ್ನಿಪೂಜಕರಾ
ದುಷ್ಟರಕೈಗೆ ಸಿಕ್ಕದುದಕ್ಕಾಗಿ ತುಂಬಾ ವಿಚಾರಯುಕ್ತನಾಗಿ ಚಿಂತಿಸು
ತ್ತಿದ್ದನು. ಆದರೆ ರಾಣಿಯು ಹೊರಗೆದ್ದುಹೋದ ರಾಜಪುತ್ರನು ಸ್ವಲ್ಪ
ಹೊತ್ತಿನಲ್ಲೇ ಬರಬಹುದೆಂದು ಕಾದುಕೊಂಡಿದ್ದರೂ, ಆತನು ಬಾರದೇ
ಹೋದುದರಿಂದ ಬಹಳವಾಗಿ ನೊಂದು ತನ್ನ ದಾದಿಯೆರನ್ನು ಕರೆದು ಆತ
ನನ್ನು ಹುಡುಕುವಂತೆ ಆಜ್ಞಾಪಿಸಿದಳು ನಂತರ ಅವರು ಉದ್ಯಾನವನ
ವನ್ನು ಹುಡುಕಿನೋಡುವಲ್ಲಿ ಅಂಜಿಯೋದನ ಜೋಡು ಬಿದ್ದಿರುವುದನ್ನು
ಕೊಳದಬಳಿಯಿಂದ ಸುತ್ತಿನ ಬೀಲಿಯವರಿಗೂ ನೀರು ಚೆಲ್ಲಿರುವುದನ್ನು
ಕಂಡು ಮರಳಿ ಮಾಂತ್ರಿಕರಾದ ಅಗ್ನಿಪೂಜಕರು ಆತನನ್ನು ಹಿಡಿದು
ಕೊಂಡುಹೋದರೆಂದು ತಿಳಿದು, ಆತನನ್ನು ಹೇಗಾದರೂಮಾಡಿ ಬರಮಾಡಿ
ಕೊಳ್ಳಬೇಕೆಂಬ ಅಭಿಲಾಷೆಯಿಂದ ತನ್ನ ಮಂತ್ರಿಯನ್ನು ಕರೆಸಿ ಹಡಗಿನ
ಯಜಮಾನನಾದ ಬಾಹರಾಮನು ಸಮುದ್ರತೀರದಲ್ಲಿರುವ ರೇವನ್ನು ಬಿಟ್ಟು
ಪ್ರಯಾಣ ಮಾಡಿದನೋ ಇಲ್ಲವೋ ತಿಳಿದುಕೊಂಡುಬಾರೆಂದು ಆಜ್ಞಾಪಿಸಿ
ದಾಗಲೇ ಅಂಜಿಯೋದನನ್ನು ಕರೆದುಕೊಂಡು ಮಾಂತ್ರಿಕಪುರಿಯ ಹಡಗಿನ
ವ್ಯಾಪಾರಿಯು ಮುಂದರಿದು ಸಮುದ್ರದಲ್ಲಿ ಪ್ರಯಾಣಮಾಡಿದ ಸಂಗತಿ
ಯನ್ನು ತಿಳಿದುಬಂದು ಮಂತ್ರಿಯು ರಾಣಿಗೆ ತಿಳಿಸಿದುದರಿಂದ ಆಕೆ ತನ್ನ
ಹಡಗುಪಹರೆಯವರನ್ನು ಒರಮಾಡಿ ಹತ್ತು ಹಡಗುಗಳ ಸೈನ್ಯವನ್ನು
ತೆಗೆದುಕೊಂಡು ಪರ್ತಕನ ಹಡಗನ್ನು ಹಿಡಿದು ರಾಜಪುತ್ರನಾದ ಅಂಜಿ
ಯೋದನನ್ನು ಕರೆದುಕೊಂಡುಬಂದರೆಹೊರತು ಇಲ್ಲವಾದರೆ ನಿನಗೆ ಪ್ರಾಣ
ದಂಡನೆಯನ್ನು ವಿಧಿಸುವೆನೆಂದು ಹೇಳಿದುದರಿಂದ ಆತನನ್ನು ತನ್ನ ಸರ್ವ
ಸಾಹಸವನ್ನು ಖರ್ಚುಮಾಡಿ ಹತ್ತು ಹಡಗುಗಳನ್ನು ತೆಗೆದುಕೊಂಡು
ಮೂರುದಿನಗಳವರಿಗೂ, ಬಹಳ ತ್ವರೆಯಾಗಿ ಪ್ರಯಾಣಮಾಡಿ, ತಾನು
ನಾಲ್ಕನೆಯದಿನದಲ್ಲಿ ಆ ಅಗ್ನಿಪೂಜಕನಾದ ಪರ್ತಕನಹಡಗನ್ನು [illegible]
ಕೊಂಡನು. ಅದನ್ನುನೋಡಿ ಬಹರಾಮನು ರಾಣಿಯು ರಾಜಪುತ್ರನನ್ನು
ಪುನಹ ಕರೆಸಿಕೊಳ್ಳುವುದಕ್ಕಾಗಿ ಹಡಗನ್ನು ಕಳುಹಿಸುತ್ತಿರುವಳೆಂದು
ಇವರಿಂದ ಆತನನ್ನು ಬಹಳವಾಗಿ ಹಿಂಸಿಸಿ ಕೊಲ್ಲುವುದರಿಂದ ನಮಗೆ ಹಿತ

ಬೇಡಿಕೊಳಲು ಆ ರಾಜಪುತ್ರನು ಆಕೆಯನ್ನು ತನ್ನ ಉತ್ಕೃಷ್ಟನಾದ ಶಿಷ್ಯನಂತೆ ಭಾವಿಸಿ ಮುಕ್ತಮ್ಮದನ ಮತದ ರಹಸ್ಯವೆಲ್ಲವನ್ನು ಉಪದೇಶಿಸಿ ನೀನು ನನ್ನಲ್ಲಿ ವಿಶ್ವಾಸ ಉಳ್ಳವಳಾದ ರಾಣಿಯಾಗಿರೆ ನಿನ್ನ ಅಕ್ಕನನ್ನು ನನ್ನ ಸ್ಥಳಕ್ಕೆ ಬರದಂತೆ ಏರ್ಪಾಟಿಕೆಯಾಗಿರೆಂದು ನುಡಿಯೆಲು, ಆಕೆಯು ಅದರಂತೆ ಜಾಗರೂಕಳಾಗಿರುತ್ತ ತನ್ನ ಮುಸಲ್ಮಾನ ದಾದಿಯರ ಮೂಲಕವಾಗಿ ಉತ್ತಮವಾದ ಆಹಾರವನ್ನು ಮಾಡಿಸಿ ಆತನಿಗೆ ತಿನ್ನಲಿಕ್ಕೆ ಕೊಟ್ಟು ಬಹಳವಾದ ಆದರದಿಂದ ಕಾಪಾಡುತ್ತಿದ್ದಳು. ಆದರೆ ಒಂದಾನೊಂದು ದಿನದಲ್ಲಿ ಬೋಸಾತ್ತನಾ ಎಂಬವಳು ತನ್ನ ತಂದೆಯು ಆತನನ್ನು ನೋಡುವುದಕ್ಕೆ ಬಂದಿದ್ದಾಗ್ಯೂ ಒಳಕ್ಕೆ ಬಿಡದೆ ತಾನೇನೋಗಿ ಆತನನ್ನು ಉಪಚರಿಸುತ್ತಿರುವ ಆ ಪಟ್ಟಣದ ಮಂತ್ರಿಯಾದ ಅಸೌನನು ತನ್ನ ಸಭಿಕರೊಡನೆಕೂಡಿ ದಾರಿಯಲ್ಲಿ ದಂಡೂರವನ್ನು ಹೊಡಿಸಿಕೊಂಡು ಪ್ರತ್ಯಕ್ಷವಾಗಿ ತಾನೆ ಬರುತ್ತ ಈ ಊರಿಗೆ ಬಂದವೇಲೆ ಒಂದು ವರ್ಷಕ್ಕೆಮುಂಚೆ ಪ್ರೀತಿಯುಳ್ಳವನಾದ ನನ್ನತಮ್ಮನು ನನ್ನನ್ನಗಲಿ ಹೊರಟುಹೋದನು.

ಆತನು ಈಗ ಎಲ್ಲಿರುವನೋ ಆ ವಿಷಯವನ್ನು ತಿಳಿಸಿದವರಿಗೂ, ಅವನನ್ನು ಕರೆದುಕೊಂತುಬಂದು ಕೊಟ್ಟವರಿಗೂ, ಅಥವಾ ಅವನನ್ನು ತೋರಿಸಿದವರಿಗೂ, ಇಲ್ಲವೇ ಆತನ ಸಮಾಚಾರವನ್ನು ಹೇಳಿದವರಿಗೆ ವಿಶೇಷವಾದ ಬಹುಮಾನ ಮಾಡಿ, ಅವರ ಪುತ್ರ ಪೌತ್ರ ಪಾರಂಪರ್ಯವಾಗಿ ಸುಖದಿಂದ ಅನುಭವಿಸುವಂತಹ ಜಹಗೀರುಗಳನ್ನು ಕೊಡುವೆನು. ಅತನ್ನು ಮರೆಮಾಜಿ ಇಟ್ಟುಕೊಂಡಿದ್ದ ಸಂಗತಿಯನ್ನು ತಿಳಿದಿದ್ದರೂ, ಹೇಳದಿರುವ ದುರ್ಮಾರ್ಗಿಗಳನ್ನು ನಾನು ಮರಣದಂಡನೆಗೆ ಗುರಿಮಾಡುವುದಲ್ಲದೆ ಅವರ ಮನೆಗಳನ್ನೊಡಸಿ ನೆಲಸಮನಾಗಿ ಮಾಡಿಸುವೆನೆಂದು ಹೇಳಿದಮಾತುಗಳನ್ನು ಕೇಳಿ, ಬೋಸಾತ್ತನಾವು ರಾಜಪುತ್ರನೇ ! ಇನ್ನುಮೇಲೆ ಧೈರ್ಯಸ್ಥನಾಗಿ ನಿನ್ನ ಕಷ್ಟಗಳೆಲ್ಲವೂ ತೀರಿದವು. ನಿನಗೆ ಭಗವಂತನ ಕರುಣವುಂಟಾಯಿತು, ಹಿಂದೆ ಅನುಭವಿಸಿದ ಕಷ್ಟಗಳನ್ನೆಲ್ಲ ಮರೆತುಬಿಡು ನನ್ನನುಸಂಗಡ ಬಾ ! ನಿನಗೆ ಹಿತಕರವಾದ ಒಂದಾನೊಂದು ವಾಕ್ಯವನ್ನು ಹೇಳುವೆನೆಂದು ನುಡಿದು ಹೊರಕ್ಕೆ ಕರೆದುತಂದು ಅಸೌನನನ್ನು ತೋರಿಸಿ ಇಗೋ ನಿನ್ನ ಅಣ್ಣನಾದ ಅಂಜಿಯಾದನನ್ನು ನೋಡೆಂದುಹೇಳಿ ತೋರಿಸಿದಳು. ಆಗ ಮಂತ್ರಿಯಾದ ಅಸೌನನು ತನ

ಅಂಜಿಯೊದನನ್ನು ನೋಡಿ, ಬಹಳವಾಗಿ ಸಂತೋಷಿಸಿ ಒಂದಾನೊಂದು ಕುದುರೆಯಮೇಲೆ ಕುಳ್ಳಿರಿಸಿಕೊಂಡು ಅರಮನೆಗೆ ಕರೆತಂದು ರಾಜನಿಗೆ ತೋರಿಸಿದನು. ಆದರೆ ಜೊಸೌತ್ರಮಾ ಎಂಬುವಳು ತನ್ನಮನೆಯು ನೆಲಸಮವಾಗುವುದೆಂಬ ಭಯದಿಂದ ರಾಣಿಯ ಅಂತಃಪುರವನ್ನು ಸೇರಿದಳು. ನಂತರ ರಾಜೌಜೆಸ್ಟ್ರಾಯೆಂತೆ ಆ ಮುದುಕನ ಮನೆಯು ನೆಲಸಮವೇ ಆಗಿ ಹೋಯಿತು. ಪ್ರಧಾನಮಂತ್ರಿಯು ಆ ಮುದುಕನನ್ನು ಹಡಗಿನ ಯಜಮಾನನಾದ ಬಾಹರಾಮನನ್ನು ಕರೆದುತರಿಸಿ ಆತನಿಗೆ ಮರಣದಂಡನೆಯೆನ್ನು ಗೊತ್ತುಮಾಡಿಸಿದರು. ಆಗ ರಾಣಿಯಾದ ಜೊಸೌತ್ರಮಾ ಎಂಬುವಳು ನೀವು ಮುಸಲ್ಮಾನರಾದರೆಹೊರತು ಇಲ್ಲವಾದರೆ ನಿಮ್ಮಲ್ಲಿ ಎಂದಿಗೂ ದಯೆ ಬಾರದೆಂದು ಹೇಳಿದಬಳಿಕ ಪ್ರಾಣಸಂರಕ್ಷಣಾರ್ಥವಾಗಿ ತಂತಮ್ಮ ಮತಗಳನ್ನುತೊರೆದು ಅವರಿಬ್ಬರೂ ಮಹಮ್ಮದನ ಮತವನ್ನವಲಂಬಿಸಿದರು.

ಬಾಹರಾಮನು ಅಂಜಿಯೂದನ ಚರಿತ್ರೆಯೆನ್ನು ಕೇಳಿ, ಅಯ್ಯಾ! ನಿಮ್ಮತಂದೆಯಾದ ಈಮುರಲುಜಮಾನರು ನಿಮ್ಮಗಳಮೇಲೆ ತಪ್ಪಿತವಿಲ್ಲವೆಂದು ನಿಮ್ಮನ್ನು ನೋಡಬೇಕೆಂಬ ಕುತೂಹಲದಿಂದ ನರಳುತ್ತಿರುವರು. ನಾನು ನಿಮ್ಮ ಇಚೆನಿದ್ವೀಪದ ದಾರಿಯನ್ನು ಕಂಡಿರುವೆನು. ನೀವು ಬರುವುದಕ್ಕೆ ಒಪ್ಪಿದರೆ ನಿಮ್ಮನ್ನು ನಿರಾಯಾಸದಿಂದ ನಾನು ಕರೆದುಕೊಂಡುಹೋಗುವೆನೆಂದು ಹೇಳಿದುದರಿಂದ ಅಣ್ಣತಮ್ಮಂದಿರಿಬ್ಬರೂ ಆತನ ಮಾತಿಗೆ ಸಮ್ಮತಿಸಿದುದರಿಂದಲೇ ಬಾಹರಾಮನು ಹಡಗನ್ನು ಸಿದ್ಧಪಡಿಸಿಕೊಂಡನು. ರಾಜಕುಮಾರರಿಬ್ಬರೂ ರಾಜನಬಳಿಗೆಹೋಗಿ ಆತನಿಂದಪ್ಪಣೆಯೆನ್ನು ಪಡೆದುಕೊಳ್ಳಬೇಕೆಂದು ನಿಂತು ಮಾತನಾಡುತ್ತಿರುವಾಗ ಗ್ರಾಮಕಾವಲಿನವರು ಅಯ್ಯಾ! ರಾಜೌಧಿರಾಜನೇ! ಯಾರೋ ಶತ್ರುರಾಜರು ನಮ್ಮ ಪಟ್ಟಣದಮೇಲೆ ದಂಡೆತ್ತಿಬಂದಿರುವ ವರ್ತಮಾನವನ್ನುತಂದು ಹೇಳಲು, ಅಸೌನ್ದನು ಸ್ವಾಮಿ! ತಾವು ನನಗೆ ಮಂತ್ರಿಪದವಿಯನ್ನಿತ್ತಕಾಲದಿಂದಲೂ, ನನ್ನಬುದ್ಧಿಗನುಸಾರವಾಗಿ ನಾನು ಪಚಕ್ಷಣೆಯಿಂದ ಸುಖವಾಗಿ ಸಂತುಷ್ಟನಾದೆನು. ಈಗ ನನಗೆ ಅಪ್ಪಣೆ ಕೊಡುವದಾದರೆ ಶತ್ರುರಾಜರನ್ನು ಕರೆದುತಂದು ನಿಮ್ಮ ಸಾದಾಕಾಂತರನ್ನಾಗಿ ಮಾಡಿ ನುಡಿದು ಆತನಿಂದಪ್ಪಣೆಯೆನ್ನು ಪಡೆದು ತಾನು ಸೈನ್ಯ ಸಮೂಹದಮುಂದಕ್ಕೆ ಬರಲು, ಶತ್ರುಸೈನ್ಯಾಧಿಪತಿಯು ತನ್ನನ್ನು

ಬಹು ಮರ್ಯಾದೆಯಿಂದ ಬರಮಾಡಿಕೊಳ್ಳುತ್ತಿರುವ ಗುರುತನ್ನುಕಂಡು, ತಾನು ಧೈರ್ಯದಿಂದ ಸೈನ್ಯಮಧ್ಯದಲ್ಲಿರುವ ರಾಣಿಯಬಳಿಗೆ ಬಂದು, ಅವ್ವಾ ! ನೀವು ನಮ್ಮಗಳವೀಲೆ ಶತ್ರುತ್ವವನ್ನು ಬಯಸಿ ಬಂದಿರುವಿರೋ, ಇಲ್ಲವೇ ಮಿತ್ರತ್ವವನ್ನು ಬಯಸಿ ಬಂದಿರುವಿರೋ, ಅದನ್ನು ನನಗೆ ತಿಳಿಸಬೇಕೆನಲು ರಾಣಿಯು ರಾಜಪುತ್ರನೇ ! ನನಗೆ ನಿಮ್ಮ ಮಾಂತ್ರಿಕಪುರಿ ರಾಜನವೀಲೆ ಸ್ನೇಹವಿರುವುದೇಹೊರತು ಹಗೆತನವೆಂದಿಗೂ ಇಲ್ಲ. ಆದರೆ ಈ ಊರಿನಲ್ಲಿರುವ ಒಬ್ಬಾಬ್ಬನೊಬ್ಬ ದುಷ್ಟನಾದ ಬಾಹರಾಮನೆಂಬ ಹಡಗಿನ ಸರದಾರನು, ಅಂಜಿಯೊಡನೆಂಬ ಬಾಣಸಿಗನನ್ನು ಕರೆದುಕೊಂಡು ಬಂದಿರುವನು. ಆತನನ್ನು ನಾನು ನೋಡಬೇಕೆಂಬ ಕುತೂಹಲದಿಂದ ಬಂದಿರುವೆನೇಹೊರತು ಮತ್ತುಬೇರೆ ಇಲ್ಲವೆಂದುನುಡಿದ ರಾಣಿಯಮಾತನ್ನು ಕೇಳಿ, ಅಸ್ಸೌದನು ಮಹಾ ಸಂತೋಷದಿಂದ ಅಯ್ಯಾ ! ನೀವು ಕೇಳುವ ಬಾಣಸಿಗನು ನನ್ನತಮ್ಮನು. ಆತನು ಬಹುಕಾಲದಿಂದಲೂ ನನ್ನನ್ನು ಅಗಲಿದ್ದು ದೈವಯೋಗದಿಂದೀಗತಾನೆ ನನ್ನಬಳಿಗೆ ಬಂದಿರುವನು. ನೀವು ಸಂತೋಷಪಡುವುದಾದರೆ ಈಗಲೇ ಆತನನ್ನು ನಿಮ್ಮಬಳಿಗೆ ಬರಮಾಡುವೆನೆಂದು ನುಡಿಯೆಲು ರಾಣಿಯು ಬಹು ಸಂತೋಷದಿಂದ ಗುಡಾರವನ್ನು ಹೊಡಿಸಿ ಪಾಳಯವನ್ನು ಬಿಡಿಸಿದಳು.

ಅಸ್ಸೌದನು ಪುರವ್ಯನೇಶವ. ಬಿ ರಾಜನಿಗೆ ಈ ವರ್ತಮಾನವನ್ನುತಿಳಿಸಿ ತನ್ನತಮ್ಮನನ್ನು ರಾಣಿಯಬಳಿಗೆ ಕರೆದುಕೊಂಡು ಬರಲು, ಆತನು ಆಕೆಯನ್ನನೋಡಿ ಬಹಳವಾಗಿ ಸಂತೋಷಿಸಿದನಲ್ಲದೆ ರಾಣಿಯೂ ಸಂತುಷ್ಟಳಾಗಿ ಸುಖದಿಂದಿವ್ದಳು. ಆದರೆ ಮೊವಲಿನ ಸೈನ್ಯಕ್ಕಿಂತಲೂ ಬಲವಾಗಿ ಬರುತ್ತಿರುವ ಮತೊಂದು ಸೈನ್ಯವನ್ನುನೋಡಿ ಮಂತ್ರಿಯೊದ ಅಸ್ಸೌದನು ಮೊದಲಿನಂತೆ ಧೈರ್ಯದಿಂದ ಆ ಸೈನ್ಯದ ಮಧ್ಯಭಾಗವನ್ನುಹೊಕ್ಕು ರಾಜನನ್ನುಕುರಿತು, ಏತಕೊಕ್ಕೀಸ್ಕರ ದಂಡೆತ್ತಿಬಂದಿರುವಿರೆಂದು ಪ್ರಶ್ನೆಮಾಡಿದನು. ಆಗ ರಾಜನು ಮಂತ್ರಿಯೊದ ಅಸ್ಸೌದನನ್ನುಕುರಿತು, ಅಯ್ಯಾ ! ನಾನು ಚೀನಾದೇಶದ ರಾಜನಾದ ಗಯೆಸೌ ಖಾಲಿದಾಸುದ್ವೀಪದ ರಾಜನಾದ ಪಹಜಮಾನನ ಮಗನಾದ ಕಹಮಾನನಿಗೆ ನನ್ನಮಗಳಾದ ಬದೌರಳೇಬ ರಾಣಿಯನ್ನುಕೊಮೆಮಾಡಿದ್ದನು. ಆತನು ಒಂದುಸಂವತ್ಸರವಾಯಿತೆಯನ

ತಂದೆಯೆನ್ನುನೋಡಿಕೊಂಡು ಬರುವೆನೆಂದು ನನ್ನಮಗಳನ್ನುಸಂಗಡ ಕ
ದುಕೊಂಡುಬಂದವನು ಮರಳಿ ಕಾಣಿಸಲಿಲ್ಲವಾದುದರಿಂದ ಆತನನ್ನು ಹುಡು
ಕುತಾ ಇಲ್ಲಿಗೆ ಬಂದೆನೆಂದು ಹೇಳಲು, ಅಸೌ ನದನು ತನ್ನ ವರ್ತಮಾನ
ವನ್ನುಹೇಳಿ ತಾನು ಆತನಿಗೆ ಮೊಮ್ಮಗನಾಗಬೇಕೆಂದು ನಿಶ್ಚಯಿಸಿ ನುಡಿ
ದವಾರ್ತೆಯನ್ನುಕೇಳಿ, ಬಹು ಸಂತೋಷಯುಕ್ತನಾಗಿ ಆತನು ತನ್ನ
ಮೊಮ್ಮಗನನ್ನು ಓಹಳವಾಗಿ ಆಲಿಂಗಿಸಿ, ಆತನು ಈ ರಾಜ್ಯಕ್ಕೆ ಒರಲು
ಕಾರಣವೇನೆಂದುಕೇಳಿ, ಅಣ್ಣತಮ್ಮಂದಿರಿಬ್ಬರೂ ಇದುವರೆವಿಗೂ ಅನು
ಭವಿಸಿದ ತೊಂದರೆಗಳನ್ನುಸಹಾ ಆಲಿಸಿ, ಹೇಗಾದರೂಮಾಡಿ ಅವರನ್ನು
ಮರಳಿ ತಂದೆಯಬಳಿಗೆ ಕರೆದುಕೊಂಡು ಹೋಗಬೇಕೆಂದು ಮನದಲ್ಲಿಯೋ
ಚಿಸಿದ್ದನು. ಮಾಂತ್ರಿಕಪುರಿರಾಜನು ತನಗೋಸ್ಕರವಾಗಿ ಕಾದುಕೊಂ
ಡಿರುವನೆಂದು ತಿಳಿದು ಅಸೌ ನದನು ಆತನಬಳಿಗೆಬಂದು ಎಲ್ಲಾ ವೃತಾ ಂ
ತವನ್ನು ಹೇಳಿದನು.

ಪುನಹಾ ಮತೊ ಂದು ಸೈನ್ಯವು ಮಾಂತ್ರಿಕಪುರಿಯೆನ್ನು
ಕುರಿತು, ಬರುತ್ತಿರುವುದನ್ನು ಕಂಡು ರಾಜಕುಮಾರನಾದ ಅಂಜಿಯಾದ
ನನ್ನುಕಳುಹಿಸಿ ಆತನು ಆ ಸೈನ್ಯದಬಳಿಗೆಬಂದು ತನ್ನತಂದೆಯಾದ
ಕಮರಲುಜಮಾನನು ತಮ್ಮಗಳನ್ನು ಹುಡುಕಿಕೊಂಡು ಬಂದಿರುವನೆಂಬು
ದನ್ನುತಿಳಿದು ಬಹುಸಂತೋಷಯುಕ್ತನಾಗಿ ಆನಂದದಿಂದ ತಮ್ಮನೊಡ
ಕೂಡಿ ತಂದೆಯನ್ನು ಕಾಣಿಸಿಕೊಂಡು ಬಹಳವಾದ ವಿನಯವಚನಗಳಿಂದ
ಸತ್ಕರಿಸಿ ತಾನೂ ಎಂದಿಗೂ ಅನುಭವಿಸದಿರುವ ಆನಂದವನ್ನು ಹೊಂದಿ
ಮಕ್ಕಳನ್ನು ಬಹಳವಾಗಿ ಮುದ್ದಾಡಿ ಸಂತೋಷದಿಂದಿರುವಾಗ ಮತೊ ಂ
ದುಸೈನ್ಯವು ಪರಷಿಯಾ ರಾಜ್ಯದಕಡೆಯಿಂದ ಬರುತ್ತಿರುವುದೆಂದು ತಿಳಿದು
ಕಮರಲುಜಮಾನನು, ಆ ಸೈನ್ಯದ ವಾರ್ತೆಯನ್ನು ವಿಚಾರಿಸಿಕೊಂಡು
ಬರುವಂತೆ ತನ್ನಮಕ್ಕಳಿಗೆ ಆಜ್ಞೆ ಾಪಿಸಿದನು. ಕೂಡಲೇ ಅವರಿಬ್ಬರೂ
ತೊರಟು, ಆ ಸೈನ್ಯವನ್ನು ಸೇರಿ, ರಾಜನನ್ನು ಕುರಿತು, ಅಯ್ಯಾ !
ಪ್ರ ಈ ರಾಜ್ಯದಮೇಲೆ ದಂಡನ್ನು ತರುವುದಕ್ಕೆ ಕಾರಣವೇನೆಂದು
ಶತ ರಾಜನ ಆಜ್ಞೆಯಂತೆ ಮಂತ್ರಿಯು ಆ ರಾಜಪುತ್ರರನ್ನು
ಾದುವಿಾ ! ನಾವು ಖಾಲಿದಾಸುದ್ವೀವಗಳ ರಾಜರಕಡೆಯವರು.
ಬಾಬುಹಾರಾಜನಾದ ಷಹಜಮಾನನು. ಈತನಕೆಮಾರನಾದ

ಕಮರಲುಜಮಾನನು ಒಂದೆರಡು ಸಂವತ್ಸರಗಳಿಗೆ ಮುಂಚೆ ತಪ್ಪಿಸಿಕೊಂಡುಹೋದವನು ಇದುವರಿಗೂ ಬಾರದಿದ್ದರಿಂದ ಆತನನ್ನು ಹುಡುಕಿಕೊಂಡುಬಂದಿರುವೆವೆಂದು ನುಡಿದರು. ಅಲ್ಲದೆ ರಾಜನು ಅಯ್ಯಾ! ನೀವು ಆತನ ವಾರ್ತೆಯನ್ನು ನನಗೆ ತಿಳಿಸುವುದಕ್ಕಿಂತಲೂ ಅಧಿಕವಾದ ಉಪಕಾರವು ಮತ್ತೊಂದಿಲ್ಲವೆಂದು ನುಡಿದನು. ನಂತರ ಅಸ್ಸೌದನು ಅಂಜಿಯಾದನುಸಹಾ ರಾಜನಾದ ಕಮರಲುಜಮಾನನಬಳಿಗೆ ಬಂದು, ಸ್ವಾಮಿ! ಆ ಸೈನ್ಯವು ಸಾಕ್ಷಾತ್ತಾಗಿ ನಿಮ್ಮತಂದೆಯಾದ ಷಹಜಮಾನರದಾಗಿರುವುದು. ಪುತ್ರವಾತ್ಸಲ್ಯದಿಂದ ಅವರೇ ನಿಮನ್ನು ಹುಡುಕಿಕೊಂಡುಬಂದಿರುವರುಯೆನಲು, ಕಮರಲುಜಮಾನನು ತನ್ನತಂದೆಯ ವಾರ್ತೆಯನ್ನುಕೇಳಿ, ಆನಂದಭರಿತರಾದರೂ, ತಾನು ಇಷ್ಟುದಿನಗಳೂ ಆತನನ್ನುಬಿಟ್ಟಬೇರೆಯಾಗಿದ್ದುದೇ ತನ್ನತಪ್ಪೆಂದು ಮೂರ್ಛೆಹೋದನು. ರಾಜಪುತ್ರರು ಆತನನ್ನು ಶೈತೋಪಚಾರದಿಂದ ತಿಳಿವಿಗೆತಂದು, ಷಹಜಮಾನನ ಬಳಿಗೆ ಕರೆದುಕೊಂಡುಹೋದರು.

ಕಮರಲುಜಮಾನನು ತಮ್ಮತಂದೆಯನ್ನುನೋಡಿ ಸಂತುಷ್ಟನಾಗಿ ಪಾದಾಕ್ರಾಂತನಾಗಿ ನಮಸ್ಕರಿಸಿದನು. ತಂದೆಮಕ್ಕಳಿಗೆ ನಡೆದ ಕಥೆಗಳಲ್ಲಿ ಇದಕ್ಕಿಂತಲೂ ಕಠಿಣತರವಾದ ವಿಷಯವಾವುದೂ ಇಲ್ಲ. ಕಮರಲುಜಮಾನನು ತನ್ನತಂದೆಯನ್ನು ಅಗಲಿ ಬಹುಕಾಲ ಸಿ ೃವೋಹದಿಂದ ತನ್ನತಪ್ಪನ್ನು ತಿಳಿದುಕೊಳ್ಳಲಾರದೆ ಹೋದುದರಿಂದ ತಾನೂ ಘನವಾದ ಪುತ್ರವಾತ್ಸಲ್ಯದಿಂದ ಕೆಲವುಕಾಲ ನರಳಬೇಕಾಗಿಬಂದಿತು. ಈತೆರದಿಂದ ಮೂವರು ರಾಜರೂ, ಮರಜಿಯಾನಳೆಂಬ ರಾಣಿಯೂ, ತನ್ನನಗರಿಗೆ ಬಂದುದಕ್ಕಾಗಿ ಸಂತೋಷಿಸಿ, ಮಾಂತ್ರಿಕಪುರಿ ರಾಜನು ಅವರುಗಳನ್ನು ಬಹಳವಾಗಿ ಸತ್ಕರಿಸಿ, ಮೂರುದಿನಗಳವರಿಗೂ ವಿನೋದಕರವಾದ ಔತನಗಳನ್ನುಮಾಡಿಸಿ ತಾನು ಅವರಸಂಗಡ ಸುಖದಿಂದಿರುತ್ತಿದ್ದನು. ಆಕಾಲದಲ್ಲಿ ರಾಣಿಯಾದ ಮರಜಿಯಾನಳು ರಾಜಪುತ್ರನಾದ ಅಂಜಿಯಾದನನ್ನುವಿಚಿ ಸರ್ವಜನ ಸಮ್ಮತದಿಂದ ಮದುವೆಯಾದಳು. ಅಸ್ಸೌದನಾದರೋ ಸಹೋದರನು ಮಾಡಿದ ಉಪಕಾರವನ್ನು ಸ್ಮರಿಸುತ್ತ ಮನ ಮತದಲ್ಲಿ ಪರಮಾನಂದಕಿ ತ್ಯೊಳ್ಳವಳಾಗಿ ತನ್ನತಮ್ಮನನ್ನು ತೊಳಾದ ಬೋಸಿತ್ತಾವಾ ಎಂಬ ಕನ್ಯಾಮಣಿಯನ್ನು ಮದುವೆ

ಸುಖದಿಂದ ಇರುತ್ತಿದ್ದರು. ಆದುದರಿಂದಲೇ ಅಲ್ಲಿಗೆ ಬಂದಿದ್ದ ರಾಜರೆಲ್ಲರೂ ಸಂತುಷ್ಟರಾಗಿ ತಂತಮ್ಮ ಕೋರಿಕೆಗಳನ್ನು ನೆರವೇರಿಸಿಕೊಂಡುಸ್ವಸ್ಥಾನವನ್ನು ಸೇರಿದರು. ಮುರಜಿಯಾನಳು ತನ್ನ ಗಂಡನಾದ ಅಂಜಿಯಾದನನ್ನು ಕರೆದುಕೊಂಡು ತನ್ನ ದ್ವೀಪಕ್ಕೆಹೋಗಿ ಸುಖದಿಂದ ರಾಜ್ಯಭಾರವನ್ನು ವಹಿಸಿ, ಸರ್ವಜನಸಮ್ಮತನಾಗಿ ರಾಜ್ಯವಾಳುತ್ತಿದ್ದ ಅಸೌನ್ದನು ತನ್ನ ರಾಜ್ಯದಲ್ಲೆಲ್ಲಾ ಮಹಮ್ಮದನ ಮತವನ್ನು ಪ್ರಚುರ ಪಡಿಸಿದನೆಂದನುಡಿದ ಷಹರಜೌದಿಯು ಕಥೆಯನ್ನುಮುಗಿಸಿದಳೆಂಬಲ್ಲಿಗೆ "ಸುದತೀಶತಕ ಗ್ರಂಥಕರ್ತನಾದ,ಕಲ್ಯಾಣಪುರೀನಿಲಯ ಕವಿ ನಾಗಶರ್ಮನಿಂದ, ತಿಳಿಗನ್ನಡದ ಸರಳ ಪದಗಳಿಂದ ರಚಿತವಾದ "ಯವನ ಯೋವಿನೀ ವಿಚಿತ್ರವಿನೋದ" ಎಂಬ ಅತೀಬಿರ್ಯ್ ನೈಟ್ಸ್‌ನ ಕಥೆಗಳಲ್ಲಿ ಶ್ರೀ ಶಂಕರಪ್ರಸಾದ ಪುರಸ್ಸರವಾಗಿ ೨೩೪ ಕಥೆಗಳಿಂದ ಮೊದಲನೆಯಭಾಗವು ಮುಗಿದುದು.

ಕಂದ ॥ ಚಿತ್ರ ಚಮತ್ಕೃತಿ ಯೊಪ್ಪಿ ವಿ
ಚಿತ್ರ ತರಾಹ್ಲಾದ ನೀವ ರಾಣಿಯು ನುಡಿಯಿಂ ॥
ಚಿತ್ರಿತ ಮಾದೀ ಕಥೆಯಂ
ಪತ್ರಿಸಿದಂ ಗಿರಿಜಭಕ್ತನೀ ಕವಿ ನಾಗಂ ॥ ೧ ॥

ವರ ಸಾಧಾರಣ ಪತ್ಸರ
ದುರು ಕಾರ್ತಿಕ ಶುದ್ಧ ಪೂರ್ಣಿಮಾ ದಿನದೊಳಮ ॥
ತ್ಸರ ರೊಲಿ ವಂತೀ ಕಥೆಗಳ
ಬರೆದಂ ಕವಿ ನಾಗ ಶರ್ಮ ನುಕ್ಕೆವ ದಿಂದಂ ॥ ೨ ॥

ಮುಂಗಳ ಮುಕ್ಕೆ ಮುಹೀಳಿತ
ವಿಂಗಡ ಲಂತ ಖಿಲ ಭಾಗ್ಯ ಯುತ ಮುಕ್ಕೆ ಜನಂ ॥
ಪೊಂಗುವ ಸುಖದಿಂ ದಿರ್ಕೆ ಸ
ತ್ಸಂಗದೆ ಸುಖ ವೊಂದಿ ಬಾಳ್ಕೆ ಕವಿಜನರಿಳೆಯೊಳ್ ॥ ೩ ॥

—(ಶ್ರೀರಸ್ತು ಶುಭಮಸ್ತು.)—

ಯವನ ಯೋವಿನೀ ವಿನೋದ ಕಥೆಗಳಲ್ಲಿ ಮೊದಲನೆಭಾಗ
ಸಂಪೂರ್ಣವಾದುದು.

———:*:———

ಕನ್ನಡ ಕಥೆಗಳು,

ಸಚಿತ್ರ ಕಲಾತರಂಗ ಸಾವಿರಾರು ಕೈಗಾರಿಕೆಗಳನ್ನು ಬೋಧಿಸುವಂಥಾದ್ದು.	೧	೪	೦
ರಾಜಕಥಾವಲ್ಲರಿ.	೦	೫	೦
ಶಂಕರಸಂಹಿತೆ ಧಪ್ಪಕಾಗದದ ದೊಡ್ಡ ಗ್ರಂಥ ಪೂರ್ವಚರಿತ್ರ.	೩	೦	೦
ಅರೇಬಿಯನ್ ನೈಟ್ಸ್ ಕಥೆಗಳು.	೨	೪	೦
ರಾಜಮಾರ್ತಾಂಡಚರಿತ್ರ ದೊಡ್ಡ ಕಥೆ.	೨	೦	೦
"ವಸಂತಕೋಕಿಲ" ಎಂಬ ಇಂದ್ರಜಾಲ ಮುಖೇಂದ್ರಜಾಲವನ್ನು ಸ್ಪಷ್ಟವಾಗಿ ತೋರಿಸುವ ಅತ್ಯದ್ಭುತ ಚಮತ್ಕಾರವಾದ ಹೊಸ ಕಾದಂಬರಿ ಕಥೆ.	೧	೦	೦
ಚಂದ್ರಪ್ರಭಾಕಥೆ.	೦	೪	೦
ವೈಶಾಲಿನೀಪರಿಣಯಕಥೆ	೦	೪	೦
ಗಣೇಶಲೀಲಾತರಂಗಿಣಿಕಥೆ	೦	೪	೦
ಅಂತಃಪುರದ ಸುಂದರೀಮಣಿಗಳೆಂಬ ಕಮಲಾಕೋಮಲಾ ಕಥೆಯು.	೦	೪	೦

ಶಿವಮಹಾಪುರಾಣದ ಕಥೆಯು.	೨	೪	೦
ದೇವೀಭಾಗವತ ಮಹಾಪುರಾಣದ ಕಥೆ.	೨	೪	೦
ಶುಕಸಪ್ತತಿ (೭೦) ಕಥೆಗಳು ಧಪ್ಪಕಾಗದದ ಅವ್ವಲ್ ಪ್ರತಿ.	೨	೦	೦
ಡಿಟೋ ಸಾಧಾರಣಕಾಗದದ್ದು.	೧	೪	೦
ಪುರೂರವಚಕ್ರವರ್ತಿಕಥೆ	೦	೫	೦
ಸಾಸ್ಯಸುಂದರಿ ಎಂಬ ಶುಕವಾಣಿ ಕಥೆ.	೦	೪	೦
ಮುದ್ರಾಮಂಜೂಷವೆಂಬ ಚಾಣಿಕ್ಯತಂತ್ರ.	೧	೧೨	೦
ಕಥಾತ್ಸರಿತ್ಸಾಗರ ೧ನೆಯ ಭಾಗ.	೧	೪	೦
ಡಿಟೋ ೨ನೆಯ ಭಾಗ	೧	೪	೦
ಕಾಂತಿಮತಿ ಸ್ವಯಂವರಾಮೃತ.	೧	೦	೦
ಕಥಾರತ್ನಾಕರ	೦	೧೨	೦
ಕಥಾಕಲ್ಪವೃಕ್ಷ	೦	೧೦	೦
ವಚನ ಗರುಡಪುರಾಣ.	೦	೪	೦
ಪಂಚತಂತ್ರ ಕಥೆ ಶ್ಲೋಕ ಟೀಕು.	೧		

ಶ್ರೀಕೃಷ್ಣಜೋಧಾ ಮೃತಮೆಂಬ ೧೦ ರಾ ಜಪುತ್ರರ ಕಥೆ.	೦	೧೮	೦	ಪ್ರಭಾವತೀ ಶುಕ ಮಂಜರೀ ಕಥೆಗಳು	೦	೬	೦
ಬೃಹತ್ಕಥಾಮಂಜರಿ ಬೊಡ್ಡದು.	೦	೧೮	೦	ವಿಕ್ರಮರಾಯನಚರಿತ್ರೆ ಬತ್ತೀಸಪುತ್ಲಿಕಥೆ.	೦	೪	೦
ಡಿಟೋ ಚಿಕ್ಕದು.	೦	೪	೦	ರಾತ್ರಿಚುಕ್ಕಿ ಹಗಲು ಚುಕ್ಕಿ ಎಂಬ ಚೋರ ರ ಕಥೆ.	೦	೪	೦
ರಾಮಯಣ ಕಥಾಸಂ ಗ್ರಹ ಅವ್ವಲ್	೧	೦	೦	ಚಂಚಲಕುಮಾರೀಕಥೆ	೦	೪	೦
ಡಿಟೋ ದುಯ್ಯೋಂಪ್ರತಿ	೦	೧೮	೦	ಹುಚ್ಚುಮುಂಡೆಯರಕಥೆ	೫	೦	
ಜೈಮಿನಿಯ ಕಥಾಸಂ ಗ್ರಹ.	೦	೧೮	೦	ಬ್ರಹ್ಮೋತ್ತರಕಾಂಡ	೦	೬	೦
ಭಾರತಕಥಾಸಂಗ್ರಹ.	೦	೬	೦	ಕಥಾಸಾಗರ.	೦	೪	೦
ಶೃಂಗಾರಮಂಕಸಪ್ತತಿಕಥೆ	೪	೦		ವಿನೋದರಸಮಂಜರಿಕಥೆ	೩	೦	
ಪುಷ್ಪಸೌರಭಕಥೆ.	೦	೬	೦	ಹಂಸವಿಂಶತಿಕಥೆ.	೦	೩	೦
ಪ್ರತಾಪಕಂಠೀರವಚ ರಿತ್ರ.	೧	೦	೦	ನಗದವರನ್ನು ನಗಿಸುವಕಥೆ	೩	೦	
ಒಕಾವಲಿಕಥೆ.	೦	೬	೦	ಹರಿಶ್ಚಂದ್ರನಕಥೆ ವಚನ	೩	೦	
ಮೌನಧಾರಿಣೀಕಥೆ.	೦	೬	೦	ನಳದಮಯಂತಿಯರಕಥೆ	೩	೦	
ಬೀರಬಲ್ಲರಕಥೆ.	೦	೪	೦	ಭೀತಾಳನಕಥೆ.	೦	೨	೬
ಮದನಮೋಹನರಾಜನಕಥೆ	೬	೦		ಶಿವರಾತ್ರಿಕಥೆ.	೦	೧	೦
				ತೆನ್ನಾಲರಾಮಕೃಷ್ಣ ನಕಥೆ	೦	೨	೦
				ಮನೋರಂಜಕಕಥೆ.	೦	೧	೦

ನಾಟಕಗಳು.

ಲಂಕಾದಹನನಾಟಕ.	೦	೬	೦	ಪಾಂಡುವಿಜಯನಾಟಕ	೫	೦	
ಮನ್ಮಥವಿಜಯನಾಟಕ	೫	೦		ಇಂದ್ರಸಭಾನಾಟಕ.	೦	೫	೦
ಸದಾರಮೆನಾಟಕ.	೦	೪	೦	ದ್ರೌಪದೀಸ್ವಯಂವರ ನಾಟಕ.	೦	೪	೦
ೀಮಂತರತ್ನನಾಟಕ	೦	೫	೦	ಸಾರಂಗಧರನಾಟಕ.	೦	೪	೦
ಖರವಿಭಾನನಾಟಕ	೬	೦					